ಶ್ರೀಮನ್ಮಹಾಭಾರತ

ಭಾರತ ದರ್ಶನ ಪ್ರಕಾಶನ



ಶಾಂತಿಪರ್ವ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಸಂಪುಟ ೨೪

ಭಾರತ ದರ್ಶನ ಪ್ರಕಾಶನ

ಶ್ರೀಮನ್ಮಹಾಭಾರತ

(ವ್ಯಾಸಭಾರತದ ಕನ್ನಡ ಸರಳಾನುವಾದ)

ಭಾತಿ ಸರ್ವೇಷು ವೇದೇಷು
ರತಿಃ ಸರ್ವೇಷು ಜನ್ತುಷು ।
ತರಣಂ ಸರ್ವತೀರ್ಥಾನಾಂ
ತೇನ ಭಾರತಮುಚ್ಯತೇ ॥

ಸಂಪುಟ 24

ಮುದ್ರಕರು:

ಭಾರತ ದರ್ಶನ ಮುದ್ರಣಾಲಯ

163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೪

ಆದಿ ಅಧ್ಯಕ್ಷರು:

ಪರಮಪೂಜ್ಯ ಶ್ರೀ ಶ್ರೀ

ರಂಗಪ್ರಿಯಮಹಾದೇಶಿಕಸ್ವಾಮಿಗಳವರು

ಆದಿ ವ್ಯವಸ್ಥಾಪಕ ಸಂಪಾದಕರು:

ದಿ|| ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')

ಆದಿ ಸಂಪಾದಕರು:

ದಿ|| ವಿದ್ವಾನ್ ಹೆಚ್.ಎನ್. ರಂಗಸ್ವಾಮೀ

ಆದಿ ಸಂಪಾದಕರು:

ದಿ|| ವಿದ್ವಾನ್ ರಾಮೇಶ್ವರಾವಧಾನೀ

ಸಂಪಾದಕ ಮಂಡಲಿ:

ಶ್ರೀ ಶ್ರೀಹರಿ

ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ವಿ. ಸೂರ್ಯನಾರಾಯಣ್, M.A. B.Com., B.L.,

ಕೋಶಾಧ್ಯಕ್ಷರು

ವಿನಮ್ರವಚನಗಳು

ದಯಾಮಯನಾದ ಪರಮಾತ್ಮನ ದಿವ್ಯಾನುಗ್ರಹದಿಂದಲೂ, ಗುರು ಭಗವಂತನ ಆಶೀರ್ವಾದಗಳಿಂದಲೂ, ಸಾಧು-ಸತ್ಪುರುಷರ ಸದಾಶಯ ಗಳಿಂದಲೂ ೨೪ನೆಯ ಸಂಪುಟವನ್ನು ಅಥವಾ ಶಾಂತಿಪರ್ವದ ೪ನೆಯ ಭಾಗವನ್ನು ಮುಗಿಸಿ ಕರುಣಾಳುವಾದ ಪರಮಾತ್ಮನ ದಿವ್ಯಪಾದಾರವಿಂದ ಗಳಲ್ಲಿ ಸಮರ್ಪಿಸಿ ಪ್ರಸಾದರೂಪವಾದ ಈ ಸಂಪುಟವನ್ನು ನಮ್ಮ ಪ್ರಿಯ ವಾಚಕರ ಅಂಜಲಿಪುಟಗಳಲ್ಲಿಡುತ್ತಿದ್ದೇವೆ.

ಈ ಸಂಪುಟದಲ್ಲಿ ಶಾಂತಿಪರ್ವದ ೬೫ ಅಧ್ಯಾಯಗಳಿವೆ. ಸಾಮಾನ್ಯ ವಾಗಿ ಎಲ್ಲ ಶ್ಲೋಕಗಳನ್ನೂ ಉದ್ಧರಿಸಿ ಅನುವಾದಿಸುತ್ತಿರುವುದರಿಂದ ಹೆಚ್ಚು ಅಧ್ಯಾಯಗಳನ್ನು ಕೊಡಲು ಸಾಧ್ಯವಾಗುತ್ತಿಲ್ಲ. ಶಾಂತಿಪರ್ವದಲ್ಲಿ ಇನ್ನೂ ೧೦೬ ಅಧ್ಯಾಯಗಳು ಉಳಿದಿದ್ದು ೫ ಸಂಪುಟಗಳಲ್ಲಿ ಶಾಂತಿಪರ್ವವನ್ನು ಮುಗಿಸಬೇಕೆಂದಿದ್ದ ನಮ್ಮ ಯೋಜನೆಯು ಸಾಧ್ಯವಾಗದೆಂದೇ ತೋರುತ್ತದೆ. ಅವಕಾಶವಿರುವಷ್ಟರಲ್ಲಿಯೇ ವಿಷಯವನ್ನು ಸಂಗ್ರಹಿಸಿಕೊಟ್ಟು ಮುಂದಿನ ಸಂಪುಟದಲ್ಲಿಯೇ ಶಾಂತಿಪರ್ವವನ್ನು ಮುಗಿಸಿಬಿಡಬೇಕೆನ್ನುವ ಅಭಿಪ್ರಾಯವು ನಮಗಿಲ್ಲ. ಇದುವರೆಗೂ ಅನುವಾದಿಸಿರುವಂತೆ ಮುಂದೆಯೂ ಅನುವಾದಿಸುತ್ತಾ ಸೂಕ್ತವಾದ ವಿವರಣೆಗಳನ್ನೂ ಕೊಡುತ್ತೇವೆ. ಒಂದೆರಡು ಸಂಪುಟಗಳು ಹೆಚ್ಚಾದರೂ ನಮ್ಮ ಗ್ರಾಹಕರು ಅದರ ಭಾರವನ್ನು ವಹಿಸು ವರೆಂಬ ಪೂರ್ಣಭರವಸೆಯು ನಮಗಿದೆ.

೨೪ ಸಂಪುಟಗಳು ಮುಗಿದುವು. ಇನ್ನು ಕೇವಲ ೬ ಸಂಪುಟಗಳು ಮಾತ್ರ ಉಳಿದಿವೆ –ಎಂಬ ಭಾವನೆಯಿಂದ ನಮ್ಮೆಲ್ಲರಿಗೂ ಮನಸ್ಸಿಗೆ ಹರ್ಷ ವಾಗುವುದೇನೋ ನಿಜ. ನಮ್ಮ ಗ್ರಾಹಕರಂತೂ ಬಹಳವಾಗಿ ಸಂತೋಷ ಪಡುತ್ತಾರೆ. ಎಂದಿಗೆ ಮುಗಿಯುವುದೋ? ಎಂದು ನಾವು ಎಲ್ಲವನ್ನೂ ಓದಿ ಮುಗಿಸಿಯೇವೋ?.–ಎಂಬ ಕಾತರದಿಂದಿರುವವರು ಸಾವಿರಾರು ಮಂದಿ ಇದ್ದಾರೆ. ಆದರೆ ಒಂದು ಬಗೆಯಲ್ಲಿ ನಮ್ಮ ಆತಂಕವು ಹೆಚ್ಚುತ್ತಿದೆ.

ಇದಕ್ಕೆ ಕಾರಣ –ಹಿಂದಿನ ಸಂಪುಟಗಳು ಮುಗಿದುಹೋಗಿರುವುದು. ಒಂದು ಹೊಸ ಸಂಪುಟ ಮತ್ತು ಒಂದು ಹಳೆಯ ಸಂಪುಟ –ಹೀಗೆ ನಾವು ಪ್ರಕಾಶ ನದ ಕಾರ್ಯಕ್ರಮವನ್ನಿಟ್ಟುಕೊಂಡು ಅದರಂತೆಯೇ ಮಾಡುತ್ತಿದ್ದೇವೆ. ಈಗ ೯ನೆಯ ಸಂಪುಟವನ್ನು ಮುಗಿಸಿ ೨೪ನೆಯ ಸಂಪುಟವನ್ನು ಹೊರತಂದಿರು ತ್ತೇವೆ. ಆದರೆ ೨೪ ಸಂಪುಟಗಳಲ್ಲಿ ೯ ಸಂಪುಟಗಳೇ ಇಲ್ಲದ ಕಾರಣ ನೂತನಗ್ರಾಹಕರ ಸಂಖ್ಯೆಯು ದಿನ-ದಿನಕ್ಕೂ ಕುಸಿಯುತ್ತಿದೆ. ಇದೇ ನಮಗೆ ದೊಡ್ಡ ಆತಂಕವಾಗಿದೆ. ಹೆಚ್ಚು ಹೆಚ್ಚು ಮಂದಿ ಗ್ರಾಹಕರಾಗದಿದ್ದರೆ ನಮ್ಮ ಯೋಜನೆಗಳು ಕೈಗೂಡುವುದು ಕಷ್ಟ. ನಮ್ಮ ವ್ಯವಹಾರವೆಲ್ಲವೂ ಗ್ರಾಹಕರನ್ನೇ ಅವಲಂಬಿಸಿದೆ. ತಿರುಪತಿ ವೆಂಕಟೇಶ್ವರನ ಮತ್ತು ಧರ್ಮಸ್ಥಳದ ಮಂಜುನಾಥೇಶ್ವರಸ್ವಾಮಿಯ ಅನುಗ್ರಹದ ಹೊರತಾಗಿ ನಮಗೆ ಬೇರೆ ಯಾವ ವಿಧವಾದ ಆರ್ಥಿಕಸಹಾಯವೂ ಯಾವ ಕಡೆಯಿಂದಲೂ ದೊರಕುತ್ತಿಲ್ಲ. ಮೇಲಾಗಿ ಅದಕ್ಕೆ ನಾವು ಅಷ್ಟಾಗಿ ಪ್ರಯತ್ನಿಸುತ್ತಲೂ ಇಲ್ಲ. ೨೦ನೆಯ ಸಂಪುಟದ ಪ್ರಕಾಶನಸಮಾರಂಭದಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಗುಂಡೂರಾಯರು ಸಾವಿರಾರು ಜನರ ಮುಂದೆ ಮಹಾಭಾರತವನ್ನು ಎಲ್ಲ ಶಾಲೆಗಳಿಗೂ ತೆಗೆದುಕೊಳ್ಳುವುದಾಗಿ ಆಶ್ವಾಸನೆಯಿತ್ತಿದ್ದಂತೆ ಸರ್ಕಾರವು ೧,೫೦೦ ಹೆಚ್ಚು ಪ್ರತಿಗಳನ್ನು ತೆಗೆದುಕೊಳ್ಳುವುದೆಂದು ಭಾವಿಸಿ ೨೧ನೆಯ ಸಂಪುಟದಿಂದಲೇ ೨,೦೦೦ ಹೆಚ್ಚು ಪ್ರತಿಗಳನ್ನು ಛಾಪಿಸುತ್ತಿದ್ದೇವೆ. ನಮ್ಮ ಅನೇಕಗ್ರಾಹಕರೂ ಸರ್ಕಾರದ ಸಹಾಯವು ಸಿಕ್ಕಿತೇ?–ಎಂದು ಆಕಾಂಕ್ಷೆಯಿಂದಲೇ ಕೇಳುತ್ತಿದ್ದಾರೆ. ಸರ್ಕಾರದ ಸಹಾಯವೆಂದರೆ ಸಂಪುಟಗಳನ್ನು ಕೊಟ್ಟು ಹಣ ತೆಗೆದುಕೊಳ್ಳುವುದು. ಅದನ್ನೇ ನಾವು ಸಹಾಯವೆಂದು ಭಾವಿಸಿದ್ದೇವೆ. ಆದರೆ ಎರಡು ವರ್ಷಗಳ ನಂತರ ಸರ್ಕಾರದ ವತಿಯಿಂದ ೧,೫೦೦ ಹೆಚ್ಚು ಸಂಪುಟಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ.–ಎಂಬ ಉತ್ತರವು ಬಂದಿರುವುದಕ್ಕಾಗಿ ವಿಷಾದಿಸಬೇಕಾಗಿದೆ. ಮುಖ್ಯಮಂತ್ರಿಗಳ ಮಾತು ಸುಳ್ಳಾಗಲು ಸಾಧ್ಯವೇ ಇಲ್ಲ. ಕೊಟ್ಟ ಮಾತನ್ನು ದಿಟ್ಟತನದಿಂದ ಮಾಡಿಕೊಡ ಬಲ್ಲ ಧೀರರವರು. ಆದರೆ ನಮಗೆ ಹೀಗಾದುದು ಕಾಲದ ವಿಪರ್ಯಾಸವಿರ ಬಹುದು.; ನಮ್ಮ ಪ್ರಯತ್ನದಲ್ಲಿಯೇ ನ್ಯೂನತೆಯಿರಬಹುದು.; ಕಾಲವು

ಸನ್ನಿಹಿತವಾಗದೇ ಇರಬಹುದು. ನಮ್ಮ ಕನ್ನಡನಾಡಿನಲ್ಲಿ ನಮ್ಮ ವಿದ್ಯಾರ್ಥಿಗಳು ಓದುವ ಸಲುವಾಗಿ ಒಂದು ಸೆಟ್ಟು ಭಾರತವು ಎಲ್ಲ ಶಾಲೆಗಳಲ್ಲಿಯೂ ಇರಬೇಕೆಂಬ ನಮ್ಮ ಸದಾಶಯವು ಪರಮಾತ್ಮನ ದಯೆಯಿಂದ ಎಂದಾದರೂ ಫಲಿಸಿಯೇ ತೀರುವುದೆಂಬ ಭರವಸೆಯಿಂದಿರುತ್ತೇವೆ. 'ಮರಳಿ ಯತ್ನವ ಮಾಡು; ಮರಳಿ ಯತ್ನವ ಮಾಡು' – ಎಂಬ ಕನ್ನಡ ಕವಿಯ ಉಪದೇಶದಂತೆ ಪ್ರಯತ್ನವನ್ನು ಮುಂದುವರಿಸುತ್ತೇವೆ. ಆದರೆ ಮುಖ್ಯಮಂತ್ರಿಗಳ ಆಶ್ವಾಸನೆಯನ್ನೇ ಅವಲಂಬಿಸಿ ಹೊಸ ಮತ್ತು ಹಳೆಯ ಸಂಪುಟಗಳನ್ನು ಅಧಿಕಸಂಖ್ಯೆಯಲ್ಲಿ ಮುದ್ರಿಸಿರುವುದರಿಂದ, ಎರಡು ಲಕ್ಷ ರೂ.ಗಳಿಗಿಂತಲೂ ಹೆಚ್ಚು ಮೌಲ್ಯದ ಪ್ರತಿಗಳು ಹಾಗೆಯೇ ಉಳಿದಿವೆ. ಇದರಿಂದಾಗಿ ಅಗಾಧವಾದ ಆರ್ಥಿಕ ಬಿಕ್ಕಟ್ಟನ್ನು ಎದುರಿಸುವಂತಾಗಿದೆ. ಈ ಸಂದರ್ಭದಲ್ಲಿ ನಾವು ನಮ್ಮ ಗ್ರಾಹಕರ ನೆರವನ್ನೇ ನೆಚ್ಚಿಕೊಂಡಿದ್ದೇವೆ ಎಂದರೆ ಗ್ರಾಹಕರು ಹೆಚ್ಚು ಹಣ ಕೊಡಬೇಕಾಗಿಲ್ಲ. ಕಡ್ಡಾಯವಾಗಿ ಇಬ್ಬರು ಗ್ರಾಹಕರನ್ನು ಮಾಡಿಕೊಡಬೇಕು. ಆಢ್ಯರಾಗಿರುವವರು ೨ ಸೆಟ್ಟುಗಳನ್ನು ತಮ್ಮ ಬಂಧು-ಮಿತ್ರರಿಗೆ ಉಚಿತವಾಗಿ ಕೊಡಬಹುದು. ಬ್ಯಾಂಕುಗಳ ಮೂಲಕವಾಗಿ ಇಬ್ಬರನ್ನು ಗ್ರಾಹಕರನ್ನಾಗಿ ಮಾಡಿಕೊಡಬಹುದು. ಯಾವುದಾದರೂ ರೀತಿಯಲ್ಲಿ ಈಗಿರುವ ನಮ್ಮ ಪ್ರತಿಯೊಬ್ಬ ಗ್ರಾಹಕರೂ ಇಬ್ಬರು ಗ್ರಾಹಕರನ್ನು ಒದಗಿಸಿಕೊಟ್ಟರೆ ನಮ್ಮ ಈ ಆರ್ಥಿಕಸ್ಥಿತಿಯು ಸುಧಾರಿಸುವುದೆಂಬುದರಲ್ಲಿ ಸಂಶಯವಿಲ್ಲ. ಇದು ಪ್ರತಿಯೊಬ್ಬರ ಕರ್ತವ್ಯವೂ ಆಗಿರುವುದೆಂದು ನಾವು ಭಾವಿಸುತ್ತೇವೆ. ನಮ್ಮ ಧರ್ಮಗಳನ್ನೂ–ಧರ್ಮಗ್ರಂಥಗಳನ್ನೂ ಉಳಿಸಿಕೊಳ್ಳಬೇಕಾದರೆ ನಾವೇ ಪ್ರಯತ್ನಿಸಬೇಕು. ಇದರ ಪ್ರಚಾರವನ್ನು ನಾವೇ ಮಾಡಬೇಕು. ಮೇಲಾಗಿ ಮಹಾಭಾರತಪ್ರಚಾರವೆಂಬುದೊಂದು ಜ್ಞಾನಯಜ್ಞ. ಮಹಾಪುಣ್ಯಪ್ರದವಾದುದು. ಆದುದರಿಂದ ಪ್ರತಿಯೊಬ್ಬ ಗ್ರಾಹಕರೂ ತಪ್ಪದೇ ಇಬ್ಬರು ಗ್ರಾಹಕರನ್ನು ಮಾಡಿಕೊಟ್ಟು ಸಹಕಾರ ನೀಡಬೇಕಾಗಿ ಕಳಕಳಿಯಿಂದ ಪ್ರಾರ್ಥಿಸುತ್ತೇವೆ. ಇದಕ್ಕೆ ಸಂಬಂಧಿಸಿದಂತೆ ಪ್ರಾರ್ಥನಾಪತ್ರವನ್ನು ಆಹ್ವಾನಪತ್ರಿಕೆಯ ಜೊತೆಯಲ್ಲಿ ನಮ್ಮ ಗ್ರಾಹಕರೆಲ್ಲರಿಗೂ ಕಳುಹಿಸಿಕೊಡಲಾಗಿದೆ. ೨೫ನೆಯ ಸಂಪುಟದ ವೇಳೆಗೆ ನಮ್ಮ ಗ್ರಾಹಕರ ಮೂಲಕವಾಗಿ ಕಡೆಯ ಪಕ್ಷ ೨,೦೦೦ ನೂತನ ಗ್ರಾಹಕರಾಗುವ

ರೆಂಬ ಭರವಸೆಯನ್ನು ಇಟ್ಟುಕೊಂಡಿರುತ್ತೇವೆ. ಪರಮಾತ್ಮನ ದಯೆಯಿಂದ ಈ ನಮ್ಮ ಆಶಯವು ಪೂರ್ಣವಾಗಬೇಕಾಗಿದೆ.

೨೩ನೆಯ ಸಂಪುಟದ ಪ್ರಕಾಶನಸಮಾರಂಭವು ೧೦-೧೨-೧೯೮೧ನೇ ಗುರುವಾರ ಸಾಯಂಕಾಲ ಜಯನಗರದ ಕುಚಲಾಂಬಾ ಕಲ್ಯಾಣಮಂದಿರದ ಭವ್ಯಸಭಾಂಗಣದಲ್ಲಿ ನಡೆಯಿತು. ಸಮಾರಂಭದ ಅಧ್ಯಕ್ಷತೆಯನ್ನು ಕೀರ್ತನ ಕೇಸರಿ, ಭಕ್ತಶಿರೋಮಣಿ ಶ್ರೀ ಅಚ್ಯುತದಾಸರು ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ನ. ನಾ. ಕಠಾವಿಯವರು ಮುಖ್ಯಅತಿಥಿಗಳಾಗಿದ್ದರು. ಸಮಾರಂಭವು ವೇದಘೋಷದಿಂದ ಆರಂಭ ವಾಯಿತು. ಕು. ಮಧುರಾರವರು ಸ್ವಾಗತಪದ್ಯಗಳನ್ನು ಹಾಡಿದರು. ವಿದ್ವಾನ್ ಹೆಚ್. ಎನ್. ರಂಗಸ್ವಾಮಿಯವರು ಪ್ರಕಾಶನದ ಪರವಾಗಿ ಎಲ್ಲರಿಗೂ ಸ್ವಾಗತ ವನ್ನು ಬಯಸುತ್ತಾ –ಇದುವರೆಗಿನ ಪ್ರಗತಿಯನ್ನೂ, ಮುಂದೆ ಆಗಬೇಕಾಗಿ ರುವ ಕಾರ್ಯವನ್ನೂ, ಇದಕ್ಕಾಗಿ ಆಗಬೇಕಾಗಿರುವ ಸಹಾಯ ಸಂಪತ್ತಿ ಗಳನ್ನೂ.–.ವಿವರವಾಗಿ ವಿಶ್ಲೇಷಿಸಿದರು. ವೇದಘೋಷ ಮತ್ತು ಮಂಗಳವಾದ್ಯಗಳು ಮೊಳಗುತ್ತಿದ್ದಂತೆ ಸನ್ಮಾನ್ಯ ಶ್ರೀ ನ. ನಾ. ಕಠಾವಿಯವರು ೨೩ನೆಯ ಸಂಪುಟವನ್ನು ಪ್ರಕಾಶನಗೊಳಿಸಿದರು. ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ಹೆಚ್..ಎಸ್. ವರದದೇಶಿಕಾಚಾರ್ಯರಂಗಪ್ರಿಯರು ೨೩ನೇ ಸಂಪುಟದ ಪರಿಚಯವನ್ನು ಹೃದಯಂಗಮವಾದ ವಾಗ್ಧಾರೆಯಿಂದ ಸಭಿಕರಿಗೆ ಮಾಡಿಕೊಟ್ಟರು. ಅನಂತರ ಮುಖ್ಯಅತಿಥಿಗಳಾದ ಶ್ರೀ ನ..ನಾ. ಕಠಾವಿಯವರು ಮಾತನಾಡುತ್ತಾ ಮೂಲಮಹಾಭಾರತವನ್ನು ಮೂವತ್ತು ಸಂಪುಟಗಳ ರೂಪದಲ್ಲಿ ಸುವ್ಯವಸ್ಥಿತವಾಗಿ ಹೊರತರುತ್ತಿರುವ ಭಾರತ ದರ್ಶನ ಪ್ರಕಾಶನಕ್ಕೆ ತಮ್ಮ ಇಲಾಖೆ ಮತ್ತು ಸರ್ಕಾರಗಳಿಂದ ಸಾಧ್ಯವಿರುವ ಎಲ್ಲ ಸಹಾಯ-ಪ್ರೋತ್ಸಾಹಗಳನ್ನೂ ತಾವು ಕೊಡಿಸುವುದಾಗಿ ಭರವಸೆಯನ್ನಿತ್ತರು. ಬಳಿಕ ಅಧ್ಯಕ್ಷತೆಯನ್ನು ವಹಿಸಿದ್ದ ಖ್ಯಾತ ಕೀರ್ತನಕಾರ ಸಂತ ಭದ್ರಗಿರಿ ಶ್ರೀ ಅಚ್ಯುತದಾಸರು ಮಾತನಾಡುತ್ತಾ –'ಉತ್ತಮರಲ್ಲಿ ಗೌರವ, ಹಿರಿಯರ ಬಗೆಗೆ ವಿನಯ-ಶ್ರದ್ಧೆಗಳು, ಕಿರಿಯರಲ್ಲಿ ಪ್ರೀತಿ –ಇವುಗಳು ಹೇಗೆ ಇರಬೇಕು ಎಂಬುದಕ್ಕೆ ಪಾಂಡ ವರೂ–ಅರ್ಥ-ಕಾಮ-ಉದ್ವೇಗಗಳಿಗೆ ಬಲಿಯಾದರೆ ಆತ್ಮನಾಶ ಎಂಬುದಕ್ಕೆ

ಕೌರವರೂ ದೃಷ್ಟಾಂತಪ್ರಾಯರಾಗಿದ್ದಾರೆ. ರಾಷ್ಟ್ರೀಯಮೌಲ್ಯಗಳುಳ್ಳ ಈ ಗ್ರಂಥವು ಕನ್ನಡಕ್ಕೆ ತರ್ಜುಮೆಗೊಂಡಿರುವುದು ಕನ್ನಡಿಗರ ಸೌಭಾಗ್ಯ. ಈ ಸಂಪುಟಗಳನ್ನು ಕೊಂಡು ಓದಬೇಕೆಂದು ಕೀರ್ತನಗಳ ಮಧ್ಯೆ ಆಸ್ತಿಕವೃಂದಕ್ಕೆ ತಿಳಿಯಪಡಿಸುತ್ತೇನೆ' –ಎಂಬುದಾಗಿ ಹೇಳಿದರು. ಶ್ರೀರಾಮಚಂದ್ರಾಪುರ ಮಠದ ಶ್ರೀ ಶ್ರೀ ರಾಘವೇಂದ್ರಭಾರತೀಸ್ವಾಮಿಗಳು ಕಳುಹಿಸಿಕೊಟ್ಟಿದ್ದ ಸುವರ್ಣಮಂತ್ರಾಕ್ಷತೆಗಳನ್ನು ಸಂಪಾದಕಮಂಡಲಿಯವರಿಗೆ ಅಧ್ಯಕ್ಷರು ವಿತರಣೆ ಮಾಡಿದನಂತರ ವಂದನಾರ್ಪಣೆ – ಶಾಂತಿಪಾಠಗಳೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಸಂಪಾದಕಮಂಡಲಿಯ ವಿದ್ವಾಂಸರು ಯಥಾಪೂರ್ವ ಶ್ರಮವಹಿಸಿ ಗ್ರಂಥವನ್ನು ಸಂಪಾದಿಸಿಕೊಡುತ್ತಿದ್ದಾರೆ. ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ಹೆಚ್..ಎಸ್. ವರದದೇಶಿಕಾಚಾರ್ಯರಂಗಪ್ರಿಯರು ಮಾರ್ಗದರ್ಶನ ಮಾಡುತ್ತಿದ್ದಾರೆ. ಎಲ್ಲರೂ ನಿಃಸ್ಪೃಹತೆಯಿಂದ ಕಾರ್ಯಮಾಡುತ್ತಿದ್ದಾರೆ. ಅನೇಕರಿಗೆ ಇದು ಅಚ್ಚರಿಯಾಗಿ ಕಾಣುತ್ತಿದೆ. ಈಗಿನ ಕಾಲದಲ್ಲಿ ಇದು ಅಚ್ಚರಿಯೇ ಸರಿ. ಆದರೆ ಪರಮಾತ್ಮನ ಇಚ್ಛೆಯಂತೆ ಈ ವಿದ್ವಾಂಸರೆಲ್ಲರೂ ಸೌಹಾರ್ದದಿಂದ ಯಾವ ಪ್ರತಿಫಲವನ್ನೂ ಅಪೇಕ್ಷಿಸದೇ ಭಗವತ್ಪ್ರೀತಿಗಾಗಿ ಈ ಮಹಾಕಾರ್ಯವನ್ನು ನಿರ್ವಹಿಸಿಕೊಡುತ್ತಿದ್ದಾರೆ. ಇವರೆಲ್ಲರಿಗೂ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ. ಅನೇಕ ಪ್ರಚಾರಕರೂ ನಿಃಸ್ಪೃಹತೆಯಿಂದ ಕೆಲಸಮಾಡುತ್ತಿದ್ದಾರೆ. ಸಂಪುಟಗಳನ್ನು ಮನೆ-ಮನೆಗೆ ಹಂಚಿ ಹಣವನ್ನು ಸಂಗ್ರಹಿಸಿಕೊಡುತ್ತಿದ್ದಾರೆ. ಇಂತಹ ಸಲಕರಣೆಗಳೆಲ್ಲವನ್ನೂ ಮಾಡಿಕೊಟ್ಟು ಪರಮಾತ್ಮನೇ ಈ ಮಹಾಕಾರ್ಯವನ್ನು ಮಾಡಿಸುತ್ತಿದ್ದಾನೆ. ತಿರುಮಲೆ ದೇವಸ್ಥಾನದ ಆಡಳಿತಾಧಿಕಾರಿಗಳಾದ ಸನ್ಮಾನ್ಯ ಶ್ರೀ ಪಿ.ವಿ.ಆರ್.ಕೆ. ಪ್ರಸಾದರು ಆಶ್ವಾಸನೆಯನ್ನಿತ್ತಿದ್ದ ಪ್ರಕಾರ ತಿರುಪತಿ ವೆಂಕಟೇಶ್ವರನ ಸನ್ನಿಧಿಯಿಂದ ಪ್ರತಿಸಂಪುಟಕ್ಕೆ ಐದು ಸಾವಿರ ರೂ.ಗಳ ಸಹಾಯಧನ ದೊರೆಯುತ್ತಿದೆ. ಈ ಬಾರಿ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಸನ್ಮಾನ್ಯ ಪೂಜ್ಯ ಶ್ರೀ ವೀರೇಂದ್ರಹೆಗ್ಗಡೆಯವರೂ ಹೆಚ್ಚುತ್ತಿರುವ ವೆಚ್ಚವನ್ನು ಸರಿದೂಗಿಸುವ ಸಲುವಾಗಿ ಮಂಜುನಾಥೇಶ್ವರನ ಅನುಗ್ರಹ

ರೂಪವಾಗಿ ಐದು ಸಾವಿರ ರೂ.ಗಳನ್ನು ಕಳುಹಿಸಿರುತ್ತಾರೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು.

ಕೋಲಾರದ ಚಿನ್ನದಗಣಿ ಪ್ರದೇಶದ ಬೆಮೆಲ್‌ನಗರದಲ್ಲಿ – 'ಕನ್ನಡ ಮಿತ್ರರು' –ಆಶ್ರಯದಲ್ಲಿ ಮಹಾಭಾರತ ಸಂಪುಟಪ್ರಕಾಶನ ಸಮಾರಂಭ ವನ್ನು ವ್ಯವಸ್ಥೆಮಾಡಲಾಗಿತ್ತು. ವೇ|| ಬ್ರ|| ಶ್ರೀ|| ಹೆಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯರವರು ಸಂಪುಟದ ಪರಿಚಯವನ್ನು ಮಾಡಿಕೊಟ್ಟರು. ಉತ್ಸಾಹೀ ತರುಣ ಇಂಜಿನಿಯರ್ ಶ್ರೀ ಮನವಾರ್ತೆ ನಾಗರಾಜರಾವ್‌ರವರು ತೀವ್ರಶ್ರಮವಹಿಸಿ ಒಂದು ನೂರು ಗ್ರಾಹಕರನ್ನು ಮಾಡಿಕೊಟ್ಟಿದ್ದಾರೆ. ಅಲ್ಲಿನ ಎಲ್ಲ ಕಾರ್ಯಕರ್ತರಿಗೂ ಭಾರತ ದರ್ಶನವು ಶುಭವನ್ನು ಹಾರೈಸುತ್ತದೆ.

ಪರಮಕಾರುಣಿಕರಾದ, ಪೇಜಾವರ ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಈ ಸಂಪುಟಕ್ಕೆ ಮುನ್ನುಡಿ ಯನ್ನು ಬರೆದುಕೊಟ್ಟು ಅನುಗ್ರಹಿಸಿರುತ್ತಾರೆ ಮತ್ತು ಒಂದು ಸಾವಿರ ರೂ.ಗಳನ್ನು ಅನುಗ್ರಹಿಸಿರುತ್ತಾರೆ. ಇವರಿಗೆ ಭಕ್ತಿಪೂರ್ವಕವಾಗಿ ಸಾಷ್ಟಾಂಗ ನಮಸ್ಕಾರಗಳನ್ನು ಅರ್ಪಿಸುತ್ತೇವೆ. ಗುರುವರೇಣ್ಯರ ಅನುಗ್ರಹ, ದೈವದ ಕರುಣೆ –ಇವುಗಳೇ ನಮ್ಮ ಈ ಅಗಾಧವಾದ ಕಾರ್ಯಕ್ಕೆ ಬೀಜರೂಪ ಗಳಾಗಿವೆ. ಇವುಗಳಿಂದಲೇ ನಾವು ಈ ಕಾರ್ಯವನ್ನು ನಿರ್ವಿಘ್ನವಾಗಿ ಮುಂದುವರಿಸುತ್ತಿದ್ದೇವೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಕಡೆಯದಾಗಿ ಪ್ರತ್ಯಕ್ಷವಾಗಿಯೂ ಮತ್ತು ಪರೋಕ್ಷವಾಗಿಯೂ ಈ ಮಹಾಕಾರ್ಯಕ್ಕೆ ಸಹಕಾರಗಳನ್ನು ನೀಡುತ್ತಿರುವವರೆಲ್ಲರಿಗೂ ಮತ್ತು ವಾಚಕರಿಗೂ ದಯಾಮಯನಾದ ಪರಮಾತ್ಮನು ಸಕಲಸೌಭಾಗ್ಯಗಳನ್ನೂ ದಯಪಾಲಿಸಲೆಂದು ಹೃತ್ಪೂರ್ವಕವಾಗಿ ಪ್ರಾರ್ಥಿಸಿ ವಿರಮಿಸುವೆವು.

–ಪ್ರಕಾಶಕರು.

ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಅನುಗ್ರಹಿಸಿಕೊಟ್ಟ

ಭೂಮಿಕೆ

ಮಹಾಭಾರತವನ್ನು ಇತಿಹಾಸವೆಂದು ಕರೆಯುತ್ತಾರೆ. ಇದು ಕೇವಲ ಅರಸುಮನೆತನದ ಹೋರಾಟದ ಇತಿಹಾಸವಾಗಿರದೆ ಸಮಗ್ರಮಾನವ ಜನಾಂಗದ ಇತಿಹಾಸವೇ ಆಗಿದೆ. ಮಹಾಭಾರತದಲ್ಲಿ ನಾನಾರೀತಿಯ ಪಾತ್ರಗಳ ಚಿತ್ರಣದ ಜೊತೆಗೆ ಮಾನವಸಮಾಜದ ಭಿನ್ನಮುಖಗಳ ಪರಿಚಯವನ್ನೂ ಮಾಡಿಸಲಾಗಿದೆ. ಉತ್ತಮವ್ಯಕ್ತಿಗಳಲ್ಲೂ ಇರಬಹುದಾದ ದೋಷ-ದೌರ್ಬಲ್ಯಗಳ ನಿರೂಪಣೆ, ಕೆಟ್ಟ ವ್ಯಕ್ತಿಗಳಲ್ಲಿಯೂ ಇರಬಹುದಾದ ಸೂಕ್ಷ್ಮ ಸದ್ಗುಣಗಳನ್ನು ಗುರುತಿಸುವ ಮಹಾಭಾರತವು ಸಮಾಜದ ಸದ್ಗುಣ-ದುರ್ಗುಣಗಳ ಸಂಕಲನಾತ್ಮಕವಾದ ಸಂಕೀರ್ಣವ್ಯಕ್ತಿತ್ವದ ನೈಜಚಿತ್ರಣವನ್ನು ಮಾಡಿ ನಮ್ಮ ಜೀವನದ ಕೈಗನ್ನಡಿಯಂತಿದೆ. ಈ ಇತಿಹಾಸವನ್ನು 'ಜಯ' ಎಂಬ ಹೆಸರಿನಿಂದ ಕರೆಯಲಾಗಿದೆ. ನಮ್ಮಲ್ಲಿರುವ ದುರಾಸೆ, ಅಸೂಯೆ, ಆಕ್ರಮಣ, ವಂಚನೆಗಳ ಪ್ರತೀಕರಾದ ದುರ್ಯೋಧನ-ದುಃಶಾಸನ-ಶಕುನಿ ಪ್ರವೃತ್ತಿಗಳ ವಿರುದ್ಧ ಸತ್ಯ, ತತ್ತ್ವನಿಷ್ಠೆ, ಉತ್ಸಾಹ, ಧೈರ್ಯ, ಸಾಹಸಗಳ ಪ್ರತೀಕಗಳೆನಿಸಿದ ಧರ್ಮರಾಜ, ಭೀಮ, ಅರ್ಜುನರು ಸಾಧಿಸುವ ವಿಜಯದ ವರ್ಣನೆಯನ್ನು ಈ ಮಹಾಭಾರತದಲ್ಲಿ ಕಾಣಬಹುದು. ಇದು ಕೌರವರ ವಿರುದ್ಧವಾಗಿ ಪಾಂಡವರು ಸಾಧಿಸಿದ ಸೈನಿಕ ಹೋರಾಟದ ವಿಜಯದ ನಿರೂಪಣೆಯಲ್ಲಿ ಸೀಮಿತವಾಗಿರದೆ–ದುಷ್ಟಶಕ್ತಿಯ ವಿರುದ್ಧವಾಗಿ ಸಾತ್ತ್ವಿಕಶಕ್ತಿಯ ವಿಜಯ, ವಿಜೃಂಭಣೆಯ ಪ್ರೇರಣೆಯನ್ನೂ ನೀಡುವುದರಿಂದ ಎಲ್ಲರಿಗೂ ಇದು 'ಜಯ' ವೆನಿಸಿದೆ. ನಮ್ಮ ಎಲ್ಲಾ ಋಷಿ-ಮುನಿಗಳ ಸಾತ್ತ್ವಿಕಚಿಂತನ, ಮಂಥನವೆಲ್ಲಾ ಈ ಗ್ರಂಥದಲ್ಲಿ ಅಡಕವಾಗಿದೆ. ಜ್ಞಾನ, ವಿಜ್ಞಾನಗಳು ಇಲ್ಲಿ ಘನೀಭವಿಸಿ ಇರುವುದರಿಂದಲೇ ಇದಕ್ಕೆ ಮಹಾಭಾರತವೆಂದು ಹೆಸರು ಬಂದಿದೆ. ಪುಸ್ತಕದ ಗಾತ್ರದಿಂದ ಮಾತ್ರವಲ್ಲ ; ಅರ್ಥದ ಆಳ ಮತ್ತು ವಿಸ್ತಾರದಿಂದಲೂ ಇದು ಮಹಾಭಾರತವೆನಿಸಿದೆ.

ಇದನ್ನು ಕನ್ನಡದಲ್ಲಿ ಭಾಷಾಂತರಿಸುವ ಅತ್ಯಂತಸಾಹಸಪೂರ್ಣ ಕಾರ್ಯವನ್ನು ಬೆಂಗಳೂರಿನ ಭಾರತ ದರ್ಶನ ಪ್ರಕಾಶನವು ಕೈಗೊಂಡಿರುವುದು ಅತ್ಯಂತಸ್ತುತ್ಯವಾಗಿದೆ. ಈಗಾಗಲೇ 24 ಸಂಪುಟಗಳನ್ನು ಪ್ರಕಟಿಸಿ

ಈ ಸಂಸ್ಥೆಯು ಮಹತ್ತ್ವದ ಸಾಧನೆಯನ್ನು ನಡೆಸಿದೆ. ಈ ಪ್ರಕಾಶನ ಸಂಸ್ಥೆಯು 30 ಸಂಪುಟಗಳ ಯೋಜನೆಯನ್ನು ಪೂರ್ಣಗೊಳಿಸುವುದರ ಜೊತೆಗೆ ಈವರೆಗೆ ಮುದ್ರಿತಗಳಾದ ಸಂಪುಟಗಳ ಪುನರ್ಮುದ್ರಣಕಾರ್ಯವನ್ನೂ ಸಾಧಿಸಿ ಜನತೆಯ ಜ್ಞಾನತೃಷ್ಣೆಯನ್ನು ತಣಿಸಲು ಸಮರ್ಥವಾಗಲಿ – ಎಂದು ಆಶಿಸುತ್ತೇವೆ. ಈ ಮಹಾಯೋಜನೆಗೆ ಮಹಾಜನರು ವಿಶೇಷರೀತಿಯಿಂದ ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ.

ಇತಿ ಶ್ರೀಮನ್ನಾರಾಯಣಸ್ಮೃತಯಃ

ದ್ವಿತೀಯ ಮುದ್ರಣದ ಪ್ರಸ್ತಾವನೆ

ಪರಮಾತ್ಮನ ದಯೆಯಿಂದಲೂ ಸತ್ಪುರುಷರ ಸಹಕಾರ ಸದಾಶಯ ಗಳಿಂದಲೂ 24ನೆಯ ಸಂಪುಟದ ಎರಡನೆಯ ಮುದ್ರಣವನ್ನು ಮುಗಿಸು ತ್ತಿದ್ದೇವೆ. ರಾಮಾಯಣದ 5ನೆಯ ಸಂಪುಟವು ಮುಗಿದನಂತರ ಮಹಾ ಭಾರತ 9 ಮತ್ತು 24ನೆಯ ಸಂಪುಟಗಳ ಪುನರ್ಮುದ್ರಣವನ್ನು ಮುಗಿಸಿ ದಂತಾಗಿದೆ. ರಾಮಾಯಣದ ೬ನೇ ಸಂಪುಟದ ಮುದ್ರಣವನ್ನು ಪ್ರಾರಂಭಿಸ ಲಾಗಿದೆ. ನಮ್ಮ ದೃಷ್ಟಿಯಿಂದ ಪುನರ್ಮುದ್ರಣಗಳು ಬೇಗ ಬೇಗ ಸಾಗು ತ್ತಿದ್ದರೂ ಮುದ್ರಣವಾಗಬೇಕಾಗಿರುವ ಸಂಪುಟಗಳು ಅನೇಕವಿವೆ. ಪರಮಾತ್ಮನ ಅನುಗ್ರಹದಿಂದ ಮುಂದೊಂದು ದಿನ ಎಲ್ಲ ಸಂಪುಟಗಳೂ ಸಿಕ್ಕುವಂತಾಗಬಹುದು. ಸಿಂಡಿಕೇಟ್ ಬ್ಯಾಂಕಿನವರು ನಮ್ಮ ಪ್ರಾರ್ಥನೆ ಯಂತೆ ಹೊಸ ಗ್ರಾಹಕರಿಗೆ ಸಾಧಾರಣ ಪ್ರತಿಗಳಿಗೆ 400/- ರೂ.ಗಳ ಮತ್ತು ಕ್ಯಾಲಿಕೋ ಪ್ರತಿಗಳಿಗೆ 500/- ರೂ.ಗಳ ಸುಲಭ ಕಂತಿನ ಸಾಲಕೊಡುವು ದಾಗಿ ಸುತ್ತೋಲೆಯನ್ನು ಹೊರಡಿಸಿರುತ್ತಾರೆ. ನ್ಯಾಷನಲ್ ಕೋ- ಆಪರೇಟಿವ್ ಬ್ಯಾಂಕಿನವರು ಈಗಾಗಲೇ ರಾಮಾಯಣಕ್ಕೂ ಸೇರಿಸಿ ಸುಲಭ ಕಂತಿನ ಸಾಲವನ್ನು ವಿತರಣೆ ಮಾಡುತ್ತಿದ್ದಾರೆ. ಧರ್ಮಬುದ್ಧಿಯುಳ್ಳವರು ಈ ಸದವಕಾಶವನ್ನು ಉಪಯೋಗಿಸಿಕೊಂಡು ನಮ್ಮ ಸಂಸ್ಕೃತಿಗೆ ಅಡಿಗಲ್ಲು ಗಳಂತಿರುವ ಮಹಾಭಾರತ-ರಾಮಾಯಣ ಗ್ರಂಥಗಳನ್ನು ಸಂಗ್ರಹಿಸಿಟ್ಟುಕೊಳ್ಳ ಬೇಕಾಗಿ ಪ್ರಾರ್ಥಿಸುತ್ತೇವೆ. ಹಿಂದಿನಂತೆಯೇ ಸಂಪಾದಕ ಮಂಡಲಿಯ ವಿದ್ವಾಂಸರು ಈ ಸಂಪುಟದ ತಪ್ಪು-ಒಪ್ಪುಗಳನ್ನು ನೋಡಿಕೊಟ್ಟಿರುತ್ತಾರೆ. ಇವರಿಗೆ ನಮ್ಮ ಹೃತ್ಪೂರ್ವಕವಂದನೆಗಳು.

–ಪ್ರಕಾಶಕರು.

ಮಹಾಭಾರತ-ಶಾಂತಿಪರ್ವ-ಇಪ್ಪತ್ತನಾಲ್ಕನೆಯ ಸಂಪುಟದ ವಿಷಯಾನುಕ್ರಮಣಿಕೆ

ಅಸ್ಮದತ್ಯಂತಪ್ರಿಯಶಿಷ್ಯ, ಕೇಶವ ಸುಬ್ರಹ್ಮಣ್ಯ ಕೌಶಿಕ,
ಸಂಪಾದಕರು– ಭಾರತ ದರ್ಶನ ಪ್ರಕಾಶನ, ತ್ಯಾಗರಾಜನಗರ,
ಬೆಂಗಳೂರು–28.

ಏತೇಷಾಂ ವಿಷಯೇ
ಶ್ರೀಮನ್ನಾರಾಯಣಸ್ಮರಣಪುರಸ್ಸರಂ ಸಂದಿಷ್ಟೋಽಯಂ
ಸಂದೇಶಃ

ಅದಾಗಿ–ಭಗವಾನ್ ವ್ಯಾಸಮಹರ್ಷಿಪ್ರಣೀತ, ಮಹಾಭಾರತದ ಲಕ್ಷ ಸಂಸ್ಕೃತಶ್ಲೋಕಗಳ ಕನ್ನಡ ಸರಳಾನುವಾದವನ್ನೊಳಗೊಂಡ ಮೂವತ್ತು ಸಂಪುಟಗಳ ಪ್ರಕಾಶನವನ್ನು ಕೈಗೊಂಡ ನೀವು ಇದೀಗ ಇಪ್ಪತ್ನಾಲ್ಕನೆಯ ಸಂಪುಟವನ್ನು ಪ್ರಕಟಿಸಲಿರುವುದರಿಂದ ಕನ್ನಡಿಗರಿಗೆಲ್ಲ ಸಂತಸಪಡುವಂತಾಯಿತು.

ಪ್ರತಿಮಾನವನೂ ಲೌಕಿಕ ಹಾಗೂ ಪಾರಮಾರ್ಥಿಕ ಸುಖ (ನಿಶ್ರೇಯಸ) ದೊರಕುವ ಮಾರ್ಗವನ್ನು ವ್ಯಾಸ-ಶುಕಸಂವಾದ, ಇಂದ್ರ-ಬಲಿ ಸಂಭಾಷಣೆ, ಮನು-ಬೃಹಸ್ಪತಿವಿಚಾರವಿನಿಮಯಗಳೇ ಮೊದಲಾದುವುಗಳಿಂದ ಆಚಾರ್ಯ ಭೀಷ್ಮರು ಅಜಾತಶತ್ರು ಯುಧಿಷ್ಠಿರನಿಗೆ ಉಪದೇಶಿಸುವುದನ್ನು ಈ ಸಂಪುಟದಲ್ಲಿ ನೋಡಬಹುದು.

"**ದಾನಮೇಕಂ ಕಲೌ ಯುಗೇ**" ಮುಂತಾದ ವಾಕ್ಯಗಳಂತೂ ಈಗಿನ ಕಾಲಕ್ಕೆ ಉಪಯುಕ್ತವಾದುವುಗಳು.

ನೀವು ಕೈಗೊಂಡ ಇಂತಹ ಮಹತ್ತ್ವಪೂರ್ಣವೂ, ಈಗಿನ ಜನತೆಗೆ ಅತ್ಯಗತ್ಯವೂ ಆದ ಈ (ಮೂವತ್ತೂ) ಗ್ರಂಥದ ಪ್ರಕಟಣೆಗಳೆಲ್ಲ ಸಕಾಲದಲ್ಲಿ ಪ್ರಕಾಶಗೊಂಡು ಎಲ್ಲರೂ ಇದರ ಪ್ರಯೋಜನ ಪಡೆಯುವಂತಾಗಲೆಂದೂ ಶ್ರೀಸೀತಾರಾಮಚಂದ್ರರ ಪ್ರಸಾದ-ಮಂತ್ರಾಕ್ಷತೆಗಳೊಂದಿಗೆ ಹಾರೈಸುತ್ತೇವೆ.

ಇತಿ ಶ್ರೀಮನ್ನಾರಾಯಣಸ್ಮೃತಯಃ

ಮಿತಿ :– ಶ್ರೀ ದುಂದುಭಿ ಸಂ॥ ದ ವೈಶಾಖ ಶುದ್ಧ ೬। ಯು
(ತಾ॥ 29-4-1982ನೇ ಗುರುವಾಸರೇ)

ವಸತಿ :– ಹೊನ್ನಾವರ ತಾಲ್ಲೂಕು, ಚಂದಾವರ ಸೀಮೆ ತೆಕ್ಕಾರು
ಶ್ರೀ ರಘೂತ್ತಮಮಠೇ.

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ॐ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್॥

ಶ್ರೀಮನ್ಮಹಾಭಾರತ–ಶಾಂತಿಪರ್ವ

ಇಪ್ಪತ್ತನಾಲ್ಕನೆಯ ಸಂಪುಟ

೧೯೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಧ್ಯಾನಯೋಗದ ವರ್ಣನೆ

ಹನ್ತ ವಕ್ಷ್ಯಾಮಿ ತೇ ಪಾರ್ಥ ಧ್ಯಾನಯೋಗಂ ಚತುರ್ವಿಧಮ್।
ಯಂ ಜ್ಞಾತ್ವಾ ಶಾಶ್ವತೀಂ ಸಿದ್ಧಿಂ ಗಚ್ಛನ್ತೀಹ ಮಹರ್ಷಯಃ ॥೧॥

ವೈಶಂಪಾಯನರು ಹೇಳುತ್ತಾರೆ :

ಪಾರಿಕ್ಷಿತ! ಭೀಷ್ಮನು ಮುಂದುವರಿದು ಹೇಳುತ್ತಾನೆ :

“ಯುಧಿಷ್ಠಿರ! ನಾಲ್ಕು ವಿಧವಾದ ಯಾವ ಧ್ಯಾನಯೋಗವನ್ನು ತಿಳಿದುಕೊಂಡು ಮಹರ್ಷಿಗಳು ಶಾಶ್ವತವಾದ ಸಿದ್ಧಿಯನ್ನು ಪಡೆದುಕೊಳ್ಳುವರೋ–ಅಂತಹ ಧ್ಯಾನಯೋಗವನ್ನು ನಿನಗೆ ಹೇಳುತ್ತೇನೆ. ನಿರ್ವಾಣ ಸ್ವರೂಪವಾದ ಮೋಕ್ಷದಲ್ಲಿಯೇ ನೆಟ್ಟಮನಸ್ಸುಳ್ಳ, ಜ್ಞಾನತೃಪ್ತರಾದ, ಯೋಗಯುಕ್ತರಾದ ಮಹರ್ಷಿಗಳು ಸಮೀಚೀನವಾದ ಧ್ಯಾನಾನುಷ್ಠಾನವನ್ನು ಹೇಗೆ ಮಾಡುವರೆಂಬುದನ್ನು ಹೇಳುತ್ತೇನೆ. ಕೇಳು :

ನಾವರ್ತನ್ತೇ ಪುನಃ ಪಾರ್ಥ ಮುಕ್ತಾಃ ಸಂಸಾರದೋಷತಃ।
ಜನ್ಮದೋಷಪರಿಕ್ಷೀಣಾಃ ಸ್ವಭಾವೇ ಪರ್ಯವಸ್ಥಿತಾಃ ॥೨॥

ಕುಂತೀನಂದನ! ಸಂಸಾರದ ದೋಷಗಳಿಂದಲೂ (ಕಾಮ-ಕ್ರೋಧ-ಲೋಭ-ಮೋಹಾದಿಗಳಿಂದಲೂ), ಜನ್ಮಸಂಬಂಧವಾದ ಸತ್ತ್ವ-ರಜಸ್ತಮಾದಿ ದೋಷಗಳಿಂದಲೂ ಯಾರು ಮುಕ್ತರಾಗಿರುವರೋ ಮತ್ತು

ಸ್ವಸ್ವರೂಪದಲ್ಲಿಯೇ ನೆಲೆಗೊಂಡಿರುವರೋ–ಅವರು ಪುನಃ ಈ ಭೂಮಿಗೆ ಹಿಂದಿರುಗುವುದಿಲ್ಲ.

ನಿರ್ದ್ವಂದ್ವಾ ನಿತ್ಯಸತ್ತ್ವಸ್ಥಾ ವಿಮುಕ್ತಾ ನಿಯಮಸ್ಥಿತಾಃ।
ಅಸಙ್ಗಾನ್ಯವಿವಾದೀನಿ ಮನಃಶಾನ್ತಿಕರಾಣಿ ಚ ॥೪॥

ಧ್ಯಾನಯೋಗದ ಸಾಧಕರು ಶೀತೋಷ್ಣ, ಸುಖ-ದುಃಖ, ಮಾನಾಪಮಾನ, ಪ್ರಿಯಾಪ್ರಿಯ –ಇವೇ ಮೊದಲಾದ ದ್ವಂದ್ವಗಳನ್ನು ತ್ಯಜಿಸಬೇಕು. ಸದಾ ಸತ್ತ್ವಗುಣಸಂಪನ್ನರಾಗಿರಬೇಕು. ಸಕಲವಿಧವಾದ ದೋಷಗಳಿಂದಲೂ, ಲೋಭಾದಿ ದುರ್ಗುಣಗಳಿಂದಲೂ ವಿಮುಕ್ತರಾಗಿರಬೇಕು. ನಿಯಮಾನುಷ್ಠಾನಪರರಾಗಿರಬೇಕು. ನಿಸ್ಸಂಗವನ್ನು ಬೋಧಿಸುವ, ವಿವಾದಕ್ಕೆ ಆಸ್ಪದವಿಲ್ಲದ, ಮನಸ್ಸಿಗೆ ಶಾಂತಿಯನ್ನು ಉಂಟುಮಾಡುವ ಶಾಸ್ತ್ರಗಳನ್ನು ಅಧ್ಯಯನಮಾಡಬೇಕು.

ತತ್ರ ಧ್ಯಾನೇನ ಸಂಶ್ಲಿಷ್ಟಮೇಕಾಗ್ರಂ ಧಾರಯೇನ್ಮನಃ।
ಪಿಣ್ಡೀಕೃತ್ಯೇನ್ದ್ರಿಯಗ್ರಾಮಮಾಸೀನಃ ಕಾಷ್ಠವನ್ಮುನಿಃ ॥೫॥

ಮುನಿಯಾದವನು ಇಂದ್ರಿಯಗ್ರಾಮಗಳೆಲ್ಲವನ್ನೂ ಒಟ್ಟುಗೂಡಿಸಿ (ಆಮೆಯು ತನ್ನ ಅಂಗಗಳನ್ನು ಒಳಕ್ಕೆ ಸೆಳೆದುಕೊಳ್ಳುವಂತೆ –ವಿಷಯಗಳಲ್ಲಿ ಆಸಕ್ತವಾದ ಇಂದ್ರಿಯಗಳನ್ನು ಮನಸ್ಸಿನ ಮೂಲಕವಾಗಿ ಒಳಸರಿಸಿ ಮನಸ್ಸಿನಲ್ಲಿಯೇ ಲೀನಗೊಳಿಸಿ), ಕಟ್ಟಿಗೆಯಂತಾಗಿ (ನಿಶ್ಚಲನಾಗಿ), ಧ್ಯಾನದಲ್ಲಿ ಸೇರಿಕೊಂಡ ಏಕಾಗ್ರವಾದ ಮನಸ್ಸನ್ನು ಧಾರಣೆಮಾಡಿಕೊಳ್ಳಬೇಕು. (ಇಂದ್ರಿಯಗಳು ಮನಸ್ಸಿನ ಮೂಲಕವಾಗಿಯೇ ವಿಷಯಗಳನ್ನು ಅನುಭವಿಸುತ್ತವೆ. **ಮನಸಾ ಹ್ಯೇಷ ಪಶ್ಯತಿ ಮನಸಾ ಶೃಣೋತಿ**–ಎಂಬ ಶ್ರುತಿಯೂ ಇದನ್ನೇ ಹೇಳುತ್ತದೆ. ಮನಸ್ಸಿನ ಮೂಲಕವಾಗಿಯೇ ವಿಷಯಸುಖಗಳನ್ನು ಅನುಭವಿಸುವ ಇಂದ್ರಿಯಗ್ರಾಮಗಳನ್ನು ಒಟ್ಟುಗೂಡಿಸಿ ಹಿಂದಕ್ಕೆ ಸೆಳೆಯಬೇಕಾದರೆ ಮನಸ್ಸಿನ ಮೂಲಕವಾಗಿಯೇ ಅದು ಆಗಬೇಕು. ಮನಸ್ಸನ್ನು ಇಂದ್ರಿಯಸುಖಗಳಿಂದ ಒಳಕ್ಕೆ ಸೆಳೆದರೆ ಕೇವಲ ಇಂದ್ರಿಯಗಳೇ ಯಾವ ಕಾರ್ಯವನ್ನೂ ಮಾಡುವುದಿಲ್ಲ. ಮನಸ್ಸಿಲ್ಲದಿದ್ದರೆ ಕಣ್ಣುಗಳಿದ್ದರೂ ನೋಡುವುದಕ್ಕಾಗುವುದಿಲ್ಲ. ಕಿವಿಗಳಿದ್ದೂ ಕೇಳುವುದ

ಕ್ಕಾಗುವುದಿಲ್ಲ. ಹೀಗೆ ಮನಸ್ಸನ್ನು ವಿಷಯಗಳಿಂದ ಹಿಂದಕ್ಕೆ ಸೆಳೆದುಕೊಂಡು ಅವುಗಳೆಲ್ಲವನ್ನೂ ಮನಸ್ಸಿನಲ್ಲಿಯೇ ಲೀನಗೊಳಿಸಿ ಅನಂತರ ಮನಸ್ಸನ್ನು ಆತ್ಮನಲ್ಲಿ ಲೀನಗೊಳಿಸುವುದೇ ಇಂದ್ರಿಯಗ್ರಾಮಗಳ ಪಿಂಡೀಕರಣ. ವ್ಯಾಖ್ಯಾನಕಾರರ ಮಾತಿನಲ್ಲಿ ಮನೋಮಾತ್ರಾತ್ಮನಾವಸ್ಥಿತಿಃ ಪಿಣ್ಡೀಕಾರಃ। ಹಾಗೆ ಇಂದ್ರಿಯಗಳೆಲ್ಲವನ್ನೂ ಮನಸ್ಸಿನಲ್ಲಿ ಲೀನಗೊಳಿಸಿ ಅನಂತರ ಮನಸ್ಸನ್ನು ಧ್ಯಾನವಸ್ತುವಿನಲ್ಲಿ ಲೀನಗೊಳಿಸಿದಾಗ ಸಾಧಕನ ಶರೀರವು ಕಾಷ್ಠದಂತಿರುತ್ತದೆ. ಧ್ಯಾನಕ್ಕೆ ವಿಷಯವೊಂದಿರಬೇಕು. ನಿರ್ವಿಷಯದಲ್ಲಿ ಮನಸ್ಸು ಏಕಾಗ್ರವಾಗಿ ಹೆಚ್ಚುಕಾಲ ಇರುವುದಿಲ್ಲ. ಗುರೂಪದೇಶದಂತೆ ಧ್ಯಾನಕ್ಕೆ ವಿಷಯವೊಂದನ್ನು ಕಲ್ಪಿಸಿಕೊಂಡು ಆ ವಿಷಯದಲ್ಲಿಯೇ ಮನಸ್ಸನ್ನು ಸಂಪೂರ್ಣವಾಗಿ ಸಂಯೋಜಿಸಬೇಕು. 'ಇಂದ್ರಿಯಗ್ರಾಮಂ ಪಿಣ್ಡೀಕೃತ್ಯ' ಎಂಬುದನ್ನೇ ಮುಂದಿನ ಶ್ಲೋಕಗಳಲ್ಲಿ ವಿವರಿಸಿ ಹೇಳಿದ್ದಾರೆ.)

ಶಬ್ದಂ ನ ವಿನ್ದೇಚ್ಛ್ರೋತ್ರೇಣ ತ್ವಚಾ ಸ್ಪರ್ಶಂ ನ ವೇದಯೇತ್।
ರೂಪಂ ನ ಚಕ್ಷುಷಾ ವಿದ್ಯಾಜ್ಜಿಹ್ವಯಾ ನ ರಸಾಂಸ್ತಥಾ ॥೬॥

ಘ್ರೇಯಾಣ್ಯಪಿ ಚ ಸರ್ವಾಣಿ ಜಹ್ಯಾದ್ಧ್ಯಾನೇನ ಯೋಗವಿತ್।
ಪಞ್ಚವರ್ಗಪ್ರಮಾಥೀನಿ ನೇಚ್ಛೇಚ್ಚೈತಾನಿ ವೀರ್ಯವಾನ್ ॥೭॥

ಧ್ಯಾನಯೋಗವನ್ನು ತಿಳಿದಿರುವ ಮನೋಬಲಯುಕ್ತನಾದ ಮುನಿಯು ಕಿವಿಗಳಿಂದ ಶಬ್ದವನ್ನು ಕೇಳಬಾರದು. ಚರ್ಮದಿಂದ ಸ್ಪರ್ಶವನ್ನು ಅನುಭವಿಸಬಾರದು. ಕಣ್ಣುಗಳಿಂದ ರೂಪವನ್ನು ನೋಡಬಾರದು. ನಾಲಿಗೆಯಿಂದ ರಸವನ್ನು ಗ್ರಹಿಸಬಾರದು. ಆಘ್ರಾಣಯೋಗ್ಯವಾದ ವಸ್ತುಗಳನ್ನು ಮೂಗಿನಿಂದ ಅನುಭವಿಸಬಾರದು. ಧ್ಯಾನಯೋಗವನ್ನು ಅಭ್ಯಸಿಸುವವನು ಪಂಚೇಂದ್ರಿಯಗಳನ್ನೂ ಅಲ್ಲೋಲ-ಕಲ್ಲೋಲಗೊಳಿಸುವ ವಿಷಯ ಸುಖಗಳನ್ನು ಇಚ್ಛಿಸಲೇ ಬಾರದು. (ಕಿವಿಗಳಿಂದ ಶಬ್ದವನ್ನೂ – ಕಣ್ಣುಗಳಿಂದ ರೂಪವನ್ನೂ ನೋಡಬಾರದೆಂದರೆ : ಕಿವಿಗಳನ್ನೂ ಕಣ್ಣುಗಳನ್ನೂ ಮುಚ್ಚಿಕೊಂಡು ಕುಳಿತುಕೊಳ್ಳಬೇಕೆಂಬ ಅರ್ಥವಲ್ಲ. ಕಣ್ಣು-ಕಿವಿಗಳ ಸಹಾಯವಿಲ್ಲದೆಯೇ ಮನಸ್ಸು ಶಬ್ದವನ್ನು ಕೇಳಬಲ್ಲುದು ; ರೂಪವನ್ನು

ನೋಡಬಲ್ಲುದು. ಮನಸ್ಸನ್ನು ಪಂಚೇಂದ್ರಿಯಗಳ ಮೂಲಕವಾಗಿ ವಿಷಯಗಳ ಕಡೆಗೆ ಹರಿಸಬಾರದೆಂದರ್ಥ.

ವಿದ್ಯುಚ್ಛಕ್ತಿಯ ರೂಪವಾದ ಮನಸ್ಸನ್ನು ತಡೆಹಿಡಿದುಬಿಟ್ಟರೆ ಪಂಚೇಂದ್ರಿಯಗಳು ಕೆಲಸಮಾಡುವುದಿಲ್ಲ. ಅವುಗಳ ಎದುರಾಗಿಯೇ ಅವುಗಳಿಗೆ ಬೇಕಾದ ವಿಷಯಗಳಿದ್ದರೂ ಆ ವಿಷಯಗಳನ್ನು ಪಂಚೇಂದ್ರಿಯ ಗಳು ಗ್ರಹಿಸುವುದಿಲ್ಲ. ಧ್ಯಾನಯೋಗವನ್ನು ಅಭ್ಯಾಸಮಾಡದವರಿಗೂ ಮನಸ್ಸಿಲ್ಲದಿದ್ದರೆ ವಿಷಯಗಳ ಆಸ್ವಾದನೆಯಾಗಲಾರದೆಂಬ ಅನುಭವವು ಹಲವು ವೇಳೆ ಉಂಟಾಗುತ್ತದೆ. ಯಾವುದೋ ಯೋಚನೆಯಲ್ಲಿ ಮಗ್ನ ನಾಗಿದ್ದವನಿಗೆ ತಾನು ಏನನ್ನು ಊಟಮಾಡುತ್ತಿರುವೆನೆಂಬ ಅರಿವಿರುವುದಿಲ್ಲ. ಯಾರಾದರೂ ಕೂಗಿದರೂ ಕೇಳಿಸುವುದಿಲ್ಲ. ಬಂದು-ಹೋದವರ ಕಡೆಗೆ ಗಮನವಿರುವುದಿಲ್ಲ. ಆ ಸಮಯದಲ್ಲಿ ಮನುಷ್ಯನು ಯಾವುದೋ ಒಂದು ಇಂದ್ರಿಯಕ್ಕೆ ಸಂಬಂಧಿಸಿದ ವಿಷಯವನ್ನು ಮಾತ್ರ ಏಕಾಗ್ರವಾಗಿ ಯೋಚಿಸುತ್ತಿರುತ್ತಾನೆ. ಆದುದರಿಂದ ಉಳಿದ ಇಂದ್ರಿಯಗಳು ಜಾಗ್ರತ ವಾಗಿದ್ದರೂ ಮನಸ್ಸಿನ ಸಹಯೋಗವಿಲ್ಲದ ಕಾರಣ ವಿಷಯಗಳಲ್ಲಿ ಪ್ರವ ಹಿಸುವುದಿಲ್ಲ. ಆಮೆಯು ಅವಯವಗಳನ್ನು ಒಳಕ್ಕೆ ಸೆಳೆದುಕೊಳ್ಳುವಂತೆ – ಧ್ಯಾನಯೋಗದಲ್ಲಿ ಮನಸ್ಸನ್ನು ಇಂದ್ರಿಯಗಳಿಂದ ಒಳಸೆಳೆದುಕೊಳ್ಳಬೇಕು. ಮನಸ್ಸಿನೊಡನೆ ಇಂದ್ರಿಯಗಳ ಸಂಬಂಧವನ್ನು ಕಡಿದುಕೊಳ್ಳಬೇಕು. ಮನ ಸ್ಸನ್ನು ಅಂತರ್ಮುಖವನ್ನಾಗಿ ಮಾಡಬೇಕು. ಬುದ್ಧಿಯೊಡನೆ ಲೀನಗೊಳಿಸಿ ಬುದ್ಧಿಯನ್ನು ಆತ್ಮನಲ್ಲಿ ಲೀನಗೊಳಿಸಬೇಕು. ಧ್ಯಾನ ಎಂದರೆ ಚಿಂತನೆ. ಚಿಂತನೆಗೆ ಒಂದು ವಿಷಯವಿರಬೇಕು. ಅವು ಭಗವನ್ಮೂರ್ತಿ-ಗುರುಮೂರ್ತಿ ಇತ್ಯಾದಿ ಯೋಗಶಾಸ್ತ್ರೋಕ್ತ ಶುಭಾಲಂಬನಗಳು. ಮನಸ್ಸನ್ನು ಇಂದ್ರಿಯಗಳಿಂದ ಬೇರ್ಪಡಿಸುವುದೇ ಧ್ಯಾನಯೋಗದಲ್ಲಿ ಬಹುಮುಖ್ಯ ವಾದ ಮೊದಲನೆಯ ಸಾಧನೆ.)

ತತೋ ಮನಸಿ ಸಂಗೃಹ್ಯ ಪಞ್ಚವರ್ಗಂ ವಿಚಕ್ಷಣಃ।
ಸಮಾದಧ್ಯಾನ್ಮನೋ ಭ್ರಾನ್ತಮಿನ್ದ್ರಿಯೈಃ ಸಹ ಪಞ್ಚಭಿಃ ॥೮॥

(ಈ ಶ್ಲೋಕದಲ್ಲಿಯೇ ಹಿಂದಿನ ವಿಷಯವನ್ನೇ ವಿಸ್ತರಿಸಿ ಹೇಳಿದ್ದಾರೆ.) ಬಳಿಕ ವಿಚಕ್ಷಣನಾದ ಪುರುಷನು ಆಯಾ ಇಂದ್ರಿಯಗಳ ಮೂಲಕ

ವಾಗಿ ಪಡೆಯುತ್ತಿದ್ದ ವಿಷಯಸುಖಗಳನ್ನು ವರ್ಜಿಸಿದನಂತರ ಪಂಚೇಂದ್ರಿಯಗಳನ್ನೂ ಮನಸ್ಸಿನಲ್ಲಿ ಸಂಗ್ರಹಿಸಬೇಕು. ಚಂಚಲವಾದ ಮನಸ್ಸನ್ನು ಇಂದ್ರಿಯಗಳ ಸಮೇತವಾಗಿ ಪರಮಾತ್ಮನ ಧ್ಯಾನದಲ್ಲಿ ತೊಡಗಿಸಬೇಕು. (ಮನಸ್ಸಿನಲ್ಲಿ ಸಂಗ್ರಹೀತವಾದ ಇಂದ್ರಿಯಗಳು ಅಂತರ್ಮುಖವಾಗಿ ಆತ್ಮನನ್ನು ಸಮೀಪಿಸಿದಾಗ ಆತ್ಮಾನಂದವನ್ನು ಅನುಭವಿಸಬಲ್ಲುವು. ಅಂತರ್ಮುಖವಾದ ಕಣ್ಣು ದಿವ್ಯಜ್ಯೋತಿಯನ್ನು ಅಥವಾ ದಿವ್ಯಮಂಗಳವಿಗ್ರಹವನ್ನು ಕಾಣುತ್ತದೆ. ಕಿವಿಯು ಘಂಟಾನಾದವನ್ನು ಅಥವಾ ಓಂಕಾರವನ್ನು ಕೇಳುತ್ತದೆ. ನಾಲಿಗೆಯು ಅಮೃತವನ್ನು ಆಸ್ವಾದಿಸುತ್ತದೆ. ತ್ವಚೆಯು ಬ್ರಹ್ಮನ ಸ್ಪರ್ಶದಿಂದ ಉಂಟಾದ ಬ್ರಹ್ಮಾನಂದವನ್ನು ಅನುಭವಿಸುತ್ತದೆ. ಘ್ರಾಣವು ಪರಿಮಳಗಂಧವನ್ನು ಆಘ್ರಾಣಿಸುತ್ತದೆ.)

ವಿಸಂಚಾರಿ ನಿರಾಲಮ್ಬಂ ಪಞ್ಚದ್ವಾರಂ ಚಲಾಚಲಮ್ ।
ಪೂರ್ವಂ ಧ್ಯಾನಪಥೇ ಧೀರಃ ಸಮಾದಧ್ಯಾನ್ಮನೋಽನ್ತರಾ ॥೯॥

ಮನಸ್ಸು ಹಲವು ಬಗೆಯ ವಿಷಯಗಳಲ್ಲಿಯೇ ಸಂಚರಿಸುವ ಸ್ವಭಾವವುಳ್ಳದ್ದಾಗಿದೆ. ಪಂಚೇಂದ್ರಿಯಗಳೆಂಬ ಐದು ದ್ವಾರವುಳ್ಳದ್ದಾಗಿದೆ. ಅಸ್ಥಿರವಾದ ವಿಷಯಗಳಲ್ಲಿಯೇ ಸ್ಥಿರವಾಗಿ ನಿಂತಿರುತ್ತದೆ. ಧೀರನಾದವನು ಅಂತಹ ಮನಸ್ಸನ್ನು ಮೊದಲು ಆಶ್ರಯರಹಿತವನ್ನಾಗಿಮಾಡಿ (ವಿಷಯಗಳ ಕಡೆಗೆ ಹೋಗುವುದನ್ನು ತಪ್ಪಿಸಿ) ಧ್ಯಾನಮಾರ್ಗದಲ್ಲಿ ಸಂಯೋಜಿಸಿ ಹೃದಯಗುಹೆಯಲ್ಲಿರಿಸಬೇಕು. (ವಿಷಯಾವಲಂಬಿಯಾದ ಮನಸ್ಸನ್ನು ಸತತಪ್ರಯತ್ನದಿಂದ ಆತ್ಮಾವಲಂಬಿಯನ್ನಾಗಿ ಮಾಡಬೇಕು.)

ಇನ್ದ್ರಿಯಾಣಿ ಮನಶ್ಚೈವ ಯದಾ ಪಿಣ್ಡೀಕರೋತ್ಯಯಮ್ ।
ಏಷ ಧ್ಯಾನಪಥಃ ಪೂರ್ವೋ ಮಯಾ ಸಮನುವರ್ಣಿತಃ ॥೧೦॥

ಯಾವಾಗ ಯೋಗಿಯು ಇಂದ್ರಿಯಗಳನ್ನೂ ಮನಸ್ಸನ್ನೂ ಒಟ್ಟುಗೂಡಿಸುವನೋ–ಆಗ ಧ್ಯಾನಯೋಗವು ಪ್ರಾರಂಭವಾಗುತ್ತದೆ. ಹೀಗೆ ನಾನು ನಿನಗೆ ಮೊದಲನೆಯ ಧ್ಯಾನಮಾರ್ಗವನ್ನು ವರ್ಣಿಸಿರುತ್ತೇನೆ.

ತಸ್ಯ ತತ್ಪೂರ್ವಸಂರುದ್ಧಮಾತ್ಮನಃ ಷಷ್ಠಮಾನ್ತರಮ್ ।
ಸ್ಫುರಿಷ್ಯತಿ ಸಮುದ್ಭ್ರಾನ್ತಾ ವಿದ್ಯುದಮ್ಬುಧರೇ ಯಥಾ ॥೧೧॥

ಹೀಗೆ ಪ್ರಯತ್ನಪೂರ್ವಕವಾಗಿ ಒಟ್ಟುಗೂಡಿಸಲ್ಪಟ್ಟು ಹೃದಯಗುಹೆಯಲ್ಲಿ ಅದೇ ಮೊದಲಾಗಿ ನಿರುದ್ಧವಾದ, ಆತ್ಮನ ಆರನೆಯ ಅಂಗವಾದ ಮನಸ್ಸು ಸ್ವಲ್ಪ ಹೊತ್ತು ಮಾತ್ರವೇ ಅಲ್ಲಿದ್ದು ಅನಂತರ –ಮೋಡದಲ್ಲಿ ಕಾಣಿಸುವ ಚಂಚಲವಾದ ಮಿಂಚಿನಂತೆ–ವಿಷಯಗಳ ಕಡೆಗೇ ಹಾರಿಬಿಡುತ್ತದೆ. (ಪುನಃ ಅದನ್ನು ಸೆಳೆದುತರುತ್ತಲೇ ಇರಬೇಕು. ಆತ್ಮನಲ್ಲಿ ಸಂಯೋಜಿಸುತ್ತಲೇ ಇರಬೇಕು. ಸತತವಾಗಿ ಇದನ್ನು ಅಭ್ಯಾಸ ಮಾಡುತ್ತಲೇ ಇರಬೇಕು.)

ಜಲಬಿನ್ದುರ್ಯಥಾ ಲೋಲಃ ಪರ್ಣಸ್ಥಃ ಸರ್ವತಶ್ಚಲಃ ।
ಏವಮೇವಾಸ್ಯ ಚಿತ್ತಂ ಚ ಭವತಿ ಧ್ಯಾನವರ್ತ್ಮನಿ ॥೧೨॥

ತಾವರೆಯೆಲೆಯ ಮೇಲೆ ಬಿದ್ದಿರುವ ಜಲಬಿಂದುವು ಎಷ್ಟು ಚಂಚಲವಾಗಿರುವುದೋ, ಹೇಗೆ ಎಲೆಯ ಎಲ್ಲ ಕಡೆಗಳಲ್ಲಿಯೂ ಉರುಳಾಡುತ್ತಲೇ ಇರುವುದೋ –ಹಾಗೆಯೇ ಧ್ಯಾನಮಾರ್ಗದಲ್ಲಿ ಪ್ರವೃತ್ತನಾದ ಸಾಧಕನ ಮನಸ್ಸೂ ಪ್ರಾರಂಭದಲ್ಲಿ ಬಹಳ ಚಂಚಲವಾಗಿಯೇ ಇರುತ್ತದೆ.

ಸಮಾಹಿತಂ ಕ್ಷಣಂ ಕಿಞ್ಚಿದ್ಧ್ಯಾನವರ್ತ್ಮನಿ ತಿಷ್ಠತಿ ।
ಪುನರ್ವಾಯುಪಥಂ ಭ್ರಾನ್ತಂ ಮನೋ ಭವತಿ ವಾಯುವತ್ ॥೧೩॥

ಹೃದಯಕುಹರದಲ್ಲಿ ಏಕಾಗ್ರವಾಗಿ ನಿಂತ ಮನಸ್ಸು ಧ್ಯಾನಮಾರ್ಗದಲ್ಲಿ ಸ್ವಲ್ಪಹೊತ್ತು ಮಾತ್ರವೇ ಇರುತ್ತದೆ. ಪ್ರಾಣವಾಯುಗಳ ಮಾರ್ಗವನ್ನು ಪ್ರವೇಶಿಸಿ ಅಲೆದಾಡುತ್ತಾ ವಾಯುವಿನಂತೆಯೇ ಚಂಚಲವಾಗಿಬಿಡುತ್ತದೆ. ಧ್ಯಾನಯೋಗದಿಂದ ಹಿಂದಕ್ಕೆ ಸರಿಯುತ್ತದೆ. (ವ್ಯಾಖ್ಯಾನಕಾರರು ವಾಯು **ಪಥಂ** ಎಂಬುದಕ್ಕೆ **ನಾಡೀಮಾರ್ಗಂ ಪ್ರಾಪ್ನೋತಿ** –ಧ್ಯಾನಮಾರ್ಗದಲ್ಲಿ ಸಮಾಹಿತವಾಗುವ ಮನಸ್ಸು ನಾಡೀಮಾರ್ಗಕ್ಕೆ ಹೋಗುತ್ತದೆ –ಎಂದು ಅರ್ಥಮಾಡಿರುತ್ತಾರೆ. ಆ ನಾಡೀಮಾರ್ಗದಲ್ಲಿ **ತಸ್ಮಿಞ್ಶುಕ್ಲಮುತ ನೀಲಮಾಹುಃ ಪಿಙ್ಗಲಂ ಹರಿತಂ ಲೋಹಿತಂ ಚ ।** ಅಲ್ಲಿರುವ ಬಿಳಿ-ಕಪ್ಪು-ಹಳದಿ-ಹಸಿರು-ಕೆಂಪುಬಣ್ಣಗಳ ನಾಡಿಗಳನ್ನು ನೋಡಿ ಭ್ರಾಂತಿಯನ್ನು ಹೊಂದಿ ವಾಯುವಿನಂತೆ ಚಂಚಲವಾಗಿಬಿಡುತ್ತದೆ –ಎಂದು ವ್ಯಾಖ್ಯಾನಕಾರರು ಹೇಳಿರುತ್ತಾರೆ.)

ಅನಿರ್ವೇದೋ ಗತಕ್ಲೇಶೋ ಗತತನ್ದ್ರಿರಮತ್ಸರೀ ।
ಸಮಾದಧ್ಯಾತ್ಪುನಶ್ಚೇತೋ ಧ್ಯಾನೇನ ಧ್ಯಾನಯೋಗವಿತ್ ॥೧೪॥

ಧ್ಯಾನಯೋಗವನ್ನು ತಿಳಿದಿರುವ ಸಾಧಕನು ಮನಸ್ಸಿನಲ್ಲಿ ಇಂತಹ ವಿಕ್ಷೇಪಗಳುಂಟಾದಾಗ ಖೇದಗೊಳ್ಳಬಾರದು ; ಕ್ಲೇಶಪಡಬಾರದು. ಆಲಸ್ಯವನ್ನು ದೂರಮಾಡಿ, ಮಾತ್ಸರ್ಯರಹಿತನಾಗಿ ಧ್ಯಾನದ ಮೂಲಕವಾಗಿಯೇ ಮನಸ್ಸನ್ನು ಪುನಃ ಏಕಾಗ್ರಗೊಳಿಸಲು ಪ್ರಯತ್ನಿಸಬೇಕು.

ವಿಚಾರಶ್ಚ ವಿವೇಕಶ್ಚ ವಿತರ್ಕಶ್ಚೋಪಜಾಯತೇ।
ಮುನೇಃ ಸಮಾದಧಾನಸ್ಯ ಪ್ರಥಮಂ ಧ್ಯಾನಮಾದಿತಃ ॥೧೫॥

ಯೋಗಿಯಾದವನು ಧ್ಯಾನವನ್ನು ಪ್ರಾರಂಭಿಸಿದ ಸಮಯದಲ್ಲಿ ಮೊದಲು ಅವನ ಮನಸ್ಸಿನಲ್ಲಿ ಧ್ಯಾನವಿಷಯವಾದ ವಿಚಾರ, ವಿವೇಕ ಮತ್ತು ವಿತರ್ಕಗಳು ಹುಟ್ಟಿಕೊಳ್ಳುತ್ತವೆ. (ವ್ಯಾಖ್ಯಾನಕಾರರು ಯೋಗದರ್ಶನದ **ವಿತರ್ಕವಿಚಾರಾನಂದಾಸ್ಮಿತಾರೂಪಾನುಗಮಾತ್ ಸಂಪ್ರಜ್ಞಾತಃ** (೧-೭) ಎಂಬ ಸೂತ್ರವನ್ನೂ, **ವಿವೇಕಖ್ಯಾತಿರವಿಪ್ಲವಾಹಾನೋಪಾಯಃ** (೭-೨೬) ಎಂಬ ಸೂತ್ರವನ್ನೂ ಕ್ರೋಡೀಕರಿಸಿ ವ್ಯಾಖ್ಯಾನಿಸಿದ್ದಾರೆ. ಚಿತ್ತವು ಅವಲಂಬಿಸಿರುವ ವಸ್ತುವಿನ ಸ್ಥೂಲವಾದ (ವಿಷಯವು ಸ್ಥೂಲವಾದುದರಿಂದ ಅನುಭವವೂ ಸ್ಥೂಲ. ಉದಾಹರಣೆಗೆ ಚತುರ್ಭುಜಾದಿಗಳಿಂದ ಕೂಡಿರುವ ದೇವತೆಯ ಸ್ಥೂಲಮೂರ್ತಿ) ಅನುಭವವು ವಿತರ್ಕವೆನಿಸುತ್ತದೆ. ಅದರ ಸೂಕ್ಷ್ಮವಾದ (ತನ್ಮಾತ್ರಾದಿಗಳ) ಆಹ್ಲಾದವು ಆನಂದ. ಚಿತ್ತವು ಇಂದ್ರಿಯವನ್ನು ವಿಷಯೀಕರಿಸಿದಾಗ ಆನಂದವಾಗುತ್ತದೆ. ಸತ್ತ್ವಪ್ರಧಾನವುಳ್ಳ ಅಸ್ಮಿತೆಯಿಂದ ಇಂದ್ರಿಯಗಳು ಉತ್ಪನ್ನವಾಗುತ್ತವೆ. ಸತ್ತ್ವವು ಸುಖವು. ಈ ಕಾರಣದಿಂದ ಇಂದ್ರಿಯಗಳೂ ಸುಖವಾಗಿರುತ್ತವೆ. ಆದುದರಿಂದ ಇಂದ್ರಿಯಾನುಭವವೂ ಸುಖವಾಗಿರುತ್ತವೆ. ಐಕ್ಯಜ್ಞಾನವು ಅಸ್ಮಿತೆ. 'ಅಸ್ಮಿತೆಯು' ಗ್ರಹಿಸುವವನೇ ವಿಷಯವಾಗಿರುವ ಸಮಾಧಿಯನ್ನು ಸೂಚಿಸುತ್ತದೆ. ಅಸ್ಮಿತೆಯಿಂದ ಇಂದ್ರಿಯಗಳು ಉಂಟಾಗುವುದರಿಂದ ಅಸ್ಮಿತೆಯು ಇಂದ್ರಿಯಗಳ ಸೂಕ್ಷ್ಮರೂಪ. ಆತ್ಮ ಮತ್ತು ಅಸ್ಮಿತೆ–ಇವೆರಡೂ ಸೇರಿ ಸ್ವವಿಷಯವಾದ ಬುದ್ಧಿ

ಯಾಗುತ್ತದೆ. ಗ್ರಹಿಸುವವನು ಕೂಡ ಈ ಭಾವನೆಯಲ್ಲಿಯೇ ಅಂತರ್ಗತನಾಗಿರುವುದರಿಂದ ಗ್ರಹಿಸುವವನ ವಿಷಯವಾದ ಸಮಾಧಿಯಾಗುತ್ತದೆ. ಮೊದಲನೆಯದಾದ ಸವಿತರ್ಕಸಮಾಧಿಯು ನಾಲ್ಕರಿಂದಲೂ ಕೂಡಿರುತ್ತದೆ. ಎರಡನೆಯದಾದ ಸವಿಚಾರದಲ್ಲಿ ತರ್ಕವಿರುವುದಿಲ್ಲ. ಮೂರನೆಯದಾದ ಸಾನಂದದಲ್ಲಿ ವಿಚಾರವಿರುವುದಿಲ್ಲ. ನಾಲ್ಕನೆಯದು ಆನಂದವಿಲ್ಲದೆ ಅಸ್ಮಿತಾ ಮಾತ್ರವಾಗಿರುವುದು. ಈ ಎಲ್ಲ ಸಮಾಧಿಗಳೂ ವಸ್ತುವನ್ನು ಅವಲಂಬಿಸಿರುತ್ತವೆ.

ಗುಣಗಳಿಗೂ ಮತ್ತು ಪುರುಷನಿಗೂ ಇರುವ ಭೇದವನ್ನು ನೋಡುವುದೇ ವಿವೇಕಖ್ಯಾತಿ. ಎಲ್ಲಿಯವರೆಗೆ ಮಿಥ್ಯಾಜ್ಞಾನವು ಹೋಗಿರುವುದಿಲ್ಲವೋ ಅಲ್ಲಿಯವರೆಗೆ ಸಮ್ಯಗ್ದರ್ಶನವು ವಿಪ್ಲವವಾಗುತ್ತದೆ. ಆದರೆ ಯಾವಾಗ ಮಿಥ್ಯಾಜ್ಞಾನವು ಸುಟ್ಟಬೀಜದಂತಾಗಿ ಉತ್ಪತ್ತಿಯನ್ನು ಹೊಂದುವುದಿಲ್ಲವೋ –ಆಗ ಪುರುಷನು ಕ್ಲೇಶಗಳ ರಜಸ್ಸನ್ನು ಕಳೆದುಕೊಂಡು ಶ್ರೇಷ್ಠವಾದ ವೈಶಾರದ್ಯವನ್ನು ಹೊಂದಿ ವಶೀಕಾರವೆಂಬ ವೈರಾಗ್ಯದಲ್ಲಿ ಸ್ಥಿತಿಯನ್ನು ಹೊಂದುತ್ತಾನೆ. ಆಗ ವಿವೇಕಜ್ಞಾನದ ಪ್ರವಾಹವು ನಿರ್ಮಲವಾಗುತ್ತದೆ. ವಿಪ್ಲವವನ್ನು ಹೊಂದದ ಈ ವಿವೇಕಖ್ಯಾತಿಯೇ ಮಿಥ್ಯಾಜ್ಞಾನದ ನಿವಾರಣೆಗೆ ಉಪಾಯವಾಗುತ್ತದೆ. ಇದರಿಂದ ಮಿಥ್ಯಾಜ್ಞಾನವು ದಗ್ಧಬೀಜಭಾವವನ್ನು ಹೊಂದುತ್ತದೆ. ಆದುದರಿಂದ ಮಿಥ್ಯಾಜ್ಞಾನದ ಪುನರುತ್ಪತ್ತಿಯಿಲ್ಲ. ಈ ನಿವಾರಣೆಯ ಉಪಾಯವೇ ಮೋಕ್ಷದ ಮಾರ್ಗ. ಇದು ಈ ಸೂತ್ರಗಳ ಭಾಷ್ಯಾರ್ಥವಾಗಿದೆ.)

ಮನಸಾ ಕ್ಲಿಶ್ಯಮಾನಸ್ತು ಸಮಾಧಾನಂ ಚ ಕಾರಯೇತ್।
ನ ನಿರ್ವೇದಂ ಮುನಿರ್ಗಚ್ಛೇತ್ಕುರ್ಯಾದೇವಾತ್ಮನೋ ಹಿತಮ್।।೧೬।।

ಧ್ಯಾನಮಾಡುವ ಸಮಯದಲ್ಲಿ ಮನಸ್ಸಿನಿಂದ ಕ್ಲೇಶಗೊಳಿಸಲ್ಪಟ್ಟರೂ ಸಮಾಧಾನಹೊಂದಬೇಕು. ಧ್ಯಾನಯೋಗಾಸಕ್ತನಾದ ಮುನಿಯು ಮನಸ್ಸಿನಿಂದ ಯಾವುದೇ ಕಾರಣದಿಂದಲೂ ಖೇದಪಡಬಾರದು. ಧ್ಯಾನಯೋಗದ ಮೂಲಕವಾಗಿ ತನ್ನ ಕಲ್ಯಾಣಕ್ಕೆ (ಆತ್ಮಸುಖಕ್ಕೆ) ಯಾವಾಗಲೂ ಪ್ರಯತ್ನಿಸುತ್ತಿರಬೇಕು. (ಕ್ಲೇಶಗಳು ಐದು ವಿಧಗಳೆಂದು ಯೋಗದರ್ಶನದಲ್ಲಿ

ಹೇಳಿದ್ದಾರೆ. ಅವಿದ್ಯಾಸ್ಮಿತಾರಾಗದ್ವೇಷಾಭಿನಿವೇಶಾಃ ಪಂಚಕ್ಲೇಶಾ। ಅವಿದ್ಯಾ-ಅಸ್ಮಿತಾ-ರಾಗ-ದ್ವೇಷಮತ್ತು ಅಭಿನಿವೇಶ ಈ ಐದು ಕ್ಲೇಶಗಳು.)

ಪಾಂಸುಭಸ್ಮಕರೀಷಾಣಾಂ ಯಥಾ ವೈ ರಾಶಯಶ್ಚಿತಾಃ।
ಸಹಸಾ ವಾರಿಣಾ ಸಿಕ್ತಾ ನ ಯಾನ್ತಿ ಪರಿಭಾವನಮ್ ॥೧೭॥

ಕಿಞ್ಚಿತ್ಸ್ನಿಗ್ಧಂ ಯಥಾ ಚ ಸ್ಯಾಚ್ಛುಷ್ಕಚೂರ್ಣಮಭಾವಿತಮ್।
ಕ್ರಮಶಸ್ತು ಶನೈರ್ಗಚ್ಛೇತ್ಸರ್ವಂ ತತ್ಪರಿಭಾವನಮ್ ॥೧೮॥

ಏವಮೇವೇನ್ದ್ರಿಯಗ್ರಾಮಂ ಶನೈಃ ಸಮ್ಪರಿಭಾವಯೇತ್।
ಸಂಹರೇತ್ಕ್ರಮಶಶ್ಚೈವ ಸ ಸಮ್ಯಕ್ಪ್ರಶಮಿಷ್ಯತಿ ॥೧೯॥

ರಾಶಿ-ರಾಶಿಯಾಗಿ ಬಿದ್ದಿರುವ ಹುಡಿಮಣ್ಣು, ಬೂದಿ ಮತ್ತು ಒಣಗಿದ ಸಗಣಿಯ ಕುರುಳುಗಳು ನೀರಿನಿಂದ ನೆನೆಸಲ್ಪಟ್ಟರೆ, ಅವುಗಳು ಒಡನೆಯೇ ಸಂಪೂರ್ಣವಾಗಿ ನೆನೆಯುವುದಿಲ್ಲ. ಸ್ವಲ್ಪಭಾಗವು ಮಾತ್ರವೇ ನೆನೆದಿರುತ್ತದೆ. ಉಳಿದುದೆಲ್ಲವೂ ಶುಷ್ಕಚೂರ್ಣರೂಪದಲ್ಲಿಯೇ ಇರುತ್ತದೆ. ಅನುಕ್ರಮವಾಗಿ ನೀರನ್ನು ಸುರಿಯುತ್ತಾ ಅದನ್ನು ಕಲೆಸುತ್ತಿದ್ದರೆ ಅದು ಸಂಪೂರ್ಣವಾಗಿ ನೆನೆದು ಮುದ್ದೆಯಾಗುತ್ತದೆ. ಅದೇ ರೀತಿಯಲ್ಲಿ ಯೋಗಿಯಾದವನು ಇಂದ್ರಿಯಸಮೂಹಗಳನ್ನು ಧ್ಯಾನಯೋಗವೆಂಬ ನೀರಿನಿಂದ ಸ್ವಲ್ಪ-ಸ್ವಲ್ಪ ವಾಗಿ ನೆನೆಸಬೇಕು. ಹಾಗೆ ನೆನೆಸಿದನಂತರ ಇಂದ್ರಿಯಗ್ರಾಮಗಳನ್ನು ಮನಸ್ಸಿನಲ್ಲಿಯೇ ಕ್ರಮವಾಗಿ ಉಪಸಂಹರಿಸಿಕೊಳ್ಳಬೇಕು. ಹಾಗೆ ಮಾಡಿದರೆ ಚಿತ್ತವು ಒಳ್ಳೆಯ ಶಾಂತಿಯನ್ನು ಪಡೆದುಕೊಳ್ಳುತ್ತದೆ. (ಧೂಳಿನ ರಾಶಿಯನ್ನು ಒಡನೆಯೇ ನೀರಿನಿಂದ ನೆನೆಸಲಾಗದಂತೆ.–ಇಂದ್ರಿಯಗಳಿಂದ ಮನಸ್ಸನ್ನು ಒಡನೆಯೇ ಹಿಂತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಸತತಪ್ರಯತ್ನದಿಂದ ಇಂದ್ರಿಯಗಳನ್ನು ಧ್ಯಾನಕ್ಕೆ ಅಭಿಮುಖವನ್ನಾಗಿ ಮಾಡಿಕೊಳ್ಳಬೇಕು. ಮನಸ್ಸಿನೊಡನೆ ಇಂದ್ರಿಯಗಳೂ ಸೇರಿಕೊಂಡನಂತರ ಮನಸ್ಸು ಸಮಾಧಾನಗೊಂಡು ಶಾಂತವಾಗುತ್ತದೆ.)

ಸ್ವಯಮೇವ ಮನಶ್ಚೈವಂ ಪಞ್ಚವರ್ಗಂ ಚ ಭಾರತ।
ಪೂರ್ವಂ ಧ್ಯಾನಪಥೇ ಸ್ಥಾಪ್ಯ ನಿತ್ಯಯೋಗೇನ ಶಾಮ್ಯತಿ ॥೨೦॥

ಯುಧಿಷ್ಠಿರ! ಧ್ಯಾನಯೋಗದಲ್ಲಿ ನಿರತನಾದ ಮುನಿಯು ಮೊದಲು ಮನಸ್ಸನ್ನೂ ಮತ್ತು ಪಂಚೇಂದ್ರಿಯಗಳನ್ನೂ ಧ್ಯಾನಮಾರ್ಗದಲ್ಲಿ ಸ್ಥಾಪಿಸಿ, ನಿತ್ಯವೂ ಧ್ಯಾನಯೋಗವನ್ನು ಸತತವಾಗಿ ಅಭ್ಯಾಸಮಾಡುವುದರಿಂದ ಪರಮ ಶಾಂತಿಯನ್ನು ಪಡೆಯುತ್ತಾನೆ.

ನ ತತ್ಪುರುಷಕಾರೇಣ ನ ಚ ದೈವೇನ ಕೇನಚಿತ್।
ಸುಖಮೇಷ್ಯತಿ ತತ್ತಸ್ಯ ಯದೇವಂ ಸಂಯತಾತ್ಮನಃ ॥೨೧॥

ಹೀಗೆ ಮನೋನಿಗ್ರಹಪೂರ್ವಕವಾಗಿ ಧ್ಯಾನಯೋಗದಲ್ಲಿ ನಿರತನಾದ ಯೋಗಿಗೆ ಯಾವ ದಿವ್ಯಸುಖವು ಪ್ರಾಪ್ತವಾಗುವುದೋ ಅಂತಹ ಪರಮ ಸುಖವು ಕೇವಲ ಪುರುಷಪ್ರಯತ್ನದಿಂದಾಗಲೀ ಅಥವಾ ಕೇವಲ ದೈವ ಯೋಗದಿಂದಾಗಲೀ ಲಭ್ಯವಾಗುವುದಿಲ್ಲ. (ಧ್ಯಾನಯೋಗದ ಮೂಲಕವಾಗಿ ಲಭ್ಯವಾಗುವ ಆತ್ಮದರ್ಶನದ ಸುಖವು ಎಲ್ಲ ಸುಖಗಳಿಗಿಂತಲೂ ಮಿಗಿಲಾದುದು. **ಸಮಾಧಿನಿರ್ಧೂತಮಲಸ್ಯ ಚೇತಸೋ ನಿವೇಶಿತಸ್ಯಾತ್ಮನಿ ಯತ್ಸುಖಂ ಭವೇತ್। ನ ಶಕ್ಯತೇ ವರ್ಣಯಿತುಂ ಗಿರಾ ತದಾ ಸ್ವಯಂ ತದನ್ತಃಕರಣೇನ ಗೃಹ್ಯತೇ ॥** ಸಮಾಧಿಯೋಗದಿಂದ ಹೋಗಲಾಡಿಸಲ್ಪಟ್ಟ ಕೊಳೆಯುಳ್ಳ, ಆತ್ಮನಲ್ಲಿ ಅಭಿನಿವೇಶವನ್ನು ಹೊಂದಿದ ಚಿತ್ತಕ್ಕೆ ಯಾವ ಪರಮಸುಖವುಂಟಾಗುವುದೋ –ಆ ಪರಮಸುಖವನ್ನು ಮಾತಿನಿಂದ ವರ್ಣಿಸಲು ಸಾಧ್ಯವಾಗುವುದೇ ಇಲ್ಲ. ಕೇವಲ ಅಂತಃಕರಣದಿಂದ ಆ ಪರಮ ಸುಖವು ಗ್ರಹಿಸಲ್ಪಡುತ್ತದೆ. ಅಂತಃಕರಣಕ್ಕೆ ಮಾತ್ರವೇ ಆ ಮಹಾಸುಖದ ಅನುಭವವಾಗುತ್ತದೆ. ಅಥವಾ ಆ ಸಮಾಧಿಸುಖವನ್ನು ಕೇವಲ ಪುರುಷ ಪ್ರಯತ್ನದಿಂದಾಗಲೀ ಅಥವಾ ದೈವವನ್ನೇ ಅಥವಾ ಅದೃಷ್ಟವನ್ನೇ ನೆಚ್ಚಿ ಕೊಂಡು ಕುಳಿತಿರುವುದರಿಂದಾಗಲೀ ಪಡೆಯಲಾಗುವುದಿಲ್ಲ. ಪುರುಷ ಪ್ರಯತ್ನವೂ ಇರಬೇಕು ; ದೈವಾನುಕೂಲವೂ ಒದಗಿಬರಬೇಕು.)

ಸುಖೇನ ತೇನ ಸಂಯುಕ್ತೋ ರಂಸ್ಯತೇ ಧ್ಯಾನಕರ್ಮಣಿ।
ಗಚ್ಛನ್ತಿ ಯೋಗಿನೋ ಹ್ಯೇವಂ ನಿರ್ವಾಣಂ ತನ್ನಿರಾಮಯಮ್॥

ಯೋಗಿಯು ಧ್ಯಾನಜನಿತವಾದ ಅಂತಹ ಪರಮಸುಖದಿಂದ ಯುಕ್ತ

ನಾಗಿ ಧ್ಯಾನಕಾರ್ಯದಲ್ಲಿಯೇ ಯಾವಾಗಲೂ ನಿರತನಾಗಿರುತ್ತಾನೆ. ಹೀಗೆ ಧ್ಯಾನಯೋಗಾಸಕ್ತರಾದ ಯೋಗಿಗಳು ಆ ಶೋಕರಹಿತವಾದ ಮತ್ತು ಶಾಶ್ವತವಾದ ನಿರ್ವಾಣವನ್ನು (ಮೋಕ್ಷವನ್ನು) ಹೊಂದುತ್ತಾರೆ."

೧೯೫ನೆಯ ಅಧ್ಯಾಯವು ಮುಗಿಯಿತು.

೧೯೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜಪಯಜ್ಞದ ವಿಷಯವಾಗಿ ಯುಧಿಷ್ಠಿರನ ಪ್ರಶ್ನೆ ಭೀಷ್ಮನಿಂದ ಧ್ಯಾನ ಮತ್ತು ಜಪಯಜ್ಞಗಳ ಫಲಗಳ ನಿರೂಪಣೆ

ಜನಮೇಜಯ! ಯುಧಿಷ್ಠಿರನು ಕೇಳುತ್ತಾನೆ :

"ಪಿತಾಮಹನೇ! ನೀನು ನಾಲ್ಕು ಆಶ್ರಮಧರ್ಮಗಳನ್ನೂ ಹೇಳಿರುವೆ. ರಾಜಧರ್ಮಗಳನ್ನೂ ಹೇಳಿರುವೆ. ನಾನಾವಿಷಯಗಳಿಗೆ ಸಂಬಂಧಿಸಿದಂತೆ ವಿಧ-ವಿಧವಾದ ಇತಿಹಾಸಗಳನ್ನೂ ಹೇಳಿರುವೆ. ಮಹಾಮತಿಯೇ! ನಾನು ನಿನ್ನಿಂದ ಧರ್ಮಯುಕ್ತವಾದ ಅನೇಕಕಥೆಗಳನ್ನೂ ಕೇಳಿದೆನು. ಆದರೂ ನನ್ನ ಮನಸ್ಸಿನಲ್ಲಿ ಒಂದು ಸಂದೇಹವು ಉಳಿದೇ ಇದೆ. ಆ ಸಂದೇಹವನ್ನು ನಿವಾರಿಸು.

ನಾನೀಗ ಜಪಮಾಡುವವರಿಗೆ ಪ್ರಾಪ್ತವಾಗುವ ಫಲದ ವಿಷಯವಾಗಿ ಕೇಳಲು ಇಚ್ಛಿಸಿದ್ದೇನೆ. ಜಪಮಾಡುವವರಿಗೆ ಯಾವ ಫಲವನ್ನು ಹೇಳಿದೆ? ಜಪಾನುಷ್ಠಾನಮಾಡುವವರು ಯಾವ ಲೋಕದಲ್ಲಿ ಸ್ಥಾನವನ್ನು ಕಲ್ಪಿಸಿಕೊಳ್ಳುತ್ತಾರೆ? ಅನಘನೇ! ಜಪದ ವಿಧಿ-ವಿಧಾನಗಳನ್ನು ನನಗೆ ಸಮಗ್ರವಾಗಿ ತಿಳಿಸು. 'ಜಾಪಕ' ಎಂಬ ಪದದ ತಾತ್ಪರ್ಯವೇನು? ಇದೇನಾದರೂ ಸಾಂಖ್ಯಯೋಗ, ಧ್ಯಾನಯೋಗ ಅಥವಾ ಕ್ರಿಯಾಯೋಗಕ್ಕೆ ಸಂಬಂಧಿಸಿದ ಅನುಷ್ಠಾನವಾಗಿರುವುದೇ? ಜಪವು ಯಾವುದಾದರೂ ಯಜ್ಞದ ವಿಧಿಯೇ ಆಗಿರುವುದೇ? 'ಜಪ್ಯ' ಎಂದು ಕರೆಯಲ್ಪಡುವ ವಸ್ತುವು ಯಾವುದು? ಪಿತಾಮಹ! ನೀನು ಸರ್ವಜ್ಞನೆಂದೇ ನನ್ನ

ಅಭಿಪ್ರಾಯವಾಗಿದೆ. ಆದುದರಿಂದ ಈ ಎಲ್ಲ ವಿಷಯಗಳನ್ನೂ ನನಗೆ ತಿಳಿಯಪಡಿಸು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ವಿದ್ವಾಂಸರು ಹಿಂದೆ ಯಮ, ಕಾಲ ಮತ್ತು ಬ್ರಹ್ಮ–ಇವರ ಮಧ್ಯದಲ್ಲಿ ನಡೆದ ಇತಿಹಾಸರೂಪವಾದ ವೃತ್ತಾಂತ ವನ್ನು ಹೇಳುತ್ತಾರೆ. ಅದನ್ನೇ ಹೇಳುತ್ತೇನೆ ; ಕೇಳು :

ಸಾಂಖ್ಯಯೋಗೌ ತು ಯಾವುಕ್ತೌ ಮುನಿಭಿರ್ಮೋಕ್ಷದರ್ಶಿಭಿಃ।
ಸಂನ್ಯಾಸ ಏವ ವೇದಾನ್ತೇ ವರ್ತತೇ ಜಪನಂ ಪ್ರತಿ ॥೭॥
ವೇದವಾದಾಚ್ಚ ನಿರ್ವೃತ್ತಾಃ ಶಾನ್ತಾ ಬ್ರಹ್ಮಣ್ಯವಸ್ಥಿತಾಃ।
ಸಾಂಖ್ಯಯೋಗೌ ತು ಯಾವುಕ್ತೌ ಮುನಿಭಿಃ ಸಮದರ್ಶಿಭಿಃ।
ಮಾರ್ಗೌ ತಾವಪ್ಯಭಾವೇತೌ ಸಂಶ್ರಿತೌ ನ ಚ ಸಂಶ್ರಿತೌ ॥೮॥

ಮೋಕ್ಷದರ್ಶಿಗಳಾದ ಮುನಿಗಳು ಸಾಂಖ್ಯ ಮತ್ತು ಯೋಗಗಳ ವರ್ಣನೆಯನ್ನು ಮಾಡಿರುತ್ತಾರೆ. ವೇದಾಂತದಲ್ಲಿ (ಸಾಂಖ್ಯದಲ್ಲಿ) ಜಪದ ವಿಷಯವಾಗಿ ಸಂನ್ಯಾಸವನ್ನೇ (ತ್ಯಾಗವನ್ನೇ) ಹೇಳಿದ್ದಾರೆ.

ಶಾಂತಿಪ್ರಧಾನವಾದ ಉಪನಿಷದ್ವಾಕ್ಯಗಳು ತ್ರೈಗುಣ್ಯವನ್ನು ಹೇಳುವ ವೇದವಾದಗಳಿಂದ ಹಿಂದಿರುಗಿ ಬ್ರಹ್ಮನಲ್ಲಿಯೇ ಪರ್ಯಾಪ್ತಿಯನ್ನು ಹೊಂದಿವೆ. (ಆದುದರಿಂದ ಅಲ್ಲಿ ಜಪದ ಸಂಭವವಿಲ್ಲ.) ಸರ್ವಸಮದರ್ಶಿ ಗಳಾದ ಮುನಿಗಳು ಯಾವ ಸಾಂಖ್ಯಯೋಗ ಮತ್ತು ಧ್ಯಾನ (ಕರ್ಮ) ಯೋಗಗಳೆಂಬ ಎರಡು ಮಾರ್ಗಗಳನ್ನು ಹೇಳಿರುವರೋ –ಆ ಎರಡು ಮಾರ್ಗಗಳೂ ಜಪವನ್ನು ಆಶ್ರಯಿಸಿಯೂ ಇವೆ.; ಆಶ್ರಯಿಸದೆಯೂ ಇವೆ. (ಆ ಎರಡು ಮಾರ್ಗಗಳೂ ಚಿತ್ತಶುದ್ಧಿಯಾಗುವವರೆಗೂ ಜಪವನ್ನು ಆಶ್ರಯಿಸಿರುತ್ತವೆ. ಚಿತ್ತಶುದ್ಧಿಯಾದನಂತರ ಜಪವನ್ನು ಆಶ್ರಯಿಸಿರುವುದಿಲ್ಲ.)

ಯಥಾ ಸಂಶ್ರೂಯತೇ ರಾಜನ್ಕಾರಣಂ ಚಾತ್ರ ವಕ್ಷ್ಯತೇ।
ಮನಃಸಮಾಧಿರತ್ರಾಪಿ ತಥೇನ್ದ್ರಿಯಜಯಃ ಸ್ಮೃತಃ ॥೯॥

ಇದಕ್ಕೆ ಕಾರಣವು ಯಾವ ರೀತಿಯಲ್ಲಿ ಹೇಳಲ್ಪಟ್ಟಿರುವುದೋ ಆ

ಕಾರಣವನ್ನೇ ನಾನಿಲ್ಲಿ ಹೇಳುತ್ತೇನೆ. ಸಾಂಖ್ಯಯೋಗ-ಧ್ಯಾನ (ಕರ್ಮ) ಯೋಗ ಈ ಎರಡು ಮಾರ್ಗಗಳಲ್ಲಿಯೂ ಮನೋನಿಗ್ರಹ ಮತ್ತು ಇಂದ್ರಿಯ ಸಂಯಮಗಳು ಅವಶ್ಯವಾಗಿ ಬೇಕಾಗುತ್ತವೆ.

ಸತ್ಯಮಗ್ನಿಪರೀಚಾರೋ ವಿವಿಕ್ತಾನಾಂ ಚ ಸೇವನಮ್।
ಧ್ಯಾನಂ ತಪೋ ದಮಃ ಕ್ಷಾನ್ತಿರನಸೂಯಾ ಮಿತಾಶನಮ್।
ವಿಷಯಪ್ರತಿಸಂಹಾರೋ ಮಿತಜಲ್ಪಸ್ತಥಾ ಶಮಃ ॥೧೧॥

ಏಷ ಪ್ರವರ್ತಕೋ ಯಜ್ಞೋ ನಿವರ್ತಕಮಥೋ ಶೃಣು।
ಯಥಾ ನಿವರ್ತತೇ ಕರ್ಮ ಜಪತೋ ಬ್ರಹ್ಮಚಾರಿಣಃ ॥೧೨॥

ಸತ್ಯನಿಷ್ಠೆ, ಅಗ್ನಿಪರಿಚರ್ಯೆ, ಏಕಾಂತವಾಸ, ಧ್ಯಾನ, ತಪಸ್ಸು, ದಮ, ಕ್ಷಮೆ, ಅಸೂಯೆಯಿಲ್ಲದಿರುವುದು, ಮಿತಾಹಾರ, ವಿಷಯಸುಖಗಳನ್ನು ಉಪಸಂಹರಿಸುವುದು, ಮಿತಭಾಷಣ ಮತ್ತು ಶಮ –ಇವು ಪ್ರವರ್ತಕ (ಯೋಗಕಾರ್ಯದಲ್ಲಿ ತೊಡಗುವಂತೆ ಮಾಡುವ) ಯಜ್ಞಗಳಾಗಿವೆ. ಮುಂದೆ ನೀನು ನಿವರ್ತಕ (ಯೋಗವಿರುದ್ಧಕಾರ್ಯದಲ್ಲಿ ತೊಡಗಿಸದೇ ಇರುವ) ಯಜ್ಞದ ವಿಷಯವನ್ನು ಕೇಳು. ಜಪಯಜ್ಞವನ್ನು ಮಾಡುವ ಬ್ರಹ್ಮಚಾರಿಗೆ ಉಳಿದೆಲ್ಲ ಕರ್ಮಗಳೂ ನಿವೃತ್ತಿಯನ್ನು ಹೊಂದುತ್ತವೆ.

ಏತತ್ಸರ್ವಮಶೇಷೇಣ ಯಥೋಕ್ತಂ ಪರಿವರ್ತಯೇತ್।
ನಿವೃತ್ತಂ ಮಾರ್ಗಮಾಸಾದ್ಯ ವ್ಯಕ್ತಾವ್ಯಕ್ತಮನಾಶ್ರಯಮ್ ॥೧೩॥

ವ್ಯಕ್ತ, ಅವ್ಯಕ್ತ ಮತ್ತು ಅನಾಶ್ರಯಗಳೆಂಬ ನಿವೃತ್ತಿಮಾರ್ಗಗಳನ್ನು ಆಶ್ರಯಿಸಿ ಹಿಂದೆ ಹೇಳಿದಂತೆ ಎಲ್ಲವನ್ನೂ ಸಂಪೂರ್ಣವಾಗಿ ನಿವೃತ್ತಿ ಮಾರ್ಗಕ್ಕೆ ಪರಿವರ್ತನಗೊಳಿಸಬೇಕು.

ಕುಶೋಚ್ಚಯನಿಷಣ್ಣಃ ಸನ್ಕುಶಹಸ್ತಃ ಕುಶೈಃ ಶಿಖೀ।
ಕುಶೈಃ ಪರಿವೃತಸ್ತಸ್ಮಿನ್ಮಧ್ಯೇ ಛನ್ನಃ ಕುಶೈಸ್ತಥಾ ॥೧೪॥

ನಿವೃತ್ತಿಮಾರ್ಗವನ್ನು ಅಥವಾ ಜಪಯೋಗವನ್ನು ಅನುಷ್ಠಿಸುವ ವಿಧಿಯು ಹೀಗಿರುತ್ತದೆ. ಜಪಕರ್ತೃವು ಕುಶಾಸನದಲ್ಲಿ ಕುಳಿತುಕೊಳ್ಳ

ಬೇಕು. ಕೈಗಳಲ್ಲಿ ದರ್ಭೆಗಳನ್ನಿಟ್ಟುಕೊಳ್ಳಬೇಕು. ಶಿಖೆಯನ್ನು ದರ್ಭೆಗಳಿಂದ ಬಂಧಿಸಬೇಕು. ದರ್ಭೆಗಳಿಂದ ಪರಿವೃತನಾಗಿರಬೇಕು. (ಸುತ್ತಲೂ ದರ್ಭೆಗಳಿಂದ ಪರಿಸ್ತರಣವನ್ನು ಹಾಕಿಕೊಳ್ಳಬೇಕು.) ಮಧ್ಯಭಾಗದಲ್ಲಿ ದರ್ಭೆಗಳಿಂದ ಆಚ್ಛಾದಿತನಾಗಿರಬೇಕು.

ವಿಷಯೇಭ್ಯೋ ನಮಸ್ಕುರ್ಯಾದ್ವಿಷಯಾನ್ನ ಚ ಭಾವಯೇತ್।
ಸಾಮ್ಯಮುತ್ಪಾದ್ಯ ಮನಸಾ ಮನಸ್ಯೇವ ಮನೋ ದಧತ್ ॥೧೫॥

ವಿಷಯಗಳಿಗೆ ದೂರದಿಂದಲೇ ನಮಸ್ಕಾರವನ್ನು ಮಾಡಬೇಕು. ಅವುಗಳನ್ನು ಯಾವಾಗಲೂ ಮನಸ್ಸಿನಲ್ಲಿ ಚಿಂತಿಸಬಾರದು. ಮನಸ್ಸಿನಲ್ಲಿ ತ್ರಿಗುಣಗಳ ಸಮಭಾವವನ್ನು ಹೊಂದಿ ಮನಸ್ಸನ್ನು ಮನಸ್ಸಿನಲ್ಲಿಯೇ ಲೀನಗೊಳಿಸಬೇಕು.

ತದ್ಧಿಯಾ ಧ್ಯಾಯತಿ ಬ್ರಹ್ಮ ಜಪನ್ವೈ ಸಂಹಿತಾಂ ಹಿತಾಮ್।
ಸಂನ್ಯಸ್ಯತ್ಯಥವಾ ತಾಂ ವೈ ಸಮಾಧೌ ಪರ್ಯವಸ್ಥಿತಃ ॥೧೬॥

ಸರ್ವಹಿತಕಾರಿಣಿಯಾದ ಉಪನಿಷತ್ಸಂಹಿತೆಯನ್ನು ಜಪಿಸುತ್ತಾ ಬುದ್ಧಿಯ ಮೂಲಕವಾಗಿ ಪರಬ್ರಹ್ಮಪರಮಾತ್ಮನನ್ನು ಧ್ಯಾನಮಾಡಬೇಕು. ಸಮಾಧಿಸ್ಥನಾದನಂತರ ಆ ಜಪವನ್ನು ಪರಿತ್ಯಾಗಮಾಡಬಹುದು. (ಸಮಾಧಿಸ್ಥನಾಗಿರುವ ಕಾಲದಲ್ಲಿ ಎಲ್ಲವೂ ತಾನಾಗಿಯೇ ಕಳಚಿಹೋಗುತ್ತವೆ. ಯಾವುದೂ ಉಳಿಯುವುದಿಲ್ಲ. ಬ್ರಹ್ಮಭಾವವೊಂದೇ ಉಳಿದಿರುತ್ತದೆ.)

ಧ್ಯಾನಮುತ್ಪಾದಯತ್ಯತ್ರ ಸಂಹಿತಾಬಲಸಂಶ್ರಯಾತ್।
ಶುದ್ಧಾತ್ಮಾ ತಪಸಾ ದಾನ್ತೋ ನಿವೃತ್ತದ್ವೇಷಕಾಮವಾನ್ ॥೧೭॥

ಅರಾಗಮೋಹೋ ನಿರ್ದ್ವನ್ದ್ವೋ ನ ಶೋಚತಿ ನ ಸಜ್ಜತೇ।
ನ ಕರ್ತಾ ಕಾರಣಾನಾಂ ಚ ನ ಕಾರ್ಯಾಣಾಮಿತಿ ಸ್ಥಿತಿಃ ॥೧೮॥

ಸಾಧಕನು ಉಪನಿಷತ್ಸಂಹಿತೆಯ ಜಪದಿಂದ ಪ್ರಾಪ್ತವಾದ ಬಲವನ್ನು ಆಶ್ರಯಿಸಿ ಧ್ಯಾನಯೋಗದ ಸಿದ್ಧಿಯನ್ನು ಮಾಡಿಕೊಳ್ಳುತ್ತಾನೆ. ತಪಸ್ಸಿನಿಂದ ಶುದ್ಧಾತ್ಮನೂ, ಜಿತೇಂದ್ರಿಯನೂ ಆಗುತ್ತಾನೆ. ಕಾಮ-ಕ್ರೋಧ-

ರಾಗ-ಮೋಹಗಳಿಂದ ರಹಿತನಾಗುತ್ತಾನೆ. ಶೀತೋಷ್ಣ-ಸುಖ-ದುಃಖಾದಿ ದ್ವಂದ್ವಗಳಿಂದಲೂ ರಹಿತನಾಗಿ ಶೋಕಿಸುವುದೂ ಇಲ್ಲ.; ಯಾವುದರಲ್ಲಿಯೂ ಆಸಕ್ತನಾಗಿರುವುದೂ ಇಲ್ಲ. ಕರ್ಮಗಳಿಗೆ ಕಾರಣನೆಂದಾಗಲೀ, ಕಾರ್ಯಗಳ ಕರ್ತೃವೆಂದಾಗಲೀ ಅವನು ಯಾವಾಗಲೂ ಭಾವಿಸಿಕೊಳ್ಳುವುದಿಲ್ಲ. ಯಾವುದೇ ಕಾರ್ಯವನ್ನಾದರೂ ಅಭಿಮಾನವನ್ನು ತೊರೆದು ಮಾಡುತ್ತಾನೆ. (ನಾನು ಈ ಕಾರ್ಯವನ್ನು ಮಾಡಿದೆನು. ನನ್ನಿಂದ ಅವರಿಗೆ ಸಹಾಯವಾಯಿತು – ಇವೇ ಮುಂತಾದ ಅಹಮಿಕಾಪೂರ್ವವಾದ ಮಾತನ್ನು ಅವನೆಂದಿಗೂ ಆಡುವುದಿಲ್ಲ.)

ನ ಚಾಹಙ್ಕಾರಯೋಗೇನ ಮನಃ ಪ್ರಸ್ಥಾಪಯೇತ್ಕ್ವಚಿತ್।
ನ ಚಾರ್ಥಗ್ರಹಣೇ ಯುಕ್ತೋ ನಾವಮಾನೀ ನ ಚಾಕ್ರಿಯಃ ॥೧೯॥

ಜಪಯೋಗನಿಷ್ಠನು ಎಲ್ಲಿಯೂ ಮನಸ್ಸನ್ನು ಅಹಂಕಾರಯೋಗದಿಂದ ಕೂಡಿಸುವುದಿಲ್ಲ. (ಕರ್ಮಮಾಡುವಾಗ ನಾನು ಈ ಸತ್ಕಾರ್ಯವನ್ನು ಮಾಡಿದೆನು –ಎಂಬ ಅಹಂಭಾವನೆಯನ್ನು ಹೊಂದುವುದಿಲ್ಲ. ಎಲ್ಲವೂ ಭಗವಂತನ ಇಚ್ಛೆಯಂತೆ ನಡೆಯುತ್ತದೆ–ಎಂದು ತಿಳಿದಿರುತ್ತಾನೆ.) ಅರ್ಥ ಸಂಗ್ರಹದಲ್ಲಿ ಆಸಕ್ತನಾಗಿರುವುದಿಲ್ಲ. ತಾನು ಅವಮಾನಿತನಾದರೂ ಇತರ ರನ್ನು ಅವಮಾನಗೊಳಿಸುವುದಿಲ್ಲ. ಅಕರ್ಮಣ್ಯನಾಗಿರುವುದಿಲ್ಲ. ಕರ್ಮ ಯೋಗದಲ್ಲಿ ನಿರತನಾಗಿರುತ್ತಾನೆ.

ಧ್ಯಾನಕ್ರಿಯಾಪರೋ ಯುಕ್ತೋ ಧ್ಯಾನವಾನ್ಧ್ಯಾನನಿಶ್ಚಯಃ।
ಧ್ಯಾನೇ ಸಮಾಧಿಮುತ್ಪಾದ್ಯ ತದಪಿ ತ್ಯಜತಿ ಕ್ರಮಾತ್ ॥೨೦॥

ಧ್ಯಾನರೂಪವಾದ ಕ್ರಿಯೆಯಲ್ಲಿಯೇ ಸರ್ವದಾ ಆಸಕ್ತನಾಗಿರುತ್ತಾನೆ. ಧ್ಯಾನನಿಷ್ಠನಾಗಿರುತ್ತಾ ಧ್ಯಾನದ ಮೂಲಕವಾಗಿಯೇ ತತ್ತ್ವವನ್ನು ಅರಿಯುತ್ತಾನೆ. ಧ್ಯಾನದ ಮೂಲಕವಾಗಿಯೇ ಸಮಾಧಿಸ್ಥಿತಿಯನ್ನು ಹೊಂದಿ ಅನುಕ್ರಮವಾಗಿ ಜಪವನ್ನೂ, ಧ್ಯಾನಕರ್ಮವನ್ನೂ ಪರಿತ್ಯಜಿಸುತ್ತಾನೆ. (ಸಮಾಧಿಸ್ಥಿತಿಯನ್ನು ಹೊಂದುವ ಸಲುವಾಗಿ ಧ್ಯಾನಕಾರ್ಯವನ್ನು ಮಾಡುತ್ತಲೇ ಇರಬೇಕು. ಒಮ್ಮೆ ಸಮಾಧಿಸ್ಥಿತಿಯು ಪ್ರಾಪ್ತವಾಯಿ ತೆಂದರೆ ಸಮಾಧಿಯು ಕಳೆದನಂತರ ಪುನಃ ಸಮಾಧಿಸ್ಥಿತಿಯನ್ನು

ಹೊಂದಲು ಧ್ಯಾನಕಾರ್ಯವನ್ನು ನಿರಂತರವಾಗಿ ಮಾಡುತ್ತಿರಬೇಕಾಗುವುದಿಲ್ಲ. ಸ್ವಲ್ಪ ಹೊತ್ತು ಧ್ಯಾನವನ್ನು ಮಾಡುವುದರಿಂದಲೇ ಸಮಾಧಿಸ್ಥನಾಗಬಹುದು. ಅನುಕ್ರಮವಾಗಿ ಧ್ಯಾನಕ್ರಿಯೆಯೇ ಇಲ್ಲದೇ ಮನಸ್ಸನ್ನು ಸಮಾಧಿಗೆ ಕ್ಷಣಮಾತ್ರದಲ್ಲಿ ಒಯ್ಯಬಹುದು. ಇನ್ನೂ ಮುಂದುವರಿದ ನಂತರ ಸಮಾಧಿಸ್ಥಿತಿಯು ಸ್ವಭಾವವೇ ಆಗಿಬಿಡುತ್ತದೆ. ಆ ಸಮಯದಲ್ಲಿ ಧ್ಯಾನಕಾರ್ಯವಾಗಲೀ ಜಪವಾಗಲೀ ಬೇಕಾಗುವುದೇ ಇಲ್ಲ. ಅಥವಾ ಧ್ಯಾನ-ಜಪಾದಿಗಳು ಸಹಜವಾಗಿಬಿಡುತ್ತವೆ. ಅದೇ ಸಮಾಧಿಸ್ಥಿತಿ.)

ಸ ವೈ ತಸ್ಯಾಮವಸ್ಥಾಯಾಂ ಸರ್ವತ್ಯಾಗಕೃತಃ ಸುಖಮ್।
ನಿರಿಚ್ಛಸ್ತ್ಯಜತಿ ಪ್ರಾಣಾನ್ಬ್ರಾಹ್ಮೀಂ ಸಂವಿಶತೇ ತನುಮ್ ॥೨೧॥

ಯೋಗಿಯು ಆ ಅವಸ್ಥೆಯಲ್ಲಿ ಸರ್ವಪರಿತ್ಯಾಗರೂಪವಾದ ಅನಿರ್ವಾಚ್ಯವಾದ ಪರಮಾನಂದಸುಖವನ್ನು ಅನುಭವಿಸುತ್ತಾನೆ. ಆ ಸಮಯದಲ್ಲವನು ಯೋಗಜನಿತವಾದ ಅಣಿಮಾದಿ ಅಷ್ಟಸಿದ್ಧಿಗಳನ್ನೂ ಇಚ್ಛಿಸುವುದಿಲ್ಲ. ಸರ್ವಥಾ ನಿಷ್ಕಾಮನಾಗಿ ಪ್ರಾಣಮನೋಬುದ್ಧೀಂದ್ರಿಯಾತ್ಮಕವಾದ ಲಿಂಗಶರೀರವನ್ನು ಪರಿತ್ಯಾಗಮಾಡಿ ಬ್ರಹ್ಮನನ್ನು ಪ್ರವೇಶಿಸುತ್ತಾನೆ. ಬ್ರಾಹ್ಮೀಂ ತನುಂ ಸಂವಿಶತೇ–ಚತುರ್ಮುಖನ ದೇಹವನ್ನು ಪ್ರವೇಶಿಸುತ್ತಾನೆ. ಇದು ಬ್ರಹ್ಮನ ದೇಹವನ್ನು ಪ್ರವೇಶಿಸಿ ಮುಕ್ತಿಯನ್ನು ಹೊಂದುವ ಸ್ಥಿತಿ. ಆದರೆ ಇಲ್ಲಿ ಆಶಾಕ್ರಾಂತನಾದರೆ ಪುನರಾವೃತ್ತಿಯುಂಟು. "ಆಬ್ರಹ್ಮ ಭುವನಾ ಲ್ಲೋಕಾಃ ಪುನರಾವರ್ತಿನೋಽರ್ಜುನ"-ಗೀತಾ. ಆಶಾರಹಿತನಾಗಿದ್ದರೆ ಬ್ರಹ್ಮಣಾಸಹ ವಿಮುಕ್ತಿಶ್ಚಾ ಎಂಬಂತೆ ಬ್ರಹ್ಮದೇವನೊಡನೆ ಮುಕ್ತಿ. (ಇದು ಪ್ರಾಣೋತ್ಕ್ರಮಣವಲ್ಲ. ಬ್ರಹ್ಮನಲ್ಲಿ ವಿಲೀನತೆ – ಎಂದು ವ್ಯಾಖ್ಯಾನಕಾರರು ಪ್ರತಿಪಾದಿಸುತ್ತಾರೆ. **ಯೋ ಕಾಮೋ ನಿಷ್ಕಾಮ ಆಪ್ತಕಾಮೋ ನ ತಸ್ಯ ಪ್ರಾಣಾ ಉತ್ಕ್ರಾಮನ್ತ್ಯತ್ರೈವ ಸಮವಲೀಯನ್ತೇ। ತಸ್ಯ ಶುದ್ಧಬ್ರಹ್ಮವಿದಃ ಆತ್ಮನಿ ಸಮವಲೀಯನ್ತೇ। ಏಕೀಭಾವೇನ ವಿಲೀಯನ್ತೇ ಇತಿ।** ಸಮಾಧಿಸ್ಥಿತಿಯಲ್ಲಿ ಶುದ್ಧಬ್ರಹ್ಮನನ್ನು ಕಂಡುಕೊಂಡವನ ಆತ್ಮನಲ್ಲಿ ಪ್ರಾಣ-ಮನೋ

ಬುದ್ಧೀಂದ್ರಿಯಗಳೆಲ್ಲವೂ ಲೀನವಾಗುತ್ತವೆ. ಬ್ರಹ್ಮನಲ್ಲಿ ಏಕೀಭಾವವನ್ನು ಹೊಂದುತ್ತವೆ.)

ಅಥವಾ ನೇಚ್ಛತೇ ತತ್ರ ಬ್ರಹ್ಮಕಾಯನಿಷೇವಣಮ್।
ಉತ್ಕ್ರಾಮತಿ ಚ ಮಾರ್ಗಸ್ಥೋ ನೈವ ಕ್ವಚನ ಜಾಯತೇ ॥೨೨॥

ಚತುರ್ಮುಖನ ದೇಹವನ್ನು ಸೇವಿಸುವ ಇಚ್ಛೆಯಿಲ್ಲದಿದ್ದರೆ ಆಗ ಪ್ರಾಣಗಳು ಉತ್ಕ್ರಮಿಸುತ್ತವೆ. ಜೀವನು ದೇವಯಾನದ ಮೂಲಕವಾಗಿ ಕೈವಲ್ಯಪದವನ್ನು ಹೊಂದುತ್ತಾನೆ. ಅಂತಹ ಯೋಗಿಯು ಪುನಃ ಯಾವಾಗಲೂ ಹುಟ್ಟುವುದಿಲ್ಲ. ಅವನಿಗೆ ಪುನಃ ಸಂಸಾರಬಂಧನವಿರುವುದಿಲ್ಲ. ಮುಕ್ತಿಯನ್ನು ಹೊಂದುತ್ತಾನೆ. (ಬ್ರಹ್ಮದೇಹಪ್ರವೇಶವನ್ನು ಅಪೇಕ್ಷಿಸದೆ ಅರ್ಚಿರಾದಿ ಗತಿಯಲ್ಲಿ ಪರಮಪದಕ್ಕೆ ಪ್ರಯಾಣಬೆಳೆಸುವಿಕೆ –ಇದು ಸಗುಣ ಬ್ರಹ್ಮಪ್ರಾಪ್ತಿ ಎಂದು ಅದ್ವೈತಮತದಲ್ಲಿ ಹೇಳಲ್ಪಡುತ್ತದೆ. ವಿಶಿಷ್ಟಾದ್ವೈತಿಗಳು ಇದನ್ನು ಪೂರ್ಣಮುಕ್ತಿ ಎನ್ನುತ್ತಾರೆ. ಅಲ್ಲಿಗೆ ತಲುಪಿದರೆ ಪುನರಾವೃತ್ತಿಯಿಲ್ಲ.)

ಆತ್ಮಬುದ್ಧ್ಯಾ ಸಮಾಸ್ಥಾಯ ಶಾನ್ತೀಭೂತೋ ನಿರಾಮಯಃ।
ಅಮೃತಂ ವಿರಜಃ ಶುದ್ಧಮಾತ್ಮಾನಂ ಪ್ರತಿಪದ್ಯತೇ ॥೨೩॥

ಆತ್ಮಸಮಾಧಿಯನ್ನು ಪಡೆದು ಯೋಗಿಯು ರಜೋಗುಣರಹಿತನಾಗಿ, ನಿರ್ಮಲನಾಗಿ, ಶಾಂತಸ್ವರೂಪನಾಗಿ – ಅಮೃತಸ್ವರೂಪವಾದ, ವಿಶುದ್ಧವಾದ ಆತ್ಮನನ್ನು ಹೊಂದುತ್ತಾನೆ.”

ಂ೯೬ನೆಯ ಅಧ್ಯಾಯವು ಮುಗಿಯಿತು.

೧೯೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜಪಯಜ್ಞದಲ್ಲಿ ದೋಷವುಂಟಾದರೆ ನರಕಪ್ರಾಪ್ತಿ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಗತೀನಾಮುತ್ತಮಾ ಪ್ರಾಪ್ತಿಃ ಕಥಿತಾ ಜಾಪಕೇಷ್ವಿಹ।
ಏಕೈವೈಷಾ ಗತಿಸ್ತೇಷಾಮುತ ಯಾನ್ತ್ಯಪರಾಮಪಿ ॥೧॥

“ಪಿತಾಮಹನೇ! ಜಾಪಕರಿಗೆ (ಜಪಸಹಿತವಾಗಿ ಧ್ಯಾನಯೋಗವನ್ನು ಸಾಧನೆಮಾಡುವವರಿಗೆ) ಉತ್ತಮವಾದ ಗತಿಯು ಸಿಕ್ಕುವುದೆಂದು ಹೇಳಿದೆ. ಅವರೆಲ್ಲರಿಗೂ ಪ್ರಾಪ್ತವಾಗುವುದು ಇದೊಂದೇ ಸ್ಥಾನವೇ? ಬೇರೆ ಯಾವುದಾದರೂ ಸ್ಥಾನಕ್ಕೂ ಅವರು ಹೋಗುವರೇ? ಈ ವಿಷಯವನ್ನು ತಿಳಿಸು.”

ಭೀಷ್ಮನು ಹೇಳುತ್ತಾನೆ :

“ಪುರುಷಪ್ರವರನೇ! ಜಾಪಕರು ಯಾವ ರೀತಿಯಲ್ಲಿ ನಾನಾಪ್ರಕಾರವಾದ ನರಕಗಳಿಗೂ (ಜನ್ಮಗಳಿಗೂ) ಹೋಗುವರೆಂಬುದನ್ನು ಹೇಳುವೆನು ; ಏಕಾಗ್ರಚಿತ್ತನಾಗಿ ಕೇಳು :

ಯಥೋಕ್ತಪೂರ್ವಂ ಪೂರ್ವಂ ಯೋ ನಾನುತಿಷ್ಠತಿ ಜಾಪಕಃ।
ಏಕದೇಶಕ್ರಿಯಶ್ಚಾತ್ರ ನಿರಯಂ ಸ ಚ ಗಚ್ಛತಿ ॥೩॥

ಯಾವ ಜಾಪಕನು ಹಿಂದೆ ಹೇಳಿರುವ ಎಲ್ಲ ನಿಯಮಗಳನ್ನೂ ಯಥಾವಿಧಿಯಾಗಿ ಅನುಷ್ಠಾನಮಾಡುವುದಿಲ್ಲವೋ–ಏಕದೇಶಾನುಷ್ಠಾನವನ್ನು ಮಾಡುವನೋ ಅವನು ನರಕಕ್ಕೆ ಹೋಗುತ್ತಾನೆ.

ಅವಮಾನೇನ ಕುರುತೇ ನ ಪ್ರೀಯತಿ ನ ಹೃಷ್ಯತಿ।
ಈದೃಶೋ ಜಾಪಕೋ ಯಾತಿ ನಿರಯಂ ನಾತ್ರ ಸಂಶಯಃ ॥೪॥

ಅವಹೇಳನಪೂರ್ವಕವಾಗಿ (ತಾತ್ಸಾರದಿಂದ) ಯಾವನು ಜಪಮಾಡುವನೋ, ಜಪಮಾಡುವುದರಲ್ಲಿ ಯಾರಿಗೆ ಪ್ರೀತಿಯಿರುವುದಿಲ್ಲವೋ, ಯಾವನು ಅದರಿಂದ ನಿರತಿಶಯವಾದ ಆನಂದವನ್ನು ಅನುಭವಿಸುವುದಿಲ್ಲವೋ–ಅಂತಹ ಜಾಪಕನೂ ನರಕಕ್ಕೆ ಹೋಗುವನೆಂಬುದರಲ್ಲಿ ಸಂಶಯವೇ ಇಲ್ಲ.

ಅಹಙ್ಕಾರಕೃತಶ್ಚೈವ ಸರ್ವೇ ನಿರಯಗಾಮಿನಃ।
ಪರಾವಮಾನೀ ಪುರುಷೋ ಭವಿತಾ ನಿರಯೋಪಗಃ ॥೫॥

ತಾವು ಅಪಾರಸಂಖ್ಯೆಯಲ್ಲಿ ಜಪವನ್ನು ಮಾಡಿರುವೆವೆಂದು ಅಹಂಕಾರಪಡುವವರೆಲ್ಲರೂ ನರಕಕ್ಕೇ ಹೋಗುತ್ತಾರೆ. (ಅವರಿಗೆ ಅಸಂಖ್ಯಾತವಾದ

ಜಪಮಾಡಿದುದರಿಂದಲೂ ಯಾವ ವಿಧವಾದ ಫಲವೂ ಲಭಿಸುವುದಿಲ್ಲ.) ಇತರರನ್ನು ಅವಮಾನಗೊಳಿಸುವ ಜಾಪಕನೂ ನರಕಕ್ಕೆ ಹೋಗುತ್ತಾನೆ.

ಅಭಿಧ್ಯಾಪೂರ್ವಕಂ ಜಪ್ಯಂ ಕುರುತೇ ಯಶ್ಚ ಮೋಹಿತಃ ।
ಯತ್ರಾಭಿಧ್ಯಾಂ ಸ ಕುರುತೇ ತಂ ವೈ ನಿರಯಮೃಚ್ಛತಿ ॥೬॥

ಯಾವನು ವರ್ಣ-ರತಿ-ಪ್ರಮೋದ ಮುಂತಾದ ಭೋಗಗಳನ್ನು ಧ್ಯಾನಿಸುತ್ತಾ ಮೋಹವಶನಾಗಿ ಜಪಮಾಡುವನೋ ಮತ್ತು ಹೊಂದಬೇಕಾದ ಫಲವನ್ನೇ ಯಾವಾಗಲೂ ಮನಸ್ಸಿನಲ್ಲಿ ಚಿಂತಿಸುವನೋ – ಅಂತಹವನು ನರಕಕ್ಕೆ ಹೋಗುತ್ತಾನೆ.

ಅಥೈಶ್ವರ್ಯಪ್ರವೃತ್ತೇಷು ಜಾಪಕಸ್ತತ್ರ ರಜ್ಯತೇ ।
ಸ ಏವ ನಿರಯಸ್ತಸ್ಯ ನಾಸೌ ತಸ್ಮಾತ್ಪ್ರಮುಚ್ಯತೇ ॥೭॥

ಒಂದು ವೇಳೆ ಜಪಮಾಡುವ ಸಾಧಕನಿಗೆ ಅಣಿಮಾದಿ ಅಷ್ಟಸಿದ್ಧಿಗಳು ಪ್ರಾಪ್ತವಾದಲ್ಲಿ ಅವನು ಆ ಅಷ್ಟಸಿದ್ಧಿಗಳಲ್ಲಿಯೇ ಆಸಕ್ತನಾದಲ್ಲಿ – ಅದೇ ಅವನಿಗೆ ನರಕಪ್ರಾಯವಾಗುತ್ತದೆ. ಅವನು ಆ ಅಷ್ಟೈಶ್ವರ್ಯಬಂಧನದಿಂದ ಖಂಡಿತವಾಗಿಯೂ ಮುಕ್ತನಾಗುವುದಿಲ್ಲ.

ರಾಗೇಣ ಜಾಪಕೋ ಜಪ್ಯಂ ಕುರುತೇ ತತ್ರ ಮೋಹಿತಃ ।
ಯತ್ರಾಸ್ಯ ರಾಗಃ ಪತತಿ ತತ್ರ ತತ್ರೋಪಪದ್ಯತೇ ॥೮॥

ಯಾವ ಜಾಪಕನು ಮೋಹವಶನಾಗಿ ವಿಷಯಾಸಕ್ತಿಪೂರ್ವಕವಾಗಿ ಜಪಮಾಡುವನೋ ಮತ್ತು ಜಾಪಕನ ಮನಸ್ಸು ಯಾವ ಫಲದಲ್ಲಿ ಆಸಕ್ತವಾಗಿರುವುದೋ –ಅದಕ್ಕೆ ಅನುರೂಪವಾದ ಶರೀರವನ್ನೇ ಜಾಪಕನು ಪಡೆದುಕೊಳ್ಳುತ್ತಾನೆ. (ಜಪಮಾಡುವಾಗ ಜಾಪಕನಿಗೆ ದೊಡ್ಡದೊಂದು ಅರಮನೆಯು ಬೇಕೆನ್ನಿಸಿದ್ದರೆ ಪುನರ್ಜನ್ಮದಲ್ಲಿ ಆ ಜಾಪಕನು ರಾಜನಾಗಿ ಅರಮನೆಯ ಸುಖವನ್ನೇ ಪಡೆದುಕೊಳ್ಳುತ್ತಾನೆ. ಜಾಪಕನು ಪರಮಾತ್ಮನ ಚಿಂತನೆಯಿಂದ ಪರಮಾತ್ಮನನ್ನು ಸೇರುವಂತೆ –ವಿಷಯಗಳ ಚಿಂತನೆಯಿಂದ ವಿಷಯೋಪಭೋಗಗಳಿಗೆ ಅನುಕೂಲವಾದ ಜನ್ಮವನ್ನೇ ಪಡೆಯುತ್ತಾನೆ.)

ದುರ್ಬುದ್ಧಿರಕೃತಪ್ರಜ್ಞಶ್ಚಲೇ ಮನಸಿ ತಿಷ್ಠತಿ ।
ಚಲಾಮೇವ ಗತಿಂ ಯಾತಿ ನಿರಯಂ ವಾ ನಿಯಚ್ಛತಿ ॥೯॥

ಭೋಗದಲ್ಲಿ ಆಸಕ್ತಿಯನ್ನು ಹೊಂದಿ ದೂಷಿತವಾದ ಬುದ್ಧಿಯನ್ನು ಹೊಂದಿರುವ, ಅವಿವೇಕಿಯಾದ, ಚಂಚಲವಾದ ಮನಸ್ಸನ್ನು ಹೊಂದಿರುವ ಜಾಪಕನು ಚಲವಾದ ಗತಿಯನ್ನೇ ಹೊಂದುತ್ತಾನೆ. ಅಥವಾ ನರಕಕ್ಕಾದರೂ ಹೋಗುತ್ತಾನೆ.

ಅಕೃತಪ್ರಜ್ಞಕೋ ಬಾಲೋ ಮೋಹಂ ಗಚ್ಛತಿ ಜಾಪಕಃ ।
ಸ ಮೋಹಾನ್ನಿರಯಂ ಯಾತಿ ತತ್ರ ಗತ್ವಾನುಶೋಚತಿ ॥೧೦॥

ವಿವೇಕಶೂನ್ಯನಾದ, ಮೂಢನಾದ ಜಾಪಕನು ಮೋಹಗ್ರಸ್ತನಾಗುತ್ತಾನೆ. ಆ ಮೋಹದ ಕಾರಣದಿಂದಲೇ ಅವನು ನರಕಕ್ಕೆ ಹೋಗುತ್ತಾನೆ ಮತ್ತು ಅಲ್ಲಿಗೆ ಹೋಗಿ ಬಹಳವಾಗಿ ಪಶ್ಚಾತ್ತಾಪಪಡುತ್ತಾನೆ.

ದೃಢಗ್ರಾಹೀ ಕರೋಮೀತಿ ಜಾಪ್ಯಂ ಜಪತಿ ಜಾಪಕಃ ।
ನ ಸಮ್ಪೂರ್ಣೋ ನ ಸಂಯುಕ್ತೋ ನಿರಯಂ ಸೋಽನುಗಚ್ಛತಿ ॥

'ನಾನು ನಿಶ್ಚಯವಾಗಿಯೂ ಈ ಜಪದ ಅನುಷ್ಠಾನವನ್ನು ಪೂರ್ಣವಾಗಿ ಮಾಡಿಮುಗಿಸುತ್ತೇನೆ'–ಎಂದು ದೃಢವಾದ ಸಂಕಲ್ಪವನ್ನು ಮಾಡಿ ಅನಂತರ ಜಾಪಕನು ಅಷ್ಟು ಜಪವನ್ನು ಮಾಡದಿದ್ದರೆ ಮತ್ತು ಜಪದಲ್ಲಿ ಆಸಕ್ತಿಯನ್ನು ಹೊಂದದಿದ್ದರೆ–ಅಂತಹ ಜಾಪಕನು ಕೂಡ ನರಕಕ್ಕೆ ಹೋಗುತ್ತಾನೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅನಿವೃತ್ತಂ ಪರಂ ಯತ್ತದವ್ಯಕ್ತಂ ಬ್ರಹ್ಮಣಿ ಸ್ಥಿತಮ್ ।
ತದ್ಭೂತೋ ಜಾಪಕಃ ಕಸ್ಮಾತ್ಸ ಶರೀರಮಿಹಾವಿಶೇತ್ ॥೧೨॥

"ಯಾವಾಗಲೂ ನಿವೃತ್ತಿಯನ್ನು ಹೊಂದದೇ ಇರುವ (ಸನಾತನವಾದ), ವಾಙ್ಮನಸ್ಸುಗಳಿಂದ ಅತೀತವಾದ, ಓಂಕಾರದಲ್ಲಿ ಪ್ರತಿಷ್ಠಿತವಾಗಿರುವ ಬ್ರಹ್ಮಭಾವವನ್ನು ಹೊಂದಿದ್ದರೂ ಜಾಪಕನು ಯಾವ ಕಾರಣದಿಂದ ಪುನರ್ಜನ್ಮವನ್ನು ಹೊಂದುತ್ತಾನೆ?"

ಭೀಷ್ಮನು ಹೇಳುತ್ತಾನೆ :

ದುಷ್ಪ್ರಜ್ಞಾನೇನ ನಿರಯಾ ಬಹವಃ ಸಮುದಾಹೃತಾಃ ।
ಪ್ರಶಸ್ತಂ ಜಾಪಕತ್ವಂ ಚ ದೋಷಾಶ್ಚೈತೇ ತದಾತ್ಮಕಾಃ ॥೧॥

"ಧರ್ಮಜ! (ಜಾಪಕನು ರಾಗಾದಿ ಮಿಶ್ರವಿಲ್ಲದೆ ಶುದ್ಧವಾದ ಬ್ರಹ್ಮದ ಚಿಂತನೆಯಲ್ಲಿಯೇ ಸರ್ವದಾ ಆಸಕ್ತನಾಗಿದ್ದರೆ ಅಂತಹವನಿಗೆ ಪುನರ್ಜನ್ಮ ವಿಲ್ಲ.) ಆದರೆ ಕಾಮಾದಿಗಳಿಂದ ಆಕ್ರಾಂತವಾದ ದೂಷಿತಬುದ್ಧಿಯಿಂದಾಗಿ ಅನೇಕಪ್ರಕಾರವಾದ ನರಕಗಳು ಪ್ರಾಪ್ತವಾಗುತ್ತವೆ. ಜಾಪಕತ್ವವು (ಜಪದಿಂದ ಸಮಾಧಿಯೋಗದ ಸಾಧನೆಯು) ಬಹಳ ಪ್ರಶಸ್ತವಾದುದೇ ಸರಿ. ಆದರೆ ಜಾಪಕತ್ವದಲ್ಲಿ ರಾಗವೇ ಮೊದಲಾದ ಅನೇಕ ದೋಷಗಳೂ ಸೇರಿಕೊಂಡಿರ ಬಹುದು.

(ಈ ಅಧ್ಯಾಯದಲ್ಲಿ ಬರುವ ನಿರಯ ಎಂಬುದಕ್ಕೆ ಭೋಗೈಶ್ವರ್ಯದ ಗತಿ ಅಥವಾ ಪುನರ್ಜನ್ಮವೆಂಬ ಅರ್ಥವನ್ನು ಇಟ್ಟುಕೊಳ್ಳುವುದು ಒಳ್ಳೆಯದು. ಫಲಾಭಿಸಂಧಿಯಿಲ್ಲದೆ ಮಹಾಮಂತ್ರಗಳ ಜಪದ ಮೂಲಕವಾಗಿ ಧ್ಯಾನಯೋಗದಲ್ಲಿ ನಿಷ್ಠನಾದರೆ ಅಂತಹ ಯೋಗಿಗೆ ಆತ್ಮಸಾಕ್ಷಾತ್ಕಾರವಾಗು ತ್ತದೆ ಅಥವಾ ಬ್ರಹ್ಮಲೋಕವು ಪ್ರಾಪ್ತವಾಗುತ್ತದೆ –ಎಂದು ಹಿಂದಿನ ಅಧ್ಯಾಯದಲ್ಲಿ ಹೇಳಿದೆ. ಈ ಅಧ್ಯಾಯದಲ್ಲಿ ಜಪದ ದೋಷಗಳನ್ನು ಹೇಳುವಾಗ – 'ಕಾಮ್ಯಫಲಗಳಲ್ಲಿ ಆಸಕ್ತನಾಗಿ ಜಪಮಾಡಿದರೆ ಬ್ರಹ್ಮಸಾಕ್ಷಾ ತ್ಕಾರವಾಗುವುದಿಲ್ಲ. ಅಣಿಮಾದಿ ಅಷ್ಟಸಿದ್ಧಿಗಳನ್ನೂ ಜಪಯೋಗದಿಂದಲೇ ಪಡೆದುಕೊಳ್ಳಬಹುದು. ಈ ಜನ್ಮದಲ್ಲಿ ಯಾವುದೋ ಫಲಾಭಿಸಂಧಿಯಿಂದ ಜಪಮಾಡಿದರೆ ಮುಂದಿನ ಜನ್ಮಕ್ಕಾದರೂ ಅದು ಲಭ್ಯವಾಗುತ್ತದೆ. ಆದರೆ ಹೀಗೆ ಫಲಾಭಿಸಂಧಿಯಿಂದ ಜಪಮಾಡುವವನು ಬ್ರಹ್ಮಭಾವದಿಂದ ಬಹಳ ದೂರವಿರುತ್ತಾನೆ. ಅಂತಹವನಿಗೆ ಸಂಸಾರಚಕ್ರವು ತಪ್ಪಿದ್ದಲ್ಲ'–ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ಆದುದರಿಂದ 'ನಿರಯ' ಎಂಬುದಕ್ಕೆ ಭೋಗೈಶ್ವರ್ಯದ ಗತಿ ಅಥವಾ ಪುನರ್ಜನ್ಮ ಎಂಬ ಅರ್ಥವನ್ನು ಇಟ್ಟುಕೊಳ್ಳುವುದು ಒಳ್ಳೆಯದು. ಯೋಗಿಯ ದೃಷ್ಟಿಯಿಂದ ಸಂಸಾರವೇ

ನರಕಪ್ರಾಯವಾಗಿರುತ್ತದೆ. ಬ್ರಹ್ಮನಿಂದ ಸ್ಖಾಲಿತ್ಯವನ್ನು ಹೊಂದುವುದೇ ಯೋಗಿಗೆ ಮಹಾಭಯವೆನಿಸುತ್ತದೆ.)

೧೯೭ನೆಯ ಅಧ್ಯಾಯವು ಮುಗಿಯಿತು.

೧೯೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪರಂಧಾಮಕ್ಕೆ ಅಧಿಕಾರಿಯಾದ ಜಾಪಕನಿಗೆ ದೇವಲೋಕವೂ ನರಕಸದೃಶವೆಂಬುದರ ಪ್ರತಿಪಾದನೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕೀದೃಶಂ ನಿರಯಂ ಯಾತಿ ಜಾಪಕೋ ವರ್ಣಯಸ್ವ ಮೇ ।
ಕೌತೂಹಲಂ ಹಿ ರಾಜನ್ಮೇ ತದ್ಭವಾನ್ವಕ್ತುಮರ್ಹತಿ ॥೧॥

"ಪಿತಾಮಹ! ಜಪಯಜ್ಞದಲ್ಲಿ ದೋಷಗಳ ಕಾರಣದಿಂದ ಜಾಪಕನು ಎಂತಹ ನರಕಕ್ಕೆ ಹೋಗುತ್ತಾನೆ? ಅದನ್ನು ನನಗೆ ಹೇಳು. ಅದನ್ನು ಕೇಳಬೇಕೆಂದು ನನಗೆ ಬಹಳ ಕುತೂಹಲವುಂಟಾಗಿದೆ. ಕೃಪೆಯಿಟ್ಟು ತಿಳಿಸು."

ಭೀಷ್ಮನು ಹೇಳುತ್ತಾನೆ :

ಧರ್ಮಸ್ಯಾಂಶಪ್ರಸೂತೋಽಸಿ ಧರ್ಮಿಷ್ಠೋಽಸಿ ಸ್ವಭಾವತಃ ।
ಧರ್ಮಮೂಲಾಶ್ರಯಂ ವಾಕ್ಯಂ ಶೃಣುಷ್ವಾವಹಿತೋಽನಘ ॥೨॥

"ನಿಷ್ಪಾಪನೇ! ನೀನು ಯಮಧರ್ಮನ ಅಂಶದಿಂದಲೇ ಹುಟ್ಟಿರುವೆ. ಆದುದರಿಂದ ನೀನು ಸ್ವಭಾವದಿಂದಲೇ ಧರ್ಮಿಷ್ಠನಾಗಿರುವೆ. ಧರ್ಮಕ್ಕೆ ಮೂಲವಾದ, ಪರಮಾತ್ಮನಿಗೆ ಸಂಬಂಧಿಸಿದ ಈ ಮಾತುಗಳನ್ನು ಏಕಾಗ್ರತೆಯಿಂದ ಕೇಳು.

ಅಮೂನಿ ಯಾನಿ ಸ್ಥಾನಾನಿ ದೇವಾನಾಂ ಪರಮಾತ್ಮನಾಮ್ ।
ನಾನಾಸಂಸ್ಥಾನವರ್ಣಾನಿ ನಾನಾರೂಪಫಲಾನಿ ಚ ॥೩॥

ದಿವ್ಯಾನಿ ಕಾಮಚಾರೀಣಿ ವಿಮಾನಾನಿ ಸಭಾಸ್ತಥಾ ।
ಆಕ್ರೀಡಾ ವಿವಿಧಾ ರಾಜನ್ಪದ್ಮಿನ್ಯಶ್ಚೈವ ಕಾಞ್ಚನಾಃ ॥೪॥

ಪರಮಬುದ್ಧಿಶಾಲಿಗಳಾದ ದೇವತೆಗಳಿಗೆ ಯಾವ ಸ್ಥಾನಗಳಿವೆಯೋ

ಅವುಗಳು ನಿರಯಗಳು. ಆ ಸ್ಥಾನಗಳ ರೂಪ ಮತ್ತು ವರ್ಣಗಳು ಅನೇಕ ಪ್ರಕಾರವಾಗಿವೆ. ಅವುಗಳಲ್ಲಿ ಲಭಿಸುವ ಫಲಗಳೂ ನಾನಾರೂಪವಾಗಿವೆ. ಇಚ್ಛಿಸಿದಲ್ಲಿಗೆ ಹೋಗುವ ದಿವ್ಯವಾದ ವಿಮಾನಗಳೂ ಮತ್ತು ಸಭೆಗಳೂ ಅಲ್ಲಿವೆ. ಅಲ್ಲಿ ವಿಧ-ವಿಧವಾದ ಕ್ರೀಡಾವಲಯಗಳಿವೆ. ಸುವರ್ಣಮಯವಾದ ಕಮಲಗಳ ಸರೋವರಗಳಿವೆ.

ಚತುರ್ಣಾಂ ಲೋಕಪಾಲಾನಾಂ ಶುಕ್ರಸ್ಯಾಥ ಬೃಹಸ್ಪತೇಃ।
ಮರುತಾಂ ವಿಶ್ವದೇವಾನಾಂ ಸಾಧ್ಯಾನಾಮಶ್ವಿನೋರಪಿ ॥೫॥

ರುದ್ರಾದಿತ್ಯವಸೂನಾಂ ಚ ತಥಾನ್ಯೇಷಾಂ ದಿವೌಕಸಾಮ್।
ಏತೇ ವೈ ನಿರಯಾಸ್ತಾತ ಸ್ಥಾನಸ್ಯ ಪರಮಾತ್ಮನಃ ॥೬॥

ವರುಣ, ಕುಬೇರ, ಇಂದ್ರ, ಯಮ –ಈ ನಾಲ್ವರು ಲೋಕಪಾಲರ, ಶುಕ್ರ-ಬೃಹಸ್ಪತಿಗಳ, ಮರುದ್ಗಣಗಳ, ವಿಶ್ವೇದೇವತೆಗಳ, ಸಾಧ್ಯರ, ಅಶ್ವಿನೀ ದೇವತೆಗಳ, ರುದ್ರಾದಿತ್ಯ-ವಸುಗಳ ಮತ್ತು ಇನ್ನೂ ಇತರ ಅನೇಕ ದೇವತೆಗಳ ಅಂತಹ ದಿವ್ಯಲೋಕಗಳು ಪರಮಾತ್ಮನ ಸ್ಥಾನದ ದೃಷ್ಟಿಯಿಂದ ನರಕಗಳೇ ಆಗಿರುತ್ತವೆ.

ಅಭಯಂ ಚಾನಿಮಿತ್ತಂ ಚ ನ ತತ್ಕ್ಲೇಶಸಮಾವೃತಮ್ ।
ದ್ವಾಭ್ಯಾಂ ಮುಕ್ತಂ ತ್ರಿಭಿರ್ಮುಕ್ತಮಷ್ಟಾಭಿಸ್ತ್ರಿಭಿರೇವ ಚ ॥೭॥

ಪರಮಾತ್ಮನ ದಿವ್ಯಧಾಮವು ವಿನಾಶದ ಭಯದಿಂದ ರಹಿತವಾಗಿದೆ. ಲಕ್ಷಣಾತೀತವಾಗಿದೆ. ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ ಮತ್ತು ಅಭಿನಿವೇಶಗಳೆಂಬ ಪಂಚಕ್ಲೇಶಗಳಿಂದ ಆ ದಿವ್ಯಧಾಮವು ಸಮಾವೃತವಾಗಿರುವುದಿಲ್ಲ. **ಅಶರೀರಂ ವಾವಸನ್ತಂ ನ ಪ್ರಿಯಾಪ್ರಿಯೇ ಸ್ಪೃಶತಃ**–ಎಂಬ ಶ್ರುತ್ಯುಕ್ತಿಯಂತೆ ಪ್ರಿಯಾಪ್ರಿಯಗಳೆಂಬ ಎರಡರಿಂದ ಅಥವಾ ಹುಟ್ಟು-ಸಾವುಗಳೆಂಬ ಎರಡರಿಂದ ಮುಕ್ತವಾಗಿದೆ. ಪ್ರಿಯಾಪ್ರಿಯಗಳಿಗೆ ಮತ್ತು ಹುಟ್ಟು-ಸಾವುಗಳಿಗೆ ಕಾರಣಭೂತವಾದ ಸತ್ತ್ವರಜಸ್ತಮಸ್ಸುಗಳೆಂಬ ಮೂರೂ

---

* ಎಂಟು ಪುರಿಗಳು : ಭೂತೇನ್ದ್ರಿಯಮನೋಬುದ್ಧಿವಾಸನಾಕರ್ಮವಾಯವಃ । ಅವಿದ್ಯಾ ಚೇತ್ಯಮುಂ ವರ್ಗಮಾಹುಃ ಪುರ್ಯಷ್ಟಕಂ ಬುಧಾಃ ॥

ಅಲ್ಲಿರುವುದಿಲ್ಲ.* ಭೂತ, ಇಂದ್ರಿಯ, ಮನಸ್ಸು, ಬುದ್ಧಿ, ಉಪಾಸನೆ, ಕರ್ಮ, ಪ್ರಾಣ ಮತ್ತು ಅವಿದ್ಯೆ – ಎಂಬ ಎಂಟು ಪುರಿಗಳಿಂದಲೂ ದಿವ್ಯಧಾಮವು ಮುಕ್ತವಾಗಿದೆ. ಆ ದಿವ್ಯಧಾಮದಲ್ಲಿ ಭೂತ-ಭವಿತ್ಯದ್ವರ್ತಮಾನಗಳೆಂಬ ಮೂರೂ ಇರುವುದಿಲ್ಲ.

ಚತುರ್ಲಕ್ಷಣವರ್ಜಂ ತು ಚತುಷ್ಕಾರಣವರ್ಜಿತಮ್।
ಅಪ್ರಹರ್ಷಮನಾನ್ದಮಶೋಕಂ ವಿಗತಕ್ಲಮಮ್ ॥೮॥

ಪರಮಾತ್ಮನ ಪರಂಧಾಮವು ದೃಷ್ಟಿ, ಶ್ರುತಿ, ಮತಿ ಮತ್ತು ವಿಜ್ಞಾತಿ ಗಳೆಂಬ * ನಾಲ್ಕು ಲಕ್ಷಣಗಳಿಂದಲೂ ರಹಿತವಾಗಿದೆ. ಜ್ಞಾನಕ್ಕೆ ಕಾರಣಭೂತ ವಾದ ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಬ್ದಗಳೆಂಬ ನಾಲ್ಕು ಪ್ರಮಾಣಗಳಿಂದಲೂ ವರ್ಜಿತವಾಗಿದೆ. ಇಷ್ಟವಾದುವುಗಳನ್ನು ಹೊಂದು ವುದರಿಂದ ಉಂಟಾಗುವ ಹರ್ಷವಾಗಲೀ, ಉಪಭೋಗಿಸುವುದರಿಂದ ಉಂಟಾಗುವ ಆನಂದವಾಗಲೀ ಅಲ್ಲಿರುವುದಿಲ್ಲ. ಆ ದಿವ್ಯಸ್ಥಳವು ಶೋಕ ದಿಂದಲೂ ಶ್ರಮದಿಂದಲೂ ಸರ್ವಥಾ ರಹಿತವಾಗಿದೆ. (ಆನಂದವೂ ಇಲ್ಲ ; ಶೋಕವು ಇಲ್ಲ ; ಶ್ರಮವೂ ಇಲ್ಲ ಎಂದರೆ ಎಂತಹ ಸ್ಥಿತಿಯದು? ಹಿಂದೆ ಹೇಳಿರುವಂತೆ ಆನಂದ-ಪ್ರಹರ್ಷಗಳು ಸತ್ತ್ವಗುಣದ ಲಕ್ಷಣ. ಶೋಕವು ರಜೋಗುಣದ ಲಕ್ಷಣ. ಆನಂದ-ಶೋಕ-ಶ್ರಮಗಳಿಲ್ಲದ ಸ್ಥಳವೆಂದರೆ ತ್ರಿಗುಣಾತೀತವಾಗಿರುವ ಸ್ಥಿತಿ. ಶುದ್ಧ ಸಮಾಧಿಸ್ಥಿತಿ. ಅಮೃತದ ಸ್ಪರ್ಶ ದಿಂದಲೇ ಪರಮಾನಂದವುಂಟಾಗುವುದೆಂದು ಹೇಳುತ್ತಾರೆ. ಅಂತಹ ಪರಮಾನಂದವನ್ನುಂಟುಮಾಡುವ ಅಮೃತವೇ ಆಗಿಬಿಟ್ಟರೆ ತ್ರಿಗುಣಜನ್ಯ ವಾದ ಸಂತೋಷ-ಶೋಕಗಳಾವುವೂ ಇರುವುದಿಲ್ಲ. ಅದನ್ನೇ ಅಮೃತತ್ತ್ವ ವೆಂದೂ ಹೇಳುತ್ತಾರೆ.)

ಕಾಲಃ ಸಮ್ಪದ್ಯತೇ ತತ್ರ ಕಾಲಸ್ತತ್ರ ನ ವೈ ಪ್ರಭುಃ।
ಸ ಕಾಲಸ್ಯ ಪ್ರಭೂ ರಾಜನ್ಸ್ವರ್ಗಸ್ಯಾಪಿ ತಥೇಶ್ವರಃ ॥೯॥

---

* ನಾಲ್ಕು ಲಕ್ಷಣಗಳ ವಿಷಯವಾಗಿ ಶ್ರುತಿಯಲ್ಲಿ ಹೀಗೆ ಹೇಳಿದೆ :

ನ ದೃಷ್ಟೇರ್ದ್ರಷ್ಟಾರಂ ಪಶ್ಯೇರ್ನ ಶ್ರುತೇಃ ಶ್ರೋತಾರಂ ಶೃಣುಯಾ ನ ಮತೇರ್ಮನ್ತಾರಮನ್ವೀಯಾ ನ ವಿಜ್ಞಾತೇರ್ವಿಜ್ಞಾತಾರಂ ವಿಜಾನೀಯಾಃ ॥

ಪರಮಾತ್ಮನ ಆ ಪರಂಧಾಮದಿಂದಲೇ ಕಾಲದ ಉತ್ಪತ್ತಿಯಾಗುತ್ತದೆ. ಅಲ್ಲಿ ಕಾಲವು ತನ್ನ ಪ್ರಭುತ್ವವನ್ನು ನಡೆಸಲಾರದು. ಅಲ್ಲಿ ಪರಮಾತ್ಮನೇ ಕಾಲಕ್ಕೆ ಪ್ರಭುವಾಗಿರುತ್ತಾನೆ. ಅವನೇ ಸ್ವರ್ಗಕ್ಕೂ ಅಧಿಪತಿಯಾಗಿರುತ್ತಾನೆ.

ಆತ್ಮಕೇವಲತಾಂ ಪ್ರಾಪ್ತಸ್ತತ್ರ ಗತ್ವಾ ನ ಶೋಚತಿ।
ಈದೃಶಂ ಪರಮಂ ಸ್ಥಾನಂ ನಿರಯಾಸ್ತೇ ಚ ತಾದೃಶಾಃ ॥೧೦॥

ಕೇವಲಾತ್ಮಭಾವವನ್ನು ಹೊಂದಿದವನು ಪರಮಾತ್ಮನ ಆ ಪರಂಧಾಮಕ್ಕೆ ಹೋದನಂತರ ಶೋಕಪಡುವುದಿಲ್ಲ. ಪರಮಾತ್ಮನ ಪರಮಪದವು ಇಂತಹ ಲಕ್ಷಣಗಳಿಂದ ಕೂಡಿದುದಾಗಿದೆ. ಇತರ ಲೋಕಗಳಾದರೋ ಹಿಂದೆ ಹೇಳಿದ ಅನಿತ್ಯವಾದ ಸುಖೋಪಭೋಗಗಳಿಂದ ಕೂಡಿದುವುಗಳಾಗಿವೆ. ಪರಮಾತ್ಮನ ಪರಂಧಾಮಕ್ಕೆ ಅವುಗಳನ್ನು ಹೋಲಿಸಿದರೆ ಅವುಗಳು ನರಕಪ್ರಾಯವಾಗಿ ಕಾಣುತ್ತವೆ.

ಏತೇ ತೇ ನಿರಯಾಃ ಪ್ರೋಕ್ತಾ ಸರ್ವ ಏವ ಯಥಾತಥಮ್।
ತಸ್ಯ ಸ್ಥಾನವರಸ್ಯೇಹ ಸರ್ವೇ ನಿರಯಸಂಜ್ಞಿತಾಃ ॥೧೧॥

ಯುಧಿಷ್ಠಿರ! ಹೀಗೆ ನಾನು ನಿನಗೆ ನರಕಗಳ ವಿಷಯವನ್ನು ಯಥಾವತ್ತಾಗಿ ಹೇಳಿರುತ್ತೇನೆ. ಪರಮಾತ್ಮನ ಪರಮಪದದ ಮುಂದೆ ಉಳಿದೆಲ್ಲ ಲೋಕಗಳೂ ನರಕಗಳೆಂದೇ ಹೇಳಲು ಯೋಗ್ಯವಾಗಿವೆ.”

೧೯೮ನೆಯ ಅಧ್ಯಾಯವು ಮುಗಿಯಿತು.

೧೯೯ನೆಯ ಅಧ್ಯಾಯ — ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜಾಪಕನಿಗೆ ಸಾವಿತ್ರಿಯ ವರದಾನ; ಜಾಪಕನ ಬಳಿಗೆ ಧರ್ಮ, ಯಮ ಮತ್ತು ಕಾಲರ ಆಗಮನ; ಇಕ್ಷ್ವಾಕುರಾಜ ಮತ್ತು ಜಾಪಕಬ್ರಾಹ್ಮಣರ ಸಂಭಾಷಣೆ; ಸತ್ಯದ ಮಹಿಮೆ; ಜಾಪಕನಿಗೆ ಲಭಿಸುವ ಪರಮಗತಿಯ ವರ್ಣನೆ

ಮಹಾರಾಜ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಾಲಮೃತ್ಯುಯಮಾನಾಂ ತೇ ಇಕ್ಷ್ವಾಕೋರ್ಬ್ರಾಹ್ಮಣಸ್ಯ ಚ।
ವಿವಾದೋ ವ್ಯಾಹೃತಃ ಪೂರ್ವಂ ತದ್ಭವಾನ್ವಕ್ತುಮರ್ಹತಿ ॥೧॥

"ಪಿತಾಮಹ! ಬಹಳ ಹಿಂದೆ ನೀನು ಕಾಲ, ಮೃತ್ಯು, ಯಮ, ಇಕ್ಷ್ವಾಕುಗಳಿಗೂ ಮತ್ತು ಬ್ರಾಹ್ಮಣನಿಗೂ ನಡೆದ ವಿವಾದದ ವಿಷಯವಾಗಿ ಹೇಳಿದ್ದೆ. ಅದನ್ನೇ ಈಗ ಪುನಃ ನನಗೆ ಹೇಳುವ ಕೃಪೆಮಾಡು."*

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಇಕ್ಷ್ವಾಕುವಿನ, ಸೂರ್ಯನ ಮಗನಾದ ಯಮನ, ಬ್ರಾಹ್ಮಣನ, ಕಾಲನ ಮತ್ತು ಮೃತ್ಯುವಿನ ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅವರ ಸಂವಾದವು ಹೇಗೆ ನಡೆಯಿತು ಮತ್ತು ಯಾವ ಸ್ಥಳದಲ್ಲಿ ನಡೆಯಿತೆಂಬುದನ್ನು ಹೇಳುವೆನು, ಕೇಳು :

ಹಿಮವತ್ಪರ್ವತದ ತಪ್ಪಲುಪ್ರದೇಶದಲ್ಲಿ ಮಹಾಯಶೋವಂತನಾದ, ಧರ್ಮಾತ್ಮನಾದ ಒಬ್ಬ ಬ್ರಾಹ್ಮಣನು ವಾಸಮಾಡಿಕೊಂಡಿದ್ದನು. ಅವನು ವೇದಗಳ ಶಿಕ್ಷಾ-ವ್ಯಾಕರಣಾದಿ ಷಡಂಗಗಳನ್ನೂ ತಿಳಿದವನಾಗಿದ್ದನು. ಮಹಾಪ್ರಾಜ್ಞನಾಗಿದ್ದನು. ಸರ್ವದಾ ಜಪದಲ್ಲಿಯೇ ನಿರತನಾಗಿದ್ದನು. ಪಿಪ್ಪಲಾದನ ಮಗನಾದ ಅವನು ಕೌಶಿಕನಾಮಧೇಯನಾಗಿದ್ದನು. ಶಿಕ್ಷಾ-ವ್ಯಾಕರಣಾದಿ ಷಡಂಗಗಳಲ್ಲಿ ಅವನಿಗೆ ಪ್ರತ್ಯಕ್ಷಜ್ಞಾನವಿದ್ದಿತು. (ಅಸಾಧಾರಣ ಪಾಂಡಿತ್ಯವಿದ್ದಿತು.) ವೇದಗಳಲ್ಲಿಯೂ ಅವನು ಪಾರಂಗತನಾಗಿದ್ದನು. ಇಂದ್ರಿಯಗಳನ್ನು ಸಂಯಮಗೊಳಿಸಿ ಶ್ರೇಷ್ಠವಾದ ಸಂಹಿತೆಯನ್ನು (ವೇದ ಮಂತ್ರವನ್ನು) ಅರ್ಥಜ್ಞಾನಪೂರ್ವಕವಾಗಿ ಜಪಿಸುತ್ತಾ ಬ್ರಹ್ಮ ಸಂಬಂಧಿಯಾದ ತಪಸ್ಸನ್ನು ಮಾಡುತ್ತಿದ್ದನು. ಹೀಗೆ ನಿಯಮಪೂರ್ವಕವಾಗಿ

---

* ಹಿಂದೆ ಕಾಲ, ಮೃತ್ಯು, ಯಮರ ಮತ್ತು ಇಕ್ಷ್ವಾಕು-ಬ್ರಾಹ್ಮಣರ ವಿವಾದವೇನೂ ಬಂದಿರುವುದಿಲ್ಲ. ಆದುದರಿಂದ ಹಿಂದೆ ಭೀಷ್ಮನು ಈ ವಿಷಯವನ್ನು ಹೇಳಿದ್ದನೆಂದೂ ಅದನ್ನೇ ಪುನಃ ಯುಧಿಷ್ಠಿರನು ಕೇಳಿದನೆಂದೂ ಅರ್ಥಮಾಡಬೇಕಾಗುತ್ತದೆ. ಈ ಶ್ಲೋಕವಿಲ್ಲದಿದ್ದರೂ ಹಿಂದಿನ ಅಧ್ಯಾಯದಿಂದ ಮುಂದಕ್ಕೆ ಪ್ರಸಂಗವು ಹೊಂದಿಕೊಳ್ಳುತ್ತದೆ. ಶ್ಲೋಕವಿಲ್ಲದಿರುವುದೇ ಉಚಿತವಾಗಿಯೂ ಕಾಣುತ್ತದೆ. ಆದರೆ ಎಲ್ಲ ಪಾಠಗಳಲ್ಲಿಯೂ ಈ ಶ್ಲೋಕವಿದೆ.

ಸಂಹಿತಾಜಪದ ತಪಸ್ಸನ್ನು ಮಾಡುತ್ತಾ ಆ ಬ್ರಾಹ್ಮಣನು ಒಂದು ಸಾವಿರ ವರ್ಷಗಳನ್ನು ಕಳೆದನು. ಅನಂತರ ಆ ಬ್ರಾಹ್ಮಣನಿಗೆ ವೇದಮಾತೆಯಾದ ದೇವಿಯು ಪ್ರತ್ಯಕ್ಷಳಾಗಿ ಅವನ ಜಪದ ತಪಸ್ಸಿನಿಂದ ಪ್ರೀತಳಾಗಿರುವುದಾಗಿ ಹೇಳಿದಳು. ಜಪವನ್ನೇ ಆವರ್ತನಮಾಡುತ್ತಿದ್ದ ಬ್ರಾಹ್ಮಣನು ದೇವಿಯೊಡನೆ



ಯಾವ ಮಾತನ್ನೂ ಆಡಲೇ ಇಲ್ಲ. ವೇದಮಾತೆಯಾದ ಸಾವಿತ್ರಿಯು ಆ ಬ್ರಾಹ್ಮಣನ ವಿಷಯದಲ್ಲಿ ಅತ್ಯಂತದಯಾಪೂರ್ಣಳಾಗಿದ್ದಳು. ಆದುದ ರಿಂದಲೇ ಅವಳು ಬ್ರಾಹ್ಮಣನು ಮಾತನಾಡದಿದ್ದರೂ ಅವನ ವಿಷಯದಲ್ಲಿ ಪ್ರಸನ್ನಚಿತ್ತಳೇ ಆದಳು. ಬ್ರಾಹ್ಮಣನು ಮಾಡುತ್ತಿದ್ದ ನಿಯಮಪೂರ್ವಕ ವಾದ ಸಂಹಿತಾಜಪವನ್ನು ಸಾವಿತ್ರೀದೇವಿಯು ಬಹಳವಾಗಿ ಶ್ಲಾಘಿಸಿದಳು.

ಸಂಹಿತಾಜಪವು ಪರಿಸಮಾಪ್ತವಾದೊಡನೆಯೇ ಧರ್ಮಾತ್ಮನಾದ ಆ ಬ್ರಾಹ್ಮಣನು ದೇವಿಯ ಪಾದಗಳಿಗೆ ಶಿರಸ್ಸನ್ನು ಮುಟ್ಟಿಸಿ ಸಾಷ್ಟಾಂಗ ಪ್ರಣಾಮಮಾಡುತ್ತಾ ದೇವಿಯೊಡನೆ ಹೇಳಿದನು :

ದಿಷ್ಟ್ಯಾದೇವಿ ಪ್ರಸನ್ನಾ ತ್ವಂ ದರ್ಶನಂ ಚಾಗತಾ ಮಮ।
ಯದಿ ಚಾಪಿ ಪ್ರಸನ್ನಾಸಿ ಜಪ್ಯೇ ಮೇ ರಮತಾಂ ಮನಃ ॥೧೦॥

"ದೇವಿ! ನನ್ನ ಸೌಭಾಗ್ಯದ ಕಾರಣದಿಂದಲೇ ನೀನು ನನ್ನ ವಿಷಯದಲ್ಲಿ ಪ್ರಸನ್ನಳಾಗಿ ನನಗೆ ದರ್ಶನವನ್ನು ದಯಪಾಲಿಸಿರುವೆ. ನಿಶ್ಚಯವಾಗಿಯೂ ನೀನು ನನ್ನ ವಿಷಯದಲ್ಲಿ ಪ್ರಸನ್ನಳಾಗಿರುವುದೇ ಆದರೆ ನನ್ನ ಮನಸ್ಸು ಯಾವಾಗಲೂ ಜಪರೂಪವಾದ ತಪಸ್ಸಿನಲ್ಲಿಯೇ ರಮಿಸುವಂತೆ ಅನುಗ್ರಹಿಸು."

ವೇದಮಾತೆಯಾದ ಸಾವಿತ್ರಿಯು ಹೇಳುತ್ತಾಳೆ :

ಕಿಂ ಪ್ರಾರ್ಥಯಸಿ ವಿಪ್ರರ್ಷೇ ಕಿಂ ಚೇಷ್ಟಂ ಕರವಾಣಿ ತೇ।
ಪ್ರಬ್ರೂಹಿ ಜಪತಾಂ ಶ್ರೇಷ್ಠ ಸರ್ವಂ ತತ್ತೇ ಭವಿಷ್ಯತಿ ॥೧೧॥

"ವಿಪ್ರರ್ಷಿಯೇ! ನೀನು ಏನನ್ನು ಆಶಿಸುವೆ? ನಿನಗೆ ಯಾವ ವಸ್ತುವನ್ನು ಪಡೆದುಕೊಳ್ಳಬೇಕೆಂಬ ಅಭಿಲಾಷೆಯಿದೆ? ನಾನು ನಿನಗಾಗಿ ಯಾವ ಕಾರ್ಯವನ್ನು ಮಾಡಿಕೊಡಲಿ? ಜಾಪಕರಲ್ಲಿ ಶ್ರೇಷ್ಠನಾದವನೇ! ನಿನ್ನ ಅಭಿಲಾಷೆಯನ್ನು ಹೇಳು. ನಿನ್ನ ಅಭಿಲಾಷೆಗಳೆಲ್ಲವೂ ಒಡನೆಯೇ ಸಿದ್ಧಿಸುವುವು."

ಯುಧಿಷ್ಠಿರ! ಸಾವಿತ್ರಿಯು ಹೀಗೆ ಹೇಳಿದನಂತರ ಧರ್ಮವಿದನಾದ ಆ ಬ್ರಾಹ್ಮಣನು ಪುನಃ ಹಿಂದಿನಂತೆಯೇ ಹೇಳಿದನು : "'**ಜಪ್ಯಂ ಪ್ರತಿಮಮೇಚ್ಛೇಯಂ ವರ್ಧತು**'– 'ಜಪಮಾಡಬೇಕೆನ್ನುವ ನನ್ನ ಇಚ್ಛೆಯು ಕ್ಷಣ-ಕ್ಷಣಕ್ಕೂ ವರ್ಧಿಸುತ್ತಲೇ ಇರಲಿ.' ನನ್ನ ಮನಸ್ಸಿನ ಏಕಾಗ್ರತೆಯು ಕೂಡ ದಿನ-ದಿನಕ್ಕೂ ವರ್ಧಿಸುತ್ತಿರಲಿ. ಮಂಗಳಸ್ವರೂಪಳೇ! ನಾನು ಹೆಚ್ಚು ಕಾಲ ಏಕಾಗ್ರಬುದ್ಧಿಯಿಂದ ಕುಳಿತು ಜಪಮಾಡುವಂತಾಗಲಿ. ಇದನ್ನೇ ನೀನು ಅನುಗ್ರಹಿಸು."

ಬ್ರಾಹ್ಮಣನು ಹೇಳಿದ ಆ ಮಾತನ್ನು ಕೇಳಿ ದೇವಿಯು ಮಧುರವಾದ

ವಾಣಿಯಿಂದ 'ತಥಾಸ್ತು' 'ಹಾಗೆಯೇ ಆಗಲಿ'–ಎಂದಳು. ಬ್ರಾಹ್ಮಣನಿಗೆ ಪ್ರಿಯವನ್ನುಂಟುಮಾಡುವ ಇಚ್ಛೆಯಿಂದ ಕೂಡಿದ್ದ ಸಾವಿತ್ರಿಯು ಬ್ರಾಹ್ಮಣನು ಪ್ರಾರ್ಥಿಸದಿದ್ದರೂ ಮತ್ತೊಂದು ವರವನ್ನೂ ಅವನಿಗೆ ದಯಪಾಲಿಸಿದಳು :

ನಿರಯಂ ನೈವ ಯಾತಾ ತ್ವಂ ಯತ್ರ ಯಾತಾ ದ್ವಿಜರ್ಷಭಾಃ ।
ಯಾಸ್ಯಸಿ ಬ್ರಹ್ಮಣಃ ಸ್ಥಾನಮನಿಮಿತ್ತಮನಿನ್ದಿತಮ್ ।
ಸಾಧಯೇಭವಿತಾ ಚೈತದ್ಯತ್ತ್ವಯಾಹಮಿಹಾರ್ಥಿತಾ ॥೧೫॥

ನಿಯತೋ ಜಪ ಚೈಕಾಗ್ರೋ ಧರ್ಮಸ್ತ್ವಾಂ ಸಮುಪೈಷ್ಯತಿ ।
ಕಾಲೋ ಮೃತ್ಯುರ್ಯಮಶ್ಚೈವ ಸಮಾಯಾಸ್ಯನ್ತಿ ತೇಽನ್ತಿಕಮ್ ।
ಭವಿತಾ ಚ ವಿವಾದೋಽತ್ರ ತವ ತೇಷಾಂ ಚ ಧರ್ಮತಃ ॥೧೬॥

"ವಿಪ್ರೋತ್ತಮ! ದ್ವಿಜಶ್ರೇಷ್ಠರು ತಾವು ಮಾಡುವ ಕಾಮ್ಯಕರ್ಮಗಳ ಫಲವಾಗಿ ಯಾವ ಸ್ವರ್ಗರೂಪವಾದ ಅಧಮಗತಿಗೆ ಹೋಗುವರೋ – ಅದಕ್ಕೆ ನೀನು ಖಂಡಿತವಾಗಿಯೂ ಹೋಗುವುದಿಲ್ಲ. ಸ್ವಭಾವಸಿದ್ಧವಾದ, ದೋಷರಹಿತವಾದ ಪರಬ್ರಹ್ಮನ ಸ್ಥಾನಕ್ಕೇ ನೀನು ಹೋಗುವೆ. ನೀನು ನನ್ನನ್ನು ಪ್ರಾರ್ಥಿಸಿದಂತೆ ಅನವರತವಾಗಿ ಜಪತಪಸ್ಸನ್ನೂ ನೀನು ಮಾಡುವೆ. ನೀನು ಏಕಾಗ್ರಚಿತ್ತನಾಗಿ ಜಪದ ತಪಸ್ಸಿನಲ್ಲಿ ನಿರತನಾಗಿರುವಾಗ ಧರ್ಮನು ನಿನ್ನ ಬಳಿಗೆ ಬರುತ್ತಾನೆ. ಕಾಲ-ಮೃತ್ಯು-ಯಮರೂ ನಿನ್ನ ಸಮೀಪಕ್ಕೆ ಬರುತ್ತಾರೆ. ನಿನಗೂ ಮತ್ತು ಅವರಿಗೂ ಧರ್ಮಾನುಕೂಲವಾದ ವಾದ-ವಿವಾದಗಳು ನಡೆಯುತ್ತವೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಸಾವಿತ್ರೀದೇವಿಯು ಕೌಶಿಕನೊಡನೆ ಹೀಗೆ ಹೇಳಿ ತನ್ನ ಲೋಕಕ್ಕೆ ಹೊರಟುಹೋದಳು. ಬ್ರಾಹ್ಮಣನೂ ದಿವ್ಯಶತವರ್ಷಗಳವರೆಗೆ ಸಂಹಿತಾಜಪವನ್ನು ಮಾಡುತ್ತಲೇ ಇದ್ದನು. ಆ ಸಮಯದಲ್ಲಿ ಆ ಬ್ರಾಹ್ಮಣನು ಜಿತೇಂದ್ರಿಯನಾಗಿದ್ದನು. ಜಿತಕ್ರೋಧನಾಗಿದ್ದನು. ಸತ್ಯಸಂಧನಾಗಿದ್ದನು. ಅಸೂಯಾರಹಿತನಾಗಿದ್ದನು. ಧೀಮಂತನಾದ ಬ್ರಾಹ್ಮಣನ ನಿಯಮವ್ರತಾನುಷ್ಠಾನವು ಮುಗಿದನಂತರ ಅವನ ಜಪತಪಸ್ಸಿನಿಂದ

ಸುಪ್ರೀತನಾದ ಧರ್ಮನು ಬ್ರಾಹ್ಮಣನಿಗೆ ಪ್ರತ್ಯಕ್ಷವಾಗಿಯೇ ದರ್ಶನವನ್ನಿತ್ತು ಬ್ರಾಹ್ಮಣನನ್ನು ಕುರಿತು ಹೇಳಿದನು :

ದ್ವಿಜಾತೇ ಪಶ್ಯ ಮಾಂ ಧರ್ಮಮಹಂ ತ್ವಾಂ ದ್ರಷ್ಟುಮಾಗತಃ ।
ಜಪ್ಯಸ್ಯಾಸ್ಯ ಫಲಂ ಯತ್ತತ್ಸಮ್ಪ್ರಾಪ್ತಂ ತಚ್ಚ ಮೇ ಶೃಣು ॥೨೦॥

"ವಿಪ್ರಶ್ರೇಷ್ಠನೇ! ನನ್ನನ್ನು ನೋಡು. ನಾನು ಧರ್ಮನಾಗಿದ್ದೇನೆ. ನಿನ್ನನ್ನು ಸಂದರ್ಶಿಸಲೆಂದೇ ನಾನು ನಿನ್ನ ಬಳಿಗೆ ಬಂದಿರುತ್ತೇನೆ. ನೀನು ಇದುವರೆಗೂ ಮಾಡಿರುವ ಈ ಜಪತಪಸ್ಸಿನಿಂದ ಯಾವ ಫಲವು ಪ್ರಾಪ್ತವಾಗಿದೆಯೋ ಅದನ್ನು ನನ್ನಿಂದ ಕೇಳುವವನಾಗು.

ಜಿತಾ ಲೋಕಾಸ್ತ್ವಯಾ ಸರ್ವೇ ಯೇ ದಿವ್ಯಾ ಯೇ ಚ ಮಾನುಷಾಃ ।
ದೇವಾನಾಂ ನಿಲಯಾನ್ಸಾಧೋ ಸರ್ವಾನುತ್ಕ್ರಮ್ಯ ಯಾಸ್ಯಸಿ ॥೨೧॥

ಸಾಧುಶೀಲನಾದ ವಿಪ್ರವರನೇ! (ನೀನು ದೇವ-ಮನುಷ್ಯಲೋಕಗಳೆಲ್ಲ ವನ್ನೂ ಜಯಿಸಿರುವೆ.) ನೀನು ಲೋಕಪಾಲರೇ ಮೊದಲಾದ ಎಲ್ಲ ದೇವತೆಗಳ ಲೋಕಗಳನ್ನೂ ಅತಿಕ್ರಮಿಸಿ ಮೇಲೆ ಹೋಗುವೆ.

ಪ್ರಾಣತ್ಯಾಗಂ ಕುರು ಮುನೇ ಗಚ್ಛ ಲೋಕಾನ್ಯಥೇಪ್ಸಿತಾನ್ ।
ತ್ಯಕ್ತ್ವಾತ್ಮನಃ ಶರೀರಂ ಚ ತತೋ ಲೋಕಾನವಾಪ್ಸ್ಯತಿ ॥೨೨॥

ಮುನಿಯೇ! ಈಗ ನೀನು ಪ್ರಾಣಗಳನ್ನು ತ್ಯಾಗಮಾಡಿ ನಿನಗೆ ಇಷ್ಟವಾದ ಲೋಕಗಳಿಗೆ ಹೋಗಬಹುದಾಗಿದೆ. ನೀನು ನಿನ್ನ ಈ ಮಾನುಷಶರೀರವನ್ನು ತ್ಯಾಗಮಾಡಿ ಪುಣ್ಯತಮವಾದ ಅನೇಕಲೋಕಗಳನ್ನು ಹೊಂದುವೆ."

ಕಿಂ ನು ಲೋಕೈರ್ಹಿ ಮೇ ಧರ್ಮ ಗಚ್ಛ ತ್ವಂ ಚ ಯಥಾಸುಖಮ್ ।
ಬಹುದುಃಖಸುಖಂ ದೇಹಂ ನೋತ್ಸೃಜೇಯಮಹಂ ವಿಭೋ ॥೨೩॥

"ಧರ್ಮನೇ! ನೀನು ಹೇಳಿದ ಆ ಲೋಕಗಳಿಂದ ನನಗೇನಾಗಬೇಕಾ ಗಿದೆ? ನೀನು ಸುಖವಾಗಿ ನಿನ್ನ ಸ್ಥಾನಕ್ಕೆ ಹೊರಟುಹೋಗು. ನಾನು ಈ ದೇಹದ ಮೂಲಕವಾಗಿ ಅನೇಕ ದುಃಖಗಳನ್ನೂ ಸುಖಗಳನ್ನೂ ಅನುಭವಿಸಿ

ದ್ದೇನೆ. ಸ್ವಾಮಿಯೇ! ಆದುದರಿಂದ ಈ ದೇಹವನ್ನು ನಾನು ಪರಿತ್ಯಾಗ ಮಾಡುವುದಿಲ್ಲ.”

ಅವಶ್ಯಂ ಭೋಃ ಶರೀರಂ ತೇ ತ್ಯಕ್ತವ್ಯಂ ಮುನಿಪುಙ್ಗವ ।
ಸ್ವರ್ಗಮಾರೋಹ ಭೋ ವಿಪ್ರ ಕಿಂ ವಾ ವೈ ರೋಚತೇऽನಘ ॥

“ಮುನಿಶ್ರೇಷ್ಠನೇ! ನೀನು ಉತ್ತಮಲೋಕಗಳಿಗೆ ಹೋಗಬೇಕಾದರೆ ಈ ಶರೀರವನ್ನು ಪರಿತ್ಯಾಗಮಾಡಲೇಬೇಕು. ಶರೀರವನ್ನು ಪರಿತ್ಯಜಿಸಿ ಸ್ವರ್ಗಾರೋಹಣವನ್ನು ಮಾಡು. ಅಥವಾ ನಿನಗೆ ಬೇರೆ ಯಾವ ಇಚ್ಛೆ ಇದೆಯೆಂಬುದನ್ನಾದರೂ ಹೇಳು.”

ನ ರೋಚಯೇ ಸ್ವರ್ಗವಾಸಂ ವಿನಾ ದೇಹಮಹಂ ವಿಭೋ ।
ಗಚ್ಛ ಧರ್ಮ ನ ಮೇ ಶ್ರದ್ಧಾ ಸ್ವರ್ಗಂ ಗನ್ತುಂ ವಿನಾತ್ಮನಾ ॥೨೫॥

“ವಿಭುವೇ! ಈ ದೇಹವನ್ನು ಬಿಟ್ಟು ಸ್ವರ್ಗದಲ್ಲಿ ವಾಸಮಾಡುವುದು ನನಗೆ ರುಚಿಸುವುದಿಲ್ಲ. ಈ ಶರೀರವಿಲ್ಲದೇ ಸ್ವರ್ಗಕ್ಕೆ ಹೋಗುವುದರಲ್ಲಿ ನನಗೆ ಶ್ರದ್ಧೆಯಿಲ್ಲ. ಆದುದರಿಂದ ನೀನು ಹೊರಟುಹೋಗು.”

ಅಲಂ ದೇಹೇ ಮನಃ ಕೃತ್ವಾ ತ್ಯಕ್ತ್ವಾ ದೇಹಂ ಸುಖೀ ಭವ ।
ಗಚ್ಛ ಲೋಕಾನರಜಸೋ ಯತ್ರ ಗತ್ವಾ ನ ಶೋಚಸಿ ॥೨೬॥

“ದ್ವಿಜೋತ್ತಮ! ದೇಹದಲ್ಲಿ ಮನಸ್ಸಿನ ಆಸಕ್ತಿಯಿರುವುದನ್ನು ಸಾಕು ಮಾಡು. (ನಶ್ವರವಾದ ಈ ದೇಹದಲ್ಲಿ ಆಸಕ್ತಿಯುಳ್ಳವನಾಗಬೇಡ.) ಈ ದೇಹವನ್ನು ತ್ಯಜಿಸಿ ಸುಖಿಯಾಗು. ರಜೋಗುಣದಿಂದ ರಹಿತವಾದ ನಿರ್ಮಲವಾದ ಲೋಕಗಳಿಗೆ ಹೋಗು. ಅಲ್ಲಿಗೆ ಹೋದನಂತರ ನೀನು ಯಾವುದಕ್ಕೂ ಶೋಕಿಸಬೇಕಾಗುವುದಿಲ್ಲ.”

ರಮೇ ಜಪನ್ಮಹಾಭಾಗ ಕಿಂ ನು ಲೋಕೈಃ ಸನಾತನೈಃ ।
ಸಶರೀರೇಣ ಗನ್ತವ್ಯಂ ಮಯಾ ಸ್ವರ್ಗಂ ನ ವಾ ವಿಭೋ ॥೨೭॥

“ಮಹಾಭಾಗನೇ! ನಾನು ಜಪತಪಸ್ಸನ್ನು ಮಾಡುತ್ತಲೇ ಆನಂದ ಪಡುತ್ತೇನೆ. ಸನಾತನವಾದ ಲೋಕಗಳಿಂದ ನನಗೇನಾಗಬೇಕಾಗಿದೆ. ಪ್ರಭುವೇ! ನಾನು ಸಶರೀರನಾಗಿ ಸ್ವರ್ಗಕ್ಕೆ ಹೋಗುವುದೂ ಬೇಡ.”

ಯದಿ ತ್ವಂ ನೇಚ್ಛಸೇ ತ್ಯಕ್ತುಂ ಶರೀರಂ ಪಶ್ಯ ವೈ ದ್ವಿಜ ।
ಏಷ ಕಾಲಸ್ತಥಾ ಮೃತ್ಯುರ್ಯಮಶ್ಚ ತ್ವಾಮುಪಾಗತಾಃ ॥೨೮॥

"ದ್ವಿಜಶ್ರೇಷ್ಠನೇ! ನೀನೇನಾದರೂ ಶರೀರವನ್ನು ತ್ಯಾಗಮಾಡಲು ಇಚ್ಛಿಸುವುದಿಲ್ಲವಾದರೆ – ಶರೀರದಿಂದ ನಿನ್ನನ್ನು ಬೇರ್ಪಡಿಸಿ ಕರೆದೊಯ್ಯುವ ಸಲುವಾಗಿ ಆಗಮಿಸಿರುವ ಕಾಲ, ಮೃತ್ಯು ಮತ್ತು ಯಮರನ್ನು ನೋಡು. ಅವರು ನಿನ್ನ ಬಳಿಗೆ ಬಂದಿರುತ್ತಾರೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಧರ್ಮನು ಹೀಗೆ ಹೇಳುತ್ತಿದ್ದಾಗಲೇ ಯಮ, ಕಾಲ, ಮೃತ್ಯು – ಈ ಮೂವರೂ ಮಹಾಭಾಗ್ಯಶಾಲಿಯಾದ ಆ ಬ್ರಾಹ್ಮಣನ ಸಮೀಪಕ್ಕೆ ಬಂದು ಅವನನ್ನು ಕುರಿತು ಹೇಳಿದರು. ಮೂವರಲ್ಲಿ ಮೊದಲು ಯಮನು ಬ್ರಾಹ್ಮಣನೊಡನೆ ಹೇಳುತ್ತಾನೆ :

ತಪಸೋಽಸ್ಯ ಸುತಪ್ತಸ್ಯ ತಥಾ ಸುಚರಿತಸ್ಯ ಚ ।
ಫಲಪ್ರಾಪ್ತಿಸ್ತವ ಶ್ರೇಷ್ಠಾ ಯಮೋಽಹಂ ತ್ವಾಮುಪಬ್ರುವೇ ॥೩೦॥

"ಬ್ರಾಹ್ಮಣಶ್ರೇಷ್ಠನೇ! ಜಿತೇಂದ್ರಿಯನಾಗಿ, ಜಿತಕ್ರೋಧನಾಗಿ ನೀನು ಮಾಡಿರುವ ಜಪತಪಸ್ಸಿಗೂ, ನಿನ್ನ ಸದಾಚಾರ-ಸದ್ವೃತ್ತಿಗಳಿಗೂ ಅತ್ಯಂತ ಶ್ರೇಷ್ಠವಾದ ಫಲವು ಲಭಿಸಿದೆ. ಯಮರಾಜನಾದ ನಾನು ನಿನಗೆ ಈ ವಿಷಯವನ್ನು ಹೇಳುತ್ತಿದ್ದೇನೆ."

ಅನಂತರ ಕಾಲಪುರುಷನು ಹೇಳುತ್ತಾನೆ :

ಯಥಾವದಸ್ಯ ಜಪ್ಯಸ್ಯ ಫಲಂ ಪ್ರಾಪ್ತಮನುತ್ತಮಮ್ ।
ಕಾಲಸ್ತೇ ಸ್ವರ್ಗಮಾರೋಢುಂ ಕಾಲೋಽಹಂ ತ್ವಾಮುಪಾಗತಃ ॥೩೧॥

"ವಿಪ್ರಶ್ರೇಷ್ಠನೇ! ನೀನು ಮಾಡಿರುವ ಈ ಜಪತಪಸ್ಸಿಗೆ ಉತ್ತಮೋತ್ತಮವಾದ ಫಲವು ಲಭಿಸಿದೆ. ಸ್ವರ್ಗಾರೋಹಣಮಾಡಲು ನಿನಗೆ ಇದು ಸಕಾಲವಾಗಿದೆ. ಇದನ್ನು ತಿಳಿಸುವ ಸಲುವಾಗಿ ಕಾಲಪುರುಷನಾದ ನಾನೇ ಸ್ವತಃ ನಿನ್ನ ಸಮೀಪಕ್ಕೆ ಬಂದಿರುತ್ತೇನೆ."

ಬಳಿಕ ಮೃತ್ಯುವು ಬ್ರಾಹ್ಮಣನಿಗೆ ಹೇಳುತ್ತಾನೆ :

ಮೃತ್ಯುಂ ಮಾಂ ವಿದ್ಧಿ ಧರ್ಮಜ್ಞ ರೂಪಿಣಂ ಸ್ವಯಮಾಗತಮ್।
ಕಾಲೇನ ಚೋದಿತೋ ವಿಪ್ರ ತ್ವಾಮಿತೋ ನೇತುಮದ್ಯ ವೈ ॥೩೨॥

"ಧರ್ಮಜ್ಞನೇ! ನನ್ನನ್ನು ಮೃತ್ಯುವೆಂದು ಭಾವಿಸು. ವಿಪ್ರಶ್ರೇಷ್ಠನೇ! ಕಾಲನಿಂದ ಪ್ರಚೋದಿತನಾದ ನಾನು ನಿನ್ನನ್ನು ಒಯ್ಯುವ ಸಲುವಾಗಿ ಸಶರೀರನಾಗಿಯೇ ನಿನ್ನ ಸಮೀಪಕ್ಕೆ ಬಂದಿರುತ್ತೇನೆ."

ಆ ಮೂವರೂ ಹೇಳಿದ ಮಾತುಗಳನ್ನು ಕೇಳಿದನಂತರ ಬ್ರಾಹ್ಮಣನು ಹೇಳುತ್ತಾನೆ :

ಸ್ವಾಗತಂ ಸೂರ್ಯಪುತ್ರಾಯ ಕಾಲಾಯ ಚ ಮಹಾತ್ಮನೇ।
ಮೃತ್ಯವೇ ಚಾಥ ಧರ್ಮಾಯ ಕಿಂ ಕಾರ್ಯಂ ಕರವಾಣಿ ವಃ ॥೩೩॥

"ಸೂರ್ಯಪುತ್ರನಾದ ಯಮನಿಗೆ ಸ್ವಾಗತವನ್ನು ಬಯಸುತ್ತೇನೆ! ಮಹಾತ್ಮನಾದ ಕಾಲನಿಗೂ ಸ್ವಾಗತವನ್ನು ಬಯಸುತ್ತೇನೆ! ಅಂತೆಯೇ ಮೃತ್ಯುವಿಗೂ ಮತ್ತು ಧರ್ಮನಿಗೂ ಸ್ವಾಗತವನ್ನು ಕೋರುತ್ತೇನೆ! ನಿಮ್ಮೆಲ್ಲರಿಗೂ ನಾನು ಯಾವ ಕಾರ್ಯವನ್ನು ಮಾಡಿಕೊಡಬೇಕೆಂಬುದನ್ನು ಹೇಳಿರಿ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ವಿಪ್ರರ್ಷಿಯು ನಾಲ್ವರನ್ನೂ ಸ್ವಾಗತಿಸಿದನಂತರ ಅವರೆಲ್ಲರಿಗೂ ಅರ್ಘ್ಯ-ಪಾದ್ಯಾದಿಗಳನ್ನಿತ್ತು ಯಥಾಯೋಗ್ಯವಾಗಿ ಸತ್ಕರಿಸಿ ಪರಮಪ್ರೀತನಾಗಿ ಅವರನ್ನು ಕುರಿತು ಹೇಳಿದನು : "**ಸ್ವಶಕ್ತ್ಯಾ ಕಿಂ ಕರೋಮಿ ವಃ?**– ದೇವತೆಗಳೇ! ನನ್ನ ಶಕ್ತಿಗೆ ಅನುಸಾರವಾಗಿ ಯಾವ ಕಾರ್ಯವನ್ನು ನಿಮಗೆ ಮಾಡಿಕೊಡಲಿ?"

ಯುಧಿಷ್ಠಿರ! ಅದೇ ಸಮಯಕ್ಕೆ ಸರಿಯಾಗಿ ತೀರ್ಥಯಾತ್ರೆಯ ಸಲುವಾಗಿ ಹೊರಟಿದ್ದ ಇಕ್ಷ್ವಾಕುರಾಜನೂ–ಧರ್ಮ, ಯಮ, ಕಾಲ, ಮೃತ್ಯುಗಳು ಸೇರಿದ್ದ ಬ್ರಾಹ್ಮಣನ ಆ ತಪೋಭೂಮಿಗೇ ಆಗಮಿಸಿದನು.

ರಾಜರ್ಷಿಯಾದ ಇಕ್ಷ್ವಾಕುವು ಎಲ್ಲರಿಗೂ ಪ್ರಣಾಮಗಳನ್ನು ಮಾಡಿ ಅವರೆಲ್ಲರನ್ನೂ ಯಥಾಯೋಗ್ಯವಾಗಿ ಸಂಪೂಜಿಸಿ ಎಲ್ಲರ ಕ್ಷೇಮ-ಸಮಾಚಾರಗಳನ್ನೂ ಪ್ರಶ್ನಿಸಿದನು. ತನ್ನ ತಪೋಭೂಮಿಗೆ ಆಗಮಿಸಿದ ರಾಜನಿಗೆ ಬ್ರಾಹ್ಮಣನು ಆಸನವನ್ನು ಕೊಟ್ಟು, ಅರ್ಘ್ಯ-ಪಾದ್ಯಾದಿಗಳಿಂದ ಯಥಾಯೋಗ್ಯವಾಗಿ ಸತ್ಕರಿಸಿ, ರಾಜ್ಯದ ಸಂಬಂಧವಾಗಿ ಕುಶಲಪ್ರಶ್ನೆಗಳನ್ನು ಮಾಡಿದನಂತರ ಈ ಮಾತುಗಳನ್ನು ಹೇಳಿದನು :

ಸ್ವಾಗತಂ ತೇ ಮಹಾರಾಜ ಬ್ರೂಹಿ ಯದ್ಯದಿಹೇಚ್ಛಸಿ।
ಸ್ವಶಕ್ತ್ಯಾ ಕಿಂ ಕರೋಮೀಹ ತದ್ಭವಾನ್ಪ್ರಬ್ರವೀತು ಮಾಮ್ ॥೩೮॥

"ಮಹಾರಾಜ! ನಿನಗೆ ಸ್ವಾಗತವನ್ನು ಕೋರುತ್ತೇನೆ. ನಿನಗೆ ಇಲ್ಲಿ ಏನೇನು ಬೇಕಾಗಿದೆಯೋ ಹೇಳು. ನಾನು ನನ್ನ ಶಕ್ತಿಗೆ ಅನುಸಾರವಾಗಿ ಯಾವ ಕಾರ್ಯವನ್ನು ನಿನಗೆ ಮಾಡಿಕೊಡಲಿ? ಈ ವಿಷಯವನ್ನು ನನ್ನೊಡನೆ ಹೇಳು."

ರಾಜಾಹಂ ಬ್ರಾಹ್ಮಣಶ್ಚ ತ್ವಂ ಯದಾ ಷಟ್ಕರ್ಮಸಂಸ್ಥಿತಃ।
ದದಾನಿ ವಸು ಕಿಂಚಿತ್ತೇ ಪ್ರಥಿತಂ ತದ್ವದಸ್ವ ಮೇ ॥೩೯॥

"ವಿಪ್ರೋತ್ತಮ! ನಾನು ರಾಜನಾಗಿದ್ದೇನೆ. ನೀನು ಷಟ್ಕರ್ಮನಿರತನಾದ ಬ್ರಾಹ್ಮಣನಾಗಿರುವೆ. ಆದುದರಿಂದ ನಾನೇ ನಿನಗೆ ಕಿಂಚಿದ್ಧನವನ್ನು ಕೊಡಲು ಅಪೇಕ್ಷಿಸಿದ್ದೇನೆ. ಪ್ರಸಿದ್ಧವಾದ ಯಾವ ಧನವು ನಿನಗೆ ಅಪೇಕ್ಷಿತವಾಗಿರುವುದೆಂಬುದನ್ನು ಹೇಳು."

ದ್ವಿವಿಧಾ ಬ್ರಾಹ್ಮಣಾ ರಾಜನ್ಧರ್ಮಶ್ಚ ದ್ವಿವಿಧಃ ಸ್ಮೃತಃ।
ಪ್ರವೃತ್ತಾಶ್ಚ ನಿವೃತ್ತಾಶ್ಚ ನಿವೃತ್ತೋಽಹಂ ಪ್ರತಿಗ್ರಹಾತ್ ॥೪೦॥

"ಮಹಾರಾಜ! ಬ್ರಾಹ್ಮಣರು ಪ್ರವೃತ್ತ-ನಿವೃತ್ತರೆಂದು ಎರಡು ಪ್ರಕಾರವಾಗಿರುತ್ತಾರೆ. ಧರ್ಮವೂ ಪ್ರವೃತ್ತಿ ಮತ್ತು ನಿವೃತ್ತಿ ಎಂದು ಎರಡು ಪ್ರಕಾರವಾಗಿದೆ. ನಾನು ನಿವೃತ್ತಿಧರ್ಮವನ್ನು ಆಶ್ರಯಿಸಿರುತ್ತೇನೆ. ನಾನು ಪ್ರತಿಗ್ರಹದಿಂದ ನಿವೃತ್ತನಾಗಿರುವ ಬ್ರಾಹ್ಮಣನು.

ತೇಭ್ಯಃ ಪ್ರಯಚ್ಛ ದಾನಾನಿ ಯೇ ಪ್ರವೃತ್ತಾ ನರಾಧಿಪ।

ಅಹಂ ನ ಪ್ರತಿಗೃಹ್ಣಾಮಿ ಕಿಮಿಷ್ಟಂ ಕಿಂ ದದಾಮಿ ತೇ।
ಬ್ರೂಹಿ ತ್ವಂ ನೃಪತಿಶ್ರೇಷ್ಠ ತಪಸಾ ಸಾಧಯಾಮಿ ಕಿಮ್ ॥೪೧॥

ನರಾಧಿಪನೇ! ಪ್ರವೃತ್ತಿಮಾರ್ಗವನ್ನು ಆಶ್ರಯಿಸಿರುವ ಬ್ರಾಹ್ಮಣರಿಗೆ ನೀನು ದಾನಗಳನ್ನು ಕೊಡು. ನಾನು ಮಾತ್ರ ನಿನ್ನಿಂದ ದಾನವನ್ನು ಪ್ರತಿಗ್ರಹಿಸುವುದಿಲ್ಲ. ಈ ಸಮಯದಲ್ಲಿ ನಿನಗೆ ಇಷ್ಟವಾದ ವಸ್ತುವಾವುದು? ತಿಳಿಸು. ನೃಪತಿಶ್ರೇಷ್ಠನೇ! ತಪಸ್ಸಿನ ಮೂಲಕವಾಗಿ ನಿನ್ನ ಯಾವ ಕಾರ್ಯವನ್ನು ಸಾಧಿಸಿಕೊಡಲಿ?"

ಕ್ಷತ್ರಿಯೋಽಹಂ ನ ಜಾನಾಮಿ ದೇಹೀತಿ ವಚನಂ ಕ್ವಚಿತ್।
ಪ್ರಯಚ್ಛ ಯುದ್ಧಮಿತ್ಯೇವಂವಾದಿನಃ ಸ್ಮೋ ದ್ವಿಜೋತ್ತಮ ॥೪೨॥

"ದ್ವಿಜಶ್ರೇಷ್ಠನೇ! ನಾನು ಕ್ಷತ್ರಿಯನಾಗಿದ್ದೇನೆ. 'ದೇಹಿ' 'ಕೊಡು' – ಎಂಬ ಪದವನ್ನೇ ನಾನು ತಿಳಿಯದವನಾಗಿದ್ದೇನೆ. ಕ್ಷತ್ರಿಯರಾದ ನಾವು ಯುದ್ಧದ ವಿಷಯದಲ್ಲಿ ಮಾತ್ರವೇ ಪ್ರಯಚ್ಛ-ದೇಹಿ – ಎಂಬ ಪದಗಳನ್ನು ಉಪಯೋಗಿಸುತ್ತೇವೆ. ನಾವು ಇತರರಿಂದ ಅಪೇಕ್ಷಿಸುವುದು ಯುದ್ಧವೊಂದನ್ನೇ."

ತುಷ್ಯಸಿ ತ್ವಂ ಸ್ವಧರ್ಮೇಣ ತಥಾ ತುಷ್ಟಾ ವಯಂ ನೃಪ।
ಅನ್ಯೋನ್ಯಸ್ಯಾನ್ತರಂ ನಾಸ್ತಿ ಯದಿಷ್ಟಂ ತತ್ಸಮಾಚರ ॥೪೩॥

"ಮಹಾರಾಜ! ನಾವು ನಮ್ಮ ಧರ್ಮದಿಂದ ಸಂತುಷ್ಟರಾಗಿರುವಂತೆ ನೀನು ನಿನ್ನ ಧರ್ಮದಿಂದ ಸಂತುಷ್ಟನಾಗಿರುವೆ. ನಮ್ಮಿಬ್ಬರಲ್ಲಿ ಯಾವ ವಿಧವಾದ ಅಂತರವೂ ಇರುವುದಿಲ್ಲ. ನಿನಗೆ ಯಾವುದು ಇಷ್ಟವೋ ಅದನ್ನೇ ಮಾಡು."

ಸ್ವಶಕ್ತ್ಯಾಹಂ ದದಾನೀತಿ ತ್ವಯಾ ಪೂರ್ವಮುದಾಹೃತಮ್।
ಯಾಚೇ ತ್ವಾಂ ದೀಯತಾಂ ಮಹ್ಯಂ ಜಪ್ಯಸ್ಯಾಸ್ಯ ಫಲಂ ದ್ವಿಜ ॥೪೪॥

"ದ್ವಿಜಸತ್ತಮನೇ! ಈ ಹಿಂದೆ ನೀನು ಸ್ವಶಕ್ತಿಗೆ ಅನುಸಾರವಾಗಿ ದಾನ ಕೊಡುವೆನೆಂದು ಹೇಳಿದೆಯಲ್ಲವೇ? ಆ ನಿನ್ನ ಮಾತಿಗೆ ಅನುಸಾರವಾಗಿ

ನಿನ್ನ ಜಪದ ಫಲವನ್ನು ನಾನು ಯಾಚಿಸುತ್ತಿದ್ದೇನೆ. ಆ ಮಹಾಫಲವನ್ನು ನನಗೆ ದಾನಕೊಡು.”

ಯುದ್ಧಂ ಮಮ ಸದಾ ವಾಣೀ ಯಾಚತೀತಿ ವಿಕತ್ಥಸೇ।
ನ ಚ ಯುದ್ಧಂ ಮಯಾ ಸಾರ್ಧಂ ಕಿಮರ್ಥಂ ಯಾಚಸೇ ಪುನಃ॥

“ರಾಜನೇ! ನನ್ನ ಮಾತು ಯಾವಾಗಲೂ ಯುದ್ಧವನ್ನೇ ಯಾಚಿಸುವುದೆಂದೂ, ಬೇರೆ ಯಾವುದನ್ನೂ ಯಾಚಿಸುವುದಿಲ್ಲವೆಂದೂ–ಈಗ ತಾನೇ ಆತ್ಮಪ್ರಶಂಸೆಯನ್ನು ಮಾಡಿಕೊಂಡಿರುವೆ. ಅಂತಹ ನೀನು ನನ್ನೊಡನೆಯೂ ಯುದ್ಧವನ್ನೇ ಏಕೆ ಯಾಚಿಸುವುದಿಲ್ಲ?”

ವಾಗ್ವಜ್ರಾ ಬ್ರಾಹ್ಮಣಾಃ ಪ್ರೋಕ್ತಾಃ ಕ್ಷತ್ರಿಯಾ ಬಾಹುಜೀವಿನಃ।
ವಾಗ್ಯುದ್ಧಂ ತದಿದಂ ತೀವ್ರಂ ಮಮ ವಿಪ್ರ ತ್ವಯಾ ಸಹ ॥೪೬॥

“ವಿಪ್ರಶ್ರೇಷ್ಠನೇ! ಬ್ರಾಹ್ಮಣರಿಗೆ ವಾಣಿಯೇ ವಜ್ರಾಯುಧವೆಂದು ಹೇಳುತ್ತಾರೆ. ಕ್ಷತ್ರಿಯರು ಯಾವಾಗಲೂ ಯುದ್ಧಜೀವಿಗಳಾಗಿರುತ್ತಾರೆ. ಈ ಕಾರಣದಿಂದಲೇ ನಿನಗೂ ಮತ್ತು ನನಗೂ ತೀವ್ರವಾದ ವಾಗ್ಯುದ್ಧವೇ ಪ್ರಾರಂಭವಾಗಿಬಿಟ್ಟಿದೆ.”

ಸೈವಾದ್ಯಾಪಿ ಪ್ರತಿಜ್ಞಾ ಮೇ ಸ್ವಶಕ್ತ್ಯಾ ಕಿಂ ಪ್ರದೀಯತಾಮ್।
ಬ್ರೂಹಿ ದಾಸ್ಯಾಮಿ ರಾಜೇಂದ್ರ ವಿಭವೇ ಸತಿ ಮಾ ಚಿರಮ್ ॥೪೭॥

“ನಾನು ಈ ಹಿಂದೆ ಮಾಡಿದ ಪ್ರತಿಜ್ಞೆಯು ಈಗಲೂ ಜೀವಂತವಾಗಿಯೇ ಇದೆ. ನನ್ನ ಶಕ್ತಿಗೆ ಅನುಸಾರವಾಗಿ ನಾನು ಏನನ್ನು ನಿನಗೆ ಕೊಡಲಿ? ಹೇಳು ರಾಜೇಂದ್ರ! ಸಾವಕಾಶಮಾಡಬೇಡ. ನನಗೆ ಶಕ್ತಿಯಿರುತ್ತಿರಲಾಗಿ ನೀನು ಕೇಳಿದುದನ್ನು ಕೊಡುತ್ತೇನೆ.”

ತತ್ತದ್ವರ್ಷಶತಂ ಪೂರ್ಣಂ ಜಪ್ಯಂ ವೈ ಜಪತಾ ತ್ವಯಾ।
ಫಲಂ ಪ್ರಾಪ್ತಂ ತತ್ಪ್ರಯಚ್ಛ ಮಮ ದಿತ್ಸುರ್ಭವಾನ್ಯದಿ ॥೪೮॥

“ಮುನಿಯೇ! ನಾನು ಕೇಳಿದುದನ್ನು ನಿನ್ನ ಶಕ್ತಿಗೆ ಅನುಸಾರವಾಗಿ ಕೊಡುವ ಇಚ್ಛೆಯುಳ್ಳವನಾಗಿದ್ದರೆ–ನೂರು ವರ್ಷಗಳ ಪರ್ಯಂತವಾಗಿ ಜಪವನ್ನು ಮಾಡುತ್ತಾ ನೀನು ಯಾವ ಫಲವನ್ನು ಗಳಿಸಿರುವೆಯೋ ಆ ಸಂಪೂರ್ಣಫಲವನ್ನು ನನಗೆ ಪ್ರದಾನಮಾಡು.”

ಪರಮಂ ಗೃಹ್ಯತಾಂ ತಸ್ಯ ಫಲಂ ಯಜ್ಜಪಿತಂ ಮಯಾ।
ಅರ್ಧಂ ತ್ವಮವಿಚಾರೇಣ ಫಲಂ ತಸ್ಯ ಹ್ಯವಾಪ್ನುಹಿ ॥೪೯॥

ಅಥವಾ ಸರ್ವಮೇವೇಹ ಮಾಮಕಂ ಜಾಪಕಂ ಫಲಮ್।
ರಾಜನ್ಪ್ರಾಪ್ನುಹಿ ಕಾಮಂ ತ್ವಂ ಯದಿ ಸರ್ವಮಿಹೇಚ್ಛಸಿ ॥೫೦॥

"ಮಹಾರಾಜ! ನಾನು ಯಾವ ಬ್ರಹ್ಮಸಂಹಿತಾಜಪವನ್ನು ಮಾಡಿರುವೆನೋ ಅದರ ಶ್ರೇಷ್ಠವಾದ ಫಲವನ್ನು ಪರಿಗ್ರಹಿಸು. ಯಾವುದನ್ನೂ ವಿಮರ್ಶಿಸದೇ ನೀನು ನನ್ನ ಜಪದ ಫಲದಲ್ಲಿ ಅರ್ಧಭಾಗವನ್ನು ಪಡೆದುಕೊಳ್ಳುವೆ ಅಥವಾ ನನ್ನ ಜಪದ ಸಂಪೂರ್ಣಫಲವನ್ನೇ ಪಡೆದುಕೊಳ್ಳಲು ಇಚ್ಛಿಸುವೆಯಾದರೆ ಸಂಪೂರ್ಣಫಲವನ್ನೂ ನಿನ್ನ ಇಚ್ಛೆಯಂತೆಯೇ ಪಡೆದುಕೊಳ್ಳುವೆ."

ಕೃತಂ ಸರ್ವೇಣ ಭದ್ರಂ ತೇ ಜಪ್ಯಂ ಯದ್ಯಾಚಿತಂ ಮಯಾ।
ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಕಿಞ್ಚ ತಸ್ಯ ಫಲಂ ವದ ॥೫೧॥

"ದ್ವಿಜಸತ್ತಮ! ನಾನು ನಿನ್ನ ಜಪದ ಯಾವ ಫಲವನ್ನು ಯಾಚಿಸಿದೆನೋ–ಆ ಫಲವನ್ನು ನಾನು ಪಡೆದುಕೊಂಡೆನು. ನಿನಗೆ ಮಂಗಳವಾಗಲಿ! ನಿನಗೆ ಕಲ್ಯಾಣವಾಗಲಿ! ನಾನಿನ್ನು ಹೋಗಿಬರುತ್ತೇನೆ. ಆದರೆ ನೀನು ಮಾಡಿರುವ ಜಪಕ್ಕೆ ಫಲವೇನೆಂಬುದನ್ನು ವಿವರಿಸಿ ಹೇಳು."

ಫಲಪ್ರಾಪ್ತಿಂ ನ ಜಾನಾಮಿ ದತ್ತಂ ಯಜ್ಜಪಿತಂ ಮಯಾ।
ಅಯಂ ಧರ್ಮಶ್ಚ ಕಾಲಶ್ಚ ಯಮೋ ಮೃತ್ಯುಶ್ಚ ಸಾಕ್ಷಿಣಃ ॥೫೨॥

"ಜಪಫಲದ ಪ್ರಯೋಜನವೇನೆಂಬುದು ನನಗೆ ತಿಳಿಯದು. ನಾನು ಮಾಡಿದ ಜಪದ ಫಲವನ್ನೆಲ್ಲಾ ನಿನಗೆ ಕೊಟ್ಟುಬಿಟ್ಟಿದ್ದೇನೆ. ಇದಕ್ಕೆ ಧರ್ಮ-ಕಾಲ-ಯಮ-ಮೃತ್ಯುಗಳೇ ಸಾಕ್ಷಿಗಳಾಗಿದ್ದಾರೆ."

ಅಜ್ಞಾತಮಸ್ಯ ಧರ್ಮಸ್ಯ ಫಲಂ ಕಿಂ ಮೇ ಕರಿಷ್ಯತಿ।
ಫಲಂ ಬ್ರವೀಷಿ ಧರ್ಮಸ್ಯ ನ ಚೇಜ್ಜಪ್ಯಕೃತಸ್ಯ ಮಾಮ್।
ಪ್ರಾಪ್ನೋತು ತತ್ಫಲಂ ವಿಪ್ರೋ ನಾಹಮಿಚ್ಛೇ ಸಸಂಶಯಮ್ ॥೫೩॥

"ವಿಪ್ರೋತ್ತಮ! ನೀನು ಮಾಡಿರುವ ಜಪದಿಂದ ಪ್ರಾಪ್ತವಾಗುವ

ಪುಣ್ಯದ ಪ್ರಯೋಜನವನ್ನು ಹೇಳದಿದ್ದರೆ–ಅಜ್ಞಾತವಾದ ಆ ಜಪಫಲವು ನನಗೇನು ಮಾಡಬಲ್ಲುದು? ಬ್ರಾಹ್ಮಣನೇ ಆ ಫಲವನ್ನು ಹೊಂದಲಿ. (ಜಪದ ಫಲವು ನಿನ್ನಲ್ಲಿಯೇ ಇರಲಿ.) ಸಂಶಯಯುಕ್ತವಾದ ಪ್ರಯೋಜನದಿಂದ ಕೂಡಿರುವ ಜಪಫಲವನ್ನು ನಾನು ಇಚ್ಛಿಸುವುದಿಲ್ಲ.”

ನಾದದೇಽಪರವಕ್ತವ್ಯಂ ದತ್ತಂ ಚಾಸ್ಯ ಫಲಂ ಮಯಾ।
ವಾಕ್ಯಂ ಪ್ರಮಾಣಂ ರಾಜರ್ಷೇ ಮಮಾದ್ಯ ತವ ಚೈವ ಹಿ ॥೫೪॥

“ಮಹಾರಾಜ! ನಾನು ನನ್ನ ಜಪದ ಫಲವನ್ನು ನಿನಗೇ ಕೊಟ್ಟು ಬಿಟ್ಟಿದ್ದೇನೆ. ಬೇರೆ ಯಾವ ಮಾತನ್ನೂ ನಾನೀಗ ಅಂಗೀಕರಿಸುವುದಿಲ್ಲ. ಈ ವಿಷಯದಲ್ಲಿ ನನ್ನ ಮತ್ತು ನಿನ್ನ ಮಾತುಗಳೇ ಪ್ರಮಾಣರೂಪವಾಗಿವೆ. (ನನ್ನ ಮಾತಿನಂತೆ ನಾನು ನಡೆದುಕೊಂಡಿರುತ್ತೇನೆ. ನಿನ್ನ ಮಾತಿನಂತೆ ನೀನು ನಡೆದುಕೊಳ್ಳುವುದು ಯುಕ್ತವಾಗಿದೆ.)

ನಾಭಿಸಂಧಿರ್ಮಯಾ ಜಪ್ಯೇ ಕೃತಪೂರ್ವಃ ಕದಾಚನ।
ಜಪ್ಯಸ್ಯ ರಾಜಶಾರ್ದೂಲ ಕಥಂ ವೇತ್ಸ್ಯಾಮ್ಯಹಂ ಫಲಮ್ ॥೫೫॥

ರಾಜಶ್ರೇಷ್ಠನೇ! ನಾನು ಜಪಮಾಡುವ ಸಮಯದಲ್ಲಿ ಯಾವುದೇ ಕಾಮನೆಯ ಉದ್ದೇಶವನ್ನೂ ಈ ಹಿಂದೆ ಹೊಂದಿದವನಾಗಿರಲಿಲ್ಲ. (ಜಪಮಾಡುವುದರಲ್ಲಿಯೇ ನನಗೆ ಪರಮಾನಂದವಾಗುತ್ತಿದ್ದುದರಿಂದ ಜಪಮಾಡುತ್ತಿದ್ದೆನು.) ಹೀಗಿರುವಾಗ ನಾನು ಮಾಡಿರುವ ಜಪಕ್ಕೆ ಫಲವೇನೆಂಬುದನ್ನು ತಿಳಿಯಲು ನನಗೆ ಹೇಗೆ ಸಾಧ್ಯವಾದೀತು?

ದದಸ್ವೇತಿ ತ್ವಯಾ ಪ್ರೋಕ್ತಂ ದದಾನೀತಿ ಮಯಾ ತಥಾ।
ನ ವಾಚಂ ದೂಷಯಿಷ್ಯಾಮಿ ಸತ್ಯಂ ರಕ್ಷ ಸ್ಥಿರೋ ಭವ ॥೫೬॥

ನೀನು ‘ಜಪದ ಫಲವನ್ನು ಕೊಡು’–ಎಂದು ನನ್ನನ್ನು ಯಾಚಿಸಿದೆ. ‘ನನ್ನ ಜಪದ ಫಲವನ್ನೆಲ್ಲವನ್ನೂ ಕೊಡುತ್ತೇನೆ’–ಎಂದು ನಾನು ಹೇಳಿದೆನು. ನಾನು ಹೇಳಿದ ಮಾತನ್ನು ಸುಳ್ಳಾಗಿಸಲು ನಾನು ಇಷ್ಟಪಡುವುದಿಲ್ಲ. ಅದೇ ರೀತಿಯಲ್ಲಿ ನೀನು ಸತ್ಯದ ರಕ್ಷಣೆಯನ್ನು ಮಾಡು. ನಿನ್ನ ಮಾತಿನಲ್ಲಿ ಸುಸ್ಥಿರನಾಗಿರು.

ಅಥೈವಂ ವದತೋ ಮೇಽದ್ಯ ವಚನಂ ನ ಕರಿಷ್ಯಸಿ ।
ಮಹಾನಧರ್ಮೋ ಭವಿತಾ ತವ ರಾಜನ್ಮೃಷಾಕೃತಃ ॥೫೭॥

ಹೀಗೆ ಸ್ಪಷ್ಟವಾಗಿ ಹೇಳುತ್ತಿರುವ ನನ್ನ ಮಾತಿನಂತೆ ನೀನು ನಡೆದುಕೊಳ್ಳದಿದ್ದರೆ– ಅಸತ್ಯದ ಕಾರಣದಿಂದಾಗಿ ನಿನಗೆ ಮಹಾಪಾಪವು ಪ್ರಾಪ್ತವಾಗುತ್ತದೆ.

ನ ಯುಕ್ತಂ ತು ಮೃಷಾ ವಾಣೀ ತ್ವಯಾ ವಕ್ತುಮರಿನ್ದಮ ।
ತಥಾ ಮಯಾಪ್ಯಭಿಹಿತಂ ಮಿಥ್ಯಾಕರ್ತುಂ ನ ಶಕ್ಯತೇ ॥೫೮॥

ಅರಿಂದಮನೇ! ನಿನ್ನಂತಹವನು ಸುಳ್ಳನ್ನಾಡುವುದು ಯುಕ್ತವಾಗಿ ಕಾಣುವುದಿಲ್ಲ. ನಾನು ಹೇಳಿರುವುದನ್ನು ಸುಳ್ಳನ್ನಾಗಿಸಲು ಸಾಧ್ಯವೇ ಇಲ್ಲ.

ಸಂಶ್ರುತಂ ಚ ಮಯಾ ಪೂರ್ವಂ ದದಾನೀತ್ಯವಿಚಾರಿತಮ್ ।
ತದ್ಗೃಹ್ಣೀಷ್ವಾವಿಚಾರೇಣ ಯದಿ ಸತ್ಯೇ ಸ್ಥಿತೋ ಭವಾನ್ ॥೫೯॥

ನಾನು ಸ್ವಲ್ಪವಾದರೂ ವಿಚಾರಮಾಡದೆಯೇ ಜಪದ ಫಲವನ್ನು ಕೊಟ್ಟುಬಿಡುವೆನೆಂದು ಪ್ರತಿಜ್ಞೆಯನ್ನು ಮಾಡಿಬಿಟ್ಟೆನು. ನೀನು ಸತ್ಯದಲ್ಲಿಯೇ ನಿಷ್ಠೆಯುಳ್ಳವನಾಗಿದ್ದರೆ–ಯಾವುದೊಂದನ್ನೂ ವಿಚಾರಮಾಡದೆ ನಾನು ಮಾಡಿರುವ ಜಪದ ಫಲವನ್ನು ಪ್ರತಿಗ್ರಹಿಸು.

ಇಹಾಗಮ್ಯ ಹಿ ಮಾಂ ರಾಜಞ್ಜಾಪ್ಯಂ ಫಲಮಯಾಚಥಾಃ ।
ತನ್ಮೇ ನಿಸೃಷ್ಟಂ ಗೃಹ್ಣೀಷ್ವ ಭವ ಸತ್ಯೇ ಸ್ಥಿರೋಽಪಿ ಚ ॥೬೦॥

ಮಹಾರಾಜ! ನೀನೇ ನನ್ನ ಬಳಿಗೆ ಬಂದು ನನ್ನಿಂದ ಜಪದ ಫಲವನ್ನು ಯಾಚಿಸಿದೆ. ಒಡನೆಯೇ ನಾನು ಆ ಜಪದ ಫಲವನ್ನು ನಿನಗೆ ಕೊಟ್ಟು ಬಿಟ್ಟಿದ್ದೇನೆ. ಅದನ್ನೀಗಲೇ ಪ್ರತಿಗ್ರಹಿಸು. ಸತ್ಯದಲ್ಲಿ ಸ್ಥಿರನಾಗಿ ನಿಲ್ಲು.

ನಾಯಂ ಲೋಕೋಽಸ್ತಿ ನ ಪರೋ ನ ಚ ಪೂರ್ವಾನ್ಸ ತಾರಯೇತ್
ಕುತ ಏವ ಜನಿಷ್ಯಾಂಸ್ತು ಮೃಷಾವಾದಪರಾಯಣಃ ॥೬೧॥

ಸುಳ್ಳನ್ನೇ ಆಶ್ರಯಿಸುವವನಿಗೆ ಈ ಲೋಕದಲ್ಲಿಯೂ ಸುಖವಿರುವು

ದಿಲ್ಲ. ಪರಲೋಕವೂ ಲಭಿಸುವುದಿಲ್ಲ. ತನ್ನ ಪೂರ್ವಜರನ್ನೇ ಅವನು (ನರಕದಿಂದ) ಪಾರುಮಾಡಲಾರನು. ಹೀಗಿರುವಾಗ ಮುಂದಿನ ಸಂತತಿಯನ್ನು ಹೇಗೆ ತಾನೇ ಉದ್ಧರಿಸುವನು? (ಸುಳ್ಳುಹೇಳುವವನು ಸರ್ವಥಾ ಪತಿತನಾಗುತ್ತಾನೆ.)

ನ ಯಜ್ಞಾಧ್ಯಯನೇ ದಾನಂ ನಿಯಮಾಸ್ತಾರಯನ್ತಿ ಹಿ ।
ಯಥಾ ಸತ್ಯಂ ಪರೇ ಲೋಕೇ ತಥೇಹ ಪುರುಷರ್ಷಭ ॥೬೨॥

ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಸತ್ಯವು ಜೀವಿಗಳನ್ನು ಉದ್ಧರಿಸುವಂತೆ ಯಜ್ಞಾಧ್ಯಯನ-ದಾನ-ನಿಯಮಾನುಷ್ಠಾನಗಳೂ ಜೀವಿಗಳನ್ನು ಉದ್ಧರಿಸಲಾರವು.

ತಪಾಂಸಿ ಯಾನಿ ಚೀರ್ಣಾನಿ ಚರಿಷ್ಯನ್ತಿ ಚ ಯತ್ತಪಃ ।
ಶತೈಃ ಶತಸಹಸ್ರೈಶ್ಚ ತೈಃ ಸತ್ಯಾನ್ನ ವಿಶಿಷ್ಯತೇ ॥೬೩॥

ಲೋಕದಲ್ಲಿ ಜನರು ಈವರೆಗೆ ಎಷ್ಟು ತಪಸ್ಸುಗಳನ್ನು ಮಾಡಿರುವರೋ–ಮುಂದೆ ಎಷ್ಟು ತಪಸ್ಸುಗಳನ್ನು ಮಾಡುವರೋ–ಅಂತಹ ಅಪಾರವಾದ ತಪಸ್ಸುಗಳ ಅನೇಕಶತಗಳಷ್ಟು ಅಥವಾ ಲಕ್ಷಗಳಷ್ಟು ತಪಸ್ಸುಗಳನ್ನು ಒಟ್ಟಾಗಿ ಸೇರಿಸಿದರೂ ಸತ್ಯಕ್ಕಿಂತಲೂ ಅದು ಅತಿಶಯವೆನಿಸುವುದಿಲ್ಲ. (ಅಪಾರವಾದ ತಪಸ್ಸಿಗಿಂತಲೂ ಸತ್ಯನಿಷ್ಠೆಯೇ ಶ್ರೇಷ್ಠವಾದುದು.)

ಸತ್ಯಮೇಕಾಕ್ಷರಂ ಬ್ರಹ್ಮ ಸತ್ಯಮೇಕಾಕ್ಷರಂ ತಪಃ ।
ಸತ್ಯಮೇಕಾಕ್ಷರೋ ಯಜ್ಞಃ ಸತ್ಯಮೇಕಾಕ್ಷರಂ ಶ್ರುತಮ್ ॥೬೪॥

ಸತ್ಯವೇ ಏಕಮಾತ್ರವಾದ ಅವಿನಾಶಿಯಾದ ಬ್ರಹ್ಮವಾಗಿದೆ. ಸತ್ಯವೇ ಏಕಮಾತ್ರವಾದ ಅವಿನಾಶಿಯಾದ ತಪಸ್ಸಾಗಿದೆ. ಸತ್ಯವೇ ಏಕಮಾತ್ರವಾದ ಅವಿನಾಶಿಯಾದ ಯಜ್ಞವಾಗಿದೆ. ಸತ್ಯವೇ ಏಕಮಾತ್ರವಾದ ಅವಿನಾಶಿಯಾದ ವೇದವಾಗಿದೆ.

ಸತ್ಯಂ ವೇದೇಷು ಜಾಗರ್ತಿ ಫಲಂ ಸತ್ಯೇ ಪರಂ ಸ್ಮೃತಮ್ ।
ಸತ್ಯಾದ್ಧರ್ಮೋ ದಮಶ್ಚೈವ ಸರ್ವಂ ಸತ್ಯೇ ಪ್ರತಿಷ್ಠಿತಮ್ ॥೬೫॥

ಸತ್ಯವೇ ವೇದಗಳಲ್ಲಿ ಜಾಗ್ರತವಾಗಿದೆ. (ವೇದಗಳಲ್ಲಿ ಸತ್ಯದ

ಮಹಿಮೆಯೇ ಉದ್ಘೋಷಿತವಾಗಿದೆ.) ಸತ್ಯನಿಷ್ಠೆಯಿಂದಲೇ ಸರ್ವಶ್ರೇಷ್ಠ ವಾದ ಫಲವು ಲಭಿಸುತ್ತದೆ. ಧರ್ಮ ಮತ್ತು ಇಂದ್ರಿಯಸಂಯಮಗಳು ಸತ್ಯದಿಂದಲೇ ಸಿದ್ಧಿಸುತ್ತವೆ. ಎಲ್ಲವೂ ಸತ್ಯದ ಆಧಾರದಲ್ಲಿಯೇ ಪ್ರತಿಷ್ಠಿತ ವಾಗಿವೆ.

ಸತ್ಯಂ ವೇದಾಸ್ತಥಾಙ್ಗಾನಿ ಸತ್ಯಂ ವಿದ್ಯಾಸ್ತಥಾ ವಿಧಿಃ।
ವ್ರತಚರ್ಯಾ ತಥಾ ಸತ್ಯಮೋಙ್ಕಾರಃ ಸತ್ಯಮೇವ ಚ ॥೬೬॥

ಸತ್ಯವೇ ವೇದಗಳೂ ಮತ್ತು ವೇದಾಂಗಗಳೂ ಆಗಿವೆ. ಸತ್ಯವೇ ವಿದ್ಯೆಗಳೂ ಮತ್ತು ವಿಧಿಯೂ ಆಗಿದೆ. ಸತ್ಯವೇ ವ್ರತಾನುಷ್ಠಾನವಾಗಿದೆ. ಸತ್ಯವೇ ಓಂಕಾರ (ಪ್ರಣವ) ವಾಗಿದೆ.

ಪ್ರಾಣಿನಾಂ ಜನನಂ ಸತ್ಯಂ ಸತ್ಯಂ ಸಂತತಿರೇವ ಚ।
ಸತ್ಯೇನ ವಾಯುರಭ್ಯೇತಿ ಸತ್ಯೇನ ತಪತೇ ರವಿಃ ॥೬೭॥

ಸತ್ಯವೇ ಪ್ರಾಣಿಗಳಿಗೆ ಜನ್ಮವನ್ನೀಯುವ ಜನಕವಾಗಿದೆ. ಸತ್ಯವೇ ವಂಶವೃದ್ಧಿಕರವಾದ ಸಂತಾನವೂ ಆಗಿದೆ. ಸತ್ಯದಿಂದಲೇ ವಾಯುವು ಚಲಿಸುತ್ತದೆ. ಸತ್ಯದಿಂದಲೇ ಸೂರ್ಯನೂ ತಪಿಸುತ್ತಾನೆ.

ಸತ್ಯೇನ ಚಾಗ್ನಿರ್ದಹತಿ ಸ್ವರ್ಗಃ ಸತ್ಯೇ ಪ್ರತಿಷ್ಠಿತಃ।
ಸತ್ಯಂ ಯಜ್ಞಸ್ತಪೋ ವೇದಾಃ ಸ್ತೋಭಾ ಮನ್ತ್ರಾಃ ಸರಸ್ವತೀ ॥೬೮॥

ಸತ್ಯದಿಂದಲೇ ಅಗ್ನಿಯು ದಹಿಸುತ್ತದೆ. ಸತ್ಯದಲ್ಲಿಯೇ ಸ್ವರ್ಗವು ಪ್ರತಿಷ್ಠಿತ ವಾಗಿದೆ. ಯಜ್ಞ, ತಪಸ್ಸು, ವೇದ, ಸ್ತೋಭ ಮತ್ತು ಮಂತ್ರಗಳು ಸತ್ಯದ ಸ್ವರೂಪಗಳೇ ಆಗಿವೆ. ಸರಸ್ವತೀದೇವಿಯೂ ಸತ್ಯಸ್ವರೂಪಳೇ ಆಗಿದ್ದಾಳೆ.

ತುಲಾಮಾರೋಪಿತೋ ಧರ್ಮಃ ಸತ್ಯಂ ಚೈವೇತಿ ನಃ ಶ್ರುತಮ್।
ಸಮಕಕ್ಷಾಂ ತುಲಯತೋ ಯತಃ ಸತ್ಯಂ ತತೋಽಧಿಕಮ್ ॥೬೯॥

ಒಂದಾನೊಂದು ಸಮಯದಲ್ಲಿ ತಕ್ಕಡಿಯ ಒಂದು ತಟ್ಟೆಯಲ್ಲಿ ಸತ್ಯವನ್ನೂ ಮತ್ತೊಂದು ತಟ್ಟೆಯಲ್ಲಿ ಇತರ ಧರ್ಮಗಳನ್ನೂ ಇಟ್ಟು ತೂಗಿದರೆಂದು ನಾವು ಕೇಳಿದ್ದೇವೆ. ಹಾಗೆ ತೂಗಿದಾಗ ಸತ್ಯವು ಯಾವ ತಟ್ಟೆ

ಯಲ್ಲಿದ್ದಿತೋ ಆ ತಟ್ಟೆಯೇ ಭಾರವಾಗಿರುವುದು ಕಂಡುಬಂದಿತು. (ಸತ್ಯವಿದ್ದ ತಟ್ಟೆಯು ಮೇಲಕ್ಕೆ ಏಳಲೇ ಇಲ್ಲ.)*

ಯತೋ ಧರ್ಮಸ್ತತಃ ಸತ್ಯಂ ಸರ್ವಂ ಸತ್ಯೇನ ವರ್ಧತೇ।
ಕಿಮರ್ಥಮನೃತಂ ಕರ್ಮ ಕರ್ತುಂ ರಾಜಂಸ್ತ್ವಮಿಚ್ಛಸಿ ॥೭೦॥

ಮಹಾರಾಜ! ಎಲ್ಲಿ ಧರ್ಮವಿರುವುದೋ ಅಲ್ಲಿ ಸತ್ಯವೂ ಇರುತ್ತದೆ. ಧರ್ಮದಿಂದ ಸತ್ಯವು ಯಾವಾಗಲೂ ಬೇರ್ಪಟ್ಟಿರುವುದಿಲ್ಲ. ಸತ್ಯದಿಂದಲೇ ಎಲ್ಲ ಧರ್ಮಗಳೂ ವೃದ್ಧಿಯನ್ನು ಹೊಂದುತ್ತವೆ. ಹೀಗಿರುವಾಗ–ನೀನು ಯಾವ ಕಾರಣದಿಂದ ಸುಳ್ಳಿನ ವ್ಯವಹಾರವನ್ನು ಮಾಡಲು ಇಚ್ಛಿಸಿರುವೆ?

ಸತ್ಯೇ ಕುರು ಸ್ಥಿರಂ ಭಾವಂ ಮಾ ರಾಜನ್ನನೃತಂ ಕೃಥಾಃ।
ಕಸ್ಮಾತ್ತ್ವಮನೃತಂ ವಾಕ್ಯಂ ದೇಹೀತಿ ಕುರುಷೇಽಶುಭಮ್ ॥೭೧॥

ನಿನ್ನ ಭಾವವು ಸತ್ಯದಲ್ಲಿಯೇ ಸುಪ್ರತಿಷ್ಠಿತವಾಗಿರಲಿ. ಸುಳ್ಳಿನ ವ್ಯವಹಾರವನ್ನು ಎಂದಿಗೂ ಮಾಡಬೇಡ. 'ದೇಹಿ' ಎಂದು ಹೇಳಿದ ಮಾತನ್ನು ಏತಕ್ಕಾಗಿ ನೀನು ಸುಳ್ಳಾಗಿಯೂ ಅಶುಭವಾಗಿಯೂ ಮಾಡುತ್ತಿರುವೆ?

ಯದಿ ಜಪ್ಯಫಲಂ ದತ್ತಂ ಮಯಾ ನೈಷಿಷ್ಯಸೇ ನೃಪ।
ಧರ್ಮೇಭ್ಯಃ ಸಮ್ಪರಿಭ್ರಷ್ಟೋ ಲೋಕಾನನುಚರಿಷ್ಯಸಿ ॥೭೨॥

ಒಂದು ವೇಳೆ ನಾನು ದಾನಮಾಡಿರುವ ಜಪದ ಫಲವನ್ನು ಸ್ವೀಕರಿಸದಿದ್ದರೆ–ಎಲ್ಲ ಧರ್ಮಗಳಿಂದಲೂ ಭ್ರಷ್ಟನಾಗಿ ಯಾವ ಲೋಕದಲ್ಲಿಯೂ ದಿಕ್ಕುಗಾಣದೇ ಅಲೆದಾಡುವೆ.

ಸಂಶ್ರುತ್ಯ ಯೋ ನ ದಿತ್ಸೇತ ಯಾಚಿತ್ವಾ ಯಶ್ಚನೇಚ್ಛತಿ।
ಉಭಾವಾನೃತಿಕಾವೇತೌ ನ ಮೃಷಾ ಕರ್ತುಮರ್ಹಸಿ ॥೭೩॥

---

* ತೈತ್ತರೀಯೋಪನಿಷತ್ತಿನಲ್ಲಿ ಬಂದಿರುವ ಈ ಮಂತ್ರವೇ ಮಹಾಭಾರತದಲ್ಲಿ ಶ್ಲೋಕಗಳ ರೂಪದಲ್ಲಿದೆ : ಸತ್ಯೇನ ವಾಯುರಾವಾತಿ । ಸತ್ಯೇನಾದಿತ್ಯೋ ರೋಚತೇ । ದಿವಿ ಸತ್ಯಂ ವಾಚಃ ಪ್ರತಿಷ್ಠಾ । ಸತ್ಯೇ ಸರ್ವಂ ಪ್ರತಿಷ್ಠಿತಂ । ತಸ್ಮಾತ್ ಸತ್ಯಂ ಪರಮಂ ವಹನ್ತಿ ।

ಕೊಡುವೆನೆಂದು ಪ್ರತಿಜ್ಞೆಯನ್ನು ಮಾಡಿದನಂತರ ಯಾವನು ಕೊಡುವುದಿಲ್ಲವೋ – ಯಾಚನೆಮಾಡಿದನಂತರ ಯಾವನು ದಾನವನ್ನು ತೆಗೆದುಕೊಳ್ಳಲು ಇಷ್ಟಪಡುವುದಿಲ್ಲವೋ – ಆ ಇಬ್ಬರೂ ಮಿಥ್ಯಾವಾದಿಗಳೇ ಆಗುತ್ತಾರೆ. ಆದುದರಿಂದ ನಮ್ಮಿಬ್ಬರ ಮಾತುಗಳನ್ನೂ ಸುಳ್ಳಾಗಿಸುವುದು ನಿನಗೆ ಸರ್ವಥಾ ಯುಕ್ತವಾಗಿ ಕಾಣುವುದಿಲ್ಲ."

ರಾಜನು ಹೇಳುತ್ತಾನೆ :

ಯೋದ್ಧವ್ಯಂ ರಕ್ಷಿತವ್ಯಂ ಚ ಕ್ಷತ್ರಧರ್ಮಃ ಕಿಲ ದ್ವಿಜ।
ದಾತಾರಃ ಕ್ಷತ್ರಿಯಾಃ ಪ್ರೋಕ್ತಾ ಗೃಹ್ಣೀಯಾಂ ಭವತಃ ಕಥಮ್ ॥೭೪॥

"ಬ್ರಾಹ್ಮಣನೇ! ಶತ್ರುಗಳೊಡನೆ ಯುದ್ಧಮಾಡುವುದೂ ಮತ್ತು ಪ್ರಜೆಗಳನ್ನು ರಕ್ಷಿಸುವುದೂ ಕ್ಷತ್ರಧರ್ಮವಾಗಿದೆ. ಯಾವಾಗಲೂ ಕ್ಷತ್ರಿಯರು ದಾನಕೊಡತಕ್ಕವರೇ ಹೊರತು ದಾನವನ್ನು ಪ್ರತಿಗ್ರಹಿಸತಕ್ಕವರಲ್ಲವೆಂದು ಹೇಳಲ್ಪಟ್ಟಿರುತ್ತಾರೆ. ಹೀಗಿರುವಾಗ ನಾನು ನಿನ್ನಿಂದ ದಾನವನ್ನು ಹೇಗೆ ಪ್ರತಿಗ್ರಹಿಸಲಿ?"

ನ ಚ್ಛನ್ದಯಾಮಿ ತೇ ರಾಜನ್ನಾಪಿ ತೇ ಗೃಹಮಾವ್ರಜಮ್।
ಇಹಾಗಮ್ಯ ತು ಯಾಚಿತ್ವಾ ನ ಗೃಹ್ಣೀಷೇ ಪುನಃ ಕಥಮ್ ॥೭೫॥

"ಮಹಾರಾಜ! ದಾನವನ್ನು ತೆಗೆದುಕೊಳ್ಳುವಂತೆ ನಾನೇನೂ ನಿನ್ನನ್ನು ಆಗ್ರಹಪಡಿಸಲಿಲ್ಲ. ಅಥವಾ ದಾನಕೊಡಲು ನಾನು ನಿನ್ನ ಮನೆಗೂ ಬರಲಿಲ್ಲ. ನೀನೇ ನನ್ನ ಬಳಿಗೆ ಬಂದು ಜಪತಪಸ್ಸಿನ ಫಲವನ್ನು ಕೊಡುವಂತೆ ಪ್ರಾರ್ಥಿಸಿ ನಿನ್ನ ಪ್ರಾರ್ಥನೆಯಂತೆ ನಾನು ಜಪತಪಸ್ಸಿನ ಫಲವನ್ನು ದಾನಮಾಡಿದನಂತರ ನೀನದನ್ನು ಹೇಗೆ ತಿರಸ್ಕರಿಸುವೆ?"

ಆಗ ಧರ್ಮನು ಹೇಳುತ್ತಾನೆ :

ಅವಿವಾದೋಽಸ್ತು ಯುವಯೋರ್ವಿತ್ತ ಮಾಂ ಧರ್ಮಮಾಗತಮ್।
ದ್ವಿಜೋ ದಾನಫಲೈರ್ಯುಕ್ತೋ ರಾಜಾ ಸತ್ಯಫಲೇನ ಚ ॥೭೬॥

"ಮೂರ್ತಿಮತ್ತಾಗಿ ಬಂದಿರುವ ಧರ್ಮನೇ ನಾನೆಂದು ನೀವಿಬ್ಬರೂ

ತಿಳಿಯಿರಿ. ನಿಮ್ಮಲ್ಲಿ ಪರಸ್ಪರವಾಗಿ ವಾದ-ವಿವಾದಗಳು ನಡೆಯುವುದು ಬೇಡ. ಬ್ರಾಹ್ಮಣನೂ ದಾನದ ಫಲವನ್ನು ಹೊಂದಲಿ. ರಾಜನೂ ಸತ್ಯನಿಷ್ಠೆಯ ಫಲವನ್ನು ಹೊಂದಲಿ."

ಸ್ವರ್ಗಪುರುಷನು ಹೇಳುತ್ತಾನೆ :

ಸ್ವರ್ಗಂ ಮಾಂ ವಿದ್ಧಿ ರಾಜೇನ್ದ್ರ ರೂಪಿಣಂ ಸ್ವಯಮಾಗತಮ್ ।
ಅವಿವಾದೋಽಸ್ತು ಯುವಯೋರುಭೌ ತುಲ್ಯಫಲೌ ಯುವಾಮ್ ॥೭೭॥

"ಶರೀರಧಾರಿಯಾಗಿ ಬಂದಿರುವ ಸ್ವರ್ಗವೇ ನಾನೆಂದು ನೀವಿಬ್ಬರೂ ತಿಳಿದುಕೊಳ್ಳಿರಿ. ನಿಮ್ಮಿಬ್ಬರಲ್ಲಿ ಪರಸ್ಪರವಾಗಿ ವಾದ-ವಿವಾದಗಳು ಆಗುವುದು ಬೇಡ. ನೀವಿಬ್ಬರೂ ಸಮಾನವಾದ ಫಲಗಳಿಗೆ ಭಾಗಿಗಳಾಗುವಿರಿ."

ರಾಜನು ಹೇಳುತ್ತಾನೆ :

ಕೃತಂ ಸ್ವರ್ಗೇಣ ಮೇ ಕಾರ್ಯಂ ಗಚ್ಛ ಸ್ವರ್ಗ ಯಥಾಗತಮ್।
ವಿಪ್ರೋ ಯದೀಚ್ಛತೇ ಗನ್ತುಂ ಚೀರ್ಣಂ ಗೃಹ್ಣಾತು ಮೇ ಫಲಮ್ ॥೭೮॥

"ಸ್ವರ್ಗನೇ! ನನಗೆ ಸ್ವರ್ಗದಿಂದ ಯಾವ ಪ್ರಯೋಜನವೂ ಇಲ್ಲ. ಎಲ್ಲಿಂದ ಬಂದಿರುವೆಯೋ ಅಲ್ಲಿಗೆ ನೀನು ಹೊರಟುಹೋಗು. ಈ ಬ್ರಾಹ್ಮಣನೇನಾದರೂ ಸ್ವರ್ಗಕ್ಕೆ ಹೋಗುವ ಇಚ್ಛೆಯುಳ್ಳವನಾಗಿದ್ದರೆ ನಾನು ಮಾಡಿರುವ ಪುಣ್ಯದ ಫಲವನ್ನು ಪಡೆದುಕೊಂಡು ಹೋಗಲಿ."

ಬ್ರಾಹ್ಮಣನು ಹೇಳುತ್ತಾನೆ :

ಬಾಲ್ಯೇ ಯದಿ ಸ್ಯಾದಜ್ಞಾನಾನ್ಮಯಾ ಹಸ್ತಃ ಪ್ರಸಾರಿತಃ।
ನಿವೃತ್ತಲಕ್ಷಣಂ ಧರ್ಮಮುಪಾಸೇ ಸಂಹಿತಾಂ ಜಪನ್ ॥೭೯॥

"ಬಾಲ್ಯದಲ್ಲೇನಾದರೂ ಅಜ್ಞಾನದಿಂದ ನಾನು ಯಾಚನೆಗಾಗಿ ಕೈಯನ್ನು ಮುಂದೆ ಚಾಚಿದ್ದರೂ ಚಾಚಿರಬಹುದು. ಆದರೆ ಅದರ

ಸ್ಮರಣೆಯೂ ನನಗಿಲ್ಲ. ಈಗ ಮಾತ್ರ ಬ್ರಹ್ಮಸಂಹಿತೆಯನ್ನು ಜಪಿಸುತ್ತಾ ನಿವೃತ್ತಿಲಕ್ಷಣದಿಂದ ಕೂಡಿರುವ ಧರ್ಮವನ್ನೇ ಉಪಾಸನೆ ಮಾಡುತ್ತೇನೆ.

ನಿವೃತ್ತಂ ಮಾಂ ಚಿರಾದ್ರಾಜನ್ವಿಪ್ರಲೋಭಯಸೇ ಕಥಮ್।
ಸ್ವೇನ ಕಾರ್ಯಂ ಕರಿಷ್ಯಾಮಿ ತ್ವತ್ತೋ ನೇಚ್ಛೇ ಫಲಂ ನೃಪ॥
ತಪಃಸ್ವಾಧ್ಯಾಯಶೀಲೋಽಹಂ ನಿವೃತ್ತಶ್ಚ ಪ್ರತಿಗ್ರಹಾತ್ ॥೮೦॥

ಮಹಾರಾಜ! ಬಹಳ ಕಾಲದಿಂದಲೂ ನಿವೃತ್ತಿಮಾರ್ಗದಲ್ಲಿಯೇ ಇರುವ ನನ್ನನ್ನು ನೀನು ಹೇಗೆ ಪ್ರಲೋಭನಗೊಳಿಸುವೆ? ನನ್ನ ಕರ್ತವ್ಯಗಳೆಲ್ಲವನ್ನೂ ನಾನಾಗಿಯೇ ಮಾಡುತ್ತೇನೆ. ಸ್ವರ್ಗಕ್ಕೆ ಹೋಗಲು ನೀನು ನಿನ್ನ ತಪಸ್ಸಿನ ಅಥವಾ ಸತ್ಕರ್ಮಗಳ ಫಲವನ್ನು ನನಗೆ ದಾನಮಾಡಬೇಕಾಗಿಲ್ಲ. ಜಪತಪಸ್ಸು ಮತ್ತು ಸ್ವಾಧ್ಯಾಯಗಳಲ್ಲಿಯೇ ನಿರತನಾಗಿರುವ ನಾನು ಪ್ರತಿಗ್ರಹಾದಿಗಳಿಂದ ನಿವೃತ್ತನಾಗಿದ್ದೇನೆ."

ರಾಜನು ಹೇಳುತ್ತಾನೆ :

ಯದಿ ವಿಪ್ರ ವಿಸೃಷ್ಟಂ ತೇ ಜಪ್ಯಸ್ಯ ಫಲಮುತ್ತಮಮ್।
ಆವಯೋರ್ಯತ್ಫಲಂ ಕಿಞ್ಚಿತ್ಸಹಿತಂ ನೌ ತದಸ್ತ್ವಿಹ ॥೮೧॥

"ವಿಪ್ರವರನೇ! ನೀನು ಜಪದ ಉತ್ತಮವಾದ ಫಲವನ್ನು ನಾನು ಮಾಡಿದ ಯಾಚನೆಯಂತೆ ದಾನಮಾಡಿಬಿಟ್ಟಿರುವೆನೆನ್ನುವುದಾದರೆ – ಒಂದು ಕಾರ್ಯವನ್ನು ಮಾಡೋಣ. ನಮ್ಮಿಬ್ಬರ ಸತ್ಕರ್ಮಗಳ ಆಚರಣೆಯಿಂದ ಯಾವ ಫಲಗಳು ಸಂಚಿತವಾಗಿರುವುವೋ ಆ ಎಲ್ಲ ಫಲಗಳನ್ನೂ ಒಟ್ಟಾಗಿ ಸೇರಿಸಿ ನಾವಿಬ್ಬರೂ ಸಹಭಾಗಿಗಳಾಗೋಣ.

ದ್ವಿಜಾಃ ಪ್ರತಿಗ್ರಹೇ ಯುಕ್ತಾ ದಾತಾರೋ ರಾಜವಂಶಜಾಃ।
ಯದಿ ಧರ್ಮಃ ಶ್ರುತೋ ವಿಪ್ರ ಸಹೈವ ಫಲಮಸ್ತು ನೌ ॥೮೨॥

ಯಾವಾಗಲೂ ಬ್ರಾಹ್ಮಣರು ಪ್ರತಿಗ್ರಹದಲ್ಲಿಯೇ ಅಧಿಕಾರವುಳ್ಳವರು. ರಾಜವಂಶದವರು ಯಾವಾಗಲೂ ದಾನಶೀಲರು. ಈ ಧರ್ಮವನ್ನು ನೀನು ಕೇಳಿರುವೆಯಾದರೆ ನಾನು ಹೇಳಿದಂತೆ ನಮ್ಮಿಬ್ಬರ ಸತ್ಕರ್ಮಗಳ ಫಲವು ಇಬ್ಬರಿಗೂ ಸಮಾನವಾಗಿ ಸೇರಲಿ.

ಮಾ ವಾ ಭೂತ್ಸಹಭೋಜ್ಯಂ ನೌ ಮದೀಯಂ ಫಲಮಾಪ್ನು ಹಿ।
ಪ್ರತೀಚ್ಛ ಮತ್ಕೃತಂ ಧರ್ಮಂ ಯದಿ ತೇ ಮಯ್ಯನುಗ್ರಹಃ ॥೮೩॥

ಹಾಗಲ್ಲದೇ ನಮ್ಮಿಬ್ಬರ ಸತ್ಕರ್ಮಗಳ ಫಲವನ್ನು ಸಮವಾಗಿ ಹಂಚಿಕೊಂಡು ನನ್ನ ಜೊತೆಯಲ್ಲಿ ಉಪಭೋಗಿಸಲು ನೀನು ಇಚ್ಛಿಪಡದಿದ್ದರೆ – ನಾನು ಮಾಡಿರುವ ಸತ್ಕರ್ಮಗಳ ಫಲವನ್ನಾದರೂ ಸ್ವೀಕರಿಸು. ನನ್ನ ಮೇಲೆ ನಿನಗೆ ಅನುಗ್ರಹಬುದ್ಧಿಯಿರುವುದಾದರೆ ನಾನು ಮಾಡಿರುವ ಶುಭಕರ್ಮಗಳ ಫಲಗಳೆಲ್ಲವನ್ನೂ ಸಂಪೂರ್ಣವಾಗಿ ಪ್ರತಿಗ್ರಹಿಸು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಆ ಸಮಯಕ್ಕೆ ಸರಿಯಾಗಿ ಕರಾಳವಾದ ವೇಷಗಳನ್ನು ಧರಿಸಿದ್ದ, ಮಲಿನವಾದ ವಸ್ತ್ರಗಳನ್ನು ತೊಟ್ಟಿದ್ದ ಇಬ್ಬರು ಪುರುಷರು ಒಬ್ಬರ ಕೈಯ್ಯನ್ನು ಮತ್ತೊಬ್ಬರು ಹಿಡಿದುಕೊಂಡು ಒಬ್ಬರು ಮತ್ತೊಬ್ಬರನ್ನು ತಬ್ಬಿಕೊಂಡು ರಾಜನ ಸಮೀಪಕ್ಕೆ ಬಂದು ಪರಸ್ಪರವಾಗಿ ಹೀಗೆ ಮಾತನಾಡಿಕೊಳ್ಳುತ್ತಿದ್ದರು :

ವಿಕೃತ : ನನ್ನ ಯಾವ ಋಣವನ್ನೂ ನೀನು ಹೊಂದಿರುವುದಿಲ್ಲ. (ನನಗೆ ಯಾವ ಋಣವನ್ನೂ ನೀನು ಕೊಡಬೇಕಾಗಿಲ್ಲ.)

ವಿರೂಪ : ನಾನು ನಿನ್ನ ಋಣವನ್ನು ಹೊತ್ತಿದ್ದೇನೆ. (ನಾನು ನಿನಗೆ ಋಣಿಯಾಗಿದ್ದೇನೆ.)

ವಿಕೃತ : ಈ ವಿಷಯದಲ್ಲಿಯೇ ನನಗೂ ಮತ್ತು ನಿನಗೂ ವಿವಾದವಿದೆ. ಅದೋ! ಇಲ್ಲಿಯೇ ಎಲ್ಲವನ್ನೂ ಅನುಶಾಸನಮಾಡುವ ಒಬ್ಬ ರಾಜನಿದ್ದಾನೆ. ನಾನು ಸತ್ಯವಾಗಿ ಹೇಳುತ್ತೇನೆ. ನೀನು ನನಗೆ ಯಾವ ಋಣವನ್ನೂ ಕೊಡಬೇಕಾಗಿರುವುದಿಲ್ಲ.

ವಿರೂಪ : ನೀನೀಗ ಸುಳ್ಳನ್ನು ಹೇಳುತ್ತಿರುವೆ. ನಾನು ನಿನಗೆ ನಿಶ್ಚಯವಾಗಿಯೂ ಋಣಿಯಾಗಿದ್ದೇನೆ.

ಯುಧಿಷ್ಠಿರ! ಅವರಿಬ್ಬರ ವಿವಾದವು ಹೀಗೆ ಬಹಳ ಹೊತ್ತಿನವರೆಗೂ ನಡೆಯಿತು. ಇಬ್ಬರಲ್ಲಿ ಯಾರೂ ಸೋಲಲಿಲ್ಲ. ವಾದಮಾಡಿ ಇಬ್ಬರೂ

ಬಹಳವಾಗಿ ಸಂತಪ್ತರಾಗಿದ್ದರು. ರಾಜನ ಬಳಿಗೆ ಬಂದು ಅವನೊಡನೆ ಹೇಳಿದರು :

ಪರೀಕ್ಷ್ಯ ತ್ವಂ ಯಥಾ ಸ್ಯಾವ ನಾವಾಮಿಹ ವಿಗರ್ಹಿತೌ ॥೮೭॥

"ಮಹಾರಾಜ! ನೀನು ನಮ್ಮಿಬ್ಬರ ವಿವಾದವನ್ನು ಕೇಳಿ ಪರೀಕ್ಷಿಸಿ ನಾವಿಬ್ಬರೂ ಯಾವ ವಿಧವಾದ ದೋಷಕ್ಕಾಗಲೀ, ನಿಂದನೆಗಾಗಲೀ ಭಾಗಿಗಳಾಗದ ರೀತಿಯಲ್ಲಿ ತೀರ್ಪನ್ನು ನೀಡು."

ಮೊದಲು ವಿರೂಪನು ತನ್ನ ವಿವಾದವನ್ನು ಒಪ್ಪಿಸುತ್ತಾನೆ :

ಧಾರಯಾಮಿ ನರವ್ಯಾಘ್ರ ವಿಕೃತಸ್ಯೇಹ ಗೋಃ ಫಲಮ್।
ದದತಶ್ಚ ನ ಗೃಹ್ಣಾತಿ ವಿಕೃತೋ ಮೇ ಮಹೀಪತೇ ॥೮೮॥

"ನರವ್ಯಾಘ್ರನೇ! ನಾನು ಈ ವಿಕೃತನ ಗೋದಾನದ ಫಲವನ್ನು ಧರಿಸಿದ್ದೇನೆ. ಅದನ್ನು ಕೊಡುತ್ತಿರುವ ನನ್ನಿಂದ ಈ ವಿಕೃತನು ತೆಗೆದುಕೊಳ್ಳುತ್ತಿಲ್ಲ."

ವಿಕೃತನು ಪ್ರತಿಯಾದ ವಿವಾದವನ್ನು ರಾಜನಿಗೆ ಒಪ್ಪಿಸುತ್ತಾನೆ :

ನ ಮೇ ಧಾರಯತೇ ಕಿಞ್ಚಿದ್ವಿರೂಪೋಽಯಂ ನರಾಧಿಪ ।
ಮಿಥ್ಯಾ ಬ್ರವೀತ್ಯಯಂ ಹಿ ತ್ವಾಂ ಸತ್ಯಾಭಾಸಂ ನರಾಧಿಪ ॥೮೯॥

"ಮಹಾರಾಜ! ಈ ವಿರೂಪನು ನನ್ನ ಗೋದಾನಫಲವನ್ನು ಧಾರಣೆ ಮಾಡಿಕೊಂಡಿರುವುದಿಲ್ಲ. ಇವನು ಸತ್ಯದ ರೂಪದಲ್ಲಿ ಕಾಣುವ ಸುಳ್ಳನ್ನೇ ಹೇಳುತ್ತಿದ್ದಾನೆ."

ರಾಜನು ವಿರೂಪನನ್ನು ಪ್ರಶ್ನಿಸುತ್ತಾನೆ :

ವಿರೂಪ ಕಿಂ ಧಾರಯತೇ ಭವಾನಸ್ಯ ಬ್ರವೀತು ಮೇ।
ಶ್ರುತ್ವಾ ತಥಾ ಕರಿಷ್ಯೇಽಹಮಿತಿ ಮೇ ಧೀಯತೇ ಮನಃ ॥೯೦॥

"ವಿರೂಪ! ನೀನು ಈ ವಿಕೃತನ ಯಾವ ಋಣವನ್ನು ಹೇಗೆ ಧರಿಸಿರುವೆಯೆಂಬುದನ್ನು ಇನ್ನೂ ಸ್ಪಷ್ಟವಾಗಿ ಹೇಳು. ನೀನು ಹೇಳಿದನಂತರ ನಾನು ನಿರ್ಣಯಮಾಡಿ ಹೇಳುತ್ತೇನೆ. ಇದು ನನ್ನ ಮನಸ್ಸಿನ ನಿಶ್ಚಯವಾಗಿದೆ."

"ಮಹಾರಾಜ! ರಾಜರ್ಷಿಯೇ! ನಾನು ಈ ವಿಕೃತನ ಋಣವನ್ನು

ಹೇಗೆ ಹೊತ್ತಿರುವೆನೆಂಬುದನ್ನು ಹೇಳುವೆನು ; ಏಕಾಗ್ರಚಿತ್ತನಾಗಿ ಕೇಳು. ಈ ವಿಕೃತನು ಹಿಂದೆ ಪುಣ್ಯಪ್ರಾಪ್ತಿಗಾಗಿ ತಪಸ್ವಿಯಾದ, ಸ್ವಾಧ್ಯಾಯಶೀಲನಾದ ಬ್ರಾಹ್ಮಣನೊಬ್ಬನಿಗೆ – ಹಾಲುಕೊಡುತ್ತಿದ್ದ, ಶುಭಲಕ್ಷಣಗಳಿಂದ ಕೂಡಿದ್ದ ಹಸುವೊಂದನ್ನು ದಾನವಾಗಿ ಕೊಟ್ಟನು. ಅನಂತರ ನಾನು ಈ ವಿಕೃತನ ಮನೆಗೆ ಹೋಗಿ ಗೋದಾನಮಾಡಿದ ಫಲವನ್ನು ನನಗೆ ಕೊಡುವಂತೆ ಇವನನ್ನು ಯಾಚಿಸಿದೆನು. ವಿಶುದ್ಧವಾದ ಅಂತಃಕರಣದಿಂದ ಕೂಡಿರುವ ವಿಕೃತನು ನನಗೆ ಗೋದಾನದ ಫಲವನ್ನು ಕೊಟ್ಟುಬಿಟ್ಟನು. ಬಳಿಕ ನಾನೂ ಆತ್ಮಶುದ್ಧಿಗಾಗಿ ಅನೇಕಪುಣ್ಯಕರ್ಮಗಳನ್ನು ಮಾಡಿದೆನು. (ಈ ಎಲ್ಲದರ ಫಲವಾಗಿ ನಾನೂ ಐಶ್ವರ್ಯವಂತನಾದೆನು.) ಅನಂತರ ನಾನು ಹೆಚ್ಚು ಹಾಲುಕರೆಯುವ ಎರಡು ಕಪಿಲಧೇನುಗಳನ್ನು ಕರುಗಳೊಡನೆ ಕ್ರಯಕ್ಕೆ ಪಡೆದು ಅವುಗಳನ್ನು ಉಂಛವೃತ್ತಿಯಿಂದ ಜೀವಿಸುತ್ತಿದ್ದ ಬ್ರಾಹ್ಮಣನೊಬ್ಬನಿಗೆ ಯಥಾವಿಧಿಯಾಗಿ, ಶ್ರದ್ಧಾಪೂರ್ವಕವಾಗಿ ದಾನಮಾಡಿದೆನು. ಆ ಗೋದಾನದ ಫಲವನ್ನು ನಾನೀಗ ವಿಕೃತನಿಗೆ ಕೊಡಲು ಇಚ್ಛಿಸಿದ್ದೇನೆ. ಪುರುಷಸಿಂಹನೇ! ಇವನಿಂದ ಒಂದು ಹಸುವನ್ನು ದಾನಮಾಡಿದ ಫಲವನ್ನು ತೆಗೆದುಕೊಂಡ, ನಾನೀಗ ಕರುಗಳಿಂದ ಕೂಡಿದ ಎರಡು ಧೇನುಗಳನ್ನು ದಾನಮಾಡಿದ ಫಲವನ್ನು ಇವನಿಗೆ ಕೊಡುವವನಾಗಿದ್ದೇನೆ. ಆದರೆ ಇವನು ತೆಗೆದುಕೊಳ್ಳಲು ಒಪ್ಪುತ್ತಿಲ್ಲ. ಹೀಗಿರುವಾಗ ನಮ್ಮಿಬ್ಬರಲ್ಲಿ ಶುದ್ಧನಾರು? ದೋಷಯುಕ್ತನಾದವನು ಯಾರು?–ಎಂಬುದನ್ನು ನೀನೇ ನಿರ್ಣಯಿಸು. ನಾನು ಇವನಿಂದ ಒಂದು ಗೋದಾನದ ಫಲವನ್ನು ಯಾಚಿಸಿ ಪಡೆದುಕೊಂಡನಂತರ ಋಣಿಯಾಗಲಿಲ್ಲವೇ? ಆ ಋಣವನ್ನು ಎರಡು ಗೋವುಗಳ ದಾನದ ಫಲವನ್ನು ಇವನಿಗೆ ಅರ್ಪಿಸುವುದರ ಮೂಲಕವಾಗಿ ನಾನು ತೀರಿಸ ಬೇಡವೇ? ನಾನು 'ಋಣೀ'–ಎಂದರೆ ವಿಕೃತನು 'ನೀನು ಋಣಿಯಲ್ಲ'– ಎನ್ನುತ್ತಾನೆ. ಹೀಗೆಯೇ ವಾದಮಾಡುತ್ತಾ ನಾವಿಬ್ಬರೂ ನಿನ್ನ ಬಳಿಗೆ ಬಂದಿರು ತ್ತೇವೆ. ನೀನು ನ್ಯಾಯದ ತೀರ್ಮಾನವನ್ನಾದರೂ ಕೊಡು. ಅನ್ಯಾಯದ ತೀರ್ಮಾನವನ್ನಾದರೂ ಕೊಡು. ನಮ್ಮಿಬ್ಬರಲ್ಲಿ ಉಂಟಾಗಿರುವ ವಿವಾದವನ್ನು ತಪ್ಪಿಸು. ನಮ್ಮಿಬ್ಬರನ್ನೂ ನ್ಯಾಯದ ಮಾರ್ಗದಲ್ಲಿ ಸಂಸ್ಥಾಪಿಸು. ಈ ವಿಕೃತನು ಹೇಗೆ ನನಗೆ ಒಂದು ಗೋದಾನದ ಫಲವನ್ನು ದಾನಮಾಡಿರುವನೋ

ಹಾಗೆಯೇ ಇವನು ನನ್ನಿಂದಲೂ ಎರಡು ಗೋವುಗಳನ್ನು ದಾನಮಾಡಿದ ಫಲವನ್ನು ಪಡೆದುಕೊಳ್ಳಲು ಇಚ್ಛಿಸದಿದ್ದರೆ ನೀನೇ ಈ ವಿಷಯದಲ್ಲಿ ಸುಸ್ಥಿರನಾಗಿ ನಿಂತು (ದೃಢವಾದ ನಿರ್ಣಯವನ್ನು ಮಾಡಿ) ಧರ್ಮಮಾರ್ಗ ದಲ್ಲಿ ನಮ್ಮಿಬ್ಬರನ್ನೂ ಪ್ರತಿಷ್ಠಾಪಿಸು."

ವಿರೂಪನ ಮನವಿಯನ್ನು ಕೇಳಿದ ನಂತರ ರಾಜನು ವಿಕೃತನಿಗೆ ಹೇಳುತ್ತಾನೆ :

ದೀಯಮಾನಂ ನ ಗೃಹ್ಣಾಸಿ ಋಣಂ ಕಸ್ಮಾತ್ತ್ವಮದ್ಯ ವೈ।
ಯಥೈವ ತೇಽಭ್ಯನುಜ್ಞಾತಂ ತಥಾ ಗೃಹ್ಣೀಷ್ವ ಮಾ ಚಿರಮ್ ॥೯೯॥

"ವಿಕೃತ! ವಿರೂಪನು ಕೊಡುತ್ತಿರುವ ಋಣವನ್ನೇಕೆ ನೀನು ತೆಗೆದುಕೊಳ್ಳುತ್ತಿಲ್ಲ? ಈ ಹಿಂದೆ ಅವನು ಹೇಗೆ ನಿನ್ನಿಂದ ಗೋದಾನದ ಫಲವನ್ನು ಪಡೆದುಕೊಂಡನೋ ಅದೇ ರೀತಿಯಲ್ಲಿ ಈಗ ನೀನಾದರೂ ಅವನು ಕೊಡಲಿರುವ ಗೋದಾನದ ಫಲವನ್ನು ಪ್ರತಿಗ್ರಹಿಸಲೇಬೇಕು. ಸಾವಕಾಶಮಾಡದೇ ಈ ಕೂಡಲೇ ಪ್ರತಿಗ್ರಹಿಸು."

ರಾಜನು ಕೊಟ್ಟ ತೀರ್ಪು ವಿಕೃತನಿಗೆ 'ಸರಿ' ಎನಿಸಲಿಲ್ಲ. ಅವನು ತನ್ನ ವಾದವನ್ನೇ ರಾಜನ ಮುಂದಿಡುತ್ತಾ ಹೇಳಿದನು :

ಧಾರಯಾಮೀತ್ಯನೇನೋಕ್ತಂ ದದಾನೀತಿ ತಥಾ ಮಯಾ।
ನಾಯಂ ಮೇ ಧಾರಯತ್ಯದ್ಯ ಗಚ್ಛತಾಂ ಯತ್ರ ವಾಞ್ಛತಿ ॥೧೦೦॥

"ಹಿಂದೆ ಈ ವಿರೂಪನು 'ನನಗೆ ಗೋದಾನದ ಫಲವನ್ನು ಕೊಡು'– ಎಂದು ಯಾಚಿಸಿದನು. 'ಕೊಡುತ್ತೇನೆ'–ಎಂದು ಹೇಳಿ ನಾನು ಗೋದಾನದ ಫಲವನ್ನು ದಾನ ಮಾಡಿದೆನು.

(ಕೊಟ್ಟ ಫಲವನ್ನು ಪುನಃ ಹಿಂದಿರುಗಿಸುವುದಾಗಿ ಅವನೂ ಹೇಳ ಲಿಲ್ಲ.; ನಾನೂ ಕೇಳಲಿಲ್ಲ. ಈಗಲೂ ನಾನು ಗೋದಾನದ ಫಲವನ್ನು ಯಾಚಿಸುತ್ತಿಲ್ಲ. ಯಾವಾಗ ಹಿಂದಿರುಗಿಸಬೇಕೆಂಬ ನಿಯಮವಿರುವುದಿಲ್ಲವೋ ಆಗ ಋಣವೆಂಬ ವಿಷಯವೇ ಇರುವುದಿಲ್ಲ. ಸ್ವಸ್ವತ್ವ ನಿವೃತ್ತಿಪೂರ್ವಕ

ಪರಸ್ವತ್ವಾಪಾದನಂ ದಾನಂ'ದಾನ'ಕ್ಕೆ ಪುನಃ ಹಿಂದಿರುಗಿಸಬೇಕೆಂಬ ಅರ್ಥವೇ ಬರುವುದಿಲ್ಲ.) ಆದುದರಿಂದ ವಿರೂಪನು ನನಗೆ ಋಣಿಯಲ್ಲ. ಇಚ್ಛೆಬಂದಲ್ಲಿಗೆ ಅವನು ಹೊರಟುಹೋಗಬಹುದು. ನನ್ನನ್ನು ಒತ್ತಾಯಿಸು ವುದು ಬೇಡ."

ದದತೋಽಸ್ಯ ನ ಗೃಹ್ಣಾಸಿ ವಿಷಮಂ ಪ್ರತಿಭಾತಿ ಮೇ।
ದಣ್ಡ್ಯೋ ಹಿ ತ್ವಂ ಮಮ ಮತೋ ನಾಸ್ತ್ಯತ್ರ ಖಲು ಸಂಶಯಃ॥

"ಅವನು ಹಿಂದೆ ಪಡೆದುಕೊಂಡುದನ್ನು ಈಗ ಕೊಡಲು ಬಂದಿರುವಾಗ ನೀನದನ್ನು ತೆಗೆದುಕೊಳ್ಳದೇ ಇರುವುದು ನನಗೆ ಬಹಳ ಅನುಚಿತವಾಗಿ ಕಾಣುತ್ತಿದೆ. ಇದು ನಿನ್ನ ಕರ್ತವ್ಯಲೋಪವೆಂದೇ ನಾನು ಭಾವಿಸುತ್ತೇನೆ. ಈ ಕರ್ತವ್ಯಲೋಪಕ್ಕಾಗಿ ನೀನು ಶಿಕ್ಷಾರ್ಹನೆಂಬುದು ನನ್ನ ಅಭಿಮತವಾಗಿದೆ. ಇದರಲ್ಲಿ ಸಂಶಯವೇ ಇಲ್ಲ."

ವಿಕೃತನು ಹೇಳುತ್ತಾನೆ :

ಮಯಾಸ್ಯ ದತ್ತಂ ರಾಜರ್ಷೇ ಗೃಹ್ಣೀಯಾಂ ತತ್ಕಥಂ ಪುನಃ।
ಕಾಮಮತ್ರಾಪರಾಧೋ ಮೇ ದಣ್ಡಮಾಜ್ಞಾಪಯ ಪ್ರಭೋ ॥೧೦೨॥

"ಮಹಾರಾಜ! ನಾನು ವಿರೂಪನಿಗೆ ಗೋದಾನದ ಫಲವನ್ನು ಕೊಟ್ಟಾಗಿದೆ. ಆ ಫಲವನ್ನು ಪುನಃ ನಾನು ಹೇಗೆ ಪಡೆದುಕೊಳ್ಳಲಿ? ಆದರೂ ನೀನು ನನ್ನನ್ನು ಅಪರಾಧಿಯೆಂದೇ ನಿಶ್ಚಯಿಸಿರುವೆ. ನಿನಗೆ ಉಚಿತವೆನಿಸಿದ ಶಿಕ್ಷೆಯನ್ನು ಆಜ್ಞಾಪಿಸಬಹುದಾಗಿದೆ."

ವಿರೂಪನು ವಿಕೃತನನ್ನು ಎಚ್ಚರಿಸುತ್ತಾ ಹೇಳುತ್ತಾನೆ :

ದೀಯಮಾನಂ ಯದಿ ಮಯಾ ನೇಷಿಷ್ಯಸಿ ಕಥಞ್ಚನ।
ನಿಯಂಸ್ಯತಿ ತ್ವಾಂ ನೃಪತಿರಯಂ ಧರ್ಮಾನುಶಾಸಕಃ ॥೧೦೩॥

"ವಿಕೃತ! ನಾನು ಕೊಡಲಿಚ್ಛಿಸಿರುವ ಗೋದಾನದ ಫಲವನ್ನು ನೀನು ಎಷ್ಟೇ ಸಮಾಧಾನ ಹೇಳಿದರೂ ತೆಗೆದುಕೊಳ್ಳಲು ಇಚ್ಛಿಸುವುದಿಲ್ಲವಾದರೆ– ಧರ್ಮವನ್ನು ಅನುಶಾಸನಮಾಡುವ ಈ ರಾಜನು ನಿನ್ನನ್ನು ಬಂಧಿಸುವನು."

ವಿಕೃತನು ಹೇಳುತ್ತಾನೆ :

ಸ್ವಂ ಮಯಾ ಯಾಚಿತೇನೇಹ ದತ್ತಂ ಕಥಮಿಹಾದ್ಯ ತತ್।
ಗೃಹ್ಣೀಯಾಂ ಗಚ್ಛತು ಭವಾನಭ್ಯನುಜ್ಞಾಂ ದದಾನಿ ತೇ ॥೧೦೪॥

"ವಿರೂಪ! ನೀನು ನನ್ನಿಂದ ಯಾಚಿಸಿದ ಗೋದಾನದ ಫಲವನ್ನು ನಾನು ನಿನಗೆ ದಾನಮಾಡಿದೆನು. ದಾನಮಾಡಿದುದನ್ನು ಈಗ ನಾನು ಹೇಗೆ ಪುನಃ ಪ್ರತಿಗ್ರಹಿಸಲಿ? ನಾನು ಕೊಟ್ಟುದು ಋಣವಲ್ಲ ; ದಾನ. ನೀನು ನನಗೆ ಯಾವ ಋಣವನ್ನೂ ಕೊಡಬೇಕಾಗಿಲ್ಲ. ನಿನಗೆ ಅನುಜ್ಞೆಯನ್ನು ಕೊಟ್ಟಿದ್ದೇನೆ. ಇಷ್ಟಬಂದಲ್ಲಿಗೆ ನೀನು ಪ್ರಯಾಣಮಾಡಬಹುದು."

ವಿಕೃತನು ಹೇಳಿದುದು ಬ್ರಾಹ್ಮಣನ ಅಭಿಪ್ರಾಯಕ್ಕೆ ಅನುಗುಣವಾಗಿಯೇ ಇದ್ದಿತು. ವಿಕೃತನ ಮಾತನ್ನೇ ಅನುಮೋದಿಸುತ್ತಾ ಜಾಪಕ ಬ್ರಾಹ್ಮಣನು ರಾಜನಿಗೆ ಹೇಳುತ್ತಾನೆ :

ಶ್ರುತಮೇತತ್ತ್ವಯಾ ರಾಜನ್ನನಯೋಃ ಕಥಿತಂ ದ್ವಯೋಃ।
ಪ್ರತಿಜ್ಞಾತಂ ಮಯಾ ಯತ್ತೇ ತದ್ಗೃಹಾಣಾವಿಚಾರಿತಮ್ ॥೧೦೬॥

"ಮಹಾರಾಜ! ಈ ವಿಕೃತ–ವಿರೂಪರಿಬ್ಬರೂ ಹೇಳಿದ ಮಾತುಗಳನ್ನು ನೀನೂ ಕೇಳಿದೆಯಲ್ಲವೇ? ನೀನು ಯಾಚನೆಮಾಡಿದನಂತರವೇ ನಾನು ನನ್ನ ಜಪದ ಫಲವನ್ನು ಕೊಡಲು ಪ್ರತಿಜ್ಞೆಮಾಡಿದೆನು. ಅದಕ್ಕೆ ಅನುಸಾರವಾಗಿ ನಾನು ಕೊಡಲಿರುವ ಜಪಫಲದಾನವನ್ನು ಯಾವುದನ್ನೂ ವಿಚಾರಮಾಡದೆ ಪ್ರತಿಗ್ರಹಿಸು."

ರಾಜನು ತನ್ನಲ್ಲಿಯೇ ಹೇಳಿಕೊಳ್ಳುತ್ತಾನೆ :

"ಹೆಚ್ಚು ಗಹನವಾದ ಗುಹೆಯಂತೆ ನಿರ್ಣಯಿಸಲಾಗದ ಅತ್ಯಂತ ನಿಗೂಢವಾಗಿರುವ ವಿರೂಪ-ವಿಕೃತರ ಮಹಾಕಾರ್ಯವು ನನ್ನ ಮುಂದೆ ಪ್ರಸ್ತುತವಾಗಿದೆ. ವಿರೂಪ-ವಿಕೃತರ ವಾದ-ವಿವಾದಗಳನ್ನೇ ಆಧರಿಸಿ ಈ ವಿಪ್ರರ್ಷಿಯೂ ಜಪದ ಫಲವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಪಡಿಸುತ್ತಿದ್ದಾನೆ. ಮುಂದೆ ಇದರ ಪರಿಣಾಮವೇನಾಗಬಹುದು? ಬ್ರಾಹ್ಮಣನು ದಾನಮಾಡಿರುವ ಜಪಫಲವನ್ನು ನಾನು ಪ್ರತಿಗ್ರಹಿಸದಿದ್ದರೆ ಈಗ ನಾನು ಆ ಮಹಾಪಾಪದಿಂದ ಹೇಗೆ ನಿರ್ಲಿಪ್ತನಾಗಲಿ?"

ಇಕ್ಷ್ವಾಕುರಾಜನು ಹೀಗೆ ಮನಸ್ಸಿನಲ್ಲಿಯೇ ತಾನು ಮಾಡುತ್ತಿರುವುದು ತಪ್ಪು ಮತ್ತು ಅದರಿಂದ ಪಾಪವು ಸಂಘಟನೆಯಾಗುವುದು–ಎಂಬುದನ್ನು ನಿಶ್ಚಯಿಸಿ ವಿಕೃತ-ವಿರೂಪರನ್ನು ಕುರಿತು ಹೇಳುತ್ತಾನೆ :

"ವಿಕೃತ-ವಿರೂಪರೇ! ನಿಮ್ಮ ಕಾರ್ಯವನ್ನು ಮುಗಿಸಿಕೊಂಡನಂತರವೇ ನೀವು ಇಲ್ಲಿಂದ ಪ್ರಯಾಣಮಾಡಬೇಕು. ನನ್ನ ಬಳಿಗೆ ಬಂದು ನೀವು ಪ್ರಯೋಜನರಹಿತರಾಗಿ ಹೋಗಬಾರದು. ರಾಜಧರ್ಮವು ಕಳಂಕಿತವಾಗ ಬಾರದು.

ಸ್ವಧರ್ಮಃ ಪರಿಪಾಲ್ಯಸ್ತು ರಾಜ್ಞಾಮಿತಿ ವಿನಿಶ್ಚಯಃ।
ವಿಪ್ರಧರ್ಮಶ್ಚ ಗಹನೋ ಮಾಮನಾತ್ಮಾನಮಾವಿಶತ್ ॥೧೦೯॥

ರಾಜರು ಯಾವಾಗಲೂ ಸ್ವಧರ್ಮವನ್ನು ಪರಿಪಾಲಿಸಬೇಕೆಂಬುದು ಶಾಸ್ತ್ರದ ಸಿದ್ಧಾಂತವಾಗಿದೆ. ಆದರೆ ಗಹನವಾದ ಬ್ರಾಹ್ಮಣಧರ್ಮವು ಜಿತೇಂದ್ರಿಯನಲ್ಲದ ನನ್ನನ್ನು ಪ್ರವೇಶಿಸಿಬಿಟ್ಟಿತು. (ಹೀಗೆ ಪ್ರವೇಶಿಸಿರದಿದ್ದರೆ ನಾನು ಬ್ರಾಹ್ಮಣನನ್ನು ಯಾಚಿಸುತ್ತಿರಲಿಲ್ಲ.)"

ಬ್ರಾಹ್ಮಣನು ಹೇಳುತ್ತಾನೆ :

ಗೃಹಾಣ ಧಾರಯೇಽಹಂ ಚ ಯಾಚಿತಂ ಸಂಶ್ರುತಂ ಮಯಾ।
ನ ಚೇದ್ಗ್ರಹೀಷ್ಯಸೇ ರಾಜಞ್ಶಪಿಷ್ಯೇ ತ್ವಾಂ ನ ಸಂಶಯಃ ॥೧೧೦॥

"ನೀನು ಯಾಚನೆಮಾಡಿದ ಮತ್ತು ನಾನು ಕೊಡುವೆನೆಂದು ಪ್ರತಿಜ್ಞೆ ಮಾಡಿರುವ ಜಪಫಲವನ್ನು ನಿನಗೆ ಕೊಡುವ ಸಲುವಾಗಿಯೇ ಧಾರಣೆ ಮಾಡಿಕೊಂಡಿರುತ್ತೇನೆ. ಶೀಘ್ರವಾಗಿ ಪ್ರತಿಗ್ರಹಿಸು. ಒಂದು ವೇಳೆ ನೀನು ತೆಗೆದುಕೊಳ್ಳದೆಯೇ ಹೋದರೆ ನಿನ್ನನ್ನು ಶಪಿಸಿಬಿಡುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ."

ಇಕ್ಷ್ವಾಕುವು ಉದ್ಗರಿಸುತ್ತಾನೆ :

ಧಿಗ್ರಾಜಧರ್ಮಂ ಯಸ್ಯಾಯಂ ಕಾರ್ಯಸ್ಯೇಹ ವಿನಿಶ್ಚಯಃ।
ಇತ್ಯರ್ಥಂ ಮೇ ಗ್ರಹೀತವ್ಯಂ ಕಥಂ ತುಲ್ಯಂ ಭವೇದಿತಿ ॥೧೧೧॥

"ರಾಜಧರ್ಮಕ್ಕೆ ಧಿಕ್ಕಾರವಿರಲಿ! ಏಕೆಂದರೆ : ರಾಜಧರ್ಮದ ಅನು

ಸಾರವಾಗಿ ನಡೆಯಲು ಇಚ್ಛಿಸಿದ ನಾನು ವಿರೂಪನು ಕೊಡಲು ಬಂದ ದಾನವನ್ನು ವಿಕೃತನು ಸ್ವೀಕರಿಸಬೇಕೆಂಬ ತೀರ್ಪನ್ನಿತ್ತೆನು. ಆದರೆ ನಾನೇ ಕೊಟ್ಟ ತೀರ್ಪಿಗೆ ಅನುಸಾರವಾಗಿ ಬ್ರಾಹ್ಮಣನು ಕೊಡಲು ಬಂದಿರುವ ಜಪದ ಫಲವನ್ನು ನಾನು ಸ್ವೀಕರಿಸಬೇಕಾದುದು ಅನಿವಾರ್ಯವಾಗಿದೆ. ಆದುದರಿಂದ ಈಗ ನಾನು ಬ್ರಾಹ್ಮಣನಿಗೂ ಮತ್ತು ನನಗೂ ಸಮಾನವಾದ ಫಲವು ಹೇಗೆ ಲಭಿಸುವುದೆಂಬುದನ್ನು ಯೋಚಿಸುತ್ತಿದ್ದೇನೆ.

ಏಷ ಪಾಣಿರಪೂರ್ವಂ ಮೇ ನಿಕ್ಷೇಪಾರ್ಥಂ ಪ್ರಸಾರಿತಃ।
ಯನ್ಮೇ ಧಾರಯಸೇ ವಿಪ್ರ ತದಿದಾನೀಂ ಪ್ರದೀಯತಾಮ್ ॥೧೧೨॥

ನಾನು ಈ ಹಿಂದೆ ದಾನಕ್ಕಾಗಿ ಮುಂದೆ ಚಾಚದಿದ್ದ ಕೈಯನ್ನು ಈಗ ನೀನು ಕೊಡುತ್ತಿರುವ ಫಲದ ನಿಕ್ಷೇಪಕ್ಕಾಗಿ ಮುಂದೆ ಚಾಚುತ್ತಿದ್ದೇನೆ. (ನೀನು ದಾನಮಾಡುವ ಫಲವು ನನಗೆ ಯಾವ ಪ್ರಯೋಜನಕ್ಕೂ ಬಾರದೇ ಇರುವುದರಿಂದ ಅದು ನನ್ನಲ್ಲಿ ನಿಕ್ಷೇಪವಾಗಿ ಮಾತ್ರವೇ ಉಳಿದಿರುತ್ತದೆ.) ಬ್ರಾಹ್ಮಣೋತ್ತಮ! ನೀನು ನನಗೆ ಕೊಡಲಿಚ್ಛಿಸಿ ಧರಿಸಿಕೊಂಡಿರುವ ಫಲವನ್ನು ಈಗ ನನಗೆ ಪ್ರದಾನಮಾಡು."

ವಿಪ್ರರ್ಷಿಯು ಹೇಳುತ್ತಾನೆ :

ಸಂಹಿತಾಂ ಜಪತಾ ಯಾವಾನ್ಗುಣಃ ಕಶ್ಚಿತ್ಕೃತೋ ಮಯಾ।
ತತ್ಸರ್ವಂ ಪ್ರತಿಗೃಹ್ಣೀಷ್ವ ಯದಿ ಕಿಂಚಿದಿಹಾಸ್ತಿ ಮೇ ॥೧೧೩॥

"ಸಂಹಿತಾಜಪದಲ್ಲಿಯೇ ನಿರತನಾದ ನಾನು ಎಷ್ಟು ಜಪವನ್ನು ಮಾಡಿರುವೆನೋ ಮತ್ತು ಮಾಡಿರುವ ಆ ಜಪದ ಎಷ್ಟು ಗುಣಗಳನ್ನು (ಪುಣ್ಯವನ್ನು) ಸಂಪಾದನೆ ಮಾಡಿರುವೆನೋ–ಅವೆಲ್ಲವನ್ನೂ ನೀನು ಪರಿಗ್ರಹಿಸು. ಇಷ್ಟುಮಾತ್ರವಲ್ಲದೇ ಬೇರಾವುದಾದರೂ ಕಾರಣದಿಂದ ನನ್ನಲ್ಲಿ ಪುಣ್ಯವು ಸಂಚಿತವಾಗಿದ್ದರೆ ಅದನ್ನೂ ನೀನು ಪ್ರತಿಗ್ರಹಿಸು."

ರಾಜನು ಹೇಳುತ್ತಾನೆ :

ಜಲಮೇತನ್ನಿಪತಿತಂ ಮಮ ಪಾಣೌ ದ್ವಿಜೋತ್ತಮ।
ಸಮಮಸ್ತು ಸಹೈವಾಸ್ತು ಪ್ರತಿಗೃಹ್ಣಾತು ವೈ ಭವಾನ್ ॥೧೧೪॥

"ದ್ವಿಜಶ್ರೇಷ್ಠನೇ! ನೀನು ಸಂಕಲ್ಪಮಾಡಿ ಧಾರೆಯೆರೆದ ನೀರು

ನನ್ನ ಕೈಯಲ್ಲಿ ಬಿದ್ದಿದೆ. ನನ್ನಲ್ಲಿರುವ ಮತ್ತು ನಿನ್ನಲ್ಲಿರುವ ಪುಣ್ಯಗಳು ಒಂದಾಗಿ ನಮ್ಮಿಬ್ಬರಿಗೂ ಸಮಾನವಾಗಿ ಲಭಿಸುವಂತಾಗಲಿ. ನಾವಿಬ್ಬರೂ ಜೊತೆಯಲ್ಲಿಯೇ ಪುಣ್ಯಫಲವನ್ನು ಸಮಾನವಾಗಿಯೇ ಉಪಭೋಗಿಸೋಣ. ಆದುದರಿಂದ ನಾನು ಕೊಡಲಿರುವ ಪುಣ್ಯಕರ್ಮಫಲದ ದಾನವನ್ನು ನೀನು ದಯಮಾಡಿ ಪ್ರತಿಗ್ರಹಿಸು."

ಆ ಸಮಯದಲ್ಲಿ ವಿರೂಪನು ಹೇಳುತ್ತಾನೆ :

ಕಾಮಕ್ರೋಧೌ ವಿದ್ಧಿ ನೌ ತ್ವಮಾವಾಭ್ಯಾಂ ಕಾರಿತೋ ಭವಾನ್।
ಸಹೇತಿ ಚ ಯದುಕ್ತಂ ತೇ ಸಮಾ ಲೋಕಾಸ್ತವಾಸ್ಯ ಚ ॥೧೧೫॥

"ರಾಜನೇ! ವಿಕೃತ ಮತ್ತು ವಿರೂಪ ಎಂಬ ಹೆಸರುಗಳನ್ನಿಟ್ಟುಕೊಂಡು ಮೂರ್ತಿಮಂತರಾಗಿ ಬಂದಿರುವ ನಾವು ಕಾಮ-ಕ್ರೋಧಗಳು. ನಾವೇ ನಿನ್ನನ್ನು ಆ ಕಾರ್ಯದಲ್ಲಿ ತೊಡಗಿಸಿದೆವು. 'ಸಹೈವಾಸ್ತು–ಇಬ್ಬರ ಫಲಗಳನ್ನೂ ಕೂಡಿಸಿ ಅದನ್ನು ಇಬ್ಬರೂ ಒಟ್ಟಿಗೆ ಉಪಭೋಗಿಸುವಂತಾಗಲಿ'–ಎಂದು ನೀನು ಹೇಳಿದ ಕಾರಣ ನಿನಗೂ ಮತ್ತು ಈ ಬ್ರಾಹ್ಮಣಶ್ರೇಷ್ಠನಿಗೂ ಸಮಾನವಾದ ಪುಣ್ಯಲೋಕಗಳೇ ಪ್ರಾಪ್ತವಾಗುತ್ತವೆ. ಈ ವಿಕೃತನು ನನ್ನ ಯಾವ ಋಣವನ್ನೂ ಹೊತ್ತುಕೊಂಡಿಲ್ಲ. ನಿನ್ನ ಸಲುವಾಗಿಯೇ ಅಥವಾ ನಿನ್ನನ್ನು ಪರೀಕ್ಷಿಸುವ ಸಲುವಾಗಿಯೇ–ನೀನು ಬ್ರಾಹ್ಮಣನಿಂದ ದಾನವನ್ನು ಪಡೆಯಲೆಂದೇ ನಿನ್ನ ಸಮ್ಮುಖದಲ್ಲಿ ನಾವು ಈ ಜಿಜ್ಞಾಸೆಯನ್ನು ಮಾಡಿದೆವು. ಕಾಲ, ಧರ್ಮ, ಮೃತ್ಯು, ಕಾಮ, ಕ್ರೋಧ, ನೀನು ಮತ್ತು ಜಾಪಕಬ್ರಾಹ್ಮಣ–ಈ ಎಲ್ಲರ ನಡುವೆ ನಿನ್ನ ಸಮಕ್ಷದಲ್ಲಿಯೇ ಯಾರು ಹೆಚ್ಚೆಂಬುದರ ಪರೀಕ್ಷೆಯಾಯಿತು. ಈಗ ನೀನು ನಿನ್ನ ಪುಣ್ಯಕರ್ಮಗಳಿಂದ ಜಯಿಸಿರುವ ಪುಣ್ಯಲೋಕಗಳಲ್ಲಿ ಯಾವ ಲೋಕಗಳಿಗೆ ಹೋಗಲು ಇಚ್ಛಿಸಿರುವೆಯೋ ಆ ಲೋಕಗಳಿಗೆ ಹೋಗಬಹುದಾಗಿದೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಜಾಪಕರಿಗೆ ಯಾವ ರೀತಿಯಲ್ಲಿ ಫಲವು ಲಭಿಸುತ್ತದೆ? ಎಂಬುದನ್ನು ನಿನಗೆ ವಿವರಿಸಿ ಹೇಳಿದೆನು. ಜಾಪಕನಾದವನು

ಯಾವ ಸ್ಥಾನವನ್ನು ಹೊಂದುತ್ತಾನೆ.? ಯಾವ ಉತ್ತಮಗತಿಯು ಅವನಿಗೆ ಲಭಿಸುತ್ತದೆ? ಮತ್ತು ಯಾವ ಪುಣ್ಯಲೋಕಗಳು ಅವನಿಗೆ ಪ್ರಾಪ್ತವಾಗುತ್ತವೆ?–ಎಂಬುದನ್ನು ಹೇಳುತ್ತೇನೆ :

ಪ್ರಯಾತಿ ಸಂಹಿತಾಧ್ಯಾಯೀ ಬ್ರಹ್ಮಾಣಂ ಪರಮೇಷ್ಠಿನಮ್।
ಅಥವಾಗ್ನಿಂ ಸಮಾಯಾತಿ ಸೂರ್ಯಮಾವಿಶತೇಽಪಿ ವಾ ॥೧೯॥

ಸಂಹಿತೆಯನ್ನು ಅಧ್ಯಯನಮಾಡುವ ಬ್ರಾಹ್ಮಣನು ಪರಮೇಷ್ಠಿ ಬ್ರಹ್ಮನ ಸಾನ್ನಿಧ್ಯವನ್ನು ಪಡೆಯುತ್ತಾನೆ ಅಥವಾ ಅಗ್ನಿಯ ಲೋಕಕ್ಕೆ ಹೋಗುತ್ತಾನೆ ಅಥವಾ ಸೂರ್ಯನನ್ನೇ ಪ್ರವೇಶಿಸುತ್ತಾನೆ. (ಸೂರ್ಯನ ಲೋಕಕ್ಕೆ ಹೋಗುತ್ತಾನೆ.)

ಸ ತೈಜಸೇನ ಭಾವೇನ ಯದಿ ತತ್ರ ರಮತ್ಯುತ।
ಗುಣಾಂಸ್ತೇಷಾಂ ಸಮಾಧತ್ತೇ ರಾಗೇಣ ಪ್ರತಿಮೋಹಿತಃ ॥೨೦॥

ಜಾಪಕನು ತೇಜೋಮಯವಾದ ಶರೀರದಿಂದ ಕೂಡಿದವನಾಗಿ ಆ ಲೋಕಗಳಲ್ಲಿ ಸಂಚರಿಸುತ್ತಿದ್ದರೆ–ಅಲ್ಲಿರುವ ಪ್ರೀತಿಯುಕ್ತವಾದ ವಾತಾವರಣದಿಂದ ವಿಮೋಹಿತನಾಗಿ ಆ ಲೋಕಗಳ ಗುಣಗಳನ್ನು ಮೈಗೂಡಿಸಿಕೊಳ್ಳುತ್ತಾನೆ.

ಏವಂ ಸೋಮೇ ತಥಾ ವಾಯೌ ಭೂಮ್ಯಾಕಾಶರೀರಗಃ।
ಸರಾಗಸ್ತತ್ರ ವಸತಿ ಗುಣಾಂಸ್ತೇಷಾಂ ಸಮಾಚರನ್ ॥೨೧॥

ಹೀಗೆ ಸಂಹಿತಾಧ್ಯಾಯಿಯು ಚಂದ್ರಲೋಕ, ವಾಯುಲೋಕ, ಭೂಲೋಕ, ಅಂತರಿಕ್ಷಲೋಕಗಳಲ್ಲಿ ಆಸಕ್ತನಾದರೆ–ಅಲ್ಲಿಯೇ ವಾಸಮಾಡುತ್ತಿರುತ್ತಾನೆ. ಆಯಾ ಲೋಕಗಳ ಗುಣಗಳಿಗೆ ಅನುಸಾರವಾಗಿರುತ್ತಾನೆ.

ಅಥ ತತ್ರ ವಿರಾಗೀ ಸ ಗಚ್ಛತಿ ತ್ವಥ ಸಂಶಯಮ್।
ಪರಮವ್ಯಯಮಿಚ್ಛನ್ಸ ತಮೇವಾವಿಶತೇ ಪುನಃ ॥೨೨॥

ಒಂದು ವೇಳೆ ಜಾಪಕನು ಚಂದ್ರಲೋಕ-ವಾಯುಲೋಕಾದಿಗಳ ಉತ್ಕೃಷ್ಟತೆಯಲ್ಲಿ ಸಂಶಯವನ್ನು ಹೊಂದಿದರೆ ಮತ್ತು ಶ್ರೇಷ್ಠವಾದ ಮತ್ತು ಶಾಶ್ವತವಾದ ಪರಮಪದಕ್ಕೇ ಹೋಗುವ ಇಚ್ಛೆಯಿಂದ ಚಂದ್ರಾದಿ ಲೋಕ

ಗಳ ವಿಷಯದಲ್ಲಿಯೂ ವಿರಕ್ತಿಯನ್ನು ಹೊಂದಿದರೆ–ಆ ಜಾಪಕನು ಪರಬ್ರಹ್ಮಪರಮಾತ್ಮನಲ್ಲಿಯೇ ಲೀನನಾಗುತ್ತಾನೆ.

ಅಮೃತಾಚ್ಚಾಮೃತಂ ಪ್ರಾಪ್ತಃ ಶಾನ್ತಿಭೂತೋ ನಿರಾತ್ಮವಾನ್।
ಬ್ರಹ್ಮಭೂತಃ ಸ ನಿರ್ದ್ವನ್ದ್ವಃ ಸುಖೀ ಶಾನ್ತೋ ನಿರಾಮಯಃ॥೧೨೩॥

ಬ್ರಹ್ಮಸಾಕ್ಷಾತ್ಕಾರರೂಪವಾದ ಅಮೃತದಿಂದ ಬ್ರಹ್ಮಪ್ರಾಪ್ತಿರೂಪವಾದ ಅಮೃತವನ್ನು ಪಡೆದುಕೊಳ್ಳುತ್ತಾನೆ. ಬ್ರಹ್ಮಸಾಕ್ಷಾತ್ಕಾರವನ್ನು ಪಡೆದ ಜಾಪಕನು ನಿಷ್ಕಾಮನಾಗಿರುತ್ತಾನೆ. ಅಹಂಕಾರರಹಿತನಾಗಿರುತ್ತಾನೆ. ಸುಖ-ದುಃಖಾದಿ ದ್ವಂದ್ವಗಳಿಂದ ವರ್ಜಿತನಾಗಿರುತ್ತಾನೆ. ಸುಖಿಯಾಗಿಯೂ, ಶಾಂತನಾಗಿಯೂ, ರೋಗ-ಶೋಕಗಳಿಂದ ರಹಿತನಾಗಿಯೂ ಇರುತ್ತಾನೆ.

ಬ್ರಹ್ಮಸ್ಥಾನಮನಾವರ್ತಮೇಕಮಕ್ಷಯಸಂಜ್ಞಕಮ್।
ಅದುಃಖಮಜರಂ ಶಾನ್ತಂ ಸ್ಥಾನಂ ತತ್ಪ್ರತಿಪದ್ಯತೇ ॥೧೨೪॥

ಬ್ರಹ್ಮಪದವೆಂಬುದು ಹುಟ್ಟು-ಸಾವುಗಳಿಂದ ರಹಿತವಾದುದು. ಅಖಂಡವಾದುದು. ಅವಿನಾಶಿಯಾದುದು. ಏಕಾಕ್ಷರವಾದ ಓಂಕಾರಸಂಜ್ಞಕ ವಾದುದು. ದುಃಖಶೂನ್ಯವಾದುದು. ಜರಾಶೂನ್ಯವಾದುದು. ಅಂತಹ ಶಾಂತವಾದ ಬ್ರಹ್ಮಸ್ಥಾನವನ್ನು ಜಾಪಕನು ಪಡೆದುಕೊಳ್ಳುತ್ತಾನೆ.

ಚತುರ್ಭಿರ್ಲಕ್ಷಣೈರ್ಹೀನಂ ತಥಾ ಷಡ್ಭಿಃ ಸಷೋಡಶೈಃ।
ಪುರುಷಂ ತಮತಿಕ್ರಮ್ಯ ಆಕಾಶಂ ಪ್ರತಿಪದ್ಯತೇ ॥೧೨೫॥

ಜಾಪಕನು ಆ ಪುರುಷನನ್ನು ಅತಿಕ್ರಮಿಸಿ ಪ್ರತ್ಯಕ್ಷಾನುಮಾನ–ಉಪ ಮಾನ ಶಬ್ದಗಳೆಂಬ ನಾಲ್ಕು ಪ್ರಮಾಣಗಳಿಂದ ವಿಹೀನವಾದ, ಕ್ಷುತ್ಪಿಪಾಸಾ ಶೋಕಮೋಹಜರಾಮೃತ್ಯುಗಳೆಂಬ ಆರು ಗುಣಗಳಿಂದ ರಹಿತವಾದ, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಪಂಚಪ್ರಾಣಗಳು ಮತ್ತು ಮನಸ್ಸು–ಈ ಹದಿನಾರು ಗುಣಗಳಿಂದಲೂ ರಹಿತವಾದ ಆಕಾಶರೂಪವಾದ ಪರಬ್ರಹ್ಮತ್ತ್ವವನ್ನು ಹೊಂದುತ್ತಾನೆ.

ಅಥ ನೇಚ್ಛತಿ ರಾಗಾತ್ಮಾ ಸರ್ವಂ ತದಧಿತಿಷ್ಠತಿ।
ಯಚ್ಚ ಪ್ರಾರ್ಥಯತೇ ತಚ್ಚ ಮನಸಾ ಪ್ರತಿಪದ್ಯತೇ ॥೧೨೬॥

ಯಾವನು ಅದನ್ನು (ಬ್ರಹ್ಮನನ್ನು) ಹೊಂದಲು ಉಪಾಸನೆಮಾಡಲು ಇಚ್ಛೆಪಡುವುದಿಲ್ಲವೋ ಮತ್ತು ಪುಣ್ಯಲೋಕಗಳ ಭೋಗಗಳಲ್ಲಿಯೇ ಆಸಕ್ತನಾಗಿರುವನೋ–ಅಂತಹ ಜಾಪಕನು ಸಕಲವಿಧವಾದ ಪುಣ್ಯಲೋಕಗಳನ್ನೂ ಪಡೆದುಕೊಳ್ಳುತ್ತಾನೆ. ಜಾಪಕನು ಯಾವ ವಸ್ತುವನ್ನು ಪಡೆದುಕೊಳ್ಳಲು ಮನಸ್ಸಿನಿಂದ ಇಚ್ಛಿಸುವನೋ–ಅಂತಹ ವಸ್ತುವನ್ನು ಅವನು ಕ್ಷಣಮಾತ್ರದಲ್ಲಿ ಪಡೆದುಕೊಳ್ಳುತ್ತಾನೆ.

ಅಥವಾ ಚೇಕ್ಷತೇ ಲೋಕಾನ್ಸರ್ವಾನ್ನಿರಯಸಂಜ್ಞಿತಾನ್।
ನಿಸ್ಪೃಹಃ ಸರ್ವತೋ ಮುಕ್ತಸ್ತತ್ರ ವೈ ರಮತೇ ಸುಖಮ್ ॥೧೨೭॥

ಯಾವನು ಎಲ್ಲ ಉತ್ತಮಲೋಕಗಳನ್ನೂ ಪುನರಾವೃತ್ತಿಯನ್ನುಂಟುಮಾಡುವ ನರಕಸದೃಶಗಳೆಂದೇ ಭಾವಿಸುತ್ತಾನೆಯೋ–ಆ ಲೋಕಗಳ ವಿಷಯದಲ್ಲಿ ನಿಃಸ್ಪೃಹತೆಯಿಂದಿದ್ದು ಮುಕ್ತನಾಗುವನೋ–ಅಂತಹ ಜಾಪಕನು ಪರಬ್ರಹ್ಮದಲ್ಲಿಯೇ ಮನಸ್ಸನ್ನು ಲೀನಗೊಳಿಸಿ ಸುಖದಿಂದ ರಮಿಸುತ್ತಿರುತ್ತಾನೆ.

ಯುಧಿಷ್ಠಿರಮಹಾರಾಜ! ನಾನು ನಿನಗೆ ಜಾಪಕನಿಗೆ ಯಾವ ಗತಿಯು ಲಭಿಸುವುದೆಂಬುದರ ವಿಷಯವಾಗಿ ಎಲ್ಲವನ್ನೂ ವಿವರಿಸಿ ಹೇಳಿದ್ದೇನೆ. ಮುಂದೆ ನೀನು ನನ್ನಿಂದ ಯಾವ ವಿಷಯವನ್ನು ಕೇಳಬೇಕೆಂದಿರುವೆ?”

೧೯೯ನೆಯ ಅಧ್ಯಾಯವು ಮುಗಿಯಿತು.

೨೦೦ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜಾಪಕಬ್ರಾಹ್ಮಣನಿಗೂ ಮತ್ತು ಇಕ್ಷ್ವಾಕುವಿಗೂ ಉತ್ತಮಗತಿಯು ಲಭಿಸಿದುದು: ಜಾಪಕನಿಗೆ ಲಭಿಸುವ ಫಲದ ಉತ್ಕೃಷ್ಟತೆ

(೧೯೯ನೆಯ ಅಧ್ಯಾಯದ ೧೧೭ನೆಯ ಶ್ಲೋಕದಿಂದ ಮುಂದಕ್ಕೆ ಕಥೆಯು ಕವಲೊಡೆದಂತೆಯೇ ಕಾಣುತ್ತದೆ. ರಾಜನು ಹೇಳಿದುದಕ್ಕೆ ಬ್ರಾಹ್ಮಣನ ಪ್ರತಿಕ್ರಿಯೆ ಏನೆಂಬುದೇ ತಿಳಿಯುವುದಿಲ್ಲ. ಅದನ್ನೇ ಇಲ್ಲಿ ಧರ್ಮರಾಜನೂ ಪ್ರಶ್ನಿಸುತ್ತಾನೆ :)

ಕಿಮುತ್ತರಂ ತದಾ ತೌ ಸ್ಮ ಚಕ್ರತುಸ್ತಸ್ಯ ಭಾಷಿತೇ।
ಬ್ರಾಹ್ಮಣೋ ವಾಥವಾ ರಾಜಾ ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹನೇ! ಆ ಸಮಯದಲ್ಲಿ ವಿರೂಪನು ತನ್ನ ನಿಜಸ್ವರೂಪ ವನ್ನು ತಿಳಿಸಿ, ಬ್ರಾಹ್ಮಣನಿಗೂ ರಾಜನಿಗೂ ಸಮಾನವಾದ ಲೋಕಗಳೇ ಸಿಕ್ಕುವುವೆಂದು ಹೇಳಿದನಂತರ ಬ್ರಾಹ್ಮಣನಾಗಲೀ ರಾಜನಾಗಲೀ ಏನು ಮಾಡಿದರು? ಈ ವಿಷಯವನ್ನು ನನಗೆ ಹೇಳು.

ಅಥ ವಾ ತೌ ಗತೌ ತತ್ರ ಯದೇತತ್ಕೀರ್ತಿತಂ ತ್ವಯಾ।
ಸಂವಾದೋ ವಾ ತಯೋಃ ಕೋಽಭೂತ್ಕಿಂ ವಾ ತೌ ತತ್ರ ಚಕ್ರತುಃ ॥೨॥

ಅಥವಾ ನೀನು ಹೇಳಿದಂತೆ ಅವರು ಪುಣ್ಯಲೋಕಗಳಿಗೆ ಹೊರಟು ಹೋದರೇ? ಪುಣ್ಯಲೋಕಗಳನ್ನೂ ನರಕಸದೃಶವನ್ನಾಗಿ ಭಾವಿಸಿ ಪರಬ್ರಹ್ಮ ವನ್ನು ಹೊಂದಿದರೇ? ಮುಂದೆ ಬ್ರಾಹ್ಮಣ ಮತ್ತು ರಾಜರ ನಡುವೆ ಯಾವ ವಿಧವಾದ ಮಾತು-ಕತೆಗಳಾದುವು? ಮುಂದೆ ಅಲ್ಲಿ ಅವರೇನು ಮಾಡಿದರು?"


ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರಮಹಾರಾಜ! ರಾಜನು '**ಸಮಮಸ್ತು ಸಹೈವಾಸ್ತು**'– ಎಂದು ಹೇಳಿದುದಕ್ಕೆ ಬ್ರಾಹ್ಮಣನು ಹಾಗೆಯೇ ಆಗಲೆಂದು ಹೇಳಿ ಧರ್ಮ, ಯಮ, ಕಾಲ, ಮೃತ್ಯು, ಸ್ವರ್ಗ–ಇವರೆಲ್ಲರನ್ನೂ ಯಥಾಯೋಗ್ಯವಾಗಿ ಸಂಪೂಜಿಸಿದನು. ಹಿಂದೆ ಯಾರು ಇದ್ದರೋ ಆ ಸಮಯದಲ್ಲಿ ಅಲ್ಲಿಗೆ ಯಾರು ಆಗಮಿಸಿದರೋ ಆ ಬ್ರಾಹ್ಮಣರೆಲ್ಲರಿಗೂ ಕೌಶಿಕನು ನತಶಿರನಾಗಿ ನಮಸ್ಕರಿಸಿ ರಾಜನನ್ನು ಕುರಿತು ಈ ಮಾತುಗಳನ್ನು ಹೇಳಿದನು :

ಫಲೇನಾನೇನ ಸಂಯುಕ್ತೋ ರಾಜರ್ಷೇ ಗಚ್ಛ ಮುಖ್ಯತಾಮ್।
ಭವತಾ ಚಾಭ್ಯನುಜ್ಞಾತೋ ಜಪೇಯಂ ಭೂಯ ಏವ ಹ ॥೩॥

"ರಾಜರ್ಷಿಯೇ! ನನ್ನಿಂದ ದತ್ತವಾದ ಈ ಜಪಫಲದಿಂದ ಯುಕ್ತನಾಗಿ ಶ್ರೇಷ್ಠವಾದ ಗತಿಯನ್ನು ಹೊಂದುವವನಾಗು. ನಾನು ನಿನ್ನ ಅನುಜ್ಞೆಯನ್ನು ಪಡೆದು ಪುನಃ ಜಪದಲ್ಲಿಯೇ ನಿರತನಾಗುತ್ತೇನೆ.

ವರಶ್ಚ ಮಮ ಪೂರ್ವಂ ಹಿ ದತ್ತೋ ದೇವ್ಯಾ ಮಹಾಬಲ।
ಶ್ರದ್ಧಾ ತೇ ಜಪತೋ ನಿತ್ಯಂ ಭವತ್ವಿತಿ ವಿಶಾಮ್ಪತೇ ॥೬॥



ಮಹಾಬಲನೇ! ಈ ಹಿಂದೆ ಸಾವಿತ್ರೀದೇವಿಯು ನನಗೆ – 'ಶ್ರದ್ಧಾ ತೇ ಜಪತೋ ನಿತ್ಯಂ ಭವತು-ಜಪಮಾಡುತ್ತಿರುವ ನಿನಗೆ ಆ ಜಪದಲ್ಲಿಯೇ ನಿರಂತರವಾದ ಶ್ರದ್ಧೆಯುಂಟಾಗಲಿ'–ಎಂಬ ವರವನ್ನು ದಯಪಾಲಿಸಿದ್ದಾಳೆ. (ಅವಳ ವರದ ಪ್ರಭಾವದಿಂದಾಗಿ ಜಪಮಾಡುವುದರಲ್ಲಿಯೇ ನನಗೆ ಹೆಚ್ಚಿನ ಆಸಕ್ತಿಯುಂಟಾಗಿದೆ.)"

ರಾಜನು ಹೇಳುತ್ತಾನೆ :

ಯದ್ಯೇವಮಫಲಾ ಸಿದ್ಧಿಃ ಶ್ರದ್ಧಾ ಚ ಜಪಿತುಂ ತವ।
ಗಚ್ಛ ವಿಪ್ರ ಮಯಾ ಸಾರ್ಧಂ ಜಾಪಕಂ ಫಲಮಾಪ್ನುಹಿ ॥೭॥

"ಬ್ರಾಹ್ಮಣಶ್ರೇಷ್ಠನೇ! ಫಲದ ಪ್ರಯೋಜನವು 'ಸಹೈವಾಸ್ತು' 'ಸಮಮಸ್ತು' ಎಂದು ನಾವಿಬ್ಬರೂ ಒಪ್ಪಂದಮಾಡಿಕೊಂಡಿರುವುದರಿಂದ ನೀನೀಗ ನನ್ನೊಡನೆ ಬಾರದಿದ್ದರೆ ನಿನಗೆ ಪ್ರತ್ಯೇಕವಾಗಿ ಜಪಮಾಡುವುದ ರಲ್ಲಿಯೇ ಶ್ರದ್ಧೆಯಿರುವುದಾದರೆ–ಜಪಫಲದ ಸಿದ್ಧಿಯೆಲ್ಲವೂ ವ್ಯರ್ಥವೇ ಆಗುತ್ತದೆ. ಆದುದರಿಂದ ನೀನು ನನ್ನ ಜೊತೆಯಲ್ಲಿಯೇ ಬಾ. ಜಪಫಲವನ್ನು (ನನಗೆ ದಾನವಾಗಿ ಕೊಟ್ಟುದರ ಫಲವನ್ನು) ನನ್ನ ಜೊತೆಯಲ್ಲಿಯೇ ನೀನೂ ಉಪಭೋಗಿಸಬಹುದು."

ಬ್ರಾಹ್ಮಣನು ಹೇಳುತ್ತಾನೆ :

ಕೃತಃ ಪ್ರಯತ್ನಃ ಸುಮಹಾನ್ಸರ್ವೇಷಾಂ ಸಂನಿಧಾವಿಹ।
ಸಹ ತುಲ್ಯಫಲಾವಾವಾಂ ಗಚ್ಛಾವೋ ಯತ್ರ ನೌ ಗತಿಃ ॥೮॥

"ಈ ಎಲ್ಲರ ಸಾನ್ನಿಧ್ಯದಲ್ಲಿಯೂ ನಾನು ನನ್ನ ಜಪದ ಫಲವನ್ನು ನಿನಗೆ ಕೊಡಲು ಮಹಾಪ್ರಯತ್ನವನ್ನೇ ಮಾಡಿದೆನು. ಆದರೆ ನಾನು ಜಪದ ಫಲವನ್ನು ದಾನಮಾಡುವಾಗ 'ನಮ್ಮಿಬ್ಬರ ಪುಣ್ಯಕಾರ್ಯಗಳೂ ಸಮಾನ ವಾಗಲಿ ; ನಾವಿಬ್ಬರೂ ಜೊತೆಗೂಡಿಯೇ ಈ ಫಲವನ್ನು ಅನುಭವಿ ಸೋಣ'–ಎಂದು ನೀನು ಹೇಳಿದೆ. ಆದುದರಿಂದ ಈಗ ನಾವಿಬ್ಬರೂ ಸಮಾನಫಲರೇ ಆಗಿದ್ದೇವೆ. ನಮ್ಮಿಬ್ಬರಲ್ಲಿಯೂ ಇರುವ ಸಮಾನಫಲದ ಕಾರಣದಿಂದ ನಮ್ಮಿಬ್ಬರಿಗೂ ಎಂತಹ ಗತಿಯು ಲಭಿಸುವುದೋ ಅಂತಹ ಗತಿಯನ್ನರಸಿಕೊಂಡು ನಾವಿಬ್ಬರೂ ಜೊತೆಯಲ್ಲಿಯೇ ಹೋಗೋಣ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಅವರಿಬ್ಬರೂ ಕೈಗೊಂಡ ನಿರ್ಧಾರವನ್ನು ತಿಳಿದ ದೇವಾಧಿಪತಿಯಾದ ದೇವೇಂದ್ರನು ಎಲ್ಲ ದೇವತೆಗಳೊಡನೆ ಮತ್ತು ಲೋಕ

ಪಾಲರೊಡನೆ ಅಲ್ಲಿಗೆ ಆಗಮಿಸಿದನು. ಅವನೊಡನೆ ಸಾಧ್ಯರೂ, ವಿಶ್ವೇದೇವತೆಗಳೂ, ಮರುದ್ಗಣಗಳೂ ಆಗಮಿಸಿದರು. ದೊಡ್ಡ-ದೊಡ್ಡ ವಾದ್ಯಗಳ ವಾದನವಾಗುತ್ತಿದ್ದಿತು. ನದಿಗಳೂ, ಪರ್ವತಗಳೂ, ಸಮುದ್ರಗಳೂ, ನಾನಾ ವಿಧವಾದ ತೀರ್ಥಗಳೂ, ತಪಸ್ಸುಗಳೂ, ಸಂಯೋಗವಿಧಿಗಳೂ, ವೇದಗಳೂ, ಸ್ತೋಭಗಳೂ (ಸಾಮಗಾನದಲ್ಲಿ ಹೇಳುವ, ಹಾ, ಈ, ಹಾವು ಮೊದಲಾದ ಅಕ್ಷರಗಳೂ), ಸರಸ್ವತಿಯೂ, ನಾರದರೂ, ಪರ್ವತರೂ, ವಿಶ್ವಾವಸುವೂ, ಹಹಾ, ಹುಹೂಗಳೂ, ಪರಿವಾರಸಹಿತನಾದ ಚಿತ್ರಸೇನನೆಂಬ ಗಂಧರ್ವನೂ, ನಾಗರೂ, ಸಿದ್ಧರೂ, ಮುನಿಗಳೂ, ದೇವಾಧಿದೇವನಾದ ಪ್ರಜಾಪತಿ ಬ್ರಹ್ಮನೂ, ಸಹಸ್ರಶೀರ್ಷನಾದ-ಅಚಿಂತ್ಯನಾದ-ದೇವದೇವನಾದ ಮಹಾವಿಷ್ಣುವೂ ಅಲ್ಲಿಗೆ ಆಗಮಿಸಿದರು. ಅಂತರಿಕ್ಷದಲ್ಲಿ ಭೇರೀ-ತೂರ್ಯಾದಿ ಮಂಗಳವಾದ್ಯಗಳ ವಾದನಗಳಾಗುತ್ತಿದ್ದುವು. ಅಲ್ಲಿ ನೆರೆದಿದ್ದ ಮಹಾತ್ಮರ ಮೇಲೆ ಪುಷ್ಪವೃಷ್ಟಿಯಾಗುತ್ತಿದ್ದಿತು. ಎಲ್ಲ ಕಡೆಗಳಲ್ಲಿಯೂ ಅಪ್ಸರೆಯರು ಸಾಮೂಹಿಕವಾಗಿ ನೃತ್ಯಮಾಡುತ್ತಿದ್ದರು. ಬಳಿಕ ಮೂರ್ತಿಮತ್ತಾಗಿ ಬಂದಿದ್ದ ಸ್ವರ್ಗಪುರುಷನು ಬ್ರಾಹ್ಮಣನನ್ನೂ ರಾಜನನ್ನೂ ಕುರಿತು ಹೇಳಿದನು.:

ಸಂಸಿದ್ಧಸ್ತ್ವಂ ಮಹಾಭಾಗ ತ್ವಂ ಚ ಸಿದ್ಧಸ್ತಥಾ ನೃಪ ॥೧೫॥

“ಮಹಾಭಾಗ್ಯವಂತನೇ! ಬ್ರಾಹ್ಮಣಶ್ರೇಷ್ಠನೇ! ನೀನು ಸಿದ್ಧಿಯನ್ನು ಪಡೆದಿರುವೆ. ರಾಜನೇ! ನೀನೂ ಸಂಸಿದ್ಧನಾಗಿರುವೆ.”

ಯುಧಿಷ್ಠಿರ! ಸ್ವರ್ಗಪುರುಷನು ಹೀಗೆ ಹೇಳಿದನಂತರ ಬ್ರಾಹ್ಮಣಶ್ರೇಷ್ಠ-ನೃಪಶ್ರೇಷ್ಠರಿಬ್ಬರೂ ಒಟ್ಟಾಗಿ ಸೇರಿ ತಮ್ಮಲ್ಲಿದ್ದ ಫಲವನ್ನು ಸಮಸಮನಾಗಿ ಹಂಚಿಕೊಂಡರು. ಅದರ ಪ್ರಭಾವದಿಂದಾಗಿ ಇಬ್ಬರ ಮನಸ್ಸಿನ ಭಾವನೆಯೂ ಒಂದೇ ಆಯಿತು. ಇಬ್ಬರೂ ತಮ್ಮ ಮನಸ್ಸುಗಳನ್ನು ಏಕಕಾಲದಲ್ಲಿ ವಿಷಯಗಳ ಕಡೆಯಿಂದ ಉಪಸಂಹರಿಸಿಕೊಂಡರು.

ಪ್ರಾಣಾಪಾನೌ ತಥೋದಾನಂ ಸಮಾನಂ ವ್ಯಾನಮೇವ ಚ।
ಏವಂ ತೌ ಮನಸಿ ಸ್ಥಾಪ್ಯ ದಧತುಃ ಪ್ರಾಣಯೋರ್ಮನಃ ॥೧೭॥

ಉಪಸ್ಥಿತಕೃತೌ ತೌ ಚ ನಾಸಿಕಾಗ್ರಮಧೋ ಭ್ರುವೋಃ।
ಭ್ರುಕುಟ್ಯಾ ಚೈವ ಮನಸಾ ಶನೈರ್ಧಾರಯತಸ್ತದಾ ॥೧೮॥

ಬಳಿಕ ಅವರಿಬ್ಬರೂ ಪ್ರಾಣ-ಅಪಾನ-ಉದಾನ-ಸಮಾನ-ವ್ಯಾನ ಗಳೆಂಬ ಐದು ಪ್ರಾಣವಾಯುಗಳನ್ನೂ ಹೃದಯದಲ್ಲಿ ಸ್ಥಾಪಿಸಿದರು. ಅನಂತರ ಅವರಿಬ್ಬರೂ ಏಕೀಭೂತವಾಗಿದ್ದ ಪ್ರಾಣಾಪಾನಗಳಲ್ಲಿ ಮನಸ್ಸನ್ನು ಸ್ಥಾಪಿಸಿದರು. (ಮೂಲಾಧಾರದಿಂದ ಕುಂಡಲಿನೀಶಕ್ತಿಯನ್ನು ಜಾಗ್ರತಗೊಳಿಸಿ ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಗಳೆಂಬ ಚಕ್ರಗಳನ್ನು ಅನುಕ್ರಮವಾಗಿ ಜಯಿಸಿ ಹೃದಯದಲ್ಲಿರುವ ಅನಾಹತಚಕ್ರದಲ್ಲಿ ಮನಸ್ಸನ್ನು ನಿರೋಧಿಸಿ ಅನಂತರ ಏಕೀಭೂತವಾಗಿದ್ದ ಪ್ರಾಣಾಪಾನಗಳಲ್ಲಿ ಮನಸ್ಸನ್ನು ಸ್ಥಾಪಿಸಿದರು.) ಪದ್ಮಾಸನದಲ್ಲಿ ಕುಳಿತಿದ್ದ ಕೌಶಿಕ ಮತ್ತು ಇಕ್ಷ್ವಾಕುಗಳಿಬ್ಬರೂ ಎರಡು ಹುಬ್ಬುಗಳಿಗೂ ಕೆಳಭಾಗದಲ್ಲಿ ನಾಸಿಕಾಗ್ರದಲ್ಲಿ ದೃಷ್ಟಿಯನ್ನಿಟ್ಟು ಭ್ರುಕುಟಿಯಿಂದಲೂ ಮತ್ತು ಮನಸ್ಸಿನಿಂದಲೂ ಪ್ರಾಣಾಪಾನಗಳನ್ನು ಆಜ್ಞಾಚಕ್ರದಲ್ಲಿ ನಿಲ್ಲಿಸಿದರು.

ನಿಶ್ಚೇಷ್ಟಾಭ್ಯಾಂ ಶರೀರಾಭ್ಯಾಂ ಸ್ಥಿರದೃಷ್ಟೀ ಸಮಾಹಿತೌ।
ಜಿತಾತ್ಮಾನೌ ತಥಾಧಾಯ ಮೂರ್ಧನ್ಯಾತ್ಮಾನಮೇವ ಚ ॥೧೯॥

ಹೀಗೆ ಅವರು ಚೇಷ್ಟಾರಹಿತವಾದ ಶರೀರಗಳಿಂದ ಕೂಡಿದವರಾಗಿ, ಜಿತಾತ್ಮರಾಗಿ, ಭ್ರೂಮಧ್ಯದಲ್ಲಿರುವ ಆಜ್ಞಾಚಕ್ರದಲ್ಲಿಯೇ ಸ್ಥಿರವಾದ ದೃಷ್ಟಿಯನ್ನಿಟ್ಟು ಪ್ರಾಣಾಪಾನಗಳೊಡನಿದ್ದ ಮನಸ್ಸನ್ನು ಸುಷುಮ್ನಾನಾಡಿಯ ಮೂಲಕವಾಗಿ ಸಹಸ್ರಾರದಲ್ಲಿ ಸ್ಥಾಪಿಸಿದರು.

ತಾಲುದೇಶಮಥೋದ್ದಾಲ್ಯ ಬ್ರಾಹ್ಮಣಸ್ಯ ಮಹಾತ್ಮನಃ।
ಜ್ಯೋತಿರ್ಜ್ವಾಲಾ ಸುಮಹತೀ ಜಗಾಮ ತ್ರಿದಿವಂ ತದಾ ॥೨೦॥

ಆ ಸಮಯದಲ್ಲಿ ಮಹಾತ್ಮನಾದ ಬ್ರಾಹ್ಮಣನ ತಾಲುದೇಶವನ್ನು (ವಿಶುದ್ಧ ಚಕ್ರವನ್ನು) ಭೇದಿಸಿಕೊಂಡು ಜ್ಯೋತಿರ್ಮಯವಾದ ವಿಶಾಲವಾದ ಒಂದು ಜ್ವಾಲೆಯು ಹೊರಬಂದು ಸ್ವರ್ಗಲೋಕದ ಕಡೆಗೆ ಹೊರಟು ಹೋಯಿತು.

ಹಾಹಾಕಾರಸ್ತಥಾ ದಿಕ್ಷು ಸರ್ವೇಷಾಂ ಸುಮಹಾನಭೂತ್।
ತಜ್ಜ್ಯೋತಿಃ ಸ್ತೂಯಮಾನಂ ಸ್ಮ ಬ್ರಹ್ಮಾಣಂ ಪ್ರಾವಿಶತ್ತದಾ ॥೨೧॥

ತತಃ ಸ್ವಾಗತಮಿತ್ಯಾಹ ತತ್ತೇಜಃ ಪ್ರಪಿತಾಮಹಃ।
ಪ್ರಾದೇಶಮಾತ್ರಂ ಪುರುಷಂ ಪ್ರತ್ಯುದ್ಗಮ್ಯ ವಿಶಾಮ್ಪತೇ ॥೨೨॥

ಆ ಸಮಯದಲ್ಲಿ ಎಲ್ಲ ದಿಕ್ಕುಗಳಲ್ಲಿಯೂ ಮಹತ್ತಾದ ಕೋಲಾಹಲ ವುಂಟಾಯಿತು. ಆ ಜ್ಯೋತಿಯನ್ನು ನೋಡಿದವರೆಲ್ಲರೂ ಸ್ತೋತ್ರಮಾಡು ತ್ತಿದ್ದರು. ಚೋಟುದ್ದವಿದ್ದ ತೇಜಃಪುಂಜಯುಕ್ತನಾಗಿದ್ದ ಆ ಪುರುಷನು ಪಿತಾಮಹನ ಬಳಿಗೆ ಹೋದನು. ಒಡನೆಯೇ ಪಿತಾಮಹನಾದ ಬ್ರಹ್ಮನು ಮುಂದೆ ಹೋಗಿ ಪ್ರಾದೇಶಮಾತ್ರವಿದ್ದ ಆ ಜ್ಯೋತಿರ್ಮಯನಾದ ಪುರುಷ ನಿಗೆ ಸ್ವಾಗತವನ್ನಿತ್ತನು.

ಭೂಯಶ್ಚೈವಾಪರಂ ಪ್ರಾಹ ವಚನಂ ಮಧುರಂ ತದಾ।
ಜಾಪಕೈಸ್ತುಲ್ಯಫಲತಾ ಯೋಗಾನಾಂ ನಾತ್ರ ಸಂಶಯಃ ॥೨೩॥

ಬ್ರಹ್ಮನು ಜ್ಯೋತಿರ್ಮಯನಾದ ಪುರುಷನನ್ನು ಸ್ವಾಗತಿಸಿದ ಬಳಿಕ ಪುನಃ ಆ ಪುರುಷನೊಡನೆ ಸುಮಧುರವಾದ ಈ ಮಾತನ್ನು ಹೇಳಿದನು :

“ವಿಪ್ರಶ್ರೇಷ್ಠನೇ! ಜಪಶೀಲರಾದವರಿಗೆ ಯಾವ ಫಲವು ಲಭಿಸು ವುದೋ ಆ ಫಲಕ್ಕೆ ಸಮಾನವಾದ ಫಲವೇ ಯೋಗಶೀಲರಾದವರಿಗೂ ಲಭಿಸುತ್ತದೆ. ಈ ವಿಷಯದಲ್ಲಿ ಸಂಶಯವೇ ಇಲ್ಲ,

ಯೋಗಸ್ಯ ತಾವದೇತೇಭ್ಯಃ ಪ್ರತ್ಯಕ್ಷಂ ಫಲದರ್ಶನಮ್।
ಜಾಪಕಾನಾಂ ವಿಶಿಷ್ಟಂ ತು ಪ್ರತ್ಯುತ್ಥಾನಂ ಸಮಾಹಿತಮ್ ॥೨೪॥

ಯೋಗಿಗಳಿಗೆ ಎಂತಹ ಫಲವು ಸಿಕ್ಕುವುದೆಂಬುದನ್ನು ಈ ಸಭಾಸದರು ಪ್ರತ್ಯಕ್ಷವಾಗಿಯೇ ನೋಡಿರುತ್ತಾರೆ. ಜಾಪಕರಿಗೆ ಯೋಗಿಗಳಿಗಿಂತಲೂ ವಿಶಿಷ್ಟವಾದ ಫಲವು ಲಭಿಸುವುದೆಂಬುದನ್ನು ಸೂಚಿಸುವ ಸಲುವಾಗಿಯೇ ನಾನು ಆಸನದಿಂದ ಮೇಲೆದ್ದು ನಿನಗೆ ಸ್ವಾಗತವನ್ನು ಬಯಸಿದೆನು. ಈಗ ನನ್ನಲ್ಲಿ ನೀನು ಸುಖವಾಗಿ ನಿವಾಸಮಾಡಬಹುದಾಗಿದೆ.” ಬ್ರಹ್ಮನು ಹೀಗೆ ಹೇಳಿ ಪ್ರಾದೇಶಮಾತ್ರವಿದ್ದ ಜ್ಯೋತಿರ್ಮಯವಾದ ಪುರುಷನಿಗೆ ಪರಬ್ರಹ್ಮ

ವನ್ನು ಉಪದೇಶಿಸಿದನು. ಬಳಿಕ ಬ್ರಾಹ್ಮಣನು ರೋಗ-ಶೋಕಗಳಿಂದ ವಿಮುಕ್ತನಾಗಿ ಬ್ರಹ್ಮನ ಮುಖಾರವಿಂದವನ್ನು ಪ್ರವೇಶಿಸಿದನು.

ತಾನು ಪಡೆದ ಫಲವನ್ನು ಬ್ರಾಹ್ಮಣನೊಡನೆ ಹಂಚಿಕೊಂಡಿದ್ದ ಇಕ್ಷ್ವಾಕುರಾಜನೂ ಬ್ರಾಹ್ಮಣನಂತೆಯೇ ಅದೇ ವಿಧಾನದಿಂದಲೇ ಭಗವಂತನಾದ ಪಿತಾಮಹನನ್ನು ಸಮೀಪಿಸಿ ದ್ವಿಜಶ್ರೇಷ್ಠನಂತೆಯೇ ಪಿತಾಮಹನ ಮುಖವನ್ನು ಪ್ರವೇಶಿಸಿದನು. ಬಳಿಕ ದೇವತೆಗಳು ಬ್ರಹ್ಮನಿಗೆ ಅಭಿವಾದನ ಮಾಡಿ ಅವನೊಡನೆ ಹೇಳಿದರು :

"ಭಗವನ್! ಪಿತಾಮಹನೇ! ಯೋಗಿಗಳಿಗಿಂತಲೂ ಜಾಪಕರು ಶ್ರೇಷ್ಠರೆಂದು ತೋರಿಸುವ ಸಲುವಾಯೇ ಜಾಪಕನಾದ ಬ್ರಾಹ್ಮಣನು ಆಗಮಿಸಿದೊಡನೆಯೇ ಪ್ರತ್ಯುತ್ಥಾನಮಾಡಿ ಅವನನ್ನು ಸ್ವಾಗತಿಸಿದೆ. ಈ ಜಾಪಕನಿಗೆ ಸದ್ಗತಿಯನ್ನು ಕೊಡುವುದಕ್ಕಾಗಿಯೇ ನಾವು ಈ ಪ್ರಯತ್ನವನ್ನು ಮಾಡಿದೆವು. ಅವರಿಬ್ಬರೂ ಸದ್ಗತಿಯನ್ನು ಪಡೆದುದನ್ನು ನೋಡುವ ಸಲುವಾಗಿಯೇ ನಾವು ಇಲ್ಲಿಗೂ ಆಗಮಿಸಿದೆವು. ಸಮಾನವಾದ ಫಲವನ್ನು ಹೊಂದಿದ್ದ ಈ ಇಬ್ಬರಿಗೂ ನೀನು ಸಮಾನವಾದ ಗೌರವವನ್ನೇ ತೋರಿಸಿರುವೆ. ನಾವಿಂದು ಯೋಗಿಗಳ ಮತ್ತು ಜಾಪಕರ ಪುಣ್ಯಫಲವೆಷ್ಟೆಂಬುದನ್ನು ಪ್ರತ್ಯಕ್ಷವಾಗಿಯೇ ನೋಡಿದೆವು. ಯೋಗಿಗಳೂ ಮತ್ತು ಜಾಪಕರೂ ಎಲ್ಲ ಲೋಕಗಳನ್ನೂ ಅತಿಕ್ರಮಿಸಿ ಮನೋಭೀಷ್ಟವಾದ ಲೋಕಗಳಿಗೆ ಹೋಗಲು ಸಮರ್ಥರಾಗಿರುತ್ತಾರೆ."

ಬ್ರಹ್ಮನು ಹೇಳುತ್ತಾನೆ :

ಮಹಾಸ್ಮೃತಿಂ ಪಠೇದ್ಯಸ್ತು ತಥೈವಾನುಸ್ಮೃತಿಂ ಶುಭಾಮ್।
ತಾವಪ್ಯೇತೇನ ವಿಧಿನಾ ಗಚ್ಛೇತಾಂ ಮತ್ಸಲೋಕತಾಮ್ ॥೩೦॥

ಯಶ್ಚ ಯೋಗೇ ಭವೇದ್ಭಕ್ತಃ ಸೋಽಪಿ ನಾಸ್ತ್ಯತ್ರ ಸಂಶಯಃ।
ವಿಧಿನಾನೇನ ದೇಹಾನ್ತೇ ಮಮ ಲೋಕಾನವಾಪ್ನುಯಾತ್।
ಸಾಧಯೇ ಗಮ್ಯತಾಂ ಚೈವ ಯಥಾಸ್ಥಾನಾನಿ ಸಿದ್ಧಯೇ ॥೩೧॥

"ದೇವತೆಗಳೇ! ಯಾವನು * ಮಹಾಸ್ಮೃತಿಯನ್ನೂ ಮತ್ತು ಶುಭಾವಹವಾದ ಅನುಸ್ಮೃತಿಯನ್ನೂ ಪಠನಮಾಡುವನೋ–ಅಂತಹವನೂ ಇದೇ ವಿಧಿಯಿಂದ ನನ್ನ ಸಾಲೋಕ್ಯವನ್ನು ಹೊಂದುತ್ತಾನೆ. ಯೋಗದಲ್ಲಿ ಯಾವನು ಆಸಕ್ತಿಯನ್ನು ಹೊಂದಿರುವನೋ ಅವನೂ ಕೂಡ ದೇಹವನ್ನು ತ್ಯಾಗಮಾಡಿದನಂತರದಲ್ಲಿ ಇದೇ ವಿಧಿಯಿಂದ ನನ್ನ ಲೋಕಗಳನ್ನು ಪಡೆದುಕೊಳ್ಳುತ್ತಾನೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ಈಗ ನೀವು ನಿಮ್ಮ ಅಭೀಷ್ಟಸಿದ್ಧಿಗಾಗಿ ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿರಿ. ನಾನೂ ನನ್ನ ಅಭೀಷ್ಟವನ್ನು ಸಾಧಿಸಲು ಹೊರಡುತ್ತೇನೆ."

ಯುಧಿಷ್ಠಿರ! ಬ್ರಹ್ಮನು ದೇವತೆಗಳೊಡನೆ ಹೀಗೆ ಹೇಳಿ ಅಲ್ಲಿಯೇ ಅಂತರ್ಹಿತನಾದನು. ದೇವತೆಗಳೆಲ್ಲರೂ ಬ್ರಹ್ಮನ ಅನುಜ್ಞೆಯನ್ನು ಪಡೆದು ತಮ್ಮ ತಮ್ಮ ಮನೆಗಳಿಗೆ ಹೊರಟುಹೋದರು. ಯಮ-ಕಾಲ-ಮೃತ್ಯುಗಳೂ ಕೂಡ ಸುಪ್ರೀತಚಿತ್ತರಾಗಿ ಧರ್ಮನನ್ನು ಯಥಾಯೋಗ್ಯವಾಗಿ ಸತ್ಕರಿಸಿ ಅವನನ್ನೇ ಮುಂದೆ ಮಾಡಿಕೊಂಡು ತೆರಳಿದರು. ಯುಧಿಷ್ಠಿರ! ಜಾಪಕರಿಗೆ ಇಂತಹ ಅಮೋಘವಾದ ಫಲವು ಸಿಕ್ಕುತ್ತದೆ. ನಾನು ಹಿಂದೆ ಮಹಾತ್ಮರಿಂದ ಕೇಳಿದ್ದ ರೀತಿಯಲ್ಲಿಯೇ ಜಾಪಕರಿಗೆ ಲಭಿಸುವ ಉತ್ತಮಗತಿಯನ್ನು ಹೇಳಿದ್ದೇನೆ. ಪುನಃ ಮತ್ತೇನನ್ನು ನನ್ನಿಂದ ಕೇಳಬೇಕೆಂದಿರುವೆ?"

(ಈ ಪ್ರಕರಣದಲ್ಲಿ ಉಕ್ತವಾಗಿರುವ ಜಪವು ವೇದಾಧ್ಯಯನವಲ್ಲದೇ ಬೇರೆಯದಲ್ಲ. 'ಸಂಹಿತಾಂ ಸಂಯತೋ ಜಪನ್ (೬-೧೯೯) ನಿಯತೇಂದ್ರಿಯನಾಗಿ ಸಂಹಿತೆಯನ್ನು ಜಪಮಾಡುತ್ತಿದ್ದನು'–ಎಂದೇ ಸ್ಪಷ್ಟ

---

* ಮಹಾಸ್ಮೃತಿಯೆಂಬುದಕ್ಕೆ ಮನುಸ್ಮೃತಿಯೇ ಮೊದಲಾದುವುಗಳೆಂದೂ ಅನುಸ್ಮೃತಿ ಎಂಬುದಕ್ಕೆ ಇತರ ಚಿಕ್ಕ-ಚಿಕ್ಕ ಸ್ಮೃತಿಗಳೆಂದೂ ವ್ಯಾಖ್ಯಾನಕಾರರು ಹೇಳಿರುತ್ತಾರೆ. ವೇದಾಧ್ಯಯನದ ಫಲವನ್ನು ತಿಳಿಸಿದನಂತರ ವೇದಗಳಲ್ಲಿರುವುದನ್ನೇ ಪ್ರತಿಪಾದಿಸಿ ಹೇಳುವ ಸ್ಮೃತಿಗಳ ಅಧ್ಯಯನವೂ ಪುಣ್ಯದಾಯಕವೆಂದು ಸೂಚಿಸಲು ಈ ಶ್ಲೋಕವನ್ನು ಉದಾಹರಿಸಿರುತ್ತಾರೆಂಬುದು ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಮುಂದಿನ ಅಧ್ಯಾಯದಲ್ಲಿ ಮನುವಿನ ದಿವ್ಯೋಪದೇಶವೇ ಇದೆ.

ವಾಗಿ ಹೇಳಿದೆ. ವೇದಾಧ್ಯಯನವೇ ನಿರಂತರವಾದ ಜಪ. ವೇದಾಧ್ಯಯನ ಶೀಲನು ಹಗಲು-ರಾತ್ರಿಗಳೆನ್ನದೇ – ಅನಧ್ಯಯನಗಳನ್ನು ಬಿಟ್ಟು – ಸರ್ವಕಾಲ ದಲ್ಲಿಯೂ ವೇದವನ್ನು ಪಠಿಸುತ್ತಲೇ ಇರುತ್ತಾನೆ. ಹೀಗೆ ಅನವರತವಾಗಿ ವೇದವನ್ನು ಪಠನಮಾಡುವವನು ಬ್ರಹ್ಮಭೂತನೇ ಆಗುತ್ತಾನೆಂಬುದು ಈ ಅಧ್ಯಾಯಗಳ ಮುಖ್ಯ ತಾತ್ಪರ್ಯವಾಗಿದೆ. **ವೇದಃ ಶಿವಃ ಶಿವೋ ವೇದಃ ವೇದಾಧ್ಯಾಯೀ ಸದಾಶಿವಃ। ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥** ಎಂಬ ವೇದಮಹಿಮಾಸ್ತೋತ್ರವೂ **ವೇದಾಕ್ಷರಾಣಿ ಯಾವನ್ತಿ ಪಠಿತಾನಿ ದ್ವಿಜಾತಿಭಿಃ। ತಾವನ್ತಿ ಹರಿನಾಮಾನಿ ಕೀರ್ತಿತಾನಿ ನ ಸಂಶಯಃ ॥** ಎಂಬ ವಿಷ್ಣುಧರ್ಮೋತ್ತರಪುರಾಣದ ವಚನವೂ ಇದನ್ನೇ ಹೇಳುತ್ತದೆ. ವೇದಾಧ್ಯಯನಕ್ಕೆ ಇಂತಹ ಮಹತ್ತ್ವವಿರುವುದರಿಂದಲೇ ನಮ್ಮ ಹಿಂದಿನವರು ಐಹಿಕಸುಖಗಳಿಗೆ ಮನಸೋಲದೇ ಸರ್ವದಾ ವೇದಾಧ್ಯಯನ-ಅಧ್ಯಾಪನಗಳಲ್ಲಿಯೇ ನಿರತರಾಗಿರುತ್ತಿದ್ದರು. ಬ್ರಹ್ಮರೂಪವಾದ ವೇದವನ್ನು ಕಂಠಗತವಾಗಿ ಕಾಪಾಡಿಕೊಂಡು ಬಂದರು. ಇತ್ತೀಚೆಗೆ ಪಾಶ್ಚಾತ್ಯನಾಗರಿಕತೆಯ ಅವಾಂತರದಿಂದಾಗಿ ಅಂತಹ ಪೀಳಿಗೆಯೇ ನಶಿಸಿಹೋಗುತ್ತಿರುವುದು ನಮ್ಮ ದೇಶದ ದೌರ್ಭಾಗ್ಯವೇ ಸರಿ. ನಿರಂತರವೇದಾಧ್ಯಯನದಿಂದ ಪವಿತ್ರವಾದ ವಾತಾವರಣದ ಸೃಷ್ಟಿಯಾಗುವುದೆಂಬುದನ್ನು ನಾವು ಪಾಶ್ಚಾತ್ಯರು ಹೇಳಿದ ನಂತರವೇ ತಿಳಿದುಕೊಳ್ಳಬೇಕಾಗಿದೆ. ನಾವಿಂದು ಇಂತಹ ದುಃಸ್ಥಿತಿಯಲ್ಲಿದ್ದೇವೆ.)

೨೦೦ನೆಯ ಅಧ್ಯಾಯವು ಮುಗಿಯಿತು.

೨೦೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬೃಹಸ್ಪತಿಯ ಪ್ರಶ್ನೆಗೆ ಉತ್ತರವಾಗಿ ಮನುವಿನಿಂದ ಕಾಮನೆಗಳ ತ್ಯಾಗದ ಮತ್ತು ಜ್ಞಾನದ ಪ್ರಶಂಸೆ : ಪರಮಾತ್ಮತತ್ತ್ವದ ನಿರೂಪಣೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಿಂ ಫಲಂ ಜ್ಞಾನಯೋಗಸ್ಯ ವೇದಾನಾಂ ನಿಯಮಸ್ಯ ಚ ।
ಭೂತಾತ್ಮಾ ಚ ಕಥಂ ಜ್ಞೇಯಸ್ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹ! ಜ್ಞಾನಯೋಗಕ್ಕೆ, ವೇದಗಳ ಅಧ್ಯಯನಕ್ಕೆ ಮತ್ತು ವೇದೋಕ್ತವಾದ ನಿಯಮಗಳ (ಅಗ್ನಿಹೋತ್ರಾದಿಗಳ) ಅನುಷ್ಠಾನಕ್ಕೆ ಯಾವ ಫಲವಿದೆ? ಸಕಲಪ್ರಾಣಿಗಳಲ್ಲಿಯೂ ಅಂತರಾತ್ಮನಾಗಿರುವ ಪರಮಾತ್ಮನು ಹೇಗೆ ತಿಳಿಯಲ್ಪಡುತ್ತಾನೆ? ಅವನನ್ನು ತಿಳಿಯುವುದು ಹೇಗೆ? – ಈ ವಿಷಯವನ್ನು ನನಗೆ ತಿಳಿಸು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಮಹರ್ಷಿಯಾದ ಬೃಹಸ್ಪತಿಗೂ ಮತ್ತು ಪ್ರಜಾಪತಿಮನುವಿಗೂ ನಡೆದ ಪುರಾತನವಾದ ಇತಿಹಾಸ ರೂಪವಾದ ಸಂಭಾಷಣೆಯನ್ನು ಹಿರಿಯರು ಉದಾಹರಿಸುತ್ತಾರೆ. ಅದನ್ನೇ ನಾನು ನಿನಗೂ ಹೇಳುತ್ತೇನೆ.

ದೇವರ್ಷಿಸಂಘದಲ್ಲಿ ಶ್ರೇಷ್ಠನಾದ, ಮಹರ್ಷಿಯಾದ ಬೃಹಸ್ಪತಿಯು– ಪ್ರಜೆಗಳಲ್ಲಿ (ಪ್ರಜಾಪತಿಗಳಲ್ಲಿ) ಶ್ರೇಷ್ಠತಮನಾದ, ಪುರಾತನನಾದ, ಗುರುವಾದ ಪ್ರಜಾಪತಿಮನುವನ್ನು ಶಿಷ್ಯಭಾವದಿಂದ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಈ ಪ್ರಶ್ನೆಯನ್ನು ಕೇಳಿದನು :

ಯತ್ಕಾರಣಂ ಯತ್ರ ವಿಧಿಃ ಪ್ರವೃತ್ತೋ
ಜ್ಞಾನೇ ಫಲಂ ಯತ್ಪ್ರವದನ್ತಿ ವಿಪ್ರಾಃ ।
ಯನ್ಮನ್ತ್ರಶಬ್ದೈರಕೃತಪ್ರಕಾಶಂ
ತದುಚ್ಯತಾಂ ಮೇ ಭಗವನ್ಯಥಾವತ್ ॥೪॥

"ಭಗವನ್! ಈ ಜಗತ್ತಿಗೆ ಯಾವುದು ಕಾರಣವಾಗಿದೆ? ಯಾವ ವಿಷಯದಲ್ಲಿ ವೇದೋಕ್ತವಿಧಿಗಳು ಪ್ರಚಲಿತವಾಗಿವೆ? ಬ್ರಾಹ್ಮಣರು ಜ್ಞಾನದಲ್ಲಿ ಯಾವ ಫಲವಿದೆಯೆಂದು ಹೇಳುತ್ತಾರೆ? ಯಾವ ಬ್ರಹ್ಮವಸ್ತುವು ಮಂತ್ರಶಬ್ದಗಳಿಂದಲೂ (ವೇದವಾಕ್ಯಗಳಿಂದಲೂ) ಮಾತಿನಿಂದಲೂ ಪ್ರಕಾಶಪಡಿಸಲು ಸಾಧ್ಯವಾಗುವುದಿಲ್ಲವೋ – ಅಂತಹ ನಿತ್ಯವಸ್ತುವಿನ ವಿಷಯವನ್ನು ನನಗೆ ಯಥಾವತ್ತಾಗಿ ವಿವರಿಸು.

ಯಚ್ಚಾರ್ಥಶಾಸ್ತ್ರಾಗಮಮನ್ತ್ರವಿದ್ಭಿ-
ರ್ಯಜ್ಞೈರನೇಕೈರಥ ಗೋಪ್ರದಾನೈಃ ।
ಫಲಂ ಮಹದ್ಭಿರ್ಯದುಪಾಸ್ಯತೇ ಚ
ಕಿಂ ತತ್ಕಥಂ ವಾ ಭವಿತಾ ಕ್ವ ವಾ ತತ್ ॥೫॥

ಅರ್ಥಶಾಸ್ತ್ರವನ್ನೂ, ಆಗಮಗಳನ್ನೂ, ಮಂತ್ರಗಳನ್ನೂ ತಿಳಿದಿರುವ ವಿದ್ವಾಂಸರು–ಅನೇಕಾನೇಕ ಮಹಾಯಜ್ಞಗಳಿಂದಲೂ, ಗೋದಾನಗಳಿಂದಲೂ ಯಾವುದನ್ನು ಉಪಾಸನೆ ಮಾಡುತ್ತಾರೆ? ಅದರಿಂದ ಪ್ರಾಪ್ತವಾಗುವ ಫಲವೇನು? ಅದು ಹೇಗೆ ಪ್ರಾಪ್ತವಾಗುತ್ತದೆ? ಮತ್ತು ಎಲ್ಲಿ ಅದು ಅನುಭವಕ್ಕೆ ಬರುತ್ತದೆ?

ಮಹೀ ಮಹೀಜಾಃ ಪವನೋಽನ್ತರಿಕ್ಷಂ
ಜಲೌಕಸಶ್ಚೈವ ಜಲಂ ದಿವಂ ಚ ।
ದಿವೌಕಸಶ್ಚಾಪಿ ಯತಃ ಪ್ರಸೂತಾ-
ಸ್ತದುಚ್ಯತಾಂ ಮೇ ಭಗವನ್ಪುರಾಣಮ್ ॥೬॥

ಭಗವನ್! ಪೃಥಿವೀ, ಪೃಥ್ವಿಯಲ್ಲಿ ಹುಟ್ಟಿದ ಚರಾಚರಪದಾರ್ಥಗಳು, ವಾಯು, ಆಕಾಶ, ನೀರಿನಲ್ಲಿ ವಾಸಮಾಡುವ ಜಲಜಂತುಗಳು, ಜಲ, ಸ್ವರ್ಗ ಮತ್ತು ದೇವತೆಗಳು –ಇವರೆಲ್ಲರೂ ಎಲ್ಲಿಂದ ಹುಟ್ಟಿದರು? ಇವೆಲ್ಲಕ್ಕೂ ಮೂಲವಾದ ಪುರಾತನವಸ್ತುವು ಯಾವುದೆಂಬುದನ್ನು ನನಗೆ ಹೇಳು.

ಜ್ಞಾನಂ ಯತಃ ಪ್ರಾರ್ಥಯತೇ ನರೋ ವೈ
ತತಸ್ತದರ್ಥಾ ಭವತಿ ಪ್ರವೃತ್ತಿಃ ।

ನ ಚಾಪ್ಯಹಂ ವೇದ ಪರಂ ಪುರಾಣಂ
ಮಿಥ್ಯಾಪ್ರವೃತ್ತಿಂ ಚ ಕಥಂ ನು ಕುರ್ಯಾಮ್ ॥೭॥

ಮನುಷ್ಯನಿಗೆ ಯಾವ ವಸ್ತುವಿನ ವಿಷಯದಲ್ಲಿ ಜ್ಞಾನೋದಯವಾಗುವುದೋ –'ಚಿದ್ವಸ್ತುವು ಹೀಗಿದೆ ; ಇಲ್ಲಿದೆ' –ಎಂಬ ತಿಳಿವಳಿಕೆಯುಂಟಾಗುವುದೋ –ಆಗ ಮನುಷ್ಯನ ಪ್ರವೃತ್ತಿಯು ಆ ಚಿದ್ವಸ್ತುವನ್ನು ಪಡೆದುಕೊಳ್ಳುವುದರ ಕಡೆಗೆ ಹೋಗುತ್ತದೆ. ಆದರೆ ನಾನು ಶ್ರೇಷ್ಠವಾದ ಸನಾತನವಾದ ಆ ಬ್ರಹ್ಮವಸ್ತುವಿನ ವಿಷಯದಲ್ಲಿ ಏನನ್ನೂ ತಿಳಿದವನಾಗಿಲ್ಲ. ಹೀಗಿರುವಾಗ ಆ ಪರಾಪರವಸ್ತುವಿನ ಪ್ರಾಪ್ತಿಗಾಗಿ ವ್ಯರ್ಥಪ್ರಯತ್ನವನ್ನು ಹೇಗೆ ತಾನೇ ಮಾಡಲಿ? (ತಿಳಿಯದೇ ಇರುವ ವಸ್ತುವನ್ನು ಹುಡುಕಿಕೊಂಡು ಹೋಗುವುದು ವ್ಯರ್ಥಪ್ರಯತ್ನವಾಗುತ್ತದೆ.)

ಋಕ್ಸಾಮಸಂಘಾಂಶ್ಚ ಯಜೂಂಷಿ ಚಾಪಿ
ಛನ್ದಾಂಸಿ ನಕ್ಷತ್ರಗತಿಂ ನಿರುಕ್ತಮ್ ।
ಅಧೀತ್ಯ ಚ ವ್ಯಾಕರಣಂ ಸಕಲ್ಪಂ
ಶಿಕ್ಷಾಂ ಚ ಭೂತಪ್ರಕೃತಿಂ ನ ವೇದ್ಮಿ ॥೮॥

ನಾನು ಋಕ್ಸಾಮ-ಯಜಸ್ಸುಗಳನ್ನೂ (ಮೂರು ವೇದಗಳನ್ನೂ), ಛಂದಃಶಾಸ್ತ್ರವನ್ನೂ, ನಕ್ಷತ್ರಗಳ ಗತಿಯನ್ನು ತಿಳಿಸುವ ಜ್ಯೌತಿಷಶಾಸ್ತ್ರವನ್ನೂ, ವೈದಿಕಪದಗಳ ಅರ್ಥವನ್ನು ನಿಶ್ಚಯಿಸಿ ಹೇಳುವ ನಿರುಕ್ತವನ್ನೂ, ವೈದಿಕ ಕರ್ಮಗಳ ಅನುಷ್ಠಾನದ ವಿಧಿಯನ್ನು ತಿಳಿಸುವ ಕಲ್ಪಶಾಸ್ತ್ರವನ್ನೂ, ವ್ಯಾಕರಣವನ್ನೂ ಮತ್ತು ಶಿಕ್ಷಾಶಾಸ್ತ್ರವನ್ನೂ ತಿಳಿದವನಾಗಿದ್ದರೂ ಪಂಚಭೂತಗಳ ಮೂಲಕಾರಣದ (ಬ್ರಹ್ಮದ) ಸ್ವರೂಪವನ್ನು ತಿಳಿದವನಾಗಿಲ್ಲ.

ಸ ಮೇ ಭವಾನ್ಶಂಸತು ಸರ್ವಮೇತ-
ತ್ಸಾಮಾನ್ಯಶಬ್ದೈಶ್ಚ ವಿಶೇಷಣೈಶ್ಚ ।
ಸ ಮೇ ಭವಾನ್ಶಂಸತು ತಾವದೇತ-
ಜ್ಜ್ಞಾನೇ ಫಲಂ ಕರ್ಮಣಿ ವಾ ಯದಸ್ತಿ ।
ಯಥಾ ಚ ದೇಹಾಚ್ಚ್ಯವತೇ ಶರೀರೀ
ಪುನಃ ಶರೀರಂ ಚ ಯಥಾಭ್ಯುಪೈತಿ ॥೯॥

ಆದುದರಿಂದ ನೀನು ಸಾಮಾನ್ಯವಾದ ಮತ್ತು ವಿಶೇಷವಾದ ಶಬ್ದಗಳ ಮೂಲಕವಾಗಿ ಈ ಎಲ್ಲ ವಿಷಯಗಳನ್ನೂ ನನಗೆ ಸಂಪೂರ್ಣವಾಗಿ ಹೇಳು. ತತ್ತ್ವಜ್ಞಾನವಾದನಂತರ ಯಾವ ವಿಧವಾದ ಫಲವು ಲಭಿಸುತ್ತದೆ? ಕರ್ಮಗಳನ್ನು ಮಾಡಿದರೆ ಯಾವ ವಿಧವಾದ ಫಲವು ಲಭಿಸುತ್ತದೆ? ದೇಹಾಭಿಮಾನಿಯಾದ ಜೀವವು ದೇಹವನ್ನು ಬಿಟ್ಟುಹೋಗುವುದು ಹೇಗೆ ಮತ್ತು ಬೇರೊಂದು ದೇಹದಲ್ಲಿ ಹೇಗೆ ಸೇರಿಕೊಳ್ಳುತ್ತದೆ?"

ಮನುವು ಹೇಳುತ್ತಾನೆ :

ಯದ್ಯತ್ಪ್ರಿಯಂ ಯಸ್ಯ ಸುಖಂ ತದಾಹು-
ಸ್ತದೇವ ದುಃಖಂ ಪ್ರವದನ್ತ್ಯನಿಷ್ಟಮ್ ॥೧೦॥

ಇಷ್ಟಂ ಚ ಮೇ ಸ್ಯಾದಿತರಚ್ಚ ನ ಸ್ಯಾ-
ದೇತತ್ಕೃತೇ ಕರ್ಮವಿಧಿಃ ಪ್ರವೃತ್ತಃ ।
ಇಷ್ಟಂ ತ್ವನಿಷ್ಟಂ ಚ ನ ಮಾಂ ಭಜೇತೇ-
ತ್ಯೇತತ್ಕೃತೇ ಜ್ಞಾನವಿಧಿಃ ಪ್ರವೃತ್ತಃ ॥೧೧॥

"ಬೃಹಸ್ಪತಿಯೇ! ಯಾವನಿಗೆ ಯಾವುದು ಪ್ರಿಯವಾಗಿರುವುದೋ ಅದೇ ಅವನಿಗೆ ಸುಖದಾಯಕವಾದ ವಸ್ತುವೆಂದು ತಿಳಿದವರು ಹೇಳುತ್ತಾರೆ. ಯಾವನಿಗೆ ಯಾವುದು ಅಪ್ರಿಯವೆನಿಸುವುದೋ ಅದೇ ಅವನಿಗೆ ದುಃಖಕ್ಕೆ ಕಾರಣವಾದ ವಸ್ತುವೆಂದೂ ಹೇಳುತ್ತಾರೆ. 'ಇಷ್ಟಪ್ರಾಪ್ತಿಯೇ ನನಗೆ ಆಗಬೇಕು. ಅನಿಷ್ಟವು ಆಗಲೇ ಕೂಡದು' ಎಂಬುದನ್ನು ಸಾಧಿಸುವ ಸಲುವಾಗಿಯೇ ಕರ್ಮವಿಧಿಯು ಪ್ರವೃತ್ತವಾಗಿದೆ. ಇಂತಹ ಕರ್ಮಾನುಷ್ಠಾನಗಳಿಂದ ಇಷ್ಟ ಗಳನ್ನು ಪಡೆದುಕೊಳ್ಳಬಹುದು.; ಅನಿಷ್ಟಗಳನ್ನು ದೂರೀಕರಿಸಬಹುದು. 'ಇಷ್ಟ-ಅನಿಷ್ಟ ಈ ಎರಡೂ ನನಗೆ ಬೇಡ' ಎಂಬುದನ್ನು ಸಾಧಿಸಿಕೊಳ್ಳಲು ಜ್ಞಾನವಿಧಿಯು ಪ್ರವೃತ್ತವಾಗಿದೆ. (ಜ್ಞಾನಯೋಗದಲ್ಲಿ ಇಷ್ಟಾನಿಷ್ಟಗಳೆರಡೂ ತ್ಯಾಜ್ಯಗಳೇ.)

ಕಾಮಾತ್ಮಕಾಶ್ಛನ್ದಸಿ ಕರ್ಮಯೋಗಾ
ಏಭಿರ್ವಿಮುಕ್ತಃ ಪರಮಶ್ನುವೀತ ।

ನಾನಾವಿಧೇ ಕರ್ಮಪಥೇ ಸುಖಾರ್ಥೀ
ನರಃ ಪ್ರವೃತ್ತೋ ನ ಪರಂ ಪ್ರಯಾತಿ ॥೧೨॥

ವೇದೋಕ್ತವಾಗಿರುವ ಕರ್ಮಗಳೆಲ್ಲವೂ ಸಾಮಾನ್ಯವಾಗಿ ಸಕಾಮ ಕರ್ಮಗಳೇ ಆಗಿವೆ. ಅಂತಹ ಸಕಾಮಕರ್ಮಗಳಿಂದ ವಿಮುಕ್ತನಾದವನು ಪರಮಾತ್ಮನನ್ನು ಪಡೆದುಕೊಳ್ಳುತ್ತಾನೆ. ಐಹಿಕವಾದ ಸುಖವನ್ನೇ ಆಶಿಸತಕ್ಕ ನಾನಾವಿಧವಾದ ಸಕಾಮಕರ್ಮಗಳ ಮಾರ್ಗದಲ್ಲಿ ಪ್ರವೃತ್ತನಾದ ಮನುಷ್ಯನು ಪರಮಾತ್ಮನನ್ನು ಹೊಂದಲಾರನು."

ಬೃಹಸ್ಪತಿಯು ಪ್ರಶ್ನಿಸುತ್ತಾನೆ :

ಇಷ್ಟಂ ತ್ವನಿಷ್ಟಂ ಚ ಸುಖಾಸುಖೇ ಚ
ಸಾಶೀಸ್ತ್ವವರ್ತ್ಸನ್ತಿ ಕರ್ಮಭಿಶ್ಚ ।

"ಭಗವನ್! ಮಾನವನಿಗೆ ಯಾವಾಗಲೂ ಸುಖವು ಇಷ್ಟವಾಗಿರುತ್ತದೆ. ದುಃಖವು ಅನಿಷ್ಟವಾಗಿರುತ್ತದೆ. ಎಲ್ಲರೂ ಸುಖಾಕಾಂಕ್ಷಿಗಳಾಗಿರುವರೇ ಹೊರತು ದುಃಖವನ್ನು ಯಾರೂ ಇಷ್ಟಪಡುವುದಿಲ್ಲ. ಅಂತಹ ಸುಖದ ಪ್ರಾಪ್ತಿಯು ವೇದೋಕ್ತವಾದ ಕರ್ಮಗಳನ್ನು ಮಾಡುವುದರಿಂದ ಲಭಿಸುತ್ತದೆ. (ಹೀಗಿರುವಾಗ ಸುಖಪ್ರಾಪಕಗಳಾದ ಸಕಾಮಕರ್ಮಗಳನ್ನು ತ್ಯಾಗ ಮಾಡಬೇಕೆಂದು ನೀನೇಕೆ ಹೇಳುವೆ?)"

ಮನುವು ಉತ್ತರಿಸುತ್ತಾನೆ :

ಏಭಿರ್ವಿಮುಕ್ತಃ ಪರಮಾವಿವೇಶ
ಏತತ್ಕೃತೇ ಕರ್ಮವಿಧಿಃ ಪ್ರವೃತ್ತಃ ।
ಕಾಮಾತ್ಮಕಾಂಶ್ಛನ್ದತಿ ಕರ್ಮಯೋಗ
ಏಭಿರ್ವಿಮುಕ್ತಃ ಪರಮಾದದೀತ ॥೧೩॥

"ಬೃಹಸ್ಪತೇ! ಕಾಮನೆಗಳಿಂದ ವಿಮುಕ್ತನಾಗಿ ನಿಷ್ಕಾಮಭಾವನೆಯಿಂದ ಕರ್ಮಗಳನ್ನು ಮಾಡಿದ ಮನುಷ್ಯನು ಪರಬ್ರಹ್ಮಪರಮಾತ್ಮನನ್ನು ಸೇರುತ್ತಾನೆ. ಈ ಕಾರಣದಿಂದಲೇ ನಿಷ್ಕಾಮಕರ್ಮಯೋಗವೆಂಬ ವಿಧಿಯು

ಪ್ರವೃತ್ತವಾಗಿದೆ. ಸಕಾಮಕರ್ಮಗಳು ಯಾವಾಗಲೂ ಐಹಿಕಸುಖಾಭಿಲಾಷಿಗಳನ್ನು ವ್ಯಾಮೋಹಗೊಳಿಸುತ್ತವೆ. ಐಹಿಕವಾದ ಸುಖಗಳನ್ನು (ಧನ-ಕನಕ-ವಸ್ತು-ವಾಹನಾದಿಗಳನ್ನೂ ಭಾರ್ಯಾ-ಪುತ್ರರನ್ನೂ) ಅನುಗ್ರಹಿಸುತ್ತಿದ್ದು ಮನುಷ್ಯನ ಮನಸ್ಸು ಪರಮಾತ್ಮನ ಕಡೆಗೆ ತಿರುಗದಂತೆಯೇ ಮಾಡಿಬಿಡುತ್ತವೆ. ಐಹಿಕಸುಖಗಳು ಅಶಾಶ್ವತವಾದುವುಗಳು. ನಶ್ವರವಾದುವುಗಳು. ಪರಮಾತ್ಮನನ್ನು ಹೊಂದುವುದರಿಂದ ಶಾಶ್ವತವಾದ ಸುಖವು ಲಭಿಸುತ್ತದೆ. ಆದುದರಿಂದ ಸಕಾಮಕರ್ಮಗಳಿಂದಲೂ ತತ್ಫಲವಾದ ಐಹಿಕಸುಖಗಳಿಂದಲೂ ವಿಮುಖನಾದವನು ಪರಬ್ರಹ್ಮಪರಮಾತ್ಮನನ್ನೇ ಸೇರುತ್ತಾನೆ.

ಆತ್ಮಾದಿಭಿಃ ಕರ್ಮಭಿರಿನ್ಧ್ಯಮಾನೋ
ಧರ್ಮೇ ಪ್ರವೃತ್ತೋ ದ್ಯುತಿಮಾನ್ಸುಖಾರ್ಥೀ ।
ಪರಂ ಹಿ ತತ್ಕರ್ಮಪಥಾದಪೇತಂ
ನಿರಾಶಿಷಂ ಬ್ರಹ್ಮಪರಂ ಹ್ಯವೈತಿ ॥೧೪॥

ಮನಸ್ಸೇ ಮೊದಲಾದುವುಗಳಿಂದ ಮಾಡುವ ನಿಷ್ಕಾಮಕರ್ಮಗಳಿಂದ ರಾಗ-ದ್ವೇಷಾದಿಗಳನ್ನು ಕಳೆದುಕೊಂಡು ಕನ್ನಡಿಯಂತೆ ಸ್ವಚ್ಛನಾಗಿಯೂ ದೀಪ್ತಿಮಂತನಾಗಿಯೂ ಕಾಣುವ, ಸದಸದ್ವಿವೇಕದ ಪ್ರಕಾಶದಿಂದ ಯುಕ್ತನಾಗಿ, ನಿತ್ಯಸುಖವನ್ನು ಬಯಸುವ ಮುಮುಕ್ಷುವು-ಸಕಾಮಕರ್ಮದಿಂದ ಅತಿರಿಕ್ತವಾದ, ಐಹಿಕಕಾಮನೆಗಳಿಂದ ರಹಿತವಾದ, ಪರಬ್ರಹ್ಮಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ.

(ಆತ್ಮಾದಿಭಿಃ ಎಂಬುದಕ್ಕೆ ಚಿತ್ತವೇ ಮೊದಲಾದುವುಗಳಿಂದ –ಎಂದು ವ್ಯಾಖ್ಯಾನಕಾರರು ಅರ್ಥಮಾಡಿರುತ್ತಾರೆ. ನಿಷ್ಕಾಮಕರ್ಮಕ್ಕೆ ಮನಸ್ಸು ಮತ್ತು ಬುದ್ಧಿಗಳೇ ಮುಖ್ಯವಾದುವುಗಳು. ಕ್ರಿಯೆಯು ಒಂದೇ ಆಗಿದ್ದರೂ ಫಲವನ್ನು ಅಪೇಕ್ಷಿಸುವುದು ಅಥವಾ ಅಪೇಕ್ಷಿಸದೇ ಇರುವುದು ಮನಸ್ಸಿಗೆ ಸೇರಿದ ವಿಷಯವಾಗಿದೆ. ಆತ್ಮಾ ಎಂಬ ಶಬ್ದಕ್ಕೆ ಶರೀರ, ಮನಸ್ಸು, ಬುದ್ಧಿ ಎಂಬ ಅರ್ಥಗಳೂ ಇವೆ. ಆದುದರಿಂದ ಆತ್ಮಾದಿಭಿಃ ಎಂಬುದಕ್ಕೆ

ಮನಸ್ಸು, ಬುದ್ಧಿ ಮತ್ತು ಶರೀರಗಳ ಮೂಲಕವಾಗಿ ಮಾಡುವ (ನಿಷ್ಕಾಮ) ಕರ್ಮಗಳಿಂದ ಎಂದು ಅರ್ಥಮಾಡುವುದೂ ಉಚಿತವಾಗಿಯೇ ಕಾಣುತ್ತದೆ.)

ಪ್ರಜಾಃ ಸೃಷ್ಟ್ವಾ ಮನಸಾ ಕರ್ಮಣಾ ಚ
ದ್ವಾವೇವೈತೌ ಸತ್ಪಥೌ ಲೋಕಜುಷ್ಟೌ ।
ದೃಷ್ಟಂ ಕರ್ಮ ಶಾಶ್ವತಂ ಚಾನ್ತವಚ್ಚ
ಮನಸ್ತ್ಯಾಗಃ ಕಾರಣಂ ನಾನ್ಯದಸ್ತಿ ॥೧೫॥

ಮನಸ್ಸಿನಿಂದಲೂ ಕರ್ಮದಿಂದಲೂ ಯುಕ್ತರಾದ ಪ್ರಜೆಗಳು ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿದ್ದಾರೆ. ಆದುದರಿಂದ ಮನಸ್ಸು ಮತ್ತು ಕರ್ಮಗಳೇ ಲೋಕದಿಂದ ಸೇವಿಸಲ್ಪಡುವ ಸನ್ಮಾರ್ಗಗಳಾಗಿವೆ. (ಮನುಷ್ಯರಿಗೆ ಮನಸ್ಸು ಮತ್ತು ಕರ್ಮಗಳಿಂದಲೇ ಸನ್ಮಾರ್ಗಪ್ರವೃತ್ತಿಯುಂಟಾಗುತ್ತದೆ.) ಕರ್ಮಗಳಲ್ಲಿ ಎರಡು ಬಗೆಗಳಿವೆ. ಶಾಶ್ವತವಾದುದು ಅಥವಾ ಸನಾತನವಾದುದು ಮತ್ತು ಅಂತವುಳ್ಳದ್ದು ಅಥವಾ ವಿನಾಶಕರವಾದುದು. ಈ ಎರಡು ವಿಧವಾದ ಕರ್ಮಗಳಿಗೂ ಮನಸ್ಸೇ ಕಾರಣವಾಗಿರುತ್ತದೆ. ಸಕಾಮನೆಯಿಂದ ಬೇಕಾದರೂ ಕರ್ಮಮಾಡಬಹುದು ; ನಿಷ್ಕಾಮನೆಯಿಂದ ಬೇಕಾದರೂ ಕರ್ಮಮಾಡಬಹುದು. ಮನಸ್ಸಿನ ತ್ಯಾಗದ ಮೂಲಕವಾಗಿ ಅಥವಾ ಮನಸ್ಸಿನ ಕಾಮನೆಗಳ ತ್ಯಾಗದ ಮೂಲಕವಾಗಿ ಮಾಡುವ ಕರ್ಮವು ಶಾಶ್ವತವೂ ಸನಾತನವೂ ಆದ ಫಲವನ್ನು ಕೊಡುತ್ತದೆ. ಇಂತಹ ನಿಷ್ಕಾಮಕರ್ಮವು ಪರಬ್ರಹ್ಮಪರಮಾತ್ಮನ ಸಾಕ್ಷಾತ್ಕಾರಕ್ಕೆ ಕಾರಣವಾಗುತ್ತದೆ. ಮತ್ತೊಂದು ವಿಧವಾದ ಸಕಾಮಕರ್ಮವು ವಿನಾಶವುಳ್ಳ ಫಲಕ್ಕೆ ಕಾರಣವಾಗುತ್ತದೆ.

ಸ್ವೇನಾತ್ಮನಾ ಚಕ್ಷುರಿವ ಪ್ರಣೇತಾ
ನಿಶಾತ್ಯಯೇ ತಮಸಾಸಂವೃತಾತ್ಮಾ ।
ಜ್ಞಾನಂ ತು ವಿಜ್ಞಾನಗುಣೇನ ಯುಕ್ತಂ
ಕರ್ಮಾಶುಭಂ ಪಶ್ಯತಿ ವರ್ಜನೀಯಮ್ ॥೧೬॥

ರಾತ್ರಿಯು ಕಳೆದೊಡನೆಯೇ ಕತ್ತಲಿನ ಪ್ರತಿಬಂಧವಿಲ್ಲದ ಕಣ್ಣು –ಯಾವ ರೀತಿಯಲ್ಲಿ ತನ್ನ ತೇಜಸ್ಸಿನಿಂದ ದೇಹವು ಮುಂದೆ ಹೋಗಲು ಪ್ರತಿಬಂಧಕವಾಗಿರುವ ಹಾದಿಯಲ್ಲಿರುವ ಮುಳ್ಳು-ಕಲ್ಲುಗಳನ್ನು ತಿಳಿದು ದೇಹವನ್ನು ಮುಂದಕ್ಕೆ ಒಯ್ಯುವುದೋ –ಅದೇ ರೀತಿಯಲ್ಲಿ ವಿವೇಕದಿಂದ ಯುಕ್ತವಾದ ಬುದ್ಧಿಯು ಪರಿತ್ಯಾಗಮಾಡಲು ಯೋಗ್ಯವಾದ ಅಶುಭವಾದ ಕರ್ಮವು ಯಾವುದೆಂಬುದನ್ನು ಕಂಡುಕೊಳ್ಳುತ್ತದೆ.

ಸರ್ಪಾನ್ಕುಶಾಗ್ರಾಣಿ ತಥೋದಪಾನಂ
ಜ್ಞಾತ್ವಾ ಮನುಷ್ಯಾಃ ಪರಿವರ್ಜಯನ್ತಿ ।
ಅಜ್ಞಾನತಸ್ತತ್ರ ಪತನ್ತಿ ಕೇಚಿ-
ಜ್ಜ್ಞಾನೇ ಫಲಂ ಪಶ್ಯ ಯಥಾ ವಿಶಿಷ್ಟಮ್ ॥೧೭॥

ಜ್ಞಾನಿಗಳಾದ (ವಿವೇಕಯುಕ್ತವಾದ ಬುದ್ಧಿಯಿರುವ) ಮನುಷ್ಯರು ಹಾದಿಯಲ್ಲಿ ಸರ್ಪಗಳಿರುವುದನ್ನೂ, ದರ್ಭೆಯ ಕೂಳೆಗಳಿರುವುದನ್ನೂ (ಮುಳ್ಳುಗಳಿರುವುದನ್ನೂ), ಬಾವಿಯಿರುವುದನ್ನೂ ತಿಳಿದುಕೊಂಡು ಅವುಗಳನ್ನು ದೂರದಿಂದಲೇ ವರ್ಜಿಸುತ್ತಾರೆ. ಅವುಗಳಿರುವ ಕಡೆಗೆ ಹೋಗುವುದಿಲ್ಲ. ಅಜ್ಞಾನಿಗಳಾದ ಕೆಲವರು ಸರ್ಪಗಳಾಗಲೀ, ಮುಳ್ಳುಗಳಾಗಲೀ, ಬಾವಿಯಾಗಲೀ ಇರುವುದನ್ನು ತಿಳಿಯದೇ ಪ್ರಯಾಣಮಾಡುತ್ತಾ ಸರ್ಪದಿಂದ ಕಚ್ಚಿಸಿಕೊಳ್ಳುತ್ತಾರೆ. ಮುಳ್ಳುಗಳಿಂದ ಚುಚ್ಚಲ್ಪಡುತ್ತಾರೆ. ಅಥವಾ ಬಾವಿಯಲ್ಲಿ ಬೀಳುತ್ತಾರೆ. ಜ್ಞಾನದ ಫಲವು ಎಷ್ಟು ಶ್ರೇಷ್ಠವೆಂಬುದನ್ನು ಇದರಿಂದಲೇ ನೀನು ಕಂಡುಕೊಳ್ಳಬಹುದಾಗಿದೆ.

ಕೃತ್ಸ್ನಸ್ತು ಮನ್ತ್ರೋ ವಿಧಿವತ್ಪ್ರಯುಕ್ತೋ
ಯಥಾ ಯಥೋಕ್ತಾಸ್ತ್ವಿಹ ದಕ್ಷಿಣಾಶ್ಚ ।
ಅನ್ನಪ್ರದಾನಂ ಮನಸಃ ಸಮಾಧಿಃ
ಪಞ್ಚಾತ್ಮಕಂ ಕರ್ಮಫಲಂ ವದನ್ತಿ ॥೧೮॥

ವಿಧಿಪೂರ್ವಕವಾಗಿ (ಯಾವ ಮಂತ್ರವನ್ನು ಹೇಗೆ ಮತ್ತು ಎಲ್ಲಿ ಹೇಳಬೇಕೆಂಬ ವಿಧ್ಯನುಸಾರವಾಗಿ) ನಿಖಿಲವಾದ ವೇದಮಂತ್ರಗಳನ್ನೂ

ಉಚ್ಚಾರಣೆಮಾಡುವುದು ; ವೇದೋಕ್ತವಾದ ರೀತಿಯಲ್ಲಿ ಯಜ್ಞಗಳ ಅನುಷ್ಠಾನವನ್ನು ಮಾಡುವುದು ; ಯಥಾಯೋಗ್ಯವಾಗಿ ದಕ್ಷಿಣೆಗಳನ್ನು ಕೊಡುವುದು ; ಅನ್ನದಾನವನ್ನು ಮಾಡುವುದು ಮತ್ತು ಎಲ್ಲ ಕರ್ಮಾನುಷ್ಠಾನಗಳ ಸಮಯದಲ್ಲಿಯೂ ಏಕಾಗ್ರತೆಯಿಂದಿರುವುದು –ಈ ಐದು ಕರ್ಮದ ಅಂಗಗಳಾಗಿರುತ್ತವೆ. ಪಂಚಾತ್ಮಕವಾದ ಕ್ರಿಯೆಯೇ ಕರ್ಮದ ಫಲ ರೂಪವಾಗಿರುವುದೆಂದು ವಿದ್ವಾಂಸರು ಹೇಳುತ್ತಾರೆ. ಪಂಚಾಂಗಯುಕ್ತವಾಗಿ ಯಜ್ಞಮಾಡಿದರೆ ಯಜ್ಞಕರ್ಮದ ಸಂಪೂರ್ಣಫಲವೂ ಲಭಿಸುತ್ತದೆ.

ಗುಣಾತ್ಮಕಂ ಕರ್ಮ ವದನ್ತಿ ವೇದಾ-
ಸ್ತಸ್ಮಾನ್ಮನ್ತ್ರೋ ಮನ್ತ್ರಪೂರ್ವಂ ಹಿ ಕರ್ಮ ।
ವಿಧಿರ್ವಿಧೇಯಂ ಮನಸೋಪಪತ್ತಿಃ
ಫಲಸ್ಯ ಭೋಕ್ತಾ ತು ತಥಾ ಶರೀರೀ ॥೧೯॥

ಕರ್ಮಗಳು ಸಾತ್ತ್ವಿಕ, ರಾಜಸ ಮತ್ತು ತಾಮಸಗುಣಾತ್ಮಕಗಳೆಂದು ವೇದಗಳು ಹೇಳುತ್ತವೆ. ಅದೇ ರೀತಿಯಲ್ಲಿ ಮಂತ್ರಗಳಲ್ಲಿಯೂ ಸಾತ್ತ್ವಿಕ-ರಾಜಸ-ತಾಮಸಗಳೆಂಬ ಭೇದವಿರುತ್ತದೆ. ಅಗ್ನಿಮೀಳೇ ಪುರೋಹಿತಂ ಎಂಬ ಮಂತ್ರವು ಸಾತ್ತ್ವಿಕಮಂತ್ರ. ಇಷೇತ್ವೋರ್ಜೇತ್ವಾ –ಎಂಬುದು ರಾಜಸಮಂತ್ರ. ಸರ್ವಂ ಪ್ರವಿಧ್ಯ ಹೃದಯಂ ಪ್ರವಿಧ್ಯ –ಎಂಬುದು ತಾಮಸಮಂತ್ರ. ಇವುಗಳಿಗೆ ಸಂಬಂಧಿಸಿದಂತೆ ವಿಧಿಗಳೂ ಆತ್ಮಕಾಮೋ ಯಜೇತ-ಸ್ವರ್ಗಕಾಮೋ ಯಜೇತ-ಅಭಿಚರನ್ಯಜೇತ– ಎಂಬುದಾಗಿದ್ದು ಸತ್ತ್ವ-ರಜಸ್ತಮೋಗುಣಗಳಿಗೆ ಅನುಸಾರವಾಗಿಯೇ ಇರುತ್ತವೆ. ಈ ಕರ್ಮಗಳ ಪ್ರಯೋಗಗಳೂ ಸತ್ತ್ವ-ರಜಸ್ತಮೋಗುಣಾತ್ಮಕಗಳಾಗಿಯೇ ಇರುತ್ತವೆ. ಈ ಕರ್ಮಗಳನ್ನು ಮಾಡುವವರ ಮನಸ್ಸಿನ ಆಶಯವೂ ತ್ರಿಗುಣಾತ್ಮಕವಾಗಿಯೇ ಇರುತ್ತದೆ. ಫಲವನ್ನು ಅನುಭವಿಸುವ ಮನುಷ್ಯನೂ ಕೂಡ ಸಾತ್ತ್ವಿಕನೂ, ರಾಜಸನೂ, ತಾಮಸನೂ ಆಗಿರುತ್ತಾನೆ.

ಶಬ್ದಾಶ್ಚ ರೂಪಾಣಿ ರಸಾಶ್ಚ ಪುಣ್ಯಾಃ
ಸ್ಪರ್ಶಾಶ್ಚ ಗನ್ಧಾಶ್ಚ ಶುಭಾಸ್ತಥೈವ ।

ನರೋ ನ ಸಂಸ್ಥಾನಗತಃ ಪ್ರಭುಃ ಸ್ಯಾ-
ದೇತತ್ಫಲಂ ಸಿದ್ಧ್ಯತಿ ಕರ್ಮಲೋಕೇ ॥೨೦॥

ಶಬ್ದಗಳೂ, ರೂಪಗಳೂ, ಪವಿತ್ರವಾದ ರಸಗಳೂ, ಸುಖವಾದ ಸ್ಪರ್ಶಗಳೂ, ಶುಭಾವಹವಾದ ಗಂಧಗಳೂ –ಇವೆಲ್ಲವೂ ಕರ್ಮಲೋಕವಾದ ಈ ಭೂಲೋಕದಲ್ಲಿ ಸಿದ್ಧಿಸುತ್ತವೆ. ಸತ್ಕರ್ಮಗಳನ್ನು ಮಾಡಿದುದರ ಫಲವಾಗಿ ಈ ಭೂಲೋಕದಲ್ಲಿ ಇವುಗಳೆಲ್ಲವನ್ನೂ ಪಡೆದುಕೊಳ್ಳಬಹುದು. ಆದರೆ ಮನುಷ್ಯನು ಸಕಾಮಕರ್ಮಗಳಿಂದ ಸಚ್ಚಿದಾನಂದಪರಮಾತ್ಮನನ್ನು ಸಮೀಪಿಸಿದ ಪ್ರಭುವಾಗಲಾರನು. ಪ್ರಭುವಿನ ಸಾಮೀಪ್ಯವನ್ನು ಸೇರಿದವನು ಪ್ರಭುಲಕ್ಷಣಗಳುಳ್ಳವನೇ ಆಗಿ ಪ್ರಭುವಾಗುವುದರಿಂದ ಸಕಾಮಕರ್ಮಿಯು ಅಂತಹ 'ಪ್ರಭುವಾಗುವುದಿಲ್ಲ.'

(ವ್ಯಾಖ್ಯಾನಕಾರರು ಈ ಶ್ಲೋಕಕ್ಕೆ ಬೇರೆಯ ವಿಧವಾಗಿಯೇ ಅರ್ಥಮಾಡಿರುತ್ತಾರೆ. ಕರ್ಮಲೋಕ ಎಂಬುದಕ್ಕೆ ಕರ್ಮಭೂಮಿ ಎಂಬ ಅರ್ಥವು ಸಹಜವಾಗಿಯೇ ಕಾಣುತ್ತದೆ. ವ್ಯಾಖ್ಯಾನಕಾರರು ಸ್ವರ್ಗಲೋಕ ಎಂದು ಅರ್ಥಮಾಡಿರುತ್ತಾರೆ. ಶಬ್ದಾದಯಃ ಕರ್ಮಫಲಂ ಕರ್ಮಪ್ರಾಪ್ಯೇ ಲೋಕೇ ಸಿದ್ಧ್ಯತಿ–ಶಬ್ದಾದಿ ಕರ್ಮಫಲಗಳು ಕರ್ಮದಿಂದ ಪ್ರಾಪ್ತವಾಗುವ ಸ್ವರ್ಗದಲ್ಲಿ ಸಿದ್ಧಿಸುತ್ತವೆ. ನರಃ ಪ್ರಭುಃ ಅಧಿಕಾರೀ ಜ್ಞಾನಫಲೇ–ಮನುಷ್ಯನು ಜ್ಞಾನಬಲಕ್ಕೆ ಅಧಿಕಾರಿಯಾಗಿರುತ್ತಾನೆ. ನ ಸಂಸ್ಥಾನಗತಃ ಮರಣಂ ಅಪ್ರಾಪ್ತಃ ಜೀವನ್ನೇವ ಸ್ಯಾತ್ –ಮರಣವನ್ನು ಹೊಂದದೇ ಜೀವಿಸಿರುವಾಗಲೇ ಜ್ಞಾನಫಲಕ್ಕೆ ಅಧಿಕಾರಿಯಾದ ಮನುಷ್ಯನು ಜ್ಞಾನವನ್ನು ಪಡೆದುಕೊಳ್ಳುತ್ತಾನೆ. ಆತ್ಮಸಾಕ್ಷಾತ್ಕಾರವನ್ನು ಪಡೆದುಕೊಳ್ಳುತ್ತಾನೆ. ವ್ಯಾಖ್ಯಾನಕಾರರ ಪ್ರಕಾರ ಅರ್ಥವು ಹೀಗಾಗುತ್ತದೆ. ಮಾಡಿದ ಸಕಾಮಕರ್ಮಕ್ಕೆ ಶಬ್ದ-ಸ್ಪರ್ಶ-ರೂಪ-ರಸ-ಗಂಧಾದಿ ಫಲಗಳು ಅದೃಷ್ಟವಾದ ಸ್ವರ್ಗದಲ್ಲಿ ಸಿಕ್ಕುತ್ತವೆ. ಸಕಾಮಕರ್ಮಮಾಡದೇ ನಿಷ್ಕಾಮಕರ್ಮವನ್ನೇ ಮಾಡುತ್ತಿದ್ದರೆ ಜ್ಞಾನಿಯಾಗಿ ಆತ್ಮಸಾಕ್ಷಾತ್ಕಾರವನ್ನು ಈ ಶರೀರದಲ್ಲಿಯೇ ಪಡೆದುಕೊಳ್ಳಬಹುದು. ಪ್ರತ್ಯಕ್ಷವಾದ ಫಲವನ್ನು ಪಡೆದುಕೊಳ್ಳಬಹುದು. ಜ್ಞಾನಿ

ಯಾದವನಿಗೆ ಪ್ರತ್ಯಕ್ಷಫಲವು ಸಿಕ್ಕುತ್ತದೆ. ಕರ್ಮಠನಿಗೆ ಅದೃಷ್ಟಫಲವು ಸಿಕ್ಕುತ್ತದೆ. ಆದುದರಿಂದ ಜ್ಞಾನಮಾರ್ಗವೇ ಶ್ರೇಷ್ಠವಾದುದು.)

ಯದ್ಯಚ್ಛರೀರೇಣ ಕರೋತಿ ಕರ್ಮ
ಶರೀರಯುಕ್ತಃ ಸಮುಪಾಶ್ನುತೇ ತತ್ ।
ಶರೀರಮೇವಾಯತನಂ ಸುಖಸ್ಯ
ದುಃಖಸ್ಯ ಚಾಪ್ಯಾಯತನಂ ಶರೀರಮ್ ॥೨೧॥

ಜೀವಿಯು ಶರೀರಯುಕ್ತನಾಗಿ ಯಾವ ಶುಭಾಶುಭಕರ್ಮಗಳನ್ನು ಮಾಡುವನೋ ಆ ಶುಭಾಶುಭಕರ್ಮಗಳ ಫಲವನ್ನು ಅವನು ಸಶರೀರನಾಗಿಯೇ ಉಪಭೋಗಿಸಬೇಕು. ಶುಭಾಶುಭಕರ್ಮಗಳಿಂದ ಪ್ರಾಪ್ತವಾಗುವ ಫಲದ ಅನುಭವಕ್ಕೆ ಶರೀರವೇ ಮುಖ್ಯಸ್ಥಾನವಾಗಿರುತ್ತದೆ. ಈ ಕಾರಣದಿಂದಲೇ ಸುಖಕ್ಕೂ ಶರೀರವೇ ಆಶ್ರಯಸ್ಥಾನವಾಗಿದೆ. ದುಃಖಕ್ಕೂ ಈ ಶರೀರವೇ ಆಶ್ರಯಸ್ಥಾನವಾಗಿದೆ. ಸುಖ-ದುಃಖಗಳೆರಡನ್ನೂ ಶರೀರವೇ ಪರ್ಯಾಯವಾಗಿ ಅನುಭವಿಸುತ್ತಿರುತ್ತದೆ.

ವಾಚಾ ತು ಯತ್ಕರ್ಮ ಕರೋತಿ ಕಿಂಚಿ-
ದ್ವಾಚೈವ ಸರ್ವಂ ಸಮುಪಾಶ್ನುತೇ ತತ್ ।
ಮನಸ್ತು ಯತ್ಕರ್ಮ ಕರೋತಿ ಕಿಂಚಿ-
ನ್ಮನಃಸ್ಥ ಏವಾಯಮುಪಾಶ್ನುತೇ ತತ್ ॥೨೨॥

ಮನುಷ್ಯನು ಮಾತಿನಿಂದ ಯಾವುದಾದರೂ ಕರ್ಮಮಾಡಿದರೆ ಅದರ ಎಲ್ಲ ಫಲವನ್ನೂ ಅವನು ಮಾತಿನ ಮೂಲಕವಾಗಿಯೇ ಉಪಭೋಗಿಸುತ್ತಾನೆ. ಒಬ್ಬನೊಡನೆ ಒಳ್ಳೆಯ ಮಾತನಾಡುವುದೆಂಬುದು ವಾಕ್ಕರ್ಮ. ಆ ಕರ್ಮಕ್ಕೆ ಪ್ರತಿಫಲ ಎದುರಾಳಿಯೂ ಒಳ್ಳೆಯ ಮಾತುಗಳನ್ನು ಆಡುವುದೇ ಆಗಿದೆ. ಒಬ್ಬನನ್ನು ಬೈದರೆ ವಾಙ್ಮೂಲವಾದ ನಿಂದನೆಗಳೇ ಫಲರೂಪವಾಗಿ ಲಭಿಸುತ್ತವೆ. ಹಾಗೆಯೇ ಮನಸ್ಸಿನಿಂದ ಯಾವುದಾದರೂ ಕರ್ಮಮಾಡಿದರೆ ಮನುಷ್ಯನು ಮನಸ್ಸಿನ ಮೂಲಕವಾಗಿಯೇ ಅದರ ಫಲವನ್ನು ಪಡೆದುಕೊಳ್ಳುತ್ತಾನೆ.

(ವಾಙ್ಮನಸ್ಸುಗಳಿಂದ ಮಾಡಿದ ಕರ್ಮಫಲಗಳನ್ನು ವಾಙ್ಮನಸ್ಸುಗಳೊಡನೆ ಅನುಭವಿಸಬೇಕೇ ಹೊರತು ವಾಙ್ಮನಸ್ಸುಗಳಿಗೆ ಅತೀತವಾದ ಬ್ರಹ್ಮವಸ್ತು ವನ್ನು ಅನುಭವಿಸುವುದಕ್ಕಾಗುವುದಿಲ್ಲ. ತರ್ಹಿ ವಾಚಿಕೇನ ಜಪಾದಿನಾ ಮಾನಸಿಕೇನ ಧ್ಯಾನಾದಿನಾ ವಾ ಮೋಕ್ಷಃ ಸಿಧ್ಯತಾಂ ನೇತ್ಯಾಹ ವಾಚೇತಿ ವಾಙ್ಮನಸಾಭ್ಯಾಂ ಕೃತಂ ಕರ್ಮ ತದ್ವತ್ಯೈವ ಭೋಕ್ತವ್ಯಂ ನ ತು ತದತೀತಂ ವಸ್ತು ಗೋಚರಯೇದಿತ್ಯರ್ಥಃ–ಇದು ವ್ಯಾಖ್ಯಾನಕಾರರ ವ್ಯಾಖ್ಯಾನವಾಗಿದೆ.)

ಯಥಾ ಯಥಾ ಕರ್ಮಗುಣಂ ಫಲಾರ್ಥೀ
ಕರೋತ್ಯಯಂ ಕರ್ಮಫಲೇ ನಿವಿಷ್ಟಃ ।
ತಥಾ ತಥಾಯಂ ಗುಣಸಮ್ಪ್ರಯುಕ್ತಃ
ಶುಭಾಶುಭಂ ಕರ್ಮಫಲಂ ಭುನಕ್ತಿ ॥೨೩॥

ಮಾಡಿದ ಕರ್ಮಕ್ಕೆ ಫಲವನ್ನು ಇಚ್ಛಿಸುವ, ಕರ್ಮದ ಫಲದಲ್ಲಿಯೇ ಹೆಚ್ಚು ಆಸಕ್ತನಾಗಿರುವ, ಸತ್ತ್ವ-ರಜಸ್ತಮೋಗುಣಗಳಿಂದ ಪ್ರೇರಿತನಾದ ಮನುಷ್ಯನು ಯಾವ ಯಾವ ರೀತಿಯಲ್ಲಿ ಸತ್ತ್ವ-ರಜಸ್ತಮೋಗುಣಾತ್ಮಕ ಗಳಾದ ಕರ್ಮಗಳನ್ನು ಮಾಡುವನೋ–ಆಯಾ ರೀತಿಯಲ್ಲಿಯೇ ಅವನು ತ್ರಿಗುಣಾತ್ಮಕವಾದ ಕರ್ಮಗಳಿಗೆ ಅನುಗುಣವಾದ ಶುಭಾಶುಭಫಲಗಳನ್ನೂ ಪಡೆದುಕೊಳ್ಳುತ್ತಾನೆ.

(ಕರ್ಮಗಳಲ್ಲಿ ಸಾತ್ತ್ವಿಕ, ರಾಜಸ ಮತ್ತು ತಾಮಸ ಎಂಬ ಮೂರು ವಿಧವಾದ ಕರ್ಮಗಳಿವೆ. ಮನುಷ್ಯರಲ್ಲಿಯೂ ಸಾತ್ತ್ವಿಕರು, ರಾಜಸರು ಮತ್ತು ತಾಮಸರೆಂಬ ಮೂರು ವಿಧವಾದ ಮನುಷ್ಯರಿದ್ದಾರೆ. ಸಾತ್ತ್ವಿಕರಿಗೆ ಸಾತ್ತ್ವಿಕ ಕರ್ಮಗಳನ್ನು ಮಾಡುವ ಅಭಿರುಚಿಯುಂಟಾಗುತ್ತದೆ. ಅವರು ಸಾತ್ತ್ವಿಕಕರ್ಮಗಳನ್ನು ಮಾಡಿ ಸಾತ್ತ್ವಿಕವಾದ ಫಲಗಳನ್ನೇ ಪಡೆದುಕೊಳ್ಳುತ್ತಾರೆ. ರಾಜಸರಿಗೆ ರಾಜಸಕರ್ಮಗಳನ್ನೇ ಮಾಡುವ ಅಭಿರುಚಿಯಿರುತ್ತದೆ. ಅಂತಹವರು ರಾಜಸಕರ್ಮಗಳನ್ನೇ ಮಾಡಿ ರಾಜಸ ವಾದ ಫಲಗಳನ್ನೇ ಪಡೆಯುತ್ತಾರೆ. ತಾಮಸರಿಗೆ ತಾಮಸಕರ್ಮಗಳನ್ನೇ

ಮಾಡುವುದರಲ್ಲಿ ಅಭಿರುಚಿಯು ಹೆಚ್ಚಾಗಿರುತ್ತದೆ. ಅಂತಹವರು ತಾಮಸವಾದ ಕರ್ಮಗಳನ್ನೇ ಮಾಡಿ ತಾಮಸವಾದ ಫಲಗಳನ್ನೇ ಪಡೆಯುತ್ತಾರೆ. ದೇವತೆಗಳಲ್ಲಿಯೂ ಸಾತ್ತ್ವಿಕ, ರಾಜಸ, ತಾಮಸರೆಂಬ ದೇವತೆಗಳಿದ್ದಾರೆ. ಈ ಕಾರಣದಿಂದಲೇ ಕರ್ಮಾಸಕ್ತರು ಬೇರೆ ಬೇರೆ ದೇವತೆಗಳ ಪೂಜೆಗಳಲ್ಲಿ ಆಸಕ್ತರಾಗಿರುತ್ತಾರೆ. ಮನುಷ್ಯನ ಸ್ವಭಾವಕ್ಕೆ ಅನುಗುಣವಾದ ದೇವತೆಯ ಕಡೆಗೆ ಅವನ ಮನಸ್ಸು ಆಕರ್ಷಿಸಲ್ಪಟ್ಟಿರುತ್ತದೆ. ಪರಬ್ರಹ್ಮವಸ್ತುವು ಒಂದೇ ಆಗಿದ್ದರೂ ಸತ್ತ್ವ-ರಜಸ್ತಮೋಗುಣಾತ್ಮಕರಾದ ದೇವತೆಗಳ ಸೃಷ್ಟಿಯು ಈ ಕಾರಣದಿಂದಲೇ ಆಗಿದೆ. ಇದೇ ಸನಾತನಧರ್ಮದ ಹಿರಿಮೆ.)

ಮತ್ಸ್ಯೋ ಯಥಾ ಸ್ರೋತ ಇವಾಭಿಪಾತೀ
ತಥಾ ಕೃತಂ ಪೂರ್ವಮುಪೈತಿ ಕರ್ಮ ।
ಶುಭೇ ತ್ವಸೌ ತುಷ್ಯತಿ ದುಷ್ಕೃತೇ ತು
ನ ತುಷ್ಯತೇ ವೈ ಪರಮಃ ಶರೀರೀ ॥೨೪॥

ಯಾವ ರೀತಿಯಲ್ಲಿ ಮೀನು ಪ್ರವಾಹದೊಡನೆಯೇ ಹೋಗುತ್ತಿರುತ್ತದೆಯೋ–ಅದೇ ರೀತಿಯಲ್ಲಿ ಮನುಷ್ಯನು ತಾನು ಹಿಂದೆ ಮಾಡಿದ ಕರ್ಮಫಲದೊಡನೆ ಈ ಸಂಸಾರಸಾಗರದಲ್ಲಿ ತೇಲಿಕೊಂಡು ಹೋಗುತ್ತಿರುತ್ತಾನೆ. ಶ್ರೇಷ್ಠವಾದ ಮನುಷ್ಯದೇಹವನ್ನು ಧರಿಸಿರುವ ಜೀವನು ತನ್ನ ಪೂರ್ವಕರ್ಮಾನುಸಾರವಾಗಿ ಶುಭಫಲಗಳು ಲಭಿಸಿದರೆ ಆನಂದಪಡುತ್ತಾನೆ. ಪೂರ್ವಕರ್ಮಾನುಸಾರವಾಗಿ ದುಷ್ಫಲಗಳು ಲಭಿಸಿದರೆ ದುಃಖಪಡುತ್ತಾನೆ.

(ತಾನು ಮಾಡಿದುದನ್ನು ತಾನೇ ಅನುಭವಿಸುತ್ತಿರುವೆನೆಂದೂ ಈ ಕಾರಣದಿಂದ ಸತ್ಫಲದಿಂದಾಗಿ ಹಿಗ್ಗುವ ದುಷ್ಫಲದಿಂದಾಗಿ ಕುಗ್ಗುವ ಕಾರಣವಿಲ್ಲವೆಂದೂ ಜೀವಿಯು ಒಮ್ಮೆಯಾದರೂ ಯೋಚಿಸುವುದಿಲ್ಲ.)

ಯತೋ ಜಗತ್ಸರ್ವಮಿದಂ ಪ್ರಸೂತಂ
ಜ್ಞಾತ್ವಾತ್ಮವನ್ತೋ ವ್ಯತಿಯಾನ್ತಿ ಯತ್ತತ್ ।
ಯನ್ಮನ್ತ್ರಶಬ್ದೈರಕೃತಪ್ರಕಾಶಂ
ತದುಚ್ಯಮಾನಂ ಶೃಣು ಮೇ ಪರಂ ಯತ್ ॥೨೫॥

ದೇವಗುರುವೇ! ಯಾವುದರಿಂದ ಈ ಅಖಂಡಬ್ರಹ್ಮಾಂಡವೂ

ಹುಟ್ಟಿರುವುದೋ, ಜಿತೇಂದ್ರಿಯರಾದ ಜ್ಞಾನಿಗಳು ಯಾವುದನ್ನು (ಯಾವ ಬ್ರಹ್ಮವಸ್ತುವನ್ನು) ತಿಳಿದುಕೊಂಡು ಈ ಸಂಸಾರಸಾಗರವನ್ನು ದಾಟಿ ಪರಮ ಪದವನ್ನು ಹೊಂದಿರುವರೋ, ಯಾವುದರ ನಿಜಸ್ವರೂಪವನ್ನು ವೇದ ಮಂತ್ರಗಳೂ ಪೂರ್ಣರೂಪದಿಂದ ಪ್ರಕಾಶಗೊಳಿಸಲಾರವೋ –ಅಂತಹ ಸರ್ವೋತ್ಕೃಷ್ಟವಾದ ಬ್ರಹ್ಮವಸ್ತುವಿನ ವರ್ಣನೆಯನ್ನು ಮಾಡುತ್ತೇನೆ ; ಅವಧರಿಸು.

ರಸೈರ್ವಿಮುಕ್ತಂ ವಿವಿಧೈಶ್ಚ ಗನ್ಧೈ-
ರಶಬ್ದಮಸ್ಪರ್ಶಮರೂಪವಚ್ಚ ।
ಅಗ್ರಾಹ್ಯಮವ್ಯಕ್ತಮವರ್ಣಮೇಕಂ
ಪಞ್ಚಪ್ರಕಾರಾನ್ಸಸೃಜೇ ಪ್ರಜಾನಾಮ್ ॥೨೬॥

ಅನಿರ್ವಚನೀಯವಾದ, ಅವರ್ಣನೀಯವಾದ ಆ ಬ್ರಹ್ಮವಸ್ತುವು ನಾನಾವಿಧವಾದ ರಸಗಳಿಂದಲೂ, ವಿಧ-ವಿಧವಾದ ಗಂಧಗಳಿಂದಲೂ ಶೂನ್ಯವಾಗಿದೆ. (ಗಂಧರಹಿತವಾಗಿದೆ. ರಸರಹಿತವಾಗಿದೆ. ಬ್ರಹ್ಮವಸ್ತುವಿನಲ್ಲಿ ಯಾವ ವಿಧವಾದ ವಾಸನೆಯೂ ಇಲ್ಲ ; ರಸವೂ ಇಲ್ಲ.) ಶಬ್ದ-ಸ್ಪರ್ಶ-ರೂಪಗಳಿಂದಲೂ ಶೂನ್ಯವಾಗಿದೆ. ಆ ಬ್ರಹ್ಮವಸ್ತುವಿನಲ್ಲಿ ಶಬ್ದವಿಲ್ಲ. ಅದನ್ನು ಮುಟ್ಟಲು ಸಾಧ್ಯವಿಲ್ಲ. ಅದಕ್ಕೊಂದು ನಿರ್ದಿಷ್ಟವಾದ ರೂಪವೂ ಇಲ್ಲ. ಆ ಬ್ರಹ್ಮವಸ್ತುವನ್ನು ಮನಸ್ಸಿನ, ಬುದ್ಧಿಯ ಮತ್ತು ವಾಣಿಯ ಮೂಲಕವಾಗಿ ಗ್ರಹಣಮಾಡಲೂ ಸಾಧ್ಯವಾಗುವುದಿಲ್ಲ. ಆ ಬ್ರಹ್ಮವಸ್ತುವು ಅವ್ಯಕ್ತವಾದುದು ; ಅದ್ವಿತೀಯವಾದುದು ; ವರ್ಣರಹಿತವಾದುದು. ಹೀಗಿದ್ದರೂ ಆ ಬ್ರಹ್ಮ ವಸ್ತುವು ಪ್ರಜೆಗಳಿಗಾಗಿ ಐದು ವಿಧವಾದ ವಿಷಯಗಳನ್ನು (ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳನ್ನು) ಸೃಷ್ಟಿಸಿದೆ.

ನ ಸ್ತ್ರೀ ಪುಮಾನ್ನಾಪಿ ನಪುಂಸಕಂ ಚ
ನ ಸನ್ನ ಚಾಸತ್ಸದಸಚ್ಚ ತನ್ನ ।
ಪಶ್ಯನ್ತಿ ಯದ್ಬ್ರಹ್ಮವಿದೋ ಮನುಷ್ಯಾ-
ಸ್ತದಕ್ಷರಂ ನ ಕ್ಷರತೀತಿ ವಿದ್ಧಿ ॥೨೭॥

ಆ ಬ್ರಹ್ಮವಸ್ತುವು ಸ್ತ್ರೀಯೂ ಅಲ್ಲ ; ಪುರುಷನೂ ಇಲ್ಲ ; ನಪುಂಸಕನೂ

ಅಲ್ಲ. ಸತ್ತೂ ಅಲ್ಲ ; ಅಸತ್ತೂ ಅಲ್ಲ. (ವ್ಯಕ್ತವೂ ಅಲ್ಲ ; ಅವ್ಯಕ್ತವೂ ಅಲ್ಲ). ವ್ಯಕ್ತಾವ್ಯಕ್ತವೂ ಅಲ್ಲ. ವ್ಯಕ್ತಾವ್ಯಕ್ತಕ್ಕಿಂತಲೂ ಅತೀತನಾದ ಅಂತಹ ಯಾವ ಬ್ರಹ್ಮವಸ್ತುವನ್ನು ಬ್ರಹ್ಮಜ್ಞಾನಿಗಳಾದ ಮನುಷ್ಯರು ತಮ್ಮ ಹೃದಯಗುಹೆಯಲ್ಲಿ ನೋಡುತ್ತಾರೆಯೋ ಅದು ಅವಿನಾಶಿ ; ಅವಿಕಾರಿ. ಆದುದರಿಂದಲೇ ಅಕ್ಷರವೆಂದೂ ಆ ಬ್ರಹ್ಮವಸ್ತುವನ್ನು ಕರೆಯುತ್ತಾರೆ. ಈ ವಿಷಯವನ್ನು ನೀನು ಚೆನ್ನಾಗಿ ತಿಳಿದುಕೊ."

೨೦೧ನೆಯ ಅಧ್ಯಾಯವು ಮುಗಿಯಿತು.

೨೦೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಆತ್ಮತತ್ತ್ವ ಮತ್ತು ಬುದ್ಧಿಯೇ ಮೊದಲಾದ ಪ್ರಾಕೃತ ಪದಾರ್ಥಗಳ ವಿವೇಚನೆ : ಆತ್ಮತತ್ತ್ವದ ಸಾಕ್ಷಾತ್ಕಾರಕ್ಕೆ ಉಪಾಯ

ಯುಧಿಷ್ಠಿರ! ಮನುವು ಮುಂದುವರಿದು ಹೇಳುತ್ತಾನೆ :

ಅಕ್ಷರಾತ್ಖಂ ತತೋ ವಾಯುಸ್ತತೋ ಜ್ಯೋತಿಸ್ತತೋ ಜಲಮ್ ।
ಜಲಾತ್ಪ್ರಸೂತಾ ಜಗತೀ ಜಗತ್ಯಾಂ ಜಾಯತೇ ಜಗತ್ ॥೧॥

"ಬೃಹಸ್ಪತೇ! ಅವಿನಾಶಿಯಾದ, ಅಕ್ಷರನಾಮಕನಾದ ಪರಬ್ರಹ್ಮ ಪರಮಾತ್ಮನಿಂದ ಆಕಾಶವೂ, ಆಕಾಶದಿಂದ ವಾಯುವೂ, ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ಜಲವೂ, ಜಲದಿಂದ ಪೃಥ್ವಿಯೂ ಹುಟ್ಟಿದೆ. ಈ ಪೃಥ್ವಿಯಲ್ಲಿ ವಿಕಾರಕ್ಕೆ ಒಳಪಡುವ ಪದಾರ್ಥಗಳು ಹುಟ್ಟುತ್ತವೆ.

ಏತೈಃ ಶರೀರೈರ್ಜಲಮೇವ ಗತ್ವಾ
ಜಲಾಚ್ಚ ತೇಜಃ ಪವನೋಽನ್ತರಿಕ್ಷಮ್ ।
ಖಾದ್ವೈ ನಿವರ್ತನ್ತಿ ನ ಭಾವಿನಸ್ತೇ
ಮೋಕ್ಷಂ ಚ ತೇ ವೈ ಪರಮಾಪ್ನುವನ್ತಿ ॥೨॥

ಜಗತ್ತಿನಲ್ಲಿ ಪಾರ್ಥಿವಶರೀರದೊಡನೆ ಹುಟ್ಟಿದ ಪ್ರಾಣಿಗಳು ಆಯುಷ್ಯವು ಕಳೆದೊಡನೆಯೇ ಆರೋಹಣಕ್ರಮದಲ್ಲಿ ಮೊದಲು ಜಲದಲ್ಲಿ

ವಿಲಯಹೊಂದುತ್ತವೆ. ಅನಂತರ ಜಲದಿಂದ ಅಗ್ನಿಯಲ್ಲಿಯೂ, ಅಗ್ನಿ ಯಿಂದ ವಾಯುವಿನಲ್ಲಿಯೂ, ವಾಯುವಿನಿಂದ ಆಕಾಶದಲ್ಲಿಯೂ ಲೀನವಾಗುತ್ತವೆ. ಪುನಃ ಸೃಷ್ಟಿಯಲ್ಲಿ ಅವರೋಹಣಕ್ರಮದಲ್ಲಿ ಭೂಮಿಗೆ ಬಂದು ಅವುಗಳ ಕರ್ಮಾನುಸಾರವಾಗಿ ನಾನಾಯೋನಿಗಳಲ್ಲಿ ಹುಟ್ಟುತ್ತವೆ. ಈ ಸೃಷ್ಟಿಪ್ರಲಯಚಕ್ರವು ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಆದರೆ ಜ್ಞಾನಿಗಳಾದವರು ಆಕಾಶತತ್ತ್ವದಿಂದಲೂ ಮೇಲಕ್ಕೆ ಹೋಗಿ ಪರಮಮೋಕ್ಷವನ್ನು ಪಡೆಯುತ್ತಾರೆ. ಅವರಿಗೆ ಈ ಭೂಮಿಯಲ್ಲಿ ಜನ್ಮವಿರುವುದಿಲ್ಲ.

ನೋಷ್ಣಂ ನ ಶೀತಂ ಮೃದು ನಾಪಿ ತೀಕ್ಷ್ಣಂ
ನಾಮ್ಲಂ ಕಷಾಯಂ ಮಧುರಂ ನ ತಿಕ್ತಮ್ ।
ನ ಶಬ್ದವನ್ನಾಪಿ ಚ ಗನ್ಧವತ್ತ-
ನ್ನ ರೂಪವತ್ತತ್ಪರಮಸ್ವಭಾವಮ್ ॥೩॥

ಆ ಪರಮಾತ್ಮಭಾವವೆಂಬುದು ಉಷ್ಣವಾಗಿಯೂ ಇರುವುದಿಲ್ಲ ; ಶೀತಲವಾಗಿಯೂ ಇರುವುದಿಲ್ಲ. ಕೋಮಲವಾಗಿಯೂ ಇರುವುದಿಲ್ಲ ; ತೀಕ್ಷ್ಣವಾಗಿಯೂ ಇರುವುದಿಲ್ಲ. ಹುಳಿಯಾಗಿಯೂ ಇರುವುದಿಲ್ಲ ; ಕಟುವಾಗಿಯೂ ಇರುವುದಿಲ್ಲ. ಮಧುರವಾಗಿಯೂ ಇರುವುದಿಲ್ಲ ; ಒಗಚಾಗಿಯೂ ಇರುವುದಿಲ್ಲ. ಆ ಪರಬ್ರಹ್ಮವಸ್ತುವಿನಲ್ಲಿ ಶಬ್ದವೂ ಇಲ್ಲ ; ಗಂಧವೂ ಇಲ್ಲ ; ರೂಪವೂ ಇಲ್ಲ. ಶಬ್ದ-ಗಂಧ-ರೂಪಗಳಿಂದಲೂ ಅದು ಶೂನ್ಯವಾಗಿದೆ. ಆದರೂ ಆ ಸ್ವರೂಪವು ಎಲ್ಲಕ್ಕಿಂತಲೂ ಶ್ರೇಷ್ಠವಾಗಿದೆ. ಎಲ್ಲಕ್ಕಿಂತಲೂ ವಿಲಕ್ಷಣವಾಗಿದೆ.

ಸ್ಪರ್ಶಂ ತನುರ್ವೇದ ರಸಂ ಚ ಜಿಹ್ವಾ
ಘ್ರಾಣಂ ಚ ಗನ್ಧಾಞ್ಶ್ರವಣೌ ಚ ಶಬ್ದಾನ್ ।
ರೂಪಾಣಿ ಚಕ್ಷುರ್ನ ಚ ತತ್ಪರಂ ಯ-
ದ್ಗೃಹ್ಣನ್ತ್ಯನಧ್ಯಾತ್ಮವಿದೋ ಮನುಷ್ಯಾಃ ॥೪॥

ಶರೀರವು ಅಥವಾ ಶರೀರಕ್ಕೆ ಆವರಣವಾಗಿರುವ ಚರ್ಮವು ಸ್ಪರ್ಶವನ್ನು ತಿಳಿದುಕೊಳ್ಳುತ್ತದೆ. ನಾಲಿಗೆಯು ರಸವನ್ನು ತಿಳಿದುಕೊಳ್ಳುತ್ತದೆ.

ಮೂಗು ವಾಸನೆಯನ್ನು ಗ್ರಹಿಸುತ್ತದೆ. ಕಿವಿಗಳು ಶಬ್ದಗಳನ್ನು ಗ್ರಹಿಸುತ್ತವೆ. ಕಣ್ಣುಗಳು ರೂಪಗಳನ್ನು ಗ್ರಹಿಸುತ್ತವೆ. ಆದರೆ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳೆಂಬ ಐದು ವಿಷಯಗಳನ್ನೂ ಸೃಷ್ಟಿಸಿದ ಪರಬ್ರಹ್ಮಪರಮಾತ್ಮನನ್ನು ಈ ಪಂಚೇಂದ್ರಿಯಗಳು ತಿಳಿಯಲಾರವು. ಆದುದರಿಂದ ಆಧ್ಯಾತ್ಮಜ್ಞಾನದಿಂದ ವಿಹೀನರಾದ ಮನುಷ್ಯರು ಪರಮಾತ್ಮತತ್ತ್ವದ ಅನುಭವವನ್ನು ಪಡೆಯಲಾರರು.

ನಿವರ್ತಯಿತ್ವಾ ರಸನಾಂ ರಸೇಭ್ಯೋ
ಘ್ರಾಣಂ ಚ ಗನ್ಧಾಚ್ಛ್ರವಣೌ ಚ ಶಬ್ದಾತ್ ।
ಸ್ಪರ್ಶಾತ್ತ್ವಚಂ ರೂಪಗುಣಾತ್ತು ಚಕ್ಷು-
ಸ್ತತಃ ಪರಂ ಪಶ್ಯತಿ ಸ್ವಂ ಸ್ವಭಾವಮ್ ॥೫॥

ನಾಲಿಗೆಯನ್ನು ರಸಗಳಿಂದಲೂ, ಮೂಗನ್ನು ಗಂಧದಿಂದಲೂ, ಕಿವಿಗಳನ್ನು ಶಬ್ದದಿಂದಲೂ, ತ್ವಚೆಯನ್ನು ಸ್ಪರ್ಶದಿಂದಲೂ, ಕಣ್ಣುಗಳನ್ನು ರೂಪದಿಂದಲೂ ಹಿಂದಿರುಗಿಸಿ –ಆ ಐದು ಇಂದ್ರಿಯಗಳನ್ನೂ ಅಂತರ್ಮುಖಗಳನ್ನಾಗಿ ಮಾಡಬೇಕು. ಹಾಗೆ ಮಾಡಿದನಂತರವೇ ಮನುಷ್ಯನು ತನ್ನ ಮೂಲಸ್ವರೂಪನಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಯತೋ ಗೃಹೀತ್ವಾ ಹಿ ಕರೋತಿ ಯಚ್ಚ
ಯಸ್ಮಿಂಶ್ಚ ತಾಮಾರಭತೇ ಪ್ರವೃತ್ತಿಮ್ ।
ಯಸ್ಮಿಂಶ್ಚ ಯದ್ಯೇನ ಚ ಯಶ್ಚ ಕರ್ತಾ
ಯತ್ಕಾರಣಂ ತೇ ಸಮುದಾಯಮಾಹುಃ ॥೬॥

ಮುನಿಗಳು-ಕರ್ತೃವೇ ಮೊದಲಾದ ಸಮುದಾಯಕ್ಕೆ ಯಾವನು ಕಾರಣಭೂತನೋ –ಅವನನ್ನೇ ಸ್ವಭಾವನೆಂದೂ, ಪರಬ್ರಹ್ಮಪರಮಾತ್ಮನೆಂದೂ ಹೇಳುತ್ತಾರೆ. ಯಾವುದರ ದೆಸೆಯಿಂದ ಮತ್ತು ಯಾವುದನ್ನು ಹಿಡಿದುಕೊಂಡು (ಯಾವುದರ ಅವಲಂಬನೆಯಿಂದ) ಆ ಪ್ರವೃತ್ತಿಯನ್ನು ಪ್ರಾರಂಭಿಸುತ್ತಾನೆಯೋ ಅದೇ ಪರಮಾತ್ಮನು. ಪುನಃ ಯಾವುದರಲ್ಲಿ ನೆಲೆಗೊಂಡು ಯಾವ ಸಾಧನದಿಂದ ಕರ್ಮವನ್ನು ಮಾಡುತ್ತಾನೆಯೋ ಕರ್ತೃವೂ

ಯಾವನಾಗಿದ್ದಾನೆಯೋ ಅವನೇ ಪರಮಾತ್ಮನು. ಈ ಕರ್ತೃ-ಕರ್ಮ-ಕರಣವೇ ಮುಂತಾದ ಸಮುದಾಯಕ್ಕೆ ಯಾವುದನ್ನು ಕಾರಣವೆನ್ನುತ್ತಾರೆಯೋ ಅದೇ ಪರಮಾತ್ಮನು.

(ಪರಮಾತ್ಮನು ಸರ್ವಸ್ವರೂಪಿ, ಸರ್ವಾಧಾರ. ಸರ್ವಪ್ರವೃತ್ತಿಗಳಿಗೂ ಅಧಿಕರಣ ಮತ್ತು ಕಾರಣ. ಕರ್ತೃ, ಕರ್ಮ, ಕರಣಸಮುದಾಯಕ್ಕೆ ಅವನೇ ಕಾರಣ. ಯಸ್ಮಿನ್ಸರ್ವಂ ಯತಃ ಸರ್ವಂ ಯಃ ಸರ್ವೇ ಸರ್ವತಶ್ಚ ಯಃ.। ಯಶ್ಚ ಸರ್ವಮಯೋ ನಿತ್ಯಂ ತಸ್ಮೈ ಸರ್ವಾತ್ಮನೇ ನಮಃ ॥೮೪॥ ಶಾಂತಿಪರ್ವ–ಅಧ್ಯಾಯ–೪೭ (ಸಂ. ೨೧–ಪುಟ 402) ಈ ಶ್ಲೋಕವೂ ಈ ಅರ್ಥವನ್ನೇ ಪ್ರತಿಪಾದಿಸುತ್ತದೆ.

ವ್ಯಾಖ್ಯಾನಕಾರರು ಈ ಪದಗಳಿಗೆ ಹೀಗೆ ಅರ್ಥಮಾಡಿರುತ್ತಾರೆ.: **ಯಃ ಕರ್ತಾ** = **ಪ್ರಮಾತಾ**–ಯಾವ ಚಿತ್ತವೃತ್ತಿಪ್ರತಿಬಿಂಬಿತನಾದ ಚೈತನ್ಯನು, **ಯೇನ= ಜ್ಞಾನಕರ್ಮಕರಣೇನ**–ಜ್ಞಾನಕರ್ಮವೆಂಬ ಕರಣ (ಸಾಧನ)ದಿಂದ, **ಯತ್= ಪ್ರಾಪ್ಯಂ ಉದ್ದಿಶ್ಯ**-ಪ್ರಾಪ್ಯಫಲವನ್ನು ಉದ್ದೇಶಿಸಿ, **ಯಸ್ಮಿನ್ = ದೇಶೇ ಕಾಲೇ ಚ**-ಯಾವ ದೇಶ-ಕಾಲಗಳಲ್ಲಿ, **ಯಸ್ಮಿನ್= ಸುಖೇ ದುಃಖೇ ವಾ ನಿಮಿತ್ತಭೂತೇ** – ಸುಖದಲ್ಲಾಗಲೀ ದುಃಖದಲ್ಲಾಗಲೀ ಕಾರಣ ಭೂತವಾದ, **ತಾಂ = ತದನುಕೂಲಾಂ** – ಅದಕ್ಕೆ ಅನುಕೂಲವಾದ, **ಪ್ರವೃತ್ತಿಂ = ಯತ್ನಂ** – ಯತ್ನವನ್ನು, **ಆರಭತೇ** = ಪ್ರಾರಂಭಿಸುತ್ತಾನೆ. **ಯತ್** = ಯಾವ ಕರ್ಮವನ್ನು, **ಆರಭ್ಯ** = ಆರಂಭಿಸಿ, **ದರ್ಶನಗಮನಾದಿಕಂ ಕರೋತಿ** = ದರ್ಶನ-ಗಮನಾದಿಗಳನ್ನು ಮಾಡುತ್ತಾನೆ. **ಕಿಂ ಕೃತ್ವಾ ಕರೋತಿ**=ಏನು ಮಾಡಿ ದರ್ಶನ-ಗಮನಾದಿಗಳನ್ನು ಮಾಡುತ್ತಾನೆ? **ಯತಃ = ರಾಗದ್ವೇಷಾ ದಿತಃ** – ರಾಗ-ದ್ವೇಷಾದಿಗಳಿಂದಲೋ, **ಅದೃಷ್ಟಾತ್ = ಈಶ್ವರೇಚ್ಛಾತೋ ವಾ** – ಈಶ್ವರೇಚ್ಛೆಯಿಂದಲೋ, **ಗೃಹೀತ್ವಾ = ಅವಲಮ್ಬ್ಯ ಕರೋತಿ** – ರಾಗ-ದ್ವೇಷಗಳನ್ನೋ ಈಶ್ವರೇಚ್ಛೆಯನ್ನೋ ಅವಲಂಬಿಸಿ ದರ್ಶನ-ಗಮನಾದಿಗಳನ್ನು ಮಾಡುತ್ತಾನೆ. ಇದು ವ್ಯಾಖ್ಯಾನಕಾರರ ನಿರೂಪಣೆಯಾಗಿದೆ.

ಯದ್ವ್ಯಾಪ್ಯಭೂದ್ವ್ಯಾಪಕಂ ಸಾಧಕಂ ಚ
ಯನ್ಮಂತ್ರವತ್ಸಂಸ್ಥೀಯತಿ ಚಾಪಿ ಲೋಕೇ ।
ಯಃ ಸರ್ವಹೇತುಃ ಪರಮಾತ್ಮಕಾರೀ
ತತ್ಕಾರಣಂ ಕಾರ್ಯಮತೋ ಯದನ್ಯತ್ ॥೭॥

* ವ್ಯಾಪಿಸಲ್ಪಟ್ಟಿರುವುದು, ವ್ಯಾಪಿಸಿರುವುದು, ಲೋಕದಲ್ಲಿ ಮಂತ್ರದಂತೆ ಗುಟ್ಟಾಗಿರುವುದು ಮತ್ತು ಎಲ್ಲಕ್ಕೂ ಕಾರಣವಾಗಿರುವುದು ಪರಬ್ರಹ್ಮವೇ. ಆ ಪರಮಾತ್ಮನೇ ಎಲ್ಲಕ್ಕೂ ಕರ್ತೃವು. ಅವನೊಬ್ಬನೇ ಕಾರಣವು. ಅವನನ್ನು ಬಿಟ್ಟು ಉಳಿದುದೆಲ್ಲವೂ ಕಾರ್ಯವು.

ಯಥಾ ಹಿ ಕಶ್ಚಿತ್ಸ್ವಕೃತೈರ್ಮನುಷ್ಯಃ
ಶುಭಾಶುಭಂ ಪ್ರಾಪ್ನುತೇಽಥಾವಿರೋಧಾತ್ ।
ಏವಂ ಶರೀರೇಷು ಶುಭಾಶುಭೇಷು
ಸ್ವಕರ್ಮಜೈರ್ಜ್ಞಾನಮಿದಂ ನಿಬದ್ಧಮ್ ॥೮॥

ಯಾವ ರೀತಿಯಲ್ಲಿ ಒಬ್ಬ ಮನುಷ್ಯನು ತಾನು ಮಾಡಿದ ಕರ್ಮಗಳಿಂದ ಶುಭಾಶುಭಫಲಗಳನ್ನು ಯಾವ ವಿಧವಾದ ಅಡೆ-ತಡೆಗಳೂ ಇಲ್ಲದೇ ಹೊಂದುತ್ತಾನೆಯೋ–ಅದೇ ರೀತಿಯಲ್ಲಿ ತನ್ನ ಕರ್ಮಗಳಿಗೆ ಅನುಸಾರವಾಗಿ ಪ್ರಾಪ್ತವಾಗಿರುವ ಶುಭಾಶುಭಶರೀರಗಳಲ್ಲಿ (ಉತ್ತಮಾಧಮ-ಮಧ್ಯಮ ಶರೀರಗಳಲ್ಲಿ) ಜ್ಞಾನಸ್ವರೂಪವಾದ ಪರಬ್ರಹ್ಮತತ್ತ್ವವು ನೆಲೆಸಿದೆ.

---

* ಬ್ರಹ್ಮವಸ್ತುವು ಒಂದೇ ಆಗಿದ್ದರೂ ಅದು ಎಲ್ಲ ಕಡೆಗಳಲ್ಲಿಯೂ ವ್ಯಾಪಿಸಿರುವುದೆಂದು ಅನೇಕ ಶ್ರುತಿವಾಕ್ಯಗಳು ಹೇಳುತ್ತವೆ. ಭಗವಂತನಿಗೆ ವಿಷ್ಣುವೆಂಬ ಹೆಸರು ಬಂದಿರುವುದೂ ಸರ್ವವ್ಯಾಪಕನಾದುದರಿಂದಲೇ. (ವಿಷಲ್ಸ್ ವ್ಯಾಪ್ತೌ)

ಏಕ ಏವ ತು ಭೂತಾತ್ಮಾ ಭೂತೇ ಭೂತೇ ವ್ಯವಸ್ಥಿತಃ ।
ಏಕಧಾ ಬಹುಧಾ ಚೈವ ದೃಶ್ಯತೇ ಜಲಚನ್ದ್ರವತ್ ॥

ಒಬ್ಬನೇ ಒಬ್ಬ ಭೂತಾತ್ಮನು ಪ್ರತಿಯೊಂದು ಪ್ರಾಣಿಯಲ್ಲಿಯೂ ಉಪಸ್ಥಿತನಾಗಿರುತ್ತಾನೆ. ನೀರಿನ ಅಲೆಗಳಲ್ಲಿ ಚಂದ್ರನು ಅನೇಕಪ್ರಕಾರವಾಗಿ ಕಾಣುವಂತೆ ಅವನೊಮ್ಮೆ ಏಕಾತ್ಮನಾಗಿಯೂ ಮತ್ತೊಮ್ಮೆ ಅನೇಕಾತ್ಮನಾಗಿಯೂ ಕಾಣುತ್ತಾನೆ.

ಯಥಾ ಪ್ರದೀಪ್ತಃ ಪುರತಃ ಪ್ರದೀಪಃ
ಪ್ರಕಾಶಮನ್ಯಸ್ಯ ಕರೋತಿ ದೀಪ್ಯನ್ ।
ತಥೇಹ ಪಞ್ಚೇನ್ದ್ರಿಯದೀಪವೃಕ್ಷಾ
ಜ್ಞಾನಪ್ರದೀಪ್ತಾಃ ಪರವನ್ತ ಏವ ॥೯॥

ಪ್ರದೀಪ್ತವಾದ ದೀಪವು ತಾನೂ ಉರಿಯುತ್ತಿದ್ದು ತನ್ನ ಸಮೀಪದಲ್ಲಿರುವ ವಸ್ತುಗಳನ್ನೂ ಪ್ರಕಾಶಗೊಳಿಸುವಂತೆ–ಜ್ಞಾನದೀಪವು ತಾನೂ ಬೆಳಗುತ್ತಾ ತನ್ನ ಸಮೀಪದಲ್ಲಿರುವ ಇಂದ್ರಿಯಗಳನ್ನೂ ಬೆಳಗಿಸುತ್ತದೆ. ಅವುಗಳಿಗೆ ಚೈತನ್ಯವನ್ನು ಕೊಡುತ್ತದೆ. ಹಾಗೆ ಪ್ರಾಪ್ತವಾದ ಚೈತನ್ಯದಿಂದಲೇ ಇಂದ್ರಿಯಗಳು ವಿಷಯಗಳನ್ನು ಬೆಳಗಿಸುತ್ತವೆ. ಆದುದರಿಂದ ಎಲ್ಲಕ್ಕೂ ಮೂಲವಾದುದು ಜ್ಞಾನಪ್ರಕಾಶವೇ (ಆತ್ಮನೇ) ಆಗಿದೆ. ಇಂದ್ರಿಯಗಳು ಸ್ವಯಂಪ್ರಕಾಶಿಸುವುದಿಲ್ಲ. ಪರಮಾತ್ಮನ ಪ್ರಕಾಶಕ್ಕೆ ಅಧೀನವಾದುವುಗಳು.

ಯಥಾ ಚ ರಾಜ್ಞಾ ಬಹವೋ ಹ್ಯಮಾತ್ಯಾಃ
ಪೃಥಕ್ಪ್ರಮಾಣಂ ಪ್ರವದನ್ತಿ ಯುಕ್ತಾಃ ।
ತದ್ವಚ್ಛರೀರೇಷು ಭವನ್ತಿ ಪಞ್ಚ
ಜ್ಞಾನೈಕದೇಶಾಃ ಪರಮಃ ಸ ತೇಭ್ಯಃ ॥೧೦॥

ರಾಜನಿಂದ ಆಜ್ಞಪ್ತರಾದ ಹಲವಾರು ಮಂತ್ರಿಗಳು ತಮಗೆ ಯೋಜಿಸಿದ ಕಾರ್ಯಗಳಲ್ಲಿಯೇ ನಿಯುಕ್ತರಾಗಿ ಕಾಲ-ಕಾಲಕ್ಕೆ ತಮಗೆ ಸಂಬಂಧಿಸಿದ ಶಾಖೆಗಳ ವಿಷಯಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ರಾಜನಿಗೆ ತಿಳಿಯಪಡಿಸುವಂತೆ–ಮನುಷ್ಯನ ಶರೀರದಲ್ಲಿರುವ ಪಂಚೇಂದ್ರಿಯಗಳು ಅವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಪ್ರತಿಕ್ಷಣದಲ್ಲಿಯೂ ಬುದ್ಧಿಗೆ ಒಪ್ಪಿಸುತ್ತಿರುತ್ತವೆ. ಆದುದರಿಂದ ಅಂತಹ ಬುದ್ಧಿಗೂ ಮತ್ತು ಪಂಚೇಂದ್ರಿಯಗಳಿಗೂ ಚೈತನ್ಯವನ್ನು ದಯಪಾಲಿಸುವ ಜ್ಞಾನಸ್ವರೂಪವಾದ ಆತ್ಮವೊಂದೇ ಪಂಚೇಂದ್ರಿಯ-ಬುದ್ಧಿ-ಮನಸ್ಸುಗಳಿಗಿಂತಲೂ ಶ್ರೇಷ್ಠವಾದುದು.

ಯಥಾರ್ಚಿಷೋಽಗ್ನೇಃ ಪವನಸ್ಯ ವೇಗೋ
ಮರೀಚಯೋಽರ್ಕಸ್ಯ ನದೀಷು ಚಾಪಃ ।

ಗಚ್ಛನ್ತಿ ಚಾಯಾನ್ತಿ ಚ ಸಂಚರನ್ತ್ಯ-
ಸ್ತದ್ವಚ್ಛರೀರಾಣಿ ಶರೀರಿಣಾಂ ತು ॥೧೧॥

ಅಗ್ನಿಯ ಜ್ವಾಲೆಗಳೂ, ಗಾಳಿಯ ವೇಗವೂ, ಸೂರ್ಯನ ಕಿರಣಗಳೂ, ನದಿಗಳಲ್ಲಿರುವ ನೀರೂ–ಹೋಗುತ್ತಿರುತ್ತವೆ ; ಬರುತ್ತಿರುತ್ತವೆ ; ಸಂಚರಿಸುತ್ತಿರುತ್ತವೆ. ಅದೇ ರೀತಿಯಲ್ಲಿ ಪ್ರಾಣಿಗಳ ಶರೀರವೂ ಹೋಗುತ್ತಿರುತ್ತದೆ ; ಬರುತ್ತಿರುತ್ತದೆ ; ಸಂಚರಿಸುತ್ತಿರುತ್ತದೆ.

ಅಗ್ನಿಯ ಜ್ವಾಲೆ, ಗಾಳಿಯ ವೇಗ, ಸೂರ್ಯನ ಕಿರಣಗಳು ಮತ್ತು ನದಿಯ ನೀರುಗಳು ಬರುತ್ತಿರುತ್ತವೆ, ಹೋಗುತ್ತಿರುತ್ತವೆ. ಅವು ಅಸ್ಥಿರ. ಹಾಗೆಯೇ ಮನುಷ್ಯನಿಗೆ ಒಂದಾದಮೇಲೊಂದರಂತೆ ದೇಹಗಳು ಬರುತ್ತಿರುತ್ತವೆ, ಹೋಗುತ್ತಿರುತ್ತವೆ. ಅವು ಅಸ್ಥಿರ. ಆದರೆ ಆತ್ಮವು ಮಾತ್ರ ಸ್ಥಿರವಾದುದು.

ಯಥಾ ಚ ಕಶ್ಚಿತ್ಪರಶುಂ ಗೃಹೀತ್ವಾ
ಧೂಮಂ ನ ಪಶ್ಯೇಜ್ಜ್ವಲನಂ ಚ ಕಾಷ್ಠೇ ।
ತದ್ವಚ್ಛರೀರೋದರಪಾಣಿಪಾದಂ
ಛಿತ್ವಾ ನ ಪಶ್ಯನ್ತಿ ತತೋ ಯದನ್ಯತ್ ॥೧೨॥

ತಾನ್ಯೇವ ಕಾಷ್ಠಾನಿ ಯಥಾ ವಿಮಥ್ಯ
ಧೂಮಂ ಚ ಪಶ್ಯೇಜ್ಜ್ವಲನಂ ಚ ಯೋಗಾತ್ ।
ತದ್ವತ್ಸುಬುದ್ಧಿಃ ಸಮಮಿನ್ದ್ರಿಯಾತ್ಮಾ
ಬುಧಃ ಪರಂ ಪಶ್ಯತಿ ತಂ ಸ್ವಭಾವಮ್ ॥೧೩॥

ಯಾವ ರೀತಿಯಲ್ಲಿ ಮನುಷ್ಯನು ಕೊಡಲಿಯನ್ನು ಹಿಡಿದು ಕಟ್ಟಿಗೆಯನ್ನು ಸೀಳಿದರೆ ಅನಂತರ ಆ ಕಟ್ಟಿಗೆಯಲ್ಲಿ ಹೊಗೆಯನ್ನಾಗಲೀ ಬೆಂಕಿಯನ್ನಾಗಲೀ ಕಾಣುವುದಿಲ್ಲವೋ–ಅದೇ ರೀತಿಯಲ್ಲಿ ಮನುಷ್ಯನ ಶರೀರವನ್ನಾಗಲೀ, ಶರೀರದ ಅವಯವಗಳಾದ ಉದರ-ಪಾಣಿ-ಪಾದಗಳನ್ನಾಗಲೀ ಕತ್ತರಿಸಿದರೆ ಶರೀರಸ್ಥನಾಗಿ ಶರೀರದಿಂದ ಭಿನ್ನನಾಗಿರುವ ಆತ್ಮನನ್ನು ಕಾಣಲು ಸಾಧ್ಯವಾಗುವುದಿಲ್ಲ.

(ಕಟ್ಟಿಗೆಯಲ್ಲಿ ಅಗ್ನಿಯೂ-ಧೂಮವೂ ಇರುವುದು ಸತ್ಯ. ಆದರೆ ಕಟ್ಟಿಗೆಯನ್ನು ಕತ್ತರಿಸುವುದರಿಂದ ಇಂಧನವಾಗಲೀ-ಧೂಮವಾಗಲೀ ಕಾಣು ವುದಿಲ್ಲ. ಕತ್ತರಿಸಿಹಾಕಿದ ಆ ಕಟ್ಟಿಗೆಗಳನ್ನೇ ಯುಕ್ತಿಪೂರ್ವಕವಾಗಿ ಒಂದ ರೊಡನೆ ಮತ್ತೊಂದನ್ನು ಸೇರಿಸಿ ಕಡೆಯುವುದರಿಂದ ಯಾವ ರೀತಿಯಲ್ಲಿ ಧೂಮವನ್ನೂ ಮತ್ತು ಜ್ವಾಲೆಯನ್ನೂ ಕಾಣಬಹುದೋ–ಅದೇ ರೀತಿಯಲ್ಲಿ ಯೋಗದ ಮೂಲಕವಾಗಿ ಮನಸ್ಸು, ಬುದ್ಧಿ ಮತ್ತು ಇಂದ್ರಿಯಗಳನ್ನು ಧ್ಯಾನಮಥನದಿಂದ ಅಂತರ್ಯಾಮಿಯ ಕಡೆಗೆ ಏಕಾಗ್ರಮಾಡಿ ಜ್ಞಾನಿಯಾದ ಪುರುಷನು ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.)

ಯಥಾತ್ಮನೋಽಙ್ಗಂ ಪತಿತಂ ಪೃಥಿವ್ಯಾಂ
ಸ್ವಪ್ನಾನ್ತರೇ ಪಶ್ಯತಿ ಚಾತ್ಮನೋಽನ್ಯತ್ ।
ಶ್ರೋತ್ರಾದಿಯುಕ್ತಃ ಸುಮನಾಃ ಸುಬುದ್ಧಿ-
ರ್ಲಿಙ್ಗಾತ್ತಥಾ ಗಚ್ಛತಿ ಲಿಙ್ಗಮನ್ಯತ್ ॥೧೪॥

ಕನಸಿನ ಮಧ್ಯದಲ್ಲಿ ತನ್ನ ಶರೀರವು ಬಿದ್ದುಹೋಗಿ ತಾನು ಅದರಿಂದ ಬೇರೆ ಎಂಬುದನ್ನು ಮನುಷ್ಯನು ಸಾಕ್ಷಾತ್ತಾಗಿ ಅನುಭವಿಸುತ್ತಾನೆ. ಅದ ರಂತೆಯೇ ಕಿವಿಯೇ ಮುಂತಾದ ಪಂಚೇಂದ್ರಿಯಗಳಿದ್ದರೂ ತಾನು ಅವು ಗಳಿಗಿಂತ ಬೇರೆಯೆಂದು ಒಳ್ಳೆಯ ಮನಸ್ಸು ಮತ್ತು ಬುದ್ಧಿಗಳುಳ್ಳ ವಿವೇಕಿಯು ತಿಳಿಯುತ್ತಾನೆ. ಒಂದು ಲಿಂಗಶರೀರದಿಂದ ಮತ್ತೊಂದು ಲಿಂಗಶರೀರಕ್ಕೆ ಪ್ರಯಾಣಮಾಡುತ್ತಿದ್ದರೂ ತಾನು ಅವುಗಳಿಂದ ಪ್ರತ್ಯೇಕನಾದವನು ಎಂದು ತಿಳಿಯುತ್ತಾನೆ.

ಉತ್ಪತ್ತಿವೃದ್ಧಿವ್ಯಯಸಂನಿಪಾತೈ-
ರ್ನ ಯುಜ್ಯತೇಽಸೌ ಪರಮಃ ಶರೀರೀ ।
ಅನೇನ ಲಿಙ್ಗೇನ ತು ಲಿಙ್ಗಮನ್ಯ-
ದ್ಗಚ್ಛತ್ಯದೃಷ್ಟಃ ಫಲಸಂನಿಯೋಗಾತ್ ॥೧೫॥

ಶರೀರಸ್ಥನಾಗಿರುವ ಪರಮಶ್ರೇಷ್ಠನಾದ ಆತ್ಮನು ಶರೀರದಿಂದ ಸರ್ವಥಾ ಭಿನ್ನನಾಗಿರುತ್ತಾನೆ. ಅವನಿಗೆ ಎಂದಿಗೂ ಉತ್ಪತ್ತಿ, ವೃದ್ಧಿ,

ಕ್ಷಯ, ಮೃತ್ಯು–ಇವೇ ಮೊದಲಾದ ದೋಷಗಳ ಲೇಪವಿಲ್ಲ. ಆದರೆ ಅಜ್ಞಾನಿಯಾದ ಪುರುಷನು ಸುಖ-ದುಃಖಪ್ರದವಾದ ಪೂರ್ವಕರ್ಮಫಲಗಳ ಸಂಬಂಧದಿಂದಾಗಿ ತಾನೇ ಶುದ್ಧಾತ್ಮನೆಂಬ ಅರಿವಾಗದೆ, ತನ್ನನ್ನು ತಾನು ತಿಳಿದುಕೊಳ್ಳದೆ, ಯಾರ ಕಣ್ಣಿಗೂ ಕಾಣಿಸದೆ ಒಂದು ಸೂಕ್ಷ್ಮಶರೀರದಿಂದ ಮತ್ತೊಂದು ಶರೀರಕ್ಕೆ ಹೋಗುತ್ತಲೇ ಇರುತ್ತಾನೆ.

ನ ಚಕ್ಷುಷಾ ಪಶ್ಯತಿ ರೂಪಮಾತ್ಮನೋ
ನ ಚಾಪಿ ಸಂಸ್ಪರ್ಶಮುಪೈತಿ ಕಿಂಚಿತ್ ।
ನ ಚಾಪಿ ತೈಃ ಸಾಧಯತೇ ತು ಕಾರ್ಯಂ
ತೇ ತಂ ನ ಪಶ್ಯನ್ತಿ ಸ ಪಶ್ಯತೇ ತಾನ್ ॥೧೬॥

ಯಾರೇ ಆಗಲೀ ಚರ್ಮದ ಕಣ್ಣುಗಳ ಮೂಲಕವಾಗಿ ಆತ್ಮದ ಸ್ವರೂಪವನ್ನು ನೋಡಲಾರರು. ತಮ್ಮ ಚರ್ಮದಿಂದ ಆತ್ಮದ ಸ್ಪರ್ಶಸುಖಾನುಭವವನ್ನು ಪಡೆಯಲಾರರು. ಬಾಹ್ಯೇಂದ್ರಿಯಗಳ ಮೂಲಕವಾಗಿ ಆತ್ಮದರ್ಶನವನ್ನು ಸಾಧಿಸಿಕೊಳ್ಳುವ ಸಾಧ್ಯತೆಯೇ ಇಲ್ಲ. ಇಂದ್ರಿಯಗಳು ಆತ್ಮವಸ್ತುವನ್ನು ನೋಡಲಾರವು. ಆದರೆ ಆತ್ಮವಸ್ತುವು ಮಾತ್ರ ದಶೇಂದ್ರಿಯಗಳನ್ನೂ ಮತ್ತು ದಶೇಂದ್ರಿಯಗಳು–ಮನಸ್ಸು ಮತ್ತು ಬುದ್ಧಿಗಳಿಂದ ಪ್ರೇರಿತವಾಗಿ ಮಾಡುವ ಕಾರ್ಯಗಳನ್ನೂ ನೋಡುತ್ತಲೇ ಇರುತ್ತಾನೆ.

ಯಥಾ ಸಮೀಪೇ ಜ್ವಲತೋಽನಲಸ್ಯ
ಸಂತಾಪಜಂ ರೂಪಮುಪೈತಿ ಕಶ್ಚಿತ್ ।
ನ ಚಾನ್ತರಂ ರೂಪಗುಣಂ ಬಿಭರ್ತಿ
ತಥೈವ ತದ್ದೃಶ್ಯತಿ ರೂಪಮಸ್ಯ ॥೧೭॥

ಬೆಂಕಿಯ ಜ್ವಾಲೆಯ ಸಮೀಪದಲ್ಲಿರುವ ಕಬ್ಬಿಣದ ತುಂಡೊಂದು ಬೆಂಕಿಯಿಂದ ತಪ್ತವಾಗಿ ಬೆಂಕಿಯ ಗುಣವನ್ನೇ ಪಡೆಯುತ್ತದೆ. ಸ್ವಲ್ಪಕಾಲ ಬೆಂಕಿಯಂತೆಯೇ ಕೆಂಪಾಗುತ್ತದೆ. ಬೆಂಕಿಯಂತೆಯೇ ಸುಡುತ್ತದೆ. ಆದರೆ ಆ ಕಬ್ಬಿಣದ ತುಂಡು ಬೆಂಕಿಯೇ ಆಗಿಬಿಡುವುದಿಲ್ಲ. ಹಾಗೆಯೇ ಮನುಷ್ಯನ ಶರೀರದಲ್ಲಿರುವ ಪರಮಾತ್ಮನ ಬಳಿ ಇರುವ ಇಂದ್ರಿಯಗಳ ಸಮೂಹಗಳು

ಪರಮಾತ್ಮನ ಚೈತನ್ಯದಿಂದ ಪ್ರಕಾಶವನ್ನು ಪಡೆಯುತ್ತವೆ. ಇಂದ್ರಿಯ ಸಮುದಾಯವೇ ಚೈತನ್ಯವೋ ಎಂಬಂತೆ ಭಾಸವಾಗುತ್ತದೆ. ಆದರೆ ಅಗ್ನಿಯ ಸಮೀಪದಿಂದ ದೂರವಾದ ಕಬ್ಬಿಣವು ಒಡನೆಯೇ ಸ್ವಸ್ವರೂಪವನ್ನು ತಾಳುವಂತೆ ಅಂತರ್ಯಾಮಿಯಾದ ಪರಮಾತ್ಮನಿಂದ ದೂರವಾದ ಇಂದ್ರಿಯಗಳೂ ತಮ್ಮ ಜಡವಾದ ಸ್ವಭಾವವನ್ನು ಹೊಂದಿಬಿಡುತ್ತವೆ.

ತಥಾ ಮನುಷ್ಯಃ ಪರಿಮುಚ್ಯ ಕಾಯ-
ಮದೃಶ್ಯಮನ್ಯದ್ವಿಶತೇ ಶರೀರಮ್ ।
ವಿಸೃಜ್ಯ ಭೂತೇಷು ಮಹತ್ಸು ದೇಹಂ
ತದಾಶ್ರಯಂ ಚೈವ ಬಿಭರ್ತಿ ರೂಪಮ್ ॥೧೮॥

ಹಾಗೆ ಮನುಷ್ಯನು ಮರಣವು ಪ್ರಾಪ್ತವಾದೊಡನೆಯೇ ದೃಶ್ಯವಾದ ಸ್ಥೂಲಶರೀರವನ್ನು ಬಿಟ್ಟು, ಪಂಚಭೂತಾತ್ಮಕವಾದ ಸ್ಥೂಲಶರೀರವನ್ನು ಪಂಚಮಹಾಭೂತಗಳಲ್ಲಿಯೇ ವಿಸರ್ಜಿಸಿ. ಅದೃಶ್ಯವಾದ ಸೂಕ್ಷ್ಮಶರೀರವನ್ನು ಸೇರಿಕೊಳ್ಳುತ್ತಾನೆ. ಭೂತಗಳು ಭೂತಗಳಿಗೇ ಹಿಂದಿರುಗುತ್ತವೆ. ಬಳಿಕ ಕರ್ಮಫಲಾನುಗುಣವಾಗಿ ಮತ್ತೊಂದು ಶರೀರವನ್ನು ಆಶ್ರಯಿಸಿ ಅದೇ ರೂಪವನ್ನೇ ಧರಿಸುತ್ತಾನೆ. ಅದು ತಾನೆಂದು ಭಾವಿಸಿಕೊಳ್ಳುತ್ತಾನೆ.

ಖಂ ವಾಯುಮಗ್ನಿಂ ಸಲಿಲಂ ತಥೋರ್ವೀಂ
ಸಮನ್ತತೋಽಭ್ಯಾವಿಶತೇ ಶರೀರೀ ।
ನಾನಾಶ್ರಯಾಃ ಕರ್ಮಸು ವರ್ತಮಾನಾಃ
ಶ್ರೋತ್ರಾದಯಃ ಪಞ್ಚಗುಣಾಞ್ಶ್ರಯನ್ತೇ ॥೧೯॥

ದೇಹಾಭಿಮಾನಿಯಾದ ಜೀವವು ಒಂದು ಶರೀರವನ್ನು ಬಿಟ್ಟೊಡನೆಯೇ ಆ ಶರೀರದಲ್ಲಿರುವ ಆಕಾಶದ ಅಂಶವು–ಆಕಾಶವನ್ನೂ, ಜಲದ ಅಂಶವು–ಜಲವನ್ನೂ, ಭೂಮಿಯ ಅಂಶವು–ಭೂಮಿಯನ್ನೂ ಸೇರುತ್ತವೆ. ನಾನಾ ಗುಣಗಳನ್ನಾಶ್ರಯಿಸಿ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿರುವ ಕಿವಿಯೇ ಮುಂತಾದ ಐದು ಇಂದ್ರಿಯಗಳು ತಮ್ಮ-ತಮ್ಮ ಗುಣಗಳಲ್ಲಿ ಲೀನವಾಗುತ್ತವೆ.

ಶ್ರೋತ್ರಂ ಖತೋ ಘ್ರಾಣಮಥೋ ಪೃಥಿವ್ಯಾ-
ಸ್ತೇಜೋಮಯಂ ರೂಪಮಥೋ ವಿಪಾಕಃ ।
ಜಲಾಶ್ರಯಂ ಸ್ವೇದಮುಕ್ತಂ ರಸಂ ಚ
ವಾಯ್ವಾತ್ಮಕಃ ಸ್ಪರ್ಶಕೃತೋ ಗುಣಶ್ಚ ॥೨೦॥

ಆಕಾಶತತ್ತ್ವದಿಂದ ಹುಟ್ಟಿದ ಕಿವಿಗೆ ಶಬ್ದವು ಗುಣ. ಪೃಥಿವೀತತ್ತ್ವದಿಂದ ಹುಟ್ಟಿದ ಮೂಗು ಎಂಬ ಇಂದ್ರಿಯಕ್ಕೆ ಗಂಧವೇ ಗುಣ. ಅಗ್ನಿತತ್ತ್ವದ ಪರಿಣಾಮವಾದ ನೇತ್ರೇಂದ್ರಿಯಕ್ಕೆ ತೇಜಸ್ಸು ಗುಣ. ಜಲತತ್ತ್ವದಿಂದ ಹುಟ್ಟಿದ ರಸನೇಂದ್ರಿಯಕ್ಕೆ (ನಾಲಿಗೆಗೆ) ರಸವು ಗುಣ ಮತ್ತು ವಾಯುತತ್ತ್ವದ ಪರಿಣಾಮವಾದ ತ್ವಕ್ (ಚರ್ಮ) ಎಂಬ ಇಂದ್ರಿಯಕ್ಕೆ ಸ್ಪರ್ಶವೇ ಗುಣ. ಆಯಾ ಇಂದ್ರಿಯಗಳು ತಮ್ಮ ಆಯಾ ಗುಣಗಳಲ್ಲಿ ಲಯಹೊಂದುತ್ತವೆ.

ಮಹತ್ಸು ಭೂತೇಷು ವಸನ್ತಿ ಪಞ್ಚ
ಪಞ್ಚೇನ್ದ್ರಿಯಾರ್ಥಾಶ್ಚ ತಥೇನ್ದ್ರಿಯಾಣಿ ।
ಸರ್ವಾಣಿ ಚೈತಾನಿ ಮನೋಽನುಗಾನಿ
ಬುದ್ಧಿಂ ಮನೋಽನ್ವೇತಿ ಮತಿಃ ಸ್ವಭಾವಮ್ ॥೨೧॥

ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳೆಂಬ ಇಂದ್ರಿಯಾರ್ಥಗಳು ಆಕಾಶವೇ ಮೊದಲಾದ ಪಂಚಭೂತಗಳಲ್ಲಿ ವಾಸಿಸುತ್ತವೆ. ಆ ಪಂಚಭೂತಗಳು ಚಕ್ಷುಃ-ಶ್ರೋತ್ರ-ಜಿಹ್ವಾ-ಘ್ರಾಣ-ತ್ವಚೆಗಳೆಂಬ ಪಂಚೇಂದ್ರಿಯಗಳಲ್ಲಿ ವಾಸಿಸುತ್ತವೆ. ಶಬ್ದಾದಿ ಐದು ವಿಷಯಗಳೂ, ಆಕಾಶಾದಿ ಐದು ಮಹಾಭೂತಗಳೂ, ಚಕ್ಷುರಾದಿ ಐದು ಇಂದ್ರಿಯಗಳೂ ಮನಸ್ಸನ್ನೇ ಅನುಸರಿಸಿರುತ್ತವೆ. ಮನಸ್ಸು ಬುದ್ಧಿಯನ್ನು ಅನುಸರಿಸಿರುತ್ತದೆ. ಬುದ್ಧಿಯು ಸ್ವಭಾವವನ್ನು ಅಥವಾ ಆತ್ಮನನ್ನು ಆಶ್ರಯಿಸಿರುತ್ತದೆ. (**ಇನ್ದ್ರಿಯಾಣಿ ಪರಾಣ್ಯಾಹುರಿನ್ದ್ರಿಯೇಭ್ಯಃ ಪರಂ ಮನಃ । ಮನಸಸ್ತು ಪರಾ ಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ ॥** ಎಂಬ ಗೀತಾಶ್ಲೋಕದ ಹೋಲಿಕೆ.)

ಶುಭಾಶುಭಂ ಕರ್ಮ ಕೃತಂ ಯದನ್ಯ-
ತ್ತದೇವ ಪ್ರತ್ಯಾದದತೇ ಸ್ವದೇಹೇ ।
ಮನೋಽನುವರ್ತನ್ತಿ ಪರಾವರಾಣಿ
ಜಲೌಕಸಃ ಸ್ರೋತ ಇವಾನುಕೂಲಮ್ ॥೨೨॥

ಜೀವಾತ್ಮನು ದೇಹಾಂತರದಲ್ಲಿ ಮಾಡಿದ ಶುಭಾಶುಭಕರ್ಮಗಳ ಫಲಗಳನ್ನೇ ನೂತನದೇಹಕ್ಕೂ ತೆಗೆದುಕೊಂಡು ಹೋಗುತ್ತಾನೆ. ತಾನು ಹಿಂದೆ ಮಾಡಿದ ಕರ್ಮದ ಫಲಗಳನ್ನು ಆ ನೂತನದೇಹದ ಮೂಲಕವಾಗಿ ಅನುಭವಿಸುತ್ತಾನೆ. ನೀರಿನಲ್ಲಿ ವಾಸಮಾಡುವ ಪ್ರಾಣಿಗಳು ಪ್ರವಾಹವನ್ನೇ ಅನುಸರಿಸಿ ಹೋಗುತ್ತಿರುವಂತೆ–ಶುಭಾಶುಭಕರ್ಮಫಲಗಳು ಮನಸ್ಸನ್ನೇ ಅನುಸರಿಸಿ ಜೀವನ ಹಿಂದೆ ಹೋಗುತ್ತಿರುತ್ತವೆ. ಮನಸ್ಸಿನ ಮೂಲಕವಾಗಿ ಜೀವನು ಹಿಂದಿನ ಶರೀರದಲ್ಲಿ ಮಾಡಿದ ಶುಭಾಶುಭಫಲಗಳನ್ನು ಅನುಭವಿಸುತ್ತಿರುತ್ತಾನೆ.

ಚಲಂ ಯಥಾ ದೃಷ್ಟಿಕಥಂ ಪರೈತಿ
ಸೂಕ್ಷ್ಮಂ ಮಹದ್ರೂಪಮಿವಾಭಿಭಾತಿ ।
ಸ್ವರೂಪಮಾಲೋಚಯತೇ ಚ ರೂಪಂ
ಪರಂ ತಥಾ ಬುದ್ಧಿಪಥಂ ಪರೈತಿ ॥೨೩॥

ವೇಗವಾಗಿ ಸಂಚರಿಸುವ ವಾಹನಗಳಲ್ಲಿ ಕುಳಿತು ಹೋಗುತ್ತಿರುವಾಗ ಹಾದಿಯ ಪಕ್ಕದಲ್ಲಿರುವ ವೃಕ್ಷಗಳು ಓಡುತ್ತಿರುವಂತೆ ಕಾಣುತ್ತವೆ. ನಿಶ್ಚಯವಾಗಿ ಅವು ಚಲಿಸುತ್ತಿರುವುದಿಲ್ಲ. ಅದೇ ರೀತಿಯಲ್ಲಿ ಪ್ರಾಣಿಗಳ ಶರೀರದಲ್ಲಿರುವ ಕೂಟಸ್ಥನು ನಿರ್ವಿಕಾರನಾಗಿದ್ದರೂ ಬುದ್ಧಿಯ ವಿಕಾರದಿಂದಾಗಿ ಅವನೂ ವಿಕೃತನಾಗಿರುವಂತೆ ಕಾಣುತ್ತಾನೆ. ಸೂಕ್ಷ್ಮವಾದ ಪದಾರ್ಥವು ಭೂತಗನ್ನಡಿಯ ಮೂಲಕವಾಗಿ ನೋಡಿದರೆ ಬಹಳ ದೊಡ್ಡದಾಗಿ ಕಾಣುತ್ತದೆ. ಆದರೆ ಪದಾರ್ಥವಂತೂ ಸೂಕ್ಷ್ಮವಾಗಿರುವುದು ನಿಜ. ಹಾಗೆಯೇ ಶ್ರೇಷ್ಠವಾದ ಆತ್ಮವು ಬುದ್ಧಿಯ ಮಾರ್ಗಕ್ಕೆ ಬಂದಾಗ (ಬುದ್ಧಿಯ ದರ್ಪಣದಲ್ಲಿ ನೋಡಿದಾಗ) ಅದರ ವಿಕಾರಗಳನ್ನು ಹೊಂದಿರು

ವಂತೆಯೇ ಕಾಣುತ್ತದೆ. ಮುಖವು ವಿಕಾರವಿಲ್ಲದೆ ಶುದ್ಧವಾಗಿದ್ದರೂ ಕನ್ನಡಿಯಲ್ಲಿ ಮುಖವನ್ನು ನೋಡಿಕೊಂಡಾಗ ಕನ್ನಡಿಯಲ್ಲಿರುವ ಗೆರೆಯೇ ಮುಂತಾದ ವಿಕಾರಗಳು ಮುಖದಲ್ಲಿರುವಂತೆ ಕಾಣುತ್ತವೆ. ಹಾಗೆಯೇ ಆತ್ಮನು ಸ್ವತಃ ನಿತ್ಯಶುದ್ಧನಾಗಿದ್ದರೂ ಬುದ್ಧಿಯೆಂಬ ದರ್ಪಣದಲ್ಲಿ ಅವನನ್ನು ನೋಡಿದಾಗ ಬುದ್ಧಿಯಲ್ಲಿರುವ ವಿಕಾರಗಳು ಅವನಲ್ಲಿರುವಂತೆ ಕಾಣುತ್ತವೆ. ಅವನು ಸ್ವತಃ ಶುದ್ಧನು.”

೨೦೨ನೆಯ ಅಧ್ಯಾಯವು ಮುಗಿಯಿತು.

೨೦೩ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶರೀರೇಂದ್ರಿಯ–ಮನೋಬುದ್ಧಿಗಳಿಗಿಂತಲೂ ಅತಿರಿಕ್ತನಾದ ಆತ್ಮನ ನಿತ್ಯತ್ವದ ಪ್ರತಿಪಾದನೆ

ಧರ್ಮಜ! ಮನುವು ಮುಂದುವರಿದು ಹೇಳುತ್ತಾನೆ :

ಯದಿನ್ದ್ರಿಯೈಸ್ತೂಪಹಿತಂ ಪುರಸ್ತಾ
ತ್ಪ್ರಾಪ್ತಾನ್ಗುಣಾನ್ಸಂಸ್ಮರತೇ ಚಿರಾಯ ।
ತೇಷ್ವಿನ್ದ್ರಿಯೇಷೂಪಹತೇಷು ಪಶ್ಚಾ-
ತ್ಸ ಬುದ್ಧಿರೂಪಃ ಪರಮಃ ಸ್ವಭಾವಃ ॥೧॥

“ದೇವಗುರುವೇ! ಬುದ್ಧಿರೂಪನಾದ, ಪರಮಶ್ರೇಷ್ಠನಾದ ಜೀವನು ಹಿಂದಿನ ಶರೀರದಿಂದ ನೂತನಶರೀರಕ್ಕೆ ಬರುವಾಗ ಆ ಶರೀರಾಂತರ್ಗತ ವಾಗಿದ್ದ ಪಂಚೇಂದ್ರಿಯಗಳನ್ನು ಕಳೆದುಕೊಂಡಿದ್ದರೂ-ಪಂಚೇಂದ್ರಿಯಗಳ ವಿಷಯಗಳು ಬುದ್ಧಿಯಲ್ಲಿ ಸಂಸ್ಕಾರರೂಪದಿಂದ ಇದ್ದೇಇರುತ್ತವೆ. ಹಿಂದಿನ ಜನ್ಮದಲ್ಲಿ ಇಂದ್ರಿಯಗಳ ಮೂಲಕವಾಗಿ ಅನುಭವಿಸಿದ ವಿಷಯಗಳನ್ನು ಬಹಳ ಕಾಲದವರೆಗೂ ಸ್ಮರಿಸುತ್ತಲೇ ಇರುತ್ತಾನೆ.

ಯಥೇನ್ದ್ರಿಯಾರ್ಥಾನ್ಯುಗಪತ್ಸಮಸ್ತಾ-
ನ್ನೋಪೇಕ್ಷತೇ ಕೃತ್ಸ್ನಮತುಲ್ಯಕಾಲಮ್ ।

ತಥಾಚಲಂ ಸಂಚರತೇ ಸ ವಿದ್ವಾಂ-
ಸ್ತಸ್ಮಾತ್ಸ ಏಕಃ ಪರಮಃ ಶರೀರೀ ॥೨॥

ಪರಮಶ್ರೇಷ್ಠನಾದ ಬುದ್ಧಿರೂಪನಾಗಿರುವ ಆ ಜೀವನು ಒಂದು ಕಾಲದಲ್ಲಿ ಅಥವಾ ಬೇರೆ ಬೇರೆ ಕಾಲಗಳಲ್ಲಿ–ಈ ಜನ್ಮದಲ್ಲಿ ಅಥವಾ ಇತರ ಜನ್ಮಗಳಲ್ಲಿ ಅನುಭವಿಸಿದ ಬೇರೆ-ಬೇರೆ ಇಂದ್ರಿಯ ವಿಷಯಗಳನ್ನು ತಾನೊಬ್ಬನೇ ಏಕಕಾಲದಲ್ಲಿ ನೋಡುತ್ತಾನೆ. ಜಾಗ್ರತ್ ಸ್ವಪ್ನಸುಷುಪ್ತಿಗಳೆಂಬ ಬೇರೆ ಬೇರೆ ಅವಸ್ಥೆಗಳಲ್ಲಿ ಸಂಚರಿಸುತ್ತಾನೆ. ಆ ಕಾಲಗಳು, ಅವಸ್ಥೆಗಳು ಮತ್ತು ಇಂದ್ರಿಯಾರ್ಥಗಳು ಬೇರೆ-ಬೇರೆಯಾಗಿದ್ದರೂ ಅವೆಲ್ಲಕ್ಕೂ ಸಾಕ್ಷಿಯಾಗಿ ನಿಶ್ಚಲನಾಗಿರುವುದರಿಂದ ಈ ಸರ್ವೋತ್ಕೃಷ್ಟದೇಹದ ಸ್ವಾಮಿಯಾದ ಆತ್ಮನು ಅವೆಲ್ಲಕ್ಕಿಂತಲೂ ಅತಿರಿಕ್ತನಾದವನು.

ರಜಸ್ತಮಃ ಸತ್ತ್ವಮಥೋ ತೃತೀಯಂ
ಗಚ್ಛತ್ಯಸೌ ಸ್ಥಾನಗುಣಾನ್ವಿರೂಪಾನ್ ।
ತಥೇನ್ದ್ರಿಯಾಣ್ಯಾವಿಶತೇ ಶರೀರೀ
ಹುತಾಶನಂ ವಾಯುರಿವೇನ್ಧನಸ್ಥಮ್ ॥೩॥

ಆತ್ಮನು ಪ್ರಕೃತಿಯ ಸ್ಥಾನಗಳಿಗೆ ತಕ್ಕಂತೆ ರಜೋಗುಣ, ತಮೋಗುಣ ಮತ್ತು ಮೂರನೆಯದಾದ ಸತ್ತ್ವಗುಣ ಎಂಬ ಪರಸ್ಪರ ವಿಲಕ್ಷಣಗಳಾದ ಗುಣಗಳನ್ನು ಹೊಂದಿರುತ್ತಾನೆ. ಆದರೆ ಅವನು ಅವುಗಳಿಗಿಂತ ಅತಿರಿಕ್ತನಾದವನು. ಹಾಗೆಯೇ ಆ ಚೇತನನು ವಾಯುವು ಕಟ್ಟಿಗೆಯಲ್ಲಿರುವ ಬೆಂಕಿಯಲ್ಲಿ ಪ್ರವೇಶಿಸುವಂತೆ ಇಂದ್ರಿಯಗಳನ್ನು ಪ್ರವೇಶಿಸುತ್ತಾನೆ.

ಕಟ್ಟಿಗೆಯಲ್ಲಿ ಬೆಂಕಿಯು ಉರಿಯುತ್ತಿರುವಾಗ ವಾಯುವು ಬೆಂಕಿಯೊಡನೆ ಸೇರಿ ಉರಿಯುವುದಕ್ಕೆ ಸಹಾಯಮಾಡುತ್ತಾನೆ. ಆದರೆ ಬೆಂಕಿಯ ಗುಣವಾದ ಉಷ್ಣತೆ ವಾಯುವಿಗೆ ಬರುವುದಿಲ್ಲ. ಅದು ಬೆಂಕಿಯಾಗುವುದೂ ಇಲ್ಲ. ಹಾಗೆಯೇ ಆತ್ಮನು ಇಂದ್ರಿಯಗಳನ್ನು ಪ್ರವೇಶಿಸಿ ಅವುಗಳಿಗೆ ಚೈತನ್ಯ ಕೊಡುತ್ತಿದ್ದರೂ ಅವುಗಳ ಗುಣಗಳ ಲೇಪ ಅವನಿಗಿಲ್ಲ. ಅವನು ಅವುಗಳಿಂದ ಅತಿರಿಕ್ತನೂ ಆಗಿದ್ದಾನೆ.

ನ ಚಕ್ಷುಷಾ ಪಶ್ಯತಿ ರೂಪಮಾತ್ಮನೋ
ನ ಪಶ್ಯತಿ ಸ್ಪರ್ಶನಮಿನ್ದ್ರಿಯೇನ್ದ್ರಿಯಮ್ ।
ನ ಶ್ರೋತ್ರಲಿಙ್ಗಂ ಶ್ರವಣೇನ ದರ್ಶನಂ
ತಥಾ ಕೃತಂ ಪಶ್ಯತಿ ತದ್ವಿನಶ್ಯತಿ ॥೪॥

ಮನುಷ್ಯನು ಕಣ್ಣುಗಳ ಮೂಲಕವಾಗಿ ಆತ್ಮನ ಸ್ವರೂಪವನ್ನು ಸಂದರ್ಶಿಸಲು ಸಾಧ್ಯವಾಗುವುದಿಲ್ಲ. ತ್ವಚೆಯೆಂಬ ಹೆಸರಿನ ಇಂದ್ರಿಯವೂ ಇಂದ್ರಿಯಗಳಿಗೂ ಇಂದ್ರಿಯನಾದ ಆತ್ಮನನ್ನು ಸ್ಪರ್ಶಿಸಲಾರದು. ಆತ್ಮದ ಸ್ವರೂಪವನ್ನು ಶ್ರವಣೇಂದ್ರಿಯದ ಮೂಲಕವಾಗಿಯೂ ತಿಳಿಯಲು ಸಾಧ್ಯ ವಿಲ್ಲ. ಏಕೆಂದರೆ ಅವನು ಶಬ್ದರಹಿತನು. ಇಂದ್ರಿಯಗಳಿಗೂ ಇಂದ್ರಿಯ ನೆಂದರೆ ಇಂದ್ರಿಯಗಳಿಗೆ ಚೈತನ್ಯವನ್ನು ಕೊಡುವವನು ಅವನೇ ಆಗಿದ್ದಾನೆ. ಜ್ಞಾನವಿಷಯವಾದ ವಿಚಾರಗಳಿಂದ ಯಾವಾಗ ಆತ್ಮಸಾಕ್ಷಾತ್ಕಾರವಾಗು ವುದೋ ಆಗ ಇಂದ್ರಿಯರೂಪವಾದ ಸಾಧನಗಳಿಗೆ ಬಾಧೆಯುಂಟಾಗುತ್ತದೆ.

(ಮನೆಯಲ್ಲಿರುವ ವಿದ್ಯುಚ್ಛಕ್ತಿಯು ತನ್ನ ಉಗಮಸ್ಥಾನವನ್ನು ನೋಡಲು ಸಾಧ್ಯವಾಗದಂತೆ ಆತ್ಮನಿಂದ ಚೈತನ್ಯವನ್ನು ಹೊಂದಿದ ಇಂದ್ರಿಯಗಳು ಅವುಗಳಿಗೆ ಉದ್ಗಮಸ್ಥಾನವಾದ ಆತ್ಮನನ್ನು ಕಾಣಲಾರವು. ವ್ಯಾಖ್ಯಾನಕಾರರ ಮಾತಿನಲ್ಲಿ **ನ ಹಿ ದಾರುದಾಹತಃ ಅಗ್ನಿಃ ದಾರು ದಾಹ್ಯೋ ಭವತಿ** = ಕಟ್ಟಿಗೆಯನ್ನು ದಹಿಸುವ ಅಗ್ನಿಯು ಕಟ್ಟಿಗೆಯಿಂದ ದಹಿಸಲ್ಪಡುವುದಿಲ್ಲ. ಇಂದ್ರಿಯಗಳಿಗೆ ಪ್ರಕಾಶವನ್ನು ಕೊಡುವವನು ಇಂದ್ರಿಯಗಳಿಂದ ಪ್ರಕಾಶ್ಯನಾಗುವುದಿಲ್ಲ. ಶ್ರೋತೇಂದ್ರಿಯವೂ ಶ್ರವಣದ ಮೂಲಕವಾಗಿ ಆತ್ಮನನ್ನು ಸಂದರ್ಶಿಸಲಾರದು. ಹಾಗೇನಾದರೂ ಇಂದ್ರಿಯಗಳು ಆತ್ಮನನ್ನು ನೋಡಿದ್ದೇ ಆದರೆ ಇಂದ್ರಿಯಗಳೇ ವಿನಾಶಹೊಂದುತ್ತವೆ. ಇಂದ್ರಿಯಗಳೆಲ್ಲವೂ ಮನಸ್ಸಿನಲ್ಲಿಯೂ, ಮನಸ್ಸು ಬುದ್ಧಿಯಲ್ಲಿಯೂ ಲಯ ಹೊಂದಿದನಂತರ ಆತ್ಮದರ್ಶನವಾಗುತ್ತದೆ. **ತಾವನ್ಮನೋ ನಿರೋದ್ಧವ್ಯಂ ಹೃದಿ ಯಾವತ್ಕ್ಷಯಂ ಗತಮ್** –ಮನಸ್ಸು ಬುದ್ಧಿಯಲ್ಲಿ ಲೀನವಾಗುವ ವರೆಗೂ ಹೃದಯದಲ್ಲಿ ಅದನ್ನು ನಿರೋಧಿಸಬೇಕು. ಕರಣ-ಕಳೇಬರಗಳೆಲ್ಲವೂ ಆತ್ಮನಲ್ಲಿಯೇ ಲೀನವಾದನಂತರ ನೋಡುವುದು ಯಾವುದು? ನೋಡಿಸಿ

ಕೊಳ್ಳುವುದು ಯಾವುದು? ಯತ್ರತ್ವಸ್ಯ ಸರ್ವಮಾತ್ಮೈವಾ ಭೂತ್ತತ್ಕೇನ ಕಂ ಪಶ್ಯೇತ್ ಎಂಬ ಶ್ರುತಿವಾಕ್ಯವನ್ನು ಉದ್ಧರಿಸಬಹುದಾಗಿದೆ.)

ಶ್ರೋತ್ರಾದೀನಿ ನ ಪಶ್ಯನ್ತಿ ಸ್ವಂ ಸ್ವಮಾತ್ಮಾನಮಾತ್ಮನಾ ।
ಸರ್ವಜ್ಞಃ ಸರ್ವದರ್ಶೀ ಚ ಸರ್ವಜ್ಞಸ್ತಾನಿ ಪಶ್ಯತಿ ॥೫॥

ಕಿವಿಯೇ ಮೊದಲಾದ ಇಂದ್ರಿಯಗಳು ತಮ್ಮ ಸ್ವರೂಪವನ್ನೇ ತಾವು ನೋಡಿಕೊಳ್ಳಲಾರವು. ತನಗೆ ರೆಪ್ಪೆಗಳಿವೆಯೇ? ಕಪ್ಪಾಗಿರುವುದೇ? ಬೆಕ್ಕಿನ ಕಣ್ಣಿನಂತೆ ಬಿಳಿಯ ಛಾಯಾಯುತನಾಗಿರುವುದೇ?–ಎಂಬ ಅರಿವು ಸ್ವತಃ ಕಣ್ಣಿಗೇ ಇರುವುದಿಲ್ಲ. ಹೀಗಿರುವಾಗ ಅದು ಆತ್ಮನನ್ನು ಹೇಗೆ ತಾನೇ ಕಾಣಲು ಸಾಧ್ಯ? ಆದರೆ ಆತ್ಮನು ಎಲ್ಲವೂ ತಾನೇ ಆಗಿರುವುದರಿಂದಲೂ, ಎಲ್ಲ ಕಾರ್ಯಗಳಿಗೂ ಸಾಕ್ಷೀಭೂತನಾಗಿರುವುದರಿಂದಲೂ, ಎಲ್ಲವನ್ನೂ ತಿಳಿದಿರುವುದರಿಂದಲೂ–ಅಖಂಡಬ್ರಹ್ಮಾಂಡದಲ್ಲಿರುವ ಸಕಲವನ್ನೂ ನೋಡುತ್ತಾನೆ.

ಯಥಾ ಹಿಮವತಃ ಪಾರ್ಶ್ವಂ ಪೃಷ್ಠಂ ಚನ್ದ್ರಮಸೋ ಯಥಾ ।
ನ ದೃಷ್ಟಪೂರ್ವಂ ಮನುಜೈರ್ನ ಚ ತನ್ನಾಸ್ತಿ ತಾವತಾ ॥೬॥

ತದ್ವದ್ಭೂತೇಷು ಭೂತಾತ್ಮಾ ಸೂಕ್ಷ್ಮೋ ಜ್ಞಾನಾತ್ಮವಾನಸೌ ।
ಅದೃಷ್ಟಪೂರ್ವಶ್ಚಕ್ಷುರ್ಭ್ಯಾಂ ನ ಚಾಸೌ ನಾಸ್ತಿ ತಾವತಾ ॥೭॥

ಹಿಮಾಲಯಪರ್ವತದ ಮತ್ತೊಂದು ಪಾರ್ಶ್ವವನ್ನಾಗಲೀ, ಚಂದ್ರನ ಹಿಂಭಾಗವನ್ನಾಗಲೀ ಮನುಷ್ಯರು ಯಾವಾಗಲೂ ನೋಡಿರುವುದಿಲ್ಲ. ಮನುಷ್ಯರು ನೋಡಿರದ ಮಾತ್ರಕ್ಕೆ ಹಿಮಾಲಯದ ಮತ್ತೊಂದು ಪಾರ್ಶ್ವವೂ, ಚಂದ್ರನ ಪೃಷ್ಠಭಾಗವೂ ಇಲ್ಲವೆಂದೇ ಹೇಳುವುದಕ್ಕಾಗುವುದೇ? ಚಂದ್ರನ ಮುಂಭಾಗವಿದ್ದ ಮೇಲೆ ಹಿಂಭಾಗವೂ ಇದ್ದೇಇರುತ್ತದೆ. ಹಿಮಾಲಯದ ಒಂದು ಪಾರ್ಶ್ವವು ಕಾಣಿಸುತ್ತಿರುವಾಗ ಮತ್ತೊಂದು ಪಾರ್ಶ್ವವು ಇದ್ದೇ ಇರುವುದೆಂಬುದು ಊಹ್ಯ. ನೋಡದ ಮಾತ್ರಕ್ಕೆ ಇಲ್ಲವೆಂದು ಹೇಳುವ ಸಾಧ್ಯತೆಯಿಲ್ಲ. ಅದೇ ರೀತಿಯಲ್ಲಿ ಸಕಲಪ್ರಾಣಿಗಳ ಹೃದಯಾಂತರಾಳದಲ್ಲಿ ಜ್ಞಾನಸ್ವರೂಪನಾದ ಸೂಕ್ಷ್ಮಾತಿಸೂಕ್ಷ್ಮನಾದ ಈ ಆತ್ಮನು ಇದ್ದೇಇದ್ದಾನೆ. ಆದರೆ ಅವನು ಕಣ್ಣುಗಳಿಂದ ನೋಡಲ್ಪಡತಕ್ಕವನಲ್ಲ. ಕಣ್ಣುಗಳಿಂದ

ನೋಡಲಾಗುವುದಿಲ್ಲವೆಂದಮಾತ್ರಕ್ಕೆ ಅವನು ಇಲ್ಲವೇ ಇಲ್ಲ ಎಂದು ಹೇಳಲಾಗುವುದಿಲ್ಲ.

ಪಶ್ಯನ್ನಪಿ ಯಥಾ ಲಕ್ಷ್ಮ ಜಗತ್ಸೋಮೇ ನ ವಿನ್ದತಿ ।
ಏವಮಸ್ತಿ ನ ಚೋತ್ಪನ್ನಂ ನ ಚ ತನ್ನ ಪರಾಯಣಮ್ ॥೮॥

ಚಂದ್ರನಲ್ಲಿ ಜನರು ಕಳಂಕದಂತಹ ಗುರುತನ್ನು ಕಂಡರೂ ಅದೇತಕ್ಕೆ ಇದೆ? ಅದು ಯಾವುದರದು? ಎಂಬುದನ್ನು ಅರಿಯರು. ಅವರು ಅರಿಯದಿದ್ದರೂ ಅದರ ಹಿಂದೆ ಅದಕ್ಕೆ ಕಾರಣವಿದ್ದೇ ಇದೆ. ಹಾಗೆಯೇ ನಮಗೆ ಕಾಣದಿದ್ದರೂ ಮೂಲವಾದ ಆತ್ಮವು ಇದ್ದೇ ಇದೆ. ಕಾರಣವಿಲ್ಲದೆ ಯಾವುದೂ ಹುಟ್ಟುವುದಿಲ್ಲ. ಎಲ್ಲಕ್ಕೂ ಶ್ರೇಷ್ಠವಾದ ಆ ಮೂಲವು ಇದ್ದೇ ಇದೆ.

ರೂಪವನ್ತಮರೂಪತ್ವಾದುದಯಾಸ್ತಮನೇ ಬುಧಾಃ ।
ಧಿಯಾ ಸಮನುಪಶ್ಯನ್ತಿ ತದ್ಗತಾಃ ಸವಿತುರ್ಗತಿಮ್ ॥೯॥

ತಥಾ ಬುದ್ಧಿಪ್ರದೀಪೇನ ದೂರಸ್ಥಂ ಸುವಿಪಶ್ಚಿತಃ ।
ಪ್ರತ್ಯಾಸನ್ನಂ ನಿನೀಷನ್ತಿ ಜ್ಞೇಯಂ ಜ್ಞಾನಾಭಿಸಂಹಿತಮ್ ॥೧೦॥

ಪ್ರಾತಃಕಾಲದಲ್ಲಿಯೂ ಮತ್ತು ಸಾಯಂಕಾಲದಲ್ಲಿಯೂ ಸೂರ್ಯನ ಚಲನೆಯನ್ನೇ ಅನುಸರಿಸಿ ಸಂಧ್ಯಾಕರ್ಮಗಳನ್ನು ಮಾಡುವ ವಿದ್ವಾಂಸರು ರೂಪವಂತನಾದ ಸೂರ್ಯನನ್ನು ಚೆನ್ನಾಗಿ ನೋಡುತ್ತಾರೆ. (ಚೆನ್ನಾಗಿ ನೋಡುತ್ತಾ ಸೂರ್ಯೋಪಸ್ಥಾನವನ್ನು ಮಾಡುತ್ತಾರೆ. (ಬಳಿಕ ಅವನು ಅರೂಪನಾಗುವುದರಿಂದ (ಕಾಣಿಸುವುದಿಲ್ಲವಾದುದರಿಂದ) ವಿದ್ವಾಂಸರು ಅವನನ್ನು ಬುದ್ಧಿಯ ಮೂಲಕವಾಗಿ ನೋಡುತ್ತಾರೆ. (ಬುದ್ಧಿಯ ಮೂಲಕವಾಗಿ ಸೂರ್ಯನು ಅನ್ಯವಲಯದಲ್ಲಿರುವನೆಂಬುದನ್ನು ತಿಳಿದುಕೊಳ್ಳುತ್ತಾರೆ.) ಅದೇ ರೀತಿಯಲ್ಲಿ ಅಜ್ಞಾನಿಗಳಿಗೆ ದೂರದಲ್ಲಿರುವ, ಸುಜ್ಞಾನಿಗಳಿಗೆ ಬಹಳ ಹತ್ತಿರದಲ್ಲಿಯೇ ಹೃದಯಾಂತರಾಳದಲ್ಲಿರುವ, ಜ್ಞೇಯನಾದ, ಜ್ಞಾನಶಬ್ದಾಭಿಧೇಯನಾದ ಪರಬ್ರಹ್ಮಪರಮಾತ್ಮನನ್ನು ಬುದ್ಧಿಯೆಂಬ ಪ್ರಕಾಶದ ಮೂಲಕವಾಗಿ ಸಾಕ್ಷಾತ್ಕರಿಸಿಕೊಳ್ಳುತ್ತಾರೆ.

ನ ಹಿ ಖಲ್ವನುಪಾಯೇನ ಕಶ್ಚಿದರ್ಥೋऽಭಿಸಿಧ್ಯತಿ ।
ಸೂತ್ರಜಾಲೈರ್ಯಥಾ ಮತ್ಸ್ಯಾನ್ಬಧ್ನನ್ತಿ ಜಲಜೀವಿನಃ ॥೧೧॥

ಮೃಗೈರ್ಮೃಗಾಣಾಂ ಗ್ರಹಣಂ ಪಕ್ಷಿಣಾಂ ಪಕ್ಷಿಭಿರ್ಯಥಾ ।
ಗಜಾನಾಂ ಚ ಗಜೈರೇವ ಜ್ಞೇಯಂ ಜ್ಞಾನೇನ ಗೃಹ್ಯತೇ ॥೧೨॥

ಉಪಾಯವಿಲ್ಲದೇ ಯಾವ ಕಾರ್ಯವೂ ಸಿದ್ಧಿಸುವುದಿಲ್ಲ. ಯಾವುದೇ ಕಾರ್ಯವು ಸಿದ್ಧಿಸಬೇಕಾದರೂ ಯಾವುದಾದರೂ ಉಪಾಯವನ್ನು ಹುಡುಕಲೇಬೇಕು. ಜಲಚರಪ್ರಾಣಿಗಳಿಂದಲೇ ಜೀವಿಸುವ ಬೆಸ್ತರು ಬಲೆಗಳ ಮೂಲಕವಾಗಿ ಮೀನುಗಳನ್ನು ಹಿಡಿಯುತ್ತಾರೆ. ಬೇಡರು ಮೃಗಗಳ ಮೂಲಕವಾಗಿ ವ್ಯಾಘ್ರಾದಿಗಳನ್ನು ಬಂಧಿಸುತ್ತಾರೆ. ಸಾಕಿದ ಪಕ್ಷಿಗಳ ಮೂಲಕ ವಾಗಿ ಕಾಡಿನ ಪಕ್ಷಿಗಳನ್ನು ಹಿಡಿಯುತ್ತಾರೆ. ಸಾಕಿದ ಆನೆಗಳಿಂದಲೇ ಕಾಡಿನ ಆನೆಗಳನ್ನು ಹಿಡಿಯುತ್ತಾರೆ. ಅದೇ ರೀತಿಯಲ್ಲಿ ಜ್ಞೇಯನಾದ ಪರಬ್ರಹ್ಮ ವಸ್ತುವನ್ನು ಜ್ಞಾನವೆಂಬ ಉಪಾಯದ ಮೂಲಕವಾಗಿಯೇ ಹಿಡಿಯಬೇಕು.

ಅಹಿರೇವ ಹ್ಯಹೇಃ ಪಾದಾನ್ಪಶ್ಯತೀತಿ ಹಿ ನಃ ಶ್ರುತಮ್ ।
ತದ್ವನ್ಮೂರ್ತಿಷು ಮೂರ್ತಿಸ್ಥಂ ಜ್ಞೇಯಂ ಜ್ಞಾನೇನ ಪಶ್ಯತಿ ॥೧೩॥

ಹಾವಿನ ಹೆಜ್ಜೆಗಳು ಹಾವಿಗೆ ಮಾತ್ರವೇ ತಿಳಿಯುವುದೆಂದು ನಾವು ಕೇಳಿದ್ದೇವೆ. ಹಾವಿನ ಕಾಲುಗಳು ಬೇರೆಯವರ ಕಣ್ಣುಗಳಿಗೆ ಗೋಚರಿಸು ವುದಿಲ್ಲ. ಅದೇ ರೀತಿಯಲ್ಲಿ ಎಲ್ಲರ ಶರೀರಗಳಲ್ಲಿಯೂ ನೆಲೆಸಿರುವ ಜ್ಞೇಯ ಸ್ವರೂಪನಾದ ಪರಬ್ರಹ್ಮಪರಮಾತ್ಮನನ್ನು ಜ್ಞಾನಿಯು ಜ್ಞಾನದ ಮೂಲಕ ವಾಗಿಯೇ ತಿಳಿಯುತ್ತಾನೆ.

ನೋತ್ಸಹನ್ತೇ ಯಥಾ ವೇತ್ತುಮಿನ್ದ್ರಿಯೈರಿನ್ದ್ರಿಯಾಣ್ಯಪಿ ।
ತಥೈವೇಹ ಪರಾ ಬುದ್ಧಿಃ ಪರಂ ಬೋಧ್ಯಂ ನ ಪಶ್ಯತಿ ॥೧೪॥

ಯಾವ ರೀತಿಯಲ್ಲಿ ಇಂದ್ರಿಯಗಳು ಇಂದ್ರಿಯಗಳ ಮೂಲಕವಾಗಿ ಜ್ಞೇಯವನ್ನು (ಪರಬ್ರಹ್ಮವಸ್ತುವನ್ನು) ತಿಳಿಯಲು ಸಮರ್ಥವಲ್ಲವೋ– ಅದೇ ರೀತಿಯಲ್ಲಿ ಇಂದ್ರಿಯಗಳನ್ನೇ ಆಶ್ರಯಿಸಿರುವ ಬುದ್ಧಿಯೂ ಪರಮಬೋಧ್ಯವಾದ ಬ್ರಹ್ಮತತ್ತ್ವವನ್ನು ನೋಡಲಾರದು. (ತಿಳಿಯಲಾರದು.)

ಯಥಾ ಚನ್ದ್ರೋ ಹ್ಯಮಾವಾಸ್ಯಾಮಲಿಙ್ಗತ್ವಾನ್ನ ದೃಶ್ಯತೇ ।
ನ ಚ ನಾಶೋಽಸ್ಯ ಭವತಿ ತಥಾ ವಿದ್ಧಿ ಶರೀರಿಣಮ್ ॥೧೫॥

ಚಂದ್ರನು ಅಮಾವಾಸ್ಯೆಯಂದು ಸೂರ್ಯನೊಡನೆ ಸೇರಿ ಜ್ಞಾಪಕೋಪಾಧಿಶೂನ್ಯನಾಗುವುದರಿಂದ (ತೋರಿಸುವ ಗುರುತು ಇಲ್ಲವಾದುದರಿಂದ) ಯಾರ ಕಣ್ಣಿಗೂ ಕಾಣಿಸುವುದಿಲ್ಲ. ಆದರೆ ಚಂದ್ರನು ಕಾಣದಿದ್ದ ಮಾತ್ರಕ್ಕೇ ವಿನಾಶಹೊಂದುವುದಿಲ್ಲ. ಆತ್ಮನ ವಿಷಯದಲ್ಲಿಯೂ ಹೀಗೆಯೇ. ಅವನು ಕಾಣಿಸುವುದಿಲ್ಲವೆಂಬ ಕಾರಣದಿಂದ ಅವನ ಅಭಾವವಿಲ್ಲವೆಂದು ತಿಳಿಯಬೇಕು.

ಕ್ಷೀಣಕೋಶೋ ಹ್ಯಮಾವಾಸ್ಯಾಂ ಚನ್ದ್ರಮಾ ನ ಪ್ರಕಾಶತೇ ।
ತದ್ವನ್ಮೂರ್ತಿವಿಮುಕ್ತೋಽಸೌ ಶರೀರೀ ನೋಪಲಭ್ಯತೇ ॥೧೬॥

ಕ್ಷೀಣಮಂಡಲನಾದ ಚಂದ್ರನು ಅಮಾವಾಸ್ಯೆಯಲ್ಲಿ ಪ್ರಕಾಶಿಸುವುದಿಲ್ಲ. ಅದೇ ರೀತಿಯಲ್ಲಿ ಜೀವನು ಸ್ಥೂಲಶರೀರದಿಂದ ವಿಮುಕ್ತನಾದ ಬಳಿಕ ಸಿಕ್ಕುವುದಿಲ್ಲ. (ಯಾರ ಕಣ್ಣಿಗೂ ಕಾಣಿಸುವುದಿಲ್ಲ.)

ಯಥಾಕಾಶಾನ್ತರಂ ಪ್ರಾಪ್ಯ ಚನ್ದ್ರಮಾ ಭ್ರಾಜತೇ ಪುನಃ ।
ತದ್ವಲ್ಲಿಙ್ಗಾನ್ತರಂ ಪ್ರಾಪ್ಯ ಶರೀರೀ ಭ್ರಾಜತೇ ಪುನಃ ॥೧೭॥

ಯಾವ ರೀತಿಯಲ್ಲಿ ಚಂದ್ರನು ಪುನಃ ಆಕಾಶವನ್ನು ಸೇರಿ ವೃದ್ಧಿಹೊಂದಿದ ಶರೀರವುಳ್ಳವನಾಗಿ ಆಕಾಶದ ಮಧ್ಯದಲ್ಲಿ ವಿರಾಜಿಸುವನೋ–ಅದೇ ರೀತಿಯಲ್ಲಿ ಜೀವನು ಶರೀರಾಂತರವನ್ನು ಹೊಂದಿ ಆ ನೂತನ ದೇಹದ ಮೂಲಕವಾಗಿ ಪುನಃ ಪ್ರಕಾಶಿಸುತ್ತಾನೆ.

ಜನ್ಮ ವೃದ್ಧಿಃ ಕ್ಷಯಶ್ಚಾಸ್ಯ ಪ್ರತ್ಯಕ್ಷೇಣೋಪಲಭ್ಯತೇ ।
ಸಾ ತು ಚಾನ್ದ್ರಮಸೀ ವೃತ್ತಿರ್ನ ತು ತಸ್ಯ ಶರೀರಿಣಃ ॥೧೮॥

ಯಾವ ಜನ್ಮ, ವೃದ್ಧಿ ಮತ್ತು ಕ್ಷಯಗಳು ಚಂದ್ರನಲ್ಲಿ ಪ್ರತ್ಯಕ್ಷವಾಗಿ ಕಾಣುವುದೋ ಆ ಜನ್ಮ-ವೃದ್ಧಿ-ಕ್ಷಯಗಳು ವಸ್ತುತಃ ಚಂದ್ರನ ವೃತ್ತಿಯಾಗಿರುವುದಿಲ್ಲ. ಚಂದ್ರಮಂಡಲಕ್ಕೆ ಸಂಬಂಧಿಸಿದ ವೃತ್ತಿಯಾಗಿರುತ್ತದೆ. ಅದೇ ರೀತಿಯಲ್ಲಿ ಜನ್ಮ-ವೃದ್ಧಿ-ಕ್ಷಯಗಳು ದೇಹಕ್ಕೆ ಸಂಬಂಧಿಸಿದುವುಗಳಾಗಿವೆಯೇ ಹೊರತು ದೇಹಿಗೆ ಸಂಬಂಧಿಸಿದುವುಗಳಲ್ಲ.

ಉತ್ಪತ್ತಿವೃದ್ಧಿವಯಸಾ ಯಥಾ ಸ ಇತಿ ಗೃಹ್ಯತೇ ।
ಚನ್ದ್ರ ಏವ ತ್ವಮಾವಾಸ್ಯಾಂ ತಥಾ ಭವತಿ ಮೂರ್ತಿಮಾನ್ ॥೧೯॥

ಮಗುವೊಂದು ಹುಟ್ಟುತ್ತದೆ. ಬೆಳೆಯುತ್ತದೆ. ದೊಡ್ಡದಾಗುತ್ತದೆ. ಯುವಕನಾಗುತ್ತಾನೆ. ವೃದ್ಧನೂ ಆಗುತ್ತಾನೆ. ಹುಟ್ಟಿದ ಶಿಶುವು ಬಾಲ್ಯ-ಕೌಮಾರ-ಯೌವನ-ವಾರ್ಧಕ್ಯಗಳೆಂಬ ನಾನಾವಿಧವಾದ ಅವಸ್ಥೆಗಳನ್ನು ದಾಟಿದರೂ ಅವನನ್ನು ಒಂದೇ ಹೆಸರಿನಿಂದ ಕರೆಯುತ್ತಾರೆ. 'ಹುಡುಗನಾಗಿದ್ದ ಅವನೇ ಇವನಾಗಿದ್ದಾನೆ'–ಎಂದು ಹೇಳುವರೇ ಹೊರತು ಅವಸ್ಥಾಭೇದದಿಂದ ಅವನು ಬೇರೆಯವನೆಂದು ಯಾರೂ ಭಾವಿಸುವುದಿಲ್ಲ. ಅದೇ ರೀತಿಯಲ್ಲಿ ಜನ್ಮ-ವೃದ್ಧಿಗಳಾದನಂತರ ಅನುಕ್ರಮವಾಗಿ ಕ್ಷಯಿಸಿ ಅಮಾವಾಸ್ಯೆಯಂದು ಕಾಣದಿರುವ ಚಂದ್ರನನ್ನು ಪುನಃ ಅವನು ಅನುಕ್ರಮವಾಗಿ ವೃದ್ಧಿಸಿದನಂತರ ಚಂದ್ರನೆಂದೇ ನಿರ್ದೇಶಿಸುತ್ತಾರೆ. ಅಮಾವಾಸ್ಯೆಯಂದು ಸಂಪೂರ್ಣವಾಗಿ ಕ್ಷಯಿಸಿದ್ದರೂ (ವಿನಾಶಹೊಂದಿದ್ದರೂ) ಮರುದಿನ ಹುಟ್ಟಿದ ಚಂದ್ರನು ಬೇರೆಯವನೆಂದು ಯಾರೂ ಭಾವಿಸುವುದಿಲ್ಲ. ಅದೇ ರೀತಿಯಲ್ಲಿ ಒಂದು ದೇಹದ ನಾಶವಾದರೂ ಅದೇ ಜೀವಿಯೇ ಮತ್ತೊಂದು ದೇಹವನ್ನು ಆಶ್ರಯಿಸುವನೆಂಬುದನ್ನು ಮನಗಾಣಬೇಕು.

ನೋಪಸರ್ಪದ್ವಿಮುಞ್ಚದ್ವಾ ಶಶಿನಂ ದೃಶ್ಯತೇ ತಮಃ ।
ವಿಸೃಜಂಶ್ಚೋಪಸರ್ಪಂಶ್ಚ ತದ್ವತ್ಪಶ್ಯ ಶರೀರಿಣಮ್ ॥೨೦॥

ಯಾವ ರೀತಿಯಲ್ಲಿ ಅಂಧಕಾರರೂಪನಾದ ರಾಹುವು ಚಂದ್ರನನ್ನು ಗ್ರಸನಮಾಡುವುದಾಗಲೀ–ವಿಸರ್ಜಿಸುವುದಾಗಲೀ ಕಾಣುವುದಿಲ್ಲವೋ–ಅದೇ ರೀತಿಯಲ್ಲಿ ಜೀವಾತ್ಮನು ಶರೀರದಲ್ಲಿ ಸೇರಿಕೊಳ್ಳುವುದಾಗಲೀ–ಶರೀರವನ್ನು ಬಿಟ್ಟುಹೋಗುವುದಾಗಲೀ ಕಾಣುವುದಿಲ್ಲ.

ಯಥಾ ಚನ್ದ್ರಾರ್ಕಸಂಯುಕ್ತಂ ತಮಸ್ತದುಪಲಭ್ಯತೇ ।
ತದ್ವಚ್ಛರೀರಸಂಯುಕ್ತಃ ಶರೀರೀತ್ಯುಪಲಭ್ಯತೇ ॥೨೧॥

ಯಾವ ರೀತಿಯಲ್ಲಿ ಸೂರ್ಯ-ಚಂದ್ರರೊಡನೆ ಗ್ರಹಣಕಾಲದಲ್ಲಿ ಸೇರಿರುವಾಗ ತಮಸ್ಸಿನ (ರಾಹುವಿನ) ಆವಿರ್ಭಾವವಾಗುತ್ತದೆಯೋ–ಅದೇ ರೀತಿಯಲ್ಲಿ ಶರೀರದಿಂದ ಕೂಡಿದಾಗ ಆತ್ಮನು ಶರೀರಿಯಾಗಿ ಪ್ರತೀತನಾಗುತ್ತಾನೆ.

ಯಥಾ ಚನ್ದ್ರಾರ್ಕನಿರ್ಮುಕ್ತಃ ಸ ರಾಹುರ್ನೋಪಲಭ್ಯತೇ ।
ತದ್ವಚ್ಛರೀರನಿರ್ಮುಕ್ತಃ ಶರೀರೀ ನೋಪಲಭ್ಯತೇ ॥೨೨॥

ಯಾವ ರೀತಿಯಲ್ಲಿ ಗ್ರಹಣಾನಂತರ ಚಂದ್ರ-ಸೂರ್ಯರನ್ನು ಬಿಟ್ಟು ಹೋದ ರಾಹುವು ಕಣ್ಣಿಗೆ ಕಾಣಿಸುವುದಿಲ್ಲವೋ–ಅದೇ ರೀತಿಯಲ್ಲಿ ಶರೀರ ದಿಂದ ವಿನಿರ್ಮುಕ್ತನಾದ ಜೀವನೂ ಯಾರಿಗೂ ಕಾಣಿಸುವುದಿಲ್ಲ.

ಯಥಾ ಚನ್ದ್ರೋ ಹ್ಯಮಾವಾಸ್ಯಾಂ ನಕ್ಷತ್ರೈರ್ಯುಜ್ಯತೇ ಗತಃ ।
ತದ್ವಚ್ಛರೀರನಿರ್ಮುಕ್ತಃ ಫಲೈರ್ಯುಜ್ಯತಿ ಕರ್ಮಣಃ ॥೨೩॥

ಯಾವ ರೀತಿಯಲ್ಲಿ ಚಂದ್ರನು ಅಮಾವಾಸ್ಯೆಯು ಕಳೆದನಂತರ ಪುನಃ ದೃಶ್ಯನಾಗಿ ನಕ್ಷತ್ರಗಳೊಡನೆ ಸೇರಿರುತ್ತಾನೆಯೋ–ಅದೇ ರೀತಿಯಲ್ಲಿ ಒಂದು ಶರೀರವನ್ನು ಬಿಟ್ಟುಹೋದ ಆತ್ಮನು ತಾನು ಮಾಡಿದ ಕರ್ಮಫಲಗಳೊಡನೆ ದೇಹಾಂತರವನ್ನು ಸೇರಿಕೊಳ್ಳುತ್ತಾನೆ. ಅಮಾವಾಸ್ಯೆಯಿಂದ ಚಂದ್ರನ ವಿನಾಶವಾಗದಂತೆ ದೇಹಾವಸಾನದಿಂದ ಆತ್ಮನ ವಿನಾಶವೂ ಆಗುವುದಿಲ್ಲ.”

ಎ೦೩ನೆಯ ಅಧ್ಯಾಯವು ಮುಗಿಯಿತು.

೨೦೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪರಮಾತ್ಮಸಾಕ್ಷಾತ್ಕಾರೋಪಾಯ ಮತ್ತು ಅದರ ಮಹತ್ತ್ವ

ಧರ್ಮಜ! ಮನುವು ಅಧ್ಯಾತ್ಮತತ್ತ್ವಪ್ರವಚನವನ್ನು ಮುಂದುವರಿಸುತ್ತಾ ಹೇಳುತ್ತಾನೆ.

ಯಥಾ ವ್ಯಕ್ತಮಿದಂ ಶೇತೇ ಸ್ವಪ್ನೇ ಚರತಿ ಚೇತನಮ್ ।
ಜ್ಞಾನಮಿನ್ದ್ರಿಯಸಂಯುಕ್ತಂ ತದ್ವತ್ಪ್ರೇತ್ಯ ಭವಾಭವೌ ॥೧॥

“ಬೃಹಸ್ಪತಿಯೇ! ಸ್ವಪ್ನಾವಸ್ಥೆಯಲ್ಲಿರುವ ಮನುಷ್ಯನ ಸ್ಥೂಲಶರೀರವು ಮಲಗಿದ್ದರೂ ಲಿಂಗಶರೀರವು ಯಾವ ರೀತಿಯಲ್ಲಿ ಚಲಿಸುತ್ತಿರುವುದೋ– ಅದೇ ರೀತಿಯಲ್ಲಿ ಜ್ಞಾನರೂಪವಾದ ಆತ್ಮನು ಇಂದ್ರಿಯಗಳೊಡನೆ ಕೂಡಿದಾಗ ಮತ್ತು ಅವುಗಳಿಂದ ಬಿಡುಗಡೆ ಹೊಂದಿದಾಗ ಬಂಧ-ಮೋಕ್ಷಗಳನ್ನು ಅನು

ಭವಿಸುತ್ತದೆ. ಇಂದ್ರಿಯಸಂಯೋಗವಾದಾಗ ಬಂಧನ–ಅದರಿಂದ ಬಿಡುಗಡೆ ಯಾದಾಗ ಮೋಕ್ಷ. ಆ ಆತ್ಮನು ಇಂದ್ರಿಯಗಳಿಂದ ಅತಿರಿಕ್ತವಾದದ್ದೇ ಆಗಿದೆ. ಸ್ವಪ್ನದಲ್ಲಿ ತನ್ನಿಂದ ಬೇರೆಯಾದ ಶರೀರವು ಅನುಭವಕ್ಕೆ ಬರುತ್ತದೆ. ಹಾಗೆಯೇ ದೇಹಕ್ಕೆ ಅತಿರಿಕ್ತನಾದ ಆತ್ಮನೂ ಜ್ಞಾನಾವಸ್ಥೆಯಲ್ಲಿ ಅನುಭವಕ್ಕೆ ಬರುತ್ತಾನೆ.

(ಇದು ವ್ಯಾಖ್ಯಾನಕಾರರ ವ್ಯಾಖ್ಯಾನಕ್ಕೆ ಅನುಗುಣವಾಗಿ ಮಾಡಿರುವ ಅರ್ಥ. **ತದ್ವತ್ ಭವಃ ಸಂಸಾರಃ ತಥಾ ಇನ್ದ್ರಿಯಸಂಯುಕ್ತಂ ಲಿಙ್ಗಾ ನಪಿ ಶೇತೇ । ಸುಷುಪ್ತೌ ಕೇವಲಂ ಜ್ಞಾನಂ ಪ್ರೇತ್ಯ ಲಿಙ್ಗಾತ್ ವಿಯುಜ್ಯ ಚರತಿ । ತದ್ವತ್ ಅಭವೋ ಮೋಕ್ಷ ಇತ್ಯರ್ಥಃ.॥ ತದ್ವತ್ ಇನ್ದ್ರಿಯ ಸಂಯುಕ್ತಂ ಜ್ಞಾನಂ ಭವಾಭವೌ ಪ್ರೇತ್ಯ ಚರತಿ**)

ಯಥಾಮ್ಭಸಿ ಪ್ರಸನ್ನೇ ತು ರೂಪಂ ಪಶ್ಯತಿ ಚಕ್ಷುಷಾ ।
ತದ್ವತ್ಪ್ರಸನ್ನೇನ್ದ್ರಿಯತ್ವಾಜ್ಜ್ಞೇಯಂ ಜ್ಞಾನೇನ ಪಶ್ಯತಿ ॥೨॥

ಯಾವ ರೀತಿಯಲ್ಲಿ ಮನುಷ್ಯನು ಸ್ವಚ್ಛವಾದ ಮತ್ತು ನಿಶ್ಚಲವಾದ ನೀರಿನಲ್ಲಿ ತನ್ನ ರೂಪವನ್ನು ತನ್ನ ಕಣ್ಣಿಂದಲೇ ನೋಡಿಕೊಳ್ಳಬಲ್ಲನೋ– ಅದೇ ರೀತಿಯಲ್ಲಿ ಜ್ಞಾನಿಯು ಇಂದ್ರಿಯಗಳೂ ಮತ್ತು ಮನಸ್ಸೂ ಪ್ರಸನ್ನವಾದಾಗ ಶುದ್ಧವಾದಾಗ ಜ್ಞೇಯನಾದ ಪರಬ್ರಹ್ಮಪರಮಾತ್ಮನನ್ನು ಜ್ಞಾನದ ಮೂಲಕವಾಗಿ ನೋಡುತ್ತಾನೆ. ಆತ್ಮಸಾಕ್ಷಾತ್ಕಾರವಾಗಬೇಕಾದರೆ ಮನೋ ಬುದ್ಧೀಂದ್ರಿಯಗಳು ಕನ್ನಡಿಯಂತೆ ಪರಿಶುದ್ಧವಾಗಿರಬೇಕು ಮತ್ತು ಸ್ಥಿರ ವಾಗಿರಬೇಕು.

ಸ ಏವ ಲುಲಿತೇ ತಸ್ಮಿನ್ಯಥಾ ರೂಪಂ ನ ಪಶ್ಯತಿ ।
ತಥೇನ್ದ್ರಿಯಾಕುಲೀಭಾವೇ ಜ್ಞೇಯಂ ಜ್ಞಾನೇ ನ ಪಶ್ಯತಿ ॥೩॥

ಅದೇ ಮನುಷ್ಯನು ಚಂಚಲವಾದ ನೀರಿನಲ್ಲಿ ತನ್ನ ರೂಪವನ್ನು ನೋಡಿಕೊಳ್ಳಲು ಸಾಧ್ಯವಾಗದಂತೆ – ಕಲಕಲ್ಪಟ್ಟ ಅಸ್ಥಿರವಾದ ಇಂದ್ರಿಯ ಗಳಿಂದ ಕೂಡಿದ ಬುದ್ಧಿಯುಳ್ಳ ಮನುಷ್ಯನು ಜ್ಞೇಯನಾದ ಪರಬ್ರಹ್ಮಪರ ಮಾತ್ಮನನ್ನು ಕಾಣಲಾರನು.

ಅಬುದ್ಧಿರಜ್ಞಾನಕೃತಾ ಅಬುದ್ಧ್ಯಾ ಕೃಷ್ಯತೇ ಮನಃ ।
ದುಷ್ಟಸ್ಯ ಮನಸಃ ಪಞ್ಚ ಸಮ್ಪ್ರದುಷ್ಯನ್ತಿ ಮಾನಸಾಃ ॥೪॥

ಅಜ್ಞಾನದ ಕಾರಣದಿಂದಾಗಿ ತಿಳಿಗೇಡಿತನವುಂಟಾಗುತ್ತದೆ. ತಿಳಿಗೇಡಿತನದಿಂದ ಮನಸ್ಸು ರಾಗ-ದ್ವೇಷಾದಿಗಳ ಕಡೆಗೆ ಆಕರ್ಷಿತವಾಗುತ್ತದೆ. ಮನಸ್ಸು ದುಷ್ಟವಾಗಲಾಗಿ ಮನಸ್ಸೇ ಪ್ರಧಾನವಾಗಿರುವ ಪಂಚಜ್ಞಾನೇಂದ್ರಿಯಗಳೂ ಕಲುಷಿತವಾಗುತ್ತವೆ.

ಅಜ್ಞಾನತೃಪ್ತೋ ವಿಷಯೇಷ್ವವಗಾಢೋ ನ ತೃಪ್ಯತೇ ।
ಅದೃಷ್ಟವಚ್ಚ ಭೂತಾತ್ಮಾ ವಿಷಯೇಭ್ಯೋ ನಿವರ್ತತೇ ॥೫॥

ಮೋಹಪೂರ್ಣನಾದವನು, ವಿಷಯಸುಖಗಳಲ್ಲಿಯೇ ಮುಳುಗಿ ಹೋಗಿರುವವನು–ಅನವರತವಾಗಿ ವಿಷಯಸುಖಗಳನ್ನೇ ಅನುಭವಿಸುತ್ತಿದ್ದರೂ ವಿಷಯಗಳಲ್ಲಿ ತೃಪ್ತಿಯನ್ನೇ ಹೊಂದುವುದಿಲ್ಲ. ಅದೃಷ್ಟವಶದಿಂದ ಕೆಲವು ವೇಳೆ ಜೀವನು ವಿಷಯಸುಖಗಳಿಂದ ಪ್ರತಿನಿವೃತ್ತನಾಗುತ್ತಾನೆ. ಮೋಕ್ಷದ ಮಾರ್ಗವನ್ನು ಅವಲಂಬಿಸುತ್ತಾನೆ

ತರ್ಷಚ್ಛೇದೋ ನ ಭವತಿ ಪುರುಷಸ್ಯೇಹ ಕಲ್ಮಷಾತ್ ।
ನಿವರ್ತತೇ ತದಾ ತರ್ಷಃ ಪಾಪಮನ್ತಗತಂ ಯದಾ ॥೬॥

ಪಾಪದ ಕಾರಣದಿಂದಾಗಿ ಈ ಪ್ರಪಂಚದಲ್ಲಿ ಮನುಷ್ಯನಿಗೆ ತೃಷ್ಣೆಯ ಶಮನವಾಗುವುದಿಲ್ಲ. ಪಾಪವು ಯಾವಾಗ ವಿನಾಶಹೊಂದುವುದೋ ಆಗ ತೃಷ್ಣೆಯೂ ನಿವೃತ್ತಿಯಾಗುತ್ತದೆ.

ವಿಷಯೇಷು ತು ಸಂಸರ್ಗಾಚ್ಛಾಶ್ವತಸ್ಯ ತು ಸಂಶ್ರಯಾತ್ ।
ಮನಸಾ ಚಾನ್ಯಥಾ ಕಾಂಕ್ಷನ್ಪರಂ ನ ಪ್ರತಿಪದ್ಯತೇ ॥೭॥

ಮನುಷ್ಯನು ವಿಷಯಗಳಲ್ಲಿ ಸಂಸರ್ಗವನ್ನು ಹೊಂದಿರುವುದರಿಂದಲೂ, ಸರ್ವಕಾಲದಲ್ಲಿಯೂ ಆ ವಿಷಯಸುಖಗಳನ್ನೇ ಆಶ್ರಯಿಸಿರುವುದರಿಂದಲೂ, ಆತ್ಮಸಾಧನೆಗೆ ವಿರೋಧವಾಗುವುದನ್ನೇ ಮನಸ್ಸಿನಲ್ಲಿ ಆಶಿಸುವುದರಿಂದಲೂ–ಪರಬ್ರಹ್ಮಪರಮಾತ್ಮನನ್ನು ಹೊಂದುವುದಿಲ್ಲ.

ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ಪಾಪಸ್ಯ ಕರ್ಮಣಃ ।
ಯಥಾದರ್ಶತಲೇ ಪ್ರಖ್ಯೇ ಪಶ್ಯತ್ಯಾತ್ಮಾನಮಾತ್ಮನಿ ॥೮॥

ಸ್ವಚ್ಛವಾದ ಕನ್ನಡಿಯಲ್ಲಿ ಪುರುಷನ ಪ್ರತಿಬಿಂಬವನ್ನು ಚೆನ್ನಾಗಿ ನೋಡಿಕೊಳ್ಳಲು ಸಾಧ್ಯವಾಗುವಂತೆ–ಪಾಪಕರ್ಮಗಳ ವಿನಾಶವಾದ ನಂತರವೇ ಪುರುಷನ ಅಂತಃಕರಣದಲ್ಲಿ ಜ್ಞಾನದ ಉದಯವಾಗುತ್ತದೆ. ಕನ್ನಡಿಯಂತೆ ಸ್ವಚ್ಛವಾದ ಬುದ್ಧಿಯ ಮೂಲಕವಾಗಿ ಪುರುಷನು ಜ್ಞಾನಸ್ವರೂಪಿಯಾದ ಪರಮಾತ್ಮನನ್ನು ಕಂಡುಕೊಳ್ಳುತ್ತಾನೆ.

ಪ್ರಸೃತೈರಿನ್ದ್ರಿಯೈರ್ದುಃಖೀ ತೈರೇವ ನಿಯತೈಃ ಸುಖೀ ।
ತಸ್ಮಾದಿನ್ದ್ರಿಯರೂಪೇಭ್ಯೋ ಯಚ್ಛೇದಾತ್ಮಾನಮಾತ್ಮನಾ ॥೯॥

ಇಂದ್ರಿಯಗಳನ್ನು ವಿಷಯಗಳ ಕಡೆಗೆ ಹರಿಯಬಿಟ್ಟರೆ ಮನುಷ್ಯನು ದುಃಖಿಯಾಗುತ್ತಾನೆ. ಆ ಇಂದ್ರಿಯಗಳನ್ನೇ ಸಂಯಮಗೊಳಿಸಿದರೆ ಸುಖಿಯಾಗುತ್ತಾನೆ. ಆದುದರಿಂದ ಇಂದ್ರಿಯಗಳನ್ನು ಬುದ್ಧಿಯ ಮೂಲಕವಾಗಿ ಇಂದ್ರಿಯಾರ್ಥಗಳಿಂದ (ವಿಷಯಗಳಿಂದ) ತಡೆಹಿಡಿಯಬೇಕು.

ಇನ್ದ್ರಿಯೇಭ್ಯೋ ಮನಃ ಪೂರ್ವಂ ಬುದ್ಧಿಃ ಪರತರಾ ತತಃ ।
ಬುದ್ಧೇಃ ಪರತರಂ ಜ್ಞಾನಂ ಜ್ಞಾನಾತ್ಪರತರಂ ಮಹತ್ ॥೧೦॥

ಇಂದ್ರಿಯಗಳಿಗಿಂತಲೂ ಮನಸ್ಸು ಶ್ರೇಷ್ಠವಾದುದು. ಮನಸ್ಸಿಗಿಂತಲೂ ಬುದ್ಧಿಯು ಶ್ರೇಷ್ಠವಾದುದು. ಬುದ್ಧಿಗಿಂತಲೂ ಜ್ಞಾನವು ಶ್ರೇಷ್ಠವಾದುದು. ಜ್ಞಾನಕ್ಕಿಂತಲೂ ಜ್ಞಾನಗಮ್ಯನಾದ ಪರಾತ್ಪರನಾದ ಪರಮಾತ್ಮನು ಶ್ರೇಷ್ಠನು.

ಅವ್ಯಕ್ತಾತ್ಪ್ರಸೃತಂ ಜ್ಞಾನಂ ತತೋ ಬುದ್ಧಿಸ್ತತೋ ಮನಃ ।
ಮನಃ ಶ್ರೋತ್ರಾದಿಭಿರ್ಯುಕ್ತಂ ಶಬ್ದಾದೀನ್ಸಾಧು ಪಶ್ಯತಿ ॥೧೧॥

ಅವ್ಯಕ್ತನಾದ ಪರಮಾತ್ಮನಿಂದಲೇ ಅವನನ್ನು ತಿಳಿಯುವ ಜ್ಞಾನವು ಪ್ರಕಟವಾಗಿದೆ. ಆ ಜ್ಞಾನದಿಂದ ಬುದ್ಧಿಯೂ, ಬುದ್ಧಿಯಿಂದ ಮನಸ್ಸೂ ಪ್ರಕಟವಾಗಿದೆ. ಆ ಮನಸ್ಸೇ ಶ್ರೋತ್ರವೇ ಮೊದಲಾದ ಇಂದ್ರಿಯಗಳೊಡನೆ ಸೇರಿಕೊಂಡು ಶಬ್ದವೇ ಮೊದಲಾದ ಇಂದ್ರಿಯಾರ್ಥಗಳನ್ನು ಚೆನ್ನಾಗಿ ಅನುಭವಿಸುತ್ತದೆ.

ಯಸ್ತಾಂಸ್ತ್ಯಜತಿ ಶಬ್ದಾದೀನ್ಸರ್ವಾಶ್ಚ ವ್ಯಕ್ತಯಸ್ತಥಾ ।
ವಿಮುಞ್ಚೇತ್ಪ್ರಾಕೃತಾನ್ಗ್ರಾಮಾಂಸ್ತಾನ್ಮುಕ್ತ್ವಾಮೃತ ಮಶ್ನುತೇ ॥೧೨॥

ಯಾವ ಮನುಷ್ಯನು ಶಬ್ದಾದಿ ವಿಷಯಗಳನ್ನೂ, ಅವುಗಳಿಗೆ ಆಶ್ರಯ ಭೂತವಾದ ಎಲ್ಲ ವ್ಯಕ್ತತತ್ತ್ವಗಳನ್ನೂ, ಪ್ರಾಕೃತವಾದ ಗುಣಸಮುದಾಯ ಗಳನ್ನೂ ಪರಿತ್ಯಜಿಸುವನೋ–ಅಂತಹ ಮನುಷ್ಯನು ಅಮೃತಪಾನಮಾಡು ತ್ತಾನೆ. (ಅಮೃತಸ್ವರೂಪನಾದ ಪರಮಾತ್ಮನನ್ನು ಹೊಂದುತ್ತಾನೆ.)

ಉದ್ಯನ್ಹಿ ಸವಿತಾ ಯದ್ವತ್ಸೃಜತೇ ರಶ್ಮಿಮಣ್ಡಲಮ್ ।
ಸ ಏವಾಸ್ತಮುಪಾಗಚ್ಛಂಸ್ತದೇವಾತ್ಮನಿ ಯಚ್ಛತಿ ॥೧೩॥

ಅನ್ತರಾತ್ಮಾ ತಥಾ ದೇಹಮಾವಿಶ್ಯೇನ್ದ್ರಿಯರಶ್ಮಿಭಿಃ ।
ಪ್ರಾಪ್ಯೇನ್ದ್ರಿಯಗುಣಾನ್ಪಞ್ಚ ಸೋಽಸ್ತಮಾವೃತ್ಯ ಗಚ್ಛತಿ ॥೧೪॥

ಸೂರ್ಯನು ಉದಯಿಸುತ್ತಲೇ ರಶ್ಮಿಮಂಡಲವನ್ನು ಸೃಷ್ಟಿಸುತ್ತಾನೆ. ಅದೇ ಸೂರ್ಯನು ಅಸ್ತಮನಹೊಂದುವಾಗ (ಮುಳುಗುವಾಗ) ತಾನು ಸೃಷ್ಟಿಸಿದ ರಶ್ಮಿಗಳನ್ನು ತನ್ನಲ್ಲಿಯೇ ಉಪಸಂಹರಿಸಿಕೊಳ್ಳುತ್ತಾನೆ. ಹೀಗೆಯೇ ಅಂತರಾತ್ಮನು ಇಂದ್ರಿಯಗಳೆಂಬ ರಶ್ಮಿಗಳ ಸಮೇತವಾಗಿ ದೇಹವನ್ನು ಪ್ರವೇಶಿಸಿ ಆ ದೇಹದ ಮೂಲಕವಾಗಿಯೇ ಇಂದ್ರಿಯಗಳ ಗುಣಗಳನ್ನು (ವಿಷಯಗಳನ್ನು) ಗ್ರಹಣಮಾಡುತ್ತಿರುತ್ತಾನೆ. ಪುನಃ ಜೀವನು ಆ ಶರೀರವನ್ನು ಬಿಟ್ಟುಹೋಗುವಾಗ ಪಂಚೇಂದ್ರಿಯಗಳನ್ನು ತನ್ನಲ್ಲಿಯೇ ಉಪಸಂಹರಿಸಿಕೊಂಡು ಹೊರಟುಹೋಗುತ್ತಾನೆ.

ಪ್ರಣೀತಂ ಕರ್ಮಣಾ ಮಾರ್ಗಂ ನೀಯಮಾನಃ ಪುನಃ ಪುನಃ ।
ಪ್ರಾಪ್ನೋತ್ಯಯಂ ಕರ್ಮಫಲಂ ಪ್ರವೃತ್ತಂ ಧರ್ಮಮಾಪ್ತವಾನ್ ॥೧೫॥

ಪ್ರವೃತ್ತಿಪ್ರಧಾನವಾದ ಪಾಪ-ಪುಣ್ಯಕರ್ಮಗಳ ಆಶ್ರಯವನ್ನು ಹೊಂದಿ ರುವ ಜೀವಾತ್ಮನು ಕರ್ಮಗಳ ಮೂಲಕವಾಗಿ ಕರ್ಮಮಾರ್ಗದಲ್ಲಿಯೇ ಪುನಃ ಪುನಃ ಒಯ್ಯಲ್ಪಡುತ್ತಾ (ಸಂಸಾರಚಕ್ರದಲ್ಲಿಯೇ ಸುತ್ತಾಡುತ್ತಾ) ಸುಖ-ದುಃಖರೂಪವಾದ ಕರ್ಮಫಲಗಳನ್ನು ಅನುಭವಿಸುತ್ತಿರುತ್ತಾನೆ.

ವಿಷಯಾ ವಿನಿವರ್ತನ್ತೇ ನಿರಾಹಾರಸ್ಯ ದೇಹಿನಃ ।
ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥೧೬॥

ನಿರಾಹಾರನಾದ (ಇಂದ್ರಿಯಗಳಿಂದ ವಿಷಯಭೋಗಾದಿಗಳನ್ನು ವರ್ಜಿಸಿದ) ಮನುಷ್ಯನ ವಿಷಯಗಳೆಲ್ಲವೂ ಹಿಂದಿರುಗಿ ಹೋಗುತ್ತವೆ. ಶಬ್ದಾದಿ ವಿಷಯಸುಖಗಳು ಅವನನ್ನು ಬಿಟ್ಟುಹೋಗುತ್ತವೆ. ಆದರೆ ವಿಷಾಯಸಕ್ತಿಯು ಬಿಟ್ಟುಹೋಗುವುದಿಲ್ಲ. ಪರಾತ್ಪರನಾದ ಪರಮಪುರುಷ ನನ್ನು ನೋಡುವುದರಿಂದ ಆ ವಿಷಯಾಸಕ್ತಿಯೂ ಹೊರಟುಹೋಗುತ್ತದೆ.
(ಶ್ರೀಗೀತಾ ಅ-೨. ಶ್ಲೋಕ. ೫೯)

ಬುದ್ಧಿಃ ಕರ್ಮಗುಣೈರ್ಹೀನಾ ಯದಾ ಮನಸಿ ವರ್ತತೇ ।
ತದಾ ಸಮ್ಪದ್ಯತೇ ಬ್ರಹ್ಮ ತತ್ರೈವ ಪ್ರಲಯಂ ಗತಮ್ ॥೧೭॥

ಯಾವಾಗ ಬುದ್ಧಿಯು ಕರ್ಮನಿರತವಾದ ಗುಣಗಳಿಂದ ಬಿಡಲ್ಪಟ್ಟು ಹೃದಯದಲ್ಲಿರುತ್ತದೆಯೋ–ಆಗ ಬ್ರಹ್ಮಭಾವವುಂಟಾಗುತ್ತದೆ ಮತ್ತು ಆ ಬ್ರಹ್ಮಭಾವದಲ್ಲಿಯೇ ಎಲ್ಲವೂ ಲೀನವಾಗುತ್ತವೆ.

ಅಸ್ಪರ್ಶನಮಶೃಣ್ವಾನಮನಾಸ್ವಾದಮದರ್ಶನಮ್ ।
ಅಘ್ರಾಣಮವಿತರ್ಕಂ ಚ ಸತ್ತ್ವಂ ಪ್ರವಿಶತೇ ಪರಮ್ ॥೧೮॥

ಬ್ರಹ್ಮವಸ್ತುವು ಸ್ಪರ್ಶ, ಶ್ರವಣ, ರಸನ, ದರ್ಶನ, ಘ್ರಾಣ ಮತ್ತು ಸಂಕಲ್ಪ-ವಿಕಲ್ಪಗಳಿಂದ ವಿಹೀನವಾಗಿರುತ್ತದೆ. ವಿಶುದ್ಧವಾದ ಬುದ್ಧಿಯು ಮಾತ್ರವೇ ಪರಬ್ರಹ್ಮವಸ್ತುವಿನಲ್ಲಿ ಪ್ರವೇಶಿಸುತ್ತದೆ. (ಲೀನವಾಗುತ್ತದೆ.)

ಮನಸ್ಯಾಕೃತಯೋ ಮಗ್ನಾ ಮನಸ್ತ್ವಭಿಗತಂ ಮತಿಮ್ ।
ಮತಿಸ್ತ್ವಭಿಗತಾ ಜ್ಞಾನಂ ಜ್ಞಾನಂ ಚಾಭಿಗತಂ ಪರಮ್ ॥೧೯॥

ಮನಸ್ಸಿನಲ್ಲಿ ವಿಷಯರೂಪವಾದ ಶಬ್ದಾದಿ ಸಮಸ್ತವಾದ ಆಕೃತಿಗಳೂ ಲಯಹೊಂದುತ್ತವೆ. ಮನಸ್ಸು ಬುದ್ಧಿಯಲ್ಲಿಯೂ, ಬುದ್ಧಿಯು ಜ್ಞಾನ ದಲ್ಲಿಯೂ, ಜ್ಞಾನವು ಪರಮಾತ್ಮನಲ್ಲಿಯೂ ಅನುಕ್ರಮವಾಗಿ ಲಯ ಹೊಂದುತ್ತವೆ.

ನೇನ್ದ್ರಿಯೈರ್ಮನಸಃ ಸಿದ್ಧಿರ್ನ ಬುದ್ಧಿಂ ಬುಧ್ಯತೇ ಮನಃ ।
ನ ಬುದ್ಧಿರ್ಬುಧ್ಯತೇಽವ್ಯಕ್ತಂ ಸೂಕ್ಷ್ಮಂ ತ್ವೇತಾನಿ ಪಶ್ಯತಿ ॥೨೦॥

ಇಂದ್ರಿಯಗಳ ಮೂಲಕವಾಗಿ ಮನಸ್ಸಿನ ಸಿದ್ಧಿಯಾಗುವುದಿಲ್ಲ. ಅರ್ಥಾತ್ ಇಂದ್ರಿಯಗಳು ಮನಸ್ಸನ್ನು ತಿಳಿದಿರುವುದಿಲ್ಲ. ಮನಸ್ಸು ಬುದ್ಧಿಯನ್ನು ತಿಳಿದಿರುವುದಿಲ್ಲ. ಬುದ್ಧಿಯು ಸೂಕ್ಷ್ಮವಾದ ಮತ್ತು ಅವ್ಯಕ್ತವಾದ ಆತ್ಮವನ್ನು ತಿಳಿದಿರುವುದಿಲ್ಲ. ಆದರೆ ಅವ್ಯಕ್ತನಾದ ಆತ್ಮನು ಬುದ್ಧಿ, ಮನಸ್ಸು, ಇಂದ್ರಿಯಗಳು ಮತ್ತು ಇಂದ್ರಿಯಾರ್ಥಗಳು – ಎಲ್ಲವನ್ನೂ ತಿಳಿದುಕೊಂಡಿರುತ್ತಾನೆ ಮತ್ತು ಸಾಕ್ಷೀಭೂತನಾಗಿ ಇವುಗಳೆಲ್ಲದರ ಕ್ರಿಯೆಗಳನ್ನೂ ನೋಡುತ್ತಲೇ ಇರುತ್ತಾನೆ.”

೨೦೪ನೆಯ ಅಧ್ಯಾಯವು ಮುಗಿಯಿತು.

೨೦೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪರಬ್ರಹ್ಮಪ್ರಾಪ್ತಿಗೆ ಉಪಾಯ

ಯುಧಿಷ್ಠಿರ! ಮನುವು ಬೃಹಸ್ಪತಿಯನ್ನು ಕುರಿತು ಹೇಳುತ್ತಾನೆ :

ದುಃಖೋಪಘಾತೇ ಶಾರೀರೇ ಮಾನಸೇ ಚಾಪ್ಯುಪಸ್ಥಿತೇ ।
ಯಸ್ಮಿನ್ನ ಶಕ್ಯತೇ ಕರ್ತುಂ ಯತ್ನಸ್ತಂ ನಾನುಚಿನ್ತಯೇತ್ ॥೧॥

“ದೇವಗುರುವೇ! ಮನುಷ್ಯನಿಗೆ ಯಾವುದಾದರೂ ಶಾರೀರವಾದ ವ್ಯಾಧಿಯಿಂದಾಗಲೀ–ಮಾನಸವಾದ ಆಧಿಯಿಂದಾಗಲೀ ದುಃಖರೂಪವಾದ ಆಘಾತವುಂಟಾದಾಗ ಪ್ರತೀಕಾರವನ್ನು ಮಾಡಲಾಗದಿದ್ದರೆ–ಆಧಿ-ವ್ಯಾಧಿಗಳಿಂದುಂಟಾದ ಆಘಾತವನ್ನು ಚಿಂತಿಸುತ್ತಾ ಕುಳಿತುಕೊಳ್ಳಬಾರದು. ಚಿಂತಿಸದೆಯೇ ಅದನ್ನು ಪರಿಹರಿಸಿಕೊಳ್ಳಬೇಕು.

(ವ್ಯಾಖ್ಯಾನಕಾರರು **ಯತ್ನಃ** ಎಂಬುದಕ್ಕೆ ಯೋಗಾಭ್ಯಾಸವೆಂದು ಅರ್ಥಮಾಡಿರುತ್ತಾರೆ.)

ಭೈಷಜ್ಯಮೇತದ್ದುಃಖಸ್ಯ ಯದೇತನ್ನಾನುಚಿನ್ತಯೇತ್ ।
ಚಿನ್ತ್ಯಮಾನಂ ಹಿ ಚಾಭ್ಯೇತಿ ಭೂಯಶ್ಚಾಪಿ ಪ್ರವರ್ತತೇ ॥೨॥

ದುಃಖವನ್ನು ದೂರಗೊಳಿಸಲು ಎಲ್ಲಕ್ಕಿಂತಲೂ ಶ್ರೇಷ್ಠವಾದ ಔಷಧ ವೆಂದರೆ ಆ ದುಃಖವನ್ನು ಕುರಿತು ಚಿಂತಿಸದಿರುವುದೇ ಆಗಿದೆ. ದುಃಖವನ್ನು ಕುರಿತು ಪದೇ ಪದೇ ಚಿಂತಿಸುತ್ತಲೇ ಇದ್ದರೆ ಅದು ಬಂದು ಕಣ್ಮುಂದೆಯೇ ನಿಲ್ಲುತ್ತದೆ ಮತ್ತು ಕ್ಷಣ-ಕ್ಷಣಕ್ಕೂ ಅಧಿಕಗೊಳ್ಳುತ್ತಲೇ ಇರುತ್ತದೆ.

ಪ್ರಜ್ಞಯಾ ಮಾನಸಂ ದುಃಖಂ ಹನ್ಯಾಚ್ಛಾರೀರಮೌಷಧೈಃ ।
ಏತದ್ವಿಜ್ಞಾನಸಾಮರ್ಥ್ಯಂ ನ ಬಾಲೈಃ ಸಮತಾಮಿಯಾತ್ ॥೩॥

ಮಾನಸವಾದ ದುಃಖವನ್ನು ಪ್ರಜ್ಞೆಯಿಂದ–ಸಮ್ಯಗ್ವಿಚಾರ ಮಾಡು ವುದರಿಂದ–ಹೋಗಲಾಡಿಸಿಕೊಳ್ಳಬೇಕು. ಶಾರೀರವಾದ ದುಃಖವನ್ನು ಔಷಧ ಗಳ ಮೂಲಕವಾಗಿ ಹೋಗಲಾಡಿಸಿಕೊಳ್ಳಬೇಕು. ಇದು ವಿಜ್ಞಾನದ (ಹೆಚ್ಚಿನ ತಿಳಿವಳಿಕೆಯ) ಸಾಮರ್ಥ್ಯಕ್ಕೆ ಅನುಗುಣವಾಗಿದೆ. ಹೀಗೆ ಮಾಡುವುದನ್ನು ಬಿಟ್ಟು ದುಃಖವು ಬಂದಾಗ ಚಿಂತಿಸುತ್ತಾ ಗೋಳಾಡುತ್ತಾ ಮಕ್ಕಳಿಗೆ ಸಮಾನ ರಾಗಬಾರದು.

ಅನಿತ್ಯಂ ಯೌವನಂ ರೂಪಂ ಜೀವಿತಂ ದ್ರವ್ಯಸಂಚಯಃ ।
ಆರೋಗ್ಯಂ ಪ್ರಿಯಸಂವಾಸೋ ಗೃಧ್ಯೇತ್ತತ್ರ ನ ಪಣ್ಡಿತಃ ॥೪॥

ಯೌವನ, ರೂಪ, ಜೀವನ, ಧನಸಂಗ್ರಹ, ಆರೋಗ್ಯ, ಪ್ರಿಯಜನರ ಸಮಾಗಮ–ಇವೆಲ್ಲವೂ ಅನಿತ್ಯವಾದುವುಗಳು. ಶಾಶ್ವತವಾಗಿ ಇರತಕ್ಕುವು ಗಳಲ್ಲ. ವಿವೇಕಶಾಲಿಯಾದ ಪುರುಷನು ಇವುಗಳ ವಿಷಯದಲ್ಲಿ ಅತ್ಯಾಸಕ್ತ ನಾಗಿರಬಾರದು.

ನ ಜಾನಪದಿಕಂ ದುಃಖಮೇಕಃ ಶೋಚಿತುಮರ್ಹತಿ ।
ಅಶೋಚನ್ಪ್ರತಿ ಕುರ್ವೀತ ಯದಿ ಪಶ್ಯೇದುಪಕ್ರಮಮ್ ॥೫॥

ದೇಶಕ್ಕೆ ಸಂಬಂಧಿಸಿದ ದುಃಖದ ವಿಷಯವಾಗಿ ಒಬ್ಬನೇ ಕುಳಿತು ಶೋಕಪಡುವುದು ಯೋಗ್ಯವಲ್ಲ. ದೇಶಕ್ಕೆ ಒದಗಿಬಂದಿರುವ ದುಃಖವನ್ನು ನಿವಾರಣೆಮಾಡಲು ಯಾವುದಾದರೂ ಉಪಾಯವಿರುವುದಾದರೆ ಶೋಕಿಸ ದೆಯೇ ದುಃಖದ ನಿವಾರಣೆಗೆ ಮಾಡಬೇಕಾದ ಪ್ರಯತ್ನವನ್ನು ಮಾಡಬೇಕು.

ಸುಖಾದ್ಬಹುತರಂ ದುಃಖಂ ಜೀವಿತೇ ನಾಸ್ತಿ ಸಂಶಯಃ ।
ಸ್ನಿಗ್ಧಸ್ಯ ಚೇನ್ದ್ರಿಯಾರ್ಥೇಷು ಮೋಹಾನ್ಮರಣಮಪ್ರಿಯಮ್ ॥೬॥

ಜೀವನದಲ್ಲಿ ಸುಖಕ್ಕಿಂತಲೂ ದುಃಖವೇ ಅಧಿಕವಾಗಿರುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ಮೋಹವಶನಾದ ಯಾವ ಮನುಷ್ಯನು ವಿಷಯ ಸುಖಗಳಲ್ಲಿಯೇ ಅತ್ಯಾಸಕ್ತನಾಗಿರುವನೋ–ಅಂತಹವನು ಮರಣರೂಪ ವಾದ ಮತ್ತು ಅಪ್ರಿಯವಾದ ಕಷ್ಟಗಳಿಗೆ ಗುರಿಯಾಗುತ್ತಾನೆ.

ಪರಿತ್ಯಜತಿ ಯೋ ದುಃಖಂ ಸುಖಂ ವಾಪ್ಯುಭಯಂ ನರಃ ।
ಅಭ್ಯೇತಿ ಬ್ರಹ್ಮ ಸೋಽತ್ಯನ್ತಂ ನ ತೇ ಶೋಚನ್ತಿ ಪಣ್ಡಿತಾಃ ॥೭॥

ಯಾವ ಮನುಷ್ಯನು ಸುಖ-ದುಃಖಗಳೆರಡನ್ನೂ ಪರಿತ್ಯಜಿಸುವನೋ– ಅವನು ಅಕ್ಷಯವಾದ ಬ್ರಹ್ಮವಸ್ತುವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಸುಖ-ದುಃಖಗಳೆರಡನ್ನೂ ಸಮಾನವಾಗಿ ಪರಿಗಣಿಸುವ ಜ್ಞಾನಿಗಳು ಯಾವಾಗಲೂ ಶೋಕಪಡುವುದಿಲ್ಲ.


ದುಃಖಮರ್ಥಾ ಹಿ ಯುಜ್ಯನ್ತೇ ಪಾಲನೇ ನ ಚ ತೇ ಸುಖಮ್ ।
ದುಃಖೇನ ಚಾಧಿಗಮ್ಯನ್ತೇ ನಾಶಮೇಷಾಂ ನ ಚಿನ್ತಯೇತ್ ॥೮॥

ಐಶ್ವರ್ಯಗಳು ಮನುಷ್ಯನನ್ನು ದುಃಖದೊಡನೆ ಸಂಘಟಿಸುತ್ತವೆ. ಅವುಗಳ ಸಂರಕ್ಷಣೆಮಾಡುವಾಗಲೂ ದುಃಖವೇ ಹೊರತು ಯಾವ ವಿಧ ವಾದ ಸುಖವೂ (ನಿನಗೆ) ಲಭಿಸುವುದಿಲ್ಲ. ಐಶ್ವರ್ಯಗಳೆಲ್ಲವೂ ಕಷ್ಟದಿಂದಲೇ ಹೊಂದಲ್ಪಡತಕ್ಕುವುಗಳಾಗಿವೆ. ಆದುದರಿಂದ ಐಶ್ವರ್ಯಗಳು ನಾಶವಾಗಿ ಹೋದರೆ ಮನುಷ್ಯನು ಅವುಗಳಿಗಾಗಿ ಚಿಂತಿಸಬಾರದು.

ಜ್ಞಾನಂ ಜ್ಞೇಯಾಭಿನಿರ್ವೃತ್ತಂ ವಿದ್ಧಿ ಜ್ಞಾನಗುಣಂ ಮನಃ ।
ಪ್ರಜ್ಞಾಕರಣಸಂಯುಕ್ತಂ ತತೋ ಬುದ್ಧಿಃ ಪ್ರವರ್ತತೇ ॥೯॥

ದೇವಗುರುವೇ! ಜ್ಞೇಯನಾದ ಪರಮಾತ್ಮನ ಅಸ್ತಿತ್ವವನ್ನು ನಿಷ್ಪನ್ನ (ಸಿದ್ಧ) ಮಾಡಿಕೊಡುವುದೇ ಜ್ಞಾನವೆಂದು ತಿಳಿ. ಜ್ಞಾನ

ಗುಣವುಳ್ಳ ಮನಸ್ಸು ಪ್ರಜ್ಞಾಕರಣಗಳಾದ ಇಂದ್ರಿಯಗಳಿಂದ ಕೂಡಿದಾಗ ಬುದ್ಧಿಯು ವಿಷಯಗಳ ಕಡೆಗೆ ಹೋಗುತ್ತದೆ.



ಯದಾ ಕರ್ಮಗುಣೈರ್ಹೀನಾ ಬುದ್ಧಿರ್ಮನಸಿ ವರ್ತತೇ ।
ತದಾ ಪ್ರಜ್ಞಾಯತೇ ಬ್ರಹ್ಮ ಧ್ಯಾನಯೋಗಸಮಾಧಿನಾ ॥೧೦॥

ಯಾವಾಗ ಬುದ್ಧಿಯು ಕರ್ಮ ಮತ್ತು ಗುಣಗಳಿಂದ ವಿಹೀನವಾಗಿ ಹೃದಯದಲ್ಲಿರುತ್ತದೆಯೋ–ಆಗ ಧ್ಯಾನಯೋಗದಿಂದ ಲಭ್ಯವಾಗುವ ಸಮಾಧಿಯ ಮೂಲಕವಾಗಿ ಬ್ರಹ್ಮವಸ್ತುವಿನ ಸಾಕ್ಷಾತ್ಕಾರವಾಗುತ್ತದೆ.

(ಕರ್ಮಗಳಿಂದ ಸಂಸ್ಕಾರ ಹೊಂದಿದ (ಚಿತ್ತಶುದ್ಧಿಯನ್ನು ಹೊಂದಿದ) ಬುದ್ಧಿಯು ಮನನಶೀಲವಾದ ಮನಸ್ಸಿನಲ್ಲಿ ಸೇರಿದರೆ ಧ್ಯಾನ

ಯೋಗಲಭ್ಯವಾದ ಸಮಾಧಿಯಿಂದ ಬ್ರಹ್ಮಸಾಕ್ಷಾತ್ಕಾರವಾಗುತ್ತದೆ. ಇದು ವ್ಯಾಖ್ಯಾನಕಾರರ ವಿವರಣೆಯಾಗಿದೆ.)

ಸೇಯಂ ಗುಣವತೀ ಬುದ್ಧಿರ್ಗುಣೇಷ್ವೇವಾಭಿವರ್ತತೇ ।
ಅಪರಾದಭಿನಿಃಸೃತ್ಯ ಗಿರೇಃ ಶೃಙ್ಗಾದಿವೋದಕಮ್ ॥೧೧॥

ಅದೇ ಬುದ್ಧಿಯು ಇಂದ್ರಿಯಗುಣಯುಕ್ತವಾದರೆ–ಪರ್ವತದ ಶಿಖರದಿಂದ ನೀರು ಹರಿದುಬರುವಂತೆ–ಪರಮಾತ್ಮನ ಸಾನ್ನಿಧ್ಯದಿಂದ ಚ್ಯುತವಾಗಿ ವಿಷಯಗಳ ಕಡೆಗೇ ಹರಿದುಹೋಗುತ್ತದೆ.

ಯದಾ ನಿರ್ಗುಣಮಾಪ್ನೋತಿ ಧ್ಯಾನಂ ಮನಸಿ ಪೂರ್ವಜಮ್ ।
ತದಾ ಪ್ರಜ್ಞಾಯತೇ ಬ್ರಹ್ಮ ನಿಕಷಂ ನಿಕಷೇ ಯಥಾ ॥೧೨॥

ಆದರೆ ಯಾವಾಗ ಸಾಧಕನು ಮನಸ್ಸಿನಲ್ಲಿ ಹಿಂದಿನ ಸಾಧನೆಗಳಿಂದುಂಟಾದ ನಿರ್ಗುಣಧ್ಯಾನವನ್ನು ಪಡೆಯುತ್ತಾನೆಯೋ ಆಗ ಅವನು ಒರೆಗಲ್ಲಿನ ಮೇಲಿರುವ ಚಿನ್ನದ ರೇಖೆಯಂತೆ ಬುದ್ಧಿಯಲ್ಲಿ ಬ್ರಹ್ಮವಸ್ತುವನ್ನು ಅರಿತುಕೊಳ್ಳುತ್ತಾನೆ.

ಮನಸ್ತ್ವಪಹೃತಂ ಪೂರ್ವಮಿನ್ದ್ರಿಯಾರ್ಥನಿದರ್ಶಕಮ್ ।
ನ ಸಮಕ್ಷಗುಣಾಪೇಕ್ಷಿ ನಿರ್ಗುಣಸ್ಯ ನಿದರ್ಶಕಮ್ ॥೧೩॥

ಮೊದಲಿನಿಂದಲೂ ಇಂದ್ರಿಯವಿಷಯಗಳ ಕಡೆಗೇ ಅಪಹೃತವಾದ, ಇಂದ್ರಿಯಗಳಿಗೆ ಬೇಕಾದ ಭೋಗಪದಾರ್ಥಗಳನ್ನೇ ಯಾವಾಗಲೂ ನೋಡುತ್ತಿರುವ ಮತ್ತು ಇಂದ್ರಿಯಗಳಿಗೆ ಬೇಕಾದ ವಿಷಯಗಳನ್ನೇ ಯಾವಾಗಲೂ ಅಪೇಕ್ಷಿಸುವ ಮನಸ್ಸು ನಿರ್ಗುಣತತ್ತ್ವವನ್ನು ನೋಡಲು ಸಮರ್ಥವಾಗುವುದಿಲ್ಲ.

ಸರ್ವಾಣ್ಯೇತಾನಿ ಸಂವಾರ್ಯ ದ್ವಾರಾಣಿ ಮನಸಿ ಸ್ಥಿತಃ ।
ಮನಸ್ಯೇಕಾಗ್ರತಾಂ ಕೃತ್ವಾ ತತ್ಪರಂ ಪ್ರತಿಪದ್ಯತೇ ॥೧೪॥

ಎಲ್ಲ ಶರೀರದ್ವಾರರೂಪಗಳಾದ ಈ ಇಂದ್ರಿಯಗಳನ್ನೂ ನಿರೋಧಿಸಿ, ಮನಸ್ಸನ್ನು ಏಕಾಗ್ರಮಾಡಿ ಹೃದಯದಲ್ಲಿ ನಿಲ್ಲಿಸಿ ಧ್ಯಾನಮಾಡುವುದರಿಂದ ತತ್ಪದವಾಚ್ಯವಾದ ಶ್ರೇಷ್ಠವಾದ ಬ್ರಹ್ಮವಸ್ತುವನ್ನು ಹೊಂದುತ್ತಾನೆ. (ಸಾಕ್ಷಾತ್ಕರಿಸಿಕೊಳ್ಳುತ್ತಾನೆ.)

ಯಥಾ ಮಹಾನ್ತಿ ಭೂತಾನಿ ನಿವರ್ತನ್ತೇ ಗುಣಕ್ಷಯೇ ।
ತಥೇನ್ದ್ರಿಯಾಣ್ಯುಪಾದಾಯ ಬುದ್ಧಿರ್ಮನಸಿ ವರ್ತತೇ ॥೧೫॥

ಯಾವ ರೀತಿಯಲ್ಲಿ ಸತ್ತ್ವ-ರಜಸ್ತಮಸ್ಸುಗಳು ನಾಶವಾದನಂತರ ಪಂಚಮಹಾಭೂತಗಳೂ ಹಿಂದಿರುಗುತ್ತವೆಯೋ – ಅದೇ ರೀತಿಯಲ್ಲಿ ಇಂದ್ರಿಯ ಗುಣಗಳು ಕ್ಷಯಿಸಿದೊಡನೆಯೇ ಬುದ್ಧಿಯು ಇಂದ್ರಿಯಗಳೆಲ್ಲವನ್ನೂ ತನ್ನಲ್ಲಿಯೇ ಉಪಸಂಹರಿಸಿಕೊಂಡು ಜ್ಞಾನದಲ್ಲಿ ನೆಲೆಸುತ್ತದೆ.

ಯದಾ ಮನಸಿ ಸಾಬುದ್ಧಿರ್ವರ್ತತೇಽನ್ತರಚಾರಿಣೀ ।
ವ್ಯವಸಾಯಗುಣೋಪೇತಾ ತದಾ ಸಮ್ಪದ್ಯತೇ ಮನಃ ॥೧೬॥

ಯಾವಾಗ ಆ ನಿಶ್ಚಯಾತ್ಮಕವಾದ ಬುದ್ಧಿಯು ತನ್ನೊಳಗೆ ಸಂಚರಿಸುತ್ತಿರುವ ಜ್ಞಾನದಲ್ಲಿ ನೆಲೆಸುತ್ತದೆಯೋ ಆಗ ಅದು ಜ್ಞಾನಮಯವೇ ಆಗಿಬಿಡುತ್ತದೆ.

ಗುಣವದ್ಭಿರ್ಗುಣೋಪೇತಂ ಯದಾ ಧ್ಯಾನಗುಣಂ ಮನಃ ।
ತದಾ ಸರ್ವಾನ್ಗುಣಾನ್ಹಿತ್ವಾ ನಿರ್ಗುಣಂ ಪ್ರತಿಪದ್ಯತೇ ॥೧೭॥

ಶಬ್ದಾದಿಗುಣಗಳಿಂದ ಯುಕ್ತವಾದ ಇಂದ್ರಿಯಗಳ ಸಂಬಂಧದಿಂದ ಕೂಡಿದ ಮನಸ್ಸು ಯಾವಾಗ ಧ್ಯಾನಯೋಗಜನಿತವಾದ ಗುಣಗಳಿಂದ ಸಂಪನ್ನವಾಗುವುದೋ–ಆಗ ಇಂದ್ರಿಯಗಳಿಗೆ ಸಂಬಂಧಿಸಿದ ಸಮಸ್ತಗುಣಗಳನ್ನೂ ತ್ಯಾಗಮಾಡಿ ನಿರ್ಗುಣವಾದ ಪರಬ್ರಹ್ಮವನ್ನು ಹೊಂದುತ್ತದೆ.

ಅವ್ಯಕ್ತಸ್ಯೇಹ ವಿಜ್ಞಾನೇ ನಾಸ್ತಿ ತುಲ್ಯಂ ನಿದರ್ಶನಮ್ ।
ಯತ್ರ ನಾಸ್ತಿ ಪದನ್ಯಾಸಃ ಕಸ್ತಂ ವಿಷಯಮಾಪ್ನುಯಾತ್ ॥೧೮॥

ಆ ಅವ್ಯಕ್ತಬ್ರಹ್ಮದ ನಿಜಸ್ವರೂಪಕ್ಕೆ ಸಮನಾದ ದೃಷ್ಟಾಂತವೇ ಈ ಪ್ರಪಂಚದಲ್ಲಿ ಇಲ್ಲವಾಗಿದೆ. ಎಲ್ಲಿ ವಾಣಿಯ ವ್ಯಾಪಾರವೇ ಇಲ್ಲವೋ, **ಯತೋ ವಾಚೋ ನಿವರ್ತನ್ತೇ** ಎಂದು ಯಾವುದನ್ನು ವೇದಗಳು ವರ್ಣಿಸುತ್ತವೆಯೋ–ಅಂತಹ ಪರಬ್ರಹ್ಮವಸ್ತುವನ್ನು ವರ್ಣನೆಗೆ ವಿಷಯವನ್ನಾಗಿ ಯಾರು ತಾನೇ ಮಾಡಿಕೊಳ್ಳಬಲ್ಲರು?

ತಪಸಾ ಚಾನುಮಾನೇನ ಗುಣೈರ್ಜಾತ್ಯಾ ಶ್ರುತೇನ ಚ ।
ನಿನೀಷೇತ್ಪರಮಂ ಬ್ರಹ್ಮ ವಿಶುದ್ಧೇನಾನ್ತರಾತ್ಮನಾ ॥೧೯॥

ತಪಸ್ಸಿನಿಂದಲೂ, ತರ್ಕದಿಂದಲೂ, ಶಮ-ದಮಾದಿ ಗುಣಗಳಿಂದಲೂ, ವರ್ಣಾಶ್ರಮೋಕ್ತವಾದ ಕರ್ಮಾನುಷ್ಠಾನಗಳಿಂದಲೂ, ಶಾಸ್ತ್ರಗಳ ಅಧ್ಯಯನದಿಂದಲೂ ಅಂತಃಕರಣವನ್ನು ಶುದ್ಧಿಮಾಡಿಕೊಂಡು ಪರಬ್ರಹ್ಮಪರಮಾತ್ಮನನ್ನು ಹೊಂದಲು ಇಚ್ಛಿಸಬೇಕು.

ಗುಣಹೀನೋ ಹಿ ತಂ ಮಾರ್ಗಂ ಬಹಿಃ ಸಮನುವರ್ತತೇ ।
ಗುಣಾಭಾವಾತ್ಪ್ರಕೃತ್ಯಾ ವಾ ನಿಸ್ತರ್ಕ್ಯಂ ಜ್ಞೇಯಸಮ್ಮಿತಮ್ ॥೨೦॥

ತಪಸ್ಸಾದಿ ಗುಣಗಳಿಂದ ವಿಹೀನನಾದವನು ಬಹಿರಂಗದಲ್ಲಿ ಮಾತ್ರವೇ ಅಧ್ಯಾತ್ಮಮಾರ್ಗವನ್ನು ಅನುಸರಿಸುತ್ತಿರುತ್ತಾನೆ. ಮೇಲಾಗಿ ಜ್ಞೇಯಸ್ವರೂಪನಾದ ಪರಮಾತ್ಮನು ಗುಣಾತೀತನಾದುದರಿಂದಲೂ ಅಥವಾ ಸ್ವಾಭಾವಿಕವಾಗಿಯೂ ಅವನು ತರ್ಕಕ್ಕೆ ವಿಷಯನಾಗುವುದಿಲ್ಲ.

ನೈರ್ಗುಣ್ಯಾದ್ಬ್ರಹ್ಮ ಚಾಪ್ನೋತಿ ಸಗುಣತ್ವಾನ್ನಿವರ್ತತೇ ।
ಗುಣಪ್ರಚಾರಿಣೀ ಬುದ್ಧಿರ್ಹುತಾಶನ ಇವೇನ್ಧನೇ ॥೨೧॥

ಅಗ್ನಿಯು ಯಾವ ಯಾವ ರೀತಿಯಲ್ಲಿ ಒಣಗಿದ ಕಟ್ಟಿಗೆಯಲ್ಲಿ ಸಂಚರಿಸುವುದೋ – ಅದೇ ರೀತಿಯಲ್ಲಿ ಬುದ್ಧಿಯೂ ಶಬ್ದ-ಸ್ಪರ್ಶಾದಿ ಇಂದ್ರಿಯಗುಣಗಳಲ್ಲಿಯೇ ಸಂಚರಿಸುತ್ತಿರುತ್ತದೆ. ಅದು ನಿರ್ಗುಣವಾದರೆ ಪರಬ್ರಹ್ಮಪರಮಾತ್ಮನನ್ನು ಸೇರುತ್ತದೆ. ಗುಣಗಳೊಡನೆ ಕೂಡಿಕೊಂಡರೆ ಅಲ್ಲಿಂದ ಹಿಂದಿರುಗಿಬಿಡುತ್ತದೆ.

ಯಥಾ ಪಞ್ಚ ವಿಮುಕ್ತಾನಿ ಇನ್ದ್ರಿಯಾಣಿ ಸ್ವಕರ್ಮಭಿಃ ।
ತಥಾ ಹಿ ಪರಮಂ ಬ್ರಹ್ಮ ವಿಮುಕ್ತಂ ಪ್ರಕೃತೇಃ ಪರಮ್ ॥೨೨॥

ಯಾವ ರೀತಿಯಲ್ಲಿ ಪಂಚೇಂದ್ರಿಯಗಳು ಅವುಗಳ ಕಾರ್ಯರೂಪವಾದ ಶಬ್ದ-ಸ್ಪರ್ಶಾದಿ ಗುಣಗಳಿಂದ ಭಿನ್ನವಾಗಿವೆಯೋ–ಅದೇ ರೀತಿಯಲ್ಲಿ ಪರಬ್ರಹ್ಮವಸ್ತುವೂ ಪ್ರಕೃತಿಯಿಂದ ಸರ್ವಥಾ ಪ್ರತ್ಯೇಕವಾಗಿದೆ.

ಏವಂ ಪ್ರಕೃತಿತಃ ಸರ್ವೇ ಪ್ರವರ್ತನ್ತೇ ಶರೀರಿಣಃ ।
ನಿವರ್ತನ್ತೇ ನಿವೃತ್ತೌ ಚ ಸ್ವರ್ಗಂ ಚೈವೋಪಯಾನ್ತಿ ಚ ॥೨೩॥

ಹೀಗೆ ಎಲ್ಲ ಪ್ರಾಣಿಗಳೂ ಪ್ರಕೃತಿಯ ದೆಸೆಯಿಂದ ಹುಟ್ಟು-ಸಾವು ಗಳೆಂಬ ಸಂಸಾರಚಕ್ರದಲ್ಲಿ ಪ್ರವೃತ್ತವಾಗುತ್ತವೆ. ಪ್ರಕೃತಿಯ ಸಹಾಯದಿಂದಲೇ ಸಂಸಾರನಿವೃತ್ತಿಯನ್ನೂ ಹೊಂದುತ್ತವೆ. ಹಾಗೆ ನಿವೃತ್ತಿಹೊಂದಿ ಮೋಕ್ಷವನ್ನು ಪಡೆಯುತ್ತವೆ.

ಪುರುಷಃ ಪ್ರಕೃತಿರ್ಬುದ್ಧಿರ್ವಿಷಯಾಶ್ಚೇನ್ದ್ರಿಯಾಣಿ ಚ ।
ಅಹಂಕಾರೋಽಭಿಮಾನಶ್ಚ ಸಮೂಹೋ ಭೂತಸಂಜ್ಞಕಃ ॥೨೪॥

ಪುರುಷ, ಪ್ರಕೃತಿ, ಬುದ್ಧಿ, ಶಬ್ದಾದಿ ಐದು ವಿಷಯಗಳು, ಹತ್ತು ಇಂದ್ರಿಯಗಳು, ಅಹಂಕಾರ, ಮನಸ್ಸು ಮತ್ತು ಐದು ಮಹಾಭೂತಗಳು ಈ ಇಪ್ಪತ್ತೈದು ತತ್ತ್ವಗಳ ಸಮೂಹವು 'ಭೂತ' ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ.

ಏತಸ್ಮಾದ್ಯಾ ಪ್ರವೃತ್ತಿಸ್ತು ಪ್ರಧಾನಾತ್ಸಮ್ಪ್ರವರ್ತತೇ ।
ದ್ವಿತೀಯಾ ಮಿಥುನವ್ಯಕ್ತಮವಿಶೇಷಾನ್ನಿಯಚ್ಛತಿ ॥೨೫॥

ಬುದ್ಧಿಯೇ ಮೊದಲಾದ ಮೊದಲಿನ ತತ್ತ್ವಸಮೂಹದ ಸೃಷ್ಟಿಯು ಪ್ರಕೃತಿಯಿಂದಲೇ ಆಗಿದೆ. ಎರಡನೆಯ ಸೃಷ್ಟಿಯು ಸಾಮಾನ್ಯತಃ ಮೈಥುನ ಧರ್ಮದಿಂದ ನಿಯಮಪೂರ್ವಕವಾಗಿ ಅಭಿವ್ಯಕ್ತವಾಗುತ್ತದೆ.

ಧರ್ಮಾದುತ್ಕೃಷ್ಯತೇ ಶ್ರೇಯಸ್ತಥಾಶ್ರೇಯೋಽಪ್ಯಧರ್ಮತಃ ।
ರಾಗವಾನ್ಪ್ರಕೃತಿಂ ಹ್ಯೇತಿ ವಿರಕ್ತೋ ಜ್ಞಾನವಾನ್ಭವೇತ್ ॥೨೬॥

ಧರ್ಮಮಾರ್ಗಪ್ರವರ್ತನೆಯಿಂದ ಮನುಷ್ಯನಿಗೆ ಶ್ರೇಯಸ್ಸಿನ ವೃದ್ಧಿ ಯಾಗುತ್ತದೆ. ಅಧರ್ಮಮಾರ್ಗಪ್ರವರ್ತನೆಯಿಂದ ಅಶ್ರೇಯಸ್ಸುಂಟಾಗು ತ್ತದೆ. ವಿಷಯಾಸಕ್ತನಾದ ಪುರುಷನು ನಿರಂತರವಾಗಿ ಪ್ರಕೃತಿಯಲ್ಲಿಯೇ (ಪ್ರಪಂಚದಲ್ಲಿಯೇ) ಇರುತ್ತಾನೆ. ವಿರಕ್ತನಾದ ಪುರುಷನು ಆತ್ಮಜ್ಞಾನವನ್ನು ಪಡೆಯುತ್ತಾನೆ."

ಎ೦೫ನೆಯ ಅಧ್ಯಾಯವು ಮುಗಿಯಿತು.

೨೦೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪರಮಾತ್ಮತತ್ತ್ವದ ನಿರೂಪಣೆ : ಮನು–ಬೃಹಸ್ಪತಿಗಳ ಸಂಭಾಷಣೆಯ ಸಮಾಪ್ತಿ

ಯುಧಿಷ್ಠಿರ! ಮನುವು ಬೃಹಸ್ಪತಿಯೊಡನೆ ಹೇಳುತ್ತಾನೆ :

ಯದಾ ತೈಃ ಪಞ್ಚಭಿಃ ಪಞ್ಚ ಯುಕ್ತಾನಿ ಮನಸಾ ಸಹ ।
ಅಥ ತದ್ದ್ರಕ್ಷ್ಯತೇ ಬ್ರಹ್ಮ ಮಣೌ ಸೂತ್ರಮಿವಾರ್ಪಿತಮ್ ॥೧॥

"ದೇವಗುರುವೇ! ಯಾವಾಗ ಶಬ್ದವೇ ಮೊದಲಾದ ಐದು ವಿಷಯಗಳಿಂದ ಯುಕ್ತವಾದ ಐದು ಜ್ಞಾನೇಂದ್ರಿಯಗಳೂ ಮನಸ್ಸಿನೊಡನೆ ಸೇರಿಕೊಳ್ಳುತ್ತವೆಯೋ–ಆಗ ಮಣಿಯಲ್ಲಿ ಓತ-ಪ್ರೋತವಾಗಿರುವ ದಾರದಂತೆ ಇರುವ ಪರಮಾತ್ಮನನ್ನು ಮಾನವನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ತದೇವ ಚ ಯಥಾ ಸೂತ್ರಂ ಸುವರ್ಣೇ ವರ್ತತೇ ಪುನಃ ।
ಮುಕ್ತಾಸ್ವಥ ಪ್ರವಾಲೇಷು ಮೃಣ್ಮಯೇ ರಾಜತೇ ತಥಾ ॥೨॥

ತದ್ವದ್ಗೋಽಶ್ವಮನುಷ್ಯೇಷು ತದ್ವದ್ಧಸ್ತಿಮೃಗಾದಿಷು ।
ತದ್ವತ್ಕೀಟಪತಙ್ಗೇಷು ಪ್ರಸಕ್ತಾತ್ಮಾ ಸ್ವಕರ್ಮಭಿಃ ॥೩॥

ಒಂದೇ ಸೂತ್ರವು ಸುವರ್ಣದ ಮಣಿಗಳಲ್ಲಿಯೂ, ಮುತ್ತುಗಳಲ್ಲಿಯೂ, ಹವಳಗಳಲ್ಲಿಯೂ, ಮಣ್ಣಿನಿಂದ ಮಾಡಿದ ಮಣಿಗಳಲ್ಲಿಯೂ, ಬೆಳ್ಳಿಯ ಮಣಿಗಳಲ್ಲಿಯೂ ವಿರಾಜಿಸುತ್ತಿರುವಂತೆ–ಒಬ್ಬನೇ ಪರಮಾತ್ಮನು ಗೋವುಗಳಲ್ಲಿಯೂ, ಕುದುರೆಗಳಲ್ಲಿಯೂ, ಮನುಷ್ಯರಲ್ಲಿಯೂ, ಆನೆಗಳಲ್ಲಿಯೂ, ಮೃಗಗಳಲ್ಲಿಯೂ, ಕೀಟ-ಪತಂಗಾದಿಗಳಲ್ಲಿಯೂ, ಸಮಸ್ತ ಪ್ರಾಣಿಗಳ ಶರೀರಗಳಲ್ಲಿಯೂ ವ್ಯಾಪ್ತನಾಗಿರುತ್ತಾನೆ. ವಿಷಯಾಸಕ್ತನಾದ ಜೀವಾತ್ಮನು ತನ್ನ ಕರ್ಮಾನುಸಾರವಾಗಿ ಭಿನ್ನ-ಭಿನ್ನ ಶರೀರಗಳನ್ನು ಧಾರಣೆ ಮಾಡುತ್ತಿರುತ್ತಾನೆ.

(ಮಣಿಗಳು ಚಿನ್ನದ್ದೇ ಆಗಿರಲೀ, ಮುತ್ತಿನದೇ ಆಗಿರಲೀ, ಹವಳದ್ದೇ ಆಗಿರಲೀ, ಗಾಜಿನದೇ ಆಗಿರಲೀ–ಅವುಗಳನ್ನು ಪೋಣಿಸುವ ದಾರವು ಒಂದೇ ಆಗಿರುತ್ತದೆ. ದಾರದಲ್ಲಿ ಯಾವ ವ್ಯತ್ಯಾಸವೂ ಇಲ್ಲ.

ದಾರವೇ ಸರದಲ್ಲಿರುವ ಮಣಿಗಳನ್ನು ಧಾರಣೆಮಾಡಿಕೊಂಡಿರುತ್ತದೆ. ಪರಮಾತ್ಮನು ಸೂತ್ರದಂತೆ ಅಂತರ್ಯಾಮಿಯಾಗಿದ್ದಾನೆ. ಸೂತ್ರವು ಮಣಿಗಳನ್ನು ಧರಿಸಿರುವಂತೆ ಎಲ್ಲ ಪ್ರಾಣಿಗಳನ್ನೂ ಅವನೇ ಧಾರಣೆಮಾಡಿಕೊಂಡಿರುತ್ತಾನೆ. ದಾರವು ಬಿಳಿಯದೇ ಆಗಿದ್ದರೂ ಬಣ್ಣ-ಬಣ್ಣದ ಗಾಜಿನ ಮಣಿಗಳ ಮಧ್ಯದಲ್ಲಿ ಆ ದಾರವು ಬಣ್ಣ-ಬಣ್ಣವಾಗಿ ಕಾಣುವಂತೆ–ಒಬ್ಬನೇ ಪರಮಾತ್ಮನು ನಾನಾರೂಪವಾಗಿ ಕಾಣುತ್ತಾನೆ. ಚಿನ್ನ-ಹವಳ-ಮುತ್ತು ಇವೇ ಮುಂತಾದ ಮಣಿಗಳ ಮಧ್ಯದಲ್ಲಿದ್ದರೆ ದಾರದ ಇರುವಿಕೆಯೇ ತಿಳಿಯುವುದಿಲ್ಲ. ಬಣ್ಣ-ಬಣ್ಣದ ಗಾಜಿನ ಮಣಿಗಳ ಮಧ್ಯದಲ್ಲಿದ್ದರೆ ದಾರವು ಬಣ್ಣ-ಬಣ್ಣವಾಗಿರುತ್ತದೆ. ಸ್ವಚ್ಛವಾದ ಸ್ಫಟಿಕಮಣಿಗಳ ಮಧ್ಯದಲ್ಲಿದ್ದರೆ ದಾರವೂ ಸ್ವಚ್ಛವಾಗಿಯೇ ಕಾಣುತ್ತದೆ. ಹಾಗೆಯೇ ಪರಮಾತ್ಮನು ಎಲ್ಲ ಪ್ರಾಣಿಗಳಲ್ಲಿಯೂ ಏಕರೀತಿಯಲ್ಲಿಯೇ ಇದ್ದರೂ–ಅವನ ಅಸ್ತಿತ್ವವೇ ಅಜ್ಞಾನಿಗಳಿಗೆ ತಿಳಿಯುವುದಿಲ್ಲ. ಒಂದು ವೇಳೆ ತಿಳಿದರೂ ವಿಕೃತವಾಗಿ ತಿಳಿಯುತ್ತದೆ. ಜ್ಞಾನಿಗಳಿಗೆ ಮಾತ್ರವೇ ಶುದ್ಧಸ್ವರೂಪನಾದ ಪರಮಾತ್ಮನ ಅಸ್ತಿತ್ವವು ತಿಳಿಯುತ್ತದೆ.)

ಯೇನ ಯೇನ ಶರೀರೇಣ ಯದ್ಯತ್ಕರ್ಮ ಕರೋತ್ಯಯಮ್ ।
ತೇನ ತೇನ ಶರೀರೇಣ ತತ್ತತ್ಫಲಮುಪಾಶ್ನುತೇ ॥೪॥

ಜೀವನು ಯಾವ ಯಾವ ಶರೀರದ ಮೂಲಕವಾಗಿ ಯಾವ ಯಾವ ಕರ್ಮಗಳನ್ನು ಮಾಡುವನೋ–ಆಯಾ ಶರೀರದ ಮೂಲಕವಾಗಿ ಆಯಾ ಕರ್ಮಕ್ಕೆ ತಕ್ಕುದಾದ ಫಲಗಳನ್ನು ಅನುಭವಿಸುತ್ತಾನೆ.

ಯಥಾ ಹ್ಯೇಕರಸಾ ಭೂಮಿರೋಷಧ್ಯರ್ಥಾನುಸಾರಿಣೀ ।
ತಥಾ ಕರ್ಮಾನುಗಾ ಬುದ್ಧಿರಂತರಾತ್ಮಾನುದರ್ಶಿನೀ ॥೫॥

ಯಾವ ರೀತಿಯಲ್ಲಿ ಒಂದೇ ವಿಧವಾದ ಸಾರವುಳ್ಳ ಭೂಮಿಯು ತನ್ನಲ್ಲಿ ಹಾಕಿದ ಬೀಜಕ್ಕೆ ಅನುಗುಣವಾಗಿ ವಿಧ-ವಿಧವಾದ ಸಾರಗಳುಳ್ಳ ಸಸ್ಯಗಳನ್ನು ಕೊಡುವುದೋ–ಹಾಗೆಯೇ ಬುದ್ಧಿಯು ಏಕರಸವಾಗಿದ್ದರೂ ಪರಮಾತ್ಮನಿಂದಲೇ ಪ್ರಕಾಶಿತವಾಗಿ ಚೈತನ್ಯವನ್ನು ಪಡೆದಿದ್ದರೂ–ಹಿಂದೆ ಮಾಡಿದ ಕರ್ಮವನ್ನೇ ಯಾವಾಗಲೂ ಅನುಸರಿಸುತ್ತದೆ.

(ಒಂದೆಡೆಯಲ್ಲಿ ಭೂಮಿಯು ಒಂದೇ ವಿಧವಾದ ಸಾರವುಳ್ಳದ್ದಾಗಿರುತ್ತದೆ. ಅಂತಹ ಭೂಮಿಯಲ್ಲಿ ಇಂತಹ ಸಾರವಿರುವುದೆಂದು ಕ್ಷೇತ್ರ ಪಂಡಿತರೂ ತಿಳಿದಿರುತ್ತಾರೆ. ಆ ಭೂಮಿಯಲ್ಲಿ ಮೆಣಸಿನ ಗಿಡವನ್ನು ಹಾಕಿದರೆ ಖಾರವಾದ ಮೆಣಸಿನಕಾಯಿ ಬಿಡುತ್ತದೆ. ಗೆಣಸನ್ನು ಹಾಕಿದರೆ ಸಿಹಿಯಾದ ಗೆಣಸು ಸಿಕ್ಕುತ್ತದೆ. ಹುಣಸೇಗಿಡವನ್ನು ಹಾಕಿದರೆ ಹುಳಿಯಾದ ಹುಣಸೇಕಾಯಿ ಸಿಕ್ಕುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಹಾಕಿದ ಬೀಜಕ್ಕೆ ಅನುಸಾರವಾಗಿ ನಾನಾವಿಧವಾದ ರುಚಿಗಳುಳ್ಳ ಫಲಗಳು ಬಿಡುತ್ತವೆ. ಹಾಗೆಯೇ ಪರಮಾತ್ಮನು ನಿರ್ಗುಣ ; ನಿರ್ವಿಕಲ್ಪ. ಅವನು ಎಲ್ಲರ ಹೃದಯದಲ್ಲಿಯೂ ಇದ್ದಾನೆ. ಅವನೇ ಬುದ್ಧಿಗೆ ಚೈತನ್ಯವನ್ನು ಕೊಡತಕ್ಕವನು. ಸಚ್ಚಿದಾನಂದಸ್ವರೂಪಿಯಾದ ಪರಮಾತ್ಮನೇ ಎಲ್ಲ ಪ್ರಾಣಿಗಳ ಬುದ್ಧಿಯನ್ನು ಪ್ರಕಾಶಗೊಳಿಸಿದರೂ–ಒಬ್ಬನ ಬುದ್ಧಿಯಿರುವಂತೆ ಮತ್ತೊಬ್ಬನ ಬುದ್ಧಿಯಿರುವುದಿಲ್ಲ. ಇದು ಬೀಜದ ಪ್ರಭಾವ. ಎಂದರೆ ಪ್ರತಿಯೊಂದು ಜೀವವೂ ಹುಟ್ಟುವಾಗ ಪ್ರಾರಬ್ಧವೆಂಬ ಹೊದಿಕೆಯನ್ನು ಹೊದ್ದುಕೊಂಡೇ ಹುಟ್ಟುತ್ತದೆ. ಅಂತಹ ಪೂರ್ವಾರ್ಜಿತಕರ್ಮಾನುಗುಣವಾಗಿ ಅದರ ಬುದ್ಧಿಯಿರುತ್ತದೆ. ಮೆಣಸಿನಕಾಯಲ್ಲಿ ಖಾರವಿರಲು, ಕಬ್ಬಿನಲ್ಲಿ ಸಿಹಿಯಿರಲು ಭೂಮಿಯು ಹೇಗೆ ಕಾರಣವಲ್ಲವೋ, ಅವುಗಳ ಬೀಜಗಳೇ ಹೇಗೆ ಕಾರಣವೋ–ಹಾಗೆಯೇ ಪ್ರಾಣಿಗಳ ಬುದ್ಧಿಯ ವಿಕಲ್ಪಕ್ಕೆ ಪರಮಾತ್ಮನು ಕಾರಣನಾಗುವುದಿಲ್ಲ. ಪ್ರಾಣಿಗಳ ಬೀಜರೂಪವಾದ ಪ್ರಾರಬ್ಧಕರ್ಮಗಳೇ ಕಾರಣವಾಗಿರುತ್ತವೆ.)

ಜ್ಞಾನಪೂರ್ವಾ ಭವೇಲ್ಲಿಪ್ಸಾ ಲಿಪ್ಸಾಪೂರ್ವಾಭಿಸಂಧಿತಾ ।
ಅಭಿಸಂಧಿಪೂರ್ವಕಂ ಕರ್ಮ ಕರ್ಮಮೂಲಂ ತತಃ ಫಲಮ್ ॥೬॥

ಮನುಷ್ಯನಿಗೆ ಮೊದಲು ವಿಷಯಗಳ ಅರಿವಾಗುತ್ತದೆ. ಅನಂತರ ಬಯಕೆಯ ವಸ್ತುಗಳನ್ನು ಪಡೆಯಬೇಕೆನ್ನುವ ಅಭಿಲಾಷೆಯುಂಟಾಗುತ್ತದೆ. ಬಳಿಕ ಆ ವಸ್ತುವನ್ನು ಹೇಗಾದರೂ ಮಾಡಿ ಪಡೆದುಕೊಳ್ಳಲೇಬೇಕೆಂಬ ಸಂಕಲ್ಪವಾಗಿ ಕಾರ್ಯವು ಪ್ರಾರಂಭವಾಗುತ್ತದೆ. ಅನಂತರ ಕರ್ಮದಿಂದ ಫಲವು ಸಿಕ್ಕುತ್ತದೆ.

(ಮೊದಲು ಪರಮಾತ್ಮನು ಹೃದಯಾಕಾಶದಲ್ಲಿರುವನೆಂಬುದರ ಅರಿ

ವಾಗಬೇಕು. ಅನಂತರ ಅವನನ್ನು ಕಂಡುಕೊಳ್ಳುವ ಆಸೆಯುಂಟಾಗಬೇಕು. ಹೇಗಾದರೂ ಮಾಡಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲೇಬೇಕೆಂಬ ದೃಢಸಂಕಲ್ಪವನ್ನು ಮಾಡಬೇಕು. ಬಳಿಕ ಸಾಧನೆಗೆ ಅನುಕೂಲವಾದ ಕರ್ಮಗಳನ್ನು ಮಾಡಬೇಕು. ಇಷ್ಟನ್ನೂ ಮಾಡಿದನಂತರ ಭಗವಂತನ ಸಾಕ್ಷಾತ್ಕಾರರೂಪವಾದ ಫಲವು ಸಿಕ್ಕಿಯೇ ಸಿಕ್ಕುತ್ತದೆ.)

ಫಲಂ ಕರ್ಮಾತ್ಮಕಂ ವಿದ್ಯಾತ್ಕರ್ಮ ಜ್ಞೇಯಾತ್ಮಕಂ ತಥಾ ।
ಜ್ಞೇಯಂ ಜ್ಞಾನಾತ್ಮಕಂ ವಿದ್ಯಾಜ್ಜ್ಞಾನಂ ಸದಸದಾತ್ಮಕಮ್ ॥೭॥

ಕರ್ಮಾನುಗುಣವಾಗಿ ಫಲವೇ ಕರ್ಮದ ನಿಜಸ್ವರೂಪವಾಗಿದೆ ಯೆಂಬುದನ್ನು ತಿಳಿದುಕೊಳ್ಳಬೇಕು. ಕರ್ಮವು ಜ್ಞೇಯ (ಪರಮಾತ್ಮ) ಸ್ವರೂಪವಾಗಿದೆ. ಜ್ಞೇಯವು ಜ್ಞಾನ (ಚೈತನ್ಯ) ಸ್ವರೂಪವಾಗಿದೆ–ಎಂದು ತಿಳಿಯಬೇಕು. ಆ ಚೈತನ್ಯವು ವ್ಯಕ್ತಾವ್ಯಕ್ತಸ್ವರೂಪವುಳ್ಳದ್ದಾಗಿದೆ.

ಜ್ಞಾನಾನಾಂ ಚ ಫಲಾನಾಂ ಚ ಜ್ಞೇಯಾನಾಂ ಕರ್ಮಣಾಂ ತಥಾ ।
ಕ್ಷಯಾನ್ತೇ ಯತ್ಫಲಂ ವಿದ್ಯಾಜ್ಜ್ಞಾನಂ ಜ್ಞೇಯಪ್ರತಿಷ್ಠಿತಮ್ ॥೮॥

(ಲೌಕಿಕವಾದ) ಜ್ಞಾನಗಳು, ಅವುಗಳ ಫಲಗಳು, ಜ್ಞೇಯಪದಾರ್ಥ ಗಳು ಮತ್ತು ಕರ್ಮಗಳು–ಇವುಗಳೆಲ್ಲದರ ಕ್ಷಯಾನಂತರ ಪರಬ್ರಹ್ಮ ಪ್ರತಿಷ್ಠಿತವಾದ ಯಾವ ಜ್ಞಾನವು ದೊರೆಯುವುದೋ–ಅದನ್ನೇ ಮಹಾಫಲ ರೂಪವಾದ ಆತ್ಮಜ್ಞಾನವೆಂದು ತಿಳಿಯಬೇಕು.

ಮಹದ್ಧಿ ಪರಮಂ ಭೂತಂ ಯತ್ಪ್ರಪಶ್ಯನ್ತಿ ಯೋಗಿನಃ ।
ಅಬುಧಾಸ್ತಂ ನ ಪಶ್ಯನ್ತಿ ಹ್ಯಾತ್ಮಸ್ಥಂ ಗುಣಬುದ್ಧಯಃ ॥೯॥

ಆ ಮಹಾತತ್ತ್ವವನ್ನು ಯೋಗಿಜನರು ಮಾತ್ರವೇ ಅಂತರ್ದೃಷ್ಟಿಯಿಂದ ನೋಡುತ್ತಾರೆ. ತ್ರಿಗುಣಗಳಲ್ಲಿ ಆಸಕ್ತರಾದ ಅಜ್ಞಾನಿಗಳು ತಮ್ಮಲ್ಲಿಯೇ ಇರುವ ಪರಮಾತ್ಮನನ್ನು ಕಾಣಲಾರರು.

ಪೃಥಿವೀರೂಪತೋ ರೂಪಮಪಾಮಿಹ ಮಹತ್ತರಮ್ ।
ಅದ್ಭ್ಯೋ ಮಹತ್ತರಂ ತೇಜಸ್ತೇಜಸಃ ಪವನೋ ಮಹಾನ್ ॥೧೦॥

ಪವನಾಚ್ಚ ಮಹದ್ವ್ಯೋಮ ತಸ್ಮಾತ್ಪರತರಂ ಮನಃ ।
ಮನಸೋ ಮಹತೀ ಬುದ್ಧಿರ್ಬುದ್ಧೇಃ ಕಾಲೋ ಮಹಾನ್ಸ್ಮೃತಃ ॥೧೧॥

ಕಾಲಾತ್ಸ ಭಗವಾನ್ವಿಷ್ಣುರ್ಯಸ್ಯ ಸರ್ವಮಿದಂ ಜಗತ್ ।
ನಾದಿರ್ನ ಮಧ್ಯಂ ನೈವಾನ್ತಸ್ತಸ್ಯ ದೇವಸ್ಯ ವಿದ್ಯತೇ ॥೧೨॥

ಪೃಥಿವಿಯ ರೂಪಕ್ಕಿಂತಲೂ ಜಲದ ರೂಪವು ಮಹತ್ತರವಾದುದು. ಜಲಕ್ಕಿಂತಲೂ ತೇಜಸ್ಸು ಮಹತ್ತರವಾದುದು. ತೇಜಸ್ಸಿಗಿಂತಲೂ ವಾಯುವು ಮಹತ್ತರವಾದುದು. ವಾಯುವಿಗಿಂತಲೂ ಆಕಾಶವು ಮಹತ್ತರವಾದುದು. ಆಕಾಶಕ್ಕಿಂತಲೂ ಮನಸ್ಸು ಮಹತ್ತರವಾದುದು. ಮನಸ್ಸಿಗಿಂತಲೂ ಬುದ್ಧಿಯು ಮಹತ್ತರವಾದುದು. ಬುದ್ಧಿಗಿಂತಲೂ ಕಾಲವು (ಪ್ರಕೃತಿಯು) ಮಹತ್ತರ ವಾದುದು. ಕಾಲಕ್ಕಿಂತಲೂ (ಪ್ರಕೃತಿಗಿಂತಲೂ) ಭಗವಂತನಾದ ಮಹಾ ವಿಷ್ಣುವೇ ಶ್ರೇಷ್ಠನಾದವನು. ಈ ಜಗತ್ತೆಲ್ಲವೂ ಅವನಿಗೇ ಸೇರಿದೆ. ದೇವ ದೇವನಾದ ಆ ಮಹಾವಿಷ್ಣುವಿಗೆ ಆದಿ-ಮಧ್ಯಾಂತರಗಳು ಯಾವುದೂ ಇರು ವುದಿಲ್ಲ. ಅವನು ಸನಾತನನು.

ಅನಾದಿತ್ವಾದಮಧ್ಯತ್ವಾದನನ್ತತ್ವಾಚ್ಚ ಸೋಽವ್ಯಯಃ ।
ಅತ್ಯೇತಿ ಸರ್ವದುಃಖಾನಿ ದುಃಖಂ ಹ್ಯನ್ತವದುಚ್ಯತೇ ॥೧೩॥

ವಿಷ್ಣುವಿಗೆ ಆದಿ-ಮಧ್ಯಾಂತರಗಳಿಲ್ಲವಾದುದರಿಂದ ಅವನು ಅವ್ಯಯನು. (ವಿಕಾರರಹಿತನು) ಎಲ್ಲ ದುಃಖಗಳನ್ನೂ ಮೀರಿದವನು. ಯಾವುದಕ್ಕೆ ಅಂತ ವಿದೆಯೋ ಅದು ತಾನೇ ದುಃಖವನ್ನು ಅನುಭವಿಸುವುದು? ಮಹಾವಿಷ್ಣುವಿಗೆ ಅಂತವೇ ಇಲ್ಲವಾದುದರಿಂದ ಅವನಿಗೆ ದುಃಖಸ್ಪರ್ಶವಿಲ್ಲ. ಅವನು ಸದಾನಂದಸ್ವರೂಪಿಯು.

ತದ್ಬ್ರಹ್ಮ ಪರಮಂ ಪ್ರೋಕ್ತಂ ತದ್ಧಾಮ ಪರಮಂ ಪದಮ್ ।
ತದ್ಗತ್ವಾ ಕಾಲವಿಷಯಾದ್ವಿಮುಕ್ತಾ ಮೋಕ್ಷಮಾಶ್ರಿತಾಃ ॥೧೪॥

ಅವಿನಾಶಿಯಾದ ಮಹಾವಿಷ್ಣುವನ್ನೇ ಪರಬ್ರಹ್ಮನೆಂದೂ ಕರೆಯುತ್ತಾರೆ. ಅವನ ಸ್ಥಾನವೇ ಪರಮಪದವಾಗಿರುತ್ತದೆ. ಕಾಲಪುರುಷನ ರಾಜ್ಯದಿಂದ ವಿಮುಕ್ತರಾದ ಜ್ಞಾನಿಗಳು ಮಹಾವಿಷ್ಣುವಿನ ಪರಮಪದವನ್ನು ಸೇರಿ ಮೋಕ್ಷವನ್ನು ಪಡೆಯುತ್ತಾರೆ.

ಗುಣೇಷ್ವೇತೇ ಪ್ರಕಾಶನ್ತೇ ನಿರ್ಗುಣತ್ವಾತ್ತತಃ ಪರಮ್ ।
ನಿವೃತ್ತಿಲಕ್ಷಣೋ ಧರ್ಮಸ್ತಥಾನನ್ತ್ಯಾಯ ಕಲ್ಪತೇ ॥೧೫॥

ಸಂಸಾರಿಗಳೆಂಬ ಈ ಜೀವಿಗಳು ತ್ರಿಗುಣದಲ್ಲಿಯೇ ಪ್ರಕಾಶಿಸುತ್ತಾರೆ. ಪರಮಾತ್ಮನು ನಿರ್ಗುಣನಾದುದರಿಂದ ಜೀವಿಗಳನ್ನೂ ಮೀರಿ ಅವರಿಗಿಂತಲೂ ಶ್ರೇಷ್ಠನಾಗಿದ್ದಾನೆ. ಅವನದು ನಿವೃತ್ತಿಧರ್ಮ. ಅದನ್ನು ಅನುಸರಿಸುವವರು ಮೋಕ್ಷವನ್ನು ಪಡೆಯುತ್ತಾರೆ.

(ನಿರ್ಗುಣ ಎಂಬ ಶಬ್ದಕ್ಕೆ ವಿಶಿಷ್ಟಾದ್ವೈತ ಮತ್ತು ದ್ವೈತಮತಗಳಲ್ಲಿ 'ಹೇಯಗುಣರಹಿತ'–ಎಂದು ಅರ್ಥ. ಶುದ್ಧ ಅಥವಾ ಅಶುದ್ಧವಾದ ಯಾವ ಗುಣವೂ ಇಲ್ಲದವನು–ಎಂಬುದು ಅದ್ವೈತಮತ.

ಏತೇ ಮುಕ್ತಾಃ ಶುದ್ಧಚಿದಾತ್ಮಾನಃ ಗುಣೇಷು ಮಾನಮೇಯ ವ್ಯವಹಾರೇಷು ಪ್ರಕಾಶನ್ತೇ ಜ್ಞಾನರೂಪೇಣ ಮೇಯೇಷು ಪ್ರಕಾಶನ್ತೇ । ಏತೇ –ಎಂದರೆ ಹಿಂದಿನ ಶ್ಲೋಕದ ಕೊನೆಯಲ್ಲಿ ಹೇಳಿರುವ ಮುಕ್ತಾತ್ಮರು. ಅವರು ಗುಣಗಳಲ್ಲಿ ಎಂದರೆ ಮಾನ-ಮೇಯವ್ಯವಹಾರಗಳಲ್ಲಿ ಪ್ರಕಾಶಿಸುತ್ತಾರೆ. ಜ್ಞಾನರೂಪದಿಂದ ಬೆಳಗುತ್ತಾರೆ–ಎಂದು ವ್ಯಾಖ್ಯಾನಕಾರರ ವ್ಯಾಖ್ಯಾನ.)

ಋಚೋ ಯಜೂಂಷಿ ಸಾಮಾನಿ ಶರೀರಾಣಿ ವ್ಯಪಾಶ್ರಿತಾಃ ।
ಜಿಹ್ವಾಗ್ರೇಷು ಪ್ರವರ್ತನ್ತೇ ಯತ್ನಸಾಧ್ಯಾ ವಿನಾಶಿನಃ ॥೧೬॥

ಋಗ್ಯಜುಸ್ಸಾಮಗಳು ಅಧ್ಯಯನಕಾಲದಲ್ಲಿ ಅಧ್ಯಯನಮಾಡುವವರ ಶರೀರಗಳನ್ನು ಆಶ್ರಯಿಸಿರುತ್ತವೆ. ವೇದಾಧ್ಯಾಯಿಗಳ ನಾಲಿಗೆಯ ತುದಿಯಿಂದ ಪ್ರಕಟವಾಗುತ್ತವೆ. ಆದುದರಿಂದ ಇವುಗಳನ್ನು ಪ್ರಯತ್ನದಿಂದಲೇ ಸಾಧಿಸಿಕೊಳ್ಳಬೇಕು. ಅಧ್ಯಯನದ ಪ್ರಯತ್ನವೇ ಇಲ್ಲದಿದ್ದರೆ ವಿನಾಶವನ್ನು ಹೊಂದುತ್ತವೆ.

ನ ಚೈವಮಿಷ್ಯತೇ ಬ್ರಹ್ಮ ಶರೀರಾಶ್ರಯಸಮ್ಭವಮ್ ।
ನ ಯತ್ನಸಾಧ್ಯಂ ತದ್ಬ್ರಹ್ಮನಾದಿಮಧ್ಯಂ ನ ಚಾನ್ತವತ್ ॥೧೭॥

ಆದರೆ ಪರಬ್ರಹ್ಮಪರಮಾತ್ಮವಸ್ತುವು ವೇದಗಳಂತೆಯೇ ಶರೀರದಲ್ಲಿಯೇ ಪ್ರಕಟವಾಗುವುದಾಗಿದ್ದರೂ ವೇದಾಧ್ಯಯನದಂತೆ ಪ್ರಯತ್ನದಿಂದ ಸಾಧಿಸಲ್ಪಡುವುದಿಲ್ಲ. ಸ್ವತಃ ಸಿದ್ಧವಾದುದು. ಅದು ಆದಿ-ಮಧ್ಯಾಂತಗಳೇ ಇಲ್ಲದುದು.

ಋಚಾಮಾದಿಸ್ತಥಾ ಸಾಮ್ನಾಂ ಯಜುಷಾಮಾದಿರುಚ್ಯತೇ ।
ಅನ್ತಶ್ಚಾದಿಮತಾಂ ದೃಷ್ಟೋ ನ ತ್ವಾದಿರ್ಬ್ರಹ್ಮಣಃ ಸ್ಮೃತಃ ॥೧೮॥

ಋಗ್ವೇದಕ್ಕೆ ಆದಿಯುಂಟು. ಸಾಮವೇದಕ್ಕೂ ಆದಿಯುಂಟು. ಯಜುರ್ವೇದಕ್ಕೂ ಆದಿಯುಂಟು. ಯಾವುದಕ್ಕೆ ಆದಿಯಿರುವುದೋ ಅದಕ್ಕೆ ಅಂತ್ಯವೂ ಉಂಟು–ಎಂಬುದು ಕಂಡುಬರುತ್ತದೆ. ಬ್ರಹ್ಮಕ್ಕಾದರೋ ಆದಿಯನ್ನೇ ಶಾಸ್ತ್ರಗಳಲ್ಲಿ ಹೇಳಿಲ್ಲ.

(ವೇದಕ್ಕೆ ಆದ್ಯನ್ತಗಳಿಲ್ಲ. 'ಅನಾದಿನಿಧನಾ ಹ್ಯೇಷಾ ವಾಗುತ್ಸೃಷ್ಟಾ ಸ್ವಯಂಭುವಾ' ಎಂದು ಮನುವು ಹೇಳುತ್ತಾನೆ. ಅದು 'ಅಪೌರುಷೇಯ'–ಎಂದು ಸಂಪ್ರದಾಯ. ಆದರೆ ನ್ಯಾಯದರ್ಶನದಂತೆ ವೇದಕ್ಕೆ ಉತ್ಪತ್ತಿ-ವಿನಾಶಗಳುಂಟು. ಅದಕ್ಕೆ ಪರಬ್ರಹ್ಮನೇ ಕರ್ತೃವು. ವೇದವು ಅಪೌರುಷೇಯ ವೆಂಬುದನ್ನು ಸಾಧಿಸಲು ವಿಶೇಷವಾಗಿ ಮೀಮಾಂಸಾಶಾಸ್ತ್ರದಲ್ಲಿ ಪ್ರಯತ್ನ ಮಾಡಿದೆ. ವೇದದ ಹೊರಗಿನ ಆಕಾರಕ್ಕೆ ಆದ್ಯಂತಗಳಿರಬಹುದು. ಆದರೆ ಅದರ ಸ್ವರೂಪವು ನಿತ್ಯವಾದುದು. ಅದು ಪರಮಾತ್ಮನ ಉಸಿರು. ಅವ ನಂತೆಯೇ ನಿತ್ಯವಾದುದು. ಪುರುಷಸಂಬಂಧದಿಂದ ಬಂದುದಲ್ಲ. ಪರಮ ಪುರುಷನ ಅನುಗ್ರಹದಿಂದ ಋಷಿಗಳ ಸ್ಫೂರ್ತಿಗೆ ಬಂದುದು. ಆದುದರಿಂದ ಅದು ಅಪೌರುಷೇಯ. ವೇದಬೀಜವಾದ ಪ್ರಣವವು ಪರಮಾತ್ಮನಲ್ಲಿ ಲಯ ಹೊಂದುತ್ತದೆ. ಅವನಿಂದಲೇ ವಿಕಾಸಗೊಳ್ಳುತ್ತದೆ. ಆದುದರಿಂದ ಅದಕ್ಕೂ ಅವನೇ ಆದಿ.)

ಅನಾದಿತ್ವಾದನನ್ತತ್ವಾತ್ತದನನ್ತಮಥಾವ್ಯಯಮ್ ।
ಅವ್ಯಯತ್ವಾಚ್ಚ ನಿರ್ದುಃಖಂ ದ್ವನ್ದ್ವಾಭಾವಸ್ತತಃ ಪರಮ್ ॥೧೯॥

ಬ್ರಹ್ಮವಸ್ತುವು ಅನಾದಿಯೂ ಅನಂತವೂ ಆದುದರಿಂದ ಅದು ಅನಂತವೂ ಅವಿನಾಶಿಯೂ ಆಗಿದೆ. ಅವಿನಾಶಿಯಾದುದರಿಂದ ದುಃಖ ರಹಿತವಾಗಿದೆ. ಆ ಬ್ರಹ್ಮವಸ್ತುವಿನಲ್ಲಿ ಹರ್ಷ-ಶೋಕಗಳೇ ಮೊದಲಾದ ದ್ವಂದ್ವಗಳಿರುವುದಿಲ್ಲ. ಆದುದರಿಂದ ಆ ಬ್ರಹ್ಮವಸ್ತುವು ಎಲ್ಲಕ್ಕಿಂತಲೂ ಶ್ರೇಷ್ಠವಾಗಿದೆ.

ಅದೃಷ್ಟತೋಽನುಪಾಯಾಚ್ಚ ಪ್ರತಿಸಂಧೇಶ್ಚ ಕರ್ಮಣಃ ।
ನ ತೇನ ಮರ್ತ್ಯಾಃ ಪಶ್ಯನ್ತಿ ಯೇನ ಗಚ್ಛನ್ತಿ ತತ್ಪದಮ್ ॥೨೦॥

ಆ ಪರಬ್ರಹ್ಮವಸ್ತುವು ಚರ್ಮಚಕ್ಷುಸ್ಸಿಗೆ ಕಾಣುವುದಿಲ್ಲ. ಅವನನ್ನು ಕಾಣುವ ಉಪಾಯವು ಸಾಮಾನ್ಯರಿಗೆ ತಿಳಿಯದು. ಅದಲ್ಲದೇ ಜನರು ಸಾಮಾನ್ಯವಾಗಿ ಫಲಾಭಿಸಂಧಿಯಿಂದಲೇ ಕರ್ಮಗಳನ್ನು ಮಾಡುತ್ತಾರೆ. ಈ ಕಾರಣಗಳಿಂದ ಮನುಷ್ಯರು ಆ ಪರಮಪದವನ್ನು ಹೊಂದುವ ದಾರಿಯನ್ನು ತಿಳಿಯದವರಾಗಿದ್ದಾರೆ.

ವಿಷಯೇಷು ಚ ಸಂಸರ್ಗಾಚ್ಛಾಶ್ವತಸ್ಯ ಚ ದರ್ಶನಾತ್ ।
ಮನಸಾ ಚಾನ್ಯದಾಕಾಂಕ್ಷನ್ಪರಂ ನ ಪ್ರತಿಪದ್ಯತೇ ॥೨೧॥

ಮನುಷ್ಯರಿಗೆ ವಿಷಯಸುಖಗಳಲ್ಲಿಯೇ ಆಸಕ್ತಿಯು ಹೆಚ್ಚಾಗಿರುವುದ ರಿಂದಲೂ, ವಿಷಯಸುಖಗಳೇ ಶಾಶ್ವತವೆಂದು ನಿಶ್ಚಯಿಸಿಕೊಂಡಿರುವುದ ರಿಂದಲೂ, ಮನಸ್ಸಿನಲ್ಲಿ ಯಾವಾಗಲೂ ಪರಬ್ರಹ್ಮವಸ್ತುವೊಂದನ್ನು ಬಿಟ್ಟು ಉಳಿದುವುಗಳನ್ನೇ ಅಪೇಕ್ಷಿಸುವುದರಿಂದಲೂ–ಪರಮಶ್ರೇಷ್ಠನಾದ ಪರಬ್ರಹ್ಮ ಪರಮಾತ್ಮನನ್ನು ಅಂತಹ ಮಾನವನು ಹೊಂದುವುದಿಲ್ಲ.

ಗುಣಾನ್ಯದಿಹ ಪಶ್ಯನ್ತಿ ತದಿಚ್ಛನ್ತ್ಯಪರೇ ಜನಾಃ ।
ಪರಂ ನೈವಾಭಿಕಾಂಕ್ಷನ್ತಿ ನಿರ್ಗುಣತ್ವಾದ್ಗುಣಾರ್ಥಿನಃ ॥೨೨॥

ಸಂಸಾರಿಗಳಾದ ಮನುಷ್ಯರು ಈ ಪ್ರಪಂಚದಲ್ಲಿ ಯಾವ ಯಾವ ವಿಷಯಗಳನ್ನು (ಇಂದ್ರಿಯಗಳಿಗೆ ಸಂತೋಷವನ್ನುಂಟುಮಾಡುವ ವಸ್ತು ಗಳನ್ನು) ನೋಡುವರೋ – ಅವುಗಳನ್ನೇ ಪಡೆದುಕೊಳ್ಳಲು ಅಪೇಕ್ಷಿಸು ತ್ತಾರೆ. ಅದೇ ರೀತಿಯಲ್ಲಿ ಅವರು ಪರಬ್ರಹ್ಮಪರಮಾತ್ಮನನ್ನು ಪಡೆದು ಕೊಳ್ಳಲು ಇಚ್ಛಿಪಡುವುದಿಲ್ಲ. ಏಕೆಂದರೆ : ಮಾನವರು ಸಾಮಾನ್ಯವಾಗಿ ಗುಣಾರ್ಥಿಗಳಾಗಿರುತ್ತಾರೆ (ವಿಷಯಾಭಿಲಾಷಿಗಳಾಗಿರುತ್ತಾರೆ). ಪರಬ್ರಹ್ಮ ಪರಮಾತ್ಮನು ಗುಣಾತೀತನಾಗಿರುತ್ತಾನೆ.

ಗುಣೈರ್ಯಸ್ತ್ವವರೈರ್ಯುಕ್ತಃ ಕಥಂ ವಿದ್ಯಾತ್ಪರಾನ್ಗುಣಾನ್ ।
ಅನುಮಾನಾದ್ಧಿ ಗನ್ತವ್ಯಂ ಗುಣೈರವಯವೈಃ ಪರಮ್ ॥೨೩॥

ತುಚ್ಛವಾದ ಇಂದ್ರಿಯಗುಣಗಳಿಂದಲೇ ಯುಕ್ತನಾದವನು ಪರಬ್ರಹ್ಮ

ಪರಮಾತ್ಮನ ಶ್ರೇಷ್ಠವಾದ ಗುಣಗಳನ್ನು ಹೇಗೆ ತಾನೇ ತಿಳಿದುಕೊಳ್ಳುವನು? ಹೊಗೆಯಿಂದ ಅಗ್ನಿಯಿರುವುದೆಂಬುದನ್ನು ಅನುಮಾನದಿಂದ ತಿಳಿದುಕೊಳ್ಳು ವಂತೆ–ಅವಯವವಾದ ದಿವ್ಯಗುಣಗಳ ಮೂಲಕವಾಗಿ ಶ್ರೇಷ್ಠನಾದ ಪರಬ್ರಹ್ಮ ಪರಮಾತ್ಮನನ್ನು ತರ್ಕದಿಂದ ತಿಳಿದುಕೊಳ್ಳಬೇಕು.

(ಪರ್ವತದಲ್ಲಿ ಹೊಗೆಯನ್ನು ನೋಡಿ ಹೊಗೆಗೆ ಕಾರಣವಾದ ಬೆಂಕಿ ಇರಲೇಬೇಕು – ಎಂದು ಅನುಮಾನಪ್ರಮಾಣದಿಂದ ತಿಳಿಯುತ್ತೇವೆ. ಹಾಗೆಯೇ ಲೋಕದಲ್ಲಿ ದಿವ್ಯಗುಣಗಳ ಆವಿರ್ಭಾವವು ಅಲ್ಲಲ್ಲಿ ಖಂಡ-ಖಂಡವಾಗಿ ಕಂಡುಬರುತ್ತದೆ. ಆ ಎಲ್ಲ ದಿವ್ಯಗುಣಗಳಿಗೂ ಆಶ್ರಯನಾದ ಅನಂತಕಲ್ಯಾಣಗುಣಪರಿಪೂರ್ಣನೊಬ್ಬನು ಇರಲೇಬೇಕು. ಅವನೇ ಪರ ಮಾತ್ಮಾ–ಎಂದು ಅನುಮಾನಪ್ರಮಾಣದಿಂದ ಮೊದಲಿಗೆ ತಿಳಿಯಬೇಕು.)

ಸೂಕ್ಷ್ಮೇಣ ಮನಸಾ ವಿದ್ಮೋ ವಾಚಾ ವಕ್ತುಂ ನ ಶಕ್ನುಮಃ ।
ಮನೋ ಹಿ ಮನಸಾ ಗ್ರಾಹ್ಯಂ ದರ್ಶನೇನ ಚ ದರ್ಶನಮ್ ॥೨೪॥

ನಾವು ಧ್ಯಾನಯೋಗದಿಂದ ಶುದ್ಧವಾದ ಸೂಕ್ಷ್ಮಮನಸ್ಸಿನಿಂದ ಪರ ಮಾತ್ಮನ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳಬಹುದಾಗಿದೆ. ಆದರೆ ಅದನ್ನು ಮಾತಿನಿಂದ ವರ್ಣಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ : ಮನಸ್ಸನ್ನು ಮನಸ್ಸಿನಿಂದಲೇ ತಿಳಿಯಬೇಕು. ದರ್ಶನವನ್ನು ದರ್ಶನದಿಂದಲೇ ತಿಳಿಯ ಬೇಕು. ಹಾಗೆಯೇ ಜ್ಞಾನಸ್ವರೂಪವಾದ ಬ್ರಹ್ಮವನ್ನು ಶುದ್ಧವಾದ ಜ್ಞಾನ ದಿಂದಲೇ ತಿಳಿಯಬೇಕು.

ಜ್ಞಾನೇನ ನಿರ್ಮಲೀಕೃತ್ಯ ಬುದ್ಧಿಂ ಬುದ್ಧ್ಯಾ ಮನಸ್ತಥಾ ।
ಮನಸಾ ಚೇನ್ದ್ರಿಯಗ್ರಾಮಮಕ್ಷರಂ ಪ್ರತಿಪದ್ಯತೇ ॥೨೫॥

ಜ್ಞಾನದ ಮೂಲಕವಾಗಿ ಜ್ಞೇಯವನ್ನು ತಿಳಿದುಕೊಳ್ಳುವುದೆಂದರೆ ಜ್ಞಾನದಿಂದ (ಶಾಸ್ತ್ರಜ್ಞಾನದಿಂದ) ಬುದ್ಧಿಯನ್ನು ನಿರ್ಮಲಗೊಳಿಸಬೇಕು. ಬುದ್ಧಿಯಿಂದ ಮನಸ್ಸನ್ನು ನಿರ್ಮಲಗೊಳಿಸಬೇಕು. ಮನಸ್ಸಿನಿಂದ ಇಂದ್ರಿಯ ಗಳ ಸಮೂಹವನ್ನು ನಿರ್ಮಲಗೊಳಿಸಬೇಕು. ಹೀಗೆ ಮಾಡುವುದರಿಂದ ಅಕ್ಷರನಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಬುದ್ಧಿಪ್ರವೀಣೋ ಮನಸಾ ಸಮೃದ್ಧೋ
ನಿರಾಶಿಷಂ ನಿರ್ಗುಣಮಭ್ಯುಪೈತಿ ।
ಪರಂ ತ್ಯಜನ್ತೀಹ ವಿಲೋಡ್ಯಮಾನಾ
ಹುತಾಶನಂ ವಾಯುರಿವೇನ್ಧನಸ್ಥಮ್ ॥೨೬॥

ಬುದ್ಧಿಪ್ರವೀಣನಾದ (ವಿಶುದ್ಧವಾದ ಬುದ್ಧಿಯನ್ನು ಹೊಂದಿರುವ) ಮನೋಬಲಯುಕ್ತನಾದ ಪುರುಷನು ಸಮಸ್ತವಾದ ಇಚ್ಛೆಗಳಿಗೂ ಅತೀತನಾದ, ನಿರ್ಗುಣನಾದ ಪರಬ್ರಹ್ಮಪರಮಾತ್ಮನನ್ನು ಸೇರುತ್ತಾನೆ. ಯಾವ ರೀತಿಯಲ್ಲಿ ವಾಯುವು ಸೌದೆಯಲ್ಲಿರುವ ಅದೃಶ್ಯವಾದ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡಲು ಅಸಮರ್ಥವಾಗಿ ಹೊರಟುಹೋಗುವುದೋ – ಅದೇ ರೀತಿಯಲ್ಲಿ ಇಂದ್ರಿಯಾರ್ಥಗಳಿಂದ ಅಲ್ಲೋಲ-ಕಲ್ಲೋಲವಾದ ಮನಸ್ಸುಳ್ಳ ಜನರು ತಮ್ಮ ಶರೀರದಲ್ಲಿರುವ ಪರಮಾತ್ಮನನ್ನು ತಿಳಿದುಕೊಳ್ಳಲು ಅಸಮರ್ಥರಾಗಿ ಪರಿತ್ಯಜಿಸುತ್ತಾರೆ. (ಆತ್ಮತತ್ತ್ವದ ಕಡೆಗೆ ತಿರುಗುವುದೂ ಇಲ್ಲ. ಆತ್ಮಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸುವುದೂ ಇಲ್ಲ.)

ಗುಣಾದಾನೇ ವಿಪ್ರಯೋಗೇ ಚ ತೇಷಾಂ
ಮನಃ ಸದಾ ಬುದ್ಧಿಪರಾವರಾಭ್ಯಾಮ್ ।
ಅನೇನೈವ ವಿಧಿನಾ ಸಮ್ಪ್ರವೃತ್ತೋ
ಗುಣಾಪಾಯೇ ಬ್ರಹ್ಮ ಶರೀರಮೇತಿ ॥೨೭॥

ಸಾಧಕನು ಯಾವಾಗ ಸಾಧನರೂಪವಾದ ಗುಣಗಳಿಂದ ಸಂಪನ್ನನಾಗುವನೋ ಮತ್ತು ಸಾಂಸಾರಿಕವಾದ ವಸ್ತುಗಳಿಂದ ಅಥವಾ ಇಂದ್ರಿಯಗಳ ಸುಖಕ್ಕೆ ಸಂಬಂಧಿಸಿದ ವಸ್ತುಗಳಿಂದ ಮನಸ್ಸನ್ನು ಹಿಂದಕ್ಕೆ ತೆಗೆದುಕೊಳ್ಳುವನೋ – ಆಗ ಅವನ ಮನಸ್ಸು ಬುದ್ಧಿಜನ್ಯವಾದ ದ್ವಂದ್ವಗಳಿಂದ ಶೂನ್ಯವಾಗಿ ಪರಿಶುದ್ಧವಾಗುತ್ತದೆ. ಈ ವಿಧವಾದ ಸಾಧನೆಗಳಲ್ಲಿ ನಿರತನಾದ ಸಾಧಕನು ಗುಣಾತೀತನಾಗುತ್ತಾನೆ ಮತ್ತು ಒಡನೆಯೇ ನಿರ್ಗುಣನಾದ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಅವ್ಯಕ್ತಾತ್ಮಾ ಪುರುಷೋ ವ್ಯಕ್ತಕರ್ಮಾ
ಸೋಽವ್ಯಕ್ತತ್ವಂ ಗಚ್ಛತಿ ಹ್ಯನ್ತಕಾಲೇ ।

ತೈರೇವಾಯಂ ಚೇನ್ದ್ರಿಯೈರ್ವರ್ಧಮಾನೈ-
ರ್ಗ್ಲಾಯದ್ಭಿರ್ವಾವರ್ತತೇ ಕಾಮರೂಪಃ ॥೨೮॥

ಪುರುಷನ ಆತ್ಮವು ಅವ್ಯಕ್ತವಾಗಿದೆ. ಅವನ ಕರ್ಮವು ಮಾತ್ರ ವ್ಯಕ್ತವಾಗುತ್ತದೆ. ಅಂತ್ಯಕಾಲದಲ್ಲಿ ಅವನು ಮತ್ತೆ ಅವ್ಯಕ್ತಭಾವವನ್ನು ಹೊಂದುತ್ತಾನೆ. ಇಂದ್ರಿಯಗಳೂ ವೃದ್ಧಿ-ಕ್ಷಯಗಳನ್ನು ಹೊಂದುತ್ತಲೇ ಇರುತ್ತವೆ. ಅವನು ಕಾಮರೂಪಿಯಾದಾಗ ಸಂಸಾರಕ್ಕೆ ಮತ್ತೆ ಮತ್ತೆ ಹಿಂದಿರುಗುತ್ತಾನೆ.

ಸರ್ವೈರಯಂ ಚೇನ್ದ್ರಿಯೈಃ ಸಮ್ಪ್ರಯುಕ್ತೋ
ದೇಹಂ ಪ್ರಾಪ್ತಃ ಪಞ್ಚಭೂತಾಶ್ರಯಃ ಸ್ಯಾತ್ ।
ನಾಸಾಮರ್ಥ್ಯಾದ್ಗಚ್ಛತಿ ಕರ್ಮಣೇಹ
ಹೀನಸ್ತೇನ ಪರಮೇಣಾವ್ಯಯೇನ ॥೨೯॥

ಎಲ್ಲ ಜ್ಞಾನೇಂದ್ರಿಯಗಳಿಂದಲೂ ಕೂಡಿ ಅನ್ಯದೇಹವನ್ನು ಆಶ್ರಯಿಸಿದ ಜೀವನು ಆ ದೇಹದಲ್ಲಿರುವ ಪಂಚಭೂತಗಳ ರೂಪದಲ್ಲಿರುವ ಕರ್ಮೇಂದ್ರಿಯಗಳನ್ನು ಆಶ್ರಯಿಸಿರುತ್ತಾನೆ. ಜ್ಞಾನ ಮತ್ತು ಉಪಾಸನೆಗಳನ್ನು ಬಿಟ್ಟು ಕೇವಲ ಕಾಮ್ಯಕರ್ಮಗಳಿಂದ ಪರಮಾತ್ಮಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಕಾಮ್ಯಕರ್ಮಗಳಲ್ಲಿಯೇ ಆಸಕ್ತನಾದವನು ಅವ್ಯಯನಾದ ಶ್ರೇಷ್ಠನಾದ ಪರಬ್ರಹ್ಮಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವಿಕೆಯಿಂದ ವಂಚಿತನಾಗುತ್ತಾನೆ.

ಪೃಥ್ವ್ಯಾಂ ನರಃ ಪಶ್ಯತಿ ನಾನ್ತಮಸ್ಯಾ
ಹ್ಯನ್ತಶ್ಚಾಸ್ಯಾ ಭವಿತಾ ಚೇತಿ ವಿದ್ಧಿ ।
ಪರಂ ನಯನ್ತೀಹ ವಿಲೋಡ್ಯಮಾನಂ
ಯಥಾ ಪ್ಲವಂ ವಾಯುರಿವಾರ್ಣವಸ್ಥಮ್ ॥೩೦॥

ಭೂಮಿಯಲ್ಲಿರುವ ಮನುಷ್ಯನು ಭೂಮಿಯ ಅಂತವನ್ನು ಕಾಣದಿದ್ದರೂ ಭೂಮಿಗೆ ಅವಶ್ಯವಾಗಿ ಒಂದು ಅಂತವಿದ್ದೇ ಇರುವುದೆಂಬುದನ್ನು ತಿಳಿದುಕೊ. ವಾಯುವು ಸಮುದ್ರದಲ್ಲಿರುವ ಅಲೆಗಳಿಂದ ಮೇರೆದಪ್ಪಿ ಹೋಗುತ್ತಿರುವ ದೋಣಿಯನ್ನು ತೀರಕ್ಕೆ ಒಯ್ಯುವಂತೆ–ಆದಿ ಮತ್ತು ಅಂತ್ಯ

ಗಳೆಂಬ ಗುಣದಿಂದ ಕೂಡಿರುವ ಭೂಮಿಯಲ್ಲಿ ತೊಳಲುತ್ತಿರುವ ಜೀವರನ್ನು ಜ್ಞಾನಿಗಳು ಪಾರುಮಾಡುತ್ತಾರೆ.

ದಿವಾಕರೋ ಗುಣಮುಪಲಭ್ಯ ನಿರ್ಗುಣೋ
ಯಥಾ ಭವೇದಪಗತರಶ್ಮಿಮಣ್ಡಲಃ ।
ತಥಾ ಹ್ಯಸೌ ಮುನಿರಿಹ ನಿರ್ವಿಶೇಷವಾ-
ನ್ಸ ನಿರ್ಗುಣಂ ಪ್ರವಿಶತಿ ಬ್ರಹ್ಮ ಚಾವ್ಯಯಮ್ ॥೩೧॥

ಸೂರ್ಯನು ಯಾವ ರೀತಿಯಲ್ಲಿ ಉದಯಿಸಿದೊಡನೆಯೇ ರಶ್ಮಿಗಳೆಂಬ ಗುಣವನ್ನು ಹೊಂದಿ ಸಂಪೂರ್ಣವಾದ ಜಗತ್ತನ್ನು ಪ್ರಕಾಶಗೊಳಿಸುತ್ತಾ ಸಾಯಂಕಾಲವಾಗುತ್ತಲೇ ಕಿರಣಮಂಡಲವನ್ನು ಉಪಸಂಹರಿಸಿಕೊಂಡು ನಿರ್ಗುಣನಾಗುತ್ತಾನೆಯೋ–ಅದೇ ರೀತಿಯಲ್ಲಿ ಜ್ಞಾನಯೋಗನಿಷ್ಠನಾದ ಮುನಿಯೂ ವಿಶೇಷಗಳನ್ನು ಕಳೆದುಕೊಂಡು ನಿರ್ಗುಣನಾಗಿ ಅವಿನಾಶಿಯಾದ ನಿರ್ಗುಣನಾದ ಪರಬ್ರಹ್ಮಪರಮಾತ್ಮನನ್ನು ಪ್ರವೇಶಿಸುತ್ತಾನೆ.

ಅನಾಗತಂ ಸುಕೃತವತಾಂ ಪರಾಂ ಗತಿಂ
ಸ್ವಯಮ್ಭುವಂ ಪ್ರಭವನಿಧಾನಮವ್ಯಯಮ್ ।
ಸನಾತನಂ ಯದಮೃತಮವ್ಯಯಂ ಧ್ರುವಂ
ನಿಚಾಯ್ಯ ತತ್ಪರಮಮೃತತ್ವಮಶ್ನುತೇ ॥೩೨॥

ಯಾವುದು ಹುಟ್ಟೇ ಇಲ್ಲದ್ದಾಗಿ ಪುಣ್ಯವಂತರಿಗೆ ಪರಮಗತಿಯಾಗಿದೆಯೋ–ಸ್ವಯಂಜಾತವಾಗಿ ಎಲ್ಲದರ ಸೃಷ್ಟಿ-ಲಯಗಳಿಗೆ ಕಾರಣವಾಗಿದೆಯೋ–ಅವಿಕಾರಿಯಾಗಿದೆಯೋ–ಅಂತಹ ಸನಾತನವೂ, ಅಮೃತವೂ, ಅವ್ಯಯವೂ, ಶಾಶ್ವತವೂ ಆಗಿರುವ ಪರಬ್ರಹ್ಮನನ್ನು ನಿಶ್ಚಯಜ್ಞಾನದಿಂದ ತಿಳಿದು ಜ್ಞಾನಿಯು ಅಮೃತತತ್ತ್ವವನ್ನು ಪಡೆಯುತ್ತಾನೆ.”

೨೦೩ನೆಯ ಅಧ್ಯಾಯವು ಮುಗಿಯಿತು.

೨೦೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶ್ರೀಕೃಷ್ಣನಿಂದಲೇ ಆಗಿರುವ ಸಂಪೂರ್ಣವಾದ ಪ್ರಾಣಿಗಳ ಉತ್ಪತ್ತಿಯ ಮತ್ತು ಕೃಷ್ಣನ ಮಹಿಮೆಯ ವರ್ಣನೆ

ಯುಧಿಷ್ಠಿರನು ಹೇಳುತ್ತಾನೆ :

ಪಿತಾಮಹ ಮಹಾಪ್ರಾಜ್ಞ ಪುಣ್ಡರೀಕಾಕ್ಷಮಚ್ಯುತಮ್ ।
ಕರ್ತಾರಮಕೃತಂ ವಿಷ್ಣುಂ ಭೂತಾನಾಂ ಪ್ರಭವಾಪ್ಯಯಮ್ ॥೧॥

ನಾರಾಯಣಂ ಹೃಷೀಕೇಶಂ ಗೋವಿನ್ದಮಪರಾಜಿತಮ್ ।
ತತ್ತ್ವೇನ ಭರತಶ್ರೇಷ್ಠ ಶ್ರೋತುಮಿಚ್ಛಾಮಿ ಕೇಶವಮ್ ॥೨॥

"ಭರತಶ್ರೇಷ್ಠನೇ! ಪಿತಾಮಹನೇ! ಮಹಾಪ್ರಾಜ್ಞನೇ! ಕಮಲದಂತೆ ಕಣ್ಣುಗಳುಳ್ಳ, ತನ್ನ ಸ್ಥಾನದಿಂದ ಯಾವಾಗಲೂ ಚ್ಯುತನಾಗದ, ಎಲ್ಲವನ್ನೂ ಮಾಡಿಯೂ ಯಾವುದನ್ನೂ ಮಾಡದಂತೆಯೇ ಇರುವ (ನಿತ್ಯಸಿದ್ಧನಾದ), ಸರ್ವತ್ರ ವ್ಯಾಪಕನಾದ, ಎಲ್ಲ ಪ್ರಾಣಿಗಳ ಉತ್ಪತ್ತಿಗೂ-ಲಯಕ್ಕೂ ಕಾರಣನಾದ, ನರರಿಗೆ ಏಕಮಾತ್ರ ಗತಿಯಾಗಿರುವ ಜ್ಞಾನೇಂದ್ರಿಯಗಳಿಗೆ ಸ್ವಾಮಿಯಾದ, ಇಂದ್ರನಿಂದ ಗೋವಿಂದನೆಂಬ ಹೆಸರನ್ನು ಪಡೆದಿರುವ, ಸೋಲೆಂಬುದನ್ನೇ ಕಾಣದ ಶ್ರೀಕೇಶವನ ನಿಜಸ್ವರೂಪವನ್ನು ಯಥಾರ್ಥವಾಗಿ ಕೇಳಬೇಕೆಂದಿರುತ್ತೇನೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ನಾನು ಈ ವಿಷಯವನ್ನು (ಶ್ರೀಕೃಷ್ಣನ ನಿಜಸ್ವರೂಪವೇನೆಂಬುದನ್ನು) ಜಮದಗ್ನಿಯ ಮಗನಾದ ಭಗವಾನ್ ಪರಶುರಾಮನ ಬಾಯಿಂದಲೂ, ದೇವರ್ಷಿಗಳಾದ ನಾರದರ ಬಾಯಿಂದಲೂ ಮತ್ತು ಕೃಷ್ಣದ್ವೈಪಾಯನರ ಬಾಯಿಂದಲೂ ಕೇಳಿದ್ದೇನೆ. ಅಸಿತರು, ದೇವಲರು, ಮಹಾತಪಸ್ವಿಗಳಾದ ವಾಲ್ಮೀಕಿಗಳು, ಮಹರ್ಷಿಗಳಾದ ಮಾರ್ಕಂಡೇಯರು– ಇವರೆಲ್ಲರೂ ಶ್ರೀಗೋವಿಂದನಿಗೆ ಸಂಬಂಧಿಸಿದಂತೆ ಅದ್ಭುತವಾದ ವಿಷಯಗಳನ್ನೇ ಹೇಳಿರುತ್ತಾರೆ.

ಕೇಶವೋ ಭರತಶ್ರೇಷ್ಠ ಭಗವಾನೀಶ್ವರಃ ಪ್ರಭುಃ ।
ಪುರುಷಃ ಸರ್ವಮಿತ್ಯೇವ ಶ್ರೂಯತೇ ಬಹುಧಾ ವಿಭುಃ ॥೫॥

ಭರತಶ್ರೇಷ್ಠನೇ! ಭಗವಾನ್ ಶ್ರೀಕೃಷ್ಣನು ಎಲ್ಲರಿಗೂ ಪ್ರಭುವೂ ಈಶ್ವರನೂ ಆಗಿರುತ್ತಾನೆ. ಸರ್ವವ್ಯಾಪಕನಾದ ಆತನೇ ವೇದಪ್ರತಿಪಾದ್ಯನಾದ ಪುರುಷನು. ಅವನೇ ಸರ್ವವೂ ಆಗಿದ್ದಾನೆ. 'ಪುರುಷ ಏವೇದಗ್ಂ ಸರ್ವಂ'–ಮುಂತಾದ ವಾಕ್ಯಗಳನ್ನು ನಾವು ವೇದಗಳಲ್ಲಿ ಬಹಳವಾಗಿ ಕೇಳುತ್ತೇವೆ.

ಮಹಾಬಾಹುವೇ! ಯುಧಿಷ್ಠಿರ! ಲೋಕದಲ್ಲಿರುವ ಬ್ರಾಹ್ಮಣರು ಶಾರ್ಙ್ಗಧನ್ವನಾದ ಶ್ರೀಕೃಷ್ಣನಲ್ಲಿ ಎಂತೆಂತಹ ಮಾಹಾತ್ಮ್ಯಗಳಿರುವುವೆಂಬುದನ್ನು ತಿಳಿದಿರುವರೋ–ಆ ಮಾಹಾತ್ಮ್ಯಗಳೆಲ್ಲವನ್ನೂ ನಾನೂ ನಿನಗೆ ತಿಳಿಸುವೆನು, ಕೇಳು. ಪುರಾಣಗಳನ್ನು ತಿಳಿದಿರುವ ವಿದ್ವಾಂಸರು ಗೋವಿಂದನ ಯಾವ ಯಾವ ಲೀಲೆಗಳನ್ನೂ ಮತ್ತು ಚರಿತ್ರೆಗಳನ್ನೂ ವರ್ಣಿಸಿರುವರೋ–ಅವೆಲ್ಲವನ್ನೂ ನಿನಗೆ ಹೇಳುತ್ತೇನೆ.

ಮಹಾಭೂತಾನಿ ಭೂತಾತ್ಮಾ ಮಹಾತ್ಮಾ ಪುರುಷೋತ್ತಮಃ ।
ವಾಯುರ್ಜ್ಯೋತಿಸ್ತಥಾ ಚಾಪಃ ಖಂ ಚ ಗಾಂ ಚಾನ್ವಕಲ್ಪಯತ್ ॥

ಸರ್ವಪ್ರಾಣಿಗಳಿಗೂ ಆತ್ಮಸ್ವರೂಪನಾದ, ಮಹಾತ್ಮನಾದ, ಪುರುಷೋತ್ತಮನಾದ ಶ್ರೀಕೃಷ್ಣನು-ಆಕಾಶ, ವಾಯು, ಅಗ್ನಿ, ನೀರು ಮತ್ತು ಪೃಥ್ವಿಗಳೆಂಬ ಐದು ಮಹಾಭೂತಗಳನ್ನು ಸೃಷ್ಟಿಸಿದನು.

ಸರ್ವಭೂತೇಶ್ವರನಾದ, ಪ್ರಭುವಾದ, ಮಹಾತ್ಮನಾದ, ಪುರುಷೋತ್ತಮನು ಪೃಥ್ವಿಯನ್ನು ಸೃಷ್ಟಿಸಿ, ನೀರನ್ನೇ ತನ್ನ ನಿವಾಸಸ್ಥಾನವನ್ನಾಗಿ ಮಾಡಿಕೊಂಡನು. ನೀರಿನಲ್ಲಿ ಪವಡಿಸಿದ್ದ, ಸರ್ವತೇಜೋಮಯನಾದ, ಪುರುಷೋತ್ತಮನಾದ ಶ್ರೀಕೃಷ್ಣನು–ಎಲ್ಲ ಪ್ರಾಣಿಗಳ ಅಗ್ರಜನಾದ ಮತ್ತು ಆಶ್ರಯನಾದ ಸಂಕರ್ಷಣನನ್ನು ಮನಸ್ಸಿನಿಂದಲೇ ಸೃಷ್ಟಿಸಿದನೆಂಬುದನ್ನು ನಾವೂ ಕೇಳಿದ್ದೇವೆ. ಆ ಸಂಕರ್ಷಣದೇವನೇ ಸಮಸ್ತಪ್ರಾಣಿಗಳನ್ನೂ ಧರಿಸಿರುತ್ತಾನೆ. ಹಾಗೆಯೇ ಅವನು ಭೂತ ಮತ್ತು ಭವಿಷ್ಯತ್ತುಗಳಿಗೂ ಆಧಾರಭೂತನಾಗಿರುತ್ತಾನೆ. ಮಹಾತ್ಮನಾದ, ಮಹಾಬಾಹು

ವಾದ ಸಂಕರ್ಷಣನು ಪ್ರಾದುರ್ಭೂತನಾದನಂತರ ಶ್ರೀಕೃಷ್ಣನ ನಾಭಿಯಿಂದ ದಿವ್ಯವಾದ, ಸೂರ್ಯಸದೃಶವಾದ ಒಂದು ಕಮಲವು ಹುಟ್ಟಿತು. ಸಮಸ್ತ ಪ್ರಾಣಿಗಳಿಗೂ ಪಿತಾಮಹನಾದ ದೇವಸ್ವರೂಪನಾದ ಭಗವಾನ್ ಬ್ರಹ್ಮನು ಎಲ್ಲ ದಿಕ್ಕುಗಳನ್ನೂ ತನ್ನ ದಿವ್ಯತೇಜಸ್ಸಿನಿಂದ ಪ್ರಕಾಶಗೊಳಿಸುತ್ತಾ ಆ ದಿವ್ಯಕಮಲದಿಂದ ಪ್ರಾದುರ್ಭವಿಸಿದನು. ಮಹಾಬಾಹುವಾದ, ಮಹಾತ್ಮ ನಾದ ಬ್ರಹ್ಮನು ಶ್ರೀಕೃಷ್ಣನ ನಾಭಿಕಮಲದಲ್ಲಿ ಪ್ರಾದುರ್ಭವಿಸಿದನಂತರ ಅಸುರರೆಲ್ಲರಿಗೂ ಪೂರ್ವಜನಾದ ಮಧುವೆಂಬ ಮಹಾಸುರನು ತಮೋ ಗುಣದಿಂದಲೇ ಹುಟ್ಟಿದನು. ಮಧುರಾಕ್ಷಸನ ಸ್ವಭಾವವು ಬಹಳ ಉಗ್ರ ವಾಗಿದ್ದಿತು. ಅವನು ಯಾವಾಗಲೂ ಭಯಂಕರವಾದ ಕಾರ್ಯಗಳನ್ನೇ ಮಾಡುತ್ತಿದ್ದನು. ಪುರುಷೋತ್ತಮನಾದ ಶ್ರೀಕೃಷ್ಣನು ಘೋರವಾದ ಕರ್ಮ ಗಳಲ್ಲಿಯೇ ಆಸ್ಥೆಯುಳ್ಳವನಾಗಿದ್ದ ಮಧುರಾಕ್ಷಸನನ್ನು ಬ್ರಹ್ಮನಿಗೆ ಹಿತ ವನ್ನುಂಟುಮಾಡುವ ಸಲುವಾಗಿ ಸಂಹರಿಸಿದನು.

ತಸ್ಯ ತಾತ ವಧಾತ್ಸರ್ವೇ ದೇವದಾನವಮಾನವಾಃ ।
ಮಧುಸೂದನಮಿತ್ಯಾಹುರ್ಋಷಭಂ ಸರ್ವಸಾತ್ವತಾಮ್ ॥೧೬॥

ಮಧುರಾಕ್ಷಸನನ್ನು ವಧಿಸಿದ ಕಾರಣ ದೇವ-ದಾನವ-ಮಾನವರು ಸಾತ್ವತಶ್ರೇಷ್ಠನಾದ ಶ್ರೀಕೃಷ್ಣನನ್ನು 'ಮಧುಸೂದನ' 'ಮಧುವೆಂಬ ರಾಕ್ಷಸನನ್ನು ಸಂಹಾರಮಾಡಿದವನು'–ಎಂಬ ಅನ್ವರ್ಥನಾಮದಿಂದಲೇ ಕರೆಯುತ್ತಾರೆ.

ಬ್ರಹ್ಮನು ದಕ್ಷನೇ ಮೊದಲಾದ ಏಳು ಮಂದಿ ಪುತ್ರರನ್ನು ಮನಸ್ಸಿ ನಿಂದಲೇ ಸೃಷ್ಟಿಸಿದನು. ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು ಮತ್ತು ದಕ್ಷ –ಇವರೇ ಬ್ರಹ್ಮನ ಸಪ್ತಮಾನಸಪುತ್ರರು. ಮರೀಚ್ಯಾದಿ ಪುತ್ರರಲ್ಲಿ ಅಗ್ರಜನಾದ ಮರೀಚಿಯು ತನ್ನ ಮನಸ್ಸಂಕಲ್ಪದಿಂದಲೇ ಬ್ರಹ್ಮ ವಿದರಲ್ಲಿ ಶ್ರೇಷ್ಠನಾದ, ತೇಜೋರಾಶಿಯಾಗಿದ್ದ ಕಶ್ಯಪನನ್ನು ಸೃಷ್ಟಿಸಿದನು. ಕಶ್ಯಪನೇ ಮರೀಚಿಯ ಹಿರಿಯ ಮಗನು. ಬ್ರಹ್ಮನು ಮರೀಚಿಗಿಂತಲೂ ಹಿರಿಯನಾದ ದಕ್ಷನನ್ನು ತನ್ನ ಅಂಗುಷ್ಠದಿಂದಲೇ ಸೃಷ್ಟಿಸಿದನು. ದಕ್ಷನು

ಪ್ರಜಾಪತಿಸ್ಥಾನದಲ್ಲಿ ನಿಯುಕ್ತನಾಗಿ ದಕ್ಷಪ್ರಜಾಪತಿ–ಎಂಬ ಹೆಸರಿನಿಂದಲೇ ಪ್ರಸಿದ್ಧನಾದನು. ದಕ್ಷಪ್ರಜಾಪತಿಗೆ ಮೊದಲು ಹದಿಮೂರು ಕನ್ಯೆಯರು ಹುಟ್ಟಿದರು. ಆ ಹದಿಮೂರು ಕನ್ಯೆಯರಲ್ಲಿ ದಿತಿ–ಎಂಬುವಳೇ ಮೊದಲನೆಯವಳು. ಸರ್ವಧರ್ಮಗಳ ವಿಶೇಷವನ್ನೂ (ರಹಸ್ಯವನ್ನೂ) ತಿಳಿದವನಾಗಿದ್ದ, ಪುಣ್ಯಕೀರ್ತಿಯಾದ, ಮಹಾಯಶೋವಂತನಾದ, ಮರೀಚಿಯ ಮಗನಾದ ಕಶ್ಯಪನು ದಕ್ಷನ ಹದಿಮೂರು ಕನ್ಯೆಯರಿಗೂ ಪತಿಯಾದನು. ಬಳಿಕ ಧರ್ಮಜ್ಞನಾದ ಮಹಾಭಾಗ್ಯಶಾಲಿಯಾದ ದಕ್ಷಪ್ರಜಾಪತಿಯು ಮುಂದೆ ತ್ರಯೋದಶಕನ್ಯೆಯರಿಗಿಂತಲೂ ಕಿರಿಯರಾದ ದಶಕನ್ಯೆಯರನ್ನು ಪಡೆದುಕೊಂಡು, ಆ ದಶಕನ್ಯೆಯರನ್ನೂ ಧರ್ಮನಿಗೆ ಕೊಟ್ಟು ವಿವಾಹ ಮಾಡಿದನು. ಧರ್ಮನಿಗೆ ವಸುಗಳು, ಮಹಾತೇಜಸ್ವಿಗಳಾದ ರುದ್ರರು, ವಿಶ್ವೇದೇವತೆಗಳು, ಸಾಧ್ಯರು ಮತ್ತು ಮರುತ್ವಂತರು ಮಕ್ಕಳಾಗಿ ಹುಟ್ಟಿದರು. ಹೀಗೆ ದಕ್ಷನಿಗೆ ಇಪ್ಪತ್ತಮೂರು ಕನ್ಯೆಯರು ಜನಿಸಿ ಅವರನ್ನು ದಕ್ಷನು ಕಶ್ಯಪನಿಗೂ ಧರ್ಮನಿಗೂ ಮದುವೆಮಾಡಿಕೊಟ್ಟನಂತರ–ದಕ್ಷಪ್ರಜಾಪತಿಯು ಪುನಃ ಇಪ್ಪತ್ತೇಳು ಕನ್ಯೆಯರನ್ನು ಪಡೆದುಕೊಂಡನು. ಮಹಾಭಾಗ್ಯಶಾಲಿಯಾದ ಸೋಮನು ದಕ್ಷನ ಆ ಇಪ್ಪತ್ತೇಳು ಕನ್ಯೆಯರಿಗೂ ಪತಿಯಾದನು. ಇತರ ಕಶ್ಯಪಪತ್ನಿಯರು ಗಂಧರ್ವರಿಗೂ, ಕುದುರೆಗಳಿಗೂ, ಪಕ್ಷಿಗಳಿಗೂ, ಹಸುಗಳಿಗೂ, ಕಿಂಪುರುಷರಿಗೂ, ಮೀನುಗಳಿಗೂ, ಗಿಡ-ಮರ-ಬಳ್ಳಿಗಳಿಗೂ, ಓಷಧಿ-ವನಸ್ಪತಿಗಳಿಗೂ ಜನ್ಮವನ್ನಿತ್ತರು. ಅದಿತಿಯು ಕಶ್ಯಪರಿಂದ ದೇವತೆಗಳಲ್ಲಿ ಶ್ರೇಷ್ಠರಾದ, ಮಹಾಬಲಿಷ್ಠರಾದ ಆದಿತ್ಯರನ್ನು ಪಡೆದಳು. ಆ ಆದಿತ್ಯರಲ್ಲಿ ಸರ್ವವ್ಯಾಪಿಯಾದ ಪ್ರಭುವಾದ ಈಗ ಗೋವಿಂದನೆಂದು ಕರೆಯಲ್ಪಡುತ್ತಿರುವ ಮಹಾವಿಷ್ಣುವು ಬಲಿಯ ದರ್ಪವಿನಾಶಕ್ಕಾಗಿ ವಾಮನನಾಗಿ ಅವತರಿಸಿದನು. ಅವನು ವಿಕ್ರಮದಿಂದ ತ್ರಿವಿಕ್ರಮಾವತಾರವನ್ನು ಮಾಡಿ ಎರಡು ಹೆಜ್ಜೆಗಳಿಂದ ಭೂಲೋಕವನ್ನೂ ಸ್ವರ್ಗಲೋಕವನ್ನೂ ಅಳೆದು ಮೂರನೆಯ ಹೆಜ್ಜೆಯಿಂದ ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ಮೆಟ್ಟಿದ ಕಾರಣದಿಂದ ದೇವತೆಗಳ ಸಂಪತ್ತು ವರ್ಧಿಸಿತು. ದಾನವರು ಪರಾಜಿತರಾದರು. ದೈತ್ಯಾಸುರ ಪ್ರಜೆಯೂ ಪರಾಜಯಹೊಂದಿತು. ದನುವೆಂಬ ದಕ್ಷಪುತ್ರಿಯು ಕಶ್ಯಪನಿಂದ ವಿಪ್ರಚಿತ್ತಿ ಪ್ರಮುಖರಾದ ದಾನವರನ್ನು ಮಕ್ಕಳನ್ನಾಗಿ ಪಡೆದುಕೊಂಡಳು. ದಿತಿಯು

ಮಹಾಬಲಯುಕ್ತರಾಗಿದ್ದ ಎಲ್ಲ ದೈತ್ಯರನ್ನೂ ಮಕ್ಕಳನ್ನಾಗಿ ಪಡೆದುಕೊಂಡಳು. ಮಧುಸೂದನನೇ ಹಗಲು-ರಾತ್ರಿಗಳನ್ನೂ, ಋತುಗಳಿಗೆ ಅನುಸಾರವಾಗಿ ಕಾಲಗಳನ್ನೂ, ಪೂರ್ವಾಹ್ಣ ಮತ್ತು ಅಪರಾಹ್ಣಗಳೇ ಮೊದಲಾದ ಕಾಲಗಳ ವಿಭಾಗವನ್ನೂ ವ್ಯವಸ್ಥೆಗೊಳಿಸಿದನು. ಮಧುಹಂತಕನಾದ ಶ್ರೀಕೃಷ್ಣನೇ ತನ್ನ ಮನಃಸಂಕಲ್ಪದಿಂದ ಮೇಘಗಳನ್ನೂ, ಸ್ಥಾವರ-ಜಂಗಮಪ್ರಾಣಿಗಳನ್ನೂ, ಸಮಸ್ತಪದಾರ್ಥಗಳಿಂದಲೂ ಸಂಪನ್ನವಾದ ಮಹಾತೇಜಸ್ಸಿನಿಂದಲೂ ಯುಕ್ತವಾದ ಅಖಂಡವಾದ ಭೂಮಿಯನ್ನೂ ಸೃಷ್ಟಿಸಿದನು.

ತತಃ ಕೃಷ್ಣೋ ಮಹಾಭಾಗಃ ಪುನರೇವ ಯುಧಿಷ್ಠಿರ ।
ಬ್ರಾಹ್ಮಣಾನಾಂ ಶತಂ ಶ್ರೇಷ್ಠಂ ಮುಖಾದೇವಾಸೃಜತ್ಪ್ರಭುಃ ॥೩೧॥

ಯುಧಿಷ್ಠಿರ! ಬಳಿಕ ಮಹಾಭಾಗ್ಯಶಾಲಿಯಾದ, ಪ್ರಭುವಾದ ಶ್ರೀಕೃಷ್ಣನು ನೂರು ಮಂದಿ ಬ್ರಾಹ್ಮಣಶ್ರೇಷ್ಠರನ್ನು ಮುಖದಿಂದಲೇ ಸೃಷ್ಟಿಸಿದನು.

ಬಾಹುಭ್ಯಾಂ ಕ್ಷತ್ರಿಯಶತಂ ವೈಶ್ಯಾನಾಮೂರುತಃ ಶತಮ್ ।
ಪದ್ಭ್ಯಾಂ ಶೂದ್ರಶತಂ ಚೈವ ಕೇಶವೋ ಭರತರ್ಷಭ ॥೩೨॥

ಭರತಶ್ರೇಷ್ಠನೇ! ಕೇಶವನು ತನ್ನ ತೋಳುಗಳಿಂದ ನೂರು ಮಂದಿ ಕ್ಷತ್ರಿಯರನ್ನೂ, ತೊಡೆಗಳಿಂದ ನೂರು ಮಂದಿ ವೈಶ್ಯರನ್ನೂ, ಕಾಲುಗಳಿಂದ ನೂರು ಮಂದಿ ಶೂದ್ರರನ್ನೂ ಸೃಷ್ಟಿಸಿದನು. ಮಹಾತಪಸ್ವಿಯಾದ ಶ್ರೀಕೃಷ್ಣನು ಹೀಗೆ ನಾಲ್ಕು ವರ್ಣಗಳನ್ನೂ ಸೃಷ್ಟಿಸಿ ಅನಂತರ ಎಲ್ಲ ಪ್ರಾಣಿಗಳಿಗೂ ಬ್ರಹ್ಮನನ್ನು ಅಧ್ಯಕ್ಷನನ್ನಾಗಿ ಮಾಡಿದನು. ವೇದವಿದ್ಯೆಯನ್ನು ಧಾರಣೆಮಾಡಿರುವ ಅಮಿತವಾದ ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದ ಬ್ರಹ್ಮನನ್ನು ಸರ್ವಭೂತಗಳಿಗೂ ಅಧ್ಯಕ್ಷನನ್ನಾಗಿ ಮಾಡಿದನಂತರ ಶ್ರೀಕೃಷ್ಣನು ಭೂತ ಗಳಿಗೂ ಮಾತೃಗಣಗಳಿಗೂ ಅಧ್ಯಕ್ಷನಾದ ವಿರೂಪಾಕ್ಷನನ್ನು ಸೃಷ್ಟಿಸಿದನು. (ವಿರೂಪಾಕ್ಷನನ್ನು ಸೃಷ್ಟಿಸಿ ಅವನನ್ನು ಭೂತಗಣಗಳಿಗೂ ಮಾತೃಗಣ ಗಳಿಗೂ ಅಧ್ಯಕ್ಷನನ್ನಾಗಿ ಮಾಡಿದನು.) ಬಳಿಕ ಸರ್ವಭೂತಾತ್ಮನಾದ ಶ್ರೀಹರಿಯು ಪಾಪಿಗಳನ್ನು ಶಾಸನಮಾಡುವ ಮತ್ತು ಪಿತೃಗಳಿಗೆ ಅಧಿಪತಿ

ಯಾದ ಯಮರಾಜನನ್ನೂ, ಸಂಪೂರ್ಣನಿಧಿಗಳಿಗೂ ಪಾಲಕನಾದ ಧನಾಧ್ಯಕ್ಷನಾದ ಕುಬೇರನನ್ನೂ ಸೃಷ್ಟಿಮಾಡಿದನು. (ಯಮನನ್ನು ಸೃಷ್ಟಿಸಿ ಅವನಿಗೆ ಪಾಪಿಗಳ ಶಾಸನಾಧಿಕಾರವನ್ನು ಕೊಟ್ಟು ಪಿತೃದೇವತೆಗಳ ಅಧ್ಯಕ್ಷನಾಗಿರುವಂತೆ ನಿಯಮನಮಾಡಿದನು. ಕುಬೇರನನ್ನು ಸೃಷ್ಟಿಸಿ ಅವನನ್ನು ಧನಗಳಿಗೆ ಅಧ್ಯಕ್ಷನನ್ನಾಗಿ ಮಾಡಿದನು.) ಬಳಿಕ ಶ್ರೀಕೃಷ್ಣನು ಜಲಜಂತುಗಳಿಗೆ ಸ್ವಾಮಿಯಾದ, ಜಲೇಶ್ವರನಾದ ವರುಣನನ್ನು ಸೃಷ್ಟಿಸಿದನು. (ವರುಣನನ್ನು ಸೃಷ್ಟಿಸಿ ಅವನನ್ನು ಜಲಜಂತುಗಳಿಗೂ ಮತ್ತು ನೀರಿಗೂ ಅಧಿಪತಿಯನ್ನಾಗಿ ಮಾಡಿದನು.) ಪ್ರಭುವಾದ ಶ್ರೀಕೃಷ್ಣನು ವಾಸವನನ್ನು ಸೃಷ್ಟಿಸಿ ಅವನನ್ನು ಸರ್ವದೇವತೆಗಳಿಗೂ ಅಧ್ಯಕ್ಷನನ್ನಾಗಿ ಮಾಡಿದನು.

ಯಾವದ್ಯಾವದಭೂಚ್ಛ್ರದ್ಧಾ ದೇಹಂ ಧಾರಯಿತುಂ ನೃಣಾಮ್ ।
ತಾವತ್ತಾವದಜೀವಂಸ್ತೇ ನಾಸೀದ್ಯಮಕೃತಂ ಭಯಮ್ ॥೩೭॥

ಹಿಂದೆ ಮನುಷ್ಯರಿಗೆ ಎಂದಿನವರೆಗೆ ದೇಹಧಾರಣೆ ಮಾಡಿಕೊಂಡಿರುವುದರಲ್ಲಿ ಶ್ರದ್ಧೆಯಿದ್ದಿತೋ–ಅಂದಿನವರೆಗೂ ಅವರು ಜೀವಿಸಿರುತ್ತಿದ್ದರು. ಅವರಿಗೆ ಯಮನ ಸಂಬಂಧವಾದ ಭಯವೇ ಇರಲಿಲ್ಲ.

ನ ಚೈಷಾಂ ಮೈಥುನೋ ಧರ್ಮೋ ಬಭೂವ ಭರತರ್ಷಭ ।
ಸಂಕಲ್ಪಾದೇವ ಚೈತೇಷಾಮಪತ್ಯಮುಪಪದ್ಯತೇ ॥೩೮॥

ಭರತರ್ಷಭನೇ! ಆಗಿನ ಕಾಲದಲ್ಲಿ ಯಾರಿಗೂ ಮೈಥುನಧರ್ಮದಲ್ಲಿ ಪ್ರವೃತ್ತಿಯೇ ಇರಲಿಲ್ಲ. ಸಂತಾನೋತ್ಪತ್ತಿಗಾಗಿ ಸ್ತ್ರೀ-ಪುರುಷರು ಸೇರಬೇಕೆಂಬುದಿರಲಿಲ್ಲ. ಸಂಕಲ್ಪಮಾತ್ರದಿಂದಲೇ ಅವರಿಗೆ ಸಂತಾನೋತ್ಪತ್ತಿಯಾಗುತ್ತಿದ್ದಿತು. (ಕೃತಯುಗದ ಅಥವಾ ಸತ್ಯಯುಗದ ವ್ಯವಸ್ಥೆಯು ಹೀಗಿದ್ದಿತು.)

ತತಸ್ತ್ರೇತಾಯುಗೇ ಕಾಲೇ ಸಂಸ್ಪರ್ಶಾಜ್ಜಾಯತೇ ಪ್ರಜಾ ।
ನ ಹ್ಯಭೂನ್ಮೈಥುನೋ ಧರ್ಮಸ್ತೇಷಾಮಪಿ ಜನಾಧಿಪ ॥೩೯॥

ಮುಂದೆ ತ್ರೇತಾಯುಗದಲ್ಲಿ ಸ್ಪರ್ಶಮಾತ್ರದಿಂದಲೇ ಸಂತಾನೋತ್ಪತ್ತಿಯಾಗುತ್ತಿದ್ದಿತು. ತ್ರೇತಾಯುಗದ ಜನರಲ್ಲಿಯೂ ಸಾಮಾನ್ಯವಾಗಿ ಮೈಥುನಧರ್ಮವಿರಲಿಲ್ಲ.

ದ್ವಾಪರೇ ಮೈಥುನೋ ಧರ್ಮಃ ಪ್ರಜಾನಾಮಭವನ್ನೃಪ ।
ತಥಾ ಕಲಿಯುಗೇ ರಾಜನ್ದ್ವನ್ದ್ವಮಾಪೇದಿರೇ ಜನಾಃ ॥೪೦॥

ಮಹಾರಾಜ! ದ್ವಾಪರಯುಗದಲ್ಲಿ ಪ್ರಜೆಗಳಿಗೆ ಮೈಥುನೇಚ್ಛೆಯುಂಟಾಯಿತು. ಸಂತಾನೋತ್ಪತ್ತಿಗೆ ಸ್ತ್ರೀ-ಪುರುಷರ ಸಮಾಗಮವು ಅವಶ್ಯಕವಾಯಿತು. ಕಲಿಯುಗದಲ್ಲಿಯೂ ಪ್ರಜೆಗಳು ಸಂತಾನೋತ್ಪತ್ತಿಗೆ ಮೈಥುನಧರ್ಮವನ್ನೇ ಆಶ್ರಯಿಸಿದರು.

ಏಷ ಭೂತಪತಿಸ್ತಾತ ಸ್ವಧ್ಯಕ್ಷಶ್ಚ ತಥೋಚ್ಯತೇ ।
ನಿರಪೇಕ್ಷಾಂಶ್ಚ ಕೌನ್ತೇಯ ಕೀರ್ತಯಿಷ್ಯಾಮಿ ತಚ್ಛೃಣು ॥೪೧॥

ಧರ್ಮಜ! ಈ ಶ್ರೀಕೃಷ್ಣನನ್ನೇ ಸರ್ವಪ್ರಾಣಿಗಳಿಗೂ ಒಡೆಯನೆಂದೂ ಅಧ್ಯಕ್ಷನೆಂದೂ ಹೇಳುತ್ತಾರೆ. ಇನ್ನು ಮುಂದೆ ನಾನು ನಿನಗೆ ಧರ್ಮದಲ್ಲಿ ಅಪೇಕ್ಷೆಯಿಲ್ಲದ ನಾಸ್ತಿಕರು ಯಾರೆಂಬುದನ್ನು ಹೇಳುವೆನು ; ಕೇಳು.

ದಕ್ಷಿಣಾಪಥಜನ್ಮಾನಃ ಸರ್ವೇ ನರವರಾನ್ಧ್ರಕಾಃ ।
ಗುಹಾಃ ಪುಲಿನ್ದಾಃ ಶಬರಾಶ್ಚೂಚುಕಾ ಮದ್ರಕೈಃ ಸಹ ॥೪೨॥

ನರಶ್ರೇಷ್ಠನೇ! ನರ್ಮದಾನದಿಗೆ ದಕ್ಷಿಣಭಾಗದಲ್ಲಿರುವ ಆಂಧ್ರಕರು, ಗುಹರು, ಪುಲಿಂದರು, ಶಬರರು, ಮದ್ರಕಸಹಿತರಾದ ಚೂಚುಕರು–ಇವರೆಲ್ಲರೂ ಮ್ಲೇಚ್ಛರು. ಯಾವಾಗಲೂ ಪಾಪಕಾರ್ಯಗಳಲ್ಲಿಯೇ ನಿರತರಾಗಿ ಈ ಭೂಮಿಯಲ್ಲಿ ಸಂಚರಿಸುತ್ತಿದ್ದಾರೆ.

ಇನ್ನು ಮುಂದೆ ನಾನು ನರ್ಮದಾನದಿಗೆ ಉತ್ತರದಿಕ್ಕಿನಲ್ಲಿ ಹುಟ್ಟಿರುವ ಪಾಪಕರ್ಮಿಗಳನ್ನು ತಿಳಿಸುತ್ತೇನೆ.

ಯೌನಕಾಮ್ಬೋಜಗಾನ್ಧಾರಾಃ ಕಿರಾತಾ ಬರ್ಬರೈಃ ಸಹ ।
ಏತೇ ಪಾಪಕೃತಸ್ತಾತ ಚರನ್ತಿ ಪೃಥಿವೀಮಿಮಾಮ್ ॥೪೩॥

ಯೌನ, ಕಾಂಬೋಜ, ಗಾಂಧಾರ, ಕಿರಾತ ಮತ್ತು ಬರ್ಬರರು ಪಾಪಕರ್ಮಗಳನ್ನೇ ಮಾಡುತ್ತಾ ಈ ಭೂಮಿಯಲ್ಲಿ ಸಂಚರಿಸುತ್ತಿರುತ್ತಾರೆ.

ಶ್ವಪಾಕಬಲಗೃಧ್ರಾಣಾಂ ಸಧರ್ಮಾಣೋ ನರಾಧಿಪ ।
ನೈತೇ ಕೃತಯುಗೇ ತಾತ ಚರನ್ತಿ ಪೃಥಿವೀಮಿಮಾಮ್ ॥೪೪॥

ಇವರೆಲ್ಲರೂ ಶ್ವಪಾಕರು (ನಾಯಿಯ ಮಾಂಸವನ್ನು ತಿನ್ನುವವರು),

ವಾಯಸ-ಗೃಧ್ರಗಳ ಧರ್ಮಕ್ಕೆ ಸಮಾನವಾದ ಧರ್ಮವುಳ್ಳವರಾಗಿರುತ್ತಾರೆ. ಕೃತಯುಗದಲ್ಲಿ ಅಥವಾ ಸತ್ಯಯುಗದಲ್ಲಿ ಭೂಮಿಯ ಮೇಲೆ ಇವರ ಸಂಚಾರವಿರಲಿಲ್ಲ. ತ್ರೇತಾಯುಗವು ಪ್ರಾರಂಭವಾಗುತ್ತಲೇ ಇಂತಹ ಜನರ ಪ್ರಾದುರ್ಭಾವವಾಯಿತು. ಅಲ್ಲಿಂದ ಮುಂದೆ ತ್ರೇತಾ-ದ್ವಾಪರಗಳ ಸಂಧಿ ಕಾಲದಲ್ಲಿ ಇಂತಹವರ ಸಂಖ್ಯೆಯೇ ಹೆಚ್ಚಾಗತೊಡಗಿತು. ದ್ವಾಪರಾಂತ್ಯದಲ್ಲಿ ಮಹಾಘೋರವಾದ ಸಂಧ್ಯಾಕಾಲವು ಉಪಸ್ಥಿತವಾಗಲಾಗಿ ರಾಜರು ಪರಸ್ಪರ ವಾಗಿ ಎದುರು-ಬದುರಾಗಿ ನಿಂತು ಯುದ್ಧಮಾಡಲು ಸನ್ನದ್ಧರಾದರು. ಹೀಗೆ ನಾನು ಹೇಳಿದ ರೀತಿಯಲ್ಲಿ ಈ ವಿಶ್ವವು ಮಹಾತ್ಮನಾದ ಶ್ರೀಕೃಷ್ಣನಿಂದ ಪ್ರಾದುರ್ಭವಿಸಿತು. ಸಂಪೂರ್ಣಜಗತ್ತನ್ನೂ ಕರತಲಬದರದಂತೆ (ಅಂಗೈ ಯಲ್ಲಿರುವ ಎಲಚಿಹಣ್ಣಿನಂತೆ) ಜ್ಞಾನದೃಷ್ಟಿಯಿಂದ ಕಾಣುವ ಸಾಮರ್ಥ್ಯವನ್ನು ಹೊಂದಿರುವ ದೇವರ್ಷಿಗಳಾದ ನಾರದರು ದೇವದೇವನಾದ ಶ್ರೀಕೃಷ್ಣನನ್ನು ಕುರಿತು ಅನೇಕ ವಿಷಯಗಳನ್ನು ಹೇಳಿರುತ್ತಾರೆ. ಮಹಾಬಾಹುವೇ! ಭರತರ್ಷಭನೇ! ನಾರದರು ಶ್ರೀಕೃಷ್ಣನ ಶ್ರೇಷ್ಠತೆಯನ್ನೂ, ಸನಾತನತ್ವವನ್ನೂ ಯಥಾವತ್ತಾಗಿ ತಿಳಿದಿರುತ್ತಾರೆ. ಯುಧಿಷ್ಠಿರ! ಹೀಗೆ ಸತ್ಯಪರಾಕ್ರಮಿಯಾದ, ಕಮಲಾಕ್ಷನಾದ, ಮಹಾಬಾಹುವಾದ ಶ್ರೀಕೇಶವನು ಅಚಿಂತ್ಯನು. ಇವನು ನಮ್ಮೆಲ್ಲರ ಮಧ್ಯದಲ್ಲಿಯೇ ಮಾನುಷರೂಪವನ್ನು ಧರಿಸಿದ್ದರೂ ನಾವು ಇವನನ್ನು ಮನುಷ್ಯಮಾತ್ರದವನೆಂದು ತಿಳಿಯಬಾರದು.”

೨೦೭ನೆಯ ಅಧ್ಯಾಯವು ಮುಗಿಯಿತು.

೨೦೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬ್ರಹ್ಮಮಾನಸಪುತ್ರರಾದ ಮರೀಚ್ಯಾದಿಗಳ ವಂಶಗಳ ಮತ್ತು ನಾಲ್ಕು ದಿಕ್ಕುಗಳಲ್ಲಿಯೂ ಇರುವ ಮಹರ್ಷಿಗಳ ವಿವರಣೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕೇ ಪೂರ್ವಮಾಸನ್ಪತಯಃ ಪ್ರಜಾನಾಂ ಭರತರ್ಷಭ ।
ಕೇ ಚರ್ಷಯೋ ಮಹಾಭಾಗಾ ದಿಕ್ಷು ಪ್ರತ್ಯೇಕಶಃ ಸ್ಮೃತಾಃ ॥೧॥

"ಭರತಶ್ರೇಷ್ಠನೇ! ಹಿಂದಿನ ಕಾಲದಲ್ಲಿ ಯಾರು ಯಾರು ಪ್ರಜಾಪತಿಯ ಸ್ಥಾನವನ್ನಲಂಕರಿಸಿದ್ದರು? ಮಹಾಭಾಗ್ಯವಂತರಾದ ಯಾವ ಯಾವ ಮಹರ್ಷಿಗಳು ಯಾವ ಯಾವ ದಿಕ್ಕುಗಳಿಗೆ ಪ್ರತ್ಯೇಕ-ಪ್ರತ್ಯೇಕವಾಗಿ ಅಧಿಪತಿಗಳಾಗಿದ್ದರು?"

ಭೀಷ್ಮನು ಹೇಳುತ್ತಾನೆ :

"ಧರ್ಮಜ! ಪ್ರಜಾಪತಿಗಳ ವಿಷಯವಾಗಿಯೂ ಮತ್ತು ಋಷಿಗಳ ವಿಷಯವಾಗಿಯೂ ನೀನು ಕೇಳಿರುವ ಪ್ರಶ್ನೆಗಳಿಗೆ ಯಥಾವತ್ತಾಗಿ ಉತ್ತರಿಸುವೆನು. ಏಕಾಗ್ರಚಿತ್ತನಾಗಿ ಕೇಳು.

ಏಕಃ ಸ್ವಯಮ್ಭೂರ್ಭಗವಾನಾದ್ಯೋ ಬ್ರಹ್ಮಾ ಸನಾತನಃ ।
ಬ್ರಹ್ಮಣಃ ಸಪ್ತ ವೈ ಪುತ್ರಾ ಮಹಾತ್ಮಾನಃ ಸ್ವಯಮ್ಭುವಃ ॥೩॥

ಮರೀಚಿರತ್ರ್ಯಙ್ಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ ।
ವಸಿಷ್ಠಶ್ಚ ಮಹಾಭಾಗಃ ಸದೃಶೋ ವೈ ಸ್ವಯಮ್ಭುವಾ ॥೪॥

ಏಕಮಾತ್ರನಾದ, ಸನಾತನನಾದ ಭಗವಾನ್ ಸ್ವಯಂಭೂಬ್ರಹ್ಮನು ಎಲ್ಲಕ್ಕೂ ಆದಿಯಾಗಿರುತ್ತಾನೆ. (ಮೂಲಕಾರಣನಾಗಿರುತ್ತಾನೆ.) ಸ್ವಯಂಭೂ ಬ್ರಹ್ಮನಿಗೆ ಮಹಾತ್ಮರಾದ ಏಳು ಮಂದಿ ಮಕ್ಕಳಿದ್ದಾರೆ.

ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು ಮತ್ತು ಮಹಾಭಾಗ್ಯಶಾಲಿಯಾದ ವಸಿಷ್ಠ–ಇವರೇ ಆ ಏಳು ಮಂದಿ ಬ್ರಹ್ಮಮಾನಸ ಪುತ್ರರು. ಅವರೆಲ್ಲರೂ ಸ್ವಯಂಭೂಬ್ರಹ್ಮನ ತೇಜಸ್ಸಿಗೆ ಸಮಾನವಾದ ತೇಜಸ್ಸನ್ನು ಹೊಂದಿರುತ್ತಾರೆ. ಪುರಾಣಗಳಲ್ಲಿ ಆ ಏಳು ಮಂದಿಗಳೇ ಸಪ್ತ ಬ್ರಹ್ಮರೆಂದು ಖಚಿತವಾಗಿ ಉಲ್ಲೇಖಿಸಲ್ಪಟ್ಟಿದ್ದಾರೆ. ಇನ್ನು ಮುಂದೆ ನಾನು ಎಲ್ಲ ಪ್ರಜಾಪತಿಗಳ ವಿಷಯವನ್ನೂ ಹೇಳುತ್ತೇನೆ :

ಅತ್ರಿವಂಶಸಮುತ್ಪನ್ನೋ ಬ್ರಹ್ಮಯೋನಿಃ ಸನಾತನಃ ।
ಪ್ರಾಚೀನಬರ್ಹಿರ್ಭಗವಾಂಸ್ತಸ್ಮಾತ್ಪ್ರಾಚೇತಸೋ ದಶ ॥೬॥

ಪ್ರಾಚೀನಬರ್ಹಿಯು ಅತ್ರಿಯ ವಂಶದಲ್ಲಿ ಹುಟ್ಟಿದವನು. ಬ್ರಹ್ಮಯೋನಿಯು. ಬ್ರಹ್ಮಸಾಕ್ಷಾತ್ಕಾರವನ್ನು ಪಡೆದವನು. ಆದುದರಿಂದಲೇ

ಸನಾತನನು. ಅವನಿಂದ ಪ್ರಾಚೇತಸರೆಂಬ ಹೆಸರಿನ ಹತ್ತು ಮಂದಿ ಪ್ರಜಾಪತಿಗಳು ಹುಟ್ಟಿದರು.

ದಶಾನಾಂ ತನಯಸ್ತ್ವೇಕೋ ದಕ್ಷೋ ನಾಮ ಪ್ರಜಾಪತಿಃ ।
ತಸ್ಯ ದ್ವೇ ನಾಮನೀ ಲೋಕೇ ದಕ್ಷಃ ಕ ಇತಿ ಚೋಚ್ಯತೇ ॥೭॥

ಪ್ರಾಚೀನಬರ್ಹಿಯ ಆ ಹತ್ತು ಮಕ್ಕಳಲ್ಲಿ ಒಬ್ಬನ ಹೆಸರು ದಕ್ಷಪ್ರಜಾಪತಿ. ಆ ದಕ್ಷಪ್ರಜಾಪತಿಗೆ ದಕ್ಷ ಮತ್ತು ಕ–ಎಂಬ ಎರಡು ಹೆಸರುಗಳಿದ್ದುವು.

ಮರೀಚೇಃ ಕಶ್ಯಪಃ ಪುತ್ರಸ್ತಸ್ಯ ದ್ವೇ ನಾಮನೀ ಸ್ಮೃತೇ ।
ಅರಿಷ್ಟನೇಮಿರಿತ್ಯೇಕೇ ಕಶ್ಯಪೇತ್ಯಪರೇ ವಿದುಃ ॥೮॥

ಮರೀಚಿಯ ಮಗನಾದ ಕಶ್ಯಪನಿಗೂ ಎರಡು ನಾಮಧೇಯಗಳಿದ್ದುವು. ಕೆಲವರು ಅವನನ್ನು ಅರಿಷ್ಟನೇಮಿ ಎಂಬ ಹೆಸರಿನಿಂದಲೂ ಕೆಲವರು ಕಶ್ಯಪ ಎಂಬ ಹೆಸರಿನಿಂದಲೂ ತಿಳಿಯುತ್ತಿದ್ದರು.

ಅತ್ರೇಶ್ಚೈವೌರಸಃ ಶ್ರೀಮಾನ್ರಾಜಾ ಸೋಮಶ್ಚ ವೀರ್ಯವಾನ್ ।
ಸಹಸ್ರಂ ಯಶ್ಚ ದಿವ್ಯಾನಾಂ ಯುಗಾನಾಂ ಪರ್ಯುಪಾಸಿತಾ ॥೯॥

ಅತ್ರಿಗೆ ಶ್ರೀಮಂತನಾದ, ವೀರ್ಯವಂತನಾದ ಸೋಮರಾಜನು ಔರಸ ಪುತ್ರನಾಗಿದ್ದನು. ಅವನು ಸಹಸ್ರವರ್ಷಗಳ ಪರ್ಯಂತವಾಗಿ ಭಗವಂತನ ಉಪಾಸನೆಯನ್ನು ಮಾಡಿದನು.

ಅರ್ಯಮಾ ಚೈವ ಭಗವಾನ್ಯೇ ಚಾಸ್ಯ ತನಯಾ ವಿಭೋ ।
ಏತೇ ಪ್ರದೇಶಾಃ ಕಥಿತಾ ಭುವನಾನಾಂ ಪ್ರಭಾವನಾಃ ॥೧೦॥

ಭಗವಾನ್ ಅರ್ಯಮನೂ ಮತ್ತು ಅವನ ಮಕ್ಕಳೂ ಶಾಸನಶೀಲರೆಂದೂ ಮತ್ತು * ಸೃಷ್ಟಿಕರ್ತೃಗಳೆಂದೂ ಹೇಳಲ್ಪಟ್ಟಿದ್ದರು.

ಶಶಬಿನ್ದೋಶ್ಚ ಭಾರ್ಯಾಣಾಂ ಸಹಸ್ರಾಣಿ ದಶಾಚ್ಯುತ ।
ಏಕೈಕಸ್ಯಾಂ ಸಹಸ್ರಂ ತು ತನಯಾನಾಮಭೂತ್ತದಾ ॥೧೧॥

---

* ಪ್ರದೇಶಾಃ–ಎಂಬುದಕ್ಕೆ ವ್ಯಾಖ್ಯಾನಕಾರರು ಪ್ರದಿಶನ್ತಿ ಆಜ್ಞಾಪಯನ್ತಿ ಇತಿ ಪ್ರದೇಶಾಃ ಈಶಾನಶೀಲಾ ಇತ್ಯರ್ಥಃ–ಆಜ್ಞಾಪಿಸುವವರು, ಆಳುವ ಶೀಲವುಳ್ಳವರು–

ಏವಂ ಶತಸಹಸ್ರಾಣಾಂ ಶತಂ ತಸ್ಯ ಮಹಾತ್ಮನಃ ।
ಪುತ್ರಾಣಾಂ ಚ ನ ತೇ ಕಿಂಚಿದಿಚ್ಛನ್ತ್ಯನ್ಯಂ ಪ್ರಜಾಪತಿಮ್ ॥೧೨॥

ಅಚ್ಯುತನೇ! (ಧರ್ಮದಿಂದ ಚ್ಯುತನಾಗದವನೇ) ಯುಧಿಷ್ಠಿರ! ಭಗವಾನ್ ಅರ್ಯಮನ ಪುತ್ರರಲ್ಲೊಬ್ಬನಾದ ಶಶಬಿಂದುವಿಗೆ ಹತ್ತುಸಾವಿರ ಭಾರ್ಯೆಯರಿದ್ದರು. ಒಬ್ಬೊಬ್ಬಳು ಭಾರ್ಯೆಯಲ್ಲಿಯೂ ಶಶಬಿಂದುವು ಸಾವಿರ-ಸಾವಿರ ಮಕ್ಕಳನ್ನು ಪಡೆದುಕೊಂಡನು. ಹೀಗೆ ಮಹಾತ್ಮನಾದ ಶಶಬಿಂದುವೊಬ್ಬನಿಗೇ ಒಂದುಕೋಟಿ ಮಕ್ಕಳು ಹುಟ್ಟಿದರು. ಆದುದರಿಂದ ಅವರು ಬೇರೆ ಪ್ರಜಾಪತಿಯನ್ನೇ ಅಪೇಕ್ಷಿಸಲಿಲ್ಲ.

ಪ್ರಜಾಮಾಚಕ್ಷತೇ ವಿಪ್ರಾಃ ಪುರಾಣಾಃ ಶಾಶಬಿನ್ದವೀಮ್ ।
ಸ ವೃಷ್ಣಿವಂಶಪ್ರಭವೋ ಮಹಾವಂಶಃ ಪ್ರಜಾಪತೇಃ ॥೧೩॥

ಹಿಂದಿನ ಕಾಲದ ಬ್ರಾಹ್ಮಣರು ಪ್ರಜೆಗಳ ಉತ್ಪತ್ತಿಯಲ್ಲಿ ಅಧಿಕಾಂಶವು ಶಶಬಿಂದುವಿನಿಂದಲೇ ಆಗಿತ್ತೆಂದು ಹೇಳುತ್ತಾರೆ. ಶಶಬಿಂದುಪ್ರಜಾಪತಿಯ ಆ ಮಹಾವಂಶವೇ ವೃಷ್ಣಿವಂಶದ ಆವಿರ್ಭಾವಕ್ಕೂ ಕಾರಣವಾಯಿತು.

ಏತೇ ಪ್ರಜಾನಾಂ ಪತಯಃ ಸಮುದ್ದಿಷ್ಟಾ ಯಶಸ್ವಿನಃ ।
ಅತಃ ಪರಂ ಪ್ರವಕ್ಷ್ಯಾಮಿ ದೇವಾಂಸ್ತ್ರಿಭುವನೇಶ್ವರಾನ್ ॥೧೪॥

ಇವರೆಲ್ಲರೂ ಯಶೋವಂತರಾದ ಪ್ರಜಾಪತಿಗಳೆಂದು ಕರೆಯಲ್ಪಟ್ಟಿರುತ್ತಾರೆ. ಮುಂದೆ ನಾನು ಮೂರು ಲೋಕಗಳಿಗೂ ಶಾಸಕರಾದ ದೇವತೆಗಳ ಪರಿಚಯವನ್ನು ಮಾಡಿಕೊಡುತ್ತೇನೆ.

ಭಗೋಽಂಶಶ್ಚಾರ್ಯಮಾ ಚೈವ ಮಿತ್ರೋಽಥ ವರುಣಸ್ತಥಾ ।
ಸವಿತಾ ಚೈವ ಧಾತಾ ಚ ವಿವಸ್ವಾಂಶ್ಚ ಮಹಾಬಲಃ ॥೧೫॥

ತ್ವಷ್ಟಾ ಪೂಷಾ ತಥೈವೇನ್ದ್ರೋ ದ್ವಾದಶೋ ವಿಷ್ಣುರುಚ್ಯತೇ ।
ಇತ್ಯೇತೇ ದ್ವಾದಶಾದಿತ್ಯಾಃ ಕಶ್ಯಪಸ್ಯಾತ್ಮಸಮ್ಭವಾಃ ॥೧೬॥

ಎಂದೂ, ಪ್ರಭಾವನಾಃ ಎಂಬುದಕ್ಕೆ ಪ್ರಕರ್ಷೇಣ ಸ್ರಷ್ಟಾರಶ್ಚ ಹೆಚ್ಚಾಗಿ ಸೃಷ್ಟಿಯನ್ನು ಮಾಡುವವರು ಎಂದೂ ವ್ಯಾಖ್ಯಾನಿಸಿದ್ದಾರೆ.

ಭಗ, ಅಂಶ, ಅರ್ಯಮಾ, ಮಿತ್ರ, ವರುಣ, ಸವಿತಾ, ಧಾತಾ, ಮಹಾ ಬಲನಾದ ವಿವಸ್ವಂತ, ತ್ವಷ್ಟಾ, ಪೂಷಾ, ಇಂದ್ರ ಮತ್ತು ಹನ್ನೆರಡನೆಯವ ನಾದ ವಿಷ್ಣು–ಇವರು ದ್ವಾದಶಾದಿತ್ಯರೆಂದು ಕರೆಯಲ್ಪಡುತ್ತಾರೆ. ಇವರೆಲ್ಲರೂ ಕಶ್ಯಪನಿಗೆ ಅದಿತಿಯಲ್ಲಿ ಹುಟ್ಟಿದ ಮಕ್ಕಳು.

ನಾಸತ್ಯಶ್ಚೈವ ದಸ್ರಶ್ಚ ಸ್ಮೃತೌ ದ್ವಾವಶ್ವಿನಾವಪಿ ।
ಮಾರ್ತಣ್ಡಸ್ಯಾತ್ಮಜಾವೇತಾವಷ್ಟಮಸ್ಯ ಮಹಾತ್ಮನಃ ॥೧೭॥

ನಾಸತ್ಯ ಮತ್ತು ದಸ್ರರೆಂಬಿಬ್ಬರು ಅಶ್ವಿನೀಕುಮಾರರು. ಅವರು ದ್ವಾದಶಾದಿತ್ಯರಲ್ಲಿ ಎಂಟನೆಯವನಾದ, ಮಹಾತ್ಮನಾದ ಮಾರ್ತಂಡನ (ವಿವಸ್ವಂತನ) ಮಕ್ಕಳು.

ತೇ ಚ ಪೂರ್ವಂ ಸುರಾಶ್ಚೇತಿ ದ್ವಿವಿಧಾಃ ಪಿತರಃ ಸ್ಮೃತಾಃ ।
ತ್ವಷ್ಟುಶ್ಚೈವಾತ್ಮಜಃ ಶ್ರೀಮಾನ್ವಿಶ್ವರೂಪೋ ಮಹಾಯಶಾಃ ॥೧೮॥

ಈ ಹಿಂದೆ ಹೇಳಲ್ಪಟ್ಟವರೇ ದೇವತೆಗಳೆಂದೂ–ಪಿತೃಗಳೆಂದೂ ಎರಡು ಪ್ರಕಾರವಾಗಿ ಕರೆಯಲ್ಪಟ್ಟಿದ್ದಾರೆ. ಪಿತೃಗಳನ್ನು ಆದಿತ್ಯರೂಪರೆನ್ನುತ್ತಾರೆ. ದೇವತೆಗಳನ್ನು ಆದಿತ್ಯರೆನ್ನುತ್ತಾರೆ. ಮಹಾಯಶೋವಂತನಾದ ವಿಶ್ವರೂಪನು ತ್ವಷ್ಟೃವಿನ ಮಗನು.

ಅಜೈಕಪಾದಹಿರ್ಬುಧ್ನ್ಯೋ ವಿರೂಪಾಕ್ಷೋಽಥ ರೈವತಃ ।
ಹರಶ್ಚ ಬಹುರೂಪಶ್ಚ ತ್ರ್ಯಮ್ಬಕಶ್ಚ ಸುರೇಶ್ವರಃ ॥೧೯॥

ಸಾವಿತ್ರಶ್ಚ ಜಯನ್ತಶ್ಚ ಪಿನಾಕೀ ಚಾಪರಾಜಿತಃ ।
ಪೂರ್ವಮೇವ ಮಹಾಭಾಗಾ ವಸವೋಽಷ್ಟೌ ಪ್ರಕೀರ್ತಿತಾಃ ॥೨೦॥

ಅಜೈಕಪಾತ್, ಅಹಿರ್ಬುಧ್ನ್ಯ, ವಿರೂಪಾಕ್ಷ, ರೈವತ, ಹರ, ಬಹು ರೂಪ, ತ್ರ್ಯಮ್ಬಕ, ಸುರೇಶ್ವರ, ಸಾವಿತ್ರ, ಜಯಂತ, ಅಪರಾಜಿತನಾದ ಪಿನಾಕೀ–ಇವರು ಏಕಾದಶರುದ್ರರು.

ಮಹಾಭಾಗರಾದ * ಅಷ್ಟವಸುಗಳ ನಾಮಧೇಯಗಳನ್ನು ಹಿಂದೆಯೇ ಹೇಳಿಯಾಗಿದೆ.

---

* ಅಷ್ಟವಸುಗಳು : ಧರೋ ಧ್ರುವಶ್ಚ ಸೋಮಶ್ಚ ಅಹಶ್ಚೈವಾನಿಲೋಽನಲಃ ।
ಪ್ರತ್ಯೂಷಶ್ಚ ಪ್ರಭಾಸಶ್ಚ ವಸವೋಷ್ಟಾವಿತಿ ಸ್ಮೃತಾಃ ॥

ಏತಂ ಏವಂವಿಧಾ ದೇವಾ ಮನೋರೇವ ಪ್ರಜಾಪತೇಃ ।
ತೇ ಚ ಪೂರ್ವಂ ಸುರಾಶ್ಚೇತಿ ದ್ವಿವಿಧಾಃ ಪಿತರಃ ಸ್ಮೃತಾಃ ॥೨೧॥

ಈ ರೀತಿಯಲ್ಲಿ ದೇವತೆಗಳೆಲ್ಲರೂ ಪ್ರಜಾಪತಿಯ ಮಾನಸಪುತ್ರರು. ಹಿಂದೆ ಹೇಳಿದ ವಸುರುದ್ರಾದಿತ್ಯರು ದೇವತೆಗಳೆಂದೂ–ಪಿತೃರೂಪರೆಂದೂ ಎರಡು ಪ್ರಕಾರವಾಗಿ ಕರೆಯಲ್ಪಡುತ್ತಾರೆ.

ಶೀಲಯೌವನತಸ್ತ್ವನ್ಯಸ್ತಥಾನ್ಯಃ ಸಿದ್ಧಸಾಧ್ಯಯೋಃ ।
ಋಭವೋ ಮರುತಶ್ಚೈವ ದೇವಾನಾಂ ಚೋದಿತೋ ಗಣಃ ॥೨೨॥

ದೇವತೆಗಳಲ್ಲಿ ಒಂದು ವರ್ಗವು ಸೌಂದರ್ಯದಿಂದಲೂ ಸೌಶೀಲ್ಯ ದಿಂದಲೂ ಮತ್ತು ನಿರಂತರಯೌವನದಿಂದಲೂ ಸಂಪನ್ನವಾಗಿದೆ. ಸಿದ್ಧರೂ ಮತ್ತು ಸಾಧ್ಯರೂ ಮತ್ತೊಂದು ಪಂಗಡಕ್ಕೆ ಸೇರಿದವರು. ಋಭುಗಳೆಂಬುದೂ ಮರುತರೆಂಬುದೂ ದೇವತೆಗಳ ಸಮುದಾಯದ ಹೆಸರಾಗಿದೆ.

ಏವಮೇತೇ ಸಮಾಮ್ನಾತಾ ವಿಶ್ವೇದೇವಾಸ್ತಥಾಶ್ವಿನೌ ।
ಆದಿತ್ಯಾಃ ಕ್ಷತ್ರಿಯಾಸ್ತೇಷಾಂ ವಿಶಶ್ಚ ಮರುತಸ್ತಥಾ ॥೨೩॥

ಹೀಗೆಯೇ ವಿಶ್ವೇದೇವತೆಗಳೂ ಮತ್ತು ಅಶ್ವಿನೀದೇವತೆಗಳೂ ದೇವಗಣಕ್ಕೆ ಸೇರಿದವರೆಂದು ಪರಿಗಣಿತರಾಗಿದ್ದಾರೆ. ಆ ದೇವತೆಗಳಲ್ಲಿ ಆದಿತ್ಯಗಣವು ಕ್ಷತ್ರಿಯವರ್ಣಕ್ಕೆ ಸೇರಿದುದಾಗಿದೆ. ಮರುದ್ಗಣವು ವೈಶ್ಯವರ್ಣಕ್ಕೆ ಸೇರಿದುದಾಗಿದೆ.

ಅಶ್ವಿನೌ ತು ಸ್ಮೃತೌ ಶೂದ್ರೌ ತಪಸ್ಯುಗ್ರೇ ಸಮಾಸ್ಥಿತೌ ।
ಸ್ಮೃತಾಸ್ತ್ವಙ್ಗಿರಸೋ ದೇವಾ ಬ್ರಾಹ್ಮಣಾ ಇತಿ ನಿಶ್ಚಯಃ ॥೨೪॥

ಉಗ್ರವಾದ ತಪಸ್ಸಿನಲ್ಲಿ ನಿರತರಾಗಿರುವ ಅಶ್ವಿನೀದೇವತೆಗಳು ಶೂದ್ರ ವರ್ಣಕ್ಕೆ ಸೇರಿದವರೆಂದು ಹೇಳಲ್ಪಟ್ಟಿರುತ್ತಾರೆ. ಅಂಗಿರಸನ ಸಂತತಿಯ ದೇವತೆಗಳೆಲ್ಲರೂ ಬ್ರಾಹ್ಮಣವರ್ಣಕ್ಕೆ ಸೇರಿದವರೆಂದು ಹೇಳಲ್ಪಟ್ಟಿರುತ್ತಾರೆ. ಇದು ವಿದ್ವಾಂಸರ ನಿಶ್ಚಯವಾಗಿದೆ.

ಧರ, ಧ್ರುವ, ಸೋಮ, ಅಹಸ್ಸು, ಅನಿಲ, ಅನಲ, ಪ್ರತ್ಯೂಷ, ಪ್ರಭಾಸ – ಇವರೇ ಅಷ್ಟವಸುಗಳು.

ಇತ್ಯೇತತ್ಸರ್ವದೇವಾನಾಂ ಚಾತುರ್ವರ್ಣ್ಯಂ ಪ್ರಕೀರ್ತಿತಮ್ ।
ಏತಾನ್ವೈ ಪ್ರಾತರುತ್ಥಾಯ ದೇವಾನ್ಯಸ್ತು ಪ್ರಕೀರ್ತಯೇತ್ ।
ಸ್ವಜಾದನ್ಯಕೃತಾಚ್ಚೈವ ಸರ್ವಪಾಪಾತ್ಪ್ರಮುಚ್ಯತೇ ॥೨೫॥

ಯುಧಿಷ್ಠಿರ! ನಿನಗೆ ಸಮಸ್ತದೇವತೆಗಳಲ್ಲಿಯೂ ಇರುವ ಚಾತುರ್ವರ್ಣ್ಯವನ್ನು ಹೇಳಿಯಾಯಿತು. ಯಾವ ದೇವತೆಗಳು ಯಾವ ವರ್ಣಕ್ಕೆ ಸೇರಿದವರೆಂಬುದನ್ನು ಹೇಳಿರುತ್ತೇನೆ. ಪ್ರಾತಃಕಾಲದಲ್ಲಿ ಎದ್ದೊಡನೆಯೇ ಯಾವನು ಈ ದೇವತೆಗಳನ್ನು ಕೀರ್ತನಮಾಡುವನೋ–ಅವನು ತಾನು ಮಾಡಿದ ಪಾಪಗಳನ್ನು ಪರಿಹರಿಸಿಕೊಳ್ಳುವುದೇ ಅಲ್ಲದೇ ಇತರರ ಸಂಸರ್ಗದಿಂದ ಪ್ರಾಪ್ತವಾದ ಪಾಪಗಳಿಂದಲೂ ವಿಮುಕ್ತನಾಗುತ್ತಾನೆ.

ಯವಕ್ರೀತೋಽಥ ರೈಭ್ಯಶ್ಚ ಅರ್ವಾವಸುಪರಾವಸೂ ।
ಔಶಿಜಶ್ಚೈವ ಕಕ್ಷೀವಾನ್ಬಲಶ್ಚಾಙ್ಗಿರಸಃ ಸುತಾಃ ॥೨೬॥

ಯವಕ್ರೀತ, ರೈಭ್ಯ, ಅರ್ವಾವಸು, ಪರಾವಸು, ಔಶಿಜ, ಕಕ್ಷೀವಂತ ಮತ್ತು ಬಲ–ಇವರು ಅಂಗಿರಸನ ಮಕ್ಕಳು.

ಋಷಿರ್ಮೇಧಾತಿಥೇಃ ಪುತ್ರಃ ಕಣ್ವೋ ಬರ್ಹಿಷದಸ್ತಥಾ ।
ತ್ರೈಲೋಕ್ಯಭಾವನಾಸ್ತಾತ ಪ್ರಾಚ್ಯಾಂ ಸಪ್ತರ್ಷಯಸ್ತಥಾ ॥೨೭॥

ಕಣ್ವಮುನಿಯು ಮೇಧಾತಿಥಿಯ ಮಗನು. ಬರ್ಹಿಷದರೂ ಮತ್ತು ಮೂರು ಲೋಕಗಳ ಉತ್ಪತ್ತಿಗೂ ಕಾರಣಭೂತರಾದ ಸಪ್ತರ್ಷಿಗಳು ಪೂರ್ವದಿಕ್ಕಿನಲ್ಲಿದ್ದಾರೆ.

ಉನ್ಮುಚೋ ವಿಮುಚಶ್ಚೈವ ಸ್ವಸ್ತ್ಯಾತ್ರೇಯಶ್ಚ ವೀರ್ಯವಾನ್ ।
ಪ್ರಮುಚಶ್ಚೇಧ್ಮವಾಹಶ್ಚ ಭಗವಾಂಶ್ಚ ದೃಢವ್ರತಃ ॥೨೮॥

ಮಿತ್ರಾವರುಣಯೋಃ ಪುತ್ರಸ್ತಥಾಗಸ್ತ್ಯಃ ಪ್ರತಾಪವಾನ್ ।
ಏತೇ ಬ್ರಹ್ಮರ್ಷಯೋ ನಿತ್ಯಮಾಸ್ಥಿತಾ ದಕ್ಷಿಣಾಂ ದಿಶಮ್ ॥೨೯॥

ಉನ್ಮುಚ, ವಿಮುಚ, ಬಲವಂತನಾದ ಸ್ವಸ್ತ್ಯಾತ್ರೇಯ, ಪ್ರಮುಚ, ಇಧ್ಮವಾಹ, ದೃಢವ್ರತನಾದ, ಮಿತ್ರಾವರುಣರ ಮಗನಾದ ಮತ್ತು ಪ್ರತಾಪವಂತನಾದ ಅಗಸ್ತ್ಯ–ಈ ಬ್ರಹ್ಮರ್ಷಿಗಳು ಸರ್ವಕಾಲದಲ್ಲಿಯೂ ದಕ್ಷಿಣದಿಕ್ಕಿನಲ್ಲಿರುತ್ತಾರೆ.

ಉಷಙ್ಗುಃ ಕವಷೋ ಧೌಮ್ಯಃ ಪರಿವ್ಯಾಧಶ್ಚ ವೀರ್ಯವಾನ್ ।
ಏಕತಶ್ಚ ದ್ವಿತಶ್ಚೈವ ತ್ರಿತಶ್ಚೈವ ಮಹರ್ಷಯಃ ॥೩೦॥

ಅತ್ರೇಃ ಪುತ್ರಶ್ಚ ಭಗವಾಂಸ್ತಥಾ ಸಾರಸ್ವತಃ ಪ್ರಭುಃ ।
ಏತೇ ಚೈವ ಮಹಾತ್ಮಾನಃ ಪಶ್ಚಿಮಾಮಾಶ್ರಿತಾ ದಿಶಮ್ ॥೩೧॥

ಉಷಂಗು, ಕವಷ, ಧೌಮ್ಯ, ವೀರ್ಯವಂತನಾದ ಪರಿವ್ಯಾಧ, ಏಕತ, ದ್ವಿತ, ತ್ರಿತ, ಅತ್ರಿಯ ಮಗನಾದ ಪ್ರಭಾವಶಾಲಿಯಾದ ಭಗವಾನ್ ಸಾರಸ್ವತ –ಈ ಮಹಾತ್ಮರಾದ ಮಹರ್ಷಿಗಳು ಪಶ್ಚಿಮದಿಗ್ಭಾಗದಲ್ಲಿದ್ದಾರೆ.

ಆತ್ರೇಯಶ್ಚ ವಸಿಷ್ಠಶ್ಚ ಕಶ್ಯಪಶ್ಚ ಮಹಾನೃಷಿಃ ।
ಗೌತಮೋಽಥ ಭರದ್ವಾಜೋ ವಿಶ್ವಾಮಿತ್ರೋಽಥ ಕೌಶಿಕಃ ॥೩೨॥

ತಥೈವ ಪುತ್ರೋ ಭಗವಾನೃಚೀಕಸ್ಯ ಮಹಾತ್ಮನಃ ।
ಜಮದಗ್ನಿಶ್ಚ ಸಪ್ತೈತೇ ಉದೀಚೀಮಾಶ್ರಿತಾ ದಿಶಮ್ ॥೩೩॥

ಆತ್ರೇಯ, ವಸಿಷ್ಠ, ಮಹರ್ಷಿಯಾದ ಕಶ್ಯಪ, ಗೌತಮ, ಭರದ್ವಾಜ, ಕುಶಿಕವಂಶೀಯನಾದ ವಿಶ್ವಾಮಿತ್ರ, ಮಹಾತ್ಮನಾದ ಋಚೀಕನ ಮಗನಾದ ಜಮದಗ್ನಿ –ಈ ಏಳು ಮಂದಿ ಉತ್ತರದಿಗ್ಭಾಗದಲ್ಲಿದ್ದಾರೆ.

ಏತೇ ಪ್ರತಿದಿಶಂ ಸರ್ವೇ ಕೀರ್ತಿತಾಸ್ತಿಗ್ಮತೇಜಸಃ ।
ಸಾಕ್ಷಿಭೂತಾ ಮಹಾತ್ಮಾನೋ ಭುವನಾನಾಂ ಪ್ರಭಾವನಾಃ ।
ಏವಮೇತೇ ಮಹಾತ್ಮಾನಃ ಸ್ಥಿತಾಃ ಪ್ರತ್ಯೇಕಶೋ ದಿಶಮ್ ॥೩೪॥

ಹೀಗೆ ಪ್ರತಿದಿಕ್ಕಿನಲ್ಲಿಯೂ ಇರುವ ಉಗ್ರತೇಜಸ್ವಿಗಳಾದ ಎಲ್ಲ ಮಹರ್ಷಿಗಳ ನಾಮಧೇಯಗಳನ್ನೂ ಹೇಳಿದ್ದೇನೆ. ಈ ಮಹಾತ್ಮರು ಸಕಲಭುವನಗಳನ್ನೂ ಸೃಷ್ಟಿಮಾಡುವಷ್ಟು ಸಮರ್ಥರಾಗಿರುತ್ತಾರೆ. ಪ್ರಪಂಚಕ್ಕೆ ಸಾಕ್ಷಿಭೂತರಾಗಿದ್ದಾರೆ. ಹೀಗೆ ವಿಶಾಲಹೃದಯರಾದ ಇವರೆಲ್ಲರೂ ಪ್ರತ್ಯೇಕ-ಪ್ರತ್ಯೇಕವಾದ ದಿಕ್ಕುಗಳಲ್ಲಿ ಉಪಸ್ಥಿತರಾಗಿರುವರು.

ಏತೇಷಾಂ ಕೀರ್ತನಂ ಕೃತ್ವಾ ಸರ್ವಪಾಪಾತ್ಪ್ರಮುಚ್ಯತೇ ।
ಯಸ್ಯಾಂ ಯಸ್ಯಾಂ ದಿಶಿ ಹ್ಯೇತೇ ತಾಂ ದಿಶಂ ಶರಣಂ ಗತಃ ।
ಮುಚ್ಯತೇ ಸರ್ವಪಾಪೇಭ್ಯಃ ಸ್ವಸ್ತಿಮಾಂಶ್ಚ ಗೃಹಾನ್ವ್ರಜೇತ್ ॥೩೬॥

ಇವರ ಗುಣಗಳನ್ನು ಕೀರ್ತನಮಾಡುವ ಮನುಷ್ಯನು ಸಕಲಪಾಪಗಳಿಂದಲೂ ವಿಮುಕ್ತನಾಗುತ್ತಾನೆ. ಇವರು ಯಾವ ಯಾವ ದಿಕ್ಕಿನಲ್ಲಿರುವರೋ ಆ ದಿಕ್ಕಿಗೆ ತಿರುಗಿಕೊಂಡು ಸ್ತೋತ್ರಮಾಡಿ ಆ ಮಹರ್ಷಿಗಳಿಗೆ ಶರಣಾಗತನಾದರೆ ಸರ್ವಪಾಪಗಳಿಂದಲೂ ವಿಮುಕ್ತಿಯನ್ನು ಹೊಂದಿ ಕುಶಲಪೂರ್ವಕವಾಗಿ ತನ್ನ ಮನೆಗೆ ಹಿಂದಿರುಗುತ್ತಾನೆ."

೨೦೮ನೆಯ ಅಧ್ಯಾಯವು ಮುಗಿಯಿತು.

೨೦೯ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಭಗವಾನ್ ವಿಷ್ಣುವು ವರಾಹರೂಪವನ್ನು ಧರಿಸಿ ದಾನವರನ್ನು ವಿನಾಶಗೊಳಿಸಿ ದೇವತೆಗಳನ್ನು ರಕ್ಷಿಸಿದುದು

ಪಾರಿಕ್ಷಿತ! ಯುಧಿಷ್ಠಿರನು ಹೇಳುತ್ತಾನೆ :

ಪಿತಾಮಹ ಮಹಾಪ್ರಾಜ್ಞ ಯುಧಿ ಸತ್ಯಪರಾಕ್ರಮ ।
ಶ್ರೋತುಮಿಚ್ಛಾಮಿ ಕಾರ್ತ್ಸ್ನ್ಯೇನ ಕೃಷ್ಣಮವ್ಯಯಮೀಶ್ವರಮ್ ॥೧॥

"ಯುದ್ಧದಲ್ಲಿ ಸತ್ಯವಾದ ಪರಾಕ್ರಮವನ್ನು ತೋರುವವನೇ! ಮಹಾಪ್ರಾಜ್ಞನೇ! ಪಿತಾಮಹನೇ! ಸರ್ವೇಶ್ವರನಾದ, ಸನಾತನನಾದ ಶ್ರೀಕೃಷ್ಣನ ಮಹತ್ತ್ವವನ್ನು ನಾನು ಸಮಗ್ರವಾಗಿ ಕೇಳಬೇಕೆಂದಿದ್ದೇನೆ.

ಯಚ್ಚಾಸ್ಯ ತೇಜಃ ಸುಮಹದ್ಯಚ್ಚ ಕರ್ಮ ಪುರಾ ಕೃತಮ್ ।
ತನ್ಮೇ ಸರ್ವಂ ಯಥಾತತ್ತ್ವಂ ಬ್ರೂಹಿ ತ್ವಂ ಪುರುಷರ್ಷಭ ॥೨॥

ಪುರುಷಶ್ರೇಷ್ಠನೇ! ಶ್ರೀಕೃಷ್ಣನ ಮಹೋಜ್ಜ್ವಲವಾದ ತೇಜಸ್ಸನ್ನೂ ಅವನು ಹಿಂದೆ ಮಾಡಿರುವ ಅದ್ಭುತಕರ್ಮಗಳೆಲ್ಲವನ್ನೂ ಯಥಾವತ್ತಾಗಿ ನನಗೆ ಹೇಳು.

ತಿರ್ಯಗ್ಯೋನಿಗತಂ ರೂಪಂ ಕಥಂ ಧಾರಿತವಾನ್ಪ್ರಭುಃ ।
ಕೇನ ಕಾರ್ಯನಿಸರ್ಗೇಣ ತಮಾಖ್ಯಾಹಿ ಮಹಾಬಲ ॥೩॥

ಮಹಾಬಲನೇ! ಶ್ರೀಕೃಷ್ಣನು ಸಕಲ ಜಗತ್ತಿಗೂ ಪ್ರಭುವಾಗಿದ್ದರೂ ಯಾವ ಕಾರಣದಿಂದ ಇವನು ತಿರ್ಯಗ್ಯೋನಿಗತವಾದ ಪಶು-ಪಕ್ಷಿಗಳ ರೂಪವನ್ನು ಧಾರಣೆಮಾಡಿದನು? ಈ ವಿಷಯವನ್ನೂ ನನಗೆ ತಿಳಿಸು."

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಹಿಂದೊಮ್ಮೆ ನಾನು ಬೇಟೆಯಾಡಲು ಅರಣ್ಯಕ್ಕೆ ಹೋಗಿದ್ದಾಗ ಮಾರ್ಕಂಡೇಯರ ಆಶ್ರಮದಲ್ಲಿ ಉಳಿದುಕೊಂಡಿದ್ದೆನು. ಅಲ್ಲಿ ನಾನು ಸಾವಿರಾರು ಮುನಿಗಳು ಕುಳಿತಿರುವುದನ್ನು ನೋಡಿದೆನು. ನಾನಲ್ಲಿಗೆ ಹೋದೊಡನೆಯೇ ಮಾರ್ಕಂಡೇಯಪ್ರಮುಖರಾದ ಮಹರ್ಷಿಗಳೆಲ್ಲರೂ ಮಧುಪರ್ಕಪುರಸ್ಸರವಾಗಿ ನನ್ನನ್ನು ಯಥಾವಿಧಿಯಾಗಿ ಸತ್ಕರಿಸಿದರು. ಅವರಿತ್ತ ಸತ್ಕಾರವನ್ನು ಸ್ವೀಕರಿಸಿ ನಾನು ಅಲ್ಲಿ ನೆರೆದಿದ್ದ ಎಲ್ಲ ಋಷಿಗಳನ್ನೂ ಅಭಿವಂದಿಸಿದೆನು. ಆ ಸಮಯದಲ್ಲಿ ಮಹರ್ಷಿಗಳಾದ ಕಶ್ಯಪರು ಮನಸ್ಸಿಗೆ ಆಹ್ಲಾದವನ್ನುಂಟುಮಾಡುವುದಾಗಿದ್ದ, ದಿವ್ಯವಾದ ಒಂದು ಕಥೆಯನ್ನು ಹೇಳಿದರು. ಆ ಕಥೆಯನ್ನೇ ನಿನಗೂ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು :

ಹಿಂದೆ ನರಕನೇ ಮೊದಲಾದ ನೂರಾರು ಮಹಾಸುರರೂ ಮತ್ತು ದಾನವನಾಯಕರೂ ಕ್ರೋಧ-ಲೋಭಗಳಿಂದ ಕೂಡಿದವರಾಗಿ ಬಲದ ಮದದಿಂದ ಕೊಬ್ಬಿಹೋಗಿದ್ದರು. ಅದೇ ರೀತಿಯಲ್ಲಿ ಯುದ್ಧದುರ್ಮದರಾದ ಇನ್ನೂ ಅನೇಕ ದಾನವರೂ ದೇವತೆಗಳ ಉತ್ತಮೋತ್ತಮವಾದ ಸಮೃದ್ಧಿಯನ್ನು ಸಹಿಸದವರಾಗಿದ್ದರು. ಅಸಹನಶೀಲರಾದ ದಾನವರಿಂದ ಪದೇ-ಪದೇ ಪೀಡಿತರಾಗುತ್ತಿದ್ದ ದೇವತೆಗಳೂ ಮತ್ತು ದೇವರ್ಷಿಗಳೂ ಸುಖವೆಂಬುದನ್ನೇ ಕಾಣದವರಾಗಿದ್ದರು. ದಾನವರ ಭಯದಿಂದಾಗಿ ಅಲ್ಲಲ್ಲಿ ಅಡಗಿಕೊಳ್ಳುತ್ತಿದ್ದರು. ಘೋರರೂಪಿಗಳಾದ, ಮಹಾಬಲಿಷ್ಠರಾದ ದಾನವರಿಂದ ವ್ಯಾಪ್ತವಾಗಿದ್ದ ಭೂಮಂಡಲವು ದಾನವರ ಉಪಟಳದಿಂದ ಸಂಕಟಪಡುತ್ತಿದ್ದುದನ್ನೂ ನೋಡಿದರು. ಆ ಸಮಯದಲ್ಲಿ ಭೂದೇವಿಯು ಭಯದಿಂದ ವ್ಯಾಕುಲಳಾಗಿದ್ದಳು. ಹರ್ಷೋಲ್ಲಾಸಶೂನ್ಯಳಾಗಿದ್ದಳು. ದುಃಖಗೊಂಡಿದ್ದಳು. ರಸಾತಳದವರೆಗೆ ಹುದುಗಿಹೋಗಿದ್ದಳು. ಭೂದೇವಿಯ ಆ ದುಃಸ್ಥಿತಿಯನ್ನು ಕಂಡು ಭಯತ್ರಸ್ತರಾದ ದೇವತೆಗಳು ಬ್ರಹ್ಮನ ಬಳಿಗೆ ಹೋಗಿ :

ಕಥಂ ಶಕ್ಯಾಮಹೇ ಬ್ರಹ್ಮನ್ದಾನವೈರಭಿಮರ್ದನಮ್ ।


"ಬ್ರಹ್ಮನ್ನೇ! ದಾನವರಿಂದ ಆಗುತ್ತಿರುವ ಈ ಉಪಟಳವನ್ನು ನಾವು ಹೇಗೆ ತಾನೇ ಸಹಿಸಿಕೊಂಡೇವು? ಅವರ ಉಪಟಳವನ್ನು ಸಹಿಸಿಕೊಳ್ಳಲು ನಮಗೆ ಸರ್ವಥಾ ಸಾಧ್ಯವಿಲ್ಲವಾಗಿದೆ"–ಎಂದು ಹೇಳಿದರು.

ದೇವತೆಗಳ ಮಾತನ್ನು ಕೇಳಿ ಬ್ರಹ್ಮನು ಉತ್ತರಿಸಿದನು : "ನಿಸೃಷ್ಟೋಽತ್ರ ವಿಧಿರ್ಮಯಾ –ದೇವತೆಗಳೇ! ನಾನು ಈ ವಿಪತ್ತಿನ ಪರಿಹಾರ ಕ್ಕಾಗಿ ಒಂದು ಉಪಾಯವನ್ನು ಮಾಡಿದ್ದೇನೆ. ದಾನವರು ಘೋರವಾದ ತಪಸ್ಸನ್ನು ಮಾಡಿ ಅನೇಕವಿಧವಾದ ವರಗಳನ್ನು ಪಡೆದುಕೊಂಡು, ಬಲ ದಿಂದಲೂ–ಮದದಿಂದಲೂ ಕೊಬ್ಬಿಹೋಗಿದ್ದಾರೆ. ಆ ಮೂಢರಾದ ದೈತ್ಯರು ದೇವತೆಗಳಿಂದಲೂ ಎದುರಿಸಲು ಅಸಾಧ್ಯವಾದ ಯಜ್ಞವರಾಹರೂಪವನ್ನು ಧರಿಸಿರುವ ಅವ್ಯಕ್ತದರ್ಶನನಾದ ಮಹಾವಿಷ್ಣುವನ್ನು ತಿಳಿದವರಾಗಿಲ್ಲ. ವರಾಹರೂಪಿಯಾದ ಮಹಾವಿಷ್ಣುವು ಸಾವಿರಾರು ಸಂಖ್ಯೆಯಲ್ಲಿ ಭೂಮಿಯ ಕೆಳಭಾಗದಲ್ಲಿ (ಪಾತಾಳದಲ್ಲಿ) ಸೇರಿಕೊಂಡಿರುವ ಘೋರರೂಪಿಗಳಾದ ದಾನವಾಧಮರಿರುವ ಕಡೆಗೆ ವೇಗವಾಗಿ ಹೋಗಿ ಅಲ್ಲಿರುವ ದಾನವರೆಲ್ಲ ರನ್ನೂ ಸಂಹಾರಮಾಡುತ್ತಾನೆ."

ಬ್ರಹ್ಮನ ಆ ಮಾತನ್ನು ಕೇಳಿದೊಡನೆಯೇ ಎಲ್ಲ ದೇವತೆಗಳೂ ಹರ್ಷ ದಿಂದ ಉಬ್ಬಿಹೋದರು.

ಬ್ರಹ್ಮನು ಹೇಳಿದಂತೆಯೇ ಮಹಾತೇಜಸ್ವಿಯಾದ ಮಹಾವಿಷ್ಣುವು ವರಾಹದ ರೂಪವನ್ನು ಧರಿಸಿ ಭೂಮಿಯ ಕೆಳಭಾಗವನ್ನು ಪ್ರವೇಶಿಸಿ ಅಲ್ಲಿ ನೆಲೆಸಿದ್ದ ದೈತ್ಯರ ಬಳಿಗೆ ಹೋದನು. ಅಂತಹ ಅಲೌಕಿಕವಾದ ಪ್ರಾಣಿ ಯನ್ನು ನೋಡುತ್ತಲೇ ಕಾಲಪ್ರಮೋಹಿತರಾದ ದೈತ್ಯರೆಲ್ಲರೂ ಒಟ್ಟಾಗಿ ಸೇರಿ ಶೀಘ್ರವಾಗಿ ವರಾಹರೂಪಿಯಾದ ವಿಷ್ಣುವಿನ ಬಳಿಗೆ ಹೋದರು. ಮರುಕ್ಷಣದಲ್ಲಿಯೇ ಅವರು ಬಹಳ ಶೀಘ್ರವಾಗಿ ಮುಂದೆ ಹೋಗಿ ಎಲ್ಲರೂ ಸೇರಿ ಆ ವರಾಹವನ್ನು ಹಿಡಿದುಕೊಂಡರು. ಅತ್ಯಂತಕೋಪಾವಿಷ್ಟ ರಾಗಿದ್ದ ದಾನವರು ತಮ್ಮ ಕೈಗಳಲ್ಲಿದ್ದ ಆ ವರಾಹವನ್ನು ಸುತ್ತಲೂ ಎಳೆದಾಡಿದರು. ದಾನವಶ್ರೇಷ್ಠರಾದ ಅವರೆಲ್ಲರೂ ಮಹಾಕಾಯರಾಗಿದ್ದರೂ, ಮಹಾವೀರ್ಯರಾಗಿದ್ದರೂ, ಬಲದ ಔನ್ನತ್ಯವನ್ನು ಹೊಂದಿದ್ದರೂ ಆ

ವರಾಹಕ್ಕೆ ಯಾವ ವಿಧವಾದ ಹಾನಿಯನ್ನೂ ಉಂಟುಮಾಡಲು ಸಮರ್ಥ ರಾಗಲಿಲ್ಲ. ಆದರಿಂದಾಗಿ ದಾನವೇಂದ್ರರಿಗೆ ವಿಸ್ಮಯವೂ ಉಂಟಾಯಿತು. ಜೊತೆಯಲ್ಲಿಯೇ ಭಯವೂ ಆವರಿಸಿತು. ಅಲ್ಲಿದ್ದ ಸಾವಿರಾರು ದೈತ್ಯರು ತಮ್ಮ ಜೀವಕ್ಕೂ ಸಂಚಕಾರವು ಬಂದಿತೆಂದೇ ಭಾವಿಸಿದರು.



ಅನಂತರ ದೇವಾಧಿದೇವನಾದ, ಯೋಗಸ್ವರೂಪನಾದ, ಯೋಗದ ನಿಯಂತೃವಾದ ಭಗವಾನ್ ವರಾಹಸ್ವಾಮಿಯು ಯೋಗವನ್ನೇ ಆಶ್ರಯಿಸಿ ದೈತ್ಯ-ದಾನವರನ್ನು ಕ್ಷೋಭೆಗೊಳಿಸುತ್ತಾ ಗಟ್ಟಿಯಾಗಿ ಗರ್ಜಿಸಿದನು. ವರಾಹ ಮೂರ್ತಿಯ ಭಯಂಕರವಾದ ಗರ್ಜನೆಯು ಎಲ್ಲ ಲೋಕಗಳಲ್ಲಿಯೂ

ಮತ್ತು ಹತ್ತು ದಿಕ್ಕುಗಳಲ್ಲಿಯೂ ಪ್ರತಿಧ್ವನಿಸಿತು. ಆ ಭಯಂಕರಗರ್ಜನೆಯಿಂದಾಗಿ ಎಲ್ಲ ಲೋಕಗಳಲ್ಲಿಯೂ ಕ್ಷೋಭೆಯುಂಟಾಯಿತು. ಸ್ವರ್ಗಲೋಕದಲ್ಲಿ ಇಂದ್ರಾದಿದೇವತೆಗಳೂ ಬಹಳವಾಗಿ ಭಯಪಟ್ಟರು. ವರಾಹಸ್ವಾಮಿಯು ಮಾಡಿದ ಸಿಂಹನಾದದಿಂದ ಸ್ಥಾವರ-ಜಂಗಮಗಳೂ ಭೂಮಂಡಲವೂ ವಿಮೋಹಗೊಂಡು ನಿಶ್ಚೇಷ್ಟಿತವಾದುವು. ಆ ಭಯಂಕರವಾದ ಗರ್ಜನೆಯಿಂದಲೂ, ವಿಷ್ಣುವಿನ ಮಹಾತೇಜಸ್ಸಿನಿಂದಲೂ ವಿಮೋಹಿತರಾದ ಮತ್ತು ಭಯಗೊಂಡ ಎಲ್ಲ ದಾನವರೂ ಗತಾಸುಗಳಾಗಿ ಕೆಳಗುರುಳಿದರು. ವರಾಹಸ್ವಾಮಿಯು ರಸಾತಳಕ್ಕೆ ಹೋಗಿದ್ದ ಅಸುರರನ್ನೂ ಬೆನ್ನಟ್ಟಿ ಹೋಗಿ ದೇವತೆಗಳಿಗೆ ಶತ್ರುಗಳಾದ ದೈತ್ಯರ ಮಾಂಸ, ಮೇದಸ್ಸು, ಮೂಳೆಗಳ ಸಮೂಹಗಳನ್ನು ಗೊರಸುಗಳಿಂದ ಕಿತ್ತುಹಾಕುತ್ತಿದ್ದನು.

ನಾದೇನ ತೇನ ಮಹತಾ ಸನಾತನ ಇತಿ ಸ್ಮೃತಃ ।
ಪದ್ಮನಾಭೋ ಮಹಾಯೋಗೀ ಭೂತಾಚಾರ್ಯಃ ಸ ಭೂತರಾಟ್ ॥

ಪದ್ಮನಾಭನಾದ, ಮಹಾಯೋಗಿಯಾದ, ಸಕಲಪ್ರಾಣಿಗಳಿಗೂ ಆಚಾರ್ಯನಾದ ಮತ್ತು ಸಕಲಪ್ರಾಣಿಗಳಿಗೂ ಸ್ವಾಮಿಯಾದ ವರಾಹಸ್ವಾಮಿಯು ಅಂತಹ ಮಹಾನಾದವನ್ನು ಮಾಡಿದುದರಿಂದಲೇ ಸನಾತನನಾದನು.*

ಆ ಮಹಾನಾದವನ್ನು ಕೇಳಿದೊಡನೆಯೇ ಎಲ್ಲ ದೇವತೆಗಳೂ ಜಗದೀಶ್ವರನಾದ ಭಗವಾನ್ ಬ್ರಹ್ಮನ ಬಳಿಗೆ ಹೋಗಿ ಹೇಳಿದರು :

---

* ಸನಾತನ ಎಂದರೆ ಸನಾತನವಾದ ನಾದವುಳ್ಳವನು–ಎಂದರ್ಥ. ದಕಾರದ ಸ್ಥಾನದಲ್ಲಿ ತಕಾರವು ಛಾಂದಸವಾಗಿ ಬಂದಿದೆ–ಎಂದು ನೀಲಕಂಠೀಯ ಭಾಷ್ಯ.

ಸನಾ ಭವಃ ಸನಾತನಃ 'ಸನಾ' ಎಂಬುದು 'ನಿತ್ಯ' ಎಂಬ ಅರ್ಥದ ಅವ್ಯಯ. ಅದಕ್ಕೆ **ಸಾಯಂಚಿರಪ್ರಾಹ್ಣೇಪ್ರಗೇಽವ್ಯಯೇಭ್ಯಷ್ಟ್ಯುಲೌ ತುಟ್ ಚ** ೪-೩-೨-೩ ಎಂಬ ಸೂತ್ರದಿಂದ ಟ್ಯು ಅಥವಾ ಟ್ಯುಲ್ ಪ್ರತ್ಯಯ ಮತ್ತು ತುಡಾಗಮ ಬಂದು 'ಸನಾತನ' ಎಂಬ ರೂಪವಾಗಿದೆ. (ಅಮರಃ) ನಿತ್ಯವಾದ ಸತ್ತೆಯುಳ್ಳವನು ಎಂದು ಅದಕ್ಕೆ ಅರ್ಥ–ಎಂದು ಅಮರಸುಧಾ ಮತ್ತು ವಿಷ್ಣುಸಹಸ್ರನಾಮ ಭಾಷ್ಯಗಳಲ್ಲಿ ನೋಡುತ್ತೇವೆ. ಅತತಿ–ಎಂದರೆ ಸದಾಗತಿಯುಳ್ಳವನು ಎಂದರ್ಥ. '**ಅತಸಾತತ್ಯಗಮನೇ**'–

ನಾದೋಽಯಂ ಕೀದೃಶೋ ದೇವ ನೈತಂ ವಿದ್ಮ ವಯಂ ಪ್ರಭೋ ।
ಕೋಽಸೌ ಹಿ ಕಸ್ಯ ವಾ ನಾದೋ ಯೇನ ವಿಹ್ವಲಿತಂ ಜಗತ್ ।
ದೇವಾಶ್ಚ ದಾನವಾಶ್ಚೈವ ಮೋಹಿತಾಸ್ತಸ್ಯ ತೇಜಸಾ ॥೨೯॥

"ಬ್ರಹ್ಮದೇವ! ಈ ಮಹಾನಾದವು ಎಂತಹುದು? ಇದು ಯಾರದೆಂಬುದನ್ನಾಗಲೀ–ಎಲ್ಲಿಂದ ಬಂದಿತೆಂಬುದನ್ನಾಗಲೀ ನಾವು ತಿಳಿದವರಾಗಿಲ್ಲ. ಈ ಘೋರನಿನಾದಮಾಡಿದವನು ಎಂತಹ ವೀರನಾಗಿದ್ದಾನೆ? ಯಾವ ಈ ನಾದದಿಂದ ಜಗತ್ತೇ ತಳಮಳಗೊಂಡಿರುವುದೋ–ಆ ಮಹಾನಾದವು ಯಾವುದು? ಅಂತಹ ಪರಮಾದ್ಭುತವಾದನಾದವನ್ನು ಯಾರು ಮಾಡಿದರು? ಈ ಘೋರನಿನಾದವನ್ನು ಮಾಡಿದವನ ತೇಜಸ್ಸು ಎಷ್ಟಿರಬಹುದೆಂಬುದನ್ನು ಚಿಂತಿಸುತ್ತಾ ದೇವ-ದಾನವರೆಲ್ಲರೂ ವಿಹ್ವಲರಾಗಿದ್ದಾರೆ."

ಮಹಾಬಾಹುವೇ! ಯುಧಿಷ್ಠಿರ! ಈ ಮಧ್ಯದಲ್ಲಿ ವರಾಹರೂಪವನ್ನು ಧರಿಸಿದ್ದ ಮಹಾವಿಷ್ಣುವು ಮಹರ್ಷಿಗಳಿಂದ ಸ್ತೋತ್ರಮಾಡಲ್ಪಟ್ಟವನಾಗಿ ನೀರಿನಿಂದ ಮೇಲಕ್ಕೆ ಬಂದನು.

ವರಾಹಸ್ವಾಮಿಯನ್ನು ಸಂದರ್ಶಿಸಿದನಂತರ ಪಿತಾಮಹನಾದ ಬ್ರಹ್ಮನು ದೇವತೆಗಳೊಡನೆ ಹೇಳಿದನು :

ನಿಹತ್ಯ ದಾನವಪತೀನ್ಮಹಾವರ್ಷ್ಮಾ ಮಹಾಬಲಃ ।
ಏಷ ದೇವೋ ಮಹಾಯೋಗೀ ಭೂತಾತ್ಮಾ ಭೂತಭಾವನಃ ॥೩೦॥

"ದೇವತೆಗಳೇ! ಮಹಾಕಾಯನಾದ, ಮಹಾಬಲನಾದ, ಮಹಾಯೋಗಿಯಾದ, ಭೂತಾತ್ಮನಾದ, ಭೂತಭಾವನನಾದ ಈ ಮಹಾವಿಷ್ಣುವೇ ದಾನವರೆಲ್ಲರನ್ನೂ ಸಂಹರಿಸಿ ಇಲ್ಲಿಗೆ ಆಗಮಿಸಿದ್ದಾನೆ.

ಎಂಬ ಧಾತುವಿನ ರೂಪ ಅದು. ಅವನ ಗತಿಗೆ ಎಂದೂ ಪ್ರತಿಬಂಧಕವಿಲ್ಲ. ದೇವತೆಗಳ ಗತಿಗಾದರೂ ದೈತ್ಯರಿಂದ ಪ್ರತಿಬಂಧಕವುಂಟು. ಆದರೆ ತನ್ನ ಮಹಾನಾದದಿಂದ ಆ ದೈತ್ಯರನ್ನೂ ಧ್ವಂಸಮಾಡಿದ್ದರಿಂದ ಅವನು ಅಪ್ರತಿಹತವಾದ ಸತತಗತಿಯುಳ್ಳವನು. ಜ್ಞಾನವುಳ್ಳವನು ಅಥವಾ ನಾದವೂ ಗತಿರೂಪವಾದುದರಿಂದ ನಿತ್ಯವಾದ ನಾದವುಳ್ಳವನು, ವೇದಗತಿಯುಳ್ಳವನು–ಎಂದೂ ಅರ್ಥಮಾಡಬಹುದಾಗಿದೆ.

ಸರ್ವಭೂತೇಶ್ವರೋ ಯೋಗೀ ಮುನಿರಾತ್ಮಾ ತಥಾತ್ಮನಃ ।
ಸ್ಥಿರೀಭವತ ಕೃಷ್ಣೋಽಯಂ ಸರ್ವವಿಘ್ನವಿನಾಶನಃ ॥೩೨॥

ಸಕಲವಿಧವಾದ ವಿಘ್ನಗಳನ್ನೂ ನಿವಾರಿಸುವ * ಈ ಕೃಷ್ಣನು (ವರಾಹನು) ಸರ್ವಪ್ರಾಣಿಗಳಿಗೂ ಈಶ್ವರನಾದ, ಯೋಗಿಯಾದ, ಮುನಿಯಾದ, ಆತ್ಮಸ್ವರೂಪನಾದ (ಅಂತರ್ಯಾಮಿಯಾದ) ಮತ್ತು ತನಗೂ ಆತ್ಮಸ್ವರೂಪನಾದ (ಸಾಕ್ಷಾತ್ ಪರಮಾತ್ಮನೇ ಆದ) ಮಹಾವಿಷ್ಣುವೇ ಆಗಿರುತ್ತಾನೆ. ಆದುದರಿಂದ ನೀವೆಲ್ಲರೂ ಧೈರ್ಯವನ್ನು ತಂದುಕೊಳ್ಳಿರಿ. ಸುಸ್ಥಿರವಾಗಿರಿ.

ಕೃತ್ವಾ ಕರ್ಮಾತಿಸಾಧ್ವೇತದಶಕ್ಯಮಮಿತಪ್ರಭಃ ।
ಸಮಾಯಾತಃ ಸ್ವಮಾತ್ಮಾನಂ ಮಹಾಭಾಗೋ ಮಹಾದ್ಯುತಿಃ ॥೩೩॥

ಮಹಾಕಾಂತಿಯಿಂದ ಯುಕ್ತನಾಗಿರುವ, ಅಪರಿಮಿತವಾದ ಪ್ರಭೆಯಿಂದ ಕೂಡಿರುವ, ಮಹಾಸೌಭಾಗ್ಯಶಾಲಿಯಾಗಿರುವ ವರಾಹಸ್ವಾಮಿಯು ಅತ್ಯುತ್ತಮವಾದ ಮತ್ತು ಇತರರಿಂದ ಮಾಡಲು ಅಸಾಧ್ಯವಾದ ಕಾರ್ಯವನ್ನು ಮಾಡಿ ತನ್ನ ದಿವ್ಯವಾದ ಶರೀರವನ್ನು ಹೊಂದಿದವನಾಗಿ ಇಲ್ಲಿಗೆ ಆಗಮಿಸುತ್ತಿದ್ದಾನೆ.

ಪದ್ಮನಾಭೋ ಮಹಾಯೋಗೀ ಮಹಾತ್ಮಾ ಭೂತಭಾವನಃ ।
ನ ಸನ್ತಾಪೋ ನ ಭೀಃ ಕಾರ್ಯಾ ಶೋಕೋ ವಾ ಸುರಸತ್ತಮಾಃ ॥

ಸುರಶ್ರೇಷ್ಠರೇ! ನಾಭಿಯಲ್ಲಿ ಕಮಲವನ್ನು ಹೊಂದಿರುವ ಇವನು ಮಹಾಯೋಗಿಯು ; ಮಹಾತ್ಮನು. ಸಕಲಪ್ರಾಣಿಗಳಿಗೂ ಹಿತವನ್ನುಂಟು ಮಾಡತಕ್ಕವನು. ಆದುದರಿಂದ ಇವನು ಮಾಡಿದ ಘೋರಗರ್ಜನೆಯಿಂದ ನೀವು ಸಂತಾಪಪಡಬೇಕಾಗಿಲ್ಲ. ಭಯಪಡಬೇಕಾಗಿಲ್ಲ. ಅಥವಾ ದುಃಖಪಡಬೇಕಾಗಿಯೂ ಇಲ್ಲ.

---

* ಈಗ ಹೇಳುತ್ತಿರುವ ಕಥೆಯು ವರಾಹಾವತಾರಕ್ಕೆ ಸಂಬಂಧಿಸಿದುದು. ಆ ವರಾಹನೇ ಶ್ರೀಕೃಷ್ಣನೆಂದು, ಭೀಷ್ಮನು ಧರ್ಮರಾಜನಿಗೆ ಹೇಳಿರುವುದರಲ್ಲಿ ಔಚಿತ್ಯವಿದೆ. ಆದರೆ ವರಾಹಾವತಾರದ ಸಂದರ್ಭದಲ್ಲಿ ವರಾಹಮೂರ್ತಿಯೇ ಎದುರಾಗಿ ಬಂದು ನಿಂತಿರುವಾಗ ಅವನನ್ನು ಬ್ರಹ್ಮನು ಶ್ರೀಕೃಷ್ಣನೆಂದು ಹೇಳುವುದು ಸಮಂಜಸವಾಗಿ ಕಾಣುವುದಿಲ್ಲ. ವರಾಹಾವತಾರವಾದನಂತರ ಐದನೆಯ ಅವತಾರವು ಕೃಷ್ಣಾವತಾರವಾಗು

ವಿಧಿರೇಷ ಪ್ರಭಾವಶ್ಚ ಕಾಲಃ ಸಂಕ್ಷಯಕಾರಕಃ ।
ಲೋಕಾನ್ಧಾರಯತಾ ತೇನ ನಾದೋ ಮುಕ್ತೋ ಮಹಾತ್ಮನಾ ॥೩೫॥

ಇವನೇ ವಿಧಿಯಾಗಿರುತ್ತಾನೆ. ಅಪಾರವಾದ ಮಹಿಮೆಯಿಂದ ಯುಕ್ತನಾಗಿರುತ್ತಾನೆ. ಪ್ರಳಯಕಾಲದಲ್ಲಿ ಎಲ್ಲವನ್ನೂ ಕ್ಷಯಗೊಳಿಸುವ ಕಾಲನೂ ಇವನೇ ಆಗಿದ್ದಾನೆ. ಲೋಕಗಳೆಲ್ಲವನ್ನೂ ರಕ್ಷಣಾರ್ಥವಾಗಿ ಧರಿಸುತ್ತಾ ಮಹಾತ್ಮನಾದ ವರಾಹಸ್ವಾಮಿಯು ಈ ಸಿಂಹನಾದವನ್ನು ಮಾಡಿರುವನು.

ಸ ಏಷ ಹಿ ಮಹಾಬಾಹುಃ ಸರ್ವಲೋಕನಮಸ್ಕೃತಃ ।
ಅಚ್ಯುತಃ ಪುಣ್ಡರೀಕಾಕ್ಷಃ ಸರ್ವಭೂತಾದಿರೀಶ್ವರಃ ॥೩೬॥

ಎಲ್ಲ ಪ್ರಾಣಿಗಳಿಗೂ ಆದಿಕಾರಣನಾಗಿರುವ, ಸರ್ವಲೋಕವಂದಿತನಾದ, ಈಶ್ವರನಾದ, ಮಹಾಬಾಹುವಾದ, ಅಚ್ಯುತನಾದ, ಪುಂಡರೀಕಾಕ್ಷನಾದ ಮಹಾವಿಷ್ಣುವೇ ಈ ವರಾಹಸ್ವಾಮಿಯಾಗಿರುತ್ತಾನೆ.”

ಎ೦೯ನೆಯ ಅಧ್ಯಾಯವು ಮುಗಿಯಿತು.

ತ್ತದೆ. ಕೃಷ್ಣ ಎಂಬ ಪದವು ವರಾಹಕ್ಕೂ ಹೊಂದಿಕೊಳ್ಳುತ್ತದೆ. **ಕರ್ಷತಿ ಭೂಮಿಂ ಇತಿ ಕೃಷ್ಣಃ**–ಭೂಮಿಯನ್ನು ಗೆದ್ದು ಬರುವುದರಿಂದ ಕೃಷ್ಣ ಎಂದು ಹೆಸರು. ವರಾಹಕ್ಕೆ ಭೂದಾರ ಎಂಬ ಪರ್ಯಾಯಪದವೂ ಇದೆ. **ಕ್ರೋಡೋ ಭೂದಾರ ಇತ್ಯಪಿ (ಅಮರಃ).** ಆದುದರಿಂದ ಈ ಪ್ರಕರಣದಲ್ಲಿಯೂ ಕೃಷ್ಣ ಎಂಬ ಪದಕ್ಕೆ ವರಾಹ ಎಂಬ ಅರ್ಥವನ್ನೇ ಮಾಡಬಹುದಾಗಿದೆ. ಕೃಷ್ಣನನ್ನು ಪರಬ್ರಹ್ಮ ಎಂಬ ಅರ್ಥದಲ್ಲಿ ತೆಗೆದುಕೊಂಡರೆ ಈ ಸಮಸ್ಯೆಯೇ ಇರುವುದಿಲ್ಲ. ಎಲ್ಲವನ್ನೂ ತನ್ನೆಡೆಗೆ ಆಕರ್ಷಣೆ ಮಾಡುವುದರಿಂದಲೂ ಮತ್ತು ಸದಾನಂದಸ್ವರೂಪನಾದುದರಿಂದಲೂ ಭಗವಂತನಿಗೆ ಕೃಷ್ಣ ಎಂದು ಹೆಸರು–ಎಂಬ ನಿರ್ವಚನಗಳೂ ಇವೆ. **ಕರ್ಷತಿ ಸರ್ವಾಣಿ ಸ್ವಸಮೀಪಂ ಇತಿ ಕೃಷ್ಣಃ । ಕೃಷಿರ್ಭೂ ವಾಚಕಃ ಶಬ್ದಃ ಣಶ್ಚ ನಿರ್ವೃತಿ ವಾಚಕಃ । ತಯೋರೈಕ್ಯಂ ಪರಂ ಬ್ರಹ್ಮ ಕೃಷ್ಣಶಬ್ದೇನ ಕೀರ್ತಿತಮ್॥**

ಗುರು-ಶಿಷ್ಯರ ಸಂವಾದವನ್ನು ಉಲ್ಲೇಖಿಸುತ್ತಾ ಶ್ರೀಕೃಷ್ಣ ಸಂಬಂಧವಾದ ಅಧ್ಯಾತ್ಮತತ್ತ್ವದ ವರ್ಣನೆ

ಜನಮೇಜಯ! ಯುಧಿಷ್ಠಿರನು ಹೇಳುತ್ತಾನೆ :

ಯೋಗಂ ಮೇ ಪರಮಂ ತಾತ ಮೋಕ್ಷಸ್ಯ ವದ ಭಾರತ ।
ತಮಹಂ ತತ್ತ್ವತೋ ಜ್ಞಾತುಮಿಚ್ಛಾಮಿ ವದತಾಂ ವರ ॥೧॥

"ವಾಗ್ಮಿಗ್ರಳಲ್ಲಿ ಶ್ರೇಷ್ಠನಾದವನೇ! ಭಾರತನೇ! ಈಗ ನೀನು ನನಗೆ ಮೋಕ್ಷಕ್ಕೆ ಸಾಧನಭೂತವಾದ, ಪರಮಶ್ರೇಷ್ಠವಾದ ಯೋಗದ ವಿಷಯವನ್ನು ಹೇಳು. ಅದನ್ನು ಯಥಾವತ್ತಾಗಿ ತಿಳಿದುಕೊಳ್ಳಬೇಕೆಂದಿರುತ್ತೇನೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಮೋಕ್ಷಕ್ಕೆ ಸಂಬಂಧಿಸಿದಂತೆ ನಡೆದ ಗುರು-ಶಿಷ್ಯರ ಸಂವಾದರೂಪವಾದ ಪುರಾತನವಾದ ಇತಿಹಾಸವನ್ನು ಉದಾಹರಿಸುತ್ತಾರೆ.

ಒಮ್ಮೆ ಆಚಾರ್ಯನಾದ, ಋಷಿಶ್ರೇಷ್ಠನಾದ, ತೇಜಸ್ಸಿನ ರಾಶಿಯಂತೆಯೇ ಬ್ರಹ್ಮವರ್ಚಸದಿಂದ ಪ್ರಜ್ವಲಿಸುತ್ತಿದ್ದ, ಮಹಾತ್ಮನಾದ, ಸತ್ಯಸಂಧನಾದ, ಜಿತೇಂದ್ರಿಯನಾದ, ಸುಖಾಸನದಲ್ಲಿ ಉಪವಿಷ್ಟನಾಗಿದ್ದ ಒಬ್ಬ ಬ್ರಾಹ್ಮಣನನ್ನು ಪರಮಮೇಧಾವಿಯಾದ, ಏಕಾಗ್ರಚಿತ್ತನಾದ, ಶ್ರೇಯೋಭಿಲಾಷಿಯಾದ ಶಿಷ್ಯನೊಬ್ಬನು ಸಮೀಪಿಸಿ ಆಚಾರ್ಯನ ಪಾದಗಳಿಗೆರಗಿ ಬದ್ಧಾಂಜಲಿಯಾಗಿ ನಿಂತು ಹೇಳಿದನು :

ಉಪಾಸನಾತ್ಪ್ರಸನ್ನೋಽಸಿ ಯದಿ ವೈ ಭಗವನ್ಮಮ ।
ಸಂಶಯೋ ಮೇ ಮಹಾನ್ಕಶ್ಚಿತ್ತನ್ಮೇ ವ್ಯಾಖ್ಯಾತುಮರ್ಹಸಿ ।
ಕುತಶ್ಚಾಹಂ ಕುತಶ್ಚ ತ್ವಂ ತತ್ಸಮ್ಯಗ್ಬ್ರೂಹಿ ಯತ್ಪರಮ್ ॥೫॥

"ಭಗವನ್! ನೀವು ನನ್ನ ಅನವರತವಾದ ಸೇವೆಯಿಂದ ತೃಪ್ತರಾಗಿರುವಿರಾದರೆ–ನನ್ನ ಮನಸ್ಸಿನಲ್ಲುಂಟಾಗಿರುವ ಒಂದು ದೊಡ್ಡ ಸಂಶಯ

ವನ್ನು ನಿವಾರಣೆಮಾಡುವ ಮೂಲಕ ಅನುಗ್ರಹಿಸಿರಿ. ಈ ನನ್ನ ಸಂಶಯದ ವಿಷಯವಾಗಿ ನೀವು ವಿವರಣೆಯನ್ನು ನೀಡಬೇಕಾಗಿದೆ. 'ನಾನು ಇಲ್ಲಿಗೆ ಎಲ್ಲಿಂದ ಬಂದಿರುವೆನು? ನೀವಾದರೂ ಎಲ್ಲಿಂದ ಬಂದಿರುವಿರಿ?'– ಎಂಬುದೇ ಆ ಸಂಶಯವಾಗಿದೆ. ಈ ವಿಷಯವನ್ನು ನನಗೆ ವಿಶದವಾಗಿ ನಿರೂಪಿಸಿ ಹೇಳಿರಿ. ಅದೂ ಅಲ್ಲದೇ ಪರಮತತ್ತ್ವವು ಯಾವುದೆಂಬುದನ್ನೂ ಹೇಳಿರಿ.

ಕಥಂ ಚ ಸರ್ವಭೂತೇಷು ಸಮೇಷು ದ್ವಿಜಸತ್ತಮ ।
ಸಮ್ಯಗ್ವೃತ್ತಾ ನಿವರ್ತನ್ತೇ ವಿಪರೀತಾಃ ಕ್ಷಯೋದಯಾಃ ॥೬॥

ದ್ವಿಜಶ್ರೇಷ್ಠರಾದ ಗುರುಗಳೇ! ಪೃಥಿವಿಯೇ ಮೊದಲಾದ ಪಂಚಮಹಾ ಭೂತಗಳೂ ಸರ್ವತ್ರ ಸಮಾನವಾಗಿವೆ. ಎಲ್ಲ ಪ್ರಾಣಿಗಳ ಶರೀರಗಳೂ ಪಂಚ ಮಹಾಭೂತಗಳಿಂದಲೇ ನಿರ್ಮಿಸಲ್ಪಟ್ಟಿವೆ. ಹೀಗಿದ್ದರೂ ಶರೀರಗಳಲ್ಲಿ ಕ್ಷಯ ಮತ್ತು ವೃದ್ಧಿಗಳೆಂಬ ವಿಪರೀತವಾದ ವಿಕಾರಗಳು ಹೇಗುಂಟಾಗುತ್ತವೆ?

ವೇದೇಷು ಚಾಪಿ ಯದ್ವಾಕ್ಯಂ ಲೌಕಿಕಂ ವ್ಯಾಪಕಂ ಚ ಯತ್ ।
ಏತದ್ವಿದ್ವನ್ನಥಾತತ್ತ್ವಂ ಸರ್ವಂ ವ್ಯಾಖ್ಯಾತುಮರ್ಹಸಿ ॥೭॥

ವೇದಗಳಲ್ಲಿಯೂ ಮತ್ತು ಸ್ಮೃತಿಗಳಲ್ಲಿಯೂ ಲೌಕಿಕವಾದ ಮತ್ತು ವ್ಯಾಪಕವಾದ ವಾಕ್ಯಗಳಿವೆ. (ಆ ವಾಕ್ಯಗಳಲ್ಲಿಯೂ ವಿಷಮತೆಯು ಕಂಡುಬರುತ್ತದೆ.) ವಿದ್ವಾಂಸರೇ! ಈ ಎಲ್ಲವನ್ನೂ ನೀವು ಯಥಾವತ್ತಾಗಿ ವ್ಯಾಖ್ಯಾನಿಸಲು ಸಮರ್ಥರಾಗಿರುವಿರಿ."

ಗುರುವು ಹೇಳುತ್ತಾನೆ :

ಶೃಣು ಶಿಷ್ಯ ಮಹಾಪ್ರಾಜ್ಞ ಬ್ರಹ್ಮಗುಹ್ಯಮಿದಂ ಪರಮ್ ।
ಅಧ್ಯಾತ್ಮಂ ಸರ್ವವಿದ್ಯಾನಾಮಾಗಮಾನಂ ಚ ಯದ್ವಸು ॥೮॥

"ಮಹಾಪ್ರಾಜ್ಞನೇ! ಶಿಷ್ಯೋತ್ತಮನೇ! ನೀನು ಕೇಳಿರುವ ಈ ಪ್ರಶ್ನೆಯು ವೇದಗಳಲ್ಲಿರುವ ಶ್ರೇಷ್ಠವಾದ ರಹಸ್ಯದ ವಿಷಯವಾಗಿದೆ. ಅಧ್ಯಾತ್ಮವೆಂದು ಹೇಳಲ್ಪಡುವ ಈ ತತ್ತ್ವವು ಎಲ್ಲ ವಿದ್ಯೆಗಳಿಗೂ ಮತ್ತು ಶಾಸ್ತ್ರಗಳಿಗೂ ಐಶ್ವರ್ಯಪ್ರಾಯವಾಗಿದೆ.

ವಾಸುದೇವಃ ಪರಮಿದಂ ವಿಶ್ವಸ್ಯ ಬ್ರಹ್ಮಣೋ ಮುಖಮ್ ।
ಸತ್ಯಂ ಜ್ಞಾನಮಥೋ ಯಜ್ಞಸ್ತಿತಿಕ್ಷಾ ದಮ ಆರ್ಜವಮ್ ॥೯॥

ಸಂಪೂರ್ಣವೇದಗಳಿಗೂ ಮುಖಪ್ರಾಯವಾಗಿರುವ ಓಂಕಾರ, ಸತ್ಯ, ಜ್ಞಾನ, ಯಜ್ಞ, ಸಹನೆ, ಇಂದ್ರಿಯಸಂಯಮ, ಸರಳತೆ ಮತ್ತು ಪರತತ್ತ್ವ– ಇವೆಲ್ಲವೂ ವಾಸುದೇವಮಯವೇ ಆಗಿದೆ.

ಪುರುಷಂ ಸನಾತನಂ ವಿಷ್ಣುಂ ಯಂ ತಂ ವೇದವಿದೋ ವಿದುಃ ।
ಸರ್ಗಪ್ರಲಯಕರ್ತಾರಮವ್ಯಕ್ತಂ ಬ್ರಹ್ಮ ಶಾಶ್ವತಮ್ ॥೧೦॥

ವೇದವನ್ನು ತಿಳಿದಿರುವ ವಿದ್ವಾಂಸರು ಸನಾತನಪುರುಷನಾದ ಮಹಾ ವಿಷ್ಣುವನ್ನು ಪ್ರಪಂಚದ ಸೃಷ್ಟಿ-ಸ್ಥಿತಿ-ಲಯಕರನೆಂದೂ, ಅವ್ಯಕ್ತವಾದ-ಶಾಶ್ವತ ವಾದ ಬ್ರಹ್ಮವಸ್ತುವೆಂದೂ ಹೇಳುತ್ತಾರೆ.

ತದಿದಂ ಬ್ರಹ್ಮ ವಾರ್ಷ್ಣೇಯಮಿತಿಹಾಸಂ ಶೃಣುಷ್ವ ಮೇ ।
ಬ್ರಾಹ್ಮಣೋ ಬ್ರಾಹ್ಮಣೈಃ ಶ್ರಾವ್ಯೋ ರಾಜನ್ಯಃ ಕ್ಷತ್ರಿಯೈಸ್ತಥಾ ॥೧೧॥

ವೈಶ್ಯೋ ವೈಶ್ಯೈಸ್ತಥಾ ಶ್ರಾವ್ಯಃ ಶೂದ್ರಃ ಶೂದ್ರೈರ್ಮಹಾಮನಾಃ ।
ಮಾಹಾತ್ಮ್ಯಂ ದೇವದೇವಸ್ಯ ವಿಷ್ಣೋರಮಿತತೇಜಸಃ ॥೧೨॥

ಆ ಪರಬ್ರಹ್ಮವಸ್ತುವೇ ವೃಷ್ಣಿಕುಲದಲ್ಲಿ ಶ್ರೀಕೃಷ್ಣನಾಗಿ ಅವತರಿಸಿದೆ. ಈ ಶ್ರೀಕೃಷ್ಣನ ಸಂಬಂಧವಾದ ಇತಿಹಾಸವನ್ನು ನನ್ನಿಂದ ಕೇಳು. ಬ್ರಾಹ್ಮಣನು ಬ್ರಾಹ್ಮಣರಿಂದಲೂ, ಕ್ಷತ್ರಿಯನು ಕ್ಷತ್ರಿಯರಿಂದಲೂ, ವೈಶ್ಯನು ವೈಶ್ಯ ರಿಂದಲೂ, ಮಹಾತ್ಮನಾದ ಶೂದ್ರನು ಶೂದ್ರರಿಂದಲೂ–ದೇವದೇವನಾದ, ಅಮಿತತೇಜಸ್ವಿಯಾದ ಶ್ರೀಕೃಷ್ಣರೂಪಿಯಾದ ವಿಷ್ಣುವಿನ ಮಾಹಾತ್ಮ್ಯವನ್ನು ಕೇಳಬೇಕು.

ಅರ್ಹಸ್ತ್ವಮಸಿ ಕಲ್ಯಾಣಂ ವಾರ್ಷ್ಣೇಯಂ ಶೃಣು ಯತ್ಪರಮ್ ।
ಕಾಲಚಕ್ರಮನಾದ್ಯನ್ತಂ ಭಾವಾಭಾವಸ್ವಲಕ್ಷಣಮ್ ।
ತ್ರೈಲೋಕ್ಯಂ ಸರ್ವಭೂತೇಶೇ ಚಕ್ರವತ್ಪರಿವರ್ತತೇ ॥೧೩॥

ನೀನಾದರೂ ಶ್ರೀಕೃಷ್ಣನ ಮಾಹಾತ್ಮ್ಯವನ್ನು ಕೇಳಲು ಯೋಗ್ಯ ನಾಗಿರುವೆ. ಆದುದರಿಂದ ಶ್ರೀಕೃಷ್ಣನ ಉತ್ಕೃಷ್ಟವಾದ ಕಲ್ಯಾಣಮಯ

ವಾದ ಮಾಹಾತ್ಮ್ಯವನ್ನು ಕೇಳು. ಸೃಷ್ಟಿ-ಸ್ಥಿತಿ-ಲಯಗಳ ಲಕ್ಷಣಗಳಿಂದ ಕೂಡಿರುವ, ಆದ್ಯಂತರಹಿತವಾದ ಕಾಲಚಕ್ರವೇ ಶ್ರೀಕೃಷ್ಣನ ಸ್ವರೂಪವಾಗಿದೆ. ಸರ್ವಭೂತೇಶ್ವರನಾದ ಶ್ರೀಕೃಷ್ಣನಲ್ಲಿ ಮೂರು ಲೋಕಗಳೂ ಚಕ್ರದೋಪಾದಿಯಲ್ಲಿ ತಿರುಗುತ್ತಿರುತ್ತವೆ.

ಯತ್ತದಕ್ಷರಮವ್ಯಕ್ತಮಮೃತಂ ಬ್ರಹ್ಮ ಶಾಶ್ವತಮ್ ।
ವದನ್ತಿ ಪುರುಷವ್ಯಾಘ್ರ ಕೇಶವಂ ಪುರುಷರ್ಷಭಮ್ ॥೧೪॥

ಪುರುಷಸಿಂಹನೇ! ಪುರುಷೋತ್ತಮನಾದ ಶ್ರೀಕೃಷ್ಣನೇ ಅವಿನಾಶಿಯಾದ ಅಕ್ಷರನೆಂದೂ, ಅವ್ಯಕ್ತನೆಂದೂ, ಅಮೃತಸ್ವರೂಪನೆಂದೂ, ಸನಾತನನಾದ ಪರಬ್ರಹ್ಮನೆಂದೂ–ವಿದ್ವಾಂಸರು ಹೇಳುತ್ತಾರೆ.

ಪಿತೄನ್ದೇವಾನೃಷೀಂಶ್ಚೈವ ತಥಾ ವೈ ಯಕ್ಷರಾಕ್ಷಸಾನ್ ।
ನಾಗಾಸುರಮನುಷ್ಯಾಂಶ್ಚ ಸೃಜತೇ ಪರಮೋಽವ್ಯಯಃ ॥೧೫॥

ಅವಿನಾಶಿಯಾದ, ಪರಮಾತ್ಮನಾದ ಶ್ರೀಕೃಷ್ಣನೇ ಪಿತೃಗಳನ್ನೂ, ದೇವತೆಗಳನ್ನೂ, ಋಷಿಗಳನ್ನೂ, ಯಕ್ಷ-ರಾಕ್ಷಸರನ್ನೂ, ನಾಗರನ್ನೂ, ಅಸುರರನ್ನೂ, ಮನುಷ್ಯರನ್ನೂ ಸೃಷ್ಟಿಸುತ್ತಾನೆ.

ತಥೈವ ವೇದಶಾಸ್ತ್ರಾಣಿ ಲೋಕಧರ್ಮಾಂಶ್ಚ ಶಾಶ್ವತಾನ್ ।
ಪ್ರಲಯಂ ಪ್ರಕೃತಿಂ ಪ್ರಾಪ್ಯ ಯುಗಾದೌ ಸೃಜತೇ ಪುನಃ ॥೧೬॥

ಅದೇ ರೀತಿಯಲ್ಲಿ ಪ್ರಳಯಕಾಲವು ಮುಗಿದು ಮತ್ತೊಂದು ಕಲ್ಪದ ಪ್ರಾರಂಭದಲ್ಲಿ ಪ್ರಕೃತಿಯನ್ನು ಆಶ್ರಯಿಸುವ ಶ್ರೀಕೃಷ್ಣನೇ ಪುನಃ ವೇದ-ಶಾಸ್ತ್ರಗಳನ್ನೂ, ಸನಾತನವಾದ ಲೋಕಧರ್ಮಗಳನ್ನೂ ಪ್ರಕಟಿಸುತ್ತಾನೆ.

ಯಥರ್ತಾವೃತುಲಿಙ್ಗಾನಿ ನಾನಾರೂಪಾಣಿ ಪರ್ಯಯೇ ।
ದೃಶ್ಯನ್ತೇ ತಾನಿ ತಾನ್ಯೇವ ತಥಾ ಭಾವಾ ಯುಗಾದಿಷು ॥೧೭॥

ಯಾವ ರೀತಿಯಲ್ಲಿ ವಸಂತಾದಿ ಋತುಗಳ ಪರಿವರ್ತನೆಯಾದೊಡನೆಯೇ ಹಿಂದಿನ ವರ್ಷದಲ್ಲಿಯಂತೆಯೇ ಭಿನ್ನ-ಭಿನ್ನವಾದ ಋತುಧರ್ಮಗಳು ಮೂಡಿಬರುತ್ತವೆಯೋ–ಅದೇ ರೀತಿಯಲ್ಲಿ ಪ್ರತಿಯೊಂದು ಯುಗದ ಆದಿಯಲ್ಲಿಯೂ ಹಿಂದಿನ ಯುಗದ ಆದಿಯಲ್ಲಿದ್ದ ಭಾವಗಳೇ ಅಭಿವ್ಯಕ್ತವಾಗುತ್ತವೆ.

ಅಥ ಯದ್ಯದ್ಯದಾ ಭಾತಿ ಕಾಲಯೋಗಾದ್ಯುಗಾದಿಷು ।
ತತ್ತದುತ್ಪದ್ಯತೇ ಜ್ಞಾನಂ ಲೋಕಯಾತ್ರಾ ವಿಧಾನಜಮ್ ॥೧೮॥

ಕಾಲಕ್ರಮದಿಂದ ಆಯಾ ಯುಗಗಳ ಆದಿಯಲ್ಲಿ ಯಾವ ಯಾವ ವಸ್ತುಗಳು ಅಭಿವ್ಯಕ್ತವಾಗುತ್ತವೆಯೋ ಲೋಕವ್ಯವಹಾರವನ್ನು ಅನುಸರಿಸಿ ಆಯಾ ವಸ್ತುಗಳ ಜ್ಞಾನವೂ ಉಂಟಾಗುತ್ತದೆ.

ಯುಗಾನ್ತೇಽನ್ತರ್ಹಿತಾನ್ವೇದಾನ್ಸೇತಿಹಾಸಾನ್ಮಹರ್ಷಯಃ ।
ಲೇಭಿರೇ ತಪಸಾ ಪೂರ್ವಮನುಜ್ಞಾತಾಃ ಸ್ವಯಮ್ಭುವಾ ॥೧೯॥

ಸ್ವಯಂಭೂಬ್ರಹ್ಮನಿಂದ ಅನುಮತಿಯನ್ನು ಪಡೆದ ಮಹರ್ಷಿಗಳು ಯುಗಾಂತದಲ್ಲಿ ಅಂತರ್ಹಿತವಾಗಿದ್ದ ಇತಿಹಾಸಸಹಿತವಾದ ವೇದಗಳನ್ನು ತಪಸ್ಸಿನಿಂದ ಪುನಃ ಪಡೆದುಕೊಂಡರು.

ವೇದವಿದ್ವೇದ ಭಗವಾನ್ವೇದಾಙ್ಗಾನಿ ಬೃಹಸ್ಪತಿಃ ।
ಭಾರ್ಗವೋ ನೀತಿಶಾಸ್ತ್ರಂ ತು ಜಗಾದ ಜಗತೋ ಹಿತಮ್ ॥೨೦॥

ಆ ಸಮಯದಲ್ಲಿ (ಯುಗದ ಆದಿಯಲ್ಲಿ) ಸ್ವಯಂ ಭಗವಾನ್ ಬ್ರಹ್ಮನು ವೇದಗಳನ್ನೂ, ಬೃಹಸ್ಪತಿಯು ವೇದಾಂಗಗಳನ್ನೂ, ಶುಕ್ರನು ಜಗತ್ತಿಗೆ ಹಿತಕರವಾದ ನೀತಿಶಾಸ್ತ್ರಗಳನ್ನೂ ಮಹರ್ಷಿಗಳಿಗೆ ಉಪದೇಶಿಸಿದರು.

ಗಾನ್ಧರ್ವಂ ನಾರದೋ ವೇದ ಭರದ್ವಾಜೋ ಧನುರ್ಗ್ರಹಮ್ ।
ದೇವರ್ಷಿಚರಿತಂ ಗಾರ್ಗ್ಯಃ ಕೃಷ್ಣಾತ್ರೇಯಶ್ಚಿಕಿತ್ಸಿತಮ್ ॥೨೧॥

ನಾರದನು ಗಾಂಧರ್ವವೇದವನ್ನೂ (ಸಂಗೀತಶಾಸ್ತ್ರವನ್ನೂ), ಭರ ದ್ವಾಜನು ಧನುರ್ವೇದವನ್ನೂ, ಗಾರ್ಗ್ಯಮಹರ್ಷಿಯು ದೇವರ್ಷಿಗಳ ಚರಿತ್ರೆ ಯನ್ನೂ, ಕೃಷ್ಣಾತ್ರೇಯನು ಚಿಕಿತ್ಸಾಶಾಸ್ತ್ರವನ್ನೂ (ಆಯುರ್ವೇದವನ್ನೂ) ಬ್ರಹ್ಮನ ಆದೇಶದಂತೆ ತಿಳಿದುಕೊಂಡರು.

ನ್ಯಾಯತನ್ತ್ರಾಣ್ಯನೇಕಾನಿ ತೈಸ್ತೈರುಕ್ತಾನಿ ವಾದಿಭಿಃ ।
ಹೇತ್ವಾಗಮಸದಾಚಾರೈರ್ಯದುಕ್ತಂ ತದುಪಾಸ್ಯತಾಮ್ ॥೨೨॥

ತರ್ಕಶೀಲರಾದ ವಿದ್ವಾಂಸರು ತರ್ಕಶಾಸ್ತ್ರಕ್ಕೆ ಸಂಬಂಧಿಸಿದಂತೆ ತಾರ್ಕಿ

ಕರು ಹೇಳಿದ್ದ ನ್ಯಾಯತಂತ್ರಗಳನ್ನೂ ತಿಳಿದುಕೊಂಡರು. ವತ್ಸ! ಯುಕ್ತಿ, ವೇದ-ಶಾಸ್ತ್ರಗಳು ಮತ್ತು ಸದಾಚಾರಗಳಿಂದ ಋಷಿಗಳು ಯಾವ ಬ್ರಹ್ಮವಸ್ತು ವಿನ ವಿಷಯವಾಗಿ ಹೇಳಿರುವರೋ –ಆ ಬ್ರಹ್ಮವಸ್ತುವನ್ನು ನೀನೂ ಉಪಾ ಸನೆಮಾಡು.

ಅನಾದ್ಯಂ ತತ್ಪರಂ ಬ್ರಹ್ಮ ನ ದೇವಾ ನರ್ಷಯೋ ವಿದುಃ ।
ಏಕಸ್ತದ್ವೇದ ಭಗವಾನ್ಧಾತಾ ನಾರಾಯಣಃ ಪ್ರಭುಃ ॥೨೩॥

ಆದ್ಯಂತರಹಿತವಾದ ಆ ಪರಬ್ರಹ್ಮವಸ್ತುವನ್ನು ದೇವತೆಗಳಾಗಲೀ ಋಷಿಗಳಾಗಲೀ ತಿಳಿದವರಾಗಿಲ್ಲ. ಜಗತ್ಪಾಲಕನಾದ, ಪ್ರಭುವಾದ ಭಗವಾನ್ ನಾರಾಯಣನೊಬ್ಬನೇ ಆ ಬ್ರಹ್ಮವಸ್ತುವನ್ನು ತಿಳಿದವನಾಗಿರುತ್ತಾನೆ.

ನಾರಾಯಣಾದೃಷಿಗಣಾಸ್ತಥಾ ಮುಖ್ಯಾಃ ಸುರಾಸುರಾಃ ।
ರಾಜರ್ಷಯಃ ಪುರಾಣಾಶ್ಚ ಪರಮಂ ದುಃಖಭೇಷಜಮ್ ॥೨೪॥

ಋಷಿಗಳ ಸಮೂಹಗಳೂ, ಮುಖ್ಯ-ಮುಖ್ಯರಾದ ದೇವತೆಗಳೂ, ಅಸುರರೂ, ಪ್ರಾಚೀನರಾದ ರಾಜರ್ಷಿಗಳೂ ಜಗದಾದಿಗುರುವಾದ ನಾರಾಯಣನಿಂದಲೇ ಬ್ರಹ್ಮಜ್ಞಾನವನ್ನು ಪಡೆದುಕೊಂಡರು. ಆ ಬ್ರಹ್ಮ ಜ್ಞಾನವೇ ಎಲ್ಲ ವಿಧವಾದ ದುಃಖಗಳಿಗೂ ಪರಮೌಷಧವಾಗಿದೆ.

ಪುರುಷಾಧಿಷ್ಠಿತಾನ್ಭಾವಾನ್ಪ್ರಕೃತಿಃ ಸೂಯತೇ ಯದಾ ।
ಹೇತುಯುಕ್ತಮತಃ ಪೂರ್ವಂ ಜಗತ್ಸಮ್ಪರಿವರ್ತತೇ ॥೨೫॥

ಪುರುಷನಿಂದ ಆಶ್ರಯಿಸಲ್ಪಟ್ಟ (ಸಂಕಲ್ಪಿತವಾದ) ಎಲ್ಲ ಭಾವಗಳನ್ನೂ (ವಸ್ತುಗಳನ್ನೂ) ಪ್ರಕೃತಿಯೇ ಸೃಷ್ಟಿಸುತ್ತದೆ. ಅನಂತರ ಆ ಪ್ರಕೃತಿಯಿಂದಲೇ ಎಲ್ಲಕ್ಕಿಂತಲೂ ಮೊದಲಾಗಿ ಕಾರಣಸಹಿತವಾದ ವಿಶ್ವವು ಹುಟ್ಟುತ್ತದೆ.

ದೀಪಾದನ್ಯೇ ಯಥಾ ದೀಪಾಃ ಪ್ರವರ್ತನ್ತೇ ಸಹಸ್ರಶಃ ।
ಪ್ರಕೃತಿಃ ಸೂಯತೇ ತದ್ವದಾನನ್ತ್ಯಾನ್ನಾಪಚೀಯತೇ ॥೨೬॥

ಒಂದು ದೀಪದಿಂದ ಸಾವಿರಾರು ದೀಪಗಳು ಹೊತ್ತಿಕೊಳ್ಳುವಂತೆ

ಮತ್ತು ಸಾವಿರ ದೀಪಗಳನ್ನೂ ಹೊತ್ತಿಸಿದರೂ ಆ ದೀಪವು ತನ್ನ ಪೂರ್ಣ ಸ್ವರೂಪವನ್ನು ಕಳೆದುಕೊಳ್ಳದಿರುವಂತೆ–ಒಂದೇ ಪ್ರಕೃತಿಯು ಅಸಂಖ್ಯಾತ ವಾದ ಪದಾರ್ಥಗಳನ್ನು ಸೃಷ್ಟಿಸುತ್ತಾ ಹೋಗುತ್ತದೆ. ಆದರೂ ತನ್ನ ಪೂರ್ಣಸ್ವರೂಪದಿಂದ (ಅನಂತ್ಯದಿಂದ) ನ್ಯೂನತೆಯನ್ನು ಹೊಂದುವುದಿಲ್ಲ. (ಪ್ರಕೃತಿಯು ಅಸಂಖ್ಯಾತವಾದ ಪದಾರ್ಥಗಳನ್ನು ಸೃಷ್ಟಿಸಿದರೂ ಅದು ಪೂರ್ಣರೂಪದಲ್ಲಿಯೇ ಉಳಿದಿರುತ್ತದೆ.)

ಅವ್ಯಕ್ತಕರ್ಮಜಾ ಬುದ್ಧಿರಹಂಕಾರಂ ಪ್ರಸೂಯತೇ ।
ಆಕಾಶಂ ಚಾಪ್ಯಹಂಕಾರಾದ್ವಾಯುರಾಕಾಶಸಮ್ಭವಃ ॥೨೭॥

ಅವ್ಯಕ್ತವಾದ ಪ್ರಕೃತಿಯ ಕರ್ಮದಿಂದ ರೂಪುಗೊಂಡ ಬುದ್ಧಿಯು (ಮಹತ್ತತ್ತ್ವವು) ಅಹಂಕಾರವನ್ನು ಸೃಷ್ಟಿಸುತ್ತದೆ. ಅಹಂಕಾರದಿಂದ ಆಕಾಶವು ಹುಟ್ಟುತ್ತದೆ. ವಾಯುವು ಆಕಾಶದಿಂದ ಹುಟ್ಟುವ ವಸ್ತುವಾಗಿದೆ.

ವಾಯೋಸ್ತೇಜಸ್ತತಶ್ಚಾಪ ಅದ್ಭ್ಯೋಽಥ ವಸುಧೋದ್ಗತಾ ।
ಮೂಲಪ್ರಕೃತಯೋ ಹ್ಯಷ್ಟೌ ಜಗದೇತಾಸ್ವವಸ್ಥಿತಮ್ ॥೨೮॥

ವಾಯುವಿನಿಂದ ತೇಜಸ್ಸೂ, ತೇಜಸ್ಸಿನಿಂದ ನೀರೂ, ನೀರಿನಿಂದ ಪೃಥ್ವಿಯೂ ಹುಟ್ಟುತ್ತವೆ. ಹೀಗೆ ಪ್ರಕೃತಿ, ಬುದ್ಧಿ ಅಥವಾ ಮಹತ್ತತ್ತ್ವ, ಅಹಂಕಾರ, ಆಕಾಶ, ವಾಯು, ತೇಜಸ್ಸು, ನೀರು ಮತ್ತು ಪೃಥಿವೀ–ಈ ಎಂಟೂ ಮೂಲಪ್ರಕೃತಿಗಳೆಂದು ಹೇಳಲ್ಪಟ್ಟಿವೆ. ಈ ಎಂಟು ಮೂಲ ಪ್ರಕೃತಿಗಳಲ್ಲಿಯೇ ಸಂಪೂರ್ಣಜಗತ್ತೂ ಪ್ರತಿಷ್ಠಿತವಾಗಿದೆ.

ಜ್ಞಾನೇನ್ದ್ರಿಯಾಣ್ಯತಃ ಪಞ್ಚ ಪಞ್ಚ ಕರ್ಮೇನ್ದ್ರಿಯಾಣ್ಯಪಿ ।
ವಿಷಯಾಃ ಪಞ್ಚ ಚೈಕಂ ಚ ವಿಕಾರೇ ಷೋಡಶಂ ಮನಃ ॥೨೯॥

ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ವಿಷಯಗಳು, ಹದಿನಾರನೆಯದಾದ ಮನಸ್ಸು –ಇವುಗಳು ಎಂಟು ಮೂಲ ಪ್ರಕೃತಿಗಳ ವಿಕಾರಗಳೆಂದು ಹೇಳಲ್ಪಟ್ಟಿವೆ. ಈ ಹದಿನಾರರಲ್ಲಿ ಮನಸ್ಸು ಅಹಂಕಾರತತ್ತ್ವದ ವಿಕಾರವಾಗಿದೆ. ಉಳಿದ ಹದಿನೈದು ಅವುಗಳ ಉತ್ಪತ್ತಿಗೆ ಕಾರಣಗಳಾದ ಪಂಚಮಹಾಭೂತಗಳ ವಿಕಾರಗಳಾಗಿವೆ.

ಶ್ರೋತ್ರಂ ತ್ವಕ್ಚಕ್ಷುಷೀ ಜಿಹ್ವಾ ಘ್ರಾಣಂ ಜ್ಞಾನೇನ್ದ್ರಿಯಾಣ್ಯಥ ।
ಪಾದೌ ಪಾಯುರುಪಸ್ಥಶ್ಚ ಹಸ್ತೌ ವಾಕ್ಕರ್ಮಣೀ ಅಪಿ ॥೩೦॥

ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು–ಈ ಐದು ಜ್ಞಾನೇಂದ್ರಿಯಗಳಾಗಿವೆ. ಪಾದಗಳು, ಗುದ, ಉಪಸ್ಥ (ಜನನೇಂದ್ರಿಯ), ಕೈಗಳು ಮತ್ತು ಮಾತು–ಇವುಗಳು ಐದೂ ಕರ್ಮೇಂದ್ರಿಯಗಳಾಗಿವೆ.

ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗನ್ಧಸ್ತಥೈವ ಚ ।
ವಿಜ್ಞೇಯಂ ವ್ಯಾಪಕಂ ಚಿತ್ತಂ ತೇಷು ಸರ್ವಗತಂ ಮನಃ ॥೩೧॥

ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ–ಈ ಐದೂ ಇಂದ್ರಿಯಾರ್ಥಗಳು. ಇವುಗಳೆಲ್ಲದರಲ್ಲಿಯೂ (ಈ ಹದಿನೈದರಲ್ಲಿಯೂ) ವ್ಯಾಪಿಸಿರುವುದು ಚಿತ್ತವೆಂದು ತಿಳಿಯಬೇಕು. ಈ ಚಿತ್ತವು ಅಥವಾ ಮನಸ್ಸು ಸರ್ವಗತವಾದುದು. ಎಲ್ಲದರಲ್ಲಿಯೂ ಪ್ರವೇಶಿಸತಕ್ಕುದು.

ರಸಜ್ಞಾನೇ ತು ಜಿಹ್ವೇಯಂ ವ್ಯಾಹೃತೇ ವಾಕ್ತಥೋಚ್ಯತೇ ।
ಇನ್ದ್ರಿಯೈರ್ವಿವಿಧೈರ್ಯುಕ್ತಂ ಸರ್ವಂ ವ್ಯಕ್ತಂ ಮನಸ್ತಥಾ ॥೩೨॥

ಭಿನ್ನ-ಭಿನ್ನವಾದ ಇಂದ್ರಿಯಗಳೊಡನೆ ಕೂಡಿರುವ ಮನಸ್ಸು ಆಯಾ ಇಂದ್ರಿಯಗಳ ಮೂಲಕವಾಗಿ ತನ್ನನ್ನೇ ವ್ಯಕ್ತಪಡಿಸಿಕೊಳ್ಳುತ್ತಿರುತ್ತದೆ. ಮನಸ್ಸು ರಸದ ರುಚಿಯನ್ನು ತಿಳಿಯಲು ಹೋದಾಗ ನಾಲಿಗೆಯು ರುಚಿಯನ್ನು ತಿಳಿಯುವ ಜ್ಞಾನೇಂದ್ರಿಯವಾಗುತ್ತದೆ. ಅದೇ ಮನಸ್ಸು ನಾಲಿಗೆಯ ಮೂಲಕವಾಗಿ ಮಾತನಾಡಲು ಯತ್ನಿಸಿದಾಗ ವಾಗಿಂದ್ರಿಯ (ಕರ್ಮೇಂದ್ರಿಯ)ವಾಗುತ್ತದೆ. (ಕಿವಿಯು ಕೇಳುವುದು, ಮೂಗು ವಾಸನೆ ನೋಡುವುದು–ಇತ್ಯಾದಿಗಳು ಮನಸ್ಸು ಆ ಇಂದ್ರಿಯಗಳಲ್ಲಿ ಪ್ರವೇಶಿಸುವುದರಿಂದಲೇ ಸಾಧ್ಯವಾಗುತ್ತದೆ. ಮನಸ್ಸು ಇಂದ್ರಿಯಗಳಲ್ಲಿ ಪ್ರವೇಶಿಸದಿದ್ದರೆ ಇಂದ್ರಿಯಗಳು ಸ್ವತಂತ್ರವಾಗಿ ಯಾವ ಕರ್ಮವನ್ನೂ ಮಾಡಲಾರವು. ಆದುದರಿಂದ ಎಲ್ಲ ಇಂದ್ರಿಯಗಳಲ್ಲಿಯೂ ಮನಸ್ಸಿನ ಅಂತರ್ಭಾವವಿದ್ದೇ ಇರುತ್ತದೆ.)

ವಿದ್ಯಾತ್ತು ಷೋಡಶೈತಾನಿ ದೈವತಾನಿ ವಿಭಾಗಶಃ ।
ದೇಹೇಷು ಜ್ಞಾನಕರ್ತಾರಮುಪಾಸೀನಮುಪಾಸತೇ ॥೩೩॥

ಹತ್ತು ಇಂದ್ರಿಯಗಳು, ಐದು ಮಹಾಭೂತಗಳು ಮತ್ತು ಮನಸ್ಸು– ದೇವತೆಗಳ ರೂಪದಲ್ಲಿರುವ ಈ ಹದಿನಾರು ತತ್ತ್ವಗಳು ಶರೀರದಲ್ಲಿ ವಿಭಾಗಶಃ ನೆಲೆಸಿರುತ್ತವೆ. ಶರೀರಗಳಲ್ಲಿ ಜ್ಞಾನಕರ್ತೃವಾದ ಪರಮಾತ್ಮನನ್ನು ಉಪಾಸನೆಮಾಡುವ ಜೀವನನ್ನು ದೇವತೆಗಳ ರೂಪದಲ್ಲಿರುವ ಈ ಹದಿನಾರು ತತ್ತ್ವಗಳೂ ಉಪಾಸನೆಮಾಡುತ್ತವೆ.

ತದ್ವತ್ಸೋಮಗುಣಾ ಜಿಹ್ವಾ ಗನ್ಧಸ್ತು ಪೃಥಿವೀಗುಣಃ ।
ಶ್ರೋತ್ರಂ ನಭೋಗುಣಂ ಚೈವ ಚಕ್ಷುರಗ್ನೇರ್ಗುಣಸ್ತಥಾ ।
ಸ್ಪರ್ಶಂ ವಾಯುಗುಣಂ ವಿದ್ಯಾತ್ಸರ್ವಭೂತೇಷು ಸರ್ವದಾ ॥೩೪॥

ಹಾಗೆಯೇ ಸರ್ವಪ್ರಾಣಿಗಳಲ್ಲಿಯೂ, ಸರ್ವಕಾಲಗಳಲ್ಲಿಯೂ– ನಾಲಿಗೆಯು ನೀರಿನ ಗುಣವುಳ್ಳದ್ದೆಂದೂ,* ಗಂಧವು ಅಂದರೆ ಘ್ರಾಣೇಂದ್ರಿಯವು ಪೃಥಿವೀಗುಣವುಳ್ಳದ್ದೆಂದೂ, ಶ್ರೋತ್ರವು ಆಕಾಶಗುಣವುಳ್ಳದ್ದೆಂದೂ, ಕಣ್ಣು ಅಗ್ನಿಯ ಗುಣವುಳ್ಳದ್ದೆಂದೂ, ಸ್ಪರ್ಶವು ವಾಯುಗುಣದ್ದೆಂದೂ ತಿಳಿಯಬೇಕು.

ಮನಃ ಸತ್ತ್ವಗುಣಂ ಪ್ರಾಹುಃ ಸತ್ತ್ವಮವ್ಯಕ್ತಜಂ ತಥಾ ।
ಸರ್ವಭೂತಾತ್ಮಭೂತಸ್ಥಂ ತಸ್ಮಾದ್ಬುದ್ಧ್ಯೇತ ಬುದ್ಧಿಮಾನ್ ॥೩೫॥

ಮನಸ್ಸು ಸತ್ತ್ವಗುಣವುಳ್ಳದ್ದೆಂದು (ಮಹತ್ತತ್ತ್ವದ ಕಾರ್ಯವೆಂದು) ಹೇಳುತ್ತಾರೆ. ಆ ಸತ್ತ್ವವು ಅವ್ಯಕ್ತನಾದ ಪರಮಾತ್ಮನಿಂದ ಹುಟ್ಟಿದುದು. ಈ ಕಾರಣದಿಂದ ಬುದ್ಧಿವಂತನಾದವನು ಪರಮಾತ್ಮನು ಸಮಸ್ತಪ್ರಾಣಿಗಳಿಗೂ ಆತ್ಮರೂಪನಾಗಿರುವನೆಂದು ತಿಳಿಯಬೇಕು.

ಏತೇ ಭಾವಾ ಜಗತ್ಸರ್ವಂ ವಹನ್ತಿ ಸಚರಾಚರಮ್ ।
ಶ್ರಿತಾ ವಿರಜಸಂ ದೇವಂ ಯಮಾಹುಃ ಪ್ರಕೃತೇಃ ಪರಮ್ ॥೩೬॥

ಈ ರೀತಿಯಲ್ಲಿ ಸತ್ತ್ವಾದಿಗಳು ಚರಾಚರಸಹಿತವಾದ ಸಕಲಜಗ

---

* ಸೋಮನು ರಸಾತ್ಮಕನಾದುದರಿಂದ ಸೋಮಶಬ್ದಕ್ಕೆ ನೀರೆಂದು ಸಮಯೋಚಿತವಾಗಿ ಅರ್ಥಮಾಡಲಾಗಿದೆ.

ತ್ತನ್ನೂ ಧರಿಸಿಕೊಂಡಿವೆ. ಯಾರನ್ನು ಪ್ರಕೃತಿಗಿಂತಲೂ ಅತೀತನೆಂದು ಹೇಳುವರೋ, ಯಾವನು ರಜೋಗುಣದಿಂದ ರಹಿತನಾಗಿರುವನೋ –ಅಂತಹ ಪರಮಾತ್ಮಪರಬ್ರಹ್ಮದೇವನನ್ನು ಇವುಗಳೆಲ್ಲವೂ ಆಶ್ರಯಿಸಿವೆ.

ನವದ್ವಾರಂ ಪುರಂ ಪುಣ್ಯಮೇತೈರ್ಭಾವೈಃ ಸಮನ್ವಿತಮ್ ।
ವ್ಯಾಪ್ಯ ಶೇತೇ ಮಹಾನಾತ್ಮಾ ತಸ್ಮಾತ್ಪುರುಷ ಉಚ್ಯತೇ ॥೩೭॥

ಈ ಹದಿನಾರು ತತ್ತ್ವಗಳಿಂದ ಸಂಪನ್ನವಾಗಿರುವ, ಒಂಬತ್ತು ಬಾಗಿಲುಗಳುಳ್ಳ ಪುಣ್ಯವಾದ ಪುರವನ್ನು (ಶರೀರವನ್ನು) ವ್ಯಾಪಿಸಿ ಮಹಾತ್ಮನಾದ ಆತ್ಮಕ್ಕೂ ಅಂತರಾತ್ಮನಾದ ಪರಮಾತ್ಮನು ಪವಡಿಸಿದ್ದಾನೆ. ಆದುದರಿಂದಲೇ ಪುರುಷನೆಂಬ ಹೆಸರಿನಿಂದಲೂ ಅವನನ್ನು ಕರೆಯುತ್ತಾರೆ. (ಪುರಿ ಶೇತೇ ಇತಿ ಪುರುಷಃ)

ಅಜರಃ ಸೋಽಮರಶ್ಚೈವ ವ್ಯಕ್ತಾವ್ಯಕ್ತೋಪದೇಶವಾನ್ ।
ವ್ಯಾಪಕಃ ಸಗುಣಃ ಸೂಕ್ಷ್ಮಃ ಸರ್ವಭೂತಗುಣಾಶ್ರಯಃ ॥೩೮॥

ಆ ಪುರುಷನು ಜರಾಮರಣಗಳಿಂದ ರಹಿತನಾದವನು. ಮೂರ್ತಾಮೂರ್ತಸ್ವರೂಪಗಳಿಗೂ ಪ್ರೇರಕನು. ಸರ್ವವ್ಯಾಪಕನು. ಸರ್ವಜ್ಞತ್ವವೇ ಮೊದಲಾದ ಗುಣಗಳಿಂದ ಸಂಪನ್ನನಾಗಿರತಕ್ಕವನು. ಸೂಕ್ಷ್ಮಾತಿಸೂಕ್ಷ್ಮನು. ಸರ್ವಪ್ರಾಣಿಗಳಿಗೂ ಮತ್ತು ಸತ್ತ್ವಾದಿಗುಣಗಳಿಗೂ ಆಶ್ರಯಸ್ಥಾನನಾಗಿರತಕ್ಕವನು.

ಯಥಾ ದೀಪಃ ಪ್ರಕಾಶಾತ್ಮಾ ಹ್ರಸ್ವೋ ವಾ ಯದಿ ವಾ ಮಹಾನ್ ।
ಜ್ಞಾನಾತ್ಮಾನಂ ತಥಾ ವಿದ್ಯಾತ್ಪುರುಷಂ ಸರ್ವಜನ್ತುಷು ॥೩೯॥

ದೀಪವು ಸಣ್ಣದೇ ಆಗಿರಲಿ, ದೊಡ್ಡದೇ ಆಗಿರಲಿ–ಪ್ರಕಾಶಸ್ವರೂಪವೇ ಆಗಿರುವಂತೆ–ಸರ್ವಪ್ರಾಣಿಗಳಲ್ಲಿಯೂ ಇರುವ ಜೀವಾತ್ಮನು ಜ್ಞಾನಸ್ವರೂಪನಾಗಿರುವನೆಂದು ತಿಳಿಯಬೇಕು.

ಶ್ರೋತ್ರಂ ವೇದಯತೇ ವೇದ್ಯಂ ಸ ಶೃಣೋತಿ ಸ ಪಶ್ಯತಿ ।
ಕಾರಣಂ ತಸ್ಯ ದೇಹೋಽಯಂ ಸ ಕರ್ತಾ ಸರ್ವಕರ್ಮಣಾಮ್ ॥

ಪುರುಷನು ಶ್ರವಣೇಂದ್ರಿಯಕ್ಕೆ ಜ್ಞೇಯಭೂತವಾದ ಶಬ್ದವನ್ನು ಕೇಳುವಂತೆ ಮಾಡುತ್ತಾನೆ. (ಶ್ರೋತ್ರೇಂದ್ರಿಯಕ್ಕೆ ಕೇಳುವ ಚೈತನ್ಯವನ್ನು ಕೊಟ್ಟಿರುವವನು ಶರೀರಪುರದಲ್ಲಿ ಪವಡಿಸಿರುವ ಪುರುಷನೇ ಆಗಿರುತ್ತಾನೆ.) ಹಾಗೆಯೇ ಚಕ್ಷುರಿಂದ್ರಿಯಕ್ಕೆ ವಿಷಯವಾದ ರೂಪವನ್ನು ಗ್ರಹಿಸುವಂತೆ ಮಾಡುವವನೂ ಪುರುಷನೇ ಆಗಿದ್ದಾನೆ. (ಕಣ್ಣುಗಳಿಗೆ ನೋಡಲು ಚೈತನ್ಯವನ್ನು ಕೊಟ್ಟಿರುವವನೂ ಪುರುಷನೇ.) ಈ ಶರೀರವು ಶಬ್ದಾದಿ ವಿಷಯಗಳ ಅನುಭವಕ್ಕೆ ನಿಮಿತ್ತಮಾತ್ರವಾಗಿದೆ. ದೇಹರೂಪವಾದ ಪುರದಲ್ಲಿ ಪವಡಿಸಿರುವ ಜೀವಾತ್ಮನೇ ಎಲ್ಲ ಕಾರ್ಯಗಳಿಗೂ ಕರ್ತೃವಾಗಿದ್ದಾನೆ.

ಅಗ್ನಿರ್ದಾರುಗತೋ ಯದ್ವದ್ಭಿನ್ನೇ ದಾರೌ ನ ದೃಶ್ಯತೇ ।
ತಥೈವಾತ್ಮಾ ಶರೀರಸ್ಥೋ ಯೋಗೇನೈವಾನುದೃಶ್ಯತೇ ॥೪೧॥

ಅಗ್ನಿರ್ಯಥಾ ಹ್ಯುಪಾಯೇನ ಮಥಿತ್ವಾ ದಾರು ದೃಶ್ಯತೇ ।
ತಥೈವಾತ್ಮಾ ಶರೀರಸ್ತೋ ಯೋಗೇನೈವಾತ್ರ ದೃಶ್ಯತೇ ॥೪೨॥

ಕಟ್ಟಿಗೆಯಲ್ಲಿ ವ್ಯಾಪ್ತವಾಗಿರುವ ಬೆಂಕಿಯು ಕಟ್ಟಿಗೆಯನ್ನು ಸೀಳಿದಾಗ ಕಾಣಿಸುವುದಿಲ್ಲ. ಹಾಗೆಯೇ ಆತ್ಮನು ಶರೀರದಲ್ಲಿಯೇ ಇದ್ದರೂ ಶರೀರವನ್ನು ಭೇದಿಸಿ ಅವನನ್ನು ಕಾಣಲಾಗುವುದಿಲ್ಲ. ಯೋಗದ ಮೂಲಕವಾಗಿಯೇ ಅವನ ದರ್ಶನವಾಗುತ್ತದೆ. ಉಪಾಯದಿಂದ ಕಡೆದರೆ ಕಟ್ಟಿಗೆಯಲ್ಲಿರುವ ಅಗ್ನಿಯು ಕಾಣಿಸಿಕೊಳ್ಳುವಂತೆ –ಯೋಗದ ಮೂಲಕವಾಗಿ ಶರೀರವನ್ನು ಕಡೆದರೆ ಶರೀರದಲ್ಲಿರುವ ಆತ್ಮನು ಕಾಣಿಸಿಕೊಳ್ಳುತ್ತಾನೆ.

ನದೀಷ್ವಾಪೋ ಯಥಾ ಯುಕ್ತಾ ಯಥಾ ಸೂರ್ಯೇ ಮರೀಚಯಃ ।
ಸಂತತತ್ವಾದ್ಯಥಾ ಯಾನ್ತಿ ತಥಾ ದೇಹಾಃ ಶರೀರಿಣಾಮ್ ॥೪೩॥

ನದಿಗಳಲ್ಲಿ ನೀರು ಹೇಗೆ ಸೇರಿಕೊಂಡಿರುತ್ತವೆಯೋ, ಸೂರ್ಯನಲ್ಲಿ ಕಿರಣಗಳು ಹೇಗೆ ಸೇರಿಕೊಂಡಿರುತ್ತವೆಯೋ, ನೀರಿಗೂ-ನದಿಗೂ, ಕಿರಣಗಳಿಗೂ-ಸೂರ್ಯನಿಗೂ ನಿತ್ಯಸಂಬಂಧವಿರುವುದರಿಂದ ಹೇಗೆ ಜೊತೆ-ಜೊತೆಯಲ್ಲಿಯೇ ಹೋಗುವುವೋ–ಅದೇ ರೀತಿಯಲ್ಲಿ ದೇಹಧಾರಿಗಳಲ್ಲಿರುವ

ಸೂಕ್ಷ್ಮಶರೀರವೂ ಜೀವಾತ್ಮನೊಡನೆಯೇ ಇರುತ್ತದೆ ಮತ್ತು ಅವರೊಡನೆಯೇ ಹೋಗುತ್ತಿರುತ್ತದೆ.

ಸ್ವಪ್ನಯೋಗೇ ಯಥೈವಾತ್ಮಾ ಪಞ್ಚೇನ್ದ್ರಿಯಸಮಾಯುತಃ ।
ದೇಹಮುತ್ಸೃಜ್ಯ ವೈ ಯಾತಿ ತಥೈವಾತ್ಮೋಪಲಭ್ಯತೇ ॥೪೪॥

ಸ್ವಪ್ನದ ಸಮಯದಲ್ಲಿ ಯಾವ ರೀತಿಯಲ್ಲಿ ಪಂಚೇಂದ್ರಿಯಯುಕ್ತನಾದ ಜೀವಾತ್ಮನು ಶರೀರವನ್ನು ಬಿಟ್ಟು ಬೇರೆಡೆಗೆ ಹೋಗುವನೋ–ಅದೇ ರೀತಿಯಲ್ಲಿ ಅವಸಾನಾನಂತರದಲ್ಲಿಯೂ ಈ ಶರೀರವನ್ನು ಬಿಟ್ಟು ಮತ್ತೊಂದು ಶರೀರವನ್ನು ಆಶ್ರಯಿಸುತ್ತಾನೆ.

ಕರ್ಮಣಾ ಬಾಧ್ಯತೇ ರೂಪಂ ಕರ್ಮಣಾ ಚೋಪಲಭ್ಯತೇ ।
ಕರ್ಮಣಾ ನೀಯತೇಽನ್ಯತ್ರ ಸ್ವಕೃತೇನ ಬಲೀಯಸಾ ॥೪೫॥

ಕರ್ಮದ ಕಾರಣದಿಂದಲೇ ಈಗಿರುವ ದೇಹಕ್ಕೆ ಬಾಧೆಯುಂಟಾಗುತ್ತದೆ. ಕರ್ಮದ ಕಾರಣದಿಂದಲೇ ಅವಸಾನಾನಂತರದಲ್ಲಿ ಅನ್ಯದೇಹವು ಲಭ್ಯವಾಗುತ್ತದೆ. ತಾನು ಮಾಡಿದ ಬಲಿಷ್ಠವಾದ ಕರ್ಮದಿಂದಲೇ ಜೀವನು ಅನ್ಯಶರೀರಕ್ಕೊ ಒಯ್ಯಲ್ಪಡುತ್ತಾನೆ.

ಸ ತು ದೇಹಾದ್ಯಥಾ ದೇಹಂ ತ್ಯಕ್ತ್ವಾನ್ಯಂ ಪ್ರತಿಪದ್ಯತೇ ।
ತಥಾನ್ಯಂ ಸಮ್ಪ್ರವಕ್ಷ್ಯಾಮಿ ಭೂತಗ್ರಾಮಂ ಸ್ವಕರ್ಮಜಮ್ ॥೪೬॥

ಜೀವಾತ್ಮನು ಯಾವ ರೀತಿಯಲ್ಲಿ ಒಂದು ಶರೀರವನ್ನು ಬಿಟ್ಟು ಮತ್ತೊಂದು ಶರೀರವನ್ನು ಗ್ರಹಣಮಾಡುವನೋ–ಅದೇ ರೀತಿಯಲ್ಲಿ ಜೀವಾತ್ಮನು ತನ್ನ ಕರ್ಮದಿಂದ ಸ್ಥಾವರ-ಜಂಗಮರೂಪವನ್ನು ಪಡೆಯುತ್ತಾನೆ–ಎಂಬ ವಿಷಯವನ್ನೂ ನಿನಗೆ ವಿಶದವಾಗಿ ಹೇಳುತ್ತೇನೆ.”

ಇಲ್ಲಿಗೆ ೨೧೦ನೆಯ ಅಧ್ಯಾಯವು ಮುಗಿಯಿತು.

೨೧೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಸಂಸಾರಚಕ್ರದ ಮತ್ತು ಜೀವಾತ್ಮಸ್ಥಿತಿಯ ವರ್ಣನೆ

ಧರ್ಮಜ! ಗುರುವು ಶಿಷ್ಯನಿಗೆ ಹೇಳುತ್ತಾನೆ :

ಚತುರ್ವಿಧಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ ।
ಅವ್ಯಕ್ತಪ್ರಭವಾನ್ಯಾಹುರವ್ಯಕ್ತನಿಧನಾನಿ ಚ ।
ಅವ್ಯಕ್ತಲಕ್ಷಣಂ ವಿದ್ಯಾದವ್ಯಕ್ತಾತ್ಮಾತ್ಮಕಂ ಮನಃ ॥೧॥

"ವತ್ಸ! ಸ್ಥಾವರ-ಜಂಗಮಪ್ರಾಣಿಗಳು ಜರಾಯುಜ (ಗರ್ಭಾಶಯದಿಂದ ಹುಟ್ಟುವ ಪ್ರಾಣಿಗಳು), ಅಂಡಜ (ಮೊಟ್ಟೆಯಿಂದ ಹುಟ್ಟುವ ಪ್ರಾಣಿಗಳು), ಸ್ವೇದಜ (ಬೆವರಿನಿಂದ (ನೀರಿನಿಂದ) ಹುಟ್ಟುವ ಪ್ರಾಣಿಗಳು) ಮತ್ತು ಉದ್ಭಿಜ್ಜ (ಭೂಮಿಯನ್ನು ಸೀಳಿಕೊಂಡು ಹುಟ್ಟುವ ತರು-ಗುಲ್ಮಾದಿಗಳು) ಎಂದು ನಾಲ್ಕು ಪ್ರಕಾರಗಳಾಗಿರುತ್ತವೆ. ಈ ಪ್ರಾಣಿಗಳೆಲ್ಲವೂ ಅವ್ಯಕ್ತದಿಂದಲೇ ಹುಟ್ಟುತ್ತವೆ ಮತ್ತು ಇವುಗಳ ಲಯವೂ ಅವ್ಯಕ್ತದಲ್ಲಿಯೇ ಆಗುತ್ತದೆ. ಯಾವುದರ ಲಕ್ಷಣಗಳು ವ್ಯಕ್ತವಾಗಿ ಕಾಣುವುದಿಲ್ಲವೋ ಅದು ಅವ್ಯಕ್ತವೆನಿಸಿಕೊಳ್ಳುತ್ತದೆ. ವಸ್ತುವು ಅವ್ಯಕ್ತವಾಗಿದ್ದರೂ ಗುಣಾತೀತವಾಗಿರುವುದಿಲ್ಲ. ಪ್ರಕೃತಿಯು ಅವ್ಯಕ್ತವಾಗಿದ್ದರೂ ತ್ರಿಗುಣಾತ್ಮಕವಾಗಿದೆ. ಹಾಗೆಯೇ ಮನಸ್ಸು ಅವ್ಯಕ್ತವಾಗಿದ್ದರೂ ತ್ರಿಗುಣಾತ್ಮಕವಾಗಿದೆ.

ಯಥಾಶ್ವತ್ಥಕಣೀಕಾಯಾಮನ್ತರ್ಭೂತೋ ಮಹಾದ್ರುಮಃ ।
ನಿಷ್ಪನ್ನೋ ದೃಶ್ಯತೇ ವ್ಯಕ್ತಮವ್ಯಕ್ತಾತ್ಸಮ್ಭವಸ್ತಥಾ ॥೨॥

ಯಾವ ರೀತಿಯಲ್ಲಿ ಸಾಸವೆಕಾಳಿನಷ್ಟು ರೂಪದ ಅಶ್ವತ್ಥದ ಬೀಜದಲ್ಲಿ ಮಹಾವೃಕ್ಷವೇ ಅವ್ಯಕ್ತರೂಪದಲ್ಲಿ ಅಡಗಿಕೊಂಡಿರುವುದೋ, ಬೀಜವು ಮೊಳೆತು ಬೆಳೆದನಂತರ ಮಹಾವೃಕ್ಷವಾಗಿ ವ್ಯಕ್ತವಾಗುವುದೋ–ಹಾಗೆಯೇ ಅವ್ಯಕ್ತದಿಂದ ವ್ಯಕ್ತವಾದ ಜಗತ್ತು ನಿಷ್ಪನ್ನವಾಗುತ್ತದೆ.

ಅಭಿದ್ರವತ್ಯಯಸ್ಕಾನ್ತಮಯೋ ನಿಶ್ಚೇತನಂ ಯಥಾ ।
ಸ್ವಭಾವಹೇತುಜಾ ಭಾವಾ ಯದ್ವದನ್ಯದಪೀದೃಶಮ್ ॥೩॥

ಯಾವ ರೀತಿಯಲ್ಲಿ ಲೋಹವು ಅಚೇತನವಾಗಿದ್ದರೂ ಲೋಹ ಚುಂಬಕದ ಕಡೆಗೇ ಓಡುವುದೋ–ಹಾಗೆಯೇ ಶರೀರವು ಹುಟ್ಟಿದೊಡನೆಯೇ ಪ್ರಾಣಿಯ ಪೂರ್ವಸಂಸ್ಕಾರದಿಂದ ಹುಟ್ಟಿದ ಸ್ವಾಭಾವಿಕವಾದ ಅವಿದ್ಯಾ-ಕಾಮ-ಕರ್ಮಾದಿ ಗುಣಗಳೆಲ್ಲವೂ ಆ ಶರೀರದ ಕಡೆಗೇ ಸೆಳೆಯಲ್ಪಡುತ್ತವೆ.

ತದ್ವದವ್ಯಕ್ತಜಾ ಭಾವಾಃ ಕರ್ತುಃ ಕಾರಣಲಕ್ಷಣಾಃ ।
ಅಚೇತನಾಶ್ಚೇತಯಿತುಃ ಕಾರಣಾದಭಿಸಂಹತಾಃ ॥೪॥

ಅದೇ ರೀತಿಯಲ್ಲಿ ಅವ್ಯಕ್ತದಿಂದ (ಅವಿದ್ಯೆಯಿಂದ) ಹುಟ್ಟಿದುವುಗಳಾಗಿ ಕಾರಣಗಳೂ ಆಗಿರುವ ಕರ್ತೃವಿನ (ಜೀವನ) ಅಚೇತನವಾದ (ಕಾಮ-ಕರ್ಮ-ವಾಸನಾದಿ) ಭಾವಗಳು ಚೈತನ್ಯವನ್ನು ತುಂಬುವ * ಸರ್ವ ಕಾರಣನಾದ ಪರಮಾತ್ಮನಿಂದಲೇ ಒಟ್ಟಾಗಿ ಸೇರಿಸಲ್ಪಟ್ಟಿವೆ.

ನ ಭೂರ್ನ ಖಂ ದ್ಯೌರ್ಭೂತಾನಿ ನರ್ಷಯೋ ನ ಸುರಾಸುರಾಃ ।
ನಾನ್ಯದಾಸೀದೃತೇ ಜೀವಮಾಸೇದುರ್ನ ತು ಸಂಹತಮ್ ॥೫॥

ಹಿಂದೆ ಪೃಥ್ವೀ, ಆಕಾಶ, ಸ್ವರ್ಗ, ಭೂತಗಣ, ಋಷಿಗಣ, ದೇವತೆಗಳು, ಅಸುರರು (ಶಮ-ಕಾಮಾದಿಗಳು) ಇವರು ಯಾರೂ ಇರಲೇ ಇಲ್ಲ. ಜೀವ (ಚೈತನ್ಯ)ವೊಂದನ್ನು ಬಿಟ್ಟು ಯಾವ ವಸ್ತುವೂ ಅಸ್ತಿತ್ವದಲ್ಲಿರಲಿಲ್ಲ. ಜಡ ಮತ್ತು ಚೇತನಗಳ ಸಂಯೋಗವೂ ಇರಲಿಲ್ಲ.

ಪೂರ್ವಂ ನಿತ್ಯಂ ಸರ್ವಗತಂ ಮನೋಹೇತುಮಲಕ್ಷಣಮ್ ।
ಅಜ್ಞಾನಕರ್ಮ ನಿರ್ದಿಷ್ಟಮೇತತ್ಕಾರಣಲಕ್ಷಣಮ್ ॥೬॥

ಕಾರಣನಾದ ಪರಮಾತ್ಮನಿಂದ ಜೀವನಿಗೆ ಹಿಂದೆ ನಿತ್ಯವೂ, ಸರ್ವವ್ಯಾಪಕವೂ, ಮನೋಜನ್ಯವೂ, ಅನಿರ್ವಚನೀಯವೂ ಆದ ಅಜ್ಞಾನಕರ್ಮವು ನಿರ್ದೇಶಿಸಲ್ಪಟ್ಟಿತು. ಇದು (ಸರ್ವಮೂಲವಾಗಿ ನಿರ್ದೇಶ ಮಾಡುವುದು) ಕಾರಣದ ಲಕ್ಷಣ. (ಅನಾದಿಯಾದ ಅವಿದ್ಯೆಗಳ ಕರ್ಮಗಳ

---

* 'ಸಕಾರಣಂ ಕರಣಾಧಿಪಾಧಿಪಃ' 'ಕಾರಣಂ ತು ಧ್ಯೇಯಃ' ಎಂದು ಶಾಸ್ತ್ರಗಳು ಹೇಳುವಂತೆ ಕಾರಣನೆಂದರೆ ಪರಮಾತ್ಮನೇ. ಕಾಮ-ಕರ್ಮಾದಿ ಭಾವಗಳು ಪುಣ್ಯಾಪುಣ್ಯ ಗಳಿಗೆ ಕಾರಣವಾದರೂ ಎಲ್ಲಕ್ಕೂ ಮೂಲಕಾರಣನು ವಿಷ್ಣುವೇ ಆಗಿದ್ದಾನೆ.

ಸಂಬಂಧವನ್ನು ಜೀವನಿಗೆ ನಿರ್ದೇಶಿಸುವವನು ಭಗವಂತ. ಅದನ್ನು ಬಿಡಿಸುವ ಉಪಾಯವನ್ನು ನಿರ್ದೇಶಿಸುವ ಸಮರ್ಥನೂ ಅವನೇ ಆಗಿದ್ದಾನೆ.)

ತತ್ಕಾರಣೈರ್ಹಿ ಸಂಯುಕ್ತಂ ಕಾರ್ಯಸಂಗ್ರಹಕಾರಕಮ್ ।
ಯೇನೈತದ್ವರ್ತತೇ ಚಕ್ರಮನಾದಿನಿಧನಂ ಮಹತ್ ॥೭॥

ವಾಸನಾದಿ ಕಾರಣಗಳಿಂದ ಯುಕ್ತವಾದ ಜೀವವು ಕರ್ಮಗಳ ಸಂಗ್ರಹ ವನ್ನು ಮಾಡುತ್ತದೆ. ಜೀವವು ಹಿಂದಿನ ವಾಸನೆಯನ್ನು ಅನುಸರಿಸಿ ಕರ್ಮ ಗಳಲ್ಲಿ ಪ್ರವೃತ್ತವಾಗುತ್ತದೆ. ಕರ್ಮಗಳಿಂದ ವಾಸನೆಯೂ–ವಾಸನಾರೂಪ ವಾದ ಕರ್ಮವೂ ನಡೆಯುತ್ತಲೇ ಹೋಗುತ್ತದೆ. ಹೀಗೆ ಅನಾದಿಯೂ, ಅನಂತವೂ ಆದ ಮಹಾಸಂಸಾರಚಕ್ರವು ಉರುಳುತ್ತಾ ಹೋಗುತ್ತದೆ.

ಅವ್ಯಕ್ತನಾಭಂ ವ್ಯಕ್ತಾರಂ ವಿಕಾರಪರಿಮಣ್ಡಲಮ್ ।
ಕ್ಷೇತ್ರಜ್ಞಾಧಿಷ್ಠಿತಂ ಚಕ್ರಂ ಸ್ನಿಗ್ಧಾಕ್ಷಂ ವರ್ತತೇ ಧ್ರುವಮ್ ॥೮॥

ಜನ್ಮ-ಮರಣಪ್ರವಾಹರೂಪವಾದ ಈ ಸಂಸಾರವು ಚಕ್ರದೋಪಾದಿ ಯಲ್ಲಿ ತಿರುಗುತ್ತಿರುತ್ತದೆ. ಅವ್ಯಕ್ತವೇ ಆ ಚಕ್ರದ ನಾಭಿ (ಗುಂಭ) ಯಾಗಿರು ತ್ತದೆ. ವ್ಯಕ್ತವೇ (ದೇಹೇಂದ್ರಿಯಾದಿಗಳೇ) ಆ ಚಕ್ರದ ಅರೆಕಾಲುಗಳಾಗಿರು ತ್ತವೆ. ಸುಖ-ದುಃಖಾದಿ ವಿಕಾರಗಳೇ ಚಕ್ರದ ಅಂಚಾಗಿರುತ್ತವೆ. ಆಸಕ್ತಿ ಯೆಂಬುದೇ ಆ ಚಕ್ರದ ಅಚ್ಚಾಗಿರುತ್ತದೆ. ಆ ಚಕ್ರವು ನಿಶ್ಚಿತರೂಪದಲ್ಲಿ ತಿರುಗುತ್ತಲೇ ಇರುತ್ತದೆ. ಅದರಲ್ಲಿ ಕ್ಷೇತ್ರಜ್ಞನು (ಜೀವಾತ್ಮನು) ಅಧಿಷ್ಠಿತ ನಾಗಿರುತ್ತಾನೆ.

ಸ್ನಿಗ್ಧತ್ವಾತ್ತಿಲವತ್ಸರ್ವಂ ಚಕ್ರೇಽಸ್ಮಿನ್ಪೀಡ್ಯತೇ ಜಗತ್ ।
ತಿಲಪೀಡೈರಿವಾಕ್ರಮ್ಯ ಭೋಗೈರಜ್ಞಾನಸಮ್ಭವೈಃ ॥೯॥

ಯಾವ ರೀತಿಯಲ್ಲಿ ಎಣ್ಣೆತೆಗೆಯುವವರು ಎಳ್ಳು ಜಿಡ್ಡಿನಿಂದ (ಎಣ್ಣೆ ಯಿಂದ) ಕೂಡಿರುವುದರಿಂದ ಎಳ್ಳನ್ನು ಗಾಣಕ್ಕೆ ಹಾಕಿ ಅರೆಯುವರೋ- ಅದೇ ರೀತಿಯಲ್ಲಿ ಈ ಸಂಪೂರ್ಣಪ್ರಪಂಚವೂ ಸ್ನೇಹಗ್ರಸ್ತವಾಗಿರುವುದರಿಂದ ಅಜ್ಞಾನಜನಿತವಾದ ಭೋಗಾದಿಗಳಿಂದ ಆಕ್ರಮಿಸಲ್ಪಟ್ಟು ಜನನ- ಮರಣರೂಪವಾದ ಚಕ್ರದಲ್ಲಿ ಅರೆಯಲ್ಪಡುತ್ತದೆ.

ಕರ್ಮ ತತ್ಕುರುತೇ ತರ್ಷಾದಹಂಕಾರಪರಿಗ್ರಹಾತ್ ।
ಕಾರ್ಯಕಾರಣಸಂಯೋಗೇ ಸ ಹೇತುರುಪಪಾದಿತಃ ॥೧೦॥

ಜೀವವು ಅಹಂಕಾರಕ್ಕೆ ಅಧೀನವಾಗಿ ತೃಷ್ಣೆಯ ಕಾರಣದಿಂದ ಕರ್ಮಗಳನ್ನು ಮಾಡುತ್ತದೆ. ಹಾಗೆ ಮಾಡುವ ಕರ್ಮವೇ ಮುಂದಿನ ಕಾರ್ಯಕಾರಣಗಳ ಯೋಗಕ್ಕೆ (ದೇಹಾಜ್ಞಾನಯೋಗಕ್ಕೆ) ಕಾರಣಭೂತ ವಾಗುವುದೆಂದು ಪ್ರತಿಪಾದಿತವಾಗಿದೆ.

ನಾಭ್ಯೇತಿ ಕಾರಣಂ ಕಾರ್ಯಂ ನ ಕಾರ್ಯಂ ಕಾರಣಂ ತಥಾ ।
ಕಾರ್ಯಾಣಾಂ ತೂಪಕರಣೇ ಕಾಲೋ ಭವತಿ ಹೇತುಮಾನ್ ॥೧೧॥

ಕಾರಣವು ಕಾರ್ಯವನ್ನು ಬೆನ್ನಟ್ಟಿಹೋಗುವುದಿಲ್ಲ. ಕಾರ್ಯವು ಕಾರಣವನ್ನೂ ಅನುಸರಿಸಿ ಹೋಗುವುದಿಲ್ಲ. ಕಾರ್ಯಮಾಡುವ ಸಮಯ ದಲ್ಲಿ ಆ ಕಾರ್ಯದ ಸಿದ್ಧಿಗೆ ಅಥವಾ ಅಸಿದ್ಧಿಗೆ ಕಾಲವೇ ಕಾರಣವಾಗಿರುತ್ತದೆ.

ಹೇತುಯುಕ್ತಾಃ ಪ್ರಕೃತಯೋ ವಿಕಾರಾಶ್ಚ ಪರಸ್ಪರಮ್ ।
ಅನ್ಯೋನ್ಯಮಭಿವರ್ತನ್ತೇ ಪುರುಷಾಧಿಷ್ಠಿತಾಃ ಸದಾ ॥೧೨॥

ಕಾರಣಸಹಿತವಾದ ಎಂಟು ಮೂಲಪ್ರಕೃತಿಗಳೂ, ಅವುಗಳ ಹದಿನಾರು ವಿಕಾರಗಳೂ ಪುರುಷನಲ್ಲಿ ಅಧಿಷ್ಠಾನವನ್ನು ಹೊಂದಿ (ಆಶ್ರಯವನ್ನು ಪಡೆದು) ಪರಸ್ಪರವಾಗಿ ಸೇರುತ್ತಿರುತ್ತವೆ ಮತ್ತು ಸೃಷ್ಟಿಯನ್ನು ವಿಸ್ತರಿಸುತ್ತಿರುತ್ತವೆ.

ರಾಜಸೈಸ್ತಾಮಸೈರ್ಭಾವೈರ್ಯುತೋ ಹೇತುಬಲಾನ್ವಿತಃ ।
ಕ್ಷೇತ್ರಜ್ಞಮೇವಾನುಯಾತಿ ಪಾಂಸುರ್ವಾತೇರಿತೋ ಯಥಾ ॥೧೩॥

ಸ್ಥೂಲದೇಹವನ್ನು ಪರಿತ್ಯಜಿಸಿದನಂತರ ಸೂಕ್ಷ್ಮಶರೀರವು ರಾಜಸ-ತಾಮಸಭಾವಗಳಿಂದ ಕೂಡಿ ವಾಸನಾಬಲದಿಂದ ಯುಕ್ತವಾಗಿ ಗಾಳಿಯಿಂದ ಎಬ್ಬಿಸಲ್ಪಟ್ಟ ಧೂಳಿನಂತೆ–ಕ್ಷೇತ್ರಜ್ಞನನ್ನೇ (ಜೀವನನ್ನೇ) ಅನುಸರಿಸಿ ಹೋಗುತ್ತದೆ. (ಹಿಂದಿನ ಜನ್ಮದ ವಾಸನೆಗಳೊಡನೆ ಜೀವನು ಸೂಕ್ಷ್ಮ ಶರೀರವನ್ನು ಪ್ರವೇಶಿಸಿ ಅನಂತರ ಆ ಸೂಕ್ಷ್ಮಶರೀರದೊಡನೆ ಮತ್ತೊಂದು ಸ್ಥೂಲಶರೀರವನ್ನು ಪ್ರವೇಶಿಸುತ್ತಾನೆ.)

ನ ಚ ತೈಃ ಸ್ಪೃಶ್ಯತೇ ಭಾವೈರ್ನ ತೇ ತೇನ ಮಹಾತ್ಮನಾ ।
ಸರಜಸ್ಕೋಽರಜಸ್ಕಶ್ಚ ನೈವ ವಾಯುರ್ಭವೇದ್ಯಥಾ ॥೧೪॥

ಆತ್ಮನು ರಾಜಸ-ತಾಮಸಾದಿ ಭಾವಗಳನ್ನು ಸ್ಪರ್ಶಿಸುವುದಿಲ್ಲ. ರಾಜಸ-ತಾಮಸಾದಿಭಾವಗಳೂ ಆತ್ಮನನ್ನು ಸ್ಪರ್ಶಿಸುವುದಿಲ್ಲ. ಆದರೆ ಧೂಳಿನಿಂದ ರಹಿತವಾದ ವಾಯುವು ಕೆಲವು ಸಮಯಗಳಲ್ಲಿ ಧೂಳಿನಿಂದ ಕೂಡಿರುವ ಹಾಗೆ ಕಾಣುವಂತೆ–ಆತ್ಮನು ರಾಜಸ-ತಾಮಸಾದಿ ಭಾವಗಳಿಂದ ಕೂಡಿರುವಂತೆ ಕಾಣುತ್ತಾನೆ. (ವಾಯುವೆಂದಿಗೂ ರಜಸ್ಸಿನಿಂದ ಕೂಡಿರ ದಂತೆ ಆತ್ಮನೆಂದಿಗೂ ರಾಜಸ-ತಾಮಸಾದಿ ಗುಣಗಳಿಂದ ಕೂಡಿದವನಾಗಿರುವುದಿಲ್ಲ.)

ತಥೈತದನ್ತರಂ ವಿದ್ಯಾತ್ಸತ್ತ್ವಕ್ಷೇತ್ರಜ್ಞಯೋರ್ಬುಧಃ ।
ಅಭ್ಯಾಸಾತ್ಸ ತಥಾ ಯುಕ್ತೋ ನ ಗಚ್ಛೇತ್ಪ್ರಕೃತಿಂ ಪುನಃ ॥೧೫॥

ಆದುದರಿಂದ ವಿವೇಕಿಯಾದ ಪುರುಷನು ಕ್ಷೇತ್ರ ಮತ್ತು ಕ್ಷೇತ್ರಜ್ಞರ ಅಂತರವನ್ನು ತಿಳಿದುಕೊಳ್ಳಬೇಕು. ಅಭ್ಯಾಸಬಲದಿಂದಲೂ ವಾಸನಾಬಲದಿಂದಲೂ ಜೀವನು ದೇಹಾತ್ಮಭಾವವನ್ನು ಹೊಂದಿಬಿಟ್ಟಿರುವುದರಿಂದ ಶುದ್ಧಸ್ವರೂಪದ ಕಡೆಗೆ ಹೋಗಲಾರನು.”

ಭೀಷ್ಮನು ಹೇಳುತ್ತಾನೆ :

ಸಂದೇಹಮೇತಮುತ್ಪನ್ನಮಚ್ಛಿನದ್ಭಗವಾನೃಷಿಃ ।
ತಥಾ ವಾರ್ತಾಂ ಸಮೀಕ್ಷೇತ ಕೃತಲಕ್ಷಣಸಮ್ಮಿತಾಮ್ ॥೧೬॥

“ಯುಧಿಷ್ಠಿರ! ಹೀಗೆ ಆ ಗುರುವು ಶಿಷ್ಯನ ಮನಸ್ಸಿನಲ್ಲಿ ಹುಟ್ಟಿದ್ದ ಸಂದೇಹವನ್ನು ತೊಡೆದುಹಾಕಿದನು. ಆದುದರಿಂದ ವಿದ್ವಾಂಸನು ಯಾವ ಉಪಾಯವು ಉದ್ದೇಶಸಿದ್ಧಿಗೆ ಸಹಾಯಕವಾಗುವುದೋ–ಅಂತಹ ಉಪಾಯವನ್ನೇ ಹುಡುಕಬೇಕು.

ಬೀಜಾನ್ಯಗ್ನ್ಯುಪದಗ್ಧಾನಿ ನ ರೋಹನ್ತಿ ಯಥಾ ಪುನಃ ।
ಜ್ಞಾನದಗ್ಧೈಸ್ತಥಾ ಕ್ಲೇಶೈರ್ನಾತ್ಮಾ ಸಮ್ಪದ್ಯತೇ ಪುನಃ ॥೧೭॥

ಯಾವ ರೀತಿಯಲ್ಲಿ ಬೆಂಕಿಯಲ್ಲಿ ಹುರಿದ ಬೀಜಗಳು ಪುನಃ ಮೊಳೆ

ಯುವುದಿಲ್ಲವೋ–ಅದೇ ರೀತಿಯಲ್ಲಿ ಜ್ಞಾನಾಗ್ನಿಯಿಂದ ದಗ್ಧವಾದ ಕ್ಲೇಶಗಳುಳ್ಳ ಜೀವಾತ್ಮನು ಪುನಃ ಹುಟ್ಟುವುದಿಲ್ಲ."

ಎರಡುನೂರಹನ್ನೊಂದನೆಯ — ೨೧೧ನೆಯ ಅಧ್ಯಾಯವು ಮುಗಿಯಿತು.

೨೧೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ನಿಷಿದ್ಧಾಚರಣೆಗಳ ತ್ಯಾಗ : ಸತ್ತ್ವರಜಸ್ತಮೋಗುಣಗಳ ಕಾರ್ಯ ಮತ್ತು ಅವುಗಳ ಪರಿಣಾಮ

* ಜನಮೇಜಯ! ಭೀಷ್ಮನು ಹೇಳುತ್ತಾನೆ :

ಪ್ರವೃತ್ತಿಲಕ್ಷಣೋ ಧರ್ಮೋ ಯಥಾ ಸಮುಪಲಭ್ಯತೇ ।
ತೇಷಾಂ ವಿಜ್ಞಾನನಿಷ್ಠಾನಾಮನ್ಯತ್ತತ್ತ್ವಂ ನ ರೋಚತೇ ॥೧॥

"ಯುಧಿಷ್ಠಿರ! ಕರ್ಮನಿಷ್ಠರಾದ ಪುರುಷರಿಗೆ ಪ್ರವೃತ್ತಿಲಕ್ಷಣಗಳಿಂದ ಕೂಡಿರುವ ಧರ್ಮವು ಬಹಳ ಸುಲಭವಾಗಿ ರುಚಿಸುತ್ತದೆ. ಅದೇ ರೀತಿಯಲ್ಲಿ ಜ್ಞಾನನಿಷ್ಠರಾದವರಿಗೆ ಜ್ಞಾನಕ್ಕಿಂತಲೂ ಬೇರೆಯದಾದ ಯಾವ ತತ್ತ್ವವೂ ರುಚಿಸುವುದಿಲ್ಲ.

ದುರ್ಲಭಾ ವೇದವಿದ್ವಾಂಸೋ ವೇದೋಕ್ತೇಷು ವ್ಯವಸ್ಥಿತಾಃ ।
ಪ್ರಯೋಜನಂ ಮಹತ್ತ್ವಾತ್ತು ಮಾರ್ಗಮಿಚ್ಛಂತಿ ಸಂಸ್ತುತಮ್ ॥೨॥

ವೇದೋಕ್ತವಾದ ಅಗ್ನಿಹೋತ್ರಾದಿಗಳಲ್ಲಿಯೂ ಮತ್ತು ಶಮ-ದಮಾದಿಗಳಲ್ಲಿಯೂ ನಿಷ್ಠರಾದ ವೇದವಿದ್ವಾಂಸರು ದುರ್ಲಭರೇ ಸರಿ. ಬುದ್ಧಿವಂತರಾದವರು ವೇದೋಕ್ತವಾದ ಸ್ವರ್ಗ ಮತ್ತು ಮೋಕ್ಷಗಳಲ್ಲಿ ಮಹತ್ತ್ವಪೂರ್ಣವೂ ಮತ್ತು ಪ್ರಶಂಸನೀಯವೂ ಆದ ಮೋಕ್ಷಮಾರ್ಗವನ್ನೇ ಅನುಸರಿಸಲು ಇಚ್ಛಿಪಡುತ್ತಾರೆ.

---

* ಒಂದು ಪುಸ್ತಕದಲ್ಲಿ ಗುರು-ಶಿಷ್ಯಸಂವಾದವನ್ನೇ ಅನುವರ್ತಿಸಿ ಅಧ್ಯಾಯದ ಪ್ರಾರಂಭದಲ್ಲಿ 'ಗುರುರುವಾಚ'–ಎಂಬುದಾಗಿಯೇ ಇದೆ. ಉಳಿದ ಪುಸ್ತಕಗಳಲ್ಲಿ ಭೀಷ್ಮ ಉವಾಚ ಎಂಬುದಾಗಿದೆ. ಹಿಂದಿನ ಅಧ್ಯಾಯದ ೧೬ನೆಯ ಶ್ಲೋಕದಲ್ಲಿ: ಭಗವಾನೃಷಿಃ ಸಂದೇಹಮೇತಮುತ್ಪನ್ನಂ ಅಚ್ಛಿನತ್ –ಎಂದು ಹೇಳಿರುವುದರಿಂದ ಗುರು-ಶಿಷ್ಯರ ಸಂವಾದವು ಅಲ್ಲಿಗೇ ಮುಗಿಯಿತೆಂದು ಭಾವಿಸಬಹುದಾಗಿದೆ.

ಸದ್ಭಿರಾಚರಿತತ್ವಾತ್ತು ವೃತ್ತಮೇತದಗರ್ಹಿತಮ್ ।
ಇಯಂ ಸಾ ಬುದ್ಧಿರಭ್ಯೇತ್ಯ ಯಯಾ ಯಾತಿ ಪರಾಂ ಗತಿಮ್ ॥೩॥

ಸತ್ಪುರುಷರು ಯಾವಾಗಲೂ ಮೋಕ್ಷಮಾರ್ಗವನ್ನೇ ಅನುಸರಿಸಿ ಹೋಗುತ್ತಾರೆ. ಆದುದರಿಂದ ಆ ಮಾರ್ಗವು ದೋಷರಹಿತವಾಗಿದೆ. ಮೋಕ್ಷಮಾರ್ಗವನ್ನು ಆಶ್ರಯಿಸಲು ನಿವೃತ್ತ್ಯಾತ್ಮಕವಾದ ಬುದ್ಧಿಯಿರಬೇಕು. ಅಂತಹ ಬುದ್ಧಿಯನ್ನು ಹೊಂದಿದ ಮನುಷ್ಯನು ಪರಮಗತಿಯನ್ನು ಹೊಂದುತ್ತಾನೆ.

ಶರೀರವಾನುಪಾದತ್ತೇ ಮೋಹಾತ್ಸರ್ವಾನ್ಪರಿಗ್ರಹಾನ್ ।
ಕ್ರೋಧಲೋಭಾದಿಭಿರ್ಭಾವೈರ್ಯುಕ್ತೋ ರಾಜಸತಾಮಸೈಃ ॥೪॥

ದೇಹಾಭಿಮಾನಿಯಾದ ಪುರುಷನು ಮೋಹವಶನಾಗಿ ಕ್ರೋಧ-ಲೋಭಗಳೇ ಮೊದಲಾದ ರಾಜಸ–ತಾಮಸಭಾವಗಳಿಂದ ಯುಕ್ತನಾಗಿ ಎಲ್ಲ ವಿಧವಾದ ವಸ್ತುಗಳನ್ನೂ ಸಂಗ್ರಹಿಸುತ್ತಾ ಹೋಗುತ್ತಾನೆ.

ನಾಶುದ್ಧಮಾಚರೇತ್ತಸ್ಮಾದಭೀಪ್ಸನ್ದೇಹಯಾಪನಮ್ ।
ಕರ್ಮಣಾ ವಿವರಂ ಕುರ್ವನ್ನ ಲೋಕಾನಾಪ್ನುಯಾಚ್ಛುಭಾನ್ ॥೫॥

ಆದುದರಿಂದ ದೇಹಬಂಧನದಿಂದ ಮುಕ್ತನಾಗಲು ಇಚ್ಛಿಪಡುವವನು ಅಶುದ್ಧವಾದ ಆಚರಣೆಗಳನ್ನು ಮಾಡಬಾರದು. ನಿಷ್ಕಾಮಕರ್ಮಗಳ ಮೂಲಕವಾಗಿ ಮೋಕ್ಷದ ಬಾಗಿಲನ್ನು ತೆರೆದುಕೊಳ್ಳಬೇಕು. ಕಾಮ್ಯಕರ್ಮಗಳ ಮೂಲಕವಾಗಿ ಸ್ವರ್ಗವೇ ಮೊದಲಾದ ಪುಣ್ಯಲೋಕಗಳನ್ನು ಪಡೆಯಲು ಯಾವಾಗಲೂ ಇಚ್ಛಿಸಬಾರದು.

ಲೋಹಯುಕ್ತಂ ಯಥಾ ಹೇಮ ವಿಪಕ್ವಂ ನ ವಿರಾಜತೇ ।
ತಥಾಪಕ್ವಕಷಾಯಾಖ್ಯಂ ವಿಜ್ಞಾನಂ ನ ಪ್ರಕಾಶತೇ ॥೬॥

ಇತರ ಲೋಹಗಳಿಂದ ಮಿಶ್ರವಾದ ಸುವರ್ಣವು ಬೆಂಕಿಯಲ್ಲಿ ಹಾಕಿ ಶುದ್ಧಗೊಳಿಸದ ಹೊರತು ಹೇಗೆ ಪ್ರಕಾಶಿಸುವುದಿಲ್ಲವೋ–ಹಾಗೆಯೇ ಚಿತ್ತದಲ್ಲಿರುವ ರಾಗ-ದ್ವೇಷಾದಿದೋಷಗಳಿಂದ ಕೂಡಿದ ಆತ್ಮವು ಆ ದೋಷಗಳು ಜ್ಞಾನದಿಂದ ಪಕ್ವವಾದ ಹೊರತು ಪ್ರಕಾಶಿಸುವುದಿಲ್ಲ.

ಯಶ್ಚಾಧರ್ಮಂ ಚರೇಲ್ಲೋಭಾತ್ಕಾಮಕ್ರೋಧಾವನುಪ್ಲವನ್ ।
ಧರ್ಮ್ಯಂ ಪನ್ಥಾನಮಾಕ್ರಮ್ಯ* ಸಾನುಬನ್ಧೋ ವಿನಶ್ಯತಿ ॥೭॥

ಯಾವನು ಲೋಭವಶನಾಗಿ ಕಾಮ-ಕ್ರೋಧಾದಿಗಳನ್ನೇ ಅನುಸರಿಸಿ ಹೋಗುತ್ತಾ ಧರ್ಮದ ಮಾರ್ಗವನ್ನು ಅತಿಕ್ರಮಿಸುತ್ತಾನೆಯೋ ಅಧರ್ಮವನ್ನು ಮಾಡುತ್ತಾನೆಯೋ ಅವನು ಜ್ಞಾತಿ-ಬಾಂಧವರೊಡನೆ ವಿನಾಶಹೊಂದುತ್ತಾನೆ.

ಶಬ್ದಾದೀನ್ವಿಷಯಾಂಸ್ತಸ್ಮಾನ್ನ ಸಂರಾಗಾದಯಂ ವ್ರಜೇತ್ ।
ಕ್ರೋಧೋ ಹರ್ಷೋ ವಿಷಾದಶ್ಚ ಜಾಯನ್ತೇಹ ಪರಸ್ಪರಾತ್ ॥೮॥

ಆತ್ಮಕಲ್ಯಾಣವನ್ನು ಅಪೇಕ್ಷಿಸುವ ಪುರುಷನು ಯಾವಾಗಲೂ ರಾಗವಶನಾಗಿ ಶಬ್ದಾದಿ ವಿಷಯಸುಖಗಳನ್ನು ಅನುಭವಿಸುವ ಇಚ್ಛೆಯನ್ನು ಹೊಂದಬಾರದು. ಹಾಗೆ ರಾಗ ಅಥವಾ ಮೋಹವಶನಾಗಿ ಶಬ್ದಾದಿ ಸುಖಗಳನ್ನು ಅನುಭವಿಸುತ್ತಿದರೆ ಕ್ರೋಧ-ಹರ್ಷ-ವಿಷಾದಗಳು ಒಂದರಿಂದೊಂದು ಹುಟ್ಟಿಕೊಳ್ಳುತ್ತವೆ.

ಪಞ್ಚಭೂತಾತ್ಮಕೇ ದೇಹೇ ಸತ್ತ್ವೇ ರಾಜಸತಾಮಸೇ ।
ಕಮಭಿಷ್ಟುವತೇ ಚಾಯಂ ಕಿಂ ವಾ ಕ್ರೋಶತಿ ಕಿಂ ವದನ್ ॥೯॥

ದೇಹವು ಪಂಚಭೂತಾತ್ಮಕವಾಗಿದೆ. ಸತ್ತ್ವ-ರಜಸ್ತಮಸ್ಸುಗಳೆಂಬ ಮೂರು ಗುಣಗಳಿಂದ ಯುಕ್ತವಾಗಿದೆ. ನಿರ್ವಿಕಾರನಾದ ಆತ್ಮನು ಇಂತಹ ದೇಹದಲ್ಲಿದ್ದುಕೊಂಡು ಏನನ್ನು ಹೇಳಿಕೊಂಡು ಯಾರನ್ನು ನಿಂದಿಸುತ್ತಾನೆ? ಯಾರನ್ನು ಸ್ತುತಿಸುತ್ತಾನೆ?

ಸ್ಪರ್ಶರೂಪರಸಾದ್ಯೇಷು ಸಙ್ಗಂ ಗಚ್ಛನ್ತಿ ಬಾಲಿಶಾಃ ।
ನಾವಗಚ್ಛನ್ತ್ಯವಿಜ್ಞಾನಾದಾತ್ಮಾನಂ ಪಾರ್ಥಿವಂ ಗುಣಮ್ ॥೧೦॥

ಅಜ್ಞಾನಿಗಳಾದ ಪುರುಷರು ಸ್ಪರ್ಶ-ರೂಪ-ರಸಾದಿ ವಿಷಯ ಸುಖಗಳಲ್ಲಿಯೇ ಆಸಕ್ತರಾಗಿರುತ್ತಾರೆ. ಅವರಿಗೆ ವಿಶಿಷ್ಟವಾದ ಜ್ಞಾನವು

---

* ಆಕ್ರಮ್ಯ–ಎಂಬ ಪದಕ್ಕೆ ಆಕ್ರಮಿಸಿ ಅಥವಾ ಅನುಸರಿಸಿ ಎಂದು ಅರ್ಥವಾಗುತ್ತದೆ. ಸಂದರ್ಭಾನುಸಾರವಾಗಿ ವ್ಯಾಖ್ಯಾನಕಾರರು ಉಪಮೃದ್ಯ–ಧ್ವಂಸಮಾಡಿ ಅಥವಾ ಉತ್ಕಮ್ಯ–ಉಲ್ಲಂಘಿಸಿ–ಎಂದು ಅರ್ಥಮಾಡಿರುತ್ತಾರೆ.

ಇಲ್ಲದೇ ಇರುವುದರಿಂದ ದೇಹವು ಪೃಥ್ವಿಯ ವಿಕಾರವೆಂಬುದನ್ನು ಅವರು ಅರಿಯರು.

ಮೃನ್ಮಯಂ ಶರಣಂ ಯದ್ವನ್ಮೃದೈವ ಪರಿಲಿಪ್ಯತೇ ।
ಪಾರ್ಥಿವೋಽಯಂ ತಥಾ ದೇಹೋ ಮೃದ್ವಿಕಾರಾನ್ನ ನಶ್ಯತಿ ॥೧೧॥

ಯಾವ ರೀತಿಯಲ್ಲಿ ಮಣ್ಣಿನ ಮನೆಯು ಮಣ್ಣಿನ ಲೇಪನದಿಂದಲೇ ನಾಶವಾಗದೆ ಸುರಕ್ಷಿತವಾಗಿರುವುದೋ–ಅದೇ ರೀತಿಯಲ್ಲಿ ಪೃಥ್ವಿಯ ವಿಕಾರರೂಪವಾದ ಈ ಪಾರ್ಥಿವಶರೀರವು ಪೃಥ್ವಿಯ ವಿಕಾರವಾದ ಅನ್ನಾದಿಗಳ ಸೇವನೆಯಿಂದ ನಾಶಹೊಂದದೆ ಸುರಕ್ಷಿತವಾಗಿರುತ್ತದೆ.

ಮಧು ತೈಲಂ ಪಯಃ ಸರ್ಪಿರ್ಮಾಂಸಾನಿ ಲವಣಂ ಗುಡಃ ।
ಧಾನ್ಯಾನಿ ಫಲಮೂಲಾನಿ ಮೃದ್ವಿಕಾರಾಃ ಸಹಾಮ್ಭಸಾ ॥೧೨॥

ಜೇನುತುಪ್ಪ, ಎಣ್ಣೆ, ಹಾಲು, ತುಪ್ಪ, ಮಾಂಸ, ಉಪ್ಪು, ಬೆಲ್ಲ, ಧಾನ್ಯಗಳು, ಫಲ-ಮೂಲಗಳು ಮತ್ತು ಜಲ –ಈ ಎಲ್ಲವೂ ಪೃಥ್ವಿಯ ವಿಕಾರಗಳೇ ಆಗಿವೆ.

ಯದ್ವತ್ಕಾನ್ತಾರಮಾತಿಷ್ಠನ್ನೌತ್ಸುಕ್ಯಂ ಸಮನುವ್ರಜೇತ್ ।
ಗ್ರಾಮ್ಯಮಾಹಾರಮಾದದ್ಯಾದಸ್ವಾದ್ವಪಿ ಹಿ ಯಾಪನಮ್ ॥೧೩॥

ತದ್ವತ್ಸಂಸಾರಕಾನ್ತಾರಮಾತಿಷ್ಠಞ್ಶ್ರಮತತ್ಪರಃ ।
ಯಾತ್ರಾರ್ಥಮದ್ಯಾದಾಹಾರಂ ವ್ಯಾಧಿತೋ ಭೇಷಜಂ ಯಥಾ ॥೧೪॥

ಹೇಗೆ ಅರಣ್ಯದಲ್ಲಿ ವಾಸಮಾಡುವ (ವೈರಾಗ್ಯದ ಆಶ್ರಮದಲ್ಲಿರುವ) ತಪಸ್ವಿಯು ತುಂಬಾ ಹಸಿವಾದಾಗ ಗ್ರಾಮ್ಯವಾದ (ಸರಳವಾದ) ಆಹಾರವನ್ನು, ಅದು ರುಚಿಯಾಗಿಲ್ಲದಿದ್ದರೂ ಸೇವಿಸಿ ದೇಹಯಾಪನವನ್ನು ಮಾಡುತ್ತಾನೆಯೋ ಹಾಗೆಯೇ ಸಂಸಾರವೆಂಬ ಅರಣ್ಯದಲ್ಲಿರುವವನು (ಹಸಿವಿನ) ಶ್ರಮವುಂಟಾದಾಗ ದೇಹಯಾತ್ರೆಗೆ ಎಷ್ಟು ಬೇಕೋ ಅಷ್ಟೇ ಆಹಾರವನ್ನು ರೋಗಿಯು ಔಷಧವನ್ನು ಸೇವಿಸುವಂತೆ (ಚಿಕಿತ್ಸಾ ರೂಪದಲ್ಲಿ ; ಸ್ವಲ್ಪ ಪ್ರಮಾಣದಲ್ಲಿ ; ಸಿಹಿ-ಕಹಿಗಳ ಕಡೆಗೆ ಲಕ್ಷ್ಯವಿಡದೆ) ಸೇವಿಸಬೇಕು.

ಸತ್ಯಶೌಚಾರ್ಜವತ್ಯಾಗೈರ್ವರ್ಚಸಾ ವಿಕ್ರಮೇಣ ಚ ।
ಕ್ಷಾನ್ತ್ಯಾ ಧೃತ್ಯಾ ಚ ಬುದ್ಧ್ಯಾ ಚ ಮನಸಾ ತಪಸೈವ ಚ ॥೧೫॥

ಭಾವಾನ್ಸರ್ವಾನುಪಾವೃತ್ತಾನ್ಸಮೀಕ್ಷ್ಯ ವಿಷಯಾತ್ಮಕಾನ್ ।
ಶಾನ್ತಿಮಿಚ್ಛನ್ನದೀನಾತ್ಮಾ ಸಂಯಚ್ಛೇದಿನ್ದ್ರಿಯಾಣಿ ಚ ॥೧೬॥

ಉದಾರಚಿತ್ತನಾದ ಪುರುಷನು–ಸತ್ಯ, ಶೌಚ, ಸರಳತೆ, ತ್ಯಾಗ, ತೇಜಸ್ಸು, ಪರಾಕ್ರಮ, ಕ್ಷಮೆ, ಧೈರ್ಯ, ಬುದ್ಧಿ, ಮನಸ್ಸು ಮತ್ತು ತಪಸ್ಸು –ಇವುಗಳ ಪ್ರಭಾವದಿಂದ ವಿಷಯಾತ್ಮಕವಾದ ಸಮಸ್ತಭಾವನೆಗಳ ಮೇಲೂ ವಿಮರ್ಶಾತ್ಮಕವಾದ ದೃಷ್ಟಿಯನ್ನಿಡುತ್ತಾ ಶಾಂತಿಯನ್ನು ಇಚ್ಛಿಸುತ್ತಾ ತನ್ನ ಇಂದ್ರಿಯಗಳೆಲ್ಲವನ್ನೂ ಹತೋಟಿಯಲ್ಲಿಟ್ಟುಕೊಳ್ಳಬೇಕು.

ಸತ್ತ್ವೇನ ರಜಸಾ ಚೈವ ತಮಸಾ ಚೈವ ಮೋಹಿತಾಃ ।
ಚಕ್ರವತ್ಪರಿವರ್ತನ್ತೇ ಹ್ಯಜ್ಞಾನಾಜ್ಜನ್ತವೋ ಭೃಶಮ್ ॥೧೭॥

ಜಿತೇಂದ್ರಿಯರಲ್ಲದವರು ಅಜ್ಞಾನದ ಕಾರಣದಿಂದ ಸತ್ತ್ವ-ರಜಸ್ತಮಸ್ಸು ಗಳಿಂದ ಮೋಹಿತರಾಗಿ ಸರ್ವದಾ ಚಕ್ರದೋಪಾದಿಯಲ್ಲಿ ತಿರುಗುತ್ತಿರುತ್ತಾರೆ.

ತಸ್ಮಾತ್ಸಮ್ಯಕ್ಪರೀಕ್ಷೇತ ದೋಷಾನಜ್ಞಾನಸಮ್ಭವಾನ್ ।
ಅಜ್ಞಾನಪ್ರಭವಂ ದುಃಖಮಹಂಕಾರಂ ಪರಿತ್ಯಜೇತ್ ॥೧೮॥

ಆದುದರಿಂದ ವಿವೇಕಿಯಾದ ಮನುಷ್ಯನು ಅಜ್ಞಾನಜನಿತವಾದ ದೋಷಗಳನ್ನು ಬಹಳ ಚೆನ್ನಾಗಿ ಪರೀಕ್ಷಿಸಬೇಕು ಮತ್ತು ಆ ಅಜ್ಞಾನದಿಂದಲೇ ಉಂಟಾದ ದುಃಖವನ್ನೂ ಮತ್ತು ಅಹಂಕಾರವನ್ನೂ ಪರಿತ್ಯಜಿಸಬೇಕು.

ಮಹಾಭೂತಾನೀನ್ದ್ರಿಯಾಣಿ ಗುಣಾಃ ಸತ್ತ್ವಂ ರಜಸ್ತಮಃ ।
ತ್ರೈಲೋಕ್ಯಂ ಸೇಶ್ವರಂ ಸರ್ವಮಹಂಕಾರೇ ಪ್ರತಿಷ್ಠಿತಮ್ ॥೧೯॥

ಪಂಚಮಹಾಭೂತಗಳು, ದಶೇಂದ್ರಿಯಗಳು, ಶಬ್ದ-ಸ್ಪರ್ಶಾದಿ ಗುಣ ಗಳು, ಸತ್ತ್ವ-ರಜಸ್ತಮಸ್ಸುಗಳೆಂಬ ಮೂರು ಗುಣಗಳು, ಲೋಕಪಾಲರಿಂದ

ಯುಕ್ತವಾದ ಮೂರು ಲೋಕಗಳು –ಈ ಎಲ್ಲವೂ ಅಹಂಕಾರದಲ್ಲಿಯೇ ಪ್ರತಿಷ್ಠಿತವಾಗಿವೆ.

ಯಥೇಹ ನಿಯತಃ ಕಾಲೋ ದರ್ಶಯತ್ಯಾರ್ತವಾನ್ಗುಣಾನ್ ।
ತದ್ವದ್ಭೂತೇಷ್ವಹಂಕಾರಂ ವಿದ್ಯಾತ್ಕರ್ಮಪ್ರವರ್ತಕಮ್ ॥೨೦॥

ಈ ಜಗತ್ತಿನಲ್ಲಿ ನಿಯತವಾದ ಕಾಲದಲ್ಲಿ ಋತುಸಂಬಂಧವಾದ ಗುಣಗಳ ಆವಿರ್ಭಾವವಾಗುತ್ತದೆ. ಹಾಗೆಯೇ ಎಲ್ಲ ಪ್ರಾಣಿಗಳಲ್ಲಿಯೂ ಅಹಂಕಾರವನ್ನು ಕರ್ಮಪ್ರವರ್ತಕವನ್ನಾಗಿ ತಿಳಿಯಬೇಕು.

ಸಮ್ಮೋಹಕಂ ತಮೋ ವಿದ್ಯಾತ್ಕೃಷ್ಣಮಜ್ಞಾನಸಮ್ಭವಮ್ ।
ಪ್ರೀತಿದುಃಖನಿಬದ್ಧಾಂಶ್ಚ ಸಮಸ್ತಾಂಸ್ತ್ರೀನಥೋ ಗುಣಾನ್ ॥೨೧॥

ಅಹಂಕಾರವು ಸಾತ್ತ್ವಿಕ, ರಾಜಸ, ತಾಮಸ ಎಂದು ಮೂರು ಪ್ರಕಾರವಾಗಿದೆ. ತಮೋಗುಣವು ಸಮ್ಮೋಹಕವೆಂದು ತಿಳಿದುಕೊಳ್ಳಬೇಕು. ಅಜ್ಞಾನದಿಂದ ಹುಟ್ಟುವ ಈ ತಮೋಗುಣವು ಕಪ್ಪುಬಣ್ಣದ್ದಾಗಿದೆ. ಸಾತ್ತ್ವಿಕಾಹಂಕಾರವು ಪ್ರೀತಿಯನ್ನು ಹುಟ್ಟಿಸುತ್ತದೆ. ರಾಜಸಾಹಂಕಾರವು ದುಃಖವನ್ನುಂಟುಮಾಡುತ್ತದೆ. ಹೀಗೆ ಸಮಸ್ತವಾದ ಮೂರು ಗುಣಗಳ ಸ್ವರೂಪವನ್ನು ತಿಳಿದುಕೊಳ್ಳಬೇಕು.

ಸತ್ತ್ವಸ್ಯ ರಜಸಶ್ಚೈವ ತಮಸಶ್ಚ ನಿಬೋಧ ತಾನ್ ।
ಪ್ರಸಾದೋ ಹರ್ಷಜಾ ಪ್ರೀತಿರಸಂದೇಹೋ ಧೃತಿಃ ಸ್ಮೃತಿಃ ।
ಏತಾನ್ಸತ್ತ್ವಗುಣಾನ್ವಿದ್ಯಾದಿಮಾನ್ರಾಜಸತಾಮಸಾನ್ ॥೨೨॥

ಕಾಮಕ್ರೋಧೌ ಪ್ರಮಾದಶ್ಚ ಲೋಭಮೋಹೌ ಭಯಂ ಕ್ಲಮಃ ।
ವಿಷಾದಶೋಕಾವರತಿರ್ಮಾನದರ್ಪಾವನಾರ್ಯತಾ ॥೨೩॥

ಯುಧಿಷ್ಠಿರ! ಈಗ ನಾನು ನಿನಗೆ ಸತ್ತ್ವ-ರಜಸ್ತಮೋಗುಣಗಳ ಕಾರ್ಯಗಳನ್ನು ಹೇಳುವೆನು ಕೇಳು. ಪ್ರಸನ್ನತೆ, ಹರ್ಷದಿಂದ ಹುಟ್ಟಿದ ಪ್ರೀತಿ, ಸಂದೇಹವಿಲ್ಲದಿರುವುದು, ಧೈರ್ಯ ಮತ್ತು ಜ್ಞಾಪಕಶಕ್ತಿ –ಇವುಗಳು ಸತ್ತ್ವಗುಣದ ಕಾರ್ಯಗಳಾಗಿವೆಯೆಂದು ತಿಳಿಯಬೇಕು. ಕಾಮ, ಕ್ರೋಧ, ಪ್ರಮಾದ, ಲೋಭ, ಮೋಹ, ಭಯ, ಕ್ಲಾಂತಿ, ವಿಷಾದ, ಶೋಕ,

ಅಪ್ರಸನ್ನತೆ, ಮಾನ, ದರ್ಪ ಮತ್ತು ಅನಾರ್ಯತೆ –ಇವುಗಳು ರಜೋಗುಣ-ತಮೋಗುಣಗಳ ಕಾರ್ಯಗಳೆಂದು ತಿಳಿಯಬೇಕು.

ದೋಷಾಣಾಮೇವಮಾದೀನಾಂ ಪರೀಕ್ಷ್ಯ ಗುರುಲಾಘವಮ್ ।
ವಿಮೃಶೇದಾತ್ಮಸಂಸ್ಥಾನಮೇಕೈಕಮನುಸಂತತಮ್ ॥೨೪॥

ಇವೇ ಮೊದಲಾದ ದೋಷಗಳನ್ನೂ ಮತ್ತು ಅವುಗಳು ಚಿಕ್ಕ ಪ್ರಮಾಣದಲ್ಲಿವೆಯೇ ಮತ್ತು ದೊಡ್ಡಪ್ರಮಾಣದಲ್ಲಿವೆಯೇ ಎಂಬುದನ್ನೂ– ತನ್ನಲ್ಲಿಯೇ ತಾನು ಚೆನ್ನಾಗಿ ಪರೀಕ್ಷಿಸಿ, ಆ ದೋಷಗಳಲ್ಲಿ ಯಾವ ದೋಷವು ತನ್ನಲ್ಲಿದೆ? ಯಾವ ಪ್ರಮಾಣದಲ್ಲಿದೆ?–ಎಂಬುದನ್ನೂ ತಿಳಿದುಕೊಂಡು ತನ್ನಲ್ಲಿರುವ ಎಲ್ಲ ದೋಷಗಳನ್ನೂ ದೂರೀಕರಿಸಲು ಸತತವಾಗಿ ಪ್ರಯತ್ನಿಸಬೇಕು."

* ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕೇ ದೋಷಾ ಮನಸಾ ತ್ಯಕ್ತಾಃ ಕೇ ಬುದ್ಧ್ಯಾ ಶಿಥಿಲೀಕೃತಾಃ ।
ಕೇ ಪುನಃ ಪುನರಾಯಾನ್ತಿ ಕೇ ಮೋಹಾದಫಲಾ ಇವ ॥೨೫॥

"ಪಿತಾಮಹನೇ! ಪೂರ್ವಕಾಲದಲ್ಲಿ ಮುಮುಕ್ಷುಗಳು ಯಾವ ಯಾವ ದೋಷಗಳನ್ನು ಮನಸ್ಸಿನಿಂದ ತ್ಯಜಿಸಿದ್ದರು? ಬುದ್ಧಿಯ ಮೂಲಕವಾಗಿ ಯಾವ ಯಾವ ದೋಷಗಳನ್ನು ಶಿಥಿಲೀಕರಿಸಿದ್ದರು? ಯಾವ ದೋಷಗಳು ಪುನಃ ಪುನಃ ಬರುತ್ತಲೇ ಇರುತ್ತವೆ? ಯಾವ ದೋಷಗಳು ಅಜ್ಞಾನದ ಕಾರಣದಿಂದ ನಿಷ್ಫಲವಾದಂತೆ ಕಾಣುತ್ತವೆ?

ಕೇಷಾಂ ಬಲಾಬಲಂ ಬುದ್ಧ್ಯಾ ಹೇತುಭಿರ್ವಿಮೃಶೇದ್ಬುಧಃ ।
ಏಷ ಮೇ ಸಂಶಯಸ್ತಾತ ತನ್ಮೇ ಬ್ರೂಹಿ ಪಿತಾಮಹ ॥೨೬॥

ವಿದ್ವಾಂಸನಾದ ಪುರುಷನು ತನ್ನ ಬುದ್ಧಿ ಮತ್ತು ಯುಕ್ತಿಗಳ ಮೂಲಕವಾಗಿ ಯಾವ ದೋಷಗಳ ಬಲಾಬಲಗಳನ್ನು ವಿಮರ್ಶಿಸಬೇಕು?

---

* ಒಂದು ಪುಸ್ತಕದಲ್ಲಿ ಶಿಷ್ಯ ಉವಾಚ ಎಂದೇ ಇದೆ. ಆ ಪುಸ್ತಕದಲ್ಲಿ ಇಲ್ಲಿರುವ ಉತ್ತರಾರ್ಧಕ್ಕೆ ಬದಲಾಗಿ ಏತತ್ಸರ್ವಂ ಸಮಾಚಕ್ಷ್ವ ಯಥಾ ವಿದ್ಯಾಮಹಂ ಪ್ರಭೋ–ಎಂಬುದಾಗಿದೆ.

ಪಿತಾಮಹನೇ! ಇದು ನನ್ನ ಸಂಶಯವಾಗಿದೆ. ಈ ನನ್ನ ಸಂದೇಹವನ್ನು ನಿವಾರಿಸು.”

ಭೀಷ್ಮನು ಹೇಳುತ್ತಾನೆ :

ದೋಷೈರ್ಮೂಲಾದವಚ್ಛಿನ್ನೈರ್ವಿಶುದ್ಧಾತ್ಮಾ ವಿಮುಚ್ಯತೇ ।
ವಿನಾಶಯತಿ ಸಮ್ಭೂತಮಯಸ್ಮಯಮಯೋ ಯಥಾ ।
ತಥಾ ಕೃತಾತ್ಮಾ ಸಹಜೈರ್ದೋಷೈರ್ನಶ್ಯತಿ ತಾಮಸೈಃ ॥೨೭॥

“ಯುಧಿಷ್ಠಿರ! ಈ ದೋಷಗಳಿಗೆ ಮೂಲಕಾರಣವು ಅಜ್ಞಾನವೇ ಆಗಿದೆ. ಆದುದರಿಂದ ಮೂಲಸಹಿತವಾಗಿ ಈ ದೋಷಗಳ ವಿನಾಶವಾದ ನಂತರ ಮನುಷ್ಯನ ಅಂತಃಕರಣವು ವಿಶುದ್ಧವಾಗುತ್ತದೆ. ಆಗ ಅವನು ಸಂಸಾರಬಂಧನದಿಂದಲೂ ಮುಕ್ತನಾಗುತ್ತಾನೆ. ಲೋಹದಿಂದ ಮಾಡಿದ ಉಳಿಯ ತುದಿಯು ಲೋಹವನ್ನು ಕತ್ತರಿಸುತ್ತಲೇ ತಾನೂ ಮೊಂಡಾಗಿ ಹೋಗುವಂತೆ–ಧ್ಯಾನದಿಂದ ಸಂಸ್ಕೃತವಾದ ಬುದ್ಧಿಯು ತಮೋಗುಣಜನಿತವಾದ ಅನಾದಿಯಾದ ದೋಷಗಳನ್ನು ನಾಶಮಾಡಿ ಅವುಗಳೊಡನೆ ತಾನೂ ನಾಶಹೊಂದುತ್ತದೆ.

(ತ್ರಿಗುಣಗಳು ಬುದ್ಧಿಯಲ್ಲಿ ಇರುವವರೆಗೆ ಅದು ಆತ್ಮವಸ್ತುವಿನಿಂದ ಬೇರೆಯಾಗಿರುತ್ತದೆ. ಆದರೆ ತ್ರಿಗುಣಾತೀತವಾದನಂತರ ಆ ಬುದ್ಧಿಯು ತ್ರಿಗುಣಾತೀತನಾದ ಪರಮಾತ್ಮನಲ್ಲಿಯೇ ಲೀನವಾಗಿಬಿಡುತ್ತದೆ. ಆದುದರಿಂದ ದೋಷಗಳನ್ನು ನಾಶಗೊಳಿಸಿದ ಬುದ್ಧಿಯು ತಾನೂ ನಾಶವಾಗುವುದೆಂದು ಇಲ್ಲಿ ಹೇಳಿರುವುದು ಹೃದಯಂಗಮವಾಗಿದೆ.)

ರಾಜಸಂ ತಾಮಸಂ ಚೈವ ಶುದ್ಧಾತ್ಮಕಮಕಲ್ಮಷಮ್ ।
ತತ್ಸರ್ವಂ ದೇಹಿನಾಂ ಬೀಜಂ ಸತ್ತ್ವಮಾತ್ಮವತಃ ಸಮಮ್ ॥೨೮॥

ರಜೋಗುಣ-ತಮೋಗುಣಗಳೂ, ಕಾಮ-ಕ್ರೋಧಾದಿ ದೋಷಗಳಿಂದ ರಹಿತವಾದ ಶುದ್ಧಸತ್ತ್ವಗುಣವೂ-ಜೀವಿಗಳ ದೇಹೋತ್ಪತ್ತಿಗೆ ಮೂಲಕಾರಣಗಳಾಗಿದ್ದರೂ ಜಿತೇಂದ್ರಿಯರಾದವರಿಗೆ ಸತ್ತ್ವಗುಣವೇ ಸಮತೆಗೆ (ಬ್ರಹ್ಮಪ್ರಾಪ್ತಿಗೆ) ಸಾಧನವಾಗುತ್ತದೆ.

ತಸ್ಮಾದಾತ್ಮವತಾ ವರ್ಜ್ಯಂ ರಜಶ್ಚ ತಮ ಏವ ಚ ।
ರಜಸ್ತಮೋಭ್ಯಾಂ ನಿರ್ಮುಕ್ತಂ ಸತ್ತ್ವಂ ನಿರ್ಮಲತಾಮಿಯಾತ್ ॥೨೯॥

ಆದುದರಿಂದ ಜಿತೇಂದ್ರಿಯನಾದವನು ರಜೋಗುಣವನ್ನೂ ಮತ್ತು ತಮೋಗುಣವನ್ನೂ ಸಂಪೂರ್ಣವಾಗಿ ವರ್ಜಿಸಬೇಕು. ರಜಸ್ತಮಸ್ಸುಗಳಿಂದ ಮುಕ್ತವಾದ ಜೀವವು ನಿರ್ಮಲತೆಯನ್ನು ಹೊಂದುತ್ತದೆ.

ಅಥವಾ ಮನ್ತ್ರವದ್ಬ್ರೂಯುರಾತ್ಮಾದಾನಾಯ ದುಷ್ಕೃತಮ್ ।
ಸ ವೈ ಹೇತುರನಾದಾನೇ ಶುದ್ಧಧರ್ಮಾನುಪಾಲನೇ ॥೩೦॥

ಮನಸ್ಸನ್ನು ಅಧೀನದಲ್ಲಿಟ್ಟುಕೊಳ್ಳುವ ಸಲುವಾಗಿ ಶಾಸ್ತ್ರವಿಹಿತವಾದ ಮಂತ್ರಯುಕ್ತವಾದ ಯಜ್ಞಾದಿ ಕರ್ಮಗಳನ್ನು ಮಾಡುವುದು ದೋಷ ಯುಕ್ತವೆಂದು ಕೆಲವರು ಹೇಳುತ್ತಾರೆ. ಆದರೆ ಮಂತ್ರಯುಕ್ತವಾದ ಯಜ್ಞಾದಿ ಕರ್ಮಗಳನ್ನು ನಿಷ್ಕಾಮಭಾವನೆಯಿಂದ ಮಾಡಿದರೆ ವೈರಾಗ್ಯಕ್ಕೆ ಕಾರಣ ವಾಗುತ್ತದೆ. ಹಾಗೆಯೇ ಶುದ್ಧಧರ್ಮಗಳಾದ ಶಮ-ದಮಾದಿಗಳ ನಿರಂತರ ಪಾಲನೆಗೂ ಮಂತ್ರಯುಕ್ತವಾದ ಯಜ್ಞಾದಿ ಕರ್ಮಗಳು ಕಾರಣಗಳಾಗುತ್ತವೆ.

ರಜಸಾಧರ್ಮಯುಕ್ತಾನಿ ಕಾರ್ಯಾಣ್ಯಪಿ ಸಮಾಪ್ನುತೇ ।
ಅರ್ಥಯುಕ್ತಾನಿ ಚಾತ್ಯರ್ಥಂ ಕಾಮಾನ್ಸರ್ವಾಂಶ್ಚ ಸೇವತೇ ॥೩೧॥

ಮನುಷ್ಯನು ರಜೋಗುಣಕ್ಕೆ ಅಧೀನನಾದನಂತರ ರಜೋಗುಣದ ಮೂಲಕವಾಗಿ ಅನೇಕಾನೇಕ ಅಧರ್ಮಯುಕ್ತವಾದ ಮತ್ತು ಅರ್ಥಯುಕ್ತ ವಾದ ಕರ್ಮಗಳನ್ನು ಮಾಡಲು ತೊಡಗುತ್ತಾನೆ. ಅವನು ಅರ್ಥ-ಕಾಮ ಗಳಲ್ಲಿಯೇ ಮನಸ್ಸಿಟ್ಟು ಸಮಸ್ತವಾದ ವಿಷಯಭೋಗಗಳನ್ನೂ ಅತ್ಯಾಸಕ್ತಿ ಯಿಂದ ಅತಿಯಾಗಿ ಸೇವಿಸುತ್ತಾನೆ.

ಸಮತಾ ಲೋಭಯುಕ್ತಾನಿ ಕ್ರೋಧಜಾನಿ ಚ ಸೇವತೇ ।
ಹಿಂಸಾವಿಹಾರಾಭಿರತಸ್ತನ್ದ್ರೀನಿದ್ರಾಸಮನ್ವಿತಃ ॥೩೨॥

ತಮೋಗುಣಕ್ಕೆ ವಶನಾದ ಪುರುಷನು ತಮೋಗುಣದ ಮೂಲಕವಾಗಿ ಲೋಭಯುಕ್ತವಾದ ಮತ್ತು ಕ್ರೋಧಜನಿತವಾದ ಕರ್ಮಗಳನ್ನು ಮಾಡಲು ತೊಡಗುತ್ತಾನೆ. ಹಿಂಸಾತ್ಮಕವಾದ ಕಾರ್ಯಗಳಲ್ಲಿಯೇ ಅವನಿಗೆ ವಿಶೇಷ ವಾದ ಆಸಕ್ತಿಯಿರುತ್ತದೆ. ತಾಮಸಿಯು ಹೆಚ್ಚಾಗಿ ತೂಕಡಿಕೆ-ನಿದ್ರೆಗಳಿಂದ ಕೂಡಿದವನಾಗಿರುತ್ತಾನೆ.

ಸತ್ತ್ವಸ್ಥಃ ಸಾತ್ತ್ವಿಕಾನ್ಭಾವಾಞ್ಛೃದ್ಧಾನ್ವಶ್ಯತಿ ಸಂಶ್ರಿತಃ ।
ಸ ದೇಹೀ ವಿಮಲಃ ಶ್ರೀಮಾಞ್ಛ್ರದ್ಧಾವಿದ್ಯಾಸಮನ್ವಿತಃ ॥೩೩॥

ಸತ್ತ್ವಗುಣಸಂಪನ್ನನಾದ ಮನುಷ್ಯನು ಯಾವಾಗಲೂ ಎಲ್ಲೆಲ್ಲಿಯೂ ಸಾತ್ತ್ವಿಕವಾದ ಭಾವನೆಗಳನ್ನೇ ನೋಡುತ್ತಾ ಅವುಗಳಲ್ಲಿಯೇ ನಿಷ್ಠನಾಗಿರುತ್ತಾನೆ. ಅವನು ಅತ್ಯಂತ ನಿರ್ಮಲನೂ ಕಾಂತಿಯುಕ್ತನೂ ಆಗಿರುತ್ತಾನೆ. ಶ್ರದ್ಧೆ ಮತ್ತು ವಿದ್ಯೆಗಳಿಂದ ಕೂಡಿದವನಾಗಿರುತ್ತಾನೆ. ಅವನಲ್ಲಿ ಶ್ರದ್ಧೆ ಮತ್ತು ವಿದ್ಯೆಗಳು ಪ್ರಧಾನವಾಗಿರುತ್ತವೆ.”

೨೧೨ನೆಯ ಅಧ್ಯಾಯವು ಮುಗಿಯಿತು.

೨೧೩ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜೀವೋತ್ಪತ್ತಿಯ ವರ್ಣನೆ : ದೋಷಗಳಿಂದಲೂ ಮತ್ತು ಬಂಧನಗಳಿಂದಲೂ ಮುಕ್ತಿಯನ್ನು ಪಡೆಯಲು ವಿಷಯಾಸಕ್ತಿಯನ್ನು ತ್ಯಾಗಮಾಡಲು ಉಪದೇಶ

ಜನಮೇಜಯ! ಭೀಷ್ಮನು ಹೇಳುತ್ತಾನೆ :

ರಜಸಾ ಸಾಧ್ಯತೇ ಮೋಹಸ್ತಮಸಾ ಭರತರ್ಷಭ ।
ಕ್ರೋಧಲೋಭೌ ಭಯಂ ದರ್ಪಂ ಏತೇಷಾಂ ಸಾದನಾಚ್ಛುಚಿಃ ॥೧॥

“ಭರತಶ್ರೇಷ್ಠನೇ! ರಜೋಗುಣ-ತಮೋಗುಣಗಳಿಂದ ಮೋಹದ ಉತ್ಪತ್ತಿಯಾಗುತ್ತದೆ. ಆ ಮೋಹದಿಂದ ಕ್ರೋಧ-ಲೋಭ-ಭಯ ಮತ್ತು ದರ್ಪಗಳು ಹುಟ್ಟುತ್ತವೆ. ಈ ಎಲ್ಲವನ್ನೂ ನಾಶಗೊಳಿಸುವುದರಿಂದಲೇ ಮನುಷ್ಯನು ಪರಿಶುದ್ಧನಾಗುತ್ತಾನೆ.

ಪರಮಂ ಪರಮಾತ್ಮಾನಂ ದೇವಮಕ್ಷಯಮವ್ಯಯಮ್ ।
ವಿಷ್ಣುಮವ್ಯಕ್ತಸಂಸ್ಥಾನಂ ವಿದುಸ್ತಂ ದೇವಸತ್ತಮಮ್ ॥೨॥

ದೇವಶ್ರೇಷ್ಠನಾದ ಮಹಾವಿಷ್ಣುವನ್ನು ಪರಬ್ರಹ್ಮನೆಂದೂ, ಪರಮಾತ್ಮನೆಂದೂ, ಕ್ಷಯರಹಿತನೆಂದೂ, ಅವಿನಾಶಿಯೆಂದೂ, ಅವ್ಯಕ್ತಸ್ವರೂಪನೆಂದೂ ಮಹರ್ಷಿಗಳು ತಿಳಿಯುತ್ತಾರೆ.

ತಸ್ಯ ಮಾಯಾಪಿನದ್ಧಾಙ್ಗಾ ನಷ್ಟಜ್ಞಾನಾ ವಿಚೇತಸಃ ।
ಮಾನವಾ ಜ್ಞಾನಸಮ್ಮೋಹಾತ್ತತಃ ಕ್ರೋಧಂ ಪ್ರಯಾನ್ತಿ ವೈ ॥೩॥

ಆ ಮಹಾವಿಷ್ಣುವಿನ ಮಾಯೆಯಿಂದ ಆವೃತರಾದ ಮನುಷ್ಯರು ಅಜ್ಞಾನಿಗಳೂ, ವಿವೇಕರಹಿತರೂ ಆಗುತ್ತಾರೆ. ಬುದ್ಧಿಯ ವ್ಯಾಮೋಹ ದಿಂದಾಗಿ ಅವರು ಕ್ರೋಧಾಭಿಭೂತರೂ ಆಗುತ್ತಾರೆ.

ಕ್ರೋಧಾತ್ಕಾಮಮವಾಪ್ಯಾಥ ಲೋಭಮೋಹೌ ಚ ಮಾನವಾಃ ।
ಮಾನದರ್ಪಾವಹಙ್ಕಾರಮಹಙ್ಕಾರಾತ್ತತಃ ಕ್ರಿಯಾಃ ॥೪॥

ಕ್ರೋಧದಿಂದ ಪ್ರತೀಕಾರರೂಪವಾದ ಕಾಮವು ಹುಟ್ಟುತ್ತದೆ. ಪುನಃ ಆ ಕಾಮದಿಂದಲೇ ಮನುಷ್ಯನಲ್ಲಿ ಲೋಭ, ಮೋಹ, ಮಾನ, ದರ್ಪ ಮತ್ತು ಅಹಂಕಾರಗಳೂ ಹುಟ್ಟಿಕೊಳ್ಳುತ್ತವೆ. ಮುಂದೆ ಮನುಷ್ಯನು ಆ ಅಹಂಕಾರದಿಂದಲೇ ಪ್ರೇರಿತನಾಗಿ ಎಲ್ಲ ಕಾರ್ಯಗಳನ್ನೂ ಮಾಡಲು ತೊಡಗುತ್ತಾನೆ.

ಕ್ರಿಯಾಭಿಃ ಸ್ನೇಹಸಮ್ಬನ್ಧಾತ್ಸ್ನೇಹಾಚ್ಛೋಕಮನನ್ತರಮ್ ।
ಸುಖದುಃಖಕ್ರಿಯಾರಮ್ಭಾಜ್ಜನ್ಮಾಜನ್ಮಕೃತಕ್ಷಣಾಃ ॥೫॥

ಮನುಷ್ಯನು ಅಂತಹ ಕ್ರಿಯೆಗಳಿಂದ ಎಲ್ಲ ವಿಷಯಗಳಲ್ಲಿಯೂ ಆಸಕ್ತಿಯನ್ನು ಹೊಂದುತ್ತಾನೆ. ಪ್ರಾಪಂಚಿಕವಾದ ವಸ್ತುಗಳಲ್ಲಿ ಅತಿಯಾದ ಸ್ನೇಹವೇ ದುಃಖಕ್ಕೆ ಕಾರಣವಾಗುತ್ತದೆ. ಮನುಷ್ಯರು ಸುಖ-ದುಃಖಗಳನ್ನು ಉಂಟುಮಾಡುವ ಕಾರ್ಯಗಳನ್ನು ಮಾಡುವುದರಿಂದ ಹುಟ್ಟು-ಸಾವುಗಳ ಕಷ್ಟವನ್ನು ಅನುಭವಿಸಲೇಬೇಕಾಗುತ್ತದೆ.

ಜನ್ಮತೋ ಗರ್ಭವಾಸಂ ತು ಶುಕ್ರಶೋಣಿತಸಮ್ಭವಮ್ ।
ಪುರೀಷಮೂತ್ರವಿಕ್ಲೇದಂ ಶೋಣಿತಪ್ರಭವಾವಿಲಮ್ ॥೬॥

ಜನ್ಮದ ನಿಮಿತ್ತವಾಗಿ ಗರ್ಭವಾಸದ ಕಷ್ಟವನ್ನು ಅನುಭವಿಸ ಬೇಕಾಗುತ್ತದೆ. ಶುಕ್ರ-ಶೋಣಿತಗಳ ಸಮ್ಮಿಲನದಿಂದ ಗರ್ಭೋತ್ಪತ್ತಿಯಾಗು

ತ್ತದೆ. ಆ ಸಮಯದಲ್ಲಿ ಮಲ-ಮೂತ್ರಗಳಿಂದ ನಾರುತ್ತಿರುವ, ರಕ್ತದ ವಿಕಾರದಿಂದ ಮಲಿನವಾಗಿರುವ ಸ್ಥಳದಲ್ಲಿರಬೇಕಾಗುತ್ತದೆ.

ತೃಷ್ಣಾಭಿಭೂತಸ್ತೈರ್ಬದ್ಧಸ್ತಾನೇವಾಭಿಪರಿಪ್ಲವನ್ ।
ಸಂಸಾರತನ್ತ್ರವಾಹಿನ್ಯಸ್ತತ್ರ ಬುದ್ಧ್ಯೇತ ಯೋಷಿತಃ ॥೭॥

ವಿಷಯಗಳ ದುರಾಸೆಯಿಂದ ಆಕ್ರಮಿಸಲ್ಪಟ್ಟ ಮನುಷ್ಯನು ಅವುಗಳಿಗೇ ಕಟ್ಟುಬಿದ್ದು ಅವುಗಳನ್ನೇ ಅನುಸರಿಸಿ ಹೋಗುತ್ತಾನೆ. ಸಂಸಾರದ ತಂತ್ರವನ್ನು ಸ್ತ್ರೀಯರೇ ನಡೆಸುತ್ತಿರುತ್ತಾರೆ. ಈ ಪ್ರವಾಹಕ್ಕೆ ಅವರೇ ಕಾರಣರೆಂದು ತಿಳಿಯಬೇಕು.

ಪ್ರಕೃತ್ಯಾ ಕ್ಷೇತ್ರಭೂತಾಸ್ತಾ ನರಾಃ ಕ್ಷೇತ್ರಜ್ಞಲಕ್ಷಣಾಃ ।
ತಸ್ಮಾದೇವಾವಿಶೇಷೇಣ ನರೋಽತೀಯಾದ್ವಿಶೇಷತಃ ॥೮॥

ಪ್ರಕೃತಿಗೆ ಸಮಾನರಾದ ಸ್ತ್ರೀಯರು ಕ್ಷೇತ್ರಸ್ಥಾನದಲ್ಲಿರುತ್ತಾರೆ. ಪುರುಷರು ಕ್ಷೇತ್ರಜ್ಞನ ಲಕ್ಷಣವುಳ್ಳವರಾಗಿರುತ್ತಾರೆ. (ಪ್ರಕೃತಿಯು ಅಜ್ಞಾನಿಯಾದ ಪುರುಷನನ್ನು ಬಂಧನದಲ್ಲಿಡುವಂತೆ ಪ್ರಕೃತಿಸ್ವರೂಪರಾದ ಸ್ತ್ರೀಯರು ಪುರುಷನನ್ನು ಮೋಹಜಾಲದಿಂದ ಬಂಧಿಸುತ್ತಾರೆ.) ಆದುದರಿಂದ ಮನುಷ್ಯನು ವಿಶೇಷವಾಗಿ ಸ್ತ್ರೀಯರಿಂದ ದೂರವಿರಬೇಕು.

ಕೃತ್ಯಾ ಹ್ಯೇತಾ ಘೋರರೂಪಾ ಮೋಹಯನ್ತ್ಯವಿಚಕ್ಷಣಾನ್ ।
ರಜಸ್ಯನ್ತರ್ಹಿತಾ ಮೂರ್ತಿರಿನ್ದ್ರಿಯಾಣಾಂ ಸನಾತನೀ ॥೯॥

ಸ್ತ್ರೀಯರು ಭಯಂಕರವಾದ ರೂಪದಿಂದ ಕೂಡಿರುವ ಕೃತ್ಯೆಗೆ (ಶೂನ್ಯದೇವತೆಗೆ) ಸಮಾನರಾಗಿರುತ್ತಾರೆ. ಅಜ್ಞಾನಿಯಾದ ಮನುಷ್ಯನನ್ನು ವಿಮೋಹಗೊಳಿಸುತ್ತಾರೆ. ಇಂದ್ರಿಯಗಳಲ್ಲಿ ವಿಕಾರವನ್ನುಂಟುಮಾಡುವ ಸನಾತನವಾದ ನಾರೀಮೂರ್ತಿಯು ರಜೋಗುಣಗಳಲ್ಲಿ ಮರೆಯಾಗಿದೆ.

ತಸ್ಮಾತ್ತದಾತ್ಮಕಾದ್ರಾಗಾದ್ಬೀಜಾಜ್ಜಾಯನ್ತಿ ಜನ್ತವಃ ।
ಸ್ವದೇಹಜಾನಸ್ವಸಂಜ್ಞಾನ್ಯದ್ವದಜ್ಞಾತ್ಕೃಮೀಂಸ್ತ್ಯಜೇತ್ ।
ಸ್ವಸಂಜ್ಞಾನಸ್ವಕಾಂಸ್ತದ್ವತ್ಸುತಸಂಜ್ಞಾನ್ಕೃಮೀಂಸ್ತ್ಯಜೇತ್ ॥೧೦॥

ಆದುದರಿಂದ ಸ್ತ್ರೀಸಂಬಂಧವಾದ ಅನುರಾಗದ ಕಾರಣದಿಂದಾಗಿ ಪುರುಷನ ವೀರ್ಯದಿಂದ ಜೀವಿಗಳ (ಪುತ್ರ-ಪುತ್ರಿಯರ) ಉತ್ಪತ್ತಿಯಾಗುತ್ತದೆ. ಹೇನು ಮುಂತಾದ ಕ್ರಿಮಿಗಳು ತನ್ನ ದೇಹದಲ್ಲಿಯೇ ಹುಟ್ಟಿದ್ದರೂ ಅವು ತನ್ನವಲ್ಲವಾದುದರಿಂದ ಅವುಗಳನ್ನು ತ್ಯಜಿಸುವಂತೆ–ತನ್ನವೆಂದು ಸಂಜ್ಞೆಯನ್ನು ಪಡೆದಿದ್ದರೂ ತನ್ನದಾಗಿರದ ಪುತ್ರನಾಮಕಗಳಾದ ಕ್ರಿಮಿಗಳನ್ನೂ ಸಾಧಕನು ಪರಿತ್ಯಜಿಸಬೇಕು. (ಅವುಗಳ ಬಗೆಗೆ ಅಭಿಮಾನವನ್ನು ತ್ಯಜಿಸಬೇಕು.)

ಶುಕ್ರತೋ ರಸತಶ್ಚೈವ ದೇಹಾಜ್ಜಾಯನ್ತಿ ಜನ್ತವಃ ।
ಸ್ವಭಾವಾತ್ಕರ್ಮಯೋಗಾದ್ವಾ ತಾನುಪೇಕ್ಷೇತ ಬುದ್ಧಿಮಾನ್ ॥೧೧॥

ಶರೀರದಿಂದ ವೀರ್ಯದ ಮೂಲಕವಾಗಿ ಅಥವಾ ಬೆವರಿನ ಮೂಲಕವಾಗಿ, ಪ್ರಾರಬ್ಧಕರ್ಮಾನುಸಾರವಾಗಿ ಅಥವಾ ಸ್ವಭಾವದಿಂದಲೇ ಮಕ್ಕಳು ಅಥವಾ ಹುಳು-ಹುಪ್ಪಟೆಗಳು ಹುಟ್ಟುತ್ತವೆ. ಬುದ್ಧಿವಂತನಾದ ಮನುಷ್ಯನು ಅವುಗಳನ್ನು ಉಪೇಕ್ಷಿಸಬೇಕು.

ರಜಸ್ತಮಸಿ ಪರ್ಯಸ್ತಂ ಸತ್ತ್ವಂ ಚ ರಜಸಿ ಸ್ಥಿತಮ್ ।
ಜ್ಞಾನಾಧಿಷ್ಠಾನಮವ್ಯಕ್ತಂ ಬುದ್ಧ್ಯಹಙ್ಕಾರಲಕ್ಷಣಮ್ ॥೧೨॥

ರಜೋಗುಣವು ತಮೋಗುಣದಲ್ಲಿ ಐಕ್ಯವಾದಾಗ, ಸತ್ತ್ವಗುಣವು ರಜೋಗುಣದಲ್ಲಿ ಐಕ್ಯವಾದಾಗ–ಜ್ಞಾನಕ್ಕೆ ಆಶ್ರಯನಾದ, ಅವ್ಯಕ್ತನಾದ ಆತ್ಮನು ಬುದ್ಧಿ ಮತ್ತು ಅಹಂಕಾರಗಳಿಂದ ಯುಕ್ತನಾಗುತ್ತಾನೆ.

ತದ್ಬೀಜಂ ದೇಹಿನಾಮಾಹುಸ್ತದ್ಬೀಜಂ ಜೀವಸಂಜ್ಞಿತಮ್ ।
ಕರ್ಮಣಾ ಕಾಲಯುಕ್ತೇನ ಸಂಸಾರಪರಿವರ್ತನಮ್ ॥೧೩॥

ಆ ಅವ್ಯಕ್ತನಾದ ಆತ್ಮನೇ ದೇಹಧಾರಿಗಳಾದ ಪ್ರಾಣಿಗಳಿಗೆ ಬೀಜರೂಪನಾಗಿದ್ದಾನೆ. ಬೀಜಭೂತನಾದ ಆತ್ಮನೇ ಗುಣಗಳ ಸಂಗದಿಂದಾಗಿ ಜೀವನೆಂದೂ ಕರೆಯಲ್ಪಡುತ್ತಾನೆ. ಆ ಜೀವನೇ ಕಾಲಾನುಗುಣವಾದ ಕರ್ಮಗಳಿಂದ ಪ್ರೇರಿತನಾಗಿ ಸಂಸಾರಚಕ್ರದಲ್ಲಿ ತಿರುಗುತ್ತಿರುತ್ತಾನೆ.

ರಮತ್ಯಯಂ ಯಥಾ ಸ್ವಪ್ನೇ ಮನಸಾ ದೇಹವಾನಿವ ।
ಕರ್ಮಗರ್ಭೈರ್ಗುಣೈರ್ದೇಹೀ ಗರ್ಭೇ ತದುಪಲಭ್ಯತೇ ॥೧೪॥

ಯಾವ ರೀತಿಯಲ್ಲಿ ಸ್ವಪ್ನಾವಸ್ಥೆಯಲ್ಲಿದ್ದಾಗ ಜೀವನು ಮನಸ್ಸಿನ ಮೂಲಕವಾಗಿ ಮತ್ತೊಂದು ಶರೀರವನ್ನು ಧರಿಸಿದವನಂತೆ ಕ್ರೀಡೆಯಾಡುತ್ತಿರುವನೋ–ಅದೇ ರೀತಿಯಲ್ಲಿ ಕರ್ಮಗರ್ಭಿತವಾದ ಗುಣಗಳಿಂದ ಕೂಡಿದ ಜೀವನು ತಾಯಿಯ ಗರ್ಭದಲ್ಲಿ ಸ್ವಪ್ನದಂತಹ ಸ್ಥಿತಿಯನ್ನು ಹೊಂದುತ್ತಾನೆ.

ಕರ್ಮಣಾ ಬೀಜಭೂತೇನ ಚೋದ್ಯತೇ ಯದ್ಯದಿನ್ದ್ರಿಯಮ್ ।
ಜಾಯತೇ ತದಹಙ್ಕಾರಾದ್ರಾಗಯುಕ್ತೇನ ಚೇತಸಾ ॥೧೫॥

ಬೀಜಭೂತವಾದ ಕರ್ಮದಿಂದ ಯಾವ ಯಾವ ಇಂದ್ರಿಯದ ಉತ್ಪತ್ತಿಗೆ ಪ್ರಚೋದನೆಯಾಗುವುದೋ–ಆಯಾ ಇಂದ್ರಿಯವು ಅನುರಾಗ ಯುಕ್ತವಾದ ಮನಸ್ಸಿನಿಂದಲೂ ಮತ್ತು ಅಹಂಕಾರದಿಂದಲೂ ಹುಟ್ಟುತ್ತದೆ.

(ಮಾಂಸದ ಪಿಂಡದಂತಿರುವ ತಾಯಿಯ ಗರ್ಭದಲ್ಲಿರುವ ಜೀವವು ತನ್ನ ಹಿಂದಿನ ಕರ್ಮಗಳೆಲ್ಲವನ್ನೂ ಸ್ಮರಿಸಿಕೊಳ್ಳುತ್ತದೆ. ಆ ಸಮಯದಲ್ಲಿಯೂ ಅದು ಆಸಕ್ತವಾಗಿಯೇ ಇರುತ್ತದೆ. ಅದಕ್ಕೆ ‘ನಾನು’ ಎಂಬ ಅಹಂಕಾರವೂ ಇರುತ್ತದೆ. ಅದು ಹಿಂದಿನ ಜನ್ಮದ ಕರ್ಮಗಳೆಲ್ಲವನ್ನೂ ಸ್ಮರಿಸಿಕೊಳ್ಳುತ್ತಿದ್ದಂತೆ ಆ ಕರ್ಮಗಳಿಗೆ ಸಂಬಂಧಿಸಿದ ಇಂದ್ರಿಯಗಳೆಲ್ಲವೂ ಮೂಡಿಬರುತ್ತವೆ.)

ಶಬ್ದರಾಗಾಚ್ಛ್ರೋತ್ರಮಸ್ಯ ಜಾಯತೇ ಭಾವಿತಾತ್ಮನಃ ।
ರೂಪರಾಗತ್ತಥಾ ಚಕ್ಷುರ್ಘ್ರಾಣಂ ಗನ್ಧಚಿಕೀರ್ಷಯಾ ॥೧೬॥

ತಾಯಿಯ ಗರ್ಭದಲ್ಲಿ ಪ್ರಕಟವಾದ ಆ ಆತ್ಮನಿಗೆ ಶಬ್ದಗಳನ್ನು ಕೇಳುವ ಆಸಕ್ತಿಯುಂಟಾಗಿ ಕಿವಿಗಳು ಮೂಡುತ್ತವೆ. ಪ್ರಾರಬ್ಧಕರ್ಮಾನುಸಾರವಾಗಿ ರೂಪವನ್ನು ನೋಡಬೇಕೆನ್ನುವ ಆಸಕ್ತಿಯುಂಟಾದೊಡನೆಯೇ ಕಣ್ಣುಗಳು ಹುಟ್ಟಿಕೊಳ್ಳುತ್ತವೆ. ಗಂಧವನ್ನು ಆಘ್ರಾಣಿಸಬೇಕೆಂಬ ಇಚ್ಛೆಯುಂಟಾದೊಡನೆಯೇ ಮೂಗು ಹುಟ್ಟಿಕೊಳ್ಳುತ್ತದೆ.

ಸ್ಪರ್ಶನೇ ತ್ವಕ್ತಥಾ ವಾಯುಃ ಪ್ರಾಣಾಪಾನವ್ಯಪಾಶ್ರಯಃ ।
ವ್ಯಾನೋದಾನೌ ಸಮಾನಶ್ಚ ಪಞ್ಚಧಾ ದೇಹಯಾಪನಮ್ ॥೧೭॥

ಸ್ಪರ್ಶಸುಖವನ್ನು ಅನುಭವಿಸಬೇಕೆಂಬ ಇಚ್ಛೆಯುಂಟಾದೊಡನೆಯೇ ಚರ್ಮವು ಬೆಳೆದುಕೊಳ್ಳುತ್ತದೆ ಮತ್ತು ವಾಯುವೂ ಪ್ರಕಟವಾಗುತ್ತದೆ. ವಾಯುವು ಪ್ರಾಣಾಪಾನಗಳ ಆಶ್ರಯವನ್ನು ಹೊಂದಿರುತ್ತದೆ. ಆ ವಾಯುವೇ ಉದಾನ-ವ್ಯಾನ-ಸಮಾನಗಳು ಆಗುತ್ತದೆ. ಹೀಗೆ ವಾಯುವು ಐದು ಪ್ರಕಾರವಾಗಿ ಪ್ರಕಟಗೊಂಡು ಶರೀರಯಾತ್ರೆಯನ್ನು ನಿರ್ವಹಿಸುತ್ತದೆ.

ಸಂಜಾತೈರ್ಜಾಯತೇ ಗಾತ್ರೈಃ ಕರ್ಮಜೈರ್ವರ್ಷ್ಮಣಾ ವೃತಃ ।
ದುಃಖಾದ್ಯನ್ತೈರ್ದುಃಖಮಧ್ಯೈರ್ನರಃ ಶಾರೀರಮಾನಸೈಃ ॥೧೮॥

ಮನುಷ್ಯನು ಜನ್ಮಕಾಲದಲ್ಲಿ ಪೂರ್ಣವಾಗಿ ಹುಟ್ಟಿದ ಕರ್ಮಜನಿತವಾದ ಶರೀರಾವಯವಗಳಿಂದಲೂ, ಸೂಕ್ಷ್ಮಶರೀರದಿಂದಲೂ ಕೂಡಿದವನಾಗಿ ಹುಟ್ಟುತ್ತಾನೆ. ಹಾಗೆ ಹುಟ್ಟುವ ಮನುಷ್ಯನು ಜೀವನದ ಆದಿ-ಮಧ್ಯಾಂತಗಳಲ್ಲಿಯೂ ಶಾರೀರಕವಾದ ಮತ್ತು ಮಾನಸಿಕವಾದ ದುಃಖಗಳಿಂದ ಪೀಡಿಸಲ್ಪಡುತ್ತಿರುತ್ತಾನೆ.

ದುಃಖಂ ವಿದ್ಯಾದುಪಾದಾನಾದಭಿಮಾನಾಚ್ಚ ವರ್ಧತೇ ।
ತ್ಯಾಗಾತ್ತೇಭ್ಯೋ ನಿರೋಧಃ ಸ್ಯಾನ್ನಿರೋಧಜ್ಞೋ ವಿಮುಚ್ಯತೇ ॥೧೯॥

ಶರೀರಗ್ರಹಣಮಾತ್ರದಿಂದಲೇ ದುಃಖವು ಪ್ರಾಪ್ತವಾಗುವುದೆಂದು ತಿಳಿದುಕೊಳ್ಳಬೇಕು. ಶರೀರದ ಮೇಲಿನ ಅಭಿಮಾನದಿಂದಾಗಿ ಆ ದುಃಖವು ಮತ್ತಷ್ಟು ಹೆಚ್ಚುತ್ತದೆ. ಅಭಿಮಾನದ ತ್ಯಾಗದಿಂದ ಆ ಎಲ್ಲ ದುಃಖಗಳೂ ನಿವಾರಣೆಹೊಂದುತ್ತವೆ. ಯಾವನು ದುಃಖವನ್ನು ತೊಲಗಿಸುವ ಈ ವಿಧಾನವನ್ನು ತಿಳಿದಿರುವನೋ–ಅವನು ಸಂಸಾರದಿಂದ ಮುಕ್ತನಾಗುತ್ತಾನೆ.

ಇನ್ದ್ರಿಯಾಣಾಂ ರಜಸ್ಯೇವ ಪ್ರಲಯಪ್ರಭವಾವುಭೌ ।
ಪರೀಕ್ಷ್ಯ ಸಂಚರೇದ್ವಿದ್ವಾನ್ಯಥಾವಚ್ಛಾಸ್ತ್ರಚಕ್ಷುಷಾ ॥೨೦॥

ಇಂದ್ರಿಯಗಳ ಉತ್ಪತ್ತಿ ಮತ್ತು ಲಯ –ಈ ಎರಡು ಕಾರ್ಯಗಳೂ ರಜೋಗುಣದಿಂದಲೇ ಉಂಟಾಗುತ್ತವೆ. ವಿದ್ವಾಂಸನಾದ ಪುರುಷನು ಶಾಸ್ತ್ರದೃಷ್ಟಿಯಿಂದ ಈ ವಿಷಯವನ್ನು ಚೆನ್ನಾಗಿ ಪರೀಕ್ಷಿಸಿದನಂತರ ಯಥೋಚಿತವಾಗಿ ನಡೆದುಕೊಳ್ಳಬೇಕು.

ಜ್ಞಾನೇನ್ದ್ರಿಯಾಣೀನ್ದ್ರಿಯಾರ್ಥಾನ್ನೋಪಸರ್ಪನ್ತ್ಯತರ್ಷುಲಮ್ ।
ಹೀನೈಶ್ಚ ಕರಣೈರ್ದೇಹೀ ನ ದೇಹಂ ಪುನರರ್ಹತಿ ॥೨೧॥

ಯಾವನಿಗೆ ಆಸೆಯೆಂಬುದೇ ಇಲ್ಲವೋ ಅವನಿಗೆ ಜ್ಞಾನೇಂದ್ರಿಯಗಳು ಇಂದ್ರಿಯಾರ್ಥಗಳನ್ನು (ವಿಷಯಗಳನ್ನು) ಒದಗಿಸಿಕೊಡುವುದಿಲ್ಲ. ಇಂದ್ರಿಯಗಳು ವಿಷಯಾಸಕ್ತಿಯಿಂದ ರಹಿತವಾದ ಬಳಿಕ ದೇಹಿಗೆ ಪುನಃ ಶರೀರ ಧಾರಣೆಯ ಸಂಭವವೇ ಇರುವುದಿಲ್ಲ."

೨೧೩ನೆಯ ಅಧ್ಯಾಯವು ಮುಗಿಯಿತು.

೨೧೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬ್ರಹ್ಮಚರ್ಯ ಮತ್ತು ವೈರಾಗ್ಯಗಳಿಂದ ಮುಕ್ತಿ

ಪಾರಿಕ್ಷಿತ! ಭೀಷ್ಮನು ಹೇಳುತ್ತಾನೆ :

ಅತ್ರೋಪಾಯಂ ಪ್ರವಕ್ಷ್ಯಾಮಿ ಯಥಾವಚ್ಛಾಸ್ತ್ರಚಕ್ಷುಷಾ ।
ತತ್ತ್ವಜ್ಞಾನಾಚ್ಚರನ್ರಾಜನ್ಪ್ರಾಪ್ನುಯಾತ್ಪರಮಾಂ ಗತಿಮ್ ॥೧॥

"ಯುಧಿಷ್ಠಿರ! ಈಗ ನಾನು ನಿನಗೆ ಮೋಕ್ಷೋಪಾಯವನ್ನು ಶಾಸ್ತ್ರ ದೃಷ್ಟಿಯಿಂದ ಯಥಾವತ್ತಾಗಿ ಹೇಳುತ್ತೇನೆ. ಮನುಷ್ಯನು ಶಾಸ್ತ್ರವಿಹಿತವಾದ ಕರ್ಮಗಳನ್ನು ನಿಷ್ಕಾಮಭಾವದಿಂದ ಆಚರಿಸುತ್ತಾ ತತ್ತ್ವಜ್ಞಾನದಿಂದ ಪರಮ ಗತಿಯನ್ನು ಹೊಂದುತ್ತಾನೆ.

ಸರ್ವೇಷಾಮೇವ ಭೂತಾನಾಂ ಪುರುಷಃ ಶ್ರೇಷ್ಠ ಉಚ್ಯತೇ ।
ಪುರುಷೇಭ್ಯೋ ದ್ವಿಜಾನಾಹುರ್ದ್ವಿಜೇಭ್ಯೋ ಮನ್ತ್ರದರ್ಶಿನಃ ॥೨॥

ಸಮಸ್ತಪ್ರಾಣಿಗಳಲ್ಲಿಯೂ ಮನುಷ್ಯನೇ ಶ್ರೇಷ್ಠನಾದವನೆಂದು ಹೇಳಲ್ಪಟ್ಟಿದೆ. ಮನುಷ್ಯರಲ್ಲಿ ದ್ವಿಜರು ಶ್ರೇಷ್ಠರೆಂದು ಹೇಳುತ್ತಾರೆ. ದ್ವಿಜರಲ್ಲಿಯೂ ಮಂತ್ರದ್ರಷ್ಟಾರರಾದ (ವೇದಜ್ಞರಾದ) ಬ್ರಾಹ್ಮಣರು ಶ್ರೇಷ್ಠರು.

ಸರ್ವಭೂತಾತ್ಮಭೂತಾಸ್ತೇ ಸರ್ವಜ್ಞಾಃ ಸರ್ವದರ್ಶಿನಃ ।
ಬ್ರಾಹ್ಮಣಾ ವೇದಶಾಸ್ತ್ರಜ್ಞಾಸ್ತತ್ತ್ವಾರ್ಥಗತನಿಶ್ಚಯಾಃ ॥೩॥

ವೇದ-ಶಾಸ್ತ್ರಗಳನ್ನು ಯಥಾರ್ಥವಾಗಿ ತಿಳಿದಿರುವ, ಸರ್ವಜ್ಞರಾದ, ಸರ್ವಪ್ರಾಣಿಗಳಿಗೂ ಆತ್ಮಸದೃಶರಾಗಿರುವ, ಸರ್ವವನ್ನೂ ಅಂತರ್ದೃಷ್ಟಿಯಿಂದ ನೋಡಲು ಸಮರ್ಥರಾದ ಬ್ರಾಹ್ಮಣರು ಪರಮಾರ್ಥತತ್ತ್ವದಲ್ಲಿ ನಿಶ್ಚಯಜ್ಞಾನವುಳ್ಳವರಾಗಿರುತ್ತಾರೆ.

ನೇತ್ರಹೀನೋ ಯಥಾ ಹ್ಯೇಕಃ ಕೃಚ್ಛ್ರಾಣಿ ಲಭತೇಽಧ್ವನಿ ।
ಜ್ಞಾನಹೀನಸ್ತಥಾ ಲೋಕೇ ತಸ್ಮಾಜ್ಜ್ಞಾನವಿದೋಽಧಿಕಾಃ ॥೪॥

ಕಣ್ಣಿಲ್ಲದವನು ಯಾವ ರೀತಿಯಲ್ಲಿ ಏಕಾಕಿಯಾಗಿ ಪ್ರಯಾಣವನ್ನು ಮಾಡುವಾಗ ಹಾದಿಯಲ್ಲಿ ನಾನಾವಿಧವಾದ ಕಷ್ಟ-ಕೋಟಲೆಗಳಿಗೆ ಗುರಿಯಾಗುವನೋ–ಅದೇ ರೀತಿಯಲ್ಲಿ ಜ್ಞಾನಹೀನನಾದವನೂ ಸಂಸಾರಸಾಗರದಲ್ಲಿ ಬಿದ್ದು ದಾಟುವ ಪರಿಯನ್ನು ಕಾಣದೇ ಅನೇಕವಿಧವಾದ ಕಷ್ಟ-ಕೋಟಲೆಗಳಿಗೆ ಗುರಿಯಾಗುತ್ತಾನೆ. ಆದುದರಿಂದ ಮನುಷ್ಯರಲ್ಲಿ ಎಲ್ಲರಿಗಿಂತಲೂ ಜ್ಞಾನಿಗಳೇ ಅಧಿಕರೆನಿಸಿಕೊಳ್ಳುತ್ತಾರೆ.

ತಾಂಸ್ತಾನುಪಾಸತೇ ಧರ್ಮಾನ್ಧರ್ಮಕಾಮಾ ಯಥಾಗಮಮ್ ।
ನ ತ್ವೇಷಾಮರ್ಥಸಾಮಾನ್ಯಮನ್ತರೇಣ ಗುಣಾನಿಮಾನ್ ॥೫॥

ಧರ್ಮಕಾಮರಾದ (ಪುಣ್ಯಾಭಿಲಾಷಿಗಳಾದ) ಮನುಷ್ಯರು ಶಾಸ್ತ್ರವಿಧಿಗೆ ಅನುಸಾರವಾಗಿ ಯಜ್ಞಾಗ್ನಿಷ್ಟೋಮಾದಿ ಸಕಾಮಕರ್ಮಗಳನ್ನು ಮಾಡುತ್ತಿರುತ್ತಾರೆ. ಆದರೆ ಅವರಲ್ಲಿ ಮುಂದೆ ಹೇಳುವ ಗುಣಗಳಿಲ್ಲದಿದ್ದರೆ ಅವರು ಫಲಸಾಮ್ಯವನ್ನು (ಮೋಕ್ಷರೂಪವಾದ ಪುರುಷಾರ್ಥವನ್ನು) ಹೊಂದಲಾರರು.

ವಾಗ್ದೇಹಮನಸಾಂ ಶೌಚಂ ಕ್ಷಮಾ ಸತ್ಯಂ ಧೃತಿಃ ಸ್ಮೃತಿಃ ।
ಸರ್ವಧರ್ಮೇಷು ಧರ್ಮಜ್ಞಾ ಜ್ಞಾಪಯನ್ತಿ ಗುಣಾಞ್ಶುಭಾನ್ ॥೬॥

ಮಾತು, ಮನಸ್ಸು ಮತ್ತು ಶರೀರಗಳ ಪಾವಿತ್ರ್ಯ (ತ್ರಿಕರಣಶುದ್ಧಿ), ಕ್ಷಮೆ, ಸತ್ಯ, ಧೈರ್ಯ ಮತ್ತು ಸ್ಮೃತಿ (ಮೇಧಾಶಕ್ತಿ) –ಈ ಗುಣಗಳು ಸಾಮಾನ್ಯವಾಗಿ ಎಲ್ಲ ಧರ್ಮಗಳಲ್ಲಿಯೂ ಕಲ್ಯಾಣಕಾರಿಗಳಾಗುವುವೆಂದು ಧರ್ಮವನ್ನು ತಿಳಿದವರು ಹೇಳುತ್ತಾರೆ.

ಯದಿದಂ ಬ್ರಹ್ಮಣೋ ರೂಪಂ ಬ್ರಹ್ಮಚರ್ಯಮಿತಿ ಸ್ಮೃತಮ್ ।
ಪರಂ ತತ್ಸರ್ವಧರ್ಮೇಭ್ಯಸ್ತೇನ ಯಾನ್ತಿ ಪರಾಂ ಗತಿಮ್ ॥೭॥

ಬ್ರಹ್ಮಚರ್ಯ ಎಂದು ಶಾಸ್ತ್ರಗಳಲ್ಲಿ ಕರೆಯಲ್ಪಡುವುದು–ಬ್ರಹ್ಮದ ರೂಪವೇ ಆಗಿದೆ. ಬ್ರಹ್ಮಚರ್ಯಧರ್ಮವು ಸರ್ವಧರ್ಮಗಳಿಗಿಂತಲೂ ಶ್ರೇಷ್ಠವಾದುದು. ಬ್ರಹ್ಮಚರ್ಯದ ಪಾಲನೆಯಿಂದ ಮನುಷ್ಯನು ಪರಮಪದ ವನ್ನು ಹೊಂದುತ್ತಾನೆ.

ಲಿಙ್ಗಸಂಯೋಗಹೀನಂ ಯಚ್ಛಬ್ದಸ್ಪರ್ಶವಿವರ್ಜಿತಮ್ ।
ಶ್ರೋತ್ರೇಣ ಶ್ರವಣಂ ಚೈವ ಚಕ್ಷುಷಾ ಚೈವ ದರ್ಶನಮ್ ॥೮॥

ವಾಕ್ಸಮ್ಭಾಷಾಪ್ರವೃತ್ತಂ ಯತ್ತನ್ಮನಃಪರಿವರ್ಜಿತಮ್ ।
ಬುದ್ಧ್ಯಾ ಚಾಧ್ಯವಸೀಯೀತ ಬ್ರಹ್ಮಚರ್ಯಮಕಲ್ಮಷಮ್ ॥೯॥

ಬ್ರಹ್ಮಚರ್ಯವು ಸ್ತ್ರೀಸಂಯೋಗವನ್ನು ಬಿಟ್ಟಿದ್ದು. ಸ್ತ್ರೀವಿಷಯಕವಾದ ಶಬ್ದ-ಸ್ಪರ್ಶಗಳನ್ನೂ ಬಿಟ್ಟಿದ್ದುದಾಗಿದೆ. ಅವರ ಬಗೆಗೆ ಕಿವಿಯಿಂದ ಕೇಳುವಿಕೆ, ಕಣ್ಣಿನಿಂದ ನೋಡುವಿಕೆ, ನಾಲಿಗೆಯಿಂದ ಅವರೊಡನೆ ಮಾತು –ಇವು ಒದಗಿದಾಗಲೂ ಅವುಗಳ ಸಂಗಡ ಮನಸ್ಸು ಇರಬಾರದು. ಹೀಗೆ ಪರಿಶುದ್ಧ ವಾದ ಬ್ರಹ್ಮಚರ್ಯವ್ರತವನ್ನು ಬುದ್ಧಿಯಿಂದ ನಿಶ್ಚಯಿಸಿಕೊಳ್ಳಬೇಕು.

ಸಮ್ಯಗ್ವೃತ್ತಿರ್ಬ್ರಹ್ಮಲೋಕಂ ಪ್ರಾಪ್ನುಯಾನ್ಮಧ್ಯಮಃ ಸುರಾನ್ ।
ದ್ವಿಜಾಗ್ರ್ಯೇ ಜಾಯತೇ ವಿದ್ವಾನ್ಕನ್ಯಸೀಂ ವೃತ್ತಿಮಾಸ್ಥಿತಃ ॥೧೦॥

ಯಾವ ಮನುಷ್ಯನು ಇಂತಹ ಬ್ರಹ್ಮಚರ್ಯವ್ರತವನ್ನು ಸರಿಯಾದ ರೀತಿಯಲ್ಲಿ ಪರಿಪಾಲನೆಮಾಡುವನೋ – ಅವನು ಬ್ರಹ್ಮಲೋಕವನ್ನೇ ಹೊಂದುತ್ತಾನೆ. ಮಧ್ಯಮಶ್ರೇಣಿಯ ಬ್ರಹ್ಮಚಾರಿಯು ದೇವತೆಗಳ ಲೋಕ ವನ್ನು ಸೇರುತ್ತಾನೆ. ಕನಿಷ್ಠಶ್ರೇಣಿಯ ಬ್ರಹ್ಮಚಾರಿಯು ವಿದ್ವಾಂಸನಾದ ಬ್ರಾಹ್ಮಣ ಶ್ರೇಷ್ಠನಾಗಿ ಹುಟ್ಟುತ್ತಾನೆ.

ಸು ದುಷ್ಕರಂ ಬ್ರಹ್ಮಚರ್ಯಮುಪಾಯಂ ತತ್ರ ಮೇ ಶೃಣು ।
ಸಮ್ಪ್ರದೀಪ್ತಮುದೀರ್ಣಂ ಚ ನಿಗೃಹ್ಣೀಯಾದ್ದ್ವಿಜೋ ರಜಃ ॥೧೧॥

ಬ್ರಹ್ಮಚರ್ಯದ ಪಾಲನೆಯು ಅತ್ಯಂತಕಠಿನವಾದುದು. ಬ್ರಹ್ಮ ಚರ್ಯವ್ರತವನ್ನು ಅನುಷ್ಠಾನಮಾಡಲು ಇರುವ ಉಪಾಯವನ್ನು ಹೇಳುವೆನು ಕೇಳು. ಬ್ರಹ್ಮಚರ್ಯವ್ರತವನ್ನು ಪಾಲಿಸಲು ಇಚ್ಛಿಸುವ

ಬ್ರಾಹ್ಮಣನು ಚೆನ್ನಾಗಿ ಉದ್ದೀಪನಗೊಂಡು ಕ್ಷಣ-ಕ್ಷಣಕ್ಕೂ ವೃದ್ಧಿಯನ್ನು ಹೊಂದುವ ರಜೋಗುಣವನ್ನು (ಕಾಮ-ಕ್ರೋಧಾದಿಗಳನ್ನು) ತಡೆಹಿಡಿಯ ಬೇಕು.

(ಶ್ರೀಗೀತೆಯಲ್ಲಿ : **ಕಾಮ ಏಷ ಕ್ರೋಧ ಏಷ ರಜೋಗುಣ ಸಮುದ್ಭವಃ** – ಕಾಮ-ಕ್ರೋಧಗಳು ರಜೋಗುಣಸಮುದ್ಭವಗಳೆಂದು ಹೇಳಿದೆ.)

ಯೋಷಿತಾಂ ನ ಕಥಾ ಶ್ರಾವ್ಯಾ ನ ನಿರೀಕ್ಷ್ಯಾ ನಿರಮ್ಬರಾಃ ।
ಕಥಞ್ಚಿದ್ದರ್ಶನಾದಾಸಾಂ ದುರ್ಬಲಾನಾಂ ವಿಶೇದ್ರಜಃ ॥೧೨॥

ಸ್ತ್ರೀಯರಿಗೆ ಸಂಬಂಧಿಸಿದ ಸಂಭಾಷಣೆಗಳನ್ನು ಕೇಳಬಾರದು. ನಗ್ನಾವಸ್ಥೆಯಲ್ಲಿರುವ ಸ್ತ್ರೀಯರನ್ನು ನೋಡಬಾರದು. ಯಾವುದಾದರೂ ಕಾರಣದಿಂದ ಸ್ತ್ರೀಯರು ನಗ್ನಾವಸ್ಥೆಯಲ್ಲಿರುವುದನ್ನು ನೋಡಿದುದೇ ಆದರೆ– ದುರ್ಬಲವಾದ ಮನಸ್ಸುಳ್ಳ ಮನುಷ್ಯರ ಮನಸ್ಸನ್ನು ರಜೋಗುಣವು ಬಹಳ ಬೇಗ ಪ್ರವೇಶಿಸಿಬಿಡುತ್ತದೆ. (ಅಂತಹ ದೃಶ್ಯಗಳನ್ನು ನೋಡುವುದರಿಂದ ಪುರುಷರು ಕಾಮಾಭಿಭೂತರಾಗುತ್ತಾರೆ.)

ರಾಗೋತ್ಪನ್ನಶ್ಚರೇತ್ಕೃಚ್ಛ್ರಂ ಮಹಾರ್ತಿಃ ಪ್ರವಿಶೇದಪಃ ।
ಮಗ್ನಃ ಸ್ವಪ್ನೇ ಚ ಮನಸಾ ತ್ರಿರ್ಜಪೇದಘಮರ್ಷಣಮ್ ॥೧೩॥

ಬ್ರಹ್ಮಚಾರಿಯ ಮನಸ್ಸಿನಲ್ಲಿ ಕಾಮವಿಕಾರಗಳೇನಾದರೂ ಉಂಟಾದಲ್ಲಿ ಆತ್ಮಶುದ್ಧಿಗಾಗಿ * ಕೃಚ್ಛ್ರವ್ರತವನ್ನು ಆಚರಿಸಬೇಕು. ಅಧಿಕವಾದ ವೀರ್ಯ ವೃದ್ಧಿಯಿಂದಾಗಿ ಕಾಮವೇದನೆಯಿಂದ ಪೀಡಿತನಾಗಿದ್ದರೆ ನದಿಯ ಅಥವಾ ಸರೋವರದ ನೀರಿನಲ್ಲಿ ಮುಳುಗಬೇಕು. (ಅಘಮರ್ಷಣಮಂತ್ರ ಜಪಪೂರ್ವಕವಾಗಿ ಸ್ನಾನಮಾಡಬೇಕು.) ಸ್ವಪ್ನದಲ್ಲೇನಾದರೂ ಸ್ತ್ರೀಯ ರೊಡನೆ ಸಂಭಾಷಣೆಯಲ್ಲಿ ಮಗ್ನನಾಗಿದ್ದರೆ (ವೀರ್ಯಪಾತವಾದರೆ) ಆ

---

* ಪ್ರಾಜಾಪತ್ಯಕೃಚ್ಛ್ರವ್ರತಕ್ಕೆ ಸಾಮಾನ್ಯವಾಗಿ ಕೃಚ್ಛ್ರವೆಂದೇ ಹೇಳುವ ವಾಡಿಕೆಯಿದೆ. ಪ್ರಾಜಾಪತ್ಯಕೃಚ್ಛ್ರದ ನಿಯಮವು ಹೀಗಿದೆ : ತ್ರ್ಯಹಂ ಪ್ರಾತಸ್ತ್ರ್ಯಹಂ ಸಾಯಂ ತ್ರ್ಯಹಮದ್ಯಾದಯಾಚಿತಮ್ । ತ್ರ್ಯಹಂ ಪರಂ ಚ ನಾಶ್ನೀಯಾತ್ಪ್ರಾಜಾಪತ್ಯೋಽಯ ಮುಚ್ಯತೇ॥ ಮನುಸ್ಮೃತಿಃ ೧೧-೨೨

ಮೂರು ದಿವಸಗಳು ಪ್ರಾತಃಕಾಲದಲ್ಲಿಯೂ ಮೂರು ದಿವಸಗಳು ಸಾಯಂಕಾಲ

ದೋಷಪರಿಹಾರಕ್ಕಾಗಿ ನೀರಿನಲ್ಲಿ ಮುಳುಗಿ * ಅಘಮರ್ಷಣಸೂಕ್ತವನ್ನು ಮೂರು ಬಾರಿ ಮನಸ್ಸಿನಲ್ಲಿಯೇ ಪುನಶ್ಚರಣಮಾಡಬೇಕು.

ಪಾಪ್ಮಾನಂ ನಿರ್ದಹೇದೇವಮನ್ತರ್ಭೂತರಜೋಮಯಮ್ ।
ಜ್ಞಾನಯುಕ್ತೇನ ಮನಸಾ ಸಂತತೇನ ವಿಚಕ್ಷಣಃ ॥೧೪॥

ವಿವೇಕಿಯಾದ ಪುರುಷನು ಈ ರೀತಿಯಲ್ಲಿ ಜ್ಞಾನಯುಕ್ತವಾದ ಮತ್ತು ಸಂಯಮಶೀಲವಾದ ಮನಸ್ಸಿನಿಂದ ಕೂಡಿದವನಾಗಿ ಅಂತಃಕರಣದಲ್ಲಿ ಪ್ರಕಟವಾಗುವ, ಪಾಪಮಯವಾದ, ರಜೋಮಯವಾದ ಕಾಮವಿಕಾರವನ್ನು ಭಸ್ಮಮಾಡಬೇಕು.

ಕುಣಪಾಮೇಧ್ಯಸಂಯುಕ್ತಂ ಯದ್ವದಚ್ಛಿದ್ರಬನ್ಧನಮ್ ।
ತದ್ವದ್ದೇಹಗತಂ ವಿದ್ಯಾದಾತ್ಮಾನಂ ದೇಹಬನ್ಧನಮ್ ॥೧೫॥

ದುರ್ವಾಸನೆಯಿಂದ ಕೂಡಿರುವ ಮಲಯುಕ್ತವಾದ ಕೋಶವನ್ನು ಕರುಳು ಯಾವ ರೀತಿಯಲ್ಲಿ ದೃಢವಾಗಿ ಬಂಧಿಸಿರುವುದೋ–ಅದೇ ರೀತಿಯಲ್ಲಿ ದೇಹದಲ್ಲಿರುವ ಆತ್ಮನನ್ನು ದೇಹವು (ಅಜ್ಞಾನವು) ದೃಢವಾಗಿ ಬಂಧಿಸಿರುವುದೆಂದು ತಿಳಿಯಬೇಕು.

ವಾತಪಿತ್ತಕಫಾದ್ರಕ್ತಂ ತ್ವಙ್ಮಾಂಸಂ ಸ್ನಾಯುಮಸ್ಥಿ ಚ ।
ಮಜ್ಜಾಂ ದೇಹಂ ಶಿರಾಜಾಲೈಸ್ತರ್ಪಯನ್ತಿ ರಸಾ ನೃಣಾಮ್ ॥೧೬॥

ಮನುಷ್ಯರು ಭೋಜನಮಾಡುವುದರಿಂದ ಉಂಟಾಗುವ ಅನ್ನ ರಸಗಳು ನಾಡೀಸಮೂಹಗಳ ಮೂಲಕವಾಗಿ ಮನುಷ್ಯರ ವಾತ- ಪಿತ್ತ-ಕಫಗಳನ್ನೂ ರಕ್ತ-ಚರ್ಮ-ಮಾಂಸ-ಸ್ನಾಯು-ಮೂಳೆ-ಮಜ್ಜೆ ಮತ್ತು ಸಂಪೂರ್ಣ ದೇಹವನ್ನೂ ತೃಪ್ತಿಗೊಳಿಸುತ್ತವೆ. (ಪುಷ್ಟಿಗೊಳಿಸುತ್ತವೆ.)

ದಲ್ಲಿಯೂ ಭೋಜನಮಾಡಬೇಕು. ಮುಂದೆ ಮೂರು ದಿವಸಗಳು ಅಯಾಚಿತವಾದ ಅನ್ನವನ್ನು ಭೋಜನಮಾಡಬೇಕು. (ಯಾರಾದರೂ ಕರೆದು ಹಾಕಿದರೆ ಊಟಮಾಡಬೇಕು. ಇಲ್ಲದಿದ್ದರೆ ಊಟವನ್ನೇ ಮಾಡಬಾರದು–ಎಂದರ್ಥ.) ಅನಂತರ ಮೂರು ದಿವಸಗಳು ಉಪವಾಸವಿರಬೇಕು. ಒಟ್ಟು ಹನ್ನೆರಡು ದಿವಸಗಳ ವ್ರತವಿದು. ಇದಕ್ಕೆ ಪ್ರಾಜಾಪತ್ಯಕೃಚ್ಛ್ರವೆನ್ನುತ್ತಾರೆ.

* ಅಘಮರ್ಷಣಮಂತ್ರವು ಎಲ್ಲ ವೇದಗಳಲ್ಲಿಯೂ ಬರುತ್ತದೆ. ಮಂತ್ರಶರೀರವು ಹೀಗಿದೆ :

ದಶ ವಿದ್ಯಾದ್ಧಮನ್ಯೋಽತ್ರ ಪಞ್ಚೇನ್ದ್ರಿಯಗುಣಾವಹಾಃ ।
ಯಾಭಿಃ ಸೂಕ್ಷ್ಮಾಃ ಪ್ರತಾಯನ್ತೇ ಧಮನ್ಯೋಽನ್ಯಾಃ ಸಹಸ್ರಶಃ ॥೧೭॥

ಈ ಶರೀರದೊಳಗೆ ವಾತ-ಪಿತ್ತಾದಿಗಳಿಗೆ ಅನ್ನರಸವನ್ನೊಯ್ಯುವ ಹತ್ತು ನಾಡಿಗಳಿವೆ. ಅವುಗಳೇ ಪಂಚೇಂದ್ರಿಯಗಳಿಗೆ ಶಬ್ದಾದಿ ಗುಣಗಳನ್ನು ಗ್ರಹಿಸುವ ಶಕ್ತಿಯನ್ನು ನೀಡುತ್ತವೆ. ಆ ಹತ್ತು ನಾಡಿಗಳಿಂದ ಸೂಕ್ಷ್ಮಾತಿ ಸೂಕ್ಷ್ಮವಾದ ಸಾವಿರಾರು ನಾಡಿಗಳು ದೇಹಾದ್ಯಂತವಾಗಿ ಪ್ರಸರಿಸಿಕೊಂಡಿವೆ.

ಏವಮೇತಾಃ ಶಿರಾ ನದ್ಯೋ ರಸೋದಾ ದೇಹಸಾಗರಮ್ ।
ತರ್ಪಯನ್ತಿ ಯಥಾಕಾಲಮಾಪಗಾ ಇವ ಸಾಗರಮ್ ॥೧೮॥

ನದಿಗಳು ಕಾಲಾನುಗುಣವಾಗಿ ತುಂಬಿದ ಪ್ರವಾಹಗಳಿಂದ ಸಮುದ್ರ ವನ್ನು ತೃಪ್ತಿಗೊಳಿಸುವಂತೆ–ರಸವಾಹಿನಿಗಳಾದ ಈ ನಾಡೀರೂಪದ ನದಿ ಗಳು ದೇಹವೆಂಬ ಸಾಗರವನ್ನು ತೃಪ್ತಿಗೊಳಿಸುತ್ತವೆ.

ಮಧ್ಯೇ ಚ ಹೃದಯಸ್ಯೈಕಾ ಶಿರಾ ತತ್ರ ಮನೋವಹಾ ।
ಶುಕ್ರಂ ಸಂಕಲ್ಪಜಂ ನೄಣಾಂ ಸರ್ವಗಾತ್ರೈರ್ವಿಮುಞ್ಚತಿ ॥೧೯॥

ಹೃದಯದ ಮಧ್ಯದಲ್ಲಿ (ಕದಂಬಕುಸುಮಾಕಾರದ ಮಾಂಸಪಿಂಡದ ಮಧ್ಯದಲ್ಲಿ) ಅನ್ನರಸಗಳಿಂದ ಹೃದಯಾಂತರ್ವರ್ತಿಯಾದ ಮನಸ್ಸನ್ನು ಸುಪ್ರೀತವನ್ನಾಗಿ ಮಾಡುವ ಮನೋವಹಾ* ಎಂಬ ನಾಡಿಯಿದೆ. ಆ ನಾಡಿಯು ಮನುಷ್ಯನಲ್ಲಿರುವ ರೇತಸ್ಸನ್ನು ಕಾಮವಿಷಯಕವಾದ ಸಂಕಲ್ಪದ

ಋತಂ ಚ ಸತ್ಯಂ ಚಾಭೀದ್ಧಾತ್ತಪಸೋಽಧ್ಯಜಾಯತ । ತತೋ ರಾತ್ರಿರಜಾಯತ ತತಃ ಸಮುದ್ರೋ ಅರ್ಣವಃ । ಸಮುದ್ರಾದರ್ಣವಾದಧಿಸಂವತ್ಸರೋ ಅಜಾಯತ । ಅಹೋರಾತ್ರಾಣಿ ವಿದಧದ್ವಿಶ್ವಸ್ಯ ಮಿಷತೋ ವಶೀ । ಸೂರ್ಯಾಚನ್ದ್ರಮಸೌ ಧಾತಾಯಥಾಪೂರ್ವಮಕಲ್ಪಯತ್ । ದಿವಂ ಚ ಪೃಥಿವೀಂ ಚಾನ್ತರಿಕ್ಷಮಥೋಸುವಃ॥

* ಮನೋವಹಾನಾಡಿಯ ವಿಷಯವಾಗಿ ನಾಡೀಶಾಸ್ತ್ರದಲ್ಲಿ ಹೀಗೆ ಹೇಳಿದ್ದಾರೆ :

ಅಶ್ವತ್ಥಪತ್ರನಾಡೀವದ್ದ್ವಿಸಪ್ತತಿಶತಾಧಿಕಾ ।
ನಾಡೀ ಮನೋವಹೇತ್ಯುಕ್ತಂ ಯೋಗಶಾಸ್ತ್ರವಿಶಾರದೈಃ ॥

ಮೂಲಕ ದೇಹದ ಅಂಗಾಂಗಗಳಿಂದಲೂ ಸಂಗ್ರಹಿಸಿ ಉಪಸ್ಥೋನ್ಮುಖ ವಾಗುವಂತೆ ಮಾಡಿ ರೇತಸ್ಸೇಚನದ ಕಾರ್ಯವನ್ನು ಮಾಡುತ್ತದೆ.

ಸರ್ವಗಾತ್ರಪ್ರತಾಯಿನ್ಯಸ್ತಸ್ಯಾ ಹ್ಯನುಗತಾಃ ಶಿರಾಃ ।
ನೇತ್ರಯೋಃ ಪ್ರತಿಪದ್ಯನ್ತೇ ವಹನ್ತ್ಯಸ್ತೈಜಸಂ ಗುಣಮ್ ॥೨೦॥

ಮನೋವಹಾನಾಡಿಯನ್ನೇ ಅನುಸರಿಸಿ ಹೋಗುವ, ಶರೀರಾದ್ಯಂತ ವಾಗಿ ಪ್ರಸರಿಸಿರುವ ನಾಡಿಗಳು ತೇಜಸ್ಸಿನ ಗುಣವನ್ನು ಸಂಗ್ರಹಿಸಿಕೊಂಡು ಪ್ರವಹಿಸುತ್ತಾ ಕಣ್ಣುಗಳನ್ನು ಸೇರುತ್ತವೆ.

ಪಯಸ್ಯನ್ತರ್ಹಿತಂ ಸರ್ಪಿರ್ಯದ್ವನ್ನಿರ್ಮಥ್ಯತೇ ಖಜೈಃ ।
ಶುಕ್ರಂ ನಿರ್ಮಥ್ಯತೇ ತದ್ವದ್ದೇಹಸಂಕಲ್ಪಜೈಃ ಖಜೈಃ ॥೨೧॥

ಹಾಲಿನಲ್ಲಿ ಅಡಗಿರುವ ತುಪ್ಪವು (ಬೆಣ್ಣೆಯು) ಯಾವ ರೀತಿಯಲ್ಲಿ ಕಡೆಗೋಲಿನಿಂದ ಕಡೆಯಲ್ಪಡುತ್ತದೆಯೋ–ಅದೇ ರೀತಿಯಲ್ಲಿ ದೇಹ ಮತ್ತು ಸಂಕಲ್ಪಗಳಿಂದ ಹುಟ್ಟಿದ ಕಾಮೋಪಕರಣರೂಪವಾದ ಕಡೆಗೋಲುಗಳಿಂದ ವೀರ್ಯವು ಕಡೆಯಲ್ಪಡುತ್ತದೆ. (ಹಾಲಿನ ರೂಪವಾದ ದೇಹರಸವು ಕಡೆಯಲ್ಪಟ್ಟು ವೀರ್ಯೋತ್ಪತ್ತಿಯಾಗುತ್ತದೆ.)

ಸ್ವಪ್ನೇಽಪ್ಯೇವಂ ಯಥಾಭ್ಯೇತಿ ಮನಃಸಂಕಲ್ಪಜಂ ರಜಃ ।
ಶುಕ್ರಂ ಸಂಕಲ್ಪಜಂ ದೇಹಾತ್ಸೃಜತ್ಯಸ್ಯ ಮನೋವಹಾ ॥೨೨॥

ಸ್ವಪ್ನದಲ್ಲಿ ಸ್ತ್ರೀಯರ ಸಂಪರ್ಕವಾಗದಿದ್ದರೂ ಮನಸ್ಸಿನ ಸಂಕಲ್ಪದಿಂದಲೇ ಸ್ತ್ರೀಸಂಬಂಧವಾದ ಅನುರಾಗವುಂಟಾಗುತ್ತದೆ. ಹಾಗೆಯೇ ಮನೋವಹಾ ಎಂಬ ನಾಡಿಯು ಕಾಮೋಪಭೋಗಸಂಕಲ್ಪಜನ್ಯವಾದ ವೀರ್ಯವನ್ನು ಮನುಷ್ಯನ ದೇಹದಿಂದ ವಿಸರ್ಜಿಸುತ್ತದೆ.

ಮಹರ್ಷಿರ್ಭಗವಾನತ್ರಿರ್ವೇದ ತಚ್ಛುಕ್ರಸಮ್ಭವಮ್ ।
ತ್ರಿಬೀಜಮಿನ್ದ್ರದೈವತ್ಯಂ ತಸ್ಮಾದಿನ್ದ್ರಿಯಮುಚ್ಯತೇ ॥೨೩॥

ಭಗವಾನ್ ಅತ್ರಿಮಹರ್ಷಿಗಳು ಆ ವೀರ್ಯದ ಉತ್ಪತ್ತಿ ಮತ್ತು ಗತಿ

ಅಶ್ವತ್ಥದ ಎಲೆಯಲ್ಲಿ ಕಾಣುವ ನಾರುಗಳಂತೆ ಸೂಕ್ಷ್ಮಾತಿಸೂಕ್ಷ್ಮವಾದ ೧೭೨೩ಕ್ಕಿಂತಲೂ ಅಧಿಕವಾದ ನರಗಳ ಸಮೂಹಕ್ಕೆ ಮನೋವಹಾ ಎಂದು ಹೆಸರು.

ಗಳನ್ನು ತಿಳಿದವರಾಗಿದ್ದಾರೆ. ಅವರ ಅಭಿಪ್ರಾಯದಲ್ಲಿ ವೀರ್ಯವು ತ್ರಿಬೀಜ ಯುಕ್ತವಾದುದು. ಮನೋವಹಾನಾಡೀ, ಸಂಕಲ್ಪ ಮತ್ತು ಅನ್ನರಸ –ಈ ಮೂರೂ ವೀರ್ಯಕ್ಕೆ ಕಾರಣಗಳಾಗಿವೆ. ವೀರ್ಯಕ್ಕೆ ಇಂದ್ರನೇ ದೇವತೆ. ಆದುದರಿಂದ ವೀರ್ಯವನ್ನು ಇಂದ್ರಿಯವೆಂದೂ ಕರೆಯುತ್ತಾರೆ.

ಯೇ ವೈ ಶುಕ್ರಗತಿಂ ವಿದ್ಯುರ್ಭೂತಸಂಕರಕಾರಿಕಾಮ್ ।
ವಿರಾಗಾ ದಗ್ಧದೋಷಾಸ್ತೇ ನಾಪ್ನುಯುರ್ದೇಹಸಮ್ಭವಮ್ ॥೨೪॥

ವೀರ್ಯದ ಗತಿಯು ಉದ್ರೇಕದ ಕಾರಣದಿಂದಾಗಿ ಅವಿವೇಕದ ವರ್ಣಸಂಕರವನ್ನು ಉಂಟುಮಾಡತಕ್ಕುದೆಂದು ಯಾರು ತಿಳಿದಿರುವರೋ ಮತ್ತು ಹಾಗೆ ತಿಳಿದುಕೊಂಡು ವಿರಾಗಿಗಳಾಗುವರೋ–ಅವರು ತಮ್ಮಲ್ಲಿರುವ ದೋಷಗಳೆಲ್ಲವನ್ನೂ ಸುಟ್ಟುಕೊಂಡು ದೇಹಬಂಧನದಿಂದ ಮುಕ್ತರಾಗುತ್ತಾರೆ. ಅವರು ಪುನಃ ಜನ್ಮವನ್ನು ಪಡೆಯುವುದಿಲ್ಲ.

ಗುಣಾನಾಂ ಸಾಮ್ಯಮಾಗಮ್ಯ ಮನಸೈವ ಮನೋವಹಮ್ ।
ದೇಹಕರ್ಮಾನುದನ್ಪ್ರಾಣಾನನ್ತಕಾಲೇ ವಿಮುಚ್ಯತೇ ॥೨೫॥

ದೇಹನಿರ್ವಾಹಮಾತ್ರಕ್ಕೆ ಕರ್ಮಮಾಡುವ ವಿರಾಗಿಯು ಮನಸ್ಸಿನಿಂದಲೇ ಗುಣಸಾಮ್ಯವನ್ನು (ನಿರ್ವಿಕಲ್ಪತ್ವವನ್ನು) ಹೊಂದಿ (ಯೋಗಬಲದಿಂದ ಮನಸ್ಸನ್ನು ನಿರ್ವಿಷಯವನ್ನಾಗಿ ಮಾಡಿ) ಅಂತಕಾಲದಲ್ಲಿ ಪ್ರಾಣಗಳನ್ನು ಊರ್ಧ್ವಗತಿಯಲ್ಲಿ ಪ್ರೇರಿಸುತ್ತಾ ಶರೀರಬಂಧನದಿಂದ ವಿಮುಕ್ತನಾಗುತ್ತಾನೆ. (ಮನೋವಹಂ ಎಂಬುದಕ್ಕೆ ವ್ಯಾಖ್ಯಾನಕಾರರು ಸತ್ಯಲೋಕಪ್ರದಂ ಸುಷುಮ್ನಾನಾಡೀಮಾರ್ಗಂ – ಎಂದು ಅರ್ಥಮಾಡಿರುತ್ತಾರೆ.)

ಭವಿತಾ ಮನಸೋ ಜ್ಞಾನಂ ಮನ ಏವ ಪ್ರಜಾಯತೇ ।
ಜ್ಯೋತಿಷ್ಮದ್ವಿರಜೋ ನಿತ್ಯಂ ಮನ್ತ್ರಸಿದ್ಧಂ ಮಹಾತ್ಮನಾಮ್ ॥೨೬॥

ಗುಣಸಾಮ್ಯವನ್ನು ಸಾಧಿಸಿದ ಮನಸ್ಸಿನಿಂದ ಜ್ಞಾನವುಂಟಾಗುತ್ತದೆ. ಕಾಂತಿಯುಕ್ತವಾದ ರಜೋಗುಣರಹಿತವಾದ ಮನಸ್ಸೇ ಮಹಾತ್ಮರಿಗೆ ಮಂತ್ರಸಿದ್ಧಿಯನ್ನು (ಪ್ರಣವಸಿದ್ಧಿಯನ್ನು) ಉಂಟುಮಾಡಿಕೊಡುತ್ತದೆ.

ತಸ್ಮಾತ್ತದಭಿಘಾತಾಯ ಕರ್ಮ ಕುರ್ಯಾದಕಲ್ಮಷಮ್ ।
ರಜಸ್ತಮಶ್ಚ ಹಿತ್ವೇಹ ಯಥೇಷ್ಟಾಂ ಗತಿಮಾಪ್ನುಯಾತ್ ॥೨೭॥

ಆದುದರಿಂದ ಮನುಷ್ಯನು ಮನಸ್ಸನ್ನು ಸಂಯಮದಲ್ಲಿಟ್ಟುಕೊಳ್ಳಲು ದೋಷರಹಿತವಾದ ಕರ್ಮಗಳನ್ನೇ ಮಾಡಬೇಕು. ಈ ಲೋಕದಲ್ಲಿ ರಜಸ್ತಮೋಗುಣಗಳನ್ನು ತ್ಯಜಿಸಿದನಂತರವೇ ಮನುಷ್ಯನು ಇಷ್ಟವಾದ ಗತಿಯನ್ನು ಹೊಂದಬಹುದು.

ತರುಣಾಧಿಗತಂ ಜ್ಞಾನಂ ಜರಾದುರ್ಬಲತಾಂ ಗತಮ್ ।
ವಿಪಕ್ವಬುದ್ಧಿಃ ಕಾಲೇನ ಆದತ್ತೇ ಮಾನಸಂ ಬಲಮ್ ॥೨೮॥

ಯೌವನಾವಸ್ಥೆಯಲ್ಲಿ ಪ್ರಾಪ್ತವಾದ ಜ್ಞಾನವು ಮುಪ್ಪಿನಿಂದ ಶೈಥಿಲ್ಯವನ್ನು ಹೊಂದುತ್ತದೆ. ಆದರೆ ಪರಿಪಕ್ವವಾದ ಬುದ್ಧಿಯುಳ್ಳ ಮನುಷ್ಯನು ಕಾಲಾನುಕ್ರಮವಾಗಿ ಜ್ಞಾನವು ಕ್ಷೀಣಿಸದಂತಹ ಮನೋಬಲವನ್ನು ಹೊಂದಿರುತ್ತಾನೆ.

ಸುದುರ್ಗಮಿವ ಪನ್ಥಾನಮತೀತ್ಯ ಗುಣಬನ್ಧನಮ್ ।
ಯಥಾ ಪಶ್ಯೇತ್ತಥಾ ದೋಷಾನತೀತ್ಯಾಮೃತಮಶ್ನುತೇ ॥೨೯॥

ಪರಿಪಕ್ವವಾದ ಬುದ್ಧಿಯುಳ್ಳ ಮನುಷ್ಯನು ಸುದುರ್ಗಮವಾದ ಮಾರ್ಗದಂತಿರುವ ಗುಣಬಂಧನಗಳನ್ನು ಅತಿಕ್ರಮಿಸಿ, ತನ್ನಲ್ಲಿ ಯಾವ ಯಾವ ದೋಷಗಳಿವೆಯೋ ಆ ದೋಷಗಳೆಲ್ಲವನ್ನೂ ಕಂಡುಕೊಂಡು ಅನುಕ್ರಮವಾಗಿ ಅವುಗಳನ್ನು ಅತಿಕ್ರಮಿಸುತ್ತಾ (ವಿನಾಶಗೊಳಿಸುತ್ತಾ) ಕಟ್ಟಕಡೆಗೆ ಅಮೃತಮಯವಾದ ಪರಮಪದವನ್ನು ಹೊಂದುತ್ತಾನೆ."

ಎ೧ನೆಯ ಅಧ್ಯಾಯವು ಮುಗಿಯಿತು.

೨೧೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಸಂಸಾರದಲ್ಲಿ ಆಸಕ್ತಿಯನ್ನು ತೊರೆದು ಬ್ರಹ್ಮಪದದ ಪ್ರಾಪ್ತಿಗಾಗಿ ಪ್ರಯತ್ನಿಸಲು ಉಪದೇಶ

ಜನಮೇಜಯ! ಭೀಷ್ಮನು ಯುಧಿಷ್ಠಿರನಿಗೆ ಹೇಳುತ್ತಾನೆ :

ದುರನ್ತೇಷ್ವಿನ್ದ್ರಿಯಾರ್ಥೇಷು ಸಕ್ತಾಃ ಸೀದನ್ತಿ ಜನ್ತವಃ ।
ಯೇ ತ್ವಸಕ್ತಾ ಮಹಾತ್ಮಾನಸ್ತೇ ಯಾನ್ತಿ ಪರಮಾಂ ಗತಿಮ್ ॥೧॥

"ಧರ್ಮಜ! ಕೆಟ್ಟಪರಿಣಾಮವನ್ನುಂಟುಮಾಡುವ ವಿಷಯೋಪಭೋಗಗಳಲ್ಲಿಯೇ ಆಸಕ್ತರಾದ ಮನುಷ್ಯರು ವಿನಾಶಹೊಂದುತ್ತಾರೆ. ಇಂದ್ರಿಯಾರ್ಥಗಳಲ್ಲಿ ಆಸಕ್ತರಲ್ಲದ ಮಹಾತ್ಮರು ಪರಮಗತಿಯನ್ನು ಹೊಂದುತ್ತಾರೆ.

ಜನ್ಮಮೃತ್ಯುಜರಾದುಃಖೈರ್ವ್ಯಾಧಿಭಿರ್ಮಾನಸಕ್ಲಮೈಃ ।
ದೃಷ್ಟ್ವೈವ ಸಂತತಂ ಲೋಕಂ ಘಟೇನ್ಮೋಕ್ಷಾಯ ಬುದ್ಧಿಮಾನ್ ॥೨॥

ಈ ಜಗತ್ತು ಹುಟ್ಟು, ಸಾವು, ಮುಪ್ಪು, ನಾನಾವಿಧವಾದ ದುಃಖಗಳು ನಾನಾಪ್ರಕಾರವಾದ ರೋಗಗಳು, ಮಾನಸಿಕಚಿಂತೆಗಳು –ಇವುಗಳಿಂದ ವ್ಯಾಪ್ತವಾಗಿದೆ ; ಇದರಲ್ಲಿ ಸುಖದ ಲೇಶವೂ ಇಲ್ಲ–ಎಂಬುದನ್ನು ತಿಳಿದೊಡನೆಯೇ ಬುದ್ಧಿವಂತನಾದವನು ಮೋಕ್ಷಪ್ರಾಪ್ತಿಗಾಗಿ ಪ್ರಯತ್ನಿಸಬೇಕು.

ವಾಙ್ಮನೋಭ್ಯಾಂ ಶರೀರೇಣ ಶುಚಿಃ ಸ್ಯಾದನಹಂಕೃತಃ ।
ಪ್ರಶಾನ್ತೋ ಜ್ಞಾನವಾನ್ಭಿಕ್ಷುರ್ನಿರಪೇಕ್ಷಶ್ಚರೇತ್ಸುಖಮ್ ॥೩॥

ಸಂನ್ಯಾಸಿಯು ಮಾತು, ಮನಸ್ಸು ಮತ್ತು ಶರೀರಗಳಿಂದ ಪರಿಶುದ್ಧನಾಗಿ, ಅಹಂಕಾರಶೂನ್ಯನಾಗಿ, ಶಾಂತಚಿತ್ತನಾಗಿ, ಜ್ಞಾನಿಯಾಗಿ, ಅಪೇಕ್ಷಾರಹಿತನಾಗಿ ಸುಖವಾಗಿ ಸಂಚರಿಸುತ್ತಿರಬೇಕು.

ಅಥವಾ ಮನಸಃ ಸಙ್ಗಂ ಪಶ್ಯೇದ್ಭೂತಾನುಕಮ್ಪಯಾ ।
ತತ್ರಾಪ್ಯುಪೇಕ್ಷಾಂ ಕುರ್ವೀತ ಜ್ಞಾತ್ವಾ ಕರ್ಮಫಲಂ ಜಗತ್ ॥೪॥

ಅಥವಾ ಪ್ರಾಣಿಗಳ ವಿಷಯದಲ್ಲಿ ಅನುಕಂಪೆಯಿಂದ ಮನಸ್ಸಿಗೆ ಆಸಕ್ತಿಯುಂಟಾಗುವುದೆಂದು ಕಂಡುಬಂದರೆ–ಪ್ರಪಂಚದಲ್ಲಿ ಎಲ್ಲರೂ ತಮ್ಮ ತಮ್ಮ ಕರ್ಮಾನುಸಾರವಾಗಿ ಫಲಗಳನ್ನು ಅನುಭವಿಸುತ್ತಾರೆ–ಎಂಬುದನ್ನು ತಿಳಿದುಕೊಂಡು ಭೂತಾನುಕಂಪೆಯನ್ನೂ ಉಪೇಕ್ಷಿಸಬೇಕು.

ಯತ್ಕೃತಂ ಸ್ಯಾಚ್ಛುಭಂ ಕರ್ಮ ಪಾಪಂ ವಾ ಯದಿ ವಾಶ್ನುತೇ ।
ತಸ್ಮಾಚ್ಛುಭಾನಿ ಕರ್ಮಾಣಿ ಕುರ್ಯಾದ್ವಾ ಬುದ್ಧಿಕರ್ಮಭಿಃ ॥೫॥

ಮನುಷ್ಯನು ಪಾಪಕರ್ಮವನ್ನೋ–ಪುಣ್ಯಕರ್ಮವನ್ನೋ ಮಾಡುತ್ತಿರುತ್ತಾರೆ. ತಾನು ಮಾಡಿದ ಕರ್ಮಾನುಸಾರವಾಗಿಯೇ ಫಲಗಳನ್ನೂ ಅನುಭವಿಸುತ್ತಿರುತ್ತಾನೆ. ಆದುದರಿಂದ ಮನಸ್ಸು, ಬುದ್ಧಿ ಮತ್ತು ಕ್ರಿಯೆಗಳ ಮೂಲಕವಾಗಿ ಮನುಷ್ಯನು ಸರ್ವಕಾಲದಲ್ಲಿಯೂ ಶುಭವಾದ ಕರ್ಮಗಳನ್ನೇ ಮಾಡುತ್ತಿರಬೇಕು.

ಅಹಿಂಸಾ ಸತ್ಯವಚನಂ ಸರ್ವಭೂತೇಷು ಚಾರ್ಜವಮ್ ।
ಕ್ಷಮಾ ಚೈವಾಪ್ರಮಾದಶ್ಚ ಯಸ್ಯೈತೇ ಸ ಸುಖೀ ಭವೇತ್ ॥೬॥

ಅಹಿಂಸೆ, ಸತ್ಯವಚನ, ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಸರಳತೆಯ ವ್ಯವಹಾರ, ಕ್ಷಮೆ, ಅಪ್ರಮಾದ.–ಈ ಗುಣಗಳು ಯಾವನಲ್ಲಿರುವುವೋ ಅವನು ಸುಖಿಯಾಗುತ್ತಾನೆ.

ಯಶ್ಚೈನಂ ಪರಮಂ ಧರ್ಮಂ ಸರ್ವಭೂತಸುಖಾವಹಮ್ ।
ದುಃಖಾನ್ನಿಃಸರಣಂ ವೇದ ಸರ್ವಜ್ಞಃ ಸ ಸುಖೀ ಭವೇತ್ ॥೭॥

ಯಾವನು ಅಹಿಂಸೆಯೇ ಮೊದಲಾದ ಈ ಶ್ರೇಷ್ಠಧರ್ಮಗಳನ್ನು ಸಮಸ್ತಪ್ರಾಣಿಗಳಿಗೂ ಸುಖದಾಯಕಗಳೆಂದೂ, ದುಃಖನಿವಾರಕಗಳೆಂದೂ ತಿಳಿಯುವನೋ–ಅಂತಹ ಸರ್ವಜ್ಞನು ಸುಖಿಯಾಗುವನು.

ತಸ್ಮಾತ್ಸಮಾಹಿತಂ ಬುದ್ಧ್ಯಾ ಮನೋ ಭೂತೇಷು ಧಾರಯೇತ್ ।
ನಾಪಧ್ಯಾಯೇನ್ನ ಸ್ಪೃಹಯೇನ್ನಾಬದ್ಧಂ ಚಿನ್ತಯೇದಸತ್ ॥೮॥

ಅಥಾಮೋಘಪ್ರಯತ್ನೇನ ಮನೋ ಜ್ಞಾನೇ ನಿವೇಶಯೇತ್ ।
ವಾಚಾಮೋಘಪ್ರಯಾಸೇನ ಮನೋಜ್ಞಂ ತತ್ಪ್ರವರ್ತತೇ ॥೯॥

ಆದುದರಿಂದ ಬುದ್ಧಿಯ ಮೂಲಕವಾಗಿ ಮನಸ್ಸನ್ನು ಏಕಾಗ್ರಗೊಳಿಸಿ ಸಮಸ್ತಪ್ರಾಣಿಗಳಲ್ಲಿಯೂ ಇರುವ ಪರಮಾತ್ಮನಲ್ಲಿ ಸಮಾವೇಶಗೊಳಿಸ ಬೇಕು. ಯಾರಿಗೂ ಅಹಿತವನ್ನು ಯೋಚಿಸಬಾರದು. ದುರಾಸೆಪಡಬಾರದು. ಅಸಂಬದ್ಧವಾದ ಮತ್ತು ಕೆಟ್ಟುದಾದ ವಿಷಯಗಳನ್ನು ಯೋಚಿಸಬಾರದು. ಅಮೋಘವಾದ ಪ್ರಯತ್ನದಿಂದ ಮನಸ್ಸನ್ನು ಜ್ಞಾನದಲ್ಲಿಯೇ ತೊಡಗಿಸ ಬೇಕು. ವೇದಾಂತವಾಕ್ಯದಿಂದಲೂ ಅತಿಶಯಪ್ರಯಾಸದಿಂದಲೂ ಆ ಮನಸ್ಸು ಸುಂದರವಾಗಿ ಜ್ಞಾನಾನ್ವೇಷಣೆಯಲ್ಲಿ ತೊಡಗುತ್ತದೆ.

ವಿವಕ್ಷತಾ ಚ ಸದ್ವಾಕ್ಯಂ ಧರ್ಮಂ ಸೂಕ್ಷ್ಮಮವೇಕ್ಷತಾ ।
ಸತ್ಯಾಂ ವಾಚಮಹಿಂಸ್ರಾಂ ಚ ವದೇದನಪವಾದಿನೀಮ್ ॥೧೦॥

ಕಲ್ಕಾಪೇತಾಮಪರುಷಾಮನೃಶಂಸಾಮಪೈಶುನಾಮ್ ।
ಈದೃಗಲ್ಪಂ ಚ ವಕ್ತವ್ಯಮವಿಕ್ಷಿಪ್ತೇನ ಚೇತಸಾ ॥೧೧॥

ಸೂಕ್ಷ್ಮಧರ್ಮವನ್ನು ಯಾವನು ತಿಳಿಯಲಪೇಕ್ಷಿಸುವನೋ, ವಿಚಾರ ಶೀಲನೋ ಮತ್ತು ಒಳ್ಳೆಯ ಮಾತನ್ನು ಆಡಲು ಇಚ್ಛಿಸುವನೋ–ಅವನು ಸತ್ಯವಾದ, ಹಿಂಸೆಯಿಂದಲೂ-ಪರನಿಂದನೆಯಿಂದಲೂ ರಹಿತವಾದ ಮಾತು ಗಳನ್ನೇ ಆಡಬೇಕು. ಶಾಠ್ಯ, ಕಠೋರತೆ, ಕ್ರೌರ್ಯ ಮತ್ತು ಪೈಶುನ-(ಚಾಡಿ ಕೋರತನ) – ಇವೇ ಮುಂತಾದ ದೋಷಗಳಿಂದ ರಹಿತವಾದ ಮಾತು ಗಳನ್ನಾಡಬೇಕು. ಹೀಗೆ ಮಾತನಾಡುವಾಗಲೂ ಮಿತಭಾಷಿಯಾಗಿರಬೇಕು. ಸುಸ್ಥಿರವಾದ ಮನಸ್ಸಿನಿಂದ ಕೂಡಿರಬೇಕು.

ವಾಕ್ಪ್ರಬದ್ಧೋ ಹಿ ಸಂಸಾರೋ ವಿರಾಗಾದ್ವ್ಯಾಹರೇದ್ಯದಿ ।
ಬುದ್ಧ್ಯಾಪ್ಯನುಗೃಹೀತೇನ ಮನಸಾ ಕರ್ಮ ತಾಮಸಮ್ ॥೧೨॥

ಸಂಸಾರದ ಎಲ್ಲ ವ್ಯವಹಾರಗಳೂ ಮಾತಿನಿಂದಲೇ ನಿಬದ್ಧವಾಗಿವೆ. ಆದುದರಿಂದ ಯಾವಾಗಲೂ ಒಳ್ಳೆಯ ಮಾತುಗಳನ್ನೇ ಆಡುತ್ತಿರಬೇಕು. ವಿರಾಗಿಯಾದರೆ ಬುದ್ಧಿಯ ಮೂಲಕವಾಗಿ ಮನಸ್ಸನ್ನು ವಶಪಡಿಸಿಕೊಂಡು

ಹಿಂದೆ ತಾನು ಮಾಡಿದ ಹಿಂಸಾದಿ ತಾಮಸಕರ್ಮಗಳನ್ನು ಬೇರೆಯವರೊಡನೆ ಹೇಳಬೇಕು.

(ಹೀಗೆ ಹೇಳಿಕೊಂಡು ತಾನು ಮಾಡಿದುದಕ್ಕೆ ಪಶ್ಚಾತ್ತಾಪಪಡುವುದರಿಂದ ಪಾಪದ ನಿವಾರಣೆಯಾಗುತ್ತದೆ.)

ರಜೋಭೂತೈರ್ಹಿ ಕರಣೈಃ ಕರ್ಮಣಿ ಪ್ರತಿಪದ್ಯತೇ ।
ಸ ದುಃಖಂ ಪ್ರಾಪ್ಯ ಲೋಕೇಽಸ್ಮಿನ್ನರಕಾಯೋಪಪದ್ಯತೇ ।
ತಸ್ಮಾನ್ಮನೋವಾಕ್ಶರೀರೈರಾಚರೇದ್ಧೈರ್ಯಮಾತ್ಮನಃ ॥೧೩॥

ರಜೋಗುಣದಿಂದ ಪ್ರಭಾವಿತವಾದ ಇಂದ್ರಿಯಗಳ ಪ್ರೇರಣೆಯಿಂದ ಮನುಷ್ಯನು ವಿಷಯಭೋಗರೂಪವಾದ ಕರ್ಮಗಳಲ್ಲಿ ನಿರತನಾಗಿರುತ್ತಾನೆ. ಅಂತಹವನು ಈ ಲೋಕದಲ್ಲಿ ದುಃಖವನ್ನು ಅನುಭವಿಸುವನಲ್ಲದೇ ಅವಸಾನಾನಂತರದಲ್ಲಿ ನರಕಕ್ಕೂ ಹೋಗುತ್ತಾನೆ. ಆದುದರಿಂದ ಮನುಷ್ಯನು ಮನಸ್ಸು, ಮಾತು ಮತ್ತು ಶರೀರಗಳ ಮೂಲಕವಾಗಿ ಮನಸ್ಸಿಗೆ ಧೃತಿಯುಂಟಾಗುವ ಕಾರ್ಯಗಳನ್ನೇ ಮಾಡಬೇಕು.

(ಮನಸ್ಸು ಸ್ಥಿರವಾಗುವುದಕ್ಕೆ ಸಹಾಯಕವಾಗುವ ಕರ್ಮಗಳಲ್ಲಿಯೇ ತೊಡಗಬೇಕು. ಎಂದರೆ ಸಾತ್ತ್ವಿಕಕರ್ಮಗಳಲ್ಲಿಯೇ ತೊಡಗಬೇಕು. ರಜಸ್ತಮಃಪ್ರಧಾನವಾದ ಕರ್ಮಗಳು ಮನಸ್ಸನ್ನು ಚಂಚಲಗೊಳಿಸುತ್ತವೆ. ರಾಜಸಂ ಚಲಮಧ್ರುವಂ–ಶ್ರೀಗೀತೆ.)

ಪ್ರಕೀರ್ಣಮೇಷಭಾರಂ ಹಿ ಯದ್ವದ್ಧಾರ್ಯೇತ ದಸ್ಯುಭಿಃ ।
ಪ್ರತಿಲೋಮಾಂ ದಿಶಂ ಬುದ್ಧ್ವಾ ಸಂಸಾರಮಬುಧಾಸ್ತಥಾ ॥೧೪॥

ಕತ್ತರಿಸಲ್ಪಟ್ಟ ಕುರಿಯ ಮಾಂಸದ ಭಾರವನ್ನು ಕಳ್ಳರು ಎಲ್ಲಿಯವರೆಗೆ ಹೊತ್ತುಕೊಂಡು ಹೋಗುತ್ತಿರುವರೋ ಅಲ್ಲಿಯವರೆಗೂ ಅವರಿಗೆ ತಮ್ಮನ್ನು ಯಾರಾದರೂ ಬೆನ್ನಟ್ಟಿಬಂದಾರೆಂಬ ಭಯವಿದ್ದೇ ಇರುತ್ತದೆ. ಅವರು ಆಗ ದಿಗ್ಭ್ರಾಂತರಾಗುತ್ತಾರೆ. ಅದು ಅಪಾಯಕರವೆಂದು ಭಾವಿಸಿ ಆ ಭಾರವನ್ನು ಕೆಳಕ್ಕೆ ಹಾಕಿದರೆ ಕಳ್ಳರಿಗೆ ಭಾರವೂ ಇರುವುದಿಲ್ಲ; ತಮ್ಮನ್ನು ಯಾರಾದರೂ ಬೆನ್ನಟ್ಟಿಬಂದಾರೆಂಬ ಭಯವೂ ಇರುವುದಿಲ್ಲ. ಹಾಗೆಯೇ ಅಜ್ಞಾನಿಯಾದ ಮನುಷ್ಯನು ಸಂಸಾರದ ಭಾರವನ್ನು ಎಲ್ಲಿಯವರೆಗೆ ಹೊತ್ತಿರುವನೋ–

ಅಲ್ಲಿಯವರೆಗೂ ಅವನಿಗೆ ದುಃಖವೂ ಭಯವೂ ತಪ್ಪಿದ್ದಲ್ಲ. ಆದುದರಿಂದ ರಾಜಸ-ತಾಮಸಕರ್ಮಗಳಿಂದ ವಿಮುಕ್ತನಾದರೆ ಒಡನೆಯೇ ಭಯವೂ ಮತ್ತು ದುಃಖವೂ ನಿವಾರಣೆಯಾಗುತ್ತದೆ.

ತಮೇವ ಚ ಯಥಾ ದಸ್ಯುಃ ಕ್ಷಿಪ್ತ್ವಾ ಗಚ್ಛೇಚ್ಛಿವಾಂ ದಿಶಮ್ ।
ತಥಾ ರಜಸ್ತಮಃಕರ್ಮಾಣ್ಯುತ್ಸೃಜ್ಯ ಪ್ರಾಪ್ನುಯಾಚ್ಛುಭಮ್ ॥೧೫॥

ಯಾವ ರೀತಿಯಲ್ಲಿ ಕಳ್ಳನು ಆ ಭಾರವನ್ನು ಬಿಸುಟು ಅನಾಯಾಸವಾಗಿ ಯಾವ ಭಯವೂ ಇಲ್ಲದೆ ತನಗೆ ಸುಖಕರವಾದ ದಿಕ್ಕಿನಲ್ಲಿ ಪ್ರಯಾಣ ಮಾಡುವನೋ–ಅದೇ ರೀತಿಯಲ್ಲಿ ಮನುಷ್ಯನು ರಾಜಸ- ತಾಮಸಕರ್ಮ ಗಳನ್ನು ತ್ಯಾಗಮಾಡಿ ಶುಭಗತಿಯನ್ನು ಹೊಂದುತ್ತಾನೆ.

ನಿಃಸಂದಿಗ್ಧಮನೀಹೋ ವೈ ಮುಕ್ತಃ ಸರ್ವಪರಿಗ್ರಹೈಃ ।
ವಿವಿಕ್ತಚಾರೀ ಲಘ್ವಾಶೀ ತಪಸ್ವೀ ನಿಯತೇನ್ದ್ರಿಯಃ ॥೧೬॥

ಜ್ಞಾನದಗ್ಧಪರಿಕ್ಲೇಶಃ ಪ್ರಯೋಗರತಿರಾತ್ಮವಾನ್ ।
ನಿಷ್ಪ್ರಚಾರೇಣ ಮನಸಾ ಪರಂ ತದಧಿಗಚ್ಛತಿ ॥೧೭॥

ಯಾವನು ಅಪೇಕ್ಷೆಗಳಿಂದ ರಹಿತನಾಗಿರುವನೋ, ಎಲ್ಲ ವಿಧವಾದ ಪರಿಗ್ರಹಗಳಿಂದಲೂ ಮುಕ್ತನಾಗಿರುವನೋ, ಏಕಾಂತವಾಸಿಯೂ, ಅಲ್ಪಾ ಹಾರಿಯೂ–ತಪೋನಿರತನೂ–ಜಿತೇಂದ್ರಿಯನೂ ಆಗಿರುವನೋ, ಯಾವನ ಕ್ಲೇಶಗಳೆಲ್ಲವೂ ಜ್ಞಾನವೆಂಬ ಅಗ್ನಿಯಲ್ಲಿ ಭಸ್ಮವಾಗಿ ಹೋಗಿವೆಯೋ, ಯಾವನು ಯೋಗಾನುಷ್ಠಾನದಲ್ಲಿ ಪ್ರೀತಿಯುಳ್ಳವನೋ, ದೃಢಚಿತ್ತನೋ– ಅಂತಹವನು ನಿರುದ್ಧವಾದ (ಸ್ಥಿರವಾದ) ಮನಸ್ಸಿನಿಂದ ಪರಬ್ರಹ್ಮಪರಮಾತ್ಮ ನನ್ನು ನಿಃಸ್ಸಂದೇಹವಾಗಿ ಪಡೆಯುತ್ತಾನೆ.

ಧೃತಿಮಾನಾತ್ಮವಾನ್ಬುದ್ಧಿಂ ನಿಗೃಹ್ಣೀಯಾದಸಂಶಯಮ್ ।
ಮನೋ ಬುದ್ಧ್ಯಾ ನಿಗೃಹ್ಣೀಯಾದ್ವಿಷಯಾನ್ಮನಸಾತ್ಮನಃ ॥೧೮॥

ಬುದ್ಧಿವಂತನಾದ ಧೀರಪುರುಷನು ಸಂಶಯವೇ ಇಲ್ಲದ ರೀತಿಯಲ್ಲಿ ಬುದ್ಧಿಯನ್ನು ವಶಪಡಿಸಿಕೊಳ್ಳಬೇಕು. ಬುದ್ಧಿಯ ಮೂಲಕವಾಗಿ ಮನಸ್ಸನ್ನು ನಿಗ್ರಹಿಸಬೇಕು. ಸಂಸ್ಕೃತವಾದ ಮನಸ್ಸಿನ ಮೂಲಕವಾಗಿ ಇಂದ್ರಿಯಗಳನ್ನು ಇಂದ್ರಿಯಾರ್ಥಗಳಿಂದ ನಿರೋಧಿಸಬೇಕು.

ನಿಗೃಹಿತೇನ್ದ್ರಿಯಸ್ಯಾಸ್ಯ ಕುರ್ವಾಣಸ್ಯ ಮನೋ ವಶೇ ।
ದೇವತಾಸ್ತತ್ಪ್ರಕಾಶನ್ತೇ ಹೃಷ್ಟಾ ಯಾನ್ತಿ ತಮೀಶ್ವರಮ್ ॥೧೯॥

ಹೀಗೆ ಇಂದ್ರಿಯಗಳನ್ನು ನಿಗ್ರಹಿಸಿ ಮನಸ್ಸನ್ನೂ ವಶಪಡಿಸಿಕೊಂಡಿರುವವನ ವಿಷಯದಲ್ಲಿ ಇಂದ್ರಿಯಾಧಿದೇವತೆಗಳು ಪ್ರಕಾಶಮಾನರಾಗುತ್ತಾರೆ. ಮತ್ತು ಹೃಷ್ಟರಾಗಿ ತಮಗೆ ಸಂಬಂಧಿಸಿದ ಇಂದ್ರಿಯಗಳೊಡನೆ ಸಾಧಕನ ಹೃದಯಗುಹೆಯಲ್ಲಿರುವ ಈಶ್ವರನನ್ನು ಹೊಂದುತ್ತಾರೆ.

ತಾಭಿ ಸಂಯುಕ್ತಮನಸೋ ಬ್ರಹ್ಮ ತತ್ಸಮ್ಪ್ರಕಾಶತೇ ।
ಶನೈಶ್ಚೋಪಗತೇ ಸತ್ತ್ವೇ ಬ್ರಹ್ಮಭೂಯಾಯ ಕಲ್ಪತೇ ॥೨೦॥

ಇಂದ್ರಿಯಾಧಿದೇವತೆಗಳಿಂದ ಸಂಯುಕ್ತವಾದ ಮನಸ್ಸುಳ್ಳವನಿಗೆ ಹೃದಯಗಹ್ವರದಲ್ಲಿ ಬ್ರಹ್ಮವಸ್ತುವು ಪ್ರಕಾಶಿಸುತ್ತದೆ. ಹೀಗೆ ಸಾಧಕನು ಮೆಲ್ಲ-ಮೆಲ್ಲಗೆ ಬುದ್ಧಿಯಲ್ಲಿ ಮನಸ್ಸನ್ನೂ–ಇಂದ್ರಿಯಗಳನ್ನೂ ಲೀನಗೊಳಿಸಿದನಂತರ ಸತ್ತ್ವಗುಣವು ಪ್ರವೃದ್ಧವಾಗಿ ಬ್ರಹ್ಮಭಾವವನ್ನು ಹೊಂದುತ್ತಾನೆ.

ಅಥವಾ ನ ಪ್ರವರ್ತೇತ ಯೋಗತನ್ತ್ರೈರುಪಕ್ರಮೇತ್ ।
ಯೇನ ತನ್ತ್ರಯತಸ್ತನ್ತ್ರಂ ವೃತ್ತಿಃ ಸ್ಯಾತ್ತತ್ತದಾಚರೇತ್ ॥೨೧॥

ಒಂದು ವೇಳೆ ಹಿಂದೆ ಹೇಳಿದ ಕ್ರಮದಲ್ಲಿ ಇಂದ್ರಿಯನಿಗ್ರಹವೇ ಮೊದಲಾದುವುಗಳನ್ನು ಸುಲಭವಾಗಿ ಮಾಡಲು ಸಾಧ್ಯವಾಗದಿದ್ದರೆ–ಸಾಧಕನು ಯೋಗಪ್ರಧಾನವಾದ ಉಪಾಯಗಳ ಮೂಲಕವಾಗಿ ಸಾಧನೆಯನ್ನು ಆರಂಭಿಸಬೇಕು. ಯಾವ ವಿಧವಾದ ಯೋಗತಂತ್ರದಿಂದ ಬ್ರಹ್ಮಜ್ಞಾನವುಂಟಾಗುವುದೋ–ಅದೇ ವಿಧಾನವನ್ನು ಅನುಸರಿಸಿ ಅಭ್ಯಾಸಮಾಡಬೇಕು.

ಕಣಕುಲ್ಮಾಷಪಿಣ್ಯಾಕಶಾಕಯಾವಕಸಕ್ತವಃ ।
ತಥಾ ಮೂಲಫಲಂ ಭೈಕ್ಷ್ಯಂ ಪರ್ಯಾಯೇಣೋಪ-
ಯೋಜಯೇತ್ ॥೨೨॥

ಯೋಗಿಯಾದವನು ಅಕ್ಕಿಯ ನುಚ್ಚು, ಅಂಬಲಿ, ಹಿಂಡಿ, ಕಾಯಿ ಪಲ್ಯ, ಗಂಜಿ, ಗೋಧಿಹಿಟ್ಟು, ಗೆಡ್ಡೆ-ಗೆಣಸು, ಫಲ –ಇವುಗಳಲ್ಲಿ ಯಾವುದು

ಭಿಕ್ಷಾರೂಪದಲ್ಲಿ ಸಿಕ್ಕಿದರೂ ಅವುಗಳನ್ನು ಯಥಾನುಕ್ರಮವಾಗಿ ತನ್ನ ಜೀವನದ ನಿರ್ವಹಣೆಗೆ ಉಪಯೋಗಿಸಿಕೊಳ್ಳಬೇಕು.

ಆಹಾರನಿಯಮಂ ಚೈವ ದೇಶೇ ಕಾಲೇ ಚ ಸಾತ್ತ್ವಿಕಮ್ ।
ತತ್ಪರೀಕ್ಷ್ಯಾನುವರ್ತೇತ ತತ್ಪ್ರವೃತ್ತ್ಯನುಪೂರ್ವಕಮ್ ॥೨೩॥

ದೇಶಕ್ಕೆ ಮತ್ತು ಕಾಲಕ್ಕೆ ಅನುಸಾರವಾಗಿ ಸಾತ್ತ್ವಿಕವಾದ ಆಹಾರವನ್ನು ತೆಗೆದುಕೊಳ್ಳಬೇಕೆಂಬ ನಿಯಮವನ್ನು ಮಾಡಿಕೊಳ್ಳಬೇಕು. ಆಹಾರಪದಾರ್ಥಗಳಲ್ಲಿರುವ ಗುಣ-ದೋಷಗಳನ್ನು ಪರೀಕ್ಷಿಸಿ ಅವುಗಳು ಯೋಗಸಿದ್ಧಿಗೆ ಅನುಕೂಲವಾಗುವುದಾದರೆ ಮಾತ್ರವೇ ಅವುಗಳನ್ನು ಆಹಾರರೂಪದಲ್ಲಿ ಸೇವಿಸಬೇಕು.

ಪ್ರವೃತ್ತಂ ನೋಪರುನ್ಧೀತ ಶನೈರಗ್ನಿಮಿವೇನ್ಧಯೇತ್ ।
ಜ್ಞಾನಾನ್ವಿತಂ ತಥಾ ಜ್ಞಾನಮರ್ಕವತ್ಸಮ್ಪ್ರಕಾಶತೇ ॥೨೪॥

ಯೋಗಸಾಧನೆಯನ್ನು ಪ್ರಾರಂಭಿಸಿದನಂತರ ಮಧ್ಯದಲ್ಲಿ ನಿಲ್ಲಿಸಬಾರದು. ಕಟ್ಟಿಗೆಯಲ್ಲಿರುವ ಬೆಂಕಿಯು ಸ್ವಲ್ಪ-ಸ್ವಲ್ಪವಾಗಿ ಹೊತ್ತಿಕೊಳ್ಳುತ್ತಾ ಸ್ವಲ್ಪಹೊತ್ತು ಕಳೆದನಂತರ ಧಗಧಗಿಸಿ ಉರಿಯುವಂತೆ–ಯೋಗಸಾಧಕನು ಜ್ಞಾನಾಗ್ನಿಯನ್ನು ಸ್ವಲ್ಪ-ಸ್ವಲ್ಪವಾಗಿ ಉದ್ದೀಪನಗೊಳಿಸುತ್ತಾ ಪ್ರಜ್ವಲಿಸುವಂತೆ ಮಾಡಬೇಕು. ಹೀಗೆ ಮಾಡಿದರೆ ಜ್ಞಾನವು ಸೂರ್ಯನಂತೆ ಪ್ರಕಾಶಿತವಾಗುತ್ತದೆ.

ಜ್ಞಾನಾಧಿಷ್ಠಾನಮಜ್ಞಾನಂ ತ್ರೀನ್ಲೋಕಾನಧಿತಿಷ್ಠತಿ ।
ವಿಜ್ಞಾನಾನುಗತಂ ಜ್ಞಾನಮಜ್ಞಾನೇನಾಪಕೃಷ್ಯತೇ ॥೨೫॥

ಮೂರು ಲೋಕಗಳನ್ನೂ ಆವರಿಸಿರುವ ಯಾವ ಅಜ್ಞಾನವುಂಟೋ–ಅದಕ್ಕೂ ಜ್ಞಾನವೇ ಆಶ್ರಯವು. * ವಿಜ್ಞಾನದಿಂದ ಅನುಗತವಾದ ಜ್ಞಾನವು ಅಜ್ಞಾನದಿಂದ ಹಿಂದಕ್ಕೆ ಸೆಳೆಯಲ್ಪಡುತ್ತದೆ.

ಪೃಥಕ್ತ್ವಾತ್ಸಮ್ಪ್ರಯೋಗಾಚ್ಚ ನಾಸೂಯುರ್ವೇದ ಶಾಶ್ವತಮ್ ।
ಸ ತಯೋರಪವರ್ಗಜ್ಞೋ ವೀತರಾಗೋ ವಿಮುಚ್ಯತೇ ॥೨೬॥

---

* ವಿಜ್ಞಾನ : ವಿಶಿಷ್ಟವಿಷಯವಾದ ಜ್ಞಾನ ಅಥವಾ ಅನುಭವಜನ್ಯವಾದ ಜ್ಞಾನ.

ಈ ಜ್ಞಾನ ಮತ್ತು ಅಜ್ಞಾನ (ಕರ್ಮ) ಗಳನ್ನು ಎರಡನ್ನೂ ಸೇರಿಸಿ ಹೇಳಿರುವುದೂ ಉಂಟು. (ಇವುಗಳನ್ನು ಹೇಗೆ ಮೋಕ್ಷಕ್ಕೆ ವಿನಿಯೋಗಿಸಬೇಕು ಎಂಬುದನ್ನು ಅರಿಯದೆ) ಅಪಾರ್ಥಮಾಡಿಕೊಳ್ಳುವ ಅಸೂಯಾಪರನು ಶಾಶ್ವತವಾದ ಬ್ರಹ್ಮವಸ್ತುವನ್ನು ತಿಳಿಯಲಾರನು. ಅವೆರಡರಿಂದ ಮೋಕ್ಷವನ್ನು ಪಡೆಯುವ ವಿಧಾನವನ್ನರಿತ ವಿರಾಗಿಯು ಮೋಕ್ಷವನ್ನು ಪಡೆಯುತ್ತಾನೆ.

(ಅಜ್ಞಾನ ಅಥವಾ ಅವಿದ್ಯೆ ಎಂಬುದನ್ನು 'ಕರ್ಮ' – ಎಂಬ ಅರ್ಥ ದಲ್ಲಿ ವೇದಾಂತದಲ್ಲಿ ಬಳಸುತ್ತಾರೆ. "ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ" – [ಈಶೋಪನಿಷತ್ತು]. ಜ್ಞಾನವೇ ಮೋಕ್ಷಕ್ಕೆ ಸಾಧನ ಎಂದು ಕೆಲವರು ಹೇಳುತ್ತಾರೆ. "ಋತೇ ಜ್ಞಾನಾನ್ನ ಮುಕ್ತಿಃ". ಕರ್ಮಯೋಗದಿಂದಲೇ ಮೋಕ್ಷವೆಂದು ಕೆಲವು ಶಾಸ್ತ್ರಗಳು ಹೇಳುತ್ತವೆ. **ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ.**– [ಗೀತಾ]. ಕೆಲವರು ಈ ಜ್ಞಾನ-ಕರ್ಮಗಳೆರಡೂ ಕತ್ತಲೆ-ನೆರಳುಗಳಂತೆ ಪರಸ್ಪರವಿರುದ್ಧವಾದು ದರಿಂದ ಅವುಗಳಲ್ಲಿ ಯಾವುದಾದರೂ ಒಂದರಿಂದಲೇ ಮೋಕ್ಷಸಾಧ್ಯ ಎನ್ನು ತ್ತಾರೆ. ಜ್ಞಾನಸಹಿತವಾಗಿ ಕರ್ಮಗಳನ್ನು ಮಾಡಬೇಕು. "ಕುರ್ವನ್ ಜ್ಞಾನ ವ್ಯಪಾಶ್ರಯಃ"– ಎಂದು ಕೆಲವರು ಹೇಳುತ್ತಾರೆ. ಈ ಜ್ಞಾನ-ಕರ್ಮಗಳು ಹೇಗೆ ಮೋಕ್ಷಕ್ಕೆ ಸಾಧನವಾಗುತ್ತವೆಯೆಂಬುದನ್ನು ತಿಳಿಯದೇ ಎರಡರಲ್ಲಿಯೂ ಅಸೂಯೆಪಡುವವರು (ದೋಷಗಳನ್ನು ಹುಡುಕುವವರು) ಪರಮಾತ್ಮ ನನ್ನು ನೋಡಲಾರರು. ವಸ್ತುತಃ ಜ್ಞಾನ-ಕರ್ಮಗಳೆರಡೂ ಮೋಕ್ಷಸಾಧನ ಗಳೇ. ಜ್ಞಾನವು ಮೋಕ್ಷಕ್ಕೆ ಸಾಕ್ಷಾತ್ಸಾಧನ. ಕರ್ಮವು ಚಿತ್ತಶುದ್ಧಿಯನ್ನುಂಟು ಮಾಡುವುದರ ಮೂಲಕ ಮತ್ತು ಭಗವತ್ಪ್ರಸನ್ನತೆಯನ್ನುಂಟುಮಾಡುವುದರ ಮೂಲಕ ಮೋಕ್ಷಕ್ಕೆ ಪರಂಪರಯಾ ಸಾಧನವಾಗುತ್ತದೆ. ಅಧಿಕಾರಿ ಭೇದಾನುಗುಣವಾಗಿ ಜ್ಞಾನ-ಕರ್ಮಗಳೆರಡೂ ಮೋಕ್ಷಕ್ಕೆ ಸಾಧನಗಳಾಗುತ್ತವೆ. ಇವುಗಳನ್ನು ವಿವೇಕದಿಂದ ತಿಳಿದ ವಿರಾಗಿಯು ಮೋಕ್ಷವನ್ನು ಪಡೆಯುತ್ತಾನೆ.*

---

* ಇಲ್ಲಿ ಜೀವಾತ್ಮ-ಪರಮಾತ್ಮರ ಭೇದ-ಅಭೇದಗಳನ್ನು ಹೇಳುವ ಶ್ರುತಿವಾಕ್ಯಗಳಿಂದ ಮೋಹಗೊಳ್ಳಬಾರದು. ಅವೆರಡರ ಸಾಮರಸ್ಯವನ್ನು ತಿಳಿದವನು ಮೋಕ್ಷಹೊಂದು

ತತೋ ವೀತಜರಾಮೃತ್ಯುರ್ಜ್ಞಾತ್ವಾ ಬ್ರಹ್ಮ ಸನಾತನಮ್ ।
ಅಮೃತಂ ತದವಾಪ್ನೋತಿ ಯತ್ತದಕ್ಷರಮವ್ಯಯಮ್ ॥೨೭॥

ಅಂತಹ ವಿರಾಗಿಯು ಮುಪ್ಪು-ಸಾವುಗಳನ್ನು ದಾಟಿ ಶಾಶ್ವತವಾದ ಬ್ರಹ್ಮತತ್ತ್ವವನ್ನು ತಿಳಿದುಕೊಂಡು ಅಕ್ಷರನಾದ, ಅವಿಕಾರಿಯಾದ, ಅಮೃತ ಸ್ವರೂಪನಾದ ಆ ಪರಬ್ರಹ್ಮಪರಮಾತ್ಮನನ್ನು ಹೊಂದುತ್ತಾನೆ."

ಇ೧೫ನೆಯ ಅಧ್ಯಾಯವು ಮುಗಿಯಿತು.

೨೧೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಸ್ವಪ್ನದಲ್ಲಿ ಮತ್ತು ಸುಷುಪ್ತಿಯಲ್ಲಿ ಮನಸ್ಸಿನ ಸ್ಥಿತಿ : ಗುಣಾತೀತನಾದ ಬ್ರಹ್ಮಪ್ರಾಪ್ತಿಗೆ ಉಪಾಯ

ಪಾರಿಕ್ಷಿತ! ಭೀಷ್ಮನು ಮುಂದುವರಿದು ಹೇಳುತ್ತಾನೆ :

ನಿಷ್ಕಲ್ಮಷಂ ಬ್ರಹ್ಮಚರ್ಯಮಿಚ್ಛತಾ ಚರಿತುಂ ಸದಾ ।
ನಿದ್ರಾ ಸರ್ವಾತ್ಮನಾ ತ್ಯಾಜ್ಯಾ ಸ್ವಪ್ನದೋಷಾನವೇಕ್ಷತಾ ॥೧॥

"ಮಹಾರಾಜ! ಯಾವಾಗಲೂ ನಿಷ್ಕಲಂಕವಾದ ಬ್ರಹ್ಮಚರ್ಯವ್ರತ ವನ್ನು ಪರಿಪಾಲಿಸುವ ಇಚ್ಛೆಯುಳ್ಳ ಮನುಷ್ಯನು–ನಿದ್ರೆಯಲ್ಲಿ ಉಂಟಾಗುವ ದೋಷಗಳನ್ನು ಗಮನಿಸಿ ಸರ್ವಪ್ರಕಾರಗಳಿಂದಲೂ *ಅನಿಷ್ಟವಾದ ನಿದ್ರೆ ಯನ್ನು ಪರಿತ್ಯಜಿಸಬೇಕು.

ಸ್ವಪ್ನೇ ಹಿ ರಜಸಾ ದೇಹೀ ತಮಸಾ ಚಾಭಿಭೂಯತೇ ।
ದೇಹಾನ್ತರಮಿವಾಪನ್ನಶ್ಚರತ್ಯುಪಗತಸ್ಪೃಹಃ ॥೨॥

ಸ್ವಪ್ನಸಮಯದಲ್ಲಿ ಪ್ರಾಯಶಃ ಜೀವಿಯು ರಜೋಗುಣ-ತಮೋಗುಣ ಗಳಿಂದ ಅಭಿಭೂತನಾಗುತ್ತಾನೆ. ಆ ಸಮಯದಲ್ಲವನು ಅನೇಕವಿಧವಾದ

ತ್ತಾನೆ–ಎಂದು ಕೆಲವು ವ್ಯಾಖ್ಯಾನಕಾರರು ಅಭಿಪ್ರಾಯಪಡುತ್ತಾರೆ. ಹಿಂದಿನ ಶ್ಲೋಕದಲ್ಲಿ ಜ್ಞಾನ ಅಜ್ಞಾನಗಳು ಪ್ರಕೃತವಾಗಿರುವುದರಿಂದಲೂ ಜೀವಾತ್ಮ-ಪರಮಾತ್ಮಭೇದಾಭೇದಗಳು ಈ ಪ್ರಕರಣದಲ್ಲಿ ಬಂದಿಲ್ಲವಾದುದರಿಂದ ನಾವು ಮೇಲ್ಕಂಡಂತೆ ಭಾಷಾಂತರಿಸಿದ್ದೇವೆ.

* ಧ್ಯಾನಕ್ಕೆ ಬಾಧಕವಾಗುವ ಜಾಡ್ಯದ ನಿದ್ರೆಯನ್ನೂ ಅತಿನಿದ್ರೆಯನ್ನೂ ಇಲ್ಲಿ ಖಂಡಿ

ಆಕಾಂಕ್ಷೆಗಳನ್ನು ಹೊಂದಿ ಬೇರೆಯ ಶರೀರವನ್ನೇ ಹೊಂದಿರುವನೋ– ಎಂಬ ಭ್ರಾಂತಿಯಿಂದ ಸಂಚರಿಸುತ್ತಿರುತ್ತಾನೆ.

ಜ್ಞಾನಾಭ್ಯಾಸಾಜ್ಜಾಗರಣಂ ಜಿಜ್ಞಾಸಾರ್ಥಮನನ್ತರಮ್ ।
ವಿಜ್ಞಾನಾಭಿನಿವೇಶಾತ್ತು ಸ ಜಾಗರ್ತ್ಯನಿಶಂ ಸದಾ ॥೩॥

ಸಾಧಕನು ಮೊದಲು ಜ್ಞಾನವನ್ನು ಅಭ್ಯಸಿಸಬೇಕಾಗಿರುವುದರಿಂದ ಸರ್ವದಾ ಜಾಗ್ರತನಾಗಿಯೇ ಇರಬೇಕು. ಅನಂತರ ತಿಳಿದುಕೊಂಡ ಜ್ಞಾನವನ್ನು ತರ್ಕಬದ್ಧವಾಗಿಯೂ ಜಿಜ್ಞಾಸೆಮಾಡಬೇಕಾಗಿರುವುದರಿಂದ ಜಾಗರಣೆಯು ಅವಶ್ಯವಾಗುತ್ತದೆ. ಅಭ್ಯಾಸದ ಮೂಲಕವಾಗಿ ತತ್ತ್ವಜ್ಞಾನವನ್ನು ತಿಳಿದುಕೊಂಡನಂತರ ಅವನ ಮನಸ್ಸು ಯಾವಾಗಲೂ ಬ್ರಹ್ಮನಲ್ಲಿಯೇ ಪ್ರತಿಷ್ಠಿತವಾಗಿದ್ದು ಜಾಗರೂಕವಾಗಿಯೇ ಇರುತ್ತದೆ. ಆದುದರಿಂದ ತತ್ತ್ವವನ್ನರಸಿ ಹೊರಟವನು ನಿದ್ರೆಯನ್ನು ಸ್ವಾಭಾವಿಕವಾಗಿಯೇ ಜಯಿಸಿರುತ್ತಾನೆ.

ಅತ್ರಾಹ ಕೋನ್ವಯಂ ಭಾವಃ ಸ್ವಪ್ನೇ ವಿಷಯವಾನಿವ ।
ಪ್ರಲೀನೈರಿನ್ದ್ರಿಯೈರ್ದೇಹೀ ವರ್ತತೇ ದೇಹವಾನಿವ ॥೪॥

ಸ್ವಪ್ನದ ವಿಷಯವಾಗಿ ಪ್ರಶ್ನೆಯು ಹೀಗಿರುತ್ತದೆ : ಸ್ವಪ್ನದಲ್ಲಿ ಕಾಣುವ ದೇಹಾದಿ ಪದಾರ್ಥಗಳು ಯಾವುವು? ಇಂದ್ರಿಯಾರ್ಥಗಳನ್ನು ಅಪೇಕ್ಷಿಸುವ ಎಲ್ಲ ಇಂದ್ರಿಯಗಳೂ ಸ್ವಪ್ನಾವಸ್ಥೆಯಲ್ಲಿ ಮನಸ್ಸಿನಲ್ಲಿಯೇ ಲೀನವಾಗಿರುತ್ತವೆ. ಮನಸ್ಸಿನಲ್ಲಿ ಲೀನವಾದ ಇಂದ್ರಿಯಗಳಿಂದ ಕೂಡಿದ ದೇಹಾಭಿಮಾನಿಯಾದ ಜೀವನು ಆ ಸಮಯದಲ್ಲಿ ಮತ್ತೊಂದು ದೇಹವನ್ನು ಧರಿಸಿದವನಂತೆ ವ್ಯವಹರಿಸುತ್ತಿರುತ್ತಾನೆ.

ಅತ್ರೋಚ್ಯತೇ ಯಥಾ ಹ್ಯೇತದ್ವೇದ ಯೋಗೇಶ್ವರೋ ಹರಿಃ ।
ತಥೈತದುಪಪನ್ನಾರ್ಥಂ ವರ್ಣಯನ್ತಿ ಮಹರ್ಷಯಃ ॥೫॥

ಸ್ವಪ್ನದ ವಿಷಯದಲ್ಲಿ ಪ್ರತಿಪಾದಿತವಾಗಿರುವ ಸಿದ್ಧಾಂತವು ಇಲ್ಲಿ

ಸಿದೆ. ನಿದ್ರೆಯೇ ಕೂಡದೆಂದು ತಾತ್ಪರ್ಯವಲ್ಲ. ಯುಕ್ತಸ್ವಪ್ನಾವಬೋಧಸ್ಯ– ಎಂಬಂತೆ ಅವುಗಳಲ್ಲಿ ಯೋಗ ಇರಬೇಕು.

ಹೇಳಲ್ಪಟ್ಟಿದೆ. ಸ್ವಪ್ನಜಗತ್ತು ಹೇಗಿರುವುದೆಂಬುದನ್ನು ಯೋಗೇಶ್ವರನಾದ ಹರಿಯು ಒಬ್ಬನೇ ತಿಳಿದಿರುತ್ತಾನೆ. ಅದರಂತೆ ಯುಕ್ತಿಯುಕ್ತವಾದ ಅರ್ಥದಿಂದ ಮಹರ್ಷಿಗಳು ಅದನ್ನು ಹೀಗೆ ವರ್ಣಿಸುತ್ತಾರೆ.

ಇನ್ದ್ರಿಯಾಣಾಂ ಶ್ರಮಾತ್ಸ್ವಪ್ನಮಾಹುಃ ಸರ್ವಗತಂ ಬುಧಾಃ ।
ಮನಸಸ್ತ್ವಪ್ರಲೀನತ್ವಾತ್ತತ್ತದಾಹುರ್ನಿದರ್ಶನಮ್ ॥೬॥

ಜಾಗ್ರದವಸ್ಥೆಯಲ್ಲಿ ಶ್ರೋತ್ರಾದಿ ಇಂದ್ರಿಯಗಳು ಶಬ್ದವೇ ಮೊದಲಾದ ಇಂದ್ರಿಯಾರ್ಥಗಳನ್ನು ನಿರಂತರವಾಗಿ ಕೇಳುತ್ತಾ ಅಥವಾ ಅನುಭವಿಸುತ್ತಾ ಸೋತುಹೋಗಿರುತ್ತವೆ. ಆ ಶ್ರಮದ ಕಾರಣದಿಂದಲೇ ಸ್ವಪ್ನವು ಎಲ್ಲ ಪ್ರಾಣಿಗಳಿಗೂ ಆಗುತ್ತದೆ. ಆ ಸಮಯದಲ್ಲಿ ಇಂದ್ರಿಯಗಳೆಲ್ಲವೂ ಮನಸ್ಸಿನಲ್ಲಿ ಲೀನವಾಗಿದ್ದರೂ ಮನಸ್ಸು ಬುದ್ಧಿಯಲ್ಲಿ ಲೀನವಾಗಿರುವುದಿಲ್ಲ. ತನ್ನಲ್ಲಡಗಿರುವ ಇಂದ್ರಿಯಗಳ ವಿಷಯಗಳನ್ನು ಆ ಸಮಯದಲ್ಲಿ ಮನಸ್ಸೊಂದೇ ಅನುಭವಿಸುತ್ತಿರುತ್ತದೆ. ಇದನ್ನೇ ಸ್ವಪ್ನವೆಂದು ಕರೆಯುತ್ತಾರೆ. ಸ್ವಪ್ನದ ವಿಷಯದಲ್ಲಿ ಪ್ರಸಿದ್ಧವಾದ ಆಯಾ ದೃಷ್ಟಾಂತಗಳನ್ನು ಹೇಳುತ್ತಾರೆ.

ಕಾರ್ಯೇ ವ್ಯಾಸಕ್ತಮನಸಃ ಸಂಕಲ್ಪೋ ಜಾಗ್ರತೋ ಹ್ಯಪಿ ।
ಯದ್ವನ್ಮನೋರಥೈಶ್ವರ್ಯಂ ಸ್ವಪ್ನೇ ತದ್ವನ್ಮನೋಗತಮ್ ॥೭॥

ಮನುಷ್ಯನು ಜಾಗ್ರದವಸ್ಥೆಯಲ್ಲಿಯೇ ಇದ್ದರೂ ಕಾರ್ಯಾಂತರದಲ್ಲಿ ಉತ್ಕಟವಾಗಿ ಆಸಕ್ತವಾದ ಮನಸ್ಸುಳ್ಳವನಿಗೆ ಮನಸ್ಸಿನ ಆಸೆ-ಆಕಾಂಕ್ಷೆಗಳಿಗೆ ಅನುಗುಣವಾಗಿ ಪೂರ್ಣಮನೋರಥವೇ ಫಲಿಸಿದ ಚಿತ್ರವು ಮನೋಭೂಮಿಕೆಯಲ್ಲಿ ಯಾವ ರೀತಿಯಲ್ಲಿ ಕಂಡುಬರುವುದೋ–ಅದೇ ರೀತಿಯಲ್ಲಿ ಸ್ವಪ್ನಾವಸ್ಥೆಯಲ್ಲಿಯೂ ಮನೋಗತವಾದ ಇಂದ್ರಿಯಗಳ ವಿಷಯಾನುಭವವು ಮನಸ್ಸಿಗಾಗುತ್ತದೆ.*

---

* ಮನಸ್ಸಿನಲ್ಲಿ ಮಂಡಿಗೆಯನ್ನು ತಿನ್ನುವುದು, ಮಾನಸಿಕ ಪೂಜೆ, ಮಾನಸಿಕ ವ್ಯಭಿಚಾರ–ಇವೆಲ್ಲವೂ ಜಾಗ್ರತವಾಗಿರುವಾಗಲೇ ಸಂಕಲ್ಪಪೂರಿತವಾದ ಮನಸ್ಸಿನಲ್ಲಿ ಮೂಡುವ ಚಿತ್ರಗಳು. ಕನಸಿನ ಅನುಭವದಲ್ಲಿಯೂ ಮತ್ತು ಜಾಗ್ರದವಸ್ಥೆಯಲ್ಲಿ ಉಂಟಾಗುವ ಅನುಭವಗಳಲ್ಲಿಯೂ ಒಂದು ವ್ಯತ್ಯಾಸವಿದೆ. ಜಾಗ್ರದವಸ್ಥೆಯಲ್ಲಿ ತನಗೆ ತೋರಿದಂತೆ

ಸಂಸ್ಕಾರಾಣಾಮಸಂಖ್ಯಾನಾಂ ಕಾಮಾತ್ಮಾ ತದವಾಪ್ನುಯಾತ್ ।
ಮನಸ್ಯನ್ತರ್ಹಿತಂ ಸರ್ವಂ ಸ ವೇದೋತ್ತಮಪೂರುಷಃ ॥೮॥

ಉತ್ಕಟವಾದ ಕಾಮನೆಗಳಲ್ಲಿ ಆಸಕ್ತವಾದ ಮನಸ್ಸುಳ್ಳವನು ಸ್ವಪ್ನದಲ್ಲಿ ತನ್ನ ಇಹಜನ್ಮದ ಮತ್ತು ಜನ್ಮಾಂತರಗಳ ಅಸಂಖ್ಯಾತವಾದ ಸಂಸ್ಕಾರಗಳಿಗೆ ಅನುಸಾರವಾಗಿ ಅನೇಕವಿಧವಾದ ದೃಶ್ಯಗಳ ಅನುಭವವನ್ನು ಪಡೆಯುತ್ತಾನೆ. ಜನ್ಮ-ಜನ್ಮಾಂತರಗಳ ಸಂಸ್ಕಾರಗಳೂ ಮನುಷ್ಯನ ಮನಸ್ಸಿನಲ್ಲಿ ಅಡಗಿವೆ. ಆ ಎಲ್ಲವನ್ನೂ ಅಂತರ್ಯಾಮಿಯಾದ ಪುರುಷಶ್ರೇಷ್ಠನಾದ ಪರಮಾತ್ಮನು ತಿಳಿದಿರುತ್ತಾನೆ.

ಗುಣಾನಾಮಪಿ ಯದ್ಯೇತತ್ಕರ್ಮಣಾ ಚಾಪ್ಯುಪಸ್ಥಿತಮ್ ।
ತತ್ತಚ್ಛಂಸನ್ತಿ ಭೂತಾನಿ ಮನೋ ಯದ್ಭಾವಿತಂ ಯಥಾ ॥೯॥

ಸತ್ತ್ವ-ರಜಸ್ತಮೋಗುಣಗಳಲ್ಲಿ ಯಾವ ಗುಣವು ಬುದ್ಧಿಯಲ್ಲಿ ಉಪಸ್ಥಿತವಾಗಿರುವುದೋ–ಹಿಂದೆ ಮಾಡಿದ ಕರ್ಮದಿಂದ ಯಾವ ಫಲವು ಉಪಸ್ಥಿತವಾಗಿರುವುದೋ–ಮನಸ್ಸು ಯಾವ ರೀತಿಯಲ್ಲಿ ಹೇಗೆ ಸಂಸ್ಕಾರ ಹೊಂದಿರುವುದೋ–ಅದನ್ನು ಸೂಕ್ಷ್ಮಭೂತಗಳು ಸ್ವಪ್ನದಲ್ಲಿ ಮನಸ್ಸಿನ ಮೂಲಕವಾಗಿ ತೋರಿಸಿಕೊಡುತ್ತವೆ.

ತತಸ್ತಮುಪಸರ್ಪನ್ತಿ ಗುಣಾ ರಾಜಸತಾಮಸಾಃ ।
ಸಾತ್ತ್ವಿಕಾ ವಾ ಯಥಾಯೋಗಮಾನನ್ತರ್ಯಫಲೋದಯಮ್ ॥೧೦॥

ಸ್ವಪ್ನದ ದರ್ಶನವಾಗುತ್ತಿರುವಾಗಲೇ ಸಾತ್ತ್ವಿಕ-ರಾಜಸ-ತಾಮಸ ಗುಣಗಳು ಕರ್ಮಾನುಗುಣವಾಗಿ ಸುಖ-ದುಃಖರೂಪವಾದ ಫಲವನ್ನು ಚೇತನನಿಗೆ ಮಾಡಿಕೊಡುವ ಸಲುವಾಗಿ ಚೇತನನ ಮನೋಭೂಮಿಕೆಯಲ್ಲಿ ಬರುತ್ತವೆ.

ಸನ್ನಿವೇಶಗಳನ್ನು ಚಿತ್ರಿಸಿಕೊಳ್ಳಬಹುದು. ಕನಸಿನಲ್ಲಿ ಅದು ಹಾಗೆ ಸಾಧ್ಯವಾಗುವುದಿಲ್ಲ. ಆದರೆ ಯೋಗಾಭ್ಯಾಸದಿಂದ ಅದು ಸಾಧ್ಯ. ಇದರಿಂದ ಜಾಗ್ರದವಸ್ಥೆಯಲ್ಲಿ ಅನುಭವಿಸಬೇಕಾದ ಎಷ್ಟೋ ಇಷ್ಟಾನಿಷ್ಟವಿಷಯಗಳನ್ನು ಸ್ವಪ್ನಾವಸ್ಥೆಯಲ್ಲಿಯೇ ಅನುಭವಿಸಿ ಕಳೆದುಕೊಳ್ಳಬಹುದು. ಪ್ರಾರಬ್ಧಕರ್ಮದ ಶೀಘ್ರವಾದ ಅವಸಾನಕ್ಕೆ ಇದೂ ಒಂದು ಸುಗಮಮಾರ್ಗ.

ತತಃ ಪಶ್ಯನ್ತ್ಯಸಮ್ಬುದ್ಧಾ ವಾತಪಿತ್ತಕಫೋತ್ತರಾನ್ ।
ರಜಸ್ತಮೋಗತೈರ್ಭಾವೈಸ್ತದಪ್ಯಾಹುರ್ದುರತ್ಯಯಮ್ ॥೧೧॥

ಅನಂತರ ಮನುಷ್ಯನು ಸ್ವಪ್ನದಲ್ಲಿ ಅಜ್ಞಾನವಶನಾಗಿ ವಾತ-ಪಿತ್ತ-ಕಫಗಳ ಮೂಲಕವಾಗಿ, ಕಾಮ-ಮೋಹಾದಿ ರಾಜಸ-ತಾಮಸಭಾವಗಳಿಂದ ವ್ಯಾಪ್ತವಾದ ನಾನಾವಿಧವಾದ ಶರೀರಗಳನ್ನು ನೋಡುತ್ತಾನೆ. ಆತ್ಮಜ್ಞಾನವಾದ ಹೊರತು ಇಂತಹ ಸ್ವಪ್ನದರ್ಶನಗಳನ್ನು ಉಲ್ಲಂಘಿಸುವುದು ಕಠಿನವೆಂದು ಹೇಳುತ್ತಾರೆ.

ಆತ್ಮಜ್ಞಾನವಾಗಬೇಕಾದರೆ ಇಂದ್ರಿಯಗಳು ಮನಸ್ಸಿನಲ್ಲಿಯೂ, ಮನಸ್ಸು ಬುದ್ಧಿಯಲ್ಲಿಯೂ, ಬುದ್ಧಿಯು ಆತ್ಮನಲ್ಲಿಯೂ–ಲಯವಾಗಬೇಕು. ಸಮಾಧಿಯಲ್ಲಿ ಮನಸ್ಸೇ ಲಯವಾದನಂತರ ಸ್ವಪ್ನಕ್ಕೆ ಅವಕಾಶವೇ ಇರುವುದಿಲ್ಲ. ಸಮಾಧಿಯ ಅನುಭವವಿಲ್ಲದ ಸಾಮಾನ್ಯರಿಗೆ ಸ್ವಪ್ನವು ತಪ್ಪಿದ್ದಲ್ಲ.

ಪ್ರಸನ್ನೈರಿನ್ದ್ರಿಯೈರ್ಯದ್ಯತ್ಸಂಕಲ್ಪಯತಿ ಮಾನಸಮ್ ।
ತತ್ತತ್ಸ್ವಪ್ನೇಽಪ್ಯುಪಗತೇ ಮನೋ ಹ್ಯಪ್ಯನ್ನಿರೀಕ್ಷತೇ ॥೧೨॥

ಎಚ್ಚರಗೊಂಡಿರುವಾಗ ಮನುಷ್ಯನು ಪ್ರಸನ್ನವಾದ ಇಂದ್ರಿಯಗಳ ಮೂಲಕವಾಗಿ ಮನಸ್ಸಿನಲ್ಲಿ ಯಾವ ಯಾವ ಸಂಕಲ್ಪಗಳನ್ನು ಮಾಡುವನೋ ಕನಸಿನಲ್ಲಿಯೂ ಆ ಸಂಕಲ್ಪಗಳು ಫಲಿಸಿದುದನ್ನು ಮನುಷ್ಯನ ಮನಸ್ಸು ಹರ್ಷದಿಂದ ನೋಡುತ್ತಿರುತ್ತದೆ.

(ಇದು ಕನಸಿನ ಮತ್ತೊಂದು ಕಾರಣ. ಮಕ್ಕಳಾಗಲೀ ದೊಡ್ಡವರಾಗಲೀ ಹಗಲಿನಲ್ಲಿ ಆಡಿದ ಮಾತುಗಳನ್ನು ರಾತ್ರಿ ನಿದ್ರೆಯ ವೇಳೆಯಲ್ಲಿ ಆಡುವುದನ್ನು ನಾವು ಕೇಳಿದ್ದೇವೆ. ನಿದ್ರೆಯ ಸಮಯದಲ್ಲಿ ಎದ್ದು ಓಡಿ ಹೋಗುವವರೂ ಇದ್ದಾರೆ. ಇವುಗಳೆಲ್ಲವೂ ಹಗಲಿನಲ್ಲಾದ ಕಾರ್ಯಗಳು ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡುವುದರಿಂದ ಉಂಟಾಗುತ್ತವೆ.)

ವ್ಯಾಪಕಂ ಸರ್ವಭೂತೇಷು ವರ್ತತೇಽಪ್ರತಿಘಂ ಮನಃ ।
ಆತ್ಮಪ್ರಭಾವಾತ್ತದ್ವಿದ್ಯಾತ್ಸರ್ವಾ ಹ್ಯಾತ್ಮನಿ ದೇವತಾಃ ॥೧೩॥

ಸರ್ವಪ್ರಾಣಿಗಳಲ್ಲಿಯೂ ವ್ಯಾಪಕವಾಗಿರುವ ಮನಸ್ಸು ತಡೆಯಿಲ್ಲದ ಗತಿಯುಳ್ಳದ್ದು. ಮನಸ್ಸು ತನಗೆ ಆಶ್ರಯಭೂತವಾಗಿರುವ ಆತ್ಮನಿಂದ ಪ್ರಭಾವಿತವಾಗಿ ಸರ್ವತ್ರ ವ್ಯಾಪಿಸುವ ಶಕ್ತಿಯನ್ನು ಪಡೆದುಕೊಂಡಿದೆ. ಎಲ್ಲ ದೇವತೆಗಳೂ ಆತ್ಮನಲ್ಲಿಯೇ ಆಶ್ರಯವನ್ನು ಪಡೆದಿರುತ್ತಾರೆ. ಆದುದರಿಂದ ಅಂತಹ ಆತ್ಮನನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕು.

ಮನಸ್ಯನ್ತರ್ಹಿತಂ ದ್ವಾರಂ ದೇಹಮಾಸ್ಥಾಯ ಮಾನುಷಮ್ ।
ಯದ್ಯತ್ಸದಸದವ್ಯಕ್ತಂ ಸ್ವಪಿತ್ಯಸ್ಮಿನ್ನಿದರ್ಶನಮ್ ।
ಸರ್ವಭೂತಾತ್ಮಭೂತಸ್ಥಂ ತಮಧ್ಯಾತ್ಮಗುಣಂ ವಿದುಃ ॥೧೪॥

ಸುಷುಪ್ತ್ಯವಸ್ಥೆಯಲ್ಲಿ ಮನಸ್ಸು–ಅದೇ ದೇಹವನ್ನು ಆಶ್ರಯಿಸಿರುವ ಅವ್ಯಕ್ತನಾದ, ಸದಸತ್ಸ್ವರೂಪನಾದ, ಸಾಕ್ಷೀಭೂತನಾದ ಆತ್ಮನನ್ನು ಹೊಂದುತ್ತದೆ.* ಸರ್ವಪ್ರಾಣಿಗಳಿಗೂ ಆತ್ಮಭೂತನಾಗಿರುವ ಆ ಪರಮಾತ್ಮನನ್ನು ಅಹಂಕಾರಾದಿ ಗುಣಗಳಿಂದ ಅಸ್ಪೃಷ್ಟನಾಗಿರುವ ಅಧ್ಯಾತ್ಮಗುಣಸಂಪನ್ನನಾದವನೆಂದು ವಿದ್ವಾಂಸರು ತಿಳಿಯುತ್ತಾರೆ.

ಲಿಪ್ಸೇತ ಮನಸಾ ಯಶ್ಚ ಸಂಕಲ್ಪಾದೈಶ್ವರಂ ಗುಣಮ್ ।
ಆತ್ಮಪ್ರಸಾದಂ ತಂ ವಿದ್ಯಾತ್ಸರ್ವಾ ಹ್ಯಾತ್ಮನಿ ದೇವತಾಃ ॥೧೫॥

ಯಾವ ಯೋಗಿಯು ಮನಸ್ಸಿನಿಂದ ಸಂಕಲ್ಪದ ಮೂಲಕವಾಗಿ ಈಶ್ವರೀಯಗುಣಗಳನ್ನು ಪಡೆದುಕೊಳ್ಳಲು ಇಚ್ಛಿಸುವನೋ ಅವುಗಳನ್ನು ಅವನು ಹೊಂದುತ್ತಾನೆ. ಪರಮಾತ್ಮನ ಅನುಗ್ರಹದ ಕೊಡುಗೆಯಾಗಿ ಪಡೆಯುತ್ತಾನೆ. ಪರಮಾತ್ಮನು ಎಲ್ಲೆಲ್ಲಿಯೂ ಆತ್ಮಭೂತವಾಗಿ ಮನಸ್ಸಿಗೂ ಹಿಂದೆ ಇರುವುದರಿಂದಲೇ ಇದು ಸಾಧ್ಯ. ಎಲ್ಲ ದೇವತೆಗಳೂ ಆತ್ಮನಲ್ಲಿಯೇ ಆಶ್ರಯವನ್ನು ಪಡೆದಿರುತ್ತಾರೆ.

ಏವಂ ಹಿ ತಪಸಾ ಯುಕ್ತಮರ್ಕವತ್ತಮಸಃ ಪರಮ್ ।
ತ್ರೈಲೋಕ್ಯಪ್ರಕೃತಿರ್ದೇಹೀ ತಮಸೋಽನ್ತೇ ಮಹೇಶ್ವರಃ ॥೧೬॥

---

* 'ಸ್ವಪಿತಿ' – ಎಂಬುದಕ್ಕೆ ಸ್ವಂ ಅಪೀತೋ ಭವತಿ–ತನ್ನ ಆತ್ಮಸ್ವರೂಪದಲ್ಲೇ ಲೀನನಾಗುತ್ತಾನೆ–ಎಂದು ಛಾಂದೋಗ್ಯಶ್ರುತಿಯು ವಿವರಣೆ ನೀಡುತ್ತದೆ.

ಅಜ್ಞಾನಾಂಧಕಾರದಿಂದ ಹೊರಗಿರುವ ಸೂರ್ಯನಂತೆ ಜ್ಞಾನಮಯವಾದ ಪ್ರಕಾಶದಿಂದ ಪ್ರಕಾಶಿಸುತ್ತಿರುವ, ಮೂರು ಲೋಕಗಳಿಗೂ ಕಾರಣನಾದ, ತ್ರಿಲೋಕರೂಪವಾದ ಪ್ರಕೃತಿಯನ್ನೇ ತನ್ನ ದೇಹವನ್ನಾಗಿ ಹೊಂದಿರುವ ಎಂದರೆ ಇದಕ್ಕೆ ಅಂತರಾತ್ಮನಾದ ಮಹೇಶ್ವರನು–ಈ ರೀತಿಯಲ್ಲಿ ತಪಸ್ಸಿನಿಂದ ಯುಕ್ತನಾದವನನ್ನು ಅಜ್ಞಾನವು ಕಳೆದೊಡನೆಯೇ ದರ್ಶನದಿಂದ ಅನುಗ್ರಹಿಸುತ್ತಾನೆ. ಬ್ರಹ್ಮಸಾಕ್ಷಾತ್ಕಾರವಾಗುತ್ತದೆ.

ತಪೋ ಹ್ಯಧಿಷ್ಠಿತಂ ದೇವೈಸ್ತಪೋಘ್ನಮಸುರೈಸ್ತಮಃ ।
ಏತದ್ದೇವಾಸುರೈರ್ಗುಪ್ತಂ ತದಾಹುರ್ಜ್ಞಾನಲಕ್ಷಣಮ್ ॥೧೭॥

ದೇವತೆಗಳು ತಪಸ್ಸನ್ನೇ ಆಶ್ರಯಿಸಿದ್ದಾರೆ. ಅಸುರರು ತಪಸ್ಸಿಗೆ ವಿಘ್ನವನ್ನುಂಟುಮಾಡುವ ತಮೋಗುಣವನ್ನೇ ಹೊಂದಿರುತ್ತಾರೆ. ಆದರೆ ಬ್ರಹ್ಮತತ್ತ್ವವು ದೇವಾಸುರರಿಬ್ಬರಲ್ಲಿಯೂ ಅಡಗಿ ಗುಟ್ಟಾಗಿದೆ. ತತ್ತ್ವಜ್ಞರಾದ ಪುರುಷರು ಅದನ್ನು ಸಕಲಪ್ರಾಣಿಗಳಲ್ಲಿಯೂ ಇರುವ ಜ್ಞಾನಸ್ವರೂಪವೆಂದು ಹೇಳುತ್ತಾರೆ.

ಸತ್ತ್ವಂ ರಜಸ್ತಮಶ್ಚೇತಿ ದೇವಾಸುರಗುಣಾನ್ವಿದುಃ ।
ಸತ್ತ್ವಂ ದೇವಗುಣಂ ವಿದ್ಯಾದಿತರಾವಾಸುರೌ ಗುಣೌ ॥೧೮॥

ಸತ್ತ್ವ-ರಜಸ್ತಮೋಗುಣಗಳು ದೇವಾಸುರರ ಗುಣಗಳೆಂದು ವಿದ್ವಾಂಸರು ತಿಳಿಯುತ್ತಾರೆ. ಸತ್ತ್ವಗುಣವನ್ನು ದೇವತೆಗಳ ಗುಣವನ್ನಾಗಿ ತಿಳಿಯಬೇಕು. ಉಳಿದ ರಜಸ್ತಮೋಗುಣಗಳು ಅಸುರರ ಗುಣಗಳಾಗಿವೆ.

ಬ್ರಹ್ಮ ತತ್ಪರಮಂ ಜ್ಞಾನಮಮೃತಂ ಜ್ಯೋತಿರಕ್ಷರಮ್ ।
ಯೇ ವಿದುರ್ಭಾವಿತಾತ್ಮಾನಸ್ತೇ ಯಾನ್ತಿ ಪರಮಾಂ ಗತಿಮ್ ॥೧೯॥

ಅಮೃತಮಯವಾದ, ಜ್ಯೋತಿಸ್ವರೂಪವಾದ ಮತ್ತು ಅವಿನಾಶಿಯಾದ ಪರಬ್ರಹ್ಮವಸ್ತುವು ಜ್ಞಾನಸ್ವರೂಪವಾದುದು.; ಆ ಮೂರು ಗುಣಗಳಿಗಿಂತಲೂ ಅತೀತವಾದುದು. ಶುದ್ಧಾಂತಃಕರಣರಾದ ಯಾರು ಈ ಪರಬ್ರಹ್ಮವಸ್ತುವನ್ನು ತಿಳಿದಿರುವರೋ–ಅವರು ಪರಮಗತಿಯನ್ನು (ಮೋಕ್ಷವನ್ನು) ಹೊಂದುತ್ತಾರೆ.

ಹೇತುಮಚ್ಛಕ್ಯಮಾಖ್ಯಾತುಮೇತಾವಜ್ಜ್ಞಾನಚಕ್ಷುಷಾ ।
ಪ್ರತ್ಯಾಹಾರೇಣ ವಾ ಶಕ್ಯಮಕ್ಷರಂ ಬ್ರಹ್ಮ ವೇದಿತುಮ್ ॥೨೦॥

ಜ್ಞಾನಮಯವಾದ ದೃಷ್ಟಿಯುಳ್ಳ ಮಹಾಪುರುಷರು ಮಾತ್ರವೇ ಬ್ರಹ್ಮ ವಸ್ತುವಿನ ವಿಷಯದಲ್ಲಿ ಯುಕ್ತಿಯುಕ್ತವಾದ ಮಾತನ್ನು ಹೇಳಬಲ್ಲರು. ಮನಸ್ಸನ್ನೂ ಮತ್ತು ಇಂದ್ರಿಯಗಳನ್ನೂ ವಿಷಯಗಳಿಂದ ಹಿಂದಿರುಗಿಸಿ, ಚಿತ್ತೈಕಾಗ್ರತೆಯಿಂದ ಧ್ಯಾನಮಾಡುವುದರಿಂದ ಮಾತ್ರವೇ ಅವಿನಾಶಿಯಾದ ಬ್ರಹ್ಮವಸ್ತುವಿನ ಸ್ವರೂಪವನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ."

ಎ೧೯ನೆಯ ಅಧ್ಯಾಯವು ಮುಗಿಯಿತು.

೨೧೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪರಮಾತ್ಮ, ದೃಶ್ಯವರ್ಗ, ಪ್ರಕೃತಿ ಮತ್ತು ಪುರುಷ ಈ ನಾಲ್ಕರ ಜ್ಞಾನದಿಂದ ಮುಕ್ತಿಯ ಕಥನ : ಪರಮಾತ್ಮಪ್ರಾಪ್ತಿಗೆ ಇತರ ಸಾಧನೆಗಳ ವಿವರಣೆ

ಜನಮೇಜಯ! ಭೀಷ್ಮನು ಹೇಳುತ್ತಾನೆ :

ನ ಸ ವೇದ ಪರಂ ಬ್ರಹ್ಮ ಯೋ ನ ವೇದ ಚತುಷ್ಟಯಮ್ ।
ವ್ಯಕ್ತಾವ್ಯಕ್ತಂ ಚ ಯತ್ತತ್ತ್ವಂ ಸಮ್ಪ್ರೋಕ್ತಂ ಪರಮರ್ಷಿಣಾ ॥೧॥

ವ್ಯಕ್ತಂ ಮೃತ್ಯುಮುಖಂ ವಿದ್ಯಾದವ್ಯಕ್ತಮಮೃತಂ ಪದಮ್ ।
ಪ್ರವೃತ್ತಿಲಕ್ಷಣಂ ಧರ್ಮಮೃಷಿರ್ನಾರಾಯಣೋಽಬ್ರವೀತ್ ॥೨॥

ತತ್ರೈವಾವಸ್ಥಿತಂ ಸರ್ವಂ ತ್ರೈಲೋಕ್ಯಂ ಸಚರಾಚರಮ್ ।
ನಿವೃತ್ತಿಲಕ್ಷಣಂ ಧರ್ಮಮವ್ಯಕ್ತಂ ಬ್ರಹ್ಮ ಶಾಶ್ವತಮ್ ॥೩॥

"ಯುಧಿಷ್ಠಿರ! ಯಾವ ಮನುಷ್ಯನು ಅವ್ಯಕ್ತ* (ಪರಮಾತ್ಮಾ), ವ್ಯಕ್ತ (ದೃಶ್ಯವರ್ಗ), ಪ್ರಕೃತಿ ಮತ್ತು ಪುರುಷ–ಈ ನಾಲ್ಕನ್ನೂ ತಿಳಿ

---

* ಅವ್ಯಕ್ತಶಬ್ದಕ್ಕೆ ಪರಮಾತ್ಮಾ ಮೂಲಪ್ರಕೃತಿ–ಎಂಬ ಎರಡು ಅರ್ಥಗಳೂ ಉಂಟು. ಇಲ್ಲಿ ಪರಮಾತ್ಮಾ–ಎಂದರ್ಥ.

ದಿರುವುದಿಲ್ಲವೋ ಅವನು ಪರಬ್ರಹ್ಮಪರಮಾತ್ಮನನ್ನು ತಿಳಿಯಲಾರನು. ಪರಮರ್ಷಿಯಾದ ನಾರಾಯಣನು ಆ ತತ್ತ್ವವನ್ನು ನಿಶ್ಚಯರೂಪದಿಂದ ಪ್ರತಿಪಾದಿಸಿದ್ದಾನೆ. ವ್ಯಕ್ತವಾಗಿರುವುದೆಲ್ಲವೂ (ಕಣ್ಣಿಗೆ ಕಾಣುತ್ತಿರುವುದೆಲ್ಲವೂ) ಮೃತ್ಯುಮುಖಕ್ಕೆ ಹೋಗತಕ್ಕುದ್ದೆಂದೂ (ವಿನಾಶಹೊಂದತಕ್ಕುದ್ದೆಂದೂ), ಅವ್ಯಕ್ತವು ಅಮೃತಸ್ವರೂಪವೆಂದೂ ನಾರಾಯಣಮಹರ್ಷಿಯು ಹೇಳಿದ್ದಾನೆ. ನಾರಾಯಣನು ಯಾವ ಪ್ರವೃತ್ತಿರೂಪವಾದ ಧರ್ಮವನ್ನು ಪ್ರತಿಪಾದಿಸಿರುವನೋ–ಅದರಲ್ಲಿಯೇ ಚರಾಚರಸಹಿತವಾದ ಮೂರು ಲೋಕಗಳೂ ಪ್ರತಿಷ್ಠಿತವಾಗಿವೆ. ನಿವೃತ್ತಿರೂಪವಾದ ಧರ್ಮವು ಅವ್ಯಕ್ತ ವಾದ, ಶಾಶ್ವತವಾದ ಬ್ರಹ್ಮವಸ್ತುವೇ ಆಗಿದೆ.

ಪ್ರವೃತ್ತಿಲಕ್ಷಣಂ ಧರ್ಮಂ ಪ್ರಜಾಪತಿರಥಾಬ್ರವೀತ್ ।
ಪ್ರವೃತ್ತಿಃ ಪುನರಾವೃತ್ತಿರ್ನಿವೃತ್ತಿಃ ಪರಮಾ ಗತಿಃ ॥೪॥

ಪ್ರಜಾಪತಿಬ್ರಹ್ಮನು ಪ್ರವೃತ್ತಿರೂಪಧರ್ಮದ ವಿಷಯವಾಗಿ ಹೀಗೆ ಹೇಳಿದ್ದಾನೆ. 'ಪ್ರವೃತ್ತಿಧರ್ಮವು ಪುನರಾವೃತ್ತಿಗೆ ಕಾರಣವಾಗುವುದು. (ಜನನ-ಮರಣಯುಕ್ತವಾದುದು). ನಿವೃತ್ತಿಧರ್ಮವು ಪರಮಗತಿಯನ್ನು ಹೊಂದಿಸುವುದು. (ಹುಟ್ಟು-ಸಾವುಗಳಿಂದ ಬಿಡುಗಡೆಯನ್ನುಂಟುಮಾಡ ತಕ್ಕುದು.)'

ತಾಂ ಗತಿಂ ಪರಮಾಮೇತಿ ನಿವೃತ್ತಿಪರಮೋ ಮುನಿಃ ।
ಜ್ಞಾನತತ್ತ್ವಪರೋ ನಿತ್ಯಂ ಶುಭಾಶುಭನಿದರ್ಶಕಃ ॥೫॥

ಯಾವನು ಜ್ಞಾನತತ್ತ್ವದ ಚಿಂತನೆಯಲ್ಲಿಯೇ ಸದಾ ಆಸಕ್ತನಾಗಿರು ವನೋ, ಶುಭಾಶುಭಗಳೆರಡೂ ಸಮವೆಂಬುದನ್ನು ವ್ಯವಹಾರದಲ್ಲಿ ತೋರಿಸುವನೋ (ಸುಖ-ದುಃಖಗಳನ್ನು ಸಮಾನವಾಗಿ ಕಾಣುವನೋ), ನಿವೃತ್ತಿಯೇ ಪರಮಧರ್ಮವುಳ್ಳವನಾಗಿರುವನೋ–ಅಂತಹ ಮುನಿಯು ಶ್ರೇಷ್ಠವಾದ ಆ ಬ್ರಹ್ಮಗತಿಯನ್ನು ಹೊಂದುತ್ತಾನೆ.

ತದೇವಮೇತೌ ವಿಜ್ಞೇಯಾವವ್ಯಕ್ತಪುರುಷಾವುಭೌ ।
ಅವ್ಯಕ್ತಪುರುಷಾಭ್ಯಾಂ ತು ಯತ್ಸ್ಯಾದನ್ಯನ್ಮಹತ್ತರಮ್ ।
ತಂ ವಿಶೇಷಮವೇಕ್ಷೇತ ವಿಶೇಷೇಣ ವಿಚಕ್ಷಣಃ ॥೬॥

ಆದುದರಿಂದ ವಿಚಾರವಂತನಾದ ಪುರುಷನು ಮೊದಲು ಹೀಗೆ ಅವ್ಯಕ್ತವನ್ನೂ * (ಪ್ರಕೃತಿ), ಪುರುಷನನ್ನೂ (ಜೀವಾತ್ಮ) ತಿಳಿದುಕೊಳ್ಳಬೇಕು. ಈ ಅವ್ಯಕ್ತಪ್ರಕೃತಿ ಮತ್ತು ಕ್ಷೇತ್ರಜ್ಞನಾದ ಪುರುಷರಿಗಿಂತಲೂ ಬೇರೆಯದಾದ ಶ್ರೇಷ್ಠವಾದ ಯಾವ ಮಹಾತತ್ತ್ವವಿರುವುದೋ (ಪುರುಷೋತ್ತಮತತ್ತ್ವವಿರುವುದೋ)–ಅದನ್ನು ವಿಶೇಷರೀತಿಯಲ್ಲಿ ವಿದ್ವಾಂಸನಾದವನು ತಿಳಿದುಕೊಳ್ಳಬೇಕು.

ಅನಾದ್ಯನ್ತಾವುಭಾವೇತಾವಲಿಙ್ಗೌ ಚಾಪ್ಯುಭಾವಪಿ ।
ಉಭೌ ನಿತ್ಯಾವವಿಚಲೌ ಮಹದ್ಭ್ಯಶ್ಚ ಮಹತ್ತರೌ ।
ಸಾಮಾನ್ಯಮೇತದುಭಯೋರೇವಂ ಹ್ಯನ್ಯದ್ವಿಶೇಷಣಮ್ ॥೮॥

ಈ ಪ್ರಕೃತಿ-ಪುರುಷರು ಮೊದಲಾಗಲೀ ಕಡೆಯಾಗಲೀ ಇಲ್ಲದವರು. ಇಬ್ಬರೂ ಆಕಾರರಹಿತರು. ಇಬ್ಬರೂ ನಿತ್ಯರು, ಅವಿಚಲರು. ಮಹತ್ತುಗಳಿಗಿಂತಲೂ ಮಹತ್ತಾದವರು. ಈ ವಿಶೇಷಗಳೆಲ್ಲವೂ ಪ್ರಕೃತಿ ಮತ್ತು ಪುರುಷರಿಬ್ಬರಿಗೂ ಸಮಾನವಾಗಿವೆ. ಆದರೆ ಇವೆರಡರಲ್ಲಿ ಅಂತರವು ಅಥವಾ ವೈಲಕ್ಷಣ್ಯವು ಹೀಗಿದೆ.

ಪ್ರಕೃತ್ಯಾ ಸರ್ಗಧರ್ಮಿಣ್ಯಾ ತಥಾ ತ್ರಿಗುಣಧರ್ಮಯಾ ।
ವಿಪರೀತಮತೋ ವಿದ್ಯಾತ್ಕ್ಷೇತ್ರಜ್ಞಸ್ಯ ಸ್ವಲಕ್ಷಣಮ್ ॥೯॥

ಪ್ರಕೃತಿಯು ತ್ರಿಗುಣಾತ್ಮಕವಾಗಿದೆ. ಸೃಷ್ಟಿಮಾಡುವುದೇ ಪ್ರಕೃತಿಯ ಸಹಜಧರ್ಮವಾಗಿದೆ. ಆದರೆ ಕ್ಷೇತ್ರಜ್ಞನ ಅಥವಾ ಪುರುಷನ ಲಕ್ಷಣವು ಪ್ರಕೃತಿಯ ಲಕ್ಷಣಗಳಿಗಿಂತಲೂ ವಿಪರೀತವಾಗಿದೆಯೆಂದೂ ಮತ್ತು ವಿಲಕ್ಷಣವಾಗಿದೆಯೆಂದೂ ತಿಳಿಯಬೇಕು.

ಪ್ರಕೃತೇಶ್ಚ ವಿಕಾರಾಣಾಂ ದ್ರಷ್ಟಾರಮಗುಣಾನ್ವಿತಮ್ ।
ಅಗ್ರಾಹ್ಯೌ ಪುರುಷಾವೇತಾವಲಿಙ್ಗತ್ವಾದಸಂಹತೌ ॥೧೦॥

ಗುಣರಹಿತನಾದ ಪುರುಷನು ಪ್ರಕೃತಿಯ ವಿಕಾರಗಳನ್ನು (ಕಾರ್ಯಗಳನ್ನು) ಸ್ವತಃ ನೋಡುವನು. ಪ್ರಕೃತಿ ಮತ್ತು ಪುರುಷರಿಬ್ಬರೂ

---

* ಇಲ್ಲಿ ಅವ್ಯಕ್ತ ಶಬ್ದಕ್ಕೆ ಮೂಲಪ್ರಕೃತಿ–ಎಂದರ್ಥ.

ಇಂದ್ರಿಯಗಳಿಗೆ ಗೋಚರಿಸತಕ್ಕವರಲ್ಲ. ಅವ್ಯಕ್ತವಾದ ಸ್ಥಿತಿಯಲ್ಲಿಯೇ ಇರುವುದರಿಂದ ಒಬ್ಬರಿಗೊಬ್ಬರು ವಿಲಕ್ಷಣವಾದ ಗುಣವುಳ್ಳವರಾಗಿದ್ದಾರೆ.

ಸಂಯೋಗಲಕ್ಷಣೋತ್ಪತ್ತಿಃ ಕರ್ಮಣಾ ಗೃಹ್ಯತೇ ಯಥಾ ।
ಕರಣೈಃ ಕರ್ಮನಿರ್ವೃತ್ತಿಃ ಕರ್ತಾ ಯದ್ಯದ್ವಿಚೇಷ್ಟತೇ ।
ಕೀರ್ತ್ಯತೇ ಶಬ್ದ ಸಂಜ್ಞಾಭಿಃ ಕೋಽಹಮೇಷೋಽಪ್ಯಸಾವಿತಿ ॥೧೧॥

ಪ್ರಕೃತಿ ಮತ್ತು ಪುರುಷರ ಸಂಯೋಗದಿಂದ ಚರಾಚರಜಗತ್ತಿನ ಉತ್ಪತ್ತಿಯಾಗುವುದೆಂಬುದು ಕರ್ಮದಿಂದಲೇ ತಿಳಿದುಬರುತ್ತದೆ. ಜೀವನು ಮನಸ್ಸು ಮತ್ತು ಇಂದ್ರಿಯಗಳ ಮೂಲಕವಾಗಿ ಕರ್ಮವನ್ನು ಮಾಡುತ್ತಾನೆ. ಅವನು ಯಾವ ಯಾವ ಕರ್ಮಗಳನ್ನು ಮಾಡುತ್ತಾನೆಯೋ ಆಯಾ ಕರ್ಮಗಳಿಗೆ ತಾನೇ ಕರ್ತೃವೆಂದು ಹೇಳಿಕೊಳ್ಳುತ್ತಾನೆ. ಶಬ್ದ-ಸಂಜ್ಞೆಗಳಿಂದ 'ನಾನು ಯಾರು? ಇವನು ಯಾರು? ಅವನು ಯಾರು?' – ಎಂಬುದನ್ನು ಪ್ರಸಿದ್ಧಪಡಿಸಿಕೊಳ್ಳುತ್ತಾನೆ.

ಉಷ್ಣೀಷವಾನ್ಯಥಾ ವಸ್ತ್ರೈಸ್ತ್ರಿಭಿರ್ಭವತಿ ಸಂವೃತಃ ।
ಸಂವೃತೋಽಯಂ ತಥಾ ದೇಹೀ ಸತ್ತ್ವರಾಜಸತಾಮಸೈಃ ॥೧೨॥

ಮುಂಡಾಸನ್ನು ಸುತ್ತಿಕೊಂಡಿರುವವನು ಯಾವ ರೀತಿಯಲ್ಲಿ ಮೂರು ವಸ್ತ್ರಗಳಿಂದ (ಉಡುವ ಪಂಚೆ, ಹೊದೆಯುವ ಪಂಚೆ ಮತ್ತು ಮುಂಡಾಸು) ಸುತ್ತುಗಟ್ಟಲ್ಪಟ್ಟಿರುವನೋ – ಅದೇ ರೀತಿಯಲ್ಲಿ ಜೀವನು ಸತ್ತ್ವ-ರಜಸ್ತಮೋ ಗುಣಗಳಿಂದ ಸಂವೃತನಾಗಿದ್ದಾನೆ.

ತಸ್ಮಾಚ್ಚತುಷ್ಟಯಂ ವೇದ್ಯಮೇತೈರ್ಹೇತುಭಿರಾವೃತಮ್ ।
ಯಥಾಸಂಜ್ಞೋ ಹ್ಯಯಂ ಸಮ್ಯಗನ್ತಕಾಲೇ ನ ಮುಹ್ಯತಿ ॥೧೩॥

ಈ ಕಾರಣಗಳಿಂದ (ಸತ್ತ್ವ-ರಜಸ್ತಮೋಗುಣಗಳಿಂದ) ಆವೃತವಾಗಿರುವ ಚತುಷ್ಟಯವನ್ನು (ಪರಮಾತ್ಮಾ, ವ್ಯಕ್ತ, ಪ್ರಕೃತಿ ಮತ್ತು ಪುರುಷರನ್ನು) ತಿಳಿದುಕೊಳ್ಳಬೇಕು. ಹಾಗೆ ತಿಳಿದುಕೊಂಡವನು ಮರಣಸಮಯದಲ್ಲಿ ಮೂಢನಂತೆ ವಿಮೋಹಗೊಳ್ಳುವುದಿಲ್ಲ.

ಶ್ರಿಯಂ ದಿವ್ಯಾಮಭಿಪ್ರೇಪ್ಸುರ್ವರ್ಷ್ಮವಾನ್ಮನಸಾ ಶುಚಿಃ ।
ಶಾರೀರೈರ್ನಿಯಮೈರುಗ್ರೈಶ್ಚರೇನ್ನಿಷ್ಕಲ್ಮಷಂ ತಪಃ ॥೧೪॥

ದಿವ್ಯವಾದ ಸಂಪತ್ತನ್ನು ಅರ್ಥಾತ್ ಬ್ರಹ್ಮಜ್ಞಾನವನ್ನು ಪಡೆದುಕೊಳ್ಳಲು ಅಪೇಕ್ಷಿಸುವ ದೇಹಧಾರಿಯಾದ ಮನುಷ್ಯನು ತನ್ನ ಮನಸ್ಸನ್ನು ಶುಚಿಯಾಗಿಟ್ಟುಕೊಳ್ಳಬೇಕು. ಕಠೋರವಾದ ಶಾರೀರನಿಯಮಗಳಿಂದ ದೋಷರಹಿತವಾದ ತಪಸ್ಸನ್ನು ಆಚರಿಸಬೇಕು.

ತ್ರೈಲೋಕ್ಯಂ ತಪಸಾ ವ್ಯಾಪ್ತಮನ್ತರ್ಭೂತೇನ ಭಾಸ್ವತಾ ।
ಸೂರ್ಯಶ್ಚ ಚನ್ದ್ರಮಾಶ್ಚೈವ ಭಾಸತಸ್ತಪಸಾ ದಿವಿ ॥೧೫॥

ಅಂತರಂಗದಲ್ಲಿ ಮಾಡುವ ಪ್ರಕಾಶಮಾನವಾದ ತಪಸ್ಸಿನಿಂದ ಮೂರು ಲೋಕಗಳೂ ಪ್ರಕಾಶಗೊಳ್ಳುತ್ತವೆ. ಸೂರ್ಯ-ಚಂದ್ರರೂ ತಮ್ಮ ಆಂತರಿಕ ತಪಸ್ಸಿನ ಪ್ರಭಾವದಿಂದಲೇ ಆಕಾಶದಲ್ಲಿ ಬೆಳಗುತ್ತಿದ್ದಾರೆ.

ಪ್ರಕಾಶಸ್ತಪಸೋ ಜ್ಞಾನಂ ಲೋಕೇ ಸಂಶಬ್ದಿತಂ ತಪಃ ।
ರಜಸ್ತಮೋಘ್ನಂ ಯತ್ಕರ್ಮ ತಪಸಸ್ತತ್ಸ್ವಲಕ್ಷಣಮ್ ॥೧೬॥

'ತಪಸ್ಸು' ಎಂಬ ಶಬ್ದವು ಲೋಕಪ್ರಸಿದ್ಧವಾಗಿದೆ. ಅಂತರ್ಮುಖವಾದ ತಪಸ್ಸಿನ ಫಲವು ಜ್ಞಾನರೂಪವಾದ ಪ್ರಕಾಶವೇ ಆಗಿದೆ. ರಜೋಗುಣ-ತಮೋಗುಣಗಳನ್ನು ನಾಶಮಾಡುವ ಯಾವ ಕರ್ಮವಿರುವುದೋ–ಆ ನಿಷ್ಕಾಮಕರ್ಮವೇ ಆಧ್ಯಾತ್ಮಿಕತಪಸ್ಸಿನ ಸ್ವರೂಪಬೋಧಕವಾದ ಲಕ್ಷಣವಾಗಿದೆ.

ಬ್ರಹ್ಮಚರ್ಯಮಹಿಂಸಾ ಚ ಶಾರೀರಂ ತಪ ಉಚ್ಯತೇ ।
ವಾಙ್ಮನೋನಿಯಮಃ ಸಮ್ಯಙ್ಮಾನಸಂ ತಪ ಉಚ್ಯತೇ ॥೧೭॥

ಬ್ರಹ್ಮಚರ್ಯೆ ಮತ್ತು ಅಹಿಂಸೆಗಳು ಶಾರೀರವಾದ ತಪಸ್ಸೆಂದು ಹೇಳಲ್ಪಟ್ಟಿವೆ. ಮನಸ್ಸಿನ ಸಂಯಮ ಮತ್ತು ಹಿತ-ಮಿತವಾದ, ಮಧುರವಾದ ಸತ್ಯವಾದ ಮಾತನ್ನಾಡುವುದು–ಮಾನಸವಾದ ತಪಸ್ಸೆಂದು ಹೇಳಲ್ಪಟ್ಟಿದೆ.

ವಿಧಿಜ್ಞೇಭ್ಯೋ ದ್ವಿಜಾತಿಭ್ಯೋ ಗ್ರಾಹ್ಯಮನ್ನಂ ವಿಶಿಷ್ಯತೇ ।
ಆಹಾರನಿಯಮೇನಾಸ್ಯ ಪಾಪ್ಮಾ ಶಾಮ್ಯತಿ ರಾಜಸಃ ॥೧೮॥

ವೈದಿಕವಿಧಿಗಳನ್ನು ತಿಳಿದಿರುವ ಮತ್ತು ಆ ವಿಧಿ-ನಿಯಮಗಳನ್ನು ಆಚರಣೆಯಲ್ಲಿಟ್ಟುಕೊಂಡಿರುವ ಬ್ರಾಹ್ಮಣರಿಂದ ಅನ್ನವನ್ನು ಪರಿಗ್ರಹಿಸುವುದು ಉತ್ತಮಪಕ್ಷವಾಗಿದೆ. ಆಹಾರದ ವಿಷಯದಲ್ಲಿ ನಿಯಮಗಳನ್ನು ಪರಿಪಾಲಿಸುವುದರಿಂದ ರಜೋಗುಣದಿಂದ ಉಂಟಾಗುವ ಪಾಪವು ಶಮನಗೊಳ್ಳುತ್ತದೆ.

ವೈಮನಸ್ಯಂ ಚ ವಿಷಯೇ ಯಾನ್ತ್ಯಸ್ಯ ಕರಣಾನಿ ಚ ।
ತಸ್ಮಾತ್ತನ್ಮಾತ್ರಮಾದದ್ಯಾದ್ಯಾವದತ್ರ ಪ್ರಯೋಜನಮ್ ॥೧೯॥

ಹಾಗೆ ವಿಧಿಜ್ಞರಾದ ಬ್ರಾಹ್ಮಣರಿಂದ ಕೊಡಲ್ಪಡುವ ಅನ್ನವನ್ನು ತಿನ್ನುವುದರಿಂದ ಸಾಧಕನ ಇಂದ್ರಿಯಗಳೂ ಅವುಗಳಿಗೆ ಸಂಬಂಧಿಸಿದ ಶಬ್ದಾದಿ ವಿಷಯಗಳಲ್ಲಿ ದ್ವೇಷವನ್ನು ತಾಳುತ್ತವೆ. (ಇಂದ್ರಿಯಗಳು ಇಂದ್ರಿಯಾರ್ಥಗಳಿಂದ ಹಿಂದಿರುಗುತ್ತವೆ. ಮನಃಶುದ್ಧಿಯಾಗಿ ವೈರಾಗ್ಯ ವುಂಟಾಗುತ್ತದೆ.) ಆದುದರಿಂದ ಶರೀರಧಾರಣೆಗೆ ಸಾಕಾಗುವಷ್ಟು ಮಾತ್ರವೇ ಅನ್ನವನ್ನು ಬ್ರಾಹ್ಮಣರಿಂದ ಪಡೆದುಕೊಳ್ಳಬೇಕು.

ಅನ್ತಕಾಲೇ ಬಲೋತ್ಕರ್ಷಾಚ್ಛನೈಃ ಕುರ್ಯಾದನಾತುರಃ ।
ಏವಂ ಯುಕ್ತೇನ ಮನಸಾ ಜ್ಞಾನಂ ಯದುಪಪದ್ಯತೇ ॥೨೦॥

ಈ ರೀತಿಯಲ್ಲಿ ಯೋಗಯುಕ್ತವಾದ ಮನಸ್ಸಿನ ಮೂಲಕವಾಗಿ ಪ್ರಾಪ್ತವಾಗುವ ಜ್ಞಾನವನ್ನು ಅಂತ್ಯಕಾಲದಲ್ಲಿ ಸಂಪೂರ್ಣವಾದ ಶಕ್ತಿಯನ್ನು ಯೋಜಿಸಿ ಧೈರ್ಯದಿಂದ ಸ್ವಲ್ಪ-ಸ್ವಲ್ಪವಾಗಿ ಸ್ಮರಣೆಗೆ ತಂದುಕೊಳ್ಳಬೇಕು.

ರಜೋವರ್ಜ್ಯೋಽಪ್ಯಯಂ ದೇಹೀ ದೇಹವಾಞ್ಛಬ್ದವಚ್ಚರೇತ್ ।
ಕಾರ್ಯೈರವ್ಯಾಹತಮತಿರ್ವೈರಾಗ್ಯಾತ್ಪ್ರಕೃತೌ ಸ್ಥಿತಃ ॥೨೧॥

ಯೋಗಪರಾಯಣನಾದ ಯೋಗಿಯ ಬುದ್ಧಿಯು ಕಾರ್ಯಗಳಿಂದ ತಡೆಯಲ್ಪಡುವುದಿಲ್ಲ. ಪ್ರಾಪಂಚಿಕಕಾರ್ಯಗಳಲ್ಲಿ ಪ್ರವರ್ತಿಸುವುದಿಲ್ಲ. ಅವ್ಯಾಹತವಾಗಿ ಪರಬ್ರಹ್ಮವಸ್ತುವಿನ ಕಡೆಗೇ ಹೋಗುತ್ತಿರುತ್ತದೆ. ವೈರಾಗ್ಯದ ಕಾರಣದಿಂದ ಅವನು ಸ್ವಸ್ವಭಾವದಲ್ಲಿ ಪ್ರತಿಷ್ಠಿತನಾಗಿರುತ್ತಾನೆ. ರಜೋಗುಣ

ವರ್ಜಿತನಾಗಿದ್ದರೂ ದೇಹಧಾರಿಯಾಗಿರುವುದರಿಂದ ಶಬ್ದದಂತೆ ತಡೆಯಲ್ಪಡದ ಗತಿಯುಳ್ಳವನಾಗಿ ಲೋಕದಲ್ಲಿ ಸಂಚರಿಸುತ್ತಿರುತ್ತಾನೆ.

ಆದೇಹಾದಪ್ರಮಾದಾಚ್ಚ ದೇಹಾನ್ತಾದ್ವಿಪ್ರಮುಚ್ಯತೇ ।
ಹೇತುಯುಕ್ತಃ ಸದಾ ಸರ್ಗೋ ಭೂತಾನಾಂ ಪ್ರಲಯಸ್ತಥಾ ॥೨೨॥

ದೇಹತ್ಯಾಗದವರೆಗೂ ಸಾವಧಾನನಾಗಿರುವ ಯೋಗಿಯು ದೇಹಾವಸಾನವಾದ ಮೇಲೆ ಪೂರ್ಣವಾಗಿ ವಿಮುಕ್ತನಾಗುತ್ತಾನೆ. ಪ್ರಾಣಿಗಳ ಹುಟ್ಟು-ಸಾವುಗಳು ಯಾವಾಗಲೂ ಅಜ್ಞಾನವೆಂಬ ಕಾರಣದಿಂದ ಕೂಡಿರುತ್ತದೆ. (ಅಜ್ಞಾನದಿಂದ ಕೂಡಿರುವ ಪ್ರಾಣಿಗಳಿಗೆ ಹುಟ್ಟು-ಸಾವುಗಳು ತಪ್ಪಿದ್ದಲ್ಲ.)

ಪರಪ್ರತ್ಯಯಸರ್ಗೇ ತು ನಿಯತಿರ್ನಾನುವರ್ತತೇ ।
ಭಾವಾನ್ತಪ್ರಭವಪ್ರಜ್ಞಾ ಆಸತೇ ಯೇ ವಿಪರ್ಯಯಮ್ ॥೨೩॥

ಪರಮಾತ್ಮನ ಸಾಕ್ಷಾತ್ಕಾರವಾದ ಬಳಿಕ ಪ್ರಾರಬ್ಧಕರ್ಮಗಳು ಅವನನ್ನು ಅನುಸರಿಸಿ ಹೋಗುವುದಿಲ್ಲ. ಇದಕ್ಕೆ ವಿಪರೀತವಾಗಿ ಅನಾತ್ಮವಸ್ತುಗಳಾದ ದೇಹಾದಿಗಳಲ್ಲಿಯೇ ಆತ್ಮಭಾವವಿರುವವನು ಪ್ರಾರಬ್ಧಾಧೀನಗಳಾದ ಹುಟ್ಟು-ಸಾವುಗಳ ಸುಳಿಯಲ್ಲಿ ಸಿಕ್ಕಿಬೀಳುತ್ತಾನೆ.

ಧೃತ್ಯಾ ದೇಹಾನ್ಧಾರಯನ್ತೋ ಬುದ್ಧಿಸಂಕ್ಷಿಪ್ತಚೇತಸಃ ।
ಸ್ಥಾನೇಭ್ಯೋ ಧ್ವಂಸಮಾನಾಶ್ಚ ಸೂಕ್ಷ್ಮತ್ವಾತ್ತದುಪಾಸತೇ ॥೨೪॥

ಕೆಲವು ಯೋಗಿಗಳು ಧೃತಿ (ಧಾರಣೆ) ಯಿಂದ ಮನಸ್ಸನ್ನು ಬುದ್ಧಿಯಲ್ಲಿ ಲಯಗೊಳಿಸಿ ದೇಹವನ್ನು ಧರಿಸಿಕೊಂಡೇ ಪ್ರಾಣೇಂದ್ರಿಯಾದಿ ಸ್ಥಾನಗಳನ್ನು ದಾಟಿ ಅದಕ್ಕಿಂತಲೂ ಸೂಕ್ಷ್ಮರಾಗಿ ಆ ಪರಬ್ರಹ್ಮನನ್ನು ಉಪಾಸನೆ ಮಾಡುತ್ತಾರೆ. (ಇವರು ಜೀವನ್ಮುಕ್ತರು.)

ಯಥಾಗಮಂ ಚ ಗತ್ವಾ ವೈ ಬುದ್ಧ್ಯಾ ತತ್ರೈವ ಬುಧ್ಯತೇ ।
ದೇಹಾನ್ತಂ ಕಶ್ಚಿದನ್ವಾಸ್ತೇ ಭಾವಿತಾತ್ಮಾ ನಿರಾಶ್ರಯಮ್ ॥೨೫॥

ಇನ್ನೂ ಕೆಲವರು ಶಾಸ್ತ್ರವು ಹೇಳಿರುವ ಕ್ರಮದಿಂದ ಬುದ್ಧಿಯಿಂದ ಆ ಬ್ರಹ್ಮಸ್ಥಾನಕ್ಕೆ ಹೋಗಿ ಅಲ್ಲಿಯೇ (ಆ ಬುದ್ಧಿಗುಹೆಯಲ್ಲಿಯೇ)

ಅದನ್ನರಿತು ದೇಹಾವಸಾನದಲ್ಲಿ ಆತ್ಮಭಾವನೆಯುಳ್ಳವರಾಗಿ ನಿರಾಲಂಬನ ಭಾವದಿಂದ ಆ ಬ್ರಹ್ಮನನ್ನು ಹೊಂದುತ್ತಾರೆ. (ಇವರು ವಿದೇಹಮುಕ್ತರು.)

ಯುಕ್ತಂ ಧಾರಣಯಾ ಸಮ್ಯಕ್ತತಃ ಕೇಚಿದುಪಾಸತೇ ।
ಅಭ್ಯಸ್ಯನ್ತಿ ಪರಂ ದೇವಂ ವಿದ್ಯುತ್ಸಂಶಬ್ದಿತಾಕ್ಷರಮ್ ॥೨೮॥

ಮತ್ತೆ ಕೆಲವರು ಧಾರಣಾಯೋಗದಿಂದ ಪರಮಾತ್ಮನನ್ನು ಶುಭಾಲಂಬನಮೂರ್ತಿಯನ್ನಾಗಿ ಮಾಡಿಕೊಂಡು ಚೆನ್ನಾಗಿ ಉಪಾಸನೆಮಾಡುತ್ತಾರೆ. ಕೆಲವು ಯೋಗಿಗಳು 'ವಿದ್ಯುತ್'–ಎಂದು ಕರೆಯಲ್ಪಡುವ ವಿದ್ಯುಲ್ಲೇಖೆಯಂತೆ ಭಾಸಮಾನವಾಗಿರುವ ಆ ಅಕ್ಷರಬ್ರಹ್ಮನನ್ನು ಉಪಾಸನೆ ಮಾಡುತ್ತಾರೆ. ತಪಸ್ಸಿನಿಂದ ಪಾಪಗಳನ್ನು ಸುಟ್ಟುಹಾಕಿಕೊಂಡ ಆ ಮಹಾತ್ಮರೂ ಅವಸಾನಕಾಲದಲ್ಲಿ ಪರಮಾತ್ಮನನ್ನು ಉಪಾಸನೆಮಾಡುತ್ತಾರೆ. ಅವರೆಲ್ಲರೂ ಮಹಾತ್ಮರು. ಅವರೆಲ್ಲರೂ ಪರಮಗತಿಯನ್ನೇ ಹೊಂದುತ್ತಾರೆ.

(೨೬ನೆಯ ಶ್ಲೋಕವು ಜೀವನ್ಮುಕ್ತರನ್ನು ಹೇಳುತ್ತದೆ. ದೇಹವಿದ್ದರೂ ದೇಹಾತಿರಿಕ್ತವಾದ ಆತ್ಮಸ್ಥಾನಕ್ಕೆ ಹತ್ತಿ ಮುಕ್ತಿಸುಖವನ್ನು ಅನುಭವಿಸುವವರು ಇವರು. ೨೭ನೆಯ ಶ್ಲೋಕವು ಮನಸ್ಸಿಗೆ ಇರುವ ಎಲ್ಲ ಆಲಂಬನೆಗಳನ್ನೂ ತಪ್ಪಿಸಿ ಸ್ವರೂಪವಾಗಿ ಉಳಿಯುವ ಬ್ರಹ್ಮಭಾವನೆಮಾಡುತ್ತಾ ದೇಹವನ್ನು ತ್ಯಜಿಸಿ ಪರಮಪದವನ್ನು ಹೊಂದುವ ವಿದೇಹಮುಕ್ತರನ್ನು ಹೇಳುತ್ತದೆ. ೨೮ನೆಯ ಶ್ಲೋಕವು ಪರಮಾತ್ಮನನ್ನು ಶುಭಾಶ್ರಯಮೂರ್ತಿಯನ್ನಾಗಿ ಧ್ಯಾನಿಸುವವರನ್ನೂ ಮತ್ತು ವಿದ್ಯುಲ್ಲೇಖಾರೂಪದಲ್ಲಿ ಕೇವಲ ಜ್ಯೋತಿಯನ್ನಾಗಿ ಅವನನ್ನು ಧ್ಯಾನಿಸುವವರನ್ನೂ ಹೇಳುತ್ತದೆ. ಇವರೆಲ್ಲರೂ ತಪಸ್ಸಿನಿಂದ ನಷ್ಟವಾದ ಪಾಪವುಳ್ಳವರು. ಎಲ್ಲರೂ ಪರಮಪದವನ್ನು ಹೊಂದುವವರು.)

ಅನ್ತಕಾಲೇ ಹ್ಯುಪಾಸನ್ನಾಸ್ತಪಸಾ ದಗ್ಧಕಿಲ್ಬಿಷಾಃ ।
ಸರ್ವ ಏತೇ ಮಹಾತ್ಮಾನೋ ಗಚ್ಛನ್ತಿ ಪರಮಾಂ ಗತಿಮ್ ॥೨೭॥

ತಪಸ್ಸಿನಿಂದ ಪಾಪಗಳನ್ನು ಕಳೆದುಕೊಂಡ ಯೋಗಿಗಳು ಅಂತಕಾಲದಲ್ಲಿ ಬ್ರಹ್ಮೋಪಾಸನೆಯನ್ನು ಮಾಡುತ್ತಾರೆ. ಈ ಎಲ್ಲ ಮಹಾತ್ಮರೂ ಉತ್ತಮಗತಿಯನ್ನೇ ಹೊಂದುತ್ತಾರೆ.

ಸೂಕ್ಷ್ಮಂ ವಿಶೇಷಣಂ ತೇಷಾಮವೇಕ್ಷೇಚ್ಛಾಸ್ತ್ರಚಕ್ಷುಷಾ ।
ದೇಹಾನ್ತಂ ಪರಮಂ ವಿದ್ಯಾದ್ವಿಮುಕ್ತಮಪರಿಗ್ರಹಮ್ ।
ಅನ್ತರಿಕ್ಷಾದನ್ಯತರಂ ಧಾರಣಾಸಕ್ತಮಾನಸಮ್ ॥೨೮॥

ಶಾಸ್ತ್ರದೃಷ್ಟಿಯಿಂದ ಯೋಗಿಗಳಲ್ಲಿರುವ ಸೂಕ್ಷ್ಮವಾದ ವಿಶೇಷವನ್ನು ಕಾಣಬಹುದಾಗಿದೆ. ಅಂತಹ ಯೋಗಿಯು ಆಕಾಶಕ್ಕಿಂತಲೂ ವಿಲಕ್ಷಣನಾದ, ಅವ್ಯಕ್ತನೂ–ಲಯಕ್ಕೆ ಅಧಿಷ್ಠಾನವೂ ಆದ ಪರಬ್ರಹ್ಮವಸ್ತುವನ್ನೇ ಪರಮ ಶ್ರೇಷ್ಠವಾದುದೆಂದು ತಿಳಿದುಕೊಂಡಿರುತ್ತಾನೆ. ರಜಸ್ತಮೋಗುಣಗಳಿಂದ ಮುಕ್ತನಾಗಿರುತ್ತಾನೆ. ಯಾವ ವಿಧವಾದ ಪರಿಗ್ರಹವನ್ನೂ ಮಾಡುವುದಿಲ್ಲ. ಯಾವಾಗಲೂ ಧ್ಯಾನ-ಧಾರಣೆಗಳಲ್ಲಿಯೇ ಆಸಕ್ತವಾದ ಮನಸ್ಸುಳ್ಳವನಾಗಿರುತ್ತಾನೆ.

ಮರ್ತ್ಯಲೋಕಾದ್ವಿಮುಚ್ಯನ್ತೇ ವಿದ್ಯಾಸಂಸಕ್ತಚೇತಸಃ ।
ಬ್ರಹ್ಮಭೂತಾ ವಿರಜಸಸ್ತತೋ ಯಾನ್ತಿ ಪರಾಂ ಗತಿಮ್ ॥೨೯॥

ಯಾರ ಮನಸ್ಸು ಜ್ಞಾನದಲ್ಲಿಯೇ ಆಸಕ್ತವಾಗಿರುವುದೋ–ಅವರು ಮರ್ತ್ಯಲೋಕದ ಬಂಧನದಿಂದ ವಿಮುಕ್ತರಾಗುತ್ತಾರೆ. ರಜೋಗುಣದಿಂದ ರಹಿತರಾಗಿ ಬ್ರಹ್ಮಸ್ವರೂಪರಾಗಿ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾರೆ.

ಏವಮೇಕಾಯನಂ ಧರ್ಮಮಾಹುರ್ವೇದವಿದೋ ಜನಾಃ ।
ಯಥಾಜ್ಞಾನಮುಪಾಸನ್ತಃ ಸರ್ವೇ ಯಾನ್ತಿ ಪರಾಂ ಗತಿಮ್ ॥೩೦॥

ವೇದವಿದರಾದ ವಿದ್ವಾಂಸರು–ಬ್ರಹ್ಮಪ್ರಾಪ್ತಿಗೆ ಸಾಧನಭೂತವಾದ *ಏಕಾಯನಧರ್ಮವನ್ನು ಹೀಗೆ ಹೇಳಿರುತ್ತಾರೆ. ತಮ್ಮ-ತಮ್ಮ ಜ್ಞಾನಕ್ಕೆ ಅನುಸಾರವಾಗಿ ಉಪಾಸನೆಯನ್ನು ಮಾಡುವ ಎಲ್ಲ ಸಾಧಕರೂ ಪರಮಗತಿಯನ್ನೇ ಹೊಂದುತ್ತಾರೆ.

ಕಷಾಯವರ್ಜಿತಂ ಜ್ಞಾನಂ ಯೇಷಾಮುತ್ಪದ್ಯತೇ ಚಲಮ್ ।
ಯಾನ್ತಿ ತೇಽಪಿ ಪರಾಲ್ಲೋಕಾನ್ವಿಮುಚ್ಯನ್ತೇ ಯಥಾ ಬಲಮ್ ॥೩೧॥

---

* ಏಕಾಯನಧರ್ಮ : ಮೋಕ್ಷಕ್ಕೆ ಸಾಧಕವಾಗುವ ಏಕಮಾತ್ರಧರ್ಮ ಅಥವಾ ಏಕಾಯನಶಾಖೆಯೆಂದು ಪ್ರಸಿದ್ಧವಾಗಿರುವ ಪಾಂಚರಾತ್ರಧರ್ಮ.

ಯಾರು ರಾಗ-ದ್ವೇಷಗಳಿಂದ ವಿವರ್ಜಿತರಾಗಿದ್ದರೂ ಚಂಚಲವಾದ ಜ್ಞಾನವನ್ನು ಹೊಂದಿರುವರೋ–ಅಂತಹವರೂ ಶ್ರೇಷ್ಠವಾದ ಲೋಕಗಳಿಗೆ ಹೋಗುತ್ತಾರೆ. ಜನ್ಮಾಂತರದಲ್ಲಿ ಸಾಧನೆಯ ಬಲದಿಂದ ಪೂರ್ಣಜ್ಞಾನವನ್ನು ಪಡೆದು ಸಂಸಾರಬಂಧನದಿಂದ ವಿಮುಕ್ತರಾಗುತ್ತಾರೆ.

ಭಗವನ್ತಮಜಂ ದಿವ್ಯಂ ವಿಷ್ಣುಮವ್ಯಕ್ತಸಂಜ್ಞಿತಮ್ ।
ಭಾವೇನ ಯಾನ್ತಿ ಶುದ್ಧಾ ಯೇ ಜ್ಞಾನತೃಪ್ತಾ ನಿರಾಶಿಷಃ ॥೩೨॥

ಜ್ಞಾತ್ವಾತ್ಮಸ್ಥಂ ಹರಿಂ ಚೈವ ನ ನಿವರ್ತನ್ತಿ ತೇಽವ್ಯಯಾಃ ।
ಪ್ರಾಪ್ಯ ತತ್ಪರಮಂ ಸ್ಥಾನಂ ಮೋದನ್ತೇಽಕ್ಷರಮವ್ಯಯಮ್ ॥೩೩॥

ಷಡ್ಗುಣೈಶ್ವರ್ಯಸಂಪನ್ನನೂ, ಜನ್ಮರಹಿತನೂ, ದಿವ್ಯನೂ, ಅವ್ಯಕ್ತವೆಂಬ ಹೆಸರುಳ್ಳವನೂ ಆಗಿರುವ ಮಹಾವಿಷ್ಣುವನ್ನು ಶುದ್ಧರೂ, ಜ್ಞಾನತೃಪ್ತರೂ, ಆಶಾರಹಿತರೂ ಆದ ಯಾವ ಮಹಾತ್ಮರು ಭಕ್ತಿಭಾವದಿಂದ ಶರಣುಹೊಂದುತ್ತಾರೆಯೋ–ಅವರು ತಮ್ಮೊಳಗೇ ಆ ಹರಿಯನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ನಾಶರಹಿತವಾದ ಸ್ಥಾನವನ್ನು ಪಡೆದ ಅವರು ಪುನರ್ಜನ್ಮಕ್ಕೆ ಹಿಂದಿರುಗುವುದಿಲ್ಲ. ಅಕ್ಷರವೂ ಅವ್ಯಯವೂ ಆದ ಆ ಪರಮಪದವನ್ನು ಹೊಂದಿ ಅಲ್ಲಿ ಆನಂದಿಗಳಾಗಿರುತ್ತಾರೆ.

ಏತಾವದೇತದ್ವಿಜ್ಞಾನಮೇತದಸ್ತಿ ಚ ನಾಸ್ತಿ ಚ ।
ತೃಷ್ಣಾಬದ್ಧಂ ಜಗತ್ಸರ್ವಂ ಚಕ್ರವತ್ಪರಿವರ್ತತೇ ॥೩೪॥

ಯುಧಿಷ್ಠಿರ! ಇಷ್ಟು ಅಧ್ಯಾತ್ಮದ ವಿಜ್ಞಾನವಾಗಿದೆ. ಈ ವಿಜ್ಞಾನವು ಇದೆ ಮತ್ತು ಇಲ್ಲ ಹೀಗೆ ಎರಡು ಪ್ರಕಾರವಾಗಿಯೂ ಇದೆ. (ಜ್ಞಾನಿಗಳ ದೃಷ್ಟಿಯಿಂದ ಇದು ಇದೆ. ಅಜ್ಞಾನಿಗಳ ದೃಷ್ಟಿಯಿಂದ ಇದು ಇಲ್ಲ.) ಈ ಪ್ರಪಂಚವು ಆಶೆಯೆಂಬ ಪಾಶದಿಂದ ನಿಬದ್ಧವಾಗಿ ಚಕ್ರದಂತೆ ತಿರುಗುತ್ತಿರುತ್ತದೆ.

ಬಿಸತನ್ತುರ್ಯಥೈವಾಯಮನ್ತಸ್ಥಃ ಸರ್ವತೋ ಬಿಸೇ ।
ತೃಷ್ಣಾತನ್ತುರನಾದ್ಯನ್ತಸ್ತಥಾ ದೇಹಗತಃ ಸದಾ ॥೩೫॥

ಕಮಲದ ನಾಳದಲ್ಲಿರುವ ತಂತುವು ಯಾವ ರೀತಿಯಲ್ಲಿ ನಾಳದ ಎಲ್ಲ ಕಡೆಗಳಲ್ಲಿಯೂ ಹರಡಿಕೊಂಡಿರುವುದೋ–ಅದೇ ರೀತಿಯಲ್ಲಿ ಆದಿ ಮತ್ತು

ಅಂತ್ಯಗಳಿಲ್ಲದ ತೃಷ್ಣಾತಂತುವು ದೇಹಧಾರಿಯ ಮನಸ್ಸನ್ನು ಸರ್ವಕಾಲ ದಲ್ಲಿಯೂ ವ್ಯಾಪಿಸಿರುತ್ತದೆ.

ಸೂಚ್ಯಾ ಸೂತ್ರಂ ಯಥಾ ವಸ್ತ್ರೇ ಸಂಸಾರಯತಿ ವಾಯಕಃ ।
ತದ್ವತ್ಸಂಸಾರಸೂತ್ರಂ ಹಿ ತೃಷ್ಣಾಸೂಚ್ಯಾ ನಿಬದ್ಧ್ಯತೇ ॥೩೬॥

ನೇಯ್ಗೆಯವನು ಯಾವ ರೀತಿಯಲ್ಲಿ ಸೂಜಿಯ (ಲಾಳಿಯ) ಮೂಲಕವಾಗಿ ದಾರವನ್ನು ವಸ್ತ್ರದಲ್ಲಿ ತೂರಿಸುವನೋ–ಅದೇ ರೀತಿಯಲ್ಲಿ ತೃಷ್ಣಾ ಎಂಬ ಲಾಳಿಯಿಂದ ಸಂಸಾರರೂಪದ ಸೂತ್ರವು ಜೋಡಿಸಲ್ಪಡು ತ್ತದೆ.

ವಿಕಾರಂ ಪ್ರಕೃತಿಂ ಚೈವ ಪುರುಷಂ ಚ ಸನಾತನಮ್ ।
ಯೋ ಯಥಾವದ್ವಿಜಾನಾತಿ ಸ ವಿತೃಷ್ಣೋ ವಿಮುಚ್ಯತೇ ॥೩೭॥

ಪ್ರಕೃತಿಯನ್ನೂ (ಅವ್ಯಕ್ತವನ್ನೂ), ಪ್ರಕೃತಿಯ ವಿಕಾರವನ್ನೂ (ವ್ಯಕ್ತ ವನ್ನೂ), ಪುರುಷನನ್ನೂ (ಜೀವಾತ್ಮನನ್ನೂ), ಸನಾತನವಾದ ಪರಬ್ರಹ್ಮವಸ್ತು ವನ್ನೂ ಯಥಾವತ್ತಾಗಿ ಯಾವನು ತಿಳಿದಿರುವನೋ–ಅವನು ತೃಷ್ಣೆಯಿಂದ ರಹಿತನಾಗಿ ಸಂಸಾರಬಂಧನದಿಂದ ವಿಮುಕ್ತನಾಗುತ್ತಾನೆ.

ಪ್ರಕಾಶಂ ಭಗವಾನೇತದೃಷಿರ್ನಾರಾಯಣೋಽಮೃತಮ್ ।
ಭೂತಾನಾಮನುಕಮ್ಪಾರ್ಥಂ ಜಗಾದ ಜಗತೋ ಗತಿಃ ॥೩೮॥

ಪ್ರಪಂಚಕ್ಕೇ ಏಕೈಕಶರಣ್ಯನಾದ ಋಷಿಶ್ರೇಷ್ಠನಾದ ಭಗವಾನ್ ನಾರಾಯಣನು–ಪ್ರಾಣಿಗಳ ವಿಷಯದಲ್ಲಿ ದಯೆತೋರುವ ಸಲುವಾಗಿ ಅಮೃತಮಯವಾದ ಈ ಅಧ್ಯಾತ್ಮಜ್ಞಾನವನ್ನು ಪ್ರಕಾಶಗೊಳಿಸಿದನು.”

ಽ೧೧೭ನೆಯ ಅಧ್ಯಾಯವು ಮುಗಿಯಿತು.

೨೧೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜನಕರಾಜನ ಆಸ್ಥಾನಕ್ಕೆ ಪಂಚಶಿಖನ ಆಗಮನ : ನಾಸ್ತಿಕಮತವನ್ನು ಖಂಡಿಸಿ ಶರೀರಕ್ಕಿಂತಲೂ ಭಿನ್ನನಾದ ಆತ್ಮನ ಪ್ರತಿಪಾದನೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕೇನ ವೃತ್ತೇನ ವೃತ್ತಜ್ಞ್ಞ ಜನಕೋ ಮಿಥಿಲಾಧಿಪಃ ।
ಜಗಾಮ ಮೋಕ್ಷಂ ಮೋಕ್ಷಜ್ಞೋ ಭೋಗಾನುತ್ಸೃಜ್ಯ ಮಾನುಷಾನ್ ॥೧॥

"ಸದಾಚಾರಗಳನ್ನು ತಿಳಿದಿರುವ ಪಿತಾಮಹನೇ! ಮೋಕ್ಷಧರ್ಮವನ್ನು ತಿಳಿದಿದ್ದ ಮಿಥಿಲಾದೇಶದ ರಾಜನಾದ ಜನಕನು ಮಾನವಸುಖೋಪ ಭೋಗಗಳೆಲ್ಲವನ್ನೂ ಪರಿತ್ಯಜಿಸಿ ಯಾವ ವಿಧವಾದ ಆಚರಣೆಯಿಂದ ಮೋಕ್ಷವನ್ನು ಪಡೆದನು? ಈ ವಿಷಯವನ್ನು ನನಗೆ ತಿಳಿಸು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಧರ್ಮಜ್ಞನಾದ ಜನಕನು ಯಾವ ವಿಧವಾದ ಆಚರಣೆಯಿಂದ ಮಹಾಸುಖರೂಪವಾದ ಮೋಕ್ಷವನ್ನು ಪಡೆದನೆಂಬ ವಿಷಯದಲ್ಲಿ ವಿದ್ವಾಂಸರು ಪುರಾತನವಾದ ಇತಿಹಾಸವನ್ನು ಉದಾಹರಿಸು ತ್ತಾರೆ.

ಹಿಂದೆ ಮಿಥಿಲಾಪಟ್ಟಣದಲ್ಲಿ ಜನಕವಂಶೀಯನಾದ ಜನದೇವನೆಂಬ ರಾಜನು ರಾಜ್ಯವನ್ನಾಳುತ್ತಿದ್ದನು. ಅವನು ಯಾವಾಗಲೂ ದೇಹತ್ಯಾಗದ ನಂತರ * ಊರ್ಧ್ವದೇಹಸಂಬಂಧವಾದ ಧರ್ಮಗಳ ಚಿಂತನೆಯಲ್ಲಿಯೇ (ಅಧ್ಯಾತ್ಮಚಿಂತನದಲ್ಲಿಯೇ) ಆಸಕ್ತನಾಗಿರುತ್ತಿದ್ದನು. ಅವನ ಅರಮನೆ

---

* ಔರ್ಧ್ವದೇಹಿಕಧರ್ಮಾಣಾಂ – ಎಂಬುದಕ್ಕೆ ವ್ಯಾಖ್ಯಾನಕಾರರು ಊರ್ಧ್ವಂ ದೇಹಾತ್ ಇತ್ಯೂರ್ಧ್ವದೇಹಂ.= ಅಶರೀರಂ–ಬ್ರಹ್ಮ । ದೇಹದ ಮೇಲಿರುವುದು ಅಶರೀರ ಬ್ರಹ್ಮ. ತತ್ಪ್ರಾಪ್ತಿಕರಾಣಾಂ ಧರ್ಮಾಣಾಂ ಚಿನ್ತನೇ ಯುಕ್ತಂ–ಬ್ರಹ್ಮಪ್ರಾಪ್ತಿಗೆ ಸಾಧನಭೂತವಾದ ಧರ್ಮಗಳ ಚಿಂತನೆಯಲ್ಲಿ ಯುಕ್ತನಾಗಿದ್ದನು–ಎಂದು ಅರ್ಥಮಾಡಿರುತ್ತಾರೆ.

ಯಲ್ಲಿ ಬೇರೆ-ಬೇರೆಯ ಆಶ್ರಮಗಳಲ್ಲಿ ವಾಸಮಾಡುತ್ತಿದ್ದ, ಭಿನ್ನ-ಭಿನ್ನವಾದ ಧರ್ಮಗಳನ್ನು ಸತತವಾಗಿ ಉಪದೇಶಿಸುತ್ತಿದ್ದ ನೂರು ಮಂದಿ ಆಚಾರ್ಯರು ವಾಸಮಾಡುತ್ತಿದ್ದರು.

'ಈ ಶರೀರವು ನಾಶವಾದ ಬಳಿಕ ಜೀವಕ್ಕೆ ಅಸ್ತಿತ್ವವಿರುವುದೇ – ಇಲ್ಲವೇ? ಅಥವಾ ದೇಹತ್ಯಾಗಾನಂತರದಲ್ಲಿ ಪುನರ್ಜನ್ಮವುಂಟೇ – ಇಲ್ಲವೇ?' – ಎಂಬ ವಿಷಯವಾಗಿ ನೂರು ಮಂದಿ ಆಚಾರ್ಯರೂ ಹೇಳುತ್ತಿದ್ದ ಸಿದ್ಧಾಂತವೂ, ಆತ್ಮತತ್ತ್ವದ ವಿಷಯವಾಗಿ ಅವರು ಮಾಡುತ್ತಿದ್ದ ಉಪದೇಶವೂ ಶಾಸ್ತ್ರಾನುಯಾಯಿಯಾದ ಜನದೇವನಿಗೆ ವಿಶೇಷವಾದ ಸಂತೋಷವನ್ನೇನೂ ಉಂಟುಮಾಡುತ್ತಿರಲಿಲ್ಲ.

ಹೀಗೆಯೇ ಇರುತ್ತಿರಲಾಗಿ ಒಮ್ಮೆ ಕಪಿಲೆಯ ಮಗನಾದ, ಮಹಾ ಮುನಿಯಾದ ಪಂಚಶಿಖನು ಭೂಮಂಡಲವನ್ನು ಸಮಗ್ರವಾಗಿ ಸುತ್ತುತ್ತಾ ಮಿಥಿಲಾಪಟ್ಟಣಕ್ಕೂ ಆಗಮಿಸಿದನು. ಪಂಚಶಿಖನು ಎಲ್ಲ ಸಂನ್ಯಾಸಧರ್ಮ ಗಳನ್ನೂ ತಿಳಿದವನಾಗಿದ್ದನು. ತತ್ತ್ವಜ್ಞಾನದ ನಿರ್ಣಯದಲ್ಲಿ ನಿಷ್ಕೃಷ್ಟವಾಗಿ 'ಇದಮಿತ್ಥಂ' 'ಇದು ಹೀಗೆಯೇ ಸರಿ'–ಎಂದು ಹೇಳುವ ಸಾಮರ್ಥ್ಯವನ್ನು ಹೊಂದಿದ್ದನು. ಶೀತೋಷ್ಣ, ಸುಖ-ದುಃಖಾದಿ ದ್ವಂದ್ವಗಳಿಂದ ಅತೀತ ನಾಗಿದ್ದನು. ಅವನಿಗೆ ಯಾವುದರಲ್ಲಿಯೂ ಸಂಶಯವೆಂಬುದೇ ಇರಲಿಲ್ಲ. ಅವನು ಋಷಿಗಳಲ್ಲಿ ಅದ್ವಿತೀಯನೆಂಬ ಖ್ಯಾತಿಯನ್ನು ಪಡೆದಿದ್ದನು. ಅವನಿಗೆ ಸಮಾನರಾದವರೇ ಇರಲಿಲ್ಲ. ಕಾಮನೆಗಳಿಂದ ಶೂನ್ಯನಾಗಿದ್ದನು. ಅವನು ಮನುಷ್ಯರ ಹೃದಯದಲ್ಲಿ ತನ್ನ ಉಪದೇಶದ ಮೂಲಕವಾಗಿ ಅತ್ಯಂತದುರ್ಲಭವಾದ, ಶಾಶ್ವತವಾದ ಸುಖವನ್ನು ಪ್ರತಿಷ್ಠಾಪಿಸಬೇಕೆಂಬ ಇಚ್ಛೆಯುಳ್ಳವನಾಗಿದ್ದನು.

ಯಮಾಹುಃ ಕಪಿಲಂ ಸಾಂಖ್ಯಾಃ ಪರಮರ್ಷಿಂ ಪ್ರಜಾಪತಿಮ್ ।
ಸ ಮನ್ಯೇ ತೇನ ರೂಪೇಣ ವಿಸ್ಮಾಪಯತಿ ಹಿ ಸ್ವಯಮ್ ॥೯॥

ಸಾಂಖ್ಯರು ಯಾವನನ್ನು ಪರಮರ್ಷಿಯೂ, ಪ್ರಜಾಪತಿಯೂ ಆದ 'ಕಪಿಲ' ಎನ್ನುತ್ತಾರೆಯೋ–ಆ ಭಗವಾನ್ ಕಪಿಲನೇ ಸ್ವಯಂ ಪಂಚಶಿಖ

ನಾಗಿ ಅವತರಿಸಿಬಂದು ಲೋಕದ ಜನರನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತಿರುವನೋ ಎಂಬಂತೆ ಕಾಣುತ್ತಿದ್ದನು.

ಆಸುರೇಃ ಪ್ರಥಮಂ ಶಿಷ್ಯಂ ಯಮಾಹುಶ್ಚಿರಜೀವಿನಮ್ ।
ಪಞ್ಚಸ್ರೋತಸಿ ಯಃ ಸತ್ರಮಾಸ್ತೇ ವರ್ಷಸಹಸ್ರಿಕಮ್ ॥೧೦॥

ಪಂಚಶಿಖನು ಆಸುರಿಮುನಿಯ ಪ್ರಥಮಶಿಷ್ಯನಾಗಿದ್ದನು. ಅವನನ್ನು ಚಿರಂಜೀವಿಯೆಂದೂ ಕರೆಯುತ್ತಿದ್ದರು. ಪಂಚಶಿಖನು ಒಂದು ಸಾವಿರ ವರ್ಷಗಳ ಪರ್ಯಂತವಾಗಿ ಪಂಚಸ್ರೋತಸ್ಸಿನಲ್ಲಿ (ಪಂಚೇಂದ್ರಿಯಗಳಿಂದ ಕೂಡಿದ ಮನಸ್ಸಿನಲ್ಲಿ) ಯಜ್ಞವನ್ನು ಮಾಡುತ್ತಿದ್ದನು. (ಮಾನಸಿಕಯಜ್ಞವನ್ನು ಮಾಡುತ್ತಿದ್ದನು.)

ತಂ ಸಮಾಸೀನಮಾಗಮ್ಯ ಕಾಪಿಲಂ ಮಣ್ಡಲಂ ಮಹತ್ ।
ಪಞ್ಚಸ್ರೋತಸಿ ನಿಷ್ಣಾತಃ ಪಞ್ಚರಾತ್ರವಿಶಾರದಃ ॥೧೧॥

ಪಞ್ಚಜ್ಞಃ ಪಞ್ಚಕೃತ್ಪಞ್ಚಗುಣಃ ಪಞ್ಚಶಿಖಃ ಸ್ಮೃತಃ ।
ಪುರುಷಾವಸ್ಥಮವ್ಯಕ್ತಂ ಪರಮಾರ್ಥಂ ನ್ಯವೇದಯತ್ ॥೧೨॥

ಒಮ್ಮೆ ಆಸುರಿಮುನಿಯು ತನ್ನ ಆಶ್ರಮದಲ್ಲಿ ಕುಳಿತಿದ್ದನು. ಆ ಸಮಯದಲ್ಲಿ ಕಪಿಲಮತಾವಲಂಬಿಗಳಾದ ಮುನಿಗಳ ಸಮುದಾಯವು ಅಲ್ಲಿಗೆ ಬಂದು–ಪ್ರತಿಯೊಬ್ಬನ ಅಂತಃಕರಣದಲ್ಲಿಯೂ ಇರುವ ಅವ್ಯಕ್ತವಾದ ಪರಮಾರ್ಥತತ್ತ್ವವನ್ನು ಉಪದೇಶಿಸುವಂತೆ–ಕೇಳಿಕೊಂಡಿತು. ಆ ಮುನಿಗಳ ಸಮುದಾಯದಲ್ಲಿ ಪಂಚಶಿಖನೂ ಇದ್ದನು. ಅವನು ಪ್ರವಾಹರೂಪವಾಗಿರುವ ಮನಸ್ಸಿನ ಊಹಾಪೋಹಗಳಲ್ಲಿ ನಿಷ್ಣಾತನಾಗಿದ್ದನು. ಪಾಂಚರಾತ್ರಾಗಮವನ್ನು ವಿಶೇಷವಾಗಿ ತಿಳಿದುಕೊಂಡಿದ್ದನು. ಶರೀರದಲ್ಲಿರುವ ಅನ್ನಮಯ-ಮನೋಮಯಾದಿ ಐದು ಕೋಶಗಳನ್ನೂ ತಿಳಿದವನಾಗಿದ್ದನು. ಅಭಿಗಮನ, ಉಪಾದಾನ, ಇಜ್ಯಾ, ಅಧ್ಯಯನ, ಯೋಗ–ಎಂಬ ಐದು ಪ್ರಕಾರವಾದ ಉಪಾಸನೆಗಳನ್ನೂ ತಿಳಿದವನಾಗಿದ್ದನು. ಶಮ, ದಮ, ಉಪರತಿ (ವೈರಾಗ್ಯ), ತಿತಿಕ್ಷೆ (ತಾಳ್ಮೆ) ಮತ್ತು ಸಮಾಧಾನ–ಈ ಐದೂ ಗುಣಗಳಿಂದ ಯುಕ್ತನಾಗಿದ್ದನು. ಪಂಚಕೋಶಗಳಿಂದ ಭಿನ್ನನಾಗಿರುವ ಶಿಖಾಸ್ಥಾನೀಯನಾಗಿರುವ ಬ್ರಹ್ಮನನ್ನೂ ಪಂಚಶಿಖನೆಂದು ಕರೆಯುತ್ತಾರೆ.

ಬ್ರಹ್ಮತತ್ತ್ವವನ್ನು ಚೆನ್ನಾಗಿ ತಿಳಿದಿದ್ದ ಋಷಿಗೂ ಪಂಚಶಿಖನೆಂದೇ ಹೆಸರಾಯಿತು.

ಇಷ್ಟಸತ್ರೇಣ ಸಂಸಿದ್ಧೋ ಭೂಯಶ್ಚ ತಪಸಾಸುರಿಃ ।
ಕ್ಷೇತ್ರಕ್ಷೇತ್ರಜ್ಞಯೋರ್ವ್ಯಕ್ತಿಂ ಬುಬುಧೇ ದೇವದರ್ಶನಃ ॥೧೩॥

ಆಸುರಿಮುನಿಯು ತಪೋಬಲದಿಂದ ದಿವ್ಯದೃಷ್ಟಿಯನ್ನು ಪಡೆದಿದ್ದನು. ಜ್ಞಾನಯಜ್ಞದ ಮೂಲಕವಾಗಿ ಸಿದ್ಧಿಯನ್ನು ಪಡೆದಿದ್ದ ಆ ಋಷಿಯು ಕ್ಷೇತ್ರ-ಕ್ಷೇತ್ರಜ್ಞರ ಭೇದವನ್ನು ತಿಳಿದಿದ್ದನು.

ಯತ್ತದೇಕಾಕ್ಷರಂ ಬ್ರಹ್ಮ ನಾನಾರೂಪಂ ಪ್ರದೃಶ್ಯತೇ ।
ಆಸುರಿರ್ಮಣ್ಡಲೇ ತಸ್ಮನ್ಪ್ರತಿಪೇದೇ ತದವ್ಯಯಮ್ ॥೧೪॥

ಯಾವ ಏಕಾಕ್ಷರರೂಪವಾದ (ಓಂಕಾರರೂಪವಾದ) ಅವಿನಾಶಿಯಾದ ಬ್ರಹ್ಮವು ನಾನಾರೂಪಗಳಲ್ಲಿ ಕಾಣುತ್ತಿರುವುದೋ–ಆ ಬ್ರಹ್ಮವಸ್ತುವನ್ನು ಆಸುರಿಮುನಿಯು ತನ್ನ ಬಳಿಗೆ ಬಂದಿದ್ದ ಮುನಿಗಳ ಸಮೂಹದಲ್ಲಿ ಪ್ರತಿಪಾದನೆಮಾಡಿದನು.

ತಸ್ಯ ಪಞ್ಚಶಿಖಃ ಶಿಷ್ಯೋ ಮಾನುಷ್ಯಾ ಪಯಸಾ ಭೃತಃ ।
ಬ್ರಾಹ್ಮಣೀ ಕಪಿಲಾ ನಾಮ ಕಾಚಿದಾಸೀತ್ಕುಟುಮ್ಬಿನೀ ॥೧೫॥

ತಸ್ಯಾಃ ಪುತ್ರತ್ವಮಾಗಮ್ಯ ಸ್ತ್ರಿಯಾಃ ಸ ಪಿಬತಿ ಸ್ತನೌ ।
ತತಃ ಸ ಕಾಪಿಲೇಯತ್ವಂ ಲೇಭೇ ಬುದ್ಧಿಂ ಚ ನೈಷ್ಠಿಕೀಮ್ ॥೧೬॥

ಆಸುರಿಮುನಿಯ ಶಿಷ್ಯನಾದ ಪಂಚಶಿಖನೆಂಬ ಋಷಿಯು ತಾಯಿಯಲ್ಲದ ಬೇರೊಬ್ಬ ಸ್ತ್ರೀಯ ಸ್ತನ್ಯದಿಂದ ಸಾಕಲ್ಪಟ್ಟವನು. ಕಪಿಲಾ ಎಂಬ ಹೆಸರಿನ ಸಂಸಾರಿಣಿಯಾದ ಬ್ರಾಹ್ಮಣಿಯಿದ್ದಳು. ಪಂಚಶಿಖನು ಆ ಹೆಂಗಸನ್ನು ತಾಯಿಯನ್ನಾಗಿ ಭಾವಿಸಿಕೊಂಡು ಅವಳ ಪುತ್ರಭಾವವನ್ನು ಹೊಂದಿ ಅವಳ ಸ್ತನ್ಯವನ್ನು ಪಾನಮಾಡುತ್ತಿದ್ದನು. ಆದುದರಿಂದ ಅವನು ಕಾಪಿಲೇಯನೆಂಬ ನಾಮವನ್ನು ಪಡೆದನು. ಕಾಲಾನುಕ್ರಮದಲ್ಲಿ * ಕಾಪಿಲೇಯನಿಗೆ ಬ್ರಹ್ಮದಲ್ಲಿಯೇ ನಿಷ್ಠೆಯಿರುವ ಬುದ್ಧಿಯೂ ಉಂಟಾಯಿತು.

---

* ಕಪಿಲಮಹರ್ಷಿಯ ಸಿದ್ಧಾಂತದ ಅನುಯಾಯಿಯಾಗಿದ್ದುದರಿಂದಲೂ ಅವನಿಗೆ ಈ ಹೆಸರು ಹೊಂದುತ್ತದೆ.

ಏತನ್ಮೇ ಭಗವಾನಾಹ ಕಾಪಿಲೇಯಸ್ಯ ಸಮ್ಭವಮ್ ।
ತಸ್ಯ ತತ್ಕಾಪಿಲೇಯತ್ವಂ ಸರ್ವವಿತ್ತ್ವಮನುತ್ತಮಮ್ ॥೧೭॥

ಆ ಕಾಪಿಲೇಯನ ಜನ್ಮವೃತ್ತಾಂತವನ್ನು ನನಗೆ ಭಗವಾನ್ ಮಾರ್ಕಂಡೇಯರು ಹೇಳಿದರು. ಪಂಚಶಿಖನು ಕಾಪಿಲೇಯನಾದುದಕ್ಕೆ ಮತ್ತು ಸರ್ವೋತ್ತಮವಾದ ಸರ್ವಜ್ಞತ್ವವನ್ನು ಪಡೆದುದಕ್ಕೆ ಇದು ವಿವರಣೆಯಾಗಿದೆ.

ಸಾಮಾನ್ಯಂ ಜನಕಂ ಜ್ಞಾತ್ವಾ ಧರ್ಮಜ್ಞೋ ಜ್ಞಾನಮುತ್ತಮಮ್ ।
ಉಪೇತ್ಯ ಶತಮಾಚಾರ್ಯಾನ್ಮೋಹಯಾಮಾಸ ಹೇತುಭಿಃ ॥೧೮॥

ಧರ್ಮಜ್ಞನಾದ ಪಂಚಶಿಖನು ಉತ್ತಮವಾದ ಜ್ಞಾನವನ್ನು ಪಡೆದುಕೊಂಡಿದ್ದನು. ಜನಕಜನದೇವನನ್ನು ಸಾಮಾನ್ಯಜ್ಞಾನವಿರುವವನೆಂದೇ ಭಾವಿಸಿ ಅವನೊಡನೆ ವಾದಮಾಡಲು ಹೋಗದೇ, ಅವನ ನೂರು ಆಚಾರ್ಯರ ಬಳಿಗೂ ಹೋಗಿ ಯುಕ್ತಿಯುಕ್ತವಾದ ಮಾತುಗಳಿಂದ ಅವರೆಲ್ಲರನ್ನೂ ಭ್ರಾಂತರನ್ನಾಗಿ ಮಾಡಿದನು.

ಜನಕಸ್ತ್ವಭಿಸಂರಕ್ತಃ ಕಾಪಿಲೇಯಾನುದರ್ಶನಾತ್ ।
ಉತ್ಸೃಜ್ಯ ಶತಮಾಚಾರ್ಯಾನ್ಪೃಷ್ಠತೋಽನುಜಗಾಮ ತಮ್ ॥೧೯॥

ಆ ಸಮಯದಲ್ಲಿ ಜನಕಜನದೇವನು ಕಪಿಲೆಯ ಮಗನಾದ ಪಂಚಶಿಖನ ಅಪಾರಜ್ಞಾನವನ್ನು ನೋಡಿ ತನ್ನ ಆಸ್ಥಾನದಲ್ಲಿದ್ದ ನೂರು ಆಚಾರ್ಯರನ್ನೂ ಪರಿತ್ಯಜಿಸಿ ಪಂಚಶಿಖನನ್ನೇ ಹಿಂಬಾಲಿಸಿ ಹೋದನು.

ತಸ್ಮೈ ಪರಮಕಲ್ಯಾಯ ಪ್ರಣತಾಯ ಚ ಧರ್ಮತಃ ।
ಅಬ್ರವೀತ್ಪರಮಂ ಮೋಕ್ಷಂ ಯತ್ತತ್ಸಾಂಖ್ಯೇಽಭಿಧೀಯತೇ ॥೨೦॥

ಮುನಿಶ್ರೇಷ್ಠನಾದ ಪಂಚಶಿಖನು ಧರ್ಮಾನುಸಾರವಾಗಿ ತನ್ನ ಚರಣಗಳಿಗೆ ನಮಸ್ಕರಿಸಿದ ರಾಜನನ್ನು ನೋಡಿ, ಅವನನ್ನು ಯೋಗ್ಯನಾದ ಮತ್ತು ಸಮರ್ಥನಾದ ಅಧಿಕಾರಿಯೆಂದು ಭಾವಿಸಿ, ಸಾಂಖ್ಯಶಾಸ್ತ್ರದಲ್ಲಿ ಹೇಳಿರುವಂತೆ ಪರಮಮೋಕ್ಷದ ಮಾರ್ಗವನ್ನು ಜನಕಜನದೇವನಿಗೆ ಉಪದೇಶಿಸಿದನು.

***ಜಾತಿನಿರ್ವೇದಮುಕ್ತ್ವಾ ಸ ಕರ್ಮನಿರ್ವೇದಮಬ್ರವೀತ್ ।**
ಕರ್ಮನಿರ್ವೇದಮುಕ್ತ್ವಾ ಚ ಸರ್ವನಿರ್ವೇದಮಬ್ರವೀತ್ ॥೨೧॥

ಪಂಚಶಿಖನು ಜಾತಿವೈರಾಗ್ಯವನ್ನು ವಿವರವಾಗಿ ತಿಳಿಸಿದನಂತರ ಕರ್ಮ ವೈರಾಗ್ಯವನ್ನು ತಿಳಿಸಿದನು. ಕರ್ಮವೈರಾಗ್ಯವನ್ನು ತಿಳಿಸಿದನಂತರ ಸರ್ವ ವೈರಾಗ್ಯವನ್ನೂ ಜನಕಜನದೇವನಿಗೆ ವಿವರಿಸಿ ಹೇಳಿದನು.

ಯದರ್ಥಂ ಧರ್ಮಸಂಸರ್ಗಃ ಕರ್ಮಣಾಂ ಚ ಫಲೋದಯಃ ।
ತಮನಾಶ್ವಾಸಿಕಂ ಮೋಹಂ ವಿನಾಶಿ ಚಲಮಧ್ರುವಮ್ ॥೨೨॥

"ಜನದೇವ! ಫಲದ ಕಾಮನೆಯಿಂದ ಧರ್ಮವನ್ನಾಚರಿಸುವುದು, ಆ ಕರ್ಮಗಳಿಂದ ಫಲವು ಪ್ರಾಪ್ತವಾಗುವುದು–ಇವೆಲ್ಲವೂ ನಶ್ವರಗಳೇ ಆಗಿವೆ. ಕ್ಷಣಕಾಲ ಸುಖವನ್ನುಂಟುಮಾಡತಕ್ಕುವುಗಳು. ಮೋಹರೂಪವಾದ, ಚಂಚಲವಾದ ಮತ್ತು ಅಸ್ಥಿರವಾದ ಈ ಕಾಮ್ಯಕರ್ಮಗಳ ವಿಷಯದಲ್ಲಿ ಆಸ್ಥೆಯನ್ನಿಡುವುದು ಉಚಿತವಲ್ಲ.

ದೃಶ್ಯಮಾನೇ ವಿನಾಶೇ ಚ ಪ್ರತ್ಯಕ್ಷೇ ಲೋಕಸಾಕ್ಷಿಕೇ ।
ಆಗಮಾತ್ಪರಮಸ್ತೀತಿ ಬ್ರುವನ್ನಪಿ ಪರಾಜಿತಃ ॥೨೩॥

ನಿನ್ನ ನೂರು ಮಂದಿ ಆಚಾರ್ಯರಲ್ಲಿ ಒಬ್ಬನು ನನ್ನೊಡನೆ ವಾದ ಮಾಡುವಾಗ ಹೀಗೆ ಹೇಳಿದನು– 'ದೇಹರೂಪಿಯಾದ ಆತ್ಮನ ವಿನಾಶವನ್ನು ಪ್ರತ್ಯಕ್ಷವಾಗಿಯೇ ಕಾಣಬಹುದಾಗಿದೆ. ಲೋಕವೇ ಇದಕ್ಕೆ ಸಾಕ್ಷಿಯಾಗಿದೆ. ಹೀಗಿದ್ದರೂ ಯಾರಾದರೂ ಶಾಸ್ತ್ರಪ್ರಮಾಣವನ್ನು ತೋರಿಸುತ್ತಾ ದೇಹ ದಿಂದ ಭಿನ್ನವಾದ ಆತ್ಮವೆಂಬುದು ಇದೆಯೆಂದು ಹೇಳುವುದಾದರೆ–ಅವನು

---

* ತಾಯಿಯ ಹೊಟ್ಟೆಯಲ್ಲಿದ್ದಾಗ ಗರ್ಭವಾಸದಲ್ಲಿ ಎಷ್ಟೆಷ್ಟು ಯಾತನೆಗಳಾಗುವುವೋ ಅವುಗಳನ್ನು ತಿಳಿದುಕೊಂಡು ವಿಚಾರಮಾಡಿ ಶರೀರದ ಮೇಲೆ ಜುಗುಪ್ಸೆಯನ್ನು ಹೊಂದುವುದು ಜಾತಿನಿರ್ವೇದ. ನಾನಾಯೋನಿಗಳಲ್ಲಿ ಹುಟ್ಟುವುದನ್ನೂ ಮತ್ತು ಪಾಪಕರ್ಮಗಳಿಂದ ಪ್ರಾಪ್ತವಾಗುವ ನರಕದ ಯಾತನೆಯನ್ನೂ ಕೂಲಂಕಷವಾಗಿ ಪರಿಶೀಲಿಸಿ ಕಾಮ್ಯಕರ್ಮಗಳಿಂದ ವಿರತನಾಗುವುದು ಕರ್ಮನಿರ್ವೇದ. ಈ ಜಗತ್ತಿನ ವಸ್ತುಗಳೆಲ್ಲವೂ ಅಶಾಶ್ವತಗಳೆಂಬುದನ್ನೂ–ದುಃಖಜನಕಗಳೆಂಬುದನ್ನೂ ಕೂಲಂಕಷವಾಗಿ ವಿಮರ್ಶಿಸಿ ಎಲ್ಲದರಿಂದಲೂ ವಿರಕ್ತನಾಗುವುದು ಸರ್ವನಿರ್ವೇದ.

ನಿಶ್ಚಯವಾಗಿಯೂ ಪರಾಜಿತನಾಗುತ್ತಾನೆ. ಏಕೆಂದರೆ : ಅವನ ಮಾತು ಲೋಕಾನುಭವಕ್ಕೆ ವಿರುದ್ಧವಾಗಿದೆ.

ಅನಾತ್ಮಾ ಹ್ಯಾತ್ಮನೋ ಮೃತ್ಯುಃ ಕ್ಲೇಶೋ ಮೃತ್ಯುರ್ಜರಾಮಯಃ ।
ಆತ್ಮಾನಂ ಮನ್ಯತೇ ಮೋಹಾತ್ತದಸಮ್ಯಕ್ಪರಂ ಮತಮ್ ॥೨೪॥

ಆತ್ಮಕ್ಕೆ ಸ್ವಸ್ವರೂಪಭೂತವಾದ ಶರೀರದ ವಿನಾಶವೇ ಮೃತ್ಯು–ಎಂದು ಹೇಳಲ್ಪಡುತ್ತದೆ. ದೇಹದೊಡನೆ ಆತ್ಮವೂ ವಿನಾಶಹೊಂದುತ್ತದೆ. ಈ ದೃಷ್ಟಿಯಿಂದ ದುಃಖ, ಮುಪ್ಪು, ನಾನಾವಿಧವಾದ ರೋಗಗಳು –ಇವೆಲ್ಲವೂ ಅಂಶಮಾತ್ರ ಮೃತ್ಯುಗಳು. ಹೀಗಿದ್ದರೂ ಯಾರು ಆತ್ಮನು ಶರೀರಕ್ಕಿಂತಲೂ ಭಿನ್ನನೆಂದು ಭಾವಿಸುವರೋ ಅವರ ಅಭಿಪ್ರಾಯವು ಅತ್ಯಂತ ಅಸಂಗತವಾಗಿದೆ.

ಅಥ ಚೇದೇವಮಪ್ಯಸ್ತಿ ಯಲ್ಲೋಕೇ ನೋಪಪದ್ಯತೇ ।
ಅಜರೋಽಯಮಮೃತ್ಯುಶ್ಚ ರಾಜಾಸೌ ಮನ್ಯತೇ ಯಥಾ ॥೨೫॥

ಲೋಕದಲ್ಲಿ ಎಲ್ಲಿಯೂ ಸಿಕ್ಕದಿರುವ, ಶರೀರದಿಂದ ಭಿನ್ನವಾದ 'ಆತ್ಮಾ' ಎಂಬ ವಸ್ತುವಿಗೂ ಅಸ್ತಿತ್ವವಿರುವುದಾದರೆ, ಶಾಸ್ತ್ರಗಳನ್ನೇ ಆಧರಿಸಿ ಅಂತಹ ಆತ್ಮವನ್ನು ಅಜರ-ಅಮರ ಎಂದು ಹೊಗಳುವುದಾದರೆ, ವಂದಿ-ಮಾಗಧರು ಹೇಳುವಂತೆ ರಾಜನೂ ಅಜರನೂ ಅಮರನೂ ಆಗಬೇಕಾಗುತ್ತದೆ.

(ಶಾಸ್ತ್ರದಲ್ಲಿ ಆತ್ಮಸಂಬಂಧವಾಗಿ ಹೇಳಿರುವುದೆಲ್ಲವೂ ಈ ಶರೀರಕ್ಕೆ ಸಂಬಂಧಿಸಿದ್ದಾಗಿರುವುದೇ ಹೊರತು ಶರೀರಭಿನ್ನನಾದ ಆತ್ಮನಿರುವನೆಂಬ ಅಭಿಪ್ರಾಯದಿಂದಲ್ಲ. ಈ ಶರೀರವನ್ನೇ ಅವರು ಔಪಚಾರಿಕವಾಗಿ ಅಜರ-ಅಮರ ಎಂದು ಹೊಗಳಿದ್ದಾರೆ. ವಂದಿ-ಮಾಗಧರು ರಾಜನನ್ನು ಸರ್ವೇಶ್ವರ-ಸಾರ್ವಭೌಮಾದಿ ಪದಗಳಿಂದ ಹೊಗಳುತ್ತಾರೆ. ಅವನು ಸರ್ವೇಶ್ವರನೂ ಆಗಿರುವುದಿಲ್ಲ. ಸಾರ್ವಭೌಮನೂ ಆಗಿರುವುದಿಲ್ಲ. ಅದು ಔಪಚಾರಿಕವಾದ ಹೊಗಳಿಕೆ. ಅದೇ ರೀತಿಯಲ್ಲಿ ಆತ್ಮದ ವಿಷಯವಾಗಿಯೂ ಅಜರ-ಅಮರ ಎಂದು ಹೇಳಿರುವುದು ಔಪಚಾರಿಕವಾಗಿದೆ. ನೀರೋಗದೃಢವಾದ ಶರೀರಕ್ಕೆ ಅಜರ-ಅಮರ ಎಂದು ಹೇಳಿದ್ದಾರೆ. ಶರೀರಭಿನ್ನವಾದ ಆತ್ಮವೂ ಇಲ್ಲ. ಅದಕ್ಕೆ ಅಂತಹ ಗುಣಗಳೂ ಇಲ್ಲ.)

ಅಸ್ತಿ ನಾಸ್ತೀತಿ ಚಾಪ್ಯೇತತ್ತಸ್ಮಿನ್ನಸತಿ ಲಕ್ಷಣೇ ।
ಕಿಮಧಿಷ್ಠಾಯ ತದ್ಬ್ರೂಯಾಲ್ಲೋಕಯಾತ್ರಾವಿನಿಶ್ಚಯಮ್ ॥೨೬॥

ಆತ್ಮವು ಇದೆ ಅಥವಾ ಇಲ್ಲ–ಎಂಬ ವಿಷಯದಲ್ಲಿ ಸಂಶಯವುಂಟಾಗಿರುವಾಗ–ಅನುಮಾನದಿಂದ ಅದರ ಅಸ್ತಿತ್ವವನ್ನು ಸಾಧಿಸಬೇಕಾದರೂ ಅದಕ್ಕೆ ಯಾವ ಹೇತುವೂ ಇಲ್ಲ. ಹೀಗಿರುವಾಗ ಲೋಕವ್ಯವಹಾರದ ನಿಶ್ಚಯವನ್ನು ಯಾವುದನ್ನು ಆಧರಿಸಿ ಮಾಡಲು ಸಾಧ್ಯವಾಗುತ್ತದೆ?

(ಶರೀರಭಿನ್ನವಾದ ಆತ್ಮವು ಇರುವುದರಲ್ಲಿಯೇ ಸಂದೇಹವಿದೆ. ಅದರ ಲಕ್ಷಣಗಳೂ ಹಾಗೆಯೇ ಇವೆ. ಅವ್ಯಕ್ತ-ಅಮೇಯ–ಇವುಗಳೇ ಆಸ್ತಿಕರು ಹೇಳುವ ಆ ಆತ್ಮದ ಗುಣಗಳು. ಆದುದರಿಂದ ಅದು ಪ್ರತ್ಯಕ್ಷದರ್ಶನಕ್ಕೆ ಸಿಕ್ಕುವುದೇ ಇಲ್ಲ. ಆದುದರಿಂದ ಅದನ್ನು ಅನುಮಾನಪ್ರಮಾಣದಿಂದ ಸಾಧಿಸಲು ಯಾವ ಹೇತುವೂ ಇರುವುದಿಲ್ಲ. ಅಂತಹ ಸಂಶಯಾಸ್ಪದವಾದ ಆತ್ಮನನ್ನು ಆಧರಿಸಿ ಲೋಕವ್ಯವಹಾರವನ್ನು ಹೇಗೆ ತಾನೇ ನಡೆಸಲು ಸಾಧ್ಯವಾಗುತ್ತದೆ? ಲೋಕವ್ಯವಹಾರಗಳನ್ನು ಶರೀರರೂಪದಲ್ಲಿರುವ ಆತ್ಮನ ವಿಷಯದಲ್ಲಿ ಮಾಡಬಹುದೇ ಹೊರತು ಶರೀರಭಿನ್ನನಾದ ಆತ್ಮನ ವಿಷಯದಲ್ಲಿ ಮಾಡಲಾಗುವುದಿಲ್ಲ. ಆದುದರಿಂದ ವ್ಯಾವಹಾರಿಕವಾಗಿಯೂ ಆತ್ಮನ ಪ್ರತ್ಯೇಕವಾದ ಅಸ್ತಿತ್ವವು ಸಿಂಧುವಾಗುವುದಿಲ್ಲ.)

ಪ್ರತ್ಯಕ್ಷಂ ಹ್ಯೇತಯೋರ್ಮೂಲಂ *ಕೃತಾನ್ತೈತಿಹ್ಯಯೋರಪಿ ।
ಪ್ರತ್ಯಕ್ಷೇಣಾಗಮೋ ಭಿನ್ನಃ ಕೃತಾನ್ತೋ ವಾ ನ ಕಿಞ್ಚನ ॥೨೭॥

ಅದೃಷ್ಟ (ಅನುಮಾನ) ಮತ್ತು ಆಗಮಗಳಿಗೆ ಹೇಗೋ ಹಾಗೆ ಈ ಆಸ್ತಿಕ ಮತ್ತು ನಾಸ್ತಿಕವಾದಗಳೆರಡಕ್ಕೂ ಪ್ರತ್ಯಕ್ಷವೇ ಮೂಲಪ್ರಮಾಣವು. ಅದಕ್ಕೆ ಬೇರೆಯಾದ (ವಿರುದ್ಧವಾದ) ಅದೃಷ್ಟ (ಅನುಮಾನ) ವಾಗಲೀ ಆಗಮವಾಗಲೀ ಯಾವುದೂ ಇಲ್ಲ. (ಅನುಮಾನವೂ ಪ್ರತ್ಯಕ್ಷಮೂಲವಾಗಿರಬೇಕು. ಆಗಮವೇನಾದರೂ ಪ್ರತ್ಯಕ್ಷವಿರುದ್ಧವಾಗಿದ್ದರೆ ಅದು ತ್ಯಾಜ್ಯವೇ ಸರಿ.)

---

* ಕೃತಾನ್ತ ಎಂದರೆ ಅದೃಷ್ಟ. ಕಣ್ಣಿಗೆ ಕಾಣದ್ದು ಎಂದರೆ ಅನುಮಾನ, ವಿಚಾರ, ಮೀಮಾಂಸ. "ಸಾಂಖ್ಯೇ ಕೃತಾನ್ತೇ ಪ್ರೋಕ್ತಾನಿ"

ಯತ್ರ ಯತ್ರಾನುಮಾನೇಽಸ್ಮಿನ್ಕೃತಂ ಭಾವಯತೋಽಪಿ ಚ ।
ನಾನ್ಯೋ ಜೀವಃ ಶರೀರಸ್ಯ ನಾಸ್ತಿಕಾನಾಂ ಮತೇ ಸ್ಥಿತಃ ॥೨೮॥

ದೇಹಾತಿರಿಕ್ತನಾದ ಆತ್ಮನು ಪ್ರತ್ಯಕ್ಷಪ್ರಮಾಣದಲ್ಲಿ ದೊರೆಯುವುದಿಲ್ಲ. ಯಾವುದಾದರೂ ಅನುಮಾನದಿಂದ ಅವನ ಅಸ್ತಿತ್ವವನ್ನು ಭಾವಿಸುವುದಾದರೆ ಅದೂ ವ್ಯರ್ಥ. (ಏಕೆಂದರೆ : ಅವು ಪ್ರತ್ಯಕ್ಷಕ್ಕೆ ವಿರುದ್ಧವಾದುವು ಮತ್ತು ದೇಹಾತಿರಿಕ್ತನಾದ ಆತ್ಮನಿಲ್ಲವೆಂಬುದಕ್ಕೂ ಅನುಮಾನಗಳಿವೆ.) ಆದುದರಿಂದ ದೇಹದಿಂದ ಬೇರೆಯಾದ ಜೀವನು ಇಲ್ಲವೆಂಬುದು ನಾಸ್ತಿಕರ ಮತವಾಗಿದೆ.

ರೇತೋ ವಟಕಣೀಕಾಯಾಂ ಘೃತಪಾಕಾಧಿವಾಸನಮ್ ।
ಜಾತಿಃ ಸ್ಮೃತಿರಯಸ್ಕಾನ್ತಃ ಸೂರ್ಯಕಾನ್ತೋಽಮ್ಬುಭಕ್ಷಣಮ್ ॥೨೯॥

ಆಲದ ಮರದ ಬೀಜದಲ್ಲಿ ಅದರ ಎಲೆ, ಹಣ್ಣು, ತೊಗಟೆ–ಇತ್ಯಾದಿಗಳೆಲ್ಲಾ ಅಡಗಿರುತ್ತವೆ. ಕಾಲವಿಶೇಷದಲ್ಲಿ ಸ್ಥೂಲರೂಪದಲ್ಲಿ ಪ್ರಕಟವಾಗುತ್ತವೆ. ಆ ಬೀಜವು ಎಲೆ ಮುಂತಾದುವುಗಳಿಂದ ಸ್ವರೂಪತಃ ಭಿನ್ನವೇನೂ ಅಲ್ಲ. ಹಾಗೆಯೇ ದೇಹದೊಳಗಿನ ಸೂಕ್ಷ್ಮವಾದ ಆತ್ಮವೂ ದೇಹದಿಂದ ಭಿನ್ನವಲ್ಲ. ದೇಹವು ಜಡ. ಆತ್ಮವಾದರೋ ಚೇತನ. ಜಡದಿಂದ ವಿಲಕ್ಷಣ ಧರ್ಮವುಳ್ಳ ಚೇತನವಾದ ಜೀವವು ಹೇಗೆ ಹುಟ್ಟಿತು? ಆದುದರಿಂದ ಜೀವವು ದೇಹದಿಂದ ಬೇರೆಯೇ ಆಗಿದೆ ಎಂದರೆ–ಅದೂ ಸರಿಯಲ್ಲ. ಓಷಧಿದ್ರವ್ಯಗಳನ್ನು ಬೇಯಿಸಿ ಕೆಲವು ದಿವಸ ಇಟ್ಟರೆ ಅವುಗಳಿಂದ ವಿಲಕ್ಷಣವಾದ ಧರ್ಮವುಳ್ಳ ಮತ್ತನ್ನು ಉಂಟುಮಾಡುವ ಮದ್ಯವುಂಟಾಗುತ್ತದೆ. ಆದರೆ ಆ ಮದ್ಯವು ಓಷಧಿಗಳಿಂದ ಸ್ವರೂಪತಃ ಬೇರೆಯಲ್ಲ. ಹಾಗೆಯೇ ಜೀವವು ಚೇತನವಾಗಿ ಶರೀರಕ್ಕಿಂತಲೂ ವಿಲಕ್ಷಣವಾಗಿ ಕಂಡುಬಂದರೂ ಸ್ವರೂಪತಃ ಅವೆರಡೂ ಒಂದೇ. ಹಾಗೆಯೇ ಶರೀರವೇ ಆತ್ಮ ಎಂಬುದಕ್ಕೆ ಜಾತಿ, ಸ್ಮೃತಿ, ಅಯಸ್ಕಾಂತಮಣಿ, ಸೂರ್ಯಕಾಂತಮಣಿ, ನೀರನ್ನು ಭಕ್ಷಿಸುವ ಬಡಬಾಗ್ನಿ–ಇವುಗಳ ನಿದರ್ಶನಗಳನ್ನು ಕೊಡಬಹುದು. (ಹೇಗೆಂದರೆ : ಜಾತಿ ಅಥವಾ ಹುಟ್ಟಿನ ವಿಷಯವಾದ ಸಾದೃಶ್ಯವನ್ನು ಹೀಗೆ ಕೊಡಬಹು

ದಾಗಿದೆ. ಜೋನೀಬೆಲ್ಲ, ಕೆಲವು ಎಲೆಗಳು ಎಲ್ಲವನ್ನೂ ಬೆರೆಸಿ ಕಾಯಿಸಿ ಮದ್ಯವನ್ನು ತಯಾರಿಸುತ್ತಾರೆ. ಬೆಲ್ಲ ಮೊದಲಾದುವುಗಳಲ್ಲಿ ಇಲ್ಲದಿರುವ ವಿಶೇಷವಾದ ಮಾದಕಗುಣವು ಎಲ್ಲ ಪದಾರ್ಥಗಳನ್ನೂ ಕೂಡಿಸಿ ಕಾಯಿಸುವುದರಿಂದ ಆ ಮದ್ಯಕ್ಕೆ ಬರುತ್ತದೆ. ಆ ಎಲ್ಲ ಪದಾರ್ಥಗಳಿಂದಲೂ ನಿಶೆಯನ್ನುಂಟುಮಾಡುವ ಪದಾರ್ಥವು ಸಿದ್ಧವಾಗುತ್ತದೆ. ಅದೇ ರೀತಿಯಲ್ಲಿ ಪೃಥ್ವೀ, ಜಲ, ತೇಜಸ್ಸು ಮತ್ತು ವಾಯು –ಈ ನಾಲ್ಕು ದ್ರವ್ಯಗಳ ಸಂಯೋಗದಿಂದಲೇ ಶರೀರದಲ್ಲಿ ಮಹಾಭೂತಗಳಿಂದಲೂ ವಿಲಕ್ಷಣವಾದ ಚೈತನ್ಯವೆಂಬುದು ಪ್ರಕಟವಾಗುತ್ತದೆ. **ಸ್ಮೃತಿಃ :** ಜಡವಾದ ಎರಡು ಕಟ್ಟಿಗೆಗಳ ಮಥನದಿಂದ ಅಗ್ನಿಯುಂಟಾಗುತ್ತದೆ. ಅದೇ ರೀತಿಯಲ್ಲಿ ಜಡವಾದ ಶರೀರದ ಮತ್ತು ಮನಸ್ಸಿನ ಸಂಯೋಗದಿಂದ ಸ್ಮೃತಿಯು ಹುಟ್ಟುತ್ತದೆ. **ಅಯಸ್ಕಾಂತಮಣಿಃ :** ಅಯಸ್ಕಾಂತಮಣಿಯು ಜಡವಾಗಿದ್ದರೂ ಕಬ್ಬಿಣದ ತುಂಡನ್ನು ತನ್ನ ಕಡೆಗೆ ಸೆಳೆದುಕೊಳ್ಳುತ್ತದೆ. ಅದೇ ರೀತಿಯಲ್ಲಿ ಶರೀರವು ಜಡವಾಗಿದ್ದರೂ ಇಂದ್ರಿಯಗಳನ್ನು ಚಾಲನೆಗೊಳಿಸುತ್ತದೆ ಮತ್ತು ನಿಯಂತ್ರಿಸುತ್ತದೆ. ಸೂರ್ಯಕಾಂತಮಣಿಯು ಶೀತಲವಾಗಿದ್ದರೂ ಸೂರ್ಯನ ಕಿರಣಗಳ ಸಂಯೋಗದಿಂದ ಅಗ್ನಿಯನ್ನು ಹೊರಸೂಸುವಂತೆ –ವೀರ್ಯವು ಶೀತಲವಾಗಿದ್ದರೂ ರಸ ಮತ್ತು ರಕ್ತಗಳ ಸಂಯೋಗದಿಂದ ಜಠರಾಗ್ನಿಯನ್ನು ಹುಟ್ಟಿಸುತ್ತದೆ. ಸಮುದ್ರದ ನೀರಿನಲ್ಲಿ ಹುಟ್ಟಿದ ವಡವಾನಲವು ನೀರನ್ನೇ ಭಕ್ಷಿಸುತ್ತಿರುವಂತೆ–ವೀರ್ಯದಿಂದ ಉತ್ಪನ್ನನಾದ ಮನುಷ್ಯನು ವೀರ್ಯವನ್ನೇ ಉತ್ಪತ್ತಿಮಾಡುತ್ತಿರುತ್ತಾನೆ ಮತ್ತು ಧರಿಸುತ್ತಾನೆ. ಇವುಗಳೆಲ್ಲವೂ ಸ್ವಾಭಾವಿಕವಾಗಿಯೇ ನಡೆಯುತ್ತಿರುತ್ತವೆ. ಶರೀರಕ್ಕಿಂತಲೂ ಭಿನ್ನವಾದ ಆತ್ಮನಿರುವನೆಂದು ಹೇಳುವ ಆವಶ್ಯಕತೆಯೇ ಇಲ್ಲ.' ಮಹಾರಾಜ! ಹೀಗೆ ಹೇಳುವ ನಾಸ್ತಿಕರ ಮತವನ್ನು ನಾವು ಹೀಗೆ ಖಂಡಿಸಬೇಕಾಗಿದೆ.)

ಪ್ರೇತೀಭೂತೇಽತ್ಯಯಶ್ಚೈವ ದೇವತಾದ್ಯುಪಯಾಚನಮ್ ।
ಮೃತೇ ಕರ್ಮನಿವೃತ್ತಿಶ್ಚ ಪ್ರಮಾಣಮಿತಿ ನಿಶ್ಚಯಃ ॥೩೦॥

ಸತ್ತುಹೋದವನ ಶರೀರದಲ್ಲಿ ಚೈತನ್ಯವಿಲ್ಲದಿರುವುದೇ ದೇಹಕ್ಕಿಂತಲೂ ಭಿನ್ನವಾದ ಚೈತನ್ಯವಿರುವುದೆಂಬುದಕ್ಕೆ ಪ್ರಮಾಣವಾಗಿದೆ. ಚೈತನ್ಯ

ವೆಂಬುದೂ ದೇಹದ ಧರ್ಮವೇ ಆಗಿದ್ದರೆ–ದೇಹವೇ ಆತ್ಮವಾಗಿದ್ದರೆ–ದೇಹಾತ್ಮಗಳು ಭಿನ್ನವಾಗಿರದಿದ್ದರೆ–ಮೃತಶರೀರದಲ್ಲಿಯೂ ಚೇತನನು ಇರಲೇ ಬೇಕಾಗಿದ್ದಿತು. ಮರಣಾನಂತರ ಸ್ವಲ್ಪಕಾಲದವರೆಗೆ ಶರೀರವು ಇರುವುದೇ ಹೊರತು ಚೈತನ್ಯವಿರುವುದಿಲ್ಲ. ಚೇತನನು ಶರೀರದಲ್ಲಿ ಇರುವವರೆಗೂ ಅವನು ಸತ್ತನೆಂದು ಯಾರೂ ಹೇಳುವುದಿಲ್ಲ. ಸತ್ತಾಮಾತ್ರನಾದ ಚೇತನನು ಹೋದನಂತರವೇ ಮನುಷ್ಯನು ಸತ್ತನೆಂದು ಹೇಳುತ್ತಾರೆ. ಆದುದರಿಂದ ದೇಹವು ಆತ್ಮಕ್ಕಿಂತಲೂ ಭಿನ್ನವಾದುದೆಂದು ಸ್ಪಷ್ಟವಾಗಿ ಕಾಣುತ್ತದೆ.

ಕೆಲವು ನಾಸ್ತಿಕರು ಕೂಡ ರೋಗಾದಿಗಳ ನಿವೃತ್ತಿಗಾಗಿ ಮಂತ್ರ, ಜಪ ಮತ್ತು ತಾಂತ್ರಿಕಪದ್ಧತಿಗೆ ಅನುಸಾರವಾಗಿ ದೇವತೆಗಳನ್ನು ಆರಾಧಿಸುತ್ತಾರೆ. ಆ ದೇವತೆಗಳು ಯಾರು? ಅವರೂ ಪಂಚಭೂತಗಳಿಗೆ ಸೇರಿದವರಾಗಿದ್ದರೆ ಘಟಾದಿಗಳು ಕಾಣುವಂತೆ ದೇವತೆಗಳೂ ಕಾಣಬೇಕಾಗಿದ್ದಿತು. ಆ ದೇವತೆ ಗಳು ಭೌತಿಕಪದಾರ್ಥಗಳಿಗಿಂತ ಭಿನ್ನರಾದವರೆಂದು ಹೇಳುವುದಾದರೆ ಅವ್ಯಕ್ತಕ್ಕೂ ಸತ್ತೆಯಿರುವುದೆಂಬುದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಚೇತನಕ್ಕೂ ಅಸ್ತಿತ್ವವು ಇದರಿಂದಲೇ ಸಿದ್ಧವಾಗುತ್ತದೆ. ಈ ಕಾರಣಗಳಿಂದ ದೇಹದಿಂದ ಭಿನ್ನವಾದ ಆತ್ಮವಿದೆಯೆಂಬುದನ್ನು ಪ್ರತ್ಯಕ್ಷಾನುಭವದಿಂದಲೇ ಪ್ರತಿಪಾದಿಸಬಹುದಾಗಿದೆ. ದೇಹವೇ ಆತ್ಮವೆಂಬುದು ಮೇಲೆ ಹೇಳಿದ ಪ್ರತ್ಯಕ್ಷಾನುಭವಕ್ಕೆ ವಿರುದ್ಧವಾಗಿದೆ. ಎರಡನೆಯದಾಗಿ : ಶರೀರದೊಡನೆಯೇ ಆತ್ಮವೂ ನಾಶವಾಗುವುದೆಂದು ಹೇಳುವುದಾದರೆ ಆ ಶರೀರಿಯು ಮಾಡಿದ ಕರ್ಮಗಳೂ ನಾಶವಾಗಬೇಕಾಗುತ್ತದೆ. ಶುಭಾಶುಭಕರ್ಮಗಳ ಫಲಾನು ಭವಿಗಳೇ ಇಲ್ಲವಾಗುತ್ತದೆ. ಈ ಸಿದ್ಧಾಂತದ ಪ್ರಕಾರ ಜನ್ಮವೆತ್ತಿದ ಮನುಷ್ಯನು ಅನುಭವಿಸುವ ಸುಖ-ಕಷ್ಟಗಳಿಗೆ ಕಾರಣವೇ ಇಲ್ಲವಾಗುತ್ತದೆ. ಪಂಚಭೂತಗಳ ಸಂಯೋಗದಿಂದಲೇ ಮನುಷ್ಯನು ಹುಟ್ಟಿದ್ದರೆ ಒಂದೇ ವಿಧವಾದ ತಾಂತ್ರಿಕರಚನೆಯಿಂದ ಕೂಡಿರುವ ಯಂತ್ರಗಳು ಒಂದೇ ವಿಧವಾಗಿ ಕಾರ್ಯಮಾಡುವಂತೆ–ಮನುಷ್ಯನೂ ಒಂದೇ ವಿಧವಾದ ಕಾರ್ಯಗಳನ್ನು ಮಾಡುತ್ತಾ ಒಂದೇ ವಿಧವಾದ ಕಷ್ಟ-ಸುಖಗಳನ್ನು ಅನು ಭವಿಸಬೇಕಾಗಿದ್ದಿತು. ಹಾಗಿಲ್ಲದೇ ಒಬ್ಬೊಬ್ಬನೂ ಒಂದೊಂದು ವಿಧವಾದ

ಕಷ್ಟ-ಸುಖಗಳನ್ನು ಅನುಭವಿಸುತ್ತಿರುವುದರಿಂದ ದೇಹದ ಜೊತೆಯಲ್ಲಿಯೇ ಚೇತನನು ಬಂದರೂ–ಚೇತನನು ದೇಹದಿಂದ ಭಿನ್ನನಾದವನು ; ತನ್ನ ದೇಹದ ಕರ್ಮಫಲಗಳನ್ನು ಹೊತ್ತುಬಂದವನು–ಎಂಬುದು ಇದರಿಂದಲೇ ಸಿದ್ಧವಾಗುತ್ತದೆ.

ನನ್ವೇತೇ ಹೇತವಃ ಸನ್ತಿ ಯೇ ಕೇಚಿನ್ಮೂರ್ತಿಸಂಸ್ಥಿತಾಃ ।
ಅಮೂರ್ತಸ್ಯ ಹಿ ಮೂರ್ತೇನ ಸಾಮಾನ್ಯಂ ನೋಪಪದ್ಯತೇ ॥೩೧॥

ನಾಸ್ತಿಕರು ದೃಷ್ಟಾಂತವನ್ನು ಕೊಡುವಾಗ ಮೂರ್ತಪದಾರ್ಥಗಳನ್ನೇ ದೃಷ್ಟಾಂತವಾಗಿ ಕೊಟ್ಟಿರುತ್ತಾರೆ. ಸ್ವಾಭಾವಿಕವಾಗಿ ಮೂರ್ತವಾದ ಜಡ ಪದಾರ್ಥದಿಂದ ಮೂರ್ತವಾದ ಜಡಪದಾರ್ಥವು ಹುಟ್ಟುತ್ತದೆ. ಜಡವಾದ ಎರಡು ಕಟ್ಟಿಗೆಗಳನ್ನು ಮಥಿಸಿದರೆ ಮೂರ್ತವಾದ ಅಗ್ನಿಯ ಆವಿರ್ಭಾವ ವಾಗುತ್ತದೆ. ಆದರೆ ಮೂರ್ತಪದಾರ್ಥಗಳಿಂದ ಅಮೂರ್ತ ಅಥವಾ ಅವ್ಯಕ್ತಪದಾರ್ಥಗಳು ಯಾವಾಗಲೂ ಹುಟ್ಟುವುದಿಲ್ಲ. ಹಾಗೆ ಹುಟ್ಟುವು ದಾಗಿದ್ದರೆ ಪೃಥಿವೀ, ನೀರು, ತೇಜಸ್ಸು ಮತ್ತು ವಾಯುಗಳಿಂದ ಅಮೂರ್ತ ವಾದ ಆಕಾಶವು ಹುಟ್ಟಬೇಕಾಗಿದ್ದಿತು. ಮೂರ್ತವಾದ ಪೃಥಿವ್ಯಾದಿಗಳಿಂದ ಅಮೂರ್ತವಾದ ಆಕಾಶವು ಹೇಗೆ ಹುಟ್ಟುವುದಿಲ್ಲವೋ ಹಾಗೆಯೇ ಅಮೂರ್ತವಾದ ಆತ್ಮವೂ ಹುಟ್ಟುವುದಿಲ್ಲ. ಮೂರ್ತಪದಾರ್ಥಗಳಿಂದ ಅವ್ಯಕ್ತವಾದ ಪದಾರ್ಥಗಳೆಂದಿಗೂ ಹುಟ್ಟುವುದಿಲ್ಲ. ಆತ್ಮವು ಅವ್ಯಕ್ತ ಪದಾರ್ಥವಾಗಿದೆ. ದೇಹವು ವ್ಯಕ್ತಪದಾರ್ಥವಾಗಿದೆ. ಇವೆರಡಕ್ಕೂ ಸಮಾ ನತೆಯಿಲ್ಲ. ದೇಹ ಮತ್ತು ಆತ್ಮ ಒಂದೇ ಆಗುವುದಿಲ್ಲ. ದೇಹಕ್ಕಿಂತಲೂ ಆತ್ಮವು ಭಿನ್ನವಾದುದು.

ಅವಿದ್ಯಾ ಕರ್ಮ ತೃಷ್ಣಾ ಚ ಕೇಚಿದಾಹುಃ ಪುನರ್ಭವೇ ।
ಕಾರಣಂ ಲೋಭಮೋಹೌ ತು ದೋಷಾಣಾಂ ತು ನಿಷೇವಣಮ್ ॥

ಅವಿದ್ಯೆ, ಕರ್ಮ, ಆಸೆ, ಲೋಭ, ಮೋಹ –ಇವುಗಳು ದೋಷಗಳು. ದೋಷಗಳನ್ನು ಸೇವಿಸುವುದೂ ಪುನರ್ಜನ್ಮಕ್ಕೆ ಕಾರಣವಾಗುವುದೆಂದು ಕೆಲವು ವಿದ್ವಾಂಸರು ಹೇಳುತ್ತಾರೆ.

ಅವಿದ್ಯಾಂ ಕ್ಷೇತ್ರಮಾಹುರ್ಹಿ ಕರ್ಮ ಬೀಜಂ ತಥಾ ಕೃತಮ್ ।
ತೃಷ್ಣಾ ಸಂಜನನಂ ಸ್ನೇಹ ಏಷ ತೇಷಾಂ ಪುನರ್ಭವಃ ॥೩೩॥

ಆ ವಿದ್ವಾಂಸರು ಅವಿದ್ಯೆಯನ್ನು ಕ್ಷೇತ್ರವೆಂದು ಕರೆಯುತ್ತಾರೆ. ಪೂರ್ವಜನ್ಮದಲ್ಲಿ ಮಾಡಿರುವ ಶುಭಾಶುಭಕರ್ಮಗಳೇ ಬೀಜವಾಗಿರುತ್ತದೆ. ತೃಷ್ಣೆಯೆಂಬುದು ಬೀಜದಲ್ಲಿ ಅಂಕುರವನ್ನುಂಟುಮಾಡುವ ಸ್ನೇಹ ಅಥವಾ ಜಲ. ಅವರ ಅಭಿಪ್ರಾಯದಲ್ಲಿ ಇವೇ ಪುನರ್ಜನ್ಮಕ್ಕೆ ಕಾರಣಭೂತ ಗಳಾಗಿರುತ್ತವೆ.

ತಸ್ಮಿನ್ಗೂಢೇ ಚ ದಗ್ಧೇ ಚ ಭಿನ್ನೇ ಮರಣಧರ್ಮಿಣಿ ।
ಅನ್ಯೋಽಸ್ಮಾಜ್ಜಾಯತೇ ದೇಹಸ್ತಮಾಹುಃ ಸತ್ತ್ವಸಂಕ್ಷಯಮ್ ॥೩೪॥

ಸಾಯುವ ಧರ್ಮವುಳ್ಳ ಆ ದೇಹವನ್ನು ಹೂತುಹಾಕಿಬಿಟ್ಟರೂ, ಸುಟ್ಟುಹಾಕಿಬಿಟ್ಟರೂ ಅಥವಾ ಭೇದಿಸಿಬಿಟ್ಟರೂ–ಮೇಲೆ ಹೇಳಿದ ಶುಭಾ ಶುಭಕರ್ಮಬೀಜದಿಂದ ಮತ್ತೊಂದು ದೇಹವು ಉಂಟಾಗುತ್ತದೆ. ಆ ಬೀಜವು ಜ್ಞಾನದಿಂದ ನಾಶಹೊಂದಿದರೆ ಮರುಹುಟ್ಟೂ ನಾಶಹೊಂದುತ್ತದೆ. (ಆದುದರಿಂದ ದೇಹಾತಿರಿಕ್ತನಾದ ಆತ್ಮನನ್ನು ಒಪ್ಪದೆಯೇ ಪುನರ್ಜನ್ಮ-ಮೋಕ್ಷಗಳನ್ನು ವಿವರಿಸಬಹುದು ಎಂಬುದು ಕ್ಷಣಿಕವಿಜ್ಞಾನ ವಾದಿಗಳಾದ ಬೌದ್ಧರ ಸಿದ್ಧಾಂತ.)

ಯದಾ ಸ್ವರೂಪತಶ್ಚಾನ್ಯೋ ಜಾತಿತಃ ಶುಭತೋಽರ್ಥತಃ ।
ಕಥಮಸ್ಮಿನ್ಸ ಇತ್ಯೇವಂ ಸರ್ವಂ ವಾ ಸ್ಯಾದಸಂಹಿತಮ್ ॥೩೫॥

(ನಾಸ್ತಿಕರು ಮಂಡಿಸುವ ಕ್ಷಣಿಕವಾದದ ಪೂರ್ವಪಕ್ಷಕ್ಕೆ ಆಸ್ತಿಕರ ಉತ್ತರವು ಹೀಗಿರುತ್ತದೆ) : 'ನಿಮ್ಮ ಅಭಿಪ್ರಾಯದಂತೆ ಶರೀರ ಮತ್ತು ಜೀವ ಎರಡೂ ಕ್ಷಣಿಕವಾದುದು. ಜೀವ ಮತ್ತು ಶರೀರಗಳು ಮನುಷ್ಯನಿಗೆ ತಿಳಿಯದಂತೆಯೇ ಪ್ರತಿಕ್ಷಣದಲ್ಲಿಯೂ ಬದಲಾವಣೆಯನ್ನು ಹೊಂದುತ್ತಲೇ ಇರುತ್ತವೆ. ಈ ಕಾರಣದಿಂದ ವ್ಯಕ್ತಿಯ ಸಾಮ್ಯವಿದ್ದರೂ ನಿನ್ನೆ ಇದ್ದ ವ್ಯಕ್ತಿಯು ಇಂದಿರುವುದಿಲ್ಲ. ಇಂದಿದ್ದ ವ್ಯಕ್ತಿಯು ನಾಳೆ ಇರುವುದಿಲ್ಲ. ಹಿಂದಿನ ಕ್ಷಣದಲ್ಲಿದ್ದವನು ಈ ಕ್ಷಣದಲ್ಲಿರುವುದಿಲ್ಲ. ಈ ಕ್ಷಣದಲ್ಲಿದ್ದವನು

ಮುಂದಿನ ಕ್ಷಣದಲ್ಲಿರುವುದಿಲ್ಲ. ಪ್ರತಿಯೊಂದು ಕ್ಷಣದಲ್ಲಿಯೂ ಶರೀರ, ರೂಪ, ಜಾತಿ, ಧರ್ಮ, ಪ್ರಯೋಜನ –ಇವುಗಳು ಬದಲಾವಣೆಯನ್ನು ಹೊಂದುತ್ತಲೇ ಇರುತ್ತವೆ. ಹೀಗೆ ಮನುಷ್ಯನು ಪ್ರತಿಕ್ಷಣದಲ್ಲಿಯೂ ಬದ ಲಾವಣೆ ಹೊಂದುವವನಾಗಿದ್ದರೆ, ಬೇರೆಯ ಮನುಷ್ಯನೇ ಆಗುತ್ತಿದ್ದರೆ– ನಾನೇ ಅವನು–ಎಂಬ ಸ್ಮೃತಿಯೂ ಅವನಲ್ಲಿ ಉಳಿಯಲು ಹೇಗೆ ಸಾಧ್ಯ ವಾಗುತ್ತದೆ? ಮನುಷ್ಯನು ಪ್ರತಿಕ್ಷಣದಲ್ಲಿಯೂ ಬದಲಾವಣೆ ಹೊಂದುತ್ತಲೇ ಇರುವುದರಿಂದ ಇಲ್ಲಿ ಕರ್ಮ, ಕರ್ಮಫಲ, ಕರ್ಮಫಲದ ಉಪಭೋಗ ಯಾವುದೂ ಇರುವುದೇ ಇಲ್ಲ. ಸುಖ-ದುಃಖಾದಿಗಳೆಲ್ಲವೂ ಆಕಸ್ಮಿಕವಾಗಿ ಲಭಿಸುವುದೆಂದು ನಿರ್ಣಯಿಸಬೇಕಾಗುತ್ತದೆ. ಅಥವಾ ಫಲವನ್ನು ಇಚ್ಛಿಸುವವನೊಬ್ಬ ; ಫಲಕ್ಕಾಗಿ ಕಾರ್ಯಮಾಡುವವನು ಮತ್ತೊಬ್ಬ ; ಕರ್ಮಫಲವನ್ನು ಉಪಭೋಗಿಸುವವನು ಮಗದೊಬ್ಬ–ಹೀಗೆ ನಿರ್ಣಯಿಸ ಬೇಕಾಗುತ್ತದೆ. ಆದುದರಿಂದ ನಿಮ್ಮ ವಾದವು ಸರಿಯಲ್ಲ.'

ಏವಂ ಸತಿ ಚ ಕಾ ಪ್ರೀತಿರ್ದಾನವಿದ್ಯಾತಪೋಬಲೈಃ ।
ಯದಸ್ಯಾಚರಿತಂ ಕರ್ಮ ಸರ್ವಮನ್ಯತ್ಪ್ರಪದ್ಯತೇ ॥೩೬॥

ಇದಲ್ಲದೆ ಈ ಕ್ಷಣಿಕವಾದ ಸಿದ್ಧಾಂತವನ್ನೇ ಮಾನ್ಯಮಾಡುವುದಾದರೆ ವಿದ್ಯೆ, ದಾನ, ತಪಸ್ಸು ಮತ್ತು ಬಲ–ಇವುಗಳಲ್ಲಿ ಯಾರಿಗೆ ಯಾವ ರೀತಿಯ ಪ್ರೀತಿಯುಂಟಾಗುತ್ತದೆ? ಒಬ್ಬನು ಮಾಡಿದ ಕರ್ಮಫಲವನ್ನು ಮತ್ತೊಬ್ಬನು ಉಪಭೋಗಿಸುತ್ತಾನೆ? ಹೀಗಾದರೆ ಮನುಷ್ಯನಿಗೆ ಕರ್ಮಮಾಡುವ ಆಸಕ್ತಿ ಯಾದರೂ ಹೇಗೆ ಹುಟ್ಟುತ್ತದೆ?

(ಕ್ಷಣಿಕವಿಜ್ಞಾನವಾದದಂತೆ ಈ ಕ್ಷಣದಲ್ಲಿ ದಾನಮಾಡಿದ ಮನುಷ್ಯನು ಮರುಕ್ಷಣದಲ್ಲಿಯೇ ಬೇರೆಯವನಾಗಿಬಿಡುತ್ತಾನೆ. ದಾನದ ಫಲವನ್ನು ಯಾವಾಗಲೋ ಯಾರೋ ಬೇರೊಬ್ಬನು ಅನುಭವಿಸುತ್ತಾನೆ.)

ಅಪಿ ಹ್ಯಯಮಿಹೈವಾನ್ಯೈಃ ಪ್ರಾಕೃತೈರ್ದುಃಖಿತೋ ಭವೇತ್ ।
ಸುಖಿತೋ ದುಃಖಿತೋ ವಾಪಿ ದೃಶ್ಯಾದೃಶ್ಯವಿನಿರ್ಣಯಃ ॥೩೭॥

ಕ್ಷಣಿಕವಿಜ್ಞಾನವನ್ನು ಅನುರೋಧಿಸದಿದ್ದರೂ ದಾನಕೊಟ್ಟವನೇ ದಾನ

ಮಾಡಿದ ಫಲವನ್ನು ಉಪಭೋಗಿಸುತ್ತಾನೆಂಬುದು ಎಲ್ಲಿಯೂ ಕಂಡುಬರುವುದಿಲ್ಲ. ಬೇರೆಯ ಜನ್ಮದಲ್ಲಿ ಅನುಭವಿಸುತ್ತಾನೆಂದರೆ : ಈ ಜನ್ಮದಲ್ಲಿ ದಾನ ಮಾಡಿದವನಂತೂ ದಾನದ ಫಲವನ್ನು ಅನುಭವಿಸುವುದಿಲ್ಲ. ಮುಂದಿನ ಜನ್ಮದಲ್ಲಿ ಬೇರೊಬ್ಬನು ಅನುಭವಿಸಬೇಕು. ಇದು ಕ್ಷಣಿಕವಿಜ್ಞಾನದ ಸಿದ್ಧಾಂತವನ್ನೇ ಅನುಮೋದಿಸುತ್ತದೆ ಎನ್ನುವುದಾದರೆ–ಕರ್ತೃವು ಬೇರೆ ಭೋಕ್ತೃವು ಬೇರೆ ಎನ್ನುವುದಾದರೆ–ಒಬ್ಬನು ಮಾಡಿದ ಪಾಪಕರ್ಮದ ಫಲವನ್ನು ಮತ್ತೊಬ್ಬನೂ, ಒಬ್ಬನು ಮಾಡಿದ ಪುಣ್ಯಕರ್ಮದ ಫಲವನ್ನು ಬೇರೊಬ್ಬನೂ ಅನುಭವಿಸಬೇಕಾಗುತ್ತದೆ. ಯಾವನೋ ಮಾಡಿದ ಕರ್ಮಕ್ಕೆ ಬೇರೆ ಯಾವನೋ ಸುಖವನ್ನೋ ಕಷ್ಟವನ್ನೋ ಅನುಭವಿಸಬೇಕಾಗುತ್ತದೆ. ಇದೇ ರೀತಿಯಲ್ಲಿ ದೃಶ್ಯಾದೃಶ್ಯನಿರ್ಣಯವನ್ನೂ ಮಾಡಬೇಕಾಗುತ್ತದೆ. ಯಾವನು ಹಿಂದಿನ ಕ್ಷಣದಲ್ಲಿ ದೃಶ್ಯನಾಗಿದ್ದನೋ ಅವನು ಈ ಕ್ಷಣದಲ್ಲಿ ಅದೃಶ್ಯನಾಗುತ್ತಾನೆ. ಹಾಗೆಯೇ ಯಾವನು ಹಿಂದೆ ಅದೃಶ್ಯನಾಗಿದ್ದನೋ ಅವನು ಈಗ ದೃಶ್ಯನಾಗುತ್ತಾನೆ.

ತಥಾ ಹಿ ಮುಸಲೈರ್ಹನ್ಯುಃ ಶರೀರಂ ತತ್ಪುನರ್ಭವೇತ್ ।
ಪೃಥಜ್ಜ್ಞಾನಂ ಯದನ್ಯಚ್ಚ ಯೇನೈತನ್ನೋಪಪದ್ಯತೇ ॥೩೮॥

ಆ ಇಬ್ಬರ ಜ್ಞಾನವು ಪ್ರತ್ಯೇಕ-ಪ್ರತ್ಯೇಕವಾಗಿರುತ್ತದೆ. ಅವರದ್ದು ಸಜಾತೀಯಜ್ಞಾನವಲ್ಲ. ಕರ್ಮಫಲಗಳ ಭೋಗವು ಪ್ರಾಪ್ತಿಯಾಗಬೇಕಾದರೆ ಸಜಾತೀಯವಿಜ್ಞಾನವಿರಬೇಕು. ಆದುದರಿಂದ ಅವರಲ್ಲಿ ಒಬ್ಬನು ಮಾಡಿದ ಕರ್ಮದ ಫಲವನ್ನು ಮತ್ತೊಬ್ಬನು ಉಪಭೋಗಿಸಲು ಸಾಧ್ಯವಿಲ್ಲ. ಆದುದರಿಂದ ಹಿಂದೆ ಹೇಳಿದ ದೋಷವು ಸಿಂಧುವಾಗುವುದಿಲ್ಲ ಎನ್ನುವುದಾದರೆ– ನಾವು ಹೀಗೆ ಪ್ರಶ್ನಿಸುತ್ತೇವೆ: ನಿಮ್ಮ ಮತದಲ್ಲಿ ಸಾದೃಶ್ಯ ಅಥವಾ ಸಜಾತೀಯ ವಿಜ್ಞಾನದ ಉತ್ಪತ್ತಿಯಾಗುತ್ತದೆ. ಆ ವಿಜ್ಞಾನಕ್ಕೆ ಮೂಲವು ಯಾವುದು? ಪೂರ್ವಕ್ಷಣದಲ್ಲಿದ್ದ ವಿಜ್ಞಾನವೇ ಉಪಾದಾನವೆನ್ನುವುದಾದರೆ ಅದು ಸರಿ ಹೋಗುವುದಿಲ್ಲ. ಏಕೆಂದರೆ ಪೂರ್ವಕ್ಷಣದ ವಿಜ್ಞಾನವು ಆಗಲೇ ವಿನಾಶ ಹೊಂದಿರುತ್ತದೆ. ಪೂರ್ವಕ್ಷಣವರ್ತಿಯಾದ ವಿಜ್ಞಾನದ ನಾಶವೇ ಉತ್ತರಕ್ಷಣ ವರ್ತಿಯಾದ ಸಜಾತೀಯ ವಿಜ್ಞಾನದ ಉತ್ಪತ್ತಿಗೆ ಕಾರಣವೆಂದು ಹೇಳುವು

ದಾದರೆ–ಕೆಲವರು ಒನಕೆಯನ್ನು ತೆಗೆದುಕೊಂಡು ಒಬ್ಬನನ್ನು ಸಾಯಿಸಿಬಿಡುತ್ತಾರೆ. ಇದು ಪೂರ್ವಕ್ಷಣದ ವಿಜ್ಞಾನ. ನಿಮ್ಮ ಸಿದ್ಧಾಂತದ ಪ್ರಕಾರ ಪೂರ್ವಕ್ಷಣದ ವಿನಾಶವೇ ಉತ್ತರಕ್ಷಣದ ಉತ್ಪತ್ತಿಗೆ ಕಾರಣವಾಗುವುದಾದರೆ ಮೃತ ಶರೀರದಿಂದ ಮತ್ತೊಂದು ಶರೀರದ ಉತ್ಪತ್ತಿಯಾಗಬೇಕಾಗುತ್ತದೆ. ಆದುದರಿಂದ ಯಾವುದೇ ದೃಷ್ಟಿಯಿಂದ ನೋಡಿದರೂ ಈ ಕ್ಷಣಿಕವಿಜ್ಞಾನವು ಸಮಂಜಸವಾಗಿರುವುದಿಲ್ಲ.

ಋತುಸಂವತ್ಸರೌ ತಿಷ್ಯಃ ಶೀತೋಷ್ಣೇಽಥ ಪ್ರಿಯಾಪ್ರಿಯೇ ।
ಯಥಾತೀತಾನಿ ಪಶ್ಯನ್ತಿ ತಾದೃಶಃ ಸತ್ತ್ವಸಂಕ್ಷಯಃ ॥೩೯॥

ಋತು, ಸಂವತ್ಸರ, ಯುಗ, ಚಳಿಗಾಲ, ಬೇಸಿಗೆಕಾಲ, ಪ್ರಿಯ-ಅಪ್ರಿಯ –ಈ ಎಲ್ಲವೂ ಬರುತ್ತಿರುತ್ತವೆ–ಹೋಗುತ್ತಿರುತ್ತವೆ. ಇದನ್ನು ಎಲ್ಲರೂ ಪ್ರತ್ಯಕ್ಷವಾಗಿಯೇ ನೋಡುತ್ತಿರುತ್ತಾರೆ. ಹೀಗೆಯೇ ಪ್ರಾಣಿಗಳೂ ಕ್ಷಯಿಸುತ್ತಿರುತ್ತವೆ ; ಹುಟ್ಟುತ್ತಿರುತ್ತವೆ.

ಜರಯಾಭಿಪರೀತಸ್ಯ ಮೃತ್ಯುನಾ ಚ ವಿನಾಶಿನಾ ।
ದುರ್ಬಲಂ ದುರ್ಬಲಂ ಪೂರ್ವಂ ಗೃಹಸ್ಯೇವ ವಿನಶ್ಯತಿ ॥೪೦॥

ಯಾವ ರೀತಿಯಲ್ಲಿ ಹಳೆಯ ಮನೆಯೊಂದರಲ್ಲಿ ಅತ್ಯಂತದುರ್ಬಲವಾದ ಮರ-ಮುಟ್ಟುಗಳೇ ಮೊದಲಾದುವುಗಳು ನಾಶವಾಗಿ ಅನುಕ್ರಮವಾಗಿ ಮನೆಯೇ ಬಿದ್ದುಹೋಗುತ್ತದೆಯೋ–ಅದೇ ರೀತಿಯಲ್ಲಿ ಮುಪ್ಪಿನಿಂದಲೂ–ವಿನಾಶಕಾರಿಯಾದ ಮೃತ್ಯುವಿನಿಂದಲೂ ಆಕ್ರಾಂತವಾದ ಈ ಶರೀರವು ಅಂಗಾಂಗಗಳಲ್ಲಿ ಅನುಕ್ರಮವಾಗಿ ದೌರ್ಬಲ್ಯವನ್ನು ಹೊಂದಿ ಕಟ್ಟಕಡೆಗೆ ವಿನಾಶಹೊಂದುತ್ತದೆ.

ಇನ್ದ್ರಿಯಾಣಿ ಮನೋ ವಾಯುಃ ಶೋಣಿತಂ ಮಾಂಸಮಸ್ಥಿ ಚ ।
ಆನುಪೂರ್ವ್ಯಾ ವಿನಶ್ಯನ್ತಿ ಸ್ವಂ ಧಾತುಮುಪಯಾನ್ತಿ ಚ ॥೪೧॥

ಇಂದ್ರಿಯಗಳು, ಮನಸ್ಸು, ಪ್ರಾಣ, ರಕ್ತ, ಮಾಂಸ, ಮೂಳೆ– ಇವುಗಳು ಅನುಕ್ರಮವಾಗಿ ವಿನಾಶಹೊಂದುತ್ತವೆ ಮತ್ತು ಅವುಗಳಿಗೆ ಕಾರಣ ಭೂತಗಳಾದ ಪೃಥಿವ್ಯಾದಿ ಪಂಚಭೂತಗಳಲ್ಲಿ ಸೇರಿಹೋಗುತ್ತವೆ.

ಲೋಕಯಾತ್ರಾವಿಘಾತಶ್ಚ ದಾನಧರ್ಮಫಲಾಗಮೇ ।
ತದರ್ಥಂ ವೇದಶಬ್ದಾಶ್ಚ ವ್ಯವಹಾರಾಶ್ಚ ಲೌಕಿಕಾಃ ॥೪೨॥

ಶರೀರಭಿನ್ನವಾದ ಆತ್ಮದ ಅಸ್ತಿತ್ವವನ್ನು ಒಪ್ಪಿಕೊಳ್ಳದಿದ್ದರೆ ಲೋಕ ವ್ಯವಹಾರದ ನಿರ್ವಹಣೆಯೇ ಆಗುವುದಿಲ್ಲ. ದಾನ ಮತ್ತು ಇತರ ಧರ್ಮ ಗಳಿಂದ ಫಲವನ್ನು ಪಡೆದುಕೊಳ್ಳುವ ಆಸ್ಥೆಯೇ ಯಾರಿಗೂ ಇರುವುದಿಲ್ಲ. ವೈದಿಕಶಬ್ದಗಳೂ (ವೈದಿಕಕರ್ಮಗಳೂ) ಮತ್ತು ಲೌಕಿಕವ್ಯವಹಾರಗಳೂ ಆತ್ಮಕ್ಕೆ ಸುಖವನ್ನುಂಟುಮಾಡುವ ಸಲುವಾಗಿಯೇ ಹೇಳಲ್ಪಟ್ಟಿವೆ.

ಇತಿ ಸಮ್ಯಙ್ಮನಸ್ಯೇತೇ ಬಹವಃ ಸನ್ತಿ ಹೇತವಃ ।
ಏತದಸ್ತೀದಮಸ್ತೀತಿ ನ ಕಿಞ್ಚಿತ್ಪ್ರತಿದೃಶ್ಯತೇ ॥೪೩॥

ಹೀಗೆ ಮನಸ್ಸಿನಲ್ಲಿ ಆತ್ಮನಿಗೆ ಸಂಬಂಧಿಸಿದಂತೆ ಅನೇಕವಿಧವಾದ ತರ್ಕ-ವಿತರ್ಕಗಳು ಹುಟ್ಟುತ್ತಲೇ ಇರುತ್ತವೆ. ಆದರೆ 'ಏತದಸ್ತಿ' ಇದು ಇದೆ 'ಇದಮಸ್ತಿ' ಈ ಆತ್ಮವಿದೆ–ಎಂದು ಹೇಳುವುದರಿಂದಾಗಲೀ ನಿರ್ಧಾರ ಮಾಡುವುದರಿಂದಾಗಲೀ ಆತ್ಮವನ್ನು ಹೊಂದಲು ಸಾಧ್ಯವಾಗುವುದಿಲ್ಲ. (ತರ್ಕದಿಂದ ಆತ್ಮನು ಸಿಕ್ಕತಕ್ಕವನಲ್ಲ.)

ತೇಷಾಂ ವಿಮೃಶತಾಮೇವ ತತ್ತತ್ಸಮಭಿಧಾವತಾಮ್ ।
ಕ್ವಚಿನ್ನಿವಿಶತೇ ಬುದ್ಧಿಸ್ತತ್ರ ಜೀರ್ಯತಿ ವೃಕ್ಷವತ್ ॥೪೪॥

ಹೀಗೆ ಅನೇಕಪ್ರಕಾರವಾಗಿ ಆತ್ಮನ ಸತ್ತೆಯನ್ನು ವಿಮರ್ಶಿಸುತ್ತಾ 'ದೇಹ ಭಿನ್ನವಾದ ಆತ್ಮವಿದೆ'–'ದೇಹಭಿನ್ನವಾದ ಆತ್ಮವಿಲ್ಲ' ; ಪಂಚಭೂತಗಳ ಸಂಕಲನಗಳಿಂದ ಈ ದೇಹವು ಹುಟ್ಟಿದೆ ; ಆತ್ಮನಾಗಲೀ-ಪರಮಾತ್ಮನಾಗಲೀ ಇರುವುದಿಲ್ಲ–ಇವೇ ಮುಂತಾದ ನಾನಾಮತಗಳ ಕಡೆಗೆ ಧಾವಿಸುತ್ತಾ ಯಾವುದೋ ಒಂದು ಸಿದ್ಧಾಂತಕ್ಕೆ ಅಂಟಿಕೊಂಡ ಬುದ್ಧಿಯು ವೃಕ್ಷದಂತೆ ಜಡಭಾವವನ್ನು ಹೊಂದಿ ಜೀರ್ಣವಾಗಿ ಹೋಗುತ್ತದೆ. (ಬುದ್ಧಿಯ ಕಸರತ್ತಿನಿಂದ ಆತ್ಮವನ್ನು ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ.)

ಏವಮರ್ಥೈರನರ್ಥೈಶ್ಚ ದುಃಖಿತಾಃ ಸರ್ವಜನ್ತವಃ ।
ಆಗಮೈರಪಕೃಷ್ಯನ್ತೇ ಹಸ್ತಿಪೈರ್ಹಸ್ತಿನೋ ಯಥಾ ॥೪೫॥

ಹೀಗೆ ಎಲ್ಲ ಪ್ರಾಣಿಗಳೂ (ಮನುಷ್ಯರೂ) ವಿಶೇಷವಾದ ಅಭಿಲಾಷೆಗಳಿಂದಲೂ–ಪ್ರಯೋಜನವಿಲ್ಲದ ವಿಷಯಗಳಿಂದಲೂ ದುಃಖಿತರಾಗಿರುತ್ತಾರೆ. ಮಾವಟಿಗನು ಆನೆಗಳನ್ನು ಅಂಕುಶದಿಂದ ನಿಯಂತ್ರಿಸುವಂತೆ–ಶಾಸ್ತ್ರಗಳು ಮಾತ್ರವೇ ಮನುಷ್ಯರನ್ನು ಸನ್ಮಾರ್ಗದಲ್ಲಿರುವಂತೆ ನಿಯಂತ್ರಿಸುತ್ತವೆ.

ಅರ್ಥಾಂಸ್ತಥಾತ್ಯನ್ತ ಸುಖಾವಹಾಂಶ್ಚ
ಲಿಪ್ಸನ್ತ ಏತೇ ಬಹವೋ ವಿಶುಷ್ಕಾಃ ।
ಮಹತ್ತರಂ ದುಃಖಮನುಪ್ರಪನ್ನಾ
ಹಿತ್ವಾಮಿಷಂ ಮೃತ್ಯುವಶಂ ಪ್ರಯಾನ್ತಿ ॥೪೬॥

ಶುಷ್ಕಹೃದಯರಾದ (ಆತ್ಮಾನುಸಂಧಾನದಲ್ಲಿ ನಿರಾಸಕ್ತರಾದ) ಮನುಷ್ಯರು ಅತ್ಯಂತಸುಖಾವಹವೆಂದು ಭಾವಿಸುವ ವಿಷಯಸುಖಗಳನ್ನು ಅಪೇಕ್ಷೆ ಮಾಡುತ್ತಲೇ ಇರುತ್ತಾರೆ. ಆದರೆ ಎಂದೂ ತೀರದ ಆ ತೃಷ್ಣೆಯಿಂದಾಗಿ ಅವರು ಮಹತ್ತರವಾದ ದುಃಖವನ್ನೇ ಎದುರಿಸಬೇಕಾಗುತ್ತದೆ. ಕೊನೆಗೆ ಅವರು ಸುಖೋಪಭೋಗಗಳೆಲ್ಲವನ್ನೂ ತೊರೆದು ಮೃತ್ಯುವಶರಾಗುತ್ತಾರೆ.

ವಿನಾಶಿನೋ ಹ್ಯಧ್ರುವಜೀವಿತಸ್ಯ
ಕಿಂ ಬನ್ಧುಭಿರ್ಭಿನ್ನಪರಿಗ್ರಹೈಶ್ಚ ।
ವಿಹಾಯ ಯೋ ಗಚ್ಛತಿ ಸರ್ವಮೇವ
ಕ್ಷಣೇನ ಗತ್ವಾ ನ ನಿವರ್ತತೇ ಚ ॥೪೭॥

ಒಂದು ದಿನ ನಷ್ಟವಾಗಿ ಹೋಗುವ, ಅನಿತ್ಯವಾದ ಜೀವನವುಳ್ಳ ಈ ಜೀವನಿಗೆ ಪತ್ನೀ-ಪುತ್ರ-ಪುತ್ರಿಯರಿಂದಾಗಲೀ, ಬಂಧುಗಳಿಂದಾಗಲೀ, ಗೃಹ-ಪಶ್ವಾದಿ ಸಂಗ್ರಹದಿಂದಾಗಲೀ ಯಾವ ಪ್ರಯೋಜನವಿದೆ?–ಎಂಬುದಾಗಿ ಯೋಚಿಸಿ ಆ ಕ್ಷಣದಲ್ಲಿಯೇ ಸರ್ವಸ್ವವನ್ನೂ ಪರಿತ್ಯಾಗಮಾಡಿ ಅಧ್ಯಾತ್ಮ ಮಾರ್ಗವನ್ನು ಹಿಡಿದು ಯಾರು ಹೊರಟುಹೋಗುವರೋ–ಅವರು ಪುನರ್ಜನ್ಮವನ್ನು ಹೊಂದುವುದಿಲ್ಲ.

ಭೂರ್ವ್ಯೋಮತೋಯಾನಲವಾಯವೋಽಪಿ
ಸದಾ ಶರೀರಂ ಪ್ರತಿಪಾಲಯನ್ತಿ ।

ಇತೀದಮಾಲಕ್ಷ್ಯ ರತಿಃ ಕುತೋ ಭವೇ-
ದ್ವಿನಾಶಿನೋಽಪ್ಯಸ್ಯ ನ ಶರ್ಮ ವಿದ್ಯತೇ ॥೪೮॥

ಭೂಮಿ, ಆಕಾಶ, ನೀರು, ಅಗ್ನಿ ಮತ್ತು ವಾಯುಗಳು ಸರ್ವಕಾಲದಲ್ಲಿಯೂ ಈ ಶರೀರವನ್ನು ಪಾಲಿಸುತ್ತಿರುತ್ತಾರೆ. ಪಂಚಭೂತಗಳಿಂದ ಸಂಸೃಷ್ಟವಾದ ಈ ಶರೀರವನ್ನು ಪಂಚಭೂತಗಳೇ ರಕ್ಷಿಸುತ್ತಿರುವರೆಂಬುದನ್ನು ಮನಗಂಡರೆ-ಈ ಶರೀರದ ವಿಷಯದಲ್ಲಿ ಅನುರಾಗವು ಹೇಗೆ ತಾನೇ ಉಂಟಾಗುತ್ತದೆ? ಮೇಲಾಗಿ ನಷ್ಟವಾಗಿ ಹೋಗುವ ಈ ಶರೀರದಿಂದ ಯಾವ ಸುಖವೂ ಇಲ್ಲ."

ಇದಮನುಪಧಿವಾಕ್ಯಮಚ್ಛಲಂ
ಪರಮನಿರಾಮಯಮಾತ್ಮಸಾಕ್ಷಿಕಮ್ ।
ನರಪತಿರಭಿವೀಕ್ಷ್ಯ ವಿಸ್ಮಿತಃ
ಪುನರನುಯೋಕ್ತುಮಿದಂ ಪ್ರಚಕ್ರಮೇ ॥೪೯॥

ಧರ್ಮಜ! ಜನಕಜನದೇವರಾಜನು–ಭ್ರಮೆಯನ್ನು ನಿರಸನಗೊಳಿಸುವ, ವಂಚನೆಯಿಂದ ರಹಿತವಾದ, ದೋಷರಹಿತವಾದ, ಆತ್ಮಸಾಕ್ಷಾತ್ಕಾರವನ್ನು ಹೊಂದಿಸುವ ಪಂಚಶಿಖನ ಈ ಉಪದೇಶವನ್ನು ಕೇಳಿ ವಿಸ್ಮಯಗೊಂಡವನಾಗಿ ಪುನಃ ಇನ್ನೂ ಕೆಲವು ಪ್ರಶ್ನೆಗಳನ್ನು ಕೇಳಲು ಉಪಕ್ರಮಿಸಿದನು."

ಅಧ್ಯಾಯವು ಮುಗಿಯಿತು.

೨೧೯ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪಂಚಶಿಖನು ಮೋಕ್ಷತತ್ತ್ವವನ್ನು ಉಪದೇಶಿಸಿದುದು

ಜನಮೇಜಯ! ಭೀಷ್ಮನು ಯುಧಿಷ್ಠಿರನಿಗೆ ಹೇಳುತ್ತಾನೆ :

ಜನಕೋ ಜನದೇವಸ್ತು ಜ್ಞಾಪಿತಃ ಪರಮರ್ಷಿಣಾ ।
ಪುನರೇವಾನುಪಪ್ರಚ್ಛ ಸಾಮ್ಪರಾಯೇ ಭವಾಭವೌ ॥೧॥

"ಯುಧಿಷ್ಠಿರ! ಮಹರ್ಷಿಯಾದ ಪಂಚಶಿಖನು ಜನಕಜನದೇವನಿಗೆ ಉಪದೇಶಿಸಿದನಂತರ ಪುನಃ ಜನಕಜನದೇವನು ಮಹರ್ಷಿಯನ್ನು

ಮರಣಾನಂತರದಲ್ಲಿ ಆತ್ಮದ ಅಸ್ತಿತ್ವ ಅಥವಾ ನಾಸ್ತಿತ್ವದ ವಿಷಯವಾಗಿ ಪ್ರಶ್ನಿಸಿದನು :

ಭಗವನ್ಯದಿ ನ ಪ್ರೇತ್ಯ ಸಂಜ್ಞಾ ಭವತಿ ಕಸ್ಯಚಿತ್ ।
ಏವಂ ಸತಿ ಕಿಮಜ್ಞಾನಂ ಜ್ಞಾನಂ ವಾ ಕಿಂ ಕರಿಷ್ಯತಿ ॥೨॥



"ಭಗವನ್! ಮರಣಾನಂತರದಲ್ಲಿ ಯಾರಿಗೂ ಯಾವ ವಿಧವಾದ ಸಂಜ್ಞೆಯೂ ಇಲ್ಲದೇ ಇರುವಾಗ–ಅಂತಹ ಸ್ಥಿತಿಯಲ್ಲಿ ಜ್ಞಾನವಾಗಲೀ-ಅಜ್ಞಾನವಾಗಲೀ ಏನು ತಾನೇ ಮಾಡುತ್ತವೆ?

ಸರ್ವಮುಚ್ಛೇದನಿಷ್ಠಂ ಸ್ಯಾತ್ಪಶ್ಯ ಚೈತದ್ದ್ವಿಜೋತ್ತಮ ।
ಅಪ್ರಮತ್ತಃ ಪ್ರಮತ್ತೋ ವಾ ಕಿಂ ವಿಶೇಷಂ ಕರಿಷ್ಯತಿ ॥೩॥

ವಿಪ್ರಶ್ರೇಷ್ಠನೇ! ಈ ವಿಷಯವನ್ನು ಗಮನಿಸು. ಮನುಷ್ಯನು ಅದು ವರೆಗೂ ಮಾಡಿದ ಸಾಧನೆಗಳೆಲ್ಲವೂ ಸಾವಿನೊಡನೆಯೇ ನಷ್ಟವಾಗಿ ಹೋಗುತ್ತವೆ. ಹುಟ್ಟಿದಾಗಿನಿಂದಲೂ ಅವನು ಪ್ರಮತ್ತನಾಗಿರಲಿ ಅಥವಾ ಅಪ್ರಮತ್ತನೇ ಆಗಿರಲಿ–ಸಾಯುವ ಸಮಯದಲ್ಲಿ ಆ ಪ್ರಮತ್ತತ್ವಾಪ್ರಮತ್ತತ್ವಗಳು (ವಿವೇಕಾವಿವೇಕಗಳು) ವಿಶೇಷವಾದ ಯಾವ ಕಾರ್ಯವನ್ನು ಮಾಡುತ್ತವೆ?

ಅಸಂಸರ್ಗೋ ಹಿ ಭೂತೇಷು ಸಂಸರ್ಗೋ ವಾ ವಿನಾಶಿಷು ।
ಕಸ್ಮೈ ಕ್ರಿಯೇತ ಕಲ್ಪ್ಯೇತ ನಿಶ್ಚಯಃ ಕೋಽತ್ರ ತತ್ತ್ವತಃ ॥೪॥

ಮರಣಾನಂತರದಲ್ಲಿ ವಿನಾಶಹೊಂದುವ ಪಂಚಭೂತಗಳಿಗೂ–ಅವಿನಾಶಿಯಾದ ಆತ್ಮನಿಗೂ ಯಾವುದಾದರೂ ಸಂಬಂಧವಿರುವುದೇ ಅಥವಾ ಇಲ್ಲವೇ? ಒಂದು ವೇಳೆ ಇರುವುದಾದಲ್ಲಿ ಆ ಸಂಬಂಧವೂ ಯಾರಿಗಿರುತ್ತದೆ? ಹೇಗೆ ಕಲ್ಪಿತವಾಗುತ್ತದೆ? ಈ ವಿಷಯದಲ್ಲಿ ಯಥಾವತ್ತಾದ ನಿಶ್ಚಯವೇನು?”

ಭೀಷ್ಮನು ಯುಧಿಷ್ಠಿರನಿಗೆ ಹೇಳುತ್ತಾನೆ :

ತಮಸಾ ಹಿ ಪ್ರತಿಚ್ಛನ್ನಂ ವಿಭ್ರಾನ್ತಮಿವ ಚಾತುರಮ್ ।
ಪುನಃ ಪ್ರಶಮಯನ್ವಾಕ್ಯೈಃ ಕವಿಃ ಪಞ್ಚಶಿಖೋಽಬ್ರವೀತ್ ॥೫॥

“ಯುಧಿಷ್ಠಿರ! ವಿದ್ವಾಂಸನಾದ ಪಂಚಶಿಖನು ಅಜ್ಞಾನಾಂಧಕಾರದಿಂದ ಆಚ್ಛಾದಿತನಾಗಿದ್ದ, ಆತ್ಮದ ವಿಷಯವಾಗಿ ಭ್ರಾಂತನಾಗಿರುವಂತೆ ಕಾಣುತ್ತಿದ್ದ ಮತ್ತು ಆ ಕಾರಣದಿಂದಲೇ ಅತ್ಯಂತವ್ಯಾಕುಲನಾಗಿದ್ದ ಜನದೇವನನ್ನು ಹಿತವಾದ ಮಾತುಗಳಿಂದ ಸಮಾಧಾನಗೊಳಿಸುತ್ತಾ ರಾಜನನ್ನು ಕುರಿತು ಮತ್ತೆ ಹೀಗೆ ಹೇಳಿದನು :

ಉಚ್ಛೇದನಿಷ್ಠಾ ನೇಹಾಸ್ತಿ ಭಾವನಿಷ್ಠಾ ನ ವಿದ್ಯತೇ ।
ಅಯಂ ಹ್ಯಪಿ ಸಮಾಹಾರಃ ಶರೀರೇನ್ದ್ರಿಯಚೇತಸಾಮ್ ।
ವರ್ತತೇ ಪೃಥಗನ್ಯೋನ್ಯಮಪ್ಯಪಾಶ್ರಿತ್ಯ ಕರ್ಮಸು ॥೬॥

“ಜನಕಜನದೇವಮಹಾರಾಜ! ಮರಣಾನಂತರದಲ್ಲಿ ಜೀವನು ಅದು

ವರೆಗೂ ಮಾಡಿದ್ದ ಸಾಧನೆಗಳೂ ನಷ್ಟವಾಗಿಹೋಗುವುದಿಲ್ಲ. ಅವನಿಗೆ ಭಾವನಿಷ್ಠೆಯೂ ಇರುವುದಿಲ್ಲ. ಈ ದೇಹವೆಂಬುದು ಶರೀರ-ಇಂದ್ರಿಯಗಳು ಮತ್ತು ಮನಸ್ಸು–ಇವುಗಳ ಒಕ್ಕೂಟವಾಗಿದೆ. ಇವುಗಳು ಪ್ರತ್ಯೇಕ ವಾಗಿರುವಂತೆ ಕಂಡುಬಂದರೂ ಅನ್ಯೋನ್ಯಾಶ್ರಯದಿಂದ ಕರ್ಮದಲ್ಲಿ ಪ್ರವೃತ್ತವಾಗುತ್ತವೆ.

ಧಾತವಃ ಪಞ್ಚ ಭೂತೇಷು ಖಂ ವಾಯುರ್ಜ್ಯೋತಿಷೋ ಧರಾ ।
ತೇ ಸ್ವಭಾವೇನ ತಿಷ್ಠನ್ತಿ ವಿಯುಜ್ಯನ್ತೇ ಸ್ವಭಾವತಃ ॥೭॥

ಪ್ರಾಣಿಗಳ ಶರೀರದಲ್ಲಿ ಆಕಾಶ, ವಾಯು, ತೇಜಸ್ಸು, ಜಲ ಮತ್ತು ಪೃಥ್ವಿಗಳೆಂಬ ಪಂಚಧಾತುಗಳು ಅಥವಾ ಭೂತಗಳಿವೆ. ಅವುಗಳು ಸ್ವಭಾವ ದಿಂದಲೇ ಸೇರುತ್ತವೆ. ಸ್ವಭಾವದಿಂದಲೇ ಬೇರೆಯಾಗುತ್ತವೆ.

ಆಕಾಶೋ ವಾಯುರೂಷ್ಮಾ ಚ ಸ್ನೇಹೋ ಯಶ್ಚಾಪಿ ಪಾರ್ಥಿವಾಃ ।
ಏಷ ಪಞ್ಚಸಮಾಹಾರಃ ಶರೀರಮಪಿ ನೈಕಧಾ ॥೮॥

ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವಿ –ಈ ಪಂಚತತ್ತ್ವಗಳ ಸಂಕಲನದಿಂದಲೇ ಅನೇಕವಿಧವಾದ ಶರೀರಗಳ ನಿರ್ಮಾಣವಾಗಿದೆ.

ಜ್ಞಾನಮೂಷ್ಮಾ ಚ ವಾಯುಶ್ಚ ತ್ರಿವಿಧಃ ಕಾರ್ಯಸಂಗ್ರಹಃ ।
ಇನ್ದ್ರಿಯಾಣೀನ್ದ್ರಿಯಾರ್ಥಾಶ್ಚ ಸ್ವಭಾವಶ್ಚೇತನಾ ಮನಃ ।
ಪ್ರಾಣಾಪಾನೌ ವಿಕಾರಶ್ಚ ಧಾತವಶ್ಚಾತ್ರ ನಿಃಸೃತಾಃ ॥೯॥

ಶರೀರದಲ್ಲಿ ಕಾರ್ಯಸಂಗ್ರಹವು ಮೂರು ವಿಧವಾಗಿದೆ. ಜ್ಞಾನ (ಬುದ್ಧಿ), ಶಾಖ (ಜಠರಾನಲ) ಮತ್ತು ವಾಯು (ಪ್ರಾಣ) –ಈ ಮೂರು ಸಕಲಕಾರ್ಯಗಳ ಸಂಗ್ರಹಣಕ್ಕೂ ಕಾರಣಭೂತಗಳಾಗಿವೆ. ಏಕೆಂದರೆ ಇವು ಗಳಿಂದಲೇ ಇಂದ್ರಿಯಗಳು, ಇಂದ್ರಿಯಗಳ ವಿಷಯಗಳು, ಸ್ವಭಾವ (ಸತ್ತ್ವರಜಸ್ತಮೋಗುಣಗಳು), ಚೈತನ್ಯ, ಮನಸ್ಸು, ಪ್ರಾಣ, ಅಪಾನ, ವಿಕಾರ ಗಳು ಮತ್ತು ಧಾತುಗಳು ಪ್ರಕಟವಾಗಿವೆ.

ಶ್ರವಣಂ ಸ್ಪರ್ಶನಂ ಜಿಹ್ವಾ ದೃಷ್ಟಿರ್ನಾಸಾ ತಥೈವ ಚ ।
ಇನ್ದ್ರಿಯಾಣೀತಿ ಪಞ್ಚೈತೇ ಚಿತ್ತಪೂರ್ವಂ ಗತಾ ಗುಣಾಃ ॥೧೦॥

ಶ್ರವಣ, ಚರ್ಮ, ನಾಲಿಗೆ, ಕಣ್ಣು ಮತ್ತು ಮೂಗು –ಈ ಐದು ಪಂಚಜ್ಞಾನೇಂದ್ರಿಯಗಳಾಗಿವೆ. ಶಬ್ದಾದಿ ಗುಣಗಳು ಚಿತ್ತದೊಡನೆ ಕಲೆತು ಇಂದ್ರಿಯಗಳಿಗೆ ವಿಷಯವಾಗುತ್ತವೆ.

ತತ್ರ ವಿಜ್ಞಾನಸಂಯುಕ್ತಾ ತ್ರಿವಿಧಾ ಚೇತನಾ ಧ್ರುವಾ ।
ಸುಖದುಃಖೇತಿ ಯಾಮಾಹುರದುಃಖಾಮಸುಖೇತಿ ಚ ॥೧೧॥

ವಿಜ್ಞಾನಯುಕ್ತವಾದ ಶಾಶ್ವತವಾದ ಚೇತನವು ಅದುಃಖ, ಅಸುಖ ಮತ್ತು ಸುಖ-ದುಃಖ ಎಂದು ಮೂರು ಪ್ರಕಾರವಾಗಿರುವುದೆಂದು ಹೇಳುತ್ತಾರೆ.

ಶಬ್ದಃ ಸ್ಪರ್ಶಂ ಚ ರೂಪಂ ಚ ರಸೋ ಗನ್ಧಶ್ಚ ಮೂರ್ತಯಃ ।
ಏತೇ ಹ್ಯಾಮರಣಾತ್ಪುಂಸ್ಸ್ತು ಷಡ್ಗುಣಾ ಜ್ಞಾನಸಿದ್ಧಯೇ ॥೧೨॥

ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಮತ್ತು ರೂಪಾಶ್ರಯದ್ರವ್ಯಗಳೆಂಬ ಆರು ಗುಣಗಳು ಆಮರಣಾಂತವಾಗಿ ಜೀವನಿಗೆ ಇಂದ್ರಿಯಜನ್ಯವಾದ ಜ್ಞಾನಕ್ಕೆ ಸಾಧಕಗಳಾಗಿರುತ್ತವೆ. (ಇಂದ್ರಿಯಾರ್ಥಗಳೊಡನೆ ಜ್ಞಾನೇಂದ್ರಿಯಗಳ ಸಂಯೋಗವಾದನಂತರ ಭಿನ್ನ-ಭಿನ್ನವಿಷಯಗಳ ಜ್ಞಾನ ವುಂಟಾಗುತ್ತದೆ.)

ತೇಷು ಕರ್ಮವಿಸರ್ಗಶ್ಚ ಸರ್ವತತ್ತ್ವಾರ್ಥನಿಶ್ಚಯಃ ।
ತಮಾಹುಃ ಪರಮಂ ಶುಕ್ರಂ ಬುದ್ಧಿರಿತ್ಯವ್ಯಯಂ ಮಹತ್ ॥೧೩॥

ಇಂದ್ರಿಯಾರ್ಥಗಳಲ್ಲಿ ಕರ್ಮಗಳನ್ನು ಬಿಡುವುದು (ಇಂದ್ರಿಯಾರ್ಥಗಳಿಗಾಗಿ ಕರ್ಮವನ್ನು ಮಾಡದಿರುವುದು), ಸರ್ವತತ್ತ್ವಾರ್ಥಗಳ ನಿಶ್ಚಯರೂಪವಾದ ಮೋಕ್ಷಕ್ಕೆ ಸಾಧನವಾಗುತ್ತದೆ. ಆ ತತ್ತ್ವನಿಶ್ಚಯವನ್ನೇ ಪರಮಶ್ರೇಷ್ಠವಾದ ಮೋಕ್ಷಬೀಜವೆಂದೂ, ಬುದ್ಧಿಯೆಂದೂ, ಅವ್ಯಯವೆಂದೂ, ಮಹತ್ತೆಂದೂ ಹೇಳುತ್ತಾರೆ.

ಇಮಂ ಗುಣಸಮಾಹಾರಮಾತ್ಮಭಾವೇನ ಪಶ್ಯತಃ ।
ಅಸಮ್ಯಗ್ದರ್ಶನೈರ್ದುಃಖಮನನ್ತಂ ನೋಪಶಾಮ್ಯತಿ ॥೧೪॥

ಯಾರು ಗುಣಗಳ ಸಂಘಾತರೂಪವಾದ ಈ ಶರೀರವನ್ನೇ ಆತ್ಮವೆಂದು

ತಿಳಿಯುವರೋ–ಅವರು ಮಿಥ್ಯಾಜ್ಞಾನದ ಕಾರಣದಿಂದಾಗಿ ಅನಂತವಾದ ದುಃಖವನ್ನು ಹೊಂದುತ್ತಾರೆ.

ಅನಾತ್ಮೇತಿ ಚ ಯದ್ದೃಷ್ಟಂ ತೇನಾಹಂ ನ ಮಮೇತ್ಯಪಿ ।
ವರ್ತತೇ ಕಿಮಧಿಷ್ಠಾನಾತ್ಪ್ರಸಕ್ತಾ ದುಃಖಸಂಸ್ಮೃತಿಃ ॥೧೫॥

ಇದಕ್ಕೆ ಪ್ರತಿಯಾಗಿ ಯಾರ ದೃಷ್ಟಿಯಲ್ಲಿ ಈ ದೃಶ್ಯಪ್ರಪಂಚವು ಅನಾತ್ಮವೆಂದು ಕಂಡುಬಂದಿರುವುದೋ, ಯಾರಿಗೆ ದೃಶ್ಯವಾದ ಈ ಪ್ರಪಂಚ ದಲ್ಲಿ ಮಮತಾಭಾವನೆಯು ಇರುವುದಿಲ್ಲವೋ, ಯಾರು ನಿರಹಂಕಾರಿ ಗಳೋ–ಅಂತಹವರಿಗೆ ದುಃಖಪರಂಪರೆಗಳು ಹೇಗೆ ತಾನೇ ಪ್ರಾಪ್ತವಾಗು ತ್ತವೆ? ಅಂತಹ ದುಃಖಕ್ಕೆ ಯಾವುದು ತಾನೇ ಆಧಾರವಾಗಿರುತ್ತದೆ?

(ದೃಶ್ಯಪ್ರಪಂಚದಲ್ಲಿ ಆಸಕ್ತಿಯನ್ನು ಹೊಂದಿರುವುದೇ ದುಃಖಕ್ಕೆ ಮೂಲಕಾರಣವಾಗಿರುತ್ತದೆ. ಅರ್ಥಾತ್ ದೃಶ್ಯಪ್ರಪಂಚವೇ ದುಃಖಕ್ಕೆ ಅಧಿ ಷ್ಠಾನ ಅಥವಾ ಆಶ್ರಯಭೂತವಾಗಿದೆ. ಅದರಲ್ಲಿ ಮಮಕಾರವಿಲ್ಲದಿದ್ದರೆ ದುಃಖವು ಸರ್ವಥಾ ಪ್ರಾಪ್ತವಾಗುವುದಿಲ್ಲ.)

ಅತ್ರ ಸಮ್ಯಗ್ವಧೋ ನಾಮ ತ್ಯಾಗಶಾಸ್ತ್ರಮನುತ್ತಮಮ್ ।
ಶೃಣು ಯತ್ತವ ಮೋಕ್ಷಾಯ ಭಾಷ್ಯಮಾಣಂ ಭವಿಷ್ಯತಿ ॥೧೬॥

ನಾನೀಗ ನಿನಗೆ ಪರಮಶ್ರೇಷ್ಠವಾದ 'ಸಮ್ಯಗ್ವಧ'– ಎಂಬ ಹೆಸರಿನ ತ್ಯಾಗಶಾಸ್ತ್ರವನ್ನು (ಸಾಂಖ್ಯಶಾಸ್ತ್ರ) ಉಪದೇಶಮಾಡುತ್ತೇನೆ. ನೀನು ಅದನ್ನು ಏಕಾಗ್ರತೆಯಿಂದ ಕೇಳು. ಅದರ ಉಪದೇಶವು ನಿನಗೆ ಮೋಕ್ಷದಾಯಕ ವಾಗುತ್ತದೆ.

ತ್ಯಾಗ ಏವ ಹಿ ಸರ್ವೇಷಾಂ ಯುಕ್ತಾನಾಮಪಿ ಕರ್ಮಣಾಮ್ ।
ನಿತ್ಯಂ ಮಿಥ್ಯಾವಿನೀತಾನಾಂ ಕ್ಲೇಶೋ ದುಃಖವಹೋ ಮತಃ ॥೧೭॥

ಯಾರು ಮೋಕ್ಷಕ್ಕಾಗಿ ಪ್ರಯತ್ನಿಸುವರೋ–ಅವರು ಯೋಗ್ಯಕರ್ಮ ಗಳಿಗೆ ಸಂಬಂಧಪಟ್ಟ ಸಂಪೂರ್ಣವಾದ ಕಾಮನೆಗಳನ್ನೂ, (ಅಹಂಕಾರ-

ಮಮಕಾರಗಳನ್ನೂ, ವಿಷಯಾಸಕ್ತಿಯನ್ನೂ) ತ್ಯಾಗಮಾಡಬೇಕು. ತ್ಯಾಗ ಮಾಡದೇ ಯಾರು ಶಮ-ದಮಾದಿ ಸಾಧನಗಳಲ್ಲಿ ತತ್ಪರರಾಗಿರುವರೋ ಅವರು ಮಿಥ್ಯಾಸಾಧಕರೇ ಆಗಿರುತ್ತಾರೆ. ಅಂತಹವರಿಗೆ ದುಃಖದಾಯಕ ವಾದ ಕ್ಲೇಶಗಳುಂಟಾಗುತ್ತವೆ.

ದ್ರವ್ಯತ್ಯಾಗೇ ತು ಕರ್ಮಾಣಿ ಭೋಗತ್ಯಾಗೇ ವ್ರತಾನ್ಯಪಿ ।
ಸುಖತ್ಯಾಗೇ ತಪೋ ಯೋಗಂ ಸರ್ವತ್ಯಾಗೇ ಸಮಾಪನಾ ॥೧೮॥

ಶಾಸ್ತ್ರದಲ್ಲಿ ದ್ರವ್ಯತ್ಯಾಗಕ್ಕಾಗಿ ಯಜ್ಞಾದಿಕರ್ಮಗಳನ್ನೂ, ಭೋಗತ್ಯಾಗ ಕ್ಕಾಗಿ ಕೃಚ್ಛ್ರ-ಚಾಂದ್ರಾಯಣಾದಿ ವ್ರತಗಳನ್ನೂ, ದೈಹಿಕಸುಖತ್ಯಾಗಕ್ಕಾಗಿ ತಪಸ್ಸನ್ನೂ, ಸರ್ವತ್ಯಾಗಕ್ಕಾಗಿ (ಅಹಂಕಾರ, ಮಮಕಾರ, ಆಸಕ್ತಿ ಮತ್ತು ಕಾಮನೆಗಳ ತ್ಯಾಗಕ್ಕಾಗಿ) ಯೋಗಾನುಷ್ಠಾನವನ್ನೂ ಹೇಳಿದ್ದಾರೆ. ಹಾಗೆ ಸರ್ವವನ್ನೂ ತ್ಯಾಗಮಾಡಿದರೆ ಮುಕ್ತಿಯು ದೊರೆಯುತ್ತದೆ.

ತಸ್ಯ ಮಾರ್ಗೋಽಯಮದ್ವೈಧಃ ಸರ್ವತ್ಯಾಗಸ್ಯ ದರ್ಶಿತಃ ।
ವಿಪ್ರಹಾಣಾಯ ದುಃಖಸ್ಯ ದುರ್ಗತಿಸ್ತ್ವನ್ಯಥಾ ಭವೇತ್ ॥೧೯॥

ಸರ್ವತ್ಯಾಗರೂಪವಾದ ಯೋಗಾನುಷ್ಠಾನವು ದುಃಖನಿವಾರಣೆಗಾಗಿ ಹೇಳಿರುವ ಏಕೈಕಮಾರ್ಗವಾಗಿದೆ. ಇದಕ್ಕೆ ವಿಪರೀತವಾಗಿ ವರ್ತಿಸುವವನಿಗೆ (ತ್ಯಾಗಬುದ್ಧಿಯಿಲ್ಲದವನಿಗೆ) ದುರ್ಗತಿಯೇ ಪ್ರಾಪ್ತವಾಗುತ್ತದೆ.

ಪಞ್ಚಜ್ಞಾನೇನ್ದ್ರಿಯಾಣ್ಯುಕ್ತ್ವಾ ಮನಃ ಷಷ್ಠಾನಿ ಚೇತಸಿ ।
ಬಲಷಷ್ಠಾನಿ ವಕ್ಷ್ಯಾಮಿ ಪಞ್ಚಕರ್ಮೇನ್ದ್ರಿಯಾಣಿ ತು ॥೨೦॥

ಬುದ್ಧಿಯಲ್ಲಿರುವ ಮನಸ್ಸಿನಿಂದ ಯುಕ್ತವಾದ ಐದು ಜ್ಞಾನೇಂದ್ರಿಯಗಳ ವಿಷಯವನ್ನು ಹೇಳಿದನಂತರ ಐದು ಕರ್ಮೇಂದ್ರಿಯಗಳ ವಿಷಯವನ್ನೂ ಹೇಳುತ್ತೇನೆ. ಅದರೊಡನೆ ಆರನೆಯ ಪ್ರಾಣಶಕ್ತಿಯ ವಿಷಯವನ್ನೂ ಹೇಳುತ್ತೇನೆ.

ಹಸ್ತೌ ಕರ್ಮೇನ್ದ್ರಿಯಂ ಜ್ಞೇಯಮಥ ಪಾದೌ ಗತೀನ್ದ್ರಿಯಮ್ ।
ಪ್ರಜನಾನನ್ದಯೋಃ ಶೇಫೋ ನಿಸರ್ಗೇ ಪಾಯುರಿನ್ದ್ರಿಯಮ್ ॥೨೧॥

ಎರಡು ಕೈಗಳು ಕಾರ್ಯಮಾಡುವ ಕರ್ಮೇಂದ್ರಿಯಗಳು. ಎರಡು ಪಾದಗಳು ನಡೆದಾಡುವ ಕರ್ಮೇಂದ್ರಿಯಗಳು. ಲಿಂಗವು ಸಂತಾನೋತ್ಪಾದಕವಾದ ಮತ್ತು ಮೈಥುನದಿಂದ ಆನಂದವನ್ನುಂಟುಮಾಡುವ ಕರ್ಮೇಂದ್ರಿಯವು. ಗುದವು ಮಲವನ್ನು ಹೊರಹಾಕುವ ಕರ್ಮೇಂದ್ರಿಯವು.

ವಾಕ್ಚ ಶಬ್ದವಿಶೇಷಾರ್ಥಮಿತಿ ಪಞ್ಚಾನ್ವಿತಂ ವಿದುಃ ।
ಏವಮೇಕಾದಶೈತಾನಿ ಬುದ್ಧ್ಯಾಶು ವಿಸೃಜೇನ್ಮನಃ ॥೨೨॥

ಮಾತು ಶಬ್ದವಿಶೇಷವನ್ನು ಉಚ್ಚರಿಸುವ ಕರ್ಮೇಂದ್ರಿಯವು. ಹೀಗೆ ಐದು ಕರ್ಮೇಂದ್ರಿಯಗಳೂ ಐದು ವಿಧವಾದ ಕರ್ಮಗಳನ್ನು ಹೊಂದಿವೆಯೆಂದು ವಿದ್ವಾಂಸರು ತಿಳಿಯುತ್ತಾರೆ. ಮನಸ್ಸಿನಿಂದ ಕೂಡಿದ ಹನ್ನೊಂದು ಇಂದ್ರಿಯಗಳನ್ನೂ ಮತ್ತು ಅವುಗಳಿಗೆ ಸಂಬಂಧಿಸಿದ ವಿಷಯಗಳನ್ನೂ ಶೀಘ್ರವಾಗಿ ಬುದ್ಧಿಯ ಮೂಲಕವಾಗಿ ತ್ಯಜಿಸಬೇಕು.

ಕರ್ಣೌ ಶಬ್ದಶ್ಚ ಚಿತ್ತಂ ಚ ತ್ರಯಃ ಶ್ರವಣಸಂಗ್ರಹೇ ।
ತಥಾ ಸ್ಪರ್ಶೇ ತಥಾ ರೂಪೇ ತಥೈವ ರಸಗನ್ಧಯೋಃ ॥೨೩॥

ಶ್ರವಣಕಾಲದಲ್ಲಿ ಶ್ರೋತ್ರರೂಪವಾದ ಇಂದ್ರಿಯಕ್ಕೂ, ಶಬ್ದರೂಪವಾದ ವಿಷಯಕ್ಕೂ, ಚಿತ್ತರೂಪವಾದ ಕರ್ತೃವಿಗೂ ಸಂಯೋಗವುಂಟಾಗುತ್ತದೆ. ಅದೇ ರೀತಿಯಲ್ಲಿ ಸ್ಪರ್ಶಸಮಯದಲ್ಲಿ ಚರ್ಮರೂಪವಾದ ಇಂದ್ರಿಯಕ್ಕೂ, ಸ್ಪರ್ಶರೂಪವಾದ ವಿಷಯಕ್ಕೂ, ಚಿತ್ತರೂಪವಾದ ಕರ್ತೃವಿಗೂ ಸಂಯೋಗವುಂಟಾಗುತ್ತದೆ. ನೋಡುವಾಗ ನೇತ್ರರೂಪವಾದ ಇಂದ್ರಿಯಕ್ಕೂ, ನೇತ್ರಕ್ಕೆ ವಿಷಯವಾದ ರೂಪಕ್ಕೂ, ಚಿತ್ತರೂಪವಾದ ಕರ್ತೃವಿಗೂ ಸಂಯೋಗವುಂಟಾಗುತ್ತದೆ. ಪದಾರ್ಥಗಳ ರುಚಿಯನ್ನು ನೋಡುವಾಗ ಜಿಹ್ವಾರೂಪವಾದ ಇಂದ್ರಿಯಕ್ಕೂ, ರಸರೂಪವಾದ ವಿಷಯಕ್ಕೂ,

ಚಿತ್ತರೂಪವಾದ ಕರ್ತೃವಿಗೂ ಸಂಯೋಗವುಂಟಾಗುತ್ತದೆ. ವಾಸನೆಯನ್ನು ನೋಡುವಾಗ ಆಘ್ರಾಣರೂಪವಾದ ಇಂದ್ರಿಯಕ್ಕೂ, ವಿಷಯರೂಪವಾದ ಗಂಧಕ್ಕೂ, ಚಿತ್ತರೂಪವಾದ ಕರ್ತೃವಿಗೂ ಸಂಯೋಗವುಂಟಾಗುತ್ತದೆ.

ಏವಂ ಪಞ್ಚತ್ರಿಕಾ ಹ್ಯೇತೇ ಗುಣಾಸ್ತದುಪಲಬ್ಧಯೇ ।
ಯೇನಾಯಂ ತ್ರಿವಿಧೋ ಭಾವಃ ಪರ್ಯಾಯಾತ್ಸಮುಪಸ್ಥಿತಃ ॥೨೪॥

ಹೀಗೆ ಮೂರು-ಮೂರರಂತೆ ಐದು ಸಮುದಾಯಗಳಿವೆ. ಇದಕ್ಕೆ ಗುಣಗಳೆನ್ನುತ್ತಾರೆ. ಈ ಗುಣಗಳಿಂದ ಶಬ್ದಾದಿ ವಿಷಯಗಳ ಗ್ರಹಣವಾಗುತ್ತದೆ. ಅನುಭವವನ್ನು ತಿಳಿಯಪಡಿಸುವ ಕಾರಣದಿಂದ ಇದು ಕರ್ತಾ, ಕರ್ಮ ಮತ್ತು ಕರಣಗಳೆಂಬ ಮೂರು ವಿಧವಾದ ಭಾವವನ್ನು ಹೊಂದಿದೆ. ಅವು ಪರ್ಯಾಯವಾಗಿ ಉಪಸ್ಥಿತವಾಗುತ್ತವೆ.

ಸಾತ್ತ್ವಿಕೋ ರಾಜಸಶ್ಚಾಪಿ ತಾಮಸಶ್ಚಾಪಿ ತೇ ತ್ರಯಃ ।
ತ್ರಿವಿಧಾ ವೇದನಾ ಯೇಷು ಪ್ರಸೂತಾಃ ಸರ್ವಸಾಧನಾಃ ॥೨೫॥

ಈ ಗುಣಗಳಲ್ಲಿ ಸಾತ್ತ್ವಿಕ-ರಾಜಸ-ತಾಮಸಗಳೆಂಬ ಮೂರು ಭೇದಗಳಿವೆ. ಇವುಗಳಿಂದ ಪ್ರಾಪ್ತವಾಗುವ ಅನುಭವಗಳೂ ಹರ್ಷ-ಪ್ರೀತಿ-ವಿಷಾದಗಳೆಂಬ ಮೂರು ಪ್ರಕಾರವಾಗಿವೆ. ಅವು ಎಲ್ಲ ಸಾಧನೆಗಳನ್ನೂ ಉಂಟುಮಾಡುತ್ತವೆ.

ಪ್ರಹರ್ಷಃ ಪ್ರೀತಿರಾನನ್ದಃ ಸುಖಂ ಸಂಶಾನ್ತಚಿತ್ತತಾ ।
ಅಕುತಶ್ಚಿತ್ಕುತಶ್ಚಿದ್ವಾ ಚಿನ್ತಿತಃ ಸಾತ್ತ್ವಿಕೋ ಗುಣಃ ॥೨೬॥

ಹರ್ಷ, ಪ್ರೀತಿ, ಆನಂದ ಮತ್ತು ಚಿತ್ತಶಾಂತಿ–ಈ ಭಾವಗಳು ನಮಗೆ ತಿಳಿದಿರುವ ಯಾವುದಾದರೂ ಕಾರಣವಿಲ್ಲದೆಯೇ ಉಂಟಾಗಿರಲಿ ; ಭಕ್ತಿ-ವೈರಾಗ್ಯ-ಜ್ಞಾನ ಮತ್ತು ಸತ್ಸಂಗ–ಇತ್ಯಾದಿ ಕಾರಣಗಳಿಂದಲೇ ಉಂಟಾಗಿರಲಿ–ಅದಕ್ಕೆ ಸಾತ್ತ್ವಿಕಗುಣವೆಂದು ಹೆಸರು.

ಅತುಷ್ಟಿಃ ಪರಿತಾಪಶ್ಚ ಶೋಕೋ ಲೋಭಸ್ತಥಾಕ್ಷಮಾ ।
ಲಿಙ್ಗಾನಿ ರಜಸಸ್ತಾನಿ ದೃಶ್ಯನ್ತೇ ಹೇತ್ವಹೇತುತಃ ॥೨೭॥

ಅಸಂತೋಷ, ಸಂತಾಪ, ಶೋಕ, ಲೋಭ ಮತ್ತು ಅಸಹನಶೀಲತೆ ಇವು ಕಾರಣದಿಂದಲೇ ಉಂಟಾಗಿರಲಿ ; ನಮಗೆ ತಿಳಿದ ಕಾರಣಗಳಿಲ್ಲದೆಯೇ ನಿಷ್ಕಾರಣವಾಗಿಯೇ ಉಂಟಾಗಿರಲಿ–ರಜೋಗುಣದಿಂದ ಕೂಡಿರುತ್ತವೆ.

ಅವಿವೇಕಸ್ತಥಾ ಮೋಹಃ ಪ್ರಮಾದಃ ಸ್ವಪ್ನತನ್ದ್ರಿತಾ ।
ಕಥಂಚಿದಪಿ ವರ್ತನ್ತೇ ವಿವಿಧಾಸ್ತಾಮಸಾ ಗುಣಾ ॥೨೮॥

ಅವಿವೇಕ, ಮೋಹ, ಪ್ರಮಾದ, ಸ್ವಪ್ನ ಮತ್ತು ಆಲಸ್ಯ –ಇವುಗಳು ಯಾವುದೇ ಕಾರಣದಿಂದ ಉಂಟಾಗಿರಲಿ ಇವುಗಳೆಲ್ಲವೂ ತಮೋಗುಣದ ವಿವಿಧರೂಪಗಳಾಗಿವೆ.

ಅತ್ರ ಯತ್ಪ್ರೀತಿಸಂಯುಕ್ತಂ ಕಾಯೇ ಮನಸಿ ವಾ ಭವೇತ್ ।
ವರ್ತತೇ ಸಾತ್ತ್ವಿಕೋ ಭಾವ ಇತ್ಯಪೇಕ್ಷೇತ ತತ್ತಥಾ ॥೨೯॥

ಇವುಗಳಲ್ಲಿ ಯಾವುದು ಶರೀರದಲ್ಲಿ ಅಥವಾ ಮನಸ್ಸಿನಲ್ಲಿ ಪ್ರೀತಿಯ ಸಂಯೋಗದಿಂದ ಆವಿರ್ಭವಿಸುವುದೋ –ಅದು ಸಾತ್ತ್ವಿಕಭಾವವಾಗಿದೆ. ಸರ್ವದಾ ಹರ್ಷಚಿತ್ತನಾಗಿರುವವನು ಸಾತ್ತ್ವಿಕಗುಣಾಧಿಕ್ಯವುಳ್ಳವನಾಗಿರುವ ನೆಂದು ತಿಳಿಯಬೇಕು.

ಯತ್ತ್ವಸಂತೋಷಸಂಯುಕ್ತಮಪ್ರೀತಿಕರಮಾತ್ಮನಃ ।
ಪ್ರವೃತ್ತಂ ರಜ ಇತ್ಯೇವಂ ತತಸ್ತದಪಿ ಚಿನ್ತಯೇತ್ ॥೩೦॥

ರಜೋಗುಣವು ಅಸಂತೋಷದಿಂದ ಯುಕ್ತವಾದುದು. ಮನಸ್ಸಿಗೆ ಅಪ್ರೀತಿಯನ್ನು ಉಂಟುಮಾಡತಕ್ಕುದು. ಮನಸ್ಸಿನಲ್ಲಿ ಯಾವಾಗಲೂ ಅಸಂತೋಷ-ಅಪ್ರೀತಿಗಳಿದ್ದರೆ ರಜೋಗುಣವು ಅಭಿವೃದ್ಧಿಯಾಗಿದೆಯೆಂದು ತಿಳಿಯಬೇಕು.

ಅಥ ಯನ್ಮೋಹಸಂಯುಕ್ತಂ ಕಾಯೇ ಮನಸಿ ವಾ ಭವೇತ್ ।
ಅಪ್ರತರ್ಕ್ಯಮವಿಜ್ಞೇಯಂ ತಮಸ್ತದುಪಧಾರಯೇತ್ ॥೩೧॥

ಶರೀರದಲ್ಲಿ ಅಥವಾ ಮನಸ್ಸಿನಲ್ಲಿ ಊಹೆಗೆ ಸಿಕ್ಕದ, ಹೇಳಲು ತಿಳಿಯದ ಮೋಹಯುಕ್ತವಾದ ಭಾವವುಂಟಾಗುತ್ತದೆ. ಆ ಮೋಹವು ತಮೋಗುಣದಿಂದ ಹುಟ್ಟಿದುದೆಂದು ತಿಳಿಯಬೇಕು.

ಶ್ರೋತ್ರಂ ವ್ಯೋಮಾಶ್ರಿತಂ ಭೂತಂ ಶಬ್ದಃ ಶ್ರೋತ್ರಂ ಸಮಾಶ್ರಿತಃ ।
ನೋಭಯಂ ಶಬ್ದವಿಜ್ಞಾನೇ ವಿಜ್ಞಾನಸ್ಯೇತರಸ್ಯ ವಾ ॥೩೨॥

ಶ್ರೋತ್ರವು (ಕಿವಿಯು) ಮಹಾಭೂತಗಳಲ್ಲೊಂದಾದ ಆಕಾಶವನ್ನು ಆಶ್ರಯಿಸಿದೆ. ಶಬ್ದವು ಕಿವಿಯನ್ನು ಆಶ್ರಯಿಸಿದೆ. ಪರಂಪರಾಸಂಬಂಧ ದಿಂದಾಗಿ ಶಬ್ದವೂ ಆಕಾಶಭೂತದ ವಿಕಾರವೇ ಆಗಿದೆ. ಆದರೆ ಆಕಾಶ ಮತ್ತು ಕಿವಿಗಳು ಶಬ್ದಜ್ಞಾನಕ್ಕೆ ವಿಷಯಗಳಾಗುವುದಿಲ್ಲ. ಶಬ್ದವನ್ನು ಕೇಳುವವನಿಗೆ ಶ್ರೋತ್ರಾಕಾಶಗಳ ಅರಿವಾಗುವುದಿಲ್ಲ. ಅವುಗಳೆರಡೂ ಅಜ್ಞಾತವಾಗಿಯೇ ಇರುತ್ತವೆ. ಅಜ್ಞಾನಕ್ಕೂ ಶ್ರೋತ್ರಾಕಾಶಗಳು ವಿಷಯಗಳಾಗುವುದಿಲ್ಲ.

ಏವಂ ತ್ವಕ್ಚಕ್ಷುಷೀ ಜಿಹ್ವಾ ನಾಸಿಕಾ ಚೇತಿ ಪಞ್ಚಮೀ ।
ಸ್ಪರ್ಶೇ ರೂಪೇ ರಸೇ ಗನ್ಧೇ ತಾನಿ ಚೇತೋ ಮನಶ್ಚ ತತ್ ॥೩೩॥

ಹೀಗೆಯೇ ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗು–ಇವುಗಳು ಕ್ರಮವಾಗಿ ಸ್ಪರ್ಶ-ರೂಪ-ರಸ-ಗಂಧಗಳಿಗೆ ಆಶ್ರಯಗಳಾಗಿವೆ ಮತ್ತು ಇವು ಗಳಿಗೆ ಆಧಾರಭೂತವಾದ ವಾಯು, ಅಗ್ನಿ, ಜಲ ಮತ್ತು ಪೃಥಿವೀಭೂತಗಳ ಸ್ವರೂಪಗಳೇ ಆಗಿವೆ. ಇವುಗಳೆಲ್ಲಕ್ಕೂ ಕಾರಣವು ಮನಸ್ಸೇ ಆಗಿದೆ. ಆದು ದರಿಂದ ಇವು ಮನಸ್ಸಿನ ರೂಪಗಳೇ ಆಗಿವೆ.

ಸ್ವಕರ್ಮಯುಗಪದ್ಭಾವೋ ದಶಸ್ವೇತೇಷು ತಿಷ್ಠತಿ ।
ಚಿತ್ತಮೇಕಾದಶಂ ವಿದ್ಧಿ ಬುದ್ಧಿರ್ದ್ವಾದಶಮೀ ಭವೇತ್ ॥೩೪॥

ಈ ಹತ್ತು ಇಂದ್ರಿಯಗಳಿಗೂ ತಮ-ತಮಗೆ ಸಂಬಂಧಿಸಿದ ವಿಷಯ ಗಳನ್ನು ಒಂದೇ ಬಾರಿಗೆ ಗ್ರಹಿಸುವ ಶಕ್ತಿಯಿರುತ್ತದೆ. ದಶೇಂದ್ರಿಯಗಳಾದ ನಂತರ ಹನ್ನೊಂದನೆಯದನ್ನು ಚಿತ್ತವೆಂದೂ–ಹನ್ನೆರಡನೆಯದನ್ನು ಬುದ್ಧಿ ಯೆಂದೂ ತಿಳಿಯಬೇಕು.

ತೇಷಾಮಯುಗಪದ್ಭಾವ ಉಚ್ಛೇದೋ ನಾಸ್ತಿ ತಾಮಸೇ ।
ಅಸ್ಥಿತೋ ಯುಗಪದ್ಭಾವೋ ವ್ಯವಹಾರಃ ಸ ಲೌಕಿಕಃ ॥೩೫॥

ತಮೋಗುಣಜನಿತವಾದ ಸುಷುಪ್ತಿಕಾಲದಲ್ಲಿ ಇಂದ್ರಿಯಗಳೆಲ್ಲವೂ ಮನಸ್ಸಿನಲ್ಲಿ ವಿಲೀನವಾಗುವುದರಿಂದ ವಿಷಯಗಳನ್ನು ಗ್ರಹಿಸುವುದಿಲ್ಲ. ಆದರೆ ಆ ಸಮಯದಲ್ಲಿ ಅವುಗಳ ನಾಶವಾಗುವುದಿಲ್ಲ. ಇಂದ್ರಿಯಗಳು ವಿಷಯಗಳನ್ನು ಏಕಕಾಲದಲ್ಲಿ ಗ್ರಹಣಮಾಡುತ್ತವೆಯೆಂಬುದು ಲೌಕಿಕ ವ್ಯವಹಾರದಲ್ಲಿಯೇ ಕಂಡುಬರುತ್ತದೆ. ಸುಷುಪ್ತಿಕಾಲದಲ್ಲಿ ಮಾತ್ರ ಅವು ಹಾಗೆ ಮಾಡಲಾರವು.

ಇನ್ದ್ರಿಯಾಣ್ಯಪಿ ಸೂಕ್ಷ್ಮಾಣಿ ದೃಷ್ಟ್ವಾ ಪೂರ್ವಶ್ರುತಾಗಮಾತ್ ।
ಚಿನ್ತಯನ್ನಾನುಪರ್ಯೇತಿ ತ್ರಿಭಿರೇವಾನ್ವಿತೋ ಗುಣೈಃ ॥೩೬॥

ಜಾಗ್ರದವಸ್ಥೆಯಲ್ಲಿ ಶ್ರವಣ-ದರ್ಶನಾದಿಗಳ ಮೂಲಕ ಶಬ್ದಾದಿ ವಿಷಯಗಳ ಪ್ರಾಪ್ತಿಯುಂಟಾಗುವುದರಿಂದ ಸ್ವಪ್ನಾವಸ್ಥೆಯಲ್ಲಿಯೂ ಪುರುಷನು ಸೂಕ್ಷ್ಮವಾದ ಇಂದ್ರಿಯಗಳನ್ನು ನೋಡಿ ವಿಷಯಸಂಗದಲ್ಲಿ ಆಸಕ್ತಿಯನ್ನು ಹೊಂದಿ ಸತ್ತ್ವಾದಿ ಮೂರು ಗುಣಗಳಿಂದ ಯುಕ್ತನಾಗಿ ಶರೀರದಲ್ಲಿ ತಿರುಗುತ್ತಿರುತ್ತಾನೆ.

ಯತ್ತಮೋಪಹತಂ ಚಿತ್ತಮಾಶು ಸಂಹಾರಮಧ್ರುವಮ್ ।
ಕರೋತ್ಯುಪರಮಂ ಕಾಯೇ ತದಾಹುಸ್ತಾಮಸಂ ಬುಧಾಃ ॥೩೭॥

ಸುಷುಪ್ತಿಕಾಲದಲ್ಲಿ ಮನಸ್ಸು ತಮೋಗುಣದಿಂದ ಕೂಡಿ ತನ್ನ ಪ್ರವೃತ್ತಿ-ಪ್ರಕಾಶ-ಸ್ವಭಾವಗಳನ್ನು ಶೀಘ್ರವಾಗಿ ಉಪಸಂಹರಿಸಿ ಸ್ವಲ್ಪ ಹೊತ್ತು ಇಂದ್ರಿಯವ್ಯಾಪಾರಗಳನ್ನೂ ನಿಲ್ಲಿಸಿರುತ್ತದೆ. ಆ ಸಮಯದಲ್ಲಿ ಶರೀರಕ್ಕೆ ಉಂಟಾಗುವ ಸುಖವನ್ನು ವಿದ್ವಾಂಸರು ತಾಮಸಸುಖವೆನ್ನುತ್ತಾರೆ.

ಯದ್ವದಾಗಮಸಂಯುಕ್ತಂ ನ ಕೃಚ್ಛ್ರಮನುಪಶ್ಯತಿ ।
ಅಥ ತತ್ರಾಪ್ಯುಪಾದತ್ತೇ ತಮೋಽವ್ಯಕ್ತಮಿವಾನೃತಮ್ ॥೩೮॥

ಸ್ವಪ್ನವನ್ನು ಕಾಣುವ ಮನುಷ್ಯನು ಕನಸಿನಲ್ಲಿ ಕಷ್ಟಗಳನ್ನು ಕಾಣುವಂತೆ ಸುಷುಪ್ತ್ಯವಸ್ಥೆಯಲ್ಲಿರುವವನು ಕಷ್ಟಗಳನ್ನು ಕಾಣುವುದಿಲ್ಲ. ಆದುದರಿಂದ ಸುಷುಪ್ತಿಕಾಲದಲ್ಲಿಯೂ ತಮೋಗುಣಯುಕ್ತವಾದ ಮಿಥ್ಯಾಸುಖವನ್ನು ಜೀವನು ಅನುಭವಿಸುತ್ತಾನೆ.

ಏವಮೇಷ ಪ್ರಸಂಖ್ಯಾತಃ ಸ್ವಕರ್ಮಪ್ರತ್ಯಯೋ ಗುಣಃ ।
ಕಥಞ್ಚಿದ್ವರ್ತತೇ ಸಮ್ಯಕ್ಕೇಷಾಂಚಿದ್ವಾ ನಿವರ್ತತೇ ॥೩೯॥

ಹೀಗೆ ಕರ್ಮಾನುಸಾರವಾಗಿ ಗುಣವು ಪ್ರಾಪ್ತವಾಗುವುದೆಂಬ ವಿಷಯವನ್ನು ಹೇಳಿಯಾಯಿತು. ಕೆಲವರಲ್ಲಿ (ಅಜ್ಞಾನಿಗಳಲ್ಲಿ) ಈ ಗುಣವು (ತಾಮಸಗುಣವು) ಬೃಹದ್ರೂಪದಲ್ಲಿರುತ್ತದೆ. ಕೆಲವರಿಂದ (ಜ್ಞಾನಿಗಳಿಂದ) ದೂರವಾಗಿರುತ್ತದೆ.

ಏತದಾಹುಃ ಸಮಾಹಾರಂ ಕ್ಷೇತ್ರಮಧ್ಯಾತ್ಮಚಿನ್ತಕಾಃ ।
ಸ್ಥಿತೋ ಮನಸಿ ಯೋ ಭಾವಃ ಸ ವೈ ಕ್ಷೇತ್ರಜ್ಞ ಉಚ್ಯತೇ ॥೪೦॥

ಅಧ್ಯಾತ್ಮಚಿಂತಕರು ಶರೀರ ಮತ್ತು ಇಂದ್ರಿಯಗಳ ಈ ಸಂಘಾತವನ್ನೇ ಕ್ಷೇತ್ರವೆಂದು ಕರೆಯುತ್ತಾರೆ. ಮನಸ್ಸಿನಲ್ಲಿ ಯಾವ ಚಿದ್ಭಾವವಿರುವುದೋ ಅದನ್ನು ಕ್ಷೇತ್ರಜ್ಞನೆಂದು ಕರೆಯುತ್ತಾರೆ.

ಏವಂ ಸತಿ ಕ ಉಚ್ಛೇದಃ ಶಾಶ್ವತೋ ವಾ ಕಥಂ ಭವೇತ್ ।
ಸ್ವಭಾವಾದ್ವರ್ತಮಾನೇಷು ಸರ್ವಭೂತೇಷು ಹೇತುತಃ ॥೪೧॥

ಹೀಗಿರುವಾಗ ಆತ್ಮನ ವಿನಾಶವು ಹೇಗಾಗುತ್ತದೆ? ಅಥವಾ ಹೇತು ಪೂರ್ವಕವಾದ ಪ್ರಕೃತಿಗೆ ಅನುಸಾರವಾಗಿ ಪ್ರವೃತ್ತವಾಗುವ ಪಂಚ ಮಹಾಭೂತಗಳೊಡನೆ ಆತ್ಮದ ಸಂಸರ್ಗವು ಶಾಶ್ವತವಾಗಿ ಹೇಗೆ ತಾನೇ ಇರುತ್ತದೆ?

ಯಥಾರ್ಣವಗತಾ ನದ್ಯೋ ವ್ಯಕ್ತೀರ್ಜಹತಿ ನಾಮ ಚ ।
ನದಾಶ್ಚ ತಾ ನಿಯಚ್ಛನ್ತಿ ತಾದೃಶಃ ಸತ್ತ್ವಸಂಕ್ಷಯಃ ॥೪೨॥

ನದಿಗಳು ಸಮುದ್ರದೊಡನೆ ಸೇರಿ ತಮ್ಮ ವ್ಯಕ್ತಿತ್ವಗಳನ್ನೂ ಮತ್ತು ಹೆಸರುಗಳನ್ನೂ ಹೇಗೆ ಕಳೆದುಕೊಳ್ಳುತ್ತವೆಯೋ ಮತ್ತು ಸಮುದ್ರಗಳು ಆ ಎಲ್ಲ ನದಿಗಳನ್ನೂ ತಮ್ಮಲ್ಲಿ ಸಂಗ್ರಹಿಸಿಕೊಳ್ಳುತ್ತವೆಯೋ–ಹಾಗೆಯೇ ಸತ್ತ್ವಗಳು (ಜೀವಗಳು) ತಮ್ಮ ಮೂಲಕಾರಣದಲ್ಲಿ ಸೇರಿ ತಮ್ಮ ವ್ಯಕ್ತಿತ್ವಗಳನ್ನೂ, ಹೆಸರುಗಳನ್ನೂ ಕಳೆದುಕೊಳ್ಳುತ್ತವೆ ಮತ್ತು ಮೂಲಕಾರಣವು ಅವುಗಳನ್ನು ತನ್ನಲ್ಲಿ ಸಂಗ್ರಹಿಸಿಕೊಳ್ಳುತ್ತದೆ.

ಏವಂ ಸತಿ ಕುತಃ ಸಂಜ್ಞಾ ಪ್ರೇತ್ಯಭಾವೇ ಪುನರ್ಭವೇತ್ ।
ಪ್ರತಿಸಮ್ಮಿಶ್ರಿತೇ ಜೀವೇಽಗೃಹ್ಯಮಾಣೇ ಚ ಸರ್ವತಃ ॥೪೩॥

ಹೀಗೆ ಮರಣಾನಂತರ ಆ ಜೀವದ ನಾಮ-ರೂಪಗಳನ್ನು ಪುನಃ ಯಾವುದೇ ಕಾರಣದಿಂದಲೂ ಗುರುತಿಸಲು ಸಾಧ್ಯವಾಗುವುದಿಲ್ಲ. ಹೀಗಿರುವಾಗ ಮರಣಾನಂತರ ಜೀವಕ್ಕೆ ಸಂಜ್ಞೆಯು ಹೇಗೆ ತಾನೇ ಇರುತ್ತದೆ?

ಇಮಾಂ ಚ ಯೋ ವೇದ ವಿಮೋಕ್ಷಬುದ್ಧಿ-
ಮಾತ್ಮಾನಮನ್ವಿಚ್ಛತಿ ಚಾಪ್ರಮತ್ತಃ ।
ನ ಲಿಪ್ಯತೇ ಕರ್ಮಫಲೈರನಿಷ್ಟೈಃ
ಪತ್ರಂ ಬಿಸಸ್ಯೇವ ಜಲೇನ ಸಿಕ್ತಮ್ ॥೪೪॥

ಯಾವನು ಇಂತಹ ಮೋಕ್ಷವಿದ್ಯೆಯನ್ನು ತಿಳಿಯುವನೋ, ಅಪ್ರಮತ್ತನಾಗಿ ಆತ್ಮತತ್ತ್ವವನ್ನು ಅನುಸಂಧಾನಮಾಡುವನೋ–ಅವನು ನೀರಿನಿಂದ ಕೂಡಿರುವ ತಾವರೆಯ ಎಲೆಯಂತೆ ಅನಿಷ್ಟವಾದ ಕರ್ಮಫಲಗಳಿಂದ ಲಿಪ್ತನಾಗುವುದಿಲ್ಲ.

(ಕಮಲದ ಎಲೆಯ ಮೇಲೆ ನೀರು ಬಿದ್ದರೂ ಆ ನೀರು ಕಮಲದ ಎಲೆಗೆ ಅಂಟಿಕೊಳ್ಳುವುದಿಲ್ಲ. ಮುತ್ತಿನಂತೆ ಹರಿದಾಡುತ್ತಿದ್ದು ಕೆಳಕ್ಕೆ ಬಿದ್ದುಹೋಗುತ್ತದೆ. ನೀರುಬಿದ್ದ ಕಾರಣದಿಂದ ಎಲೆಯಲ್ಲಿ ಯಾವ ತೇವದ ಅಂಶವೂ ಉಳಿದಿರುವುದಿಲ್ಲ.)

ದೃಢೈರ್ಹಿ ಪಾಶೈರ್ಬಹುಭಿರ್ವಿಮುಕ್ತಃ
ಪ್ರಜಾನಿಮಿತ್ತೈರಪಿ ದೈವತೈಶ್ಚ ।
ಯದಾ ಹ್ಯಸೌ ಸುಖದುಃಖೇ ಜಹಾತಿ
ಮುಕ್ತಸ್ತದಾಗ್ರ್ಯಾಂ ಗತಿಮೇತ್ಯಲಿಙ್ಗಃ ॥೪೫॥

ಸಂತಾನದ ಕಾರಣದಿಂದಲೂ ಮತ್ತು ಭಿನ್ನ-ಭಿನ್ನ ದೇವತೆಗಳ ಪ್ರಸನ್ನತೆಯನ್ನು ಪಡೆಯುವ ಕಾರಣದಿಂದಲೂ ಮಾಡುವ ಸಕಾಮಕರ್ಮಗಳೆಂಬ ದೃಢವಾದ ಪಾಶಗಳಿಂದ ವಿಮುಕ್ತನಾದ ಮನುಷ್ಯನು ಸುಖ-ದುಃಖಗಳೆರಡನ್ನೂ ಯಾವಾಗ ತ್ಯಾಗಮಾಡುವನೋ–ದ್ವಂದ್ವಾತೀತನಾಗು

ವನೋ–ಆಗ ಅಲಿಂಗನಾಗಿ (ಸೂಕ್ಷ್ಮ ಶರೀರದ ಅಭಿಮಾನವನ್ನು ತೊರೆದು) ಸರ್ವಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ.

ಶ್ರುತಿಪ್ರಮಾಣಾಗಮಮಙ್ಗಲೈಶ್ಚ
ಶೇತೇ ಜರಾಮೃತ್ಯುಭಯಾದಭೀತಃ ।
ಕ್ಷೀಣೇ ಚ ಪುಣ್ಯೇ ವಿಗತೇ ಚ ಪಾಪೇ
ತತೋ ನಿಮಿತ್ತೇ ಚ ಫಲೇ ವಿನಷ್ಟೇ ।
ಅಲೇಪಮಾಕಾಶಮಲಿಙ್ಗಮೇವ-
ಮಾಸ್ಥಾಯ ಪಶ್ಯನ್ತಿ ಮಹತ್ಯಸಕ್ತಾಃ ॥೪೬॥

ಶ್ರುತಿಪ್ರತಿಪಾದಿತವಾದ ಪ್ರಮಾಣಗಳನ್ನು ವಿಚಾರಮಾಡುತ್ತಾ ಶಾಸ್ತ್ರಗಳಲ್ಲಿ ಹೇಳಿರುವ ಮಂಗಲಮಯವಾದ ಸಾಧನೆಗಳನ್ನು ಅನುಷ್ಠಾನಮಾಡುವುದರಿಂದ ಮನುಷ್ಯರು ಮುಪ್ಪು-ಸಾವುಗಳ ಭಯದಿಂದ ರಹಿತರಾಗಿ ಸುಖವಾಗಿ ನಿದ್ರಿಸುತ್ತಾರೆ. ಯಾವಾಗ ಪುಣ್ಯ-ಪಾಪಗಳು ಕ್ಷಯಿಸುವುವೋ, ಹಾಗೆಯೇ ಪುಣ್ಯ-ಪಾಪಗಳ ಫಲರೂಪವಾದ ಸುಖ-ದುಃಖಾದಿಗಳೂ ವಿನಾಶಹೊಂದುವುವೋ–ಆಗ ಎಲ್ಲ ಪದಾರ್ಥಗಳಲ್ಲಿಯೂ ಅನಾಸಕ್ತರಾದ ಪುರುಷರು–ನಿರ್ಲಿಪ್ತನೂ, ಪ್ರಕಾಶಸ್ವರೂಪನೂ, ಲಿಂಗರಹಿತನೂ ಆದ ಪರಮಾತ್ಮನಲ್ಲಿಯೇ ಮನಸ್ಸನ್ನು ಸ್ಥಾಪಿಸಿ ಅವನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳುತ್ತಾರೆ.

ಯಥೋರ್ಣನಾಭಿಃ ಪರಿವರ್ತಮಾನ-
ಸ್ತನ್ತುಕ್ಷಯೇ ತಿಷ್ಠತಿ ಪಾತ್ಯಮಾನಃ ।
ತಥಾ ವಿಮುಕ್ತಃ ಪ್ರಜಹಾತಿ ದುಃಖಂ
ವಿಧ್ವಂಸತೇ ಲೋಷ್ಟ ಇವಾದ್ರಿಮೃಚ್ಛನ್ ॥೪೭॥

ಯಾವ ರೀತಿಯಲ್ಲಿ ಜೇಡರಹುಳುವು ಸುತ್ತಲೂ ತಿರುಗುತ್ತಾ ಬಲೆಯನ್ನು ನೇದುಕೊಂಡು ಆ ತಂತುಮಯವಾದ ಮನೆಯ ಮಧ್ಯದಲ್ಲಿ ಕುಳಿತುಕೊಳ್ಳುವುದೋ–ಅದೇ ರೀತಿಯಲ್ಲಿ ಅವಿದ್ಯಾವಶನಾದ ಜೀವನು ಕರ್ಮತಂತುಮಯವಾದ ಮನೆಯಲ್ಲಿ ಕುಳಿತಿರುತ್ತಾನೆ. ಕಲ್ಲಿನ ಮೇಲೆ ಅಪ್ಪಳಿಸಲ್ಪಟ್ಟ ಮಣ್ಣಿನ ಹೆಂಟೆಯು ಪುಡಿ-ಪುಡಿಯಾಗಿ ಹೋಗುವಂತೆ–ಕರ್ಮತಂತುಮಯ

ವಾದ ಆ ಮನೆಯು ಧ್ವಂಸವಾದೊಡನೆಯೇ ಆಗ ಅವನ ಎಲ್ಲ ದುಃಖಗಳೂ ನಾಶವಾಗುತ್ತವೆ.

ಯಥಾ ರುರುಃ ಶೃಙ್ಗಮಥೋ ಪುರಾಣಂ
ಹಿತ್ವಾ ತ್ವಚಂ ವಾಪ್ಯುರಗೋ ಯಥಾ ಚ ।
ವಿಹಾಯ ಗಚ್ಛತ್ಯನವೇಕ್ಷಮಾಣ-
ಸ್ತಥಾ ವಿಮುಕ್ತೋ ವಿಜಹಾತಿ ದುಃಖಮ್ ॥೪೮॥

ಯಾವ ರೀತಿಯಲ್ಲಿ ರುರುವೆಂಬ ಮೃಗವು ತನ್ನ ಹಳೆಯ ಕೊಂಬನ್ನು ಕಳೆದುಕೊಂಡು ಆನಂದದಿಂದ ಹೊರಟುಹೋಗುವುದೋ–ಹಾವು ತನ್ನ ಪೊರೆಯನ್ನು ಕಳಚಿಕೊಂಡು ಹಿಂದಿರುಗಿಯೂ ನೋಡದೆ ಹೊರಟು ಹೋಗುವುದೋ–ಅದೇ ರೀತಿಯಲ್ಲಿ ಅಭಿಮಾನರಹಿತನಾದ ಪುರುಷನು ಸಂಸಾರಬಂಧನದಿಂದ ಮುಕ್ತನಾಗಿ ದುಃಖವನ್ನು ತೊರೆದುಬಿಡುತ್ತಾನೆ.

ದ್ರುಮಂ ಯಥಾ ವಾಪ್ಯುದಕೇ ಪತನ್ತ-
ಮುತ್ಸೃಜ್ಯ ಪಕ್ಷೀ ನಿಪತತ್ಯಸಕ್ತಃ ।
ತಥಾ ಹ್ಯಸೌ ಸುಖದುಃಖೇ ವಿಹಾಯ
ಮುಕ್ತಃ ಪರಾರ್ಧ್ಯಾಂ ಗತಿಮೇತ್ಯಲಿಙ್ಗಃ ॥೪೯॥

ಯಾವ ರೀತಿಯಲ್ಲಿ ಪಕ್ಷಿಯು ನೀರಿನಲ್ಲಿ ಬೀಳುತ್ತಿರುವ ವೃಕ್ಷವನ್ನು ನೋಡಿ, ಆ ವೃಕ್ಷದಲ್ಲಿ ತಾನು ಬಹಳ ದಿವಸಗಳಿಂದ ವಾಸವಾಗಿದ್ದರೂ ಅದರ ಮೇಲಿನ ಆಸಕ್ತಿಯನ್ನು ತೊರೆದು ಹೊರಟುಹೋಗುವುದೋ– ಅದೇ ರೀತಿಯಲ್ಲಿ ಮುಕ್ತನಾದ ಪುರುಷನು ಸುಖ-ದುಃಖಗಳೆರಡನ್ನೂ ಪರಿತ್ಯಜಿಸಿ ಸೂಕ್ಷ್ಮಶರೀರವನ್ನು ಬಿಟ್ಟು ಶ್ರೇಷ್ಠತಮವಾದ ಗತಿಯನ್ನು ಹೊಂದುತ್ತಾನೆ.”

ಭೀಷ್ಮನು ಹೇಳುತ್ತಾನೆ :

ಅಪಿ ಚ ಭವತಿ ಮೈಥಿಲೇನ ಗೀತಂ
ನಗರಮುಪಾಹಿತಮಗ್ನಿನಾಭಿವೀಕ್ಷ್ಯ ।
ನ ಖಲು ಮಮ ಹಿ ದಹ್ಯತೇಽತ್ರ ಕಿಂಚಿ-
ತ್ಸ್ವಯಮಿದಮಾಹ ಕಿಲ ಸ್ಮ ಭೂಮಿಪಾಲಃ ॥೫೦॥

ಇದಮಮೃತಪದಂ ನಿಶಮ್ಯ ರಾಜಾ
ಸ್ವಯಮಿಹ ಪಞ್ಚಶಿಖೇನ ಭಾಷ್ಯಮಾಣಮ್ ।
ನಿಖಿಲಮಭಿಸಮೀಕ್ಷ್ಯ ನಿಶ್ಚಿತಾರ್ಥಃ
ಪರಮಸುಖೀ ವಿಜಹಾರ ವೀತಶೋಕಃ ॥೫೧॥

“ಯುಧಿಷ್ಠಿರ! ಆಚಾರ್ಯನಾದ ಪಂಚಶಿಖನು ಹೇಳಿದ ಅಮೃತಮಯವಾದ ಜ್ಞಾನೋಪದೇಶವನ್ನು ಕೇಳಿ ಜನದೇವನು ನಿಶ್ಚಿತವಾದ ಸಿದ್ಧಾಂತಕ್ಕೆ ಬಂದನು. ಪಂಚಶಿಖನು ಹೇಳಿದುದೆಲ್ಲವನ್ನೂ ಮನಸ್ಸಿನಲ್ಲಿಯೇ ವಿಚಾರಮಾಡುತ್ತಾ ಶೋಕರಹಿತನಾಗಿ ಪರಮಸುಖಿಯಾಗಿದ್ದನು. ಹೀಗೆಯೇ ಇರುತ್ತಿರಲಾಗಿ ಒಮ್ಮೆ ತನ್ನ ಪಟ್ಟಣವು ಬೆಂಕಿಯಿಂದ ಉರಿಯುತ್ತಿರುವುದನ್ನು ಕಂಡ ಜನಕರಾಜನು ಈ ಗೀತೆಯನ್ನು ಹಾಡಿದನು : “ಈ ನಗರವು ಹೊತ್ತಿಕೊಂಡು ಉರಿಯುತ್ತಿದ್ದರೂ ನನ್ನದು ಕಿಂಚಿನ್ಮಾತ್ರವೂ ಉರಿದು ಹೋಗುತ್ತಿಲ್ಲ.” ಅವನ ಬುದ್ಧಿಯು ಅಂತಹ ಪಕ್ವಾವಸ್ಥೆಗೆ ಬಂದಿದ್ದಿತು.

ಇಮಂ ಹಿ ಯಃ ಪಠತಿ ವಿಮೋಕ್ಷನಿಶ್ಚಯಂ
ಮಹೀಪತೇ ಸತತಮವೇಕ್ಷತೇ ತಥಾ ।
ಉಪದ್ರವಾನ್ನಾನುಭವತ್ಯದುಃಖಿತಃ
ಪ್ರಮುಚ್ಯತೇ ಕಪಿಲಮಿವೈತ್ಯ ಮೈಥಿಲಃ ॥೫೨॥

ಯುಧಿಷ್ಠಿರ! ಈ ಮೋಕ್ಷತತ್ತ್ವದ ನಿರ್ಣಯವನ್ನು ಯಾವ ಪುರುಷನು ಪಾರಾಯಣಮಾಡುತ್ತಾ ಚಿಂತಿಸುತ್ತಿರುವನೋ–ಅವನು ಯಾವ ಉಪದ್ರವಗಳನ್ನೂ ಅನುಭವಿಸುವುದಿಲ್ಲ. ದುಃಖವು ಅವನ ಹತ್ತಿರಕ್ಕೂ ಸುಳಿಯುವುದಿಲ್ಲ. ಜನದೇವನು ಕಾಪಿಲನಾದ ಪಂಚಶಿಖನ ಸಮಾಗಮದಿಂದ ಈ ಸಾಂಖ್ಯಜ್ಞಾನವನ್ನು ಪಡೆದು ಮುಕ್ತನಾದಂತೆ–ಪಂಚಶಿಖಗೀತೆಯನ್ನು ನಿರಂತರವಾಗಿ ಚಿಂತಿಸುವ ಸಾಧಕನೂ ಸಂಸಾರಬಂಧನದಿಂದ ವಿಮುಕ್ತನಾಗುತ್ತಾನೆ.”

೨೧೯ನೆಯ ಅಧ್ಯಾಯವು ಮುಗಿಯಿತು.

ದಮದ ಮಹಿಮೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಿಂ ಕುರ್ವನ್ಸುಖಮಾಪ್ನೋತಿ ಕಿಂ ಕುರ್ವನ್ದುಃಖಮಾಪ್ನುಯಾತ್ ।
ಕಿಂ ಕುರ್ವನ್ನಿರ್ಭಯೋ ಲೋಕೇ ಸಿದ್ಧಶ್ಚರತಿ ಭಾರತ ॥೧॥

"ಭಾರತನೇ! ಮನುಷ್ಯನು ಯಾವುದನ್ನು (ಯಾವ ಅನುಷ್ಠಾನವನ್ನು) ಮಾಡುವುದರಿಂದ ಸುಖವಾಗಿರುತ್ತಾನೆ? ಯಾವುದನ್ನು ಮಾಡುವುದರಿಂದ ದುಃಖವನ್ನು ಹೊಂದುತ್ತಾನೆ? ಯಾವುದನ್ನು ಮಾಡುವುದರಿಂದ ಲೋಕದಲ್ಲಿ ಭಯರಹಿತನಾಗಿ ಸಿದ್ಧನಂತೆ ಸಂಚರಿಸುತ್ತಾನೆ?"

ಭೀಷ್ಮನು ಹೇಳುತ್ತಾನೆ :

ದಮಮೇವ ಪ್ರಶಂಸನ್ತಿ ವೃದ್ಧಾಃ ಶ್ರುತಿಸಮಾಧಯಃ ।
ಸರ್ವೇಷಾಮೇವ ವರ್ಣಾನಾಂ ಬ್ರಾಹ್ಮಣಸ್ಯ ವಿಶೇಷತಃ ॥೨॥

"ಯುಧಿಷ್ಠಿರ! ವೇದಾರ್ಥವಿಚಾರಗಳಲ್ಲಿ ಕುಶಲರಾದ ವೃದ್ಧ ಪುರುಷರು ಸಾಮಾನ್ಯವಾಗಿ ಎಲ್ಲ ವರ್ಣದವರಿಗೂ–ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣನಿಗೆ ಇಂದ್ರಿಯನಿಗ್ರಹರೂಪವಾದ ದಮವನ್ನೇ ಪ್ರಶಂಸೆಮಾಡುತ್ತಾರೆ. (ಬ್ರಾಹ್ಮಣನು ಇಂದ್ರಿಯಸಂಯಮವನ್ನು ಹೊಂದಿರಬೇಕೆಂದು ಹೇಳುತ್ತಾರೆ.)

ನಾದಾನ್ತಸ್ಯ ಕ್ರಿಯಾಸಿದ್ಧಿರ್ಯಥಾವದುಪಪದ್ಯತೇ ।
ಕ್ರಿಯಾ ತಪಶ್ಚ ಸತ್ಯಂ ಚ ದಮೇ ಸರ್ವಂ ಪ್ರತಿಷ್ಠಿತಮ್ ॥೩॥

ಇಂದ್ರಿಯಗಳ ಸಂಯಮವಿಲ್ಲದವನಿಗೆ ಕಾರ್ಯಗಳು ಯಥಾವತ್ತಾಗಿ ಫಲಿಸುವುದಿಲ್ಲ. ಏಕೆಂದರೆ : ಕ್ರಿಯೆ, ತಪಸ್ಸು ಮತ್ತು ಸತ್ಯ–ಈ ಮೂರೂ ದಮದಲ್ಲಿಯೇ ಪ್ರತಿಷ್ಠಿತವಾಗಿವೆ.

ದಮಸ್ತೇಜೋ ವರ್ಧಯತಿ ಪವಿತ್ರಂ ದಮ ಉಚ್ಯತೇ ।
ವಿಪಾಪ್ಮಾ ನಿರ್ಭಯೋ ದಾನ್ತಃ ಪುರುಷೋ ವಿನ್ದತೇ ಮಹತ್ ॥೪॥

ದಮವು ತೇಜಸ್ಸನ್ನು ಹೆಚ್ಚಿಸುತ್ತದೆ. ಅದು ಅತ್ಯಂತಪವಿತ್ರವಾದುದು. ಆತ್ಮಸಂಯಮವುಳ್ಳವನು ಪಾಪರಹಿತನಾಗಿ, ಭಯರಹಿತನಾಗಿ ಮಹಾಫಲ ವನ್ನು ಹೊಂದುತ್ತಾನೆ.

ಸುಖಂ ದಾಂತಃ ಪ್ರಸ್ವಪಿತಿ ಸುಖಂ ಚ ಪ್ರತಿಬುಧ್ಯತೇ ।
ಸುಖಂ ಲೋಕೇ ವಿಪರ್ಯೇತಿ ಮನಶ್ಚಾಸ್ಯ ಪ್ರಸೀದತಿ ॥೫॥

ಇಂದ್ರಿಯಗಳನ್ನು ನಿಗ್ರಹಿಸಿರುವ ಮನುಷ್ಯನು ಸುಖವಾಗಿ ನಿದ್ರಿಸು ತ್ತಾನೆ. ಸುಖವಾಗಿಯೇ ಎಚ್ಚರಗೊಳ್ಳುತ್ತಾನೆ. ಪ್ರಪಂಚದಲ್ಲಿ ಸುಖವಾಗಿ ವ್ಯವಹರಿಸುತ್ತಾನೆ. ದಾಂತನ ಮನಸ್ಸು ಯಾವಾಗಲೂ ಪ್ರಸನ್ನವಾಗಿರುತ್ತದೆ.

ತೇಜೋ ದಮೇನ ಧ್ರಿಯತೇ ತನ್ನ ತೀಕ್ಷ್ಣೋಽಧಿಗಚ್ಛತಿ ।
ಅಮಿತ್ರಾಂಶ್ಚ ಬಹೂನ್ನಿತ್ಯಂ ಪೃಥಗಾತ್ಮನಿ ಪಶ್ಯತಿ ॥೬॥

ದಮವು ತೇಜಸ್ಸನ್ನು ಧರಿಸಿರುತ್ತದೆ. ದಮವಿಲ್ಲದೆ ತೀಕ್ಷ್ಣಪ್ರಕೃತಿ ಯುಳ್ಳವನಲ್ಲಿ ತೇಜಸ್ಸೇ ಇರುವುದಿಲ್ಲ. ಕಾಮ-ಕ್ರೋಧ-ಲೋಭ-ಮೋಹಾದಿ ನಿತ್ಯಶತ್ರುಗಳನ್ನು ಅದಾಂತನು ಅನುದಿನವೂ ಪ್ರತ್ಯೇಕ-ಪ್ರತ್ಯೇಕವಾಗಿ ತನ್ನಲ್ಲಿ ಕಾಣುತ್ತಿರುತ್ತಾನೆ. (ಅದಾಂತನಲ್ಲಿ ಕಾಮ-ಕ್ರೋಧಾದಿಗಳು ಮನೆಮಾಡಿ ಕೊಳ್ಳುತ್ತವೆ.)

ಕ್ರವ್ಯಾದ್ಭ್ಯ ಇವ ಭೂತಾನಾಮದಾಂತೇಭ್ಯಃ ಸದಾ ಭಯಮ್ ।
ತೇಷಾಂ ವಿಪ್ರತಿಷೇಧಾರ್ಥಂ ರಾಜಾ ಸೃಷ್ಟಃ ಸ್ವಯಮ್ಭುವಾ ॥೭॥

ಮಾಂಸಾಶಿಗಳಾದ ವ್ಯಾಘ್ರಾದಿಗಳಿಂದ ಪ್ರಾಣಿಗಳಿಗೆ ಭಯವುಂಟಾಗು ವಂತೆ–ಇಂದ್ರಿಯಗಳನ್ನು ನಿಗ್ರಹಿಸದೇ ಇರುವವರಿಂದ ಮನುಷ್ಯರಿಗೆ ಸದಾ ಭಯವಿದೆ. ಅಂತಹ ಉದ್ಧತಮನುಷ್ಯರನ್ನು ಹತೋಟಿಯಲ್ಲಿಟ್ಟುಕೊಳ್ಳುವ ಸಲುವಾಗಿಯೇ ಬ್ರಹ್ಮನು ರಾಜರನ್ನು ಸೃಷ್ಟಿಸಿರುವನು.

ಆಶ್ರಮೇಷು ಚ ಸರ್ವೇಷು ದಮ ಏವ ವಿಶಿಷ್ಯತೇ ।
ಯಚ್ಚ ತೇಷು ಫಲಂ ಧರ್ಮೇ ಭೂಯೋ ದಾಂತೇ ತದುಚ್ಯತೇ ॥೮॥

ನಾಲ್ಕು ಆಶ್ರಮಗಳಲ್ಲಿಯೂ ದಮಗುಣವೇ ಶ್ರೇಷ್ಠವೆಂದು ಹೇಳ

ಲ್ಪಟ್ಟಿದೆ. ನಾಲ್ಕು ಆಶ್ರಮಗಳ ಧರ್ಮಗಳನ್ನು ಪರಿಪಾಲಿಸುವುದರಿಂದ ಯಾವ ಫಲವು ಲಭಿಸುವುದೋ–ಆ ಫಲವೇ ಅಥವಾ ಅದಕ್ಕಿಂತ ಹೆಚ್ಚಿನ ಫಲವೇ ಇಂದ್ರಿಯಗಳನ್ನು ನಿಗ್ರಹಿಸಿದವನಿಗೆ ಲಭಿಸುತ್ತದೆ.

ತೇಷಾಂ ಲಿಙ್ಗಾನಿ ವಕ್ಷ್ಯಾಮಿ ಯೇಷಾಂ ಸಮುದಯೋ ದಮಃ ।
ಅಕಾರ್ಪಣ್ಯಮಸಂರಮ್ಭಃ ಸಂತೋಷಃ ಶ್ರದ್ದಧಾನತಾ ॥೯॥

ಅಕ್ರೋಧ ಆರ್ಜವಂ ನಿತ್ಯಂ ನಾತಿವಾದೋಽಭಿಮಾನಿತಾ ।
ಗುರುಪೂಜಾನಸೂಯಾ ಚ ದಯಾ ಭೂತೇಷ್ವಪೈಶುನಮ್ ॥೧೦॥

ಜನವಾದಮೃಷಾವಾದಸ್ತುತಿನಿನ್ದಾವಿವರ್ಜನಮ್ ।
ಸಾಧುಕಾಮಶ್ಚ ಸ್ಪೃಹಯೇನ್ನಾಯತಿಂ ಪ್ರತ್ಯಯೇಷು ಚ ॥೧೧॥

ಯಾವ ಗುಣಗಳ ಸಮೂಹವು ದಮವಾಗಿದೆಯೋ – ಅವುಗಳ ಗುರುತನ್ನು ಹೇಳುತ್ತೇನೆ, ಕೇಳು : ಕೃಪಣತೆಯಿಲ್ಲದಿರುವುದು, ಸಂಭ್ರಮ ವಿಲ್ಲದೇ ಇರುವುದು, ಯಾವಾಗಲೂ ಹರ್ಷಚಿತ್ತನಾಗಿರುವುದು, ಶ್ರದ್ಧೆ, ಅಕ್ರೋಧ, ಸರಳತೆ, ಮಿತಭಾಷಣ, ಅಭಿಮಾನದ ತ್ಯಾಗ, ಗುರು-ಹಿರಿಯರ ಸೇವೆ, ಯಾರಲ್ಲಿಯೂ ದೋಷವನ್ನೆಣಿಸದಿರುವುದು, ಪ್ರಾಣಿದಯೆ, ಚಾಡಿ ಹೇಳದಿರುವುದು, ಲೋಕಾಪವಾದಕ್ಕೆ ಗುರಿಯಾಗದಿರುವುದು, ಸುಳ್ಳುಹೇಳ ದಿರುವುದು, ಇತರರ ಸ್ತುತಿಯನ್ನಾಗಲೀ ನಿಂದೆಯನ್ನಾಗಲೀ ಮಾಡದಿರು ವುದು, ಸತ್ಪುರುಷರ ಸಹವಾಸವನ್ನು ಇಚ್ಛಿಸುವುದು, ಮುಂದೆ ಬರುವ ಸುಖಕ್ಕಾಗಿ ಆಸೆಪಡದಿರುವುದು ಮತ್ತು ದುಃಖಕ್ಕಾಗಿ ಚಿಂತಿಸದಿರುವುದು– ಇವು ದಾಂತನ ಲಕ್ಷಣಗಳಾಗಿವೆ.

ಅವೈರಕೃತ್ಸೂಪಚಾರಃ ಸಮೋ ನಿನ್ದಾಪ್ರಶಂಸಯೋಃ ।
ಸುವೃತ್ತಃ ಶೀಲಸಮ್ಪನ್ನಃ ಪ್ರಸನ್ನಾತ್ಮಾತ್ಮವಾನ್ಪ್ರಭುಃ ।
ಪ್ರಾಪ್ಯ ಲೋಕೇ ಚ ಸತ್ಕಾರಂ ಸ್ವರ್ಗಂ ವೈ ಪ್ರೇತ್ಯ ಗಚ್ಛತಿ ॥೧೨॥

ದಾಂತನು ಯಾರೊಡನೆಯೂ ವೈರವನ್ನು ಕಟ್ಟಿಕೊಳ್ಳುವುದಿಲ್ಲ. ಎಲ್ಲ ರೊಡನೆಯೂ ಸದ್ವ್ಯವಹಾರವನ್ನೇ ಇಟ್ಟುಕೊಂಡಿರುತ್ತಾನೆ. ನಿಂದಾ-ಸ್ತುತಿಗಳ ವಿಷಯದಲ್ಲಿ ಸಮಾನವಾದ ಭಾವವನ್ನಿಟ್ಟುಕೊಂಡಿರುತ್ತಾನೆ.

(ಯಾರಾದರೂ ನಿಂದಿಸಿದರೆ ಕುಗ್ಗುವುದೂ ಇಲ್ಲ ; ಸ್ತೋತ್ರಮಾಡಿದರೆ ಉಬ್ಬುವುದೂ ಇಲ್ಲ.) ಸದಾಚಾರತತ್ಪರನಾಗಿರುತ್ತಾನೆ. ಶೀಲವಂತನಾಗಿರುತ್ತಾನೆ. ಪ್ರಸನ್ನಚಿತ್ತನಾಗಿರುತ್ತಾನೆ. ಧೈರ್ಯವಂತನಾಗಿಯೂ ತನ್ನಲ್ಲಿರುವ ದೋಷಗಳನ್ನು ದಮನಮಾಡುವ ಸಾಮರ್ಥ್ಯವುಳ್ಳವನಾಗಿಯೂ ಇರುತ್ತಾನೆ. ಅಂತಹ ದಾಂತನಾದ ಪುರುಷನು ಇಹಲೋಕದಲ್ಲಿಯೂ ಸಮ್ಮಾನಿತನಾಗಿ ಮರಣಾನಂತರದಲ್ಲಿ ಸ್ವರ್ಗವನ್ನೂ ಹೊಂದುತ್ತಾನೆ.

ದುರ್ಗಮಂ ಸರ್ವಭೂತಾನಾಂ ಪ್ರಾಪಯನ್ಮೋದತೇ ಸುಖೀ ।
ಸರ್ವಭೂತಹಿತೇ ಯುಕ್ತೋ ನ ಸ್ಮ ಯೋ ದ್ವಿಷತೇ ಜನಮ್ ।
ಮಹಾಹ್ರದ ಇವಾಕ್ಷೋಭ್ಯಃ ಪ್ರಜ್ಞಾತೃಪ್ತಃ ಪ್ರಸೀದತಿ ॥೧೪॥

ದಾಂತನಾದ ಮನುಷ್ಯನು ಎಲ್ಲ ಪ್ರಾಣಿಗಳಿಗೂ ದುರ್ಲಭವಾದ ವಸ್ತುಗಳನ್ನು ಹೊಂದಿಸುತ್ತಾ ಅವರಿಗೆ ಸುಖವನ್ನುಂಟುಮಾಡಿ ತಾನೂ ಸುಖಿಯಾಗುತ್ತಾನೆ. ಯಾವಾಗಲೂ ಪ್ರಾಣಿಗಳ ಹಿತದಲ್ಲಿಯೇ ನಿರತನಾಗಿರುತ್ತಾನೆ. ಅಹಂಕಾರಪಡುವುದಿಲ್ಲ. ಯಾರನ್ನೂ ದ್ವೇಷಿಸುವುದಿಲ್ಲ. ದೊಡ್ಡ ಜಲಾಶಯದಂತೆ ಯಾವಾಗಲೂ ಗಂಭೀರನಾಗಿರುತ್ತಾನೆ. ಅವನ ಮನಸ್ಸಿನಲ್ಲಿ ಯಾವ ವಿಧವಾದ ಕ್ಷೋಭೆಯೂ ಉಂಟಾಗುವುದಿಲ್ಲ. ಯಾವಾಗಲೂ ಜ್ಞಾನಾನಂದದಿಂದ ತೃಪ್ತನಾಗಿ ಪ್ರಸನ್ನಚಿತ್ತನಾಗಿರುತ್ತಾನೆ.

ಅಭಯಂ ಯಸ್ಯ ಭೂತೇಭ್ಯಃ ಸರ್ವೇಷಾಮಭಯಂ ಯತಃ ।
ನಮಸ್ಯಃ ಸರ್ವಭೂತಾನಾಂ ದಾನ್ತೋ ಭವತಿ ಬುದ್ಧಿಮಾನ್ ॥೧೫॥

ದಾಂತನು ಯಾವ ಪ್ರಾಣಿಗಳಿಗೂ ಭಯಪಡುವುದಿಲ್ಲ. ಅವನಿಂದಲೂ ಯಾವ ಪ್ರಾಣಿಗೂ ಭಯವಿರುವುದಿಲ್ಲ. ಎಲ್ಲ ಪ್ರಾಣಿಗಳಿಗೂ ಅಭಯದಾಯಕನಾಗಿರುತ್ತಾನೆ. ಬುದ್ಧಿವಂತನಾದ ದಾಂತನು ಎಲ್ಲ ಪ್ರಾಣಿಗಳಿಂದಲೂ ವಂದ್ಯನಾಗುತ್ತಾನೆ. ಸರ್ವಸಮ್ಮಾನ್ಯನಾಗಿರುತ್ತಾನೆ.

ನ ಹೃಷ್ಯತಿ ಮಹತ್ಯರ್ಥೇ ವ್ಯಸನೇ ಚ ನ ಶೋಚತಿ ।
ಸ ವೈ ಪರಿಮಿತಪ್ರಜ್ಞಃ ಸ ದಾನ್ತೋ ದ್ವಿಜ ಉಚ್ಯತೇ ॥೧೬॥

ದಾಂತನು ಮಹಾಸಂಪತ್ತನ್ನು ಪಡೆದುಕೊಂಡರೂ ಅದರಿಂದ ಹರ್ಷಿತ

ನಾಗುವುದಿಲ್ಲ. ಮಹಾವ್ಯಸನವು ಪ್ರಾಪ್ತವಾದರೂ ಅದರಿಂದ ಶೋಕಪಡುವುದಿಲ್ಲ. ಅವನು ಪರಿಮಿತಪ್ರಜ್ಞನೆಂದು ಕರೆಯಲ್ಪಡುತ್ತಾನೆ. ಇಂತಹವನೇ ದಾಂತನಾದ ದ್ವಿಜನು.

ಕರ್ಮಭಿಃ ಶ್ರುತಿಸಮ್ಪನ್ನಃ ಸದ್ಭಿರಾಚರಿತೈಃ ಶುಚಿಃ ।
ಸದೈವ ದಮಸಂಯುಕ್ತಸ್ತಸ್ಯ ಭುಙ್ಕ್ತೇ ಮಹಾಫಲಮ್ ॥೧೭॥

ದಾಂತನು ವೇದಶಾಸ್ತ್ರಸಂಪನ್ನನಾಗಿರುತ್ತಾನೆ. ಸತ್ಪುರುಷರು ಆಚರಿಸಿದ ಶುಭಕರ್ಮಗಳನ್ನೇ ತಾನೂ ಆಚರಿಸುತ್ತಾ ಪರಿಶುದ್ಧನಾಗಿರುತ್ತಾನೆ. ಸರ್ವ ಕಾಲದಲ್ಲಿಯೂ ಇಂದ್ರಿಯಗಳನ್ನು ನಿಗ್ರಹಿಸಿರುವ ಆತನು ತಾನು ಮಾಡುವ ಶುಭಕರ್ಮಗಳ ಮಹಾಫಲವನ್ನು ಉಪಭೋಗಿಸುತ್ತಾನೆ.

ಅನಸೂಯಾ ಕ್ಷಮಾ ಶಾನ್ತಿಃ ಸಂತೋಷಃ ಪ್ರಿಯವಾದಿತಾ ।
ಸತ್ಯಂ ದಾನಮನಾಯಾಸೋ ನೈಷ ಮಾರ್ಗೋ ದುರಾತ್ಮನಾಮ್ ॥

ಅಸೂಯೆಪಡದಿರುವುದು, ಕ್ಷಮೆ, ಶಾಂತಿ, ಸಂತೋಷ, ಪ್ರಿಯವಾದ ಮಾತುಗಳು, ಸತ್ಯಭಾಷಣ, ದಾನಶೀಲತೆ, ಕರ್ತವ್ಯಕ್ರಿಯೆಗಳಲ್ಲಿ ಆಯಾಸ ಪಡದಿರುವುದು–ಇವು ದಾಂತನ ಗುಣಗಳಾಗಿವೆ. ದುರಾತ್ಮರಾದವರಿಗೆ ಈ ಗುಣಗಳು ರುಚಿಸುವುದಿಲ್ಲ.

ಕಾಮಕ್ರೋಧೌ ಚ ಲೋಭಶ್ಚ ಪರಸ್ಯೇರ್ಷ್ಯಾ ವಿಕತ್ಥನಾ ।
ಕಾಮಕ್ರೋಧೌ ವಶೇ ಕೃತ್ವಾ ಬ್ರಹ್ಮಚಾರೀ ಜಿತೇನ್ದ್ರಿಯಃ ॥೧೯॥

ವಿಕ್ರಮ್ಯ ಘೋರೇ ತಪಸಿ ಬ್ರಾಹ್ಮಣಃ ಸಂಶ್ರಿತವ್ರತಃ ।
ಕಾಲಾಕಾಂಕ್ಷೀ ಚರೇಲ್ಲೋಕಾನ್ನಿರಪಾಯ ಇವಾತ್ಮವಾನ್ ॥೨೦॥

ದುರಾತ್ಮರಾದವರಿಗೆ ಕಾಮ-ಕ್ರೋಧಗಳು, ಲೋಭ, ಇತರರ ವಿಷಯದಲ್ಲಿ ಈರ್ಷ್ಯೆ, ಆತ್ಮಪ್ರಶಂಸೆ – ಇವೇ ಮೊದಲಾದ ದುರ್ಗುಣಗಳಿರುತ್ತವೆ. ಕಠೋರವ್ರತನಿಷ್ಠನಾದ ವೇದಾಧ್ಯಾಯಿಯಾದ ಬ್ರಾಹ್ಮಣನು ಜಿತೇಂದ್ರಿಯನಾಗಿ ಕಾಮ-ಕ್ರೋಧಗಳನ್ನು ಸ್ವಾಧೀನಪಡಿಸಿಕೊಂಡು, ಘೋರವಾದ ತಪಸ್ಸಿನಲ್ಲಿ ತೊಡಗಬೇಕು. ಮೃತ್ಯುಕಾಲವನ್ನು ಪ್ರತೀಕ್ಷಿಸುತ್ತಾ ಯಾವ

ವಿಧವಾದ ಅಪಾಯವೂ ಇಲ್ಲದವನಂತೆ ಧೈರ್ಯದಿಂದ ಕೂಡಿದವನಾಗಿ ಲೋಕಗಳಲ್ಲಿ ಸಂಚರಿಸುತ್ತಿರಬೇಕು.”

೨೨೦ನೆಯ ಅಧ್ಯಾಯವು ಮುಗಿಯಿತು.

೨೨೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ವ್ರತ, ತಪಸ್ಸು, ಉಪವಾಸ, ಬ್ರಹ್ಮಚರ್ಯೆ, ಅತಿಥಿಸೇವೆ ಇತ್ಯಾದಿಗಳ ವಿವೇಚನೆ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ದ್ವಿಜಾತಯೋ ವ್ರತೋಪೇತಾ ಯದಿದಂ ಭುಜ್ಯತೇ ಹವಿಃ ।
ಅನ್ನಂ ಬ್ರಾಹ್ಮಣಕಾಮಾಯ ಕಥಮೇತತ್ಪಿತಾಮಹ ॥೧॥

“ಪಿತಾಮಹನೇ! ವ್ರತವನ್ನು ಕೈಗೊಂಡ ಕೆಲವು ಬ್ರಾಹ್ಮಣರು ಇತರರ ಮನೆಗಳಲ್ಲಿ ಬ್ರಾಹ್ಮಣರಾಗಿ ನಿಮಂತ್ರಿಸಲ್ಪಟ್ಟು ಹವಿಷ್ಯದ ಅನ್ನವನ್ನು ಭೋಜನಮಾಡುತ್ತಾರೆ. ಇದು ವ್ರತದೃಷ್ಟಿಯಿಂದ ಸರಿಯೇ? ಹೇಗೆ?”

ಭೀಷ್ಮನು ಹೇಳುತ್ತಾನೆ :

ಅವೇದೋಕ್ತವ್ರತೋಪೇತಾ ಭುಞ್ಜಾನಾಃ ಕಾರ್ಯಕಾರಿಣಃ ।
ವೇದೋಕ್ತೇಷು ಚ ಭುಞ್ಜಾನಾ ವ್ರತಲುಬ್ಧಾ ಯುಧಿಷ್ಠಿರ ॥೨॥

“ಯುಧಿಷ್ಠಿರ! ಅವೈದಿಕವಾದ ವ್ರತದಲ್ಲಿ ತೊಡಗಿ ಪರಾನ್ನಭೋಜನ ಮಾಡುವವರಂತೂ ಸ್ವೇಚ್ಛಾಚಾರಿಗಳೇ ಸರಿ. ವೇದೋಕ್ತವಾದ ವ್ರತಗಳನ್ನು ಕೈಗೊಂಡವರೂ ಕೂಡ (ಪರಾನ್ನಭೋಜನ ಮಾಡಬಾರದೆಂಬ ನಿಯಮ ವನ್ನು ಉಲ್ಲಂಘಿಸಿ) ಇತರರ ಮನೆಗಳಲ್ಲಿ ಊಟಮಾಡಿದರೆ ಅವರನ್ನೂ ವ್ರತಲುಬ್ಧರೆಂದೇ ಕರೆಯಬೇಕು.” (ವ್ರತಲುಬ್ಧಃ = ವ್ರತದಲ್ಲಿದ್ದರೂ ಲೋಭ ವುಳ್ಳವನು.)”

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯದಿದಂ ತಪ ಇತ್ಯಾಹುರುಪವಾಸಂ ಪೃಥಗ್ಜನಾಃ ।
ಏತತ್ತಪೋ ಮಹಾರಾಜ ಉತಾಹೋ ಕಿಂ ತಪೋ ಭವೇತ್ ॥೩॥

"ಮಹಾರಾಜ! ಪ್ರಪಂಚದಲ್ಲಿ ಜನಸಾಮಾನ್ಯರು ಉಪವಾಸಮಾಡುವುದನ್ನೇ ಪ್ರತ್ಯೇಕವಾದ ತಪಸ್ಸೆಂದು ಹೇಳುತ್ತಾರೆ. ನಿಶ್ಚಯವಾಗಿಯೂ ಉಪವಾಸಮಾಡುವುದೂ ತಪಸ್ಸಾಗುತ್ತದೆಯೇ? ಅಥವಾ ಉಪವಾಸ ತಪಸ್ಸಿಗಿಂತಲೂ ಬೇರೆಯಾದ ತಪಸ್ಸು ಇರುವುದೇ? ಅದರ ಸ್ವರೂಪವೇನು?"

ಭೀಷ್ಮನು ಹೇಳುತ್ತಾನೆ :

ಮಾಸಪಕ್ಷೋಪವಾಸೇನ ಮನ್ಯನ್ತೇ ಯತ್ತಪೋ ಜನಾಃ ।
ಆತ್ಮತನ್ತ್ರೋಪಘಾತಸ್ತು ನ ತಪಸ್ತತ್ಸತಾಂ ಮತಮ್ ॥೪॥

"ಮಹಾರಾಜ! ಮಾಸ ಅಥವಾ ಪಕ್ಷಕಾಲ ಮಾಡುವ ಯಾವ ಉಪವಾಸವನ್ನು ತಪಸ್ಸೆಂದು ಸಾಮಾನ್ಯಜನರು ಭಾವಿಸುವರೋ–ಅದು ನಿಜವಾಗಿಯೂ ತಪಸ್ಸೇ ಅಲ್ಲವೆಂಬುದು ಸತ್ಪುರುಷರ ಅಭಿಪ್ರಾಯವಾಗಿದೆ. ಹಾಗೆ ಉಪವಾಸಮಾಡುವುದು ಶರೀರಶೋಷಣೆಗೆ ಕಾರಣವಾಗುತ್ತದೆ. ಆತ್ಮಘಾತವಾಗುತ್ತದೆ.

ತ್ಯಾಗಶ್ಚ ಸಂನತಿಶ್ಚೈವ ಶಿಷ್ಯತೇ ತಪ ಉತ್ತಮಮ್ ।
ಸದೋಪವಾಸೀ ಚ ಭವೇದ್ಬ್ರಹ್ಮಚಾರೀ ಸದಾ ಭವೇತ್ ॥೫॥

ಸತ್ಪುರುಷರ ಅಭಿಪ್ರಾಯದಲ್ಲಿ ತ್ಯಾಗ ಮತ್ತು ವಿನಯಗಳೇ ಉತ್ತಮವಾದ ತಪಸ್ಸಾಗಿದೆ. ತ್ಯಾಗಶೀಲನೂ ಮತ್ತು ವಿನಯಶೀಲನೂ ಆಗಿರುವವನು ನಿತ್ಯೋಪವಾಸಿಯೂ ನಿತ್ಯಬ್ರಹ್ಮಚಾರಿಯೂ ಆಗಿರುತ್ತಾನೆ.

ಮುನಿಶ್ಚ ಸ್ಯಾತ್ಸದಾ ವಿಪ್ರೋ ದೈವತಂ ಚ ಸದಾ ಭವೇತ್ ।
ಕುಟುಮ್ಬಿಕೋ ಧರ್ಮಕಾಮಃ ಸದಾಸ್ವಪ್ನಶ್ಚ ಭಾರತ ॥೬॥

ಭರತನಂದನ! ತ್ಯಾಗಿಯೂ ವಿನಯಶೀಲನೂ ಆಗಿರುವ ಬ್ರಾಹ್ಮಣನು ಮುನಿಯೂ ದೇವತೆಯೂ ಆಗಿರುತ್ತಾನೆ. ಅವನು ಸಂಸಾರಿಯೇ ಆಗಿದ್ದರೂ ಧರ್ಮಕಾಮನಾಗಿರುತ್ತಾನೆ. (ಫಲಕಾಮನಾಗಿರುವುದಿಲ್ಲ.) ನಿದ್ರಾಲಸ್ಯಗಳು ಅವನಿಗಿರುವುದಿಲ್ಲ.

ಅಮಾಂಸಾದೀ ಸದಾ ಚ ಸ್ಯಾತ್ಪವಿತ್ರಶ್ಚ ಸದಾ ಭವೇತ್ ।
ಅಮೃತಾಶೀ ಸದಾ ಚ ಸ್ಯಾದ್ದೇವತಾತಿಥಿಪೂಜಕಃ ॥೭॥

ಅವನು ಎಂದಿಗೂ ಮಾಂಸವನ್ನು ತಿನ್ನುವುದಿಲ್ಲ. ಸದಾ ಪರಿಶುದ್ಧ ನಾಗಿರುತ್ತಾನೆ. ದೇವತಾತಿಥಿಗಳ ಪೂಜೆಮಾಡಿ ವೈಶ್ವದೇವಾದಿಯಜ್ಞಗಳಲ್ಲಿ ಉಳಿಯುವ ಅಮೃತರೂಪವಾದ ಅನ್ನವನ್ನು ಯಾವಾಗಲೂ ತಿನ್ನುತ್ತಿರುತ್ತಾನೆ.

ವಿಘಸಾಶೀ ಸದಾ ಚ ಸ್ಯಾತ್ಸದಾ ಚೈವಾತಿಥಿವ್ರತಃ ।
ಶ್ರದ್ದಧಾನಃ ಸದಾ ಚ ಸ್ಯಾದ್ದೇವತಾದ್ವಿಜಪೂಜಕಃ ॥೮॥

ಯಜ್ಞಶಿಷ್ಟವಾದ ಅನ್ನವನ್ನು ಭೋಜನಮಾಡುತ್ತಾನೆ. ಅನುದಿನವೂ ಅತಿಥಿಗಳನ್ನು ಸೇವೆಮಾಡುವ ವ್ರತವನ್ನು ತೊಟ್ಟಿರುತ್ತಾನೆ. ಶ್ರದ್ಧಾಳು ವಾಗಿರುತ್ತಾನೆ. ದೇವ-ಬ್ರಾಹ್ಮಣರನ್ನು ಆರಾಧಿಸುತ್ತಿರುತ್ತಾನೆ.”

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಥಂ ಸದೋಪವಾಸೀ ಸ್ಯಾದ್ಬ್ರಹ್ಮಚಾರೀ ಕಥಂ ಭವೇತ್ ।
ವಿಘಸಾಶೀ ಕಥಂ ಚ ಸ್ಯಾತ್ಸದಾ ಚೈವಾತಿಥಿವ್ರತಃ ॥೯॥

“ಪಿತಾಮಹ! ಅವನು (ಗೃಹಸ್ಥನಾಗಿದ್ದು ಪ್ರತಿದಿನವೂ ಭೋಜನಮಾಡು ತ್ತಿದ್ದರೂ) ನಿತ್ಯೋಪವಾಸಿಯೂ ಬ್ರಹ್ಮಚಾರಿಯೂ ಹೇಗಾಗುತ್ತಾನೆ? ಯಜ್ಞ ವನ್ನೇ ಮಾಡದೇ ವಿಘಸಾಶಿಯು ಹೇಗಾಗುತ್ತಾನೆ? ಅನುದಿನವೂ ಅತಿಥಿಗಳ ಸತ್ಕಾರವನ್ನು ಮಾಡಿದ ವ್ರತದ ಫಲವು ಅವನಿಗೆ ಹೇಗೆ ದೊರೆಯುತ್ತದೆ?”

ಭೀಷ್ಮನು ಹೇಳುತ್ತಾನೆ :

ಅನ್ತರಾ ಪ್ರಾತರಾಶಂ ಚ ಸಾಯಮಾಶಂ ತಥೈವ ಚ ।
ಸದೋಪವಾಸೀ ಸ ಭವೇದ್ಯೋ ನ ಭುಙ್ಕ್ತೇಽನ್ತರಾ ಪುನಃ ॥೧೦॥

“ಮಹಾರಾಜ! ಪ್ರಾತರ್ಭೋಜನದ ಮತ್ತು ಸಾಯಂ (ರಾತ್ರಿಯ) ಭೋಜನದ ಮಧ್ಯದಲ್ಲಿ ಯಾವನು ಭೋಜನಮಾಡುವುದಿಲ್ಲವೋ, ಅನು ದಿನವೂ ಎರಡು ಬಾರಿ ಮಾತ್ರವೇ ಭೋಜನವನ್ನು ಮಾಡುವನೋ– ಅಂತಹವನು ಸದೋಪವಾಸೀ ಎನಿಸುತ್ತಾನೆ.

ಭಾರ್ಯಾಂ ಗಚ್ಛನ್ಬ್ರಹ್ಮಚಾರೀ ಋತೌ ಭವತಿ ವೈ ದ್ವಿಜಃ ।
ಋತವಾದೀ ಭವೇನ್ನಿತ್ಯಂ ಜ್ಞಾನನಿತ್ಯಶ್ಚ ಯೋ ನರಃ ॥೧೧॥

ಋತುಕಾಲದಲ್ಲಿ ಮಾತ್ರವೇ ಭಾರ್ಯೆಯೊಡನೆ ಸಮಾಗಮಮಾಡುವ ಬ್ರಾಹ್ಮಣನು 'ಬ್ರಹ್ಮಚಾರೀ'–ಎನಿಸಿಕೊಳ್ಳುತ್ತಾನೆ. ಯಾವನು ಸದಾ ಸತ್ಯವನ್ನೇ ಹೇಳುವನೋ, ಜ್ಞಾನದಲ್ಲಿಯೇ ಸ್ಥಿರನಾಗಿರುವನೋ –ಅಂತಹವನು ಕೂಡ 'ಬ್ರಹ್ಮಚಾರೀ' ಎನಿಸಿಕೊಳ್ಳುತ್ತಾನೆ.

ನ ಭಕ್ಷಯೇತ್ತಥಾ ಮಾಂಸಮಮಾಂಸಾಶೀ ಭವತ್ಯಪಿ ।
ದಾನನಿತ್ಯಃ ಪವಿತ್ರಶ್ಚ ಅಸ್ವಪ್ನಶ್ಚ ದಿವಾಸ್ವಪನ್ ॥೧೨॥

ಯಾವನು ಮಾಂಸವನ್ನು ವೃಥಾಭೋಜನಮಾಡುವುದಿಲ್ಲವೋ ಅವನು ಅಮಾಂಸಾಹಾರೀ–ಎನಿಸುತ್ತಾನೆ. ದಾನಶೀಲನಾದವನು ಸದಾ ಪರಿಶುದ್ಧ ನಾಗಿರುತ್ತಾನೆ. (ದಾನದಿಂದ ಪಾಪವನ್ನು ಕಳೆದುಕೊಳ್ಳುತ್ತಾನೆ.) ಹಗಲಿನಲ್ಲಿ ನಿದ್ರಿಸದವನು ದಿನಪೂರ್ತಿಯಾಗಿ ಜಾಗರಣೆಮಾಡಿದವನು–ಎನಿಸುತ್ತಾನೆ.

ಭೃತ್ಯಾತಿಥಿಷು ಯೋ ಭುಙ್ಕ್ತೇ ಭುಕ್ತವತ್ಸು ಸದಾ ಸದಾ ।
ಅಮೃತಂ ಕೇವಲಂ ಭುಙ್ಕ್ತೇ ಇತಿ ವಿದ್ಧಿ ಯುಧಿಷ್ಠಿರ ॥೧೩॥

ಯುಧಿಷ್ಠಿರ! ಯಾವನು ಭರಣ-ಪೋಷಣೆಗಳಿಗೆ ಯೋಗ್ಯರಾದ ತಾಯಿ-ತಂದೆಗಳೂ, ಬಂಧುಜನರೂ, ಸೇವಕರೂ, ಅತಿಥಿಗಳೂ ಭೋಜನ ಮಾಡಿದ ನಂತರವೇ ಭೋಜನವನ್ನು ಮಾಡುವನೋ– ಅಂತಹವನು ಭೋಜನರೂಪದಲ್ಲಿ ಅಮೃತವನ್ನೇ ಸೇವಿಸುತ್ತಾನೆಂದು ಭಾವಿಸು.

ಅಭುಕ್ತವತ್ಸು ನಾಶ್ನಾನಃ ಸತತಂ ಯಸ್ತು ವೈ ದ್ವಿಜಃ ।
ಅಭೋಜನೇನ ತೇನಾಸ್ಯ ಜಿತಃ ಸ್ವರ್ಗೋ ಭವತ್ಯುತ ॥೧೪॥

ಯಾವ ಬ್ರಾಹ್ಮಣನು ಸೇವಕರಿಗೂ ಅತಿಥಿಗಳಿಗೂ ಭೋಜನಮಾಡಿ ಸದೇ ತಾನು ಮೊದಲು ಭೋಜನಮಾಡುವುದಿಲ್ಲವೋ–ಅಂತಹವನು ಭೃತ್ಯಾತಿಥಿಗಳ ಭೋಜನಕ್ಕೆ ಮೊದಲು ಭೋಜನವನ್ನು ಮಾಡದಿರುವುದ ರಿಂದಲೇ ಸ್ವರ್ಗವನ್ನು ಜಯಿಸುತ್ತಾನೆ. (ಸ್ವರ್ಗಪ್ರಾಪ್ತಿಯೇ ಇದರ ಫಲ ವಾಗಿರುತ್ತದೆ.)

ದೇವತಾಭ್ಯಃ ಪಿತೃಭ್ಯಶ್ಚ ಭೃತ್ಯೇಭ್ಯೋಽತಿಥಿಭಿಃ ಸಹ ।
ಅವಶಿಷ್ಟಂ ತು ಯೋಽಶ್ನಾತಿ ತಮಾಹುರ್ವಿಘಸಾಶಿನಮ್ ॥೧೫॥

ದೇವತೆಗಳಿಗೆ ಹೋಮವಾದನಂತರ, ಪಿತೃಗಣಗಳಿಗೆ ಬಲಿಪ್ರದಾನವಾದನಂತರ, ಮಾತಾ-ಪಿತೃಗಳಿಗೂ–ಸೇವಕರಿಗೂ–ಅತಿಥಿಗಳಿಗೂ ಭೋಜನವಾದ ನಂತರ ಉಳಿದ ಅನ್ನವನ್ನು ಯಾವನು ಭೋಜನ ಮಾಡುವನೋ–ಅಂತಹವನನ್ನು ವಿಘಸಾಶಿಯೆಂದು (ಯಜ್ಞಶೇಷವನ್ನು ಭೋಜನಮಾಡಿದವನೆಂದು) ಹೇಳುತ್ತಾರೆ.

ತೇಷಾಂ ಲೋಕಾ ಹ್ಯಪರ್ಯನ್ತಾಃ ಸದನೇ ಬ್ರಹ್ಮಣಾ ಸಹ ।
ಉಪಸ್ಥಿತಾಶ್ಚಾಪ್ಸರೋಭಿಃ ಪರಿಯಾನ್ತಿ ದಿವೌಕಸಃ ॥೧೯॥

ಇಂತಹ ಪುರುಷರಿಗೆ ಅಕ್ಷಯವಾದ ಲೋಕಗಳು ಪ್ರಾಪ್ತವಾಗುತ್ತವೆ. ಬ್ರಹ್ಮನಿಂದಲೂ–ಅಪ್ಸರೆಯರಿಂದಲೂ ಸಹಿತರಾದ ಸಕಲದೇವತೆಗಳೂ ಅವನ ಮನೆಯಲ್ಲಿ ತಿರುಗಾಡುತ್ತಿರುತ್ತಾರೆ.

ದೇವತಾಭಿಶ್ಚ ಯೇ ಸಾರ್ಧಂ ಪಿತೃಭಿಶ್ಚೋಪಭುಞ್ಜತೇ ।
ರಮನ್ತೇ ಪುತ್ರಪೌತ್ರೈಶ್ಚ ತೇಷಾಂ ಗತಿರನುತ್ತಮಾ ॥೨೦॥

ದೇವತೆಗಳೊಡನೆಯೂ–ಪಿತೃಗಳೊಡನೆಯೂ ಯಾರು ಭೋಜನವನ್ನು ಮಾಡುವರೋ (ದೇವತೆಗಳಿಗೆ ಹವಿರ್ಭಾಗಗಳನ್ನೂ–ಪಿತೃಗಳಿಗೆ ತರ್ಪಣಾದಿಗಳನ್ನೂ ಸಮರ್ಪಿಸಿದನಂತರ ಯಾರು ಭೋಜನಮಾಡುವರೋ)–ಅವರು ಲೋಕದಲ್ಲಿ ಮಕ್ಕಳು-ಮೊಮ್ಮಕ್ಕಳೊಡನೆ ಆನಂದದಿಂದಿರುತ್ತಾರೆ. ಅಂತಹವರಿಗೆ ಪರಲೋಕದಲ್ಲಿಯೂ ಪರಮಶ್ರೇಷ್ಠವಾದ ಗತಿಯೇ ಲಭಿಸುತ್ತದೆ.”

ಎ೨೧ನೆಯ ಅಧ್ಯಾಯವು ಮುಗಿಯಿತು.

೨೨೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪ್ರಹ್ಲಾದೇಂದ್ರರ ಸಂವಾದ

ಮಹಾರಾಜ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯದಿದಂ ಕರ್ಮ ಲೋಕೇಽಸ್ಮಿಞ್ಛುಭಂ ವಾ ಯದಿ ವಾಶುಭಮ್ ।
ಪುರುಷಂ ಯೋಜಯತ್ಯೇವ ಫಲಯೋಗೇನ ಭಾರತ ॥೧॥

ಕರ್ತಾಸ್ತಿ ತಸ್ಯ ಪುರುಷ ಉತಾಹೋ ನೇತಿ ಸಂಶಯಃ ।
ಏತದಿಚ್ಛಾಮಿ ತತ್ತ್ವೇನ ತ್ವತ್ತಃ ಶ್ರೋತುಂ ಪಿತಾಮಹ ॥೨॥

"ಪಿತಾಮಹನೇ! ಈ ಲೋಕದಲ್ಲಿ ಶುಭಾಶುಭಕರ್ಮಗಳು ಪುರುಷನನ್ನು ಸುಖ-ದುಃಖರೂಪಗಳಾದ ಫಲಾನುಭವದಲ್ಲಿ ನಿಯೋಜಿಸುತ್ತವೆ. ಆದರೆ ಪುರುಷನು ಆ ಶುಭಾಶುಭಕರ್ಮಗಳಿಗೆ ಕರ್ತೃವೋ ಅಥವಾ ಅಲ್ಲವೋ–ಎಂಬ ವಿಷಯದಲ್ಲಿ ನನಗೆ ಸಂದೇಹವುಂಟಾಗಿದೆ. ಇದಕ್ಕೆ ಯಥಾವತ್ತಾದ ಸಮಾಧಾನವನ್ನು ನಿನ್ನಿಂದ ತಿಳಿಯಬೇಕೆಂದಿರುತ್ತೇನೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಪ್ರಹ್ಲಾದನಿಗೂ ಮತ್ತು ಇಂದ್ರನಿಗೂ ನಡೆದ ಪುರಾತನವಾದ, ಇತಿಹಾಸರೂಪವಾದ ಸಂವಾದವನ್ನು ಉದಾಹರಿಸುತ್ತಾರೆ. ಅದನ್ನು ನಿನಗೂ ತಿಳಿಸುವೆನು, ಕೇಳು :

ಅಸಕ್ತಂ ಧೂತಪಾಪ್ಮಾನಂ ಕುಲೇ ಜಾತಂ ಬಹುಶ್ರುತಮ್ ।
ಅಸ್ತಬ್ಧಮನಹಙ್ಕಾರಂ ಸತ್ತ್ವಸ್ಥಂ ಸಮಯೇ ರತಮ್ ॥೪॥

ತುಲ್ಯನಿನ್ದಾಸ್ತುತಿಂ ದಾನ್ತಂ ಶೂನ್ಯಾಗಾರನಿವಾಸಿನಮ್ ।
ಚರಾಚರಾಣಾಂ ಭೂತಾನಾಂ ವಿದಿತಪ್ರಭವಾಪ್ಯಯಮ್ ॥೫॥

ಅಕ್ರುಧ್ಯನ್ತಮಹೃಷ್ಯನ್ತಮಪ್ರಿಯೇಷು ಪ್ರಿಯೇಷು ಚ ।
ಕಾಞ್ಚನೇ ವಾಥ ಲೋಷ್ಟೇ ವಾ ಉಭಯೋಃ ಸಮದರ್ಶನಮ್ ॥೬॥

ಆತ್ಮನಿ ಶ್ರೇಯಸಿ ಜ್ಞಾನೇ ಧೀರಂ ನಿಶ್ಚಿತನಿಶ್ಚಯಮ್ ।
ಪರಾವರಜ್ಞಂ ಭೂತಾನಾಂ ಸರ್ವಜ್ಞಂ ಸಮದರ್ಶನಮ್ ॥೭॥

ಶಕ್ರಃ ಪ್ರಹ್ಲಾದಮಾಸೀನಮೇಕಾನ್ತೇ ಸಂಯತೇನ್ದ್ರಿಯಮ್ ।
ಬುಭುತ್ಸಮಾನಸ್ತತ್ಪ್ರಜ್ಞಾಮಭಿಗಮ್ಯೇದಮಬ್ರವೀತ್ ॥೮॥

ಹಿಂದೆ ಒಂದಾನೊಂದು ಕಾಲದಲ್ಲಿ–ಪಾಪಗಳನ್ನು ಒದರಿಹಾಕಿದವನೂ, ಯಾವ ವಿಷಯದಲ್ಲಿಯೂ ಸಂಗವಿಲ್ಲದವನೂ, ಸತ್ಕುಲಪ್ರಸೂತನೂ, ಬಹುಶ್ರುತನೂ (ವಿದ್ವಾಂಸನೂ), ಅಹಂಕಾರ-ಮಮಕಾರಗಳಿಂದ ರಹಿತನೂ, ಧರ್ಮದ ಮರ್ಯಾದೆಯನ್ನು ಪರಿಪಾಲಿಸುವುದರಲ್ಲಿಯೇ ತತ್ಪರನೂ,

ಸತ್ತ್ವಗುಣದಲ್ಲಿಯೇ ಸ್ಥಿರನೂ, ನಿಂದೆ ಮತ್ತು ಸ್ತುತಿಗಳನ್ನು ಸಮಾನವಾಗಿ ಕಾಣುವವನೂ, ಇಂದ್ರಿಯಗಳನ್ನು ನಿಗ್ರಹಿಸಿದವನೂ, ಏಕಾಂತಸ್ಥಾನದಲ್ಲಿ ವಾಸಮಾಡುತ್ತಿರುವವನೂ, ಚರಾಚರಪ್ರಾಣಿಗಳ ಉತ್ಪತ್ತಿ-ಲಯಗಳನ್ನು ತಿಳಿದವನೂ, ಪ್ರಿಯವಾದಲ್ಲಿ ಹರ್ಷಗೊಳ್ಳದೆಯೂ–ಅಪ್ರಿಯವಾದಲ್ಲಿ ಕೋಪಗೊಳ್ಳದೆಯೂ ಇರುವವನೂ, ಸುವರ್ಣದ ಗಟ್ಟಿಯನ್ನೂ–ಮಣ್ಣಿನ ಹೆಂಟೆಯನ್ನೂ ಒಂದೇ ರೀತಿಯಲ್ಲಿ ಕಾಣುವವನೂ, ಆನಂದಮಯವಾದ ಆತ್ಮಜ್ಞಾನದಲ್ಲಿ ನಿಶ್ಚಿತನಿಶ್ಚಯವುಳ್ಳವನೂ, ಧೀರನೂ, ಪ್ರಾಣಿಗಳ ಭೂತ-ಭವಿಷ್ಯತ್ತುಗಳನ್ನು ತಿಳಿದಿರುವವನೂ, ಸರ್ವಜ್ಞನೂ, ಸರ್ವತ್ರ ಸಮಭಾವ ದಿಂದಿರುವವನೂ, ಜಿತೇಂದ್ರಿಯನೂ, ಮಹಾತ್ಮನೂ ಆದ ಪ್ರಹ್ಲಾದನು ಏಕಾಂತದಲ್ಲಿ ಕುಳಿತಿರುವಾಗ, ಇಂದ್ರನು ಅವನ ಬಳಿಗೆ ಬಂದು ಪ್ರಹ್ಲಾದನ ಬುದ್ಧಿ ಮತ್ತು ವಿಚಾರಗಳನ್ನು ತಿಳಿಯುವ ಅಪೇಕ್ಷೆಯಿಂದ ಅವನನ್ನು ಕುರಿತು ಹೇಳತೊಡಗಿದನು :

ಯೈಃ ಕಶ್ಚಿತ್ಸಮ್ಮತೋ ಲೋಕೇ ಗುಣೈಃ ಸ್ಯಾತ್ಪುರುಷೋ ನೃಷು ।
ಭವತ್ಯನಪಗಾನ್ಸರ್ವಾಂಸ್ತಾನ್ಗುಣಾಲ್ಲಕ್ಷಯಾಮಹೇ ॥೯॥

“ದೈತ್ಯರಾಜ! ಲೋಕದಲ್ಲಿ ಪುರುಷನು ಯಾವ ಗುಣಗಳಿಂದ ಜನರಿಂದ ಸಮ್ಮಾನಿತನಾಗುವನೋ –ಆ ಎಲ್ಲ ಗುಣಗಳೂ ನಿನ್ನಲ್ಲಿ ಸ್ಥಿರ ಭಾವದಿಂದಿರುವುದನ್ನು ನಾನು ಕಾಣುತ್ತಿದ್ದೇನೆ.

ಅಥ ತೇ ಲಕ್ಷ್ಯತೇ ಬುದ್ಧಿಃ ಸಮಾ ಬಾಲಜನೈರಿಹ ।
ಆತ್ಮಾನಂ ಮನ್ಯಮಾನಃ ಸನ್ಶ್ರೇಯಃ ಕಿಮಿಹ ಮನ್ಯಸೇ ॥೧೦॥

ನಿನ್ನ ಬುದ್ಧಿಯು ಬಾಲಕರ ಬುದ್ಧಿಯಂತೆ ರಾಗ-ದ್ವೇಷಾದಿಗಳಿಂದ ರಹಿತವಾಗಿರುವಂತೆ ಕಾಣುತ್ತಿದೆ. ನೀನು ಆತ್ಮಾನುಭವವನ್ನು ಪಡೆದಿರುವೆ ಯಾದುದರಿಂದ ನಿನಗೆ ಹೀಗಿರಲು ಸಾಧ್ಯವಾಗಿದೆ. ಈ ಪ್ರಪಂಚದಲ್ಲಿ ನೀನು ಯಾವುದನ್ನು ಆತ್ಮಜ್ಞಾನಸಿದ್ಧಿಗೆ ಶ್ರೇಷ್ಠವಾದ ಸಾಧನವೆಂದು ಭಾವಿಸಿರುವೆ ಯೆಂಬುದನ್ನು ಹೇಳು.

ಬದ್ಧಃ ಪಾಶೈಶ್ಚ್ಯುತಃ ಸ್ಥಾನಾದ್ದ್ವಿಷತಾಂ ವಶಮಾಗತಃ ।
ಶ್ರಿಯಾಃ ವಿಹೀನಃ ಪ್ರಹ್ರಾದ ಶೋಚಿತವ್ಯೇ ನ ಶೋಚಸಿ ॥೧೧॥

ನೀನೀಗ ಪಾಶಗಳಿಂದ ಬಂಧಿಸಲ್ಪಟ್ಟಿರುವೆ. ಚಕ್ರವರ್ತಿಯ ಸ್ಥಾನದಿಂದ ಭ್ರಷ್ಟನಾಗಿರುವೆ. ಶತ್ರುಗಳ ವಶನಾಗಿರುವೆ. ಸಂಪತ್ತಿನಿಂದ ವಿಹೀನನಾಗಿರುವೆ. ಇಂತಹ ಶೋಚನೀಯವಾದ ಪರಿಸ್ಥಿತಿಯಲ್ಲಿಯೂ ನೀನು ಶೋಕಪಡುತ್ತಿಲ್ಲ. ಇದು ನಿನಗೆ ಹೇಗೆ ಸಾಧ್ಯವಾಗಿದೆ?"

ಪ್ರಜ್ಞಾಲಾಭಾತ್ತು ದೈತೇಯ ಉತಾಹೋ ಧೃತಿಮತ್ತಯಾ ।
ಪ್ರಹ್ರಾದ ಸುಸ್ಥರೂಪೋಽಸಿ ಪಶ್ಯನ್ವ್ಯಸನಮಾತ್ಮನಃ ॥೧೨॥

ಪ್ರಹ್ಲಾದ! ವ್ಯಸನವನ್ನು ಪ್ರತ್ಯಕ್ಷವಾಗಿಯೇ ಕಾಣುತ್ತಿದ್ದರೂ ನೀನು ಹೇಗೆ ನಿಶ್ಚಿಂತನಾಗಿರುವೆ? ದೈತ್ಯರಾಜ! ನಿನ್ನ ಈ ನಿಶ್ಚಲವಾದ ಸಮಸ್ಥಿತಿಗೆ ಆತ್ಮಜ್ಞಾನವು ಕಾರಣವೇ ಅಥವಾ ಧೈರ್ಯವು ಕಾರಣವೇ?"

ಯುಧಿಷ್ಠಿರ! ಇಂದ್ರನು ಹೀಗೆ ಕೇಳಿದನಂತರ ಪರಮಾತ್ಮತತ್ತ್ವವನ್ನು ನಿಶ್ಚಯರೂಪದಿಂದ ತಿಳಿದಿದ್ದ, ಧೀರನಾದ ಪ್ರಹ್ಲಾದನು ಪ್ರಜ್ಞೆಯನ್ನು (ಆತ್ಮಜ್ಞಾನವನ್ನು) ವರ್ಣಿಸುತ್ತಾ ಸುಮಧುರವಾದ ಮಾತನ್ನು ಹೇಳಿದನು :

ಪ್ರವೃತ್ತಿಂ ಚ ನಿವೃತ್ತಿಂ ಚ ಭೂತಾನಾಂ ಯೋ ನ ಬುದ್ಧ್ಯತೇ ।
ತಸ್ಯ ಸ್ತಮ್ಭೋ ಭವೇದ್ಬಾಲ್ಯಾನ್ನಾಸ್ತಿ ಸ್ತಮ್ಭೋಽನುಪಶ್ಯತಃ ॥೧೪॥

"ದೇವರಾಜ! ಯಾವನು ಪ್ರಾಣಿಗಳ ಪ್ರವೃತ್ತಿ ಮತ್ತು ನಿವೃತ್ತಿಗಳ ರಹಸ್ಯವನ್ನು ತಿಳಿದಿಲ್ಲವೋ–ಅಂತಹವನ ಅವಿವೇಕದ ಕಾರಣದಿಂದಾಗಿ ಅವನಿಗೆ ಜಡತೆ ಅಥವಾ ಮೋಹವುಂಟಾಗುತ್ತದೆ. ಆದರೆ ಯಾವನು ಆತ್ಮನನ್ನು ಕಂಡುಕೊಳ್ಳುವನೋ–ಅವನಿಗೆ ಜಡತೆಯಾಗಲೀ ಮೋಹವಾಗಲೀ ಇರುವುದಿಲ್ಲ.

ಸ್ವಭಾವಾತ್ಸಮ್ಪ್ರವರ್ತನ್ತೇ ನಿವರ್ತನ್ತೇ ತಥೈವ ಚ ।
ಸರ್ವೇ ಭಾವಾಸ್ತಥಾಭಾವಾಃ ಪುರುಷಾರ್ಥೋ ನ ವಿದ್ಯತೇ ॥೧೫॥

ಎಲ್ಲ ವಿಧವಾದ ಭಾವ ಮತ್ತು ಅಭಾವಗಳು ಸ್ವಭಾವದಿಂದಲೇ ಬರುತ್ತಿರುತ್ತವೆ ; ಹೋಗುತ್ತಿರುತ್ತವೆ. ಇದರಲ್ಲಿ ಪುರುಷಪ್ರಯತ್ನವೇನೂ ಇರುವುದಿಲ್ಲ.

(ಹಸುವು ಗರ್ಭಧರಿಸಿ ಕರುವನ್ನು ಈಯುವ ಮೊದಲೇ ಕೆಚ್ಚಲಿನಲ್ಲಿ ಹಾಲು ತುಂಬಿರುತ್ತದೆ. ಆ ಸಮಯದಲ್ಲಿ ಹಾಲು ಕೆಚ್ಚಲಿನಲ್ಲಿ ತುಂಬಿಕೊಳ್ಳು ವುದಕ್ಕೆ ಕರುವು ಹುಟ್ಟದೇ ಇರುವುದರಿಂದ ವಾತ್ಸಲ್ಯವೂ ಕಾರಣವಾಗು ವುದಿಲ್ಲ. ಈ ಸಂದರ್ಭದಲ್ಲಿ ಕರುವಿನ ಅಭಾವ ಆದಾಗ್ಯೂ ಕೆಚ್ಚಲಿನಲ್ಲಿ ಹಾಲಿನ ಭಾವ–ಈ ಎರಡು ಸ್ವಾಭಾವಿಕವಾಗಿಯೇ ನಡೆಯತಕ್ಕುವುಗಳು. ಇಲ್ಲಿ ಪುರುಷಪ್ರಯತ್ನವೇನೂ ಇರುವುದಿಲ್ಲ.)

ಪುರುಷಾರ್ಥಸ್ಯ ಚಾಭಾವೇ ನಾಸ್ತಿ ಕಶ್ಚಿಚ್ಚ ಕಾರಕಃ ।
ಸ್ವಯಂ ನ ಕುರ್ವತಸ್ತಸ್ಯ ಜಾತು ಮಾನೋ ಭವೇದಿಹ ॥೧೬॥

ಪುರುಷಪ್ರಯತ್ನವಿಲ್ಲದೆಯೇ ಇದ್ದರೆ ಯಾವ ಮನುಷ್ಯನೂ ಕಾರಕ (ಕರ್ತೃ)ನಾಗುವುದಿಲ್ಲ. ಆದರೆ ತಾನು ಯಾವುದನ್ನೂ ಮಾಡದೆಯೇ ಇದ್ದರೂ ಈ ಜಗತ್ತಿನಲ್ಲಿ ತಾನು ಮಾಡಿದೆನೆಂಬ ಅಭಿಮಾನವುಂಟಾಗುತ್ತದೆ.

ಯಸ್ತು ಕರ್ತಾರಮಾತ್ಮಾನಂ ಮನ್ಯತೇ ಸಾಧ್ವಸಾಧು ವಾ ।
ತಸ್ಯ ದೋಷವತೀ ಪ್ರಜ್ಞಾ ಅತತ್ತ್ವಜ್ಞೇತಿ ಮೇ ಮತಿಃ ॥೧೭॥

ಯಾವನು ಆತ್ಮನನ್ನು ಶುಭಕರ್ಮಗಳಿಗಾಗಲೀ ಅಶುಭಕರ್ಮಗಳಿ ಗಾಗಲೀ ಕರ್ತೃವೆಂದು ತಿಳಿಯುವನೋ–ಅವನ ಬುದ್ಧಿಯು ದೋಷಯುಕ್ತ ವೆಂದೂ ತತ್ತ್ವಜ್ಞಾನದಿಂದ ರಹಿತವೆಂದೂ ನನ್ನ ಅಭಿಮತವಾಗಿದೆ.

ಯದಿ ಸ್ಯಾತ್ಪುರುಷಃ ಕರ್ತಾ ಶಕ್ರಾತ್ಮಶ್ರೇಯಸೇ ಧ್ರುವಮ್ ।
ಆರಮ್ಭಾಸ್ತಸ್ಯ ಸಿಧ್ಯೇಯುರ್ನ ತು ಜಾತು ಪರಾ ಭವೇತ್ ॥೧೮॥

ಇಂದ್ರನೇ! ಒಂದು ವೇಳೆ ಪುರುಷನೇ ಕರ್ತೃವಾಗಿದ್ದರೆ ತನ್ನ ಕಲ್ಯಾಣ ಕ್ಕಾಗಿ ನಿಶ್ಚಯವಾಗಿಯೂ ಪ್ರಯತ್ನಮಾಡುತ್ತಿದ್ದನು. ಅವನ ಕಾರ್ಯಗಳೆ ಲ್ಲವೂ ಸಿದ್ಧಿಸಿಯೇ ತೀರುತ್ತಿದ್ದುವು. ಅವನು ತನ್ನ ಪ್ರಯತ್ನದಲ್ಲಿ ಎಂದಿಗೂ ಪರಾಭವವನ್ನು ಹೊಂದುತ್ತಿರಲಿಲ್ಲ.

ಅನಿಷ್ಟಸ್ಯ ಹಿ ನಿರ್ವೃತ್ತಿರನಿರ್ವೃತ್ತಿಃ ಪ್ರಿಯಸ್ಯ ಚ ।
ಲಕ್ಷ್ಯತೇ ಯತಮಾನಾನಾಂ ಪುರುಷಾರ್ಥಸ್ತತಃ ಕುತಃ ॥೧೯॥

ಆದರೆ ಇಷ್ಟಸಿದ್ಧಿಗಾಗಿ ಪ್ರಯತ್ನಿಸುತ್ತಿರುವವರಿಗೆ ಅನಿಷ್ಟಪ್ರಾಪ್ತಿ

ಯಾಗುವುದೂ, ಇಷ್ಟಸಿದ್ಧಿಯಿಂದ ವಂಚಿತರಾಗುವುದೂ–ಈ ಲೋಕದಲ್ಲಿ ಕಂಡುಬರುತ್ತದೆ. ಹೀಗಾಗುವುದಾದರೆ ಪುರುಷಪ್ರಯತ್ನದ ಪ್ರಯೋಜನವೆಲ್ಲಿ ಹೋಯಿತು?

ಅನಿಷ್ಟಸ್ಯಾಭಿನಿರ್ವೃತ್ತಿಮಿಷ್ಟಸಂವೃತ್ತಿಮೇವ ಚ ।
ಅಪ್ರಯತ್ನೇನ ಪಶ್ಯಾಮಃ ಕೇಷಾಂಚಿತ್ತತ್ಸ್ವಭಾವತಃ ॥೨೦॥

ಮತ್ತೆ ಕೆಲವರಿಗೆ ಯಾವ ಪ್ರಯತ್ನವೂ ಇಲ್ಲದೆಯೇ ಅನಿಷ್ಟವು ನಿವಾರಣೆಯಾಗುವುದನ್ನೂ –ಇಷ್ಟವು ಪ್ರಾಪ್ತವಾಗುವುದನ್ನೂ ನಾವು ನೋಡುತ್ತಿದ್ದೇವೆ. ಇದು ಸ್ವಾಭಾವಿಕವಾಗಿಯೇ ನಡೆದುಹೋಗುತ್ತದೆ.

ಪ್ರತಿರೂಪತರಾಃ ಕೇಚಿದ್ದೃಶ್ಯನ್ತೇ ಬುದ್ಧಿಮತ್ತರಾಃ ।
ವಿರೂಪೇಭ್ಯೋಽಲ್ಪಬುದ್ಧಿಭ್ಯೋ ಲಿಪ್ಸಮಾನಾ ಧನಾಗಮಮ್ ॥೨೧॥

ಹೆಚ್ಚು ಬುದ್ಧಿವಂತರಾದ ಕೆಲವರು ಸುಂದರಪುರುಷರು ಕುರೂಪಿಗಳಾದ ಅಲ್ಪಬುದ್ಧಿಯವರಿಂದ ಹಣವನ್ನು ಪಡೆದುಕೊಳ್ಳಲು ಅಪೇಕ್ಷಿಪಡುವುದೂ ಹಲವಾರು ಕಡೆಗಳಲ್ಲಿ ಕಂಡುಬರುತ್ತದೆ.

ಸ್ವಭಾವಪ್ರೇರಿತಾಃ ಸರ್ವೇ ನಿವಿಶನ್ತೇ ಗುಣಾ ಯದಾ ।
ಶುಭಾಶುಭಾಸ್ತದಾ ತತ್ರ ಕಸ್ಯ ಕಿಂ ಮಾನಕಾರಣಮ್ ॥೨೨॥

ಹೀಗೆ ಎಲ್ಲ ವಿಧವಾದ ಶುಭಾಶುಭಕರ್ಮಗಳೂ ಸ್ವಭಾವಪ್ರೇರಿತವಾದ ಗುಣಗಳಿಂದಲೇ ನಿರ್ವಾಹವಾಗುತ್ತವೆಯೆನ್ನುವುದಾದರೆ–ಯಾವನಿಗೆ ತಾನೇ ಅದನ್ನು ತಾನು ಮಾಡಿದೆನೆಂದು ಅಭಿಮಾನಪಡಲು ಕಾರಣವಿದೆ?

ಸ್ವಭಾವಾದೇವ ತತ್ಸರ್ವಮಿತಿ ಮೇ ನಿಶ್ಚಿತಾ ಮತಿಃ ।
ಆತ್ಮಪ್ರತಿಷ್ಠಾ ಪ್ರಜ್ಞಾ ವಾ ಮಮ ನಾಸ್ತಿ ತತೋಽನ್ಯಥಾ ॥೨೩॥

ಸ್ವಭಾವದಿಂದಲೇ ಎಲ್ಲವೂ ನಡೆಯುತ್ತದೆಯೆಂಬುದು ನನ್ನ ನಿಶ್ಚಿತವಾದ ಅಭಿಪ್ರಾಯವಾಗಿದೆ. ಇದಕ್ಕೆ ಬೇರೆಯಾದ ಆತ್ಮನಿಷ್ಠೆಯಾಗಲೀ ಪ್ರಜ್ಞೆಯಾಗಲೀ ನನಗೆ ಇಲ್ಲ.

ಕರ್ಮಜಂ ತ್ವಿಹ ಮನ್ಯನ್ತೇ ಫಲಯೋಗಂ ಶುಭಾಶುಭಮ್ ।
ಕರ್ಮಣಾಂ ವಿಷಯಂ ಕೃತ್ಸ್ನಮಹಂ ವಕ್ಷ್ಯಾಮಿ ತಚ್ಛೃಣು ॥೨೪॥

ಶುಭಾಶುಭಫಲಪ್ರಾಪ್ತಿಗೆ ಹಿಂದೆ ಮಾಡಿದ ಕರ್ಮಗಳೇ ಕಾರಣವೆಂದು ಜನರು ಭಾವಿಸಿದ್ದಾರೆ. ಆದುದರಿಂದ ಇನ್ನು ಮುಂದೆ ನಾನು ಕರ್ಮಗಳ ವಿಷಯವನ್ನು ಸಮಗ್ರವಾಗಿ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ಯಥಾ ವೇದಯತೇ ಕಶ್ಚಿದೋದನಂ ವಾಯಸೋ ಹ್ಯದನ್ ।
ಏವಂ ಸರ್ವಾಣಿ ಕರ್ಮಾಣಿ ಸ್ವಭಾವಸ್ಯೈವ ಲಕ್ಷಣಮ್ ॥೨೫॥

ಯಾವ ರೀತಿಯಲ್ಲಿ ಒಂದು ಕಾಗೆಯು ಎಲ್ಲಿಯೋ ಹಾಕಿದ ಅನ್ನವನ್ನು ತಿನ್ನುತ್ತಿರುವಾಗ ಇತರ ಕಾಗೆಗಳು ಕಾ-ಕಾ–ಎಂದು ಕೂಗಿಕೊಂಡು ಆ ಪಿಂಡದ ಬಳಿಗೆ ಹೋಗುವುವೋ–ಅದೇ ರೀತಿಯಲ್ಲಿ ಎಲ್ಲ ಕರ್ಮಗಳೂ ಸ್ವಭಾವಲಕ್ಷಣಗಳಿಂದಲೇ ಕೂಡಿವೆ.

ವಿಕಾರಾನೇವ ಯೋ ವೇದ ನ ವೇದ ಪ್ರಕೃತಿಂ ಪರಾಮ್ ।
ತಸ್ಯ ಸ್ತಮ್ಭೋ ಭವೇದ್ಬಾಲ್ಯಾನ್ನಾಸ್ತಿ ಸ್ತಮ್ಭೋಽನುಪಶ್ಯತಃ ॥೨೬॥

ಯಾವ ಮನುಷ್ಯನು ಕಾರ್ಯಗಳು ಆಗುವುದನ್ನು ಮಾತ್ರ ತಿಳಿದಿರುವನೋ ಪರಾಪ್ರಕೃತಿಯನ್ನು (ಕಾರ್ಯದ ಹಿನ್ನೆಲೆಯಲ್ಲಿರುವ ಸ್ವಭಾವವನ್ನು) ತಿಳಿದಿಲ್ಲವೋ–ಅವನಿಗೆ ಬಾಲ್ಯ (ಅಜ್ಞಾನ) ದಿಂದ ಜಾಡ್ಯ ವುಂಟಾಗುತ್ತದೆ. ಯಾವನು 'ಕಾರ್ಯಗಳೆಲ್ಲವೂ ಸ್ವಭಾವಸಿದ್ಧ ; ಪ್ರಯತ್ನವು ಕೇವಲ ಗೌಣ'–ಎಂದು ಅನುಭವದಿಂದ ತಿಳಿದುಕೊಳ್ಳುವನೋ–ಅವನಿಗೆ ಯಾವ ವಿಧವಾದ ಅಹಂಕಾರವೂ ಇರುವುದಿಲ್ಲ.

ಸ್ವಭಾವಭಾವಿನೋ ಭಾವಾನ್ಸರ್ವಾನೇವೇಹ ನಿಶ್ಚಯಾತ್ ।
ಬುಧ್ಯಮಾನಸ್ಯ ದರ್ಪೋ ವಾ ಮಾನೋ ವಾ ಕಿಂ ಕರಿಷ್ಯತಿ ॥೨೭॥

ಎಲ್ಲ ಕ್ರಿಯೆಗಳೂ ಸ್ವಭಾವದಿಂದಲೇ ಆಗತಕ್ಕುವುಗಳು–ಎಂಬೀ ವಿಷಯವನ್ನು ಯಾರು ನಿಶ್ಚಯಜ್ಞಾನದಿಂದ ತಿಳಿದಿರುವನೋ ಅಂತಹವನಿಗೆ ದರ್ಪವಾಗಲೀ ಅಭಿಮಾನವಾಗಲೀ ಏನು ಮಾಡೀತು? (ಪುರುಷ ಪ್ರಯತ್ನವು ಗೌಣ. ಪ್ರಕೃತಿಯೇ (ಗುಣಗಳೇ) ಎಲ್ಲವನ್ನೂ ಮಾಡುತ್ತದೆ–

ಎಂಬುದನ್ನು ಚೆನ್ನಾಗಿ ತಿಳಿದುಕೊಂಡವನ ಬಳಿಗೆ ದರ್ಪವಾಗಲೀ ಅಭಿಮಾನ ವಾಗಲೀ ಸುಳಿಯುವುದೇ ಇಲ್ಲ.)

ವೇದ ಧರ್ಮವಿಧಿಂ ಕೃತ್ಸ್ನಂ ಭೂತಾನಾಂ ಚಾಪ್ಯನಿತ್ಯತಾಮ್ ।
ತಸ್ಮಾಚ್ಛಕ್ರ ನ ಶೋಚಾಮಿ ಸರ್ವಂ ಹ್ಯೇವೇದಮನ್ತವತ್ ॥೨೮॥

ಶಕ್ರನೇ! ನಾನು ಸಮಗ್ರವಾದ ಧರ್ಮವಿಧಿಗಳನ್ನೂ–ಎಲ್ಲ ಪ್ರಾಣಿಗಳ ಅನಿತ್ಯತೆಯನ್ನೂ ತಿಳಿದವನಾಗಿದ್ದೇನೆ. ಈ ಎಲ್ಲವೂ ನಾಶವಾಗತಕ್ಕುವುಗಳು ಎಂಬುದನ್ನು ತಿಳಿದೇ ನಾನು ಈ ರಾಜ್ಯೈಶ್ವರ್ಯಗಳ ವಿಷಯವಾಗಿ ಶೋಕಪಡುವುದಿಲ್ಲ.

ನಿರ್ಮಮೋ ನಿರಹಂಕಾರೋ ನಿರಾಶೀರ್ಮುಕ್ತಬನ್ಧನಃ ।
ಸ್ವಸ್ಥೋ ವ್ಯಪೇತಃ ಪಶ್ಯಾಮಿ ಭೂತಾನಾಂ ಪ್ರಭವಾಪ್ಯಯೌ ॥೨೯॥

ನಾನು ಅಹಂಕಾರ-ಮಮಕಾರಗಳಿಲ್ಲದವನಾಗಿ, ಸರ್ವಪ್ರಕಾರವಾದ ಬಂಧನಗಳಿಂದಲೂ ಮುಕ್ತನಾಗಿ, ಅಸಂಗನಾಗಿ, ಆತ್ಮನಿಷ್ಠನಾಗಿ ಪ್ರಾಣಿಗಳ ಉತ್ಪತ್ತಿ-ವಿನಾಶಗಳನ್ನು ನೋಡುತ್ತಲೇ ಇರುತ್ತೇನೆ.

ಕೃತಪ್ರಜ್ಞಸ್ಯ ದಾನ್ತಸ್ಯ ವಿತೃಷ್ಣಸ್ಯ ನಿರಾಶಿಷಃ ।
ನಾಯಾಸೋ ವಿದ್ಯತೇ ಶಕ್ರ ಪಶ್ಯತೋ ಲೋಕಮವ್ಯಯಮ್ ॥೩೦॥

ಸಂಸ್ಕೃತವಾದ ಬುದ್ಧಿಯನ್ನು ಹೊಂದಿರುವ, ಮನಸ್ಸನ್ನೂ–ಇಂದ್ರಿಯ ಗಳನ್ನೂ ನಿಗ್ರಹಿಸಿರುವ, ತೃಷ್ಣೆಯಿಂದಲೂ–ಅಪೇಕ್ಷೆಗಳಿಂದಲೂ ರಹಿತನಾಗಿ ರುವ, ಅವಿನಾಶಿಯಾದ ಆತ್ಮನನ್ನೂ–ನಾಶಯುಕ್ತವಾದ ಲೋಕವನ್ನೂ ನೋಡುತ್ತಿರುವ ನನಗೆ ರಾಜ್ಯ-ಕೋಶಾದಿಗಳನ್ನು ಕಳೆದುಕೊಂಡುದರಿಂದ ಯಾವ ಕಷ್ಟವೂ ಕಾಣುತ್ತಿಲ್ಲ.

ಪ್ರಕೃತೌ ಚ ವಿಕಾರೇ ಚ ನ ಮೇ ಪ್ರೀತಿರ್ನ ಚ ದ್ವಿಷೇ ।
ದ್ವೇಷ್ಟಾರಂ ಚ ನ ಪಶ್ಯಾಮಿ ಯೋ ಮಾಮದ್ಯ ಮಮಾಯತೇ ॥

ಪ್ರಕೃತಿ ಮತ್ತು ಅದರ ಕಾರ್ಯಗಳ ವಿಷಯವಾಗಿ ನನಗೆ ಪ್ರೀತಿಯೂ ಇಲ್ಲ; ದ್ವೇಷವೂ ಇಲ್ಲ. ನಾನು ಯಾರನ್ನೂ ನನ್ನ ದ್ವೇಷಿಯೆಂದಾಗಲೀ ಆತ್ಮೀಯನೆಂದಾಗಲೀ ಭಾವಿಸುವುದಿಲ್ಲ.

ನೋರ್ಧ್ವಂ ನಾವಾಙ್ನ ತಿರ್ಯಕ್ಚ ನ ಕ್ವಚಿಚ್ಛಕ್ರ ಕಾಮಯೇ ।
ನ ಹಿ ಜ್ಞೇಯೇ ನ ವಿಜ್ಞಾನೇ ನ ಜ್ಞಾನೇ ಕರ್ಮ ವಿದ್ಯತೇ ॥೩೨॥

ಇಂದ್ರ! ನಾನು ಮೇಲಾಗಲೀ, ಕೆಳಗಾಗಲೀ, ಅಡ್ಡಡ್ಡವಾಗಿಯೇ ಆಗಲೀ, ಯಾವುದೇ ಜಾಗದಲ್ಲಾಗಲೀ–ಏನನ್ನೂ ಅಪೇಕ್ಷಿಸುವುದಿಲ್ಲ. ಜ್ಞಾನ, ವಿಜ್ಞಾನ ಮತ್ತು ಜ್ಞೇಯಗಳ ನಿಮಿತ್ತವಾಗಿ ನಾನು ಮಾಡಬೇಕಾದ ಕರ್ಮವು ಯಾವುದೂ ಇರುವುದಿಲ್ಲ."

ಇಂದ್ರನು ಪ್ರಶ್ನಿಸುತ್ತಾನೆ :

ಯೇನೈಷಾ ಲಭ್ಯತೇ ಪ್ರಜ್ಞಾ ಯೇನ ಶಾನ್ತಿರವಾಪ್ಯತೇ ।
ಪ್ರಬ್ರೂಹಿ ತಮುಪಾಯಂ ಮೇ ಸಮ್ಯಕ್ಪ್ರಹ್ರಾದ ಪೃಚ್ಛತಃ ॥೩೩॥

"ಪ್ರಹ್ಲಾದ! ಯಾವ ಉಪಾಯದಿಂದ ಇಂತಹ ಪ್ರಜ್ಞೆಯು ಪ್ರಾಪ್ತವಾಗುತ್ತದೆ ಮತ್ತು ಯಾವುದರಿಂದ ನಿನಗೆ ಲಭಿಸಿರುವ ಮನಃಶಾಂತಿಯು ಲಭಿಸುತ್ತದೆ? ಪ್ರಶ್ನೆಯನ್ನು ಕೇಳುತ್ತಿರುವ ನನಗೆ ಆ ಉಪಾಯವನ್ನು ಚೆನ್ನಾಗಿ ವಿವರಿಸಿ ಹೇಳು."

ಪ್ರಹ್ಲಾದನು ಹೇಳುತ್ತಾನೆ :

ಆರ್ಜವೇನಾಪ್ರಮಾದೇನ ಪ್ರಸಾದೇನಾತ್ಮವತ್ತಯಾ ।
ವೃದ್ಧಶುಶ್ರೂಷಯಾ ಶಕ್ರ ಪುರುಷೋ ಲಭತೇ ಮಹತ್ ॥೩೪॥

"ದೇವೇಂದ್ರ! ಸರಳತೆ, ಜಾಗರೂಕತೆ, ಬುದ್ಧಿಯ ನೈರ್ಮಲ್ಯ, ಚಿತ್ತದ ಸ್ಥಿರತೆ, ವೃದ್ಧರ ಶುಶ್ರೂಷೆ–ಈ ಗುಣಗಳಿಂದ ಪುರುಷನು ಪರಮಪದವನ್ನು ಪಡೆದುಕೊಳ್ಳುತ್ತಾನೆ.

ಸ್ವಭಾವಾಲ್ಲಭತೇ ಪ್ರಜ್ಞಾಂ ಶಾಂತಿಮೇತಿ ಸ್ವಭಾವತಃ ।
ಸ್ವಭಾವಾದೇವ ತತ್ಸರ್ವಂ ಯತ್ಕಿಂಚಿದನುಪಶ್ಯಸಿ ॥೩೫॥

ಈ ಗುಣಗಳನ್ನು ಮೈಗೂಡಿಸಿಕೊಂಡನಂತರ ಸ್ವಾಭಾವಿಕವಾಗಿಯೇ ಮನುಷ್ಯನು ಸುಪ್ರಜ್ಞೆಯನ್ನು ಹೊಂದುತ್ತಾನೆ. ಸ್ವಭಾವದಿಂದಲೇ ಶಾಂತಿಯನ್ನು ಪಡೆದುಕೊಳ್ಳುತ್ತಾನೆ. ನೀನು ನನ್ನಲ್ಲಿ ಯಾವ ಯಾವ ಗುಣ

ಗಳನ್ನು ಕಾಣುತ್ತಿರುವೆಯೋ–ಅವೆಲ್ಲವೂ ಸ್ವಭಾವದಿಂದಲೇ ದೊರೆಯುತ್ತವೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ದೈತ್ಯರಾಜನಾದ ಪ್ರಹ್ಲಾದನು ಹೀಗೆ ಹೇಳಿದುದನ್ನು ಕೇಳಿ ಇಂದ್ರನು ವಿಸ್ಮಿತನಾದನು. ಅತ್ಯಂತಪ್ರಸನ್ನನಾಗಿ ಪ್ರಹ್ಲಾದನ ಮಾತುಗಳನ್ನು ಬಹಳವಾಗಿ ಶ್ಲಾಘಿಸಿದನು. ಆಗ ತ್ರೈಲೋಕ್ಯಪತಿಯಾದ ದೇವೇಶ್ವರನಾದ ಇಂದ್ರನು ದೈತ್ಯೇಂದ್ರನಾದ ಪ್ರಹ್ಲಾದನನ್ನು ಸತ್ಕರಿಸಿ ಅವನ ಅನುಮತಿಯನ್ನು ಪಡೆದು ತನ್ನ ನಿವಾಸಸ್ಥಾನವಾದ ಸ್ವರ್ಗಕ್ಕೆ ಹೊರಟುಹೋದನು."

೨೨೨ನೆಯ ಅಧ್ಯಾಯವು ಮುಗಿಯಿತು.

೨೨೩ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಇಂದ್ರ-ಬಲಿಗಳ ಸಂವಾದ : ಇಂದ್ರನ ಆಕ್ಷೇಪಯುಕ್ತವಾದ ಮಾತುಗಳಿಗೆ ಬಲಿಯ ಕಠೋರವಾದ ಪ್ರತ್ಯುತ್ತರ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯಥಾ ಬುದ್ಧ್ಯಾ ಮಹೀಪಾಲೋ ಭ್ರಷ್ಟಶ್ರೀರ್ವಿಚರೇನ್ಮಹೀಮ್ ।
ಕಾಲದಣ್ಡವಿನಿಷ್ಪಿಷ್ಟಸ್ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹನೇ! ಎಂತಹ ಬುದ್ಧಿಯಿದ್ದರೆ ರಾಜನು ಕಾಲದಂಡದ ಹೊಡೆತದಿಂದ ಪುಡಿಮಾಡಲ್ಪಟ್ಟವನಾದರೂ ರಾಜ್ಯಭ್ರಷ್ಟನಾದರೂ ಭೂಮಿಯಲ್ಲಿ ಓಡಾಡುತ್ತಾನೆ? ಈ ವಿಷಯವನ್ನು ನನಗೆ ಹೇಳು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಇಂದ್ರನಿಗೂ ಮತ್ತು ವಿರೋಚನನ ಮಗನಾದ ಬಲಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನು ತಿಳಿಸುವೆನು, ಕೇಳು :

ಒಮ್ಮೆ ಇಂದ್ರನು ಎಲ್ಲ ಅಸುರರನ್ನೂ ಜಯಿಸಿ ಪಿತಾಮಹನಾದ

ಬ್ರಹ್ಮನ ಬಳಿಗೆ ಬಂದು ಬದ್ಧಾಂಜಲಿಯಾಗಿ ನಮಸ್ಕರಿಸಿ ಬಲಿಯ ವಿಷಯ ವಾಗಿ ಪಿತಾಮಹನನ್ನು ಪ್ರಶ್ನಿಸಿದನು.

ಯಸ್ಯ ಸ್ಮ ದದತೋ ವಿತ್ತಂ ನ ಕದಾಚನ ಹೀಯತೇ ।
ತಂ ಬಲಿಂ ನಾಧಿಗಚ್ಛಾಮಿ ಬ್ರಹ್ಮನ್ನಾಚಕ್ಷ್ವ ಮೇ ಬಲಿಮ್ ॥೪॥

"ಬ್ರಹ್ಮದೇವ! ಎಷ್ಟು ದಾನಮಾಡುತ್ತಿದ್ದರೂ ಯಾವನ ಬೊಕ್ಕಸವು ಬರಿದಾಗುತ್ತಲೇ ಇರಲಿಲ್ಲವೋ–ಅಂತಹ ಬಲಿಯನ್ನು ನಾನು ಎಷ್ಟು ಹುಡುಕಿದರೂ ಕಾಣದವನಾಗಿದ್ದೇನೆ. ಅವನೆಲ್ಲಿರುವನೆಂಬುದನ್ನು ದಯ ಮಾಡಿ ಹೇಳು.

ಸ ವಾಯುರ್ವರುಣಶ್ಚೈವ ಸ ರವಿಃ ಸ ಚ ಚನ್ದ್ರಮಾಃ ।
ಸೋಽಗ್ನಿಸ್ತಪತಿ ಭೂತಾನಿ ಜಲಂ ಚ ಸ ಭವತ್ಯುತ ।
ತಂ ಬಲಿಂ ನಾಧಿಗಚ್ಛಾಮಿ ಬ್ರಹ್ಮನ್ನಾಚಕ್ಷ್ವ ಮೇ ಬಲಿಮ್ ॥೫॥

ಬಲಿಚಕ್ರವರ್ತಿಯು ತಾನೇ ವಾಯುವಾಗಿ ಎಲ್ಲೆಡೆಗಳಲ್ಲಿಯೂ ಸಂಚರಿ ಸುತ್ತಾನೆ. ವರುಣನಾಗಿ ಮಳೆಗರೆಯುತ್ತಾನೆ. ರವಿಯಾಗಿ ಪ್ರಕಾಶವನ್ನು ನೀಡುತ್ತಾನೆ. ಚಂದ್ರನಾಗಿ ಓಷಧಿಗಳನ್ನು ವೃದ್ಧಿಪಡಿಸುತ್ತಾನೆ. ಅಗ್ನಿಯಾಗಿ ಸಮಸ್ತಪ್ರಾಣಿಗಳಿಗೂ ತಾಪವನ್ನುಂಟುಮಾಡುತ್ತಾನೆ. ಜಲವಾಗಿ ಪ್ರಾಣಿಗಳ ಬಾಯಾರಿಕೆಯನ್ನು ನೀಗಿಸುತ್ತಾನೆ. ಅಂತಹ ಬಲಿಯನ್ನು ನಾನು ಎಲ್ಲಿಯೂ ಸಂಧಿಸಲೇ ಇಲ್ಲ. ಅವನೆಲ್ಲಿರುವನೆಂಬುದನ್ನು ದಯಮಾಡಿ ಹೇಳು.

ಸ ಏವ ಹ್ಯಸ್ತಮಯತೇ ಸ ಸ್ಮ ವಿದ್ಯೋತತೇ ದಿಶಃ ।
ಸ ವರ್ಷತಿ ಸ್ಮ ವರ್ಷಾಣಿ ಯಥಾಕಾಲಮತನ್ದ್ರಿತಃ ।
ತಂ ಬಲಿಂ ನಾಧಿಗಚ್ಛಾಮಿ ಬ್ರಹ್ಮನ್ನಾಚಕ್ಷ್ವ ಮೇ ಬಲಿಮ್ ॥೬॥

ಬಲಿಚಕ್ರವರ್ತಿಯು ಆಲಸ್ಯವನ್ನು ಬಿಟ್ಟು ಆಯಾ ಸಮಯಗಳಲ್ಲಿ ದಿಕ್ಕುಗಳನ್ನು ಬೆಳಗುತ್ತಿದ್ದನು. ಅಸ್ತಮಾನವನ್ನುಂಟುಮಾಡುತ್ತಿದ್ದನು. ಮಳೆಗರೆಯುತ್ತಿದ್ದನು. ಅಂತಹ ಬಲಿಯನ್ನು ನಾನೆಷ್ಟೇ ಹುಡುಕಿದರೂ

ಅವನು ಸಿಕ್ಕುತ್ತಲೇ ಇಲ್ಲ. ಪಿತಾಮಹನೇ! ಅವನೆಲ್ಲಿರುವನೆಂಬುದನ್ನು ನನಗೆ ದಯಮಾಡಿ ಹೇಳು."

ಬ್ರಹ್ಮನು ಹೇಳುತ್ತಾನೆ :

ನೈತತ್ತೇ ಸಾಧು ಮಘವನ್ಯದೇನಮನುಪೃಚ್ಛಸಿ ।
ಪೃಷ್ಟಸ್ತು ನಾನೃತಂ ಬ್ರೂಯಾತ್ತಸ್ಮಾದ್ವಕ್ಷ್ಯಾಮಿ ತೇ ಬಲಿಮ್ ॥೮॥

"ದೇವೇಂದ್ರ! ನೀನು ಹೀಗೆ ಬಲಿಯ ವಿಷಯವಾಗಿ ನನ್ನನ್ನು ಕೇಳುವುದು ಸರಿಯಲ್ಲ. ಆದರೆ ಪ್ರಶ್ನಿಸಿದಾಗ ಸುಳ್ಳನ್ನು ಹೇಳಬಾರದು. ಆದುದರಿಂದ ಬಲಿಯು ಎಲ್ಲಿರುವನೆಂಬ ವಿಷಯವನ್ನು ಹೇಳಿಬಿಡುತ್ತೇನೆ.

ಉಷ್ಟ್ರೇಷು ಯದಿ ವಾ ಗೋಷು ಖರೇಷ್ವಶ್ವೇಷು ವಾ ಪುನಃ ।
ವರಿಷ್ಠೋ ಭವಿತಾ ಜನ್ತುಃ ಶೂನ್ಯಾಗಾರೇ ಶಚೀಪತೇ ॥೯॥

ಇಂದ್ರ! ಯಾವುದಾದರೂ ಒಂದು ಶೂನ್ಯಗೃಹದಲ್ಲಿರುವ ಒಂಟೆ, ಹಸು, ಕತ್ತೆ ಅಥವಾ ಕುದುರೆ ಈ ಜಾತಿಗಳ ಪ್ರಾಣಿಗಳಲ್ಲಿ ಶ್ರೇಷ್ಠವಾದ ಒಂದು ಪ್ರಾಣಿಯಿದ್ದರೆ ಅದನ್ನೇ ನೀನು ಬಲಿಯೆಂದು ಭಾವಿಸು."

ಇಂದ್ರನು ಕೇಳುತ್ತಾನೆ :

ಯದಿ ಸ್ಮ ಬಲಿನಾ ಬ್ರಹ್ಮಞ್ಶೂನ್ಯಾಗಾರೇ ಸಮೇಯಿವಾನ್ ।
ಹನ್ಯಾಮೇನಂ ನ ವಾ ಹನ್ಯಾಂ ತದ್ಬ್ರಹ್ಮನ್ನನುಶಾಧಿ ಮಾಮ್ ॥೧೦॥

"ಭಗವನ್! ನೀನು ಹೇಳಿದಂತೆ ಶೂನ್ಯಗೃಹದಲ್ಲಿ ಬಲಿಚಕ್ರವರ್ತಿಯೊಡನೆ ನನ್ನ ಸಮಾಗಮವಾದರೆ ನಾನು ಅವನನ್ನು ಸಂಹರಿಸಲೇ ಅಥವಾ ಬೇಡವೇ–ಎಂಬುದನ್ನು ನನಗೆ ಉಪದೇಶಿಸು."

ಪಿತಾಮಹನು ಹೇಳುತ್ತಾನೆ :

ಮಾ ಸ್ಮ ಶಕ್ರ ಬಲಿಂ ಹಿಂಸೀರ್ನ ಬಲಿರ್ವಧಮರ್ಹತಿ ।
ನ್ಯಾಯಸ್ತು ಶಕ್ರ ಪ್ರಷ್ಟವ್ಯಸ್ತ್ವಯಾ ವಾಸವ ಕಾಮ್ಯಯಾ ॥೧೧॥

"ವಾಸವ! ನೀನು ಬಲಿಯನ್ನು ಸಂಹರಿಸಬಾರದು. ಅವನು ವಧಾರ್ಹನಲ್ಲ. ನೀನು ಅವನನ್ನು ಯಥೇಷ್ಟವಾಗಿ ತತ್ತ್ವಗಳ ವಿಷಯಗಳ ಬಗೆಗೆ ಪ್ರಶ್ನೆಮಾಡು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಬ್ರಹ್ಮನಿಂದ ಹೀಗೆ ಹೇಳಲ್ಪಟ್ಟ ದೇವೇಂದ್ರನು ಐರಾವತದ ಬೆನ್ನಿನ ಮೇಲೆ ಕುಳಿತು ರಾಜ್ಯಲಕ್ಷ್ಮಿಯಿಂದ ಕಂಗೊಳಿಸುತ್ತಾ ಪೃಥ್ವಿಯಲ್ಲಿ ಬಲಿಯನ್ನು ಹುಡುಕಿಕೊಂಡು ಸಂಚರಿಸತೊಡಗಿದನು. ಹೀಗೆಯೇ ಇಂದ್ರನು ಸುತ್ತಾಡುತ್ತಿರುವಾಗ ಬ್ರಹ್ಮನು ಹೇಳಿದ್ದಂತೆ ಶೂನ್ಯಗೃಹವೊಂದರಲ್ಲಿ ಕತ್ತೆಯ ವೇಷವನ್ನು ಧರಿಸಿಕೊಂಡು ವಾಸಮಾಡುತ್ತಿದ್ದ ಬಲಿಚಕ್ರವರ್ತಿಯನ್ನು ನೋಡಿದನು. ಆಗ ಇಂದ್ರನು ಬಲಿಯನ್ನು ಸಂಬೋಧಿಸಿ ಹೇಳಿದನು :

ಖರಯೋನಿಮನುಪ್ರಾಪ್ತಸ್ತುಷಭಕ್ಷೋಽಸಿ ದಾನವ ।
ಇಯಂ ತೇ ಯೋನಿರಧಮಾ ಶೋಚಸ್ಯಾಹೋ ನ ಶೋಚಸಿ ॥೧೪॥

"ದಾನವೇಂದ್ರ! ನೀನು ಕತ್ತೆಯ ರೂಪವನ್ನು ಆಶ್ರಯಿಸಿ ಧಾನ್ಯದ ಮೇಲಿನ ಹೊಟ್ಟನ್ನು ತಿನ್ನುತ್ತಿರುವೆ. ಇಂತಹ ನೀಚಯೋನಿಯು ನಿನಗೆ ಪ್ರಾಪ್ತ ವಾಗಿದೆ. ಇದರಿಂದ ನೀನು ಶೋಚಿಸುತ್ತಿರುವೆಯೋ ಅಥವಾ ಇಲ್ಲವೋ?

ಅದೃಷ್ಟಂ ಬತ ಪಶ್ಯಾಮಿ ದ್ವಿಷತಾಂ ವಶಮಾಗತಮ್ ।
ಶ್ರಿಯಾ ವಿಹೀನಂ ಮಿತ್ರೈಶ್ಚ ಭ್ರಷ್ಟವೀರ್ಯಪರಾಕ್ರಮಮ್ ॥೧೫॥

ನೀನು ಇದುವರೆಗೂ ನನ್ನ ಕಣ್ಣಿಗೇ ಬಿದ್ದಿರಲಿಲ್ಲ. ನೀನೀಗ ಶತ್ರುಗಳ ವಶನಾಗಿರುವೆ. ರಾಜ್ಯಲಕ್ಷ್ಮಿಯಿಂದಲೂ, ಮಿತ್ರರಿಂದಲೂ ವಿಹೀನನಾಗಿ ರುವೆ. ನಿನ್ನ ಬಲ-ಪರಾಕ್ರಮಗಳೂ ನಷ್ಟವಾಗಿ ಹೋಗಿವೆ. ಇಂತಹ ಸ್ಥಿತಿ ಯಲ್ಲಿ ನಿನ್ನನ್ನು ನೋಡುತ್ತಿದ್ದೇನೆ.

ಯತ್ತದ್ಯಾನಸಹಸ್ರೈಸ್ತ್ವಂ ಜ್ಞಾತಿಭಿಃ ಪರಿವಾರಿತಃ ।
ಲೋಕಾನ್ಪ್ರತಾಪಯನ್ಸರ್ವಾನ್ಯಾಸ್ಯಸ್ಮಾನವಿತರ್ಕಯನ್ ॥೧೬॥

ನೀನು ಈ ಹಿಂದೆ ಸಾವಿರಾರು ವಾಹನಗಳಿಂದಲೂ ಮತ್ತು ವಾಹನಸ್ಥ ರಾದ ಬಂಧುಗಳಿಂದಲೂ ಪರಿವೃತನಾಗಿ ಎಲ್ಲ ಲೋಕಗಳಲ್ಲಿಯೂ ಪ್ರಭಾವವನ್ನು ಬೀರುತ್ತಿದ್ದೆ. ದೇವತೆಗಳಾದ ನಮ್ಮ ವಿಷಯದಲ್ಲಿ ಯಾವ ಯೋಚನೆಯೂ ಇಲ್ಲದೆ ಸಂಚರಿಸುತ್ತಿದ್ದೆ.

ತ್ವನ್ಮುಖಾಶ್ಚೈವ ದೈತೇಯಾ ವ್ಯತಿಷ್ಠಂಸ್ತವ ಶಾಸನೇ ।
ಅಕೃಷ್ಟಪಚ್ಯಾ ಚ ಮಹೀ ತವೈಶ್ವರ್ಯೇ ಬಭೂವ ಹ ।
ಇದಂ ಚ ತೇಽದ್ಯ ವ್ಯಸನಂ ಶೋಚಸ್ಯಾಹೋ ನ ಶೋಚಸಿ ॥೧೭॥

ನಿನ್ನ ಅನುಯಾಯಿಗಳಾದ ದೈತ್ಯರೆಲ್ಲರೂ ನಿನ್ನ ಆಜ್ಞೆಯಂತೆಯೇ ನಡೆದುಕೊಳ್ಳುತ್ತಿದ್ದರು. ನಿನ್ನ ರಾಜ್ಯದಲ್ಲಿ ಕೃಷಿಮಾಡದೆಯೇ ಭೂಮಿಯಲ್ಲಿ ಧಾನ್ಯಾದಿಗಳು ಬೆಳೆಯುತ್ತಿದ್ದುವು. ಆದರೆ ಈಗ ನೀನು ತುಂಬಾ ಕಷ್ಟದಲ್ಲಿರುವೆ. ಈ ಕಷ್ಟದಿಂದ ನೀನು ಶೋಚಿಸುತ್ತಿರುವೆಯೋ? ಇಲ್ಲವೋ?

ಯದಾತಿಷ್ಠಃ ಸಮುದ್ರಸ್ಯ ಪೂರ್ವಕೂಲೇ ವಿಲೇಲಿಹನ್ ।
ಜ್ಞಾತೀನ್ವಿಭಜತೋ ವಿತ್ತಂ ತದಾಸೀತ್ತೇ ಮನಃ ಕಥಮ್ ॥೧೮॥

ಹಿಂದೆ ನೀನು ಸಮುದ್ರದ ಪೂರ್ವತೀರಪ್ರದೇಶದಲ್ಲಿ ನಾನಾವಿಧವಾದ ಭೋಗಗಳನ್ನು ಆಸ್ವಾದಿಸುತ್ತಾ ಹಣವನ್ನು ವಿಭಾಗಮಾಡುತ್ತಿದ್ದ ಜ್ಞಾತಿಗಳನ್ನು ನೋಡಿಕೊಳ್ಳುತ್ತಿದ್ದೆ. ಅಂದು ನಿನ್ನ ಮನಃಸ್ಥಿತಿಯು ಹೇಗಿದ್ದಿತು?

ಯತ್ತೇ ಸಹಸ್ರಸಮಿತಾ ನನೃತುರ್ದೇವಯೋಷಿತಃ ।
ಬಹೂನಿ ವರ್ಷಪೂಗಾನಿ ವಿಹಾರೇ ದೀಪ್ಯತಃ ಶ್ರಿಯಾ ॥೧೯॥

ಸರ್ವಾಃ ಪುಷ್ಕರಮಾಲಿನ್ಯಃ ಸರ್ವಾಃ ಕಾಞ್ಚನಸಪ್ರಭಾಃ ।
ಕಥಮದ್ಯ ತದಾ ಚೈವ ಮನಸ್ತೇ ದಾನವೇಶ್ವರ ॥೨೦॥

ನೀನು ಅನೇಕವರ್ಷಗಳ ಕಾಲ ರಾಜ್ಯಲಕ್ಷ್ಮಿಯಿಂದ ಸುಶೋಭಿತನಾಗಿ ವಿಹರಿಸುತ್ತಿದ್ದೆ. ಆ ಸಮಯದಲ್ಲಿ ಚಿನ್ನದ ಕಾಂತಿಯಂತೆ ಕಾಂತಿಯಿಂದ ಯುಕ್ತರಾಗಿದ್ದ, ಕಮಲಪುಷ್ಪಗಳ ಮಾಲೆಗಳಿಂದ ಅಲಂಕೃತರಾಗಿದ್ದ ಸಾವಿರಾರು ದೇವಾಂಗನೆಯರು ನಿನ್ನ ಮುಂದೆ ನರ್ತನಮಾಡುತ್ತಿದ್ದರು. ದಾನವೇಶ್ವರ! ಆ ದಿನಗಳಲ್ಲಿ ನಿನ್ನ ಮನಃಸ್ಥಿತಿಯು ಹೇಗಿದ್ದಿತು? ಈಗ ಹೇಗಿದೆ?

ಛತ್ರಂ ತವಾಸೀತ್ಸುಮಹತ್ಸೌವರ್ಣಂ ರತ್ನಭೂಷಿತಮ್ ।
ನನೃತುಸ್ತತ್ರ ಗನ್ಧರ್ವಾಃ ಷಟ್ಸಹಸ್ರಾಣಿ ಸಪ್ತಧಾ ॥೨೧॥

ಹಿಂದೆ ನೀನು ರತ್ನಸಿಂಹಾಸನದಲ್ಲಿ ಕುಳಿತಿದ್ದಾಗ ರತ್ನಭೂಷಿತವಾದ ಸುವರ್ಣಮಯವಾದ ದೊಡ್ಡದಾದ ಶ್ವೇತಛತ್ರವು ನಿನ್ನ ತಲೆಯ ಮೇಲೆ ಕಂಗೊಳಿಸುತ್ತಿದ್ದಿತು. ಆರು ಸಾವಿರ ಗಂಧರ್ವರು ಸಪ್ತಸ್ವರಗಳಲ್ಲಿಯೂ ಗೀತಗಳನ್ನು ಹಾಡುತ್ತಾ ತಾಳ-ಲಯಬದ್ಧವಾಗಿ ನಿನ್ನ ಮುಂದೆ ನೃತ್ಯ ಮಾಡುತ್ತಿದ್ದರು. ಆಗ ನಿನ್ನ ಮನಸ್ಸು ಹೇಗಿದ್ದಿತು? ಈಗ ಹೇಗಿದೆ?

ಯೂಪಸ್ತವಾಸೀತ್ಸುಮಹಾನ್ಯಜತಃ ಸರ್ವಕಾಞ್ಚನಃ ।
ಯತ್ರಾದದಃ ಸಹಸ್ರಾಣಿ ಅಯುತಾನಾಂ ಗವಾಂ ದಶ ।
ಅನನ್ತರಂ ಸಹಸ್ರೇಣ ತದಾಸೀದ್ದೈತ್ಯ ಕಾ ಮತಿಃ ॥೨೩॥

ನೀನು ಯಜ್ಞಮಾಡುತ್ತಿದ್ದ ಸಮಯದಲ್ಲಿ ಚಿನ್ನದಿಂದಲೇ ಮಾಡಲ್ಪಟ್ಟಿದ್ದ ಯೂಪಸ್ತಂಭವಿದ್ದಿತು. ಆ ಸಮಯದಲ್ಲಿ ನೀನು ಹತ್ತು-ಹತ್ತು ಕೋಟಿ ಹಸುಗಳನ್ನು ಸಾವಿರ ಬಾರಿ ದಾನಮಾಡಿದೆ. ಆ ಸಮಯದಲ್ಲಿ ನಿನಗೆ ಯಾವ ವಿಧವಾದ ಬುದ್ಧಿಯಿದ್ದಿತು?

ಯದಾ ಚ ಪೃಥಿವೀಂ ಸರ್ವಾಂ ಯಜಮಾನೋಽನುಪರ್ಯಗಾಃ ।
ಶಮ್ಯಾಕ್ಷೇಪೇಣ ವಿಧಿನಾ ತದಾಸೀತ್ಕಿಂ ತು ತೇ ಹೃದಿ ॥೨೪॥

ಹಿಂದೆ ನೀನು * ಶಮ್ಯಾಕ್ಷೇಪವಿಧಿಯಿಂದ ಯಜ್ಞಮಾಡಲು ಸಂಕಲ್ಪಿಸಿ ಯಜ್ಞದ ಯಜಮಾನನಾಗಿ ಅಖಂಡಭೂಮಂಡಲವನ್ನೂ ಸಂಚರಿಸಿದೆ. ಆ ಸಮಯದಲ್ಲಿ ನಿನ್ನ ಮನಸ್ಸಿನಲ್ಲಿ ಎಂತಹ ಉತ್ಸಾಹವಿದ್ದಿತು?

ನ ತೇ ಪಶ್ಯಾಮಿ ಭೃಙ್ಗಾರಂ ನ ಛತ್ರಂ ವ್ಯಜನೇ ನ ಚ ।
ಬ್ರಹ್ಮದತ್ತಾಂ ಚ ತೇ ಮಾಲಾಂ ನ ಪಶ್ಯಾಮ್ಯಸುರಾಧಿಪ ॥೨೫॥

ಅಸುರಾಧಿಪನೇ! ನಾನು ಈಗ ನಿನ್ನ ಬಳಿಯಲ್ಲಿ ಮೂಗಿರುವ ಚಿನ್ನದ ಗಿಂಡಿಯನ್ನು (ಪಟ್ಟಾಭಿಷೇಕದ ಸಮಯದಲ್ಲಿ ಉಪಯೋಗಿಸಲ್ಪಡುವ

---

* ಶಮ್ಯಾಕ್ಷೇಪವಿಧಿಃ.: ಶಮ್ಯಾ ಎಂಬುದು ನೊಗದ ಗೂಟದಂತಹ ಒಂದು ಕೋಲು. ಒಬ್ಬ ಬಲಿಷ್ಠನಾದ ಪುರುಷನು ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ನಿಂತು ಕೋಲನ್ನು ವೇಗವಾಗಿ ಎಸೆಯುತ್ತಾನೆ. ಅದು ಎಲ್ಲಿ ಬೀಳುವುದೋ ಆ ಅಂತರದಲ್ಲಿ ಯಜ್ಞ ಮಾಡಬೇಕು. ಹೀಗೆ ಭೂಮಂಡಲವನ್ನು ಸಂಚರಿಸಬೇಕು. ಆ ಅಳತೆಗೆ ಸರಿಯಾದ ಅಂತರದಲ್ಲಿ ಯಜ್ಞಮಾಡುತ್ತಾ ಹೋಗುವುದಕ್ಕೆ ಶಮ್ಯಾಕ್ಷೇಪವಿಧಿ–ಎಂದು ಹೆಸರು.

ಬಂಗಾರದ ಕಲಶವನ್ನು) ಕಾಣುತ್ತಿಲ್ಲ. ಛತ್ರವನ್ನಾಗಲೀ ಬೀಸಣಿಗೆಗಳನ್ನಾಗಲೀ ಕಾಣುತ್ತಿಲ್ಲ. ಬ್ರಹ್ಮನಿಂದ ಕೊಡಲ್ಪಟ್ಟಿದ್ದ ಮಾಲೆಯನ್ನೂ ನಾನೀಗ ನಿನ್ನ ಕತ್ತಿನಲ್ಲಿ ಕಾಣುತ್ತಿಲ್ಲ."

ಬಲಿಯು ಹೇಳುತ್ತಾನೆ :

ನ ತ್ವಂ ಪಶ್ಯಸಿ ಭೃಙ್ಗಾರಂ ನ ಛತ್ರಂ ವ್ಯಜನೇ ನ ಚ ।
ಬ್ರಹ್ಮದತ್ತಾಂ ಚ ಮೇ ಮಾಲಾಂ ನ ತ್ವಂ ದ್ರಕ್ಷ್ಯಸಿ ವಾಸವ ॥೨೬॥

"ವಾಸವ! ನೀನು ಈಗ ನನ್ನ ಬಳಿ ಹಿಂದೆ ಇರುತ್ತಿದ್ದ ಚಿನ್ನದ ಗಿಂಡಿಯನ್ನಾಗಲೀ, ಛತ್ರವನ್ನಾಗಲೀ, ಸೇವಕಿಯರು ಬೀಸುತ್ತಿದ್ದ ಬೀಸಣಿಗೆ ಚಾಮರಗಳನ್ನಾಗಲೀ, ಬ್ರಹ್ಮನಿಂದ ಕೊಡಲ್ಪಟ್ಟಿದ್ದ ನನ್ನ ಮಾಲೆಯನ್ನಾಗಲೀ ನೋಡುತ್ತಿಲ್ಲ.

ಗುಹಾಯಾಂ ನಿಹಿತಾನಿ ತ್ವಂ ಮಮ ರತ್ನಾನಿ ಪೃಚ್ಛಸಿ ।
ಯದಾ ಮೇ ಭವಿತಾ ಕಾಲಸ್ತದಾ ತ್ವಂ ತಾನಿ ದ್ರಕ್ಷ್ಯಸಿ ॥೨೭॥

ನೀನು ನನ್ನ ಯಾವ ರತ್ನಗಳ ವಿಷಯವಾಗಿ ನನ್ನನ್ನು ಪ್ರಶ್ನಿಸುತ್ತಿರುವೆಯೋ–ಆ ರತ್ನಗಳೆಲ್ಲವೂ ಗುಹೆಯಲ್ಲಿ ಭದ್ರವಾಗಿವೆ. ನನಗೆ ಒಳ್ಳೆಯ ಕಾಲವು ಒದಗಿಬಂದಾಗ ಆ ಎಲ್ಲ ರತ್ನಗಳನ್ನೂ ನೀನು ಕಾಣುವೆ.

ನ ತ್ವೇದನುರೂಪಂ ತೇ ಯಶಸೋ ವಾ ಕುಲಸ್ಯ ಚ ।
ಸಮೃದ್ಧಾರ್ಥೋಽಸಮೃದ್ಧಾರ್ಥಂ ಯನ್ಮಾಂ ಕತ್ಥಿತುಮಿಚ್ಛಸಿ ॥೨೮॥

ದೇವರಾಜ! ಈ ಸಮಯದಲ್ಲಿ ನೀನು ಐಶ್ವರ್ಯದ ಸಮೃದ್ಧಿಯನ್ನು ಹೊಂದಿರುವೆ. ನಾನು ಐಶ್ವರ್ಯದ ಸಮೃದ್ಧಿಯನ್ನು ಕಳೆದುಕೊಂಡಿರುತ್ತೇನೆ. ನಾನು ಇಂತಹ ದುರವಸ್ಥೆಯಲ್ಲಿರುವಾಗ ನೀನು ನನ್ನ ಮುಂದೆ ಆತ್ಮಪ್ರಶಂಸೆಯನ್ನು ಮಾಡಿಕೊಳ್ಳಲು ಇಚ್ಛಿಸುತ್ತಿರುವೆ. ಹೀಗೆ ಮಾಡುವುದು ನಿನ್ನ ಕುಲಕ್ಕಾಗಲೀ–ಯಶಸ್ಸಿಗಾಗಲೀ ಅನುರೂಪವಾಗಿಲ್ಲ.

ನ ಹಿ ದುಃಖೇಷು ಶೋಚನ್ತೇ ನ ಪ್ರಹೃಷ್ಯನ್ತಿ ಚರ್ಧಿಷು ।
ಕೃತಪ್ರಜ್ಞಾ ಜ್ಞಾನತೃಪ್ತಾಃ ಕ್ಷಾನ್ತಾಃ ಸನ್ತೋ ಮನೀಷಿಣಃ ॥೨೯॥

ಶುದ್ಧವಾದ ಬುದ್ಧಿಯುಳ್ಳವರೂ, ಜ್ಞಾನತೃಪ್ತರೂ, ಕ್ಷಮಾಶೀಲರೂ,

ಸತ್ಪುರುಷರೂ–ಕಷ್ಟಬಂದ ಸಮಯದಲ್ಲಿ ದುಃಖಪಡುವುದಿಲ್ಲ. ಸಮೃದ್ಧಿಯು ಪ್ರಾಪ್ತವಾದಾಗ ಸಂತೋಷಿಸುವುದೂ ಇಲ್ಲ.

ತ್ವಂ ತು ಪ್ರಾಕೃತಯಾ ಬುದ್ಧ್ಯಾ ಪುರಂದರ ವಿಕತ್ಥಸೇ ।
ಯದಾಹಮಿವ ಭಾವೀ ಸ್ಯಾಸ್ತದಾ ನೈವಂ ವದಿಷ್ಯಸಿ ॥೩೦॥

ಪುರಂದರನೇ! ನೀನಾದರೋ ಅಶುದ್ಧವಾದ ಬುದ್ಧಿಯನ್ನು ಹೊಂದಿರುವುದರಿಂದ ಐಶ್ವರ್ಯಗಳಿಂದ ವಿಹೀನನಾಗಿರುವ ನನ್ನ ಮುಂದೆ ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುತ್ತಿರುವೆ. ನನ್ನಂತೆಯೇ ನಿನ್ನ ಸ್ಥಿತಿಯೂ ಆದಾಗ ನೀನು ಇಂತಹ ಮಾತುಗಳನ್ನು ಎಂದಿಗೂ ಆಡುವುದಿಲ್ಲ.”

೨೨೩ನೆಯ ಅಧ್ಯಾಯವು ಮುಗಿಯಿತು.

೨೨೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಇಂದ್ರ–ಬಲಿಗಳ ಸಂವಾದ : ಬಲಿಯು ಕಾಲದ ಮಹಿಮೆಯನ್ನು ಪ್ರತಿಪಾದಿಸುತ್ತಾ ಇಂದ್ರನನ್ನು ತೆಗಳಿದುದು

ಪಾರಿಕ್ಷಿತ! ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಹೀಗೆ ಹೇಳಿ ಹಾವಿನಂತೆ ದೀರ್ಘವಾಗಿ ನಿಟ್ಟುಸಿರು ಬಿಡುತ್ತಿದ್ದ ಬಲಿಯನ್ನು ನೋಡಿ ಇಂದ್ರನು ಗಹಗಹಿಸಿ ನಗುತ್ತಾ, ತನ್ನ ಉತ್ಕರ್ಷವನ್ನು ಮತ್ತಷ್ಟು ತೋರಿಸಿಕೊಳ್ಳಲು ಪುನಃ ಬಲಿಯೊಡನೆ ಹೇಳಿದನು :

ಯತ್ತದ್ಯಾನಸಹಸ್ರೇಣ ಜ್ಞಾತಿಭಿಃ ಪರಿವಾರಿತಃ ।
ಲೋಕಾನ್ಪ್ರತಾಪಯನ್ಸರ್ವಾನ್ಯಾಸ್ಯಸ್ಮಾನವಿತರ್ಕಯನ್ ॥೨॥

ದೃಷ್ಟ್ವಾ ಸುಕೃಪಣಾಂ ಚೇಮಾಮವಸ್ಥಾಮಾತ್ಮನೋ ಬಲೇ ।
ಜ್ಞಾತಿಮಿತ್ರಪರಿತ್ಯಕ್ತಃ ಶೋಚಸ್ಯಾಹೋ ನ ಶೋಚಸಿ ॥೩॥

“ಬಲಿಯೇ! ನೀನು ಈ ಹಿಂದೆ ಸಾವಿರಾರು ವಾಹನಗಳಿಂದಲೂ ಮತ್ತು ವಾಹನಸ್ಥರಾದ ಬಂಧುಗಳಿಂದಲೂ ಪರಿವೃತನಾಗಿ ಎಲ್ಲ ಲೋಕಗಳಲ್ಲಿಯೂ ಪ್ರಭಾವವನ್ನು ಬೀರುತ್ತಿದ್ದೆ. ದೇವತೆಗಳಾದ ನಮ್ಮ ವಿಷಯ

ದಲ್ಲಿ ನಿನಗೆ ಗಣನೆಯೇ ಇರಲಿಲ್ಲ. ಜ್ಞಾತಿಗಳಿಂದಲೂ ಮಿತ್ರರಿಂದಲೂ ಪರಿತ್ಯಕ್ತನಾಗಿರುವ ನೀನು ನಿನ್ನ ಇಂದಿನ ಇಂತಹ ಅತ್ಯಂತದೈನ್ಯಾವಸ್ಥೆಯನ್ನು ನೋಡಿ ಶೋಕಪಡುತ್ತಿರುವೆಯೋ ಅಥವಾ ಇಲ್ಲವೋ?

ಪ್ರೀತಿಂ ಪ್ರಾಪ್ಯಾತುಲಾಂ ಪೂರ್ವಂ ಲೋಕಾಂಶ್ಚಾತ್ಮವಶೇ ಸ್ಥಿತಾನ್ ।
ವಿನಿಪಾತಮಿಮಂ ಬಾಹ್ಯಂ ಶೋಚಸ್ಯಾಹೋ ನ ಶೋಚಸಿ ॥೪॥

ಹಿಂದೆ ನೀನು ಅಪಾರವಾದ ಸಂತೋಷವನ್ನು ಪಡೆದು ಎಲ್ಲ ಲೋಕಗಳನ್ನೂ ವಶಪಡಿಸಿಕೊಂಡಿದ್ದೆ. ಆದರೆ ಈಗ ಬಾಹ್ಯಜಗತ್ತಿನಲ್ಲಿ ನಿನ್ನ ಅಧಃಪತನವಾಗಿಹೋಗಿದೆ. ಇದರಿಂದ ನೀನು ಶೋಕಪಡುತ್ತಿರುವೆಯೋ ಅಥವಾ ಇಲ್ಲವೋ?"

ಬಲಿಯು ಹೇಳುತ್ತಾನೆ :

ಅನಿತ್ಯಮುಪಲಕ್ಷ್ಯೇಹ ಕಾಲಪರ್ಯಾಯಧರ್ಮತಃ ।
ತಸ್ಮಾಚ್ಛಕ್ರ ನ ಶೋಚಾಮಿ ಸರ್ವಂ ಹ್ಯೇವೇದಮನ್ತವತ್ ॥೫॥

"ಇಂದ್ರ! ಕಾಲಚಕ್ರವು ಸ್ವಾಭಾವಿಕವಾಗಿಯೇ ಪರಿವರ್ತನಶೀಲ ವಾಗಿದೆ. (ಯಾವಾಗಲೂ ತಿರುಗುತ್ತಲೇ ಇರುತ್ತದೆ.) ಲೋಕದಲ್ಲಿರುವ ಎಲ್ಲ ವಸ್ತುಗಳೂ ಅಂತವುಳ್ಳವುಗಳೇ ಆಗಿವೆ. ಪ್ರಪಂಚದ ಈ ಅನಿತ್ಯತೆಯನ್ನು ಗಮನಿಸಿ ಈಗಿನ ನನ್ನ ಈ ದುಃಸ್ಥಿತಿಗಾಗಿ ನಾನು ಶೋಕಪಡುತ್ತಿಲ್ಲ.

ಅನ್ತವನ್ತ ಇಮೇ ದೇಹಾ ಭೂತಾನಾಂ ಚ ಸುರಾಧಿಪ ।
ತೇನ ಶಕ್ರ ನ ಶೋಚಾಮಿ ನಾಪರಾಧಾದಿದಂ ಮಮ ॥೬॥

ದೇವೇಶ್ವರ! ಎಲ್ಲ ಪ್ರಾಣಿಗಳ ಶರೀರಗಳಿಗೂ ಒಂದಲ್ಲ ಒಂದು ದಿನ ನಾಶವು ಒದಗಿಯೇ ಒದಗುತ್ತದೆ. ಇದಲ್ಲದೇ ನನಗೆ ಈ ದೇಹವು ಬಂದಿರುವುದೂ ನನ್ನ ಅಪರಾಧದಿಂದಲ್ಲ. (ಕಾಲನಿಯಮದಂತೆ ಅದು ಒದಗಿಬಂದಿದೆ. ಆ ನಿಯಮವನ್ನು ನಾನು ಗೌರವಿಸುತ್ತಿದ್ದೇನೆ. ಆದುದರಿಂದ ನಾನು ಶೋಕಿಸುತ್ತಿಲ್ಲ.)

ಜೀವಿತಂ ಚ ಶರೀರಂ ಚ ಜಾತ್ಯೈವ ಸಹ ಜಾಯತೇ ।
ಉಭೇ ಸಹ ವಿವರ್ಧೇತೇ ಉಭೇ ಸಹ ವಿನಶ್ಯತಃ ॥೭॥

ಜೀವ ಮತ್ತು ಶರೀರಗಳು ಜೊತೆ-ಜೊತೆಯಲ್ಲಿಯೇ ಹುಟ್ಟುತ್ತವೆ. ಜೊತೆಯಲ್ಲಿಯೇ ವೃದ್ಧಿಯನ್ನು ಹೊಂದುತ್ತವೆ. ಜೊತೆಯಲ್ಲಿಯೇ ವಿನಾಶ ವನ್ನೂ ಹೊಂದುತ್ತವೆ.

ನ ಹೀದೃಶಮಹಂ ಭಾವಮವಶಃ ಪ್ರಾಪ್ಯ ಕೇವಲಮ್ ।
ಯದೇವಮಭಿಜಾನಾಮಿ ಕಾ ವ್ಯಥಾ ಮೇ ವಿಜಾನತಃ ॥೮॥

ನಾನು ಈ ಕತ್ತೆಯ ಶರೀರವನ್ನು ಧರಿಸಿದ್ದರೂ ವಿವಶನಾಗಿಲ್ಲ. ನಾನು ಯಾರೆಂಬುದನ್ನು ಚೆನ್ನಾಗಿ ತಿಳಿದಿರುತ್ತೇನೆ. ದೇಹದ ಅನಿತ್ಯತೆಯನ್ನೂ– ಆತ್ಮದ ನಿತ್ಯತ್ವವನ್ನೂ ತಿಳಿದಿರುವಾಗ ನಾನೇಕೆ ವ್ಯಥೆಪಡಲಿ?

ಭೂತಾನಾಂ ನಿಧನಂ ನಿಷ್ಠಾ ಸ್ರೋತಸಾಮಿವ ಸಾಗರಃ ।
ನೈತತ್ಸಮ್ಯಗ್ವಿಜಾನನ್ತೋ ನರಾ ಮುಹ್ಯನ್ತಿ ವಜ್ರಧೃಕ್ ॥೯॥

ವಜ್ರಪಾಣಿಯೇ! ನದಿಗಳಿಗೆಲ್ಲ ಸಮುದ್ರವು ಕಟ್ಟಕಡೆಯ ಆಶ್ರಯ ವಾಗಿರುವಂತೆ–ಎಲ್ಲ ಪ್ರಾಣಿಗಳಿಗೂ ಮೃತ್ಯುವು ಕಡೆಯ ಆಶ್ರಯವಾಗಿದೆ. ಇದನ್ನು ಚೆನ್ನಾಗಿ ಅರಿತ ಮನುಷ್ಯರು ಮೋಹಗೊಳ್ಳುವುದಿಲ್ಲ.

ಯೇ ತ್ವೇವಂ ನಾಭಿಜಾನನ್ತಿ ರಜೋಮೋಹಪರಾಯಣಾಃ ।
ತೇ ಕೃಚ್ಛ್ರಂ ಪ್ರಾಪ್ಯ ಸೀದನ್ತಿ ಬುದ್ಧಿರ್ಯೇಷಾಂ ಪ್ರಣಶ್ಯತಿ ॥೧೦॥

ಯಾರು ಇದನ್ನು ಅರಿಯದೇ ರಜೋಗುಣ ಮತ್ತು ತಮೋಗುಣಗಳಿಗೆ ಅಧೀನರಾಗುವರೋ – ಅವರು ಕಷ್ಟಬಂದಾಗ ಬುದ್ಧಿಗೆಟ್ಟವರಾಗಿ ನಾಶಹೊಂದುತ್ತಾರೆ.

ಬುದ್ಧಿಲಾಭಾತ್ತು ಪುರುಷಃ ಸರ್ವಂ ತುದತಿ ಕಿಲ್ಬಿಷಮ್ ।
ವಿಪಾಪ್ಮಾ ಲಭತೇ ಸತ್ತ್ವಂ ಸತ್ತ್ವಸ್ಥಃ ಸಮ್ಪ್ರಸೀದತಿ ॥೧೧॥

ಬುದ್ಧಿಯ ಲಾಭವನ್ನು ಹೊಂದಿದ ಪುರುಷನಾದರೋ ಎಲ್ಲ ಪಾಪ ಗಳನ್ನೂ ಸತ್ಕರ್ಮಗಳ ಮೂಲಕವಾಗಿ ಕಳೆದುಕೊಳ್ಳುತ್ತಾನೆ. ಪಾಪಹೀನನಾಗಿ ಸತ್ತ್ವಗುಣಸಂಪನ್ನನಾಗುತ್ತಾನೆ. ಹಾಗೆ ಸತ್ತ್ವದಲ್ಲಿ ನೆಲೆಗೊಂಡವನು ಪ್ರಸನ್ನತೆಯನ್ನು ಪಡೆಯುತ್ತಾನೆ.

ತತಸ್ತು ಯೇ ನಿವರ್ತನ್ತೇ ಜಾಯನ್ತೇ ವಾ ಪುನಃ ಪುನಃ ।
ಕೃಪಣಾಃ ಪರಿತಪ್ಯನ್ತೇ ತೈರರ್ಥೈರಭಿಚೋದಿತಾಃ ॥೧೨॥

ಆ ಸತ್ತ್ವಗುಣದಿಂದ ಜಾರಿದ ಬಡಜೀವಿಗಳು ಮತ್ತೆ ಮತ್ತೆ ಜನ್ಮ ತಾಳುತ್ತಾ ಆ ರಜೋಮೋಹವಿಷಯಗಳ ಪ್ರೇರಣೆಗೆ ಒಳಪಟ್ಟು ಬಹಳವಾಗಿ ಪರಿತಪಿಸುತ್ತಾರೆ.

ಅರ್ಥಸಿದ್ಧಿಮನರ್ಥಂ ಚ ಜೀವಿತಂ ಮರಣಂ ತಥಾ ।
ಸುಖದುಃಖಫಲೇ ಚೈವ ನ ದ್ವೇಷ್ಮಿ ನ ಚ ಕಾಮಯೇ ॥೧೩॥

ಇಷ್ಟಾರ್ಥವು ಸಿದ್ಧಿಸಲಿ ಅಥವಾ ಅನರ್ಥವು ಒದಗಲಿ ; ಜೀವನವು ದೊರೆಯಲಿ ಅಥವಾ ಸಾವು ಒದಗಲಿ ; ಸುಖರೂಪವಾದ ಫಲವು ಬರಲಿ ಅಥವಾ ದುಃಖರೂಪವಾದ ಫಲವು ಬರಲಿ–ಹೇಗೂ ನಾನು ಅವುಗಳನ್ನು ಬೇಕೆಂದು ಬಯಸುವುದೂ ಇಲ್ಲ ; ಬೇಡವೆಂದು ದ್ವೇಷಿಸುವುದೂ ಇಲ್ಲ.

ಹತಂ ಹನ್ತಿ ಹತೋ ಹ್ಯೇವ ಯೋ ನರೋ ಹನ್ತಿ ಕಞ್ಚನ ।
ಉಭೌ ತೌ ನ ವಿಜಾನೀತೋ ಯಶ್ಚ ಹನ್ತಿ ಹತಶ್ಚ ಯಃ ॥೧೪॥

ಯಾವನಾದರೂ ಒಬ್ಬನು ಮತ್ತೊಬ್ಬನನ್ನು ಕೊಂದರೆ ಅವನು ಕೊಂದಿರುವುದು ಹಿಂದೆ (ಕಾಲನಿಂದ) ಕೊಲ್ಲಲ್ಪಟ್ಟಿರುವವನನ್ನೇ. ಹಾಗೆ ಕೊಂದ ಅವನು ತಾನೂ ಕೊಲೆಗೀಡಾದವನೇ (ಕಾಲವಶನಾದವನೇ). ಆದರೆ ಹಾಗೆ ಕೊಂದವನಾಗಲೀ, ಕೊಲೆಗೀಡಾದವನಾಗಲೀ–ಇಬ್ಬರಲ್ಲಿ ಯಾರೂ ನಿಜವಾದ ಕರ್ತೃವು ಯಾರೆಂಬುದನ್ನು (ಕಾಲನೆಂಬುದನ್ನು) ಅರಿತಿಲ್ಲ.

ಹತ್ವಾ ಜಿತ್ವಾ ಚ ಮಘವನ್ಯಃ ಕಶ್ಚಿತ್ಪುರುಷಾಯತೇ ।
ಅಕರ್ತಾ ಹ್ಯೇವ ಭವತಿ ಕರ್ತಾ ಹ್ಯೇವ ಕರೋತಿ ತತ್ ॥೧೫॥

ಯಾವನು ಒಬ್ಬನನ್ನು ಕೊಂದು ಅಥವಾ ಜಯಿಸಿ ಆ ಕಾರ್ಯವನ್ನು ತಾನೇ ಮಾಡಿದೆನೆಂದು ಅಹಂಕಾರಪಡುತ್ತಾನೆಯೋ–ಅವನು ವಾಸ್ತವವಾಗಿ ಕರ್ತೃವೇ ಅಲ್ಲ. ಕರ್ತೃವಾದ ಕಾಲವೇ ಅದನ್ನೆಲ್ಲಾ ಮಾಡಿದೆ.

ಕೋ ಹಿ ಲೋಕಸ್ಯ ಕುರುತೇ ವಿನಾಶಪ್ರಭವಾವುಭೌ ।
ಕೃತಂ ಹಿ ತತ್ಕೃತೇನೈವ ಕರ್ತಾ ತಸ್ಯಾಪಿ ಚಾಪರಃ ॥೧೬॥

ಜಗತ್ತಿನ ಸಂಹಾರ ಮತ್ತು ಸೃಷ್ಟಿ–ಇವೆರಡನ್ನೂ ಯಾರು ತಾನೇ ಮಾಡುತ್ತಾರೆ? ಸೃಷ್ಟಿ-ಸಂಹಾರಗಳನ್ನು ತಾನು ಮಾಡಿದವನೆಂದು ತಿಳಿಯು

ವುದು ಸರಿಯಲ್ಲ. ನಿಜವಾಗಿಯೂ ಅವುಗಳ ಕರ್ತೃವು ಅವನಲ್ಲ. ಅವನಿಗೂ ಕರ್ತೃವು ಬೇರೊಬ್ಬನಿದ್ದಾನೆ.

ಪೃಥಿವೀ ಜ್ಯೋತಿರಾಕಾಶಮಾಪೋ ವಾಯುಶ್ಚ ಪಞ್ಚಮಃ ।
ಏತದ್ಯೋನೀನಿ ಭೂತಾನಿ ತತ್ರ ಕಾ ಪರಿದೇವನಾ ॥೧೭॥

ಪೃಥಿವೀ, ಜಲ, ಅಗ್ನಿ, ವಾಯು ಮತ್ತು ಐದನೆಯದಾಗಿ ಆಕಾಶ–ಇವೇ ಎಲ್ಲ ಪ್ರಾಣಿಗಳ ಶರೀರಗಳಿಗೂ ಕಾರಣಭೂತಗಳಾಗಿವೆ. (ಕತ್ತೆಯ ಶರೀರಕ್ಕೂ– ಮನುಷ್ಯನ ಶರೀರಕ್ಕೂ ಈ ಪಂಚಭೂತಗಳೇ ಕಾರಣಗಳಾಗಿವೆ.) ಹೀಗಿರುವಾಗ ನಾನು ಕತ್ತೆಯ ಶರೀರದಲ್ಲಿರುವುದಕ್ಕಾಗಿ ಶೋಕಿಸುವ ಕಾರಣವೇನಿದೆ?

ಮಹಾವಿದ್ಯೋऽಲ್ಪವಿದ್ಯಶ್ಚ ಬಲವಾನ್ದುರ್ಬಲಶ್ಚ ಯಃ ।
ದರ್ಶನೀಯೋ ವಿರೂಪಶ್ಚ ಸುಭಗೋ ದುರ್ಭಗಶ್ಚ ಯಃ ॥೧೮॥

ಸರ್ವಂ ಕಾಲಃ ಸಮಾದತ್ತೇ ಗಮ್ಭೀರಃ ಸ್ವೇನ ತೇಜಸಾ ।
ತಸ್ಮಿನ್ಕಾಲವಶಂ ಪ್ರಾಪ್ತೇ ಕಾ ವ್ಯಥಾ ಮೇ ವಿಜಾನತಃ ॥೧೯॥

ಮಹಾವಿದ್ಯಾಸಂಪನ್ನನಾದ ವಿದ್ವಾಂಸನಾಗಲೀ–ಅಲ್ಪವಿದ್ಯೆಯಿರುವವನಾಗಲೀ–ಬಲಿಷ್ಠನಾಗಲೀ–ದುರ್ಬಲನಾಗಲೀ–ಸುಂದರಪುರುಷನಾಗಲೀ – ಕುರೂಪಿಯಾಗಲೀ – ಸೌಭಾಗ್ಯಶಾಲಿಯಾಗಲೀ – ದುರ್ಭಾಗ್ಯನಾಗಲೀ – ಎಲ್ಲರನ್ನೂ ಆಳದಲ್ಲಿ ಅಡಗಿರುವ ಕಾಲನು ತನ್ನ ತೇಜಸ್ಸಿನಿಂದ ತನ್ನ ಕಡೆಗೇ ಸೆಳೆದುಕೊಂಡುಬಿಡುತ್ತಾನೆ. ಹೀಗೆ ಎಲ್ಲವೂ ಕಾಲವಶವಾಗಿರುವಾಗ ಇದನ್ನು ಚೆನ್ನಾಗಿ ಅರಿತಿರುವ ನನಗೆ ವ್ಯಥೆಯೆಲ್ಲಿಯದು?

ದಗ್ಧಮೇವಾನುದಹತಿ ಹತಮೇವಾನುಹನ್ಯತೇ ।
ನಶ್ಯತೇ ನಷ್ಟಮೇವಾಗ್ರೇ ಲಬ್ಧವ್ಯಂ ಲಭತೇ ನರಃ ॥೨೦॥

ಕಾಲವು ಯಾರನ್ನು ಮುಂದಾಗಿಯೇ ದಹಿಸಿಬಿಟ್ಟಿರುವುದೋ–ಅವನನ್ನು ಜನರು ಅನಂತರ ದಹಿಸುತ್ತಾರೆ. ಕಾಲವು ಯಾರನ್ನು ಕೊಂದುಬಿಟ್ಟಿರುವುದೋ– ಅವನನ್ನೇ ಜನರು ಅನಂತರ ಕೊಲ್ಲುತ್ತಾರೆ. ಕಾಲದಿಂದ ಮೊದಲೇ ಯಾವುದು ನಷ್ಟವಾಗಿ ಹೋಗಿರುವುದೋ–ಅದನ್ನೇ ಜನರು ಪುನಃ ನಷ್ಟಪಡಿಸುತ್ತಾರೆ. ಯಾವುದು ಮನುಷ್ಯನಿಗೆ ಲಭಿಸಬೇಕೆಂಬುದು ಮೊದಲೇ

ನಿಶ್ಚಿತವಾಗಿರುವುದೋ – ಅದನ್ನೇ ಮನುಷ್ಯನು ಪಡೆದುಕೊಳ್ಳುತ್ತಾನೆ. ಎಲ್ಲವೂ ಕಾಲದ ನಿಯಮಾನುಸಾರವಾಗಿ ನಡೆಯುತ್ತಿರುವುದೇ ಹೊರತು ಮನುಷ್ಯನ ಕರ್ತೃತ್ವವು ಯಾವುದರಲ್ಲಿಯೂ ಇರುವುದಿಲ್ಲ.

ನಾಸ್ಯ ದ್ವೀಪಃ ಕುತಃ ಪಾರೋ ನಾವಾರಃ ಸಮ್ಪ್ರದೃಶ್ಯತೇ ।
ನಾನ್ತಮಸ್ಯ ಪ್ರಪಶ್ಯಾಮಿ ವಿಧೇರ್ದಿವ್ಯಸ್ಯ ಚಿನ್ತಯನ್ ॥೨೧॥

ನಾನು ಎಷ್ಟೇ ಯೋಚಿಸಿದರೂ ನನಗೆ ಕಾಲದ ಕೊನೆಯು ಕಾಣುತ್ತಿಲ್ಲ. ಈ ಕಾಲಸಮುದ್ರದ ನಡುವೆ ಯಾವ ದ್ವೀಪವೂ ಕಂಡುಬರುತ್ತಿಲ್ಲ. ಇನ್ನು ದಡವೆಲ್ಲಿ ಸಿಕ್ಕೀತು? ಈಚೆಯ ದಡವೂ ಕೂಡ ಕಾಣಿಸುತ್ತಿಲ್ಲ.

ಯದಿ ಮೇ ಪಶ್ಯತಃ ಕಾಲೋ ಭೂತಾನಿ ನ ವಿನಾಶಯೇತ್ ।
ಸ್ಯಾನ್ಮೇ ಹರ್ಷಶ್ಚ ದರ್ಪಶ್ಚ ಕ್ರೋಧಶ್ಚೈವ ಶಚೀಪತೇ ॥೨೨॥

ಶಚೀಪತಿಯೇ! ಕಾಲನು ನಾನು ನೋಡುತ್ತಿರುವಾಗಲೇ ಪ್ರಾಣಿಗಳನ್ನು ವಿನಾಶಗೊಳಿಸದೇ ಇದ್ದಿದ್ದರೆ–ಆಗ ನನಗೆ ಹರ್ಷವುಂಟಾಗುತ್ತಿದ್ದಿತು. ನನ್ನ ಶಕ್ತಿಯ ಸಂಬಂಧವಾಗಿ ದರ್ಪವೂ ಉಂಟಾಗುತ್ತಿದ್ದಿತು. ಕ್ರೂರಿಯಾದ ಕಾಲನ ಮೇಲೆ ನನಗೆ ಕೋಪವೂ ಉಂಟಾಗುತ್ತಿದ್ದಿತು.

ತುಷಭಕ್ಷಂ ತು ಮಾಂ ಜ್ಞಾತ್ವಾ ಪ್ರವಿವಿಕ್ತಜನೇ ಗೃಹೇ ।
ಬಿಭ್ರತಂ ಗಾರ್ದಭಂ ರೂಪಮಾಗತ್ಯ ಪರಿಗರ್ಹಸೇ ॥೨೩॥

ಹೀಗಿರುವಾಗ ಜನಶೂನ್ಯವಾದ ಈ ಮನೆಯಲ್ಲಿ ಕತ್ತೆಯ ರೂಪವನ್ನು ಧರಿಸಿ ಧಾನ್ಯದ ಹೊಟ್ಟನ್ನು ತಿನ್ನುತ್ತಿರುವ ನನ್ನ ಬಳಿಗೆ ಬಂದು ನನ್ನನ್ನು ಹೀಗೆ ನಿಂದಿಸುತ್ತಿರುವೆಯಲ್ಲಾ?

ಇಚ್ಛನ್ನಹಂ ವಿಕುರ್ಯಾಂ ಹಿ ರೂಪಾಣಿ ಬಹುಧಾತ್ಮನಃ ।
ವಿಭೀಷಣಾನಿ ಯಾನ್ವೀಕ್ಷ್ಯ ಪಲಾಯೇಥಾಸ್ತ್ವಮೇವ ಮೇ ॥೨೪॥

ನಾನೇನಾದರೂ ಇಚ್ಛಿಸಿದ್ದೇ ಆದರೆ–ಅನೇಕಪ್ರಕಾರವಾದ ರೂಪಗಳನ್ನೂ ಧರಿಸಬಲ್ಲೆನು. ನೀನು ಯಾವ ರೂಪಗಳನ್ನು ನೋಡಿ ಪಲಾಯನ ಮಾಡುವೆಯೋ–ಅಂತಹ ಮಹಾಭಯಂಕರವಾದ ರೂಪಗಳನ್ನೂ ಧರಿಸಬಲ್ಲೆನು.

ಕಾಲಃ ಸರ್ವಂ ಸಮಾದತ್ತೇ ಕಾಲಃ ಸರ್ವಂ ಪ್ರಯಚ್ಛತಿ ।
ಕಾಲೇನ ವಿಹಿತಂ ಸರ್ವಂ ಮಾ ಕೃಥಾಃ ಶಕ್ರ ಪೌರುಷಮ್ ॥೨೫॥

ಕಾಲವೇ ಎಲ್ಲವನ್ನೂ ನುಂಗಿಹಾಕುತ್ತದೆ. ಕಾಲವೇ ಎಲ್ಲವನ್ನೂ ಕೊಡುತ್ತದೆ. ಕಾಲದಿಂದಲೇ ಪ್ರಪಂಚದ ಆಗು-ಹೋಗುಗಳೆಲ್ಲವೂ ನಿರ್ಧರಿಸಲ್ಪಟ್ಟಿವೆ. ಕಾಲದಿಂದಲೇ ಎಲ್ಲವೂ ಮಾಡಲ್ಪಡುತ್ತದೆ. ಆದುದರಿಂದ ನೀನು ನಿನ್ನ ಪೌರುಷದ ವಿಷಯವಾಗಿ ಅಹಂಕಾರಪಡಬೇಡ.

ಪುರಾ ಸರ್ವಂ ಪ್ರವ್ಯಥಿತಂ ಮಯಿ ಕ್ರುದ್ಧೇ ಪುರಂದರ ।
ಅವೈಮಿ ತ್ವಸ್ಯ ಲೋಕಸ್ಯ ಧರ್ಮಂ ಶಕ್ರ ಸನಾತನಮ್ ॥೨೬॥

ಪುರಂದರನೇ! ಹಿಂದೆ ನಾನೇನಾದರೂ ಕುಪಿತನಾದೆನೆಂದರೆ ಪ್ರಪಂಚವೇ ಬಹಳವಾಗಿ ವ್ಯಥೆಪಡುತ್ತಿದ್ದಿತು. ಈ ಲೋಕದ ವೃದ್ಧಿ-ಕ್ಷಯ ಧರ್ಮವನ್ನು ನಾನು ಚೆನ್ನಾಗಿ ತಿಳಿದುಕೊಂಡಿರುತ್ತೇನೆ.

ತ್ವಮಪ್ಯೇವಮವೇಕ್ಷಸ್ವ ಮಾತ್ಮನಾ ವಿಸ್ಮಯಂ ಗಮಃ ।
ಪ್ರಭವಶ್ಚ ಪ್ರಭಾವಶ್ಚ ನಾತ್ಮಸಂಸ್ಥಃ ಕದಾಚನ ॥೨೭॥

ನೀನು ಇದನ್ನು ಹೀಗೆಯೇ ತಿಳಿದುಕೋ. ನಿನ್ನ ವಿಷಯದಲ್ಲಿ ಅಹಂಕಾರಪಟ್ಟುಕೊಳ್ಳಬೇಡ. ಉತ್ಪತ್ತಿಯಾಗಲೀ, ಪ್ರಭುತ್ವವಾಗಲೀ ಯಾವುದೂ ತನಗೆ ಅಧೀನವಲ್ಲ.

ಕೌಮಾರಮೇವ ತೇ ಚಿತ್ತಂ ತಥೈವಾದ್ಯ ಯಥಾ ಪುರಾ ।
ಸಮವೇಕ್ಷಸ್ವ ಮಘವನ್ಬುದ್ಧಿಂ ವಿನ್ದಸ್ವ ನೈಷ್ಠಿಕೀಮ್ ॥೨೮॥

ನಿನ್ನ ಬುದ್ಧಿಯು ಈಗಲೂ ಬಾಲಬುದ್ಧಿಯೇ ಆಗಿದೆ. ನಿನ್ನ ಬುದ್ಧಿಯು ಹಿಂದೆ ಹೇಗಿದ್ದಿತೋ ಈಗಲೂ ಹಾಗೆಯೇ ಇದೆ. ಸರಿಯಾಗಿ ಪರ್ಯಾಲೋಚಿಸು. ಸ್ಥಿರಬುದ್ಧಿಯನ್ನು ಹೊಂದು.

ದೇವಾ ಮನುಷ್ಯಾಃ ಪಿತರೋ ಗನ್ಧರ್ವೋರಗರಾಕ್ಷಸಾಃ ।
ಆಸನ್ಸರ್ವೇ ಮಮ ವಶೇ ತತ್ಸರ್ವಂ ವೇತ್ಥ ವಾಸವ ॥೨೯॥

ವಾಸವ! ದೇವತೆಗಳು, ಮನುಷ್ಯರು, ಪಿತೃಗಣಗಳು, ಗಂಧರ್ವರು,

ಸರ್ಪಗಳು, ರಾಕ್ಷಸರು–ಈ ಎಲ್ಲರೂ ನನ್ನ ಅಧೀನದಲ್ಲಿದ್ದರು. ಈ ವಿಷಯವನ್ನೂ ನೀನು ಚೆನ್ನಾಗಿ ತಿಳಿದಿರುವೆ.

ನಮಸ್ತಸ್ಯೈ ದಿಶೇಽಪ್ಯಸ್ತು ಯಸ್ಯಾಂ ವೈರೋಚನೋ ಬಲಿಃ ।
ಇತಿ ಮಾಮಭ್ಯಪದ್ಯನ್ತ ಬುದ್ಧಿಮಾತ್ಸರ್ಯಮೋಹಿತಾಃ ॥೩೦॥

ನನ್ನ ಶತ್ರುಗಳು ತಮ್ಮ ಬುದ್ಧಿಗತವಾದ ದ್ವೇಷದಿಂದ ವಿಮೋಹಿತರಾಗಿ–'ಯಾವ ದಿಕ್ಕಿನಲ್ಲಿ ವಿರೋಚನನ ಮಗನಾದ ಬಲಿಚಕ್ರವರ್ತಿಯಿರುವನೋ ಆ ದಿಕ್ಕಿಗೂ ನಮಸ್ಕಾರವಿರಲಿ' – ಎಂದು ಹೇಳಿಕೊಂಡು ನನ್ನ ಬಳಿಗೆ ಬರುತ್ತಿದ್ದರು.

ನಾಹಂ ತದನುಶೋಚಾಮಿ ನಾತ್ಮಭ್ರಂಶಂ ಶಚೀಪತೇ ।
ಏವಂ ಮೇ ನಿಶ್ಚಿತಾ ಬುದ್ಧಿಃ ಶಾಸ್ತಸ್ತಿಷ್ಠಾಮ್ಯಹಂ ವಶೇ ॥೩೧॥

ಶಚೀಪತಯೇ! ನಾನಿಂದು ರಾಜ್ಯಭ್ರಷ್ಟನಾಗಿರುವುದಕ್ಕಾಗಿ ಖಂಡಿತವಾಗಿಯೂ ಶೋಕಪಡುವುದಿಲ್ಲ. ನಾನು ಯಾವಾಗಲೂ ಸರ್ವರಿಗೂ ನಿಯಾಮಕನಾದ ಕಾಲನ ಅಧೀನನಾಗಿಯೇ ಇರುತ್ತೇನೆ. ಇದು ನನ್ನ ನಿಶ್ಚಿತವಾದ ಬುದ್ಧಿಯಾಗಿದೆ.

ದೃಶ್ಯತೇ ಹಿ ಕುಲೇ ಜಾತೋ ದರ್ಶನೀಯಃ ಪ್ರತಾಪವಾನ್ ।
ದುಃಖಂ ಜೀವನ್ಸಹಾಮಾತ್ಯೋ ಭವಿತವ್ಯಂ ಹಿ ತತ್ತಥಾ ॥೩೨॥

ಒಬ್ಬನು ಸತ್ಕುಲಪ್ರಸೂತನಾಗಿರುತ್ತಾನೆ. ಸುಂದರನಾಗಿರುತ್ತಾನೆ. ಪ್ರತಾಪವಂತನಾಗಿಯೂ ಇರುತ್ತಾನೆ. ಹೀಗಿದ್ದರೂ ಅವನು ತನ್ನ ಒಡನಾಡಿಗಳೊಡನೆ ದುಃಖದಿಂದಲೇ ಕಾಲಕಳೆಯುತ್ತಿರುತ್ತಾನೆ. ಅವನ ವಿಧಿಯೇ ಹಾಗಿರುತ್ತದೆ.

ದೌಷ್ಕುಲೇಯಸ್ತಥಾ ಮೂಢೋ ದುರ್ಜಾತಃ ಶಕ್ರ ದೃಶ್ಯತೇ ।
ಸುಖಂ ಜೀವನ್ಸಹಾಮಾತ್ಯೋ ಭವಿತವ್ಯಂ ಹಿ ತತ್ತಥಾ ॥೩೩॥

ಮತ್ತೊಬ್ಬನು ದುಷ್ಟವಾದ ಕುಲದಲ್ಲಿ ಹುಟ್ಟಿರುತ್ತಾನೆ. ಮೂಢನಾಗಿರುತ್ತಾನೆ. ಹೀನಜಾತಿಯವನಾಗಿರುತ್ತಾನೆ. ಅಂತಹವನು ತನ್ನ

ಒಡನಾಡಿಗಳೊಡನೆ ಸುಖಜೀವನವನ್ನೇ ನಡೆಸುತ್ತಿರುತ್ತಾನೆ. ಹಾಗೆಯೇ ನಡೆಯಬೇಕೆಂಬುದು ಕಾಲದ ಇಚ್ಛೆಯಾಗಿದೆ.

ಕಲ್ಯಾಣೀ ರೂಪಸಮ್ಪನ್ನಾ ದುರ್ಭಗಾ ಶಕ್ರ ದೃಶ್ಯತೇ ।
ಅಲಕ್ಷಣಾ ವಿರೂಪಾ ಚ ಸುಭಗಾ ದೃಶ್ಯತೇ ಪರಾ ॥೩೪॥

ಒಬ್ಬಳು ಮಂಗಳಮಯಿಯಾಗಿರುತ್ತಾಳೆ (ಶುಭಲಕ್ಷಣೆಯಾಗಿರುತ್ತಾಳೆ). ರೂಪಸಂಪನ್ನೆಯಾಗಿರುತ್ತಾಳೆ. ಅಂತಹವಳು ದೌರ್ಭಾಗ್ಯದಿಂದ ಕೂಡಿರುತ್ತಾಳೆ. ಮತ್ತೊಬ್ಬಳು ಕೆಟ್ಟ ಲಕ್ಷಣಗಳಿಂದ ಕೂಡಿರುತ್ತಾಳೆ. ಕುರೂಪಿಯಾಗಿರುತ್ತಾಳೆ. ಅಂತಹವಳು ಸೌಭಾಗ್ಯಶಾಲಿನಿಯಾಗಿರುತ್ತಾಳೆ. ಇವೆರಡನ್ನೂ ನಾವು ಪ್ರತ್ಯಕ್ಷವಾಗಿ ನೋಡುತ್ತಲೇ ಇರುತ್ತೇವೆ.

ನೈತದಸ್ಮತ್ಕೃತಂ ಶಕ್ರ ನೈತಚ್ಛಕ್ರ ತ್ವಯಾ ಕೃತಮ್ ।
ಯತ್ತ್ವಮೇವಂಗತೋ ವಜ್ರಿನ್ಯಚ್ಚಾಪ್ಯೇವಂಗತಾ ವಯಮ್ ॥೩೫॥

ವಜ್ರಧರನೇ! ನೀನಿಂದು ಸಂಪತ್ಸಮೃದ್ಧಿಯಿಂದ ಕೂಡಿರುವೆ. ನಾವಿಂದು ರಾಜ್ಯಶ್ರೀಯಿಂದ ಭ್ರಷ್ಟರಾಗಿದ್ದೇವೆ. ಹೀಗಾಗಿರುವುದು ನಾನು ಮಾಡಿದ ಅಪರಾಧದಿಂದಲೂ ಅಲ್ಲ. ನೀನು ತೋರಿದ ಪೌರುಷದಿಂದಲೂ ಅಲ್ಲ.

ನ ಕರ್ಮ ಭವಿತಾಪ್ಯೇತತ್ಕೃತಂ ಮಮ ಶತಕ್ರತೋ ।
ಋದ್ಧಿರ್ವಾಪ್ಯಥವಾ ನರ್ಧಿಃ ಪರ್ಯಾಯಕೃತಮೇವ ತತ್ ॥೩೬॥

ಶತಕ್ರತುವೇ! ನಾನು ಮಾಡಿದ ಕರ್ಮದಿಂದಾಗಿ ನನಗೆ ಈ ದುಃಸ್ಥಿತಿಯು ಪ್ರಾಪ್ತವಾಗಿಲ್ಲ. ಸಂಪತ್ಸಮೃದ್ಧಿಯು ಅಥವಾ ನಿರ್ಧನತೆಯು ಪರ್ಯಾಯವಾಗಿ ಒಂದಾದ ಮೇಲೊಂದರಂತೆ ಬರುತ್ತಿರುತ್ತವೆ. (ಸಮೃದ್ಧಿಯೂ ಶಾಶ್ವತವಾಗಿರುವುದಿಲ್ಲ ; ಅಸಮೃದ್ಧಿಯೂ ಶಾಶ್ವತವಾಗಿರುವುದಿಲ್ಲ).

ಪಶ್ಯಾಮಿ ತ್ವಾಂ ವಿರಾಜನ್ತಂ ದೇವರಾಜಮವಸ್ಥಿತಮ್ ।
ಶ್ರೀಮನ್ತಂ ದ್ಯುತಿಮನ್ತಂ ಚ ಗರ್ಜಮಾನಂ ಮಮೋಪರಿ ॥೩೭॥

ಈ ಸಮಯದಲ್ಲಿ ನೀನು ದೇವರಾಜನ ಸ್ಥಾನದಲ್ಲಿ ಪ್ರತಿಷ್ಠಿತನಾಗಿರು

ವುದನ್ನೂ, ಕಾಂತಿಯಿಂದ ವಿರಾಜಿಸುತ್ತಿರುವುದನ್ನೂ, ತೇಜಸ್ಸಿನಿಂದ ಯುಕ್ತನಾಗಿರುವುದನ್ನೂ, ನನ್ನ ಮೇಲೆ ಕುಳಿತು ಗರ್ಜಿಸುತ್ತಿರುವುದನ್ನೂ ನೋಡುತ್ತಿದ್ದೇನೆ.

ಏವಂ ನೈವ ನ ಚೇತ್ಕಾಲೋ ಮಾಮಾಕ್ರಮ್ಯ ಸ್ಥಿತೋ ಭವೇತ್ ।
ಪಾತಯೇಯಮಹಂ ತ್ವಾದ್ಯ ಸವಜ್ರಮಪಿ ಮುಷ್ಟಿನಾ ॥೩೮॥

ಕಾಲವು ನನ್ನನ್ನು ಆಕ್ರಮಿಸಿರದಿದ್ದರೆ ನಾನು ಹೀಗೆ ಆಗುತ್ತಲೇ ಇರಲಿಲ್ಲ. ನೀನು ವಜ್ರಾಯುಧವನ್ನೇ ಹಿಡಿದಿದ್ದರೂ–ನಾನೀಗಲೇ ನಿನ್ನನ್ನು ಮುಷ್ಟಿಪ್ರಹಾರದಿಂದಲೇ ಸಂಹರಿಸಿಬಿಡುತ್ತಿದ್ದೆನು.

ನ ತು ವಿಕ್ರಮಕಾಲೋಽಯಂ ಶಾನ್ತಿಕಾಲೋಽಯಮಾಗತಃ ।
ಕಾಲಃ ಸ್ಥಾಪಯತೇ ಸರ್ವಂ ಕಾಲಃ ಪಚತಿ ವೈ ತಥಾ ॥೩೯॥

ಆದರೆ ಇದು ನನಗೆ ಪರಾಕ್ರಮವನ್ನು ತೋರಿಸುವ ಕಾಲವಾಗಿಲ್ಲ. ಶಾಂತಿಯಿಂದಿರುವ ಕಾಲವಾಗಿದೆ. ಕಾಲವೇ ಎಲ್ಲರನ್ನೂ ಭಿನ್ನ-ಭಿನ್ನವಾದ ಅವಸ್ಥೆಗಳಲ್ಲಿ ಸ್ಥಾಪಿಸಿ ಕಾಪಾಡುತ್ತದೆ ಮತ್ತು ಅದೇ ಕಾಲವೇ ಪ್ರಾಣಿಗಳನ್ನು ಪಚನಮಾಡುತ್ತದೆ (ಕ್ಷೀಣಗೊಳಿಸುತ್ತದೆ).

ಮಾಂ ಚೇದಭ್ಯಾಗತಃ ಕಾಲೋ ದಾನವೇಶ್ವರಪೂಜಿತಮ್ ।
ಗರ್ಜನ್ತಂ ಪ್ರತಪನ್ತಂ ಚ ಕಮನ್ಯಂ ನಾಗಮಿಷ್ಯತಿ ॥೪೦॥

ದಾನವೇಶ್ವರರಿಂದ ಪೂಜಿಸಲ್ಪಡುತ್ತಿದ್ದ, ಗರ್ಜನೆಮಾಡುತ್ತಿದ್ದ ಮತ್ತು ಶತ್ರುಗಳನ್ನು ಪರಿತಾಪಗೊಳಿಸುತ್ತಿದ್ದ ನನ್ನನ್ನೇ ಕಾಲವು ಆಕ್ರಮಿಸಿದೆಯೆಂದ ಮೇಲೆ ಬೇರೆ ಯಾರನ್ನು ತಾನೇ ಆ ಕಾಲವು ಆಕ್ರಮಿಸದೇ ಬಿಡುವುದು?

ದ್ವಾದಶಾನಾಂ ತು ಭವತಾಮಾದಿತ್ಯಾನಾಂ ಮಹಾತ್ಮನಾಮ್ ।
ತೇಜಾಂಸ್ಯೇಕೇನ ಸರ್ವೇಷಾಂ ದೇವರಾಜ ಧೃತಾನಿ ಮೇ ॥೪೧॥

ದೇವರಾಜ! ಮಹಾತ್ಮರಾದ ನಿಮ್ಮ ಹನ್ನೆರಡು ಮಂದಿ ಆದಿತ್ಯರೆಲ್ಲರ ತೇಜಸ್ಸುಗಳನ್ನೂ ನಾನೊಬ್ಬನೇ ಏಕಾಕಿಯಾಗಿ ಧರಿಸಿದ್ದೆನು.

ಅಹಮೇವೋದ್ವಹಾಮ್ಯಾಪೋ ವಿಸೃಜಾಮಿ ಚ ವಾಸವ ।
ತಪಾಮಿ ಚೈವ ತ್ರೈಲೋಕ್ಯಂ ವಿದ್ಯೋತಾಮ್ಯಹಮೇವ ಚ ॥೪೨॥

ನಾನೇ ಆದಿತ್ಯರೂಪನಾಗಿ ಪೃಥ್ವಿಯಲ್ಲಿರುವ ನೀರನ್ನು ನನ್ನ ಕಿರಣಗಳ ಮೂಲಕವಾಗಿ ಮೇಲಕ್ಕೆತ್ತುತ್ತಿದ್ದೆನು. ಪುನಃ ನಾನೇ ಮಹಾಮೇಘರೂಪನಾಗಿ ಮಳೆಗರೆಯುತ್ತಿದ್ದೆನು. ಮೂರು ಲೋಕಗಳಿಗೂ ನಾನೇ ಶಾಖ ವನ್ನುಂಟುಮಾಡುತ್ತಿದ್ದೆನು ಮತ್ತು ಬೆಳಕನ್ನೂ ನೀಡುತ್ತಿದ್ದೆನು.

ಸಂರಕ್ಷಾಮಿ ವಿಲುಮ್ಪಾಮಿ ದದಾಮ್ಯಹಮಥಾದದೇ ।
ಸಂಯಚ್ಛಾಮಿ ನಿಯಚ್ಛಾಮಿ ಲೋಕೇಷು ಪ್ರಭುರೀಶ್ವರಃ ॥೪೩॥

ನಾನು ಪ್ರಜೆಗಳನ್ನು ಸಂರಕ್ಷಿಸುತ್ತಿದ್ದೆನು ; ದರೋಡೆಕಾರರನ್ನು ನಾಶ ಪಡಿಸಿ ಅವರ ಐಶ್ವರ್ಯವನ್ನು ಅಪಹರಿಸುತ್ತಿದ್ದೆನು ; ಸತ್ಪಾತ್ರರಲ್ಲಿ ಸದಾ ದಾನಮಾಡುತ್ತಿದ್ದೆನು : ಪ್ರಜೆಗಳಿಂದ ಕಪ್ಪ-ಕಾಣಿಕೆಗಳನ್ನು ತೆಗೆದುಕೊಳ್ಳು ತ್ತಿದ್ದೆನು. ಲೋಕದಲ್ಲಿ ಪ್ರಭುವೂ ಈಶ್ವರನೂ ಆಗಿ ಎಲ್ಲ ಲೋಕಗಳನ್ನೂ ಶಾಸನಮಾಡುತ್ತಿದ್ದೆನು. ಪ್ರಜೆಗಳನ್ನು ಅವರವರ ವರ್ಣಾಶ್ರಮಧರ್ಮಗಳನ್ನು ಅನುಸರಿಸುವಂತೆ ನಿಯಂತ್ರಿಸುತ್ತಿದ್ದೆನು.

ತದದ್ಯ ವಿನಿವೃತ್ತಂ ಮೇ ಪ್ರಭುತ್ವಮಮರಾಧಿಪ ।
ಕಾಲಸೈನ್ಯಾವಗಾಢಸ್ಯ ಸರ್ವಂ ನ ಪ್ರತಿಭಾತಿ ಮೇ ॥೪೪॥

ಅಮರೇಶ್ವರ! ಈಗ ನನ್ನ ಆ ಪ್ರಭುತ್ವವು ಮುಗಿದುಹೋಗಿದೆ. ಕಾಲನ ಸೈನಿಕರಿಂದ ನಾನು ಆಕ್ರಮಿಸಲ್ಪಟ್ಟಿದ್ದೇನೆ. ಆದುದರಿಂದ ಈಗ ನನ್ನ ಸಕಲೈಶ್ವರ್ಯಗಳೂ ತೇಜೋಹೀನವಾಗಿಬಿಟ್ಟಿವೆ.

ನಾಹಂ ಕರ್ತಾ ನ ಚೈವ ತ್ವಂ ನಾನ್ಯಃ ಕರ್ತಾ ಶಚೀಪತೇ ।
ಪರ್ಯಾಯೇಣ ಹಿ ಭುಜ್ಯನ್ತೇ ಲೋಕಾಃ ಶಕ್ರ ಯದೃಚ್ಛಯಾ ॥೪೫॥

ಶಚೀಪತಿಯೇ! ಈಗಿನ ನನ್ನ ಸ್ಥಿತಿಗೆ ಅಥವಾ ನಿನ್ನ ಸ್ಥಿತಿಗೆ ನಾನೂ ಕಾರಣನಲ್ಲ ; ನೀನೂ ಕಾರಣನಲ್ಲ ; ಇತರರೂ ಕಾರಣರಲ್ಲ. ಕಾಲನ ಇಚ್ಛೆಯಂತೆಯೇ ಲೋಕಗಳು ಪರ್ಯಾಯವಾಗಿ ರಾಜರಿಂದ ಅನುಭವಿ ಸಲ್ಪಡುತ್ತವೆ.

ಮಾಸಮಾಸಾರ್ಧವೇಶ್ಮಾನಮಹೋರಾತ್ರಾಭಿಸಂವೃತಮ್ ।
ಋತುದ್ವಾರಂ ವರ್ಷಮುಖಮಾಯುರ್ವೇದವಿದೋ ಜನಾಃ ॥೪೬॥

ವೇದವಿದರಾದ ವಿದ್ವಾಂಸರು–ಮಾಸ ಮತ್ತು ಪಕ್ಷಗಳನ್ನು ಕಾಲ ಪುರುಷನ ಶರೀರವೆಂದು ಹೇಳುತ್ತಾರೆ. ದಿನ-ರಾತ್ರಿಗಳನ್ನು ಅವನ ಆಚ್ಛಾದನ ವಸ್ತ್ರವೆನ್ನುತ್ತಾರೆ. ಋತುಗಳು ಕಾಲಪುರುಷನ ದ್ವಾರರೂಪವಾದ ಮನಸ್ಸು ಮತ್ತು ಇಂದ್ರಿಯಗಳಾಗಿವೆ. ವರ್ಷವೇ ಅವನ ಮುಖವಾಗಿದೆ. ಅಂತಹ ಕಾಲನು ಆಯುಃಸ್ವರೂಪನಾಗಿದ್ದಾನೆ.

ಆಹುಃ ಸರ್ವಮಿದಂ ಚಿನ್ತ್ಯಂ ಜನಾಃ ಕೇಚಿನ್ಮನೀಷಯಾ ।
ಅಸ್ಯಾಃ ಪಞ್ಚೈವ ಚಿನ್ತಾಯಾಃ ಪರ್ಯೇಷ್ಯಾಮಿ ಚ ಪಞ್ಚಧಾ ॥೪೭॥

ಕೆಲವು ವಿದ್ವಾಂಸರು ತಮ್ಮ ಬುದ್ಧಿಯಿಂದ ಈ ಕಾಲ-ಕಾಲಾವಯವ ಗಳೆಲ್ಲವನ್ನೂ ಹೀಗೆ ಚಿಂತಿಸಬೇಕೆಂದು ಹೇಳುತ್ತಾರೆ. ಈ ಕಲ್ಪನೆಯಂತೆ ಕಾಲಕ್ಕೆ (ವರ್ಷ, ಋತು, ಮಾಸ, ಪಕ್ಷ, ದಿನಗಳೆಂಬ) ಇವೇ ಅವಯವಗಳು ಮತ್ತು ಆ * ಐದು ಅವಯವಗಳುಳ್ಳದ್ದನ್ನಾಗಿಯೇ ಅದನ್ನು ತಿಳಿಯುತ್ತೇನೆ.

ಗಮ್ಭೀರಂ ಗಹನಂ ಬ್ರಹ್ಮ ಮಹತ್ತೋಯಾರ್ಣವಂ ಯಥಾ ।
ಅನಾದಿನಿಧನಂ ಚಾಹುರಕ್ಷರಂ ಕ್ಷರಮೇವ ಚ ॥೪೮॥

ಕಾಲರೂಪವಾದ ಆ ಬ್ರಹ್ಮವು ಅನಂತಜಲರಾಶಿಯಿಂದ ತುಂಬಿರುವ ಮಹಾಸಾಗರದಂತೆ ಗಂಭೀರವೂ ಗಹನವೂ ಆಗಿದೆ. ಅದಕ್ಕೆ ಆದಿಯಾಗಲೀ ಅಂತವಾಗಲೀ ಇರುವುದಿಲ್ಲ. ಆ ಕಾಲವನ್ನು ಕ್ಷರವೆಂದೂ–ಅಕ್ಷರವೆಂದೂ ಹೇಳುತ್ತಾರೆ.

ಸತ್ತ್ವೇಷು ಲಿಙ್ಗಮಾವೇಶ್ಯ ನಿರ್ಲಿಙ್ಗಮಪಿ ತತ್ಸ್ವಯಮ್ ।
ಮನ್ಯನ್ತೇ ಧ್ರುವಮೇವೈನಂ ಯೇ ಜನಾಸ್ತತ್ತ್ವದರ್ಶಿನಃ ॥೪೯॥

---

* ಅನ್ನಮಯಾದಿಕೋಶಗಳು ಪಂಚಾವಯವವುಳ್ಳವುಗಳೆಂದು ವ್ಯಾಖ್ಯಾನಕಾರರು ಇಲ್ಲಿ ಅರ್ಥಹೇಳಿ ಅದಕ್ಕೆ ಈ ಶ್ರುತಿಯನ್ನು ಉದಾಹರಿಸಿರುತ್ತಾರೆ : ಸ ವಾ ಏಷ ಪುರುಷೋಽನ್ನರಸಮಯಃ । ತಸ್ಯೇದಮೇವ ಶಿರಃ । ಅಯಂ ದಕ್ಷಿಣಃ ಪಕ್ಷಃ । ಅಯಮುತ್ತರಃ ಪಕ್ಷಃ । ಅಯಮಾತ್ಮಾ । ಇದಂ ಪುಚ್ಛಂ ಪ್ರತಿಷ್ಠಾ ।
[ತೈತ್ತರೀಯೋಪನಿಷತ್ ೨-೧]

ಕಾಲರೂಪವಾದ ಪರಬ್ರಹ್ಮವು ತಾನು ನಿರಾಕಾರವಾಗಿದ್ದರೂ ಸಮಸ್ತ ಪ್ರಾಣಿಗಳ ಶರೀರಗಳಲ್ಲಿಯೂ ಜೀವವು ಲಿಂಗದೇಹವನ್ನು ಪ್ರವೇಶಿಸುವಂತೆ ಮಾಡುತ್ತದೆ ಮತ್ತು ಅದು ಶಾಶ್ವತವಾದುದು–ಎಂದು ತತ್ತ್ವವನ್ನು ತಿಳಿದಿರುವವರು ತಿಳಿಯುತ್ತಾರೆ.

ಭೂತಾನಾಂ ಚ ವಿಪರ್ಯಾಸಂ ಕುರುತೇ ಭಗವಾನಿತಿ ।
ನ ಹ್ಯೇತಾವದ್ಭವೇದ್ಗಮ್ಯಂ ನ ಯಸ್ಮಾತ್ಪ್ರಭವೇತ್ಪುನಃ ॥೫೦॥

ಭಗವಾನ್ ಕಾಲನೇ ಸಮಸ್ತಪ್ರಾಣಿಗಳ ಅವಸ್ಥೆಯಲ್ಲಿಯೂ ವಿಪರ್ಯಾಸವನ್ನುಂಟುಮಾಡುತ್ತಾನೆ. ಬೇರೆ ಯಾರೂ ಈ ಮಾಹಾತ್ಮ್ಯವನ್ನು ತಿಳಿದವರಾಗಿಲ್ಲ. ಯಾರೂ ಕಾಲವನ್ನು ಪರಾಜಯಗೊಳಿಸಲಾರರು.

ಗತಿಂ ಹಿ ಸರ್ವಭೂತಾನಾಮಗತ್ವಾ ಕ್ವ ಗಮಿಷ್ಯತಿ ।
ಯೋ ಧಾವತಾ ನ ಹಾತವ್ಯಸ್ತಿಷ್ಠನ್ನಪಿ ನ ಹೀಯತೇ ॥೫೧॥

ತಮಿನ್ದ್ರಿಯಾಣಿ ಸರ್ವಾಣಿ ನಾನುಪಶ್ಯನ್ತಿ ಪಞ್ಚಧಾ ।
ಆಹುಶ್ಚೈನಂ ಕೇಚಿದಗ್ನಿಂ ಕೇಚಿದಾಹುಃ ಪ್ರಜಾಪತಿಮ್ ॥೫೨॥

ದೇವರಾಜ! ಸರ್ವಪ್ರಾಣಿಗಳಿಗೂ ಶರಣ್ಯವಾದ ಕಾಲವನ್ನು ಆಶ್ರಯಿಸದೇ ಪ್ರಾಣಿಯು ಎಲ್ಲಿಗೆ ತಾನೇ ಹೋಗಬಲ್ಲುದು? ಮನುಷ್ಯನು ಓಡಿಹೋದರೂ ಕಾಲವನ್ನು ಬಿಡಲು ಸಾಧ್ಯವಾಗುವುದಿಲ್ಲ. ಒಂದು ಕಡೆಯಲ್ಲಿ ನಿಂತಿದ್ದರೂ ಕಾಲವು ಮನುಷ್ಯನನ್ನು ಬಿಟ್ಟುಹೋಗುವುದಿಲ್ಲ. ಎಲ್ಲ ಇಂದ್ರಿಯಗಳೂ – ಮಾಸ-ಪಕ್ಷ-ಋತು-ಅಯನ ಮತ್ತು ಸಂವತ್ಸರಗಳೆಂಬ ಐದು ಅವಯವಗಳಿಂದ ಕೂಡಿರುವ ಕಾಲವನ್ನು ಕಾಣಲಾರವು. ಕೆಲವರು ಈ ಕಾಲವನ್ನು ಅಗ್ನಿಯೆಂದೂ–ಕೆಲವರು ಪ್ರಜಾಪತಿಯೆಂದೂ ಕರೆಯುತ್ತಾರೆ.

ಋತೂನ್ಮಾಸಾರ್ಧಮಾಸಾಂಶ್ಚ ದಿವಸಾಂಶ್ಚ ಕ್ಷಣಾಂಸ್ತಥಾ ।
ಪೂರ್ವಾಹ್ಣಮಪರಾಹ್ಣಂ ಚ ಮಧ್ಯಾಹ್ನಮಪಿ ಚಾಪರೇ ॥೫೩॥

ಮುಹೂರ್ತಮಪಿ ಚೈವಾಹುರೇಕಂ ಸನ್ತಮನೇಕಧಾ ।
ತಂ ಕಾಲಮಿತಿ ಜಾನೀಹಿ ಯಸ್ಯ ಸರ್ವಮಿದಂ ವಶೇ ॥೫೪॥

ಇತರರು ಕೆಲವರು ಕಾಲವನ್ನು ಋತು, ಮಾಸ, ಪಕ್ಷ, ದಿನ, ಕ್ಷಣ, ಪೂರ್ವಾಹ್ಣ, ಅಪರಾಹ್ಣ, ಮಧ್ಯಾಹ್ನ – ಎಂಬುದಾಗಿ ಕರೆಯುತ್ತಾರೆ. ವಿದ್ವಾಂಸರು ಆ ಕಾಲವನ್ನು ಮುಹೂರ್ತವೆಂದೂ ಕರೆಯುತ್ತಾರೆ. ಹೀಗೆ ಕಾಲವು ಒಂದೇ ಆಗಿದ್ದರೂ ಅದನ್ನು ಅನೇಕಪ್ರಕಾರವಾಗಿ ಜನರು ಕರೆಯುತ್ತಾರೆ. ಇಂದ್ರ! ಈ ಪ್ರಪಂಚವೆಲ್ಲವೂ ಯಾವುದರ ಅಧೀನದಲ್ಲಿರುವುದೋ–ಅದನ್ನೇ ಕಾಲವೆಂದು ತಿಳಿ.

ಬಹೂನೀನ್ದ್ರಸಹಸ್ರಾಣಿ ಸಮತೀತಾನಿ ವಾಸವ ।
ಬಲವೀರ್ಯೋಪಪನ್ನಾನಿ ಯಥೈವ ತ್ವಂ ಶಚೀಪತೇ ॥೫೫॥

ಶಚೀಪತಿಯಾದ ಇಂದ್ರನೇ! ನಿನ್ನಂತೆಯೇ ಬಲ-ವೀರ್ಯಗಳಿಂದ ಸಂಪನ್ನರಾಗಿದ್ದ ಅನೇಕ ಸಾವಿರ ಇಂದ್ರರು ಆಗಿಹೋದರು.

ತ್ವಾಮಪ್ಯತಿಬಲಂ ಶಕ್ರ ದೇವರಾಜಂ ಬಲೋತ್ಕಟಮ್ ।
ಪ್ರಾಪ್ತೇ ಕಾಲೇ ಮಹಾವೀರ್ಯಃ ಕಾಲಃ ಸಂಶಮಯಿಷ್ಯತಿ ॥೫೬॥

ಶಕ್ರ! ನೀನು ಮಹಾಶಕ್ತಿಶಾಲಿಯೂ ಬಲೋತ್ಕಟನೂ ಆದ ದೇವರಾಜನೆಂದು ನಿನ್ನನ್ನು ಭಾವಿಸಿಕೊಂಡಿರುವೆ. ಆದರೆ ಕಾಲವು ಪ್ರಾಪ್ತವಾದೊಡನೆಯೇ ಮಹಾಬಲಶಾಲಿಯಾದ ಕಾಲವು ನಿನ್ನನ್ನೂ ಶಮನಗೊಳಿಸಿಬಿಡುತ್ತದೆ.

ಯ ಇದಂ ಸರ್ವಮಾದತ್ತೇ ತಸ್ಮಾಚ್ಛಕ್ರ ಸ್ಥಿರೋ ಭವ ।
ಮಯಾ ತ್ವಯಾ ಚ ಪೂರ್ವೈಶ್ಚ ನ ಸ ಶಕ್ಯೋಽತಿವರ್ತಿತುಮ್ ॥

ಆ ಕಾಲವೇ ಈ ಸಂಪೂರ್ಣವಾದ ಜಗತ್ತನ್ನೂ ತನ್ನ ವಶಕ್ಕೆ ತೆಗೆದುಕೊಂಡಿರುತ್ತದೆ. ಆದುದರಿಂದ ನೀನು ಸ್ಥಿರಚಿತ್ತನಾಗಿರು. ನನ್ನಿಂದಾಗಲೀ ನಿನ್ನಿಂದಾಗಲೀ ಕಾಲವನ್ನು ಅತಿಕ್ರಮಿಸಿ ನಡೆಯಲು ಶಕ್ಯವಿಲ್ಲ. ಹಿಂದಿನವರಿಂದಲೂ ಕಾಲವನ್ನು ಅತಿಕ್ರಮಿಸಲು ಸಾಧ್ಯವಾಗಿಲ್ಲ.

ಯಾಮೇತಾಂ ಪ್ರಾಪ್ಯ ಜಾನೀಷೇ ರಾಜ್ಯಶ್ರಿಯಮನುತ್ತಮಾಮ್ ।
ಸ್ಥಿತಾ ಮಯೀತಿ ತನ್ಮಿಥ್ಯಾ ನೈಷ ಹ್ಯೇಕತ್ರ ತಿಷ್ಠತಿ ॥೫೮॥

ದೇವೇಶ್ವರ! ಉತ್ತಮೋತ್ತಮವಾದ ಈ ರಾಜ್ಯಶ್ರೀಯನ್ನು ಹೊಂದಿ

ರುವ ನೀನು ಈ ರಾಜ್ಯಶ್ರೀಯು ನಿನ್ನಲ್ಲಿಯೇ ಸ್ಥಿರವಾಗಿ ಉಳಿಯುವುದೆಂದು ಭಾವಿಸಿಕೊಂಡಿರುವೆ. ಆದರೆ ಈ ನಿನ್ನ ಭಾವನೆಯು ಸುಳ್ಳಾಗುತ್ತದೆ. ಏಕೆಂದರೆ : ಈ ರಾಜ್ಯಶ್ರೀಯು ಒಂದೇ ಕಡೆಯಲ್ಲಿಯೇ (ಒಬ್ಬನಲ್ಲಿಯೇ) ಯಾವಾಗಲೂ ಸ್ಥಿರವಾಗಿ ನಿಲ್ಲುವುದಿಲ್ಲ.

ಸ್ಥಿತಾ ಹೀನ್ದ್ರಸಹಸ್ರೇಷು ತ್ವದ್ವಿಶಿಷ್ಟತಮೇಷ್ವಿಯಮ್ ।
ಮಾಂ ಚ ಲೋಲಾ ಪರಿತ್ಯಜ್ಯ ತ್ವಾಮಗಾದ್ವಿಬುಧಾಧಿಪ ॥೫೯॥

ವಿಬುಧಾಧಿಪನೇ! ಈ ರಾಜ್ಯಶ್ರೀಯು ನಿನಗಿಂತಲೂ ಶ್ರೇಷ್ಠರಾದ ಸಾವಿರಾರು ಇಂದ್ರರ ಬಳಿ ಇದ್ದಿತು. ಈ ಸಮಯದಲ್ಲಿ ಚಂಚಲಳಾದ ಆ ರಾಜ್ಯಲಕ್ಷ್ಮಿಯು ನನ್ನನ್ನು ಬಿಟ್ಟು ನಿನ್ನನ್ನು ಸೇರಿರುವಳು.

ಮೈವಂ ಶಕ್ರ ಪುನಃ ಕಾರ್ಷೀಃ ಶಾನ್ತೋ ಭವಿತುಮರ್ಹಸಿ ।
ತ್ವಾಮಪ್ಯೇವಂವಿಧಂ ಜ್ಞಾತ್ವಾ ಕ್ಷಿಪ್ರಮನ್ಯಂ ಗಮಿಷ್ಯತಿ ॥೬೦॥

ಶಕ್ರ! ಇನ್ನು ಮುಂದಾದರೂ ನೀನು ಇಷ್ಟು ನಿಹೀನವಾಗಿ ವರ್ತಿಸಬೇಡ. ಶಾಂತಿಯಿಂದಿರುವುದು ನಿನಗೆ ಯೋಗ್ಯವಾಗಿದೆ. ನೀನು ಇಂತಹ ಹೀನಬುದ್ಧಿಯವನೆಂದು ತಿಳಿದೊಡನೆಯೇ ರಾಜ್ಯಶ್ರೀಯು ಬೇರೆಯವನೆಡೆಗೆ ಹೊರಟುಹೋಗುತ್ತದೆ.”

೨೨೪ನೆಯ ಅಧ್ಯಾಯವು ಮುಗಿಯಿತು.

೨೨೫ನೆಯ ಅಧ್ಯಾಯ — ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಇಂದ್ರ ಮತ್ತು ಲಕ್ಷ್ಮಿಯರ ಸಂವಾದ : ಬಲಿಯನ್ನು ತ್ಯಾಗಮಾಡಿ ಬಂದ ಲಕ್ಷ್ಮಿಯನ್ನು ಇಂದ್ರನು ಪ್ರತಿಷ್ಠಾಪಿಸಿದುದು

ಜನಮೇಜಯ! ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಅನಂತರ ಇಂದ್ರನು–ಮಹಾತ್ಮನಾದ ಬಲಿಯ ಶರೀರ ದಿಂದ ಹೊರಬರುತ್ತಿದ್ದ, ಪರಮಸುಂದರಿಯಾಗಿದ್ದ, ಪ್ರಕಾಶಮಾನ ಳಾಗಿದ್ದ, ಮೂರ್ತಿಮತಿಯಾದ ಸ್ವರ್ಗಶ್ರೀಯನ್ನು ನೋಡಿದನು. ಪಾಕ

ಶಾಸನನಾದ ಭಗವಾನ್ ಇಂದ್ರನು ಪ್ರಭೆಯಿಂದ ದೇದೀಪ್ಯಮಾನಳಾಗಿ ಕಾಣುತ್ತಿದ್ದ ಆ ಲಕ್ಷ್ಮಿಯನ್ನು ನೋಡಿ ಆಶ್ಚರ್ಯಚಕಿತನಾಗಿ ಅರಳಿದ ಕಣ್ಣುಗಳಿಂದ ಕೂಡಿದವನಾಗಿ ಬಲಿಯನ್ನು ಪ್ರಶ್ನಿಸಿದನು :

ಬಲೇ ಕೇಯಮಪಕ್ರಾನ್ತಾ ರೋಚಮಾನಾ ಶಿಖಣ್ಡಿನೀ ।
ತ್ವತ್ತಃ ಸ್ಥಿತಾ ಸಕೇಯೂರಾ ದೀಪ್ಯಮಾನಾ ಸ್ವತೇಜಸಾ ॥೩॥

"ಬಲಿಯೇ! ಜಡೆಹೆಣೆದುಕೊಂಡು, ಕಾಂತಿಯುತಳಾಗಿ, ಭುಜಗಳಲ್ಲಿ ಕೇಯೂರಾದ್ಯಾಭರಣಗಳನ್ನು ಧರಿಸಿ ತನ್ನ ತೇಜಸ್ಸಿನಿಂದ ಕಂಗೊಳಿಸುತ್ತಾ ನಿನ್ನ ಶರೀರದಿಂದ ಹೊರಬಂದಿರುವ ಈಕೆಯು ಯಾರು?"

ಬಲಿಯು ಹೇಳುತ್ತಾನೆ :

ನ ಹೀಮಾಮಾಸುರೀಂ ವೇದ್ಮಿ ನ ದೈವೀಂ ನ ಚ ಮಾನುಷೀಮ್ ।
ತ್ವಮೇನಾಂ ಪೃಚ್ಛ ವಾ ಮಾ ವಾ ಯಥೇಷ್ಟಂ ಕುರು ವಾಸವ ॥೪॥

"ದೇವೇಂದ್ರ! ಅವಳು ಅಸುರಸ್ತ್ರೀಯೇ – ಎಂಬುದನ್ನು ನಾನು ಅರಿಯೆನು. ದೇವಕನ್ಯೆಯೇ ಅಥವಾ ಮಾನುಷಸ್ತ್ರೀಯೇ–ಎಂಬುದನ್ನೂ ಅರಿಯೆನು. ನನಗೆ ಇವಳ ವಿಷಯವೇನೂ ತಿಳಿಯದು. ಆದುದರಿಂದ ನಿನಗೆ ಇವಳಾರೆಂಬುದನ್ನು ತಿಳಿದುಕೊಳ್ಳುವ ಇಚ್ಛೆಯಿದ್ದರೆ ನೀನೇ ಇವಳನ್ನು ಪ್ರಶ್ನಿಸು. ಪ್ರಶ್ನಿಸುವುದು ಅಥವಾ ಪ್ರಶ್ನಿಸದೇ ಇರುವುದು ನಿನಗೇ ಸೇರಿದ್ದಾಗಿದೆ. ನಿನ್ನ ಇಚ್ಛೆಯಿದ್ದಂತೆ ಮಾಡಬಹುದು."

ಬಳಿಕ ಇಂದ್ರನು ಆ ಸ್ತ್ರೀಯನ್ನೇ ನೇರವಾಗಿ ಪ್ರಶ್ನಿಸುತ್ತಾನೆ :

ಕಾ ತ್ವಂ ಬಲೇರಪಕ್ರಾನ್ತಾ ರೋಚಮಾನಾ ಶಿಖಣ್ಡಿನೀ ।
ಅಜಾನತೋ ಮಮಾಚಕ್ಷ್ವ ನಾಮಧೇಯಂ ಶುಚಿಸ್ಮಿತೇ ॥೫॥

ಕಾ ತ್ವಂ ತಿಷ್ಠಸಿ ಮಾಮೇವಂ ದೀಪ್ಯಮಾನಾ ಸ್ವತೇಜಸಾ ।
ಹಿತ್ವಾ ದೈತ್ಯವರಂ ಸುಭ್ರು ತನ್ಮಮಾಚಕ್ಷ್ವ ಪೃಚ್ಛತಃ ॥೬॥

"ಶುಭ್ರವಾದ ಮಂದಹಾಸವುಳ್ಳವಳೇ! ಪ್ರಕಾಶಮಾನಳಾಗಿರುವ, ನೀಳವಾದ ವೇಣಿಯನ್ನು ಧರಿಸಿರುವ, ಬಲಿಯ ಶರೀರದಿಂದ ಹೊರಬಂದಿರುವ ನೀನು ಯಾರು? ನೀನಾರೆಂಬುದನ್ನು ನಾನು ಅರಿಯೆನು. ಆದುದ

ರಿಂದ ನಿನ್ನ ಹೆಸರನ್ನು ಹೇಳು. ಶೋಭಾಯಮಾನವಾದ ಹುಬ್ಬುಗಳುಳ್ಳವಳೇ! ದೈತ್ಯಶ್ರೇಷ್ಠನ ಶರೀರವನ್ನು ಬಿಟ್ಟು ನಿನ್ನ ಅದ್ಭುತವಾದ ತೇಜಸ್ಸಿನಿಂದ ಬೆಳಗುತ್ತಾ ನನ್ನ ಬಳಿಯಲ್ಲಿ ನಿಂತಿರುವ ನೀನು ಯಾರು?–ಪ್ರಶ್ನಿಸುತ್ತಿರುವ ನನಗೆ ನೀನಾರೆಂಬುದನ್ನು ತಿಳಿಸು.”

ಲಕ್ಷ್ಮಿಯು ಹೇಳುತ್ತಾಳೆ :

ನ ಮಾಂ ವಿರೋಚನೋ ವೇದ ನಾಯಂ ವೈರೋಚನೋ ಬಲಿಃ ।
ಆಹುರ್ಮಾಂ ದುಃಸಹೇತ್ಯೇವಂ ವಿಧಿತ್ಸೇತಿ ಚ ಮಾಂ ವಿದುಃ ॥೭॥

“ವಿರೋಚನನೂ ನಾನಾರೆಂಬುದನ್ನು ತಿಳಿದಿರಲಿಲ್ಲ; ಅವನ ಮಗನಾದ ಈ ಬಲಿಯೂ ನಾನಾರೆಂಬುದನ್ನು ತಿಳಿದವನಾಗಿಲ್ಲ. ನನ್ನನ್ನು ಸಾಮಾನ್ಯವಾಗಿ ಎಲ್ಲರೂ ‘ದುಃಸಹಾ’ ಎಂದು ಕರೆಯುತ್ತಾರೆ. ಕೆಲವರು ‘ವಿಧಿತ್ಸಾ’ ಎಂದೂ ಕರೆಯುತ್ತಾರೆ.

ಭೂತಿರ್ಲಕ್ಷ್ಮೀತಿ ಮಾಮಾಹುಃ ಶ್ರೀರಿತ್ಯೇವಂ ಚ ವಾಸವ ।
ತ್ವಂ ಮಾಂ ಶಕ್ರ ನ ಜಾನೀಷೇ ಸರ್ವೇ ದೇವಾ ನ ಮಾಂ ವಿದುಃ ॥

ವಾಸವ! ತಿಳಿದವರು ನನ್ನನ್ನು ಭೂತಿ, ಲಕ್ಷ್ಮೀ ಮತ್ತು ಶ್ರೀ–ಎಂಬ ಹೆಸರುಗಳಿಂದಲೂ ಕರೆಯುತ್ತಾರೆ. ಶಕ್ರನೇ! ನೀನೂ ನನ್ನನ್ನು ತಿಳಿದವನಾಗಿಲ್ಲ. ಸರ್ವದೇವತೆಗಳೂ ನಾನಾರೆಂಬುದನ್ನು ತಿಳಿಯರು.”

ಇಂದ್ರನು ಹೇಳುತ್ತಾನೆ :

ಕಿಮಿದಂ ತ್ವಂ ಮಮ ಕೃತೇ ಉತಾಹೋ ಬಲಿನಃ ಕೃತೇ ।
ದುಃಸಹೇ ವಿಜಹಾಸ್ಯೇನಂ ಚಿರಸಂವಾಸಿನೀ ಸತೀ ॥೯॥

“ದುಃಸಹಳೇ! ಬಹಳ ಕಾಲದಿಂದ ಬಲಿಯ ಶರೀರದಲ್ಲಿಯೇ ನಿವಾಸ ಮಾಡಿಕೊಂಡಿದ್ದ ನೀನು ಈಗ ನನ್ನ ಹಿತಕ್ಕಾಗಿ ಬಲಿಯನ್ನು ತ್ಯಜಿಸಿ ಬಂದಿರುವೆಯಾ ಅಥವಾ ಬಲಿಯ ಹಿತದ ಸಲುವಾಗಿಯೇ ಅವನನ್ನು ಪರಿತ್ಯಜಿಸಿರುವೆಯಾ?”

ಶ್ರೀಯು ಹೇಳುತ್ತಾಳೆ :

ನೋ ಧಾತಾ ನ ವಿಧಾತಾ ಮಾಂ ವಿದಧಾತಿ ಕಥಂಚನ ।
ಕಾಲಸ್ತು ಶಕ್ರ ಪರ್ಯಾಗಾನ್ಮೈನಂ ಶಕ್ರಾವಮನ್ಯಥಾಃ ॥೧೦॥

"ಇಂದ್ರ! ಧಾತೃವೇ ಆಗಲೀ, ವಿಧಾತೃವೇ ಆಗಲೀ–ನನ್ನನ್ನು ಯಾವುದೇ ಕಾರಣದಿಂದಲೂ ಯಾವುದೇ ಕಾರ್ಯಕ್ಕೂ ನಿಯೋಜಿಸುವುದಿಲ್ಲ. ಆದರೆ ಕಾಲದ ಆದೇಶವನ್ನು ನಾನು ಮಾನ್ಯಮಾಡಬೇಕಾಗಿದೆ. ಈ ಸಮಯದಲ್ಲಿ ಕಾಲನು ಬಲಿಯನ್ನು ಪರಿತ್ಯಜಿಸುವಂತೆ ನನ್ನನ್ನು ಪ್ರೇರಣೆಮಾಡಿದುದರಿಂದ ನಾನು ಬಲಿಯ ಶರೀರದಿಂದ ಹೊರಬಂದು ಇಲ್ಲಿ ನಿಂತಿದ್ದೇನೆ. ಆದುದರಿಂದ ನೀನು ಈ ಬಲಿಯನ್ನು ಯಾವ ಕಾರಣದಿಂದಲೂ ಅವಹೇಳನ ಮಾಡಬೇಡ."

ಇಂದ್ರನು ಹೇಳುತ್ತಾನೆ :

ಕಥಂ ತ್ವಯಾ ಬಲಿಸ್ತ್ಯಕ್ತಃ ಕಿಮರ್ಥಂ ವಾ ಶಿಖಣ್ಡಿನಿ ।
ಕಥಂ ಚ ಮಾಂ ನ ಜಹ್ಯಾಸ್ತ್ವಂ ತನ್ಮೇ ಬ್ರೂಹಿ ಶುಚಿಸ್ಮಿತೇ ॥೧೧॥

"ಸುಂದರವಾದ ವೇಣಿಯನ್ನು ಧರಿಸಿರುವವಳೇ! ಬಲಿಯನ್ನು ನೀನು ಹೇಗೆ ತ್ಯಾಗಮಾಡಿದೆ ಮತ್ತು ಯಾವ ಕಾರಣಕ್ಕಾಗಿ ತ್ಯಾಗಮಾಡಿದೆ? ಹೇಗೆ ನಡೆದುಕೊಂಡರೆ ನೀನು ನನ್ನನ್ನು ತ್ಯಾಗಮಾಡದೆ ನನ್ನಲ್ಲಿ ಸ್ಥಿರವಾಗಿ ನೆಲೆಸುವೆ? ಶುಭ್ರವಾದ ಮಂದಹಾಸವುಳ್ಳವಳೇ! ಈ ಎಲ್ಲ ವಿಷಯಗಳನ್ನೂ ನನಗೆ ಹೇಳು."

ಶ್ರೀಯು ಉತ್ತರಿಸುತ್ತಾಳೆ :

ಸತ್ಯೇ ಸ್ಥಿತಾಸ್ಮಿ ದಾನೇ ಚ ವ್ರತೇ ತಪಸಿ ಚೈವ ಹಿ ।
ಪರಾಕ್ರಮೇ ಚ ಧರ್ಮೇ ಚ ಪರಾಚೀನಸ್ತತೋ ಬಲಿಃ ॥೧೨॥

"ಸತ್ಯ, ದಾನ, ವ್ರತ, ತಪಸ್ಸು, ಪರಾಕ್ರಮ ಮತ್ತು ಧರ್ಮಗಳಿರುವೆಡೆಯಲ್ಲಿ ನಾನು ವಾಸಮಾಡುತ್ತೇನೆ. ಈಗ ಬಲಿರಾಜನು ಈ ಎಲ್ಲರಿಂದಲೂ ವಿಮುಖನಾಗಿರುತ್ತಾನೆ.

ಬ್ರಹ್ಮಣ್ಯೋಽಯಂ ಪುರಾ ಭೂತ್ವಾ ಸತ್ಯವಾದೀ ಜಿತೇನ್ದ್ರಿಯಃ ।
ಅಭ್ಯಸೂಯದ್ಬ್ರಾಹ್ಮಣಾನಾಮುಚ್ಛಿಷ್ಟಶ್ಚಾಸ್ಪೃಶದ್ಘೃತಮ್ ॥೧೩॥

ಈ ಬಲಿರಾಜನು ಮೊದಲು ಬ್ರಾಹ್ಮಣಪ್ರಿಯನಾಗಿದ್ದನು. ಸತ್ಯ ನಿಷ್ಠನಾಗಿದ್ದನು. ಜಿತೇಂದ್ರಿಯನಾಗಿದ್ದನು. ಮುಂದೆ ಇವನಿಗೆ ಬ್ರಾಹ್ಮಣರಲ್ಲಿ

ಅಸೂಯೆಯುಂಟಾಯಿತು. ಅಶುದ್ಧವಾದ ಕೈಯಿಂದ ಹೋಮದ್ರವ್ಯವಾದ ತುಪ್ಪವನ್ನು ಮುಟ್ಟುತ್ತಿದ್ದನು.

ಯಜ್ಞಶೀಲಃ ಸದಾ ಭೂತ್ವಾ ಮಾಮೇವ ಯಜತ ಸ್ವಯಮ್ ।
ಪ್ರೋವಾಚ ಲೋಕಾನ್ಮೂಢಾತ್ಮಾ ಕಾಲೇನೋಪನಿಪೀಡಿತಃ ॥೧೪॥

ಈ ಬಲಿರಾಜನು ಮೊದಲು ಯಜ್ಞಶೀಲನಾಗಿದ್ದನು. ಆದರೆ ಬರ ಬರುತ್ತಾ ಮೂಢಾತ್ಮನಾದ ಇವನು ಕಾಲನಿಂದ ಪೀಡಿತನಾಗಿ ಮೋಹವಶನಾಗಿ 'ನನ್ನ ಸಲುವಾಗಿಯೇ ಯಜ್ಞಮಾಡಿರಿ' – ಎಂದು ಲೋಕದ ಜನರಿಗೆ ಆಜ್ಞೆಮಾಡುತ್ತಿದ್ದನು.

ಅಪಾಕೃತಾ ತತಃ ಶಕ್ರ ತ್ವಯಿ ವತ್ಸ್ಯಾಮಿ ವಾಸವ ।
ಅಪ್ರಮತ್ತೇನ ಧಾರ್ಯಾಸ್ಮಿ ತಪಸಾ ವಿಕ್ರಮೇಣ ಚ ॥೧೫॥

ವಾಸವ! ಹೀಗೆ ಬಲಿಯಿಂದ ತಿರಸ್ಕೃತಳಾದ ನಾನು ಈಗ ನಿನ್ನಲ್ಲಿ ವಾಸಮಾಡಲು ಬಂದಿರುತ್ತೇನೆ. ನೀನು ಯಾವಾಗಲೂ ಜಾಗರೂಕನಾಗಿದ್ದು, ತಪಸ್ಸಿನಿಂದಲೂ–ಪರಾಕ್ರಮದಿಂದಲೂ ನನ್ನನ್ನು ಧಾರಣೆಮಾಡಿಕೊಳ್ಳಬೇಕು."

ಅದಕ್ಕೆ ಇಂದ್ರನು ಹೇಳುತ್ತಾನೆ :

ನಾಸ್ತಿ ದೇವಮನುಷ್ಯೇಷು ಸರ್ವಭೂತೇಷು ವಾ ಪುಮಾನ್ ।
ಯಸ್ತ್ವಾಮೇಕೋ ವಿಷಹಿತುಂ ಶಕ್ನುಯಾತ್ಕಮಲಾಲಯೇ ॥೧೬॥

"ಕಮಲವಾಸಿನಿಯೇ! ದೇವ-ಮಾನವರಲ್ಲಿಯೇ ಆಗಲಿ, ಸರ್ವ ಪ್ರಾಣಿಗಳಲ್ಲಿಯೇ ಆಗಲೀ–ನಿನ್ನ ಭಾರವನ್ನು ಏಕಾಕಿಯಾಗಿ ಸಹಿಸುವವರು ಯಾರಿದ್ದಾರೆ?"

ಶ್ರೀದೇವಿಯು ಹೇಳುತ್ತಾಳೆ :

ನೈವ ದೇವೋ ನ ಗನ್ಧರ್ವೋ ನಾಸುರೋ ನ ಚ ರಾಕ್ಷಸಃ ।
ಯೋ ಮಾಮೇಕೋ ವಿಷಹಿತುಂ ಶಕ್ತಃ ಕಶ್ಚಿತ್ಪುರಂದರ ॥೧೭॥

"ಪುರಂದರನೇ! ದೇವನಾಗಲೀ, ಗಂಧರ್ವನಾಗಲೀ, ಅಸುರನಾಗಲೀ, ರಾಕ್ಷಸನಾಗಲೀ–ಏಕಾಕಿಯಾಗಿ ನನ್ನ ಭಾರವನ್ನು ಯಾವನೂ ಸಹಿಸಲಾರನು."

ಇಂದ್ರನು ಕೇಳುತ್ತಾನೆ :

ತಿಷ್ಠೇಥಾ ಮಯಿ ನಿತ್ಯಂ ತ್ವಂ ಯಥಾ ತದ್ಬ್ರೂಹಿ ಮೇ ಶುಭೇ ।
ತತ್ಕರಿಷ್ಯಾಮಿ ತೇ ವಾಕ್ಯಮೃತಂ ತದ್ವಕ್ತುಮರ್ಹಸಿ ॥೧೮॥

“ಶುಭಾಂಗಿಯೇ! ಯಾವ ರೀತಿಯಲ್ಲಿ ವ್ಯವಹರಿಸಿದರೆ ನೀನು ನನ್ನಲ್ಲಿ ಸುಸ್ಥಿರವಾಗಿ ಯಾವಾಗಲೂ ಇರುವೆಯೆಂಬುದನ್ನು ಹೇಳು. ನೀನು ಹೇಳಿದಂತೆಯೇ ನಾನು ಸತ್ಯವಾಗಿಯೂ ನಡೆದುಕೊಳ್ಳುವೆನು. ನನಗೆ ಯಥಾರ್ಥವಾದ ವಿಷಯವನ್ನು ಹೇಳು.”

ಶ್ರೀಯು ಹೇಳುತ್ತಾಳೆ :

ಸ್ಥಾಸ್ಯಾಮಿ ನಿತ್ಯಂ ದೇವೇನ್ದ್ರ ಯಥಾ ತ್ವಯಿ ನಿಬೋಧ ತತ್ ।
ವಿಧಿನಾ ವೇದದೃಷ್ಟೇನ ಚತುರ್ಧಾ ವಿಭಜಸ್ವ ಮಾಮ್ ॥೧೯॥

“ದೇವೇಂದ್ರ! ಯಾವ ರೀತಿಯಲ್ಲಿ ವ್ಯವಹರಿಸುವುದರಿಂದ ನಾನು ಯಾವಾಗಲೂ ನಿನ್ನಲ್ಲಿಯೇ ಸ್ಥಿರವಾಗಿ ಇರುವೆನೆಂಬುದನ್ನು ಹೇಳುವೆನು ; ಕೇಳು : ವೇದದಲ್ಲಿ ಹೇಳಿರುವ ವಿಧ್ಯನುಸಾರವಾಗಿ ನನ್ನನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸು.”

ಅಹಂ ವೈ ತ್ವಾಂ ನಿಧಾಸ್ಯಾಮಿ ಯಥಾಶಕ್ತಿ ಯಥಾಬಲಮ್ ।
ನ ತು ಮೇಽತಿಕ್ರಮಃ ಸ್ಯಾದ್ವೈ ಸದಾ ಲಕ್ಷ್ಮಿ ತವಾನ್ತಿಕೇ ॥೨೦॥

“ಲಕ್ಷ್ಮಿಯೇ! ನಾನು ನಿನ್ನನ್ನು ವಿಭಾಗಿಸಿ ತಕ್ಕ ಸ್ಥಳಗಳಲ್ಲಿ ಇಡುತ್ತೇನೆ. ನನ್ನ ಮನೋಬಲ–ದೇಹಬಲಗಳಿಗೆ ಅನುಸಾರವಾಗಿ ನಿನ್ನನ್ನು ಧಾರಣೆ ಮಾಡಿಕೊಳ್ಳುತ್ತೇನೆ. ಆದರೆ ನಿನ್ನ ಬಳಿಯಲ್ಲಿ ನನ್ನ ಅತಿಕ್ರಮವೆಂದಿಗೂ ಆಗಬಾರದು. ನಿನ್ನ ಆಜ್ಞಾನುಸಾರವಾಗಿಯೇ ನಾನು ನಡೆದುಕೊಳ್ಳುತ್ತೇನೆ.

ಭೂಮಿರೇವ ಮನುಷ್ಯೇಷು ಧಾರಿಣೀ ಭೂತಭಾವಿನೀ ।
ಸಾ ತೇ ಪಾದಂ ತಿತಿಕ್ಷೇತ ಸಮರ್ಥಾ ಹೀತಿ ಮೇ ಮತಿಃ ॥೨೧॥

ಮನುಷ್ಯಲೋಕದಲ್ಲಿ ಎಲ್ಲ ಪ್ರಾಣಿಗಳ ಸೃಷ್ಟಿಗೂ ಕಾರಣಳಾಗಿ ರುವ ಈ ಭೂದೇವಿಯೇ ಎಲ್ಲವನ್ನೂ ಧಾರಣೆಮಾಡಿಕೊಳ್ಳುತ್ತಾಳೆ. ಇವಳು

ನಿನ್ನ ಒಂದು ಪಾದದ ಭಾರವನ್ನು ಧರಿಸಬಲ್ಲಳೆಂಬುದು ನನ್ನ ಅಭಿಪ್ರಾಯ ವಾಗಿದೆ. ಇವಳು ಅತ್ಯಂತಸಮರ್ಥಳು.”

ಏಷ ಮೇ ನಿಹಿತಃ ಪಾದೋ ಯೋಽಯಂ ಭೂಮೌ ಪ್ರತಿಷ್ಠಿತಃ ।
ದ್ವಿತೀಯಂ ಶಕ್ರ ಪಾದಂ ಮೇ ತಸ್ಮಾತ್ಸುನಿಹಿತಂ ಕುರು ॥೨೨॥

“ಇಂದ್ರ! ನಿನ್ನ ಆಶಯದಂತೆಯೇ ನಾನು ನನ್ನ ಒಂದು ಪಾದವನ್ನು ಭೂಮಿಯ ಮೇಲಿಟ್ಟಿದ್ದೇನೆ. ಅದು ಭೂಮಿಯಲ್ಲಿ ಪ್ರತಿಷ್ಠಿತವಾಗಿದೆ. ಈಗ ನನ್ನ ಎರಡನೆಯ ಪಾದವು ಸುಪ್ರತಿಷ್ಠಿತವಾಗಿ ನಿಲ್ಲುವಂತೆ ವ್ಯವಸ್ಥೆಮಾಡು.”

ಆಪ ಏವ ಮನುಷ್ಯೇಷು ದ್ರವನ್ತ್ಯಃ ಪರಿಚಾರಿಣೀಃ ।
ತಾಸ್ತೇ ಪಾದಂ ತಿತಿಕ್ಷನ್ತಾಮಲಮಾಪಸ್ತಿತಿಕ್ಷಿತುಮ್ ॥೨೩॥

“ತಾಯೀ! ಲಕ್ಷ್ಮೀ! ಮನುಷ್ಯಲೋಕದಲ್ಲಿ ನೀರೇ ಸರ್ವತ್ರ ಪ್ರವಹಿಸುತ್ತಿರುತ್ತದೆ. ಪ್ರವಾಹರೂಪವಾಗಿರುವ ಆ ನೀರೇ ನಿನ್ನ ಎರಡನೆಯ ಪಾದದ ಭಾರವನ್ನು ಸಹಿಸಿಕೊಳ್ಳಲು ಸಮರ್ಥವಾಗಿದೆ. ಆದುದರಿಂದ ನಿನ್ನ ಎರಡನೆಯ ಪಾದವನ್ನು ನೀರಿನಲ್ಲಿಡು. ಅದು ನಿನ್ನ ಪಾದದ ಭಾರವನ್ನು ಸಹಿಸಿಕೊಳ್ಳಲಿ.”

ಏಷ ಮೇ ನಿಹಿತಃ ಪಾದೋ ಯೋಽಯಮಪ್ಸು ಪ್ರತಿಷ್ಠಿತಃ ।
ತೃತೀಯಂ ಶಕ್ರ ಪಾದಂ ಮೇ ತಸ್ಮಾತ್ಸುನಿಹಿತಂ ಕುರು ॥೨೪॥

“ನಿನ್ನ ಸಲಹೆಯಂತೆ ಈ ನನ್ನ ಎರಡನೆಯ ಪಾದವು ನೀರಿನಲ್ಲಿ ಇಡಲ್ಪಟ್ಟಿತು. ಆ ಕಾಲು ಈಗ ನೀರಿನಲ್ಲಿ ಸುಪ್ರತಿಷ್ಠಿತವಾಗಿದೆ. ಈಗ ನನ್ನ ಮೂರನೆಯ ಪಾದವು ಸುಪ್ರತಿಷ್ಠಿತವಾಗಿ ನಿಲ್ಲುವಂತೆ ವ್ಯವಸ್ಥೆಯನ್ನು ಮಾಡು.”

ಯಸ್ಮಿನ್ವೇದಾಶ್ಚ ಯಜ್ಞಾಶ್ಚ ಯಸ್ಮಿನ್ದೇವಾಃ ಪ್ರತಿಷ್ಠಿತಾಃ ।
ತೃತೀಯಂ ಪಾದಮಗ್ನಿಸ್ತೇ ಸುಧೃತಂ ಧಾರಯಿಷ್ಯತಿ ॥೨೫॥

“ದೇವಿ! ಯಾವನಲ್ಲಿ ವೇದ, ಯಜ್ಞ ಮತ್ತು ದೇವತೆಗಳು ಪ್ರತಿಷ್ಠಿತರಾಗಿರುವರೋ–ಅಂತಹ ಅಗ್ನಿದೇವನು ನಿನ್ನ ಮೂರನೆಯ ಪಾದವನ್ನು ಚೆನ್ನಾಗಿ ಧಾರಣೆಮಾಡಿಕೊಳ್ಳುತ್ತಾನೆ.”

ಏಷ ಮೇ ನಿಹಿತಃ ಪಾದೋ ಯೋಽಯಮಗ್ನೌ ಪ್ರತಿಷ್ಠಿತಃ ।
ಚತುರ್ಥಂ ಶಕ್ರ ಪಾದಂ ಮೇ ತಸ್ಮಾತ್ಸುನಿಹಿತಂ ಕುರು ॥೨೬॥

"ಇಂದ್ರ! ನೀನು ಹೇಳಿದಂತೆ ನನ್ನ ಮೂರನೆಯ ಪಾದವು ಅಗ್ನಿಯಲ್ಲಿ ಇಡಲ್ಪಟ್ಟಿದೆ. ನನ್ನ ಆ ಪಾದವು ಈಗ ಅಗ್ನಿಯಲ್ಲಿ ಸುಪ್ರತಿಷ್ಠಿತವಾಗಿದೆ. ಈಗ ನನ್ನ ನಾಲ್ಕನೆಯ ಪಾದವು ಸುಪ್ರತಿಷ್ಠಿತವಾಗಿ ನಿಲ್ಲುವಂತೆ ವ್ಯವಸ್ಥೆಯನ್ನು ಮಾಡು."

ಯೇ ವೈ ಸನ್ತೋ ಮನುಷ್ಯೇಷು ಬ್ರಹ್ಮಣ್ಯಾಃ ಸತ್ಯವಾದಿನಃ ।
ತೇ ತೇ ಪಾದಂ ತಿತಿಕ್ಷನ್ತಾಮಲಂ ಸನ್ತಸ್ತಿತಿಕ್ಷಿತುಮ್ ॥೨೭॥

"ಮನುಷ್ಯರಲ್ಲಿ ಬ್ರಾಹ್ಮಣಪ್ರಿಯರಾದ ಮತ್ತು ಸತ್ಯವಾದಿಗಳಾದ ಯಾವ ಸತ್ಪುರುಷರಿರುವರೋ–ಅವರು ನಿನ್ನ ನಾಲ್ಕನೆಯ ಪಾದದ ಭಾರವನ್ನು ಸಹಿಸಿಕೊಳ್ಳಲಿ. ಆ ಸತ್ಪುರುಷರೇ ನಿನ್ನ ಪಾದದ ಭಾರವನ್ನು ಸಹಿಸಿಕೊಳ್ಳಲು ಸಮರ್ಥರಾಗಿದ್ದಾರೆ."

ಏಷ ಮೇ ನಿಹಿತಃ ಪಾದೋ ಯೋಽಯಂ ಸತ್ಸು ಪ್ರತಿಷ್ಠಿತಃ ।
ಏವಂ ಹಿ ನಿಹಿತಾಂ ಶಕ್ರ ಭೂತೇಷು ಪರಿಧತ್ಸ್ವ ಮಾಮ್ ॥೨೮॥

"ನೀನು ಹೇಳಿದಂತೆ ನನ್ನ ನಾಲ್ಕನೆಯ ಪಾದವನ್ನು ಸತ್ಪುರುಷರಲ್ಲಿಟ್ಟಿದ್ದೇನೆ. ಆ ನನ್ನ ನಾಲ್ಕನೆಯ ಪಾದವು ಈಗ ಸತ್ಪುರುಷರಲ್ಲಿ ಪ್ರತಿಷ್ಠಿತವಾಗಿದೆ. ಹೀಗೆ ಪೃಥಿವ್ಯಾದಿಗಳಲ್ಲಿ ಇಡಲ್ಪಟ್ಟಿರುವ ನನ್ನನ್ನು ರಕ್ಷಿಸುವ ಭಾರವು ನಿನ್ನದಾಗಿದೆ."

ಭೂತಾನಾಮಿಹ ಯೋ ವೈ ತ್ವಾಂ ಮಯಾ ವಿನಿಹಿತಾಂ ಸತೀಮ್ ।
ಉಪಹನ್ಯಾತ್ಸ ಮೇ ಧೃಷ್ಯಸ್ತಥಾ ಶೃಣ್ವನ್ತು ಮೇ ವಚಃ ॥೨೯॥

"ದೇವಿ! ನನ್ನಿಂದ ಸ್ಥಾಪಿಸಲ್ಪಟ್ಟಿರುವ ಸಾಧ್ವಿಯಾದ ನಿನ್ನನ್ನು ಮನುಷ್ಯರಲ್ಲಿ ಯಾವನಾದರೂ ಪೀಡಿಸಿದ್ದೇ ಆದರೆ–ಅಂತಹವನು ನನ್ನಿಂದ ಶಿಕ್ಷಿಸಲ್ಪಡುತ್ತಾನೆ. ನನ್ನ ಈ ಮಾತನ್ನು ಪ್ರಪಂಚದಲ್ಲಿರುವ ಎಲ್ಲರೂ ಕೇಳಲಿ."

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಲಕ್ಷ್ಮಿಯಿಂದ ಹೀಗೆ ಪರಿತ್ಯಕ್ತನಾದ ದೈತ್ಯರಾಜನಾದ ಬಲಿಯು ಇಂದ್ರನಿಗೆ ಹೇಳುತ್ತಾನೆ :

ಯಾವತ್ಪುರಸ್ತಾತ್ಪ್ರತಪೇತ್ತಾವದ್ವೈ ದಕ್ಷಿಣಾಂ ದಿಶಮ್ ।
ಪಶ್ಚಿಮಾಂ ತಾವದೇವಾಪಿ ತಥೋದೀಚೀಂ ದಿವಾಕರಃ ॥೩೦॥

“ಸೂರ್ಯನು ಎಂದಿನವರೆಗೆ ಪೂರ್ವದಿಕ್ಕಿನಲ್ಲಿ ಪ್ರಕಾಶಮಾನನಾಗಿ ಬೆಳಗುತ್ತಿರುವನೋ–ಅಂದಿನವರೆಗೂ ಅವನು ದಕ್ಷಿಣ-ಉತ್ತರ-ಪಶ್ಚಿಮ ದಿಕ್ಕುಗಳನ್ನೂ ಬೆಳಗುತ್ತಲೇ ಇರುತ್ತಾನೆ.

ತಥಾ ಮಧ್ಯನ್ದಿನೇ ಸೂರ್ಯೋ ನಾಸ್ತಮೇತಿ ಯದಾ ತದಾ ।
ಪುನರ್ದೇವಾಸುರಂ ಯುದ್ಧಂ ಭಾವಿ ಜೇತಾಸ್ಮಿ ವಸ್ತದಾ ॥೩೧॥

ಯಾವಾಗ ಸೂರ್ಯನು ಮಧ್ಯಾಹ್ನದಲ್ಲಿಯೇ ಸ್ಥಿರವಾಗಿ ನಿಂತು ಅಸ್ತವನ್ನೇ ಹೊಂದುವುದಿಲ್ಲವೋ–ಆಗ ಪುನಃ ದೇವತೆಗಳಿಗೂ ಅಸುರರಿಗೂ ಯುದ್ಧವಾಗುತ್ತದೆ. ಆಗ ನಾನು ನಿಮ್ಮನ್ನು ಜಯಿಸಿಬಿಡುವೆನು.*

ಸರ್ವಲೋಕಾನ್ಯದಾದಿತ್ಯ ಏಕಸ್ಥಸ್ತಾಪಯಿಷ್ಯತಿ ।
ತದಾ ದೇವಾಸುರೇ ಯುದ್ಧೇ ಜೇತಾಹಂ ತ್ವಾಂ ಶತಕ್ರತೋ ॥೩೨॥

ಶತಕ್ರತುವೇ! ಯಾವಾಗ ಸೂರ್ಯನು ಒಂದೇ ಸ್ಥಾನದಲ್ಲಿಯೇ ಇದ್ದುಕೊಂಡು ಎಲ್ಲ ಲೋಕಗಳನ್ನೂ ತನ್ನ ಪ್ರಖರವಾದ ಕಿರಣಗಳಿಂದ ಪರಿತಾಪಗೊಳಿಸುವನೋ–ಆಗ ನಡೆಯುವ ದೇವಾಸುರರ ಯುದ್ಧದಲ್ಲಿ ನಾನು ನಿನ್ನನ್ನು ಜಯಿಸುವೆನು.”

ಇಂದ್ರನು ಹೇಳುತ್ತಾನೆ :

ಬ್ರಹ್ಮಣಾಸ್ಮಿ ಸಮಾದಿಷ್ಟೋ ನ ಹನ್ತವ್ಯೋ ಭವಾನಿತಿ ।
ತೇನ ತೇಽಹಂ ಬಲೇ ವಜ್ರಂ ನ ವಿಮುಞ್ಚಾಮಿ ಮೂರ್ಧನಿ ॥೩೩॥

---

* ಈಗ ವೈವಸ್ವತಮನ್ವಂತರವು ನಡೆಯುತ್ತಿದೆ. ಇದು ಕಳೆದು ಸಾವರ್ಣಿಕ ಮನ್ವಂತರವು ಪ್ರಾರಂಭವಾದೊಡನೆಯೇ ಬಲಿಯೇ ಇಂದ್ರನಾಗುವನೆಂದೂ–ಇದೇ ಅಭಿಪ್ರಾಯದಿಂದಲೇ ಬಲಿಯು ಈ ಮಾತನ್ನು ಹೇಳಿರುವನೆಂದೂ ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ.

"ಬಲಿಯೇ! ನಿನ್ನನ್ನು ಸಂಹರಿಸಕೂಡದೆಂದು ನಾನು ಬ್ರಹ್ಮನಿಂದ ಆಜ್ಞಪ್ತನಾಗಿದ್ದೇನೆ. ಆದುದರಿಂದ ನಾನು ನಿನ್ನ ತಲೆಯ ಮೇಲೆ ವಜ್ರಾಯುಧವನ್ನು ಪ್ರಯೋಗಮಾಡುವುದಿಲ್ಲ.

ಯಥೇಷ್ಟಂ ಗಚ್ಛ ದೈತ್ಯೇನ್ದ್ರ ಸ್ವಸ್ತಿ ತೇಽಸ್ತು ಮಹಾಸುರ ।
ಆದಿತ್ಯೋ ನೈವ ತಪಿತಾ ಕದಾಚಿನ್ಮಧ್ಯತಃ ಸ್ಥಿತಃ ॥೩೪॥

ಮಹಾಸುರನೇ! ದೈತ್ಯೇಂದ್ರನೇ! ನಿನಗೆ ಇಷ್ಟವಾದೆಡೆಗೆ ಹೊರಟು ಹೋಗು. ನಿನಗೆ ಮಂಗಳವಾಗಲಿ. (ಆದರೆ ನನ್ನನ್ನು ಜಯಿಸುವ ಆಶೆಯನ್ನು ಇಟ್ಟುಕೊಳ್ಳಬೇಡ.) ಸೂರ್ಯನು ಆಕಾಶದ ಮಧ್ಯಭಾಗದಲ್ಲಿಯೇ ಇದ್ದು ಎಲ್ಲ ಲೋಕಗಳಿಗೂ ಪರಿತಾಪವನ್ನು ಖಂಡಿತವಾಗಿಯೂ ಉಂಟುಮಾಡುವುದಿಲ್ಲ. (ಅಂತಹ ಕಾಲವು ಸನ್ನಿಹಿತವಾಗುವುದಿಲ್ಲ.)

ಸ್ಥಾಪಿತೋ ಹ್ಯಸ್ಯ ಸಮಯಃ ಪೂರ್ವಮೇವ ಸ್ವಯಮ್ಭುವಾ ।
ಅಜಸ್ರಂ ಪರಿಯಾತ್ಯೇಷ ಸತ್ಯೇನಾವತಪನ್ಪ್ರಜಾಃ ॥೩೫॥

ಬ್ರಹ್ಮನು ಬಹಳ ಹಿಂದೆಯೇ ಸೂರ್ಯನೊಡನೆ ಒಡಂಬಡಿಕೆಯನ್ನು ಮಾಡಿಕೊಂಡಿರುತ್ತಾನೆ. ಸತ್ಯನಿಷ್ಠನಾದ ಸೂರ್ಯನು ಆ ಒಪ್ಪಂದದ ಅನುಸಾರವಾಗಿ ಲೋಕದ ಜನರೆಲ್ಲರನ್ನೂ ಬೆಚ್ಚಗೆ ಮಾಡುತ್ತಾ ನಿರಂತರವಾಗಿ ಸುತ್ತುತ್ತಲೇ ಇರುತ್ತಾನೆ.

ಅಯನಂ ತಸ್ಯ ಷಣ್ಮಾಸಾನುತ್ತರಂ ದಕ್ಷಿಣಂ ತಥಾ ।
ಯೇನ ಸಂಯಾತಿ ಲೋಕೇಷು ಶೀತೋಷ್ಣೇ ವಿಸೃಜನ್ರವಿಃ ॥೩೬॥

ಅವನಿಗೆ ಉತ್ತರಾಯಣ-ದಕ್ಷಿಣಾಯನಗಳೆಂಬ ಎರಡು ಮಾರ್ಗಗಳಿವೆ. ಆರು ತಿಂಗಳು ಉತ್ತರಾಯಣವೂ–ಆರು ತಿಂಗಳು ದಕ್ಷಿಣಾಯನವೂ ಇರುತ್ತದೆ. ಲೋಕಗಳಲ್ಲಿ ಶೀತೋಷ್ಣಗಳನ್ನು ವಿಸರ್ಜಿಸುತ್ತಾ ಅವನು ತಿರುಗುತ್ತಿರುತ್ತಾನೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಇಂದ್ರನು ದೈತ್ಯೇಂದ್ರನಾದ ಬಲಿಗೆ ಹೀಗೆ ಹೇಳಿದ

ನಂತರ ಬಲಿಯು ದಕ್ಷಿಣದಿಕ್ಕಿಗೂ-ಇಂದ್ರನು ಉತ್ತರದಿಕ್ಕಿಗೂ ಹೊರಟು ಹೋದರು. ಬಲಿಯು ಹೇಳಿದ ಅನಹಂಕಾರವೆಂಬ ಹೆಸರುಳ್ಳ ಮಾತನ್ನು ಕೇಳಿದನಂತರ ಸಹಸ್ರಾಕ್ಷನು ಆಕಾಶಕ್ಕೇರಿದನು.”

೨೨೫ನೆಯ ಅಧ್ಯಾಯವು ಮುಗಿಯಿತು.

೨೨೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಇಂದ್ರ–ನಮುಚಿಗಳ ಸಂವಾದ

ಪಾರಿಕ್ಷಿತ! ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಅನಹಂಕಾರವೆಂಬ ಹೆಸರಿನ ಈ ವಿಷಯದಲ್ಲಿ ಇಂದ್ರನಿಗೂ ಮತ್ತು ನಮುಚಿಗೂ ನಡೆದ ಸಂಭಾಷಣಾರೂಪವಾದ ಮತ್ತೊಂದು ಪುರಾತನವಾದ ಇತಿಹಾಸವನ್ನೂ ವಿದ್ವಾಂಸರು ಹೇಳುತ್ತಾರೆ.

ಹಿಂದೊಮ್ಮೆ ಇಂದ್ರನು-ರಾಜ್ಯಶ್ರೀಯಿಂದ ಭ್ರಷ್ಟನಾಗಿದ್ದ, ಪ್ರಶಾಂತ ವಾದ ಮಹಾಸಾಗರದಂತೆ ಯಾವ ವಿಧವಾದ ಮನಸ್ಸಿನ ಕ್ಷೋಭೆಯೂ ಇಲ್ಲದೇ ಪ್ರಶಾಂತಚಿತ್ತನಾಗಿದ್ದ, ಕಾಲಾನುಗುಣವಾಗಿ ಸಂಭವಿಸುವ ಪ್ರಾಣಿ ಗಳ ಜನನ-ಮರಣಗಳ ರಹಸ್ಯವನ್ನು ತಿಳಿದಿದ್ದ, ದೈತ್ಯರಾಜನಾದ ನಮುಚಿಗೆ ಹೇಳಿದನು :

ಬದ್ಧಃ ಪಾಶೈಶ್ಚ್ಯುತಃ ಸ್ಥಾನಾದ್ದ್ವಿಷತಾಂ ವಶಮಾಗತಃ ।
ಶ್ರಿಯಾ ವಿಹೀನೋ ನಮುಚೇ ಶೋಚಸ್ಯಾಹೋ ನ ಶೋಚಸಿ ॥೩॥

“ನಮುಚಿಯೇ! ನೀನು ಪಾಶಗಳಿಂದ ಬಂಧಿಸಲ್ಪಟ್ಟಿರುವೆ. ರಾಜ್ಯ ಭ್ರಷ್ಟನಾಗಿರುವೆ. ಶತ್ರುಗಳ ವಶನಾಗಿರುವೆ. ಧನಸಂಪತ್ತಿಯಿಂದಲೂ ವಿಹೀನ ನಾಗಿರುವೆ. ಇಂತಹ ನಿನ್ನ ದುರವಸ್ಥೆಗಾಗಿ ನೀನು ಶೋಚಿಸುವೆಯೋ– ಇಲ್ಲವೋ?”

ನಮುಚಿಯು ಹೇಳುತ್ತಾನೆ :

ಅನಿವಾರ್ಯೇಣ ಶೋಕೇನ ಶರೀರಂ ಚೋಪತಪ್ಯತೇ ।
ಅಮಿತ್ರಾಶ್ಚ ಪ್ರಹೃಷ್ಯನ್ತಿ ಶೋಕೇ ನಾಸ್ತಿ ಸಹಾಯತಾ ॥೪॥

“ದೇವರಾಜ! ಶೋಕವನ್ನು ತಡೆದುಕೊಳ್ಳದಿದ್ದರೆ ಆ ಶೋಕವು ಶರೀರಕ್ಕೆ ಪರಿತಾಪವನ್ನುಂಟುಮಾಡುತ್ತದೆ. ಶೋಕಿಸುತ್ತಿರುವುದನ್ನು ನೋಡಿ ಶತ್ರುಗಳು ಸಂತೋಷಪಡುತ್ತಾರೆ. ಶೋಕಿಸುವುದರಿಂದ ವಿಪತ್ತು ದೂರವಾಗುವುದೇ?–ಎಂದರೆ ಅದೂ ಇಲ್ಲ. ಶೋಕವು ಯಾವ ಕಾರ್ಯ ಸಾಧನೆಯಲ್ಲಿಯೂ ಸಹಾಯಕವಾಗುವುದಿಲ್ಲ.

ತಸ್ಮಾಚ್ಛಕ್ರ ನ ಶೋಚಾಮಿ ಸರ್ವಂ ಹ್ಯೇವೇದಮನ್ತವತ್ ।
ಸಂತಾಪಾದ್ಭ್ರಶ್ಯತೇ ರೂಪಂ ಸಂತಾಪಾದ್ಭ್ರಶ್ಯತೇ ಶ್ರಿಯಃ ।
ಸಂತಾಪಾದ್ಭ್ರಶ್ಯತೇ ಚಾಯುರ್ಧರ್ಮಶ್ಚೈವ ಸುರೇಶ್ವರ ॥೫॥

ಇಂದ್ರ! ಈ ಕಾರಣಗಳಿಂದಲೇ ನಾನು ಶೋಕಪಡುವುದಿಲ್ಲ. ಏಕೆಂದರೆ : ಈ ಎಲ್ಲ ವೈಭವವೂ ನಾಶಹೊಂದತಕ್ಕದ್ದೇ ಆಗಿದೆ. ವಿನಾಶ ಗುಣವುಳ್ಳ ಐಶ್ವರ್ಯಕ್ಕಾಗಿ ಸಂತಾಪಪಡುವುದರಿಂದ ರೂಪವು ಕೆಟ್ಟುಹೋಗುತ್ತದೆ. ತೇಜಸ್ಸು ಹಾಳಾಗುತ್ತದೆ. ಆಯುಸ್ಸು ಕ್ಷೀಣಿಸುತ್ತದೆ. ಧರ್ಮವೂ ನಾಶವಾಗುತ್ತದೆ.

ವಿನೀಯ ಖಲು ತದ್ದುಃಖಮಾಗತಂ ವೈಮನಸ್ಯಜಮ್ ।
ಧ್ಯಾತವ್ಯಂ ಮನಸಾ ಹೃದ್ಯಂ ಕಲ್ಯಾಣಂ ಸಂವಿಜಾನತಾ ॥೬॥

ಈ ರಹಸ್ಯವನ್ನು ಚೆನ್ನಾಗಿ ತಿಳಿದಿರುವ ಪುರುಷನು ವೈಮನಸ್ಯದ ಕಾರಣದಿಂದ ಹುಟ್ಟಿದ ದುಃಖವನ್ನು ದೂರೀಕರಿಸಿ, ಹೃದಯಸ್ಥನಾಗಿರುವ ಕಲ್ಯಾಣಮಯನಾದ ಪರಮಾತ್ಮನನ್ನು ಮನಸ್ಸಿನಲ್ಲಿಯೇ ಧ್ಯಾನಮಾಡಬೇಕು.

ಯದಾ ಯದಾ ಹಿ ಪುರುಷಃ ಕಲ್ಯಾಣೇ ಕುರುತೇ ಮನಃ ।
ತದಾ ತಸ್ಯ ಪ್ರಸಿಧ್ಯನ್ತಿ ಸರ್ವಾರ್ಥಾ ನಾತ್ರ ಸಂಶಯಃ ॥೭॥

ಪುರುಷನು ಯಾವಾಗ ಕಲ್ಯಾಣಸ್ವರೂಪನಾದ ಪರಮಾತ್ಮನ ಧ್ಯಾನ ದಲ್ಲಿಯೇ ಮನಸ್ಸನ್ನು ಯೋಜಿಸುತ್ತಾನೆಯೋ–ಆಗ ಆ ಪುರುಷನ ಸರ್ವಾರ್ಥ ಗಳೂ ಸಿದ್ಧಿಸುತ್ತವೆ. ಇದರಲ್ಲಿ ಸಂಶಯವೇ ಇಲ್ಲ.

ಏಕಃ ಶಾಸ್ತಾ ನ ದ್ವಿತೀಯೋऽಸ್ತಿ ಶಾಸ್ತಾ
ಗರ್ಭೇ ಶಯಾನಂ ಪುರುಷಂ ಶಾಸ್ತಿ ಶಾಸ್ತಾ ।
ತೇನಾನುಯುಕ್ತಃ ಪ್ರವಣಾದಿವೋದಕಂ
ಯಥಾ ನಿಯುಕ್ತೋऽಸ್ಮಿ ತಥಾ ವಹಾಮಿ ॥೮॥

ಜಗತ್ತನ್ನು ಶಾಸನಮಾಡತಕ್ಕವನು ಒಬ್ಬನೇ. ಎರಡನೆಯವನಿಲ್ಲ. ಆ ಶಾಸಕನು ಗರ್ಭದಲ್ಲಿ ಮಲಗಿರುವ ಜೀವಕ್ಕೂ ಶಾಸಕನಾಗಿದ್ದಾನೆ. ಯಾವ ರೀತಿಯಲ್ಲಿ ನೀರು ಇಳಿಜಾರಾಗಿರುವ ಪ್ರದೇಶದ ಮೂಲಕವಾಗಿಯೇ ಹರಿದುಹೋಗುವುದೋ – ಅದೇ ರೀತಿಯಲ್ಲಿ ಶಾಸಕನಿಂದ ಪ್ರೇರಿತವಾದ ಜೀವವು ಶಾಸಕನ ಇಚ್ಛೆಯನ್ನು ಅನುಸರಿಸಿಯೇ ಹೋಗುತ್ತಿರುತ್ತದೆ. ಹಾಗೆಯೇ ನಾನಾದರೂ ಶಾಸಕನ ಆಜ್ಞೆಯಂತೆಯೇ ಕಾರ್ಯಭಾರವನ್ನು ಹೊರುತ್ತಿದ್ದೇನೆ.

ಭವಾಭವೌ ತ್ವಭಿಜಾನನ್ಗರೀಯೋ
ಜ್ಞಾನಾಚ್ಛ್ರೇಯೋ ನ ತು ತದ್ವೈ ಕರೋಮಿ ।
ಆಶಾಸು ಧರ್ಮ್ಯಾಸು ಪರಾಸು ಕುರ್ವ-
ನ್ಯಥಾ ನಿಯುಕ್ತೋऽಸ್ಮಿ ತಥಾ ವಹಾಮಿ ॥೯॥

ಪ್ರಾಣಿಗಳ ಬಂಧ-ಮೋಕ್ಷಗಳ ತತ್ತ್ವವನ್ನು ತಿಳಿದಿರುತ್ತೇನೆ. ಶ್ರೇಷ್ಠವಾದ ತತ್ತ್ವವು ಯಾವುದೆಂಬುದನ್ನು ತಿಳಿದಿರುತ್ತೇನೆ. ಜ್ಞಾನದಿಂದಲೇ ಶ್ರೇಯಸ್ಸುಂಟಾಗುವುದೆಂಬುದನ್ನೂ ತಿಳಿದಿರುತ್ತೇನೆ. ಆದರೂ ನಾನು ಜ್ಞಾನಮಾರ್ಗಾನುಸಾರವಾಗಿ ನಡೆದುಕೊಳ್ಳುತ್ತಿಲ್ಲ. ಆ ಜ್ಞಾನಮಾರ್ಗಕ್ಕೆ ವಿಪರೀತವಾಗಿ ಧರ್ಮಸಮ್ಮತವಾದ ಅಥವಾ ಅಧರ್ಮಯುಕ್ತವಾದ ಆಶೆಗಳಲ್ಲಿ (ಕಾಮ್ಯಕರ್ಮಗಳಲ್ಲಿ) ಮನಸ್ಸನ್ನು ತೊಡಗಿಸಿ ಅಂತರ್ಯಾಮಿಯಾದ ಶಾಸಕನ ಪ್ರೇರಣೆಯಂತೆ ಕಾರ್ಯಭಾರವನ್ನು ನಡೆಸುತ್ತಿದ್ದೇನೆ.

ಯಥಾ ಯಥಾಸ್ಯ ಪ್ರಾಪ್ತವ್ಯಂ ಪ್ರಾಪ್ನೋತ್ಯೇವ ತಥಾ ತಥಾ ।
ಭವಿತವ್ಯಂ ಯಥಾ ಯಚ್ಚ ಭವತ್ಯೇವ ತಥಾ ತಥಾ ॥೧೦॥

ಮನುಷ್ಯನಿಗೆ ಯಾವ ರೀತಿಯಲ್ಲಿ ಯಾವ ವಸ್ತುವು ಪ್ರಾಪ್ತವಾಗ ಬೇಕಾಗಿರುವುದೋ–ಆಯಾ ರೀತಿಯಲ್ಲಿಯೇ ಆ ವಸ್ತುವು ಲಭಿಸಿಯೇ ಲಭಿಸುತ್ತದೆ. ಯಾವುದು ಹೇಗೆ ನಡೆಯಬೇಕೋ ಅದು ಹಾಗೆಯೇ ನಡೆಯುತ್ತದೆ.

ಯತ್ರ ಯತ್ರೈವ ಸಂಯುಕ್ತೋ ಧಾತ್ರಾ ಗರ್ಭೇ ಪುನಃ ಪುನಃ ।
ತತ್ರ ತತ್ರೈವ ವಸತಿ ನ ತತ್ರ ಸ್ವಯಮಿಚ್ಛತಿ ॥೧೧॥

ವಿಧಾತನು ಜೀವನನ್ನು ಯಾವ ಯಾವ ಗರ್ಭದಲ್ಲಿ ವಾಸಿಸಲು ಪ್ರೇರಿಸುವನೋ–ಆಯಾ ಗರ್ಭದಲ್ಲಿಯೇ ಜೀವನು ವಾಸಿಸುತ್ತಾನೆ. ಸ್ವೇಚ್ಛೆಯಿಂದ ಜೀವನು ತನಗೆ ಬೇಕಾದ ಗರ್ಭದಲ್ಲಿ ವಾಸಮಾಡಲಾರನು.

ಭಾವೋ ಯೋಽಯಮನುಪ್ರಾಪ್ತೋ ಭವಿತವ್ಯಮಿದಂ ಮಮ ।
ಇತಿ ಯಸ್ಯ ಸದಾ ಭಾವೋ ನ ಸ ಮುಹ್ಯೇತ್ಕದಾಚನ ॥೧೨॥

'ನನಗೆ ಯಾವ ಈ ಅವಸ್ಥೆಯು ಬಂದಿದೆಯೋ–ಇದು ನನಗೆ ಬರ ಬೇಕಾದುದೇ'– ಎಂದು ಯಾವನು ಯಾವಾಗಲೂ ಭಾವಿಸುತ್ತಾನೆಯೋ– ಅಂತಹವನು ಎಂದಿಗೂ ತನಗೆ ಪ್ರಾಪ್ತವಾಗುವ ದುಃಖಗಳ ಸಲುವಾಗಿ ಮೋಹಗೊಳ್ಳುವುದಿಲ್ಲ.

ಪರ್ಯಾಯೈರ್ಹನ್ಯಮಾನಾನಾಮಭಿಯೋಕ್ತಾ ನ ವಿದ್ಯತೇ ।
ದುಃಖಮೇತತ್ತು ಯದ್ದ್ವೇಷ್ಟಾ ಕರ್ತಾಹಮಿತಿ ಮನ್ಯತೇ ॥೧೩॥

ಪರ್ಯಾಯವಾಗಿ ಬರುವ ಕಷ್ಟಗಳಿಂದ ಪೀಡಿತರಾದವರಲ್ಲಿ ಆ ಕಷ್ಟಗಳು ಬರದಂತೆ ಯಾರೂ ಪ್ರತಿಭಟಿಸಲಾರರು. ಸ್ವಭಾವತಃ ಸುಖದ ಅನಂತರ ಕಷ್ಟವೂ–ಕಷ್ಟದ ಅನಂತರ ಸುಖವೂ ಪರ್ಯಾಯವಾಗಿ ಬರುತ್ತಲೇ ಇರುತ್ತವೆ. ದುಃಖವನ್ನು ಯಾರು ದ್ವೇಷಿಸುವನೋ ಅವನು ಕಷ್ಟವು ಒದಗಿದಾಗ ಆ ಕಷ್ಟಕ್ಕೆ ತಾನೇ ಕರ್ತೃವೆಂದು ಭಾವಿಸುತ್ತಾನೆ. ಕರ್ತೃತ್ವಾಭಿಮಾನವೇ ದುಃಖಕ್ಕೆ ಕಾರಣವಾಗುತ್ತದೆ.

ಋಷೀಂಶ್ಚ ದೇವಾಂಶ್ಚ ಮಹಾಸುರಾಂಶ್ಚ
ತ್ರೈವಿದ್ಯವೃದ್ಧಾಂಶ್ಚ ವನೇ ಮುನೀಂಶ್ಚ ।

ಕಾನಾಪದೋ ನೋಪನಮನ್ತಿ ಲೋಕೇ
ಪರಾವರಜ್ಞಾಸ್ತು ನ ಸಮ್ಭ್ರಮನ್ತಿ ॥೧೪॥

ಋಷಿಗಳು, ದೇವತೆಗಳು, ಮಹಾಸುರರು, ಮೂರು ವೇದಗಳನ್ನೂ ತಿಳಿದಿರುವ ಜ್ಞಾನವೃದ್ಧರು, ಅರಣ್ಯದಲ್ಲಿರುವ ಮುನಿಗಳು–ಇವರಲ್ಲಿ ಯಾರನ್ನು ತಾನೇ ಆಪತ್ತುಗಳು ಆಕ್ರಮಿಸುವುದಿಲ್ಲ? ಎಲ್ಲರಿಗೂ ಆಪತ್ತುಗಳು ಒದಗಿ ಬಂದೇ ಬರುತ್ತವೆ. ಆದರೆ ಸದಸದ್ವಿವೇಕಿಗಳಾಗಿರುವವರು ಅಂತಹ ಆಪತ್ತುಗಳಿಂದ ಭ್ರಾಂತರಾಗುವುದಿಲ್ಲ.

ನ ಪಣ್ಡಿತಃ ಕ್ರುಧ್ಯತಿ ನಾಭಿಪದ್ಯತೇ
ನ ಚಾಪಿ ಸಂಸೀದತಿ ನ ಪ್ರಹೃಷ್ಯತಿ ।
ನ ಚಾರ್ಥಕೃಚ್ಛ್ರವ್ಯಸನೇಷು ಶೋಚತೇ
ಸ್ಥಿತಃ ಪ್ರಕೃತ್ಯಾ ಹಿಮವಾನಿವಾಚಲಃ ॥೧೫॥

ಪಂಡಿತನಾದವನು ಯಾವಾಗಲೂ ಕೋಪಗೊಳ್ಳುವುದಿಲ್ಲ. ಯಾವುದರಲ್ಲಿಯೂ ಹೆಚ್ಚು ಆಸಕ್ತಿಯನ್ನಿಟ್ಟುಕೊಳ್ಳುವುದಿಲ್ಲ. ಆಪತ್ತುಗಳು ಒದಗಿ ಬಂದಾಗ ಕುಗ್ಗುವುದಿಲ್ಲ. ಸುಖವು ಪ್ರಾಪ್ತವಾದಾಗ ಹಿಗ್ಗುವುದಿಲ್ಲ. ಹಣದ ಮುಗ್ಗಟ್ಟಿನಲ್ಲಿಯೂ–ಸಾಂಸಾರಿಕವಾದ ವ್ಯಸನಗಳಲ್ಲಿಯೂ ಶೋಕಪಡುವುದಿಲ್ಲ. ಹಿಮಾಲಯದಂತೆ ಸ್ಥಿರವಾದ ಸ್ವಭಾವವುಳ್ಳವನಾಗಿರುತ್ತಾನೆ.

ಯಮರ್ಥಸಿದ್ಧಿಃ ಪರಮಾ ನ ಮೋಹಯೇ-
ತ್ತಥೈವ ಕಾಲೇ ವ್ಯಸನಂ ನ ಮೋಹಯೇತ್ ।
ಸುಖಂ ಚ ದುಃಖಂ ಚ ತಥೈವ ಮಧ್ಯಮಂ
ನಿಷೇವತೇ ಯಃ ಸ ಧುರಂಧರೋ ನರಃ ॥೧೬॥

ಯಾವನನ್ನು ಮಹತ್ತರವಾದ ಅರ್ಥಸಿದ್ಧಿಯೂ ಮೋಹಗೊಳಿಸುವುದಿಲ್ಲವೋ, ಅಂತೆಯೇ ಕಾಲಾನುಗತವಾಗಿ ಬರುವ ವ್ಯಸನವೂ ಮೋಹಗೊಳಿಸುವುದಿಲ್ಲವೋ–ಸುಖವನ್ನೂ, ದುಃಖವನ್ನೂ, ಇವೆರಡರ ಮಧ್ಯಾವಸ್ಥೆಯನ್ನೂ ಯಾವನು ಸಮಾನಭಾವದಿಂದ ಅನುಭವಿಸುವನೋ–ಅಂತಹವನು

ಮಹಾಭಾರವಾದ ಕಾರ್ಯವನ್ನು ಸಾಧಿಸುವ ಶ್ರೇಷ್ಠಪುರುಷನೆನಿಸಿಕೊಳ್ಳು ತ್ತಾನೆ.

ಯಾಂ ಯಾಮವಸ್ಥಾಂ ಪುರುಷೋಽಧಿಗಚ್ಛೇ-
ತ್ತಸ್ಯಾಂ ರಮೇತಾಪರಿತಪ್ಯಮಾನಃ ।
ಏವಂ ಪ್ರವೃದ್ಧಂ ಪ್ರಣುದನ್ಮನೋಜಂ
ಸಂತಾಪನೀಯಂ ಸಕಲಂ ಶರೀರಾತ್ ॥೧೭॥

ಪುರುಷನು ಯಾವುದೇ ಸ್ಥಿತಿಯನ್ನೇ ಹೊಂದಿದರೂ–ತಾನಿರುವ ಸ್ಥಿತಿಗಾಗಿ ಪರಿತಾಪಗೊಳ್ಳಬಾರದು. ಸಂತಾಪವನ್ನುಂಟುಮಾಡುವ, ದಿನ-ದಿನಕ್ಕೂ ವರ್ಧಿಸುವ ಎಲ್ಲ ಕಾಮನೆಗಳನ್ನೂ ಶರೀರದಿಂದಲೂ ಮನಸ್ಸಿನಿಂದಲೂ ದೂರೀಕರಿಸಿ ತಾನಿರುವ ಸ್ಥಿತಿಯಲ್ಲಿಯೇ ಸಂತೋಷಪಡಬೇಕು.

ನ ತತ್ಸದಃ ಸತ್ಪರಿಷತ್ಸಭಾ ಚ ಸಾ
ಪ್ರಾಪ್ಯ ಯಾಂ ನ ಕುರುತೇ ಸದಾ ಭಯಮ್ ।
ಧರ್ಮತತ್ತ್ವಮವಗಾಹ್ಯ ಬುದ್ಧಿಮಾ-
ನ್ಯೋಽಭ್ಯುಪೈತಿ ಸ ಧುರಂಧರಃ ಪುಮಾನ್ ॥೧೮॥

ಯಾವ ಸಭೆಯನ್ನು ಹೊಂದಿಯೂ ಮನುಷ್ಯನು (ಅದು ತೀರ್ಮಾನಿಸುವ ಧರ್ಮಮರ್ಯಾದೆಗೆ) ಭಯಪಡುವುದಿಲ್ಲವೋ–ಅದು ಸದಸ್ಸಲ್ಲ ; ಒಳ್ಳೆಯ ಪರಿಷತ್ತಲ್ಲ ; ಸಭೆಯೂ ಅಲ್ಲ. (ಸದಃ= ಮರ್ಯಾದೆಯಿಂದ ಕುಳಿತುಕೊಳ್ಳುವ ಜಾಗ ; ಪರಿಷತ್ = ಮರ್ಯಾದೆಯಿಂದ ಸುತ್ತಲೂ ಕುಳಿತುಕೊಳ್ಳುವ ಜಾಗ ; ಸಭಾ = ಮರ್ಯಾದೆಯಿಂದ ಒಟ್ಟಿಗೆ ಬೆಳಗುವ ಜಾಗ. ಸಭಾಸದರು ಧರ್ಮಮರ್ಯಾದೆಗೆ ಭಯಪಟ್ಟು ನಡೆದರೆ ತಾನೇ ಆ ಸ್ಥಾನಕ್ಕೆ ಸದಸ್.; ಪರಿಷತ್.; ಸಭಾ–ಎಂಬ ಹೆಸರುಗಳೂ ಒಪ್ಪುವುದು ?) ಯಾವ ಬುದ್ಧಿವಂತನಾದ ಮನುಷ್ಯನು (ಸಭೆಯು ತೀರ್ಮಾನಿಸುವ) ಧರ್ಮತತ್ತ್ವದಲ್ಲಿ ಮುಳುಗಿ ಅದನ್ನು ಅನುಸರಿಸುತ್ತಾನೆಯೋ–ಅವನೇ ಮಹಾಭಾರವನ್ನು ಧರಿಸಲು ಸಮರ್ಥನಾದ ಪುರುಷನು.

ಪ್ರಾಜ್ಞಸ್ಯ ಕರ್ಮಾಣಿ ದುರನ್ವಯಾನಿ
ನ ವೈ ಪ್ರಾಜ್ಞೋ ಮುಹ್ಯತಿ ಮೋಹಕಾಲೇ ।

ಸ್ಥಾನಾಚ್ಚ್ಯುತಶ್ಚೇನ್ನ ಮುಮೋಹ ಗೌತಮ-
ಸ್ತಾವತ್ಕೃಚ್ಛ್ರಾಮಾಪದಂ ಪ್ರಾಪ್ಯ ವೃದ್ಧಃ ॥೧೯॥

ಪ್ರಾಜ್ಞನು ಮಾಡುವ ಕಾರ್ಯಗಳು ಸಾಧಾರಣಜನರಿಗೆ ಅರ್ಥವಾಗುವುದಿಲ್ಲ. ಪ್ರಾಜ್ಞನಾದವನು ಮೋಹವಶನಾಗಬೇಕಾದ ಕಾಲದಲ್ಲಿಯೂ ಮೋಹಿತನಾಗುವುದಿಲ್ಲ. ವೃದ್ಧನಾದ ಗೌತಮನು ಅಂತಹ ಅತ್ಯಂತಕಷ್ಟಕರವಾದ ಆಪತ್ತಿಗೆ ಒಳಗಾದರೂ–ಸ್ಥಾನದಿಂದ ಚ್ಯುತನಾದರೂ–ಮೋಹವಶನಾಗಲಿಲ್ಲ. (೧. ಪತ್ನಿಯಾದ ಅಹಲ್ಯೆಯು ವ್ಯಭಿಚಾರದೋಷದಿಂದ ತಮ್ಮ ಶಾಪಕ್ಕೆ ಗುರಿಯಾದಳು. ೨. ಅತಿಥಿಗಳಾಗಿ ಬಂದ ಮಹರ್ಷಿಗಳು ಕೃತಘ್ನರಾಗಿ ತಮ್ಮ ಮೇಲೆ ಗೋಹತ್ಯೆಯ ಮಿಥ್ಯಾಪವಾದವನ್ನು ಹೊರೆಸಿದರು. ಆದರೂ ಗೌತಮರು ಮೋಹಪರವಶರಾಗದೇ ಅದು ಮನುಷ್ಯಸ್ವಭಾವವೆಂದು ಅರಿತು ತಮ್ಮ ತಪಸ್ಸನ್ನು ಮುಂದುವರಿಸಿದರು.)

ನ ಮನ್ತ್ರಬಲವೀರ್ಯೇಣ ಪ್ರಜ್ಞಯಾ ಪೌರುಷೇಣ ಚ ।
ನ ಶೀಲೇನ ನ ವೃತ್ತೇನ ತಥಾ ನೈವಾರ್ಥಸಮ್ಪದಾ ।
ಅಲಭ್ಯಂ ಲಭತೇ ಮರ್ತ್ಯಸ್ತತ್ರ ಕಾ ಪರಿದೇವನಾ ॥೨೦॥

ಮನುಷ್ಯನು ಅಲಭ್ಯವಾದ ವಸ್ತುವನ್ನು ಮಂತ್ರದಿಂದಾಗಲೀ, ಬಲದಿಂದಾಗಲೀ, ಪರಾಕ್ರಮದಿಂದಾಗಲೀ, ಬುದ್ಧಿಯಿಂದಾಗಲೀ, ಪುರುಷಪ್ರಯತ್ನದಿಂದಾಗಲೀ, ಶೀಲದಿಂದಾಗಲೀ, ಸದಾಚಾರದಿಂದಾಗಲೀ, ಧನಸಂಪತ್ತಿಯಿಂದಾಗಲೀ ಪಡೆದುಕೊಳ್ಳಲಾರನು. ಇದರಲ್ಲಿ ಶೋಕಪಡಬೇಕಾದ ಕಾರಣವೇನಿದೆ?

ಯದೇವಮನುಜಾತಸ್ಯ ಧಾತಾರೋ ವಿದಧುಃ ಪುರಾ ।
ತದೇವಾನುಚರಿಷ್ಯಾಮಿ ಕಿಂ ಮೇ ಮೃತ್ಯುಃ ಕರಿಷ್ಯತಿ ॥೨೧॥

ಹೀಗೆ ಕರ್ಮಾನುಗುಣವಾಗಿ ಹುಟ್ಟಿರುವ ನನಗೆ, ಮುಖ್ಯರೂ ಗೌಣರೂ ಆದ ಸೃಷ್ಟಿಕರ್ತರು ಹಿಂದೆ ನನಗಾಗಿ ಯಾವ ವಿಧಿ-ವಿಧಾನಗಳನ್ನು ಕಲ್ಪಿಸಿಟ್ಟಿರುವರೋ ಅವನ್ನೇ ಅನುಸರಿಸುತ್ತಿದ್ದೇನೆ. ಎಲ್ಲವೂ ವಿಧಾತನ

ಶಾಸನವೆಂದೇ ದೃಢವಾಗಿ ನಂಬಿರುವ ನನ್ನನ್ನು ಮೃತ್ಯುವು ಏನು ತಾನೇ ಮಾಡೀತು?

ಲಬ್ಧವ್ಯಾನ್ಯೇವ ಲಭತೇ ಗನ್ತವ್ಯಾನ್ಯೇವ ಗಚ್ಛತಿ ।
ಪ್ರಾಪ್ತವ್ಯಾನ್ಯೇವ ಪ್ರಾಪ್ನೋತಿ ದುಃಖಾನಿ ಚ ಸುಖಾನಿ ಚ ॥೨೨॥

ಮನುಷ್ಯನು ವಿಧಾತನ ಶಾಸನದಂತೆ ಯಾವುದನ್ನು ಹೊಂದಬೇಕೋ ಅದನ್ನೇ ಹೊಂದುತ್ತಾನೆ. ಎಲ್ಲಿಗೆ ಹೋಗಬೇಕೋ ಅಲ್ಲಿಗೇ ಹೋಗುತ್ತಾನೆ. ದುಃಖದ ಪ್ರಾಪ್ತಿಯಿದ್ದರೆ ದುಃಖವನ್ನೇ ಅನುಭವಿಸುತ್ತಾನೆ. ಸುಖದ ಪ್ರಾಪ್ತಿಯಿದ್ದರೆ ಸುಖವನ್ನೇ ಅನುಭವಿಸುತ್ತಾನೆ.

ಏತದ್ವಿದಿತ್ವಾ ಕಾರ್ತ್ಸ್ನ್ಯೇನ ಯೋ ನ ಮುಹ್ಯತಿ ಮಾನವಃ ।
ಕುಶಲೀ ಸರ್ವದುಃಖೇಷು ಸ ವೈ ಸರ್ವಧನೋ ನರಃ ॥೨೩॥

ಈ ರಹಸ್ಯವನ್ನು ಸಮಗ್ರವಾಗಿ ತಿಳಿದುಕೊಂಡು ಯಾವ ಮನುಷ್ಯನು ಪರ್ಯಾಯವಾಗಿ ಬರುವ ಸುಖ-ದುಃಖಗಳ ವಿಷಯವಾಗಿ ಮೋಹಗೊಳ್ಳುವುದಿಲ್ಲವೋ–ಅವನು ಎಲ್ಲ ದುಃಖಗಳಲ್ಲಿಯೂ ಕುಶಲಿಯಾಗಿಯೇ ಇರುತ್ತಾನೆ. ಸಮಗ್ರವಾದ ಐಶ್ವರ್ಯವನ್ನೂ ಪಡೆದವನಾಗುತ್ತಾನೆ."

೨೨೬ನೆಯ ಅಧ್ಯಾಯವು ಮುಗಿಯಿತು.

೨೨೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಇಂದ್ರ-ಬಲಿಗಳ ಸಂವಾದ : ಕಾಲ ಮತ್ತು ಪ್ರಾರಬ್ಧಗಳ ಮಹಿಮೆ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಮಗ್ನಸ್ಯ ವ್ಯಸನೇ ಕೃಚ್ಛ್ರೇ ಕಿಂ ಶ್ರೇಯಃ ಪುರುಷಸ್ಯ ಹಿ ।
ಬನ್ಧುನಾಶೇ ಮಹೀಪಾಲ ರಾಜ್ಯನಾಶೇಽಥವಾ ಪುನಃ ॥೧॥

ತ್ವಂ ಹಿ ನಃ ಪರಮೋ ವಕ್ತಾ ಲೋಕೇಽಸ್ಮಿನ್ಭರತರ್ಷಭ ।
ಏತದ್ಭವನ್ತಂ ಪೃಚ್ಛಾಮಿ ತನ್ಮೇ ತ್ವಂ ವಕ್ತುಮರ್ಹಸಿ ॥೨॥

“ಭೀಷ್ಮಪಿತಾಮಹ! ಬಂಧುಗಳ ನಾಶದಿಂದ ಅಥವಾ ರಾಜ್ಯದ ನಾಶದಿಂದ ಮಹಾಸಂಕಟದಲ್ಲಿ ಬೀಳುವ ಮನುಷ್ಯನಿಗೆ ಯಾವುದರಿಂದ ಶ್ರೇಯಸ್ಸು ಲಭಿಸುತ್ತದೆ? ಈ ಪ್ರಪಂಚದಲ್ಲಿ ನಮಗೆ ಶ್ರೇಷ್ಠಬೋಧಕನು ನೀನೇ ಆಗಿರುವೆ. ಆದುದರಿಂದಲೇ ನಾನು ನಿನ್ನನ್ನು ಪ್ರಶ್ನಿಸುತ್ತಿದ್ದೇನೆ. ಉತ್ತರವನ್ನು ಹೇಳುವ ಕೃಪೆಮಾಡು.”

ಭೀಷ್ಮನು ಹೇಳುತ್ತಾನೆ :

ಪುತ್ರದಾರೈಃ ಸುಖೈಶ್ಚೈವ ವಿಯುಕ್ತಸ್ಯ ಧನೇನ ವಾ ।
ಮಗ್ನಸ್ಯ ವ್ಯಸನೇ ಕೃಚ್ಛ್ರೇ ಧೃತಿಃ ಶ್ರೇಯಸ್ಕರೀ ನೃಪ ।
ಧೈರ್ಯೇಣ ಯುಕ್ತಸ್ಯ ಸತಃ ಶರೀರಂ ನ ವಿಶೀರ್ಯತೇ ॥೩॥

“ಯುಧಿಷ್ಠಿರ! ಯಾವನು ಪತ್ನೀ-ಪುತ್ರರೇ ಮೊದಲಾದ ಬಂಧು ವರ್ಗವನ್ನೂ ಮತ್ತು ಹಣವನ್ನೂ ಕಳೆದುಕೊಂಡು ಸುಖಗಳಿಂದಲೂ ವಂಚಿತನಾಗಿ ಅಗಾಧವಾದ ವ್ಯಸನದಲ್ಲಿ ಮುಳುಗಿರುವನೋ – ಅಂತಹವನಿಗೆ ಧೈರ್ಯವೇ ಶ್ರೇಯಸ್ಕರವಾದುದು. ಕಷ್ಟಸಮಯಗಳಲ್ಲಿ ಧೈರ್ಯವನ್ನೇ ಆಶ್ರಯಿಸಬೇಕು. ಧೈರ್ಯದಿಂದ ಯುಕ್ತನಾಗಿರುವವನ ಶರೀರವು ಕ್ಷೀಣಿಸುವುದಿಲ್ಲ.

ವಿಶೋಕತಾ ಸುಖಂ ಧತ್ತೇ ಧತ್ತೇ ಚಾರೋಗ್ಯಮುತ್ತಮಮ್ ।
ಆರೋಗ್ಯಾಚ್ಚ ಶರೀರಸ್ಯ ಸ ಪುನರ್ವಿನ್ದತೇ ಶ್ರಿಯಮ್ ॥೪॥

ಶೋಕಪಡದಿರುವಿಕೆಯು ಮನುಷ್ಯನಿಗೆ ಸುಖವನ್ನುಂಟುಮಾಡುತ್ತದೆ. ಉತ್ತಮವಾದ ಆರೋಗ್ಯವನ್ನು ಕೊಡುತ್ತದೆ. ಆರೋಗ್ಯವು ಚೆನ್ನಾಗಿದ್ದರೆ ಐಶ್ವರ್ಯಭ್ರಷ್ಟನಾದವನೂ ಪುನಃ ಸಂಪತ್ತನ್ನು ಪಡೆದುಕೊಳ್ಳುತ್ತಾನೆ.

ಯಶ್ಚ ಪ್ರಾಜ್ಞೋ ನರಸ್ತಾತ ಸಾತ್ತ್ವಿಕೀಂ ವೃತ್ತಿಮಾಸ್ಥಿತಃ ।
ತಸ್ಯೈಶ್ವರ್ಯಂ ಚ ಧೈರ್ಯಂ ಚ ವ್ಯವಸಾಯಶ್ಚ ಕರ್ಮಸು ॥೫॥

ಬುದ್ಧಿವಂತನಾದ ಯಾವ ಮನುಷ್ಯನು ಸಾತ್ತ್ವಿಕವೃತ್ತಿಯನ್ನೇ ಆಶ್ರಯಿಸಿ ವ್ಯವಹರಿಸುತ್ತಾನೆಯೋ – ಅವನಿಗೆ ಐಶ್ವರ್ಯವೂ ಲಭಿಸುತ್ತದೆ ;

ಧೈರ್ಯವೂ ಇರುತ್ತದೆ. ಅಂತಹವನು ಕಾರ್ಯಗಳಲ್ಲಿ ನಿಶ್ಚಯಬುದ್ಧಿಯುಳ್ಳವನೂ ಆಗುತ್ತಾನೆ.

ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಬಲಿಗೂ ಮತ್ತು ಇಂದ್ರನಿಗೂ ನಡೆದ ಇತಿಹಾಸರೂಪವಾದ ಸಂಭಾಷಣೆಯನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೆ ಹೇಳುತ್ತೇನೆ ; ಕೇಳು :

ಹಿಂದೊಮ್ಮೆ ದೇವತೆಗಳಿಗೂ–ಅಸುರರಿಗೂ ಯುದ್ಧವು ನಡೆಯಿತು. ದೈತ್ಯ-ದಾನವರು ವಿನಾಶಹೊಂದಿದರು. ಬಲಿಚಕ್ರವರ್ತಿಯಿಂದ ಮೂರು ಹೆಜ್ಜೆಗಳನ್ನು ಕೇಳಿದ ವಾಮನಮೂರ್ತಿಯು ತ್ರಿವಿಕ್ರಮನಾಗಿ ತನ್ನ ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನೂ ಆಕ್ರಮಿಸಿಬಿಟ್ಟನು. ಬಲಿಯು ಹೀಗೆ ಪರಾಭವಹೊಂದಿದನಂತರ ಶತಕ್ರತುವಾದ ಇಂದ್ರನು ದೇವತೆಗಳಿಗೆ ಅಧಿಪತಿಯಾದನು. ದೇವತೆಗಳ ಪ್ರೀತ್ಯರ್ಥವಾಗಿ ಎಲ್ಲ ಕಡೆಗಳಲ್ಲಿಯೂ ಯಾಗಾದಿಗಳು ಪ್ರಾರಂಭವಾದುವು. ಬ್ರಾಹ್ಮಣಾದಿ ನಾಲ್ಕು ವರ್ಣಗಳವರೂ ತಮ್ಮ-ತಮ್ಮ ವರ್ಣಾಶ್ರಮಧರ್ಮಗಳನ್ನು ಯಥೋಕ್ತರೀತಿಯಲ್ಲಿ ಆಚರಿಸತೊಡಗಿದರು. ಮೂರು ಲೋಕಗಳೂ ಸಂಪತ್ಸಮೃದ್ಧವಾದುವು. ಅದನ್ನು ನೋಡಿ ಬ್ರಹ್ಮನಿಗೆ ಬಹಳ ಸಂತೋಷವಾಯಿತು. ಹೀಗೆಯೇ ಇರುತ್ತಿರುವಾಗ ಒಮ್ಮೆ ದೇವೇಂದ್ರನು–ನಾಲ್ಕು ಸುಂದರವಾದ ದಂತಗಳಿಂದ ಕಂಗೊಳಿಸುತ್ತಾ ವಿನೀತವಾಗಿದ್ದ ಗಜರಾಜನಾದ ಐರಾವತವನ್ನು ಹತ್ತಿ ರುದ್ರರಿಂದಲೂ, ವಸುಗಳಿಂದಲೂ, ಆದಿತ್ಯರಿಂದಲೂ, ಅಶ್ವಿನೀದೇವತೆಗಳಿಂದಲೂ, ಋಷಿಗಳಿಂದಲೂ, ಗಂಧರ್ವ-ನಾಗರುಗಳಿಂದಲೂ, ಸಿದ್ಧ-ಚಾರಣರೇ ಮೊದಲಾದವರಿಂದಲೂ ಪರಿವೃತನಾಗಿ ಲೋಕಯಾತ್ರೆಗಾಗಿ ಹೊರಟನು. ಹೀಗೆ ಪ್ರಯಾಣಮಾಡುತ್ತಿದ್ದಾಗ ವಜ್ರಪಾಣಿಯಾದ ಇಂದ್ರನು ಸಮುದ್ರತೀರದಲ್ಲಿದ್ದ ಒಂದು ಪರ್ವತದ ಗುಹೆಯಲ್ಲಿ ವಿರೋಚನನ ಮಗನಾದ ಬಲಿಯನ್ನು ನೋಡಿ ಅವನ ಬಳಿಗೆ ಧಾವಿಸಿದನು. ದೇವಗಣಗಳಿಂದ ಪರಿವೃತನಾಗಿ ಐರಾವತದ ಮೇಲೆ ಕುಳಿತಿದ್ದ ದೇವೇಂದ್ರನನ್ನು ನೋಡಿಯೂ ದೈತ್ಯೇಂದ್ರನಾದ ಬಲಿಯು ಶೋಕಿಸಲೂ ಇಲ್ಲ.; ವ್ಯಥೆಯನ್ನೂ ಹೊಂದಲಿಲ್ಲ. ನಿರ್ಭಯನಾಗಿಯೂ ಯಾವುದೇ ವಿಧವಾದ ಮುಖವಿಕಾರವಿಲ್ಲದೆಯೂ

ನಿಂತಿದ್ದ ಬಲಿಯನ್ನು ನೋಡಿ ದೇವರಾಜನು ಐರಾವತದ ಮೇಲೆ ಕುಳಿತೇ ಅವನನ್ನು ಹೀಗೆ ಪ್ರಶ್ನಿಸಿದನು :

ದೈತ್ಯ ನ ವ್ಯಥಸೇ ಶೌರ್ಯಾದಥವಾ ವೃದ್ಧಸೇವಯಾ ।
ತಪಸಾ ಭಾವಿತತ್ವಾದ್ವಾ ಸರ್ವಥೈತತ್ಸುದುಷ್ಕರಮ್ ॥೧೪॥

"ದೈತ್ಯೇಂದ್ರ! ನೀನು ನಿನ್ನ ಶತ್ರುವಿನ ಸಮೃದ್ಧಿಯನ್ನು ನೋಡುತ್ತಿದ್ದರೂ ಏಕೆ ದುಃಖಪಡುತ್ತಿಲ್ಲ? ತಮ್ಮ ಸಂಪತ್ಸಮೃದ್ಧಿಯನ್ನು ಕಳೆದುಕೊಂಡು ಶತ್ರುವಿನ ಸಂಪತ್ತನ್ನು ನೋಡಿ ದುಃಖಪಡದೇ ಇರುವುದು ಸಾಮಾನ್ಯಮನುಷ್ಯರಿಗೆ ಬಹಳ ದುಷ್ಕರವೇ ಸರಿ. ಈ ಗುಣವನ್ನು ನೀನು ಶೌರ್ಯದಿಂದ ಮೈಗೂಡಿಸಿಕೊಂಡಿರುವೆಯಾ? ವೃದ್ಧರ ಸೇವೆಯಿಂದಾಗಲೀ, ತಪಸ್ಸಿನ ಫಲದ ಪ್ರಭಾವದಿಂದಾಗಲೀ ನಿನ್ನಲ್ಲಿ ಈ ಗುಣವು ಮೂಡಿ ಬಂದಿರುವುದೇ?

ಶತ್ರುಭಿರ್ವಶಮಾನೀತೋ ಹೀನಃ ಸ್ಥಾನಾದನುತ್ತಮಾತ್ ।
ವೈರೋಚನೇ ಕಿಮಾಶ್ರಿತ್ಯ ಶೋಚಿತವ್ಯೇ ನ ಶೋಚಸಿ ॥೧೫॥

ವೈರೋಚನಿಯೇ! ನೀನೀಗ ಶತ್ರುವಶನಾಗಿರುವೆ. ನಿನ್ನ ಉತ್ತಮಸ್ಥಾನ ದಿಂದ ಚ್ಯುತನಾಗಿರುವೆ. ಇಂತಹ ಶೋಚನೀಯವಾದ ಪರಿಸ್ಥಿತಿಯಲ್ಲಿಯೂ ಯಾವುದರ ಆಶ್ರಯವನ್ನು ಪಡೆದು ನೀನು ಶೋಕಪಡುತ್ತಿಲ್ಲ?

ಶ್ರೈಷ್ಠ್ಯಂ ಪ್ರಾಪ್ಯ ಸ್ವಜಾತೀನಾಂ ಮಹಾಭೋಗಾನನುತ್ತಮಾನ್ ।
ಹೃತಸ್ವರತ್ನರಾಜ್ಯಸ್ತ್ವಂ ಬ್ರೂಹಿ ಕಸ್ಮಾನ್ನ ಶೋಚಸಿ ॥೧೬॥

ನಿನ್ನ ಸಜಾತೀಯರಲ್ಲಿ ನೀನು ಶ್ರೇಷ್ಠತೆಯನ್ನು ಹೊಂದಿದ್ದೆ. ಉತ್ತಮೋತ್ತಮವಾದ ಭೋಗಗಳನ್ನು ಅನುಭವಿಸುತ್ತಿದ್ದೆ. ಈಗ ನಿನ್ನ ಐಶ್ವರ್ಯ, ರತ್ನಗಳು, ರಾಜ್ಯ-ಎಲ್ಲವೂ ಅಪಹೃತವಾಗಿವೆ. ಹೀಗಿದ್ದರೂ ನೀನು ಯಾವ ಕಾರಣದಿಂದ ಶೋಕಪಡುತ್ತಿಲ್ಲ?

ಈಶ್ವರೋ ಹಿ ಪುರಾ ಭೂತ್ವಾ ಪಿತೃಪೈತಾಮಹೇ ಪದೇ ।
ತತ್ತ್ವಮದ್ಯ ಹೃತಂ ದೃಷ್ಟ್ವಾ ಸಪತ್ನೈಃ ಕಿಂ ನ ಶೋಚಸಿ ॥೧೭॥

ನೀನು ನಿನ್ನ ತಾತ-ಮುತ್ತಾತಂದಿರ ಸಿಂಹಾಸನದಲ್ಲಿ ಕುಳಿತು ಮೂರು

ಲೋಕಗಳಿಗೂ ಈಶ್ವರನಾಗಿ ರಾಜ್ಯವಾಳುತ್ತಿದ್ದೆ. ಆ ನಿನ್ನ ಸಾರ್ವಭೌಮತ್ವವು ನಿನ್ನ ಶತ್ರುಗಳಿಂದ ಅಪಹೃತವಾಗಿದೆ. ಇದು ಅತ್ಯಂತ ದುಃಖದ ಸಂಗತಿಯೇ ಸರಿ. ಆದರೂ ನೀನು ಶೋಕಿಸುತ್ತಿಲ್ಲವೇಕೆ?

ಬದ್ಧಶ್ಚ ವಾರುಣೈಃ ಪಾಶೈರ್ವಜ್ರೇಣ ಚ ಸಮಾಹತಃ ।
ಹೃತದಾರೋ ಹೃತಧನೋ ಬ್ರೂಹಿ ಕಸ್ಮಾನ್ನ ಶೋಚಸಿ ॥೧೮॥

ನೀನು ವರುಣನ ಪಾಶಗಳಿಂದ ಬಂಧಿಸಲ್ಪಟ್ಟಿರುವೆ. ವಜ್ರಾಯುಧದಿಂದ ಘಾಸಿಮಾಡಲ್ಪಟ್ಟಿರುವೆ. ಪತ್ನಿಯರನ್ನೂ ಸಂಪತ್ತನ್ನೂ ಕಳೆದುಕೊಂಡಿರುವೆ. ಇಂತಹ ದೆಸೆಯಲ್ಲಿಯೂ ನೀನು ಶೋಚಿಸದಿರಲು ಕಾರಣವೇನು?

ನಷ್ಟಶ್ರೀರ್ವಿಭವಭ್ರಷ್ಟೋ ಯನ್ನ ಶೋಚಸಿ ದುಷ್ಕರಮ್ ।
ತ್ರೈಲೋಕ್ಯರಾಜ್ಯ ನಾಶೇ ಹಿ ಕೋಽನ್ಯೋ ಜೀವಿತುಮುತ್ಸಹೇತ್ ॥

ನಿನ್ನ ರಾಜ್ಯಲಕ್ಷ್ಮಿಯು ನಷ್ಟವಾಗಿ ಹೋಗಿದ್ದಾಳೆ. ಧನವೈಭವದಿಂದ ಭ್ರಷ್ಟನಾಗಿರುವೆ. ಆದರೂ ನೀನು ಶೋಕಪಡುತ್ತಿಲ್ಲ. ಇದು ನಿಶ್ಚಯವಾಗಿಯೂ ಇತರರಿಗೆ ದುಃಸ್ಸಾಧ್ಯವೇ ಸರಿ. ಮೂರು ಲೋಕಗಳ ರಾಜ್ಯವನ್ನೂ ಕಳೆದುಕೊಂಡನಂತರ ನಿನ್ನ ಹೊರತಾಗಿ ಬೇರೆ ಯಾವನು ತಾನೇ ಜೀವಿಸಿರಲು ಇಚ್ಛಿಸುತ್ತಿದ್ದನು?"

ಯುಧಿಷ್ಠಿರ! ಇವೇ ಮುಂತಾಗಿ ಮನಸ್ಸನ್ನು ಚುಚ್ಚುವ ಹಲವು ಮಾತುಗಳನ್ನು ಆಡುತ್ತಿದ್ದ ಇಂದ್ರನನ್ನು ಬಲಿಯು ತಿರಸ್ಕಾರದೃಷ್ಟಿಯಿಂದಲೇ ನೋಡಿದನು. ಇಂದ್ರನ ಮಾತುಗಳನ್ನು ಕೇಳಿ ಅವನಿಗೆ ಸ್ವಲ್ಪವಾದರೂ ವ್ಯಥೆಯಾಗಲಿಲ್ಲ. ಸಂತೋಷದಿಂದಲೇ ಅವನ ಮಾತುಗಳನ್ನು ಕೇಳುತ್ತಿದ್ದನು. ಇಂದ್ರನ ಮಾತುಗಳಿಂದ ಸ್ವಲ್ಪವಾದರೂ ಭ್ರಾಂತನಾಗದಿದ್ದ ಆ ವಿರೋಚನಪುತ್ರನು ಇಂದ್ರನಿಗೆ ಹೀಗೆ ಉತ್ತರ ಕೊಟ್ಟನು :

ನಿಗೃಹೀತೇ ಮಯಿ ಭೃಶಂ ಶಕ್ರ ಕಿಂ ಕತ್ಥಿತೇನ ತೇ ।
ವಜ್ರಮುದ್ಯಮ್ಯ ತಿಷ್ಠನ್ತಂ ಪಶ್ಯಾಮಿ ತ್ವಾಂ ಪುರಂದರ ॥೨೧॥

"ಪುರಂದರ! ನಾನು ಶತ್ರುಗಳಿಂದ ಅಥವಾ ಕಾಲನಿಂದ ಬಹಳವಾಗಿ ಗ್ರಹಿಸಲ್ಪಟ್ಟಿದ್ದೇನೆ. ಆದರೆ ನೀನು ಅದನ್ನೇ ಬಾರಿ-ಬಾರಿಗೂ ನನ್ನ

ಮುಂದೆ ಹೇಳುವುದರಿಂದ ನಿನಗಾಗುವ ಲಾಭವಾದರೂ ಏನು? ನನ್ನ ಮುಂದೆ ನೀನು ವಜ್ರಾಯುಧವನ್ನೆತ್ತಿಕೊಂಡು ನಿಂತಿರುವುದನ್ನೂ ನಾನು ಕಾಣುತ್ತಿದ್ದೇನೆ.

ಅಶಕ್ತಃ ಪೂರ್ವಮಾಸೀಸ್ತ್ವಂ ಕಥಞ್ಚಿಚ್ಛಕ್ತತಾಂ ಗತಃ ।
ಕಸ್ತ್ವದನ್ಯ ಇಮಾಂ ವಾಚಂ ಸುಕ್ರೂರಾಂ ವಕ್ತುಮರ್ಹತಿ ॥೨೨॥

ಹಿಂದೆ ನೀನು ಬಹಳ ಅಶಕ್ತನೇ ಆಗಿದ್ದೆ. ಅತಿಕಷ್ಟದಿಂದ ಹೇಗೋ ಶಕ್ತಿಮಂತನಾದೆ. ಆದರೂ ರಾಜ್ಯಭ್ರಷ್ಟನಾಗಿರುವ ಶತ್ರುವಿನ ಮುಂದೆ ನೀನಲ್ಲದೇ ಬೇರೆ ಯಾವನು ತಾನೇ ಇಂತಹ ನಿಷ್ಠುರವಾದ ಮಾತನ್ನಾಡಿಯಾನು?

ಯಸ್ತು ಶತ್ರೋರ್ವಶಸ್ಥಸ್ಯ ಶಕ್ತೋಽಪಿ ಕುರುತೇ ದಯಾಮ್ ।
ಹಸ್ತಪ್ರಾಪ್ತಸ್ಯ ವೀರಸ್ಯ ತಂ ಚೈವ ಪುರುಷಂ ವಿದುಃ ॥೨೩॥

ಮಹಾಶಕ್ತಿಶಾಲಿಯೇ ಆಗಿದ್ದರೂ-ಯಾವನು ತನ್ನ ವಶನಾಗಿ ಕೈಗೆ ಸಿಕ್ಕಿ ಬಿದ್ದಿರುವ ವೀರನಾದ ಶತ್ರುವಿನ ವಿಷಯದಲ್ಲಿಯೂ ದಯಾಪರನಾಗಿರುವನೋ-ಅವನನ್ನೇ ಉತ್ತಮಪುರುಷನೆಂದು ವಿದ್ವಾಂಸರು ತಿಳಿಯುತ್ತಾರೆ.

ಅನಿಶ್ಚಯೋ ಹಿ ಯುದ್ಧೇಷು ದ್ವಯೋರ್ವಿವದಮಾನಯೋಃ ।
ಏಕಃ ಪ್ರಾಪ್ನೋತಿ ವಿಜಯಮೇಕಶ್ಚೈವ ಪರಾಜಯಮ್ ॥೨೪॥

ಇಬ್ಬರು ಪರಸ್ಪರಯುದ್ಧಮಾಡುತ್ತಿರುವಾಗ ಜಯಾಪಜಯಗಳು ಅನಿಶ್ಚಿತವಾಗಿರುತ್ತವೆ. ಇಬ್ಬರಲ್ಲಿ ಒಬ್ಬನಿಗೆ ವಿಜಯವೂ-ಮತ್ತೊಬ್ಬನಿಗೆ ಪರಾಜಯವೂ ಪ್ರಾಪ್ತವಾಗುತ್ತದೆ. ಇಬ್ಬರೂ ವಿಜಯಿಗಳಾಗಲಾರರು; ಇಬ್ಬರೂ ಪರಾಜಿತರೂ ಆಗಲಾರರು.

ಮಾ ಚ ತೇಽಭೂತ್ಸ್ವಭಾವೋಽಯಮಿತಿ ತೇ ದೇವಪುಙ್ಗವ ।
ಈಶ್ವರಃ ಸರ್ವಭೂತಾನಾಂ ವಿಕ್ರಮೇಣ ಜಿತೋ ಬಲಾತ್ ॥೨೫॥

ದೇವಶ್ರೇಷ್ಠನೇ! 'ಸರ್ವಪ್ರಾಣಿಗಳಿಗೂ ನಾನೇ ಈಶ್ವರನು. ನನ್ನ ಪರಾಕ್ರಮದಿಂದಲೇ ನಾನು ಈ ಮೂರು ಲೋಕಗಳನ್ನೂ (ಬಲಿಯನ್ನು) ಜಯಿಸಿದ್ದೇನೆ' – ಎಂಬ ಅಹಂಭಾವವು ನಿನಗೆ ಉಂಟಾಗದಿರಲಿ.

ನೈತದಸ್ಮತ್ಕೃತಂ ಶಕ್ರ ನೈತಚ್ಛಕ್ರ ಕೃತಂ ತ್ವಯಾ ।
ಯತ್ತ್ವಮೇವಂಗತೋ ವಜ್ರಿನ್ಯದ್ವಾಪ್ಯೇವಂಗತಾ ವಯಮ್ ॥೨೬॥

ವಜ್ರಿಯೇ! ನೀನು ಈ ರೀತಿಯಲ್ಲಿ ರಾಜ್ಯಶ್ರೀಯನ್ನು ಪಡೆದುಕೊಂಡು ರಾಜವೈಭವದಿಂದಿರುವುದಕ್ಕೂ–ನಾನು ರಾಜ್ಯಭ್ರಷ್ಟನಾಗಿರುವುದಕ್ಕೂ ನಾನಾಗಲೀ–ನೀನಾಗಲೀ ಕಾರಣರಲ್ಲ.

ಅಹಮಾಸಂ ಯಥಾದ್ಯ ತ್ವಂ ಭವಿತಾ ತ್ವಂ ಯಥಾ ವಯಮ್ ।
ಮಾವಮಂಸ್ಥಾ ಮಯಾ ಕರ್ಮ ದುಷ್ಕೃತಂ ಕೃತಮಿತ್ಯುತ ॥೨೭॥

ನೀನಿಂದು ಹೇಗಿರುವೆಯೋ ಹಿಂದೆ ನಾನೂ ಹಾಗೆಯೇ ಇದ್ದೆನು. ಈಗ ನಾವು ಹೇಗಿರುವೆವೋ ಮುಂದೆ ನೀನೂ ಹೀಗೆಯೇ ಆಗುವೆ. 'ನಾನು ಅತ್ಯಂತದುಷ್ಕೃತವಾದ ಸಾಹಸವನ್ನು ತೋರಿ ಶತ್ರುವನ್ನು ದಮನಮಾಡಿದೆನು'–ಎಂದು ಭಾವಿಸಿಕೊಂಡು ನನ್ನನ್ನು ಅಪಮಾನಗೊಳಿಸಬೇಡ.

ಸುಖದುಃಖೇ ಹಿ ಪುರುಷಃ ಪರ್ಯಾಯೇಣಾಧಿಗಚ್ಛತಿ ।
ಪರ್ಯಾಯೇಣಾಸಿ ಶಕ್ರತ್ವಂ ಪ್ರಾಪ್ತಃ ಶಕ್ರ ನ ಕರ್ಮಣಾ ॥೨೮॥

ಪ್ರತಿಯೊಬ್ಬ ಮನುಷ್ಯನೂ ಸುಖ-ದುಃಖಗಳನ್ನು ಪರ್ಯಾಯವಾಗಿ ಹೊಂದುತ್ತಾನೆ. ಸುಖದನಂತರ ಕಷ್ಟವನ್ನೂ–ಕಷ್ಟದನಂತರ ಸುಖವನ್ನೂ ಪಡೆಯುತ್ತಾನೆ. ಇಂದ್ರ! ಈಗ ನಿನಗೆ ಈ ಇಂದ್ರಪದವಿಯು ಪರ್ಯಾಯವಾಗಿ ಬಂದಿದೆ. ಇಷ್ಟು ಹೊರತಾಗಿ ನೀನು ನಿನ್ನ ಪರಾಕ್ರಮರೂಪವಾದ ಕರ್ಮದಿಂದ ಇಂದ್ರಪದವಿಯನ್ನು ಅನುಭವಿಸುತ್ತಿಲ್ಲ.

ಕಾಲಃ ಕಾಲೇ ನಯತಿ ಮಾಂ ತ್ವಾಂ ಚ ಕಾಲೋ ನಯತ್ಯಯಮ್ ।
ತೇನಾಹಂ ತ್ವಂ ಯಥಾ ನಾದ್ಯ ತ್ವಂ ಚಾಪಿ ನ ಯಥಾ ವಯಮ್ ॥

ಕಾಲವೇ ನನ್ನನ್ನು ಕಾಲವಶದಿಂದ ಈ ಗತಿಗೆ ಒಯ್ಯುತ್ತಿದೆ. ಅದೇ ಕಾಲವೇ ನಿನ್ನನ್ನೀಗ ಈ ಗತಿಗೆ ಒಯ್ಯುತ್ತಿದೆ. ಆದುದರಿಂದ ನೀನಿರುವಂತೆ ನಾನೀಗ ಸಾರ್ವಭೌಮನಾಗಿಲ್ಲ. ಮುಂದೆ ನಾನಿರುವಂತೆ ನೀನಿರಲೂ ಸಾಧ್ಯವಾಗುವುದಿಲ್ಲ.

ನ ಮಾತೃಪಿತೃಶುಶ್ರೂಷಾ ನ ಚ ದೈವತಪೂಜನಮ್ ।
ನಾನ್ಯೋ ಗುಣಸಮಾಚಾರಃ ಪುರುಷಸ್ಯ ಸುಖಾವಹಃ ॥೩೦॥

ಮಾತಾ-ಪಿತೃಗಳ ಶುಶ್ರೂಷೆಯಾಗಲೀ, ದೇವತೆಗಳ ಪೂಜೆಯಾಗಲೀ, ಸದ್ಗುಣ-ಸದಾಚಾರಗಳಾಗಲೀ–ಕಾಲನಿಂದ ಪೀಡಿತನಾದ ಪುರುಷನಿಗೆ ಸುಖವನ್ನು ಉಂಟುಮಾಡುವುದಿಲ್ಲ.

ನ ವಿದ್ಯಾ ನ ತಪೋ ದಾನಂ ನ ಮಿತ್ರಾಣಿ ನ ಬಾನ್ಧವಾಃ ।
ಶಕ್ನುವನ್ತಿ ಪರಿತ್ರಾತುಂ ನರಂ ಕಾಲೇನ ಪೀಡಿತಮ್ ॥೩೧॥

ಕಾಲನಿಂದ ಪೀಡಿತನಾದವನನ್ನು ವಿದ್ಯೆ-ತಪಸ್ಸು-ದಾನಗಳಾಗಲೀ ಬಂಧು-ಮಿತ್ರರಾಗಲೀ ರಕ್ಷಿಸಲು ಸಮರ್ಥರಾಗುವುದಿಲ್ಲ.

ನಾಗಾಮಿನಮನರ್ಥಂ ಹಿ ಪ್ರತಿಘಾತಶತೈರಪಿ ।
ಶಕ್ನುವನ್ತಿ ಪ್ರತಿವ್ಯೋಢುಮೃತೇ ಬುದ್ಧಿಬಲಾನ್ನರಾಃ ॥೩೨॥

ಮನುಷ್ಯರು ಬುದ್ಧಿಬಲದಿಂದಲ್ಲದೇ ಬೇರೆಯ ನೂರಾರು ಪ್ರತೀಕಾರ ಕ್ರಮಗಳಿಂದಲೂ ಮುಂದೆ ಬರುವ ಅನರ್ಥವನ್ನು ನಿವಾರಿಸಿಕೊಳ್ಳಲು ಸಮರ್ಥರಾಗುವುದಿಲ್ಲ.

ಪರ್ಯಾಯೈರ್ಹನ್ಯಮಾನಾನಾಂ ಪರಿತ್ರಾತಾ ನ ವಿದ್ಯತೇ ।
ಇದಂ ತು ದುಃಖಂ ಯಚ್ಛಕ್ರ ಕರ್ತಾಹಮಿತಿ ಮನ್ಯಸೇ ॥೩೩॥

ಶಕ್ರ! ಅವರವರ ಸರದಿಗಳಿಗೆ ತಕ್ಕಂತೆ ಹಿಂಸೆಗೊಳಗಾಗಿರುವವರನ್ನು ಯಾರೂ ರಕ್ಷಿಸಲಾರರು. ಹೀಗಿರುವಾಗ 'ಬಲಿಯ ದುರ್ಗತಿಗೆ ನಾನೇ ಕಾರಣನು' ಎಂದು ನೀನು ಭಾವಿಸಿಕೊಂಡಿರುವುದು ಶೋಚನೀಯವಾಗಿದೆ.

ಯದಿ ಕರ್ತಾ ಭವೇತ್ಕರ್ತಾ ನ ಕ್ರಿಯೇತ ಕದಾಚನ ।
ಯಸ್ಮಾತ್ತು ಕ್ರಿಯತೇ ಕರ್ತಾ ತಸ್ಮಾತ್ಕರ್ತಾಪ್ಯನೀಶ್ವರಃ ॥೩೪॥

ಒಂದು ವೇಳೆ ಕಾರ್ಯಮಾಡುವವನು ನಿಜವಾದ ಕರ್ತೃವೇ ಆಗಿದ್ದರೆ–ಅಂತಹ ಕರ್ತೃವನ್ನು ಸೃಷ್ಟಿಸುವವನೇ ಬೇರೆ ಯಾರೂ ಇರುತ್ತಿರಲಿಲ್ಲ. ಕರ್ತೃವಿಗೆ ಕಾರಣರೂ ಬೇರೆಯವರೇ ಆಗಿರುವುದರಿಂದ ಕರ್ತೃವು ಎಂದಿಗೂ ಈಶ್ವರನಾಗುವುದಿಲ್ಲ.

(ಕರ್ತೃತ್ವಶಬ್ದವು ಕಾಲವಾಚಿಯಾದ ಪರಮಾತ್ಮನೊಬ್ಬನಿಗೆ ಹೊರತಾಗಿ ಬೇರೆ ಯಾರಿಗೂ ಅನ್ವಯಿಸುವುದಿಲ್ಲ. ಉಳಿದ ಕರ್ತೃಗಳಿಗೂ ಕಾರಣನು ಬೇರೊಬ್ಬನಿರುತ್ತಾನೆ. ಆದುದರಿಂದ 'ನಾನು ಈ ಕಾರ್ಯ

ವನ್ನು ಮಾಡಿದೆನು. ನಾನೇ ಕರ್ತೃ'–ಎಂದು ಹೇಳಿಕೊಳ್ಳುವುದು ಮೌಢ್ಯವೇ ಸರಿ. ಉತ್ಪತ್ತಿ-ಲಯರಹಿತನಾದವನೊಬ್ಬನೇ ಕರ್ತೃ. ಜನನ-ಮರಣಾದಿಗಳ ಸುಳಿಯಲ್ಲಿ ಸಿಕ್ಕಿರುವವನೆಂದಿಗೂ ಕರ್ತೃವಾಗುವುದಿಲ್ಲ.)

ಕಾಲೇನಾಹಂ ತ್ವಾಮಜಯ್ಯಂ ಕಾಲೇನಾಹಂ ಜಿತಸ್ತ್ವಯಾ ।
ಗನ್ತಾ ಗತಿಮತಾಂ ಕಾಲಃ ಕಾಲಃ ಕಲಯತಿ ಪ್ರಜಾಃ ॥೩೫॥

ಕಾಲದ ಯೋಗದಿಂದಾಗಿ ಹಿಂದೆ ನಾನು ನಿನ್ನನ್ನು ಜಯಿಸಿದ್ದೆನು. ಅದೇ ಕಾಲದ ಯೋಗದಿಂದಲೇ ನಿನ್ನಿಂದ ನಾನು ಪರಾಜಿತನೂ ಆದೆನು. ಮುನ್ನಡೆಯುತ್ತಿರುವ ಪ್ರಾಣಿಗಳೊಡನೆ ಕಾಲವೂ ಹೋಗುತ್ತಿರುತ್ತದೆ. ಪ್ರಾಣಿಗಳಿಗೆ ಮುನ್ನಡೆಯುವ ಶಕ್ತಿಯನ್ನು ಕಾಲವೇ ನೀಡುತ್ತದೆ. ಅದೇ ಕಾಲವೇ ಪ್ರಜೆಗಳ ಸಂಹಾರವನ್ನೂ ಮಾಡುತ್ತದೆ.

ಇನ್ದ್ರ ಪ್ರಾಕೃತಯಾ ಬುದ್ಧ್ಯಾ ಪ್ರಲಯಂ ನಾವಬುಧ್ಯಸೇ ।
ಕೇಚಿತ್ತ್ವಾಂ ಬಹು ಮನ್ಯನ್ತೇ ಶ್ರೈಷ್ಠ್ಯಂ ಪ್ರಾಪ್ತಂ ಸ್ವಕರ್ಮಣಾ ॥೩೬॥

ಇಂದ್ರ! ನೀನು ಸಾಧಾರಣಬುದ್ಧಿಯುಳ್ಳವನಾದುದರಿಂದ ಅನಿವಾರ್ಯವಾದ ವಿನಾಶದ ವಿಷಯವನ್ನು ತಿಳಿದವನಾಗಿಲ್ಲ. ಪ್ರಪಂಚದಲ್ಲಿ ಕೆಲವರು ನಿನ್ನನ್ನು ಸ್ವಬಲ-ಪರಾಕ್ರಮಗಳಿಂದಲೇ ಔನ್ನತ್ಯವನ್ನು ಹೊಂದಿರುವೆಯೆಂದು ಭಾವಿಸಿ ಗೌರವಿಸುತ್ತಾರೆ. (ಕೇವಲ ಕಾಲದ ಮಹಿಮೆಯಿಂದಾಗಿ ನೀನು ಮಹತ್ತ್ವವನ್ನು ಪಡೆದಿರುವೆಯೆಂಬ ಅರಿವು ಅವರಿಗಿರುವುದಿಲ್ಲ.)

ಕಥಮಸ್ಮದ್ವಿಧೋ ನಾನು ಜಾನಲ್ಲೋಕಪ್ರವೃತ್ತಯಃ ।
ಕಾಲೇನಾಭ್ಯಾಹತಃ ಶೋಚೇನ್ಮುಹ್ಯೇದ್ವಾಪ್ಯಥ ವಿಭ್ರಮೇತ್ ॥೩೭॥

ಲೋಕವ್ಯಾಪಾರಗಳನ್ನು (ಔನ್ನತ್ಯಕ್ಕೂ-ಅಧೋಗತಿಗೂ ಕಾಲವೇ ಕಾರಣವೆಂಬುದನ್ನೂ, ಸುಖ-ದುಃಖಗಳು ಪರ್ಯಾಯವಾಗಿ ಬರುತ್ತವೆಯೆಂಬುದನ್ನೂ) ಚೆನ್ನಾಗಿ ತಿಳಿದಿರುವ ನನ್ನಂತಹವನು ಕಾಲಪೀಡಿತನಾದಾಗ ಏತಕ್ಕಾಗಿ ಶೋಕಿಸುತ್ತಾನೆ? ಮೋಹವಶನಾಗುತ್ತಾನೆ ಅಥವಾ ಭ್ರಾಂತನಾಗುತ್ತಾನೆ?

ನಿತ್ಯಂ ಕಾಲಪರೀತಸ್ಯ ಮಮ ವಾ ಮದ್ವಿಧಸ್ಯ ವಾ ।
ವೃದ್ಧಿರ್ವ್ಯಸನಮಾಸಾದ್ಯ ಭಿನ್ನಾ ನೌರಿವ ಸೀದತಿ ॥೩೮॥

ನನಗೇ ಆಗಲೀ, ನನ್ನಂತಹ ಬೇರೆ ಯಾರಿಗೇ ಆಗಲಿ–ದುಷ್ಕಾಲದಿಂದ ಸಮಾವೃತನಾದಾಗ ಬುದ್ಧಿಯು ವ್ಯಸನದಲ್ಲಿ ಬಿದ್ದು ಭಿನ್ನವಾದ ಹಡಗಿನಂತೆ ಶಿಥಿಲವಾಗುತ್ತದೆ.

ಅಹಂ ಚ ತ್ವಂ ಚ ಯೇ ಚಾನ್ಯೇ ಭವಿಷ್ಯನ್ತಿ ಸುರಾಧಿಪಾಃ ।
ತೇ ಸರ್ವೇ ಶಕ್ರ ಯಾಸ್ಯನ್ತಿ ಮಾರ್ಗಮಿನ್ದ್ರಶತೈರ್ಗತಮ್ ॥೩೯॥

ನಾನೇ ಆಗಲೀ ; ನೀನೇ ಆಗಲೀ ; ಬೇರೆ ಯಾರೇ ಆಗಲೀ–ಒಳ್ಳೆಯ ಕಾಲವು ಪ್ರಾಪ್ತವಾದಾಗ ದೇವತೆಗಳಿಗೆ ಅಧಿಪತಿಗಳೇ ಆಗುತ್ತಾರೆ. ಅಂತಹ ದೇವಾಧಿಪತಿಗಳೆಲ್ಲರೂ ಕಾಲಪೀಡಿತರಾಗಿ ಹಿಂದಿನ ಅನೇಕ ನೂರು ಇಂದ್ರರು ಹೋದ ಮಾರ್ಗವನ್ನೇ ಹಿಡಿದು ಹೊರಟುಹೋಗುತ್ತಾರೆ.

ತ್ವಾಮಪ್ಯೇವಂ ಸುದುರ್ಧರ್ಷಂ ಜ್ವಲನ್ತಂ ಪರಯಾ ಶ್ರಿಯಾ ।
ಕಾಲೇ ಪರಿಣತೇ ಕಾಲಃ ಕಾಲಯಿಷ್ಯತಿ ಮಾಮಿವ ॥೪೦॥

ನೀನಿಂದು ಶತ್ರುಗಳಿಂದ ಎದುರಿಸಲು ಅಸಾಧ್ಯನಾಗಿರುವೆ. ಮಹಾತೇಜಸ್ಸಿನಿಂದ ಪ್ರಜ್ವಲಿಸುತ್ತಿರುವೆ. ಕಾಲವು ಪಕ್ವವಾದೊಡನೆಯೇ ಕಾಲಪುರುಷನು ನನ್ನನ್ನು ವಿನಾಶಗೊಳಿಸಿರುವಂತೆಯೇ ಇಂತಹ ನಿನ್ನನ್ನೂ ವಿನಾಶಗೊಳಿಸುತ್ತಾನೆ.

ಬಹೂನೀನ್ದ್ರಸಹಸ್ರಾಣಿ ದೈವತಾನಾಂ ಯುಗೇ ಯುಗೇ ।
ಅಭ್ಯತೀತಾನಿ ಕಾಲೇನ ಕಾಲೋ ಹಿ ದುರತಿಕ್ರಮಃ ॥೪೧॥

ಯುಗ-ಯುಗಗಳಲ್ಲಿಯೂ (ಪ್ರತಿಯೊಂದು ಮನ್ವಂತರಗಳಲ್ಲಿಯೂ) ಇಂದ್ರರ ಪರಿವರ್ತನೆಯಾಗುತ್ತಲೇ ಇರುವುದರಿಂದ ಇದುವರೆಗೆ ದೇವತೆಗಳಲ್ಲಿ ನಿನ್ನಂತಹ ಸಾವಿರಾರು ಇಂದ್ರರು ಕಾಲವಶರಾಗಿ ಹೋದರು. ಕಾಲವೆಂಬುದು ನಿಶ್ಚಯವಾಗಿಯೂ ಅತಿಕ್ರಮಿಸಲು ಅಸಾಧ್ಯವಾದುದು.

ಇದಂ ತು ಲಬ್ಧ್ವಾ ಸಂಸ್ಥಾನಮಾತ್ಮಾನಂ ಬಹು ಮನ್ಯಸೇ ।
ಸರ್ವಭೂತಭವಂ ದೇವಂ ಬ್ರಹ್ಮಾಣಮಿವ ಶಾಶ್ವತಮ್ ॥೪೨॥

ನ ಚೇದಮಚಲಂ ಸ್ಥಾನಮನನ್ತಂ ವಾಪಿ ಕಸ್ಯಚಿತ್ ।
ತ್ವಂ ತು ಬಾಲಿಶಯಾ ಬುದ್ಧ್ಯಾ ಮಮೇದಮಿತಿ ಮನ್ಯಸೇ ॥೪೩॥

ಇಂತಹ ಅಶಾಶ್ವತವಾದ ಸ್ಥಾನವನ್ನು ಪಡೆದಿರುವ ನೀನು–ನಿನ್ನನ್ನು ಸರ್ವಪ್ರಾಣಿಗಳ ಉತ್ಪತ್ತಿಗೂ ಕಾರಣನಾದ, ದೇವದೇವನಾದ, ಶಾಶ್ವತನಾದ ಬ್ರಹ್ಮನಂತೆಯೇ ಮಹಾತ್ಮನೆಂಬುದಾಗಿ ಭಾವಿಸಿಕೊಂಡುಬಿಟ್ಟಿರುವೆ. ಈ ಇಂದ್ರಪದವಿಯು ಯಾರಿಗೇ ಆದರೂ ಅವಿಚಲವಾದುದೂ ಅಲ್ಲ ; ಅನಂತ ಕಾಲದವರೆಗೂ ಇರತಕ್ಕುದೂ ಅಲ್ಲ. ನೀನಾದರೋ ಮೂಢಬುದ್ಧಿಯಿಂದ, ಈ ಇಂದ್ರಪದವಿಯು 'ಎಂದೆಂದಿಗೂ ನನ್ನದೇ' – ಎಂದು ಭಾವಿಸಿರುವೆ.

ಅವಿಶ್ವಸ್ತೇ ವಿಶ್ವಸಿಷಿ ಮನ್ಯಸೇ ವಾಧ್ರುವೇ ಧ್ರುವಮ್ ।
ನಿತ್ಯಂ ಕಾಲಪರೀತಾತ್ಮಾ ಭವತ್ಯೇವಂ ಸುರೇಶ್ವರ ॥೪೪॥

ವಿಶ್ವಾಸವನ್ನಿಡಲಾಗದ ಈ ವೈಭವದ ವಿಷಯದಲ್ಲಿ ನೀನು ವಿಶ್ವಾಸವನ್ನಿಟ್ಟುಕೊಂಡಿರುವೆ. ಅಶಾಶ್ವತವಾದ ಈ ಇಂದ್ರಪದವಿಯನ್ನು ಶಾಶ್ವತವಾದುದೆಂದು ಭಾವಿಸಿರುವೆ. ಸುರೇಶ್ವರ! ಕಾಲಪುರುಷನಿಂದ ಆಕ್ರಾಂತನಾದವನು–ಇಂತಹ ವೈಪರೀತ್ಯಭಾವನೆಯನ್ನೇ ಹೊಂದುತ್ತಾನೆ.

ಮಮೇಯಮಿತಿ ಮೋಹಾತ್ತ್ವಂ ರಾಜಶ್ರಿಯಮಭೀಪ್ಸಸಿ ।
ನೇಯಂ ತವ ನ ಚಾಸ್ಮಾಕಂ ನ ಚಾನ್ಯೇಷಾಂ ಸ್ಥಿರಾ ಸದಾ ॥೪೫॥

'ಇದು ನನ್ನದು ; ನನ್ನಲ್ಲಿಯೇ ಶಾಶ್ವತವಾಗಿರುತ್ತದೆ' – ಎಂಬ ಮೋಹದಿಂದ ನೀನು ಈ ರಾಜ್ಯಸಂಪತ್ತನ್ನು ಬಯಸುತ್ತಿರುವೆ. ಆದರೆ ಈ ರಾಜ್ಯಶ್ರೀಯು ನಿರಂತರವಾಗಿ ನಿನ್ನಲ್ಲಿಯೂ ಇರುವುದಿಲ್ಲ ; ನನ್ನಲ್ಲಿಯೂ ಇರುವುದಿಲ್ಲ ; ಇತರರಲ್ಲಿಯೂ ಇರುವುದಿಲ್ಲ.

ಅತಿಕ್ರಮ್ಯ ಬಹೂನನ್ಯಾಂಸ್ತ್ವಯಿ ತಾವದಿಯಂ ಗತಾ ।
ಕಂಚಿತ್ಕಾಲಮಿಯಂ ಸ್ಥಿತ್ವಾ ತ್ವಯಿ ವಾಸವ ಚಞ್ಚಲಾ ।
ಗೌರ್ನಿಪಾನಮಿವೋತ್ಸೃಜ್ಯ ಪುನರನ್ಯಂ ಗಮಿಷ್ಯತಿ ॥೪೬॥

ವಾಸವ! ಈ ಚಂಚಲಸ್ವಭಾವದ ರಾಜ್ಯಲಕ್ಷ್ಮಿಯು ಅನೇಕಾನೇಕ ಇಂದ್ರರನ್ನು ಅತಿಕ್ರಮಿಸಿ ಈಗ ನಿನ್ನ ಬಳಿಗೆ ಬಂದಿರುತ್ತಾಳೆ. ನಿನ್ನ ಬಳಿ

ಯಲ್ಲಿಯೂ ಸ್ವಲ್ಪಕಾಲವಿದ್ದು–ಹಸುವು ನೀರು ಕುಡಿದ ನಂತರ ಜಲಾಶಯವನ್ನು ಪರಿತ್ಯಜಿಸಿ ಹೊರಟುಹೋಗುವಂತೆ–ನಿನ್ನನ್ನು ಪರಿತ್ಯಜಿಸಿ ಮತ್ತೊಬ್ಬನ ಬಳಿಗೆ ಹೊರಟುಹೋಗುತ್ತಾಳೆ.

ರಾಜಲೋಕಾ ಹ್ಯತಿಕ್ರಾನ್ತಾ ಯಾನ್ನ ಸಂಖ್ಯಾತುಮುತ್ಸಹೇ ।
ತ್ವತ್ತೋ ಬಹುತರಾಶ್ಚಾನ್ಯೇ ಭವಿಷ್ಯನ್ತಿ ಪುರಂದರ ॥೪೭॥

ರಾಜ್ಯಲಕ್ಷ್ಮಿಯು ಇದುವರೆಗೆ ಎಷ್ಟು ಮಂದಿ ರಾಜರನ್ನು ಬಿಟ್ಟು ಹೋಗಿರುವಳೆಂಬುದನ್ನು ಎಣಿಕೆಮಾಡಿ ಹೇಳಲಾರೆನು. ನಿನ್ನ ನಂತರವೂ ಅನೇಕರು ಇಂದ್ರರಾಗಲಿದ್ದಾರೆ.

ಸವೃಕ್ಷೌಷಧಿರತ್ನೇಯಂ ಸಹಸತ್ತ್ವವನಾಕರಾ ।
ತಾನಿದಾನೀಂ ನ ಪಶ್ಯಾಮಿ ಯೈರ್ಭುಕ್ತೇಯಂ ಪುರಾ ಮಹೀ ॥೪೮॥

ವೃಕ್ಷಗಳಿಂದಲೂ, ಓಷಧಿಲತೆಗಳಿಂದಲೂ, ನಾನಾವಿಧವಾದ ವಜ್ರ-ವೈಡೂರ್ಯಾದಿ ರತ್ನಗಳಿಂದಲೂ, ಪ್ರಾಣಿಗಳಿಂದಲೂ, ವನಗಳಿಂದಲೂ, ಗಣಿಗಳಿಂದಲೂ ಸಮೃದ್ಧಳಾದ ಈ ಭೂಮಿಯನ್ನು ಉಪಭೋಗಿಸಿದ ಸಾವಿರಾರು ರಾಜರನ್ನು ನಾನೀಗ ಕಾಣುತ್ತಿಲ್ಲ. ಆದರೆ ಅಂತಹ ಕೆಲವರ ನಾಮಧೇಯಗಳನ್ನು ಮಾತ್ರ ಹೇಳುತ್ತೇನೆ.

ಪೃಥುರೈಲೋ ಮಯೋ ಭೀಮೋ ನರಕಃ ಶಮ್ಬರಸ್ತಥಾ ।
ಅಶ್ವಗ್ರೀವಃ ಪುಲೋಮಾ ಚ ಸ್ವರ್ಭಾನುರಮಿತಧ್ವಜಃ ॥೪೯॥
ಪ್ರಹ್ರಾದೋ ನಮುಚಿರ್ದಕ್ಷೋ ವಿಪ್ರಚಿತ್ತಿರ್ವಿರೋಚನಃ ।
ಹ್ರೀನಿಷೇವಃ ಸುಹೋತ್ರಶ್ಚ ಭೂರಿಹಾ ಪುಷ್ಪವಾನ್ವೃಷಃ ॥೫೦॥

ಸತ್ಯೇಷುರ್ಋಷಭೋ ಬಾಹುಃ ಕಪಿಲಾಶ್ವೋ ವಿರೂಪಕಃ ।
ಬಾಣಃ ಕಾರ್ತಸ್ವರೋ ವಹ್ನಿರ್ವಿಶ್ವದಂಷ್ಟ್ರೋಽಥ ನೈರ್ಋತಿಃ ॥೫೧॥

ಸಂಕೋಚೋಽಥ ವರೀತಾಕ್ಷೋ ವರಾಹಾಶ್ವೋ ರುಚಿಪ್ರಭಃ ।
ವಿಶ್ವಜಿತ್ಪ್ರತಿರೂಪಶ್ಚ ವೃಷಾಣ್ಡೋ ವಿಷ್ಕರೋ ಮಧುಃ ॥೫೨॥
ಹಿರಣ್ಯಕಶಿಪುಶ್ಚೈವ ಕೈಟಭಶ್ಚೈವ ದಾನವಃ ।
ದೈತೇಯದಾನವಾಶ್ಚೈವ ಸರ್ವೇ ತೇ ನೈರ್ಋತೈಃ ಸಹ ॥೫೩॥

ಏತೇ ಚಾನ್ಯೇ ಚ ಬಹವಃ ಪೂರ್ವೇ ಪೂರ್ವತರಾಶ್ಚ ಯೇ ।
ದೈತ್ಯೇನ್ದ್ರಾ ದಾನವೇನ್ದ್ರಾಶ್ಚ ಯಾಂಶ್ಚಾನ್ಯಾನನುಶುಶ್ರುಮ ॥೫೪॥

ಬಹವಃ ಪೂರ್ವದೈತ್ಯೇನ್ದ್ರಾಃ ಸಂತ್ಯಜ್ಯ ಪೃಥಿವೀಂ ಗತಾಃ ।
ಕಾಲೇನಾಭ್ಯಾಹತಾಃ ಸರ್ವೇ ಕಾಲೋ ಹಿ ಬಲವತ್ತರಃ ॥೫೫॥

ಪೃಥು, ಇಲಾಪುತ್ರನಾದ ಪುರೂರವಸ, ಮಯ, ಭೀಮ, ನರಕಾಸುರ, ಶಂಬರಾಸುರ, ಅಶ್ವಗ್ರೀವ, ಪುಲೋಮಾ, ಸ್ವರ್ಭಾನು, ಅಮಿತಧ್ವಜ, ಪ್ರಹ್ಲಾದ, ನಮುಚಿ, ದಕ್ಷ, ವಿಪ್ರಚಿತ್ತಿ, ವಿರೋಚನ, ಹ್ರೀನಿಷೇವ, ಸುಹೋತ್ರ, ಭೂರಿಹಣ, ಪುಷ್ಪವಂತ, ವೃಷ, ಸತ್ಯೇಷು, ಋಷಭ, ಬಾಹು, ಕಪಿಲಾಶ್ವ, ವಿರೂಪಕ, ಬಾಣ, ಕಾರ್ತಸ್ವರ, ವಹ್ನಿ, ವಿಶ್ವದಂಷ್ಟ್ರ, ನೈರ್ಋತಿ, ಸಂಕೋಚ, ವರೀತಾಕ್ಷ, ವರಾಹಾಶ್ವ, ರುಚಿಪ್ರಭ, ವಿಶ್ವಜಿತ್, ಪ್ರತಿರೂಪ, ವೃಷಾಣ್ಡ, ವಿಷ್ಕರ, ಮಧು, ಹಿರಣ್ಯಕಶಿಪು ಮತ್ತು ಕೈಟಭ–ಇವರುಗಳೂ, ಇನ್ನೂ ಅನೇಕ ದೈತ್ಯ-ದಾನವ-ರಾಕ್ಷಸರೂ ಈ ಪೃಥ್ವಿಗೆ ಒಡೆಯರಾಗಿದ್ದರು. ಹಿಂದಿನ ಮತ್ತೂ ಬಹಳ ಹಿಂದಿನ ಈ ರಾಜರೇ ಅಲ್ಲದೇ ನಾವು ಕೇಳಿರುವ ಇನ್ನೂ ಅನೇಕ ದೈತ್ಯೇಂದ್ರರೂ ಮತ್ತು ದಾನವೇಂದ್ರರೂ ಕಾಲಪೀಡಿತರಾಗಿ ಪೃಥ್ವಿಯನ್ನು ಪರಿತ್ಯಜಿಸಿ ಹೊರಟುಹೋಗಿರುವರು. ನಿಶ್ಚಯವಾಗಿಯೂ ಕಾಲವು ಮಹಾಬಲಿಷ್ಠವಾದುದು. ಯಾರನ್ನೂ ಶಾಶ್ವತವಾಗಿ ಇರಗೊಡುವುದಿಲ್ಲ.

ಸರ್ವೈಃ ಕ್ರತುಶತೈರಿಷ್ಟಂ ನ ತ್ವಮೇಕಃ ಶತಕ್ರತುಃ ॥೫೬॥

ಸರ್ವೇ ಧರ್ಮಪರಾಶ್ಚಾಸನ್ಸರ್ವೇ ಸತತಸತ್ರಿಣಃ ।
ಅನ್ತರಿಕ್ಷಚರಾಃ ಸರ್ವೇ ಸರ್ವೇಽಭಿಮುಖಯೋಧಿನಃ ॥೫೭॥

ಶಕ್ರ! ‘ನೂರು ಅಶ್ವಮೇಧಯಾಗಗಳನ್ನು ನಾನೊಬ್ಬನೇ ಮಾಡಿರುವೆನು’–ಎಂದು ನೀನು ಭಾವಿಸಬೇಡ. ನಾನು ಹೇಳಿರುವ ಈ ಎಲ್ಲರೂ ನೂರು-ನೂರು ಯಜ್ಞಗಳನ್ನೇ ಮಾಡಿದ್ದರು. ಎಲ್ಲರೂ ಧರ್ಮಪರಾಯಣರಾಗಿದ್ದರು. ಎಲ್ಲರೂ ಸತ್ರಗಳಲ್ಲಿಯೇ ನಿರತರಾಗಿರುತ್ತಿದ್ದರು. ಎಲ್ಲರೂ ಅಂತರಿಕ್ಷದಲ್ಲಿ ಪ್ರಯಾಣಮಾಡುವ ಸಾಮರ್ಥ್ಯವನ್ನು ಹೊಂದಿದ್ದರು. ಅವರೆಲ್ಲರೂ ಶತ್ರುವಿಗೆ ಅಭಿಮುಖರಾಗಿ ನಿಂತು ಯುದ್ಧಮಾಡುತ್ತಿದ್ದರು.

ಸರ್ವೇ ಸಂಹನನೋಪೇತಾಃ ಸರ್ವೇ ಪರಿಘಬಾಹವಃ ।
ಸರ್ವೇ ಮಾಯಾಶತಧಾರಾಃ ಸರ್ವೇ ತೇ ಕಾಮರೂಪಿಣಃ ॥೫೮॥

ಅವರೆಲ್ಲರೂ ಶರೀರದಾರ್ಢ್ಯವುಳ್ಳವರಾಗಿದ್ದರು. ಅವರ ಬಾಹುಗಳೂ ಪರಿಘಾಯುಧಕ್ಕೆ ಸಮಾನವಾಗಿದ್ದುವು. ಎಲ್ಲರೂ ನೂರಾರು ಮಾಯೆಗಳನ್ನು ತಿಳಿದವರಾಗಿದ್ದರು. ತಮಗೆ ಬೇಕು-ಬೇಕಾದಂತಹ ರೂಪಗಳನ್ನು ಧರಿಸು ತ್ತಿದ್ದರು.

ಸರ್ವೇ ಸಮರಮಾಸಾದ್ಯ ನ ಶ್ರೂಯನ್ತೇ ಪರಾಜಿತಾಃ ।
ಸರ್ವೇ ಸತ್ಯವ್ರತಪರಾಃ ಸರ್ವೇ ಕಾಮವಿಹಾರಿಣಃ ॥೫೯॥

ಎಲ್ಲರೂ ಸಮರಾಂಗಣಕ್ಕೆ ಹೋದರೆಂದರೆ ಪರಾಜಿತರಾದರೆಂಬ ವಾರ್ತೆಯು ಯಾವಾಗಲೂ ಕೇಳಿಬರುತ್ತಿರಲಿಲ್ಲ. ಯಾವುದೇ ಯುದ್ಧ ದಲ್ಲಾಗಲೀ ವಿಜಯಿಗಳಾಗಿಯೇ ಹಿಂದಿರುಗುತ್ತಿದ್ದರು. ಎಲ್ಲರೂ ಸತ್ಯವ್ರತ ನಿಷ್ಠರಾಗಿದ್ದರು. ಇಚ್ಛಾನುಸಾರವಾಗಿ ಎಲ್ಲೆಡೆಗಳಲ್ಲಿಯೂ ವಿಹರಿಸುತ್ತಿದ್ದರು.

ಸರ್ವೇ ವೇದವ್ರತಪರಾಃ ಸರ್ವೇ ಚೈವ ಬಹುಶ್ರುತಾಃ ।
ಸರ್ವೇ ಸಮ್ಮತಮೈಶ್ವರ್ಯಮೀಶ್ವರಾಃ ಪ್ರತಿಪೇದಿರೇ ॥೬೦॥

ಎಲ್ಲರೂ ವೇದೋಕ್ತವ್ರತಗಳಲ್ಲಿ ಆಸಕ್ತರೇ ಆಗಿದ್ದರು. ಎಲ್ಲರೂ ಅನೇಕಶಾಸ್ತ್ರಗಳಲ್ಲಿ ವಿದ್ವಾಂಸರಾಗಿದ್ದರು. ಲೋಕೇಶ್ವರರಾಗಿದ್ದ ಅವರು ಮನೋವಾಂಛಿತವಾದ ಐಶ್ವರ್ಯವನ್ನು ಹೊಂದಿದವರಾಗಿದ್ದರು.

ನ ಚೈಶ್ವರ್ಯಮದಸ್ತೇಷಾಂ ಭೂತಪೂರ್ವೋ ಮಹಾತ್ಮನಾಮ್ ।
ಸರ್ವೇ ಯಥಾರ್ಹದಾತಾರಃ ಸರ್ವೇ ವಿಗತಮತ್ಸರಾಃ ॥೬೧॥

ಮಹಾತ್ಮರಾದ ಆ ಲೋಕೇಶ್ವರರಿಗೆ ಹಿಂದೆ ಯಾವಾಗಲೂ ಐಶ್ವರ್ಯ ಮದವೆಂಬುದೇ ಇರಲಿಲ್ಲ. ಅವರೆಲ್ಲರೂ ಯಥಾಯೋಗ್ಯವಾಗಿ ದಾನ ಮಾಡುತ್ತಿದ್ದರು. ಈರ್ಷ್ಯಾ-ದ್ವೇಷಗಳಿಂದ ರಹಿತರಾಗಿದ್ದರು.

ಸರ್ವೇ ಸರ್ವೇಷು ಭೂತೇಷು ಯಥಾವತ್ಪ್ರತಿಪೇದಿರೇ ।
ಸರ್ವೇ ದಾಕ್ಷಾಯಣೀಪುತ್ರಾಃ ಪ್ರಾಜಾಪತ್ಯಾ ಮಹಾಬಲಾಃ ॥೬೨॥

ಆ ಎಲ್ಲ ರಾಜರೂ ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಯಥಾಯೋಗ್ಯವಾಗಿ ವ್ಯವಹರಿಸುತ್ತಿದ್ದರು. ಅವರೆಲ್ಲರೂ ದಕ್ಷಕನ್ಯೆಯರ ಗರ್ಭದಲ್ಲಿ ಹುಟ್ಟಿದವರಾಗಿದ್ದರು. ಮಹಾಬಲಿಷ್ಠರಾಗಿದ್ದ ಅವರೆಲ್ಲರೂ ಕಶ್ಯಪಪ್ರಜಾಪತಿಯ ಮಕ್ಕಳಾಗಿದ್ದರು.

ಜ್ವಲನ್ತಃ ಪ್ರತಪನ್ತಶ್ಚ ಕಾಲೇನ ಪ್ರತಿಸಂಹೃತಾಃ ।
ತ್ವ ಚೈವೇಮಾಂ ಯದಾ ಭುಕ್ತ್ವಾ ಪೃಥಿವೀಂ ತ್ಯಕ್ಷಸೇ ಪುನಃ ।
ನ ಶಕ್ಷ್ಯಸಿ ತದಾ ಶಕ್ರ ನಿಯನ್ತುಂ ಶೋಕಮಾತ್ಮನಃ ॥೬೩॥

ಆ ಎಲ್ಲ ರಾಜರೂ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದರು. ಶತ್ರುಗಳಿಗೆ ಪರಿತಾಪವನ್ನುಂಟುಮಾಡುತ್ತಿದ್ದರು. ಅಂತಹ ಮಹಾನುಭಾವರೆಲ್ಲರೂ ಕಾಲನಿಂದಲೇ ಸಂಹೃತರಾದರು. ನೀನಾದರೂ ಅವರಂತೆಯೇ ಈ ವಿಸ್ತಾರ ವಾದ ರಾಜ್ಯವನ್ನು ಉಪಭೋಗಿಸಿ ಕಾಲವು ಸನ್ನಿಹಿತವಾದೊಡನೆಯೇ ಇದನ್ನು ಪರಿತ್ಯಜಿಸಲೇಬೇಕಾಗುತ್ತದೆ. ಆದರೆ ಅಂತಹ ಸಮಯದಲ್ಲಿ ನೀನು ನಿನ್ನ ಶೋಕವನ್ನು ತಡೆದುಕೊಳ್ಳಲು ಸಮರ್ಥನಾಗುವುದಿಲ್ಲ.

ಮುಞ್ಚೇಚ್ಛಾಂ ಕಾಮಭೋಗೇಷು ಮುಞ್ಚೇಮಂ ಶ್ರೀಭವಂ ಮದಮ್ ।
ಏವಂ ಸ್ವರಾಜ್ಯನಾಶೇ ತ್ವಂ ಶೋಕಂ ಸಮ್ಪ್ರಸಹಿಷ್ಯಸಿ ॥೬೪॥

ಇಂದ್ರಪದವಿಯನ್ನು ಪರಿತ್ಯಾಗಮಾಡಬೇಕಾಗಿ ಬಂದಾಗ ಉಂಟಾಗುವ ಶೋಕವನ್ನು ತಡೆದುಕೊಳ್ಳಲು ಇಚ್ಛಿಸುವೆಯಾದರೆ–ಈಗಿನಿಂದಲೇ ನೀನು ಕಾಮಭೋಗಗಳ ಮೇಲಿನ ಇಚ್ಛೆಯನ್ನು ತೊರೆದುಬಿಡು. ರಾಜ್ಯಶ್ರೀಲಾಭ ದಿಂದ ಉಂಟಾಗಿರುವ ಮದವನ್ನು ದೂರೀಕರಿಸು. ಹಾಗೆ ಮಾಡಿದಲ್ಲಿ ಸ್ವರಾಜ್ಯನಾಶದ ಸಮಯದಲ್ಲಿ ನೀನು ಶೋಕವನ್ನು ಸಹಿಸಿಕೊಳ್ಳಲು ಸಮರ್ಥನಾಗುವೆ.

ಶೋಕಕಾಲೇ ಶುಚೋ ಮಾ ತ್ವಂ ಹರ್ಷಕಾಲೇ ಚ ಮಾ ಹೃಷಃ ।
ಅತೀತಾನಾಗತಂ ಹಿತ್ವಾ ಪ್ರತ್ಯುತ್ಪನ್ನೇನ ವರ್ತಯ ॥೬೫॥

ನೀನು ಶೋಕವು ಪ್ರಾಪ್ತವಾದಾಗ ಶೋಕಪಡಬೇಡ. ಅಂತೆಯೇ ಸಂತೋಷದ ಕಾಲದಲ್ಲಿ ಹಿರಿಹಿಗ್ಗಬೇಡ. ಹಿಂದಾದುದನ್ನೂ–ಮುಂದಾಗುವುದನ್ನೂ ಯೋಚಿಸಹೋಗದೇ ವರ್ತಮಾನಕಾಲದಲ್ಲಿ ಯಾವ ವಸ್ತುವು ಉಪಲಬ್ಧವಾಗುವುದೋ–ಅದರಿಂದಲೇ ಜೀವನದ ನಿರ್ವಹಣೆಯನ್ನು ಮಾಡು.

ಮಾಂ ಚೇದಭ್ಯಾಗತಃ ಕಾಲಃ ಸದಾ ಯುಕ್ತಮತನ್ದ್ರಿತಃ ।
ಕ್ಷಮಸ್ವ ನಚಿರಾದಿನ್ದ್ರ ತ್ವಾಮಪ್ಯುಪಗಮಿಷ್ಯತಿ ॥೬೭॥

ಇಂದ್ರ! ನಾನು ಯಾವಾಗಲೂ ಸತ್ಕಾರ್ಯಗಳಲ್ಲಿಯೇ ತತ್ಪರನಾಗಿರುತ್ತಿದ್ದೆನು. ನಿದ್ರಾಲಸ್ಯಗಳಿಲ್ಲದ ಕಾಲನು ನನ್ನಂತಹವನನ್ನೇ ಆಕ್ರಮಿಸಿದನೆಂದಮೇಲೆ–ನಿನ್ನನ್ನೂ ಅವನು ಖಂಡಿತವಾಗಿಯೂ ಬಿಡಲಾರನು. ಬಹಳ ಶೀಘ್ರವಾಗಿಯೇ ಕಾಲನು ನಿನ್ನನ್ನೂ ಆಕ್ರಮಿಸುವನು. ನಿನಗೆ ಅಪ್ರಿಯವಾಗಿರುವ ಸತ್ಯಸಂಗತಿಯನ್ನು ಹೇಳುತ್ತಿರುವುದಕ್ಕಾಗಿ ನನ್ನನ್ನು ಕ್ಷಮಿಸಿಬಿಡು.

ತ್ರಾಸಯನ್ನಿವ ದೇವೇನ್ದ್ರ ವಾಗ್ಭಿಸ್ತಕ್ಷಸಿ ಮಾಮಿಹ ।
ಸಂಯತೇ ಮಯಿ ನೂನಂ ತ್ವಮಾತ್ಮಾನಂ ಬಹು ಮನ್ಯಸೇ ॥೬೭॥

ದೇವೇಂದ್ರ! ನನ್ನನ್ನು ಭಯಪಡಿಸುತ್ತಿರುವವನಂತೆ ಮಾತುಗಳಿಂದ ಚುಚ್ಚುತ್ತಿರುವೆ. ನಾನು ನನ್ನ ಮನಸ್ಸನ್ನು ಸಂಯಮಗೊಳಿಸಿ ಶಾಂತನಾಗಿ ಕುಳಿತಿರುವೆನು. ಇದರಿಂದಲೇ ನೀನು ನಿನ್ನನ್ನು ಮಹಾಮಹಿಮನೆಂದು ಭಾವಿಸಿಕೊಂಡುಬಿಟ್ಟಿರುವೆ.

ಕಾಲಃ ಪ್ರಥಮಮಾಯಾನ್ಮಾಂ ಪಶ್ಚಾತ್ತ್ವಾಮನುಧಾವತಿ ।
ತೇನ ಗರ್ಜಸಿ ದೇವೇನ್ದ್ರ ಪೂರ್ವಂ ಕಾಲಹತೇ ಮಯಿ ॥೬೮॥

ಕಾಲನು ಮೊದಲು ನನ್ನನ್ನು ಆಕ್ರಮಿಸಿದನು. ಮುಂದೆ ಅದೇ ಕಾಲನೇ ನಿನ್ನ ಬೆನ್ನಟ್ಟಿಯೂ ಬರುತ್ತಾನೆ. ದೇವೇಂದ್ರ! ಕಾಲಪೀಡಿತನಾಗಿ ಇಲ್ಲಿ ನಾನು ಇರುತ್ತಿರಲಾಗಿ ನೀನು ನನ್ನ ಮುಂದೆ ಗರ್ಜನೆಮಾಡುತ್ತಿರುವೆ.

(ನಾನು ಕಾಲನಿಂದ ನಿಪೀಡಿತನಾಗಿರದಿದ್ದರೆ ನಿನ್ನ ಗರ್ಜನೆಗೆ ಅವ

ಕಾಶವೇ ಇರುತ್ತಿರಲಿಲ್ಲ. ನಾನು ಈ ಅವಸ್ಥೆಯಲ್ಲಿಯೂ ಇರುತ್ತಿರಲಿಲ್ಲ. ಕಾಲವಶನಾಗಿ ರಾಜ್ಯಶ್ರೀಯಿಂದ ಭ್ರಷ್ಟನಾಗಿರುವ ನನ್ನನ್ನು ನೀನು ನಿನ್ನ ಭುಜಬಲ-ಪರಾಕ್ರಮಗಳಿಂದಲೇ ರಾಜ್ಯಭ್ರಷ್ಟನನ್ನಾಗಿ ಮಾಡಿರುವೆನೆಂದು ಭಾವಿಸಿಕೊಂಡು ನನ್ನ ಮುಂದೆ ಗರ್ಜಿಸುತ್ತಿರುವೆ.)

ಕೋ ಹಿ ಸ್ಥಾತುಮಲಂ ಲೋಕೇ ಮಮ ಕ್ರುದ್ಧಸ್ಯ ಸಂಯುಗೇ ।
ಕಾಲಸ್ತು ಬಲವಾನ್ಪ್ರಾಪ್ತಸ್ತೇನ ತಿಷ್ಠಸಿ ವಾಸವ ॥೯॥

ವಾಸವ! ಕ್ರುದ್ಧನಾದ ನನ್ನ ಮುಂದೆ ಯುದ್ಧದಲ್ಲಿ ಯಾರು ತಾನೇ ನಿಲ್ಲಲು ಸಮರ್ಥರಾಗಿದ್ದರು? ಕಾಲನು ಮಹಾಬಲಿಷ್ಠನಾದವನು. ಅವನು ಈ ಮೊದಲೇ ನನ್ನ ಬಲ-ಪರಾಕ್ರಮಗಳನ್ನು ನಾಶಗೊಳಿಸಿಬಿಟ್ಟಿದ್ದಾನೆ. ಆ ಕಾರಣದಿಂದ ನೀನೀಗ ಧೈರ್ಯವಾಗಿ ನನ್ನ ಮುಂದೆ ನಿಂತಿರುವೆ.

ಯತ್ತದ್ವರ್ಷಸಹಸ್ರಾನ್ತಂ ಪೂರ್ಣಂ ಭವಿತುಮರ್ಹತಿ ॥೨೦॥

ಯಥಾ ಮೇ ಸರ್ವಗಾತ್ರಾಣಿ ನ ಸುಸ್ಥಾನಿ ಮಹೌಜಸಃ ।
ಅಹಮೈನ್ದ್ರಾಚ್ಚ್ಯುತಃ ಸ್ಥಾನಾತ್ತ್ವಮಿನ್ದ್ರಃ ಪ್ರಕೃತೋ ದಿವಿ ॥೨೧॥

ದೇವತೆಗಳ ಆ ಒಂದುಸಾವಿರ ವರ್ಷಗಳು ಮುಗಿಯುವವರೆಗೂ ನೀನು ಇಂದ್ರಪದವಿಯಲ್ಲಿರುವೆ. ಕಾಲನ ಪ್ರಭಾವದಿಂದಾಗಿ ಮಹಾಪರಾಕ್ರಮಿಯಾದ ನನ್ನ ಅಂಗಾಂಗಗಳು ಶೈಥಿಲ್ಯವನ್ನು ಹೊಂದಿವೆ. ಈ ಕಾರಣದಿಂದಲೇ ನಾನು ಇಂದ್ರಪದವಿಯಿಂದ ಚ್ಯುತನಾಗಿದ್ದೇನೆ. ಈಗ ನೀನು ಸ್ವರ್ಗದಲ್ಲಿ ಇಂದ್ರಪದವಿಯನ್ನು ಪಡೆದುಕೊಂಡಿರುವೆ.

ಸುಚಿತ್ರೇ ಜೀವಲೋಕೇಽಸ್ಮಿನ್ನುಪಾಸ್ಯಃ ಕಾಲಪರ್ಯಯಾತ್ ।
ಕಿಂ ಹಿ ಕೃತ್ವಾ ತ್ವಮಿನ್ದ್ರೋಽದ್ಯ ಕಿಂ ವಾ ಕೃತ್ವಾ ವಯಂ ಚ್ಯುತಾಃ ॥೨೨॥

ವಿಚಿತ್ರತರವಾದ ಈ ಜೀವಲೋಕದಲ್ಲಿ ಕಾಲದ ವೈಪರೀತ್ಯದಿಂದಾಗಿ ನೀನಿಂದು ಎಲ್ಲರಿಗೂ ಆರಾಧ್ಯದೇವತೆಯಾಗಿರುವೆ. ಈಗ ನೀನೇ ಹೇಳು. ನೀನು ಯಾವ ಶುಭಕರ್ಮವನ್ನು ಮಾಡಿ ಈ ಇಂದ್ರಪದವಿಯನ್ನು ಪಡೆದುಕೊಂಡೆ? ನಾವು ಯಾವ ಅಶುಭಕಾರ್ಯವನ್ನು ಮಾಡಿ ಅದೇ ಇಂದ್ರಪದವಿಯಿಂದ ಚ್ಯುತರಾದೆವು?

ಕಾಲಃ ಕರ್ತಾ ವಿಕರ್ತಾ ಚ ಸರ್ವಮನ್ಯದಕಾರಣಮ್ ।
ನಾಶಂ ವಿನಾಶಮೈಶ್ವರ್ಯಂ ಸುಖಂ ದುಃಖಂ ಭವಾಭವೌ ।
ವಿದ್ವಾನ್ಪ್ರಾಪ್ಯೈವಮತ್ಯರ್ಥಂ ನ ಪ್ರಹೃಷ್ಯೇನ್ನ ಚ ವ್ಯಥೇತ್ ॥೭೩॥

ಮನುಷ್ಯರ ಅಭ್ಯುದಯಕ್ಕಾಗಲೀ ಅಧಃಪತನಕ್ಕಾಗಲೀ–ಕಾಲನೇ ಕಾರಣನಾಗಿರುತ್ತಾನೆ. ಬೇರೆ ಯಾವುದೇ ಕಾರಣಗಳಿದ್ದರೂ ಅವುಗಳು ನಿಮಿತ್ತಮಾತ್ರಕ್ಕೆ ಕಾರಣಗಳಾಗಿರುವುವೇ ಹೊರತು ಕಾಲವೇ ಎಲ್ಲಕ್ಕೂ ಮುಖ್ಯಕಾರಣವಾಗಿರುತ್ತದೆ. ಆದುದರಿಂದ ವಿದ್ವಾಂಸನು ನಾಶ-ವಿನಾಶ, ಐಶ್ವರ್ಯ-ದಾರಿದ್ರ್ಯ, ಸುಖ-ದುಃಖ, ಅಭ್ಯುದಯ-ಪರಾಭವಗಳನ್ನು ಪರ್ಯಾಯವಾಗಿ ಹೊಂದಿದಾಗ ಬಹಳವಾಗಿ ಸಂತೋಷಪಡಲೂ ಕೂಡದು ; ಬಹಳವಾಗಿ ಶೋಕಿಸಲೂ ಕೂಡದು.

ತ್ವಮೇವ ಹೀನ್ದ್ರ ವೇತ್ಥಾಸ್ಮಾನ್ವೇದಾಹಂ ತ್ವಾಂ ಚ ವಾಸವ ।
ಕಿಂ ಕತ್ಥಸೇ ಮಾಂ ಕಿಂ ಚ ತ್ವಂ ಕಾಲೇನ ನಿರಪತ್ರಪಃ ॥೭೪॥

ಇಂದ್ರ! ನಾವು ಯಾರೆಂಬುದು ನಿನಗೆ ಚೆನ್ನಾಗಿ ತಿಳಿದಿದೆ. ನೀನು ಯಾರೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ಹೀಗಿದ್ದರೂ ನೀನು ಸ್ವಲ್ಪವಾದರೂ ನಾಚಿಕೆಯೇ ಇಲ್ಲದೇ ನನ್ನ ಮುಂದೇಕೆ ವ್ಯರ್ಥವಾಗಿ ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುತ್ತಿರುವೆ?

ತ್ವಮೇವ ಹಿ ಪುರಾ ವೇತ್ಥ ಯತ್ತದಾ ಪೌರುಷಂ ಮಮ ।
ಸಮರೇಷು ಚ ವಿಕ್ರಾನ್ತಂ ಪರ್ಯಾಪ್ತಂ ತನ್ನಿದರ್ಶನಮ್ ॥೭೫॥

ಹಿಂದೆ ನನ್ನಲ್ಲಿ ಎಂತಹ ಪರಾಕ್ರಮವಿದ್ದಿತೆಂಬುದನ್ನು ನೀನೇ ತಿಳಿದಿರುವೆ. ಯುದ್ಧಗಳಲ್ಲಿ ನಾನು ಮಹಾಪರಾಕ್ರಮಿಯಾಗಿದ್ದೆನೆಂಬ ವಿಷಯವೂ ನಿನಗೆ ತಿಳಿದಿದೆ. ಈ ಸಮಯದಲ್ಲಿ ಒಂದೇ ಒಂದು ದೃಷ್ಟಾಂತವನ್ನು ಹೇಳುತ್ತೇನೆ. ನಾನು ಮಹಾಪರಾಕ್ರಮಿಯಾಗಿದ್ದೆನೆಂಬುದಕ್ಕೆ ಆ ಒಂದು ನಿದರ್ಶನವೇ ಸಾಕಾಗಬಹುದು.

ಆದಿತ್ಯಾಶ್ಚೈವ ರುದ್ರಾಶ್ಚ ಸಾಧ್ಯಾಶ್ಚ ವಸುಭಿಃ ಸಹ ।
ಮಯಾ ವಿನಿರ್ಜಿತಾಃ ಪೂರ್ವಂ ಮರುತಶ್ಚ ಶಚೀಪತೇ ॥೭೬॥

ತ್ವಮೇವ ಶಕ್ರ ಜಾನಾಸಿ ದೇವಾಸುರಸಮಾಗಮೇ ॥೭೭॥

ಶಚೀಪತಿಯೇ! ದೇವತೆಗಳಿಗೂ ಮತ್ತು ರಾಕ್ಷಸರಿಗೂ ಘೋರವಾದ ಸಂಗ್ರಾಮವು ನಡೆದಾಗ–ನಾನೊಬ್ಬನೇ ಹನ್ನೆರಡು ಮಂದಿ ಆದಿತ್ಯರನ್ನೂ, ಹನ್ನೊಂದು ಮಂದಿ ರುದ್ರರನ್ನೂ, ಎಂಟು ಮಂದಿ ವಸುಗಳನ್ನೂ, ಸಾಧ್ಯರನ್ನೂ, ಏಳು ಮಂದಿ ಮರುತ್ತರನ್ನೂ ಪರಾಜಯಗೊಳಿಸಿದ್ದೆನು. ಆ ವಿಷಯವೂ ನಿನಗೆ ತಿಳಿದಿದೆ.

ಸಮೇತಾ ವಿಬುಧಾ ಭಗ್ನಾಸ್ತರಸಾ ಸಮರೇ ಮಯಾ ।
ಪರ್ವತಾಶ್ಚಾಸಕೃತ್ಕ್ಷಿಪ್ತಾಃ ಸವನಾಃ ಸವನೌಕಸಃ ॥೭೮॥

ಸಟಙ್ಕಶಿಖರಾ ಭಗ್ನಾಃ ಸಮರೇ ಮೂರ್ಧ್ನಿ ತೇ ಮಯಾ ।
ಕಿಂ ನು ಶಕ್ಯಂ ಮಯಾ ಕರ್ತುಂ ಕಾಲೋ ಹಿ ದುರತಿಕ್ರಮಃ ॥೭೯॥

ಒಟ್ಟಾಗಿ ಯುದ್ಧಕ್ಕೆ ಬಂದಿದ್ದ ಎಲ್ಲ ದೇವತೆಗಳೂ ನನ್ನಿಂದ ಭಗ್ನರಾಗಿ ಹೋದರು. ವನಗಳಿಂದಲೂ ವನವಾಸಿಗಳಿಂದಲೂ ಯುಕ್ತವಾದ ನೂರಾರು ಪರ್ವತಗಳನ್ನೇ ಎತ್ತಿ ನಾನು ಆ ದೇವತೆಗಳ ಕಡೆಗೆ ಎಸೆಯುತ್ತಿದ್ದೆನು. ಆ ಸಮಯದಲ್ಲಿ ನಿನ್ನ ತಲೆಯ ಮೇಲೆ ಅಪ್ಪಳಿಸಿದ ಬಂಡೆಗಳಿಂದ ಯುಕ್ತವಾಗಿದ್ದ ಎಷ್ಟೋ ಶಿಖರಗಳು ಭಿನ್ನವಾಗಿ ಹೋದುವು. ಆದರೆ ಈಗ ನಾನೇನು ತಾನೇ ಮಾಡಲು ಸಾಧ್ಯ? ಕಾಲವೆಂಬುದು ಅನುಲ್ಲಂಘನೀಯವಾದುದು.

ನ ಹಿ ತ್ವಾಂ ನೋತ್ಸಹೇ ಹನ್ತುಂ ಸವಜ್ರಮಪಿ ಮುಷ್ಟಿನಾ ।
ನ ತು ವಿಕ್ರಮಕಾಲೋಽಯಂ ಕ್ಷಮಾಕಾಲೋಽಯಮಾಗತಃ ॥೮೦॥

ನೀನು ವಜ್ರಾಯುಧವನ್ನೇ ಹಿಡಿದುಬಂದಿದ್ದರೂ–ನಾನು ನಿನ್ನನ್ನು ಮುಷ್ಟಿಪ್ರಹಾರದಿಂದಲೇ ಸಂಹರಿಸಲು ಉತ್ಸುಕನಾಗಿಲ್ಲವೆಂದೇನೂ ಅಲ್ಲ. ಈಗಲೂ ನಾನು ನಿನ್ನನ್ನು ಮುಷ್ಟಿಪ್ರಹಾರದಿಂದಲೇ ಸಂಹರಿಸಲು ಸಮರ್ಥನಾಗಿದ್ದೇನೆ. ಆದರೆ ಪರಾಕ್ರಮವನ್ನು ತೋರುವ ಕಾಲವಿದಾಗಿಲ್ಲ. ತಾಳ್ಮೆಯಿಂದಿರಲು ಯೋಗ್ಯವಾದ ಕಾಲವಿದಾಗಿದೆ.

ತೇನ ತ್ವಾಂ ಮರ್ಷಯೇ ಶಕ್ರ ದುರ್ಮರ್ಷಣತರಸ್ತ್ವಯಾ ।

ತಂ ಮಾಂ ಪರಿಣತೇ ಕಾಲೇ ಪರೀತಂ ಕಾಲವಹ್ನಿನಾ ।
ನಿಯತಂ ಕಾಲಪಾಶೇನ ಬದ್ಧಂ ಶಕ್ರ ವಿಕತ್ಥಸೇ ॥೮೧॥

ಈ ಕಾರಣದಿಂದಲೇ ನೀನು ಮಾಡುತ್ತಿರುವ ಅಪರಾಧಗಳೆಲ್ಲವನ್ನೂ ಸಹಿಸಿಕೊಂಡಿರುತ್ತೇನೆ. ಈಗಲೂ ನಾನು ನಿನಗಿಂತಲೂ ದುಸ್ಸಹನಾಗಿದ್ದೇನೆ. ನನ್ನ ಪರಾಕ್ರಮವನ್ನು ಇಂದೂ ನೀನು ಸಹಿಸಿಕೊಳ್ಳಲಾರೆ. ಆದರೆ ನಾನೀಗ ಕಾಲಾಗ್ನಿಯಿಂದ ಸುತ್ತುವರಿಯಲ್ಪಟ್ಟಿದ್ದೇನೆ. ಕಾಲಪಾಶದಿಂದ ಬಂಧಿಸಲ್ಪಟ್ಟಿದ್ದೇನೆ. ಇಂತಹ ಪರಿಸ್ಥಿತಿಯಲ್ಲಿ ನೀನು ನನ್ನ ಮುಂದೆ ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುತ್ತಿರುವೆ.

ಅಯಂ ಸ ಪುರುಷಃ ಶ್ಯಾಮೋ ಲೋಕಸ್ಯ ದುರತಿಕ್ರಮಃ ।
ಬದ್ಧ್ವಾತಿಷ್ಠತಿ ಮಾಂ ರೌದ್ರಃ ಪಶುಂ ರಶನಯಾ ಯಥಾ ॥೮೨॥

ಯಾವ ರೀತಿಯಲ್ಲಿ ಮನುಷ್ಯನು ಯಜ್ಞಪಶುವನ್ನು ಹಗ್ಗದಿಂದ ಕಟ್ಟಿಹಾಕುವನೋ–ಅದೇ ರೀತಿಯಲ್ಲಿ ಶ್ಯಾಮಲವರ್ಣನಾಗಿರುವ, ಲೋಕದ ಜನರಿಂದ ಅತಿಕ್ರಮಿಸಲು ದುಃಸಾಧ್ಯನಾದ, ಮಹಾಭಯಂಕರನಾದ ಆ ಕಾಲ ಪುರುಷನು ನನ್ನನ್ನು ತನ್ನ ಪಾಶಗಳಿಂದ ಬಂಧಿಸಿಬಿಟ್ಟಿದ್ದಾನೆ.

ಲಾಭಾಲಾಭೌ ಸುಖಂ ದುಃಖಂ ಕಾಮಕ್ರೋಧೌ ಭವಾಭವೌ ।
ವಧಬನ್ಧಪ್ರಮೋಕ್ಷಂ ಚ ಸರ್ವಂ ಕಾಲೇನ ಲಭ್ಯತೇ ॥೮೩॥

ಮನುಷ್ಯನಿಗೆ ಲಾಭ-ನಷ್ಟಗಳು, ಸುಖ-ದುಃಖಗಳು, ಕಾಮ-ಕ್ರೋಧಗಳು, ಅಭ್ಯುದಯಾವನತಿಗಳು, ವಧ-ಬಂಧನ-ಮೋಕ್ಷಗಳು–ಇವೆಲ್ಲವೂ ಕಾಲಾನುಸಾರವಾಗಿಯೇ (ಪ್ರಾರಬ್ಧಾನುಸಾರವಾಗಿಯೇ) ಪ್ರಾಪ್ತವಾಗುತ್ತವೆ.

ನಾಹಂ ಕರ್ತಾ ನ ಕರ್ತಾ ತ್ವಂ ಕರ್ತಾ ಯಸ್ತು ಸದಾ ಪ್ರಭುಃ ।
ಸೋಽಯಂ ಪಚತಿ ಕಾಲೋ ಮಾಂ ವೃಕ್ಷೇ ಫಲಮಿವಾಗತಮ್ ॥

ನನ್ನ ಈ ದುರವಸ್ಥೆಗೆ ನಾನೂ ಕರ್ತೃವಲ್ಲ; ನೀನೂ ಕರ್ತೃವಲ್ಲ. ಸದಾ ಯಾವನು ಪ್ರಭುವಾಗಿರುವನೋ, ಯಾವನಿಗೆ ಬಂಧ-ಮೋಕ್ಷಗಳಾವುವೂ ಇಲ್ಲವೋ, ಉತ್ಪತ್ತಿ-ಲಯಗಳಿಗೆ ಅತೀತನಾಗಿರುವನೋ ಅವನೇ ನನ್ನ ಪರಾಭವಕ್ಕೂ–ನಿನ್ನ ವಿಜಯಕ್ಕೂ ಕರ್ತೃವಾಗಿದ್ದಾನೆ. ಅದೇ

ಕಾಲನು ವೃಕ್ಷದಲ್ಲಿನ ಪಕ್ವವಾದ ಫಲದಂತೆ – ನನ್ನನ್ನು ಪಚನಮಾಡು ತ್ತಿದ್ದಾನೆ.

ಯಾನ್ಯೇವ ಪುರುಷಃ ಕುರ್ವನ್ಸುಖೈಃ ಕಾಲೇನ ಯುಜ್ಯತೇ ।
ಪುನಸ್ತಾನ್ಯೇವ ಕುರ್ವಾಣೋ ದುಃಖೈಃ ಕಾಲೇನ ಯುಜ್ಯತೇ ॥೮೫॥

ಪುರುಷನು ಒಮ್ಮೆ ಕಾರ್ಯಗಳನ್ನು ಮಾಡಿದಾಗ–ಕಾಲನು ಆ ಕಾರ್ಯಗಳ ಫಲವಾಗಿ ಪುರುಷನಿಗೆ ಸುಖವುಂಟಾಗುವಂತೆ ಮಾಡುತ್ತಾನೆ. ಅದೇ ವಿಧವಾದ ಕಾರ್ಯವನ್ನೇ ಮತ್ತೊಮ್ಮೆ ಮಾಡಿದಾಗ–ಕಾಲನು ಆ ಕಾರ್ಯಗಳ ಫಲವಾಗಿ ಪುರುಷನಿಗೆ ದುಃಖವುಂಟಾಗುವಂತೆಯೂ ಮಾಡುತ್ತಾನೆ. (ಮಾಡಿದ ಕಾರ್ಯದಲ್ಲಿ ಯಾವ ವ್ಯತ್ಯಾಸವೂ ಇಲ್ಲದಿದ್ದರೂ ಫಲಗಳು ಕಾಲಾನುಗುಣವಾಗಿರುತ್ತವೆ.)

ನ ಚ ಕಾಲೇನ ಕಾಲಜ್ಞಃ ಸ್ಪೃಷ್ಟಃ ಶೋಚಿತುಮರ್ಹತಿ ।
ತೇನ ಶಕ್ರ ನ ಶೋಚಾಮಿ ನಾಸ್ತಿ ಶೋಕೇ ಸಹಾಯತಾ ॥೮೬॥

ಕಾಲನ ಪ್ರಭಾವವನ್ನು ತಿಳಿದಿರುವವನು ಕಾಲನಿಂದ ಆಕ್ರಮಿಸಲ್ಪಟ್ಟರೂ ಶೋಕಪಡುವುದಿಲ್ಲ. ಶೋಕದಲ್ಲಿ ಯಾವ ವಿಧವಾದ ಸಹಾಯಕತೆಯೂ ಇಲ್ಲ. ಆದುದರಿಂದ ನಾನು ಈ ನನ್ನ ದುಃಸ್ಥಿತಿಗಾಗಿ ಶೋಕಪಡುವುದಿಲ್ಲ.

ಯದಾ ಹಿ ಶೋಚತಃ ಶೋಕೋ ವ್ಯಸನಂ ನಾಪಕರ್ಷತಿ ।
ಸಾಮರ್ಥ್ಯಂ ಶೋಚತೋ ನಾಸ್ತೀತ್ಯತೋಽಹಂ ನಾದ್ಯ ಶೋಚಿಮಿ ॥

ಶೋಕಪಡುತ್ತಿದ್ದರೆ ಅದರಿಂದ ಶೋಕವು ಹೃದಯದಿಂದ ಹೊರಟು ಹೋಗುವುದಿಲ್ಲ. ಆ ಶೋಕದ ಪರಿಹಾರಕ್ಕೆ ಅವನಿಗೆ ಯಾವ ಸಾಮರ್ಥ್ಯವೂ ಇರುವುದಿಲ್ಲ. ಆದುದರಿಂದ ಇದನ್ನರಿತ ನಾನು ಈಗ ಶೋಕಪಡುವುದಿಲ್ಲ."

ಯುಧಿಷ್ಠಿರ! ಬಲಿಯು ಹೇಳಿದ ಮಾತನ್ನು ಕೇಳಿ ಸಹಸ್ರಾಕ್ಷನಾದ ಭಗವಾನ್ ಪಾಕಶಾಸನನು ತನಗೆ ಬಲಿಯ ಮೇಲೆ ಉಂಟಾಗಿದ್ದ ಕೋಪ ವನ್ನು ಉಪಸಂಹರಿಸಿಕೊಂಡು ಶಾಂತನಾಗಿ ಬಲಿಯನ್ನು ಕೇಳಿದನು :

ಸವಜ್ರಮುದ್ಯತಂ ಬಾಹುಂ ದೃಷ್ಟ್ವಾ ಪಾಶಾಂಶ್ಚ ವಾರುಣಾನ್ ॥

ಕಸ್ಯೇಹ ನ ವ್ಯಥೇದ್ಬುದ್ಧಿರ್ಮೃತ್ಯೋರಪಿ ಜಿಘಾಂಸತಃ ।
ಸಾ ತೇ ನ ವ್ಯಥತೇ ಬುದ್ಧಿರಚಲಾ ತತ್ತ್ವದರ್ಶಿನೀ ॥೯೦॥

"ದೈತ್ಯರಾಜ! ವಜ್ರಾಯುಧಸಹಿತವಾಗಿ ಮೇಲಕ್ಕೆತ್ತಿದ ನನ್ನ ಈ ಬಾಹುವನ್ನೂ, ವರುಣಪಾಶಗಳನ್ನೂ ನೋಡಿದವನು–ಅವನು ಪ್ರಾಣಗಳನ್ನು ಅಪಹರಿಸಲು ಬಂದಿರುವ ಮೃತ್ಯುವೇ ಆಗಿದ್ದರೂ–ಅವನಿಗೂ ಭಯವುಂಟಾಗಿ ಅವನ ಬುದ್ಧಿಯೂ ವ್ಯಸನಕ್ಕೊಳಗಾಗುತ್ತದೆ. ಹೀಗಿರುವಾಗ ಸಾಮಾನ್ಯನಾದವನು ಯಾವನು ತಾನೇ ವಜ್ರಾಯುಧವನ್ನೂ – ವರುಣಪಾಶಗಳನ್ನೂ ನೋಡಿದನಂತರ ಭಯಪಡದೇ ಇರುವನು? ಆದರೆ ಇದನ್ನು ನೋಡಿಯೂ ನಿನ್ನ ಬುದ್ಧಿಯು ಮಾತ್ರ ವ್ಯಥಿತವಾಗಿರುವುದಿಲ್ಲ. ಇದಕ್ಕೆ ಕಾರಣವೆಂದರೆ ನಿನ್ನ ಬುದ್ಧಿಯು ನಿಶ್ಚಲವಾದುದು ಮತ್ತು ತತ್ತ್ವವನ್ನು ತಿಳಿದಿರತಕ್ಕುದು.

ಧ್ರುವಂ ನ ವ್ಯಥಸೇಽದ್ಯ ತ್ವಂ ಧೈರ್ಯಾತ್ಸತ್ಯಪರಾಕ್ರಮ ।
ಕೋ ಹಿ ವಿಶ್ವಾಸಮರ್ಥೇಷು ಶರೀರೇ ವಾ ಶರೀರಭೃತ್ ।
ಕರ್ತುಮುತ್ಸಹತೇ ಲೋಕೇ ದೃಷ್ಟ್ವಾ ಸಮ್ಪ್ರಸ್ಥಿತಂ ಜಗತ್ ॥೯೧॥

ಸತ್ಯಪರಾಕ್ರಮನೇ! ಧೈರ್ಯದ ಕಾರಣದಿಂದಲೇ ನೀನೀಗ ನಿನಗೆ ಪ್ರಾಪ್ತವಾಗಿರುವ ಅಧೋಗತಿಗಾಗಿ ದುಃಖಪಡುತ್ತಿಲ್ಲವೆಂಬುದು ನಿಜ. ಪ್ರಪಂಚವೇ ವಿನಾಶದ ಕಡೆಗೆ ಸತತವಾಗಿ ಹೋಗುತ್ತಿರುವುದನ್ನು ನೋಡಿದನಂತರ ಶರೀರವನ್ನು ಧರಿಸಿರುವ ಯಾವ ಮನುಷ್ಯನು ತಾನೇ ತನ್ನ ಶರೀರದಲ್ಲಾಗಲೀ, ಧನ-ವೈಭವ-ವಿಷಯಭೋಗಗಳಲ್ಲಾಗಲೀ ವಿಶ್ವಾಸವನ್ನಿಡುವ ಉತ್ಸುಕತೆಯಿಂದಿರುವನು?

ಅಹಮಪ್ಯೇವಮೇವೈನಂ ಲೋಕಂ ಜಾನಾಮ್ಯಶಾಶ್ವತಮ್ ।
ಕಾಲಾಗ್ನಾವಾಹಿತಂ ಘೋರೇ ಗುಹ್ಯೇ ಸತತಗೇಽಕ್ಷರೇ ॥೯೨॥

ಸರ್ವವ್ಯಾಪಿಯಾದ, ಅವಿನಾಶಿಯಾದ, ಘೋರವಾದ, ನಿಗೂಢವಾದ ಕಾಲಾಗ್ನಿಯಿಂದಲೇ ದಹಿಸಲ್ಪಡುವ ಈ ಲೋಕವು ಅಶಾಶ್ವತವೆಂಬುದನ್ನು ನಾನೂ ತಿಳಿದಿರುತ್ತೇನೆ.

ನ ಚಾತ್ರ ಪರಿಹಾರೋಽಸ್ತಿ ಕಾಲಸ್ಪೃಷ್ಟಸ್ಯ ಕಸ್ಯಚಿತ್ ।
ಸೂಕ್ಷ್ಮಾಣಾಂ ಮಹತಾಂ ಚೈವ ಭೂತಾನಾಂ ಪರಿಪಚ್ಯತಾಮ್ ॥೯೩॥

ಕಾಲನ ಅಧೀನಕ್ಕೊಳಗಾದ ಯಾವನಿಗೇ ಆಗಲೀ–ಪರಿಹಾರವೆಂಬುದೇ ಇಲ್ಲ. ಸೂಕ್ಷ್ಮಪ್ರಾಣಿಗಳೇ ಆಗಲೀ, ಮಹಾಪ್ರಾಣಿಗಳೇ ಆಗಲೀ–ಯಾವ ವಿಧವಾದ ತಾರತಮ್ಯವೂ ಇಲ್ಲದೇ ಕಾಲಾಗ್ನಿಯು ಎಲ್ಲ ಪ್ರಾಣಿಗಳನ್ನೂ ಬೇಯಿಸುತ್ತಿರುತ್ತದೆ. ಅದರಿಂದ ಬಿಡಿಸಿಕೊಳ್ಳಲು ಯಾರಿಂದಲೂ ಸಾಧ್ಯ ವಾಗುವುದೇ ಇಲ್ಲ.

ಅನೀಶಸ್ಯಾಪ್ರಮತ್ತಸ್ಯ ಭೂತಾನಿ ಪಚತಃ ಸದಾ ।
ಅನಿವೃತ್ತಸ್ಯ ಕಾಲಸ್ಯ ಕ್ಷಯಂ ಪ್ರಾಪ್ತೋ ನ ಮುಚ್ಯತೇ ॥೯೪॥

ಕಾಲನನ್ನು ನಿಯಂತ್ರಿಸುವವನು ಯಾರೂ ಇಲ್ಲ. ಅವನಿಗೆ ಬೇರೊಬ್ಬ ಪ್ರಭುವಿಲ್ಲ. ಸ್ವಯಂಪ್ರಭುವಾಗಿದ್ದಾನೆ. ಅವನು ಯಾವಾಗಲೂ ಜಾಗರೂಕ ನಾಗಿರುತ್ತಾ ಪ್ರಾಣಿಗಳನ್ನು ದುಃಖಾಗ್ನಿಯಲ್ಲಿ ಬೇಯಿಸುತ್ತಿರುತ್ತಾನೆ. ಯಾವುದೇ ಕಾರಣದಿಂದಲೂ ಹಿಂದಿರುಗದೇ ಇರುವ ಕಾಲನ ಮನೆಯನ್ನು ಸೇರಿದ ಪ್ರಾಣಿಯು ಪುನಃ ಅವನಿಂದ ಬಿಡಿಸಿಕೊಳ್ಳಲಾರನು.

ಅಪ್ರಮತ್ತಃ ಪ್ರಮತ್ತೇಷು ಕಾಲೋ ಜಾಗರ್ತಿ ದೇಹಿಷು ।
ಪ್ರಯತ್ನೇನಾಪ್ಯಪಕ್ರಾನ್ತೋ ದೃಷ್ಟಪೂರ್ವೋ ನ ಕೇನಚಿತ್ ॥೯೫॥

ಅಪ್ರಮತ್ತನಾದ ಕಾಲನು–ಪ್ರಮತ್ತರಾದ ಮನುಷ್ಯರಲ್ಲಿ ಸೇರಿಕೊಂಡು ಯಾವಾಗಲೂ ಎಚ್ಚರಿಕೆಯಿಂದಲೇ ಇರುತ್ತಾನೆ. ಎಷ್ಟೇ ಪ್ರಯತ್ನಿಸಿದರೂ ಕಾಲನನ್ನು ಅತಿಕ್ರಮಿಸಿ ಹೋಗಿರುವವನನ್ನು ಹಿಂದೆ ಯಾರೂ ಕಂಡಿರುವುದಿಲ್ಲ.

ಪುರಾಣಃ ಶಾಶ್ವತೋ ಧರ್ಮಃ ಸರ್ವಪ್ರಾಣಭೃತಾಂ ಸಮಃ ।
ಕಾಲೋ ನ ಪರಿಹಾರ್ಯಶ್ಚ ನ ಚಾಸ್ಯಾಸ್ತಿ ವ್ಯತಿಕ್ರಮಃ ॥೯೬॥

ಕಾಲನು ಪುರಾತನನು (ಅನಾದಿಯು) ; ಸನಾತನನು ; ಧರ್ಮ

ಸ್ವರೂಪನು ; ಪ್ರಪಂಚದಲ್ಲಿರುವ ಸಕಲಪ್ರಾಣಿಗಳನ್ನೂ ಸಮಾನದೃಷ್ಟಿಯಿಂದ ಕಾಣುವವನು. ಅವನನ್ನು ದೂರಿಕರಿಸಲು ಸಾಧ್ಯವೇ ಇಲ್ಲ. ಅವನನ್ನು ಮೀರುವುದೆಂಬುದೇ ಇಲ್ಲ.

ಅಹೋರಾತ್ರಾಂಶ್ಚ ಮಾಸಾಂಶ್ಚ ಕ್ಷಣಾನ್ಕಾಷ್ಠಾ ಲವಾನ್ಕಲಾಃ ।
ಸಮ್ಪೀಡಯತಿ ಯಃ ಕಾಲೋ ವೃದ್ಧಿಂ ವಾರ್ಧುಷಿಕೋ ಯಥಾ ॥

ಯಾವ ರೀತಿಯಲ್ಲಿ ಬಡ್ಡಿಯಿಂದಲೇ ಜೀವಿಸುವವನು ಒಂದು ಬಿಡಿಗಾಸನ್ನೂ ಬಿಡದಂತೆ ಕಡೆಯ ಚಿಕ್ಕಾಸಿನವರೆಗೂ ಲೆಕ್ಕಹಾಕಿ ಬಡ್ಡಿಯನ್ನು ವಸೂಲುಮಾಡುವನೋ-ಹಾಗೆಯೇ ಕಾಲನೂ ಹಗಲು, ರಾತ್ರಿ, ಮಾಸ, ಕ್ಷಣ, ಕಾಷ್ಠಾ, ಲವ ಮತ್ತು ಕಲೆಗಳವರೆಗೂ ಲೆಕ್ಕಹಾಕಿ ಪ್ರಾಣಿಗಳನ್ನು ಪೀಡಿಸುತ್ತಾನೆ. ಸುಖವನ್ನೇ ಆಗಲೀ ಕಷ್ಟವನ್ನೇ ಆಗಲೀ ಕಲಾ* ಪರಿಮಿತಿಯಷ್ಟು ಕಾಲವು ಕಡಿಮೆಯಾಗಿ ಅಥವಾ ಹೆಚ್ಚಾಗಿ ಅನುಭವಿಸಲು ಕಾಲನು ಅವಕಾಶಕೊಡುವುದಿಲ್ಲ.

ಇದಮದ್ಯ ಕರಿಷ್ಯಾಮಿ ಶ್ವಃ ಕರ್ತಾಸ್ಮೀತಿ ವಾದಿನಮ್ ।
ಕಾಲೋ ಹರತಿ ಸಮ್ಪ್ರಾಪ್ತೋ ನದೀವೇಗ ಇವ ದ್ರುಮಮ್ ॥೯೮॥

'ಈ ಕೆಲಸವನ್ನು ಇಂದು ಮಾಡುತ್ತೇನೆ ; ಆ ಕೆಲಸವನ್ನು ನಾಳೆ ಮಾಡುತ್ತೇನೆ'-ಎಂದು ಕಾರ್ಯಕ್ರಮದ ಪಟ್ಟಿಯನ್ನು ಸಿದ್ಧಪಡಿಸಿಕೊಂಡಿರುವ ಮನುಷ್ಯನನ್ನು-ನದಿಯ ಪ್ರವಾಹವು ತೀರದಲ್ಲಿರುವ ವೃಕ್ಷವನ್ನು ಕೊಚ್ಚಿಕೊಂಡು ಹೋಗಿಬಿಡುವಂತೆ-ವೇಗಯುಕ್ತನಾದ ಕಾಲನು ಅಪಹರಿಸಿ ಕೊಂಡು ಹೊರಟುಹೋಗುತ್ತಾನೆ.

ಇದಾನೀಂ ತಾವದೇವಾಸೌ ಮಯಾ ದೃಷ್ಟಃ ಕಥಂ ಮೃತಃ ।
ಇತಿ ಕಾಲೇನ ಹ್ರಿಯತಾಂ ಪ್ರಲಾಪಃ ಶ್ರೂಯತೇ ನೃಣಾಮ್ ॥೯೯॥

---

* ಒಂದು ಹ್ರಸ್ವಾಕ್ಷರವನ್ನು ಉಚ್ಚರಿಸುವಷ್ಟು ಕಾಲ, ಒಂದು ಅಕ್ಷಿ ಅಥವಾ ನಿಮೇಷ = ರೆಪ್ಪೆಹೊಡೆಯುವಷ್ಟು ಕಾಲ. ಹದಿನೈದು ನಿಮೇಷಗಳು ಅಥವಾ ಹದಿನೆಂಟು ಬಾರಿ ರೆಪ್ಪೆ ಹೊಡೆಯುವಷ್ಟು ಕಾಲ ೧ ಕಾಷ್ಠಾ ೩೦ ಕಾಷ್ಠಗಳು ಒಂದು ಕಲೆ. ಕ್ಷಣದ $\frac{1}{30}$ ನೇ ಭಾಗ = ೧ ಕಲೆ. ಕಲೆಯ $\frac{1}{30}$ ನೇ ಭಾಗ ಒಂದು ಕಾಷ್ಠಾ. ಕಾಷ್ಠದ $\frac{1}{18}$ನೇ ಭಾಗ ೧ ನಿಮೇಷ. ನಿಮೇಷದ $\frac{1}{2}$ ಭಾಗ ೧ ಲವ. ಲವದ $\frac{1}{2}$ ಭಾಗ ೧ ಕ್ಷಣ.

'ಈಗ ತಾನೇ ನಾನು ಇವನನ್ನು ನೋಡಿದ್ದೆನು. ಇಷ್ಟು ಬೇಗ ಇವನು ಹೇಗೆ ಸತ್ತುಹೋದನು? ಆಶ್ಚರ್ಯವೇ ಸರಿ'–ಹೀಗೆಂಬುದಾಗಿ ಕಾಲನಿಂದ ಅಪಹೃತರಾದವರ ವಿಷಯವಾಗಿ ಬೇರೆಯ ಮನುಷ್ಯರು ಪ್ರಲಾಪಮಾಡುವುದು ಕೇಳಿಬರುತ್ತಲೇ ಇರುತ್ತದೆ.

ನಶ್ಯನ್ತ್ಯರ್ಥಾಸ್ತಥಾ ಭೋಗಾಃ ಸ್ಥಾನಮೈಶ್ವರ್ಯಮೇವ ಚ ।
ಜೀವಿತಂ ಜೀವಲೋಕಸ್ಯ ಕಾಲೇನಾಗಮ್ಯ ನೀಯತೇ ॥೧೦೦॥

ಧನ-ಕನಕ-ವಸ್ತುಗಳೂ, ಸುಖೋಪಭೋಗಗಳೂ ನಷ್ಟವಾಗಿ ಹೋಗುತ್ತವೆ. ಸ್ಥಾನವು ತಪ್ಪಿಹೋಗುತ್ತದೆ. ಐಶ್ವರ್ಯವು ಕಳೆದುಹೋಗುತ್ತದೆ. ಕಟ್ಟಕಡೆಗೆ ಜೀವಲೋಕದ ಜೀವಿತವೂ ಕಾಲನಿಂದ ಒಯ್ಯಲ್ಪಡುತ್ತದೆ.

ಉಚ್ಛ್ರಾಯಾ ವಿನಿಪಾತಾನ್ತಾ ಭಾವೋಽಭಾವಃ ಸ ಏವ ಚ ।
ಅನಿತ್ಯಮಧ್ರುವಂ ಸರ್ವಂ ವ್ಯವಸಾಯೋ ಹಿ ದುಷ್ಕರಃ ॥೧೦೧॥

ಉಚ್ಛ್ರಾಯಸ್ಥಿತಿಯು ಅಧಃಪತನದಲ್ಲಿ ಪರ್ಯವಸಾನಹೊಂದುತ್ತದೆ. ಹುಟ್ಟು ಸಾವಿನಲ್ಲಿ ಪರ್ಯವಸಾನಹೊಂದುತ್ತದೆ. ಯಾವುದು ಕಣ್ಣಿಗೆ ಕಾಣಿಸುವುದೋ–ಅದು ವಿನಾಶದಲ್ಲಿಯೇ ಪರ್ಯವಸಾನಹೊಂದುತ್ತದೆ. ನಿಶ್ಚಯವಾಗಿ ಹೇಳುವುದಾದರೆ ಎಲ್ಲವೂ ಅನಿತ್ಯ ಮತ್ತು ಅಸ್ಥಿರ. ಆದರೆ ಈ ಅಪ್ರಿಯಸತ್ಯವನ್ನು ಸ್ಮರಣೆಯಲ್ಲಿಟ್ಟುಕೊಂಡು ವ್ಯವಹರಿಸುವುದು ಅತ್ಯಂತದುಷ್ಕರವೇ ಸರಿ.

ಸಾ ತೇ ನ ವ್ಯಥತೇ ಬುದ್ಧಿರಚಲಾ ತತ್ತ್ವದರ್ಶಿನೀ ।
ಅಹಮಾಸಂ ಪುರಾ ಚೇತಿ ಮನಸಾಪಿ ನ ಬುಧ್ಯತೇ ॥೧೦೨॥

ದೈತ್ಯರಾಜ! ನಿನ್ನ ಬುದ್ಧಿಯು ತತ್ತ್ವವನ್ನು ತಿಳಿದುಕೊಂಡಿದೆ. ಸುಸ್ಥಿರವಾಗಿದೆ. ಆದುದರಿಂದಲೇ ಇಂತಹ ದುಃಸ್ಥಿತಿಯಲ್ಲಿಯೂ ನೀನು ವ್ಯಥೆಪಡುತ್ತಿಲ್ಲ. 'ನಾನು ಹಿಂದೆ ಐಶ್ವರ್ಯವಂತನಾಗಿದ್ದೆನು' – ಎಂಬುದಾಗಿ ನೀನು ಮನಸ್ಸಿನಿಂದಲೂ ಸ್ಮರಿಸಿಕೊಳ್ಳುವುದಿಲ್ಲ.

ಕಾಲೇನಾಕ್ರಮ್ಯ ಲೋಕೇಽಸ್ಮಿನ್ಪಚ್ಯಮಾನೇ ಬಲೀಯಸಾ ।
ಅಜ್ಯೇಷ್ಠಮಕನಿಷ್ಠಂ ಚ ಕ್ಷಿಪ್ಯಮಾಣೋ ನ ಬುಧ್ಯತೇ ॥೧೦೩॥

ಅತ್ಯಂತಬಲಿಷ್ಠವಾದ ಕಾಲವು ಈ ಲೋಕವೆಲ್ಲವನ್ನೂ ಆಕ್ರಮಿಸಿ ಜ್ಯೇಷ್ಠ-ಕನಿಷ್ಠ ಎಂಬ ಭೇದಭಾವನೆಯೇ ಇಲ್ಲದಂತೆ ತನ್ನೊಳಕ್ಕೆ ಹಾಕಿ ಕೊಂಡು ಬೇಯಿಸುತ್ತಿದ್ದರೂ–ಯಾವೊಬ್ಬ ಜೀವಿಗೂ ಇದು ಕಾಲನ ಪ್ರಭಾವದಿಂದಲೇ ನಡೆಯುತ್ತಿದೆಯೆಂಬ ಅರಿವೇ ಆಗುವುದಿಲ್ಲ.

ಈರ್ಷ್ಯಾಭಿಮಾನಲೋಭೇಷು ಕಾಮಕ್ರೋಧಭಯೇಷು ಚ ।
ಸ್ಪೃಹಾಮೋಹಾಭಿಮಾನೇಷು ಲೋಕಃ ಸಕ್ತೋ ವಿಮುಹ್ಯತಿ ॥೧೦೪॥

ಲೋಕವು (ಜನವು) ಈರ್ಷ್ಯೆ, ಅಭಿಮಾನ, ಲೋಭ, ಕಾಮ, ಕ್ರೋಧ, ಭಯ, ಆಸೆ, ಮೋಹ, ಅಭಿಮಾನ–ಇವುಗಳಲ್ಲಿಯೇ ಆಸಕ್ತವಾಗಿ ವಿವೇಕವನ್ನು ಕಳೆದುಕೊಂಡು ಭ್ರಾಂತವಾಗಿದೆ.

ಭವಾಂಸ್ತು ಭಾವತತ್ತ್ವಜ್ಞೋ ವಿದ್ವಾನ್ ಜ್ಞಾನತಪೋಽನ್ವಿತಃ ।
ಕಾಲಂ ಪಶ್ಯತಿ ಸುವ್ಯಕ್ತಂ ಪಾಣಾವಾಮಲಕಂ ಯಥಾ ॥೧೦೫॥

ಕಾಲಚಾರಿತ್ರತತ್ತ್ವಜ್ಞಃ ಸರ್ವಶಾಸ್ತ್ರವಿಶಾರದಃ ।
ವಿವೇಚನೇ ಕೃತಾತ್ಮಾಸಿ ಸ್ಪೃಹಣೀಯೋ ವಿಜಾನತಾಮ್ ॥೧೦೬॥

ಸರ್ವಲೋಕೋ ಹ್ಯಯಂ ಮನ್ಯೇ ಬುದ್ಧ್ಯಾ ಪರಿಗತಸ್ತ್ವಯಾ ॥೧೦೭॥

ದೈತ್ಯೇಂದ್ರ! ನೀನಾದರೋ ಜ್ಞಾನಿಯಾಗಿರುವೆ. ತಪಸ್ವಿಯಾಗಿರುವೆ. ಸಮಸ್ತಪ್ರಾಣಿಗಳ ಭಾವವನ್ನೂ ತಿಳಿದವನಾಗಿರುವೆ. ಕಾಲದ ಲೀಲೆಯನ್ನೂ ಮತ್ತು ಅದರ ತತ್ತ್ವವನ್ನೂ ತಿಳಿದವನಾಗಿರುವೆ. ಸರ್ವಶಾಸ್ತ್ರಗಳಲ್ಲಿಯೂ ವಿಶಾರದನಾಗಿರುವೆ. ಕಾಲದ ಸ್ವರೂಪವನ್ನು ನೀನು ಅಂಗೈಯಲ್ಲಿರುವ ನೆಲ್ಲೀ ಕಾಯಿಯಂತೆ–ಸ್ಪಷ್ಟರೂಪದಿಂದ ಕಾಣುತ್ತಿರುವೆ. ವಿವೇಚನೆಯಲ್ಲಿ ಕುಶಲ ನಾಗಿರುವೆ. ಜಿತೇಂದ್ರಿಯನಾಗಿರುವೆ. ವಿದ್ವಾಂಸರಿಗೆ ಇಷ್ಟನಾಗಿರುವೆ. ನೀನು ನಿನ್ನ ಬುದ್ಧಿಯಿಂದ ಎಲ್ಲ ಲೋಕಗಳ ತತ್ತ್ವಗಳನ್ನೂ ತಿಳಿದಿರುವೆಯೆಂದು ನಾನು ಭಾವಿಸಿದ್ದೇನೆ.

ವಿಹರನ್ಸರ್ವತೋ ಮುಕ್ತೋ ನ ಕ್ವಚಿತ್ಪರಿಷಜ್ಜತೇ ।
ರಜಶ್ಚ ಹಿ ತಮಶ್ಚ ತ್ವಾಂ ಸ್ಪೃಶತೇ ನ ಜಿತೇನ್ದ್ರಿಯಮ್ ॥೧೦೮॥

ಮುಕ್ತನಾಗಿ ಎಲ್ಲ ಕಡೆಗಳಲ್ಲಿಯೂ ವಿಹರಿಸುವ ನೀನು ಯಾವ ಕಡೆ

ಯಲ್ಲಿಯೂ ಆಸಕ್ತನಾಗುವುದಿಲ್ಲ. ಜಿತೇಂದ್ರಿಯನಾದ ನಿನ್ನನ್ನು ರಜಸ್ತಮೋ ಗುಣಗಳು ಮುಟ್ಟುವುದೂ ಇಲ್ಲ.

ನಿಷ್ಪ್ರೀತಿಂ ನಷ್ಟಸನ್ತಾಪಮಾತ್ಮಾನಂ ತ್ವಮುಪಾಸಸೇ ।
ಸುಹೃದಂ ಸರ್ವಭೂತಾನಾಂ ನಿರ್ವೈರಂ ಶಾನ್ತಮಾನಸಮ್ ॥೧೦೯॥

ಯಾವುದು ಹರ್ಷರಹಿತವಾಗಿದೆಯೋ, ಸಂತಾಪಶೂನ್ಯವಾಗಿದೆಯೋ, ಎಲ್ಲ ಪ್ರಾಣಿಗಳಲ್ಲಿಯೂ ಸುಹೃದ್ಭಾವದಿಂದಿರುವುದೋ, ವೈರರಹಿತವಾಗಿರುವುದೋ, ಶಾಂತವಾದ ಮನಸ್ಸಿನಿಂದ ಕೂಡಿರುವುದೋ– ಅಂತಹ ಆತ್ಮನನ್ನು ನೀನು ಉಪಾಸನೆಮಾಡುತ್ತಿರುವೆ. (ಹರ್ಷ-ಶೋಕಗಳಿಲ್ಲದೇ, ಪ್ರಾಣಿಗಳಲ್ಲಿ ದಯಾಪರನಾಗಿ, ದ್ವೇಷಾಸೂಯೆಗಳಿಂದ ವರ್ಜಿತನಾಗಿ ಶಾಂತಭಾವದಿಂದಿರಲು ನೀನು ಸರ್ವದಾ ಪ್ರಯತ್ನಿಸುತ್ತಿರುವೆ.)

ದೃಷ್ಟ್ವಾ ತ್ವಾಂ ಮಮ ಸಂಜಾತಾ ತ್ವಯ್ಯನುಕ್ರೋಶಿನೀ ಮತಿಃ ।
ನಾಹಮೇತಾದೃಶಂ ಬುದ್ಧಂ ಹನ್ತುಮಿಚ್ಛಾಮಿ ಬನ್ಧನೇ ॥೧೧೦॥

ದೈತ್ಯೇಂದ್ರ! ನಿನ್ನನ್ನು ನೋಡಿದೊಡನೆಯೇ (ನಿನ್ನ ಮಾತನ್ನು ಕೇಳಿದೊಡನೆಯೇ) ನಿನ್ನ ವಿಷಯದಲ್ಲಿ ನನಗೆ ದಯಾಪೂರ್ಣವಾದ ಬುದ್ಧಿಯುಂಟಾಗಿದೆ. ಇಂತಹ ಜ್ಞಾನಿಯನ್ನು ನಾನು ಬಂಧನದಲ್ಲಿರಿಸಿ ಸಂಹರಿಸಲು ಇಷ್ಟಪಡುವುದಿಲ್ಲ.

ಆನೃಶಂಸ್ಯಂ ಪರೋ ಧರ್ಮೋ ಹ್ಯನುಕ್ರೋಶಶ್ಚ ಮೇ ತ್ವಯಿ ।
ಮೋಕ್ಷ್ಯನ್ತೇ ವಾರುಣಾಃ ಪಾಶಾಸ್ತವೇಮೇ ಕಾಲಪರ್ಯಯಾತ್ ॥೧೧೧॥

ಯಾರೊಡನೆಯೂ ಕಾಠಿನ್ಯದಿಂದ ವ್ಯವಹರಿಸದೇ ಇರುವುದೇ ಶ್ರೇಷ್ಠವಾದ ಧರ್ಮವಾಗಿದೆ. ನಿನ್ನ ಮೇಲೆ ನನಗೆ ಸಂಪೂರ್ಣವಾದ ಕರುಣೆಯೂ ಉಂಟಾಗಿದೆ. ಸ್ವಲ್ಪಕಾಲಾನಂತರ ನಿನ್ನನ್ನು ಬಂಧಿಸಿರುವ ವರುಣಪಾಶಗಳು ತಾವೇ-ತಾವಾಗಿ ಕಳಚಿಬೀಳುತ್ತವೆ.

ಪ್ರಜಾನಾಮಪಚಾರೇಣ ಸ್ವಸ್ತಿ ತೇಽಸ್ತು ಮಹಾಸುರ ।
ಯದಾ ಶ್ವಶ್ರೂಂ ಸ್ನುಷಾ ವೃದ್ಧಾಂ ಪರಿಚಾರೇಣ ಯೋಕ್ಷ್ಯತೇ ॥
ಪುತ್ರಶ್ಚ ಪಿತರಂ ಮೋಹಾತ್ಪ್ರೇಷಯಿಷ್ಯತಿ ಕರ್ಮಸು ।
ಬ್ರಾಹ್ಮಣೈಃ ಕಾರಯಿಷ್ಯನ್ತಿ ವೃಷಲಾಃ ಪಾದಧಾವನಮ್ ॥೧೧೨॥

ಶೂದ್ರಾಶ್ಚ ಬ್ರಾಹ್ಮಣೀಂ ಭಾರ್ಯಾಮುಪಯಾಸ್ಯನ್ತಿ ನಿರ್ಭಯಾಃ ।
ವಿಯೋನಿಷು ವಿಮೋಕ್ಷ್ಯನ್ತಿ ಬೀಜಾನಿ ಪುರುಷಾ ಯದಾ ॥೧೧೪॥

ಸಂಕರಂ ಕಾಂಸ್ಯಭಾಣ್ಡೈಶ್ಚ ಬಲಿಂ ಚೈವ ಕುಪಾತ್ರಕೈಃ ।
ಚಾತುರ್ವರ್ಣ್ಯಂ ಯದಾ ಕೃತ್ಸ್ನಮಮರ್ಯಾದಂ ಭವಿಷ್ಯತಿ ।
ಏಕೈಕಸ್ತೇ ತದಾ ಪಾಶಃ ಕ್ರಮಶಃ ಪರಿಮೋಕ್ಷ್ಯತೇ ॥೧೧೫॥

ಮಹಾಸುರನೇ! ಪ್ರಜೆಗಳು ಯಾವಾಗ ಧರ್ಮಕ್ಕೆ ವಿರುದ್ಧವಾಗಿ ವ್ಯವಹರಿಸುವರೋ ಆಗ ನಿನಗೆ ಕಲ್ಯಾಣವುಂಟಾಗುತ್ತದೆ. ಸೊಸೆಯು ವೃದ್ಧೆಯಾದ ಅತ್ತೆಯನ್ನು ತನ್ನ ಸೇವೆಮಾಡಲು ನಿಯೋಜಿಸಿದಾಗ, ಮಗನು ಅಜ್ಞಾನದಿಂದ ತಂದೆಯನ್ನು ಮನೆಗೆಲಸಗಳನ್ನು ಮಾಡುವಂತೆ ಆಜ್ಞಾಪಿಸಿ ದಾಗ, ಶೂದ್ರರು ಬ್ರಾಹ್ಮಣರಿಂದ ಕಾಲುಗಳನ್ನು ತೊಳೆಸಿಕೊಂಡಾಗ, ಶೂದ್ರರು ಭಯರಹಿತರಾಗಿ ಬ್ರಾಹ್ಮಣಕನ್ಯೆಯರನ್ನು ವಿವಾಹವಾದಾಗ, ಮನುಷ್ಯರು ನಿರ್ಲಜ್ಜರಾಗಿ ವಿರುದ್ಧವಾದ ಯೋನಿಗಳಲ್ಲಿ ವೀರ್ಯಸೇಚನೆ ಮಾಡಿದಾಗ, ಉಚ್ಚ-ನೀಚಜಾತಿಗಳೆಂಬ ಭೇದಭಾವನೆಯೇ ಇಲ್ಲದೆ ಒಂದೆಡೆ ಯಲ್ಲಿ ಕುಳಿತು ಕಂಚಿನ ಪಾತ್ರೆಗಳಲ್ಲಿ ಊಟಮಾಡಲು ತೊಡಗಿದಾಗ, ಅಪವಿತ್ರವಾದ ಪಾತ್ರೆಗಳಲ್ಲಿ ದೇವತೆಗಳಿಗೆ ನಿವೇದನವನ್ನು ಅರ್ಪಿಸಿದಾಗ, ವರ್ಣಾಶ್ರಮಧರ್ಮಗಳೆಲ್ಲವೂ ಮರ್ಯಾದೆಯನ್ನು ಮೀರಿದಾಗ-ನಿನ್ನನ್ನು ಬಂಧಿಸಿರುವ ವರುಣನ ಪಾಶಗಳು ಒಂದೊಂದಾಗಿ ಕಳಚಿಬೀಳುತ್ತವೆ.

ಅಸ್ಮತ್ತಸ್ತೇ ಭಯಂ ನಾಸ್ತಿ ಸಮಯಂ ಪ್ರತಿಪಾಲಯ ।
ಸುಖೀ ಭವ ನಿರಾಬಾಧಃ ಸ್ವಸ್ಥಚೇತಾ ನಿರಾಮಯಃ ॥೧೧೬॥

ದೈತ್ಯೇಂದ್ರ! ನಮ್ಮಿಂದ ನಿನಗೆ ಯಾವ ವಿಧವಾದ ಭಯವೂ ಇರುವುದಿಲ್ಲ. ಸಮಯವನ್ನು ಪ್ರತೀಕ್ಷಿಸುತ್ತಿರು. ಯಾವ ವಿಧವಾದ ಬಾಧೆಗಳೂ ಇಲ್ಲದೇ ಸ್ವಸ್ಥಚಿತ್ತನಾಗಿ ಸುಖವಾಗಿರು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಐರಾವತವಾಹನನೂ, ಶತಕ್ರತುವೂ ಆದ ಇಂದ್ರನು ಬಲಿಯೊಡನೆ ಹೀಗೆ ಹೇಳಿ ಐರಾವತದ ಮೇಲೆ ಕುಳಿತು ತನ್ನ ಸ್ಥಾನಕ್ಕೆ

ಹೊರಟುಹೋದನು. ಸುರಾಧಿಪನಾದ ದೇವೇಂದ್ರನು ಎಲ್ಲ ಅಸುರರನ್ನೂ ಜಯಿಸಿ ತ್ರಿಭುವನಗಳಿಗೂ ಏಕಚ್ಛತ್ರಾಧಿಪತಿಯಾಗಿ ಹರ್ಷದಿಂದ ಆನಂದಿಸಿದನು. ಆ ಸಮಯದಲ್ಲಿ ಮಹರ್ಷಿಗಳು ಚರಾಚರಜಗತ್ತಿಗೆ ಸ್ವಾಮಿಯಾಗಿದ್ದ ಇಂದ್ರನನ್ನು ಬಹಳವಾಗಿ ಸ್ತೋತ್ರಮಾಡಿದರು. ಯಜ್ಞೇಶ್ವರನು ಯಜ್ಞಗಳಲ್ಲಿ ಅರ್ಪಿಸುತ್ತಿದ್ದ ಹವಿಸ್ಸುಗಳನ್ನು ಆಯಾ ದೇವತೆಗಳಿಗೆ ಒಯ್ದು ಕೊಡುತ್ತಿದ್ದನು. ದೇವೇಶ್ವರನಾದ ಇಂದ್ರನೂ ತನಗೆ ಅರ್ಪಿಸಿದ ಅಮೃತವನ್ನು ಪಾನಮಾಡಿದನು. ಎಲ್ಲ ಕಡೆಗಳಿಗೂ ಹೋಗಲು ಸಮರ್ಥರಾಗಿದ್ದ ಬ್ರಾಹ್ಮಣಶ್ರೇಷ್ಠರಿಂದ ಸ್ತೋತ್ರಮಾಡಲ್ಪಟ್ಟ, ಪ್ರದೀಪ್ತವಾದ ತೇಜಸ್ಸಿನಿಂದ ಕೂಡಿದ್ದ, ಕೋಪದಿಂದ ರಹಿತನಾಗಿ ಶಾಂತಚಿತ್ತನಾಗಿದ್ದ ವಾಸವನು ಪರಮ ಸಂತುಷ್ಟನಾಗಿ ತನ್ನ ನಿವಾಸಸ್ಥಾನವಾದ ಸ್ವರ್ಗವನ್ನು ಸೇರಿ ಆನಂದಿಸಿದನು."

೨೨೭ನೆಯ ಅಧ್ಯಾಯವು ಮುಗಿಯಿತು.

೨೨೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ದೈತ್ಯರನ್ನು ಪರಿತ್ಯಜಿಸಿದ ಲಕ್ಷ್ಮಿಯು ಇಂದ್ರನನ್ನು ಸೇರಿದುದು : ಯಾವ ಸದ್ಗುಣಗಳಿದ್ದರೆ ಲಕ್ಷ್ಮಿಯು ಬರುತ್ತಾಳೆ ಮತ್ತು ಯಾವ ದುರ್ಗುಣಗಳಿದ್ದರೆ ಲಕ್ಷ್ಮಿಯು ಹೊರಟುಹೋಗುತ್ತಾಳೆ- ಎಂಬುದರ ವಿಶ್ಲೇಷಣೆ

ಪಾರಿಕ್ಷಿತ! ಯುಧಿಷ್ಠಿರನು ಹೇಳುತ್ತಾನೆ :

ಪೂರ್ವರೂಪಾಣಿ ಮೇ ರಾಜನ್ಪುರುಷಸ್ಯ ಭವಿಷ್ಯತಃ ।
ಪರಾಭವಿಷ್ಯತಶ್ಚೈವ ತನ್ಮೇ ಬ್ರೂಹಿ ಪಿತಾಮಹ ॥೧॥

"ಭೀಷ್ಮರಾಜನೇ! ಪಿತಾಮಹ! ಔನ್ನತ್ಯವನ್ನು ಹೊಂದಲಿರುವ ಪುರುಷನ ಮತ್ತು ಅಧೋಗತಿಯನ್ನು ಹೊಂದಲಿರುವ ಪುರುಷನ ಪೂರ್ವಲಕ್ಷಣಗಳು ಯಾವುವೆಂಬುದನ್ನು ಹೇಳು."

ಭೀಷ್ಮನು ಹೇಳುತ್ತಾನೆ :

ಮನ ಏವ ಮನುಷ್ಯಸ್ಯ ಪೂರ್ವರೂಪಾಣಿ ಶಂಸತಿ ।
ಭವಿಷ್ಯತಶ್ಚ ಭದ್ರಂ ತೇ ತಥೈವ ನ ಭವಿಷ್ಯತಃ ॥೨॥

“ಯುಧಿಷ್ಠಿರ! ನಿನಗೆ ಮಂಗಳವಾಗಲಿ. ಯಾವ ಮನುಷ್ಯನು ಔನ್ನತ್ಯವನ್ನು ಅಥವಾ ಅಧೋಗತಿಯನ್ನು ಹೊಂದಲಿರುವನೋ ಆ ಮನುಷ್ಯನ ಮನಸ್ಸೇ ಅದರ ಪೂರ್ವಲಕ್ಷಣಗಳೇನೆಂಬುದನ್ನು ಹೇಳುತ್ತದೆ. ಈ ವಿಷಯದಲ್ಲಿ ಲಕ್ಷ್ಮಿಗೂ ಮತ್ತು ಇಂದ್ರನಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂಭಾಷಣೆಯನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನು ನಿನಗೂ ತಿಳಿಸುವೆನು, ಕೇಳು :

ಹಿಂದೊಮ್ಮೆ ಮಹಾತಪಸ್ವಿಗಳಾದ, ಪಾಪರಹಿತರಾದ, ಬ್ರಹ್ಮದೇವನಂತೆಯೇ ಅಮಿತವಾದ ತೇಜಸ್ಸಿನಿಂದ ಬೆಳಗುತ್ತಿದ್ದ, ಬ್ರಹ್ಮಲೋಕನಿವಾಸಿಗಳೊಡನೆ ಸಮಾನತೆಯನ್ನು ಹೊಂದಿದ್ದ ನಾರದಮಹರ್ಷಿಗಳು ತಾವು ಮಾಡಿದ್ದ ಮಹಾತಪಸ್ಸಿನ ಪ್ರಭಾವದಿಂದ ಮೇಲಿನ ಮತ್ತು ಕೆಳಗಿನ ಲೋಕಗಳೆರಡನ್ನೂ ಸಂದರ್ಶಿಸುತ್ತಾ ತಮ್ಮ ಇಚ್ಛಾನುಸಾರವಾಗಿ ಮೂರು ಲೋಕಗಳಲ್ಲಿಯೂ ಸಂಚರಿಸುತ್ತಿದ್ದರು. ಒಮ್ಮೆ ನಾರದರು ಬೆಳಗಾಗುತ್ತಲೇ ಮೇಲೆದ್ದು ಪವಿತ್ರವಾದ ತೀರ್ಥದಲ್ಲಿ ಸ್ನಾನಮಾಡುವ ಅಪೇಕ್ಷೆಯಿಂದ ಧ್ರುವನ ದ್ವಾರವಾದ ಉತ್ತರದಿಕ್ಕಿನಲ್ಲಿ ಹುಟ್ಟುವ ಗಂಗಾನದಿಯ ತೀರಕ್ಕೆ ಹೋಗಿ ಸ್ನಾನಾರ್ಥವಾಗಿ ಗಂಗೆಯಲ್ಲಿಳಿದರು. ಅದೇ ಸಮಯಕ್ಕೆ ಸರಿಯಾಗಿ ಪಾಕ-ಶಂಬರಹಂತಕನಾದ, ಸಹಸ್ರಾಕ್ಷನಾದ, ವಜ್ರಪಾಣಿಯಾದ ಇಂದ್ರನು ದೇವರ್ಷಿಗಳಾದ ನಾರದರು ಇಳಿದುಕೊಂಡಿದ್ದ ಗಂಗಾನದಿಯ ತೀರಕ್ಕೇ ಆಗಮಿಸಿದನು. ಬಳಿಕ ಇಂದ್ರ-ನಾರದರಿಬ್ಬರೂ ಗಂಗಾನದಿಯಲ್ಲಿ ಮಿಂದು ಏಕಾಗ್ರಚಿತ್ತರಾಗಿ ಜಪಾದಿಗಳನ್ನು ಮುಗಿಸಿ, ಸೂಕ್ಷ್ಮವಾದ ಮತ್ತು ಸುವರ್ಣಮಯವಾದ ಕಣಗಳಿಂದ ಕೂಡಿದ್ದ ನದಿಯ ಮರಳಿನ ಮೇಲೆ ಕುಳಿತು, ಪುಣ್ಯಾತ್ಮರುಗಳಿಂದಲೂ–ದೇವರ್ಷಿಗಳಿಂದಲೂ – ಮಹರ್ಷಿಗಳಿಂದಲೂ ಹೇಳಲ್ಪಟ್ಟ ಕಥೆಗಳನ್ನು ಪರಸ್ಪರವಾಗಿ ಹೇಳಿಕೊಳ್ಳುತ್ತಿದ್ದರು. ಇಂದ್ರ-ನಾರದರಿಬ್ಬರೂ ಹೀಗೆ ಏಕಾಗ್ರಚಿತ್ತರಾಗಿ ಹಿಂದೆ ನಡೆದ ಚರಿತ್ರೆಗಳನ್ನು ಅನ್ಯೋನ್ಯವಾಗಿ ಹೇಳಿಕೊಳ್ಳುತ್ತಿರಲು–ಅವರಿಗೆ ಕಿರಣಗಳ ಸಮೂಹಗಳೊಡನೆ ಉದಯಿಸುತ್ತಿದ್ದ ಸೂರ್ಯನ ಪೂರ್ಣಮಂಡಲವು ಕಾಣಿಸಿತು.

ಕೂಡಲೇ ಅವರು ಎದ್ದುನಿಂತು ಸೂರ್ಯೋಪಸ್ಥಾನವನ್ನು ಮಾಡಿದರು. ಉದಯಿಸಿದ ಸೂರ್ಯನ ಸಮೀಪದಲ್ಲಿಯೇ ಬೇರೊಬ್ಬ ಸೂರ್ಯನೋಪಾದಿಯಲ್ಲಿ ಪ್ರಕಾಶಿಸುತ್ತಿದ್ದ, ಪ್ರಜ್ವಲಿಸುವ ಅಗ್ನಿಯ ಜ್ವಾಲೆಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ, ದಿವ್ಯವಾದ ಜ್ಯೋತಿಯೊಂದು ಆಕಾಶದಲ್ಲಿ ಅವರಿಗೆ ಕಾಣಿಸಿತು. ಆ ದಿವ್ಯಜ್ಯೋತಿಯು ಕ್ರಮವಾಗಿ ಇಂದ್ರ-ನಾರದರ ಸಮೀಪಕ್ಕೇ ಬರುತ್ತಿರುವಂತೆ ಕಾಣುತ್ತಿದ್ದಿತು. ಗರುಡ ಮತ್ತು ಸೂರ್ಯರ ಮಾರ್ಗವನ್ನೇ ಹಿಡಿದು ಹೋಗುತ್ತಿದ್ದ ಆ ಜ್ಯೋತಿಯು ವಿಷ್ಣುಲೋಕದ ಒಂದು ವಿಮಾನವೇ ಆಗಿದ್ದಿತು. ತನ್ನ ದಿವ್ಯಜ್ಯೋತಿಯಿಂದ ಮೂರು ಲೋಕಗಳನ್ನೂ ಪ್ರಕಾಶಗೊಳಿಸುತ್ತಿದ್ದ ಆ ವಿಮಾನವು ಅಪ್ರತಿಮವಾದ ಕಿರಣಗಳಿಂದ ದೇದೀಪ್ಯಮಾನವಾಗಿ ಕಾಣುತ್ತಿದ್ದಿತು. ಆ ವಿಮಾನದಲ್ಲವರು ಪರಮಶೋಭನೆಯರಾದ ಅಪ್ಸರಸ್ತ್ರೀಯರಿಂದ ಪುರಸ್ಕೃತಳಾಗಿ ಬೃಹದಾಕಾರದಿಂದ ಕೂಡಿದ್ದ, ಅಂಶುಮಾಲಿಯಾದ ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿ ಅಗ್ನಿಯ ಜ್ವಾಲೆಯಂತೆ ಜಾಜ್ವಲ್ಯಮಾನಳಾಗಿದ್ದ, ನಕ್ಷತ್ರಗಳಂತೆ ಥಳ-ಥಳಿಸುವ ಆಭರಣಗಳನ್ನೂ ಮುತ್ತು-ರತ್ನಗಳ ಹಾರವನ್ನೂ ಧರಿಸಿದ್ದ, ಕಮಲದಳಗಳ ಮಧ್ಯದಲ್ಲಿ ಕುಳಿತಿದ್ದ ಸಾಕ್ಷಾತ್ ಮಹಾಲಕ್ಷ್ಮೀದೇವಿಯನ್ನು ನೋಡಿದರು.

ಅಂಗನೆಯರಲ್ಲಿ ಪರಮಶ್ರೇಷ್ಠಳಾದ ಲಕ್ಷ್ಮೀದೇವಿಯು ವಿಮಾನದ ಮುಂಭಾಗದಿಂದ ಕೆಳಗಿಳಿದು ತ್ರಿಲೋಕೇಶನಾದ ಇಂದ್ರನ ಮತ್ತು ನಾರದರ ಸಮೀಪಕ್ಕೆ ಬಂದಳು. ಒಡನೆಯೇ ನಾರದರಿಂದ ಅನುಸೃತನಾದ ಇಂದ್ರನು ಲಕ್ಷ್ಮೀದೇವಿಯನ್ನು ಸಂಧಿಸಿದನು. ಯಾರಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ತಿಳಿದಿದ್ದ ಇಂದ್ರನು ಒಡನೆಯೇ ಕೈಗಳೆರಡನ್ನೂ ಜೋಡಿಸಿಕೊಂಡು ದೇವಿಗೆ ನಮಸ್ಕರಿಸಿ ಅವಳಿಗೆ ತಾನಾರೆಂಬುದನ್ನು ತಿಳಿಸಿ ಅಮೋಘವಾದ ಪೂಜೆಯನ್ನು ಸಲ್ಲಿಸಿದನು. ಬಳಿಕ ದೇವರಾಜನು ಲಕ್ಷ್ಮಿಯನ್ನು ಕುರಿತು ಹೇಳಿದನು :

ಕಾ ತ್ವಂ ಕೇನ ಚ ಕಾರ್ಯೇಣ ಸಮ್ಪ್ರಾಪ್ತಾ ಚಾರುಹಾಸಿನಿ ।
ಕುತಶ್ಚಾಗಮ್ಯತೇ ಸುಭ್ರು ಗನ್ತವ್ಯಂ ಕ್ವ ಚ ತೇ ಶುಭೇ ॥೧೯॥

“ಸುಮನೋಹರವಾದ ಮಂದಸ್ಮಿತವುಳ್ಳವಳೇ! ನೀನು ಯಾರು? ಯಾವ ಕಾರ್ಯಾರ್ಥವಾಗಿ ನೀನಿಲ್ಲಿಗೆ ಆಗಮಿಸಿರುವೆ? ಸುಂದರವಾದ ಹುಬ್ಬುಗಳುಳ್ಳವಳೇ! ನೀನು ಎಲ್ಲಿಂದ ಬಂದೆ? ಶುಭದರ್ಶನಳೇ! ಮುಂದೆ ನೀನು ಎಲ್ಲಿಗೆ ಹೋಗಬೇಕೆಂದಿರುವೆ?”



ಶ್ರೀದೇವಿಯು ಹೇಳುತ್ತಾಳೆ :

ಪುಣ್ಯೇಷು ತ್ರಿಷು ಲೋಕೇಷು ಸರ್ವೇ ಸ್ಥಾವರಜಙ್ಗಮಾಃ ।
ಮಮಾತ್ಮಭಾವಮಿಚ್ಛನ್ತೋ ಯತನ್ತೇ ಪರಮಾತ್ಮನಾ ॥೨೦॥

“ಇಂದ್ರ! ಪುಣ್ಯತಮವಾದ ಮೂರು ಲೋಕಗಳಲ್ಲಿಯೂ ಇರುವ

ಸಮಸ್ತವಾದ ಚರಾಚರಪ್ರಾಣಿಗಳೂ ನನ್ನ ಅನುಗ್ರಹವನ್ನು ಪಡೆದುಕೊಳ್ಳ ಬೇಕೆಂಬ ಇಚ್ಛೆಯಿಂದಲೇ ಬಹಳ ಉತ್ಸಾಹಪೂರ್ವಕವಾಗಿ ಪ್ರಯತ್ನಗಳನ್ನು ಮಾಡುತ್ತಿರುತ್ತಾರೆ.

ಸಾಹಂ ವೈ ಪಙ್ಕಜೇ ಜಾತಾ ಸೂರ್ಯರಶ್ಮಿವಿಬೋಧಿತೇ ।
ಭೂತ್ಯರ್ಥಂ ಸರ್ವಭೂತಾನಾಂ ಪದ್ಮಾ ಶ್ರೀಃ ಪದ್ಮಮಾಲಿನೀ ॥೨೧॥

ಸರ್ವಪ್ರಾಣಿಗಳಿಗೂ ಸಕಲವಿಧವಾದ ಐಶ್ವರ್ಯವನ್ನೂ ಕೊಡುವ ಸಲುವಾಗಿಯೇ ನಾನು ಸೂರ್ಯನ ಕಿರಣಗಳಿಂದ ವಿಕಸಿತವಾಗುವ ಕಮಲದಲ್ಲಿ ಹುಟ್ಟಿದವಳು. ನಾನೇ ಪದ್ಮೆಯು, ಶ್ರೀಯು, ಪದ್ಮಮಾಲೆಯನ್ನು ಧರಿಸಿರುವವಳು.

ಅಹಂ ಲಕ್ಷ್ಮೀರಹಂ ಭೂತಿಃ ಶ್ರೀಶ್ಚಾಹಂ ಬಲಸೂದನ ।
ಅಹಂ ಶ್ರದ್ಧಾ ಚ ಮೇಧಾ ಚ ಸಂನತಿರ್ವಿಜಿತಿಃ ಸ್ಥಿತಿಃ ॥೨೨॥

ಅಹಂ ಧೃತಿರಹಂ ಸಿದ್ಧಿರಹಂ ತ್ವಿಡ್ಭೂತಿರೇವ ಚ ।
ಅಹಂ ಸ್ವಾಹಾ ಸ್ವಧಾ ಚೈವ ಸಂಸ್ತುತಿರ್ನಿಯತಿಃ ಸ್ಮೃತಿಃ ॥೨೩॥

ಬಲಸೂದನನೇ! ಲಕ್ಷ್ಮಿಯೂ ನಾನೇ. ಭೂತಿಯೂ ಶ್ರೀಯೂ ನಾನೇ. ಶ್ರದ್ಧಾ, ಮೇಧಾ, ಸಂನತಿ, ವಿಜಿತಿ, ಸ್ಥಿತಿ, ಧೃತಿ, ಸಿದ್ಧಿ, ಕಾಂತಿ, ಸಮೃದ್ಧಿ, ಸ್ವಾಹಾ, ಸ್ವಧಾ, ಸಂಸ್ತುತಿ, ನಿಯತಿ ಮತ್ತು ಸ್ಮೃತಿ–ಇವುಗಳೂ ನಾನೇ ಆಗಿದ್ದೇನೆ.

ರಾಜ್ಞಾಂ ವಿಜಯಮಾನಾನಾಂ ಸೇನಾಗ್ರೇಷು ಧ್ವಜೇಷು ಚ ।
ನಿವಾಸೇ ಧರ್ಮಶೀಲಾನಾಂ ವಿಷಯೇಷು ಪುರೇಷು ಚ ॥೨೪॥

ವಿಜಯೇಚ್ಛುಗಳಾದ ರಾಜರ ಸೈನ್ಯಗಳ ಅಗ್ರಭಾಗಗಳಲ್ಲಿಯೂ, ಪತಾಕೆಗಳಲ್ಲಿಯೂ, ಧರ್ಮಶೀಲರಾದ ಶ್ರೇಷ್ಠಪುರುಷರ ನಿವಾಸಸ್ಥಾನ ಗಳಲ್ಲಿಯೂ ಮತ್ತು ಅಂತಹ ಧರ್ಮಶೀಲರಿರುವ ದೇಶಗಳಲ್ಲಿಯೂ, ಪಟ್ಟಣ ಗಳಲ್ಲಿಯೂ ನಾನು ಯಾವಾಗಲೂ ಇರುತ್ತೇನೆ.

ಜಿತಕಾಶಿನಿ ಶೂರೇ ಚ ಸಂಗ್ರಾಮೇಷ್ವನಿವರ್ತಿನಿ ।
ನಿವಸಾಮಿ ಮನುಷ್ಯೇನ್ದ್ರೇ ಸದೈವ ಬಲಸೂದನ ॥೨೫॥

ಬಲಹಂತಕನೇ! ಯುದ್ಧಭೂಮಿಯಿಂದ ವಿಮುಖನಾಗಿ ಹಿಂದಿರುಗದೇ, ವಿಜಯದಿಂದ ಪ್ರಕಾಶಮಾನನಾಗುವ ಶೂರನಾದ ನರೇಂದ್ರನಲ್ಲಿಯೂ ನಾನು ಸದಾ ವಾಸಮಾಡುತ್ತೇನೆ.

ಧರ್ಮನಿತ್ಯೇ ಮಹಾಬುದ್ಧೌ ಬ್ರಹ್ಮಣ್ಯೇ ಸತ್ಯವಾದಿನಿ ।
ಪ್ರಶ್ರಿತೇ ದಾನಶೀಲೇ ಚ ಸದೈವ ನಿವಸಾಮ್ಯಹಮ್ ॥೨೬॥

ನಿತ್ಯವೂ ಧರ್ಮಾಚರಣೆಯಲ್ಲಿಯೇ ಆಸಕ್ತನಾಗಿರುವ, ಮಹಾಬುದ್ಧಿಶಾಲಿಯಾದ, ಬ್ರಾಹ್ಮಣಪ್ರಿಯನಾದ, ಸತ್ಯವಾದಿಯಾದ, ವಿನಯಶೀಲನಾದ ಮತ್ತು ದಾನಶೀಲನಾದ ಪುರುಷನಲ್ಲಿ ನಾನು ಯಾವಾಗಲೂ ವಾಸಮಾಡಿಕೊಂಡಿರುತ್ತೇನೆ.

ಅಸುರೇಷ್ವವಸಂ ಪೂರ್ವಂ ಸತ್ಯಧರ್ಮನಿಬನ್ಧನಾ ।
ವಿಪರೀತಾಂಸ್ತು ತಾನ್ಬುದ್ಧ್ವಾ ತ್ವಯಿ ವಾಸಮರೋಚಯಮ್ ॥೨೭॥

ಅಸುರರಲ್ಲಿದ್ದ ಸತ್ಯ-ಧರ್ಮಗಳಿಂದ ಬಂಧಿಸಲ್ಪಟ್ಟವಳಾಗಿ ನಾನು ಈ ಮೊದಲು ಅಸುರರಲ್ಲಿಯೇ ಇದ್ದೆನು. ಆದರೆ ಈಗ ಅವರು ಸತ್ಯ-ಧರ್ಮಗಳಿಗೆ ವ್ಯತಿರಿಕ್ತರಾಗಿರುವರೆಂಬುದನ್ನು ತಿಳಿದು ನಿನ್ನಲ್ಲಿ ನೆಲೆಗೊಳ್ಳಲು ಅಪೇಕ್ಷಿಸಿದೆನು."

ಇಂದ್ರನು ಪ್ರಶ್ನಿಸುತ್ತಾನೆ :

ಕಥಂ ವೃತ್ತೇಷು ದೈತ್ಯೇಷು ತ್ವಮಾವಾತ್ಸೀರ್ವರಾನನೇ ।
ದೃಷ್ಟ್ವಾ ಚ ಕಿಮಿಹಾಗಾಸ್ತ್ವಂ ಹಿತ್ವಾ ದೈತೇಯದಾನವಾನ್ ॥೨೮॥

"ಸುಮುಖಿಯೇ! ಯಾವ ವಿಧವಾದ ಆಚಾರ-ವ್ಯವಹಾರಗಳನ್ನಿಟ್ಟುಕೊಂಡಿದ್ದ ದೈತ್ಯರಲ್ಲಿ ನೀನು ನಿವಾಸಮಾಡಿಕೊಂಡಿದ್ದೆ? ಈಗ ನೀನು ಆ ದೈತ್ಯ-ದಾನವರನ್ನು ತ್ಯಜಿಸಿ ಬರಲು ಅವರಲ್ಲಿ ನೀನು ಕಂಡುದೇನು?"

ಶ್ರೀದೇವಿಯು ಉತ್ತರಿಸುತ್ತಾಳೆ :

ಸ್ವಧರ್ಮಮನುತಿಷ್ಠತ್ಸು ಧೈರ್ಯಾದಚಲಿತೇಷು ಚ ।
ಸ್ವರ್ಗಮಾರ್ಗಾಭಿರಾಮೇಷು ಸತ್ತ್ವೇಷು ನಿರತಾ ಹ್ಯಹಮ್ ॥೨೯॥

"ಇಂದ್ರ! ಯಾರು ಸ್ವಧರ್ಮನಿರತರಾಗಿರುವರೋ, ಧೈರ್ಯದಿಂದ

ವಿಚಲಿತರಾಗುವುದಿಲ್ಲವೋ, ಸ್ವರ್ಗಪ್ರಾಪ್ತಿಯ ಸಾಧನೆಗಳಲ್ಲಿ ಆನಂದವನ್ನು ಹೊಂದಿರುವರೋ–ಅಂತಹ ಜೀವಿಗಳಲ್ಲಿ ನಾನು ಯಾವಾಗಲೂ ವಾಸಮಾಡುತ್ತೇನೆ.

ದಾನಾಧ್ಯಯನಯಜ್ಞೇಜ್ಯಾಪಿತೃದೈವತಪೂಜನಮ್ ।
ಗುರೂಣಾಮತಿಥೀನಾಂ ಚ ತೇಷಾಂ ಸತ್ಯಮವರ್ತತ ॥೩೦॥

ಹಿಂದೆ ದೈತ್ಯರು-ದಾನ, ಅಧ್ಯಯನ ಮತ್ತು ಯಜ್ಞ-ಯಾಗಾದಿಗಳಲ್ಲಿ ನಿರತರಾಗಿರುತ್ತಿದ್ದರು. ದೇವತೆಗಳನ್ನು ಯಜ್ಞಾದಿಗಳ ಮೂಲಕವಾಗಿಯೂ–ಪಿತೃಗಳನ್ನು ತರ್ಪಣಾದಿಗಳ ಮೂಲಕವಾಗಿಯೂ ಆರಾಧಿಸುತ್ತಿದ್ದರು. ಗುರುಜನರನ್ನೂ–ಅತಿಥಿಗಳನ್ನೂ ಯಥಾಯೋಗ್ಯವಾಗಿ ಸತ್ಕರಿಸುತ್ತಿದ್ದರು. ಮಿಗಿಲಾಗಿ ಸತ್ಯನಿಷ್ಠೆಯೂ ಅವರಲ್ಲಿದ್ದಿತು.

ಸುಸಮ್ಮೃಷ್ಟಗೃಹಾಶ್ಚಾಸಞ್ಜಿತಸ್ತ್ರೀಕಾ ಹುತಾಗ್ನಯಃ ।
ಗುರುಶುಶ್ರೂಷಕಾ ದಾನ್ತಾ ಬ್ರಹ್ಮಣ್ಯಾಃ ಸತ್ಯವಾದಿನಃ ॥೩೧॥

ಚೆನ್ನಾಗಿ ಗುಡಿಸಿ ಸಾರಿಸಿ ಶುದ್ಧವಾದ ಮನೆಗಳಲ್ಲಿರುತ್ತಿದ್ದರು. ತಮ್ಮ ಪತ್ನಿಯರ ಅಂತಃಕರಣಗಳನ್ನು ಪ್ರೀತಿಯ ಮೂಲಕವಾಗಿ ಜಯಿಸಿಕೊಂಡಿದ್ದರು. ಅಗ್ನಿಹೋತ್ರಿಗಳಾಗಿದ್ದರು. ಗುರುಶುಶ್ರೂಷೆಯಲ್ಲಿ ಆಸಕ್ತಿಯುಳ್ಳವರಾಗಿಯೂ, ಜಿತೇಂದ್ರಿಯರಾಗಿಯೂ, ಬ್ರಾಹ್ಮಣಪ್ರಿಯರಾಗಿಯೂ ಮತ್ತು ಸತ್ಯಭಾಷಿಗಳಾಗಿಯೂ ಇದ್ದರು.

ಶ್ರದ್ದಧಾನಾ ಜಿತಕ್ರೋಧಾ ದಾನಶೀಲಾನಸೂಯವಃ ।
ಭೃತಪುತ್ರಾ ಭೃತಾಮಾತ್ಯಾ ಭೃತದಾರಾ ಹ್ಯನೀರ್ಷವಃ ॥೩೨॥

ಅವರು ಕರ್ತವ್ಯದಲ್ಲಿ ಶ್ರದ್ಧಾವಂತರಾಗಿದ್ದರು. ಕೋಪವನ್ನು ಜಯಿಸಿದ್ದರು. ದಾನಶೀಲರಾಗಿದ್ದರು. ಇತರರಲ್ಲಿ ದೋಷವನ್ನೆಣಿಸುತ್ತಿರಲಿಲ್ಲ. ಈರ್ಷ್ಯಾರಹಿತರಾಗಿದ್ದರು. ಪತ್ನೀ-ಪುತ್ರಾಮಾತ್ಯರ ಭರಣ-ಪೋಷಣೆಗಳನ್ನು ಯಥೋಚಿತವಾಗಿ ಮಾಡುತ್ತಿದ್ದರು.

ಅಮರ್ಷೇಣ ನ ಚಾನ್ಯೋನ್ಯಂ ಸ್ಪೃಹಯನ್ತೇ ಕದಾಚನ ।
ನ ಚ ಜಾತೂಪತಪ್ಯನ್ತಿ ಧೀರಾಃ ಪರಸಮೃದ್ಧಿಭಿಃ ॥೩೩॥

ಕ್ರೋಧವಶರಾಗಿ ಒಬ್ಬರು ಮತ್ತೊಬ್ಬರ ಸಂಪತ್ತಿಗೆ ಆಸೆಪಡುತ್ತಿರಲಿಲ್ಲ. ಧೀರರಾಗಿದ್ದ ಅವರು ಬೇರೆಯವರಲ್ಲಿರುತ್ತಿದ್ದ ಸಮೃದ್ಧಿಯಿಂದ ಯಾವಾಗಲೂ ಪರಿತಾಪಪಡುತ್ತಿರಲಿಲ್ಲ.

ದಾತಾರಃ ಸಂಗೃಹೀತಾರ ಆರ್ಯಾಃ ಕರುಣವೇದಿನಃ ।
ಮಹಾಪ್ರಸಾದಾ ಋಜವೋ ದೃಢಭಕ್ತಾ ಜಿತೇನ್ದ್ರಿಯಾಃ ॥೩೪॥

ದೈತ್ಯರು ಸತ್ಪಾತ್ರರಲ್ಲಿ ದಾನಮಾಡುತ್ತಿದ್ದರು. ಸನ್ಮಾರ್ಗದಿಂದ ಧನವನ್ನು ಸಂಗ್ರಹಿಸುತ್ತಿದ್ದರು. ಆರ್ಯಜನೋಚಿತವಾದ ಆಚಾರ-ವ್ಯವಹಾರ ವುಳ್ಳವರಾಗಿದ್ದರು. ಯಾರಲ್ಲಿ ಕರುಣೆತೋರಬೇಕೆಂಬುದನ್ನು ತಿಳಿದವರಾಗಿ ದ್ದರು. ಇತರರಲ್ಲಿ ಅನುಗ್ರಹಬುದ್ಧಿಯುಳ್ಳವರಾಗಿದ್ದರು. ಸರಳಸ್ವಭಾವದವ ರಾಗಿದ್ದರು. ಜಿತೇಂದ್ರಿಯರೂ ದೃಢಭಕ್ತಿಯುಳ್ಳವರೂ ಆಗಿದ್ದರು.

ಸಂತುಷ್ಟಭೃತ್ಯಸಚಿವಾಃ ಕೃತಜ್ಞಾಃ ಪ್ರಿಯವಾದಿನಃ ।
ಯಥಾರ್ಹಮಾನಾರ್ಥಕರಾ ಹ್ರೀನಿಷೇವಾ ಯತವ್ರತಾಃ ॥೩೫॥

ಭೃತ್ಯರೂ-ಮಂತ್ರಿಗಳೂ ಸಂತುಷ್ಟರಾಗಿರುವಂತೆ ನೋಡಿಕೊಳ್ಳು ತ್ತಿದ್ದರು. ಮಾಡಿದ ಉಪಕಾರವನ್ನು ಸ್ಮರಿಸುತ್ತಿದ್ದರು. ಮಧುರಭಾಷಿ ಗಳಾಗಿದ್ದರು. ಸನ್ಮಾನಕ್ಕೆ ಅರ್ಹರಾದವರನ್ನು ಅವರವರ ಯೋಗ್ಯತೆಗೆ ತಕ್ಕಂತೆ ಸನ್ಮಾನಿಸುತ್ತಿದ್ದರು. ಲಜ್ಜಾಶೀಲರಾಗಿದ್ದರು. ವ್ರತ-ನಿಯಮಗಳನ್ನು ಯಥೋ ಚಿತವಾಗಿ ಪರಿಪಾಲಿಸುತ್ತಿದ್ದರು.

ನಿತ್ಯಂ ಪರ್ವಸು ಸುಸ್ನಾತಾಃ ಸ್ವನುಲಿಪ್ತಾಃ ಸ್ವಲಂಕೃತಾಃ ।
ಉಪವಾಸತಪಃಶೀಲಾಃ ಪ್ರತೀತಾ ಬ್ರಹ್ಮವಾದಿನಃ ॥೩೬॥

ಯಾವಾಗಲೂ ಪರ್ವದಿವಸಗಳಲ್ಲಿ ವಿಶೇಷವಾಗಿ ಸ್ನಾನಮಾಡಿ ಗಂಧ ವನ್ನು ಪೂಸಿಕೊಂಡು ತಮ್ಮ ಶರೀರವನ್ನು ಸುಂದರವಾಗಿ ಅಲಂಕರಿಸಿ ಕೊಳ್ಳುತ್ತಿದ್ದರು. ಉಪವಾಸಮಾಡುವ ಮತ್ತು ತಪಸ್ಸುಮಾಡುವ ಸ್ವಭಾವ ದವರಾಗಿದ್ದರು. ಬ್ರಹ್ಮವಾದಿಗಳೆಂದು ಪ್ರಸಿದ್ಧರಾಗಿದ್ದರು.

ನೈನಾನಭ್ಯುದಿಯಾತ್ಸೂರ್ಯೋ ನ ಚಾಪ್ಯಾಪನ್ಪ್ರಗೇಶಯಾಃ ।
ರಾತ್ರೌ ದಧಿ ಚ ಸಕ್ತೂಂಚ ನಿತ್ಯಮೇವ ವ್ಯವರ್ಜಯನ್ ॥೩೭॥

ದೈತ್ಯರು ಏಳುವ ಮೊದಲು ಸೂರ್ಯನು ಉದಯಿಸುತ್ತಲೇ ಇರಲಿಲ್ಲ. ಅರ್ಥಾತ್ ಅವರು ಸೂರ್ಯೋದಯಕ್ಕೆ ಮುಂಚಿತವಾಗಿಯೇ ಎದ್ದುಬಿಡುತ್ತಿದ್ದರು. ರಾತ್ರಿಯಲ್ಲಿ ಮೊಸರನ್ನಾಗಲೀ ಹುರಿದ ಹಿಟ್ಟನ್ನಾಗಲೀ ತಿನ್ನುತ್ತಿರಲಿಲ್ಲ.

ಕಲ್ಯಂ ಘೃತಂ ಚಾನ್ವವೇಕ್ಷನ್ಪ್ರಯತಾ ಬ್ರಹ್ಮವಾದಿನಃ ।
ಮಙ್ಗಲ್ಯಾನ್ಯಪಿ ಚಾಪಶ್ಯನ್ಬ್ರಾಹ್ಮಣಾಂಶ್ಚಾಪ್ಯಪೂಜಯನ್ ॥೩೮॥

ಮನಸ್ಸನ್ನೂ-ಇಂದ್ರಿಯಗಳನ್ನೂ ವಶದಲ್ಲಿಟ್ಟುಕೊಂಡಿದ್ದ, ವೇದಾಧ್ಯಾಯಿಗಳಾಗಿದ್ದ ದೈತ್ಯರು ಬೆಳಗಾದೊಡನೆಯೇ ಮಂಗಳಕರವಾದ ತುಪ್ಪದಲ್ಲಿ ಮುಖಗಳನ್ನು ನೋಡಿಕೊಳ್ಳುತ್ತಿದ್ದರು. ಹಾಗೆಯೇ ಇತರ ಮಂಗಳ ವಸ್ತುಗಳನ್ನೂ ಸಂದರ್ಶಿಸುತ್ತಿದ್ದರು. ಬ್ರಾಹ್ಮಣರನ್ನು ಸತ್ಕರಿಸುತ್ತಿದ್ದರು.

ಸದಾ ಹಿ ವದತಾಂ ಧರ್ಮಂ ಸದಾ ಚಾಪ್ರತಿಗೃಹ್ಣತಾಮ್ ।
ಅರ್ಧಂ ಚ ರಾತ್ರ್ಯಾಃ ಸ್ವಪತಾಂ ದಿವಾ ಚಾಸ್ವಪತಾಂ ತಥಾ ॥೩೯॥

ಯಾವಾಗಲೂ ಧರ್ಮದ ವಿಷಯವನ್ನೇ ಚರ್ಚಿಸುತ್ತಿದ್ದ, ಯಾವಾಗಲೂ ಪ್ರತಿಗ್ರಹಮಾಡದಿದ್ದ, ರಾತ್ರಿಯ ಅರ್ಧಭಾಗವು ಕಳೆದನಂತರವೇ ಮಲಗುತ್ತಿದ್ದ, ಹಗಲಿನಲ್ಲಿ ಮಲಗದೇ ಇರುತ್ತಿದ್ದ ದೈತ್ಯೇಂದ್ರರಲ್ಲಿ ನಾನು ವಾಸವಾಗಿದ್ದೆನು.

ಕೃಪಣಾನಾಥವೃದ್ಧಾನಾಂ ದುರ್ಬಲಾತುರಯೋಷಿತಾಮ್ ।
ದಯಾಂ ಚ ಸಂವಿಭಾಗಂ ಚ ನಿತ್ಯಮೇವಾನ್ವಮೋದತಾಮ್ ॥೪೦॥

ಕೃಪಣರ, ಅನಾಥರ, ವೃದ್ಧರ, ದುರ್ಬಲರ ಮತ್ತು ಸ್ತ್ರೀಯರ ವಿಷಯದಲ್ಲಿ ದಯೆಯನ್ನು ತೋರುತ್ತಾ, ಅವರುಗಳಿಗೆ ಬೇಕಾದ ಅನ್ನ-ವಸ್ತ್ರಾದಿಗಳನ್ನು ವಿಭಾಗಮಾಡಿಕೊಡುತ್ತಿದ್ದ, ನಿತ್ಯವೂ ಇಂತಹ ಸತ್ಕಾರ್ಯಗಳಿಗೆ ಅನುಮೋದನೆಯನ್ನು ನೀಡುತ್ತಿದ್ದ ದಾನವೇಂದ್ರರಲ್ಲಿ ನಾನು ವಾಸವಾಗಿದ್ದೆನು.

ತ್ರಸ್ತಂ ವಿಷಣ್ಣಮುದ್ವಿಗ್ನಂ ಭಯಾರ್ತಂ ವ್ಯಾಧಿತಂ ಕೃಶಮ್ ।
ಹೃತಸ್ವಂ ವ್ಯಸನಾರ್ತಂ ಚ ನಿತ್ಯಮಾಶ್ವಾಸಯನ್ತಿ ತೇ ॥೪೧॥

ಭಯಗೊಂಡವನನ್ನೂ, ವಿಷಾದಗ್ರಸ್ತನನ್ನೂ, ಉದ್ವಿಗ್ನನಾದವನನ್ನೂ, ಭಯಪೀಡಿತನಾದವನನ್ನೂ, ರೋಗಗ್ರಸ್ತನನ್ನೂ, ದುರ್ಬಲನನ್ನೂ, ಐಶ್ವರ್ಯ ವನ್ನು ಕಳೆದುಕೊಂಡವನನ್ನೂ, ವ್ಯಸನದಿಂದ ಪೀಡಿತನಾದವನನ್ನೂ ದೈತ್ಯರು ನಿತ್ಯವೂ ಸಂತೈಸುತ್ತಿದ್ದರು.

ಧರ್ಮವೇವಾನ್ವವರ್ತನ್ತ ನ ಹಿಂಸನ್ತಿ ಪರಸ್ಪರಮ್ ।
ಅನುಕೂಲಾಶ್ಚ ಕಾರ್ಯೇಷು ಗುರುವೃದ್ಧೋಪಸೇವಿನಃ ॥೪೨॥

ಯಾವಾಗಲೂ ಧರ್ಮಮಾರ್ಗವನ್ನೇ ಅನುಸರಿಸಿ ನಡೆಯುತ್ತಿದ್ದರು. ಒಬ್ಬರು ಮತ್ತೊಬ್ಬರನ್ನು ಹಿಂಸಿಸುತ್ತಿರಲಿಲ್ಲ. ಎಲ್ಲ ಕಾರ್ಯಗಳಲ್ಲಿಯೂ ಪರಸ್ಪರವಾಗಿ ಸಹಕರಿಸುತ್ತಿದ್ದರು. ಗುರುಜನರ ಮತ್ತು ವೃದ್ಧರ ಸೇವೆಯನ್ನು ಮಾಡುತ್ತಿದ್ದರು.

ಪಿತೄನ್ದೇವಾತಿಥೀಂಶ್ಚೈವ ಯಥಾವತ್ತೇಽಭ್ಯಪೂಜಯನ್ ।
ಅವಶೇಷಾಣಿ ಚಾಶ್ನನ್ತಿ ನಿತ್ಯಂ ಸತ್ಯತಪೋಧೃತಾಃ ॥೪೩॥

ಪಿತೃಗಳನ್ನೂ, ದೇವತೆಗಳನ್ನೂ, ಅತಿಥಿಗಳನ್ನೂ ವಿಧಿವತ್ತಾಗಿ ಸಂಪೂ ಜಿಸುತ್ತಿದ್ದರು. ಅವರಿಗೆ ಅರ್ಪಿಸಿದನಂತರವೇ ಉಳಿದ ಅನ್ನವನ್ನು ಭೋಜನ ಮಾಡುತ್ತಿದ್ದರು. ಅವರೆಲ್ಲರೂ ನಿತ್ಯತಪಸ್ವಿಗಳಾಗಿಯೂ–ಸತ್ಯವಾದಿಗಳಾ ಗಿಯೂ ಇದ್ದರು.

ನೈಕೇಽಶ್ನನ್ತಿ ಸುಸಮ್ಪನ್ನಂ ನ ಗಚ್ಛನ್ತಿ ಪರಸ್ತ್ರಿಯಮ್ ।
ಸರ್ವಭೂತೇಷ್ವವರ್ತನ್ತ ಯಥಾತ್ಮನಿ ದಯಾಂ ಪ್ರತಿ ॥೪೪॥

ಅವರೆಂದಿಗೂ ಮೃಷ್ಟಾನ್ನವನ್ನು ಒಬ್ಬೊಬ್ಬರೇ ತಿನ್ನುತ್ತಿರಲಿಲ್ಲ. ಬಂಧು-ಬಾಂಧವರೊಡನೆ ಸೇರಿಕೊಂಡು ಭೋಜನಮಾಡುತ್ತಿದ್ದರು. ಅನ್ಯ ಸ್ತ್ರೀಯೊಡನೆ ಸಮಾಗಮಮಾಡುತ್ತಿರಲಿಲ್ಲ. ಇತರರನ್ನು ತಮ್ಮಂತೆಯೇ ಕಂಡುಕೊಂಡು ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ದಯಾಪರರಾಗಿರು ತ್ತಿದ್ದರು.

ನೈವಾಕಾಶೇ ನ ಪಶುಷು ವಿಯೋನೌ ನ ಚ ಪರ್ವಸು ।
ಇನ್ದ್ರಿಯಸ್ಯ ವಿಸರ್ಗಂ ತೇ ರೋಚಯನ್ತಿ ಕದಾಚನ ॥೪೫॥

ಆಕಾಶದಲ್ಲಾಗಲೀ, ಪಶುಗಳಲ್ಲಾಗಲೀ, ಕುತ್ಸಿತವಾದ ಯೋನಿಗಳಲ್ಲಾಗಲೀ, ಪರ್ವಸಮಯಗಳಲ್ಲಾಗಲೀ ವೀರ್ಯೋತ್ಸರ್ಜನೆಮಾಡಲು ಅವರು ಯಾವಾಗಲೂ ಇಷ್ಟಪಡುತ್ತಿರಲಿಲ್ಲ.

ನಿತ್ಯಂ ದಾನಂ ತಥಾ ದಾಕ್ಷ್ಯಮಾರ್ಜವಂ ಚೈವ ನಿತ್ಯದಾ ।
ಉತ್ಸಾಹೋಽಥಾನಹಂಕಾರಃ ಪರಮಂ ಸೌಹೃದಂ ಕ್ಷಮಾ ॥೪೬॥

ಸತ್ಯಂ ದಾನಂ ತಪಃ ಶೌಚಂ ಕಾರುಣ್ಯಂ ವಾಗನಿಷ್ಠುರಾ ।
ಮಿತ್ರೇಷು ಚಾನಭಿದ್ರೋಹಃ ಸರ್ವಂ ತೇಷ್ವಭವತ್ಪ್ರಭೋ ॥೪೭॥

ಪ್ರಭುವೇ! ಯಾವಾಗಲೂ ದಾನಕೊಡುವುದು, ಚತುರತೆ, ಸರಳತೆ, ಉತ್ಸಾಹ, ಅಹಂಕಾರರಾಹಿತ್ಯ, ಪರಮಸೌಹಾರ್ದ, ಕ್ಷಮೆ, ಸತ್ಯನಿಷ್ಠೆ, ದಾನ, ತಪಸ್ಸು, ಅಂತರ್ಬಾಹ್ಯ ಪವಿತ್ರತೆ, ಕರುಣೆ, ಮೃದುವಾದ ಮಾತು, ಮಿತ್ರರ ವಿಷಯದಲ್ಲಿ ದ್ರೋಹವೆಸಗದೇ ಇರುವುದು –ಈ ಎಲ್ಲ ಸದ್ಗುಣಗಳೂ ದೈತ್ಯರಲ್ಲಿದ್ದುವು.

ನಿದ್ರಾ ತನ್ದ್ರೀರಸಮ್ಪ್ರೀತಿರಸೂಯಾಥಾನವೇಕ್ಷಿತಾ ।
ಅರತಿಶ್ಚ ವಿಷಾದಶ್ಚ ಸ್ಪೃಹಾ ಚಾಪ್ಯವಿಶನ್ನ ತಾನ್ ॥೪೮॥

ನಿದ್ರೆ, ಆಲಸ್ಯ, ಅಪ್ರಸನ್ನತೆ, ದೋಷದೃಷ್ಟಿ, ಅವಿವೇಕ, ಅಪ್ರೀತಿ, ವಿಷಾದ ಮತ್ತು ಕಾಮನೆ –ಈ ದುರ್ಗುಣಗಳಾವುವೂ ಅವರನ್ನು ಪ್ರವೇಶಿಸುತ್ತಿರಲಿಲ್ಲ.

ಸಾಹಮೇವಂಗುಣೇಷ್ವೇವ ದಾನವೇಷ್ವವಸಂ ಪುರಾ ।
ಪ್ರಜಾಸರ್ಗಮುಪಾದಾಯ ನೈಕಂ ಯುಗವಿಪರ್ಯಯಮ್ ॥೪೯॥

ಹೀಗೆ ನಾನು ಉತ್ತಮವಾದ ಗುಣಗಳನ್ನು ಹೊಂದಿದ್ದ ದಾನವರ ಬಳಿಯಲ್ಲಿ ಸೃಷ್ಟಿಕಾಲವು ಮೊದಲುಗೊಂಡು ಇಲ್ಲಿಯವರೆಗೆ ಅನೇಕಯುಗಗಳ ಪರ್ಯಂತವಾಗಿ ವಾಸಮಾಡಿಕೊಂಡಿದ್ದೆನು.

ತತಃ ಕಾಲವಿಪರ್ಯಾಸೇ ತೇಷಾಂ ಗುಣವಿಪರ್ಯಯಾತ್ ।
ಅಪಶ್ಯಂ ನಿರ್ಗತಂ ಧರ್ಮಂ ಕಾಮಕ್ರೋಧವಶಾತ್ಮನಾಮ್ ॥೫೦॥

ಬಳಿಕ ಕಾಲವಿಪರ್ಯಾಸದಿಂದಾಗಿ ಆ ದೈತ್ಯರಲ್ಲಿದ್ದ ಗುಣಗಳೂ

ವಿಪರ್ಯಾಸವನ್ನು ಹೊಂದಿದುವು. ಒಳ್ಳೆಯ ಗುಣಗಳು ಕೆಟ್ಟಗುಣಗಳಾಗಿ ಪರಿವರ್ತನೆ ಹೊಂದಿದುವು. ಕಾಲದ ವಿಪರ್ಯಾಸದಿಂದಲೇ ಕಾಮ-ಕ್ರೋಧಗಳಿಗೆ ವಶರಾದ ಅವರಿಂದ ಧರ್ಮವು ಹೊರಟುಹೋದುದನ್ನು ನಾನು ಕಂಡೆನು.

ಸಭಾಸದಾಂ ಚ ವೃದ್ಧಾನಾಂ ಸತಾಂ ಕಥಯತಾಂ ಕಥಾಃ ।
ಪ್ರಾಹಸನ್ನಭ್ಯಸೂಯಂಶ್ಚ ಸರ್ವವೃದ್ಧಾನ್ಗುಣಾವರಾಃ ॥೫೧॥

ರಾಜಸಭೆಗಳಲ್ಲಿ ವೃದ್ಧರಾದ ಸಭಾಸದರು ನೀತಿಯುಕ್ತವಾದ ಕಥೆಗಳನ್ನೂ ಹೇಳುತ್ತಿದ್ದರೆ–ಗುಣಗಳಿಂದ ಬಹಳ ಕೀಳಾದ ರಾಕ್ಷಸರು ವೃದ್ಧರ ಮಾತುಗಳನ್ನು ಕೇಳಿ ಗಹ-ಗಹಿಸಿ ನಗುತ್ತಾರೆ. ಆ ವೃದ್ಧರಾಡುತ್ತಿದ್ದ ಮಾತುಗಳಲ್ಲಿಯೂ ಆ ದೈತ್ಯರು ದೋಷಗಳನ್ನೇ ಕಾಣತೊಡಗಿದ್ದಾರೆ.

ಯುವಾನಶ್ಚ ಸಮಾಸೀನಾ ವೃದ್ಧಾನಪಿ ಗತಾನ್ಸತಃ ।
ನಾಭ್ಯುತ್ಥಾನಾಭಿವಾದಾಭ್ಯಾಂ ಯಥಾಪೂರ್ವಮಪೂಜಯನ್ ॥೫೨॥

ದೈತ್ಯಯುವಕರು ಉಚ್ಚಾಸನಗಳಲ್ಲಿ ಕುಳಿತಿದ್ದಾಗ ಸತ್ಪುರುಷರಾದ ವೃದ್ಧರು ಅವರ ಬಳಿಗೆ ಬಂದು-ಹೋಗುತ್ತಿದ್ದರೂ ಹಿಂದಿನಂತೆ ಎದ್ದುನಿಂತು ಅವರಿಗೆ ಅಭಿವಾದನಮಾಡಿ ಪುರಸ್ಕಾರವನ್ನು ಕೊಡುತ್ತಿಲ್ಲ.

ವರ್ತಯತ್ಯೇವ ಪಿತರಿ ಪುತ್ರಃ ಪ್ರಭವತೇ ತಥಾ ।
ಅಮಿತ್ರಭೃತ್ಯತಾಂ ಪ್ರಾಪ್ಯ ಖ್ಯಾಪಯನ್ತ್ಯನಪತ್ರಪಾಃ ॥೫೩॥

ತಂದೆಯು ಬದುಕಿರುವಾಗಲೇ ಮಗನು ಯಜಮಾನನಾಗುತ್ತಿದ್ದಾನೆ. ಶತ್ರುವಿಗೆ ಅಡಿಯಾಳಾಗಿರುವುದು ಮಾತ್ರವಲ್ಲದೇ ತಾವು ಅಡಿಯಾಳಾಗಿರುವುದನ್ನು ನಾಚಿಕೆಯೇ ಇಲ್ಲದೆ ಬೇರೆಯವರೊಡನೆಯೂ ಹೇಳಿಕೊಳ್ಳುತ್ತಿದ್ದಾರೆ.

ತಥಾ ಧರ್ಮಾದಪೇತೇನ ಕರ್ಮಣಾ ಗರ್ಹಿತೇನ ಯೇ ।
ಮಹತಃ ಪ್ರಾಪ್ನುವನ್ತ್ಯರ್ಥಾಸ್ತೇಷಾಂ ತತ್ರಾಭವತ್ಸ್ಪೃಹಾ ॥೫೪॥

ಧರ್ಮಕ್ಕೆ ವಿರುದ್ಧವಾದ ಮತ್ತು ನಿಂದ್ಯವಾದ ಕರ್ಮದಿಂದ ಅವರು ಅಪಾರವಾದ ಧನವನ್ನು ಸಂಪಾದಿಸುತ್ತಿದ್ದಾರೆ. ಆ ರೀತಿಯಲ್ಲಿ ಧನವನ್ನು

ಸಂಗ್ರಹಿಸುತ್ತಿದ್ದಂತೆಲ್ಲಾ ಅವರ ಧನಸಂಗ್ರಹದ ಅಭಿಲಾಷೆಯು ಅಧಿಕವಾಗುತ್ತಲೇ ಇದೆ.

ಉಚ್ಚೈಃಶ್ಚಾಭ್ಯವದನ್ರಾತೌ ನೀಚೈಸ್ತತ್ರಾಗ್ನಿರಜ್ವಲತ್ ।
ಪುತ್ರಾಃ ಪಿತೄನತ್ಯಚರನ್ನಾರ್ಯಶ್ಚಾತ್ಯಚರನ್ಪತೀನ್ ॥೫೫॥

ರಾತ್ರಿಯಲ್ಲಿ ದೈತ್ಯರು ಗಟ್ಟಿಯಾಗಿ ಕಿರುಚಾಡುತ್ತಾರೆ. ಅವರ ಮನೆಯಲ್ಲಿ ಅಗ್ನಿಹೋತ್ರಾಗ್ನಿಯು ಸಣ್ಣದಾಗಿ ಉರಿಯುತ್ತಿದೆ. ಮಕ್ಕಳು ತಂದೆಯನ್ನೂ–ಸ್ತ್ರೀಯರು ಪತಿಯನ್ನೂ ಅತಿಕ್ರಮಿಸಿ ಹೋಗುತ್ತಿದ್ದಾರೆ.

ಮಾತರಂ ಪಿತರಂ ವೃದ್ಧಮಾಚಾರ್ಯಮತಿಥಿಂ ಗುರುಮ್ ।
ಗುರುತ್ವಾನ್ನಾಭ್ಯನನ್ದನ್ತ ಕುಮಾರಾನ್ನಾನ್ವಪಾಲಯನ್ ॥೫೬॥

ದೈತ್ಯ-ದಾನವರು ತಂದೆ-ತಾಯಿಗಳನ್ನೂ, ವೃದ್ಧರನ್ನೂ, ಆಚಾರ್ಯನನ್ನೂ, ಅತಿಥಿಯನ್ನೂ, ಗುರುವನ್ನೂ–ಗುರುತ್ವದ ಕಾರಣಕ್ಕಾಗಿಯೂ ಅಭಿವಂದಿಸುತ್ತಿಲ್ಲ. ಮಕ್ಕಳ ಲಾಲನೆ-ಪಾಲನೆಗಳನ್ನೂ ಮಾಡುತ್ತಿಲ್ಲ.

ಭಿಕ್ಷಾಂ ಬಲಿಮದತ್ತ್ವಾ ಚ ಸ್ವಯಮನ್ನಾನಿ ಭುಞ್ಜತೇ ।
ಅನಿಷ್ಟ್ವಾ ಸಂವಿಭಜ್ಯಾಥ ಪಿತೃದೇವಾತಿಥೀನ್ಗುರೂನ್ ॥೫೭॥

ಭಿಕ್ಷೆಯನ್ನಾಗಲೀ ವೈಶ್ವದೇವಬಲಿಯನ್ನಾಗಲೀ ಕೊಡದೇ, ಯಜ್ಞ ಮಾಡದೇ, ಪಿತೃ-ದೇವಾತಿಥಿ-ಗುರುಗಳಿಗೆ ಸಲ್ಲಬೇಕಾದುದನ್ನು ವಿಭಾಗಮಾಡಿಕೊಡದೇ ದೈತ್ಯರು ಮೃಷ್ಟಾನ್ನವನ್ನು ತಾವೇ ಉಪಭುಂಜಿಸಲು ಪ್ರಾರಂಭಿಸಿದ್ದಾರೆ.

ನ ಶೌಚಮನುರುಧ್ಯನ್ತ ತೇಷಾಂ ಸೂದಜನಾಸ್ತಥಾ ।
ಮನಸಾ ಕರ್ಮಣಾ ವಾಚಾ ಭಕ್ಷ್ಯಮಾಸೀದನಾವೃತಮ್ ॥೫೮॥

ದೈತ್ಯರೂ ಮತ್ತು ಅವರ ಅಡಿಗೆಯವರೂ ಮನಸ್ಸಿನಿಂದಲೂ, ಮಾತಿನಿಂದಲೂ ಮತ್ತು ಕರ್ಮದಿಂದಲೂ ಶೌಚಾಚಾರಗಳ ಅನುಷ್ಠಾನವನ್ನು ಮಾಡುತ್ತಿಲ್ಲ. ಅವರು ತಿನ್ನುವ ಪದಾರ್ಥಗಳು ಆವರಣವೇ ಇಲ್ಲದೇ ಇರುತ್ತವೆ. ತಿನ್ನುವ ಪದಾರ್ಥಗಳನ್ನು ಮುಚ್ಚಿಡುವ ಪದ್ಧತಿಯನ್ನೇ ಬಿಟ್ಟಿದ್ದಾರೆ. ಅಥವಾ ಸಾರ್ವಜನಿಕವಾದ ಸ್ಥಳಗಳಲ್ಲಿ ಎಲ್ಲರ ದೃಷ್ಟಿಯೂ ಬೀಳುವಂತಹ ಸ್ಥಳಗಳಲ್ಲಿ ವಿವೇಚನೆಯಿಲ್ಲದೇ ಭೋಜನಮಾಡುತ್ತಾರೆ.

ವಿಪ್ರಕೀರ್ಣಾನಿ ಧಾನ್ಯಾನಿ ಕಾಕಮೂಷಿಕಭೋಜನಮ್ ।
ಅಪಾವೃತಂ ಪಯೋಽತಿಷ್ಠದುಚ್ಛಿಷ್ಟಾಶ್ಚಾಸ್ಪೃಶನ್ಘೃತಮ್ ॥೫೯॥

ದೈತ್ಯರ ಮನೆಗಳಲ್ಲಿ ಧಾನ್ಯಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುತ್ತವೆ. ಹಾಗೆ ಬಿದ್ದಿರುವ ಧಾನ್ಯಗಳ ಕಾಳುಗಳನ್ನು ಕಾಗೆಗಳೂ–ಇಲಿಗಳೂ ತಿನ್ನುತ್ತವೆ. ಹಾಲಿನ ಪಾತ್ರೆಯನ್ನು ಮುಚ್ಚಿಡುತ್ತಿಲ್ಲ. ಎಂಜಲು ಕೈಯಿಂದಲೇ ತುಪ್ಪವನ್ನು ಮುಟ್ಟುತ್ತಾರೆ.

ಕುದ್ದಾಲಂ ದಾತ್ರಪಿಟಕಂ ಪ್ರಕೀರ್ಣಂ ಕಾಂಸ್ಯಭಾಜನಮ್ ।
ದ್ರವ್ಯೋಪಕರಣಂ ಸರ್ವಂ ನಾನ್ವವೈಕ್ಷತ್ಕುಟುಮ್ಬಿನೀ ॥೬೦॥

ದೈತ್ಯರ ಮನೆಗಳಲ್ಲಿ ಗುದ್ದಲಿ, ಕುಡುಗೋಲು, ಮಂಕರಿ, ಕಂಚಿನ ಪಾತ್ರೆ, ಹೋಮದ್ರವ್ಯಗಳು ಮತ್ತು ಇತರ ಉಪಕರಣಗಳು ಅಸ್ತವ್ಯಸ್ತವಾಗಿ ಬಿದ್ದಿರುತ್ತವೆ. ಮನೆಯ ಯಜಮಾನಿಯು ಅವುಗಳ ಕಡೆಗೆ ಲಕ್ಷ್ಯವನ್ನೇ ಕೊಡುವುದಿಲ್ಲ.

ಪ್ರಾಕಾರಾಗಾರವಿಧ್ವಂಸಾನ್ನ ಸ್ಮ ತೇ ಪ್ರತಿಕುರ್ವತೇ ।
ನಾದ್ರಿಯನ್ತೇ ಪಶೂನ್ಬದ್ಧ್ವಾ ಯವಸೇನೋದಕೇನ ಚ ॥೬೧॥

ಬಿದ್ದುಹೋಗಿರುವ ಪ್ರಾಕಾರಗಳನ್ನಾಗಲೀ ಮುರಿದುಬಿದ್ದಿರುವ ಮನೆಗಳನ್ನಾಗಲೀ ದೈತ್ಯರು ಸರಿಪಡಿಸುತ್ತಿಲ್ಲ. ಗೋಶಾಲೆಗಳಲ್ಲಿ ಕಟ್ಟಿಹಾಕಿರುವ ಹಸು ಮೊದಲಾದ ಪ್ರಾಣಿಗಳಿಗೆ ಮೇವು ಹಾಕಿ ನೀರುಕುಡಿಸಿ ಉಪಚರಿಸುತ್ತಿಲ್ಲ.

ಬಾಲಾನಾಂ ಪ್ರೇಕ್ಷಮಾಣಾನಾಂ ಸ್ವಯಂ ಭಕ್ಷ್ಯಮಭಕ್ಷಯನ್ ।
ತಥಾ ಭೃತ್ಯಜನಂ ಸರ್ವಮಸಂತರ್ಪ್ಯ ಚ ದಾನವಾಃ ॥೬೨॥

ಈಗೀಗ ದಾನವರು, ಮಕ್ಕಳು ನೋಡುತ್ತಿರುವಂತೆಯೇ ಅವರಿಗೆ ಸ್ವಲ್ಪವಾದರೂ ತಿನ್ನಲು ಕೊಡದೆ ಭಕ್ಷ್ಯಾದಿಗಳನ್ನು ತಾವೇ ತಿನ್ನುತ್ತಾರೆ. ಅದೇ ರೀತಿಯಲ್ಲಿ ಸೇವಕರನ್ನಾಗಲೀ ಪರಿವಾರದವರನ್ನಾಗಲೀ ತೃಪ್ತಿಗೊಳಿಸದೇ ತಾವು ಮಾತ್ರ ಸುಖೋಪಭೋಗಗಳಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ.

ಪಾಯಸಂ ಕೃಸರಂ ಮಾಂಸಮಪೂಪಾನಥ ಶಷ್ಕುಲೀಃ ।
ಅಪಾಚಯನ್ನಾತ್ಮನೋಽರ್ಥೇ ವೃಥಾಮಾಂಸಾನ್ಯಭಕ್ಷಯನ್ ॥೬೩॥

ಪಾಯಸ, ಎಳ್ಳನ್ನ, ಮಾಂಸ, ಅಪೂಪ, ಚಕ್ಕುಲಿ –ಇವುಗಳನ್ನು ತಾವು ತಿನ್ನಲು ಮಾತ್ರವೇ ಮಾಡಿಸಿಕೊಳ್ಳುತ್ತಾರೆ. ನಿಷ್ಕಾರಣವಾಗಿ (ಬಾಯಿಚಪಲಕ್ಕಾಗಿ) ಮಾಂಸವನ್ನು ತಿನ್ನುತ್ತಾರೆ.

ಉತ್ಸೂರ್ಯಶಾಯಿನಶ್ಚಾಸನ್ಸರ್ವೇ ಚಾಸನ್ಪ್ರಗೇನಿಶಾಃ ।
ಅವರ್ತನ್ಕಲಹಾಶ್ಚಾತ್ರ ದಿವಾರಾತ್ರಂ ಗೃಹೇ ಗೃಹೇ ॥೬೪॥

ದೈತ್ಯರು ಸೂರ್ಯೋದಯವಾಗುವ ಪರ್ಯಂತವೂ ಮಲಗಿಯೇ ಇರುತ್ತಾರೆ. ಪ್ರಾತಃಕಾಲವನ್ನೂ ರಾತ್ರಿಯೆಂದೇ ಭಾವಿಸುತ್ತಾರೆ. ಪ್ರತಿಯೊಬ್ಬ ದೈತ್ಯನ ಮನೆಯಲ್ಲಿಯೂ ಯಾವುದಾದರೂ ಕಾರಣದಿಂದ ಹಗಲು-ರಾತ್ರಿ ಜಗಳಗಳು ನಡೆಯುತ್ತಲೇ ಇರುತ್ತವೆ.

ಅನಾರ್ಯಾಶ್ಚಾರ್ಯಮಾಸೀನಂ ಪರ್ಯುಪಾಸನ ತತ್ರ ಹ ।
ಆಶ್ರಮಸ್ಥಾನ್ವಿಧರ್ಮಸ್ಥಾಃ ಪ್ರಾದ್ವಿಷಂತ ಪರಸ್ಪರಮ್ ॥೬೫॥

ಅನಾರ್ಯರಾದ ದೈತ್ಯರು ಮನೆಗಳಲ್ಲಿ ಕುಳಿತಿರುವ ಆರ್ಯಪುರುಷನನ್ನು ಸೇವಿಸುತ್ತಿಲ್ಲ. ಅಧರ್ಮಪರಾಯಣರಾದ ಅವರು ಒಬ್ಬರನ್ನೊಬ್ಬರು ದ್ವೇಷಿಸುತ್ತಾರೆ ಮತ್ತು ಆಶ್ರಮವಾಸಿಗಳಾದ ಮಹಾತ್ಮರನ್ನು ದ್ವೇಷಿಸುತ್ತಾರೆ. (ವರ್ಣಾಶ್ರಮಧರ್ಮದಲ್ಲಿರುವವರನ್ನು ಆ ವಿಧರ್ಮೀಯರು ದ್ವೇಷಿಸುತ್ತಾರೆ.)

ಸಂಕರಾಶ್ಚಾಭ್ಯವರ್ತಂತ ನ ಚ ಶೌಚಮವರ್ತತ ।
ಯೇ ಚ ವೇದವಿದೋ ವಿಪ್ರಾ ವಿಸ್ಪಷ್ಟಮನೃಚಶ್ಚ ಯೇ ।
ನಿರಂತರವಿಶೇಷಾಸ್ತೇ ಬಹುಮಾನಾವಮಾನಯೋಃ ॥೬೬॥

ಈಗ ದೈತ್ಯರಲ್ಲಿ ವರ್ಣಸಂಕರವಾಗತೊಡಗಿದೆ. ಯಾರಲ್ಲಿಯೂ ಪವಿತ್ರತೆಯೆಂಬುದೇ ಇಲ್ಲ. ವೇದಾಧ್ಯಯನವನ್ನು ಮಾಡಿರುವ ಬ್ರಾಹ್ಮಣರಲ್ಲಿಯೂ–ವೇದದ ಒಂದು ಋಕ್ಕನ್ನೂ ತಿಳಿಯದೇ ಇರುವವರಲ್ಲಿಯೂ ದೈತ್ಯರು ಯಾವ ವ್ಯತ್ಯಾಸವನ್ನೂ ಕಾಣುತ್ತಿಲ್ಲ.

(ವೇದಾಧ್ಯಾಯಿಗಳಿಗೂ ವೇದವಿದ್ಯಾಶೂನ್ಯರಿಗೂ ಬಹುಮಾನ ಅಥವಾ ಅವಮಾನಮಾಡಬೇಕಾದ ಸಂದರ್ಭದಲ್ಲಿ ದೈತ್ಯರು ಆ ಇಬ್ಬರಲ್ಲಿ ಯಾವ ತಾರತಮ್ಯವನ್ನೂ ತೋರುತ್ತಿಲ್ಲ.)

ಹಾರಮಾಭರಣಂ ವೇಷಂ ಗತಂ ಸ್ಥಿತಮವೇಕ್ಷಿತಮ್ ।
ಅಸೇವನ್ತ ಭುಜಿಷ್ಯಾ ವೈ ದುರ್ಜನಾಚರಿತಂ ವಿಧಿಮ್ ॥೬೭॥

ಇತ್ತೀಚೆಗೆ ದೈತ್ಯರ ಮನೆಗಳಲ್ಲಿರುವ ದಾಸಿಯರು ಸುಂದರವಾದ ಹಾರಗಳನ್ನೂ ಆಭರಣಗಳನ್ನೂ ತೊಟ್ಟು ಚೆನ್ನಾಗಿ ಸಿಂಗರಿಸಿಕೊಂಡು ಅಲ್ಲಲ್ಲಿ ತಿರುಗತೊಡಗಿದ್ದಾರೆ. ಯುವಕರಿರುವ ಕಡೆ ನಿಲ್ಲತೊಡಗಿದ್ದಾರೆ. ಅವರ ಕಡೆಗೆ ಕಡೆಗಣ್ಣು ಹಾಯಿಸುತ್ತಿದ್ದಾರೆ. ದುರ್ಜನರಿಂದ ಆಚರಿಸಲ್ಪಡುವ ವ್ಯಭಿಚಾರವಿಧಿಯನ್ನು ಅಲ್ಲಿನ ದಾಸಿಯರು ಆಶ್ರಯಿಸುತ್ತಿದ್ದಾರೆ.

ಸ್ತ್ರಿಯಃ ಪುರುಷವೇಷೇಣ ಪುಂಸಃ ಸ್ತ್ರೀವೇಷಧಾರಿಣಃ ।
ಕ್ರೀಡಾರತಿವಿಹಾರೇಷು ಪರಾಂ ಮುದಮವಾಪ್ನುವನ್ ॥೬೮॥

ಆಟಪಾಟಗಳಲ್ಲಿಯೂ, ರತಿಕಾಲಗಳಲ್ಲಿಯೂ ಮತ್ತು ವಿಹಾರ ಸಮಯದಲ್ಲಿಯೂ ಸ್ತ್ರೀಯರು ಪುರುಷವೇಷವನ್ನೂ–ಪುರುಷರು ಸ್ತ್ರೀವೇಷ ವನ್ನೂ ಧರಿಸಿ, ಪರಸ್ಪರವಾಗಿ ಪರಮಾನಂದವನ್ನು ಅನುಭವಿಸುತ್ತಿದ್ದಾರೆ.

ಪ್ರಭವದ್ಭಿಃ ಪುರಾ ದಾಯಾನರ್ಹೇಭ್ಯಃ ಪ್ರತಿಪಾದಿತಾನ್ ।
ನಾಭ್ಯವರ್ತನ್ತ ನಾಸ್ತಿಕ್ಯಾದ್ವರ್ತನ್ತಃ ಸಮ್ಭವೇಷ್ವಪಿ ॥೬೯॥

ಕೆಲವು ದಾನವರು ತಮ್ಮ ಹಿಂದಿನವರು ಅರ್ಹರಾದ ಬ್ರಾಹ್ಮಣರಿಗೆ ಉಂಬಳಿಯಾಗಿ ಕೊಟ್ಟಿದ್ದ ಭೂಮಿ-ಕಾಣಿಕೆಗಳನ್ನು ನಾಸ್ತಿಕ್ಯದ ಕಾರಣದಿಂದ ಅವರ ಬಳಿಯಲ್ಲಿರಲು ಅವಕಾಶಕೊಡುತ್ತಿಲ್ಲ. ಜೀವನನಿರ್ವಹಣೆಗೆ ಬೇರೆಯ ರೀತಿಯಲ್ಲಿ ಅವಕಾಶವಿದ್ದರೂ ಆ ದೈತ್ಯರು ತಾವೇ ಆ ಉಂಬಳಿಗಳನ್ನು ಬ್ರಾಹ್ಮಣರಿಂದ ಹಿಂದಕ್ಕೆ ಕಿತ್ತುಕೊಳ್ಳತೊಡಗಿದ್ದಾರೆ.

ಮಿತ್ರೇಣಾಭ್ಯರ್ಥಿತಂ ಮಿತ್ರಮರ್ಥಸಂಶಯಿತೇ ಕ್ವಚಿತ್ ।
ವಾಲಕೋಟ್ಯಗ್ರಮಾತ್ರೇಣ ಸ್ವಾರ್ಥೇನಾಘ್ನತ ತದ್ವಸು ॥೭೦॥

ಹಣ-ಕಾಸು ಅಥವಾ ಭೂಮಿಯ ವ್ಯವಹಾರಗಳಲ್ಲಿ ಇಬ್ಬರಲ್ಲಿ ಯಾರಿಗೆ

ಸೇರಬೇಕೆಂಬ ವಿಷಯದಲ್ಲಿ ಸಂಶಯವುಂಟಾದಾಗ–ಒಬ್ಬನು ವ್ಯಾಜ್ಯವನ್ನು ನ್ಯಾಯವಾದ ರೀತಿಯಲ್ಲಿ ಪರಿಹರಿಸಿಕೊಡುವಂತೆ ತನ್ನ ಮಿತ್ರನನ್ನು ಪ್ರಾರ್ಥಿಸಿದಾಗ–ಆ ಮಿತ್ರನು ವಿವಾದಗ್ರಸ್ತವಾದ ಜಮೀನನ್ನು ಕೂದಲಿನ ತುದಿಗೆ ಸಮಾನವಾದ ಸ್ವಾರ್ಥದಿಂದ ತಾನೇ ಲಪಟಾಯಿಸಿಬಿಡುತ್ತಾನೆ. ಇಂತಹ ಪರಿಸ್ಥಿತಿಯು ದೈತ್ಯರಲ್ಲುಂಟಾಗಿದೆ.

ಪರಸ್ವಾದಾನರುಚಯೋ ವಿಪಣವ್ಯವಹಾರಿಣಃ ।
ಅದೃಶ್ಯನ್ತಾರ್ಯವರ್ಣೇಷು ಶೂದ್ರಾಶ್ಚಾಪಿ ತಪೋಧನಾಃ ॥೭೧॥

ಪರರ ಸ್ವತ್ತಿನಲ್ಲಿಯೇ ಅಭಿರುಚಿಯಿರುವ ದೈತ್ಯರಿಗೆ ಇತರರ ಸ್ವತ್ತನ್ನು ಅಪಹರಿಸುವುದೇ ಒಂದು ವ್ಯಾಪಾರವಾಗಿಬಿಟ್ಟಿದೆ. ಆರ್ಯರ ನಾಲ್ಕು ವರ್ಣಗಳಲ್ಲಿ ಶೂದ್ರರೂ ತಪೋಧನರಾಗತೊಡಗಿದ್ದಾರೆ.

ಅಧೀಯತೇಽವ್ರತಾಃ ಕೇಚಿದ್ವೃಥಾ ವ್ರತಮಥಾಪರೇ ॥೭೨॥

ಕೆಲವರು ಬ್ರಹ್ಮಚರ್ಯವ್ರತವನ್ನು ಪರಿಪಾಲನಮಾಡದೆಯೇ ವೇದಗಳ ಅಧ್ಯಯನವನ್ನು ಮಾಡುತ್ತಾರೆ. ಮತ್ತೆ ಕೆಲವರು ಬ್ರಹ್ಮಚರ್ಯವ್ರತವನ್ನು ಪರಿಪಾಲಿಸುತ್ತಿದ್ದರೂ ವೇದಾಧ್ಯಯನವನ್ನು ಮಾಡುತ್ತಿಲ್ಲ. ಇದರಿಂದಾಗಿ ಅವರ ಬ್ರಹ್ಮಚರ್ಯವ್ರತವು ವ್ಯರ್ಥವಾಗಿ ಹೋಗುತ್ತಿದೆ. (ಕೆಲವರು ಅವೈದಿಕವಾದ ವ್ರತಗಳನ್ನು ಆಚರಿಸುತ್ತಾರೆ.)

ಅಶುಶ್ರೂಷುರ್ಗುರೋಃ ಶಿಷ್ಯಃ ಕಶ್ಚಿಚ್ಛಿಷ್ಯಸಖೋ ಗುರುಃ ।

ಶಿಷ್ಯನು ಗುರುಸೇವೆಯನ್ನು ಮಾಡಲು ಇಚ್ಛಿಸುತ್ತಿಲ್ಲ. ಕೆಲವು ಕಡೆ ಶಿಷ್ಯನು ಗುರುವಿನ ಮಿತ್ರನೇ ಆಗಿರುತ್ತಾನೆ.

ಪಿತಾ ಚೈವ ಜನಿತ್ರೀ ಚ ಶ್ರಾನ್ತೌ ವೃತ್ತೋತ್ಸವಾವಿವ ।
ಅಪ್ರಭುತ್ವೇ ಸ್ಥಿತೌ ವೃದ್ಧಾವನ್ನಂ ಪ್ರಾರ್ಥಯತಃ ಸುತಾನ್ ॥೭೩॥

ವೃದ್ಧರಾದ ತಂದೆ-ತಾಯಿಗಳು ಕಳೆದುಹೋದ ಉತ್ಸವವುಳ್ಳವರಂತೆ ಬಹಳ ಬಳಲಿದ್ದಾರೆ. ಆ ಸಮಯದಲ್ಲಿ ಅವರಿಗೆ ಮನೆಯಲ್ಲಿ ಯಾವ ಅಧಿಕಾರವೂ ಇಲ್ಲದೇ ಇರುವುದರಿಂದ ಆ ವೃದ್ಧರು ಅನ್ನಕ್ಕಾಗಿ ಮಕ್ಕಳನ್ನು ಬೇಡುವಂತಹ ಸ್ಥಿತಿಯು ಈಗ ದಾನವರಲ್ಲುಂಟಾಗಿದೆ.

ತತ್ರ ವೇದವಿದಃ ಪ್ರಾಜ್ಞಾ ಗಾಮ್ಭೀರ್ಯೇ ಸಾಗರೋಪಮಾಃ ।
ಕೃಷ್ಯಾದಿಷ್ವಭವನ್ಸಕ್ತಾ ಮೂರ್ಖಾಃ ಶ್ರಾದ್ಧಾನ್ನಭುಞ್ಜತ ॥೭೪॥

ಆ ದಾನವರ ನಗರಗಳಲ್ಲಿ ಈಗ ವೇದವಿದರಾದ, ಪ್ರಾಜ್ಞರಾದ, ಗಾಂಭೀರ್ಯದಲ್ಲಿ ಸಾಗರೋಪಮರಾದ ಪುರುಷರು ಕೃಷಿಯೇ ಮೊದಲಾದ ವ್ಯವಸಾಯದಲ್ಲಿ ಆಸಕ್ತರಾಗಿರುತ್ತಾರೆ. ಮಿಗಿಲಾಗಿ ಮೂರ್ಖರಾದವರು ಶ್ರಾದ್ಧಾನ್ನವನ್ನೂ ತಿನ್ನತೊಡಗಿದ್ದಾರೆ.

ಪ್ರಾತಃ ಪ್ರಾತಶ್ಚ ಸುಪ್ರಶ್ನಂ ಕಲ್ಪನಂ ಪ್ರೇಷಣಕ್ರಿಯಾಃ ।
ಶಿಷ್ಯಾನಪ್ರಹಿತಾಸ್ತೇಷಾಮಕುರ್ವನ್ಗುರವಃ ಸ್ವಯಮ್ ॥೭೫॥

ಗುರುಗಳೆನಿಸಿಕೊಂಡಿರುವವರು ಪ್ರತಿನಿತ್ಯವೂ ಪ್ರಾತಃಕಾಲದಲ್ಲಿ ಶಿಷ್ಯರ ಮನೆಗಳಿಗೆ ಹೋಗಿ 'ಸುಖನಿದ್ರೆಯಾಯಿತೇ?' –ಎಂದು ಪ್ರಶ್ನಿಸುತ್ತಿದ್ದಾರೆ. ಇಷ್ಟು ಮಾತ್ರವಲ್ಲದೆ ಸೇವಕರು ಮಾಡುವ ಎಲ್ಲ ಕಾರ್ಯಗಳನ್ನೂ ಗುರುಗಳೇ ಶಿಷ್ಯರಿಗೆ ಮಾಡಿಕೊಡುತ್ತಿದ್ದಾರೆ. ಶಿಷ್ಯರು ಹೇಳಿಕಳುಹಿಸದೇ ಇದ್ದರೂ ಗುರುಗಳು ತಾವಾಗಿಯೇ ಶಿಷ್ಯರ ವಾರ್ತಾವಾಹಕರಾಗಿ ಅಲ್ಲಿಂದಿಲ್ಲಿಗೆ ಹೋಗಿ ಬರುತ್ತಿರುತ್ತಾರೆ.

ಶ್ವಶ್ರೂಶ್ವಶುರಯೋರಗ್ರೇ ವಧೂಃ ಪ್ರೇಷ್ಯಾನಶಾಸತ ।
ಅನ್ವಶಾಸಚ್ಚ ಭರ್ತಾರಂ ಸಮಾಹೂಯಾಭಿಜಲ್ಪತಿ ॥೭೬॥

ಸೊಸೆಯು ಅತ್ತೆ-ಮಾವಂದಿರ ಎದುರಿನಲ್ಲಿಯೇ ಸೇವಕರಿಗೆ ಅಪ್ಪಣೆ ಮಾಡತೊಡಗಿದ್ದಾಳೆ. ಅದೇ ರೀತಿಯಲ್ಲಿ ಪತಿಗೂ ಆಜ್ಞೆಯನ್ನು ನೀಡುತ್ತಿದ್ದಾಳೆ. ಎಲ್ಲಕ್ಕಿಂತಲೂ ಮಿಗಿಲಾಗಿ ಪತಿಯನ್ನು ಹೆಸರುಹಿಡಿದು ಕರೆದು ಅವನೊಡನೆ ಎಲ್ಲರ ಸಮಕ್ಷದಲ್ಲಿಯೂ ಹರಟತೊಡಗಿದ್ದಾಳೆ.

ಪ್ರಯತ್ನೇನಾಪಿ ಚಾರಕ್ಷಚ್ಚಿತ್ತಂ ಪುತ್ರಸ್ಯ ವೈ ಪಿತಾ ।
ವ್ಯಭಜಚ್ಚಾಪಿ ಸಂರಮ್ಭಾದ್ದುಃಖವಾಸಂ ತಥಾವಸತ್ ॥೭೭॥

ತಂದೆಯಾದವನು ಪ್ರಯತ್ನಪೂರ್ವಕವಾಗಿ ಮಗನ ಮನಸ್ಸು ಕೋಪಾ

ವಿಘ್ನವಾಗದಂತೆ ರಕ್ಷಿಸುತ್ತಿದ್ದಾನೆ. (ತಂದೆಯು ಮಗನಿಗೆ ವಿಧೇಯನಾಗಿ ನಡೆದುಕೊಳ್ಳುತ್ತಿದ್ದಾನೆ.) ಮಕ್ಕಳ ಕೋಪಕ್ಕೆ ಹೆದರಿ ತಂದೆಯು ತನ್ನಲ್ಲಿರುವು ದೆಲ್ಲವನ್ನೂ ಮಕ್ಕಳಿಗೆ ಹಂಚಿಕೊಟ್ಟುಬಿಡುತ್ತಿದ್ದಾನೆ. ಇದರಿಂದಾಗಿ ತಂದೆ ಯಾದವನು ತನ್ನ ಜೀವಿತವನ್ನು ಬಹಳ ದುಃಖದಿಂದಲೇ ಕಳೆಯಬೇಕಾಗಿದೆ.

ಅಗ್ನಿದಾಹೇನ ಚೌರೈರ್ವಾ ರಾಜಭಿರ್ವಾ ಹೃತಂ ಧನಮ್ ।
ದೃಷ್ಟ್ವಾ ದ್ವೇಷಾತ್ಪ್ರಹಸನ್ತ ಸುಹೃತ್ಸಮ್ಭಾವಿತಾ ಹ್ಯಪಿ ॥೭೮॥

ಸುಹೃದರು, ಹಿತೈಷಿಗಳು ಎಂದು ಭಾವಿಸಲ್ಪಟ್ಟವರೂ ಕೂಡ ಮಿತ್ರರ ಮನೆಯಲ್ಲಿರುವ ಒಡವೆ-ವಸ್ತುಗಳು ಸುಟ್ಟುಹೋದರೆ ಅಥವಾ ದುಷ್ಟರಾದ ಕಳ್ಳರಾಗಲೀ ರಾಜರಾಗಲೀ ಅವುಗಳನ್ನು ಅಪಹರಿಸಿದರೆ ಅನುಕಂಪವನ್ನು ತೋರಿಸುವುದಕ್ಕೆ ಬದಲಾಗಿ ದ್ವೇಷದಿಂದ ನಗುತ್ತಿರುತ್ತಾರೆ.

ಕೃತಘ್ನಾ ನಾಸ್ತಿಕಾಃ ಪಾಪಾ ಗುರುದಾರಾಭಿಮರ್ಶಿನಃ ।
ಅಭಕ್ಷ್ಯಭಕ್ಷಣರತಾ ನಿರ್ಮರ್ಯಾದಾ ಹತತ್ವಿಷಃ ॥೭೯॥

ದೈತ್ಯರೀಗ ಕೃತಘ್ನರಾಗಿದ್ದಾರೆ. ಮಾಡಿದ ಉಪಕಾರವನ್ನು ಸ್ಮರಿಸಿಕೊಳ್ಳು ತ್ತಿಲ್ಲ. ನಾಸ್ತಿಕರಾಗಿದ್ದಾರೆ. ಪಾಪಕರ್ಮಗಳನ್ನು ಮಾಡಲೂ ಹೇಸುತ್ತಿಲ್ಲ. ಮಹಾಪಾಪಿಷ್ಠರಾಗಿದ್ದಾರೆ. ಗುರುಪತ್ನಿಯೊಡನೆ ಸಮಾಗಮಮಾಡುತ್ತಾರೆ. ತಿನ್ನಬಾರದುದನ್ನೇ ತಿನ್ನುವುದರಲ್ಲಿ ನಿರತರಾಗಿದ್ದಾರೆ. ಧರ್ಮದ ಮರ್ಯಾದೆ ಯನ್ನೇ ಮೀರಿ ಮನಬಂದಂತೆ ವರ್ತಿಸುತ್ತಿದ್ದಾರೆ. ಈ ಕಾರಣದಿಂದಲೇ ಅವರೀಗ ಕಾಂತಿಹೀನರಾಗಿದ್ದಾರೆ.

ದೇವೇಂದ್ರ! ಕಾಲವಿಪರ್ಯಾಸದಿಂದಾಗಿ ದೈತ್ಯರು ಇವೇ ಮುಂತಾದ ದುರಾಚಾರಗಳನ್ನು ಮಾಡುತ್ತಿರಲಾಗಿ ನಾನು ಅವರಲ್ಲಿ ಇರಬಾರದೆಂದು ನಿಶ್ಚಯಿಸಿದ್ದೇನೆ. ಶಚೀಪತಿಯೇ! ದೇವೇಶ್ವರ! ಈ ಕಾರಣದಿಂದ ನಾನಾಗಿಯೇ ನಿನ್ನ ಬಳಿಗೆ ಬಂದಿರುವೆನು. ನೀನು ನನ್ನನ್ನು ಅಭಿನಂದಿಸು. ನಿನ್ನಿಂದ ಸಮ್ಮಾನಿತಳಾದ ನನ್ನನ್ನು ಇತರ ದೇವತೆಗಳೂ ನಿನ್ನ ಸಮ್ಮುಖ ದಲ್ಲಿಯೇ ಸಮ್ಮಾನಿಸುತ್ತಾರೆ.

ಯತ್ರಾಹಂ ತತ್ರ ಮತ್ಕಾನ್ತಾ ಮದ್ವಿಶಿಷ್ಟಾ ಮದರ್ಪಣಾಃ ।
ಸಪ್ತ ದೇವ್ಯೋ ಜಯಾಷ್ಟಮ್ಯೋ ವಾಸಮೇಷ್ಯನ್ತಿ ತೇಽಷ್ಟಧಾ ॥೮೨॥

ನಾನು ಎಲ್ಲಿರುವೆನೋ ಅಲ್ಲಿ ನನ್ನೊಡನೆ ಏಳು ದೇವತೆಗಳು ವಾಸ ಮಾಡುತ್ತಾರೆ. ಆ ಏಳು ದೇವತೆಗಳ ಅಗ್ರಭಾಗದಲ್ಲಿ ಜಯಾ ಎಂಬ ಎಂಟನೆಯ ದೇವತೆಯೂ ನನ್ನೊಡನೆಯೇ ವಾಸಮಾಡುತ್ತಾಳೆ. ಈ ಎಂಟು ದೇವತೆಗಳೂ ನನಗೆ ಬಹಳ ಪ್ರಿಯರು. ಎಲ್ಲ ಕಾಲಗಳಲ್ಲಿಯೂ ನನ್ನೊಡನೆಯೇ ಇರುತ್ತಾರೆ. ಅವರೆಲ್ಲರೂ ನನ್ನಲ್ಲಿಯೇ ಸಕಲಸರ್ವಸ್ವವನ್ನೂ ಅರ್ಪಿಸಿಕೊಂಡುಬಿಟ್ಟಿದ್ದಾರೆ.

ಆಶಾ ಶ್ರದ್ಧಾ ಧೃತಿಃ ಶಾನ್ತಿರ್ವಿಜಿತಿಃ ಸಂನತಿಃ ಕ್ಷಮಾ ।
ಅಷ್ಟಮೀ ವೃತ್ತಿರೇತಾಸಾಂ ಪುರೋಗಾ ಪಾಕಶಾಸನ ॥೮೩॥

ಪಾಕಶಾಸನನೇ! ಆಶಾ, ಶ್ರದ್ಧಾ, ಧೃತಿ, ಶಾಂತಿ, ವಿಜಿತಿ, ಸಂನತಿ, ಕ್ಷಮಾ–ಇವರೇ ಆ ಏಳು ದೇವತೆಯರು. ಎಂಟನೆಯವಳಾದ ವೃತ್ತಿ ಅಥವಾ ಜಯಾ ಎಂಬುವಳು ಉಳಿದ ಏಳು ದೇವತೆಗಳಿಗೂ ಅಗ್ರಣಿಯಾಗಿದ್ದಾಳೆ.

ತಾಶ್ಚಾಹಂ ಚಾಸುರಾಂಸ್ತ್ಯಕ್ತ್ವಾ ಯುಷ್ಮದ್ವಿಷಯಮಾಗತಾಃ ।
ತ್ರಿದಶೇಷು ನಿವತ್ಸ್ಯಾಮೋ ಧರ್ಮನಿಷ್ಠಾನ್ತರಾತ್ಮಸು ॥೮೪॥

ನಾನೂ ಮತ್ತು ಆ ಅಷ್ಟದೇವತೆಗಳೂ ಎಲ್ಲ ದೈತ್ಯರನ್ನೂ ತ್ಯಜಿಸಿ, ನಿಮ್ಮ ರಾಜ್ಯಕ್ಕೆ ಆಗಮಿಸಿದ್ದೇವೆ. ಧರ್ಮನಿಷ್ಠವಾದ ಅಂತರಾತ್ಮವುಳ್ಳ ದೇವತೆಗಳಲ್ಲಿ ನಾವಿನ್ನು ವಾಸಮಾಡುತ್ತೇವೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಲಕ್ಷ್ಮೀದೇವಿಯು ಹೀಗೆ ಹೇಳಿದ ಬಳಿಕ ದೇವರ್ಷಿಗಳಾದ ನಾರದರೂ ಮತ್ತು ವೃತ್ರಹಂತಕನಾದ ಇಂದ್ರನೂ ದೇವಿಯನ್ನು ಪ್ರಸನ್ನಗೊಳಿಸುವ ಸಲುವಾಗಿ ಅಭಿನಂದಿಸಿದರು. ಆ ಸಮಯದಲ್ಲಿ ದೇವಮಾರ್ಗಗಳಲ್ಲಿ ಇಷ್ಟವಾದ ಗಂಧದಿಂದ (ಸುವಾಸನೆಯಿಂದ) ಕೂಡಿದ್ದ, ಸರ್ವೇಂದ್ರಿಯಗಳಿಗೂ ಸುಖದಾಯಕನಾಗಿದ್ದ, ಸ್ಪರ್ಶಮಾತ್ರದಿಂದಲೇ ಸುಖವನ್ನುಂಟುಮಾಡುತ್ತಿದ್ದ ಅಗ್ನಿಮಿತ್ರನಾದ ವಾಯುದೇವನು ಮೆಲ್ಲ-

ಮೆಲ್ಲನೆ ಬೀಸತೊಡಗಿದನು. ಪರಮಪವಿತ್ರವಾದ ಮತ್ತು ಮನೋಭಿಲಷಿತ ವಾಗಿದ್ದ ಆ ಪ್ರದೇಶದಲ್ಲಿ ರಾಜಲಕ್ಷ್ಮೀಸಹಿತನಾದ ಇಂದ್ರನನ್ನು ನೋಡುವ ಸಲುವಾಗಿ ಪ್ರಾಯಶಃ ಎಲ್ಲ ದೇವತೆಗಳೂ ಉಪಸ್ಥಿತರಾಗಿದ್ದರು. ಬಳಿಕ ಸಹಸ್ರಾಕ್ಷನಾದ, ಸುರಶ್ರೇಷ್ಠನಾದ ಇಂದ್ರನು ಲಕ್ಷ್ಮೀದೇವಿಯಿಂದಲೂ, ಸುಹೃದರಾದ ನಾರದಮಹರ್ಷಿಗಳಿಂದಲೂ ಕೂಡಿ ಹಸಿರುಬಣ್ಣದ ಕುದುರೆ ಗಳಿಂದ ಯುಕ್ತವಾಗಿದ್ದ ರಥದಲ್ಲಿ ಕುಳಿತು ಸ್ವರ್ಗದ ರಾಜಧಾನಿಯಾದ ಅಮರಾವತಿಗೆ ಹೋಗಿ ದೇವತೆಗಳಿಂದಲೂ ಸತ್ಕೃತನಾಗಿ ದೇವಸಭೆಗೆ ಹೋದನು. ಇಂದ್ರನು ಲಕ್ಷ್ಮೀಯೊಡನೆ ಸಿಂಹಾಸನದಲ್ಲಿ ಕುಳಿತನಂತರ ದೇವತೆಗಳ ಪೌರುಷವನ್ನು ಪ್ರತ್ಯಕ್ಷವಾಗಿ ನೋಡಿದ್ದ ನಾರದರು, ಇಂದ್ರ-ಲಕ್ಷ್ಮೀಯರ ಇಂಗಿತವನ್ನು ತಿಳಿದು ಅಲ್ಲಿಗೆ ಆಗಮಿಸಿದ್ದ ಇತರ ಋಷಿಗಳೊಡನೆ ಸಮಾಲೋಚಿಸಿ ಲಕ್ಷ್ಮೀಯ ಶುಭಾಗಮನವನ್ನು ಬಹಳವಾಗಿ ಪ್ರಶಂಸಿಸುತ್ತಾ ಲಕ್ಷ್ಮೀಯು ಸ್ವರ್ಗಕ್ಕೆ ಆಗಮಿಸಿರುವುದರಿಂದ ಎಲ್ಲ ಲೋಕಗಳಿಗೂ ಶುಭವುಂಟಾಗುವುದೆಂದು ಲಕ್ಷ್ಮೀಗೆ ಹೇಳಿದರು. ಅನಂತರ ನಿರ್ಮಲವಾದ ಮತ್ತು ಪ್ರಕಾಶಪೂರ್ಣವಾದ ಆಕಾಶಮಂಡಲವು ಪಿತಾಮಹನಾದ ಸ್ವಯಂಭೂಬ್ರಹ್ಮನ ಲೋಕದಲ್ಲಿ ಅಮೃತವನ್ನು ಸುರಿಸಿತು. ಬಾರಿಸದೆಯೇ ದೇವದುಂದುಭಿಗಳು ಮೊಳಗಿದುವು. ಎಲ್ಲ ದಿಕ್ಕುಗಳೂ ಸ್ವಚ್ಛವಾಗಿಯೂ ಪ್ರಕಾಶಮಾನವಾಗಿಯೂ ಇದ್ದುವು. ಲಕ್ಷ್ಮೀಯು ಸ್ವರ್ಗದಲ್ಲಿ ನಿವಾಸಮಾಡಿದ ನಂತರ ಇಂದ್ರನು ಋತುಧರ್ಮಕ್ಕೆ ಅನುಸಾರವಾಗಿ ಪ್ರಪಂಚದಲ್ಲಿರುವ ಸಸ್ಯಗಳ ಮೇಲೆ ಮಳೆಗರೆಯುತ್ತಿದ್ದನು. ಯಾರೇ ಆಗಲಿ ಧರ್ಮಮಾರ್ಗ ದಿಂದ ಭ್ರಷ್ಟರಾಗುತ್ತಿರಲಿಲ್ಲ. ಅನೇಕಸಮುದ್ರಗಳಿಂದ ಸಮಲಂಕೃತವಾದ ಭೂಮಿಯು ತ್ರಿಭುವನವಾಸಿಗಳ (ದೇವತೆಗಳ) ವಿಜಯದ ಸೂಚಕವಾಗಿ ಸಮುದ್ರಗಳಲ್ಲಿನ ಗರ್ಜನೆಗಳ ರೂಪದಲ್ಲಿ ಸುಂದರವಾದ ಜಯಘೋಷ ಗಳನ್ನು ಮಾಡತೊಡಗಿತು.

ಕ್ರಿಯಾಭಿರಾಮಾ ಮನುಜಾ ಮನಸ್ವಿನೋ
ಬಭುಃ ಶುಭೇ ಪುಣ್ಯಕೃತಾಂ ಪಥಿ ಸ್ಥಿತಾಃ ।
ನರಾಮರಾಃ ಕಿನ್ನರಯಕ್ಷರಾಕ್ಷಸಾಃ
ಸಮೃದ್ಧಿಮನ್ತಃ ಸುಮನಸ್ವಿನೋಽಭವನ್ ॥೯೩॥

ಆ ಸಮಯದಲ್ಲಿ ಮನನಶೀಲರಾದ ಮಾನವರು ಪುಣ್ಯಾತ್ಮರ ಮಂಗಳ ಮಯವಾದ ಮಾರ್ಗವನ್ನೇ ಆಶ್ರಯಿಸಿ ಸತ್ಕರ್ಮಗಳನ್ನು ಮಾಡುತ್ತಾ ಕಾಂತಿಯುಕ್ತರಾಗಿ ಪ್ರಕಾಶಿಸುತ್ತಿದ್ದರು. ಅದೇ ರೀತಿಯಲ್ಲಿ ದೇವತೆಗಳೂ, ಕಿನ್ನರ-ಯಕ್ಷ-ರಾಕ್ಷಸ-ಮಾನವರೂ ಸಮೃದ್ಧಿಶಾಲಿಗಳೂ ಉದಾರಚಿತ್ತರೂ ಆದರು.

ನ ಜಾತ್ವಕಾಲೇ ಕುಸುಮಂ ಕುತಃ ಫಲಂ
ಪಪಾತ ವೃಕ್ಷಾತ್ಪವನೇರಿತಾದಪಿ ।
ರಸಪ್ರದಾಃ ಕಾಮದುಘಾಶ್ಚ ಧೇನವೋ
ನ ದಾರುಣಾ ವಾಗ್ವಿಚಚಾರ ಕಸ್ಯಚಿತ್ ॥೯೪॥

ಆಗ ಗಾಳಿಯು ಬಲವಾಗಿ ಬೀಸುತ್ತಿದ್ದರೂ ಅಕಾಲದಲ್ಲಿ ವೃಕ್ಷದಿಂದ ಒಂದು ಕುಸುಮವೂ ಕೆಳಕ್ಕೆ ಬೀಳುತ್ತಿರಲಿಲ್ಲ. ಕುಸುಮವೇ ಬೀಳುತ್ತಿರಲಿಲ್ಲ ವೆಂದ ಮೇಲೆ ಅಕಾಲದಲ್ಲಿ ಫಲವು ತಾನೇ ಹೇಗೆ ಬಿದ್ದೀತು? (ವೃಕ್ಷದಿಂದ ಫಲವಾಗಲೀ, ಕುಸುಮವಾಗಲೀ ಅಕಾಲದಲ್ಲಿ ಕೆಳಕ್ಕೆ ಬೀಳದೇ ಇರುವಾಗ ಮನುಷ್ಯರು ಅಕಾಲದಲ್ಲಿ ಮರಣಹೊಂದುತ್ತಿರಲಿಲ್ಲವೆಂಬುದನ್ನು ಹೇಳಲೇ ಬೇಕಾಗಿಲ್ಲ.) ಹಸುಗಳು ಕೇಳಿದಷ್ಟು ಸತ್ವಪೂರ್ಣವಾದ ಹಾಲನ್ನು ಕೊಡು ತ್ತಿದ್ದುವು. ಯಾರ ಬಾಯಿಂದಲೂ ಕಠೋರವಾದ ಮಾತು ಹೊರಬರುತ್ತಿರ ಲಿಲ್ಲ.

ಇಮಾಂ ಸಪರ್ಯಾಂ ಸಹ ಸರ್ವಕಾಮದೈಃ
ಶ್ರಿಯಶ್ಚ ಶಕ್ರಪ್ರಮುಖೈಶ್ಚ ದೈವತೈಃ ।
ಪಠನ್ತಿ ಯೇ ವಿಪ್ರಸದಃಸಮಾಗತಾಃ
ಸಮೃದ್ಧಕಾಮಾಃ ಶ್ರಿಯಮಾಪ್ನುವನ್ತಿ ತೇ ॥೯೫॥

ಸಕಲವಿಧವಾದ ಇಷ್ಟಾರ್ಥಗಳನ್ನೂ ದಯಪಾಲಿಸುವ ಇಂದ್ರಪ್ರಮುಖ ರಾದ ದೇವತೆಗಳಿಂದ ಸ್ತುತಿಸಲ್ಪಟ್ಟ ಈ ಮಹಾಲಕ್ಷ್ಮಿಯ ಪೂಜಾಪ್ರಕರಣವನ್ನು ಯಾರು ಬ್ರಾಹ್ಮಣರ ಸಭೆಗೆ ಬಂದು ಪಠನಮಾಡುವರೋ–ಅವರು ಬೇಕು-ಬೇಕಾದ ಕಾಮನೆಗಳೆಲ್ಲವನ್ನೂ ಪಡೆದುಕೊಂಡು ಸಂಪತ್ತನ್ನೂ ಹೊಂದುತ್ತಾರೆ.

ತ್ವಯಾ ಕುರೂಣಾಂ ವರ ಯತ್ಪ್ರಚೋದಿತಂ
ಭವಾಭವಸ್ಯೇಹ ಪರಂ ನಿದರ್ಶನಮ್ ।
ತದದ್ಯ ಸರ್ವಂ ಪರಿಕೀರ್ತಿತಂ ಮಯಾ
ಪರೀಕ್ಷ್ಯ ತತ್ತ್ವಂ ಪರಿಗನ್ತುಮರ್ಹಸಿ ॥೯೬॥

ಕುರುಶ್ರೇಷ್ಠನೇ! ಯುಧಿಷ್ಠಿರ! ನೀನು ಪ್ರಶ್ನಿಸಿದ ಉನ್ನತಿ ಮತ್ತು ಅಧೋಗತಿಗಳ ಪೂರ್ವಲಕ್ಷಣಗಳನ್ನು ನಾನು ಉತ್ತಮವಾದ ದೃಷ್ಟಾಂತಗಳೊಡನೆ ಹೇಳಿದ್ದೇನೆ. ಈಗ ನೀನೇ ಎಲ್ಲ ವಿಷಯಗಳನ್ನು ಮನಸ್ಸಿನಲ್ಲಿ ವಿಚಾರಮಾಡಿ ಪರೀಕ್ಷಿಸಿ ಇದರ ತತ್ತ್ವವನ್ನು ನಿಶ್ಚಯಿಸಲು ಸಮರ್ಥನಾಗಿರುವೆ."

೨೨೮ನೆಯ ಅಧ್ಯಾಯವು ಮುಗಿಯಿತು.

೨೨೯ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜೈಗೀಷವ್ಯನಿಂದ ಅಸಿತದೇವಲನಿಗೆ ಸಮತ್ವಬುದ್ಧಿಯ ಉಪದೇಶ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಿಂಶೀಲಃ ಕಿಂಸಮಾಚಾರಃ ಕಿಂವಿದ್ಯಃ ಕಿಂಪರಾಕ್ರಮಃ ।
ಪ್ರಾಪ್ನೋತಿ ಬ್ರಹ್ಮಣಃ ಸ್ಥಾನಂ ಯತ್ಪರಂ ಪ್ರಕೃತೇರ್ಧ್ರುವಮ್ ॥೧॥

"ಪಿತಾಮಹನೇ! ಎಂತಹ ಶೀಲವುಳ್ಳವನು, ಎಂತಹ ಆಚಾರವುಳ್ಳವನು, ಯಾವ ವಿದ್ಯೆಯನ್ನು ಅಧ್ಯಯನಮಾಡಿರುವವನು, ಎಂತಹ ಪರಾಕ್ರಮವುಳ್ಳವನು–ಪ್ರಕೃತಿಗಿಂತಲೂ ಅತೀತವಾದ ಶಾಶ್ವತವಾದ ಬ್ರಹ್ಮಪದವನ್ನು ಹೊಂದುತ್ತಾನೆ?"

ಭೀಷ್ಮನು ಹೇಳುತ್ತಾನೆ :

ಮೋಕ್ಷಧರ್ಮೇಷು ನಿಯತೋ ಲಘ್ವಾಹಾರೋ ಜಿತೇನ್ದ್ರಿಯಃ ।
ಪ್ರಾಪ್ನೋತಿ ಬ್ರಹ್ಮಣಃ ಸ್ಥಾನಂ ತತ್ಪರಂ ಪ್ರಕೃತೇರ್ಧ್ರುವಮ್ ॥೨॥

"ಯುಧಿಷ್ಠಿರ! ಮಿತಾಹಾರಿಯಾಗಿರತಕ್ಕವನೂ, ಜಿತೇಂದ್ರಿಯ

ನಾಗಿರತಕ್ಕವನೂ, ಮೋಕ್ಷಧರ್ಮದ ಪಾಲನೆಯಲ್ಲಿ ಸದಾ ನಿರತನಾಗಿರತಕ್ಕವನೂ-ಪ್ರಕೃತಿಗಿಂತಲೂ ಅತೀತವಾದ ಅವಿನಾಶಿಯಾದ ಬ್ರಹ್ಮಪದವನ್ನು ಹೊಂದುತ್ತಾನೆ. ಈ ವಿಷಯದಲ್ಲಿ ಹಿಂದೆ ಜೈಗೀಷವ್ಯನಿಗೂ-ಅಸಿತದೇವಲನಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಒಮ್ಮೆ ಅಸಿತದೇವಲನು ಸಂಪೂರ್ಣಧರ್ಮಗಳನ್ನೂ ತಿಳಿದಿದ್ದ, ಶಾಸ್ತ್ರಜ್ಞನಾಗಿದ್ದ, ಕ್ರೋಧ-ಹರ್ಷಗಳಿಂದ ರಹಿತನಾಗಿದ್ದ ಮಹಾಪ್ರಾಜ್ಞನಾದ ಜೈಗೀಷವ್ಯಮಹರ್ಷಿಯನ್ನು ಹೀಗೆ ಪ್ರಶ್ನಿಸಿದನು :

ನ ಪ್ರೀಯಸೇ ವನ್ದ್ಯಮಾನೋ ನಿನ್ದ್ಯಮಾನೋ ನ ಕುಪ್ಯಸೇ ।
ಕಾ ತೇ ಪ್ರಜ್ಞಾ ಕುತಶ್ಚೈಷಾ ಕಿಂ ತೇ ತಸ್ಯಾಃ ಪರಾಯಣಮ್ ॥

"ಮುನಿಶ್ರೇಷ್ಠನೇ! ನಿನ್ನನ್ನು ಯಾರಾದರೂ ನಮಸ್ಕರಿಸಿ ಪುರಸ್ಕರಿಸಿದರೆ ಅದರಿಂದ ನೀನು ಸುಪ್ರೀತನಾಗುವುದಿಲ್ಲ. ಯಾರಾದರೂ ನಿನ್ನನ್ನು ನಿಂದಿಸಿದರೆ ಅದರಿಂದ ನೀನು ಕುಪಿತನೂ ಆಗುವುದಿಲ್ಲ. ನಿನಗಿರುವ ಈ ಬುದ್ಧಿಯು ಎಂತಹುದು? ಈ ಬುದ್ಧಿಯು ನಿನಗೆ ಎಲ್ಲಿಂದ ಮತ್ತು ಹೇಗೆ ಬಂದಿತು? ಈ ನಿನ್ನ ಬುದ್ಧಿಗೆ ಯಾವುದು ಆಶ್ರಯಸ್ಥಾನವಾಗಿದೆ?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಹೀಗೆ ಪ್ರಶ್ನಿಸಿದ ಅಸಿತದೇವಲನಿಗೆ ಮಹಾತಪಸ್ವಿಯಾದ ಜೈಗೀಷವ್ಯನು ಅಸಂದಿಗ್ಧವಾದ, ಪುಷ್ಕಳವಾದ ಅರ್ಥಗಳನ್ನು ಕೊಡುವ ಪದಗಳಿಂದ ಕೂಡಿದ, ಪವಿತ್ರವಾದ ಮಹಾವಾಕ್ಯವನ್ನು ಹೇಳಿದನು :

ಯಾಗತಿರ್ಯಾ ಪರಾ ಕಾಷ್ಠಾ ಯಾ ಶಾನ್ತಿಃ ಪುಣ್ಯಕರ್ಮಣಾಮ್ ।
ತಾಂ ತೇಽಹಂ ಸಮ್ಪ್ರವಕ್ಷ್ಯಾಮಿ ಮಹತೀಮೃಷಿಸತ್ತಮ ॥೭॥

"ಮುನಿಶ್ರೇಷ್ಠನೇ! ಪುಣ್ಯಕರ್ಮಗಳನ್ನು ಮಾಡುವ ಮಹಾಪುರುಷರಿಗೆ ಯಾವುದನ್ನು ಆಶ್ರಯಿಸುವುದರಿಂದ ಉತ್ತಮಗತಿಯೂ, ಉತ್ಕರ್ಷದ ಪರಾಕಾಷ್ಠೆಯೂ ಮತ್ತು ಪರಮಶಾಂತಿಯೂ ಪ್ರಾಪ್ತವಾಗುವುದೋ ಅಂತಹ ಶ್ರೇಷ್ಠಬುದ್ಧಿಯ ವರ್ಣನೆಯನ್ನೂ ಮಾಡುತ್ತೇನೆ.

ನಿನ್ದತ್ಸು ಚ ಸಮಾ ನಿತ್ಯಂ ಪ್ರಶಂಸತ್ಸು ಚ ದೇವಲ ।
ನಿಹ್ನುವನ್ತಿ ಚ ಯೇ ತೇಷಾಂ ಸಮಯಂ ಸುಕೃತಂ ಚ ಯತ್ ॥

ದೇವಲನೇ! ಮಹಾತ್ಮರಾದವರು–ತಮ್ಮನ್ನು ನಿಂದಿಸುವವರ ವಿಷಯದಲ್ಲಿಯೂ, ಪ್ರಶಂಸೆಮಾಡುವವರ ವಿಷಯದಲ್ಲಿಯೂ, ತಮ್ಮ ಸದಾಚಾರ-ಸತ್ಕರ್ಮಗಳನ್ನು ಮುಚ್ಚಿಡುವವರ ವಿಷಯದಲ್ಲಿಯೂ–ಒಂದೇ ವಿಧವಾದ ಬುದ್ಧಿಯುಳ್ಳವರಾಗಿರುತ್ತಾರೆ. (ನಿಂದಿಸುವವರನ್ನು ಶತ್ರುಗಳೆಂದಾಗಲೀ–ಪ್ರಶಂಸೆಮಾಡುವವರನ್ನು ಮಿತ್ರರೆಂದಾಗಲೀ ಭಾವಿಸುವುದಿಲ್ಲ.)

ಉಕ್ತಾಶ್ಚ ನ ವದಿಷ್ಯನ್ತಿ ವಕ್ತಾರಮಹಿತೇ ಹಿತಮ್ ।
ಪ್ರತಿಹನ್ತುಂ ನ ಚೇಚ್ಛನ್ತಿ ಹನ್ತಾರಂ ವೈ ಮನೀಷಿಣಃ ॥೯॥

ಅಂತಹ ಸುಬುದ್ಧಿಯುಳ್ಳ ಮಹಾತ್ಮರು ತಮ್ಮ ವಿಷಯದಲ್ಲಿ ಯಾರಾದರೂ ಕಟುವಾದ ಮಾತುಗಳನ್ನಾಡಿದರೂ ಪ್ರತಿಯಾಗಿ ಕಟುವಚನಗಳನ್ನಾಡುವುದಿಲ್ಲ. ತಮಗೆ ಅಹಿತವನ್ನು ಮಾಡುವವನಿಗೂ ಹಿತವನ್ನೇ ಬಯಸುತ್ತಾರೆ. ತಮ್ಮನ್ನು ಯಾರಾದರೂ ಹಿಂಸಿಸಿದರೂ ಪ್ರತಿಯಾಗಿ ಅವನನ್ನು ಹಿಂಸಿಸಲು ಇಚ್ಛಿಸುವುದಿಲ್ಲ.

ನಾಪ್ರಾಪ್ತಮನುಶೋಚನ್ತಿ ಪ್ರಾಪ್ತಕಾಲಾನಿ ಕುರ್ವತೇ ।
ನ ಚಾತೀತಾನಿ ಶೋಚನ್ತಿ ನ ಚೈವ ಪ್ರತಿಜಾನತೇ ॥೧೦॥

ಲಭಿಸದೇ ಇರುವ ವಸ್ತುವಿಗಾಗಿ ದುಃಖಪಡುವುದಿಲ್ಲ. ಪ್ರಸಕ್ತ ಸಮಯದಲ್ಲಿ ಯಾವ ಕಾರ್ಯವನ್ನು ಮಾಡಬೇಕಾಗಿರುವುದೋ ಅದನ್ನು ಮಾಡಿಬಿಡುತ್ತಾರೆ. ಕಳೆದುಹೋದುದನ್ನು ಕುರಿತು ಚಿಂತಿಸುವುದಿಲ್ಲ. ಯಾವುದಕ್ಕೇ ಆದರೂ ಪ್ರತಿಜ್ಞೆಯನ್ನು ಮಾಡುವುದಿಲ್ಲ.

ಸಮ್ಪ್ರಾಪ್ತಾನಾಂ ಚ ಪೂಜ್ಯಾನಾಂ ಕಾಮಾದರ್ಥೇಷು ದೇವಲ ।
ಯಥೋಪಪತ್ತಿಂ ಕುರ್ವನ್ತಿ ಶಕ್ತಿಮನ್ತಃ ಕೃತವ್ರತಾಃ ॥೧೧॥

ಶಕ್ತಿವಂತರಾದ, ವ್ರತಾನುಷ್ಠಾನಗಳನ್ನು ಮಾಡಿ ಮುಗಿಸುವ ಸುಬುದ್ಧಿಯನ್ನು ಹೊಂದಿರುವ ಮಹಾತ್ಮರು – ಯಾವುದಾದರೂ ಕಾಮನೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ವಿಶೇಷಪ್ರಯೋಜನದ ಸಿದ್ಧಿಗಾಗಿ ಪೂಜ್ಯ

ರಾದವರು ತಮ್ಮ ಬಳಿಗೆ ಬಂದರೆ ಅವರ ಕಾರ್ಯಸಾಧನೆಗಾಗಿ ಯಥೋಚಿತವಾದ ಸಹಾಯವನ್ನು ಮಾಡುತ್ತಾರೆ.

ಪಕ್ವವಿದ್ಯಾ ಮಹಾಪ್ರಾಜ್ಞಾ ಜಿತಕ್ರೋಧಾ ಜಿತೇನ್ದ್ರಿಯಾಃ ।
ಮನಸಾ ಕರ್ಮಣಾ ವಾಚಾ ನಾಪರಾಧ್ಯನ್ತಿ ಕರ್ಹಿಚಿತ್ ॥೧೨॥

ಪರಿಪಕ್ವವಾದ ಜ್ಞಾನವನ್ನು ಹೊಂದಿರುವ, ಜಿತಕ್ರೋಧರಾದ, ಜಿತೇಂದ್ರಿಯರಾದ ಮಹಾಪ್ರಾಜ್ಞರು–ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಕರ್ಮದಿಂದಾಗಲೀ ಯಾರಿಗೂ ಅಪರಾಧಮಾಡುವುದಿಲ್ಲ.

ಅನೀರ್ಷವೋ ನ ಚಾನ್ಯೋನ್ಯಂ ವಿಹಿಂಸನ್ತಿ ಕದಾಚನ ।
ನ ಚ ಜಾತೂಪತಪ್ಯನ್ತೇ ಧೀರಾಃ ಪರಸಮೃದ್ಧಿಭಿಃ ॥೧೩॥

ಧೀರರಾದ ಅವರು ಪರಸ್ಪರವಾಗಿ ಈರ್ಷ್ಯಾಸೂಯೆಗಳಿಂದ ಕೂಡಿದವರಾಗಿರುವುದಿಲ್ಲ. ಮತ್ತೊಬ್ಬರನ್ನು ಹಿಂಸಿಸುವುದಿಲ್ಲ. ಇತರರಲ್ಲಿರುವ ಸಮೃದ್ಧಿಯನ್ನು ನೋಡಿ ಯಾವಾಗಲೂ ಪರಿತಪಿಸುವುದಿಲ್ಲ.

ನಿನ್ದಾಪ್ರಶಂಸೇ ಚಾತ್ಯರ್ಥಂ ನ ವದನ್ತಿ ಪರಸ್ಯ ಯೇ ।
ನ ಚ ನಿನ್ದಾಪ್ರಶಂಸಾಭ್ಯಾಂ ವಿಕ್ರಿಯನ್ತೇ ಕದಾಚನ ॥೧೪॥

ಅಂತಹ ಸುಬುದ್ಧಿಯನ್ನು ಹೊಂದಿರುವ ಮಹಾತ್ಮರು ಇತರರನ್ನು ನಿಂದಿಸುವುದೂ ಇಲ್ಲ. ಅತಿಯಾಗಿ ಪ್ರಶಂಸೆಮಾಡುವುದೂ ಇಲ್ಲ. ಇತರರು ಮಾಡುವ ನಿಂದೆಗಳಿಂದಾಗಲೀ–ಪ್ರಶಂಸೆಗಳಿಂದಾಗಲೀ ಅವರ ಮನಸ್ಸು ಸ್ವಲ್ಪವಾದರೂ ವಿಕಾರಹೊಂದುವುದಿಲ್ಲ.

ಸರ್ವತಶ್ಚ ಪ್ರಶಾನ್ತಾ ಯೇ ಸರ್ವಭೂತಹಿತೇ ರತಾಃ ।
ನ ಕ್ರುಧ್ಯನ್ತಿ ನ ಹೃಷ್ಯನ್ತಿ ನಾಪರಾಧ್ಯನ್ತಿ ಕರ್ಹಿಚಿತ್ ॥೧೫॥

ಅಂತಹ ಸುಬುದ್ಧಿಯನ್ನು ಹೊಂದಿರುವ ಮಹಾತ್ಮರು ಸರ್ವಪ್ರಕಾರದಿಂದಲೂ ಶಾಂತರಾಗಿದ್ದು, ಎಲ್ಲ ಪ್ರಾಣಿಗಳ ಹಿತದಲ್ಲಿಯೂ ಸರ್ವದಾ ನಿರತರಾಗಿರುತ್ತಾರೆ. ಅವರು ಯಾವಾಗಲೂ ಕೋಪಗೊಳ್ಳುವುದಿಲ್ಲ. ಸಂತೋಷಪಡುವುದೂ ಇಲ್ಲ. ಯಾರಿಗೂ ಅಪರಾಧವನ್ನೂ ಮಾಡುವುದಿಲ್ಲ.

ವಿಮುಚ್ಯ ಹೃದಯಗ್ರನ್ಥಿಂ ಚಙ್ಕ್ರಮನ್ತಿ ಯಥಾಸುಖಮ್ ।
ನ ಯೇಷಾಂ ಬಾನ್ಧವಾಃ ಸನ್ತಿ ಯೇ ಚಾನ್ಯೇಷಾಂ ನ ಬಾನ್ಧವಾಃ ॥

ಮಹಾಪುರುಷರು ಹೃದಯದಲ್ಲಿರುವ ಅಜ್ಞಾನಮಯವಾದ ಗಂಟನ್ನು ಬಿಚ್ಚಿ ಎಸೆದು ಆನಂದದಿಂದ ಸರ್ವತ್ರ ಸಂಚರಿಸುತ್ತಿರುತ್ತಾರೆ. ಅವರಿಗೆ ಬಾಂಧವರಾರೂ ಇರುವುದಿಲ್ಲ. ಅವರು ಯಾರಿಗೂ ಬಂಧುಗಳೂ ಆಗಿರುವುದಿಲ್ಲ.

ಅಮಿತ್ರಾಶ್ಚ ನ ಸನ್ತ್ಯೇಷಾಂ ಯೇ ಚಾಮಿತ್ರಾ ನ ಕಸ್ಯಚಿತ್ ।
ಯ ಏವಂ ಕುರ್ವತೇ ಮರ್ತ್ಯಾಃ ಸುಖಂ ಜೀವನ್ತಿ ಸರ್ವದಾ ॥೧೭॥

ಅವರಿಗೆ ಶತ್ರುಗಳೇ ಇರುವುದಿಲ್ಲ. ಅವರೂ ಕೂಡ ಯಾರಿಗೂ ಶತ್ರುಗಳಾಗಿಯೂ ಇರುವುದಿಲ್ಲ. ಯಾವ ಸುಬುದ್ಧಿಯುಳ್ಳ ಮನುಷ್ಯರು ಹೀಗೆ ನಡೆದುಕೊಳ್ಳುವರೋ–ಅಂತಹವರು ಸರ್ವದಾ ಸುಖದಿಂದ ಜೀವಿಸುತ್ತಾರೆ.

ಯೇ ಧರ್ಮಂ ಚಾನುರುಧ್ಯನ್ತೇ ಧರ್ಮಜ್ಞಾ ದ್ವಿಜಸತ್ತಮ ।
ಯೇ ಹ್ಯತೋ ವಿಚ್ಯುತಾ ಮಾರ್ಗಾತ್ತೇ ಹೃಷ್ಯನ್ತ್ಯುದ್ವಿಜನ್ತಿ ಚ ॥೧೮॥

ಬ್ರಾಹ್ಮಣಶ್ರೇಷ್ಠನೇ! ಯಾರು ಈ ಸಮತೆಯ ಧರ್ಮವನ್ನೇ ಅನುಸರಿಸಿ ನಡೆದುಕೊಳ್ಳುವರೋ–ಅವರೇ ಧರ್ಮಜ್ಞರು. ಯಾರು ಈ ಧರ್ಮಮಾರ್ಗದಿಂದ ಚ್ಯುತರಾಗುವರೋ–ಅವರು ಸುಖಬಂದಾಗ ಸಂತೋಷಪಡುತ್ತಾರೆ ; ಕಷ್ಟವು ಬಂದಾಗ ಉದ್ವಿಗ್ನರಾಗುತ್ತಾರೆ.

ಆಸ್ಥಿತಸ್ತಮಹಂ ಮಾರ್ಗಮಸೂಯಿಷ್ಯಾಮಿ ಕಂ ಕಥಮ್ ।
ನಿನ್ದ್ಯಮಾನಃ ಪ್ರಶಸ್ತೋ ವಾ ಹೃಷ್ಯೇऽಹಂ ಕೇನ ಹೇತುನಾ ॥೧೯॥

ಅಂತಹ ಧರ್ಮಮಾರ್ಗವನ್ನೇ ಅನುಸರಿಸುತ್ತಿರುವ ನಾನು ಯಾವ ಕಾರಣಕ್ಕಾಗಿ ಯಾರನ್ನು ತಾನೇ ದ್ವೇಷಿಸಲಿ? ಒಬ್ಬನಿಂದ ನಿಂದಿಸಲ್ಪಟ್ಟು ಮತ್ತೊಬ್ಬನಿಂದ ಪ್ರಶಂಸಿತನಾದರೆ–ನಾನು ಯಾವ ಕಾರಣಕ್ಕಾಗಿ ಸಂತೋಷಿಸಲಿ?

ಯದ್ಯದಿಚ್ಛನ್ತಿ ತತ್ತಸ್ಮಾದಪಿ ಗಚ್ಛನ್ತು ಮಾನವಾಃ ।
ನ ಮೇ ನಿನ್ದಾಪ್ರಶಂಸಾಭ್ಯಾಂ ಹ್ರಾಸವೃದ್ಧೀ ಭವಿಷ್ಯತಃ ॥೨೦॥

ಮನುಷ್ಯರಿಗೆ ಪರನಿಂದೆಯನ್ನು ಮಾಡುವುದರಿಂದ ಲಾಭವುಂಟಾಗುವುದಾದರೆ ಅವರು ಅದನ್ನು ಪಡೆದುಕೊಳ್ಳಲಿ. ಇತರರನ್ನು ಪ್ರಶಂಸೆಮಾಡುವುದರಿಂದ ಲಾಭವುಂಟಾಗುವುದಾದರೆ ಅವರು ಅದನ್ನೂ ಪಡೆದುಕೊಳ್ಳಲಿ. ಆದರೆ ಅವರು ನಿಂದೆಮಾಡುವುದರಿಂದ ನಾನು ಕುಗ್ಗುವುದೂ ಇಲ್ಲ. ಪ್ರಶಂಸೆಮಾಡುವುದರಿಂದ ಹಿಗ್ಗುವುದೂ ಇಲ್ಲ.

ಅಮೃತಸ್ಯೇವ ಸಂತೃಪ್ಯೇದವಮಾನಸ್ಯ ತತ್ತ್ವವಿತ್ ।
ವಿಷಸ್ಯೇವೋದ್ವಿಜೇನ್ನಿತ್ಯಂ ಸಮ್ಮಾನಸ್ಯ ವಿಚಕ್ಷಣಃ ॥೨೧॥

ತತ್ತ್ವಜ್ಞನಾದ, ವಿದ್ವಾಂಸನಾದ ಪುರುಷನು ಇತರರು ಮಾಡುವ ಅವಮಾನವನ್ನು ಅಮೃತವೆಂದೇ ಭಾವಿಸಿ ಅದರಿಂದ ಸಂತೃಪ್ತನಾಗಬೇಕು. ಹಾಗೆಯೇ ಇತರರು ಸಮ್ಮಾನಮಾಡುವುದನ್ನು ವಿಷವೆಂದೇ ಭಾವಿಸಿ ಉದ್ವಿಗ್ನನಾಗಬೇಕು. (ಭಯಗೊಳ್ಳಬೇಕು.)

ಅವಜ್ಞಾತಃ ಸುಖಂ ಶೇತೇ ಇಹ ಚಾಮುತ್ರ ಚಾಭಯಮ್ ।
ವಿಮುಕ್ತಃ ಸರ್ವದೋಷೇಭ್ಯೋ ಯೋಽವಮನ್ತಾ ಸ ಬಧ್ಯತೇ ॥೨೨॥

ಸಕಲದೋಷಗಳಿಂದಲೂ ವಿಮುಕ್ತನಾದ ಮಹಾತ್ಮನು ಅವಮಾನಿತನಾದರೂ ಭಯರಹಿತನಾಗಿ ಇಹಲೋಕ-ಪರಲೋಕಗಳೆರಡರಲ್ಲಿಯೂ ಸುಖವಾಗಿ ನಿದ್ರಿಸುತ್ತಾನೆ. ಆದರೆ ಅಂತಹ ಮಹಾತ್ಮನನ್ನು ಅವಮಾನಿಸಿದವನು ಪಾಪಗಳಿಂದ ಬಂಧಿಸಲ್ಪಡುತ್ತಾನೆ.

ಪರಾಂ ಗತಿಂ ಚ ಯೇ ಕೇಚಿತ್ಪ್ರಾರ್ಥಯನ್ತಿ ಮನೀಷಿಣಃ ।
ಏತದ್ವ್ರತಂ ಸಮಾಶ್ರಿತ್ಯ ಸುಖಮೇಧನ್ತಿ ತೇ ಜನಾಃ ॥೨೩॥

ಪರಮಶ್ರೇಷ್ಠವಾದ ಗತಿಯನ್ನು ಪಡೆಯಲು ಆಶಿಸುವ ಬುದ್ಧಿವಂತರಾದ ಜನರು ಈ ಉತ್ತಮವ್ರತವನ್ನು ಆಶ್ರಯಿಸಿ ಪರಮಸುಖವನ್ನು ಹೊಂದುತ್ತಾರೆ.

ಸರ್ವತಶ್ಚ ಸಮಾಹೃತ್ಯ ಕ್ರತೂನ್ಸರ್ವಾಞ್ಜಿತೇಽನ್ದ್ರಿಯಃ ।
ಪ್ರಾಪ್ನೋತಿ ಬ್ರಹ್ಮಣಃ ಸ್ಥಾನಂ ಯತ್ಪರಂ ಪ್ರಕೃತೇರ್ಧ್ರುವಮ್ ॥೨೪॥

ಎಲ್ಲ ವಿಧವಾದ ಕಾಮನಾಸಂಕಲ್ಪಗಳನ್ನೂ ಎಲ್ಲ ಕಡೆಗಳಿಂದಲೂ

ಪರಿತ್ಯಜಿಸಿದ ಜಿತೇಂದ್ರಿಯನು ಪ್ರಕೃತಿಗಿಂತಲೂ ಅತೀತವಾದ ಶಾಶ್ವತವಾದ ಬ್ರಹ್ಮಪದವಿಯನ್ನು ಹೊಂದುತ್ತಾನೆ.

ನಾಸ್ಯ ದೇವಾ ನ ಗನ್ಧರ್ವಾ ನ ಪಿಶಾಚಾ ನ ರಾಕ್ಷಸಾಃ ।
ಪದಮನ್ವವರೋಹನ್ತಿ ಪ್ರಾಪ್ತಸ್ಯ ಪರಮಾಂ ಗತಿಮ್ ॥೨೫॥

ಪರಮಗತಿಯನ್ನು ಹೊಂದಿದ ಇಂತಹ ಮಹಾತ್ಮನ ದಿವ್ಯಪದವಿಯನ್ನು ದೇವತೆಗಳಾಗಲೀ, ಗಂಧರ್ವ-ಪಿಶಾಚ-ರಾಕ್ಷಸರಾಗಲೀ ಅನುಸರಿಸ ಲಾರರು."

೨೨೯ನೆಯ ಅಧ್ಯಾಯವು ಮುಗಿಯಿತು.

೨೩೦ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶ್ರೀಕೃಷ್ಣ ಮತ್ತು ಉಗ್ರಸೇನರ ಸಂವಾದ : ಶ್ರೀಕೃಷ್ಣನಿಂದ ನಾರದರ ಲೋಕಪ್ರಿಯತೆಗೆ ಕಾರಣವಾದ ಗುಣಗಳ ನಿರೂಪಣೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಪ್ರಿಯಃ ಸರ್ವಸ್ಯ ಲೋಕಸ್ಯ ಸರ್ವಸತ್ತ್ವಾಭಿನನ್ದಿತಾ ।
ಗುಣೈಃ ಸರ್ವೈರುಪೇತಶ್ಚ ಕೋ ನ್ವಸ್ತಿ ಭುವಿ ಮಾನವಃ ॥೧॥

"ಪಿತಾಮಹನೇ! ಎಲ್ಲರಿಗೂ ಪ್ರಿಯನಾದ, ಸಕಲಪ್ರಾಣಿಗಳಿಗೂ ಆನಂದದಾಯಕನಾದ, ಸಕಲಸದ್ಗುಣಸಂಪನ್ನನಾದ ಮಾನವನು ಈ ಲೋಕದಲ್ಲಿ ಯಾವನಿದ್ದಾನೆ?"


ಭೀಷ್ಮನು ಹೇಳುತ್ತಾನೆ :

"ಭರತಶ್ರೇಷ್ಠನೇ! ನಿನ್ನ ಪ್ರಶ್ನೆಗೆ ಉತ್ತರವಾಗಿ ನಾರದರ ವಿಷಯದಲ್ಲಿ ಶ್ರೀಕೃಷ್ಣನಿಗೂ–ಉಗ್ರಸೇನನಿಗೂ ನಡೆದ ಸಂವಾದವನ್ನು ಹೇಳುತ್ತೇನೆ, ಕೇಳು :

ಒಮ್ಮೆ ಉಗ್ರಸೇನನು ಶ್ರೀಕೃಷ್ಣನನ್ನು ಪ್ರಶ್ನಿಸಿದನು :

ಯಸ್ಯ ಸಂಕಲ್ಪತೇ ಲೋಕೋ ನಾರದಸ್ಯ ಪ್ರಕೀರ್ತತೇ ।
ಮನ್ಯೇ ಸ ಗುಣಸಮ್ಪನ್ನೋ ಬ್ರೂಹಿ ತನ್ಮಮ ಪೃಚ್ಛತಃ ॥೩॥

"ಕೃಷ್ಣ! ಲೋಕವು ಯಾವ ನಾರದರ ಗುಣಗಳನ್ನು ಕೀರ್ತನಮಾಡಲು ಇಚ್ಛಿಸುವುದೋ-ಆ ನಾರದರು ಉತ್ತಮಗುಣಸಂಪನ್ನರೆಂಬುದು ನನ್ನ ಅಭಿಪ್ರಾಯವಾಗಿದೆ. ಆದುದರಿಂದ ನಾನು ಅವರಲ್ಲಿರುವ ಸದ್ಗುಣಗಳನ್ನು ತಿಳಿಯಲು ಆಸಕ್ತನಾಗಿದ್ದೇನೆ. ನಾರದರ ಗುಣಗಳನ್ನು ನನಗೆ ವಿವರಿಸಿ ಹೇಳು."



ಶ್ರೀಕೃಷ್ಣನು ಹೇಳುತ್ತಾನೆ :

"ಕುಕುರಾಧಿಪನೇ! ನರೇಶ್ವರ! ನಾನು ನಾರದರಲ್ಲಿರುವ ಯಾವ ಸಾಧುಗುಣಗಳನ್ನು ತಿಳಿದುಕೊಂಡಿರುವೆನೋ-ಆ ಗುಣಗಳನ್ನು ಸಂಕ್ಷೇಪ ವಾಗಿ ಹೇಳುತ್ತೇನೆ, ಕೇಳು :

ನ ಚಾರಿತ್ರನಿಮಿತ್ತೋಽಸ್ಯಾಹಂಕಾರೋ ದೇಹತಾಪನಃ ।
ಅಭಿನ್ನಶ್ರುತಚಾರಿತ್ರಸ್ತಸ್ಮಾತ್ಸರ್ವತ್ರ ಪೂಜಿತಃ ॥೫॥

ನಾರದರಲ್ಲಿ ಶಾಸ್ತ್ರಜ್ಞಾನ-ಸದಾಚಾರಗಳು ಒಟ್ಟಾಗಿ ನೆಲೆಸಿವೆ. ಅವುಗಳಿಂದ ಭಿನ್ನರಾಗಿ ನಾರದರಿರುವುದಿಲ್ಲ. ಆದರೆ ಶಾಸ್ತ್ರಜ್ಞಾನ-ಸದಾಚಾರಗಳೆರಡೂ ಅವರಲ್ಲಿ ಮನೆಮಾಡಿಕೊಂಡಿದ್ದರೂ ಅವರಿಗೆ ಶರೀರವನ್ನು ಪರಿತಾಪಗೊಳಿಸುವ ಅಹಂಕಾರವಿಲ್ಲ. ಈ ಕಾರಣದಿಂದಲೇ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ಅರತಿಃ ಕ್ರೋಧಚಾಪಲ್ಯೇ ಭಯಂ ನೈತಾನಿ ನಾರದೇ ।
ಅದೀರ್ಘಸೂತ್ರಃ ಶೂರಶ್ಚ ತಸ್ಮಾತ್ಸರ್ವತ್ರ ಪೂಜಿತಃ ॥೬॥

ನಾರದರಲ್ಲಿ ಅಪ್ರೀತಿ, ಕ್ರೋಧ, ಚಪಲತೆ ಮತ್ತು ಭಯಗಳೆಂಬ ಈ ನಾಲ್ಕು ದೋಷಗಳಿರುವುದಿಲ್ಲ. ಕಾರ್ಯಗಳನ್ನು ಸಾವಕಾಶವಾಗಿ ಮಾಡುವ ಸ್ವಭಾವವು ಅವರದಲ್ಲ. ಧರ್ಮಪ್ರತಿಪಾದನೆಯಲ್ಲಿ ಮಹಾಶೂರರಾಗಿದ್ದಾರೆ. ಈ ಕಾರಣದಿಂದಲೇ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ಉಪಾಸ್ಯೋ ನಾರದೋ ಬಾಢಂ ವಾಚಿ ನಾಸ್ಯ ವ್ಯತಿಕ್ರಮಃ ।
ಕಾಮತೋ ಯದಿ ವಾ ಲೋಭಾತ್ತಸ್ಮಾತ್ಸರ್ವತ್ರ ಪೂಜಿತಃ ॥೭॥

ನಿಶ್ಚಯವಾಗಿಯೂ ನಾರದರು ಉಪಾಸಿಸಲು ಯೋಗ್ಯರಾದವರು. ಕಾಮದಿಂದಾಗಲೀ, ಲೋಭದಿಂದಾಗಲೀ ಅವರಾಡುವ ಮಾತಿನಲ್ಲಿ ಬದಲಾವಣೆಯಾಗುವುದಿಲ್ಲ. ಈ ಕಾರಣದಿಂದಲೇ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ಅಧ್ಯಾತ್ಮವಿಧಿತತ್ತ್ವಜ್ಞಃ ಕ್ಷಾನ್ತಃ ಶಕ್ತೋ ಜಿತೇನ್ದ್ರಿಯಃ ।
ಋಜುಶ್ಚ ಸತ್ಯವಾದೀ ಚ ತಸ್ಮಾತ್ಸರ್ವತ್ರ ಪೂಜಿತಃ ॥೮॥

ನಾರದರು ಅಧ್ಯಾತ್ಮಶಾಸ್ತ್ರದ ತತ್ತ್ವಗಳನ್ನು ಸಂಪೂರ್ಣವಾಗಿ ತಿಳಿದಿರುತ್ತಾರೆ. ಅವರು ಕ್ಷಮಾಶೀಲರು ; ಮಹಾಶಕ್ತಿಶಾಲಿಗಳು ; ಜಿತೇಂದ್ರಿಯರು ; ಸರಳಸ್ವಭಾವದವರು ಮತ್ತು ಸತ್ಯವಾದಿಗಳು. ಆದುದರಿಂದಲೇ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ತೇಜಸಾ ಯಶಸಾ ಬುದ್ಧ್ಯಾ ಜ್ಞಾನೇನ ವಿನಯೇನ ಚ ।
ಜನ್ಮನಾ ತಪಸಾ ವೃದ್ಧಸ್ತಸ್ಮಾತ್ಸರ್ವತ್ರ ಪೂಜಿತಃ ॥೯॥

ನಾರದರು ತೇಜಸ್ಸಿನಿಂದಲೂ, ಯಶಸ್ಸಿನಿಂದಲೂ, ಬುದ್ಧಿಯಿಂದಲೂ, ಜ್ಞಾನದಿಂದಲೂ, ವಿನಯದಿಂದಲೂ, ಹುಟ್ಟಿನಿಂದಲೂ ಮತ್ತು ತಪಸ್ಸಿನಿಂದಲೂ ಉಳಿದವರೆಲ್ಲರಿಗಿಂತಲೂ ವೃದ್ಧರಾಗಿದ್ದಾರೆ. ಆದುದರಿಂದಲೇ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ಸುಶೀಲಃ ಸುಖಸಂವೇಶಃ ಸುಭೋಜಃ ಸ್ವಾದರಃ ಶುಚಿಃ ।
ಸುವಾಕ್ಯಶ್ಚಾಪ್ಯನೀರ್ಷ್ಯಶ್ಚ ತಸ್ಮಾತ್ಸರ್ವತ್ರ ಪೂಜಿತಃ ॥೧೦॥

ನಾರದರು ಸುಶೀಲರು ; ಸುಖವಾಗಿ ನಿದ್ರಿಸುವವರು ; ಪವಿತ್ರವಾದ ಭೋಜನವನ್ನು ಮಾಡುವವರು ; ಒಳ್ಳೆಯ ಆದರಕ್ಕೆ ಪಾತ್ರರಾದವರು ; ಪವಿತ್ರಹೃದಯರು ; ಒಳ್ಳೆಯ ಮಾತುಗಳನ್ನಾಡುವವರು ಮತ್ತು ಈರ್ಷ್ಯೆಯಿಂದ ರಹಿತರಾದವರು. ಆದುದರಿಂದಲೇ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ಕಲ್ಯಾಣಂ ಕುರುತೇ ಬಾಢಂ ಪಾಪಮಸ್ಮಿನ್ನ ವಿದ್ಯತೇ ।
ನ ಪ್ರೀಯತೇ ಪರಾನರ್ಥೈಸ್ತಸ್ಮಾತ್ಸರ್ವತ್ರ ಪೂಜಿತಃ ॥೧೧॥

ನಾರದರು ಯಾವಾಗಲೂ ಎಲ್ಲರಿಗೂ ಒಳ್ಳೆಯದನ್ನೇ ಮಾಡುತ್ತಿರುತ್ತಾರೆ. ಅವರಲ್ಲಿ ಪಾಪವೆಂಬುದೇ ಇಲ್ಲ. ಇತರರಿಗೆ ಆಗುವ ತೊಂದರೆಗಳಿಂದ ಅವರು ಸಂತೋಷಪಡತಕ್ಕವರಲ್ಲ. ಈ ಕಾರಣಗಳಿಂದಾಗಿ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ವೇದಶ್ರುತಿಭಿರಾಖ್ಯಾನೈರರ್ಥಾನಭಿಜಿಗೀಷತಿ ।
ತಿತಿಕ್ಷುರನವಜ್ಞಾತಾ ತಸ್ಮಾತ್ಸರ್ವತ್ರ ಪೂಜಿತಃ ॥೧೨॥

ನಾರದರು ವೇದೋಪನಿಷತ್ತುಗಳಿಂದಲೂ, ಪುರಾಣೇತಿಹಾಸಗಳ ಆಖ್ಯಾನಗಳಿಂದಲೂ ವಿಷಯಗಳನ್ನು ಪ್ರತಿಪಾದಿಸುವ ಇಚ್ಛೆಯುಳ್ಳವರಾಗಿದ್ದಾರೆ. ಅವರು ಸಹನಶೀಲರು. ಯಾರನ್ನೂ ಅನಾದರಣೆಮಾಡತಕ್ಕವರಲ್ಲ. ಆದುದರಿಂದ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ಸಮತ್ವಾಚ್ಚ ಪ್ರಿಯೋ ನಾಸ್ತಿ ನಾಪ್ರಿಯಶ್ಚ ಕಥಂಚನ ।
ಮನೋಽನುಕೂಲವಾದೀ ಚ ತಸ್ಮಾತ್ಸರ್ವತ್ರ ಪೂಜಿತಃ ॥೧೩॥

ಅವರು ಸರ್ವತ್ರ ಸಮಭಾವವನ್ನು ಹೊಂದಿರುವುದರಿಂದ ಅವರಿಗೆ ಪ್ರಿಯನಾದವನೂ ಇಲ್ಲ ; ಅಪ್ರಿಯನಾದವನೂ ಇಲ್ಲ. ಅವರು ಎಲ್ಲರ ಮನಸ್ಸಿಗೂ ಹಿತವಾಗುವಂತೆ ಮಾತನಾಡತಕ್ಕವರು. ಆದುದರಿಂದ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ಬಹುಶ್ರುತಶ್ಚಿತ್ರಕಥಃ ಪಣ್ಡಿತೋಽಲಾಲಸೋಽಶಠಃ ।
ಅದೀನೋಽಕ್ರೋಧನೋಽಲುಬ್ಧಸ್ತಸ್ಮಾತ್ಸರ್ವತ್ರ ಪೂಜಿತಃ ॥೧೪॥

ನಾರದರು ಸಕಲಶಾಸ್ತ್ರಗಳಲ್ಲಿಯೂ ಪಾಂಡಿತ್ಯವುಳ್ಳವರು. ವಿಚಿತ್ರತರ ವಾದ ಕಥೆಗಳನ್ನು ಹೇಳತಕ್ಕವರು. ಮಹಾಜ್ಞಾನಿಗಳು. ಲಾಲಸೆಯಿಲ್ಲದವರು, ನಿಷ್ಕಪಟಿಗಳು, ದೈನ್ಯ-ಕ್ರೋಧ-ಲೋಭ ಇತ್ಯಾದಿ ದೋಷಗಳಿಂದ ರಹಿತರಾದವರು. ಆದುದರಿಂದಲೇ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ನಾರ್ಥೇ ಧನೇ ವಾ ಕಾಮೇ ವಾ ಭೂತಪೂರ್ವೋಽಸ್ಯ ವಿಗ್ರಹಃ ।
ದೋಷಶ್ಚಾಸ್ಯ ಸಮುಚ್ಛಿನ್ನಾಸ್ತಸ್ಮಾತ್ಸರ್ವತ್ರ ಪೂಜಿತಃ ॥೧೫॥

ಯಾವುದಾದರೂ ವಸ್ತುವಿನ ವಿಷಯದಲ್ಲಾಗಲೀ, ಧನದ ವಿಷಯ ದಲ್ಲಾಗಲೀ, ಕಾಮದ ವಿಷಯದಲ್ಲಾಗಲೀ–ನಾರದರು ಹಿಂದೆ ಯಾರೊಡ ನೆಯೂ ಯಾವಾಗಲೂ ಜಗಳವಾಡಿದವರೇ ಅಲ್ಲ. ಅವರ ದೋಷ ಗಳೆಲ್ಲವೂ ಸಂಪೂರ್ಣವಾಗಿ ಹೊರಟುಹೋಗಿವೆ. ಅವರು ದೋಷರಹಿ ತರು. ಆದುದರಿಂದಲೇ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ದೃಢಭಕ್ತಿರನಿನ್ದ್ಯಾತ್ಮಾ ಶ್ರುತವಾನನೃಶಂಸವಾನ್ ।
ವೀತಸಮ್ಮೋಹದೋಷಶ್ಚ ತಸ್ಮಾತ್ಸರ್ವತ್ರ ಪೂಜಿತಃ ॥೧೬॥

ನಾರದರು ಪರಮಾತ್ಮನಲ್ಲಿ ದೃಢವಾದ ಭಕ್ತಿಯುಳ್ಳವರು ; ಶುದ್ಧಾ ತ್ಮರು ; ವಿದ್ವಾಂಸರು ; ದಯಾಳುಗಳು ; ಸಮ್ಮೋಹಾದಿ ದೋಷಗಳಿಂದ ವರ್ಜಿತರಾದವರು. ಆದುದರಿಂದ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ಅಸಕ್ತಃ ಸರ್ವಭೂತೇಷು ಸಕ್ತಾತ್ಮೇವ ಚ ಲಕ್ಷ್ಯತೇ ।
ಅದೀರ್ಘಸಂಶಯೋ ವಾಗ್ಮೀ ತಸ್ಮಾತ್ಸರ್ವತ್ರ ಪೂಜಿತಃ ॥೧೭॥

ನಾರದರು ಸಮಸ್ತಪ್ರಾಣಿಗಳ ವಿಷಯದಲ್ಲಿಯೂ ಆಸಕ್ತಿಯಿಲ್ಲದವರೇ ಆಗಿದ್ದರೂ–ಆಸಕ್ತಿಯುಳ್ಳವರಂತೆಯೇ ಕಾಣುತ್ತಾರೆ. ಅವರ ಮನಸ್ಸಿನಲ್ಲಿ ಯಾವ ಸಂಶಯಗಳೂ ಹೆಚ್ಚು ಕಾಲ ಉಳಿದಿರುವುದಿಲ್ಲ. ಅವರು ಮಹಾ ವಾಗ್ಮಿಗಳು. ಆದುದರಿಂದ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ಸಮಾಧಿರ್ನಾಸ್ಯ ಕಾಮಾರ್ಥೇ ನಾತ್ಮಾನಂ ಸ್ತೌತಿ ಕರ್ಹಿಚಿತ್ ।
ಅನೀರ್ಷುರ್ಮೃದುಸಂವಾದಸ್ತಸ್ಮಾತ್ಸರ್ವತ್ರ ಪೂಜಿತಃ ॥೧೮॥

ನಾರದರ ಮನಸ್ಸು ಯಾವಾಗಲೂ ವಿಷಯಭೋಗಗಳಲ್ಲಿ ಲೀನ ವಾಗುವುದಿಲ್ಲ. ಅವರು ಆತ್ಮಪ್ರಶಂಸೆಯನ್ನು ಮಾಡಿಕೊಳ್ಳತಕ್ಕವರಲ್ಲ. ಈರ್ಷ್ಯೆ ಯಿಲ್ಲದವರು. ಎಲ್ಲರೊಡನೆಯೂ ಮೃದುವಾದ ಮಾತುಗಳನ್ನಾಡುವವರು. ಆದುದರಿಂದ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ಲೋಕಸ್ಯ ವಿವಿಧಂ ಚಿತ್ತಂ ಪ್ರೇಕ್ಷತೇ ಚಾಪ್ಯಕುತ್ಸಯನ್ ।
ಸಂಸರ್ಗವಿದ್ಯಾಕುಶಲಸ್ತಸ್ಮಾತ್ಸರ್ವತ್ರ ಪೂಜಿತಃ ॥೧೯॥

ನಾರದರು ಲೋಕದಲ್ಲಿ ಜನರ ನಾನಾವಿಧವಾದ ಚಿತ್ತವೃತ್ತಿಗಳನ್ನು ನೋಡುತ್ತಿರುತ್ತಾರೆ. ಆದರೆ ಯಾರೊಬ್ಬರನ್ನೂ ನಿಂದಿಸಹೋಗುವುದಿಲ್ಲ. ಸಂಸರ್ಗವಿದ್ಯೆಯಲ್ಲಿ (ಸಹವಾಸದ ಗುಣ-ದೋಷಗಳ ತಿಳಿವಳಿಕೆಯಲ್ಲಿ) ಅತ್ಯಂತಕುಶಲರಾದವರು. ಈ ಕಾರಣಗಳಿಂದ ಅವರು ಸರ್ವತ್ರ ಪೂಜ್ಯ ರಾಗಿದ್ದಾರೆ.

ನಾಸೂಯತ್ಯಾಗಮಂ ಕಂಚಿತ್ಸ್ವನಯೇನೋಪಜೀವತಿ ।
ಅವನ್ಧ್ಯಕಾಲೋ ವಶ್ಯಾತ್ಮಾ ತಸ್ಮಾತ್ಸರ್ವತ್ರ ಪೂಜಿತಃ ॥೨೦॥

ನಾರದರು ಶಾಸ್ತ್ರಗಳಲ್ಲಿ ಎಂದೂ ದೋಷವನ್ನು ಹುಡುಕತಕ್ಕವರಲ್ಲ. ತಮ್ಮ ನೀತಿಗೆ ಅನುಸಾರವಾಗಿ ಜೀವನನಿರ್ವಹಣೆಯನ್ನು ಮಾಡತಕ್ಕವರು.

ಸಮಯವನ್ನು ವ್ಯರ್ಥವಾಗಿ ಕಳೆಯುವವರಲ್ಲ. ಮನಸ್ಸನ್ನು ಯಾವಾಗಲೂ ಹತೋಟಿಯಲ್ಲಿಟ್ಟುಕೊಂಡಿರುತ್ತಾರೆ. ಈ ಕಾರಣಗಳಿಂದ ಅವರು ಸರ್ವತ್ರ ಪೂಜ್ಯರಾಗಿರುತ್ತಾರೆ.

ಕೃತಶ್ರಮಃ ಕೃತಪ್ರಜ್ಞೋ ನ ಚ ತೃಪ್ತಃ ಸಮಾಧಿತಃ ।
ನಿತ್ಯಯುಕ್ತೋಽಪ್ರಮತ್ತಶ್ಚ ತಸ್ಮಾತ್ಸರ್ವತ್ರ ಪೂಜಿತಃ ॥೨೧॥

ನಾರದರು ಅಧ್ಯಾತ್ಮವಿದ್ಯೆಗಾಗಿ ಬಹಳ ಶ್ರಮಿಸಿರತಕ್ಕವರು. ಮಹಾ ಪ್ರಾಜ್ಞರು. ಸಮಾಧಿಯೋಗದಲ್ಲಿ ಅವರಿಗೆ ತೃಪ್ತಿಯೆಂಬುದೇ ಇಲ್ಲ. ನಿರಂತರವಾಗಿ ಸಮಾಧಿಯೋಗದಲ್ಲಿರತಕ್ಕವರು. ಕರ್ತವ್ಯಪರಿಪಾಲನೆಯಲ್ಲಿ ಸದಾ ನಿರತರಾಗಿರತಕ್ಕವರು ಮತ್ತು ಜಾಗರೂಕರಾಗಿರತಕ್ಕವರು. ಆದುದ ರಿಂದಲೇ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ನಾಪತ್ರಪಶ್ಚ ಯುಕ್ತಶ್ಚ ನಿಯುಕ್ತಃ ಶ್ರೇಯಸೇ ಪರೈಃ ।
ಅಭೇತ್ತಾ ಪರಗುಹ್ಯಾನಾಂ ತಸ್ಮಾತ್ಸರ್ವತ್ರ ಪೂಜಿತಃ ॥೨೨॥

ನಾರದರು ಲಜ್ಜಾಶೀಲರು. ಇತರರಿಗೆ ಒಳ್ಳೆಯದನ್ನು ಮಾಡುವುದರಲ್ಲಿ ಸದಾ ನಿರತರಾಗಿರತಕ್ಕವರು. ಈ ಕಾರಣದಿಂದಲೇ ಇತರರು ಅವರನ್ನು ತಮ್ಮ ಶ್ರೇಯಸ್ಸಿನ ಸಾಧನೆಗಾಗಿ ನಿಯೋಜಿಸುತ್ತಾರೆ. ಇತರರ ರಹಸ್ಯ ವಿಷಯಗಳು ತಮಗೆ ತಿಳಿದಿದ್ದರೂ ಅಂತಹ ರಹಸ್ಯಗಳನ್ನು ಎಂದೂ ಬಹಿರಂಗಪಡಿಸತಕ್ಕವರಲ್ಲ. ಆದುದರಿಂದಲೇ ಅವರು ಸರ್ವತ್ರ ಪೂಜ್ಯ ರಾಗಿದ್ದಾರೆ.

ನ ಹೃಷ್ಯತ್ಯರ್ಥಲಾಭೇಷು ನಾಲಾಭೇ ತು ವ್ಯಥತ್ಯಪಿ ।
ಸ್ಥಿರಬುದ್ಧಿರಸಕ್ತಾತ್ಮಾ ತಸ್ಮಾತ್ಸರ್ವತ್ರ ಪೂಜಿತಃ ॥೨೩॥

ನಾರದರು ಧನಲಾಭವಾದರೆ ಸಂತೋಷಪಡತಕ್ಕವರಲ್ಲ. ಧನಲಾಭ ವಾಗದಿದ್ದರೆ ವ್ಯಥೆಪಡತಕ್ಕವರೂ ಅಲ್ಲ. ಸ್ಥಿರವಾದ ಬುದ್ಧಿಯುಳ್ಳವರು ಮತ್ತು ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದವರು. ಆದುದರಿಂದ ಅವರು ಸರ್ವತ್ರ ಪೂಜ್ಯರಾಗಿದ್ದಾರೆ.

ತಂ ಸರ್ವಗುಣಸಮ್ಪನ್ನಂ ದಕ್ಷಂ ಶುಚಿಮನಾಮಯಮ್ ।
ಕಾಲಜ್ಞಂ ಚ ಪ್ರಿಯಜ್ಞಂ ಚ ಕಃ ಪ್ರಿಯಂ ನ ಕರಿಷ್ಯತಿ ॥೨೪॥

ಇಂತಹ ಸರ್ವಗುಣಸಂಪನ್ನರಾದ, ಕಾರ್ಯಕುಶಲರಾದ, ಪವಿತ್ರ ಹೃದಯರಾದ, ನೀರೋಗರಾದ, ಸಮಯದ ಬೆಲೆಯನ್ನು ತಿಳಿದಿರುವ, ಪರಮಪ್ರಿಯವಾದ ಆತ್ಮತತ್ತ್ವವನ್ನು ತಿಳಿದಿರುವ ನಾರದರನ್ನು ಯಾರು ತಾನೇ ತಮಗೆ ಪ್ರಿಯರನ್ನಾಗಿ ಮಾಡಿಕೊಳ್ಳುವುದಿಲ್ಲ?”

೨೩೦ನೆಯ ಅಧ್ಯಾಯವು ಮುಗಿಯಿತು.

೨೩೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶುಕದೇವನ ಪ್ರಶ್ನೆಗೆ ವ್ಯಾಸರು ಉತ್ತರಿಸುತ್ತಾ ಕಾಲದ ಸ್ವರೂಪವನ್ನು ತಿಳಿಸಿದುದು

ಮಹಾರಾಜ! ಯುಧಿಷ್ಠಿರನು ಹೇಳುತ್ತಾನೆ :

ಆದ್ಯನ್ತಂ ಸರ್ವಭೂತಾನಾಂ ಜ್ಞಾತುಮಿಚ್ಛಾಮಿ ಕೌರವ ।
ಧ್ಯಾನಂ ಕರ್ಮ ಚ ಕಾಲಂ ಚ ತಥೈವಾಯುರ್ಯುಗೇ ಯುಗೇ ॥

“ಕೌರವನೇ! ಪಿತಾಮಹ! ಈಗ ನಾನು ಸರ್ವಪ್ರಾಣಿಗಳ ಉತ್ಪತ್ತಿ ಮತ್ತು ಲಯಗಳು ಹೇಗಾಗುವುದೆಂಬುದನ್ನು ತಿಳಿಯಲು ಇಷ್ಟಪಡುತ್ತೇನೆ. ಪರಮಾರ್ಥಪ್ರಾಪ್ತಿಗಾಗಿ ಯಾವುದನ್ನು ಧ್ಯಾನಿಸಬೇಕು? ಯಾವ ಕರ್ಮವನ್ನು ಅನುಷ್ಠಾನಮಾಡಬೇಕು? ಕಾಲದ ಸ್ವರೂಪವೇನು? ಬೇರೆ-ಬೇರೆ ಯುಗಗಳಲ್ಲಿ ಮನುಷ್ಯನ ಆಯುಃಪ್ರಮಾಣಗಳೇನು?

ಲೋಕತತ್ತ್ವಂ ಚ ಕಾರ್ತ್ಸ್ನ್ಯೇನ ಭೂತಾನಾಮಗತಿಂ ಗತಿಮ್ ।
ಸರ್ಗಶ್ಚ ನಿಧನಂ ಚೈವ ಕುತ ಏತತ್ಪ್ರವರ್ತತೇ ॥೨॥

ಲೋಕತತ್ತ್ವವನ್ನು ಸಮಗ್ರವಾಗಿ ತಿಳಿದುಕೊಳ್ಳಬೇಕೆಂದಿರುತ್ತೇನೆ. ಪ್ರಾಣಿಗಳ ಆವಿರ್ಭಾವ ಮತ್ತು ತಿರೋಭಾವ ; ಸೃಷ್ಟಿ ಮತ್ತು ಪ್ರಳಯ ; ಯಾವುದರಿಂದ ಇವು ಹೀಗೆ ನಡೆಯುತ್ತವೆ? – ಎಂಬುದನ್ನೂ ತಿಳಿದುಕೊಳ್ಳಲು ಕುತೂಹಲಿಯಾಗಿದ್ದೇನೆ.

ಸತ್ಪುರುಷಶ್ರೇಷ್ಠನೇ! ನಮ್ಮ ವಿಷಯದಲ್ಲಿ ನೀನು ಅನುಗ್ರಹ ಬುದ್ಧಿಯುಳ್ಳವನಾಗಿದ್ದರೆ–ನನ್ನ ಈ ಪ್ರಶ್ನೆಗಳಿಗೆ ಉತ್ತರವನ್ನು ಅನುಗ್ರಹಿಸು.

ಪೂರ್ವಂ ಹಿ ಕಥಿತಂ ಶ್ರುತ್ವಾ ಭೃಗುಭಾಷಿತಮುತ್ತಮಮ್ ।
ಭರದ್ವಾಜಸ್ಯ ವಿಪ್ರರ್ಷೇಸ್ತತೋ ಮೇ ಬುದ್ಧಿರುತ್ತಮಾ ॥೪॥

ಈ ಹಿಂದೆ ನಾನು–ಭೃಗುಋಷಿಯು ಬ್ರಹ್ಮರ್ಷಿಯಾದ ಭರದ್ವಾಜನಿಗೆ ಮಾಡಿದ ಶ್ರೇಷ್ಠವಾದ ಉಪದೇಶವನ್ನು ನಿನ್ನಿಂದ ಕೇಳಿದೆನು. ಅನಂತರ ನನ್ನ ಬುದ್ಧಿಯು ಮತ್ತಷ್ಟು ಶುದ್ಧವಾಯಿತು.

ಜಾತಾ ಪರಮಧರ್ಮಿಷ್ಠಾ ದಿವ್ಯಸಂಸ್ಥಾನಸಂಸ್ಥಿತಾ ।
ತತೋ ಭೂಯಸ್ತು ಪೃಚ್ಛಾಮಿ ತದ್ಭವಾನ್ವಕ್ತುಮರ್ಹತಿ ॥೫॥

ಭೃಗುಋಷಿಯ ದಿವ್ಯೋಪದೇಶವನ್ನು ಕೇಳಿದನಂತರ ನನ್ನ ಬುದ್ಧಿಯು ಪರಮಧರ್ಮಿಷ್ಠವಾಯಿತು. ದಿವ್ಯವಾದ ಸಂಸ್ಥಾನದಲ್ಲಿ ಸ್ಥಿತಿಯನ್ನು ಹೊಂದಿತು. ಆದುದರಿಂದ ನಾನು ನಿನ್ನನ್ನು ಪುನಃ ಈ ಆಧ್ಯಾತ್ಮಿಕದ ವಿಷಯವಾಗಿ ಪ್ರಶ್ನಿಸುತ್ತಿದ್ದೇನೆ. ಅದನ್ನು ಹೇಳುವ ಕೃಪೆಮಾಡು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಈ ವಿಷಯದಲ್ಲಿ ಭಗವಾನ್ ವ್ಯಾಸರು ತಮ್ಮ ಮಗನಾದ ಶುಕನ ಪ್ರಶ್ನೆಗಳಿಗೆ ಉತ್ತರರೂಪವಾಗಿ ಹೇಳಿದ ಬಹಳ ಪ್ರಾಚೀನವಾದ ಇತಿಹಾಸರೂಪವಾದ ಆಖ್ಯಾನವನ್ನು ಹೇಳುತ್ತೇನೆ.

ವ್ಯಾಸಪುತ್ರನಾದ ಶುಕನು ಅಖಿಲವಾದ ವೇದಗಳನ್ನೂ, ವೇದಾಂಗ ಗಳನ್ನೂ, ಉಪನಿಷತ್ತುಗಳನ್ನೂ ಅಧ್ಯಯನಮಾಡಿದನಂತರ ಅಂತಿಮವಾದ ಕರ್ಮವನ್ನು ತಿಳಿಯುವ ಸಲುವಾಗಿ ತನ್ನ ತಂದೆಯವರಲ್ಲಿರುವ ಧರ್ಮಜ್ಞಾನ ವಿಷಯಕವಾದ ನಿಪುಣತೆಯನ್ನು ತಿಳಿದು, ಧರ್ಮಾರ್ಥಗಳ ವಿಷಯಗಳಲ್ಲಿ ಬರುವ ಸಂದೇಹಗಳನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದ ಕೃಷ್ಣದ್ವೈಪಾಯನವ್ಯಾಸರನ್ನು ತನ್ನ ಮನಸ್ಸಿನಲ್ಲಿದ್ದ ಸಂದೇಹದ ವಿಷಯವಾಗಿ ಪ್ರಶ್ನಿಸಿದನು :

ಭೂತಗ್ರಾಮಸ್ಯ ಕರ್ತಾರಂ ಕಾಲಜ್ಞಾನೇ ಚ ನಿಶ್ಚಯಮ್ ।
ಬ್ರಾಹ್ಮಣಸ್ಯ ಚ ಯತ್ಕೃತ್ಯಂ ತದ್ಭವಾನ್ವಕ್ತುಮರ್ಹತಿ ॥೬॥

"ತಂದೆಯೇ! ಪ್ರಾಣಿಸಮುದಾಯದ ಸೃಷ್ಟಿಕರ್ತನು ಯಾರೆಂಬುವುದನ್ನೂ, ಕಾಲಜ್ಞಾನದಲ್ಲಿ ನಿನ್ನ ನಿಶ್ಚಿತವಾದ ಅಭಿಪ್ರಾಯವನ್ನೂ, ಬ್ರಾಹ್ಮಣನ ಕರ್ತವ್ಯವೇನೆಂಬುದನ್ನೂ ತಿಳಿಸುವ ಕೃಪೆಮಾಡಿರಿ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಹಿಂದಾದುದನ್ನೂ–ಮುಂದಾಗುವುದನ್ನೂ ತಿಳಿದಿರುವ, ಸರ್ವಧರ್ಮಗಳನ್ನೂ ಬಲ್ಲ, ವಿದ್ವಾಂಸರಾದ, ಸರ್ವಜ್ಞರಾದ, ಶುಕನ ಪಿತೃಗಳಾದ ವ್ಯಾಸರು ಧರ್ಮದ ರಹಸ್ಯವನ್ನು ಪ್ರಶ್ನಿಸಿದ ಮಗನಿಗೆ ಯಥೋಚಿತವಾಗಿ ಉಪದೇಶಿಸಿದರು :

ಅನಾದ್ಯನ್ತಮಜಂ ದಿವ್ಯಮಜರಂ ಧ್ರುವಮವ್ಯಯಮ್ ।
ಅಪ್ರತರ್ಕ್ಯಮವಿಜ್ಞೇಯಂ ಬ್ರಹ್ಮಾಗ್ರೇ ಸಮ್ಪ್ರವರ್ತತೇ ॥೧೧॥

"ಶುಕ! ಸೃಷ್ಟಿಯ ಆರಂಭದಲ್ಲಿ ಅನಾದಿಯಾದ, ಅನಂತವಾದ, ಹುಟ್ಟು-ಸಾವುಗಳಿಲ್ಲದ, ದಿವ್ಯವಾದ, ಮುಪ್ಪಿನಿಂದ ರಹಿತವಾದ, ಶಾಶ್ವತವಾದ, ನಾಶರಹಿತವಾದ, ತರ್ಕಕ್ಕೆ ಅತೀತವಾದ, ಯಾರಿಂದಲೂ ತಿಳಿಯಲ್ಪಡದಿರುವ ಬ್ರಹ್ಮವಸ್ತುವೊಂದೇ ಇದ್ದಿತು. (ಆ ಬ್ರಹ್ಮವಸ್ತುವೇ ಈ ಜಗತ್ತಿನ ಕರ್ತೃವಾಗಿದೆ.)

ಕಾಷ್ಠಾ ನಿಮೇಷಾ ದಶ ಪಞ್ಚ ಚೈವ
ತ್ರಿಂಶತ್ತು ಕಾಷ್ಠಾ ಗಣಯೇತ್ಕಲಾಂ ತಾಮ್ ।
ತ್ರಿಂಶತ್ಕಲಶ್ಚಾಪಿ ಭವೇನ್ಮುಹೂರ್ತೋ
ಭಾಗಃ ಕಲಾಯಾ ದಶಮಶ್ಚ ಯಃ ಸ್ಯಾತ್ ॥೧೨॥

ಕಾಲದ ವಿಭಾಗವನ್ನು ಹೀಗೆ ಮಾಡಬೇಕು.

ಹದಿನೈದು * ನಿಮೇಷಗಳಿಗೆ ಒಂದು ಕಾಷ್ಠಾ ಎಂದು ಹೆಸರು.

---

* ನಿಮೇಷಃ ಎಂದರೆ ಒಂದು ಸಲ ರೆಪ್ಪೆಯನ್ನಾಡಿಸುವಷ್ಟು ಕಾಲ. ನಿಮೇಷೋ ನಿಮಿಷೋ ನೇತ್ರಮೀಲನೇ ಕಾಲಭಿದ್ಯಪಿ [ಹೇಮಾದ್ರಿ] ಭಾಗಃ ಕಲಾಯಾ ದಶಮಶ್ಚ ಯಃ ಸ್ಯಾತ್ ಎಂಬ ೧೨ನೆಯ ಶ್ಲೋಕದ ಕಡೆಯ ಪಾದಕ್ಕೆ ಮೂರು ಕಾಷ್ಠೆಗಳೆಂದು ಅರ್ಥಮಾಡಿ ೩೦ ಕಲೆಗಳು ಮತ್ತು ೩ ಕಾಷ್ಠೆಗಳಿಗೆ ಒಂದು ಮುಹೂರ್ತವೆಂದು ಅರ್ಥಮಾಡಿರುತ್ತಾರೆ. ವ್ಯಾಖ್ಯಾನಕಾರರು ಭಾಗಃ ಎಂಬುದನ್ನು ಭಗಃ ಎಂಬುದಾಗಿ

ಮೂವತ್ತು ಕಾಷ್ಠಗಳಿಗೆ ಒಂದು ಕಲೆ. ಮೂವತ್ತು ಕಲೆಗಳಿಗೆ ಒಂದು ಮುಹೂರ್ತ. ಇದರ ಜೊತೆಗೆ ಕಲೆಯ ಹತ್ತನೆಯ ಒಂದು ಭಾಗವೂ ಸೇರಿದೆ. ಅರ್ಥಾತ್ ಮೂವತ್ತು ಕಲೆ ಮತ್ತು ಮೂರು ಕಾಷ್ಠಗಳು ಸೇರಿದರೆ ಒಂದು ಮುಹೂರ್ತವಾಗುತ್ತದೆ.

ತ್ರಿಂಶನ್ಮುಹೂರ್ತಂ ತು ಭವೇದಹಶ್ಚ
ರಾತ್ರಿಶ್ಚ ಸಂಖ್ಯಾ ಮುನಿಭಿಃ ಪ್ರಣೀತಾ ।
ಮಾಸಃ ಸ್ಮೃತೋ ರಾತ್ರ್ಯಹನೀ ಚ ತ್ರಿಂಶ-
ತ್ಸಂವತ್ಸರೋ ದ್ವಾದಶಮಾಸ ಉಕ್ತಃ ॥೧೩॥

ಮೂವತ್ತು ಮುಹೂರ್ತಗಳಿಗೆ ಒಂದು ಹಗಲು ಮತ್ತು ಒಂದು ರಾತ್ರಿಯಾಗುತ್ತದೆ. ಮಹರ್ಷಿಗಳು ಹಗಲು-ರಾತ್ರಿಗಳಲ್ಲಿನ ಮುಹೂರ್ತಗಳ ಸಂಖ್ಯೆಯನ್ನು ಮೂವತ್ತು ಎಂದೇ ಹೇಳಿದ್ದಾರೆ. ಮೂವತ್ತು ರಾತ್ರಿ-ಹಗಲುಗಳಿಗೆ ಒಂದು ಮಾಸವಾಗುತ್ತದೆ. ಇಂತಹ ಹನ್ನೆರಡು ಮಾಸಗಳಿಗೆ ಒಂದು ಸಂವತ್ಸರವಾಗುತ್ತದೆ.

ಸಂವತ್ಸರಂ ದ್ವೇ ತ್ವಯನೇ ವದನ್ತಿ
ಸಂಖ್ಯಾವಿದೋ ದಕ್ಷಿಣಮುತ್ತರಂ ಚ ॥೧೪॥

ಕಾಲದ ಗಣನೆಯನ್ನು ತಿಳಿದಿರುವ ವಿದ್ವಾಂಸರು ದಕ್ಷಿಣಾಯನ ಮತ್ತು ಉತ್ತರಾಯಣಗಳು ಸೇರಿ ಒಂದು ಸಂವತ್ಸರವಾಗುವುದೆಂದು ಹೇಳುತ್ತಾರೆ.

ಮಾಡಿಕೊಂಡು ಭಗಃ ಸೂರ್ಯಃ ತತ್ಸಮ್ಬನ್ಧೀ ಕಲಾಯಾಃ ದಶಮೋಽಂಶಃ ತೇನ ಸಹಿತಃ ತ್ರಿಂಶತ್ಕಲೋ ಮುಹೂರ್ತಃ–ಸೂರ್ಯನ ಸಂಬಂಧವಾದ ಹದಿನಾರು ಕಲೆಗಳಲ್ಲಿ ಹತ್ತನೆಯ ಒಂದಂಶದಿಂದ ಸಹಿತವಾದ ಮುಹೂರ್ತ. ಸ ಚ ಸೂರ್ಯಸ್ಯ ಉದಯಾದುದಯಾಂತರಪರ್ಯಂತಂ ಯಾವಾನ್ಕಾಲಃ ತಸ್ಯ ಷೋಡಶೋಽಂಶಃ-ಸೂರ್ಯನ ಉದಯದಿಂದ ಉದಯದವರೆಗಿರುವ ಕಾಲದ ೧೬ನೆಯ ಒಂದು ಭಾಗ. ಪಾದೋನನಾಡೀಚತುಷ್ಟಯಾತ್ಮಕಃ – ಒಂದು ಪಾದ ಕಡಿಮೆಯಾದ ನಾಲ್ಕು ನಾಡಿಗಳು ಅಥವಾ ೬೦ ನಿಮಿಷಗಳು. ತಸ್ಯಾಪಿ ದಶಮಾಂಶಃ–ಅದರಲ್ಲಿ ಹತ್ತನೆಯ ಒಂದು ಭಾಗ ೬ ನಿಮಿಷಗಳು ಅಥವಾ $22\frac{1}{2}$ ಪಲಗಳು. ಇದರೊಡನೆ ಸೇರಿದ ೩೦ ಕಲೆಗಳಿಗೆ ೧ ಮುಹೂರ್ತ– ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಈಗ ಪ್ರಚಲಿತವಾಗಿರುವುದರಲ್ಲಿ ಸ್ವಲ್ಪ ವ್ಯತ್ಯಾಸವಿದೆ.

ಅಹೋರಾತ್ರೇ ವಿಭಜತೇ ಸೂರ್ಯೋ ಮಾನುಷಲೌಕಿಕೇ ।
ರಾತ್ರಿಃ ಸ್ವಪ್ನಾಯ ಭೂತಾನಂ ಚೇಷ್ಟಾಯೈ ಕರ್ಮಣಾಮಹಃ ॥೧೫॥

ಮನುಷ್ಯಲೋಕದಲ್ಲಿ ಸೂರ್ಯದೇವನು ದಿನವನ್ನು ಹಗಲು ಮತ್ತು ರಾತ್ರಿ–ಎಂಬುದಾಗಿ ವಿಭಾಗಿಸಿದ್ದಾನೆ. ಪ್ರಾಣಿಗಳಿಗೆ ರಾತ್ರಿಯು ನಿದ್ರೆ ಮಾಡುವುದಕ್ಕಾಗಿ ; ಹಗಲು ಕೆಲಸಮಾಡುವುದಕ್ಕಾಗಿ.

ಪಿತ್ರ್ಯೇ ರಾತ್ರ್ಯಹನೀ ಮಾಸಃ ಪ್ರವಿಭಾಗಸ್ತಯೋಃ ಪುನಃ ।
ಶುಕ್ಲೋಽಹಃ ಕರ್ಮಚೇಷ್ಟಾಯಾಂ ಕೃಷ್ಣಃ ಸ್ವಪ್ನಾಯ ಶರ್ವರೀ ॥೧೬॥

ಮನುಷ್ಯರ ಒಂದು ಮಾಸವು ಪಿತೃಗಳಿಗೆ ಒಂದು ದಿನವಾಗುತ್ತದೆ. ಹಗಲಿನ ರೂಪವಾದ ಶುಕ್ಲಪಕ್ಷವು ಪಿತೃಗಳು ಕೆಲಸಮಾಡುವುದಕ್ಕಾಗಿ. ರಾತ್ರಿಯ ರೂಪವಾದ ಕೃಷ್ಣಪಕ್ಷವು ನಿದ್ರಿಸುವುದಕ್ಕಾಗಿ.

ದೈವೇ ರಾತ್ರ್ಯಹನೀ ವರ್ಷಂ ಪ್ರವಿಭಾಗಸ್ತಯೋಃ ಪುನಃ ।
ಅಹಸ್ತತ್ರೋದಗಮನಂ ರಾತ್ರಿಃ ಸ್ಯಾದ್ದಕ್ಷಿಣಾಯನಮ್ ॥೧೭॥

ಮನುಷ್ಯರ ಒಂದು ವರ್ಷವು ದೇವತೆಗಳಿಗೆ ಒಂದು ಹಗಲು ಮತ್ತು ಒಂದು ರಾತ್ರಿಯಾಗುತ್ತದೆ. ಒಂದು ವರ್ಷದಲ್ಲಿ ಹಗಲು-ರಾತ್ರಿಗಳ ವಿಭಾಗವು ಹೀಗಿದೆ. ಆರು ಮಾಸಗಳಿಂದ ಕೂಡಿದ ಉತ್ತರಾಯಣವೇ ದೇವತೆಗಳ ಹಗಲು. ಪುನಃ ಆರು ಮಾಸಗಳಿಂದ ಕೂಡಿದ ದಕ್ಷಿಣಾಯನವೇ ಅವರ ರಾತ್ರಿ.

ಅಷ್ಟಾದಶ ನಿಮೇಷಾಸ್ತು ಕಾಷ್ಠಾ ತ್ರಿಂಶತ್ತು ತಾಃ ಕಲಾ ತ್ರಿಂಶತ್ಕಲೋ ಮುಹೂರ್ತಸ್ತು ತ್ರಿಂಶದ್ರಾತ್ರ್ಯಹನೀ ತು ತೇ ॥ ಎಂದು ಒಂದು ಪಾಠ. ೧೮ ನಿಮೇಷಗಳಿಗೆ ೧ ಕಾಷ್ಠೆ. ೩೦ ಕಾಷ್ಠೆಗಳಿಗೆ ೧ ಕಲೆ. ೩೦ ಕಲೆಗಳಿಗೆ ಒಂದು ಮುಹೂರ್ತ. ೩೦ ಮುಹೂರ್ತಗಳಿಗೆ ಒಂದು ಹಗಲು ಮತ್ತು ಒಂದು ರಾತ್ರಿ (ಒಂದು ಪೂರ್ಣ ದಿವಸ.) ಮತ್ತೊಂದು ಕೋಷ್ಟಕದ ಪ್ರಕಾರ ೨ ಕ್ಷಣ= ೧ ಲವ, ೨ ಲವ= ೧ ನಿಮೇಷ, ೧೮ ನಿಮೇಷ ೧ ಕಾಷ್ಠಾ, ೩೦ ಕಾಷ್ಠಾ =೧ ಕಲಾ, ೩೦ ಕಲಾ=೧ ಕ್ಷಣ, ೧೨ ಕ್ಷಣ=೧ ಮುಹೂರ್ತ, ೩೦ ಮುಹೂರ್ತ=೧ ಅಹೋರಾತ್ರ, ೩೦ ಅಹೋರಾತ್ರ=೧ ಮಾಸ, ೧೨ ಮಾಸ=೧ ಸಂವತ್ಸರ. ೧ ದಿವಸಕ್ಕೆ ೩೦ ಮುಹೂರ್ತಗಳು–ಎಂದು ಸಿದ್ಧವಾಗಿರುವುದರಿಂದ ಈಗಿನ ೨೪ ಘಂಟೆಯ ದಿನದ ಪ್ರಕಾರ ೪೮ ನಿಮಿಷಗಳಿಗೆ ಒಂದು ಮುಹೂರ್ತವಾಗುತ್ತದೆ. ಈ ನಿಮಿಷಗಳನ್ನೇ ಆಧಾರವನ್ನಾಗಿಟ್ಟುಕೊಂಡು ಕಲಾ-ಕಾಷ್ಠಾ-ನಿಮೇಷಗಳ ಕಾಲಮಾನ

ಯೇ ತೇ ರಾತ್ರ್ಯಹನೀ ಪೂರ್ವಂ ಕೀರ್ತಿತೇ ಜೀವಲೌಕಿಕೇ ।
ತಯೋಃ ಸಂಖ್ಯಾಯ ವರ್ಷಾಗ್ರಂ ಬ್ರಾಹ್ಮೇ ವಕ್ಷ್ಯಾಮ್ಯಹಃ ಕ್ಷಪೇ ॥೧೮॥

ಪೃಥಕ್ಸಂವತ್ಸರಾಗ್ರಾಣಿ ಪ್ರವಕ್ಷ್ಯಾಮ್ಯನುಪೂರ್ವಶಃ ।
ಕೃತೇ ತ್ರೇತಾಯುಗೇ ಚೈವ ದ್ವಾಪರೇ ಚ ಕಲೌ ತಥಾ ॥೧೯॥

ಹಿಂದೆ ಮನುಷ್ಯಲೋಕದಲ್ಲಿ ಹೇಳಿದ ಹಗಲು-ರಾತ್ರಿಗಳಿಗೆ ಅನುಸಾರವಾಗಿಯೇ (ಮನುಷ್ಯರ ಹಗಲು-ರಾತ್ರಿಗಳನ್ನೇ ಆಧರಿಸಿ) ಈಗ ನಾನು ಬ್ರಹ್ಮನ ಹಗಲು ಮತ್ತು ರಾತ್ರಿಗಳ ಪರಿಮಿತಿಯನ್ನು ಹೇಳುತ್ತೇನೆ. ಹಾಗೆಯೇ ಸತ್ಯಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗಗಳ ವರ್ಷಗಳ ಸಂಖ್ಯೆಯನ್ನೂ ಪ್ರತ್ಯೇಕ-ಪ್ರತ್ಯೇಕವಾಗಿ ಅನುಕ್ರಮವಾಗಿ ಹೇಳುತ್ತೇನೆ.

ಚತ್ವಾರ್ಯಾಹುಃ ಸಹಸ್ರಾಣಿ ವರ್ಷಾಣಾಂ ತತ್ಕೃತಂ ಯುಗಮ್ ।
ತಸ್ಯ ತಾವಚ್ಛತೀ ಸಂಧ್ಯಾ ಸಂಧ್ಯಾಂಶಶ್ಚ ತಥಾವಿಧಃ ॥೨೦॥

ದೇವತೆಗಳ ಕಾಲಮಾನದ ಪ್ರಕಾರ ಕೃತಯುಗದ ಪ್ರಮಾಣ ನಾಲ್ಕು ಸಾವಿರ ದಿವ್ಯವರ್ಷಗಳು. ನಾಲ್ಕು ನೂರು ದಿವ್ಯವರ್ಷಗಳು ಕೃತಯುಗದ ಸಂಧ್ಯಾಕಾಲವಾಗಿರುತ್ತದೆ. ಸಂಧ್ಯಾಂಶವೂ ನಾಲ್ಕು ನೂರು ದಿವ್ಯವರ್ಷ ಪರ್ಯಂತವಾಗಿರುತ್ತದೆ.

ಇತರೇಷು ಸಸಂಧ್ಯೇಷು ಸಂಧ್ಯಾಂಶೇಷು ತತಸ್ತ್ರಿಷು ।
ಏಕಪಾದೇನ ಹೀಯಂತೇ ಸಹಸ್ರಾಣಿ ಶತಾನಿ ಚ ॥೨೧॥

ಸಂಧ್ಯಾ ಮತ್ತು ಸಂಧ್ಯಾಂಶಸಹಿತವಾದ ಇತರ ಮೂರು ಯುಗ

ವನ್ನು ಗೊತ್ತುಮಾಡುವುದಾದರೆ ೫ ನಿಮೇಷಗಳಿಗೆ $1\frac{1}{16}$ ಸೆಕೆಂಡ್. $3\frac{3}{16}$ ಸೆಕೆಂಡುಗಳು ಅಥವಾ ೧೫ ನಿಮೇಷಗಳಿಗೆ ೧ ಕಾಷ್ಠಾ. ೩೦ ಕಾಷ್ಠಗಳು ಅಥವಾ $1\frac{19}{32}$ ನಿಮಿಷಗಳಿಗೆ ೧ ಕಲೆ. ೩೦ ಕಲೆಗಳಿಗೆ $47\frac{3}{16}$ ನಿಮಿಷಗಳು. ೩೦ ಕಲೆಗಳಿಗೆ ೩ ಕಾಷ್ಠಗಳನ್ನು ಸೇರಿಸಿದರೆ ೪೭ ನಿಮಿಷಗಳೂ ೫೪ ಸೆಕೆಂಡುಗಳೂ ಆಗುತ್ತವೆ. ಇದು ಒಂದು ಮುಹೂರ್ತ.

ಗಳಲ್ಲಿ ಕೃತಯುಗದ ನಾಲ್ಕುಸಾವಿರ ನಾಲ್ಕುನೂರು ಸಂಖ್ಯೆಯು ಕ್ರಮವಾಗಿ ಒಂದೊಂದು ಪಾದದಷ್ಟು ಅಥವಾ ಒಂದುಸಾವಿರ ಮತ್ತು ಒಂದುನೂರರಂತೆ ಕಡಿಮೆಯಾಗುತ್ತದೆ.*

ಏತಾನಿ ಶಾಶ್ವತಾಲ್ಲೋಕಾನ್ಧಾರಯನ್ತಿ ಸನಾತನಾನ್ ।
ಏತದ್ಬ್ರಹ್ಮವಿದಾಂ ತಾತ ವಿದಿತಂ ಬ್ರಹ್ಮ ಶಾಶ್ವತಮ್ ॥೨೨॥

ಈ ನಾಲ್ಕು ಯುಗಗಳೇ ಶಾಶ್ವತವಾದ ಮತ್ತು ಸನಾತನವಾದ ಲೋಕಗಳನ್ನು ಧಾರಣೆಮಾಡಿಕೊಂಡಿವೆ. ಈ ಶಾಶ್ವತವಾದ, ಯುಗಾತ್ಮಕವಾದ, ಕಾಲಸ್ವರೂಪವಾದ ಬ್ರಹ್ಮವು ಬ್ರಹ್ಮವಿದರಿಗೆ ತಿಳಿದಿರುವುದು.

ಚತುಷ್ಪಾತ್ಸಕಲೋ ಧರ್ಮಃ ಸತ್ಯಂ ಚೈವ ಕೃತೇ ಯುಗೇ ।
ನಾಧರ್ಮೇಣಾಗಮಃ ಕಶ್ಚಿತ್ಪರಸ್ತಸ್ಯ ಪ್ರವರ್ತತೇ ॥೨೩॥

ಕೃತಯುಗದಲ್ಲಿ ಸತ್ಯ ಮತ್ತು ಧರ್ಮಗಳು ನಾಲ್ಕು ಪಾದಗಳಿಂದಲೂ ಪೂರ್ಣವಾಗಿರುತ್ತವೆ. ಜನರು ಸತ್ಯ-ಧರ್ಮಗಳನ್ನು ಪೂರ್ಣವಾಗಿ ಪರಿಪಾಲಿಸುತ್ತಿರುತ್ತಾರೆ. ಅಧರ್ಮವೇ ಆಗ ಇರುವುದಿಲ್ಲವಾದುದರಿಂದ ಅಲ್ಲಿ ಬೇರೆ ಯಾವ (ಧರ್ಮನಿಯಾಮಕವಾದ) ಆಗಮವೂ (ಶಾಸ್ತ್ರವೂ) ಇರುವುದಿಲ್ಲ.

ಇತರೇಷ್ವಾಗಮಾದ್ಧರ್ಮಃ ಪಾದಶಸ್ತ್ವವರೋಪ್ಯತೇ ।
ಚೌರ್ಯಕಾನೃತಮಾಯಾಭಿರಧರ್ಮಶ್ಚೋಪಚೀಯತೇ ॥೨೪॥

ಅರೋಗಾಃ ಸರ್ವಸಿದ್ಧಾರ್ಥಾಶ್ಚತುರ್ವರ್ಷಶತಾಯುಷಃ ।
ಕೃತೇ ತ್ರೇತಾಯುಗೇ ತ್ವೇಷಾಂ ಪಾದಶೋ ಹ್ರಸತೇ ವಯಃ ॥೨೫॥

ತ್ರೇತಾ-ದ್ವಾಪರ-ಕಲಿಯುಗಗಳಲ್ಲಿ ಶಾಸ್ತ್ರಗಳಿಂದ ಧರ್ಮವನ್ನು ತಿಳಿಯಬೇಕು. ಆ ಯುಗಗಳಲ್ಲಿ ಧರ್ಮದ ಒಂದೊಂದು ಪಾದವು ಕ್ರಮವಾಗಿ

---

* ತ್ರೇತಾಯುಗದಲ್ಲಿ ೩,೦೦೦ ದಿವ್ಯವರ್ಷಗಳು. ಸಂಧ್ಯೆಗಳು ೩೦೦ ದಿವ್ಯವರ್ಷಗಳು. ಸಂಧ್ಯಾಂಶಗಳು : ೩೦೦ ದಿವ್ಯವರ್ಷಗಳು. ದ್ವಾಪರಯುಗದಲ್ಲಿ ೨೦೦೦ ದಿವ್ಯವರ್ಷಗಳು. ಸಂಧ್ಯೆಗಳು ೨೦೦ ದಿವ್ಯವರ್ಷಗಳು. ಸಂಧ್ಯಾಂಶಗಳು ೨೦೦ ದಿವ್ಯವರ್ಷಗಳು. ಕಲಿಯುಗದಲ್ಲಿ ೧೦೦೦ ದಿವ್ಯವರ್ಷಗಳು. ಸಂಧ್ಯೆಗಳು ೧೦೦ ದಿವ್ಯವರ್ಷಗಳು. ಸಂಧ್ಯಾಂಶಗಳು ೧೦೦ ದಿವ್ಯವರ್ಷಗಳು.

ಕ್ಷೀಣಿಸುತ್ತದೆ*. ಕಳ್ಳತನ, ಅಸತ್ಯ, ಮೋಸ–ಇತ್ಯಾದಿಗಳಿಂದ ಅಧರ್ಮದ ವೃದ್ಧಿಯಾಗುತ್ತಿರುತ್ತದೆ.

ಸತ್ಯಯುಗದಲ್ಲಿ ಮನುಷ್ಯರು ನೀರೋಗದೃಢಕಾಯರಾಗಿರುತ್ತಾರೆ. ಅವರ ಎಲ್ಲ ಕಾಮನೆಗಳೂ ಪ್ರಯತ್ನವಿಲ್ಲದೆಯೇ ಸಿದ್ಧಿಸುತ್ತವೆ. ಅವರ ಆಯುಷ್ಯವು ನಾಲ್ಕು ನೂರು ವರ್ಷಗಳು. ತ್ರೇತಾಯುಗದಲ್ಲಿ ಜನರ ಆಯುಷ್ಯವು ಕೃತಯುಗದ ಜನರ ಆಯುಷ್ಯಕ್ಕಿಂತಲೂ ಒಂದು ಭಾಗ ಕಡಿಮೆಯಾಗುತ್ತದೆ. ಅರ್ಥಾತ್ ತ್ರೇತಾಯುಗದಲ್ಲಿ ಜನರ ಆಯುಷ್ಯವು ಮುನ್ನೂರು ವರ್ಷಗಳು. ಹಾಗೆಯೇ ದ್ವಾಪರದಲ್ಲಿ ಎರಡು ಭಾಗ ಕಡಿಮೆ ಯಾಗುತ್ತದೆ. ದ್ವಾಪರಯುಗದಲ್ಲಿ ಜನರ ಆಯುಷ್ಯವು ಇನ್ನೂರು ವರ್ಷ ಗಳು. ಕಲಿಯುಗದಲ್ಲಿ ಮೂರು ಭಾಗ ಕಡಿಮೆಯಾಗುತ್ತದೆ. ಆದುದರಿಂದ ಕಲಿಯುಗದಲ್ಲಿ ಜನರ ಆಯುಷ್ಯವು ನೂರು ವರ್ಷಗಳು ಮಾತ್ರ.

ವೇದವಾದಾಶ್ಚಾನುಯುಗಂ ಹ್ರಸನ್ತೀತೀಹ ನಃ ಶ್ರುತಮ್ ।
ಆಯೂಂಷಿ ಚಾಶಿಷಶ್ಚೈವ ವೇದಸ್ಯೈವ ಚ ಯತ್ಫಲಮ್ ॥೨೬॥

ವೇದಾಧ್ಯಾಯಿಗಳೂ ಯುಗದಿಂದ ಯುಗಕ್ಕೆ ಕಡಿಮೆಯಾಗುತ್ತಾರೆಂದು ನಾವು ಕೇಳಿದ್ದೇವೆ. ಯುಗದಿಂದ ಯುಗಕ್ಕೆ ಮನುಷ್ಯರ ಆಯುಷ್ಯವೂ ಕಡಿಮೆಯಾಗುತ್ತದೆ. ಅಪೇಕ್ಷೆಗಳೂ ಸುಲಭವಾಗಿ ಕೈಗೂಡುವುದಿಲ್ಲ. ವೇದಾಧ್ಯಯನದ ಫಲದಲ್ಲಿಯೂ ನ್ಯೂನತೆಯುಂಟಾಗುತ್ತದೆ.

ಅನ್ಯೇ ಕೃತಯುಗೇ ಧರ್ಮಾಸ್ತ್ರೇತಾಯಾಂ ದ್ವಾಪರೇಽಪರೇ ।
ಅನ್ಯೇ ಕಲಿಯುಗೇ ನೃಣಾಂ ಯುಗಹ್ರಾಸಾನುರೂಪತಃ ॥೨೭॥

ಯುಗಗಳ ಕಾಲವು ಕಡಿಮೆಯಾಗುವುದಕ್ಕೆ ಅನುಸಾರವಾಗಿ ಸತ್ಯ-ತ್ರೇತಾ-ದ್ವಾಪರ-ಕಲಿಯುಗಗಳಲ್ಲಿ ಮನುಷ್ಯರ ಧರ್ಮವೂ ಭಿನ್ನ-ಭಿನ್ನ ವಾಗಿಯೇ ಇರುತ್ತದೆ.

ತಪಃ ಪರಂ ಕೃತಯುಗೇ ತ್ರೇತಾಯಾಂ ಜ್ಞಾನಮುತ್ತಮಮ್ ।
ದ್ವಾಪರೇ ಯಜ್ಞಮೇವಾಹುರ್ದಾನಮೇಕಂ ಕಲೌ ಯುಗೇ ॥೨೮॥

---

* ತ್ರೇತಾಯುಗದಲ್ಲಿ ಮೂರು ಪಾದ ಧರ್ಮವೂ ದ್ವಾಪರದಲ್ಲಿ ಎರಡು ಪಾದ ಧರ್ಮವೂ ಕಲಿಯುಗದಲ್ಲಿ ಒಂದು ಪಾದ ಧರ್ಮವೂ ಉಳಿದಿರುತ್ತದೆ.

ಕೃತಯುಗದಲ್ಲಿ ತಪಸ್ಸೇ ಸರ್ವಶ್ರೇಷ್ಠವಾದ ಧರ್ಮವಾಗಿರುತ್ತದೆ. ತ್ರೇತಾಯುಗದಲ್ಲಿ ಜ್ಞಾನವು ಶ್ರೇಷ್ಠವಾದ ಧರ್ಮವಾಗಿರುತ್ತದೆ. ದ್ವಾಪರ ಯುಗದಲ್ಲಿ ಯಜ್ಞವು ಶ್ರೇಷ್ಠವಾದ ಧರ್ಮವಾಗಿರುತ್ತದೆ. ಕಲಿಯುಗದಲ್ಲಿ ದಾನವೊಂದೇ ಶ್ರೇಷ್ಠವಾದ ಧರ್ಮವಾಗಿರುತ್ತದೆ.

ಏತಾಂ ದ್ವಾದಶಸಾಹಸ್ರೀಂ ಯುಗಾಖ್ಯಾಂ ಕವಯೋ ವಿದುಃ ।
ಸಹಸ್ರಪರಿವರ್ತಂ ತದ್ಬ್ರಾಹ್ಮಂ ದಿವಸಮುಚ್ಯತೇ ॥೨೯॥

ಈ ರೀತಿಯಲ್ಲಿ ದೇವತೆಗಳ* ಹನ್ನೆರಡು ಸಾವಿರ ವರ್ಷಗಳನ್ನು ವಿದ್ವಾಂಸರು ಒಂದು ಚತುರ್ಯುಗವೆಂದು ಹೇಳುತ್ತಾರೆ. ಇಂತಹ ಚತುರ್ಯುಗಗಳು ಒಂದು ಸಾವಿರ ಸಲ ಪರಿವರ್ತನೆಹೊಂದಿದರೆ ಬ್ರಹ್ಮನ ಒಂದು ಹಗಲಾಗುತ್ತದೆ.

ರಾತ್ರಿಮೇತಾವತೀಂ ಚೈವ ತದಾದೌ ವಿಶ್ವಮೀಶ್ವರಃ ।
ಪ್ರಲಯೇ ಧ್ಯಾನಮಾವಿಶ್ಯ ಸುಪ್ತ್ವಾ ಸೋಽನ್ತೇ ವಿಬುಧ್ಯತೇ ॥೩೦॥

ಬ್ರಹ್ಮನ ರಾತ್ರಿಯೂ ಹನ್ನೆರಡು ಸಾವಿರ ದಿವ್ಯವರ್ಷಗಳ ಪರ್ಯಂತ ವಾಗಿಯೇ ಇರುತ್ತದೆ. ಭಗವಾನ್ ಬ್ರಹ್ಮನು ತನ್ನ ದಿನದ ಆರಂಭದಲ್ಲಿ ಪ್ರಪಂಚವನ್ನು ಸೃಷ್ಟಿಸುತ್ತಾನೆ. ರಾತ್ರಿಯಲ್ಲಿ ಮಹಾಪ್ರಲಯವಾದಾಗ ಪ್ರಪಂಚ ವೆಲ್ಲವನ್ನೂ ತನ್ನಲ್ಲಿಯೇ ಲೀನಗೊಳಿಸಿ ಯೋಗನಿದ್ರೆಯಲ್ಲಿ ಮಲಗಿದ್ದು ಪ್ರಳಯವು ಅಂತವಾದನಂತರ ಅಥವಾ ರಾತ್ರಿಯು ಕಳೆದನಂತರ ಎಚ್ಚರ ಗೊಳ್ಳುತ್ತಾನೆ.

ಸಹಸ್ರಯುಗಪರ್ಯನ್ತಮಹರ್ಯದ್ಬ್ರಹ್ಮಣೋ ವಿದುಃ ।
ರಾತ್ರಿಂ ಯುಗಸಹಸ್ರಾನ್ತಾಂ ತೇಽಹೋರಾತ್ರವಿದೋ ಜನಾಃ ॥೩೧॥

ಸಹಸ್ರಚತುರ್ಯುಗಪರ್ಯಂತವಾದ ಬ್ರಹ್ಮನ ಹಗಲನ್ನೂ, ಹಾಗೆಯೇ ಸಹಸ್ರಚತುರ್ಯುಗಪರ್ಯಂತವಾದ ಬ್ರಹ್ಮನ ರಾತ್ರಿಯನ್ನೂ

---

* ಕೃತಯುಗ–ಸಂಧ್ಯಾಕಾಲ ಮತ್ತು ಸಂಧ್ಯಾಂಶ ಸೇರಿ 4,800 ದಿವ್ಯವರ್ಷಗಳು. ತ್ರೇತಾ– 3,600 ದಿವ್ಯವರ್ಷಗಳು, ದ್ವಾಪರ – 2,400 ದಿವ್ಯವರ್ಷಗಳು, ಕಲಿ – 1,200 ದಿವ್ಯವರ್ಷಗಳು. ಒಟ್ಟು 12,000 ದಿವ್ಯವರ್ಷಗಳು.

ಯಾರು ತಿಳಿದಿರುವರೋ–ಅವರು ಅಹೋರಾತ್ರಗಳನ್ನು (ಕಾಲತತ್ತ್ವವನ್ನು) ತಿಳಿದವರಾಗಿರುತ್ತಾರೆ. (ಶ್ರೀಗೀತೆ : ಅಧ್ಯಾಯ ೮. ಶ್ಲೋ. ೧೭)

ಪ್ರತಿಬುದ್ಧೋ ವಿಕುರುತೇ ಬ್ರಹ್ಮಾಕ್ಷಯ್ಯಂ ಕ್ಷಪಾಕ್ಷಯೇ ।
ಸೃಜತೇ ಚ ಮಹದ್ಭೂತಂ ತಸ್ಮಾದ್ವ್ಯಕ್ತಾತ್ಮಕಂ ಮನಃ ॥೩೨॥

ರಾತ್ರಿಯು ಕಳೆದೊಡನೆಯೇ ಎಚ್ಚರಗೊಂಡ ಬ್ರಹ್ಮನು ತನ್ನ ಅಕ್ಷಯ ಸ್ವರೂಪವನ್ನು ಮಾಯೆಯಿಂದ ಸೃಷ್ಟಿಸುತ್ತಾನೆ. ಮೊದಲು ಮಹತ್ತತ್ತ್ವವನ್ನು ಸೃಷ್ಟಿಸುತ್ತಾನೆ. ಆ ಮಹತ್ತತ್ತ್ವದಿಂದ ವ್ಯಕ್ತಜಗತ್ತಿಗೆ ಆತ್ಮವಾದ ಮನಸ್ಸನ್ನು ಸೃಷ್ಟಿಸುತ್ತಾನೆ.”

೨೩೧ನೆಯ ಅಧ್ಯಾಯವು ಮುಗಿಯಿತು.

೨೩೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ವ್ಯಾಸರಿಂದ ಶುಕನಿಗೆ ಸೃಷ್ಟಿಯ ಉತ್ಪತ್ತಿಕ್ರಮದ ಮತ್ತು ಯುಗಧರ್ಮಗಳ ಉಪದೇಶ

ಪಾರಿಕ್ಷಿತ! ಭೀಷ್ಮನು ಮುಂದುವರಿಸುತ್ತಾ ಹೇಳುತ್ತಾನೆ :

“ಧರ್ಮಜ! ವ್ಯಾಸರು ಹೇಳುತ್ತಾರೆ :

ಬ್ರಹ್ಮ ತೇಜೋಮಯಂ ಶುಕ್ರಂ ಯಸ್ಯ ಸರ್ವಮಿದಂ ಜಗತ್ ।
ಏಕಸ್ಯ ಬ್ರಹ್ಮಭೂತಸ್ಯ ದ್ವಯಂ ಸ್ಥಾವರಜಙ್ಗಮಮ್ ॥೧॥

“ಶುಕ! ತೇಜೋಮಯನಾದ ಬ್ರಹ್ಮನೇ ಸರ್ವಕ್ಕೂ ಬೀಜರೂಪ ನಾಗಿದ್ದಾನೆ. ಈ ಜಗತ್ತೆಲ್ಲವೂ ಅವನದೇ ಆಗಿದೆ. ಆ ಬ್ರಹ್ಮನೊಬ್ಬನಿಂದಲೇ ಸ್ಥಾವರ-ಜಂಗಮಗಳೆರಡರ ಉತ್ಪತ್ತಿಯೂ ಆಗಿದೆ.

ಅಹರ್ಮುಖೇ ವಿಬುದ್ಧಃ ಸನ್ಸೃಜತೇಽವಿದ್ಯಯಾ ಜಗತ್ ।
ಅಗ್ರ ಏವ ಮಹದ್ಭೂತಮಾಶು ವ್ಯಕ್ತಾತ್ಮಕಂ ಮನಃ ॥೨॥

ಬ್ರಹ್ಮನು ಹಿಂದೆ ಹೇಳಿದಂತೆ ದಿನದ ಆರಂಭದಲ್ಲಿ ಎಚ್ಚರಗೊಂಡವ ನಾಗಿ ಅವಿದ್ಯೆಯ ಮೂಲಕವಾಗಿ (ತ್ರಿಗುಣಾತ್ಮಕವಾದ ಪ್ರಕೃತಿಯ ಮೂಲಕವಾಗಿ) ಸಂಪೂರ್ಣಜಗತ್ತನ್ನೂ ಸೃಷ್ಟಿಸಿದನು. ಎಲ್ಲಕ್ಕಿಂತಲೂ

ಮೊದಲು ಮಹತ್ತತ್ತ್ವವು ಪ್ರಕಟವಾಯಿತು. ಅದರಿಂದ ಶೀಘ್ರವಾಗಿ ಸ್ಥೂಲಜಗತ್ತಿಗೆ ಆತ್ಮಭೂತವಾದ ಮನಸ್ಸು ಹುಟ್ಟಿತು.

ಅಭಿಭೂಯೇಹ ಚಾರ್ಚಿಷ್ಮದ್ವ್ಯಸೃಜತ್ಸಪ್ತ ಮಾನಸಾನ್ ।
ದೂರಗಂ ಬಹುಧಾಗಾಮಿ ಪ್ರಾರ್ಥನಾಸಂಶಯಾತ್ಮಕಮ್ ॥೩॥

ಆ ಮನಸ್ಸು ಬಹಳ ದೂರಗಾಮಿಯಾದದ್ದು ಮತ್ತು ಅನೇಕಪ್ರಕಾರವಾದ ಗಮನಾಗಮನವುಳ್ಳದ್ದು. ಪ್ರಾರ್ಥನೆ ಮತ್ತು ಸಂಶಯಗಳಿಂದ ಯುಕ್ತವಾದ ಆ ಮನಸ್ಸು ಪ್ರಕಾಶವಂತನಾದ ಚಿದಾತ್ಮನನ್ನು ಆವರಿಸಿ * ಏಳುಮಂದಿ ಮಾನಸಪುತ್ರರನ್ನು ಸೃಷ್ಟಿಸಿತು.

ಮನಃ ಸೃಷ್ಟಿಂ ವಿಕುರುತೇ ಚೋದ್ಯಮಾನಂ ಸಿಸೃಕ್ಷಯಾ ।
ಆಕಾಶಂ ಜಾಯತೇ ತಸ್ಮಾತ್ತಸ್ಯ ಶಬ್ದಂ ಗುಣಂ ವಿದುಃ ॥೪॥

ಪುನಃ ಸೃಷ್ಟಿಮಾಡುವ ಇಚ್ಛೆಯಿಂದ ಪ್ರಚೋದಿತವಾದ ಮನಸ್ಸು ನಾನಾಪ್ರಕಾರವಾದ ಸೃಷ್ಟಿಯನ್ನು ಮಾಡುತ್ತದೆ. ಅದರಿಂದ ಆಕಾಶವು ಹುಟ್ಟುತ್ತದೆ. ಅದಕ್ಕೆ ಶಬ್ದವನ್ನೇ ಗುಣವೆನ್ನುತ್ತಾರೆ.

ಆಕಾಶಾತ್ತು ವಿಕುರ್ವಾಣಾತ್ಸರ್ವಗನ್ಧವಹಃ ಶುಚಿಃ ।
ಬಲವಾಞ್ಜಾಯತೇ ವಾಯುಸ್ತಸ್ಯ ಸ್ಪರ್ಶೋ ಗುಣೋಮತಃ ॥೫॥

ವಿಕಾರಗೊಂಡ ಆಕಾಶದಿಂದ ಸಕಲವಿಧವಾದ ಗಂಧಗಳನ್ನೂ ಒಯ್ಯುವ, ಪವಿತ್ರವಾದ, ಬಲಿಷ್ಠವಾದ ವಾಯುವು ಹುಟ್ಟುತ್ತದೆ. ಅದರ ಗುಣವು ಸ್ಪರ್ಶವೆಂದು ಹೇಳಲ್ಪಟ್ಟಿದೆ.

ವಾಯೋರಪಿ ವಿಕುರ್ವಾಣಾಜ್ಜ್ಯೋತಿರ್ಭವತಿ ಭಾಸ್ವರಮ್ ।
ರೋಚಿಷ್ಣು ಜಾಯತೇ ಶುಕ್ರಂ ತದ್ರೂಪಗುಣಮುಚ್ಯತೇ ॥೬॥

---

* ಏಳು ಮಂದಿ ಬ್ರಹ್ಮಮಾನಸಪುತ್ರರು :

ಮರೀಚಿರಙ್ಗಿರಾಶ್ಚಾತ್ರಿಃ ಪುಲಸ್ತ್ಯಃ ಪುಲಹಃ ಕ್ರತು ।
ವಸಿಷ್ಠ ಇತಿ ಸಪ್ತೈತೇ ಮಾನಸಾ ನಿರ್ಮಿತಾ ಹಿ ತೇ ॥

ಶಾಂತಿ–ಅಧ್ಯಾಯ ೩೪೦-೬೯

ಮರೀಚಿ, ಅಂಗಿರಸ, ಅತ್ರಿ, ಪುಲಸ್ತ್ಯ, ಪುಲಹ, ಕ್ರತು ಮತ್ತು ವಸಿಷ್ಠ–ಈ ಸಪ್ತರ್ಷಿಗಳು ಬ್ರಹ್ಮಮಾನಸಪುತ್ರರು.

ವಿಕೃತವಾಗುವ ವಾಯುವಿನಿಂದ ಪ್ರಕಾಶಮಾನವಾದ ಜಗ-ಜಗಿಸುವ ಜ್ಯೋತಿಸ್ತತ್ತ್ವವು ಹುಟ್ಟುತ್ತದೆ. ಅಗ್ನಿತತ್ತ್ವದ ಗುಣವು ರೂಪವೆಂದು ಹೇಳಲ್ಪಟ್ಟಿದೆ.

ಜ್ಯೋತಿಷೋಽಪಿ ವಿಕುರ್ವಾಣಾದ್ಭವನ್ತ್ಯಾಪೋ ರಸಾತ್ಮಿಕಾಃ ।
ಅದ್ಭ್ಯೋ ಗನ್ಧವಹಾ ಭೂಮಿಃ ಸರ್ವೇಷಾಂ ಸೃಷ್ಟಿರುಚ್ಯತೇ ॥೭॥

ವಿಕಾರಗೊಳ್ಳುವ ಅಗ್ನಿಯಿಂದ ರಸಾತ್ಮಕವಾದ ಜಲತತ್ತ್ವವು ಹುಟ್ಟುತ್ತದೆ. ವಿಕಾರಗೊಳ್ಳುವ ನೀರಿನಿಂದ ಗಂಧವನ್ನು ಗುಣವನ್ನಾಗಿ ಹೊಂದಿರುವ ಭೂಮಿಯು ಹುಟ್ಟುತ್ತದೆ. ಹೀಗೆ ಪಂಚಮಹಾಭೂತಗಳ ಸೃಷ್ಟಿಯಾಗುತ್ತದೆ.

ಗುಣಾಃ ಸರ್ವಸ್ಯ ಪೂರ್ವಸ್ಯ ಪ್ರಾಪ್ನುವನ್ತ್ಯುತ್ತರೋತ್ತರಮ್ ।
ತೇಷಾಂ ಯಾವದ್ಯಥಾ ಯಚ್ಚ ತತ್ತತ್ತಾವದ್ಗುಣಂ ಸ್ಮೃತಮ್ ॥೮॥

ಮುಂದೆ ಹುಟ್ಟಿದ ಭೂತಗಳು ತಮಗಿಂತಲೂ ಹಿಂದೆ ಹುಟ್ಟಿದ ಭೂತಗಳ ಗುಣಗಳನ್ನೂ ಪಡೆದಿರುತ್ತವೆ.* ಈ ಪಂಚಭೂತಗಳಲ್ಲಿ ಯಾವ ತತ್ತ್ವವು ಎಷ್ಟು ಹೊತ್ತಿನವರೆಗೆ ಮತ್ತು ಯಾವ ರೀತಿಯಲ್ಲಿ ಇರುತ್ತದೆಯೋ– ಅದರ ಗುಣವೂ ಅಲ್ಲಿಯವರೆಗೆ ಹಾಗೆಯೇ ಇರುತ್ತದೆ.

ಉಪಲಭ್ಯಾಪ್ಸು ಚೇದ್ಗನ್ಧಂ ಕೇಚಿದ್ಬ್ರೂಯುರನೈಪುಣಾತ್ ।
ಪೃಥಿವ್ಯಾಮೇವ ತಂ ವಿದ್ಯಾದಪಾಂ ವಾಯೋಶ್ಚ ಸಂಶ್ರಿತಮ್ ॥೯॥

ಕೆಲವರು ವಸ್ತುಸ್ಥಿತಿಯನ್ನು ತಿಳಿಯಲು ನೈಪುಣ್ಯವಿಲ್ಲದುದರಿಂದ ನೀರಿನಲ್ಲಿಯೂ ಗಂಧವಿದೆಯೆಂದು ಹೇಳಬಹುದು. ಆದರೆ ಗಂಧವಿರುವುದು ಭೂಮಿಯಲ್ಲೇ ಹೊರತು ಗಾಳಿಯಲ್ಲಾಗಲೀ ನೀರಿನಲ್ಲಾಗಲೀ ಇರುವುದಿಲ್ಲ.

---

* ಆಕಾಶವು ಮೊದಲು ಹುಟ್ಟುವುದರಿಂದ ಅದಕ್ಕೆ ಶಬ್ದವೊಂದೇ ಗುಣ. ಎರಡನೆಯದಾದ ವಾಯುವಿಗೆ ಶಬ್ದ-ಸ್ಪರ್ಶಗಳೆಂಬ ಎರಡು ಗುಣಗಳು. ಮೂರನೆಯದಾದ ಅಗ್ನಿಗೆ ಶಬ್ದ-ಸ್ಪರ್ಶ-ರೂಪಗಳೆಂಬ ಮೂರು ಗುಣಗಳು. ನಾಲ್ಕನೆಯದಾದ ಜಲಕ್ಕೆ ಶಬ್ದ-ಸ್ಪರ್ಶ-ರೂಪ-ರಸಗಳೆಂಬ ನಾಲ್ಕು ಗುಣಗಳಿರುತ್ತವೆ. ಐದನೆಯದಾದ ಪೃಥಿವೀತತ್ತ್ವಕ್ಕೆ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳೆಂಬ ಐದು ಗುಣಗಳೂ ಇರುತ್ತವೆ.

ಪೃಥ್ವಿಯ ಗುಣವೇ ಆಗಿರುವ ಗಂಧವು ವಾಯುವಿನಲ್ಲಾಗಲೀ ನೀರಿನಲ್ಲಾಗಲೀ ಆಗಂತುಕವಾಗಿ ಸೇರಿಕೊಂಡಿರುತ್ತದೆ.

ಏತೇ ಸಪ್ತವಿಧಾತ್ಮಾನೋ ನಾನಾವೀರ್ಯಾಃ ಪೃಥಕ್ಪೃಥಕ್ ।
ನಾಶಕ್ನುವನ್ಪ್ರಜಾಃ ಸ್ರಷ್ಟುಮಸಮಾಗಮ್ಯ ಕೃತ್ಸ್ನಶಃ ॥೧೦॥

ಹೀಗೆ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ವಿಧ-ವಿಧವಾದ ಶಕ್ತಿಗಳನ್ನು ಹೊಂದಿರುವ ಏಳು ಪದಾರ್ಥಗಳು (ಮಹದ್ಭೂತ ಅಥವಾ ಮಹತ್ತತ್ತ್ವ, ಮನಸ್ಸು, ಐದು ಪಂಚಮಹಾಭೂತಗಳು) ಪ್ರತ್ಯೇಕ-ಪ್ರತ್ಯೇಕವಾಗಿದ್ದು ಎಲ್ಲಿಯವರೆಗೆ ಒಟ್ಟಾಗಿ ಸೇರಲು ಸಾಧ್ಯವಾಗಲಿಲ್ಲವೋ–ಅಲ್ಲಿಯವರೆಗೂ ಪ್ರಜೆಗಳನ್ನು ಸೃಷ್ಟಿಮಾಡಲು ಅವು ಅಸಮರ್ಥಗಳಾದುವು.

ತೇ ಸಮೇತ್ಯ ಮಹಾತ್ಮಾನೋ ಹ್ಯನ್ಯೋನ್ಯಮಭಿಸಂಶ್ರಿತಾಃ ।
ಶರೀರಾಶ್ರಯಣಂ ಪ್ರಾಪ್ತಾಸ್ತತಃ ಪುರುಷ ಉಚ್ಯತೇ ॥೧೧॥

ಆದರೆ ಆ ಏಳು ಪದಾರ್ಥಗಳೂ ಈಶ್ವರೇಚ್ಛೆಯಿಂದ ಯಾವಾಗ ಪರಸ್ಪರವಾಗಿ ಸಮ್ಮಿಶ್ರಿತವಾದುವೋ–ಆಗ ಅವುಗಳು ಭಿನ್ನ-ಭಿನ್ನವಾದ ಸಪ್ತ ತತ್ತ್ವಾತ್ಮಕವಾದ ಶರೀರಗಳಾಗಿ ರೂಪಗೊಂಡುವು. ಅಂತಹ ಶರೀರವೆಂಬ ಪುರದಲ್ಲಿ ವಾಸಮಾಡುವುದರಿಂದಲೇ ಜೀವಾತ್ಮನನ್ನು ಪುರುಷನೆಂದು ಕರೆಯುತ್ತಾರೆ.

ಶರೀರಂ ಶ್ರಯಣಾದ್ಭವತಿ ಮೂರ್ತಿಮತ್ಷೋಡಶಾತ್ಮಕಮ್ ।
ತಮಾವಿಶನ್ತಿ ಭೂತಾನಿ ಮಹಾನ್ತಿ ಸಹ ಕರ್ಮಣಾ ॥೧೨॥

ಮೂರ್ತಿಮತ್ತಾದ ದೇಹವು ಪಂಚಸ್ಥೂಲಮಹಾಭೂತಗಳಿಂದಲೂ, ದಶೇಂದ್ರಿಯಗಳಿಂದಲೂ ಮತ್ತು ಮನಸ್ಸಿನಿಂದಲೂ ಯುಕ್ತವಾಗಿದೆ. ಇವುಗಳಿಗೆ ಆಶ್ರಯವನ್ನಿತ್ತಿರುವುದರಿಂದಲೇ ದೇಹಕ್ಕೆ ಶರೀರವೆಂಬ ಹೆಸರು ಬಂದಿದೆ. ಶರೀರವು ಉತ್ಪನ್ನವಾದೊಡನೆಯೇ ಸೂಕ್ಷ್ಮಮಹಾಭೂತಗಳು ಜೀವಗಳ ಭೋಗಾವಶಿಷ್ಟವಾದ ಕರ್ಮಗಳೊಡನೆ ಶರೀರದಲ್ಲಿ ಪ್ರವೇಶಿಸುತ್ತವೆ.

ಸರ್ವಭೂತಾನ್ಯುಪಾದಾಯ ತಪಸಶ್ಚರಣಾಯ ಹಿ ।
ಆದಿಕರ್ತಾ ಸ ಭೂತಾನಾಂ ತಮೇವಾಹುಃ ಪ್ರಜಾಪತಿಮ್ ॥೧೩॥

ಭೂತಗಳ ಆದಿಕರ್ತೃವಾದ ಬ್ರಹ್ಮನು ತಪಸ್ಸನ್ನು ಮಾಡುವ ಸಲುವಾಗಿ ಸಮಸ್ತಸೂಕ್ಷ್ಮಭೂತಗಳನ್ನೂ ತನ್ನೊಡನೆ ತೆಗೆದುಕೊಂಡು ಸಮಷ್ಟಿಶರೀರ ಗಳಲ್ಲಿ ಪ್ರವೇಶಿಸುತ್ತಾನೆ. ಆದುದರಿಂದಲೇ ಮುನಿಜನರು ಅವನನ್ನು 'ಪ್ರಜಾ ಪತಿ' ಎಂದು ಕರೆಯುತ್ತಾರೆ.

ಸ ವೈ ಸೃಜತಿ ಭೂತಾನಿ ಸ್ಥಾವರಾಣಿ ಚರಾಣಿ ಚ ।
ತತಃ ಸ ಸೃಜತಿ ಬ್ರಹ್ಮಾ ದೇವರ್ಷಿಪಿತೃಮಾನವಾನ್ ॥೧೪॥

ಲೋಕಾನ್ನದೀಃ ಸಮುದ್ರಾಂಶ್ಚ ದಿಶಃ ಶೈಲಾನ್ವನಸ್ಪತೀನ್ ।
ನರಕಿನ್ನರರಕ್ಷಾಂಸಿ ವಯಃಪಶುಮೃಗೋರಗಾನ್ ।
ಅವ್ಯಯಂ ಚ ವ್ಯಯಂ ಚೈವ ದ್ವಯಂ ಸ್ಥಾವರಜಙ್ಗಮಮ್ ॥೧೫॥

ಆ ಬ್ರಹ್ಮನೇ ಚರಾಚರಪ್ರಾಣಿಗಳನ್ನೂ ಸೃಷ್ಟಿಮಾಡುತ್ತಾನೆ. ದೇವತೆ ಗಳನ್ನೂ, ಋಷಿಗಳನ್ನೂ, ಪಿತೃಗಳನ್ನೂ, ಮನುಷ್ಯರನ್ನೂ, ನಾನಾಪ್ರಕಾರ ವಾದ ಲೋಕಗಳನ್ನೂ, ನದೀ-ಸಮುದ್ರಗಳನ್ನೂ, ದಿಕ್ಕುಗಳನ್ನೂ, ಪರ್ವತ ಗಳನ್ನೂ, ವನಸ್ಪತಿಗಳನ್ನೂ, ನರ-ಕಿನ್ನರ-ರಾಕ್ಷಸರನ್ನೂ, ಪಶು-ಪಕ್ಷಿ-ಮೃಗ-ಸರ್ಪಗಳನ್ನೂ ಸೃಷ್ಟಿಸುತ್ತಾನೆ. ನಾಶಹೊಂದದಿರುವ ಆಕಾಶವೇ ಮೊದಲಾದುವುಗಳನ್ನೂ, ವಿನಾಶವಾಗುವ ಚರಾಚರಪ್ರಾಣಿಗಳೆರಡನ್ನೂ ಅವನೇ ಸೃಷ್ಟಿಸುತ್ತಾನೆ.

ತೇಷಾಂ ಯೇ ಯಾನಿ ಕರ್ಮಾಣಿ ಪ್ರಾಕ್ಸೃಷ್ಟ್ಯಾಂ ಪ್ರತಿಪೇದಿರೇ ।
ತಾನ್ಯೇವ ಪ್ರತಿಪಾದ್ಯನ್ತೇ ಸೃಜ್ಯಮಾನಾಃ ಪುನಃ ಪುನಃ ॥೧೬॥

ಆ ಚರಾಚರಪ್ರಾಣಿಗಳಲ್ಲಿ ಹಿಂದಿನ ಕಲ್ಪದ ಸೃಷ್ಟಿಯಲ್ಲಿ ಯಾವ ಯಾವ ಪ್ರಾಣಿಗಳು ಯಾವ ಯಾವ ಕರ್ಮಗಳನ್ನು ಹೊಂದಿದ್ದುವೋ–ಅದೇ ಕರ್ಮಗಳನ್ನೇ ಮುಂದಿನ ಕಲ್ಪಗಳಲ್ಲಿ ಪುನಃ ಪುನಃ ಜನ್ಮತಾಳುವ ಆಯಾ ಪ್ರಾಣಿಗಳೇ ಹೊಂದುತ್ತವೆ.

ಹಿಂಸ್ರಾಹಿಂಸ್ರೇ ಮೃದುಕ್ರೂರೇ ಧರ್ಮಾಧರ್ಮಾವೃತಾನೃತೇ ।
ತದ್ಭಾವಿತಾಃ ಪ್ರಪದ್ಯನ್ತೇ ತಸ್ಮಾತ್ತತ್ತಸ್ಯ ರೋಚತೇ ॥೧೭॥

ಒಂದು ಜನ್ಮದಲ್ಲಿ ಮನುಷ್ಯನು ಹಿಂಸೆ-ಅಹಿಂಸೆ, ಮೃದುತ್ವ, ಕ್ರೂರತ್ವ,

ಧರ್ಮ-ಅಧರ್ಮ, ದಿಟ-ಸಟೆ ಇವುಗಳಲ್ಲಿ ಯಾವ ಗುಣಗಳನ್ನು ಅಥವಾ ದೋಷಗಳನ್ನು ಹೊಂದಿರುವನೋ–ಮರುಹುಟ್ಟಿನಲ್ಲಿಯೂ ಅವನು ಆ ಸಂಸ್ಕಾರದಿಂದಲೇ ಪ್ರಭಾವಿತನಾಗಿ ಆ ಗುಣ ಅಥವಾ ದೋಷಗಳಲ್ಲಿಯೇ ಅನುರಕ್ತನಾಗುತ್ತಾನೆ.

(ಈ ಜನ್ಮದಲ್ಲಿ ಅಹಿಂಸೆ, ಮೃದುತ್ವ, ಧರ್ಮ, ಸತ್ಯ–ಇತ್ಯಾದಿ ಗುಣಗಳನ್ನು ಹೊಂದಿದ್ದರೆ–ಮುಂದಿನ ಜನ್ಮದಲ್ಲಿಯೂ ಆ ಗುಣಗಳನ್ನೇ ಹೊಂದುತ್ತಾನೆ. ಹಾಗಲ್ಲದೇ ಹಿಂಸೆ, ಕ್ರೌರ್ಯ, ಅಧರ್ಮ, ಅನೃತ ಇತ್ಯಾದಿ ದೋಷಗಳನ್ನು ಹೊಂದಿದ್ದರೆ–ಮುಂದಿನ ಜನ್ಮದಲ್ಲಿಯೂ ಅವನಿಗೆ ಆ ದುರ್ಗುಣಗಳೇ ರುಚಿಸುತ್ತವೆ.)

ಮಹಾಭೂತೇಷು ನಾನಾತ್ವಮಿನ್ದ್ರಿಯಾರ್ಥೇಷು ಮೂರ್ತಿಷು ।
ವಿನಿಯೋಗಂ ಚ ಭೂತಾನಾಂ ಧಾತೈವ ವಿದಧಾತ್ಯುತ ॥೧೮॥

ಆಕಾಶಾದಿ ಮಹಾಭೂತಗಳಲ್ಲಿ, ಶಬ್ದವೇ ಮೊದಲಾದ ಇಂದ್ರಿಯಾರ್ಥಗಳಲ್ಲಿ, ದೇವತೆಗಳ ಆಕೃತಿಗಳಲ್ಲಿ–ಯಾವ ಭಿನ್ನತೆಯೂ ಮತ್ತು ಅನೇಕತೆಯೂ ಇರುವುದೋ–ಅವುಗಳೆಲ್ಲವನ್ನೂ ಬ್ರಹ್ಮನೇ ಕಲ್ಪಿಸುತ್ತಾನೆ. ಪ್ರಾಣಿಗಳನ್ನು ಭಿನ್ನ-ಭಿನ್ನವಾದ ಕರ್ಮಗಳಲ್ಲಿ ಯೋಜಿಸುವವನೂ ಬ್ರಹ್ಮನೇ ಆಗಿದ್ದಾನೆ.

ಕೇಚಿತ್ಪುರುಷಕಾರಂ ತು ಪ್ರಾಹುಃ ಕರ್ಮಸು ಮಾನವಾಃ ।
ದೈವಮಿತ್ಯಪರೇ ವಿಪ್ರಾಃ ಸ್ವಭಾವಂ ಭೂತಚಿನ್ತಕಾಃ ॥೧೯॥

ಕರ್ಮಸಿದ್ಧಿಗೆ ಪುರುಷಪ್ರಯತ್ನವೇ ಮುಖ್ಯವೆಂದು ಕೆಲವರು ಹೇಳುತ್ತಾರೆ. ಕೆಲವು ಬ್ರಾಹ್ಮಣರು ಕಾರ್ಯಸಿದ್ಧಿಗೆ ದೈವವೇ ಪ್ರಧಾನವೆನ್ನುತ್ತಾರೆ. ಭೌತಿಕವಾದಿಗಳು ಅಥವಾ ನಾಸ್ತಿಕರು ಎಲ್ಲವೂ ಸ್ವಾಭಾವಿಕವಾಗಿಯೇ ನಡೆಯುತ್ತದೆ ಎನ್ನುತ್ತಾರೆ.

ಪೌರುಷಂ ಕರ್ಮ ದೈವಂ ಚ ಫಲವೃತ್ತಿಃ ಸ್ವಭಾವತಃ ।
ತ್ರಯ ಏತೇಽಪೃಥಗ್ಭೂತಾ ನ ವಿವೇಕಂ ತು ಕೇಚನ ॥೨೦॥

ಕೆಲವು ವಿದ್ವಾಂಸರು ಪುರುಷಪ್ರಯತ್ನ, ದೈವಾನುಗ್ರಹ ಮತ್ತು ಸ್ವಭಾವ–ಈ ಮೂರೂ ಸೇರುವುದರಿಂದಲೇ ಕಾರ್ಯಸಿದ್ಧಿಯಾಗುವುದೆನ್ನುತ್ತಾರೆ. ಈ ಮೂರೂ ಯಾವಾಗಲೂ ಸೇರಿಯೇ ಇರುತ್ತವೆ. ಮೂರೂ ಬೇರೆ-ಬೇರೆಯಾಗಿದ್ದರೆ ಕಾರ್ಯಸಿದ್ಧಿಯಾಗುವುದಿಲ್ಲ. ಹಾಗೆ ಬೇರೆಯೆಂದು ಭಾವಿಸುವುದೂ ವಿವೇಕವಲ್ಲ–ಎನ್ನುತ್ತಾರೆ.

ಏತಮೇವ ಚ ನೈವಂ ಚ ನ ಚೋಭೇ ನಾನುಭೇ ನ ಚ ।
ಕರ್ಮಸ್ಥಾ ವಿಷಯಂ ಬ್ರೂಯುಃ ಸತ್ತ್ವಸ್ಥಾಃ ಸಮದರ್ಶಿನಃ ॥೨೧॥

ಕರ್ಮಕ್ಕೆ ಸಿಲುಕಿರುವ ಜನರು ಇವುಗಳಲ್ಲಿ ಯಾವುದಾದರೂ ಒಂದನ್ನು ಇದೇ ಕಾರಣ ಎಂದು ಹೇಳುತ್ತಾರೆ. 'ಇದು ಹಾಗಲ್ಲ (ಒಂದೇ ಕಾರಣವಲ್ಲ)' ಎಂಬುದು ಕೆಲವರ ಅಭಿಪ್ರಾಯ. ಇವುಗಳಲ್ಲಿ 'ಎರಡೂ ಕಾರಣವಲ್ಲ' – ಎಂದು ಹೇಳುವವರೂ ಇದ್ದಾರೆ. 'ಎರಡೂ ಕಾರಣವಲ್ಲದೆಯೂ ಅಲ್ಲ'–ಎಂದು ಕೆಲವರು ಹೇಳುತ್ತಾರೆ. ಆದರೆ ಸತ್ತ್ವದಲ್ಲಿ ನೆಲೆಗೊಂಡಿರುವ ಜ್ಞಾನಿಗಳು ಇವುಗಳಲ್ಲಿ ಸಾಮ್ಯವನ್ನು ನೋಡುತ್ತಾರೆ.

(ತ್ರಿಗುಣಾತ್ಮಕವಾದ ಕರ್ಮಕ್ಕೆ ಸಿಲುಕಿರುವ ಜನರಿಗೆ ಪೂರ್ವಗ್ರಹ (prejudice) ಇರುತ್ತದೆ. ಅವರು ವಿಷಯವನ್ನು ಬಣ್ಣದ ಕನ್ನಡಕದಿಂದ ನೋಡುತ್ತಾರೆ. 'ದೈವ, ಪೌರುಷ ಮತ್ತು ಸ್ವಭಾವ.–ಇವುಗಳಲ್ಲಿ ಒಂದೊಂದೇ ಕಾರಣ'–ಎಂದು ಹಠಹಿಡಿಯುವವರೂ ಇದ್ದಾರೆ. 'ಅವುಗಳಲ್ಲಿ ಒಂದೊಂದೇ ಕಾರಣವಲ್ಲ. ಆದರೆ ಎರಡು ಅಥವಾ ಮೂರು ಸೇರಿ ಕಾರಣ'–ಎಂದು ಕೆಲವರು ನಿರೂಪಿಸುತ್ತಾರೆ. 'ಅವುಗಳಲ್ಲಿ ಯಾವುದಾದರೂ ಎರಡು ಕಾರಣವಾಗುವುದಿಲ್ಲ'–ಎನ್ನುವವರೂ ಉಂಟು. 'ಎರಡೂ ಕಾರಣವಲ್ಲದೆಯೂ ಅಲ್ಲ– ಎಂದರೆ ಒಂದು ಅರ್ಥದಲ್ಲಿ ಕಾರಣ ಮತ್ತೊಂದು ಅರ್ಥದಲ್ಲಿ ಕಾರಣವಲ್ಲ'–ಎಂದು ವಾದಿಸುವವರೂ ಉಂಟು. ಈ ವಾದಿಗಳೆಲ್ಲರೂ ಕರ್ಮಪ್ರವಾಹದಲ್ಲಿ ಸಿಕ್ಕಿ ಮಾತನಾಡುವವರು. ಅದನ್ನು ದಾಟಿ ಶುದ್ಧಸತ್ತ್ವದಲ್ಲಿ ನೆಲೆಗೊಂಡ ಜ್ಞಾನಿಗಳು 'ವ್ಯವಸಾಯಾತ್ಮಿಕಾ ಬುದ್ಧಿಃ'–ಎಂದು ಗೀತಾಚಾರ್ಯನು ಹೇಳಿರುವ ನಿಶ್ಚಯಾತ್ಮಕವಾದ ಅರಿವನ್ನು ಹೊಂದಿದ್ದಾರೆ. ಅವರು ಸಾಮ್ಯದೃಷ್ಟಿಯುಳ್ಳವರು. ಎಂದರೆ :

ಇವುಗಳಲ್ಲಿ ಯಾವು-ಯಾವುದು ಎಷ್ಟರಮಟ್ಟಿಗೆ ಯಾವ ಯಾವ ಘಟ್ಟದಲ್ಲಿ ಕಾರಣಗಳಾಗುತ್ತವೆ–ಎಂಬುದನ್ನು ನಿಷ್ಪಕ್ಷಪಾತದಿಂದ ನೋಡಿ ಹೇಳುತ್ತಾರೆ ಮತ್ತು 'ನಿರ್ದೋಷಂ ಹಿ ಸಮಂ ಬ್ರಹ್ಮ' – ಎಂಬಂತೆ ಸಮವಾದ ಬ್ರಹ್ಮವನ್ನೇ ಇವೆಲ್ಲಕ್ಕೂ ಮೂಲಕಾರಣವೆಂದು ಜ್ಞಾನದೃಷ್ಟಿಯಿಂದ ತಿಳಿದು ಹೇಳುತ್ತಾರೆ.)

ತಪೋ ನಿಃಶ್ರೇಯಸಂ ಜನ್ತೋಸ್ತಸ್ಯ ಮೂಲಂ ಶಮೋ ದಮಃ ।
ತೇನ ಸರ್ವಾನವಾಪ್ನೋತಿ ಯಾನ್ಕಾಮಾನ್ಮನಸೇಚ್ಛತಿ ॥೨೨॥

ತಪಸ್ಸೇ ಆತ್ಮಕಲ್ಯಾಣಕ್ಕೆ ಮುಖ್ಯಸಾಧನವಾಗಿದೆ. ಶಮ-ದಮಗಳು ತಪಸ್ಸಿನ ಮೂಲಭೂತಗುಣಗಳಾಗಿವೆ. ಮನುಷ್ಯನು ತನ್ನ ಮನಸ್ಸಿನಲ್ಲಿ ಉಂಟಾಗುವ ಎಲ್ಲ ಇಚ್ಛೆಗಳನ್ನೂ ತಪಸ್ಸಿನಿಂದಲೇ ಪಡೆದುಕೊಳ್ಳುತ್ತಾನೆ.

ತಪಸಾ ತದವಾಪ್ನೋತಿ ಯದ್ಭೂತಂ ಸೃಜತೇ ಜಗತ್ ।
ಸ ತದ್ಭೂತಶ್ಚ ಸರ್ವೇಷಾಂ ಭೂತಾನಾಂ ಭವತಿ ಪ್ರಭುಃ ॥೨೩॥

ಪ್ರಪಂಚವನ್ನು ಸೃಷ್ಟಿಸಿರುವ ಮಹದ್ಭೂತವನ್ನು ತಪಸ್ಸಿನಿಂದಲೇ ತಿಳಿದುಕೊಳ್ಳಬಹುದಾಗಿದೆ ಮತ್ತು ಜಗತ್ಸೃಷ್ಟಿಗೆ ಕಾರಣವಾದ ಆ ಭೂತವು ಎಲ್ಲ ಪ್ರಾಣಿಗಳ ಪ್ರಭುವೂ ಆಗಿದೆ.

ಋಷಯಸ್ತಪಸಾ ವೇದಾನಧ್ಯೈಷನ್ತ ದಿವಾನಿಶಮ್ ।
ಅನಾದಿನಿಧನಾ ವಿದ್ಯಾ ವಾಗುತ್ಸೃಷ್ಟಾ ಸ್ವಯಮ್ಭುವಾ ॥೨೪॥

ಋಷಿಗಳು ತಪಸ್ಸಿನ ಪ್ರಭಾವದಿಂದಲೇ ಹಗಲು-ರಾತ್ರಿ ವೇದಗಳ ಅಧ್ಯಯನವನ್ನು ಮಾಡುತ್ತಿದ್ದರು. ಬ್ರಹ್ಮನು ತಪಸ್ಸಿನ ಶಕ್ತಿಯಿಂದಲೇ ಪ್ರಭಾವಿತನಾಗಿ ಆದ್ಯಂತರಹಿತವಾದ ವೇದವಾಣಿಯನ್ನು ಹೊರಗೆಡಹಿದನು.

ಋಷೀಣಾಂ ನಾಮಧೇಯಾನಿ ಯಾಶ್ಚ ವೇದೇಷು ಸೃಷ್ಟಯಃ ।
ನಾನಾರೂಪಂ ಚ ಭೂತಾನಾಂ ಕರ್ಮಣಾಂ ಚ ಪ್ರವರ್ತನಮ್ ।
ವೇದಶಬ್ದೇಭ್ಯ ಏವಾದೌ ನಿರ್ಮಿಮೀತೇ ಸ ಈಶ್ವರಃ ॥೨೫॥

ಋಷಿಗಳ ಶುಭನಾಮಧೇಯಗಳು, ವೇದಗಳಲ್ಲಿ ಹೇಳಿರುವ ಸೃಷ್ಟಿ ಕ್ರಮ, ಪ್ರಾಣಿಗಳ ನಾನಾರೂಪಗಳು ಮತ್ತು ಅವುಗಳಲ್ಲಿ ಕರ್ಮಗಳ ವಿಧಾನ –ಈ ಎಲ್ಲವನ್ನೂ ಆ ಸರ್ವೇಶ್ವರನು ಸೃಷ್ಟ್ಯಾದಿಯಲ್ಲಿ ವೇದಶಬ್ದ ಗಳಿಗೆ ಅನುಸಾರವಾಗಿಯೇ ರಚಿಸಿರುತ್ತಾನೆ.

ನಾಮಧೇಯಾನಿ ಚರ್ಷೀಣಾಂ ಯಾಶ್ಚ ವೇದೇಷು ಸೃಷ್ಟಯಃ ।
ಶರ್ವರ್ಯನ್ತೇ ಸುಜಾತಾನಾಮನ್ಯೇಭ್ಯೋ ವಿದಧಾತ್ಯಜಃ ॥೨೬॥

ವೇದಗಳಲ್ಲಿ ಋಷಿಗಳ ನಾಮಧೇಯಗಳಿವೆ. ಅಂತೆಯೇ ಸೃಷ್ಟಿಯಲ್ಲಿ ರುವ ಎಲ್ಲ ಪದಾರ್ಥಗಳ ನಾಮಧೇಯಗಳೂ ಇವೆ. ಜನ್ಮರಹಿತನಾದ ಬ್ರಹ್ಮನು ರಾತ್ರಿಯ ಕಡೆಯಲ್ಲಿ ಅಥವಾ ನೂತನಸೃಷ್ಟಿಯನ್ನು ಪ್ರಾರಂಭಿಸುವ ಪ್ರಾತಃಕಾಲದಲ್ಲಿ ಇತರರ ಸಲುವಾಗಿ ವೇದಗಳಲ್ಲಿ ಹೇಳಿರುವಂತೆಯೇ ಎಲ್ಲ ಪದಾರ್ಥಗಳ ಹೆಸರುಗಳನ್ನೂ ನಿರ್ದೇಶಿಸುತ್ತಾನೆ. ಋಷಿಗಳ ಹೆಸರುಗಳನ್ನೂ ನಿರ್ದೇಶಿಸಿದ್ದಾನೆ. (ಎಲ್ಲ ನಾಮಧೇಯಗಳೂ ವೇದಮೂಲವಾಗಿವೆ.)

ನಾಮಭೇದತಪಃಕರ್ಮಯಜ್ಞಾಖ್ಯಾ ಲೋಕಸಿದ್ಧಯಃ ।
ಆತ್ಮಸಿದ್ಧಿಸ್ತು ವೇದೇಷು ಪ್ರೋಚ್ಯತೇ ದಶಭಿಃ ಕ್ರಮೈಃ ॥೨೭॥

ವೇದಗಳಲ್ಲಿ ಬೇರೆ-ಬೇರೆ ಹೆಸರುಗಳಿಂದ ಕೂಡಿದ ತಪಸ್ಸು, ಕರ್ಮ, ಯಜ್ಞಗಳೆಂಬುವು ಲೋಕಸಿದ್ಧಿಯ ಸಾಧನಗಳೆಂದೂ ಮತ್ತು ಹತ್ತು ಕ್ರಮ ಗಳಿಂದ ಆತ್ಮಸಿದ್ಧಿಯಾಗುವುದೆಂದೂ ಹೇಳಲ್ಪಟ್ಟಿವೆ.

(ಲೋಕಸಿದ್ಧಿಯ ಸಾಧನಗಳು : ಶಾರೀರ, ವಾಚಕ ಮತ್ತು ಮಾನಸ ವೆಂಬ ಮೂರು ಬಗೆಯ ತಪಸ್ಸುಗಳು, ಇಷ್ಟ ಮತ್ತು ಪೂರ್ತಗಳೆಂಬ ಎರಡು ಬಗೆಯ ಕರ್ಮಗಳು ಮತ್ತು ಇಲ್ಲಿಯೇ ಮುಂದೆ ಹೇಳಲ್ಪಡುವ ನಾಲ್ಕು ಬಗೆಯ ಯಜ್ಞಗಳು ಒಟ್ಟು ಒಂಬತ್ತು. ಹತ್ತನೆಯದು ಆತ್ಮಸಿದ್ಧಿಗೆ ಸಾಧನ ಗಳಾದ ಯಮ-ನಿಯಮಾದಿಗಳು. ಈ ಹತ್ತು ಕ್ರಮಗಳಲ್ಲಿ ವೇದಗಳು ಕಾರ್ಯಸಿದ್ಧಿಯ ಸಾಧನಗಳನ್ನು ನಿರೂಪಿಸುತ್ತವೆ.)

ಯದುಕ್ತಂ ವೇದವಾದೇಷು ಗಹನಂ ವೇದದರ್ಶಿಭಿಃ ।
ತದನ್ತೇಷು ಯಥಾಯುಕ್ತಂ ಕ್ರಮಯೋಗೇನ ಲಕ್ಷ್ಯತೇ ॥೨೮॥

ಅತ್ಯಂತಗಹನವಾದ ಯಾವ ಬ್ರಹ್ಮವಸ್ತುವು ವೇದದರ್ಶಿಗಳಾದ ವಿದ್ವಾಂಸರ ಮೂಲಕವಾಗಿ ವೇದವಾಕ್ಯಗಳಲ್ಲಿ ಹೇಳಲ್ಪಟ್ಟಿರುವುದೋ ಮತ್ತು ಉಪನಿಷತ್ತುಗಳಲ್ಲಿ ಸ್ಪಷ್ಟರೂಪದಿಂದ ವರ್ಣಿಸಲ್ಪಟ್ಟಿರುವುದೋ–ಆ ಬ್ರಹ್ಮ ವಸ್ತುವು * ಕ್ರಮಯೋಗದಿಂದ ಲಕ್ಷಿಸಲ್ಪಡುತ್ತದೆ.

ಕರ್ಮಜೋಽಯಂ ಪೃಥಗ್ಭಾವೋ ದ್ವನ್ದ್ವಯುಕ್ತೋಽಪಿ ದೇಹಿನಃ ।
ತಮಾತ್ಮಸಿದ್ಧಿರ್ವಿಜ್ಞಾನಾಜ್ಜಹಾತಿ ಪುರುಷೋ ಬಲಾತ್ ॥೨೯॥

ದೇಹಾಭಿಮಾನಿಯಾದ ಜೀವವು ಶೀತೋಷ್ಣ, ಸುಖ-ದುಃಖಾದಿ ಯಾವ ದ್ವಂದ್ವಗಳನ್ನು ಅನುಭವಿಸುವುದೋ–ಅದು ಕರ್ಮದಿಂದ ಪ್ರಾಪ್ತವಾಗುತ್ತದೆ. ಆತ್ಮಸಿದ್ಧಿಯನ್ನು ಪಡೆದ ಮನುಷ್ಯನು ತತ್ತ್ವಜ್ಞಾನದ ಬಲದಿಂದ ಆ ದ್ವಂದ್ವಗಳನ್ನು ತ್ಯಾಗಮಾಡುತ್ತಾನೆ.

ದ್ವೇ ಬ್ರಹ್ಮಣೀ ವೇದಿತವ್ಯೇ ಶಬ್ದಬ್ರಹ್ಮ ಪರಂ ಚ ಯತ್ ।
ಶಬ್ದಬ್ರಹ್ಮಣಿ ನಿಷ್ಣಾತಃ ಪರಂ ಬ್ರಹ್ಮಾಧಿಗಚ್ಛತಿ ॥೩೦॥

ಬ್ರಹ್ಮನ ಎರಡು ಸ್ವರೂಪಗಳನ್ನು ತಿಳಿದುಕೊಳ್ಳಬೇಕು. ಒಂದು ಶಬ್ದ ಬ್ರಹ್ಮ ಮತ್ತೊಂದು ಪರಬ್ರಹ್ಮ. ಶಬ್ದಬ್ರಹ್ಮದಲ್ಲಿ (ವೇದದಲ್ಲಿ) ಯಾವನು ನಿಷ್ಣಾತನಾಗಿರುವನೋ–ಅವನು ಬಹಳ ಸುಲಭವಾಗಿ ಪರಬ್ರಹ್ಮವನ್ನು ಸಾಕ್ಷಾತ್ಕಾರಮಾಡಿಕೊಳ್ಳುತ್ತಾನೆ.

ಆಲಮ್ಭಯಜ್ಞಾಃ ಕ್ಷತ್ರಾಶ್ಚ ಹವಿರ್ಯಜ್ಞಾ ವಿಶಃ ಸ್ಮೃತಾಃ ।
ಪರಿಚಾರಯಜ್ಞಾಃ ಶೂದ್ರಾಸ್ತು ತಪೋಯಜ್ಞಾ ದ್ವಿಜಾತಯಃ ॥೩೧॥

ಕ್ಷತ್ರಿಯರಿಗೆ ಮುಖ್ಯವಾದ ಯಜ್ಞವು ಯುದ್ಧಯಜ್ಞ. ವೈಶ್ಯರಿಗೆ

---

* ಸ್ವಾಧ್ಯಾಯ, ಗಾರ್ಹಸ್ಥ್ಯ, ಸಂಧ್ಯಾವಂದನಾದಿ ನಿತ್ಯಕರ್ಮಗಳು, ಕೃಚ್ಛ್ರ ಚಾಂದ್ರಾಯಣಾದಿ ತಪಸ್ಸು, ಯಜ್ಞ, ಪೂರ್ತಕರ್ಮ (ಇಷ್ಟಾಪೂರ್ತಗಳು : ಬಾವಿ-ಕೊಳ ಮೊದಲಾದುವುಗಳನ್ನು ತೋಡಿಸುವುದು.) ಯೋಗ, ದಾನ, ಗುರುಶುಶ್ರೂಷೆ ಮತ್ತು ಸಮಾಧಿ–ಇವು ಹತ್ತು ಕ್ರಮಯೋಗಗಳೆಂದು ವ್ಯಾಖ್ಯಾನಕಾರರ ಅಭಿಮತವಾಗಿದೆ.

ಮುಖ್ಯವಾದ ಯಜ್ಞವು ಹವಿರ್ಯಜ್ಞ. ಶೂದ್ರರಿಗೆ ಮುಖ್ಯವಾದ ಯಜ್ಞವು ಸೇವಾಯಜ್ಞ. ಬ್ರಾಹ್ಮಣರಿಗೆ ಮುಖ್ಯವಾದ ಯಜ್ಞವು ತಪೋಯಜ್ಞವೇ ಆಗಿದೆ.

ತ್ರೇತಾಯುಗೇ ವಿಧಿಸ್ತ್ವೇಷ ಯಜ್ಞಾನಾಂ ನ ಕೃತೇ ಯುಗೇ ।
ದ್ವಾಪರೇ ವಿಪ್ಲವಂ ಯಾನ್ತಿ ಯಜ್ಞಾಃ ಕಲಿಯುಗೇ ತಥಾ ॥೬೨॥

ಈ ಯಜ್ಞವಿಧಾನವು ತ್ರೇತಾಯುಗದಲ್ಲಿ ಮಾತ್ರವೇ ಇದ್ದಿತು. ಕೃತಯುಗದಲ್ಲಿರಲಿಲ್ಲ. ದ್ವಾಪರಯುಗದಲ್ಲಿ ಕ್ರಮವಾಗಿ ಕ್ಷೀಣಿಸುತ್ತಾ ಬಂದು ಕಲಿಯುಗದಲ್ಲಿ ಲುಪ್ತವಾಗಿ ಹೋಗುತ್ತದೆ.

ಅಪೃಥಗ್ಧರ್ಮಿಣೋ ಮರ್ತ್ಯಾ ಋಕ್ಸಾಮಾನಿ ಯಜೂಂಷಿ ಚ ।
ಕಾಮ್ಯಾ ಇಷ್ಟೀಃ ಪೃಥಗ್ದೃಷ್ಟ್ವಾ ತಪೋಭಿಸ್ತಪ ಏವ ಚ ॥೬೩॥

ಸತ್ಯಯುಗದಲ್ಲಿ ಜ್ಞಾನಧರ್ಮವೊಂದನ್ನಲ್ಲದೇ ಬೇರಾವ ಧರ್ಮವನ್ನೂ ಅನುಸರಿಸದೇ ಇದ್ದ ಮನುಷ್ಯರು ಋಕ್ಸಾಮ-ಯಜುಸ್ಸುಗಳನ್ನೂ, ಸಕಾಮೇಷ್ಟಿಗಳನ್ನೂ ಜ್ಞಾನರೂಪದ ತಪಸ್ಸಿಗೆ ಭಿನ್ನವಾದುವುಗಳೆಂದು ಭಾವಿಸಿ, ಅವೆಲ್ಲವನ್ನೂ ತ್ಯಜಿಸಿ ಜ್ಞಾನರೂಪವಾದ ತಪಸ್ಸಿನಲ್ಲಿಯೇ ನಿರತರಾಗಿರುತ್ತಿದ್ದರು.

ತ್ರೇತಾಯಾಂ ತು ಸಮಸ್ತಾ ಯೇ ಪ್ರಾದುರಾಸನ್ಮಹಾಬಲಾಃ ।
ಸಂಯನ್ತಾರಃ ಸ್ಥಾವರಾಣಾಂ ಜಙ್ಗಮಾನಾಂ ಚ ಸರ್ವಶಃ ॥೬೪॥

ತ್ರೇತಾಯುಗದಲ್ಲಿ ಮಹಾಬಲಿಷ್ಠರಾದ ರಾಜರು ಪ್ರಾದುರ್ಭವಿಸಿದರು. ಅವರೆಲ್ಲರೂ ಸಮಸ್ತವಾದ ಸ್ಥಾವರ-ಜಂಗಮಪ್ರಾಣಿಗಳಿಗೂ ನಿಯಾಮಕರಾದರು.

ತ್ರೇತಾಯಾಂ ಸಂಹತಾ ವೇದಾ ಯಜ್ಞಾ ವರ್ಣಾಶ್ರಮಾಸ್ತಥಾ ।
ಸಂರೋಧಾದಾಯುಷಸ್ತ್ವೇತೇ ಭ್ರಶ್ಯನ್ತೇ ದ್ವಾಪರೇ ಯುಗೇ ॥೬೫॥

ತ್ರೇತಾಯುಗದಲ್ಲಿ ವೇದ, ಯಜ್ಞ ಮತ್ತು ವರ್ಣಾಶ್ರಮಧರ್ಮಗಳು ಸುವ್ಯವಸ್ಥಿತವಾಗಿ ಪಾಲಿಸಲ್ಪಡುತ್ತಿದ್ದುವು. ಆದರೆ ದ್ವಾಪರಯುಗದಲ್ಲಿ ಆಯುಷ್ಯವು ಕ್ಷೀಣಿಸಿದ್ದರಿಂದ ವೇದ-ಯಜ್ಞ-ವರ್ಣಾಶ್ರಮಧರ್ಮಗಳ ಪರಿಪಾಲನೆಯಲ್ಲಿ ಜನರು ಭ್ರಷ್ಟರಾಗತೊಡಗಿದರು.

ದೃಶ್ಯನ್ತೇ ನ ಚ ದೃಶ್ಯನ್ತೇ ವೇದಾಃ ಕಲಿಯುಗೇಽಖಿಲಾಃ ।
ಉತ್ಸೀದನ್ತೇ ಸಯಜ್ಞಾಶ್ಚ ಕೇವಲಾಧರ್ಮಪೀಡಿತಾಃ ॥೩೬॥

ಕಲಿಯುಗದಲ್ಲಿ ವೇದವು ಖಿಲವಾಗಿ ಕೆಲವು ಮಾತ್ರ ದರ್ಶನಕ್ಕೆ ಬರುತ್ತವೆ ಮತ್ತು ಕೆಲವು ಕಾಣಿಸುವುದೇ ಇಲ್ಲ. ಕೇವಲ ಅಧರ್ಮದಿಂದ ಪೀಡಿಸಲ್ಪಟ್ಟು ಅವು ಯಜ್ಞಗಳೊಡನೆ ಲುಪ್ತವಾಗುತ್ತವೆ.

ಕೃತೇ ಯುಗೇ ಯಸ್ತು ಧರ್ಮೋ ಬ್ರಾಹ್ಮಣೇಷು ಪ್ರದೃಶ್ಯತೇ ।
ಆತ್ಮವತ್ಸು ತಪೋವತ್ಸು ಶ್ರುತವತ್ಸು ಪ್ರತಿಷ್ಠಿತಃ ॥೩೭॥

ಕೃತಯುಗದಲ್ಲಿ ಯಾವ ಧರ್ಮವು ಬ್ರಾಹ್ಮಣರಲ್ಲಿ ಕಂಡುಬರುತ್ತದೆಯೋ–ಆ ಧರ್ಮವು ಇತರ ಯುಗಗಳಲ್ಲಿಯೂ ಜಿತೇಂದ್ರಿಯರಾದ, ತಪಸ್ವಿಗಳಾದ ಮತ್ತು ವೇದ-ವೇದಾಂತಪಾರಂಗತರಾದ ಮಹಾತ್ಮರಲ್ಲಿ ಪ್ರತಿಷ್ಠಿತವಾಗಿರುತ್ತದೆ.

ಸಧರ್ಮವ್ರತಸಂಯೋಗಂ ಯಥಾಧರ್ಮಂ ಯುಗೇ ಯುಗೇ ।
ವಿಕ್ರಿಯನ್ತೇ ಸ್ವಧರ್ಮಸ್ಥಾ ವೇದವಾದಾ ಯಥಾಗಮಮ್ ॥೩೮॥

ಆಗಮಗಳು ಹೇಳುವಂತೆ ವೇದವಿದ್ವಾಂಸರಾಗಿ ತಮ್ಮ ಧರ್ಮದಲ್ಲಿ ನಿರತರಾಗಿರುವವರೂ ಕೂಡ ಪ್ರತಿಯುಗದಲ್ಲಿಯೂ ಆಯಾ ಯುಗಧರ್ಮಕ್ಕೆ ಅನುಗುಣವಾಗಿ ಆಯಾ ಧರ್ಮ ಮತ್ತು ವ್ರತಗಳ ಸಂಯೋಗದೊಡನೆ ವ್ಯತ್ಯಾಸಹೊಂದುತ್ತಾರೆ.

(ಕೃತಯುಗದಲ್ಲಿ ನಿಷ್ಕಾಮವಾಗಿ ಧರ್ಮವ್ರತಗಳನ್ನು ಆಚರಿಸುತ್ತಾರೆ. ತ್ರೇತಾಯುಗ ಮುಂತಾದುವುಗಳಲ್ಲಿ ಒಳ್ಳೆಯ ಅಥವಾ ಕೆಟ್ಟ ಕಾಮನೆಗಳ ಪೂರ್ತಿಗಾಗಿ ಅವುಗಳನ್ನು ಆಚರಿಸುತ್ತಾರೆ.)

ಯಥಾ ವಿಶ್ವಾನಿ ಭೂತಾನಿ ವೃಷ್ಟ್ಯಾ ಭೂಯಾಂಸಿ ಪ್ರಾವೃಷಿ ।
ಸೃಜ್ಯನ್ತೇ ಜಙ್ಗಮಸ್ಥಾನಿ ತಥಾ ಧರ್ಮಾ ಯುಗೇ ಯುಗೇ ॥೩೯॥

ವರ್ಷಾಕಾಲದಲ್ಲಿ ಮಳೆಯಾದನಂತರ ಸ್ಥಾವರ-ಜಂಗಮಗಳಲ್ಲಿರುವ ಸಕಲಪದಾರ್ಥಗಳೂ ವೃದ್ಧಿಹೊಂದುತ್ತವೆ ಮತ್ತು ವರ್ಷಾಕಾಲವು ಕಳೆದ ನಂತರ ಕ್ಷೀಣಿಸುತ್ತವೆ. ಅದೇ ರೀತಿಯಲ್ಲಿ ಪ್ರತಿಯೊಂದು ಯುಗದಲ್ಲಿಯೂ ಧರ್ಮಗಳು ವೃದ್ಧಿಸುತ್ತವೆ ಮತ್ತು ಕ್ಷೀಣಿಸುತ್ತವೆ.

ಯಥರ್ತುಷ್ವೃತುಲಿಙ್ಗಾನಿ ನಾನಾರೂಪಾಣಿ ಪರ್ಯಯೇ ।
ದೃಶ್ಯನ್ತೇ ತಾನಿ ತಾನ್ಯೇವ ತಥಾ ಬ್ರಹ್ಮಹರಾದಿಷು ॥೪೦॥

ವಸಂತವೇ ಮೊದಲಾದ ಋತುಗಳಲ್ಲಿ ಗಿಡ-ಮರಗಳಲ್ಲಿ ಮೊಗ್ಗಾಗುವುದೂ, ಹೂಬಿಡುವುದೂ, ಹಣ್ಣಾಗುವುದೂ, ಉದುರಿಹೋಗುವುದೂ ಇತ್ಯಾದಿ ಬೇರೆ ಬೇರೆ ಲಕ್ಷಣಗಳನ್ನು ನೋಡುತ್ತೇವೆ. ಹಾಗೆಯೇ ಬ್ರಹ್ಮ-ವಿಷ್ಣು-ಮಹೇಶ್ವರರಲ್ಲಿಯೂ ಗುಣಭೇದಗಳೂ ಕಾರ್ಯಭೇದಗಳೂ ಉಂಟು.

(ಬ್ರಹ್ಮನದು ರಜೋಗುಣ ಮತ್ತು ಸೃಷ್ಟಿಕಾರ್ಯದ ಲಕ್ಷಣ. ವಿಷ್ಣುವಿನದು ಸತ್ವಗುಣ ಮತ್ತು ಸ್ಥಿತಿಕಾರ್ಯಗಳ ಲಕ್ಷಣ. ರುದ್ರನದು ತಮೋಗುಣ ಮತ್ತು ಲಯಕಾರ್ಯಗಳ ಲಕ್ಷಣ. ಸೃಷ್ಟಿ-ಸ್ಥಿತಿ-ಲಯಗಳ ಕರ್ತೃವು ಭಗವಂತನೊಬ್ಬನೇ ಆದರೂ ಆಯಾ ವ್ಯಾಪಾರಕ್ಕೆ ಅನುಗುಣವಾಗಿ ಲಕ್ಷಣ ಭೇದವನ್ನು ಹೇಳಿದೆ.)

ವಿಹಿತಂ ಕಾಲನಾನಾತ್ವಮನಾದಿನಿಧನಂ ತಥಾ ।
ಕೀರ್ತಿತಂ ತತ್ಪುರಸ್ತಾತ್ತೇ ತತ್ಸೂತೇ ಚಾತ್ತಿ ಚ ಪ್ರಜಾಃ ॥೪೧॥

ಕಾಲವು ಕೃತ-ತ್ರೇತಾ-ದ್ವಾಪರ-ಕಲಿ–ಇತ್ಯಾದಿ ನಾನಾರೂಪಗಳುಳ್ಳದ್ದು ಮತ್ತು ಆದಿ-ಅಂತ್ಯಗಳಿಲ್ಲದ ನಿತ್ಯವೂ ಆಗಿದೆ–ಎಂದು ಶಾಸ್ತ್ರವು ವಿಧಿಸುತ್ತದೆ. ಇದನ್ನು ಈ ಹಿಂದೆಯೇ ನಿನಗೆ ಹೇಳಿಯಾಗಿದೆ. ಆ ಕಾಲವೇ ಪ್ರಜೆಗಳನ್ನು ಸೃಷ್ಟಿಸುವುದು ಮತ್ತು ತಿಂದುಹಾಕುವುದು.

ದಧಾತಿ ಪ್ರಭವೇ ಸ್ಥಾನಂ ಭೂತಾನಾಂ ಸಂಯಮೋ ಯಮಃ ।
ಸ್ವಭಾವೇನೈವ ವರ್ತನ್ತೇ ದ್ವನ್ದ್ವಯುಕ್ತಾನಿ ಭೂರಿಶಃ ॥೪೨॥

ಹೀಗೆ ಕಾಲವು ಧರಿಸಿ ಪೋಷಿಸುತ್ತದೆ. ಉತ್ಪತ್ತಿಯಲ್ಲಿ ಸ್ಥಾನವನ್ನು ಹೊಂದಿದೆ ಮತ್ತು ಭೂತಗಳನ್ನು ಉಪಸಂಹಾರಮಾಡುವ ಯಮನೂ ಕೂಡ ಕಾಲವೇ. ಎಲ್ಲ ಪ್ರಾಣಿಗಳೂ ಹೇರಳವಾಗಿ ಸುಖ-ದುಃಖಾದಿ ದ್ವಂದ್ವಗಳಿಂದ ಕೂಡಿರುವುದು (ತ್ರಿಗುಣಾಧೀನವಾದ) ಅವುಗಳ ಸ್ವಭಾವದಿಂದಲೇ.

ಸರ್ಗಕಾಲಕ್ರಿಯಾ ವೇದಾಃ ಕರ್ತಾ ಕಾರ್ಯಂ ಕ್ರಿಯಾಫಲಮ್ ।
ಪ್ರೋಕ್ತಂ ತೇ ಪುತ್ರ ಸರ್ವಂ ವೈ ಯನ್ಮಾಂ ತ್ವಂ ಪರಿಪೃಚ್ಛಸಿ ॥೪೩॥



ಮಗು! ಶುಕ! ನೀನು ಕೇಳಿದ ಪ್ರಶ್ನೆಗಳಿಗೆ ತಕ್ಕಂತೆ ನಾನು ನಿನಗೆ ಸೃಷ್ಟಿ, ಕಾಲ, ಕ್ರಿಯೆ, ವೇದ, ಕರ್ತಾ, ಕಾರ್ಯ ಮತ್ತು ಕ್ರಿಯಾಫಲ– ಇವುಗಳೆಲ್ಲವನ್ನೂ ವಿಶದವಾಗಿ ಹೇಳಿದ್ದೇನೆ."

೨೩೨ನೆಯ ಅಧ್ಯಾಯವು ಮುಗಿಯಿತು.

೨೩೩ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಪ್ರಳಯ ಮತ್ತು ಮಹಾಪ್ರಳಯಗಳ ವರ್ಣನೆ

ಪಾರಿಕ್ಷಿತ! ಭೀಷ್ಮನು ಮುಂದುವರಿಸುತ್ತಾ ಹೇಳುತ್ತಾನೆ :

"ಯುಧಿಷ್ಠಿರ! ವ್ಯಾಸರು ಹೇಳುತ್ತಾರೆ :

ಪ್ರತ್ಯಾಹಾರಂ ತು ವಕ್ಷ್ಯಾಮಿ ಶರ್ವರ್ಯಾದೌ ಗತೇಽಹನಿ ।
ಯಥೇದಂ ಕುರುತೇಽಧ್ಯಾತ್ಮಂ ಸುಸೂಕ್ಷ್ಮಂ ವಿಶ್ವಮೀಶ್ವರಃ ॥೧॥

"ಶುಕ! ಈಗ ನಾನು–ಬ್ರಹ್ಮನ ಹಗಲು ಕಳೆದನಂತರ (ಒಂದು ಸಾವಿರ ಚತುರ್ಯುಗಗಳು ಕಳೆದನಂತರ) ರಾತ್ರಿಯು ಪ್ರಾರಂಭವಾಗುವುದಕ್ಕೆ ಮೊದಲು ಸೃಷ್ಟಿಯು ಯಾವ ರೀತಿಯಲ್ಲಿ ಲಯಹೊಂದುತ್ತದೆ ಮತ್ತು ಬ್ರಹ್ಮನು ಸ್ಥೂಲಜಗತ್ತನ್ನು ಅತ್ಯಂತಸೂಕ್ಷ್ಮವನ್ನಾಗಿ ಮಾಡಿ ತನ್ನ ಆತ್ಮದಲ್ಲಿ ಹೇಗೆ ಇಟ್ಟುಕೊಳ್ಳುತ್ತಾನೆ–ಎಂಬ ವಿಷಯವನ್ನು ಹೇಳುತ್ತೇನೆ.

ದಿವಿ ಸೂರ್ಯಸ್ತಥಾ ಸಪ್ತ ದಹನ್ತಿ ಶಿಖಿನೋಽರ್ಚಿಷಃ ।
ಸರ್ವಮೇತತ್ತದಾರ್ಚಿರ್ಭಿಃ ಪೂರ್ಣಂ ಜಾಜ್ವಲ್ಯತೇ ಜಗತ್ ॥೨॥

ಪ್ರಳಯಕಾಲದಲ್ಲಿ ಆಕಾಶದಲ್ಲಿ ಸೂರ್ಯನೂ – ಭೂಮಂಡಲದಲ್ಲಿ ಅಗ್ನಿಯ ಏಳು ಜ್ವಾಲೆಗಳೂ ವಿಶ್ವವನ್ನೇ ಸುಟ್ಟುಹಾಕಲು ಪ್ರಾರಂಭಿಸುತ್ತವೆ. ಈ ಸಂಪೂರ್ಣಜಗತ್ತೂ ಆ ಸಮಯದಲ್ಲಿ ಸೂರ್ಯನ ಪ್ರಖರವಾದ ಕಿರಣಗಳಿಂದಲೂ–ಅಗ್ನಿಯ ಜ್ವಾಲೆಗಳಿಂದಲೂ ಸಂಪೂರ್ಣವಾಗಿ ಸುಟ್ಟು ಹೋಗುತ್ತದೆ.

ಪೃಥಿವ್ಯಾಂ ಯಾನಿ ಭೂತಾನಿ ಜಙ್ಗಮಾನಿ ಧ್ರುವಾಣಿ ಚ ।
ತಾನ್ಯೇವಾಗ್ರೇ ಪ್ರಲೀಯನ್ತೇ ಭೂಮಿತ್ವಮುಪಯಾನ್ತಿ ಚ ॥೩॥

ಆ ಸಮಯದಲ್ಲಿ ಭೂಮಂಡಲದಲ್ಲಿರುವ ಚರಾಚರಪ್ರಾಣಿಗಳೆಲ್ಲವೂ ಮೊದಲು ಭೂಮಿಯಲ್ಲಿ ಲೀನವಾಗಿ ಭೂಮಿರೂಪವನ್ನೇ ಹೊಂದಿಬಿಡುತ್ತವೆ.

ತತಃ ಪ್ರಲೀನೇ ಸರ್ವಸ್ಮಿನ್ಸ್ಥಾವರೇ ಜಙ್ಗಮೇ ತಥಾ ।
ನಿರ್ವೃಕ್ಷಾ ನಿಸ್ತೃಣಾ ಭೂಮಿರ್ದೃಶ್ಯತೇ ಕೂರ್ಮಪೃಷ್ಠವತ್ ॥೪॥

ಹೀಗೆ ಚರಾಚರಪ್ರಾಣಿಗಳೆಲ್ಲವೂ ಭೂಮಿಯಲ್ಲಿ ಲಯಗೊಳ್ಳಲು ಗಿಡ-ಮರ-ಬಳ್ಳಿಗಳಿಂದಲೂ, ಗರಿಕೆ ಮೊದಲಾದ ಹುಲ್ಲುಗಳಿಂದಲೂ ವಿಹೀನವಾದ ಭೂಮಿಯು ಆಮೆಯ ಬೆನ್ನಿನಂತೆ ಬೋಳಾಗಿ ಕಾಣುತ್ತದೆ.

ಭೂಮೇರಪಿ ಗುಣಂ ಗನ್ಧಮಾಪ ಆದದತೇ ಯದಾ ।
ಆತ್ತಗನ್ಧಾ ತದಾ ಭೂಮಿಃ ಪ್ರಲಯತ್ವಾಯ ಕಲ್ಪತೇ ॥೫॥

ಆ ಸಮಯದಲ್ಲಿ ನೀರು ಭೂಮಿಯ ಗುಣವಾದ ಗಂಧವನ್ನು ಗ್ರಹಿಸುತ್ತದೆ. ಗಂಧಹೀನವಾದ ಭೂಮಿಯು ತನ್ನ ಅಸ್ತಿತ್ವಕ್ಕೆ ಕಾರಣಭೂತವಾದ ನೀರಿನಲ್ಲಿ ಲೀನಗೊಳ್ಳಲು ಸಿದ್ಧವಾಗುತ್ತದೆ.

ಆಪಸ್ತತ್ರ ಪ್ರತಿಷ್ಠನ್ತಿ ಊರ್ಮಿಮತ್ಯೋ ಮಹಾಸ್ವನಾಃ ।
ಸರ್ವಮೇವೇದಮಾಪೂರ್ಯ ತಿಷ್ಠನ್ತಿ ಚ ಚರನ್ತಿ ಚ ॥೬॥

ಅನಂತರ ನೀರು ದೊಡ್ಡ-ದೊಡ್ಡ ಅಲೆಗಳಿಂದಲೂ, ಘೋರವಾದ ಶಬ್ದದಿಂದಲೂ ಕೂಡಿ ಎಲ್ಲ ಕಡೆಗಳಿಂದಲೂ ಭೂಮಿಯನ್ನು ಆವರಿಸುತ್ತದೆ. ಸಂಪೂರ್ಣವಿಶ್ವವನ್ನೂ ತನ್ನಲ್ಲಿ ಲೀನಗೊಳಿಸಿ ಪ್ರವಹಿಸುತ್ತಿರುತ್ತದೆ.

ಅಪಾಮಪಿ ಗುಣಂ ತಾತ ಜ್ಯೋತಿರಾದದತೇ ಯದಾ ।
ಆಪಸ್ತದಾ ತ್ವಾತ್ತಗುಣಾ ಜ್ಯೋತಿಃಷೂಪರಮನ್ತಿ ವೈ ॥೭॥

ಬಳಿಕ ನೀರಿನ ಗುಣವಾದ ರಸವನ್ನು ತೇಜಸ್ಸು ಗ್ರಹಿಸುತ್ತದೆ. ರಸದಿಂದ ವಿಹೀನವಾದ ನೀರು ತೇಜಸ್ಸಿನಲ್ಲಿ ವಿಲೀನವಾಗುತ್ತದೆ.

ಯದಾದಿತ್ಯಂ ಸ್ಥಿತಂ ಮಧ್ಯೇ ಗೂಹನ್ತಿ ಶಿಖಿನೋಽರ್ಚಿಷಃ ।
ಸರ್ವಮೇವೇದಮರ್ಚಿರ್ಭಿಃ ಪೂರ್ಣಂ ಜಾಜ್ವಲ್ಯತೇ ನಭಃ ॥೮॥

ಯಾವಾಗ ಆಕಾಶದ ಮಧ್ಯದಲ್ಲಿರುವ ಸೂರ್ಯನನ್ನು ಅಗ್ನಿಯ ಸಪ್ತ ಜ್ವಾಲೆಗಳೂ ಮುಚ್ಚಿಬಿಡುತ್ತವೆಯೋ–ಆಗ ಆಕಾಶವೆಲ್ಲವೂ ಜ್ವಾಲೆಗಳಿಂದಲೇ ವ್ಯಾಪ್ತವಾಗಿ ಪ್ರಜ್ವಲಿಸುತ್ತದೆ.

ಜ್ಯೋತಿಷೋಽಪಿ ಗುಣಂ ರೂಪಂ ವಾಯುರಾದದತೇ ಯದಾ ।
ಪ್ರಶಾಮ್ಯತಿ ತತೋ ಜ್ಯೋತಿರ್ವಾಯುರ್ದೋಧೂಯತೇ ಮಹಾನ್ ॥೯॥

ಆ ಸಮಯದಲ್ಲಿ ತೇಜಸ್ಸಿನ ಗುಣವಾದ ರೂಪವನ್ನು ವಾಯುವು ಗ್ರಹಿಸುತ್ತದೆ. ಅಗ್ನಿಯು ವಾಯುವಿನಲ್ಲಿ ಲೀನವಾಗುತ್ತದೆ. (ಪ್ರಶಾಂತವಾಗುತ್ತದೆ.) ವಾಯುವು ತನ್ನ ಮಹತ್ತರವಾದ ವೇಗದಿಂದ ಆಕಾಶವೆಲ್ಲವನ್ನೂ ಕ್ಷೋಭೆಗೊಳಿಸುತ್ತದೆ.

ತತಸ್ತು ಸ್ವನಮಾಸಾದ್ಯ ವಾಯುಃ ಸಮ್ಭವಮಾತ್ಮನಃ ।
ಅಧಶ್ಚೋರ್ಧ್ವಂ ಚ ತಿರ್ಯಕ್ಚ ದೋಧವೀತಿ ದಿಶೋ ದಶ ॥೧೦॥

ಅನಂತರ ವಾಯುವು ಮಹಾಶಬ್ದದಿಂದ ಕೂಡಿ ತನ್ನ ಉತ್ಪತ್ತಿಗೆ ಕಾರಣವಾದ ಆಕಾಶವನ್ನು ಸೇರಿ ಮೇಲೆ-ಕೆಳಗೆ, ಅಕ್ಕ-ಪಕ್ಕಗಳಲ್ಲಿ ಮತ್ತು ಹತ್ತು ದಿಕ್ಕುಗಳಲ್ಲಿಯೂ ಬಲವಾಗಿ ಬೀಸತೊಡಗುತ್ತದೆ.

ವಾಯೋರಪಿ ಗುಣಂ ಸ್ಪರ್ಶಮಾಕಾಶಂ ಗ್ರಸತೇ ಯದಾ ।
ಪ್ರಶಾಮ್ಯತಿ ತದಾ ವಾಯುಃ ಖಂ ತು ತಿಷ್ಠತಿ ನಾದವತ್ ॥೧೧॥

ಬಳಿಕ ಆಕಾಶವು ವಾಯುವಿನ ಗುಣವಾದ ಸ್ಪರ್ಶವನ್ನು ನುಂಗಿಹಾಕುತ್ತದೆ. ತನ್ನ ಗುಣವನ್ನು ಕಳೆದುಕೊಂಡೊಡನೆಯೇ ವಾಯುವು ಆಕಾಶದಲ್ಲಿ ಲೀನವಾಗಿ ಉಪಶಮನಹೊಂದುತ್ತದೆ. ಶಬ್ದದಿಂದ ಕೂಡಿದ ಆಕಾಶವೊಂದೇ ಆ ಸಮಯದಲ್ಲಿ ಶಬ್ದಗುಣದೊಡನೆ ಉಳಿದಿರುತ್ತದೆ.

ಅರೂಪಮರಸಸ್ಪರ್ಶಮಗನ್ಧಂ ನ ಚ ಮೂರ್ತಿಮತ್ ।
ಸರ್ವಲೋಕಪ್ರಣದಿತಂ ಖಂ ತು ತಿಷ್ಠತಿ ನಾದವತ್ ॥೧೨॥

ಆಕಾಶದಲ್ಲಿ ಸ್ಪರ್ಶ-ರೂಪ-ರಸ-ಗಂಧಗಳ ಹೆಸರೂ ಇರುವುದಿಲ್ಲ. ಅದಕ್ಕೆ ಆಕಾರವೂ ಇರುವುದಿಲ್ಲ. ಯಾವುದರ ಶಬ್ದವು ಎಲ್ಲ ಲೋಕಗಳಲ್ಲಿಯೂ ಪ್ರತಿಧ್ವನಿತವಾಗುವುದೋ–ಆ ಆಕಾಶವೊಂದೇ ಆ ಸಮಯದಲ್ಲಿ ಶಬ್ದಗುಣದಿಂದ ಯುಕ್ತವಾಗಿ ಉಳಿದಿರುತ್ತದೆ.

ಆಕಾಶಸ್ಯ ಗುಣಂ ಶಬ್ದಮಭಿವ್ಯಕ್ತಾತ್ಮಕಂ ಮನಃ ।
ಮನಸೋ ವ್ಯಕ್ತಮವ್ಯಕ್ತಂ ಬ್ರಾಹ್ಮಃ ಸಮ್ಪ್ರತಿಸಂಚರಃ ॥೧೩॥

ಅನಂತರ ದೃಶ್ಯಪ್ರಪಂಚವನ್ನು ವ್ಯಕ್ತಗೊಳಿಸುವ ಮನಸ್ಸು ತನ್ನಲ್ಲಿ ಪ್ರಕಟವಾಗಿರುವ ಆಕಾಶಗುಣವಾದ ಶಬ್ದವನ್ನು ತನ್ನಲ್ಲಿಯೇ ವಿಲೀನಗೊಳಿಸಿಕೊಳ್ಳುತ್ತದೆ. ಈ ರೀತಿಯಲ್ಲಿ ವ್ಯಕ್ತವಾದ ಮನಸ್ಸು ಅವ್ಯಕ್ತವಾದ ಮಹತ್ತತ್ತ್ವದಲ್ಲಿಯೂ, ಮಹತ್ತತ್ತ್ವವು ಬ್ರಹ್ಮನಲ್ಲಿಯೂ ಲೀನವಾಗುತ್ತದೆ. ಬ್ರಹ್ಮನೊಬ್ಬನೇ ಉಳಿದಿರುತ್ತಾನೆ. ಇದನ್ನೇ 'ಬ್ರಾಹ್ಮಪ್ರಳಯ' ಎನ್ನುತ್ತಾರೆ.

ತದಾತ್ಮಗುಣಮಾವಿಶ್ಯ ಮನೋ ಗ್ರಸತಿ ಚನ್ದ್ರಮಾಃ ।
ಮನಸ್ಯುಪರತೇ ಚಾಪಿ ಚನ್ದ್ರಮಸ್ಯುಪತಿಷ್ಠತೇ ॥೧೪॥

ಮಹಾಪ್ರಳಯದ ಸಮಯದಲ್ಲಿ ಚಂದ್ರಮಸನು (ಅವ್ಯಕ್ತಮನಸ್ಸು) ವ್ಯಕ್ತವಾದ ಮನಸ್ಸನ್ನು ನುಂಗಿಬಿಡುತ್ತಾನೆ. ಇದರಿಂದ ಮನಸ್ಸು ಶಾಂತ ವಾದರೂ ಅದು ಚಂದ್ರನಲ್ಲಿ ಪ್ರತಿಷ್ಠಿತವಾಗಿರುತ್ತದೆ.

ತಂ ತು ಕಾಲೇನ ಮಹತಾ ಸಂಕಲ್ಪಃ ಕುರುತೇ ವಶೇ ।
ಚಿತ್ತಂ ಗ್ರಸತಿ ಸಂಕಲ್ಪಂ ತಚ್ಚ ಜ್ಞಾನಮನುತ್ತಮಮ್ ॥೧೫॥

ಅನಂತರ ಸಂಕಲ್ಪವು ಬಹಳ ಕಾಲಾನಂತರ ವ್ಯಕ್ತಮನಸ್ಸಿನಿಂದ ಕೂಡಿದ ಚಂದ್ರಮಸನನ್ನು (ಅವ್ಯಕ್ತವಾದ ಮನಸ್ಸನ್ನು) ಸ್ವಾಧೀನಪಡಿಸಿಕೊಳ್ಳುತ್ತದೆ. ಬಳಿಕ ಸಮಷ್ಟಿಯಾದ ಬುದ್ಧಿಯು (ಚಿತ್ತವು) ಸಂಕಲ್ಪವನ್ನು ನುಂಗಿಹಾಕುತ್ತದೆ. ಅಂತಹ ಬುದ್ಧಿಯನ್ನೇ ಪರಮೋತ್ತಮವಾದ ಜ್ಞಾನವೆನ್ನುತ್ತಾರೆ.

ಕಾಲೋ ಗಿರತಿ ವಿಜ್ಞಾನಂ ಕಾಲಂ ಬಲಮಿತಿ ಶ್ರುತಿಃ ।
ಬಲಂ ಕಾಲೋ ಗ್ರಸತಿ ತು ತಂ ವಿದ್ವಾನ್ಕುರುತೇ ವಶೇ ॥೧೬॥

ಕಾಲವು ವಿಜ್ಞಾನವನ್ನು (ಸಮಷ್ಟಿಬುದ್ಧಿಯನ್ನು) ನುಂಗಿಹಾಕುತ್ತದೆ. ಶಕ್ತಿಯು ಕಾಲನನ್ನು ನುಂಗಿಹಾಕುತ್ತದೆ. ಮಹಾಕಾಲನು ಶಕ್ತಿಯನ್ನು ನುಂಗಿ ಹಾಕುತ್ತಾನೆ. ಅಂತಹ ಮಹಾಕಾಲನನ್ನು ವಿದ್ವತ್ ಶಬ್ದವಾಚ್ಯನಾದ ಪರ ಬ್ರಹ್ಮನು ತನ್ನ ಅಧೀನಕ್ಕೆ ಒಳಪಡಿಸಿಕೊಳ್ಳುತ್ತಾನೆ.

ಆಕಾಶಸ್ಯ ಯಥಾ ಘೋಷಂ ತಂ ವಿದ್ವಾನ್ಕುರುತೇಽತ್ಮನಿ ।
ತದವ್ಯಕ್ತಂ ಪರಂ ಬ್ರಹ್ಮ ತಚ್ಛಾಶ್ವತಮನುತ್ತಮಮ್ ।
ಏವಂ ಸರ್ವಾಣಿ ಭೂತಾನಿ ಬ್ರಹ್ಮೈವ ಪ್ರತಿಸಂಚರಃ ॥೧೭॥

ವ್ಯಕ್ತಮನಸ್ಸು ಆಕಾಶದ ಗುಣವಾದ ಶಬ್ದವನ್ನು ಯಾವ ರೀತಿಯಲ್ಲಿ ತನ್ನಲ್ಲಿ ಲಯಮಾಡಿಕೊಳ್ಳುವುದೋ–ಅದೇ ರೀತಿಯಲ್ಲಿ ಅವ್ಯಕ್ತವಾದ, ಶಾಶ್ವತವಾದ, ಪರಮಶ್ರೇಷ್ಠವಾದ ಪರಬ್ರಹ್ಮವಸ್ತುವು ಮಹಾಕಾಲನನ್ನು ತನ್ನಲ್ಲಿಯೇ ಲೀನಮಾಡಿಕೊಳ್ಳುತ್ತದೆ. ಹೀಗೆ ಎಲ್ಲ ಪ್ರಾಣಿಗಳೂ ಪ್ರಳಯಾ ನಂತರ ಪರಬ್ರಹ್ಮಪರಮಾತ್ಮನಲ್ಲಿಯೇ ಆಶ್ರಯವನ್ನು ಪಡೆಯುತ್ತವೆ.

ಯಥಾವತ್ಕೀರ್ತಿತಂ ಸಮ್ಯಗೇವಮೇತದಸಂಶಯಮ್ ।
ಬೋಧ್ಯಂ ವಿದ್ಯಾಮಯಂ ದೃಷ್ಟ್ವಾ ಯೋಗಿಭಿಃ ಪರಮಾತ್ಮಭಿಃ ॥೧೮॥

ಶ್ರೇಷ್ಠಾತ್ಮರಾದ ಯೋಗಿಗಳು ಜ್ಞಾನಮಯವಾದ ಪರಬ್ರಹ್ಮವನ್ನು ಜ್ಞಾನದೃಷ್ಟಿಯಿಂದ ನೋಡಿ ಅದನ್ನು ಯಥಾವತ್ತಾಗಿ ಸಂದೇಹವೇ ಇಲ್ಲದಂತೆ ಹೀಗೆ ಚೆನ್ನಾಗಿ ವರ್ಣನೆಮಾಡಿದ್ದಾರೆ. ಅವರು ವರ್ಣಿಸಿರುವಂತೆಯೇ ಆ ಬ್ರಹ್ಮವಸ್ತುವಿನ ಸ್ವರೂಪವಿದೆ.

ಏವಂ ವಿಸ್ತಾರಸಂಕ್ಷೇಪೌ ಬ್ರಹ್ಮಾವ್ಯಕ್ತೇ ಪುನಃ ಪುನಃ ।
ಯುಗಸಾಹಸ್ರಯೋರಾದಾವಹೋರಾತ್ರಸ್ತಥೈವ ಚ ॥೧೯॥

ಹೀಗೆ ಬಾರಿ-ಬಾರಿಗೂ ಅವ್ಯಕ್ತನಾದ ಬ್ರಹ್ಮದಲ್ಲಿ ಸೃಷ್ಟಿಯ ವಿಸ್ತಾರವೂ ಮತ್ತು ಲಯವೂ ಆಗುತ್ತಲೇ ಇರುತ್ತವೆ. ಬ್ರಹ್ಮನ ಹಗಲು ಒಂದು ಸಾವಿರ ಚತುರ್ಯುಗಪರ್ಯಂತವಾಗಿರುತ್ತದೆ. ರಾತ್ರಿಯೂ ಅಷ್ಟು ಕಾಲದವರೆಗೆ ಇರುತ್ತದೆ. ಈ ವಿಷಯವನ್ನು ಹಿಂದೆಯೇ ಹೇಳಿಯಾಗಿದೆ.”

ಎ೩೩ನೆಯ ಅಧ್ಯಾಯವು ಮುಗಿಯಿತು.

೨೩೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣರ ಕರ್ತವ್ಯ: ದಾನದ ಮಹಿಮೆ

ವ್ಯಾಸರು ಹೇಳುತ್ತಾರೆ :

ಭೂತಗ್ರಾಮೇ ನಿಯುಕ್ತಂ ಯತ್ತದೇತತ್ಕೀರ್ತಿತಂ ಮಯಾ ।
ಬ್ರಾಹ್ಮಣಸ್ಯ ತು ಯತ್ಕೃತ್ಯಂ ತತ್ತೇ ವಕ್ಷ್ಯಾಮಿ ತಚ್ಛೃಣು ॥೧॥

“ಮಗು! ಶುಕದೇವ! ಭೂತಸಮುದಾಯದ ವಿಷಯವಾಗಿ ನೀನು ಕೇಳಿದ ಪ್ರಶ್ನೆಗೆ ಉತ್ತರವಾಗಿ ನಾನು ಈ ಎಲ್ಲ ವಿಷಯಗಳನ್ನೂ ನಿನಗೆ ಹೇಳಿದೆನು. ಈಗ ನಾನು ನಿನಗೆ ಬ್ರಾಹ್ಮಣನ ಕರ್ತವ್ಯವೇನೆಂಬುದರ ವಿಷಯವಾಗಿ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ಜಾತಕರ್ಮಪ್ರಭೃತ್ಯಸ್ಯ ಕರ್ಮಣಾಂ ದಕ್ಷಿಣಾವತಾಮ್ ।
ಕ್ರಿಯಾ ಸ್ಯಾದಾಸಮಾವೃತ್ತೇರಾಚಾರ್ಯೇ ವೇದಪಾರಗೇ ॥೨॥

ಬ್ರಾಹ್ಮಣಶಿಶುವಿಗೆ ಜಾತಕರ್ಮದಿಂದ ಹಿಡಿದು ಸಮಾವರ್ತನದವರೆಗೆ ದಕ್ಷಿಣಾಯುಕ್ತವಾದ ಸಮಸ್ತಕರ್ಮಗಳೂ ವೇದಪಾರಂಗತರಾದ ಆಚಾರ್ಯ ರಿಂದಲೇ ನಡೆಯಬೇಕು.

ಅಧೀತ್ಯ ವೇದಾನಖಿಲಾನ್ಗುರುಶುಶ್ರೂಷಣೇ ರತಃ ।
ಗುರೂಣಾಮನೃಣೋ ಭೂತ್ವಾ ಸಮಾವರ್ತೇತ ಯಜ್ಞವಿತ್ ॥೩॥

ಉಪನಯನವಾದನಂತರ ಬ್ರಾಹ್ಮಣಬಾಲಕನು ಗುರುಶುಶ್ರೂಷೆ ಯಲ್ಲಿಯೇ ತತ್ಪರನಾಗಿದ್ದು ಅಖಿಲವಾದ ವೇದಗಳನ್ನೂ ಅಧ್ಯಯನಮಾಡ ಬೇಕು. ಬಳಿಕ ಗುರುವಿಗೆ ದಕ್ಷಿಣೆಯನ್ನು ಕೊಟ್ಟು ಆಚಾರ್ಯಋಣದಿಂದ ಮುಕ್ತನಾಗಿ ಯಜ್ಞಪ್ರಕ್ರಿಯೆಯನ್ನು ತಿಳಿದು ಸಮಾವರ್ತನ ಸಂಸ್ಕಾರವನ್ನು ಪಡೆಯಬೇಕು.

ಆಚಾರ್ಯೇಣಾಭ್ಯನುಜ್ಞಾತಶ್ಚತುರ್ಣಾಮೇಕಮಾಶ್ರಮಮ್ ।
ಆವಿಮೋಕ್ಷಾಚ್ಛರೀರಸ್ಯ ಸೋಽವತಿಷ್ಠೇದ್ಯಥಾವಿಧಿ ॥೪॥

ಆಚಾರ್ಯರಿಂದ ಅನುಜ್ಞೆಯನ್ನು ಪಡೆದು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸಗಳೆಂಬ ನಾಲ್ಕು ಆಶ್ರಮಗಳಲ್ಲಿ ಯಾವುದಾದರೂ ಒಂದು ಆಶ್ರಮವನ್ನು ಆಶ್ರಯಿಸಿ ಆ ಆಶ್ರಮನಿಯಮಗಳನ್ನು ಶಾಸ್ತ್ರೋಕ್ತವಾದ ರೀತಿಯಲ್ಲಿ ಜೀವನಪರ್ಯಂತವಾಗಿ ಪರಿಪಾಲಿಸುತ್ತಿರಬೇಕು.

ಪ್ರಜಾಸರ್ಗೇಣ ದಾನೈಶ್ಚ ಬ್ರಹ್ಮಚರ್ಯೇಣ ವಾ ಪುನಃ ।
ವನೇ ಗುರುಸಕಾಶೇ ವಾ ಯತಿಧರ್ಮೇಣ ವಾ ಪುನಃ ॥೫॥

ಇಚ್ಛೆಯಿರುವುದಾದರೆ ಕನ್ಯೆಯನ್ನು ಶಾಸ್ತ್ರೋಕ್ತವಾಗಿ ಪಾಣಿಗ್ರಹಣ ಮಾಡಿಕೊಂಡು ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಸಂತಾನವನ್ನು ಪಡೆದು ಕೊಳ್ಳಬಹುದು. ಗೃಹಸ್ಥಾಶ್ರಮದಲ್ಲಿ ಬಗೆ ಬಗೆಯ ದಾನಗಳನ್ನು ಮಾಡ ಬೇಕು. ಬ್ರಹ್ಮಚರ್ಯವ್ರತವನ್ನೇ ಮುಂದುವರಿಸಿ ಗುರುಸಾನ್ನಿಧ್ಯದಲ್ಲಿ ಜೀವನಪರ್ಯಂತವಾಗಿ ಬ್ರಹ್ಮಚಾರಿಯಾಗಿಯೂ ಇರಬಹುದು. ವಾನ ಪ್ರಸ್ಥಾಶ್ರಮವನ್ನು ಸ್ವೀಕರಿಸಿ ಅರಣ್ಯಕ್ಕಾದರೂ ಹೋಗಬಹುದು.

ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಯತಿಧರ್ಮಾನುಸಾರವಾಗಿಯೂ ಇರಬಹುದು.

ಗೃಹಸ್ಥಸ್ತ್ವೇಷ ಧರ್ಮಾಣಾಂ ಸರ್ವೇಷಾಂ ಮೂಲಮುಚ್ಯತೇ ।
ಯತ್ರ ಪಕ್ವಕಷಾಯೋ ಹಿ ದಾನ್ತಃ ಸರ್ವತ್ರ ಸಿಧ್ಯತಿ ॥೬॥

ಇವುಗಳಲ್ಲಿ ಗೃಹಸ್ಥಾಶ್ರಮವೇ ಎಲ್ಲ ಧರ್ಮಗಳಿಗೂ ಮೂಲಭೂತವಾದುದೆಂದು ಹೇಳುತ್ತಾರೆ. ಗೃಹಸ್ಥಾಶ್ರಮದಲ್ಲಿದ್ದು ಅಂತಃಕರಣದ ರಾಗಾದಿ ದೋಷಗಳೆಲ್ಲವೂ ಪರಿಪಕ್ವವಾದನಂತರ ಜಿತೇಂದ್ರಿಯನಾದ ಗೃಹಸ್ಥನು ಸರ್ವತ್ರ ಸಿದ್ಧಿಯನ್ನು ಪಡೆಯುತ್ತಾನೆ.

ಪ್ರಜಾವಾನ್ಶ್ರೋತ್ರಿಯೋ ಯಜ್ವಾ ಮುಕ್ತ ಏವ ಋಣೈಸ್ತ್ರಿಭಿಃ ।
ಅಥಾನ್ಯಾನಾಶ್ರಮಾನ್ಪಶ್ಚಾತ್ಪೂತೋ ಗಚ್ಛೇತ ಕರ್ಮಭಿಃ ॥೭॥

ಗೃಹಸ್ಥನು ಸಂತಾನವನ್ನು ಪಡೆದು ಪಿತೃಋಣದಿಂದಲೂ, ವೇದಗಳ ಅಧ್ಯಯನವನ್ನು ಮಾಡಿ ಋಷಿಋಣದಿಂದಲೂ, ಯಜ್ಞಗಳನ್ನು ಮಾಡಿ ದೇವಋಣದಿಂದಲೂ ಮುಕ್ತನಾಗುತ್ತಾನೆ. ಹೀಗೆ ಮೂರು ಋಣ ಗಳಿಂದಲೂ ಮುಕ್ತನಾಗಿ ವಿಹಿತವಾದ ಕರ್ಮಗಳನ್ನು ಮಾಡಿ ಪರಿಶುದ್ಧನಾಗಿ ಮುಂದೆ ವಾನಪ್ರಸ್ಥ ಮತ್ತು ನಾಲ್ಕು ಬಗೆಯ ಸಂನ್ಯಾಸಾಶ್ರಮಗಳನ್ನು ಸ್ವೀಕರಿಸಬಹುದು.

ಯತ್ಪೃಥಿವ್ಯಾಂ ಪುಣ್ಯತಮಂ ವಿದ್ಯಾತ್ಸ್ಥಾನಂ ತದಾವಸೇತ್ ।
ಯತೇತ ತಸ್ಮಿನ್ಪ್ರಾಮಾಣ್ಯಂ ಗನ್ತುಂ ಯಶಸಿ ಚೋತ್ತಮೇ ॥೮॥

ಈ ಪೃಥ್ವಿಯಲ್ಲಿ ಯಾವ ಸ್ಥಳವು ಪುಣ್ಯತಮವೂ, ಉತ್ತಮವೂ ಆಗಿರುವುದೋ–ಅಲ್ಲಿಯೇ ವಾಸಮಾಡಬೇಕು. ಅಲ್ಲಿಯೇ ಇದ್ದುಕೊಂಡು ಸರ್ವಶ್ರೇಷ್ಠವಾದ ಯಶಸ್ಸಿನ ವಿಷಯದಲ್ಲಿ ತಾನು ಆದರ್ಶಪುರುಷನಾಗಲು ಪ್ರಯತ್ನಿಸಬೇಕು.

ತಪಸಾ ವಾ ಸುಮಹತಾ ವಿದ್ಯಾನಾಂ ಪಾರಣೇನ ವಾ ।
ಇಜ್ಯಯಾ ವಾ ಪ್ರದಾನೈರ್ವಾ ವಿಪ್ರಾಣಾಂ ವರ್ಧತೇ ಯಶಃ ॥೯॥

ಯಾವದಸ್ಯ ಭವತ್ಯಸ್ಮಿನ್ಕೀರ್ತಿರ್ಲೋಕೇ ಯಶಸ್ಕರೀ ।
ತಾವತ್ಪುಣ್ಯಕೃತಾಂ ಲೋಕಾನನನ್ತಾನ್ಪುರುಷೋಽಶ್ನುತೇ ॥೧೦॥

ಮಹತ್ತಾದ ತಪಸ್ಸನ್ನು ಮಾಡಿಯಾದರೂ ಆದರ್ಶಪುರುಷನಾಗಬೇಕು. ವಿದ್ಯಾಪಾಂಡಿತ್ಯದಲ್ಲಾದರೂ ಆದರ್ಶಪುರುಷನಾಗಬೇಕು. ಯಜ್ಞ ಮಾಡುವುದರಲ್ಲಾದರೂ ಆದರ್ಶಪುರುಷನಾಗಬೇಕು. ಯಥೇಚ್ಛವಾಗಿ ದಾನಕೊಡುವುದರಲ್ಲಾದರೂ ಆದರ್ಶಪುರುಷನಾಗಬೇಕು. ತಪಸ್ಸು, ವಿದ್ಯೆ, ಯಜ್ಞ, ದಾನ ಇವುಗಳಿಂದ ಬ್ರಾಹ್ಮಣನ ಯಶಸ್ಸು ಹೆಚ್ಚುತ್ತದೆ. ಅವನ ಯಶಸ್ಕರವಾದ ಕೀರ್ತಿಯು ಎಲ್ಲಿಯವರೆಗೆ ಈ ಲೋಕದಲ್ಲಿ ಮೊಳಗು ತ್ತಿರುವುದೋ–ಅಲ್ಲಿಯವರೆಗೂ ಅವನು ಪುಣ್ಯವಂತರು ಅನುಭವಿಸುವ ಅನಂತಾನಂತವಾದ ಲೋಕಗಳಲ್ಲಿ ವಾಸಮಾಡುತ್ತಾ ದಿವ್ಯವಾದ ಸುಖ ಗಳನ್ನು ಉಪಭೋಗಿಸುತ್ತಿರುತ್ತಾನೆ.

ಅಧ್ಯಾಪಯೇದಧೀಯಿತ ಯಾಜಯೇತ ಯಜೇತ ವಾ ।
ನ ವೃಥಾ ಪ್ರತಿಗೃಹ್ಣೀಯಾನ್ನ ಚ ದದ್ಯಾತ್ಕಥಂಚನ ॥೧೧॥

ಬ್ರಾಹ್ಮಣನು ಅಧ್ಯಯನಮಾಡುವುದು, ಬೇರೆಯವರಿಗೆ ಅಧ್ಯಯನ ವನ್ನು ಮಾಡಿಸುವುದು, ಯಜ್ಞಮಾಡುವುದು, ಬೇರೆಯವರಿಂದ ಯಜ್ಞವನ್ನು ಮಾಡಿಸುವುದು, ದಾನಮಾಡುವುದು, ದಾನವನ್ನು ತೆಗೆದುಕೊಳ್ಳುವುದು–ಈ ಆರು ಕರ್ಮಗಳಲ್ಲಿ ನಿರತನಾಗಿರಬೇಕು. ಆದರೆ ಅನುಚಿತವಾದ ರೀತಿಯಲ್ಲಿ ದಾನವನ್ನು ತೆಗೆದುಕೊಳ್ಳಲೂಬಾರದು ; ದಾನಮಾಡಲೂ ಬಾರದು.

ಯಾಜ್ಯತಃ ಶಿಷ್ಯತೋ ವಾಪಿ ಕನ್ಯಾಯಾ ವಾ ಧನಂ ಮಹತ್ ।
ಯದಾಗಚ್ಛೇದ್ಯಜೇದ್ದದ್ಯಾನ್ನೈಕೋಽಶ್ನೀಯಾತ್ಕಥಂಚನ ॥೧೨॥

ಯಜ್ಞಮಾಡಿದಾಗ ಯಜಮಾನನಿಂದ, ವಿದ್ಯಾಭ್ಯಾಸಮಾಡಿಸಿದಾಗ ಶಿಷ್ಯನಿಂದ ಅಥವಾ ಕನ್ಯಾನಿಮಿತ್ತವಾದ ದಕ್ಷಿಣೆಯಿಂದ ಮಹಾಧನವು ಪ್ರಾಪ್ತವಾದರೆ–ಆ ಧನದ ಮೂಲಕವಾಗಿ ಯಾಗಮಾಡಬೇಕು. ದಾನಕೊಡ ಬೇಕು. ಅಂತಹ ಧನವನ್ನು ತಾನೊಬ್ಬನೇ ಯಾವುದೇ ಕಾರಣದಿಂದಲೂ ಉಪಭೋಗಿಸಬಾರದು.

ಗೃಹಮಾವಸತೋ ಹ್ಯಸ್ಯ ನಾನ್ಯತ್ತೀರ್ಥಂ ಪ್ರತಿಗ್ರಹಾತ್ ।
ದೇವರ್ಷಿಪಿತೃಗುರ್ವರ್ಥಂ ವೃದ್ಧಾತುರಬುಭುಕ್ಷತಾಮ್ ॥೧೩॥

ದೇವತೆಗಳ, ಋಷಿಗಳ, ಪಿತೃಗಳ ಮತ್ತು ಗುರುಗಳ ಸೇವೆಗಾಗಿಯೂ–ವೃದ್ಧರಾದವರಿಗೆ, ರೋಗಿಗಳಿಗೆ ಮತ್ತು ಹಸಿದಿರುವವರಿಗೆ ಭೋಜನಮಾಡಿಸುವ ಸಲುವಾಗಿಯೂ–ಗೃಹಸ್ಥಾಶ್ರಮಿಯಾದ ಬ್ರಾಹ್ಮಣನಿಗೆ ಧನವನ್ನು ಸಂಗ್ರಹಿಸಲು ದಾನವನ್ನು ಪ್ರತಿಗ್ರಹಮಾಡುವುದರ ಹೊರತಾಗಿ ಪವಿತ್ರವಾದ ಬೇರೆ ಮಾರ್ಗವೇ ಇಲ್ಲ.

ಅನ್ತರ್ಹಿತಾಧಿತಪ್ತಾನಾಂ ಯಥಾಶಕ್ತಿ ಬುಭೂಷತಾಮ್ ।
ದೇವಾನಾಮತಿಶಕ್ತ್ಯಾಪಿ ದೇಯಮೇಷಾಂ ಕೃತಾದಪಿ ॥೧೪॥

ಅರ್ಹತಾಮನುರೂಪಾಣಾಂ ನಾದೇಯಂ ಹ್ಯಸ್ತಿ ಕಿಂಚನ ।
ಉಚ್ಚೈಃಶ್ರವಸಮಪ್ಯಶ್ವಂ ಪ್ರಾಪಣೀಯಂ ಸತಾಂ ವಿದುಃ ॥೧೫॥

ದರಿದ್ರರಾಗಿ ತಮ್ಮ ದಾರಿದ್ರ್ಯವನ್ನು ಸಂಕೋಚದಿಂದ ವ್ಯಕ್ತಪಡಿಸದೇ ಇರುವ ಅರ್ಥಿಗಳಾದ ಶ್ರೋತ್ರಿಯರಿಗೆ ಸಂಪಾದಿಸಿದ ಹಣದಲ್ಲಿ ಶಕ್ತಿಮೀರಿಯಾದರೂ ದಾನಮಾಡಬೇಕು. ಪರಮಪೂಜ್ಯರಾದ ಅವರಿಗೆ ಕೊಡಬಾರದೆಂಬ ವಸ್ತುವೇ ಪ್ರಪಂಚದಲ್ಲಿರುವುದಿಲ್ಲ. ಸತ್ಪಾತ್ರರಿಗೆ ಇಂದ್ರನ ಉಚ್ಚೈಃಶ್ರವಸ್ಸೆಂಬ ಕುದುರೆಯನ್ನಾದರೂ ದಾನವಾಗಿ ಕೊಡಬಹುದೆಂಬುದು ಸತ್ಪುರುಷರ ಅಭಿಮತವಾಗಿದೆ.

ಅನುನೀಯ ಯಥಾಕಾಮಂ ಸತ್ಯಸಂಧೋ ಮಹಾವ್ರತಃ ।
ಸ್ವೈಃ ಪ್ರಾಣೈರ್ಬ್ರಾಹ್ಮಣಪ್ರಾಣಾನ್ಪರಿತ್ರಾಯ ದಿವಂ ಗತಃ ॥೧೬॥

ಮಹಾವ್ರತನಾದ ಸತ್ಯಸಂಧರಾಜನು (ಬ್ರಾಹ್ಮಣನನ್ನು) ಸಮಾಧಾನಗೊಳಿಸಿ ಸ್ವೇಚ್ಛೆಯಿಂದಲೇ ತನ್ನ ಪ್ರಾಣಗಳನ್ನಿತ್ತು ಬ್ರಾಹ್ಮಣನೊಬ್ಬನ ಪ್ರಾಣವನ್ನು ರಕ್ಷಿಸಿ ಸ್ವರ್ಗಲೋಕವನ್ನು ಪಡೆದುಕೊಂಡನು.

ರನ್ತಿದೇವಶ್ಚ ಸಾಂಕೃತ್ಯೋ ವಸಿಷ್ಠಾಯ ಮಹಾತ್ಮನೇ ।
ಅಪಃ ಪ್ರದಾಯ ಶೀತೋಷ್ಣಾ ನಾಕಪೃಷ್ಠೇ ಮಹೀಯತೇ ॥೧೭॥

ಸಂಕೃತಿಯ ಮಗನಾದ ರಂತಿದೇವನು ಮಹಾತ್ಮರಾದ ವಸಿಷ್ಠರಿಗೆ

ಶೀತೋಷ್ಣಜಲಪ್ರದಾನಮಾಡಿ ತತ್ಫಲವಾಗಿ ಸ್ವರ್ಗಲೋಕದಲ್ಲಿ ಅಗ್ಗಳಿಕೆಯನ್ನು ಹೊಂದಿದ್ದಾನೆ.

ಆತ್ರೇಯಶ್ಚೇನ್ದ್ರದಮನೋ ಹ್ಯರ್ಹತೇ ವಿವಿಧಂ ಧನಮ್ ।
ದತ್ತ್ವಾ ಲೋಕಾನ್ಯಯೌ ಧೀಮಾನನನ್ತಾನ್ಸ ಮಹೀಪತಿಃ ॥೧೮॥

ಅತ್ರಿವಂಶಜನಾದ ಬುದ್ಧಿವಂತನಾದ ಇಂದ್ರದಮನರಾಜನು ಅರ್ಹನಾದೊಬ್ಬ ಬ್ರಾಹ್ಮಣನಿಗೆ ನಾನಾವಿಧವಾದ ಧನವನ್ನಿತ್ತು ಅಕ್ಷಯವಾದ ಲೋಕಗಳನ್ನು ಹೊಂದಿದನು.

ಶಿಬಿರೌಶೀನರೋಽಙ್ಗಾನಿ ಸುತಂ ಚ ಪ್ರಿಯಮೌರಸಮ್ ।
ಬ್ರಾಹ್ಮಣಾರ್ಥಮುಪಾಹೃತ್ಯ ನಾಕಪೃಷ್ಠಮಿತೋ ಗತಃ ॥೧೯॥

ಉಶೀನರನ ಮಗನಾದ ಶಿಬಿಯು ಬ್ರಾಹ್ಮಣನೊಬ್ಬನಿಗೆ ತನ್ನ ಶರೀರವನ್ನೂ ಮತ್ತು ಪ್ರಿಯನಾದ ತನ್ನ ಔರಸಪುತ್ರನನ್ನೂ ದಾನವಾಗಿ ಕೊಟ್ಟು ಅದರ ಫಲವಾಗಿ ಸ್ವರ್ಗಕ್ಕೆ ಹೋದನು.

ಪ್ರತರ್ದನಃ ಕಾಶಿಪತಿಃ ಪ್ರದಾಯ ನಯನೇ ಸ್ವಕೇ ।
ಬ್ರಾಹ್ಮಣಾಯಾತುಲಾಂ ಕೀರ್ತಿಮಿಹ ಚಾಮುತ್ರ ಚಾಶ್ನುತೇ ॥೨೦॥

ಕಾಶಿಯ ರಾಜನಾದ ಪ್ರತರ್ದನನು ಬ್ರಾಹ್ಮಣನೊಬ್ಬನಿಗೆ ತನ್ನೆರಡು ಕಣ್ಣುಗಳನ್ನೇ ದಾನಮಾಡಿ ಈ ಲೋಕದಲ್ಲಿಯೂ–ಪರಲೋಕದಲ್ಲಿಯೂ ಅತುಲವಾದ ಕೀರ್ತಿಯನ್ನು ಪಡೆದುಕೊಂಡನು.

ದಿವ್ಯಮಷ್ಟಶಲಾಕಂ ತು ಸೌವರ್ಣಂ ಪರಮರ್ಧಿಮತ್ ।
ಛತ್ರಂ ದೇವಾವೃಧೋ ದತ್ತ್ವಾ ಸರಾಷ್ಟ್ರೋಽಭ್ಯಪತದ್ದಿವಮ್ ॥೨೧॥

ದೇವಾವೃಧನೆಂಬ ರಾಜನು ಎಂಟು ಶಲಾಕೆಗಳಿಂದ (ಕಡ್ಡಿಗಳಿಂದ) ಯುಕ್ತವಾಗಿದ್ದ, ಸುವರ್ಣಮಯವಾಗಿದ್ದ, ಬಹುಮೂಲ್ಯವಾಗಿದ್ದ ಛತ್ರವನ್ನು ಬ್ರಾಹ್ಮಣನಿಗೆ ದಾನಮಾಡಿ ಅದರ ಫಲವಾಗಿ ತನ್ನ ದೇಶದ ಪ್ರಜೆಗಳ ಜೊತೆಯಲ್ಲಿ ಸ್ವರ್ಗಲೋಕಕ್ಕೆ ಹೋದನು.

ಸಾಂಕೃತಿಶ್ಚ ತಥಾತ್ರೇಯಃ ಶಿಷ್ಯೇಭ್ಯೋ ಬ್ರಹ್ಮ ನಿರ್ಗುಣಮ್ ।
ಉಪದಿಶ್ಯ ಮಹಾತೇಜಾ ಗತೋ ಲೋಕಾನನುತ್ತಮಾನ್ ॥೨೨॥

ಅತ್ರಿವಂಶದಲ್ಲಿ ಹುಟ್ಟಿದ ಮಹಾತೇಜಸ್ವಿಯಾದ ಸಾಂಕೃತಿಯು ತನ್ನ ಶಿಷ್ಯರಿಗೆ ನಿರ್ಗುಣಬ್ರಹ್ಮತತ್ತ್ವವನ್ನು ಉಪದೇಶಮಾಡಿ ಉತ್ತಮಲೋಕಗಳನ್ನು ಹೊಂದಿದನು. (ಇದು ಜ್ಞಾನದಾನ.)

ಅಮ್ಬರೀಷೋ ಗವಾಂ ದತ್ವಾ ಬ್ರಾಹ್ಮಣೇಭ್ಯಃ ಪ್ರತಾಪವಾನ್ ।
ಅರ್ಬುದಾನಿ ದಶೈಕಂ ಚ ಸರಾಷ್ಟ್ರೋಽಭ್ಯಪತದ್ದಿವಮ್ ॥೨೩॥

ಪ್ರತಾಪವಂತನಾದ ಅಂಬರೀಷನು ಬ್ರಾಹ್ಮಣರಿಗೆ ಹನ್ನೊಂದು ಅರ್ಬುದ (ನೂರ ಹತ್ತುಕೋಟಿ) ಗೋವುಗಳನ್ನು ದಾನವಾಗಿ ಕೊಟ್ಟು ತನ್ನ ಪ್ರಜೆಗಳೊಡನೆ ಸ್ವರ್ಗವನ್ನು ಸೇರಿದನು.

ಸಾವಿತ್ರೀ ಕುಣ್ಡಲೇ ದಿವ್ಯೇ ಶರೀರಂ ಜನಮೇಜಯಃ ।
ಬ್ರಾಹ್ಮಣಾರ್ಥೇ ಪರಿತ್ಯಜ್ಯ ಜಗ್ಮತುರ್ಲೋಕಮುತ್ತಮಮ್ ॥೨೪॥

ಸಾವಿತ್ರಿಯು ದಿವ್ಯವಾದ ತನ್ನೆರಡು ಕರ್ಣಕುಂಡಲಗಳನ್ನೂ ಬ್ರಾಹ್ಮಣನಿಗೆ ದಾನಮಾಡಿದಳು. ಜನಮೇಜಯನು ಬ್ರಾಹ್ಮಣನ ಸಲುವಾಗಿ ತನ್ನ ಶರೀರವನ್ನೇ ಪರಿತ್ಯಾಗಮಾಡಿದನು. ಇದರಿಂದ ಅವರಿಬ್ಬರೂ ಉತ್ತಮ ಲೋಕಗಳನ್ನು ಪಡೆದುಕೊಂಡರು.

ಸರ್ವರತ್ನಂ ವೃಷಾದರ್ಭಿರ್ಯುವನಾಶ್ವಃ ಪ್ರಿಯಾಃ ಸ್ತ್ರಿಯಃ ।
ರಮ್ಯಮಾವಸಥಂ ಚೈವ ದತ್ತ್ವಾ ಸ್ವರ್ಲೋಕಮಾಸ್ಥಿತೇ ॥೨೫॥

ವೃಷದರ್ಭಿಯ ಮಗನಾದ ಯುವನಾಶ್ವನು ತನ್ನಲ್ಲಿದ್ದ ಸರ್ವರತ್ನಗಳನ್ನೂ, ಪ್ರಿಯರಾದ ಸ್ತ್ರೀಯರನ್ನೂ, ಸುರಮ್ಯವಾದ ಮನೆಯನ್ನೂ ಬ್ರಾಹ್ಮಣರಿಗೆ ದಾನಮಾಡಿ ಅದರ ಫಲವಾಗಿ ಸ್ವರ್ಗಲೋಕವನ್ನು ಹೊಂದಿದನು.

ನಿಮೀ ರಾಷ್ಟ್ರಂ ಚ ವೈದೇಹೋ ಜಾಮದಗ್ನ್ಯೋ ವಸುನ್ಧರಾಮ್ ।
ಬ್ರಾಹ್ಮಣೇಭ್ಯೋ ದದೌ ಚಾಪಿ ಗಯಶ್ಚೋರ್ವೀಂ ಸಪತ್ತನಾಮ್ ॥

ವಿದೇಹರಾಜನಾದ ನಿಮಿಯು ತನ್ನ ರಾಜ್ಯವನ್ನೂ, ಜಮದಗ್ನಿಯ ಮಗನಾದ ಪರಶುರಾಮನೂ ಮತ್ತು ಗಯನೂ ನಗರಗಳಿಂದ ಯುಕ್ತವಾದ ಅಖಂಡಭೂಮಂಡಲವನ್ನೇ ಬ್ರಾಹ್ಮಣರಿಗೆ ದಾನಮಾಡಿದರು.

ಅವರ್ಷತಿ ಚ ಪರ್ಜನ್ಯೇ ಸರ್ವಭೂತಾನಿ ಭೂತಕೃತ್ ।
ವಸಿಷ್ಠೋ ಜೀವಯಾಮಾಸ ಪ್ರಜಾಪತಿರಿವ ಪ್ರಜಾಃ ॥೨೭॥

ಒಮ್ಮೆ ಬಹಳ ಕಾಲದವರೆಗೆ ಪರ್ಜನ್ಯನು ಮಳೆಗರೆಯದಿರಲಾಗಿ ವಸಿಷ್ಠಮಹರ್ಷಿಗಳು (ತಪೋಬಲದಿಂದ ಮಳೆಯನ್ನು ಸುರಿಸಿ) ಪ್ರಜೆಗಳನ್ನು ಸೃಷ್ಟಿಮಾಡುವ ಪ್ರಜಾಪತಿಯಂತೆ–ಎಲ್ಲ ಪ್ರಾಣಿಗಳನ್ನೂ ಬದುಕಿಸಿದರು.

ಕರನ್ಧಮಸ್ಯ ಪುತ್ರಸ್ತು ಕೃತಾತ್ಮಾ ಮರುತಸ್ತಥಾ ।
ಕನ್ಯಾಮಙ್ಗಿರಸೇ ದತ್ತ್ವಾ ದಿವಮಾಶು ಜಗಾಮ ಹ ॥೨೮॥

ಕರಂಧಮನ ಪುತ್ರನಾದ, ಪುಣ್ಯಾತ್ಮನಾದ ಮರುತ್ತನು ಅಂಗಿರಸ ಮಹರ್ಷಿಗೆ ಕನ್ಯಾದಾನವನ್ನು ಮಾಡಿ ಅದರ ಫಲವಾಗಿ ಒಡನೆಯೇ ಸ್ವರ್ಗಕ್ಕೆ ಹೋದನು.

ಬ್ರಹ್ಮದತ್ತಶ್ಚ ಪಾಞ್ಚಾಲ್ಯೋ ರಾಜಾ ಬುದ್ಧಿಮತಾಂ ವರಃ ।
ನಿಧಿಂ ಶಙ್ಖಂ ದ್ವಿಜಾಗ್ರೇಭ್ಯೋ ದತ್ತ್ವಾ ಲೋಕಾನವಾಪ್ತವಾನ್ ॥೨೯॥

ಪಾಂಚಾಲರಾಜನಾದ, ಬುದ್ಧಿವಂತರಲ್ಲಿ ಶ್ರೇಷ್ಠನಾದ ಬ್ರಹ್ಮದತ್ತನು ಉತ್ತಮರಾದ ಬ್ರಾಹ್ಮಣರಿಗೆ ಶಂಖಸಂಖ್ಯಾತವಾದ (ನೂರು ಶತಕೋಟಿ) ನಿಧಿಯನ್ನು ದಾನಮಾಡಿ ಪುಣ್ಯಲೋಕಗಳನ್ನು ಪಡೆದುಕೊಂಡನು.

ರಾಜಾ ಮಿತ್ರಸಹಶ್ಚಾಪಿ ವಸಿಷ್ಠಾಯ ಮಹಾತ್ಮನೇ ।
ಮದಯನ್ತೀಂ ಪ್ರಿಯಾಂ ದತ್ತ್ವಾ ತಯಾ ಸಹ ದಿವಂ ಗತಃ ॥೩೦॥

ಮಿತ್ರಸಹರಾಜನು ಮಹಾತ್ಮರಾದ ವಸಿಷ್ಠರಿಗೆ ತನ್ನ ಪ್ರಿಯಪತ್ನಿಯಾದ ಮದಯಂತಿಯನ್ನು (ಅವರ ಸೇವೆಗಾಗಿ) ದಾನವಾಗಿ ಕೊಟ್ಟು ಅವಸಾನಾ ನಂತರದಲ್ಲಿ ಅವಳೊಡನೆಯೇ ತಾನೂ ಸ್ವರ್ಗಕ್ಕೆ ಹೋದನು.

ಸಹಸ್ರಜಿಚ್ಚ ರಾಜರ್ಷಿಃ ಪ್ರಾಣಾನಿಷ್ಟಾನ್ಮಹಾಯಶಾಃ ।
ಬ್ರಾಹ್ಮಣಾರ್ಥಂ ಪರಿತ್ಯಜ್ಯ ಗತೋ ಲೋಕಾನನುತ್ತಮಾನ್ ॥೩೧॥

ಮಹಾಯಶೋವಂತನಾದ ರಾಜರ್ಷಿಯಾದ ಸಹಸ್ರಜಿತನು ಬ್ರಾಹ್ಮ

ಣರ ಸಲುವಾಗಿ ತನ್ನ ಪ್ರಿಯವಾದ ಪ್ರಾಣಗಳನ್ನೇ ಅರ್ಪಿಸಿ ಉತ್ತಮೋತ್ತಮವಾದ ಲೋಕಗಳಿಗೆ ಹೋದನು.

ಸರ್ವಕಾಮೈಶ್ಚ ಸಮ್ಪೂರ್ಣಂ ದತ್ತ್ವಾ ವೇಶ್ಮ ಹಿರಣ್ಮಯಮ್ ।
ಮುದ್ಗಲಾಯ ಗತಃ ಸ್ವರ್ಗಂ ಶತದ್ಯುಮ್ನೋ ಮಹೀಪತಿಃ ॥೩೨॥

ಶತದ್ಯುಮ್ನಮಹಾರಾಜನು ಸಮಸ್ತವಾದ ಭೋಗ್ಯವಸ್ತುಗಳಿಂದಲೂ ಪರಿಪೂರ್ಣವಾಗಿದ್ದ ಸುವರ್ಣಮಯವಾದ ಭವನವನ್ನು ಮುದ್ಗಲನೆಂಬ ಬ್ರಾಹ್ಮಣನಿಗೆ ದಾನಮಾಡಿ ಅದರ ಫಲವಾಗಿ ಸ್ವರ್ಗವನ್ನು ಹೊಂದಿದನು.

ನಾಮ್ನಾ ಚ ದ್ಯುತಿಮಾನ್ನಾಮ ಶಾಲ್ವರಾಜಃ ಪ್ರತಾಪವಾನ್ ।
ದತ್ತ್ವಾ ರಾಜ್ಯಮೃಚೀಕಾಯ ಗತೋ ಲೋಕಾನನುತ್ತಮಾನ್ ॥೩೩॥

'ದ್ಯುತಿಮಂತ'–ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದ ಪ್ರತಾಪವಂತನಾದ ಶಾಲ್ವರಾಜನು ಋಚೀಕನಿಗೆ ರಾಜ್ಯವನ್ನೇ ದಾನಮಾಡಿ ಅದರ ಫಲವಾಗಿ ಉತ್ತಮೋತ್ತಮವಾದ ಲೋಕಗಳನ್ನು ಹೊಂದಿದನು.

ಲೋಮಪಾದಶ್ಚ ರಾಜರ್ಷಿಃ ಶಾನ್ತಾಂ ದತ್ತ್ವಾ ಸುತಾಂ ಪ್ರಭುಃ ।
ಋಷ್ಯಶೃಙ್ಗಾಯ ವಿಪುಲೈಃ ಸರ್ವಕಾಮೈರಯುಜ್ಯತ ॥೩೪॥

ಶಕ್ತಿಶಾಲಿಯಾದ, ರಾಜರ್ಷಿಯಾದ ಲೋಮಪಾದನು ತನ್ನ ಮಗಳಾದ ಶಾಂತೆಯನ್ನು ಋಷ್ಯಶೃಂಗಮುನಿಗೆ ದಾನಮಾಡಿ ಅದರ ಫಲವಾಗಿ ಸಕಲವಿಧವಾದ ಇಷ್ಟಾರ್ಥಗಳನ್ನೂ ಪಡೆದುಕೊಂಡನು.

ಮದಿರಾಶ್ವಶ್ಚ ರಾಜರ್ಷಿರ್ದತ್ತ್ವಾ ಕನ್ಯಾಂ ಸುಮಧ್ಯಮಾಮ್ ।
ಹಿರಣ್ಯಹಸ್ತಾಯ ಗತೋ ಲೋಕಾನ್ದೇವೈರಭಿಷ್ಟುತಾನ್ ॥೩೫॥

ರಾಜರ್ಷಿಯಾದ ಮದಿರಾಶ್ವನು ಹಿರಣ್ಯಹಸ್ತನೆಂಬ ಬ್ರಾಹ್ಮಣನಿಗೆ ಸುಂದರಿಯಾದ ಕನ್ಯೆಯನ್ನು ದಾನಮಾಡಿ ದೇವತೆಗಳಿಂದಲೂ ಸಮ್ಮಾನಿತವಾದ ಪುಣ್ಯಲೋಕಗಳನ್ನು ಪಡೆದುಕೊಂಡನು.

ದತ್ತ್ವಾ ಶತಸಹಸ್ರಂ ತು ಗವಾಂ ರಾಜಾ ಪ್ರಸೇನಜಿತ್ ।
ಸವತ್ಸಾನಾಂ ಮಹಾತೇಜಾ ಗತೋ ಲೋಕಾನನುತ್ತಮಾನ್ ॥೩೬॥

ಮಹಾತೇಜಸ್ವಿಯಾದ ಪ್ರಸೇನಜಿತರಾಜನು ಒಂದು ಲಕ್ಷ ಗೋವು

ಗಳನ್ನು ಕರುಗಳೊಡನೆ ಬ್ರಾಹ್ಮಣರಿಗೆ ದಾನಮಾಡಿ ಉತ್ತಮೋತ್ತಮವಾದ ಲೋಕಗಳನ್ನು ಪಡೆದುಕೊಂಡನು.

ಏತೇ ಚಾನ್ಯೇ ಚ ಬಹವೋ ದಾನೇನ ತಪಸೈವ ಚ ।
ಮಹಾತ್ಮಾನೋ ಗತಾಃ ಸ್ವರ್ಗಂ ಶಿಷ್ಟಾತ್ಮಾನೋ ಜಿತೇನ್ದ್ರಿಯಾಃ ॥೩೭॥

ಇವರುಗಳೇ ಅಲ್ಲದೇ ಶಿಷ್ಟಾತ್ಮರಾದ, ಜಿತೇಂದ್ರಿಯರಾದ ಇನ್ನೂ ಅನೇಕ ಮಹಾತ್ಮರು ದಾನದಿಂದಲೂ – ತಪಸ್ಸಿನಿಂದಲೂ ಸ್ವರ್ಗವನ್ನು ಹೊಂದಿರುವರು.

ತೇಷಾಂ ಪ್ರತಿಷ್ಠಿತಾ ಕೀರ್ತಿರ್ಯಾವತ್ಸ್ಥಾಸ್ಯತಿ ಮೇದಿನೀ ।
ದಾನಯಜ್ಞಪ್ರಜಾಸರ್ಗೈರೇತೇ ಹಿ ದಿವಮಾಪ್ನುವನ್ ॥೩೮॥

ಎಲ್ಲಿಯವರೆಗೆ ಈ ಭೂಮಂಡಲವಿರುತ್ತದೆಯೋ–ಅಲ್ಲಿಯವರೆಗೂ ಅವರ ಕೀರ್ತಿಯು ಪ್ರಪಂಚದಲ್ಲಿ ಪ್ರತಿಷ್ಠಿತವಾಗಿರುತ್ತದೆ. ಈ ಮಹಾತ್ಮರೆಲ್ಲರೂ ದಾನ, ಯಜ್ಞ ಮತ್ತು ಸತ್ಸಂತಾನಗಳಿಂದ ಸ್ವರ್ಗವನ್ನು ಪಡೆದುಕೊಂಡಿರುವರು.”

೨೩೪ನೆಯ ಅಧ್ಯಾಯವು ಮುಗಿಯಿತು.

೨೩೫ನೆಯ ಅಧ್ಯಾಯ   ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣರ ಕರ್ತವ್ಯಗಳ ಪ್ರತಿಪಾದನೆ : ಕಾಲರೂಪವಾದ ನದವನ್ನು ದಾಟುವ ಉಪಾಯ

ಧರ್ಮಜ! ವ್ಯಾಸರು ಹೇಳುತ್ತಾರೆ :

ತ್ರಯೀಂ ವಿದ್ಯಾಮವೇಕ್ಷೇತ ವೇದೇಷೂಕ್ತಾಮಥಾಙ್ಗತಃ ।
ಋಕ್ಸಾಮವರ್ಣಾಕ್ಷರತೋ ಯಜುಷೋಽಥರ್ವಣಸ್ತಥಾ ।
ತಿಷ್ಠತ್ಯೇತೇಷು ಭಗವಾನ್ಷಟ್ಸು ಕರ್ಮಸು ಸಂಸ್ಥಿತಃ ॥೧॥

“ಮಗು! ಶುಕದೇವ! ಬ್ರಾಹ್ಮಣನಾದವನು ವೇದಗಳಲ್ಲಿ ಹೇಳಿರುವ, ಅ-ಉ-ಮ ಎಂಬ ಮೂರು ಅಕ್ಷರಗಳನ್ನೊಳಗೊಂಡ ಪ್ರಣವವಿದ್ಯೆಯನ್ನು ಉಪಾಸನೆಮಾಡಬೇಕು. ಶಿಕ್ಷಾ-ವ್ಯಾಕರಣಾದಿ ಆರು ಅಂಗಗಳೊಡನೆ ಸ್ವರ-

ವ್ಯಂಜನಸಹಿತವಾಗಿ ಋಗ್ಯಜುಸ್ಸಾಮಾಥರ್ವಣಗಳೆಂಬ ನಾಲ್ಕು ವೇದಗಳನ್ನೂ ಅಧ್ಯಯನಮಾಡಬೇಕು. ಯಜನ-ಯಾಜನ, ಅಧ್ಯಯನ-ಅಧ್ಯಾಪನ, ದಾನ-ಪ್ರತಿಗ್ರಹಗಳೆಂಬ ಬ್ರಾಹ್ಮಣನ ಆರು ಕರ್ಮಗಳಲ್ಲಿ ವಿರಾಜಮಾನನಾಗಿರುವ ಭಗವಾನ್ ಧರ್ಮನೇ ವೇದಗಳಲ್ಲಿ ಪ್ರತಿಷ್ಠಿತನಾಗಿರುತ್ತಾನೆ.

ವೇದವಾದೇಷು ಕುಶಲಾ ಹ್ಯಧ್ಯಾತ್ಮಕುಶಲಾಶ್ಚ ಯೇ ।
ಸತ್ತ್ವವನ್ತೋ ಮಹಾಭಾಗಾಃ ಪಶ್ಯನ್ತಿ ಪ್ರಭವಾಪ್ಯಯೌ ॥೨॥
ಏವಂ ಧರ್ಮೇಣ ವರ್ತೇತ ಕ್ರಿಯಾಂ ಶಿಷ್ಟವದಾಚರೇತ್ ॥೩॥

ವೇದಗಳ ಪ್ರವಚನಗಳಲ್ಲಿ ಕುಶಲರಾದ, ಅಧ್ಯಾತ್ಮಜ್ಞಾನದಲ್ಲಿಯೂ ನಿಪುಣರಾದ, ಸತ್ತ್ವಗುಣಸಂಪನ್ನರಾದ, ಮಹಾಭಾಗ್ಯಶಾಲಿಗಳಾದ ಬ್ರಾಹ್ಮಣರು ಜಗತ್ತಿನ ಸೃಷ್ಟಿ ಮತ್ತು ಲಯಗಳನ್ನು ಚೆನ್ನಾಗಿ ತಿಳಿದಿರುತ್ತಾರೆ. ಆದುದರಿಂದ ಬ್ರಾಹ್ಮಣರು ಹೀಗೆ ಧರ್ಮಾನುಕೂಲವಾಗಿ ವ್ಯವಹರಿಸುತ್ತಾ ಶಿಷ್ಟಪುರುಷರಂತೆ ಸದಾಚಾರಸಂಪನ್ನರಾಗಿಯೂ ಇರಬೇಕು.

ಅಸಂರೋಧೇನ ಭೂತಾನಾಂ ವೃತ್ತಿಂ ಲಿಪ್ಸೇತ ವೈ ದ್ವಿಜಃ ।
ಸದ್ಭ್ಯ ಆಗತವಿಜ್ಞಾನಃ ಶಿಷ್ಟಃ ಶಾಸ್ತ್ರವಿಚಕ್ಷಣಃ ॥೪॥

ಬ್ರಾಹ್ಮಣನಾದವನು ಯಾರಿಗೂ ಕಷ್ಟವಾಗದ ರೀತಿಯಲ್ಲಿ, ಯಾರ ಜೀವಿಕೆಗೂ ಪ್ರತಿಬಂಧಕವಾಗದಿರುವ ರೀತಿಯಲ್ಲಿ–ವೃತ್ತಿಯನ್ನು ಇಚ್ಛಿಸಬೇಕು. ಶಿಷ್ಟನಾಗಿ ಶಾಸ್ತ್ರಗಳಲ್ಲಿ ವಿಚಕ್ಷಣನಾಗಿ ಸತ್ಪುರುಷರ ಸೇವೆಯನ್ನು ಮಾಡುತ್ತಾ ತತ್ತ್ವಜ್ಞಾನವನ್ನು ಪಡೆದುಕೊಳ್ಳಬೇಕು.

ಸ್ವಧರ್ಮೇಣ ಕ್ರಿಯಾ ಲೋಕೇ ಕುರ್ವಾಣಃ ಸತ್ಯಸಂಗರಃ ।
ತಿಷ್ಠತೇ ತೇಷು ಗೃಹವಾನ್ಷಟ್ಸು ಕರ್ಮಸು ಸ ದ್ವಿಜಃ ॥೫॥

ಜಗತ್ತಿನಲ್ಲಿ ತನ್ನ ವರ್ಣಾಶ್ರಮಧರ್ಮಗಳಿಗೆ ಉಚಿತವಾದ ಕರ್ಮಗಳನ್ನೇ ಮಾಡುತ್ತಾ ಸತ್ಯನಿಷ್ಠನಾಗಿರಬೇಕು. ಗೃಹಸ್ಥನಾದ ಬ್ರಾಹ್ಮಣನು ಹಿಂದೆ ಹೇಳಿದ ಷಟ್ಕರ್ಮಗಳಲ್ಲಿಯೇ ನಿರತನಾಗಿರಬೇಕು.

ಪಞ್ಚಭಿಃ ಸತತಂ ಯಜ್ಞೈಃ ಶ್ರದ್ದಧಾನೋ ಯಜೇತ ಚ ।
ಧೃತಿಮಾನಪ್ರಮತ್ತಶ್ಚ ದಾನ್ತೋ ಧರ್ಮವಿದಾತ್ಮವಾನ್ ॥೬॥

ಶ್ರದ್ಧೆಯಿಂದ ಕೂಡಿದವನಾಗಿ *ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ, ಭೂತಯಜ್ಞ ಮತ್ತು ಮನುಷ್ಯಯಜ್ಞಗಳೆಂಬ ಐದು ಯಜ್ಞಗಳಿಂದ ಸತತವಾಗಿ ಪರಮಾತ್ಮನನ್ನು ಆರಾಧಿಸಬೇಕು. ಧೈರ್ಯವಂತನಾಗಿರಬೇಕು. ಕರ್ತವ್ಯಕರ್ಮಗಳನ್ನು ಮಾಡುವುದರಲ್ಲಿಯೂ–ಅಕರ್ಮಗಳನ್ನು ಬಿಡುವುದರಲ್ಲಿಯೂ ಜಾಗರೂಕನಾಗಿರಬೇಕು. ಬಹಿರಿಂದ್ರಿಯಗಳನ್ನು ನಿಗ್ರಹಿಸಬೇಕು. ಧರ್ಮವನ್ನು ತಿಳಿದವನಾಗಿರಬೇಕು. ಆತ್ಮವಂತನೂ (ಮನಸ್ಸನ್ನು ನಿಗ್ರಹಿಸಿದವನೂ) ಆಗಿರಬೇಕು.

ವೀತಹರ್ಷಮದಕ್ರೋಧೋ ಬ್ರಾಹ್ಮಣೋ ನಾವಸೀದತಿ ।
ದಾನಮಧ್ಯಯನಂ ಯಜ್ಞಸ್ತಪೋಹ್ರೀರಾರ್ಜವಂ ದಮಃ ।
ಏತೈರ್ವರ್ಧಯತೇ ತೇಜಃ ಪಾಪ್ಮಾನಂ ಚಾಪಕರ್ಷತಿ ॥೭॥

ಹರ್ಷ-ಮದ-ಕ್ರೋಧಗಳಿಂದ ರಹಿತನಾಗಿರುವ ಬ್ರಾಹ್ಮಣನು ಯಾವುದೇ ಕಾರಣದಿಂದಲೂ ವಿನಾಶಹೊಂದುವುದಿಲ್ಲ. ದಾನ, ವೇದಾಧ್ಯಯನ, ಯಜ್ಞ, ತಪಸ್ಸು ಲಜ್ಜೆ, ಸರಳತೆ, ಇಂದ್ರಿಯಸಂಯಮ–ಈ ಸದ್ಗುಣಗಳಿಂದ ಬ್ರಾಹ್ಮಣನು ತನ್ನ ತೇಜಸ್ಸನ್ನು ಹೆಚ್ಚಿಸಿಕೊಳ್ಳುತ್ತಾನೆ ಮತ್ತು ತನ್ನಲ್ಲಿರಬಹುದಾದ ಪಾಪಗಳನ್ನೂ ನಾಶಗೊಳಿಸುತ್ತಾನೆ.

ಧೂತಪಾಪ್ಮಾ ಚ ಮೇಧಾವೀ ಲಘ್ವಾಹಾರೋ ಜಿತೇನ್ದ್ರಿಯಃ ।
ಕಾಮಕ್ರೋಧೌ ವಶೇ ಕೃತ್ವಾ ನಿನೀಷೇದ್ಬ್ರಹ್ಮಣಃ ಪದಮ್ ॥೮॥

ಬುದ್ಧಿವಂತನಾದ ಬ್ರಾಹ್ಮಣನು ಹೀಗೆ ದಾನಾಧ್ಯಯನಾದಿಗಳಿಂದ ಪಾಪವನ್ನು ಕಳೆದುಕೊಂಡು ಅಲ್ಪಾಹಾರನಾಗಿ, ಇಂದ್ರಿಯಗಳನ್ನು ಜಯಿಸಿ ಕಾಮ-ಕ್ರೋಧಗಳನ್ನು ವಶಪಡಿಸಿಕೊಂಡು ಬ್ರಹ್ಮಪದವನ್ನು ಪಡೆಯಲು ಇಚ್ಛೆಯುಳ್ಳವನಾಗಬೇಕು.

---

* ಅಧ್ಯಾಪನಂ ಬ್ರಹ್ಮಯಜ್ಞಃ ಪಿತೃಯಜ್ಞಸ್ತು ತರ್ಪಣಮ್ । ಹೋಮೋ ದೈವೋ ಬಲಿರ್ಭೌತೋ ನೃಯಜ್ಞೋಽತಿಥಿಪೂಜನಮ್ ॥ [ಮನು ೩-೭೦] ವೇದಗಳನ್ನು ಹೇಳುವುದು ಬ್ರಹ್ಮಯಜ್ಞ, ತರ್ಪಣಕೊಡುವುದು ಪಿತೃಯಜ್ಞ, ಹೋಮಮಾಡುವುದು ದೇವಯಜ್ಞ, ವೈಶ್ವದೇವಬಲಿಯನ್ನು ಕೊಡುವುದು ಭೂತಯಜ್ಞ, ಅತಿಥಿಸತ್ಕಾರವು ಮನುಷ್ಯಯಜ್ಞ.

ಅಗ್ನೀಂಶ್ಚ ಬ್ರಾಹ್ಮಣಾಂಶ್ಚಾರ್ಚೇದ್ದೇವತಾಃ ಪ್ರಣಮೇತ ಚ ॥೯॥

ವರ್ಜಯೇದುಶತೀಂ ವಾಚಂ ಹಿಂಸಾಂ ಚಾಧರ್ಮಸಂಹಿತಾಮ್ ।
ಏಷಾ ಪೂರ್ವಗತಾ ವೃತ್ತಿರ್ಬ್ರಾಹ್ಮಣಸ್ಯ ವಿಧೀಯತೇ ॥೧೦॥

ಬ್ರಾಹ್ಮಣನು ಅನುದಿನವೂ ಅಗ್ನಿಗಳನ್ನೂ, ಬ್ರಾಹ್ಮಣರನ್ನೂ, ದೇವತೆಗಳನ್ನೂ ಆರಾಧಿಸಿ ನಮಸ್ಕರಿಸಬೇಕು. ಅಶುಭವಾದ ಮಾತನ್ನು ವರ್ಜಿಸಬೇಕು. ಅಧರ್ಮಯುಕ್ತವಾದ ಹಿಂಸೆಯನ್ನು ವರ್ಜಿಸಬೇಕು. ಪರಂಪರಾಗತವಾದ ಈ ಕರ್ತವ್ಯನಿರ್ವಹಣೆಯು ಬ್ರಾಹ್ಮಣನಿಗೆ ವಿಧಿಸಲ್ಪಟ್ಟಿದೆ.

ಜ್ಞಾನಾಗಮೇನ ಕರ್ಮಾಣಿ ಕುರ್ವನ್ಕರ್ಮಸು ಸಿಧ್ಯತಿ ।
ಪಞ್ಚೇನ್ದ್ರಿಯಜಲಾಂ ಘೋರಾಂ ಲೋಭಕೂಲಾಂ
ಸುದುಸ್ತರಾಮ್ ॥೧೧॥

ಮನ್ಯುಪಙ್ಕಾಮನಾಧೃಷ್ಯಾಂ ನದೀಂ ತರತಿ ಬುದ್ಧಿಮಾನ್ ।
ಕಾಲಮಭ್ಯುದ್ಯತಂ ಪಶ್ಯೇನ್ನಿತ್ಯಮತ್ಯನ್ತಮೋಹನಮ್ ॥೧೨॥

ಕರ್ಮಗಳ ತತ್ತ್ವವನ್ನು ತಿಳಿದು ಅವುಗಳನ್ನು ಅನುಷ್ಠಾನಮಾಡುವುದರಿಂದ ಬ್ರಾಹ್ಮಣನು ಆ ಕರ್ಮಗಳಲ್ಲಿ ಸಿದ್ಧಿಯನ್ನು ಪಡೆಯುತ್ತಾನೆ. ಸಂಸಾರವು ಒಂದು ಭಯಂಕರವಾದ ನದಿಗೆ ಸಮಾನವಾಗಿದೆ. ಐದು ಜ್ಞಾನೇಂದ್ರಿಯಗಳೇ ಆ ನದಿಯ ನೀರು. ಲೋಭವೇ ಎರಡು ತೀರಪ್ರದೇಶಗಳು. ಕೋಪವೇ ಆ ಭಯಂಕರನದಿಯ ಕೆಸರು. ಇಂತಹ ಸಂಸಾರರೂಪವಾದ ನದಿಯು ಸಾಮಾನ್ಯರಿಂದ ದಾಟಲು ಅಸಾಧ್ಯವಾಗಿರುತ್ತದೆ. ಬುದ್ಧಿವಂತನಾದವನು ಮಾತ್ರವೇ ಈ ನದಿಯನ್ನು ಸುಲಭವಾಗಿ ದಾಟಬಲ್ಲನು. ಪ್ರಾಣಿಗಳನ್ನು ಬಹಳವಾಗಿ ವಿಮೋಹಗೊಳಿಸುವ ಕಾಲವು ಆಕ್ರಮಿಸಲು ಯಾವಾಗಲೂ ಸಿದ್ಧವಾಗಿರುವುದೆಂಬುದನ್ನು ಬ್ರಾಹ್ಮಣನು ಲಕ್ಷ್ಯದಲ್ಲಿಟ್ಟುಕೊಂಡಿರಬೇಕು.

ಮಹತಾ ವಿಧಿದೃಷ್ಟೇನ ಬಲೇನಾಪ್ರತಿಘಾತಿನಾ ।
ಸ್ವಭಾವಸ್ರೋತಸಾ ವೃತ್ತಮುಹ್ಯತೇ ಸತತಂ ಜಗತ್ ॥೧೩॥

ಎದುರಿಸಲು ಅಸಾಧ್ಯನಾಗಿ, ಮಹಾಬಲಶಾಲಿಯಾಗಿ, ವಿಧಿಯಂತೆ

ಕಾಣಿಸಿಕೊಳ್ಳುತ್ತಾ ಹರಿಯುವ ಸ್ವಭಾವದಿಂದ ಕೂಡಿರುವ ಕಾಲನು ಈ ಜಗತ್ತನ್ನು ಸತತವಾಗಿ ಒಯ್ಯುತ್ತಿರುತ್ತಾನೆ.

ಕಾಲೋದಕೇನ ಮಹತಾ ವರ್ಷಾವರ್ತೇನ ಸಂತತಮ್ ।
ಮಾಸೋರ್ಮಿಣರ್ತುವೇಗೇನ ಪಕ್ಷೋಲಪತೃಣೇನ ಚ ॥೧೪॥

ನಿಮೇಷೋನ್ಮೇಷಫೇನೇನ ಅಹೋರಾತ್ರಜಲೇನ ಚ ।
ಕಾಮಗ್ರಾಹೇಣ ಘೋರೇಣ ವೇದಯಜ್ಞಪ್ಲವೇನ ಚ ॥೧೫॥

ಧರ್ಮದ್ವೀಪೇನ ಭೂತಾನಾಂ ಚಾರ್ಥಕಾಮಜಲೇನ ಚ ।
ಋತವಾಙ್ಮೋಕ್ಷತೀರೇಣ ವಿಹಿಂಸಾತರುವಾಹಿನಾ ॥೧೬॥

ಯುಗಹ್ರದೌಘಮಧ್ಯೇನ ಬ್ರಹ್ಮಪ್ರಾಯಭವೇನ ಚ ।
ಧಾತ್ರಾ ಸೃಷ್ಟಾನಿ ಭೂತಾನಿ ಕೃಷ್ಯಂತೇ ಯಮಸಾದನಮ್ ॥೧೭॥

ಕಾಲರೂಪಿಯಾದ ಮಹಾನದವು–ಸಂವತ್ಸರವೆಂಬ ಸುಳಿಯಿಂದ ಸದಾಕಾಲವೂ ಕೂಡಿರುತ್ತದೆ. ಮಾಸಗಳು ಕಾಲನದದ ದೊಡ್ಡ-ದೊಡ್ಡ ಅಲೆಗಳಾಗಿವೆ. ಋತುಗಳು ವೇಗವಾಗಿದೆ. ಪಕ್ಷಗಳು ನದದ ತೀರದಲ್ಲಿ ಬೆಳೆಯುವ ಪೊದೆ ಮತ್ತು ಗರಿಕೆಗಳಾಗಿವೆ. ನಿಮೇಷ ಮತ್ತು ಉನ್ಮೇಷಗಳು (ಕಣ್ಣುಗಳು ಮುಚ್ಚುವ ಮತ್ತು ತೆರೆಯುವ ಕಾಲ) ಅದರ ನೊರೆಗಳಾಗಿವೆ. ಹಗಲು ಮತ್ತು ರಾತ್ರಿಗಳು ಅದರ ನೀರಾಗಿವೆ. ಕಾಮವು ಅದರ ಘೋರ ವಾದ ಮೊಸಳೆಯಾಗಿದೆ. ವೇದ ಮತ್ತು ಯಜ್ಞಗಳು ಅಲ್ಲಿ ದೋಣಿಗಳ ರೂಪದಲ್ಲಿವೆ. ಧರ್ಮವು ಪ್ರಾಣಿಗಳಿಗೆ ಆಶ್ರಯಭೂತವಾದ ದ್ವೀಪವಾಗಿ ಆ ಕಾಲನದದಲ್ಲಿದೆ. ಅರ್ಥ ಮತ್ತು ಕಾಮಗಳು ಜಲರೂಪದಲ್ಲಿವೆ. ಸತ್ಯ ಭಾಷಣವೂ ಮತ್ತು ಮೋಕ್ಷವೂ ಅದರ ಎರಡು ದಡಗಳಾಗಿವೆ. ಹಿಂಸಾ ರೂಪವಾದ ವೃಕ್ಷವು ಆ ಕಾಲನದದ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿದೆ. ಯುಗಗಳು ಸರೋವರದ ಮಧ್ಯಭಾಗದಲ್ಲಿರುವ ಮಡುಗಳಾಗಿವೆ. ಬ್ರಹ್ಮ ರೂಪವಾದ ಪರ್ವತದಿಂದ ಆ ಕಾಲನದವು ಹುಟ್ಟಿಹರಿಯುತ್ತಿದೆ. ಬ್ರಹ್ಮನು ಸೃಷ್ಟಿಸಿದ ಎಲ್ಲ ಪ್ರಾಣಿಗಳೂ ಆ ಕಾಲನದದಲ್ಲಿ ಬಿದ್ದು ಯಮನ ಲೋಕದ ಕಡೆಗೆ ಸೆಳೆಯಲ್ಪಡುತ್ತವೆ.

ಏತತ್ಪ್ರಜ್ಞಾಮಯೈರ್ಧೀರಾ ನಿಸ್ತರನ್ತಿ ಮನೀಷಿಣಃ ।
ಪ್ಲವೈರಪ್ಲವವನ್ತೋ ಹಿ ಕಿಂ ಕರಿಷ್ಯನ್ತ್ಯಚೇತಸಃ ॥೧೮॥

ಬುದ್ಧಿವಂತರಾದ ಮತ್ತು ಧೀರರಾದ ಮನುಷ್ಯರು ಪ್ರಜ್ಞಾರೂಪವಾದ ನೌಕೆಗಳ ಮೂಲಕವಾಗಿ ಆ ಕಾಲನದವನ್ನು ದಾಟುತ್ತಾರೆ. ಅಂತಹ ಪ್ರಜ್ಞಾ ನೌಕೆಯಿಲ್ಲದ ಅಜ್ಞಾನಿಗಳು ಏನು ಮಾಡಬಲ್ಲರು? ಕಾಲನದದ ಪ್ರವಾಹದಲ್ಲಿ ಕೊಚ್ಚಿಹೋಗುತ್ತಾರೆ.

ಉಪಪನ್ನಂ ಹಿ ಯತ್ಪ್ರಾಜ್ಞೋ ನಿಸ್ತರೇನ್ನೇತರೋ ಜನಃ ।
ದೂರತೋ ಗುಣದೋಷೌ ಹಿ ಪ್ರಾಜ್ಞಃ ಸರ್ವತ್ರ ಪಶ್ಯತಿ ॥೧೯॥

ಪ್ರಾಜ್ಞನು ಕಾಲನದವನ್ನು ಪ್ರಜ್ಞಾನೌಕೆಯಿಂದ ದಾಟುವನೆಂಬುದೂ–ಅಜ್ಞನು ದಾಟಲಾರನೆಂಬುದೂ ಯುಕ್ತಿಸಂಗತವಾಗಿಯೇ ಇದೆ. ಏಕೆಂದರೆ : ಪ್ರಾಜ್ಞನು ಎಲ್ಲ ಕಡೆಗಳಲ್ಲಿಯೂ ಇರುವ ಗುಣ-ದೋಷಗಳನ್ನು ದೂರ ದಿಂದಲೇ ವಿವೇಚಿಸುತ್ತಾನೆ.

ಸಂಶಯಂ ಸ ತು ಕಾಮಾತ್ಮಾ ಚಲಚಿತ್ತೋಽಲ್ಪಚೇತನಃ ।
ಅಪ್ರಾಜ್ಞೋ ನ ತರತ್ಯೇನಂ ಯೋ ಹ್ಯಾಸ್ತೇ ನ ಸ ಗಚ್ಛತಿ ॥೨೦॥

ಪ್ರಾಜ್ಞನಲ್ಲದವನು ಕಾಮಾಸಕ್ತನಾಗಿರುತ್ತಾನೆ. ಚಂಚಲಚಿತ್ತನಾಗಿರು ತ್ತಾನೆ. ಅಲ್ಪಬುದ್ಧಿಯವನಾಗಿರುತ್ತಾನೆ. ಯಾವಾಗಲೂ ಸಂದೇಹದಲ್ಲಿಯೇ ಮುಳುಗಿಹೋಗಿರುತ್ತಾನೆ. ಆದುದರಿಂದ ಕಾಲನದವನ್ನು ಅವನಿಂದ ದಾಟಲು ಸಾಧ್ಯವೇ ಆಗುವುದಿಲ್ಲ. ಯಾವನು ಪ್ರಯತ್ನವನ್ನೇ ಮಾಡದೆ ನಿಶ್ಚೇಷ್ಟನಾಗಿರುವನೋ–ಅಂತಹವನೂ ಕಾಲನದವನ್ನು ದಾಟಲಾರನು. (ಕುಳಿತಿರುವವನು ನಡೆಯಲಾರನು.)

ಅಪ್ಲವೋ ಹಿ ಮಹಾದೋಷಂ ಮುಹ್ಯಮಾನೋಽಧಿಗಚ್ಛತಿ ।
ಕಾಮಗ್ರಾಹಗೃಹೀತಸ್ಯ ಜ್ಞಾನಮಪ್ಯಸ್ಯ ನ ಪ್ಲವಃ ॥೨೧॥

ಆ ಜ್ಞಾನಮಯವಾದ ನೌಕೆಯಿಲ್ಲದವನು ವಿಮೋಹಗೊಂಡು ಮಹಾದೋಷವನ್ನು ಹೊಂದುತ್ತಾನೆ. ಕಾಮವೆಂಬ ಮೊಸಳೆಯಿಂದ ಹಿಡಿಯಲ್ಪಟ್ಟವನಿಗೆ ಜ್ಞಾನವೂ ನೌಕೆಯಾಗುವುದಿಲ್ಲ. (ಶಾಸ್ತ್ರಗಳ ತಿಳಿವಳಿಕೆ

ಯಿದ್ದೂ ಕಾಮಾಸಕ್ತನಾಗಿದ್ದರೆ ಅಂತಹವನನ್ನು ಶಾಸ್ತ್ರವೂ ಉದ್ಧರಿಸುವುದಿಲ್ಲ.)

ತಸ್ಮಾದುನ್ಮಜ್ಜನಸ್ಯಾರ್ಥೇ ಪ್ರಯತೇತ ವಿಚಕ್ಷಣಃ ।
ಏತದುನ್ಮಜ್ಜನಂ ತಸ್ಯ ಯದಯಂ ಬ್ರಾಹ್ಮಣೋ ಭವೇತ್ ॥೨೨॥

ಆದುದರಿಂದ ಬುದ್ಧಿವಂತನಾದ ಮನುಷ್ಯನು ಕಾಲವೆಂಬ ನದವನ್ನು ಅಥವಾ ಸಂಸಾರಸಾಗರವನ್ನು ದಾಟಲು ಸತತವಾಗಿ ಪ್ರಯತ್ನಿಸಬೇಕು. ಕಾಲನದದಿಂದ ಪಾರಾಗುವುದೆಂದರೆ ಅವನು ವಾಸ್ತವವಾಗಿ ಬ್ರಾಹ್ಮಣನಾಗಬೇಕು ಅರ್ಥಾತ್ ಬ್ರಹ್ಮಜ್ಞಾನವನ್ನು ಪಡೆದಿರಬೇಕು.

ಅವದಾತೇಷು ಸಂಜಾತಸ್ತ್ರಿಸಂದೇಹಸ್ತ್ರಿಕರ್ಮಕೃತ್ ।
ತಸ್ಮಾದುನ್ಮಜ್ಜನೇ ತಿಷ್ಠೇತ್ಪ್ರಜ್ಞಯಾ ನಿಸ್ತರೇದ್ಯಥಾ ॥೨೩॥

ಉತ್ತಮವಾದ ಕುಲದಲ್ಲಿ ಹುಟ್ಟಿದವನು ಅಧ್ಯಾಪನ, ಯಾಜನ ಮತ್ತು ಪ್ರತಿಗ್ರಹಗಳನ್ನು ಸಂಶಯದೃಷ್ಟಿಯಿಂದಲೇ ನೋಡಬೇಕು. (ಈ ಮೂರು ಕರ್ಮಗಳಲ್ಲಿ ವಿಚಾರಮಾಡದೇ ಆಸಕ್ತನಾಗಬಾರದು.) ಅಧ್ಯಯನ, ಯಜನ ಮತ್ತು ದಾನ–ಈ ಮೂರು ಕರ್ಮಗಳನ್ನು ಅವಶ್ಯವಾಗಿ ಮಾಡಲೇಬೇಕು. ಹೇಗಾದರೂ ಮಾಡಿ ಪ್ರಜ್ಞೆಯ ಮೂಲಕವಾಗಿ ಆತ್ಮೋದ್ಧಾರಕ್ಕೆ ಪ್ರಯತ್ನ ಮಾಡುತ್ತಲೇ ಇರಬೇಕು. ಕಾಲನದವನ್ನು ಅಥವಾ ಸಂಸಾರಸಾಗರವನ್ನು ದಾಟಲೇಬೇಕು.

ಸಂಸ್ಕೃತಸ್ಯ ಹಿ ದಾನ್ತಸ್ಯ ನಿಯತಸ್ಯ ಯತಾತ್ಮನಃ ।
ಪ್ರಾಜ್ಞಸ್ಯಾನನ್ತರಾ ಸಿದ್ಧಿರಿಹಲೋಕೇ ಪರತ್ರ ಚ ॥೨೪॥

ವೈದಿಕಸಂಸ್ಕಾರಗಳಿಂದ ಸಂಪನ್ನನಾಗಿರುವ, ಇಂದ್ರಿಯಗಳನ್ನು ನಿಗ್ರಹಿಸಿರುವ, ಮನಸ್ಸನ್ನು ವಶಪಡಿಸಿಕೊಂಡಿರುವ ಪ್ರಾಜ್ಞನಿಗೆ ಇಹಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸಿದ್ಧಿಯು ಬಹಳ ಬೇಗ ಆಗುತ್ತದೆ.

ವರ್ತೇತ ತೇಷು ಗೃಹವಾನಕ್ರುದ್ಧ್ಯನ್ನನಸೂಯಕಃ ।
ಪಞ್ಚಭಿಃ ಸತತಂ ಯಜ್ಞೈರ್ವಿಘಸಾಶೀ ಯಜೇತ ಚ ॥೨೫॥

ಗೃಹಸ್ಥನಾದ ಬ್ರಾಹ್ಮಣನು ಕ್ರೋಧರಹಿತನಾಗಿ, ಅಸೂಯಾರಹಿತನಾಗಿ–ಹಿಂದೆ ಹೇಳಿದ ನಿಯಮಗಳನ್ನು ಪರಿಪಾಲಿಸುತ್ತಿರಬೇಕು. ನಿತ್ಯವೂ ಪಂಚಮಹಾಯಜ್ಞಗಳನ್ನು ಮಾಡುತ್ತಾ ಯಜ್ಞಶಿಷ್ಟವಾದ ಅನ್ನವನ್ನು ಭೋಜನಮಾಡಬೇಕು.

ಸತಾಂ ಧರ್ಮೇಣ ವರ್ತೇತ ಕ್ರಿಯಾಂ ಶಿಷ್ಟವದಾಚರೇತ್ ।
ಅಸಂರೋಧೇನ ಲೋಕಸ್ಯ ವೃತ್ತಿಂ ಲಿಪ್ಸೇದಗರ್ಹಿತಾಮ್ ॥೨೬॥

ಸತ್ಪುರುಷರ ಧರ್ಮದಿಂದ (ಸದ್ಧರ್ಮದಿಂದ) ವ್ಯವಹರಿಸಬೇಕು. ಶಿಷ್ಟರ ಆಚಾರಗಳನ್ನು ಪರಿಪಾಲಿಸಬೇಕು. ಇನ್ನೊಬ್ಬರ ಜೀವಿಕೆಗೆ ತೊಂದರೆಯಾಗದಂತೆ ಅನಿಂದ್ಯವಾದ ಜೀವನವೃತ್ತಿಯನ್ನು ಇಟ್ಟುಕೊಳ್ಳಬೇಕು.

ಶ್ರುತಿವಿಜ್ಞಾನತತ್ತ್ವಜ್ಞಃ ಶಿಷ್ಟಾಚಾರೋ ವಿಚಕ್ಷಣಃ ।
ಸ್ವಧರ್ಮೇಣ ಕ್ರಿಯಾವಾಂಶ್ಚ ಕರ್ಮಣಾ ಸೋಽಪ್ಯಸಂಕರಃ ॥೨೭॥

ಬ್ರಾಹ್ಮಣನು ಶ್ರುತಿಯ ವಿಜ್ಞಾನದ ತತ್ತ್ವವನ್ನೂ ತಿಳಿದವನಾಗಿರಬೇಕು. ಸದಾಚಾರಿಯೂ–ಚತುರನೂ ಆಗಿರಬೇಕು. ಸ್ವಧರ್ಮಾನುಸಾರವಾಗಿ ಕರ್ಮಗಳನ್ನು ಮಾಡಬೇಕು. ಕರ್ಮಗಳಲ್ಲಿ ಸಾಂಕರ್ಯವುಳ್ಳವನಾಗಬಾರದು. (ಆಪತ್ತು ಇಲ್ಲದಿರುವಾಗ ಸ್ವಧರ್ಮ ಮತ್ತು ಪರಧರ್ಮಗಳೆರಡನ್ನೂ ಮಾಡಲು ಹೋಗಬಾರದು. ಬ್ರಾಹ್ಮಣನಾದವನು ಬ್ರಾಹ್ಮಣಕರ್ಮ ಮತ್ತು ಕ್ಷತ್ರಿಯಕರ್ಮಗಳೆರಡನ್ನೂ ಮಾಡಲು ಹೋಗಬಾರದು. ಇದು ಕರ್ಮಸಂಕರವಾಗುತ್ತದೆ.)

ಕ್ರಿಯಾವಾಞ್ಶ್ರದ್ದಧಾನೋ ಹಿ ದಾನ್ತಃ ಪ್ರಾಜ್ಞೋಽನಸೂಯಕಃ ।
ಧರ್ಮಾಧರ್ಮವಿಶೇಷಜ್ಞಃ ಸರ್ವಂ ತರತಿ ದುಸ್ತರಮ್ ॥೨೮॥

ಸ್ವಧರ್ಮಾನುಸಾರವಾಗಿ ಕರ್ಮಗಳನ್ನು ಮಾಡುವ, ಶ್ರದ್ಧಾಳುವಾದ, ಮನಸ್ಸನ್ನೂ ಮತ್ತು ಇಂದ್ರಿಯಗಳನ್ನೂ ಹತೋಟಿಯಲ್ಲಿಟ್ಟುಕೊಂಡಿರುವ, ಇತರರಲ್ಲಿ ದೋಷಗಳನ್ನು ಎಣಿಸದಿರುವ, ಧರ್ಮಾಧರ್ಮಗಳ ವಿಶೇಷವನ್ನು ತಿಳಿದಿರುವ ಪ್ರಾಜ್ಞನು ದುಸ್ತರವಾದ ಸಕಲವನ್ನೂ ದಾಟುತ್ತಾನೆ.

ಧೃತಿಮಾನಪ್ರಮತ್ತಶ್ಚ ದಾನ್ತೋ ಧರ್ಮವಿದಾತ್ಮವಾನ್ ।
ವೀತಹರ್ಷಮದಕ್ರೋಧೋ ಬ್ರಾಹ್ಮಣೋ ನಾವಸೀದತಿ ॥೨೯॥

ಧೈರ್ಯಶಾಲಿಯಾದ, ಜಾಗರೂಕನಾದ, ಜಿತೇಂದ್ರಿಯನಾದ, ಧರ್ಮಜ್ಞನಾದ, ಮನಸ್ಸನ್ನು ಜಯಿಸಿರುವ, ಹರ್ಷ-ಮದ (ಅಹಂಕಾರ) ಮತ್ತು ಕ್ರೋಧಗಳನ್ನು ಪರಿತ್ಯಜಿಸಿರುವ ಬ್ರಾಹ್ಮಣನು ಎಂದಿಗೂ ವಿಷಾದವನ್ನು ಹೊಂದುವುದಿಲ್ಲ.

ಏಷಾ ಪುರಾತನೀ ವೃತ್ತಿರ್ಬ್ರಾಹ್ಮಣಸ್ಯ ವಿಧೀಯತೇ ।
ಜ್ಞಾನವತ್ತ್ವೇನ ಕರ್ಮಾಣಿ ಕುರ್ವನ್ಸರ್ವತ್ರ ಸಿಧ್ಯತಿ ॥೩೦॥

ಪುರಾತನಕಾಲದಿಂದಲೂ ಬಂದಿರುವ ಈ ವೃತ್ತಿಯು ಬ್ರಾಹ್ಮಣನಿಗೆ ವಿಧಿಸಲ್ಪಟ್ಟಿದೆ. ಬ್ರಾಹ್ಮಣನು ಇದೇ ವೃತ್ತಿಯನ್ನೇ ಆಶ್ರಯಿಸಬೇಕು. ಜ್ಞಾನಪೂರ್ವಕವಾಗಿ ಕರ್ಮಗಳನ್ನು ಮಾಡುವ ಬ್ರಾಹ್ಮಣನಿಗೆ ಎಲ್ಲ ಕಡೆಗಳಲ್ಲಿಯೂ ಸಿದ್ಧಿಯು ಲಭಿಸುತ್ತದೆ.

ಅಧರ್ಮಂ ಧರ್ಮಕಾಮೋ ಹಿ ಕರೋತಿ ಹ್ಯವಿಚಕ್ಷಣಃ ।
ಧರ್ಮಂ ವಾಧರ್ಮಸಂಕಾಶಂ ಶೋಚನ್ನಿವ ಕರೋತಿ ಸಃ ॥೩೧॥

ಧರ್ಮಂ ಕರೋಮೀತಿ ಕರೋತ್ಯಧರ್ಮ-
ಮಧರ್ಮಕಾಮಶ್ಚ ಕರೋತಿ ಧರ್ಮಮ್ ।
ಉಭೇ ಬಾಲಃ ಕರ್ಮಣೀ ನ ಪ್ರಜಾನ-
ನ್ಸ ಜಾಯತೇ ಮ್ರಿಯತೇ ಚಾಪಿ ದೇಹೀ ॥೩೨॥

ಮೂಢನಾದವನು ಧರ್ಮಕಾರ್ಯವನ್ನು ಮಾಡಲಿಚ್ಛಿಸಿ ಅಧರ್ಮವನ್ನೇ ಮಾಡುತ್ತಾನೆ. ಅಥವಾ ಅಕುಶಲನಾಗಿ ಶೋಕಮಗ್ನನಾದವನಂತೆ (ಅವಿವೇಕದಿಂದ) ಅಧರ್ಮಸದೃಶವಾದ ಧರ್ಮವನ್ನು ಮಾಡುತ್ತಾನೆ. ಧರ್ಮಕರ್ಮವು ಯಾವುದು? ಅಧರ್ಮಕರ್ಮವು ಯಾವುದು?–ಎಂಬ ಈ ಎರಡೂ ಕರ್ಮಗಳನ್ನು ತಿಳಿಯದೇ ಇರುವ ಅವಿವೇಕಿಯು–'ನಾನು ಧರ್ಮಕಾರ್ಯವನ್ನು ಮಾಡುತ್ತೇನೆ'–ಎಂದು ಭಾವಿಸಿಕೊಂಡೇ ಅಧರ್ಮಕಾರ್ಯವನ್ನು ಮಾಡುತ್ತಾನೆ. ಅಥವಾ ಅಧರ್ಮಕಾಮನಾಗಿ ಧರ್ಮಕಾರ್ಯವನ್ನು

ಮಾಡುತ್ತಾನೆ. ಹೀಗೆ ಧರ್ಮಾಧರ್ಮಗಳ ಸ್ವರೂಪವನ್ನು ತಿಳಿಯದೇ ಅವಿವೇಕದಿಂದ ಕಾರ್ಯಮಾಡುವ ಮನುಷ್ಯನು ಹುಟ್ಟುತ್ತಿರುತ್ತಾನೆ : ಸಾಯುತ್ತಿರುತ್ತಾನೆ. ಅಂತಹವನಿಗೆ ಮೋಕ್ಷವೆಂಬುದೇ ಇಲ್ಲ."

೨೩೫ನೆಯ ಅಧ್ಯಾಯವು ಮುಗಿಯಿತು.

೨೩೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಧ್ಯಾನಕ್ಕೆ ಸಹಾಯಕವಾದ ಯೋಗದ ಫಲ : ಏಳು ಪ್ರಕಾರವಾದ ಧಾರಣೆಗಳ ವರ್ಣನೆ : ಸಾಂಖ್ಯ ಮತ್ತು ಯೋಗಗಳ ಅನುಸಾರವಾಗಿ ಜ್ಞಾನದ ಮೂಲಕ ಮೋಕ್ಷಪ್ರಾಪ್ತಿಕಥನ

ಭೀಷ್ಮನು ಹೇಳುತ್ತಾನೆ :

ಯುಧಿಷ್ಠಿರ! ವ್ಯಾಸರು ಹೇಳುತ್ತಾರೆ :

ಅಥ ಚೇದ್ರೋಚಯೇದೇತದುಹ್ಯೇತ ಸ್ರೋತಸಾ ಯಥಾ ।
ಉನ್ಮಜ್ಜಂಶ್ಚ ನಿಮಜ್ಜಂಶ್ಚ ಜ್ಞಾನವಾನ್ಪ್ಲವವಾನ್ಭವೇತ್ ॥೧॥

"ಶುಕ! ಯಾವ ರೀತಿಯಲ್ಲಿ ನದಿಯಲ್ಲಿ ಬಿದ್ದ ಮನುಷ್ಯನು ಮುಳುಗುತ್ತಾ ಏಳುತ್ತಾ ಪ್ರವಾಹದೊಡನೆಯೇ ಹೋಗುತ್ತಿರುವನೋ– ಅದೇ ರೀತಿಯಲ್ಲಿ ಕಾಲಪ್ರವಾಹದಲ್ಲಿ ಬಿದ್ದ ಮನುಷ್ಯನು ಮುಳುಗುತ್ತಾ- ಏಳುತ್ತಾ ಪ್ರವಾಹದೊಡನೆ ಹೋಗುತ್ತಿರುತ್ತಾನೆ. ಒಂದು ವೇಳೆ ಅಂತಹ ಮನುಷ್ಯನು ಆ ಪ್ರವಾಹದಿಂದ ಹೊರಗೆ ಬರಬೇಕೆನ್ನುವುದಾದರೆ ಅಧ್ಯಾತ್ಮ ಜ್ಞಾನರೂಪವಾದ ದೋಣಿಯನ್ನೇ ಆಶ್ರಯಿಸಬೇಕು.

ಪ್ರಜ್ಞಯಾ ನಿಶ್ಚಿತಾ ಧೀರಾಸ್ತಾರಯನ್ತ್ಯಬುಧಾನ್ಪ್ಲವೈಃ ।
ನಾಬುಧಾಸ್ತಾರಯನ್ತ್ಯನ್ಯಾನಾತ್ಮಾನಂ ವಾ ಕಥಂಚನ ॥೨॥

ಜ್ಞಾನದಿಂದ ತತ್ತ್ವನಿಶ್ಚಯವನ್ನು ಪಡೆದಿರುವ ಧೀರರು ತಮ್ಮ ಜ್ಞಾನವೆಂಬ ನೌಕೆಯ ಮೂಲಕವಾಗಿ ಮೂಢರನ್ನೂ ಸಂಸಾರಸಾಗರದಿಂದ ಪಾರುಮಾಡುತ್ತಾರೆ. ಆದರೆ ಮೂಢರಾದವರು ಬೇರೆಯವರನ್ನಾಗಲೀ ತಮ್ಮನ್ನಾಗಲೀ ಯಾವ ರೀತಿಯಲ್ಲಿಯೂ ಪಾರುಮಾಡಿಕೊಳ್ಳಲಾರರು.

ಛಿನ್ನದೋಷೋ ಮುನಿರ್ಯೋಗಾನ್ಯುಕ್ತೋ ಯುಞ್ಜೀತ ದ್ವಾದಶ ।
ದೇಶಕರ್ಮಾನುರಾಗಾರ್ಥಾನುಪಾಯಾಪಾಯನಿಶ್ಚಯೈಃ ।
ಚಕ್ಷುರಾಹಾರಸಂಹಾರೈರ್ಮನಸಾ ದರ್ಶನೇನ ಚ ॥೩॥

ಏಕಾಗ್ರಚಿತ್ತನಾದ ಮುನಿಯು ಕಾಮ-ಕ್ರೋಧಾದಿ ದೋಷಗಳೆಲ್ಲವನ್ನೂ ವಿನಾಶಗೊಳಿಸಿ, * ಯೋಗಕ್ಕೆ ಸಹಾಯಕವಾದ ದೇಶ, ಕರ್ಮ, ಅನುರಾಗ, ಅರ್ಥ, ಉಪಾಯ, ಅಪಾಯ, ನಿಶ್ಚಯ, ಚಕ್ಷುಸ್ಸು, ಆಹಾರ, ಸಂಹಾರ, ಮನಸ್ಸು ಮತ್ತು ದರ್ಶನಗಳೆಂಬ ಹನ್ನೆರಡು ಯೋಗಗಳ ಆಶ್ರಯವನ್ನು ಪಡೆದು ಧ್ಯಾನಯೋಗದ ಅಭ್ಯಾಸವನ್ನು ಮಾಡಬೇಕು.

ಯಚ್ಛೇದ್ವಾಙ್ಮನಸೀ ಬುದ್ಧ್ಯಾ ಯ ಇಚ್ಛೇಜ್ಜ್ಞಾನಮುತ್ತಮಮ್ ।
ಜ್ಞಾನೇನ ಯಚ್ಛೇದಾತ್ಮಾನಂ ಯ ಇಚ್ಛೇಚ್ಛಾನ್ತಿಮಾತ್ಮನಃ ॥೪॥

ಉತ್ತಮವಾದ ಜ್ಞಾನವನ್ನು ಪಡೆದುಕೊಳ್ಳಲು ಇಚ್ಛಿಸುವ ಪುರುಷನು ಬುದ್ಧಿಯ ಮೂಲಕವಾಗಿ ಮನಸ್ಸನ್ನೂ ಮತ್ತು ಮಾತನ್ನೂ ನಿಯಂತ್ರಿಸಬೇಕು. ಆತ್ಮನಿಗೆ ಶಾಂತಿಯನ್ನು ಅಪೇಕ್ಷಿಸುವವನು ಹಾಗೆ ಪಡೆದುಕೊಂಡ ಜ್ಞಾನದಿಂದ ಬುದ್ಧಿಯನ್ನು ನಿಯಂತ್ರಿಸಿ ಆತ್ಮನಲ್ಲಿ ವಿಲೀನಗೊಳಿಸಬೇಕು.

ಏತೇಷಾಂ ಚೇದನುದ್ರಷ್ಟಾ ಪುರುಷೋಽಪಿ ಸುದಾರುಣಃ ।

---

* ದ್ವಾದಶಯೋಗಗಳ ವಿವರಣೆ : ಧ್ಯಾನಯೋಗಕ್ಕೆ ಎಂತಹ ಸ್ಥಳದಲ್ಲಿ ಕುಳಿತುಕೊಳ್ಳಬೇಕು ಎಂಬುದಕ್ಕೆ ಶ್ವೇತಾಶ್ವತರೋಪನಿಷತ್ತಿನಲ್ಲಿ ಹೀಗಿದೆ : **ಸಮೇ ಶುಚೌ ಶರ್ಕರವಹ್ನಿ ವಾಲುಕಾವಿವರ್ಜಿತೇ ಶಬ್ದಜಲಾಶ್ರಯಾದಿಭಿಃ । ಮನೋಽನುಕೂಲೇ ನ ತು ಚಕ್ಷುಪೀಡನೇ ಗುಹಾನಿವಾತಾಶ್ರಯಣೇ ಪ್ರಯೋಜಯೇತ್ ॥** ನೆಲವು ಸಮನಾಗಿರಬೇಕು. ಪವಿತ್ರವಾಗಿರಬೇಕು. ಕಲ್ಲು, ಬೆಂಕಿ, ಮಳಲು–ಇವುಗಳಿರಬಾರದು. ಗಲಾಟೆಯೂ ಇರಬಾರದು. ಮನಸ್ಸಿಗೆ ಅನುಕೂಲವಾಗಿರಬೇಕು. ಕಣ್ಣಿಗೆ ತೊಂದರೆಯಾಗಬಾರದು. ಹೆಚ್ಚು ಗಾಳಿಯಿರಬಾರದು. ಅಂತಹ ಏಕಾಂತವಾಗಿರುವ ಗುಹೆಯು ಧ್ಯಾನಕ್ಕೆ

ಯದಿ ವಾ ಸರ್ವವೇದಜ್ಞೋ ಯದಿ ವಾಪ್ಯನೃಚೋ ದ್ವಿಜಃ ।
ಯದಿ ವಾ ಧಾರ್ಮಿಕೋ ಯಜ್ವಾ ಯದಿ ವಾ ಪಾಪಕೃತ್ತಮಃ ॥೬॥

ಯದಿ ವಾ ಪುರುಷವ್ಯಾಘ್ರೋ ಯದಿ ವಾ ಕ್ಲೇಶಧಾರಿತಃ ।
ತರತ್ಯೇವಂ ಮಹಾದುರ್ಗಂ ಜರಾಮರಣಸಾಗರಮ್ ॥೭॥

ಮನುಷ್ಯನು ಅತ್ಯಂತದಾರುಣನಾಗಿರಲಿ, ಸರ್ವವೇದಗಳನ್ನೂ ತಿಳಿದವನಾಗಿರಲಿ, ಬ್ರಾಹ್ಮಣನಾಗಿದ್ದರೂ ವೇದಜ್ಞಾನದಿಂದ ಶೂನ್ಯನಾಗಿರಲಿ, ಧಾರ್ಮಿಕನಾಗಿರಲಿ, ಯಜ್ಞಶೀಲನಾಗಿರಲಿ, ಅತಿಘೋರವಾದ ಪಾಪಗಳನ್ನು ಮಾಡಿದವನೇ ಆಗಿರಲಿ, ಪುರುಷಶ್ರೇಷ್ಠನೇ ಆಗಿರಲೀ, ಅತಿಯಾದ ಕಷ್ಟದಿಂದ ಜೀವನನಡೆಸುತ್ತಿರುವವನೇ ಆಗಿರಲೀ–ಅವನು ಮೇಲೆ ಹೇಳಿರುವ ಹನ್ನೆರಡು ಯೋಗಗಳನ್ನು ಆಶ್ರಯಿಸಿದ್ದೇ ಆದರೆ ಅತ್ಯಂತದುರ್ಗಮವಾದ ಜರಾ-ಮರಣಸಾಗರವನ್ನು ದಾಟುತ್ತಾನೆ.

ಏವಂ ಹ್ಯೇತೇನ ಯೋಗೇನ ಯುಞ್ಜಾನೋ ಹ್ಯೇವಮನ್ತತಃ ।
ಅಪಿ ಜಿಜ್ಞಾಸಮಾನೋಽಪಿ ಶಬ್ದಬ್ರಹ್ಮಾತಿವರ್ತತೇ ॥೮॥

ಹೀಗೆ ಸಿದ್ಧಿಪರ್ಯಂತವಾಗಿ ಪುರುಷನು ಈ ಹನ್ನೆರಡು ಯೋಗಗಳನ್ನೂ ಅಭ್ಯಾಸಮಾಡುತ್ತಾ, ಬ್ರಹ್ಮದ ವಿಷಯದಲ್ಲಿ ಜಿಜ್ಞಾಸೆಯನ್ನು ಹೊಂದಿ ವಿಚಾರಮಾಡುತ್ತಿದ್ದರೂ–ಶಬ್ದಬ್ರಹ್ಮವನ್ನು ಮೀರಿ ಮುಂದೆ ಹೋಗುತ್ತಾನೆ.

ಪ್ರಶಸ್ತವಾದುದು. ಶ್ರೀಗೀತೆಯಲ್ಲಿಯೂ ಹೀಗೆ ಹೇಳಿದೆ :–ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ । ನಾತ್ಯುಚ್ಛ್ರಿತಂ ನಾತಿನೀಚಂ ಚೈಲಾಜಿನ ಕುಶೋತ್ತರಮ್ ॥ ಇದಕ್ಕೆ ದೇಶಯೋಗವೆಂದು ಹೆಸರು. **ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು। ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥** ಎಂದು ಗೀತೆಯಲ್ಲಿ ಹೇಳಿರುವಂತೆ ಆಹಾರ, ವಿಹಾರ, ಚೇಷ್ಟೆ (ಕಾರ್ಯ), ನಿದ್ರೆ ಮತ್ತು ಜಾಗರಣೆ ಇವುಗಳು ಪರಿಮಿತವಾಗಿರಬೇಕು ಮತ್ತು ನಿಯಮಾನುಕೂಲವಾಗಿರಬೇಕು. ಇದಕ್ಕೆ ಕರ್ಮಯೋಗವೆಂದು ಹೆಸರು. ಪರಮಾತ್ಮನಲ್ಲಿ ಅನುರಾಗವೂ ಮತ್ತು ಅವನನ್ನು ಹೊಂದುವುದರಲ್ಲಿ ಕಾತರತೆಯೂ ಇರಬೇಕು. ಇದಕ್ಕೆ ಅನುರಾಗಯೋಗವೆಂದು ಹೆಸರು. ಅವಶ್ಯಕವಾದ ವಸ್ತುಗಳನ್ನು ಮಾತ್ರವೇ ಇಟ್ಟುಕೊಂಡಿರಬೇಕು. ಇದಕ್ಕೆ ಅರ್ಥ

(ಶಬ್ದಬ್ರಹ್ಮ = ವೈದಿಕಕರ್ಮಾನುಷ್ಠಾನದ ಫಲ ; ವೈದಿಕವಿಧಿ-ನಿಷೇಧ ಅಥವಾ ಪ್ರಕೃತಿ. ವೇದೋಕ್ತಕರ್ಮಜಾಲವನ್ನು ದಾಟಿ ಹೋಗುತ್ತಾನೆ. **ಜಿಜ್ಞಾಸುರಪಿ ಯೋಗಸ್ಯ ಶಬ್ದಬ್ರಹ್ಮಾತಿವರ್ತತೇ.।** (ಗೀತಾ-ಅಧ್ಯಾಯ ೬-೪೪) ಶಬ್ದಬ್ರಹ್ಮವನ್ನು ಮೀರಿ ಹೋಗುವುದು ಎಂಬುದಕ್ಕೆ ನಾನಾ ರೀತಿಯಲ್ಲಿ ಭಾಷ್ಯಗಳಿವೆ : 1. ವೇದೋಕ್ತವಾದ ಕರ್ಮಗಳ ಅನುಷ್ಠಾನದ ಫಲವನ್ನು ಮೀರಿ ಹೋಗುತ್ತಾನೆ. **ವೇದೋಕ್ತಕರ್ಮಾನುಷ್ಠಾನಫಲ ಮತಿವರ್ತತೇ** (ಶಂಕರಭಾಷ್ಯ) 2. ಪ್ರಕೃತಿಯನ್ನು ದಾಟಿ ಹೋಗುತ್ತಾನೆ. **ದೇವಮನುಷ್ಯಪೃಥಿವ್ಯನ್ತರಿಕ್ಷಸ್ವರ್ಗಾದಿ ಶಬ್ದಾಭಿಲಾಪಯೋಗ್ಯಂ ಬ್ರಹ್ಮ ಪ್ರಕೃತಿಃ** (ರಾಮಾನುಜಭಾಷ್ಯ) 3. ವೈದಿಕ ವಿಧಿ-ನಿಷೇಧಗಳನ್ನು ದಾಟಿ ಪರಬ್ರಹ್ಮವನ್ನು ಹೊಂದುತ್ತಾನೆ. **ಶಬ್ದಬ್ರಹ್ಮಶಬ್ದೇನ ವೈದಿಕವಿಧಿನಿಷೇಧಾ ವತ್ರ ಉಚ್ಯತೇ । ತದತಿವರ್ತನಂ ಪರ ಬ್ರಹ್ಮಪ್ರಾಪ್ತಸ್ತ್ಯೈವ** (ಜಯತೀರ್ಥ ಟೀಕಾ)

ಧರ್ಮೋಪಸ್ಥೋ ಹ್ರೀವರೂಥ ಉಪಾಯಾಪಾಯಕೂಬರಃ ।
ಅಪಾನಾಕ್ಷಃ ಪ್ರಾಣಯುಗಃ ಪ್ರಜ್ಞಾಯುರ್ಜೀವಬನ್ಧನಃ ॥೯॥

ಚೇತನಾಬನ್ಧುರಶ್ಚಾರುಶ್ಚಾಚಾರಗ್ರಹನೇಮಿಮಾನ್ ।
ದರ್ಶನಸ್ಪರ್ಶನವಹೋ ಘ್ರಾಣಶ್ರವಣವಾಹನಃ ॥೧೦॥

ಪ್ರಜ್ಞಾನಾಭಿಃ ಸರ್ವತನ್ತ್ರಪ್ರತೋದೋ ಜ್ಞಾನಸಾರಥಿಃ ।
ಕ್ಷೇತ್ರಜ್ಞಾಧಿಷ್ಠಿತೋ ಧೀರಃ ಶ್ರದ್ಧಾದಮಪುರಃಸರಃ ॥೧೧॥

ಯೋಗವೆಂದು ಹೆಸರು. ಧ್ಯಾನಕ್ಕೆ ಯೋಗ್ಯವಾದ ಆಸನದಲ್ಲಿ ಕುಳಿತುಕೊಳ್ಳಬೇಕು. ಇದಕ್ಕೆ ಉಪಾಯಯೋಗವೆಂದು ಹೆಸರು. ಸಂಸಾರದ ವಿಷಯದಲ್ಲಿಯೂ ಬಂಧುಜನರ ವಿಷಯ ದಲ್ಲಿಯೂ ಆಸಕ್ತಿಯನ್ನು ಬಿಡುವುದಕ್ಕೆ ಅಪಾಯಯೋಗವೆಂದು ಹೆಸರು. ಗುರುಗಳಲ್ಲಿಯೂ ವೇದ-ಶಾಸ್ತ್ರಗಳ ವಾಕ್ಯಗಳಲ್ಲಿಯೂ ವಿಶ್ವಾಸವಿಡುವುದಕ್ಕೆ ನಿಶ್ಚಯಯೋಗವೆಂದು ಹೆಸರು. ಕಣ್ಣು ಗಳನ್ನು ಮೂಗಿನ ತುದಿಯಲ್ಲಿ ಸ್ಥಿರೀಕರಿಸುವುದಕ್ಕೆ ಚಕ್ಷುರ್ಯೋಗವೆಂದು ಹೆಸರು. ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ (ಶ್ರೀಗೀತೆ). ಶುದ್ಧವಾದ ಮತ್ತು ಸಾತ್ತ್ವಿಕವಾದ ಆಹಾರವನ್ನು ತೆಗೆದುಕೊಳ್ಳುವುದಕ್ಕೆ ಆಹಾರಯೋಗವೆಂದು ಹೆಸರು. ವಿಷಯಗಳ ಕಡೆಗೆ

ತ್ಯಾಗಸೂಕ್ಷ್ಮಾನುಗಃ ಕ್ಷೇಮ್ಯಃ ಶೌಚಗೋ ಧ್ಯಾನಗೋಚರಃ ।
ಜೀವಯುಕ್ತೋ ರಥೋ ದಿವ್ಯೋ ಬ್ರಹ್ಮಲೋಕೇ ವಿರಾಜತೇ ॥೧೨॥

ಈ ಧ್ಯಾನಯೋಗವೆಂಬುದು ಸುಂದರವಾದ ರಥವಾಗಿದೆ. ಧರ್ಮವೆಂಬುದೇ ಆ ರಥದಲ್ಲಿ ಕುಳಿತುಕೊಳ್ಳುವ ಸ್ಥಾನವಾಗಿದೆ. ಲಜ್ಜೆಯು ಅದರ ಆವರಣವಾಗಿದೆ. ಉಪಾಯಾಪಾಯಗಳು ಮೂಕಿಗಳಾಗಿವೆ. ಅಪಾನ ವಾಯುವು ಅಚ್ಚುಮರವಾಗಿದೆ. ಪ್ರಾಣವಾಯುವು ನೊಗವಾಗಿದೆ. ಬುದ್ಧಿಯು ಆಯುಷ್ಯವಾಗಿದೆ. ಜೀವನವೆಂಬುದು ಬಂಧನವಾಗಿದೆ. ಚೈತನ್ಯವು ನೊಗದ ಕೆಳಗಿನ ಮೂಕಿಕಂಬವಾಗಿದೆ. ಸದಾಚಾರವು ಆ ರಥಚಕ್ರದ ನೇಮಿಯಾಗಿದೆ. ನೇತ್ರ, ತ್ವಚೆ, ಘ್ರಾಣ ಮತ್ತು ಶ್ರವಣಗಳನ್ನು ಈ ರಥವು ಹೊತ್ತುಕೊಂಡಿದೆ. ಪ್ರಜ್ಞೆಯು ಅದರ ನಾಭಿಯಾಗಿದೆ. ಸಂಪೂರ್ಣಶಾಸ್ತ್ರಗಳು ಚಾವಟಿಯಾಗಿದೆ. ಜ್ಞಾನವೆಂಬುದೇ ಸಾರಥಿಯಾಗಿದೆ. ಕ್ಷೇತ್ರಜ್ಞನು (ಜೀವಾತ್ಮನು) ರಥಿಯಾಗಿ ಆ ರಥದಲ್ಲಿ ಕುಳಿತಿದ್ದಾನೆ. ಅವನು ರಥವನ್ನು ಮೆಲ್ಲ-ಮೆಲ್ಲಗೆ ನಡೆಸುತ್ತಿದ್ದಾನೆ. ಶ್ರದ್ಧೆ ಮತ್ತು ದಮಗಳನ್ನು ಮುಂದೆಮಾಡಿಕೊಂಡು ರಥವು ಮುನ್ನಡೆಯುತ್ತಿದೆ. ತ್ಯಾಗರೂಪವಾದ ಸೂಕ್ಷ್ಮಗುಣವು ಆ ರಥವನ್ನು ಹಿಂಬಾಲಿಸುತ್ತಿದೆ. ಮಂಗಳಮಯವಾದ ಆ ರಥವು ಧ್ಯಾನಕ್ಕೆ ಪವಿತ್ರವಾದ ಮಾರ್ಗದಲ್ಲಿ ಚಲಿಸುತ್ತಿದೆ. ಹೀಗೆ ಜೀವನಿಂದ ಯುಕ್ತವಾದ ಆ ದಿವ್ಯರಥವು ಬ್ರಹ್ಮಲೋಕದಲ್ಲಿ ವಿರಾಜಿಸುತ್ತದೆ. ಅರ್ಥಾತ್ ಧ್ಯಾನಯೋಗವೆಂಬ ರಥದ ಮೂಲಕವಾಗಿ ಜೀವಾತ್ಮನು ಪರಬ್ರಹ್ಮಪರಮಾತ್ಮನನ್ನು ಹೊಂದುತ್ತಾನೆ.

ಅಥ ಸಂತ್ವರಮಾಣಸ್ಯ ರಥಮೇವಂ ಯುಯುಕ್ಷತಃ ।
ಅಕ್ಷರಂ ಗನ್ತುಮನಸೋ ವಿಧಿಂ ವಕ್ಷ್ಯಾಮಿ ಶೀಘ್ರಗಮ್ ॥೧೩॥

ಸ್ವಾಭಾವಿಕವಾಗಿಯೇ ಹೋಗುವ ಸ್ವಭಾವವುಳ್ಳ ಮನಸ್ಸನ್ನೂ–ಇಂದ್ರಿಯಗಳನ್ನೂ ತಡೆಯುವುದಕ್ಕೆ ಸಂಹಾರಯೋಗವೆಂದು ಹೆಸರು. ಮನಸ್ಸನ್ನು ಸಂಕಲ್ಪ-ವಿಕಲ್ಪಗಳಿಂದ ರಹಿತವನ್ನಾಗಿ ಮಾಡಿ ಪರಮಾತ್ಮನಲ್ಲಿಯೇ ಏಕಾಗ್ರಗೊಳಿಸುವುದಕ್ಕೆ ಮನೋಯೋಗವೆಂದು ಹೆಸರು. ಜರಾ-ಮರಣ-ರೋಗಾದಿಗಳು ಸಂಭವಿಸಿದಾಗ ಉಂಟಾಗುವ ದುಃಖವನ್ನು ವೈರಾಗ್ಯದ ದೃಷ್ಟಿಯಿಂದ ನೋಡುವುದಕ್ಕೆ ದರ್ಶನಯೋಗವೆಂದು ಹೆಸರು. ಧ್ಯಾನಯೋಗದ ಸಿದ್ಧಿಯಾಗಬೇಕಾದರೆ ಈ ಹನ್ನೆರಡು ಯೋಗಗಳನ್ನೂ ಅವಶ್ಯವಾಗಿ ಅವಲಂಬಿಸಬೇಕು.

ಹೀಗೆ ಧ್ಯಾನಯೋಗವೆಂಬ ರಥದಲ್ಲಿ ಕುಳಿತುಕೊಳ್ಳಬೇಕೆಂಬ ಇಚ್ಛೆಯನ್ನು ಹೊಂದಿ, ಅವಿನಾಶಿಯಾದ ಪರಬ್ರಹ್ಮಪರಮಾತ್ಮನನ್ನು ಹೊಂದಬೇಕೆಂದು ಅವಸರಪಡುತ್ತಿರುವ ಸಾಧಕನಿಗೆ ಅತಿಶೀಘ್ರವಾಗಿ ಪರಬ್ರಹ್ಮತತ್ತ್ವವನ್ನು ಹೊಂದುವ ಉಪಾಯವನ್ನು ಹೇಳುತ್ತೇನೆ.

ಸಪ್ತ ಯಾ ಧಾರಣಾಃ ಕೃತ್ಸ್ನಾ ವಾಗ್ಯತಃ ಪ್ರತಿಪದ್ಯತೇ ।
ಪೃಷ್ಠತಃ ಪಾರ್ಶ್ವತಶ್ಚಾನ್ಯಾಸ್ತಾವತ್ಯಸ್ತಾಃ ಪ್ರಧಾರಣಾಃ ॥೧೪॥

ಸಾಧಕನು ಮಾತನ್ನು ಹಿಡಿತದಲ್ಲಿಟ್ಟುಕೊಂಡು (ಮೌನಿಯಾಗಿ) ಭೂಮಿ, ನೀರು, ತೇಜಸ್ಸು, ವಾಯು, ಆಕಾಶ, ಬುದ್ಧಿ ಮತ್ತು ಅಹಂಕಾರ ಸಂಬಂಧವಾದ ಏಳು ಧಾರಣೆಗಳನ್ನು ಸಿದ್ಧಿಮಾಡಿಕೊಳ್ಳುತ್ತಾನೆ. ಅದರ ಪರಿಣಾಮವಾಗಿ ಪೃಥಿವೀ ಮುಂತಾದುವುಗಳ ಗುಣಗಳಾದ ಗಂಧ, ರಸ, ರೂಪ, ಸ್ಪರ್ಶ, ಶಬ್ದ, ಅಹಂವೃತ್ತಿ ಮತ್ತು ನಿಶ್ಚಯಗಳೆಂಬ ಏಳು ಪ್ರಧಾರಣೆಗಳು ಸಾಧಕನ ಹಿಂದುಗಡೆ ಮತ್ತು ಪಾರ್ಶ್ವಗಳಲ್ಲಿರುತ್ತವೆ.

ಕ್ರಮಶಃ ಪಾರ್ಥಿವಂ ಯಚ್ಚ ವಾಯವ್ಯಂ ಖಂ ತಥಾ ಪಯಃ ।
ಜ್ಯೋತಿಷೋ ಯತ್ತದೈಶ್ವರ್ಯಮಹಙ್ಕಾರಸ್ಯ ಬುದ್ಧಿತಃ ।
ಅವ್ಯಕ್ತಸ್ಯ ತಥೈಶ್ವರ್ಯಂ ಕ್ರಮಶಃ ಪ್ರತಿಪದ್ಯತೇ ॥೧೫॥

ಸಾಧಕನು ಕ್ರಮಪ್ರಕಾರವಾಗಿ ಭೂಮಿ, ನೀರು, ತೇಜಸ್ಸು, ವಾಯು, ಆಕಾಶ, ಅಹಂಕಾರ ಮತ್ತು ಬುದ್ಧಿಗಳ ಮೇಲೆ ಅಧಿಕಾರವನ್ನು ಹೊಂದಬಹುದಾಗಿದೆ. ಬಳಿಕ ಸಾಧಕನು ಅವ್ಯಕ್ತವಾದ ಬ್ರಹ್ಮೈಶ್ವರ್ಯವನ್ನು ಕ್ರಮವಾಗಿ ಹೊಂದುತ್ತಾನೆ.*

---

* ಪಾತಂಜಲಯೋಗದರ್ಶನದಲ್ಲಿ : ದೇಶಬಂಧಶ್ಚಿತ್ತಸ್ಯ ಧಾರಣಾ (೩-೧) ಧಾರಣಾ ಎಂದರೆ ಒಂದು ನಿಷ್ಕೃಷ್ಟವಾದ ಸ್ಥಾನದಲ್ಲಿ ಚಿತ್ತವನ್ನು ನಿಲ್ಲಿಸುವುದು ಎಂದು ಧಾರಣಾ ಶಬ್ದಕ್ಕೆ ವಿವರಣೆಯನ್ನು ಕೊಟ್ಟಿರುತ್ತಾರೆ. ಸಾಧಕನು ಮೊದಲು ಪೃಥಿವೀತತ್ತ್ವದಲ್ಲಿ ಚಿತ್ತವನ್ನು ಏಕಾಗ್ರಗೊಳಿಸಬೇಕು. ಅದರಿಂದ ಸಾಧಕನಿಗೆ ಪೃಥ್ವೀತತ್ತ್ವದ ಮೇಲೆ ಅಧಿಕಾರವುಂಟಾಗುತ್ತದೆ. ಅನಂತರ ಪೃಥ್ವೀತತ್ತ್ವವನ್ನು ಜಲತತ್ತ್ವದಲ್ಲಿ ವಿಲೀನಗೊಳಿಸಿ ಜಲತತ್ತ್ವದಲ್ಲಿ ಚಿತ್ತವನ್ನು ಏಕಾಗ್ರಗೊಳಿಸಬೇಕು. ಅದರಿಂದ ಸಾಧಕನಿಗೆ ಜಲತತ್ತ್ವದ ಮೇಲೆ ಅಧಿಕಾರವುಂಟಾಗುತ್ತದೆ. ಬಳಿಕ ಜಲತತ್ತ್ವವನ್ನು ಅಗ್ನಿತತ್ತ್ವದಲ್ಲಿ ವಿಲೀನಗೊಳಿಸಿ ಅಗ್ನಿತತ್ತ್ವದಲ್ಲಿ ಚಿತ್ತವನ್ನು ಏಕಾಗ್ರಗೊಳಿಸಬೇಕು.

ವಿಕ್ರಮಾಶ್ಚಾಪಿ ಯಸ್ಯೈತೇ ತಥಾ ಯುಕ್ತೇಷು ಯೋಗತಃ ।
ತಥಾ ಯೋಗಸ್ಯ ಯುಕ್ತಸ್ಯ ಸಿದ್ಧಿಮಾತ್ಮನಿ ಪಶ್ಯತಃ ॥೧೬॥

ಯೋಗಾಭ್ಯಾಸದಲ್ಲಿ ಪ್ರವೃತ್ತರಾದ ಯೋಗಿಗಳಲ್ಲಿ ಯಾವ ಯೋಗಿಗೆ ಪೃಥ್ವೀಜಯವೇ ಮೊದಲಾದ ಐಶ್ವರ್ಯಗಳು ಯಾವ ರೀತಿಯಲ್ಲಿ ಲಭಿಸುತ್ತವೆಯೆಂಬುದನ್ನೂ ಮತ್ತು ಧಾರಣಾಪೂರ್ವಕವಾಗಿ ಧ್ಯಾನಮಾಡುವ ಸಮಯದಲ್ಲಿ ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯಲಿರುವ ಯೋಗಿಗೆ ಮೊದಲು ಯಾವ-ಯಾವ ಅನುಭವಗಳಾಗುತ್ತವೆಯೆಂಬುದನ್ನೂ ಹೇಳುತ್ತೇನೆ.*

ನಿರ್ಮುಚ್ಯಮಾನಃ ಸೂಕ್ಷ್ಮತ್ವಾದ್ರೂಪಾಣೀಮಾನಿ ಪಶ್ಯತಃ ।
ಶೈಶಿರಸ್ತು ಯಥಾ ಧೂಮಃ ಸೂಕ್ಷ್ಮಃ ಸಂಶ್ರಯತೇ ನಭಃ ॥೧೭॥

ತಥಾ ದೇಹಾದ್ವಿಮುಕ್ತಸ್ಯ ಪೂರ್ವಂ ರೂಪಂ ಭವತ್ಯುತ ।

ಸಾಧಕನು ಸ್ಥೂಲದೇಹದ ಮೇಲಿನ ಅಭಿಮಾನವನ್ನು ತೊರೆದು ಧ್ಯಾನಯೋಗದಲ್ಲಿ ಕುಳಿತಾಗ–ಸೂಕ್ಷ್ಮದೃಷ್ಟಿಯುಳ್ಳವನಾಗಿರುವ ಕಾರಣ ಅವನಿಗೆ ಕೆಲವು ಚಿಹ್ನೆಗಳು ಕಾಣಿಸಿಕೊಳ್ಳುತ್ತವೆ. ಮೊದಲು ಪೃಥ್ವೀ ಧಾರಣಾಸಮಯದಲ್ಲಿ ಶಿಶಿರಕಾಲದ ಸೂಕ್ಷ್ಮವಾದ ಇಬ್ಬನಿಯು ಆಕಾಶ

ಅದರಿಂದ ಸಾಧಕನಿಗೆ ಅಗ್ನಿತತ್ತ್ವದ ಮೇಲೆ ಅಧಿಕಾರವುಂಟಾಗುವುದು. ಬಳಿಕ ಅಗ್ನಿತತ್ತ್ವವನ್ನು ವಾಯುತತ್ತ್ವದಲ್ಲಿ ವಿಲೀನಗೊಳಿಸಿ ವಾಯುತತ್ತ್ವದಲ್ಲಿ ಚಿತ್ತವನ್ನು ಏಕಾಗ್ರಗೊಳಿಸಬೇಕು. ವಾಯುತತ್ತ್ವದ ಮೇಲೆ ಅಧಿಕಾರವನ್ನು ಪಡೆದುಕೊಂಡು ವಾಯುತತ್ತ್ವವನ್ನು ಆಕಾಶತತ್ತ್ವದಲ್ಲಿ ವಿಲೀನಗೊಳಿಸಿ ಆಕಾಶತತ್ತ್ವದಲ್ಲಿ ಚಿತ್ತವನ್ನು ಏಕಾಗ್ರಗೊಳಿಸಬೇಕು. ಆಕಾಶತತ್ತ್ವದ ಮೇಲೆ ಅಧಿಕಾರವನ್ನು ಪಡೆದುಕೊಂಡು ಸಾಧಕನು ಆಕಾಶತತ್ತ್ವವನ್ನು ಮನಸ್ಸಿನಲ್ಲಿಯೂ ಮನಸ್ಸನ್ನು ಬುದ್ಧಿಯಲ್ಲಿಯೂ ವಿಲೀನಗೊಳಿಸಿ ಆಯಾ ತತ್ತ್ವಗಳಲ್ಲಿ ಚಿತ್ತವನ್ನು ಏಕಾಗ್ರಗೊಳಿಸಬೇಕು. ಸಾಧಕನು ಹೀಗೆ ಸಪ್ತಪ್ರಧಾರಣೆಗಳನ್ನು ವಶಪಡಿಸಿಕೊಂಡನಂತರ ಬುದ್ಧಿಯನ್ನು ಪರಬ್ರಹ್ಮ ಪರಮಾತ್ಮನಲ್ಲಿ ಲೀನಗೊಳಿಸಿ ಪರಬ್ರಹ್ಮೈಶ್ವರ್ಯವನ್ನು ಪಡೆದುಕೊಳ್ಳುತ್ತಾನೆ.

* ನೀಹಾರಧೂಮಾರ್ಕಾನಿಲಾನಲಾನಾಂ ಖದ್ಯೋತವಿದ್ಯುತ್ಸ್ಫಟಿಕಶಶಿನಾಮ್ । ಏತಾನಿ ರೂಪಾಣಿ ಪುರಃಸರಾಣಿ ಬ್ರಹ್ಮಣ್ಯಭಿವ್ಯಕ್ತಿಕರಾಣಿ ಯೋಗೇ ॥ ಬ್ರಹ್ಮಸಾಕ್ಷಾತ್ಕಾರವಾಗುವುದಕ್ಕೆ ಮುಂಚೆ ಮೇಲೆ ಹೇಳಿದ ದರ್ಶನಗಳಾಗುತ್ತವೆಯೆಂದು ಶ್ವೇತಾಶ್ವತರೋಪನಿಷತ್ತಿನಲ್ಲಿ ಹೇಳಿದೆ.

ವನ್ನು ಆವರಿಸಿರುವಂತೆ ಕಾಣುತ್ತದೆ. ಯೋಗಿಯ ಅನುಭವದಲ್ಲಿ ಇದು ಮೊದಲನೆಯ ರೂಪವಾಗಿದೆ.

ಅಥ ಧೂಮಸ್ಯ ವಿರಮೇ ದ್ವಿತೀಯಂ ರೂಪದರ್ಶನಮ್ ॥೧೮॥

ಆಕಾಶವನ್ನು ಮುಚ್ಚಿರುವಂತೆ ಕಾಣುತ್ತಿದ್ದ ಮಂಜು ಅನುಕ್ರಮವಾಗಿ ಹೊರಟುಹೋಗುತ್ತದೆ. ಆಗ ಎರಡನೆಯ ರೂಪವು ಕಾಣಿಸಿಕೊಳ್ಳುತ್ತದೆ.

ಜಲರೂಪಮಿವಾಕಾಶೇ ತಥೈವಾತ್ಮನಿ ಪಶ್ಯತಿ ।
ಅಪಾಂ ವ್ಯತಿಕ್ರಮೇ ಚಾಸ್ಯ ವಹ್ನಿ ರೂಪಂ ಪ್ರಕಾಶತೇ ॥೧೯॥

ಸಮಗ್ರವಾದ ಆಕಾಶವೂ ಜಲಮಯವಾಗಿರುವಂತೆ ಕಾಣುತ್ತದೆ. ಹಾಗೆಯೇ ಸಾಧಕನು ಆತ್ಮನಲ್ಲಿಯೂ ಜಲರೂಪವನ್ನು ಕಾಣುತ್ತಾನೆ. ಸ್ವಲ್ಪ ಹೊತ್ತು ಕಳೆದನಂತರ ಆಕಾಶದಲ್ಲಿ ಜಲವು ಮರೆಯಾಗಿ ಅಗ್ನಿಯ ರೂಪವು ಕಾಣಿಸಿಕೊಳ್ಳುತ್ತದೆ.

ತಸ್ಮಿನ್ನುಪರತೇ ಚಾಸ್ಯ ಪೀತವಸ್ತ್ರಃ ಪ್ರಕಾಶತೇ ।
ಊರ್ಣಾರೂಪಸುವರ್ಣಸ್ಯ ತಸ್ಯ ರೂಪಂ ಪ್ರಕಾಶತೇ ॥೨೦॥

ಆ ಅಗ್ನಿರೂಪವು ಮರೆಯಾದನಂತರ ಸಾಧಕನಿಗೆ ವಾಯುತತ್ತ್ವವು ಪ್ರಕಾಶಕ್ಕೆ ಬರುತ್ತದೆ. ಅದು ಹಳದಿಯ ವಸ್ತ್ರವನ್ನು ಧರಿಸಿ ಉಣ್ಣೆಯ ರೂಪಕ್ಕೆ ಸಮನಾದ, ಸುವರ್ಣವರ್ಣವುಳ್ಳ ರೂಪದಿಂದ ಕಂಗೊಳಿಸುತ್ತದೆ.*

ಅಥ ಶ್ವೇತಾಂ ಗತಿಂ ಗತ್ವಾ ವಾಯವ್ಯಂ ಸೂಕ್ಷ್ಮಮಪ್ಯುತ ।
ಅಶುಕ್ಲಂ ಚೇತಸಃ ಸೌಕ್ಷ್ಮ್ಯಮವ್ಯಕ್ತಂ ಬ್ರಾಹ್ಮಣಸ್ಯ ವೈ ॥೨೧॥

ಅಗ್ನಿಯು ವಾಯುವಿನಲ್ಲಿ ಲಯವಾಗಿ ವಾಯುತತ್ತ್ವದ ವಿಜಯವೂ

---

* ತಸ್ಮಿನ್ನುಪರತೇಽಜೋಽಸ್ಯ ಪೀತಶಸ್ತ್ರಃ ಪ್ರಕಾಶತೇ–ಎಂಬ ಪಾಠವನ್ನಿಟ್ಟುಕೊಂಡು ಅಜಃ ಎಂಬುದಕ್ಕೂ ಪೀತಶಸ್ತ್ರಃ ಎಂಬುದಕ್ಕೂ 'ವಾಯುಃ' ಎಂದು ಸಂದರ್ಭಾನುಸಾರವಾಗಿ ವ್ಯಾಖ್ಯಾನಕಾರರು ಅರ್ಥಮಾಡಿರುತ್ತಾರೆ. ಅಜತಿ = ಗಚ್ಛತಿ-ಕ್ಷಿಪತಿ ವಾ = ವೃಕ್ಷಾನಿತ್ಯಜಃ. ಮುಂದೆ ಹೋಗುತ್ತದೆ. ಅಥವಾ ವೃಕ್ಷಗಳನ್ನು ದೂರಕ್ಕೆಸೆಯುತ್ತದೆ. ಆದುದರಿಂದ ಅಜಃ ಪೀತಶಸ್ತ್ರಃ = ಪೀತಶಸ್ತ್ರವತ್ ಪೀತಾನಿ ಗಳಿತಾನಿ ಶಸ್ತ್ರ

ಆದನಂತರ ವಾಯುವಿನ ಸೂಕ್ಷ್ಮರೂಪವು ಸ್ವಚ್ಛವಾದ ಆಕಾಶದಲ್ಲಿ ಲೀನವಾಗಿಹೋಗುತ್ತದೆ. ನೀಲಾಕಾಶವು ಮಾತ್ರವೇ ಉಳಿದಿರುತ್ತದೆ. ಅಂತಹ ಅವಸ್ಥೆಯಲ್ಲಿ ಬ್ರಹ್ಮಭಾವವನ್ನು ಹೊಂದಲಿಚ್ಛಿಸಿರುವ ಯೋಗಿಯ ಮನಸ್ಸು ಅತ್ಯಂತಸೂಕ್ಷ್ಮವಾಗಿರುತ್ತದೆ.

ಏತೇಷ್ವಪಿ ಹಿ ಜಾತೇಷು ಫಲಜಾತಾನಿ ಮೇ ಶೃಣು ।
ಜಾತಸ್ಯ ಪಾರ್ಥಿವೈಶ್ವರ್ಯೈಃ ಸೃಷ್ಟಿರತ್ರ ವಿಧೀಯತೇ ।
ಪ್ರಜಾಪತಿರಿವಾಕ್ಷೋಭ್ಯಃ ಶರೀರಾತ್ಸೃಜತೇ ಪ್ರಜಾಃ ॥೨೨॥

ಈ ಎಲ್ಲ ಲಕ್ಷಣಗಳೂ ಪ್ರಕಟವಾದನಂತರ ಧಾರಣಾಯೋಗದಿಂದ ಯೋಗಿಗೆ ಯಾವ-ಯಾವ ಫಲಗಳು ಲಭಿಸುತ್ತವೆಯೆಂಬುದನ್ನು ಹೇಳುವೆನು ಕೇಳು. ಪಾರ್ಥಿವೈಶ್ವರ್ಯವನ್ನು ಪಡೆದನಂತರ (ಪೃಥ್ವೀತತ್ತ್ವವನ್ನು ವಶಪಡಿಸಿಕೊಂಡನಂತರ) ಯೋಗಿಗೆ ಸೃಷ್ಟಿಸುವ ಶಕ್ತಿಯುಂಟಾಗುತ್ತದೆ. ಪ್ರಜಾಪತಿಯಂತೆ ಕ್ಷೋಭರಹಿತನಾದ ಆ ಯೋಗಿಯು ತನ್ನ ಶರೀರದಿಂದಲೇ ಪ್ರಜೆಗಳನ್ನು ಸೃಷ್ಟಿಸುತ್ತಾನೆ.

ಅಙ್ಗುಲ್ಯಙ್ಗುಷ್ಠಮಾತ್ರೇಣ ಹಸ್ತಪಾದೇನ ವಾ ತಥಾ ।
ಪೃಥಿವೀಂ ಕಮ್ಪಯತ್ಯೇಕೋ ಗುಣೋ ವಾಯೋರಿತಿ ಶ್ರುತಿಃ ॥೨೩॥

ವಾಯುತತ್ತ್ವದ ಸಿದ್ಧಿಯನ್ನು ಪಡೆದಿರುವವನು ಯಾರೊಬ್ಬರ ಸಹಾಯವೂ ಇಲ್ಲದೇ ಏಕಾಕಿಯಾಗಿ ಬೆರಳಿನಿಂದಾಗಲೀ, ಹೆಬ್ಬೆರಳಿನಿಂದಲೇ ಆಗಲೀ, ಕೈಯಿಂದಾಗಲೀ, ಕಾಲಿನಿಂದಾಗಲೀ ಭೂಮಿಯನ್ನೇ ಅಲ್ಲಾಡಿಸಲು ಸಮರ್ಥನಾಗುತ್ತಾನೆ. ಹೀಗೆ ನಾವು ಕೇಳಿದ್ದೇವೆ.

ಆಕಾಶಭೂತಶ್ಚಾಕಾಶೇ ಸವರ್ಣತ್ವಾತ್ಪ್ರಕಾಶತೇ ।
ವರ್ಣತೋ ಗುಹ್ಯತೇ ಚಾಪಿ ಕಾಮಾತ್ಪಿಬತಿ ಚಾಶಯಾನ್ ॥೨೪॥

ವದ್ವಿಚ್ಛೇದಕತ್ವಾಚ್ಚ= ಕಾಯಿಯು ಹಣ್ಣಾದರೆ ಸಾಮಾನ್ಯವಾಗಿ ಹಳದೀಬಣ್ಣಕ್ಕಿರುತ್ತದೆ. ಆದುದರಿಂದ ಪೀತಾನಿ ಎಂಬುದಕ್ಕೆ ಪಕ್ವವಾದ ಎಂದು ಅರ್ಥಮಾಡಿರುತ್ತಾರೆ. ಶಸ್ತ್ರವು ಛೇದನಮಾಡುವಂತೆ ಪೀತವಾದ ಹಣ್ಣುಗಳನ್ನು ಗಾಳಿಯು ವಿಚ್ಛೇದಿಸುತ್ತದೆ. ಕೆಳಕ್ಕೆ ಬೀಳಿಸುತ್ತದೆ. ಆದುದರಿಂದ ಗಾಳಿಗೆ ಪೀತಶಸ್ತ್ರಃ–ಎಂದು ಹೆಸರು.

ಆಕಾಶತತ್ತ್ವದ ಸಿದ್ಧಿಯನ್ನು ಪಡೆದವನು ಆಕಾಶದಲ್ಲಿ ಆಕಾಶದಂತೆಯೇ ಸರ್ವವ್ಯಾಪಿಯಾಗುತ್ತಾನೆ. ಅವನು ತನ್ನ ಶರೀರವನ್ನು ಅಂತರ್ಧಾನಗೊಳಿಸುವ ಸಾಮರ್ಥ್ಯವನ್ನೂ ಪಡೆದಿರುತ್ತಾನೆ. ಜಲತತ್ತ್ವದ ಸಿದ್ಧಿಯನ್ನು ಪಡೆದವನು ಸ್ವೇಚ್ಛೆಯಿಂದ ದೊಡ್ಡ-ದೊಡ್ಡ ಜಲಾಶಯಗಳನ್ನೇ ಕುಡಿಯಬಲ್ಲನು.

ನ ಚಾಸ್ಯ ತೇಜಸಾ ರೂಪಂ ದೃಶ್ಯತೇ ಶಾಮ್ಯತೇ ತಥಾ ।
ಅಹಙ್ಕಾರೇಽಸ್ಯ ವಿಜಿತೇ ಪಞ್ಚೈತೇ ಸ್ಯುರ್ವಶಾನುಗಾಃ ॥೨೫॥

ಅಗ್ನಿತತ್ತ್ವದ ಸಿದ್ಧಿಯನ್ನು ಪಡೆದವನ ತೇಜೋಮಯವಾದ ರೂಪವನ್ನು ಯಾರೂ ಕಣ್ಣೆತ್ತಿ ನೋಡಲಾರರು ಮತ್ತು ಆ ಮಹಾತೇಜಸ್ಸನ್ನು ಉಪಶಮನಗೊಳಿಸಲು ಕೂಡ ಯಾರಿಂದಲೂ ಸಾಧ್ಯವಾಗುವುದಿಲ್ಲ. ಅಹಂಕಾರವನ್ನು ಜಯಿಸಿದ್ದೇ ಆದರೆ–ಪಂಚಭೂತಗಳೂ ಸಾಧಕನ ಅಧೀನವಾಗುತ್ತವೆ.

ಷಣ್ಣಾಮಾತ್ಮನಿ ಬುದ್ಧೌ ಚ ಜಿತಾಯಾಂ ಪ್ರಭವತ್ಯಥ ।
ನಿರ್ದೋಷಪ್ರತಿಭಾ ಹ್ಯೇನಂ ಕೃತ್ಸ್ನಾ ಸಮಭಿವರ್ತತೇ ॥೨೬॥

ಪಂಚಭೂತಗಳು ಮತ್ತು ಅಹಂಕಾರ ಈ ಆರಕ್ಕೂ ಬುದ್ಧಿಯೇ ಆತ್ಮಸ್ವರೂಪವಾಗಿರುತ್ತದೆ. ಆ ಬುದ್ಧಿಯನ್ನು ಜಯಿಸಿದ ನಂತರ ಯೋಗಿಯು ಜ್ಞಾನಯೋಗದ ಸಂಪೂರ್ಣೈಶ್ವರ್ಯವನ್ನೂ ಪಡೆದುಕೊಳ್ಳುತ್ತಾನೆ. ಆ ಯೋಗಿಗೆ ದೋಷರಹಿತವಾದ ಮತ್ತು ಸಮಗ್ರವಾದ ಪ್ರತಿಭೆಯು ದೊರಕುತ್ತದೆ.

ತಥೈವ ವ್ಯಕ್ತಮಾತ್ಮಾನಮವ್ಯಕ್ತಂ ಪ್ರತಿಪದ್ಯತೇ ।
ಯತೋ ನಿಃಸರತೇ ಲೋಕೋ ಭವತಿ ವ್ಯಕ್ತಸಂಜ್ಞಕಃ ॥೨೭॥

ಅದೇ ರೀತಿಯಲ್ಲಿ ಪಂಚಭೂತ, ಅಹಂಕಾರ ಮತ್ತು ಬುದ್ಧಿ –ಈ ಏಳು ಪದಾರ್ಥಗಳಿಗೂ ಕಾರ್ಯಭೂತವಾದ ವ್ಯಕ್ತವಾದ ಜಗತ್ತು ಯಾವುದರಿಂದ ಹೊರಟಿರುವುದೋ ಮತ್ತು ಹೊರಬಂದನಂತರ 'ವ್ಯಕ್ತ' ಎಂಬ ಹೆಸರನ್ನು ಪಡೆದಿರುವುದೋ –ಅಂತಹ ಅವ್ಯಕ್ತದಲ್ಲಿ ಲೀನವಾಗುತ್ತದೆ.

ತತ್ರಾವ್ಯಕ್ತಮಯೀಂ ವಿದ್ಯಾಂ ಶೃಣು ತ್ವಂ ವಿಸ್ತರೇಣ ಮೇ ।
ತಥಾ ವ್ಯಕ್ತಮಯಂ ಚೈವ ಸಾಂಖ್ಯೇ ಪೂರ್ವಂ ನಿಬೋಧ ಮೇ ॥

ವತ್ಸ! ಶುಕದೇವ! ಈಗ ನೀನು ಸಾಂಖ್ಯದರ್ಶನದಲ್ಲಿ ವರ್ಣಿಸಲ್ಪಟ್ಟಿರುವ ಅವ್ಯಕ್ತವಿದ್ಯೆಯನ್ನು ವಿಸ್ತಾರವಾಗಿ ನನ್ನಿಂದ ಕೇಳು. ಎಲ್ಲಕ್ಕಿಂತಲೂ ಮೊದಲು ಸಾಂಖ್ಯಶಾಸ್ತ್ರದಲ್ಲಿ ಹೇಳಲ್ಪಟ್ಟಿರುವ ವ್ಯಕ್ತವಿದ್ಯೆಯನ್ನು ಕೇಳು.

ಪಞ್ಚವಿಂಶತಿ ತತ್ತ್ವಾನಿ ತುಲ್ಯಾನ್ಯುಭಯತಃ ಸಮಮ್ ।
ಯೋಗೇ ಸಾಂಖ್ಯೇಽಪಿ ಚ ತಥಾ ವಿಶೇಷಂ ತತ್ರ ಮೇ ಶೃಣು ॥೨೯॥

ಸಾಂಖ್ಯ ಮತ್ತು ಯೋಗ–ಈ ಎರಡು ದರ್ಶನಗಳಲ್ಲಿಯೂ ಮನುಷ್ಯನ ಶರೀರವು ಇಪ್ಪತ್ತೈದು ತತ್ತ್ವಗಳಿಂದ ಕೂಡಿರುವುದೆಂದು ಏಕಪ್ರಕಾರವಾಗಿಯೇ ಹೇಳಿದ್ದಾರೆ. ಇವುಗಳಲ್ಲಿರುವ ವಿಶೇಷವನ್ನು ಕೇಳು.*

ಪ್ರೋಕ್ತಂ ತದ್ವ್ಯಕ್ತಮಿತ್ಯೇವ ಜಾಯತೇ ವರ್ಧತೇ ಚ ಯತ್ ।
ಜೀರ್ಯತೇ ಮ್ರಿಯತೇ ಚೈವ ಚತುರ್ಭಿರ್ಲಕ್ಷಣೈರ್ಯುತಮ್ ॥೩೦॥

ಹುಟ್ಟು, ಬೆಳವಣಿಗೆ, ಮುಪ್ಪು, ಸಾವು–ಈ ನಾಲ್ಕು ಲಕ್ಷಣಗಳಿಂದ ಯಾವುದು ಕೂಡಿರುವುದೋ–ಅದಕ್ಕೆ ವ್ಯಕ್ತವೆಂದು ಹೆಸರು.

ವಿಪರೀತಮತೋ ಯತ್ತು ತದವ್ಯಕ್ತಮುದಾಹೃತಮ್ ।
ದ್ವಾವಾತ್ಮಾನೌ ಚ ವೇದೇಷು ಸಿದ್ಧಾನ್ತೇಷ್ವಪ್ಯುದಾಹೃತೌ ॥೩೧॥

---

* ಸಾಂಖ್ಯಕಾರಿಕೆಯಲ್ಲಿ ಇಪ್ಪತ್ತೈದು ತತ್ತ್ವಗಳ ವಿಷಯವಾಗಿ ಹೀಗೆ ಹೇಳಿದೆ :

ಮೂಲಪ್ರಕೃತಿರವಿಕೃತಿರ್ಮಹದಾದ್ಯಾಃ ಪ್ರಕೃತಿವಿಕೃತಯಃ ಸಪ್ತ ।
ಷೋಡಶಕಸ್ತು ವಿಕಾರೋ ನ ಪ್ರಕೃತಿರ್ನ ವಿಕೃತಿಃ ಪುರುಷಃ
॥ಸಾಂ–ಕಾ–೩॥

ಅವ್ಯಾಕೃತಮಾಯೆ ಅಥವಾ ಮೂಲಪ್ರಕೃತಿಗೆ ಮಹತ್ತತ್ತ್ವವೇ ಮೊದಲಾದ ಏಳು ವಿಕಾರಗಳಿವೆ. ಮಹತ್ತತ್ತ್ವ, ಅಹಂಕಾರ, ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳೆಂಬ ಐದು ತನ್ಮಾತ್ರೆಗಳು. ಅವುಗಳ ವಿಕಾರಗಳು ಹದಿನಾರು. ಶ್ರೋತ್ರ, ತ್ವಕ್, ನೇತ್ರ, ರಸನೆ ಮತ್ತು ಘ್ರಾಣಗಳೆಂಬ ಐದು ಜ್ಞಾನೇಂದ್ರಿಯಗಳು, ವಾಕ್ಪಾಣಿ-ಪಾದ-ಪಾಯೂಪಸ್ಥಗಳೆಂಬ ಐದು ಕರ್ಮೇಂದ್ರಿಯಗಳು, ಮನಸ್ಸು ಮತ್ತು ಆಕಾಶ, ವಾಯು, ತೇಜಸ್ಸು, ಜಲ ಮತ್ತು ಪೃಥ್ವಿಗಳೆಂಬ ಮಹಾಭೂತಗಳು ಒಟ್ಟು ಹದಿನಾರು.

ಇದಕ್ಕೆ ಯಾವುದು ವಿಪರೀತವಾಗಿರುವುದೋ ಅರ್ಥಾತ್ ಜನ್ಮ-ಮೃತ್ಯು-ಜರಾವೃದ್ಧಿಗಳು ಯಾವುದಕ್ಕಿಲ್ಲವೋ–ಅದು ಅವ್ಯಕ್ತ. ವೇದಗಳಲ್ಲಿಯೂ, ಸಿದ್ಧಾಂತಪ್ರತಿಪಾದಕವಾದ ಶಾಸ್ತ್ರಗಳಲ್ಲಿಯೂ ಜೀವಾತ್ಮಾ ಮತ್ತು ಪರಮಾತ್ಮಾ–ಎಂಬ ಎರಡು ತತ್ತ್ವಗಳು ಹೇಳಲ್ಪಟ್ಟಿವೆ.

ಚತುರ್ಲಕ್ಷಣಜಂ ತ್ವಾದ್ಯಂ ಚತುರ್ವರ್ಗಂ ಪ್ರಚಕ್ಷತೇ ।
ವ್ಯಕ್ತಮವ್ಯಕ್ತಜಂ ಚೈವ ತಥಾ ಬುದ್ಧಮಥೇತರತ್ ।
ಸತ್ತ್ವಂ ಕ್ಷೇತ್ರಜ್ಞ ಇತ್ಯೇತದ್ದ್ವಯಮಪ್ಯನುದರ್ಶಿತಮ್ ॥೩೨॥

ದ್ವಾವಾತ್ಮಾನೌ ಚ ವೇದೇಷು ವಿಷಯೇಷ್ವನುರಜ್ಯತಃ ।
ವಿಷಯಾತ್ಪ್ರತಿಸಂಹಾರಃ ಸಾಂಖ್ಯಾನಾಂ ಸಿದ್ಧಿಲಕ್ಷಣಮ್ ॥೩೩॥

ಜೀವಾತ್ಮನು ಅವ್ಯಕ್ತದಿಂದ ಪ್ರಕಟವಾದರೂ ವ್ಯಕ್ತದ (ದೇಹದ) ಸಂಪರ್ಕವಿರುವವನಾದುದರಿಂದ ಜನ್ಮ, ವೃದ್ಧಿ, ಜರಾ, ಮೃತ್ಯುಗಳೆಂಬ ನಾಲ್ಕು ಲಕ್ಷಣಗಳಿಂದಲೂ ಕೂಡಿರುವವನಂತೆ ಕಾಣುತ್ತಾನೆ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ಸಂಬಂಧವೂ ವ್ಯಕ್ತದೊಡನೆ ಸಂಬಂಧವನ್ನು ಹೊಂದಿರುವ ಜೀವಾತ್ಮನಿಗಿರುತ್ತದೆ. ಮತ್ತೊಂದು (ಪರಮಾತ್ಮನು) ಜ್ಞಾನಸ್ವರೂಪ. ವ್ಯಕ್ತದ (ಜಡದ) ಉತ್ಪತ್ತಿಯು ಜ್ಞಾನಸ್ವರೂಪನಾದ ಆ ಪರಮಾತ್ಮನಿಂದಲೇ ಆಗುತ್ತದೆ. ವ್ಯಕ್ತದ ಸಂಪರ್ಕವನ್ನು ಹೊಂದಿರುವ ಜೀವನು ಸತ್ತ್ವವೆಂದೂ–ಅವ್ಯಕ್ತಾತ್ಮನನ್ನು ಕ್ಷೇತ್ರಜ್ಞನೆಂದೂ ಹೇಳುತ್ತಾರೆ. ಹೀಗೆ ಈ ಎರಡರ ಲಕ್ಷಣಗಳನ್ನೂ ಹೇಳಿಯಾಯಿತು. ಹಿಂದೆ ಹೇಳಿದಂತೆ ವೇದಗಳಲ್ಲಿ ಎರಡು ಆತ್ಮಗಳು

ಶರೀರದಲ್ಲಿರುವ ಪುರುಷನು ಪ್ರಕೃತಿಯೂ ಅಲ್ಲ; ವಿಕೃತಿಯೂ ಅಲ್ಲ. ಪಾತಂಜಲ ಯೋಗದರ್ಶನದಲ್ಲಿ : ವಿಶೇಷಾವಿಶೇಷಲಿಙ್ಗಮಾತ್ರಾಲಿಙ್ಗಾನಿ **ಗುಣಪರ್ವಾಣಿ** (ಸಾಧನ ಪಾದ ೧೯) ವಿಶೇಷ, ಅವಿಶೇಷ, ಲಿಂಗಮಾತ್ರ ಮತ್ತು ಅಲಿಂಗ–ಇವುಗಳು ಗುಣದ ಅಂತಗಳು. ವಿಶೇಷ-ಪಂಚಮಹಾಭೂತಗಳು, ಪಂಚಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯ, ಮನಸ್ಸು. ಅವಿಶೇಷ–ಪಂಚತನ್ಮಾತ್ರಗಳು, ಅಹಂಕಾರ. ಲಿಂಗಮಾತ್ರ, ಮಹತ್ತತ್ತ್ವ, ಅಲಿಂಗ–ಮೂಲಪ್ರಕೃತಿ= ಹೀಗೆ ೨೪ ತತ್ತ್ವಗಳು. ೨೫ನೆಯದು ದ್ರಷ್ಟಾ.

ಹೇಳಲ್ಪಟ್ಟಿವೆ. ವಿಷಯಗಳಲ್ಲಿ ಆಸಕ್ತನಾದ ಜೀವಾತ್ಮನಿಗೆ ವಿಷಯಗಳ ದೆಸೆಯಿಂದ ಹಿಂದಿರುಗುವುದೆಂಬುದೇ ಸಾಂಖ್ಯದ ಸಿದ್ಧಿಯ (ಮೋಕ್ಷದ) ಲಕ್ಷಣವಾಗಿದೆ.

ನಿರ್ಮಮಶ್ಚಾನಹಙ್ಕಾರೋ ನಿರ್ದ್ವನ್ದ್ವಶ್ಛಿನ್ನಸಂಶಯಃ ।
ನೈವ ಕುದ್ಧ್ಯತಿ ನ ದ್ವೇಷ್ಟಿ ನಾನೃತಾ ಭಾಷತೇ ಗಿರಃ ॥೩೪॥

ಆಕ್ರುಷ್ಟಸ್ತಾಡಿತಶ್ಚೈವ ಮೈತ್ರೇಣ ಧ್ಯಾತಿ ನಾಶುಭಮ್ ।
ವಾಗ್ದಣ್ಡಕರ್ಮಮನಸಾಂ ತ್ರಯಾಣಾಂ ಚ ನಿವರ್ತಕಃ ।
ಸಮಃ ಸರ್ವೇಷು ಭೂತೇಷು ಬ್ರಹ್ಮಾಣಮಭಿವರ್ತತೇ ॥೩೫॥

ಯಾವನು (ನಾನು-ನನ್ನದು ಎಂಬ) ಅಹಂಕಾರ-ಮಮಕಾರಗಳನ್ನು ಬಿಟ್ಟಿರುವನೋ, ಶೀತೋಷ್ಣ-ಸುಖ-ದುಃಖಾದಿ ದ್ವಂದ್ವಗಳನ್ನು ಸಮಾನ ಭಾವದಿಂದ ಕಾಣುವನೋ, ಬ್ರಹ್ಮತತ್ತ್ವದ ವಿಷಯದಲ್ಲಿ ಯಾವನಿಗೆ ಸಂಶಯವು ನಾಶವಾಗಿರುವುದೋ, ಯಾವನು ಯಾವಾಗಲೂ ಕೋಪ ಗೊಳ್ಳುವುದಿಲ್ಲವೋ, ಯಾರನ್ನೂ ದ್ವೇಷಿಸುವುದಿಲ್ಲವೋ, ಯಾವಾಗಲೂ ಸುಳ್ಳುಮಾತುಗಳನ್ನಾಡುವುದಿಲ್ಲವೋ, ಬೈಯಲ್ಪಟ್ಟರೂ ಹೊಡೆಯಲ್ಪಟ್ಟರೂ ಯಾರಿಗೂ ಅಹಿತವನ್ನು ಬಯಸುವುದಿಲ್ಲವೋ, ಎಲ್ಲರನ್ನೂ ಮಿತ್ರಭಾವ ದಿಂದಲೇ ಕಾಣುವನೋ, ಮಾತು-ಮನಸ್ಸು ಮತ್ತು ಕರ್ಮಗಳ ಮೂಲಕ ವಾಗಿ ಯಾರಿಗೂ ಯಾವ ವಿಧವಾದ ಕಷ್ಟವನ್ನೂ ಕೊಡುವುದಿಲ್ಲವೋ, ಸಮಸ್ತಪ್ರಾಣಿಗಳಲ್ಲಿಯೂ ಸಮಭಾವವನ್ನೇ ಇಟ್ಟಿರುವನೋ–ಅಂತಹ ಯೋಗಿಯು ಬ್ರಹ್ಮನನ್ನು ಹೊಂದುತ್ತಾನೆ.

ನೈವೇಚ್ಛತಿ ನ ಚಾನಿಚ್ಛೋ ಯಾತ್ರಾಮಾತ್ರವ್ಯವಸ್ಥಿತಃ ।
ಅಲೋಲುಪೋಽವ್ಯಥೋ ದಾನ್ತೋ ನ ಕೃತೀ ನ ನಿರಾಕೃತಿಃ ॥೩೬॥

ನಾಸ್ಯೇನ್ದ್ರಿಯಮನೇಕಾಗ್ರಂ ನ ವಿಕ್ಷಿಪ್ತಮನೋರಥಃ ।
ಸರ್ವಭೂತಸದೃಙ್ಮೈತ್ರಃ ಸಮಲೋಷ್ಟಾಶ್ಮಕಾಞ್ಚನಃ ॥೩೭॥
ತುಲ್ಯಪ್ರಿಯಾಪ್ರಿಯೋ ಧೀರಸ್ತುಲ್ಯನಿನ್ದಾತ್ಮಸಂಸ್ತುತಿಃ ।
ಅಸ್ಪೃಹಃ ಸರ್ವಕಾಮೇಭ್ಯೋ ಬ್ರಹ್ಮಚರ್ಯದೃಢವ್ರತಃ ।
ಅಹಿಂಸ್ರಃ ಸರ್ವಭೂತಾನಾಮೀದೃಕ್ಸಾಂಖ್ಯೋ ವಿಮುಚ್ಯತೇ ॥೩೮॥

ಯಾವನು ಯಾವ ವಸ್ತುವಿನಲ್ಲಿಯೂ ಧರ್ಮವಿರುದ್ಧವಾದ ಇಚ್ಛೆಯನ್ನಾಗಲೀ ಅನಿಚ್ಛೆಯನ್ನಾಗಲೀ ತೋರಿಸುವುದಿಲ್ಲವೋ, ಲೋಭರಹಿತನೂ ವ್ಯಥೆಯಿಲ್ಲದವನೂ ಜಿತೇಂದ್ರಿಯನೂ ಆಗಿದ್ದಾನೆಯೋ, ಯಾವನು ಕರ್ಮಗಳನ್ನು ಮಾಡುವವನೂ ಮತ್ತು ಮಾಡದವನೂ ಆಗಿರುವನೋ (ನಿಷ್ಕಾಮನಾಗಿ ಕರ್ಮಗಳನ್ನು ಮಾಡುವನೋ), ಯಾವನ ಇಂದ್ರಿಯಗಳೂ ಮತ್ತು ಮನಸ್ಸೂ ಹಲವಾರು ವಿಷಯಗಳ ಕಡೆಗೆ ಧಾವಿಸುವುದಿಲ್ಲವೋ, ಯಾವನ ಮನೋರಥಗಳು ಪೂರ್ಣವಾಗಿರುವುವೋ, ಯಾವನು ಸರ್ವ ಪ್ರಾಣಿಗಳಲ್ಲಿಯೂ ಸಮಾನವಾದ ಮಿತ್ರಭಾವವನ್ನು ಹೊಂದಿರುವನೋ, ಮಣ್ಣುಹೆಂಟೆ, ಕಲ್ಲು ಮತ್ತು ಚಿನ್ನಗಳನ್ನು ಒಂದೇ ರೀತಿಯಲ್ಲಿ ಕಾಣುವನೋ, ಪ್ರಿಯ ಮತ್ತು ಅಪ್ರಿಯಗಳನ್ನು ಸಮಾನವಾಗಿ ಭಾವಿಸುವನೋ, ಧೀರನೋ, ನಿಂದೆ ಮತ್ತು ಸ್ತುತಿಗಳನ್ನೂ ಸಮವಾಗಿ ಕಾಣುವನೋ, ಎಲ್ಲ ಕಾಮನೆಗಳ ಮೇಲಿನ ಆಶೆಯನ್ನೂ ತೊರೆದಿರುವನೋ, ಬ್ರಹ್ಮಚರ್ಯವ್ರತವನ್ನು ದೃಢವಾಗಿ ಪಾಲಿಸುತ್ತಿರುವನೋ, ಯಾವ ಪ್ರಾಣಿಯನ್ನೇ ಆದರೂ ಹಿಂಸೆಮಾಡುವುದಿಲ್ಲವೋ–ಅಂತಹ ಧೀರನಾದ ಸಾಂಖ್ಯಯೋಗಿಯು (ಜ್ಞಾನಿಯು) ಸಂಸಾರಬಂಧನದಿಂದ ಮುಕ್ತನಾಗುತ್ತಾನೆ.

ಯಥಾ ಯೋಗಾದ್ವಿಮುಚ್ಯನ್ತೇ ಕಾರಣೈರ್ಯೈರ್ನಿಬೋಧ ತತ್ ।
ಯೋಗೈಶ್ವರ್ಯಮತಿಕ್ರಾನ್ತೋ ಯೋ ನಿಷ್ಕ್ರಾಮತಿ ಮುಚ್ಯತೇ ॥೪೦॥

ಯೋಗಿಯು ಯಾವ ರೀತಿಯಲ್ಲಿ ಮತ್ತು ಯಾವ ಕಾರಣಗಳಿಂದ ಯೋಗದ ಫಲಸ್ವರೂಪವಾದ ಮೋಕ್ಷವನ್ನು ಹೊಂದುತ್ತಾನೆಂಬುದನ್ನು ಕೇಳು. ಯಾವನು ಪರಮವೈರಾಗ್ಯಬಲದಿಂದ ಯೋಗದಿಂದ ಲಭಿಸುವ ಐಶ್ವರ್ಯಗಳನ್ನು (ಅಣಿಮಾದಿ ಸಿದ್ಧಿಗಳನ್ನು) ಅತಿಕ್ರಮಿಸಿ ಮುಂದೆ ಹೋಗುವನೋ ಅವನು ಮುಕ್ತನಾಗುತ್ತಾನೆ.

ಇತ್ಯೇಷಾ ಭಾವಜಾ ಬುದ್ಧಿಃ ಕಥಿತಾ ತೇ ನ ಸಂಶಯಃ ।
ಏವಂ ಭವತಿ ನಿರ್ದ್ವನ್ದ್ವೋ ಬ್ರಹ್ಮಾಣಂ ಚಾಧಿಗಚ್ಛತಿ ॥೪೧॥

ಶುಕ! ಭಾವಶುದ್ಧಿಯಿಂದ ಹುಟ್ಟುವ ಬುದ್ಧಿಯನ್ನು (ಜ್ಞಾನವನ್ನು)

ನಿನಗೆ ವರ್ಣಿಸಿ ಹೇಳಿದ್ದೇನೆ. ಹೀಗೆ ಸಾಧನೆಮಾಡುವುದರಿಂದ ಸಾಧಕನು ದ್ವಂದ್ವಗಳಿಂದ ರಹಿತನಾಗುತ್ತಾನೆ ಮತ್ತು ಬ್ರಹ್ಮವಸ್ತುವನ್ನು ಹೊಂದುತ್ತಾನೆ. ಇದರಲ್ಲಿ ಸಂಶಯಲೇಶವೂ ಇಲ್ಲ."

೨೩೬ನೆಯ ಅಧ್ಯಾಯವು ಮುಗಿಯಿತು.

೨೩೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಸೃಷ್ಟಿಯ ಸಮಸ್ತಕಾರ್ಯಗಳಲ್ಲಿಯೂ ಬುದ್ಧಿಗೆ ಇರುವ ಪ್ರಾಧಾನ್ಯ: ಬುದ್ಧಿಗೆ ಅನುಗುಣವಾಗಿ ಪ್ರಾಣಿಗಳಲ್ಲಿರುವ ತಾರತಮ್ಯಗಳ ವರ್ಣನೆ

ಧರ್ಮಜ! ವ್ಯಾಸರು ಹೇಳುತ್ತಾರೆ :

ಅಥ ಜ್ಞಾನಪ್ಲವಂ ಧೀರೋ ಗೃಹೀತ್ವಾ ಶಾನ್ತಿಮಾತ್ಮನಃ ।
ಉನ್ಮಜ್ಜಂಶ್ಚ ನಿಮಜ್ಜಂಶ್ಚ ಜ್ಞಾನಮೇವಾಭಿಸಂಶ್ರಯೇತ್ ॥೧॥

"ಶುಕ! ಧೀರನಾದ ಪುರುಷನು ತನ್ನ ಪರಮಶಾಂತಿಗಾಗಿ ಜ್ಞಾನವೆಂಬ ನೌಕೆಯನ್ನು ಅವಲಂಬಿಸಿ ಸಂಸಾರಸಾಗರದಲ್ಲಿ ಮುಳುಗುತ್ತಾ ಏಳುತ್ತಾ ಜ್ಞಾನವನ್ನೇ ಆಶ್ರಯಿಸಬೇಕು."

ಶುಕನು ಪ್ರಶ್ನಿಸುತ್ತಾನೆ :

ಕಿಂ ತಜ್ಜ್ಞಾನಮಥೋ ವಿದ್ಯಾ ಯಥಾ ನಿಸ್ತರತೇ ದ್ವಯಮ್ ।
ಪ್ರವೃತ್ತಿಲಕ್ಷಣೋ ಧರ್ಮೋ ನಿವೃತ್ತಿರಿತಿ ವಾ ವದ ॥೨॥

"ತಂದೆಯೇ! ಯಾವ ವಿದ್ಯೆಯ ಅಥವಾ ಜ್ಞಾನದ ಮೂಲಕವಾಗಿ ಮನುಷ್ಯನು ಹುಟ್ಟು-ಸಾವುಗಳೆರಡನ್ನೂ ದಾಟುತ್ತಾನೆ? ಆ ಧರ್ಮದ ಲಕ್ಷಣವು ಪ್ರವೃತ್ತಿಯೇ ಅಥವಾ ನಿವೃತ್ತಿಯೇ?–ಎಂಬುದನ್ನೂ ನನಗೆ ಹೇಳು."

ವ್ಯಾಸರು ಹೇಳುತ್ತಾರೆ :

ಯಸ್ತು ಪಶ್ಯನ್ಸ್ವಭಾವೇನ ವಿನಾಭಾವಮಚೇತನಃ ।
ಪುಷ್ಯತೇ ಚ ಪುನಃ ಸರ್ವಾನ್ಪ್ರಜ್ಞಯಾ ಮುಕ್ತಹೇತುಕಾನ್ ॥೩॥

“ಶುಕ! ಯಾವನು ಈ ಜಗತ್ತನ್ನು ಸ್ವಭಾವಸಿದ್ಧವಾದುದೆಂದು ಭಾವಿಸುವನೋ–ಈ ಜಗತ್ತಿಗೆ ಬೇರೆ ಯಾವುದೂ ಮೂಲಕಾರಣವಾಗಲೀ ಚೇತನವಾಗಲೀ ಇಲ್ಲವೆಂದು ತಿಳಿಯುವನೋ–ಅವನು ಅಜ್ಞಾನಿಯೇ ಸರಿ. ಇದನ್ನು ಸಾಧಿಸಲೆಂದೇ ಅವನು ತನ್ನ ಬುದ್ಧಿಯಿಂದ ಕಾರಣರಹಿತವಾದ ಎಲ್ಲ ವಾದಗಳನ್ನೂ ಪೋಷಿಸಿಕೊಂಡೇ ಬರುತ್ತಿರುತ್ತಾನೆ.

ಯೇಷಾಂ ಚೈಕಾನ್ತಭಾವೇನ ಸ್ವಭಾವಾತ್ಕಾರಣಂ ಮತಮ್ ।
ಪೂತ್ವಾ ತೃಣಮಿಷೀಕಾಂ ವಾ ತೇ ಲಭನ್ತೇ ನ ಕಿಂಚನ ॥೪॥

‘ವಸ್ತುಗತವಾದ ಸ್ವಭಾವವೇ ಜಗತ್ತಿಗೆ ಕಾರಣವಾಗಿದೆ. ಸ್ವಭಾವದಿಂದ ಭಿನ್ನವಾದುದು ಬೇರೆ ಯಾವುದೂ ಇಲ್ಲ. (ಹಾಲು ಮೊಸರಾಗುವುದು ಸ್ವಭಾವ. ಅದಕ್ಕೆ ಯಾರ ಅನುಗ್ರಹವೂ ಬೇಕಾಗಿಲ್ಲ. ಹಾಗೆಯೇ ಜಗತ್ತು ಸ್ವಾಭಾವಿಕವಾಗಿ ಹುಟ್ಟಿದೆ. ಸ್ವಾಭಾವಿಕವಾಗಿಯೇ ಬೆಳೆಯುತ್ತದೆ. ಸ್ವಾಭಾವಿಕವಾಗಿಯೇ ವಿನಾಶಹೊಂದುತ್ತದೆ. ಸ್ವಭಾವದಿಂದ ಬೇರೆ ಯಾದುದು ಯಾವುದೂ ಇಲ್ಲ’)–ಎಂಬುದು ಸ್ವಭಾವವಾದಿಗಳ ಅಥವಾ ನಾಸ್ತಿಕರ ವಾದವಾಗಿದೆ. ಆದರೆ ಇಂದ್ರಿಯಗಳಿಗೆ ವಿಷಯನಾಗದಿದ್ದ ಮಾತ್ರಕ್ಕೆ ಪರಮಾತ್ಮನಿಲ್ಲ ಎಂದು ಹೇಳುವುದಾಗಲೀ–ಜಗತ್ತಿಗೆ ಮೂಲಕಾರಣವಿಲ್ಲ ಎಂದು ಹೇಳುವುದಾಗಲೀ–ಸರಿಯಲ್ಲ. ಮೌಂಜಿಯಹುಲ್ಲನ್ನು ಶೋಧಿಸಿದ ಬಳಿಕ ಅದರಲ್ಲಿರುವ ಸೂಕ್ಷ್ಮವಾದ ಜಂಬುಹುಲ್ಲು ಸಿಕ್ಕುವುದಿಲ್ಲವೇನು? ಶೋಧಿಸುವ ಮೊದಲು ಅದು ಕಣ್ಣಿಗೆ ಕಾಣಿಸದೇ ಇರುವುದರಿಂದ ಜಂಬುಹುಲ್ಲೇ ಇಲ್ಲ ಎಂದು ಹೇಳುವುದು ಎಷ್ಟು ಅಸಂಗತವಾಗುವುದೋ ಹಾಗೆಯೇ ಇಂದ್ರಿಯಗಳಿಗೆ ಅಗೋಚರನಾದುದರಿಂದ ಪರಮಾತ್ಮನನ್ನು ಇಲ್ಲವೆಂದು ಹೇಳುವುದೂ ಅಷ್ಟೇ ಅಸಂಗತವಾಗುತ್ತದೆ. ಮೌಂಜಿಯ ಹುಲ್ಲನ್ನು ಶೋಧಿಸಿ ಜಂಬುಹುಲ್ಲನ್ನು ತೆಗೆಯುವಂತೆ–ಇಂದ್ರಿಯಗಳನ್ನು ಶೋಧಿಸಿ ಪರಮಾತ್ಮನನ್ನು ಕಂಡುಕೊಳ್ಳಬೇಕು.

ಯೇ ಚೈನಂ ಪಕ್ಷಮಾಶ್ರಿತ್ಯ ನಿವರ್ತನ್ತ್ಯಲ್ಪಮೇಧಸಃ ।
ಸ್ವಭಾವಂ ಕಾರಣಂ ಜ್ಞಾತ್ವಾ ನ ಶ್ರೇಯಃ ಪ್ರಾಪ್ನುವನ್ತಿ ತೇ ॥೫॥

ಈ ನಾಸ್ತಿಕವಾದವನ್ನು ಆಶ್ರಯಿಸಿ ಸೃಷ್ಟಿ-ಸ್ಥಿತಿ-ಲಯಗಳಿಗೆ

ಸ್ವಭಾವವೇ ಕಾರಣವೆಂದು ಭಾವಿಸಿ ಪರಮೇಶ್ವರನ ಉಪಾಸನೆಯಿಂದ ನಿವೃತ್ತರಾಗುವ ಮಂದಬುದ್ಧಿಯವರಾದ ಮಾನವರು ಶ್ರೇಯಸ್ಸನ್ನು ಹೊಂದುವುದಿಲ್ಲ.

ಸ್ವಭಾವೋ ಹಿ ವಿನಾಶಾಯ ಮೋಹಕರ್ಮ ಮನೋಭವಃ ।
ನಿರುಕ್ತಮೇತಯೋರೇತತ್ಸ್ವಭಾವಪರಿಭಾವಯೋಃ ॥೬॥

ನಾಸ್ತಿಕರ ಕಲ್ಪನಾಮಾತ್ರವಾಗಿರುವ ಮೋಹಜನಿತವಾಗಿರುವ ಸ್ವಭಾವ ವಾದವು ವಿನಾಶಕ್ಕೆ ಎಡೆಮಾಡಿಕೊಡುತ್ತದೆ. ಈ ಸ್ವಭಾವ ಮತ್ತು ಪರಿಭಾವ ಗಳಿಗೆ ಅವಯವಾರ್ಥವು ಹೀಗಿದೆ.

ಕೃಷ್ಯಾದೀನೀಹ ಕರ್ಮಾಣಿ ಸಸ್ಯಸಂಹರಣಾನಿ ಚ ।
ಪ್ರಜ್ಞಾವದ್ಭಿಃ ಪ್ರಕ್ಳೃಪ್ತಾನಿ ಯಾನಾಸನಗೃಹಾಣಿ ಚ ॥೭॥

ಪ್ರಜ್ಞಾವಂತರಾದವರು ಸಸ್ಯಲಾಭಕ್ಕಾಗಿ ಕೃಷಿಯೇ ಮೊದಲಾದ ಕರ್ಮಗಳನ್ನೂ, ಬೀಜಗಳ ಸಂಗ್ರಹಣಕಾರ್ಯಗಳನ್ನೂ ಮಾಡುತ್ತಾರೆ. ಪ್ರಯಾಣಮಾಡಲು ಗಾಡಿಗಳನ್ನೂ, ಕುಳಿತುಕೊಳ್ಳಲು ಆಸನಗಳನ್ನೂ ಕಲ್ಪಿಸಿಕೊಳ್ಳುತ್ತಾರೆ. ವಾಸಿಸಲು ಮನೆಗಳನ್ನೂ ಕಟ್ಟಿಕೊಳ್ಳುತ್ತಾರೆ.

(ಸ್ವಭಾವದಿಂದಲೇ ಎಲ್ಲವೂ ಸಾಧ್ಯವಾಗುವುದಾಗಿದ್ದರೆ ಬೆಳೆಯೂ ತಾನೇ ತಾನಾಗಿ ಬೆಳೆಯಬೇಕಾಗಿತ್ತು. ಯಾನಾಸನ-ಗೃಹಗಳೂ ತಾವೇ ತಾವಾಗಿ ನಿರ್ಮಾಣವಾಗಬೇಕಾಗಿದ್ದಿತು. ಆದುದರಿಂದ ಸ್ವಭಾವದಿಂದಲೇ ಎಲ್ಲವೂ ಸಿದ್ಧವಾಗುವುದಿಲ್ಲವೆಂಬುದೂ–ಯಾವುದಕ್ಕೇ ಆದರೂ ಕರ್ತೃ ಎಂಬುವನೊಬ್ಬನಿರಬೇಕೆಂಬುದೂ–ಇದರಿಂದಲೇ ಸಿದ್ಧವಾಗುತ್ತದೆ.)

ಆಕ್ರೀಡಾನಾಂ ಗೃಹಾಣಾಂ ಚ ಗದಾನಾಮಗದಸ್ಯ ಚ ।
ಪ್ರಜ್ಞಾವನ್ತಃ ಪ್ರಯೋಕ್ತಾರೋ ಜ್ಞಾನವದ್ಭಿರನುಷ್ಠಿತಾಃ ॥೮॥

ಆಟವಾಡಲು ಮೈದಾನ, ವಾಸಿಸಲು ಮನೆ–ಇವುಗಳೆಲ್ಲವನ್ನೂ ಪ್ರಾಜ್ಞರಾದವರೇ ಮಾಡಿಕೊಳ್ಳುತ್ತಾರೆ. (ಇವುಗಳು ತಾವೇ ತಾವಾಗಿ ಆಗುವು ದಿಲ್ಲ.) ಆಯುರ್ವೇದವನ್ನು ತಿಳಿದವರು ರೋಗಿಗಳ ರೋಗವನ್ನು ತಿಳಿದು

ಅದರ ಪರಿಹಾರಕ್ಕಾಗಿ ಔಷಧಗಳನ್ನು ಕೊಡುತ್ತಾರೆ. (ಈ ಕಾರ್ಯಗಳಾವುವೂ ಸ್ವಭಾವದಿಂದಲೇ ನಡೆಯುವುದಿಲ್ಲ.)

ಪ್ರಜ್ಞಾ ಸಂಯೋಜಯತ್ಯರ್ಥಂ ಪ್ರಜ್ಞಾ ಶ್ರೇಯೋಽಧಿಗಚ್ಛತಿ ।
ರಾಜಾನೋ ಭುಞ್ಜತೇ ರಾಜ್ಯಂ ಪ್ರಜ್ಞಯಾ ತುಲ್ಯಲಕ್ಷಣಾಃ ॥೯॥

ಬುದ್ಧಿಯಿಂದಲೇ ಐಶ್ವರ್ಯದ ಪ್ರಾಪ್ತಿಯಾಗುತ್ತದೆ. ಬುದ್ಧಿಯಿಂದಲೇ ಮನುಷ್ಯನಿಗೆ ಶ್ರೇಯಸ್ಸು ಲಭಿಸುತ್ತದೆ. ಸಮಾನಲಕ್ಷಣಗಳುಳ್ಳ ರಾಜರಲ್ಲಿ ಯಾರು ಹೆಚ್ಚು ಬುದ್ಧಿವಂತರೋ–ಅವರೇ ರಾಜ್ಯವನ್ನು ಉಪಭೋಗಿಸುತ್ತಾರೆ.

ಪರಾವರಂ ತು ಭೂತಾನಾಂ ಜ್ಞಾನೇನೈವೋಪಲಭ್ಯತೇ ।
ವಿದ್ಯಯಾ ತಾತ ಸೃಷ್ಟಾನಾಂ ವಿದ್ಯೈವೇಹ ಪರಾ ಗತಿಃ ॥೧೦॥

ಪ್ರಾಣಿಗಳ ಶ್ರೇಷ್ಠತೆಯು ಜ್ಞಾನದಿಂದಲೇ ಹೊಂದಲ್ಪಡುತ್ತದೆ. ವಿದ್ಯೆಯಿಂದ ಹುಟ್ಟಿರುವ ಸಕಲಪ್ರಾಣಿಗಳಿಗೂ ವಿದ್ಯೆಯೇ ಶ್ರೇಷ್ಠವಾದ ಗತಿಯಾಗಿದೆ.

ಭೂತಾನಾಂ ಜನ್ಮ ಸರ್ವೇಷಾಂ ವಿವಿಧಾನಾಂ ಚತುರ್ವಿಧಮ್ ।
ಜರಾಯುಜಾಣ್ಡಜೋದ್ಭಿಜ್ಜಸ್ವೇದಜಂ ಚೋಪಲಕ್ಷಯೇತ್ ॥೧೧॥

ಪ್ರಪಂಚದಲ್ಲಿ ನಾನಾವಿಧವಾದ ಎಲ್ಲ ಪ್ರಾಣಿಗಳ ಹುಟ್ಟನ್ನೂ ತಿಳಿದುಕೊಳ್ಳಬೇಕು. ಈ ಪ್ರಾಣಿಗಳು ನಾಲ್ಕು ವಿಧಗಳಾಗಿವೆ. ಗರ್ಭಕೋಶದಿಂದ ಹುಟ್ಟುವ ಪ್ರಾಣಿಗಳು ; ಮೊಟ್ಟೆಯಿಂದ ಹುಟ್ಟುವ ಪ್ರಾಣಿಗಳು ; ನೆಲವನ್ನು ಭೇದಿಸಿಕೊಂಡು ಹುಟ್ಟುವ ಪ್ರಾಣಿಗಳು ಮತ್ತು ಬೆವರು ನೀರಿನಿಂದ ಹುಟ್ಟುವ ಪ್ರಾಣಿಗಳು. ಇವುಗಳ ಕಡೆಗೂ ಲಕ್ಷ್ಯಕೊಡಬೇಕು.

ಸ್ಥಾವರೇಭ್ಯೋ ವಿಶಿಷ್ಟಾನಿ ಜಙ್ಗಮಾನ್ಯುಪಧಾರಯೇತ್ ।
ಉಪಪನ್ನಂ ಹಿ ಯಚ್ಚೇಷ್ಟಾ ವಿಶಿಷ್ಯೇತ ವಿಶೇಷ್ಯಯಾ ॥೧೨॥

ಚಲಿಸದೇ ಇರುವ ಪ್ರಾಣಿಗಳಿಗಿಂತಲೂ ಚಲಿಸುವ ಪ್ರಾಣಿಗಳು ಶ್ರೇಷ್ಠವೆಂದು ತಿಳಿಯಬೇಕು. ಇದು ಯುಕ್ತಿಯುಕ್ತವೂ ಆಗಿದೆ.

ಏಕೆಂದರೆ : ಚಲಿಸುವ ಪ್ರಾಣಿಗಳಲ್ಲಿ ಶರೀರವ್ಯಾಪಾರವನ್ನು ವಿಶೇಷರೂಪದಲ್ಲಿ ಕಾಣಬಹುದು. ಈ ವಿಶೇಷತೆಯಿರುವುದರಿಂದಲೇ ಜಂಗಮಪ್ರಾಣಿಗಳ ವಿಶಿಷ್ಟತೆಯು (ಶ್ರೇಷ್ಠತೆಯು) ಸಿದ್ಧವಾಗುತ್ತದೆ.

ಆಹುರ್ವೈ ಬಹುಪಾದಾನಿ ಜಙ್ಗಮಾನಿ ದ್ವಯಾನಿ ತು ।
ಬಹುಪಾದ್ಭ್ಯೋ ವಿಶಿಷ್ಟಾನಿ ದ್ವಿಪದಾನಿ ಬಹೂನ್ಯಪಿ ॥೧೩॥

ಚಲಿಸುವ ಪ್ರಾಣಿಗಳಲ್ಲಿಯೂ ಬಹುಪಾದಪ್ರಾಣಿಗಳು ಮತ್ತು ದ್ವಿಪಾದ ಪ್ರಾಣಿಗಳು–ಎಂದು ಎರಡು ವಿಧಗಳಾಗಿವೆ. ಇವುಗಳಲ್ಲಿ ಬಹುಪಾದ ಪ್ರಾಣಿಗಳಿಗಿಂತಲೂ ದ್ವಿಪಾದಪ್ರಾಣಿಗಳೇ ಬಹಳ ವಿಶಿಷ್ಟವಾದುವುಗಳು (ಶ್ರೇಷ್ಠವಾದುವುಗಳು.)

ದ್ವಿಪಾದಾನಿ ದ್ವಯಾನ್ಯಾಹುಃ ಪಾರ್ಥಿವಾನೀತರಾಣಿ ಚ ।
ಪಾರ್ಥಿವಾನಿ ವಿಶಿಷ್ಟಾನಿ ತಾನಿ ಹ್ಯನ್ನಾನಿ ಭುಞ್ಜತೇ ॥೧೪॥

ದ್ವಿಪಾದಪ್ರಾಣಿಗಳಲ್ಲಿಯೂ ಪೃಥಿವೀಚರರು (ಮನುಷ್ಯರು) ಮತ್ತು ಖೇಚರರು (ಪಕ್ಷಿಗಳು)–ಎಂಬುದಾಗಿ ಎರಡು ಭೇದಗಳಿವೆ. ಪೃಥಿವೀಚರ ಪ್ರಾಣಿಗಳು ಅನ್ನವನ್ನು ತಿನ್ನುವುದರಿಂದ ಖೇಚರಪ್ರಾಣಿಗಳಿಗಿಂತಲೂ ವಿಶಿಷ್ಟವಾದುವುಗಳು.

ಪಾರ್ಥಿವಾನಿ ದ್ವಯಾನ್ಯಾಹುರ್ಮಧ್ಯಮಾನ್ಯಧಮಾನಿ ತು ।
ಮಧ್ಯಮಾನಿ ವಿಶಿಷ್ಟಾನಿ ಜಾತಿಧರ್ಮೋಪಧಾರಣಾತ್ ॥೧೫॥

ಭೂಚರಪ್ರಾಣಿಗಳಲ್ಲಿಯೂ ಮಧ್ಯಮಭೂಚರಪ್ರಾಣಿಗಳು, ಅಧಮ ಭೂಚರಪ್ರಾಣಿಗಳು–ಎಂಬ ಎರಡು ಭೇದವನ್ನು ಹೇಳುತ್ತಾರೆ. ಜಾತಿಧರ್ಮಗಳನ್ನು (ವರ್ಣಧರ್ಮಗಳನ್ನು) ಹೊಂದಿರುವ ಕಾರಣ ಅಧಮಭೂಚರ ಪ್ರಾಣಿಗಳಿಗಿಂತಲೂ ಮಧ್ಯಮಭೂಚರಪ್ರಾಣಿಗಳು ಶ್ರೇಷ್ಠವಾದುವುಗಳು.

ಮಧ್ಯಮಾನಿ ದ್ವಯಾನ್ಯಾಹುರ್ಧರ್ಮಜ್ಞಾನೀತರಾಣಿ ಚ ।
ಧರ್ಮಜ್ಞಾನಿ ವಿಶಿಷ್ಟಾನಿ ಕಾರ್ಯಾಕಾರ್ಯೋಪಧಾರಣಾತ್ ॥೧೬॥

ಮಧ್ಯಮಭೂಚರಪ್ರಾಣಿಗಳಲ್ಲಿ (ಮನುಷ್ಯರಲ್ಲಿ) ಧರ್ಮವನ್ನು ತಿಳಿದವರು ಮತ್ತು ಧರ್ಮವನ್ನು ತಿಳಿಯದೇ ಇರುವವರು–ಎಂಬ ಎರಡು ಭೇದ

ಗಳಿವೆಯೆಂದು ಹೇಳುತ್ತಾರೆ. ಇವರಲ್ಲಿ ಧರ್ಮಜ್ಞರಾದವರು ಶ್ರೇಷ್ಠರು. ಏಕೆಂದರೆ : ಧರ್ಮಜ್ಞರು ಕಾರ್ಯಾಕಾರ್ಯಗಳನ್ನು ವಿವೇಚಿಸಿ ಕರ್ತವ್ಯಪರಿಪಾಲನೆಯನ್ನು ಮಾಡುತ್ತಾರೆ.

ಧರ್ಮಜ್ಞಾನಿ ದ್ವಯಾನ್ಯಾಹುರ್ವೇದಜ್ಞಾನೀತರಾಣಿ ಚ ।
ವೇದಜ್ಞಾನಿ ವಿಶಿಷ್ಟಾನಿ ವೇದೋ ಹ್ಯೇಷು ಪ್ರತಿಷ್ಠಿತಃ ॥೧೭॥

ಧರ್ಮಜ್ಞರಲ್ಲಿಯೂ ವೇದವನ್ನು ತಿಳಿದವರು, ವೇದವನ್ನು ತಿಳಿಯದೇ ಇರುವವರು–ಎಂಬ ಎರಡು ಭೇದಗಳಿವೆಯೆಂದು ಹೇಳುತ್ತಾರೆ. ಕೇವಲ ಧರ್ಮಜ್ಞರಿಗಿಂತಲೂ ವೇದಗಳನ್ನು ತಿಳಿದು ಧರ್ಮಜ್ಞರಾಗಿರುವವರು ಶ್ರೇಷ್ಠರು. ಏಕೆಂದರೆ : ಸರ್ವಧರ್ಮಗಳಿಗೂ ಮೂಲವಾದ ವೇದವು ಅವರಲ್ಲಿ ಪ್ರತಿಷ್ಠಿತವಾಗಿರುತ್ತದೆ.

ವೇದಜ್ಞಾನಿ ದ್ವಯಾನ್ಯಾಹುಃ ಪ್ರವಕ್ತೄಣೀತರಾಣಿ ಚ ।
ಪ್ರವಕ್ತೄಣಿ ವಿಶಿಷ್ಟಾನಿ ಸರ್ವಧರ್ಮೋಪಧಾರಣಾತ್ ॥೧೮॥

ವೇದಜ್ಞರಲ್ಲಿಯೂ ಪ್ರವಚನಕಾರರು ಮತ್ತು ಪ್ರವಚನಮಾಡದೇ ಇರುವವರೂ–ಎಂಬ ಎರಡು ಭೇದಗಳಿವೆಯೆಂದು ಹೇಳುತ್ತಾರೆ. ಅವರಲ್ಲಿ ಪ್ರವಚನಕಾರರೇ ಶ್ರೇಷ್ಠರಾದವರು. ಏಕೆಂದರೆ : ಅವರು ಎಲ್ಲ ಧರ್ಮಗಳನ್ನೂ ತಿಳಿದವರಾಗಿರುತ್ತಾರೆ.

ವಿಜ್ಞಾಯನ್ತೇ ಹಿ ಯೈರ್ವೇದಾಃ ಸಧರ್ಮಾಃ ಸಕ್ರಿಯಾಫಲಾಃ ।
ಸಧರ್ಮಾ ನಿಖಿಲಾ ವೇದಾಃ ಪ್ರವಕ್ತೃಭ್ಯೋ ವಿನಿಃಸೃತಾಃ ॥೧೯॥

ಇಂತಹ ಪ್ರವಕ್ತೃಗಳ ಮುಖದಿಂದ ಪ್ರವಚನಗಳ ಮೂಲಕವಾಗಿ ಹೊರಬರುವ ಧರ್ಮ, ಕರ್ಮ, ಫಲಸಹಿತವಾದ ಸರ್ವವೇದಗಳ ಜ್ಞಾನ–ಇವೆಲ್ಲವೂ ಇತರರಿಗೆ ತಿಳಿಯುತ್ತವೆ. (ಇತರರು ಇವರಿಂದ ಜ್ಞಾನಲಾಭವನ್ನು ಪಡೆಯುತ್ತಾರೆ.)

ಪ್ರವಕ್ತೄಣಿ ದ್ವಯಾನ್ಯಾಹುರಾತ್ಮಜ್ಞಾನೀತರಾಣಿ ಚ ।
ಆತ್ಮಜ್ಞಾನಿ ವಿಶಿಷ್ಟಾನಿ ಜನ್ಮಜನ್ಮೋಪಧಾರಣಾತ್ ॥೨೦॥

ಪ್ರವಕ್ತೃಗಳಲ್ಲಿಯೂ ಆತ್ಮಜ್ಞಾನವುಳ್ಳವರು ಮತ್ತು ಆತ್ಮಜ್ಞಾನ

ವಿಲ್ಲದವರು–ಎಂಬ ಎರಡು ಭೇದಗಳಿವೆಯೆಂದು ಹೇಳುತ್ತಾರೆ. ಹುಟ್ಟು-ಸಾವುಗಳ ರಹಸ್ಯವನ್ನು ತಿಳಿದವರಾಗಿರುವುದರಿಂದ ಆತ್ಮಜ್ಞರೇ ಶ್ರೇಷ್ಠರಾಗಿರುತ್ತಾರೆ.

ಧರ್ಮದ್ವಯಂ ಹಿ ಯೋ ವೇದಃ ಸ ಸರ್ವಜ್ಞಃ ಸ ಸರ್ವವಿತ್ ।
ಸ ತ್ಯಾಗೀ ಸತ್ಯಸಂಕಲ್ಪಃ ಸತ್ಯಃ ಶುಚಿರಥೇಶ್ವರಃ ॥೨೧॥

ಯಾರು ಪ್ರವೃತ್ತಿ ಮತ್ತು ನಿವೃತ್ತಿರೂಪವಾದ ಎರಡು ಧರ್ಮಗಳನ್ನೂ ತಿಳಿದಿರುವನೋ – ಅವನೇ ಸರ್ವಜ್ಞನೂ, ಸರ್ವವಿದನೂ, ತ್ಯಾಗಿಯೂ, ಸತ್ಯಸಂಕಲ್ಪನೂ, ಸತ್ಯನಿಷ್ಠನೂ, ಪವಿತ್ರನೂ ಮತ್ತು ಈಶ್ವರನೂ ಆಗಿರುತ್ತಾನೆ.

ಬ್ರಹ್ಮಜ್ಞಾನಪ್ರತಿಷ್ಠಂ ಹಿ ತಂ ದೇವಾ ಬ್ರಾಹ್ಮಣಂ ವಿದುಃ ।
ಶಬ್ದಬ್ರಹ್ಮಣಿ ನಿಷ್ಣಾತಂ ಪರೇ ಚ ಕೃತನಿಶ್ಚಯಮ್ ॥೨೨॥

ಯಾವನು ವೇದ-ವೇದಾಂಗಗಳಲ್ಲಿ ಪಾರಂಗತನಾಗಿ ಪರಬ್ರಹ್ಮತತ್ತ್ವವನ್ನು ನಿಶ್ಚಯರೂಪದಿಂದ ತಿಳಿದಿರುವನೋ ಮತ್ತು ಬ್ರಹ್ಮಜ್ಞಾನದಲ್ಲಿಯೇ ಪ್ರತಿಷ್ಠಿತನಾಗಿರುವನೋ–ಅಂತಹವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ಅನ್ತಸ್ಥಂ ಚ ಬಹಿಷ್ಠಂ ಚ ಸಾಧಿಯಜ್ಞಾಧಿದೈವತಮ್ ।
ಜ್ಞಾನಾನ್ವಿತಾ ಹಿ ಪಶ್ಯನ್ತಿ ತೇ ದೇವಾಸ್ತಾತ ತೇ ದ್ವಿಜಾಃ ॥೨೩॥

ಮಗು! ಜ್ಞಾನದಿಂದ ಕೂಡಿರುವ ಯಾರು ಹೊರಗೂ ಮತ್ತು ಒಳಗೂ ವ್ಯಾಪ್ತನಾಗಿರುವ, ಅಧಿಯಜ್ಞ ಮತ್ತು ಅಧಿದೈವಸಹಿತನಾದ ಪರಮಪುರುಷನನ್ನು ಸಾಕ್ಷಾತ್ಕರಿಸಿಕೊಳ್ಳುವರೋ–ಅವರೇ ದೇವತೆಗಳು ಮತ್ತು ಅವರೇ ಬ್ರಾಹ್ಮಣರು.

ತೇಷು ವಿಶ್ವಮಿದಂ ಭೂತಂ ಸರ್ವಂ ಚ ಜಗದಾಹಿತಮ್ ।
ತೇಷಾಂ ಮಾಹಾತ್ಮ್ಯಭಾವಸ್ಯ ಸದೃಶಂ ನಾಸ್ತಿ ಕಿಂಚನ ॥೨೪॥

ಅಂತಹವರಲ್ಲಿಯೇ ಈ ವಿಶ್ವವೂ, ಜಗತ್ತೂ ಮತ್ತು ಸಕಲಪ್ರಾಣಿಗಳೂ ಪ್ರತಿಷ್ಠಿತವಾಗಿವೆ. ಅವರ ಮಾಹಾತ್ಮ್ಯಕ್ಕೆ ಸಾಟಿಯಾಗುವುದು ಬೇರೆ ಯಾವುದೂ ಇಲ್ಲ.

ಆದ್ಯನ್ತೇ ನಿಧನಂ ಚೈವ ಕರ್ಮ ಚಾತೀತ್ಯ ಸರ್ವಶಃ ।
ಚತುರ್ವಿಧಸ್ಯ ಭೂತಸ್ಯ ಸರ್ವಸ್ಯೇಶಾಃ ಸ್ವಯಮ್ಭುವಃ ॥೨೫॥

ಬ್ರಹ್ಮಜ್ಞಾನದಲ್ಲಿಯೇ ಪ್ರತಿಷ್ಠಿತರಾಗಿರುವವರು, ಹುಟ್ಟು-ಸಾವು ಮತ್ತು ಕರ್ಮಗಳ ಎಲ್ಲೆಯನ್ನು ಸಂಪೂರ್ಣವಾಗಿ ದಾಟಿ ಎಲ್ಲ ನಾಲ್ಕು ವಿಧವಾದ ಪ್ರಾಣಿಗಳಿಗೂ ಈಶ್ವರರೂ ಮತ್ತು ಸ್ವಯಂಭೂಸದೃಶರೂ ಆಗುತ್ತಾರೆ.”

೨೩೭ನೆಯ ಅಧ್ಯಾಯವು ಮುಗಿಯಿತು.

೨೩೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ನಾನಾಪ್ರಕಾರವಾದ ಪ್ರಾಣಿಗಳ ಸಮೀಕ್ಷಾಪೂರ್ವಕವಾದ ಕರ್ಮತತ್ತ್ವದ ವಿವೇಚನೆ : ಯುಗಧರ್ಮಗಳ ವರ್ಣನೆ ಮತ್ತು ಕಾಲದ ಮಹತ್ತ್ವ

ಯುಧಿಷ್ಠಿರ! ವ್ಯಾಸರು ಹೇಳುತ್ತಾರೆ :

ಏಷಾ ಪೂರ್ವತರಾ ವೃತ್ತಿರ್ಬ್ರಾಹ್ಮಣಸ್ಯ ವಿಧೀಯತೇ ।
ಜ್ಞಾನವಾನೇವ ಕರ್ಮಾಣಿ ಕುರ್ವನ್ಸರ್ವತ್ರ ಸಿಧ್ಯತಿ ॥೧॥

“ಶುಕ! ಬ್ರಾಹ್ಮಣನಿಗೆ ಈ ವೃತ್ತಿಯು ಬಹಳ ಹಿಂದಿನಿಂದಲೂ ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿದೆ. ಜ್ಞಾನನಿಷ್ಠನಾಗಿಯೇ ಅವನು ನಿಷ್ಕಾಮಕರ್ಮಗಳನ್ನು ಮಾಡುತ್ತಾ ಸರ್ವತ್ರ ಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ.

ತತ್ರ ಚೇನ್ನ ಭವೇದೇವಂ ಸಂಶಯಃ ಕರ್ಮಸಿದ್ಧಯೇ ।
ಕಿಂ ತು ಕರ್ಮ ಸ್ವಭಾವೋಽಯಂ ಜ್ಞಾನಂ ಕರ್ಮೇತಿ ವಾ ಪುನಃ ॥೨॥

ಆದರೆ ಕರ್ಮವು ಸ್ವಾಭಾವಿಕವಾಗಿಯೇ ಸಿದ್ಧಿಯನ್ನು ಕೊಡುತ್ತದೆಯೇ? ಅಥವಾ ಜ್ಞಾನಯುಕ್ತವಾಗಿದ್ದರೆ ಸಿದ್ಧಿಯನ್ನು ಕೊಡುತ್ತದೆಯೇ? ಎಂಬ ವಿಷಯದಲ್ಲಿ ಸಂಶಯವಿರಬಾರದು. ಹಾಗೆ ಸಂಶಯವಿಲ್ಲದೇ (ಜ್ಞಾನಯುಕ್ತನಾಗಿ) ಕರ್ಮವನ್ನು ಆಚರಿಸಿದರೆ ಆಗ ಕರ್ಮವು ಸಿದ್ಧಿಯನ್ನು ಕೊಡುತ್ತದೆ.

ವೇದವಿಧಿಃ ಸ ಸ್ಯಾಜ್ಜ್ಞಾನಂ ಚೇತ್ಪುರುಷಂ ಪ್ರತಿ ।
ಉಪಪತ್ತ್ಯುಪಲಬ್ಧಿಭ್ಯಾಂ ವರ್ಣಯಿಷ್ಯಾಮಿ ತಚ್ಛೃಣು ॥೩॥

ಕರ್ಮವು ಜ್ಞಾನಯುಕ್ತವಾಗಿರಬೇಕು. ಪರಮಾತ್ಮನನ್ನು ಉದ್ದೇಶಿಸಿರಬೇಕು. ಹಾಗಿದ್ದರೆ ಅದು ವೇದವಿಹಿತವಾದ ಕರ್ಮ. ಈ ಬಗೆಗೆ ಯುಕ್ತಿಯೂ ಉಂಟು ಮತ್ತು ಅದು ದೊರೆಯುವುದೂ ಹಾಗೆಯೇ–ಎಂಬುದನ್ನು ವರ್ಣಿಸುವೆನು, ಕೇಳು.

ಪೌರುಷಂ ಕಾರಣಂ ಕೇಚಿದಾಹುಃ ಕರ್ಮಸು ಮಾನವಾಃ ।
ದೈವಮೇಕೇ ಪ್ರಶಂಸನ್ತಿ ಸ್ವಭಾವಮಪರೇ ಜನಾಃ ॥೪॥

ಕೆಲವು ಮನುಷ್ಯರು ಕರ್ಮಸಿದ್ಧಿಗೆ ಪೌರುಷವೇ ಕಾರಣವೆನ್ನುತ್ತಾರೆ. ಕೆಲವರು ದೈವವೇ ಕಾರಣವೆನ್ನುತ್ತಾರೆ. ಸ್ವಾಭಾವಿಕವಾಗಿಯೇ ಎಲ್ಲ ಕಾರ್ಯಗಳೂ ಸಿದ್ಧಿಸುತ್ತವೆಯೆಂಬುದೂ ಕೆಲವರ ಅಭಿಪ್ರಾಯವಾಗಿದೆ.

ಪೌರುಷಂ ಕರ್ಮ ದೈವಂ ಚ ಕಾಲವೃತ್ತಿಸ್ವಭಾವತಃ ।
ತ್ರಯಮೇತತ್ಪೃಥಗ್ಭೂತಮವಿವೇಕಂ ತು ಕೇಚನ ॥೫॥

ಪುರುಷಪ್ರಯತ್ನ ಮತ್ತು ದೈವ ಇವೆರಡೂ ಕಾಲದಲ್ಲಿರುವ ಸ್ವಭಾವಕ್ಕೆ ಅನುಗುಣವಾಗಿ ಫಲವನ್ನು ಕೊಡುತ್ತವೆ–ಎಂದು ಕೆಲವರ ಅಭಿಪ್ರಾಯ. ಕೆಲವರು ಈ ಮೂರೂ ಪ್ರತ್ಯೇಕ-ಪ್ರತ್ಯೇಕವಾಗಿರುವುದೆಂದೂ ಮೂರರಲ್ಲಿ ಒಂದು ಪ್ರಧಾನವಾಗಿ ಉಳಿದೆರಡು ಗೌಣವಾಗಿರುವುದೆಂದೂ ಹೇಳುತ್ತಾರೆ. ಹಾಗೆ ಮೂರೂ ಸೇರಿ ಕಾರಣವೆನ್ನುವುದು ಸರಿಯಲ್ಲ–ಎಂಬುದು ಮತ್ತೆ ಕೆಲವರ ಅಭಿಮತವಾಗಿದೆ.

ಏತದೇವಂ ಚ ನೈವಂ ಚ ನ ಚೋಭೇ ನಾನುಭೇ ತಥಾ ।
ಕರ್ಮಸ್ಥಾ ವಿಷಯಂ ಬ್ರೂಯುಃ ಸತ್ತ್ವಸ್ಥಾಃ ಸಮದರ್ಶಿನಃ ॥೬॥

ಕೆಲವರು 'ಇದು ಹೀಗೆಯೇ. ಪುರುಷಪ್ರಯತ್ನವೊಂದೇ ಕಾರಣ'–ಎನ್ನುತ್ತಾರೆ. ಮತ್ತೆ ಕೆಲವರು 'ಹಾಗಲ್ಲ; ದೈವಾನುಗ್ರಹವೊಂದೇ ಕಾರಣ'–ಎನ್ನುತ್ತಾರೆ. 'ಇವೆರಡೂ ಕಾರಣಗಳಲ್ಲ; ಸ್ವಭಾವವೇ ಕಾರಣ'–ಎಂದು ಹೇಳುವವರೂ ಉಂಟು. 'ಎರಡೂ ಕಾರಣವಲ್ಲದೆಯೂ

ಅಲ್ಲ ; ಒಂದು ಪ್ರಧಾನ ಕಾರಣ ; ಮತ್ತೊಂದು ಗೌಣಕಾರಣ ಅಥವಾ ಎರಡೂ ಸ್ವಭಾವಾನುಗುಣವಾಗಿ ಕಾರಣ'–ಎಂದೂ ಕೆಲವರು ಹೇಳುತ್ತಾರೆ. ಕರ್ಮಜಾಲದಲ್ಲಿ ಸಿಲುಕಿದವರು ಹೀಗೆಲ್ಲಾ ಹೇಳುತ್ತಾರೆ. ಸತ್ತ್ವದಲ್ಲಿ ನೆಲೆಗೊಂಡ ಜ್ಞಾನಿಗಳಾದರೋ ಇವುಗಳಲ್ಲಿ ಸಾಮ್ಯವನ್ನು ನೋಡುತ್ತಾರೆ. ಸತ್ತ್ವಗುಣಸಂಪನ್ನರಾದ ಸರ್ವತ್ರ ಸಮಭಾವವಿರುವ ಯೋಗಿಗಳು ಎಲ್ಲಕ್ಕೂ ಬ್ರಹ್ಮನೇ ಕಾರಣವೆನ್ನುತ್ತಾರೆ.

ತ್ರೇತಾಯಾಂ ದ್ವಾಪರೇ ಚೈವ ಕಲಿಜಾಶ್ಚ ಸಸಂಶಯಾಃ ।
ತಪಸ್ವಿನಃ ಪ್ರಶಾನ್ತಾಶ್ಚ ಸತ್ತ್ವಸ್ಥಾಶ್ಚ ಕೃತೇ ಯುಗೇ ॥೭॥

ತ್ರೇತಾ-ದ್ವಾಪರ-ಕಲಿಯುಗಗಳಲ್ಲಿನ ಜನರು ಪರಮಾರ್ಥದ ವಿಷಯ ದಲ್ಲಿ ಸಂಶಯವುಳ್ಳವರಾಗಿರುತ್ತಾರೆ. ಕೃತಯುಗದಲ್ಲಿ ಜನರು ಪರಮಾರ್ಥ ದಲ್ಲಿ ಸಂಶಯವಿಲ್ಲದವರಾಗಿಯೂ, ತಪಸ್ವಿಗಳಾಗಿಯೂ, ಪ್ರಶಾಂತಾತ್ಮ ರಾಗಿಯೂ, ಸತ್ತ್ವಗುಣಸಂಪನ್ನರಾಗಿಯೂ ಇರುತ್ತಾರೆ.

ಅಪೃಥಗ್ದರ್ಶನಾಃ ಸರ್ವೇ ಋಕ್ಸಾಮಸು ಯಜುಃಷು ಚ ।
ಕಾಮದ್ವೇಷೌ ಪೃಥಕ್ಕೃತ್ವಾ ತಪಃ ಕೃತ ಉಪಾಸತೇ ॥೮॥

ಸತ್ಯಯುಗದಲ್ಲಿ ಎಲ್ಲ ಮನುಷ್ಯರೂ ಋಕ್ಕುಗಳನ್ನೂ, ಸಾಮಗಳನ್ನೂ, ಮತ್ತು ಯಜುಸ್ಸುಗಳನ್ನೂ ಪ್ರತ್ಯೇಕವಾಗಿ ನೋಡದೇ ಅಖಂಡವಾಗಿ ಭಾವಿಸಿ ಅಧ್ಯಯನಮಾಡುತ್ತಾರೆ. ಕಾಮ-ದ್ವೇಷಗಳನ್ನು ಬಿಟ್ಟು ತಪಸ್ಸಿನಲ್ಲಿಯೇ ನಿರತರಾಗಿರುತ್ತಾರೆ.

(ಯಜ್ಞಗಳ ಆಚರಣೆಯು ಬಂದಾಗ ಹೋತೃವೇದ, ಉದ್ಗಾತೃವೇದ, ಅಧ್ವರ್ಯುವೇದ – ಎಂಬ ಮೂರರ ಭೇದವು ಬೇಕಾಗುತ್ತದೆ. ಕೃತಯುಗ ದಲ್ಲಿ 'ತಪಃ ಪರಂ ಕೃತಯುಗೇ' – ಎಂಬಂತೆ ತಪಸ್ಸೇ ಪ್ರಧಾನವಾಗಿ ಯಜ್ಞದ ಪರವಾಗಿರಲಿಲ್ಲವಾದುದರಿಂದ ಈ ವೇದವಿಭಾಗದ ದೃಷ್ಟಿ ಅವ ರಿಗೆ ಬೇಕಾಗಿರಲಿಲ್ಲ. ಇದಲ್ಲದೇ ಋಗ್ಯಜುಃ- ಸಾಮಗಳು ವೈಶ್ಯ, ಕ್ಷತ್ರಿಯ ಮತ್ತು ಬ್ರಾಹ್ಮಣರ ಉತ್ಪತ್ತಿಗೆ ಕಾರಣಗಳು. ಆ ವರ್ಣಭೇದವೇ ಕೃತ ಯುಗದ ಆದಿಯಲ್ಲಿ ಇರಲಿಲ್ಲವಾದುದರಿಂದ ಆಗ ವೇದವಿಭಾಗದ ದೃಷ್ಟಿ ಇರಲಿಲ್ಲ. ಆಗ ಎಲ್ಲರೂ ಸತ್ತ್ವಗುಣಿಗಳೂ, ತಪೋನಿಷ್ಠರೂ ಆಗಿದ್ದರು.

ಅಥರ್ವವೇದವೂ ಈ ಮೂರರಲ್ಲಿಯೇ ಅಡಕವಾಗುತ್ತದೆ. ಏಕೆಂದರೆ : ಅದರಲ್ಲಿಯೂ ಋಕ್ ಎಂದರೆ ಛಂದೋಬದ್ಧವಾದ ಮಂತ್ರಗಳೂ, ಸಾಮ ಎಂದರೆ ಗಾನಮಂತ್ರಗಳೂ ಮತ್ತು ಯಜುಸ್ಸು ಎಂದರೆ ಛಂದೋನಿಯಮ ವಿಲ್ಲದ ಮಂತ್ರಗಳೂ ಕಂಡುಬರುತ್ತವೆ. ಆದುದರಿಂದ 'ತ್ರಯೀ'–ಎಂಬು ದರಲ್ಲಿ ಅಥರ್ವವೇದವೂ ಸೇರಿದೆ–ಎಂಬುದು ವೈದಿಕಸಂಪ್ರದಾಯ.)

ತಪೋಧರ್ಮೇಣ ಸಂಯುಕ್ತಸ್ತಪೋನಿತ್ಯಃ ಸುಸಂಶಿತಃ ।
ತೇನ ಸರ್ವಾನವಾಪ್ನೋತಿ ಕಾಮಾನ್ಯಾನ್ಮನಸೇಚ್ಛತಿ ॥೯॥

ಯಾವಾಗಲೂ ತಪೋರೂಪವಾದ ಧರ್ಮದಲ್ಲಿಯೇ ಆಸಕ್ತನಾಗಿರು ವವನೂ, ಕಠೋರವ್ರತನಿಷ್ಠನಾಗಿರುವವನೂ, ನಿತ್ಯವೂ ತಪಸ್ಸಿನಲ್ಲಿಯೇ ನಿರತನಾಗಿರುವವನೂ ತನ್ನ ಮನೋವಾಂಛಿತವಾದ ಸಕಲಕಾಮನೆಗಳನ್ನೂ ಪಡೆದುಕೊಳ್ಳುತ್ತಾನೆ.

ತಪಸಾ ತದವಾಪ್ನೋತಿ ತದ್ಭೂತ್ವಾ ಸೃಜತೇ ಜಗತ್ ।
ತದ್ಭೂತಶ್ಚ ತತಃ ಸರ್ವಭೂತಾನಾಂ ಭವತಿ ಪ್ರಭುಃ ॥೧೦॥

ತಪಸ್ಸಿನಿಂದ ಮನುಷ್ಯನು ಬ್ರಹ್ಮಭಾವವನ್ನು ಹೊಂದುತ್ತಾನೆ. ಬ್ರಹ್ಮ ಭಾವದಲ್ಲಿಯೇ ಇದ್ದು ಸಂಪೂರ್ಣಜಗತ್ತನ್ನೂ ಸೃಷ್ಟಿಸುತ್ತಾನೆ. ಆದುದರಿಂದ ಬ್ರಹ್ಮಭಾವವನ್ನು ಹೊಂದಿದವನು ಸಕಲಪ್ರಾಣಿಗಳಿಗೂ ಪ್ರಭುವಾಗುತ್ತಾನೆ.

ತದುಕ್ತಂ ವೇದವಾದೇಷು ಗಹನಂ ವೇದದರ್ಶಿಭಿಃ ।
ವೇದಾನ್ತೇಷು ಪುನರ್ವ್ಯಕ್ತಂ ಕರ್ಮಯೋಗೇನ ಲಕ್ಷ್ಯತೇ ॥೧೧॥

ಆ ಬ್ರಹ್ಮವಸ್ತುವು ವೇದದ ಕರ್ಮಕಾಂಡಗಳಲ್ಲಿ ಗುಪ್ತರೂಪದಿಂದ ಪ್ರತಿಪಾದಿತವಾಗಿದೆ–ಎಂದು ವೇದಜ್ಞರಾದ ವಿದ್ವಾಂಸರು ಹೇಳುತ್ತಾರೆ. ಆದರೆ ಉಪನಿಷತ್ತುಗಳಲ್ಲಿ ಬ್ರಹ್ಮವಸ್ತುವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ. ನಿಷ್ಕಾಮಕರ್ಮದ ಮೂಲಕವಾಗಿ ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಆಲಮ್ಭಯಜ್ಞಾಃ ಕ್ಷತ್ರಾಶ್ಚ ಹವಿರ್ಯಜ್ಞಾ ವಿಶಃ ಸ್ಮೃತಾಃ ।
ಪರಿಚಾರಯಜ್ಞಾ ಶೂದ್ರಾಶ್ಚ ಜಪಯಜ್ಞಾ ದ್ವಿಜಾತಯಃ ॥೧೨॥

ಕ್ಷತ್ರಿಯರು ಹಿಂಸಾಪ್ರಧಾನವಾದ ಯುದ್ಧವೇ ಯಜ್ಞವಾಗಿ ಉಳ್ಳವರು. ವೈಶ್ಯರು ಹವಿಸ್ಸೇ ಪ್ರಧಾನವಾದ ಯಜ್ಞವನ್ನು ಮಾಡುವವರು. ಶೂದ್ರರು ಸೇವಾರೂಪವಾದ ಯಜ್ಞವನ್ನು ಮಾಡುವವರು. ಬ್ರಾಹ್ಮಣರು ಜಪವೇ ಯಜ್ಞವಾಗಿ ಉಳ್ಳವರು.

ಪರಿನಿಷ್ಠಿತಕಾರ್ಯೋ ಹಿ ಸ್ವಾಧ್ಯಾಯೇನ ದ್ವಿಜೋ ಭವೇತ್ ।
ಕುರ್ಯಾದನ್ಯನ್ನ ವಾ ಕುರ್ಯಾನ್ಮೈತ್ರೋ ಬ್ರಾಹ್ಮಣ ಉಚ್ಯತೇ ॥೧೩॥

ಬ್ರಾಹ್ಮಣನು ವೇದಗಳ ಅಧ್ಯಯನದಿಂದಲೇ ಕೃತಕೃತ್ಯನಾಗುತ್ತಾನೆ. ಅವನು ಬೇರೆ ಯಾವುದಾದರೂ ಕಾರ್ಯವನ್ನು ಮಾಡಿದರೂ ಅಥವಾ ಮಾಡದೆಯೇ ಇದ್ದರೂ ಎಲ್ಲ ಪ್ರಾಣಿಗಳಿಗೂ ಬ್ರಾಹ್ಮಣನು ಮಿತ್ರನೆಂದು ಹೇಳಲ್ಪಟ್ಟಿದ್ದಾನೆ.

ತ್ರೇತಾದೌ ಕೇವಲಾ ವೇದಾ ಯಜ್ಞಾ ವರ್ಣಾಶ್ರಮಾಸ್ತಥಾ ।
ಸಂರೋಧಾದಾಯುಷಸ್ತ್ವೇತೇ ವ್ಯಸ್ಯನ್ತೇ ದ್ವಾಪರೇ ಯುಗೇ ॥೧೪॥

ತ್ರೇತಾಯುಗದ ಆದಿಯಲ್ಲಿ (ಕೃತಯುಗದಲ್ಲಿ) ವೇದಗಳೂ, ಯಜ್ಞಗಳೂ ಮತ್ತು ವರ್ಣಾಶ್ರಮಗಳೂ ಏಕರೂಪವಾಗಿಯೂ ಮತ್ತು ಶುದ್ಧವಾಗಿಯೂ ಇರುತ್ತವೆ. ಆದರೆ ದ್ವಾಪರಯುಗದಲ್ಲಿ ಮನುಷ್ಯನ ಆಯುಷ್ಯವು ಕಡಿಮೆಯಾಗುವುದರಿಂದ ಅವುಗಳೆಲ್ಲದರ ವಿಭಾಗವಾಗುತ್ತದೆ.

ದ್ವಾಪರೇ ವಿಪ್ಲವಂ ಯಾನ್ತಿ ವೇದಾಃ ಕಲಿಯುಗೇ ತಥಾ ।
ದೃಶ್ಯನ್ತೇ ನಾಪಿ ದೃಶ್ಯನ್ತೇ ಕಲೇರನ್ತೇ ಪುನಃ ಕಿಲ ॥೧೫॥

ದ್ವಾಪರದಲ್ಲಿ ಮತ್ತು ಕಲಿಯುಗದಲ್ಲಿ ವೇದಗಳು ಪ್ರಾಯಶಃ ಕ್ಷೋಭೆಗೊಳ್ಳುತ್ತವೆ. ಕಲಿಯುಗದ ಕಡೆಯಲ್ಲಿ ಕೆಲವು ಕಡೆಗಳಲ್ಲಿ ಮಾತ್ರವೇ ವೇದಾಧ್ಯಯನವು ಉಳಿದಿರುತ್ತದೆ. ಕೆಲವು ಕಡೆಗಳಲ್ಲಿ ಅದರ ಹೆಸರೂ ಉಳಿದಿರುವುದಿಲ್ಲ.

ಉತ್ಸೀದನ್ತಿ ಸ್ವಧರ್ಮಾಶ್ಚ ತತ್ರಾಧರ್ಮೇಣ ಪೀಡಿತಾಃ ।
ಗವಾಂ ಭೂಮೇಶ್ಚ ಯೇ ಚಾಪಾಮೋಷಧೀನಾಂ ಚ ಯೇ ರಸಾಃ ॥

ಆಗ ಧರ್ಮಗಳೆಲ್ಲವೂ ಹಾಳಾಗಿಹೋಗುತ್ತವೆ. ಜನರು ಅಧರ್ಮ ವ್ಯವಹಾರದಿಂದ ಪೀಡಿಸಲ್ಪಡುತ್ತಾರೆ. ಹಸುಗಳು ಸಾಕಾದಷ್ಟು ಹಾಲು ಕೊಡುವುದಿಲ್ಲ. ಭೂಮಿಯಲ್ಲಿ ಪೈರು-ಪಚ್ಚೆಗಳಾಗುವುದಿಲ್ಲ. ಓಷಧಿಗಳಲ್ಲಿ ರಸವೇ (ಸತ್ತ್ವವೇ) ಇರುವುದಿಲ್ಲ. ಎಲ್ಲವೂ ಕ್ಷೀಣಿಸುತ್ತವೆ.

ಅಧರ್ಮಾನ್ತರ್ಹಿತಾ ವೇದಾ ವೇದಧರ್ಮಾಸ್ತಥಾಶ್ರಮಾಃ ।
ವಿಕ್ರಿಯನ್ತೇ ಸ್ವಧರ್ಮಸ್ಥಾಃ ಸ್ಥಾವರಾಣಿ ಚರಾಣಿ ಚ ॥೧೭॥

ವೇದಗಳೂ, ವೈದಿಕಧರ್ಮ-ಕರ್ಮಗಳೂ ಮತ್ತು ಆಶ್ರಮಗಳೂ–ಎಲ್ಲವೂ ಅಧರ್ಮದಲ್ಲಿ ಮುಚ್ಚಿಹೋಗುತ್ತವೆ. ಸ್ವಧರ್ಮನಿಷ್ಠರೂ ಮತ್ತು ಚರಾಚರಪ್ರಾಣಿಗಳೂ ತಮ್ಮ ಧರ್ಮಕ್ಕೆ ವಿರುದ್ಧವಾದ ಧರ್ಮವನ್ನು ಹೊಂದುತ್ತವೆ. (ವಿಕಾರಹೊಂದುತ್ತವೆ.)

ಯಥಾ ಸರ್ವಾಣಿ ಭೂತಾನಿ ವೃಷ್ಟಿರ್ಭೌಮಾನಿ ವರ್ಷತಿ ।
ಸೃಜತೇ ಸರ್ವತೋಽಙ್ಗಾನಿ ತಥಾ ವೇದಾ ಯುಗೇ ಯುಗೇ ॥೧೮॥

ಯಾವ ರೀತಿಯಲ್ಲಿ ಪರ್ಜನ್ಯನು ಕಾಲ-ಕಾಲಕ್ಕೆ ಮಳೆಗರೆಯುತ್ತಾ ಭೂಮಿಯಲ್ಲಿರುವ ಸರ್ವಪ್ರಾಣಿಗಳನ್ನೂ ರಕ್ಷಿಸಿ ಪೋಷಿಸುವನೋ ಮತ್ತು ಸರ್ವಾಂಗಗಳನ್ನೂ ಸೃಷ್ಟಿಸುವನೋ–ಅದೇ ರೀತಿಯಲ್ಲಿ ವೇದಗಳು ಪ್ರತಿಯೊಂದು ಯುಗದಲ್ಲಿಯೂ ತಮ್ಮ ಅಂಗಗಳನ್ನು ಸೃಷ್ಟಿಸುತ್ತವೆ.

ನಿಶ್ಚಿತಂ ಕಾಲನಾನಾತ್ವಮನಾದಿನಿಧನಂ ಚ ಯತ್ ।
ಕೀರ್ತಿತಂ ಯತ್ಪುರಸ್ತಾನ್ಮೇ ಸೂತೇ ಯಚ್ಚಾತ್ತಿ ಚ ಪ್ರಜಾಃ ॥೧೯॥

ಹೀಗೆ ಕಾಲಕ್ಕೆ ನಾನಾರೂಪಗಳಿವೆಯೆಂದು ನಿಶ್ಚಿತವಾಗಿದೆ. ಅದಕ್ಕೆ ಆದ್ಯಂತಗಳೆರಡೂ ಇರುವುದಿಲ್ಲ. ಕಾಲವೇ ಪ್ರಜೆಗಳನ್ನು ಸೃಷ್ಟಿಸುತ್ತದೆ ಮತ್ತು ಭಕ್ಷಿಸುತ್ತದೆ. ಈ ವಿಷಯವನ್ನು ನಾನು ಹಿಂದೆಯೂ ಹೇಳಿದ್ದೇನೆ.

ಯಚ್ಚೇದಂ ಪ್ರಭವಃ ಸ್ಥಾನಂ ಭೂತಾನಾಂ ಸಂಯಮೋ ಯಮಃ ।
ಸ್ವಭಾವೇನೈವ ವರ್ತನ್ತೇ ದ್ವನ್ದ್ವಸೃಷ್ಟಾನಿ ಭೂರಿಶಃ ॥೨೦॥

ಈ ಕಾಲತತ್ತ್ವವು ಪ್ರಾಣಿಗಳ ಉತ್ಪತ್ತಿ, ಪಾಲನೆ, ಸಂಹಾರ ಮತ್ತು

ನಿಯಂತ್ರಣಗಳನ್ನು ಮಾಡುತ್ತದೆ. ಸ್ತ್ರೀ-ಪುರುಷದ್ವಂದ್ವದಿಂದ ಹುಟ್ಟಿದ ಸಮಸ್ತ ಪ್ರಾಣಿಗಳೂ ಸ್ವಾಭಾವಿಕವಾಗಿ ಕಾಲನ ಗರ್ಭದಲ್ಲಿಯೇ ನಿವಾಸಮಾಡಿ ಕೊಂಡಿವೆ.

ಸರ್ಗಃ ಕಾಲೋ ಧೃತಿರ್ವೇದಾಃ ಕರ್ತಾ ಕಾರ್ಯಂ ಕ್ರಿಯಾಫಲಮ್ ।
ಏತತ್ತೇ ಕಥಿತಂ ತಾತ ಯನ್ಮಾಂ ತ್ವಂ ಪರಿಪೃಚ್ಛಸಿ ॥೨೧॥

ಮಗು! ನಿನ್ನ ಪ್ರಶ್ನೆಗಳಿಗೆ ತಕ್ಕಂತೆ ನಿನಗೆ ಸರ್ಗ (ಸೃಷ್ಟಿ), ಕಾಲ, ಧೃತಿ, ವೇದಗಳು, ಕರ್ತೃ, ಕಾರ್ಯ ಮತ್ತು ಕರ್ಮಫಲ–ಇವುಗಳೆಲ್ಲವನ್ನೂ ಹೇಳಿದ್ದೇನೆ."*

೨೩೮ನೆಯ ಅಧ್ಯಾಯವು ಮುಗಿಯಿತು.

೨೩೯ನೆಯ ಅಧ್ಯಾಯ — ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜ್ಞಾನದ ಸಾಧನೆ ಮತ್ತು ಮಹಿಮೆ

ಪಾರಿಕ್ಷಿತ! ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಹೀಗೆ ಮಹರ್ಷಿ ವ್ಯಾಸರು ಉಪದೇಶಿಸಿದ ಬಳಿಕ ಶುಕದೇವನು ಅವರ ಶಾಸನವನ್ನು (ನಿರ್ದೇಶನವನ್ನು) ಬಹಳವಾಗಿ ಪ್ರಶಂಸಿಸಿ ಮೋಕ್ಷಧರ್ಮಗಳ ಅರ್ಥದಿಂದ ಕೂಡಿದ ಪ್ರಶ್ನೆಗಳನ್ನು ಕೇಳಲು ಉಪಕ್ರಮಿಸಿದನು :

ಪ್ರಜ್ಞಾವಾಞ್ಶ್ರೋತ್ರಿಯೋ ಯಜ್ವಾ ಕೃತಪ್ರಜ್ಞೋಽನಸೂಯಕಃ ।
ಅನಾಗತಮನೈತಿಹ್ಯಂ ಕಥಂ ಬ್ರಹ್ಮಾಧಿಗಚ್ಛತಿ ॥೧॥

"ತಂದೆಯೇ! ಪ್ರಜ್ಞಾವಂತನೂ, ಶ್ರೋತ್ರಿಯನೂ, ಯಾಜ್ಞಿಕನೂ, ದೋಷದೃಷ್ಟಿಯಿಂದ ರಹಿತನಾದವನೂ, ಶುದ್ಧವಾದ ಬುದ್ಧಿಯುಳ್ಳವನೂ

* ಈ ಅಧ್ಯಾಯದಲ್ಲಿ ಬಂದಿರುವ ಎಲ್ಲ ಶ್ಲೋಕಗಳೂ ಸ್ವಲ್ಪ ವ್ಯತ್ಯಾಸದಿಂದ ೨೩೨ನೆಯ ಅಧ್ಯಾಯದಲ್ಲಿಯೂ ಬಂದಿದೆ. ಅಲ್ಲಿಯೂ ವ್ಯಾಸರೇ ಶುಕನಿಗೆ ಈ ವಿಷಯಗಳನ್ನು ಹೇಳಿದ್ದಾರೆ.

ಆದ ಮನುಷ್ಯನು, ಅಜ್ಞಾತವೂ 'ಇದು ಹೀಗೆಯೇ' ಎಂದು ನಿಷ್ಕರ್ಷಿಸಲು ಅಸಾಧ್ಯವೂ ಆಗಿರುವ ಬ್ರಹ್ಮವನ್ನು ಹೇಗೆ ಹೊಂದುತ್ತಾನೆ?

ತಪಸಾ ಬ್ರಹ್ಮಚರ್ಯೇಣ ಸರ್ವತ್ಯಾಗೇನ ಮೇಧಯಾ ।
ಸಾಂಖ್ಯೇ ವಾ ಯದಿ ವಾ ಯೋಗ ಏತತ್ಪೃಷ್ಟೋ ವದಸ್ವ ಮೇ ॥೩॥

ಸಾಂಖ್ಯದಿಂದ (ಜ್ಞಾನದಿಂದ) ಪಡೆಯುವನೇ? ಯೋಗಮಾರ್ಗ ದಿಂದ ಪಡೆಯುವನೇ? ತಪಸ್ಸು, ಬ್ರಹ್ಮಚರ್ಯ ಮತ್ತು ಸರ್ವತ್ಯಾಗದಿಂದ ಬ್ರಹ್ಮ ವಸ್ತುವನ್ನು ಪಡೆಯುವನೇ? ಅಥವಾ ಮೇಧಾಶಕ್ತಿಯಿಂದ ಪಡೆಯು ವನೇ?–ಇದು ನನ್ನ ಪ್ರಶ್ನೆಯಾಗಿದೆ. ಇದಕ್ಕೆ ಉತ್ತರಿಸಿರಿ.

ಮನಸಶ್ಚೇನ್ದ್ರಿಯಾಣಾಂ ಚ ಯಥೈಕಾಗ್ರ್ಯಮವಾಪ್ಯತೇ ।
ಯೇನೋಪಾಯೇನ ಪುರುಷೈಸ್ತತ್ತ್ವಂ ವ್ಯಾಖ್ಯಾತುಮರ್ಹಸಿ ॥೪॥

ಮನುಷ್ಯನು ಮನಸ್ಸು ಮತ್ತು ಇಂದ್ರಿಯಗಳನ್ನು ಯಾವ ಉಪಾಯ ದಿಂದ ಯಾವ ರೀತಿಯಲ್ಲಿ ಏಕಾಗ್ರಗೊಳಿಸುತ್ತಾನೆ?–ಈ ವಿಷಯವನ್ನೂ ತಾವು ವಿಶದವಾಗಿ ತಿಳಿಸಿರಿ."

ವ್ಯಾಸರು ಹೇಳುತ್ತಾರೆ :

ನಾನ್ಯತ್ರ ವಿದ್ಯಾತಪಸೋರ್ನಾನ್ಯತ್ರೇನ್ದ್ರಿಯನಿಗ್ರಹಾತ್ ।
ನಾನ್ಯತ್ರ ಸರ್ವಸಂತ್ಯಾಗಾತ್ಸಿದ್ಧಿಂ ವಿನ್ದತಿ ಕಶ್ಚನ ॥೫॥

"ಮಗು! ವಿದ್ಯೆ, ತಪಸ್ಸು, ಇಂದ್ರಿಯನಿಗ್ರಹ ಮತ್ತು ಸರ್ವತ್ಯಾಗ– ಇವುಗಳ ಹೊರತಾಗಿ ಯಾರೇ ಆಗಲೀ ಸಿದ್ಧಿಯನ್ನು ಹೊಂದುವುದಿಲ್ಲ.

ಮಹಾಭೂತಾನಿ ಸರ್ವಾಣಿ ಪೂರ್ವಸೃಷ್ಟಿಃ ಸ್ವಯಮ್ಭುವಃ ।
ಭೂಯಿಷ್ಠಂ ಪ್ರಾಣಭೃದ್ಗ್ರಾಮೇ ನಿವಿಷ್ಟಾನಿ ಶರೀರಿಷು ॥೬॥

ಎಲ್ಲ ಮಹಾಭೂತಗಳೂ ಬ್ರಹ್ಮನ ಪೂರ್ವಸೃಷ್ಟಿಗೆ ಸೇರಿವೆ. ಅವೆಲ್ಲವೂ ಸಮಸ್ತಪ್ರಾಣಿಸಮುದಾಯಗಳಲ್ಲಿಯೂ – ದೇಹಧಾರಿಗಳಲ್ಲಿಯೂ ಅಧಿಕ ವಾದ ಅಂಶಗಳಿಂದ ಸೇರಿಕೊಂಡಿವೆ.

ಭೂಮೇರ್ದೇಹೋ ಜಲಾತ್ಸ್ನೇಹೋ ಜ್ಯೋತಿಷಶ್ಚಕ್ಷುಷೀ ಸ್ಮೃತೇ ।
ಪ್ರಾಣಾಪಾನಾಶ್ರಯೋ ವಾಯುಃ ಖೇಷ್ವಾಕಾಶಂ ಶರೀರಿಣಾಮ್ ॥೭॥

ದೇಹಧಾರಿಗಳ ಶರೀರಗಳ ಮೂಳೆಯೇ ಮುಂತಾದ ಘನಪದಾರ್ಥಗಳ ನಿರ್ಮಾಣವು ಪೃಥ್ವೀತತ್ತ್ವದಿಂದಾಗಿದೆ. ಜಿಡ್ಡು, ಬೆವರು, ರಕ್ತ ಮುಂತಾದುವು ಜಲತತ್ತ್ವದಿಂದಾಗಿವೆ. ಕಣ್ಣುಗಳು ಅಗ್ನಿತತ್ತ್ವದಿಂದಲೂ, ಪ್ರಾಣಾಪಾನಗಳು ವಾಯುತತ್ತ್ವದಿಂದಲೂ, ಕಿವಿ-ಮೂಗು-ಬಾಯಿ ಮೊದಲಾದುವುಗಳಲ್ಲಿರುವ ರಂಧ್ರಗಳು ಆಕಾಶತತ್ತ್ವದಿಂದಲೂ ಆಗಿವೆ.

ಕ್ರಾನ್ತೇ ವಿಷ್ಣುರ್ಬಲೇ ಶಕ್ರಃ ಕೋಷ್ಠೇಽಗ್ನಿರ್ಭೋಕ್ತುಮಿಚ್ಛತಿ ।
ಕರ್ಣಯೋಃ ಪ್ರದಿಶಃ ಶ್ರೋತ್ರಂ ಜಿಹ್ವಾಯಾಂ ವಾಕ್ಸರಸ್ವತೀ ॥೮॥

ಕಾಲುಗಳ ನಡಿಗೆಯಲ್ಲಿ ವಿಷ್ಣುವೂ ಮತ್ತು ಬಲದಲ್ಲಿ (ಭುಜಗಳಲ್ಲಿ) ಇಂದ್ರನೂ ಇದ್ದಾನೆ. ಜಠರದಲ್ಲಿ ಅಗ್ನಿಯು ಉಪಸ್ಥಿತನಾಗಿದ್ದು ಭೋಜನವನ್ನು ಅಪೇಕ್ಷಿಸುತ್ತಿರುತ್ತಾನೆ. ಕಿವಿಗಳಲ್ಲಿ ಶ್ರವಣಶಕ್ತಿಯೂ ಮತ್ತು ದಿಕ್ಕುಗಳೂ ಇವೆ. ನಾಲಿಗೆಯಲ್ಲಿ ವಾಗಿಂದ್ರಿಯವೂ ಇದೆ ; ಸರಸ್ವತೀದೇವಿಯೂ ಇದ್ದಾಳೆ.

ಕರ್ಣೌ ತ್ವಕ್ಚಕ್ಷುಷೀ ಜಿಹ್ವಾ ನಾಸಿಕಾ ಚೈವ ಪಞ್ಚಮೀ ।
ದರ್ಶನೀಯೇನ್ದ್ರಿಯೋಕ್ತಾನಿ ದ್ವಾರಾಣ್ಯಾಹಾರಸಿದ್ಧಯೇ ॥೯॥

ಎರಡು ಕಿವಿಗಳು, ಚರ್ಮ, ಎರಡು ಕಣ್ಣುಗಳು, ನಾಲಿಗೆ ಮತ್ತು ಐದನೆಯದಾದ ಮೂಗು–ಇವು ಐದು ಜ್ಞಾನೇಂದ್ರಿಯಗಳು. ಇವುಗಳನ್ನು ವಿಷಯಾನುಭವಗಳ ಬಾಗಿಲುಗಳೆನ್ನುತ್ತಾರೆ.

ಶಬ್ದಃ ಸ್ಪರ್ಶಸ್ತಥಾ ರೂಪಂ ರಸೋ ಗನ್ಧಶ್ಚ ಪಞ್ಚಮಃ ।
ಇನ್ದ್ರಿಯಾರ್ಥಾನ್ಪೃಥಗ್ವಿದ್ಯಾದಿನ್ದ್ರಿಯೇಭ್ಯಸ್ತು ನಿತ್ಯದಾ ॥೧೦॥

ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳು ಇಂದ್ರಿಯಗಳ ವಿಷಯಗಳಾಗಿವೆ. ಈ ಐದು ಇಂದ್ರಿಯಾರ್ಥಗಳು ಇಂದ್ರಿಯಗಳಿಗಿಂತಲೂ ಯಾವಾಗಲೂ ಪ್ರತ್ಯೇಕವಾಗಿರುವುವೆಂಬುದನ್ನು ತಿಳಿಯಬೇಕು.

ಇನ್ದ್ರಿಯಾಣಿ ಮನೋ ಯುಙ್ಕ್ತೇ ವಶ್ಯಾನ್ಯನ್ತೇವ ವಾಜಿನಃ ।
ಮನಶ್ಚಾಪಿ ಸದಾ ಯುಙ್ಕ್ತೇ ಭೂತಾತ್ಮಾ ಹೃದಯಾಶ್ರಿತಃ ॥೧೧॥

ಸಾರಥಿಯು ಕಡಿವಾಣಗಳ ಮೂಲಕವಾಗಿ ತನ್ನ ವಶದಲ್ಲಿರುವ ಕುದುರೆ

ಗಳನ್ನು ತನ್ನ ಇಚ್ಛಾನುಸಾರವಾಗಿ ನಡೆಸುವಂತೆ–ಮನಸ್ಸು ಇಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಕೊಂಡು ಇಚ್ಛಾನುಸಾರವಾಗಿ ವಿಷಯಗಳ ಕಡೆಗೆ ಪ್ರಚೋದಿಸುತ್ತಿರುತ್ತದೆ. ಆದರೆ ಹೃದಯದಲ್ಲಿರುವ ಜೀವಾತ್ಮನು ಮನಸ್ಸನ್ನು ಯಾವಾಗಲೂ ಆಳುತ್ತಿರುತ್ತಾನೆ.

ಇನ್ದ್ರಿಯಾಣಾಂ ತಥೈವೈಷಾಂ ಸರ್ವೇಷಾಮೀಶ್ವರಂ ಮನಃ ।
ನಿಯಮೇ ಚ ವಿಸರ್ಗೇ ಚ ಭೂತಾತ್ಮಾ ಮಾನಸಸ್ತಥಾ ॥೧೨॥

ಯಾವ ರೀತಿಯಲ್ಲಿ ಮನಸ್ಸು ಎಲ್ಲ ಇಂದ್ರಿಯಗಳಿಗೂ ಪ್ರಭುವಾಗಿದ್ದು ಅವುಗಳನ್ನು ವಿಷಯಗಳ ಕಡೆಗೆ ಹೋಗುವಂತೆ ಮಾಡಲು ಮತ್ತು ಹೋಗದಂತೆ ತಡೆಯಲು ಸಮರ್ಥವಾಗಿರುವುದೋ–ಅದೇ ರೀತಿಯಲ್ಲಿ ಮನಸ್ಸಿಗೆ ಪ್ರಭುವಾದ ಜೀವಾತ್ಮನೂ ಮನಸ್ಸನ್ನು ಒಳಕ್ಕೆ ಎಳೆದುಕೊಳ್ಳುವ ಮತ್ತು ಹೊರಕ್ಕೆ ಬಿಡುವ ವಿಷಯದಲ್ಲಿ ಸಮರ್ಥನಾಗಿದ್ದಾನೆ.

ಇನ್ದ್ರಿಯಾಣೀನ್ದ್ರಿಯಾರ್ಥಾಶ್ಚ ಸ್ವಭಾವಶ್ಚೇತನಾ ಮನಃ ।
ಪ್ರಾಣಾಪಾನೌ ಚ ಜೀವಶ್ಚ ನಿತ್ಯಂ ದೇಹೇಷು ದೇಹಿನಾಮ್ ॥೧೩॥

ಇಂದ್ರಿಯಗಳು, ಇಂದ್ರಿಯಾರ್ಥಗಳಾದ ರೂಪ-ರಸಾದಿಗಳು, ಸ್ವಭಾವ (ಶೀತೋಷ್ಣಾದಿ ಧರ್ಮ), ಚೇತನಾ, ಮನಸ್ಸು, ಪ್ರಾಣಾಪಾನಗಳು, ಜೀವ–ಇವುಗಳು ದೇಹಿಗಳ ದೇಹಗಳಲ್ಲಿ ಯಾವಾಗಲೂ ಇರುತ್ತವೆ.

ಆಶ್ರಯೋ ನಾಸ್ತಿ ಸತ್ತ್ವಸ್ಯ ಗುಣಾಃ ಶಬ್ದೋ ನ ಚೇತನಾ ।
ಸತ್ತ್ವಂ ಹಿ ತೇಜಃ ಸೃಜತಿ ನ ಗುಣಾನ್ವೈ ಕಥಂಚನ ॥೧೪॥

ವಾಸ್ತವವಾಗಿ ಗುಣಗಳಾಗಲೀ, ಶಬ್ದವಾಗಲೀ, ಚೇತನವಾಗಲೀ ಬುದ್ಧಿಗೆ ಆಶ್ರಯಸ್ಥಾನಗಳಲ್ಲ. ಏಕೆಂದರೆ : ಬುದ್ಧಿಯೇ ತೇಜಸ್ಸನ್ನು (ಚೇತನವನ್ನು) ಸೃಷ್ಟಿಸುತ್ತದೆ. ಆದರೆ ಅದು ತ್ರಿಗುಣಾತ್ಮಿಕವಾದ ಪ್ರಕೃತಿಯನ್ನು ಸೃಷ್ಟಿಸುವುದಿಲ್ಲ. ಬುದ್ಧಿಯು ಪ್ರಕೃತಿಯ ಕಾರ್ಯವೇ ಆಗಿದೆ.

ಏವಂ ಸಪ್ತದಶಂ ದೇಹೇ ವೃತ್ತಂ ಷೋಡಶಭಿರ್ಗುಣೈಃ ।
ಮನೀಷೀ ಮನಸಾ ವಿಪ್ರಃ ಪಶ್ಯತ್ಯಾತ್ಮಾನಮಾತ್ಮನಿ ॥೧೫॥

ಹೀಗೆ ಬುದ್ಧಿವಂತನಾದ ಬ್ರಾಹ್ಮಣನು ಶರೀರದಲ್ಲಿರುವ ಐದು ಇಂದ್ರಿಯಗಳು, ಐದು ಇಂದ್ರಿಯಾರ್ಥಗಳು, ಸ್ವಭಾವ, ಚೇತನಾ, ಮನಸ್ಸು, ಪ್ರಾಣ, ಅಪಾನ ಮತ್ತು ಜೀವ–ಈ ಹದಿನಾರು ತತ್ತ್ವಗಳಿಂದ ಆವೃತನಾಗಿ ರುವ ಹದಿನೇಳನೆಯವನಾದ ಪರಮಾತ್ಮನನ್ನು ಬುದ್ಧಿಯ ಮೂಲಕವಾಗಿ ಅಂತಃಕರಣದಲ್ಲಿ ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ನ ಹ್ಯಯಂ ಚಕ್ಷುಷಾ ದೃಶ್ಯೋ ನ ಚ ಸರ್ವೈರಪೀನ್ದ್ರಿಯೈಃ ।
ಮನಸಾ ತು ಪ್ರದೀಪೇನ ಮಹಾನಾತ್ಮಾ ಪ್ರಕಾಶತೇ ॥೧೬॥

ಆ ಪರಮಾತ್ಮನನ್ನು ಕಣ್ಣುಗಳಿಂದಾಗಲೀ–ಎಲ್ಲ ಇಂದ್ರಿಯಗಳಿಂದಾಗಲೀ ನೋಡುವುದಕ್ಕಾಗಲೀ-ತಿಳಿಯುವುದಕ್ಕಾಗಲೀ ಸಾಧ್ಯವಿಲ್ಲ. ಮಹಾತ್ಮನಾದ ಪರಮಾತ್ಮನು ವಿಶುದ್ಧವಾದ ಮನಸ್ಸಿನ ರೂಪವಾದ ದೀಪದಿಂದ ಬುದ್ಧಿಯಲ್ಲಿ ಪ್ರಕಾಶಿಸುತ್ತಾನೆ.

ಅಶಬ್ದಸ್ಪರ್ಶರೂಪಂ ತದರಸಾಗನ್ಧಮವ್ಯಯಮ್ ।
ಅಶರೀರಂ ಶರೀರೇಷು ನಿರೀಕ್ಷೇತ ನಿರಿನ್ದ್ರಿಯಮ್ ॥೧೭॥

ಆತ್ಮತತ್ತ್ವವು ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳಿಂದ ರಹಿತವಾಗಿದೆ. ಅವಿಕಾರಿಯಾಗಿದೆ. ಶರೀರದಿಂದಲೂ–ಇಂದ್ರಿಯಗಳಿಂದಲೂ ರಹಿತವಾಗಿದೆ. ಹೀಗಿದ್ದರೂ ಅಂತಹ ಆತ್ಮತತ್ತ್ವವನ್ನು ಶರೀರಗಳಲ್ಲಿಯೇ ಅನುಸಂಧಾನ ಮಾಡಬೇಕು.

ಅವ್ಯಕ್ತಂ ಸರ್ವದೇಹೇಷು ಮರ್ತ್ಯೇಷು ಪರಮಾಶ್ರಿತಮ್ ।
ಯೋಽನುಪಶ್ಯತಿ ಸ ಪ್ರೇತ್ಯ ಕಲ್ಪತೇ ಬ್ರಹ್ಮಭೂಯಸೇ ॥೧೮॥

ಅವ್ಯಕ್ತನಾಗಿ ಮರಣಗುಣವಿರುವ ಎಲ್ಲ ದೇಹಗಳಲ್ಲಿಯೂ ಆಶ್ರಯ ವನ್ನು ಪಡೆದಿರುವ ಪರಮಾತ್ಮನನ್ನು ಜ್ಞಾನದೃಷ್ಟಿಯಿಂದ ನಿರಂತರವಾಗಿ ಯಾವನು ನೋಡುವನೋ–ಅವನು ಮರಣಾನಂತರದಲ್ಲಿ ಬ್ರಹ್ಮಭಾವವನ್ನು ಹೊಂದುತ್ತಾನೆ.

ವಿದ್ಯಾಭಿಜನಸಮ್ಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಣ್ಡಿತಾಃ ಸಮದರ್ಶಿನಃ ॥೧೯॥

ವಿದ್ಯೆಯಿಂದಲೂ, ಸತ್ಕುಲದಿಂದಲೂ ಸಂಪನ್ನನಾಗಿರುವ ಬ್ರಾಹ್ಮಣ

ನಲ್ಲಿಯೂ, ಗೋವಿನಲ್ಲಿಯೂ, ಆನೆಯಲ್ಲಿಯೂ, ನಾಯಿಯಲ್ಲಿಯೂ, ನಾಯಿಮಾಂಸವನ್ನು ತಿನ್ನುವವನಲ್ಲಿಯೂ (ಚಂಡಾಲನಲ್ಲಿಯೂ) ಪಂಡಿತ ರಾದವರು (ಆತ್ಮಜ್ಞಾನಿಗಳಾದವರು) ಸಾಮ್ಯವನ್ನು (ಸಮವಾಗಿರುವ ಬ್ರಹ್ಮ ವನ್ನು) ಕಾಣುತ್ತಾರೆ. (ಶ್ರೀಗೀತೆಯಲ್ಲಿಯೂ ಈ ಶ್ಲೋಕವಿದೆ. ಅ-೫ ಶ್ಲೋ-೧೮)

ಸ ಹಿ ಸರ್ವೇಷು ಭೂತೇಷು ಜಙ್ಗಮೇಷು ಧ್ರುವೇಷು ಚ ।
ವಸತ್ಯೇಕೋ ಮಹಾನಾತ್ಮಾ ಯೇನ ಸರ್ವಮಿದಂ ತತಮ್ ॥೨೦॥

ಯಾವನಿಂದ ಈ ಸಮಗ್ರವಾದ ಜಗತ್ತೂ ವ್ಯಾಪ್ತವಾಗಿರುವುದೋ ಅಂತಹ ಏಕೈಕನಾದ ಪರಮಾತ್ಮನು ಸಮಸ್ತಚರಾಚರಪ್ರಾಣಿಗಳಲ್ಲಿಯೂ ವಾಸಮಾಡುತ್ತಿದ್ದಾನೆ.

ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಯದಾ ಪಶ್ಯತಿ ಭೂತಾತ್ಮಾ ಬ್ರಹ್ಮ ಸಮ್ಪದ್ಯತೇ ತದಾ ॥೨೧॥

ಯಾವಾಗ ಜೀವನು ಎಲ್ಲ ಪ್ರಾಣಿಗಳಲ್ಲಿಯೂ ತಾನಿರುವುದನ್ನೂ– ಎಲ್ಲ ಪ್ರಾಣಿಗಳೂ ತನ್ನಲ್ಲಿರುವುದನ್ನೂ ಕಂಡುಕೊಳ್ಳುವನೋ–ಆಗ ಅವನು ಬ್ರಹ್ಮವನ್ನು ಹೊಂದುತ್ತಾನೆ.

ಯಾವಾನಾತ್ಮನಿ ವೇದಾತ್ಮಾ ತಾವಾನಾತ್ಮಾ ಪರಾತ್ಮನಿ ।
ಯ ಏವಂ ಸತತಂ ವೇದ ಸೋಽಮೃತತ್ವಾಯ ಕಲ್ಪತೇ ॥೨೨॥

ತನ್ನ ಹೃದಯಗುಹೆಯಲ್ಲಿ ಜ್ಞಾನಸ್ವರೂಪನಾದ ಯಾವ ಆತ್ಮನಿರು ವನೋ–ಅದೇ ಆತ್ಮನು ಬೇರೆಯವರ ಹೃದಯಗುಹೆಯಲ್ಲಿಯೂ ಇರು ವನು–ಎಂಬುದನ್ನು ತಿಳಿದುಕೊಂಡಿರುವವನು ಅಮೃತತ್ತ್ವವನ್ನು ಹೊಂದಲು ಸಮರ್ಥನಾಗುತ್ತಾನೆ.

ಸರ್ವಭೂತಾತ್ಮಭೂತಸ್ಯ ವಿಭೋರ್ಭೂತಹಿತಸ್ಯ ಚ ।
ದೇವಾಪಿ ಮಾರ್ಗೇ ಮುಹ್ಯನ್ತಿ ಅಪದಸ್ಯ ಪದೈಷಿಣಃ ॥೨೩॥

ಎಲ್ಲ ಪ್ರಾಣಿಗಳಿಗೂ ಆತ್ಮಭೂತನಾಗಿ ಎಲ್ಲ ಪ್ರಾಣಿಗಳ ಹಿತದಲ್ಲಿಯೂ ನಿರತನಾಗಿರುವ, ಅಸ್ಪಷ್ಟಮಾರ್ಗನಾದ ಪ್ರಭುವಿನ ದಿವ್ಯಪದವನ್ನು ಹೊಂದಲಿಚ್ಛಿಸುವ ದೇವತೆಗಳೂ ಕೂಡ ಮಾರ್ಗದಲ್ಲಿ ಭ್ರಮೆಗೊಳ್ಳುತ್ತಾರೆ.

ಶಕುನ್ತಾನಾಮಿವಾಕಾಶೇ ಮತ್ಸ್ಯಾನಾಮಿವ ಚೋದಕೇ ।
ಯಥಾ ಗತಿರ್ನ ದೃಶ್ಯೇತ ತಥಾ ಜ್ಞಾನವಿದಾಂ ಗತಿಃ ॥೨೪॥

ಆಕಾಶದಲ್ಲಿ ಹಕ್ಕಿಗಳ ಪದಚಿಹ್ನೆಗಳೂ, ನೀರಿನಲ್ಲಿ ಮೀನುಗಳ ಪದಚಿಹ್ನೆಗಳೂ ಯಾವ ರೀತಿಯಲ್ಲಿ ಅಗೋಚರವಾಗಿರುವುವೋ–ಅದೇ ರೀತಿಯಲ್ಲಿ ಜ್ಞಾನಿಗಳ ಮಾರ್ಗವೂ ಯಾರಿಗೂ ತಿಳಿಯುವುದಿಲ್ಲ.

ಕಾಲಃ ಪಚತಿ ಭೂತಾನಿ ಸರ್ವಾಣ್ಯೇವಾತ್ಮನಾತ್ಮನಿ ।
ಯಸ್ಮಿಂಸ್ತು ಪಚ್ಯತೇ ಕಾಲಸ್ತಂ ವೇದೇಹ ನ ಕಶ್ಚನ ॥೨೫॥

ಕಾಲನು ಸರ್ವಪ್ರಾಣಿಗಳನ್ನೂ ತನ್ನಲ್ಲಿ ಸೇರಿಸಿಕೊಂಡು ಬೇಯಿಸುತ್ತಾನೆ. ಆದರೆ ಅಂತಹ ಕಾಲನೂ ಯಾರಿಂದ ಬೇಯಿಸಲ್ಪಡುವನೋ ಆ ಪರಮಾತ್ಮನನ್ನು (ಕಾಲಕ್ಕೂ ಕಾಲನಾದ ಮಹಾಕಾಲನನ್ನು) ಯಾರೂ ಅರಿಯರು.

ನ ತದೂರ್ಧ್ವಂ ನ ತಿರ್ಯಕ್ಚ ನಾಧೋ ನ ಚ ಪುನಃ ಪುನಃ ।
ನ ಮಧ್ಯೇ ಪ್ರತಿಗೃಹ್ಣೀತೇ ನೈವ ಕಿಂಚಿತ್ಕುತಶ್ಚನ ।
ಸರ್ವೇಽನ್ತಸ್ಥಾ ಇಮೇ ಲೋಕಾ ಬಾಹ್ಯಮೇಷಾಂ ನ ಕಿಂಚನ ॥೨೬॥

ಆ ಪರಬ್ರಹ್ಮಪರಮಾತ್ಮನನ್ನು ಮೇಲಾಗಲೀ, ಕೆಳಗಾಗಲೀ, ಅಕ್ಕ-ಪಕ್ಕಗಳಲ್ಲಾಗಲೀ ಅಥವಾ ಮಧ್ಯದಲ್ಲಾಗಲೀ–ಯಾವುದೂ, ಯಾವ ಕಡೆಯಿಂದಲೂ, ಎಲ್ಲಿಯೂ ಹಿಡಿದುಕೊಳ್ಳಲು ಸಾಧ್ಯವಾಗುವುದೇ ಇಲ್ಲ. ಈ ಎಲ್ಲ ಲೋಕಗಳೂ ಅವನಲ್ಲಿಯೇ ಅಡಗಿಕೊಂಡಿವೆ. ಅವನ ಹೊರಗೆ ಯಾವುದೊಂದೂ ಇರುವುದಿಲ್ಲ. (ಎಲ್ಲವೂ ಪರಮಾತ್ಮಪರಬ್ರಹ್ಮಮಯವೇ ಆಗಿದೆ.)

ಯದ್ಯಜಸ್ರಂ ಸಮಾಗಚ್ಛೇದ್ಯಥಾ ಬಾಣೋ ಗುಣಚ್ಯುತಃ ।
ನೈವಾನ್ತಂ ಕಾರಣಸ್ಯೇಯಾದ್ಯದ್ಯಪಿ ಸ್ಯಾನ್ಮನೋಜವಃ ॥೨೭॥

ಶಿಂಜಿನಿಯಿಂದ ಹೊರಟ ಬಾಣವು ಎಷ್ಟು ಶೀಘ್ರವಾಗಿ ಹೋಗುವುದೋ–ಅಷ್ಟೇ ಶೀಘ್ರವಾಗಿ ಹೋಗುತ್ತಿದ್ದರೂ ಅಥವಾ ಮನೋವೇಗದಿಂದಲೇ ಹೋಗುತ್ತಿದ್ದರೂ–ಸರ್ವಕಾರಣನಾದ ಪರಮಾತ್ಮನ ಅಂತವನ್ನು ಮುಟ್ಟುವುದಕ್ಕಾಗುವುದಿಲ್ಲ. (ಆದುದರಿಂದಲೇ ಅವನು ಅನಂತನು.)

ತಸ್ಮಾತ್ಸೂಕ್ಷ್ಮಾತ್ಸೂಕ್ಷ್ಮತರಂ ನಾಸ್ತಿ ಸ್ಥೂಲತರಂ ತತಃ ॥೨೮॥
ಸರ್ವತಃ ಪಾಣಿಪಾದಂ ತತ್ಸರ್ವತೋಽಕ್ಷಿಶಿರೋಮುಖಮ್ ।
ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥೨೯॥

ಪರಬ್ರಹ್ಮವಸ್ತುವಿಗಿಂತಲೂ ಸೂಕ್ಷ್ಮತರವಾದ ವಸ್ತುವು ಬೇರೊಂದಿಲ್ಲ. ಅದಕ್ಕಿಂತಲೂ ಸ್ಥೂಲವಾದ ಬೇರೊಂದು ವಸ್ತುವೂ ಇಲ್ಲ. ಆ ಬ್ರಹ್ಮವಸ್ತುವಿಗೆ ಎಲ್ಲ ಕಡೆಗಳಲ್ಲಿಯೂ ಕೈ-ಕಾಲುಗಳಿವೆ. ಎಲ್ಲ ಕಡೆಗಳಲ್ಲಿಯೂ ಕಣ್ಣು-ತಲೆ-ಮುಖ ಮತ್ತು ಕಿವಿಗಳಿವೆ. ಅದು ಪ್ರಪಂಚದಲ್ಲಿ ಎಲ್ಲವನ್ನೂ ಆವರಿಸಿಕೊಂಡಿದೆ.

ತದೇವಾಣೋರಣುತರಂ ತನ್ಮಹದ್ಭ್ಯೋ ಮಹತ್ತರಮ್ ।
ತದನ್ತಃಸರ್ವಭೂತಾನಾಂ ಧ್ರುವಂ ತಿಷ್ಠನ್ನ ದೃಶ್ಯತೇ ॥೩೦॥

ಆ ಬ್ರಹ್ಮವಸ್ತುವು ಅಣುವಿಗಿಂತಲೂ ಅಣುತರವಾದುದು. ಮಹತ್ತಿಗಿಂತಲೂ ಮಹತ್ತರವಾದುದು. ಎಲ್ಲ ಪ್ರಾಣಿಗಳ ಒಳಗೂ ಅದು ನಿಶ್ಚಯವಾಗಿಯೂ ಇದೆ. ಆದರೆ ಅದು ಮಾತ್ರ ಯಾರಿಗೂ ಕಾಣಿಸುವುದಿಲ್ಲ.

ಅಕ್ಷರಂ ಚ ಕ್ಷರಂ ಚೈವ ದ್ವೈಧೀಭಾವೋಽಯಮಾತ್ಮನಃ ।
ಕ್ಷರಃ ಸರ್ವೇಷು ಭೂತೇಷು ದಿವ್ಯಂ ತಮೃತಮಕ್ಷರಮ್ ॥೩೧॥

ಆ ಪರಮಾತ್ಮನಿಗೆ ಕ್ಷರ (ವಿನಾಶಿ), ಅಕ್ಷರ (ಅವಿನಾಶಿ) ಎಂಬ ಎರಡು ಸ್ವರೂಪಗಳೂ ಇವೆ. ಸರ್ವಪ್ರಾಣಿಗಳಲ್ಲಿಯೂ ಅವನ ಕ್ಷರರೂಪಗಳಿವೆ. ದಿವ್ಯನೂ, ಸತ್ಯಸ್ವರೂಪನೂ ಆದ ಕೂಟಸ್ಥನು ಅವನ ಅಕ್ಷರಸ್ವರೂಪನು. (**ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ । ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ** [ಗೀತಾ ಅ–೧೫ ಶ್ಲೋ-೧೬] ವಿಕಾರಸ್ವಭಾವದ ಪ್ರಕೃತಿಯೊಡನೆ ಸೇರಿಕೊಂಡಿರುವುದು ಪರಮಾತ್ಮನ ಕ್ಷರಸ್ವರೂಪ. ಪ್ರಕೃತಿಸಂಬಂಧವಿಲ್ಲದೇ ತನ್ನ ನಿಜಸ್ವರೂಪದಲ್ಲಿಯೇ ಇರುವುದು ಪರಮಾತ್ಮನ ಅಕ್ಷರಸ್ವರೂಪ.)

ನವದ್ವಾರಂ ಪುರಂ ಗತ್ವಾ ಹಂಸೋ ಹಿ ನಿಯತೋ ವಶೀ ।
ಈಶಃ ಸರ್ವಸ್ಯ ಭೂತಸ್ಯ ಸ್ಥಾವರಸ್ಯ ಚರಸ್ಯ ಚ ॥೩೨॥

ಚರಾಚರಾದಿ ಸಕಲಪ್ರಾಣಿಗಳಿಗೂ ಈಶ್ವರನಾಗಿ ಎಲ್ಲವನ್ನೂ ವಶಪಡಿಸಿಕೊಂಡಿರುವ ಪರಮಾತ್ಮನು ಒಂಬತ್ತು ಬಾಗಿಲುಗಳಿಂದ ಕೂಡಿರುವ ಶರೀರವೆಂಬ ಪುರಕ್ಕೆ ಹೋಗಿ (ಶರೀರವನ್ನು ಪ್ರವೇಶಿಸಿ) ಆ ಪುರದ ವಶನಾಗಿ ಹಂಸನೆಂಬ ಹೆಸರಿನಿಂದ ಇದ್ದಾನೆ.

ಹಾನಿಭಙ್ಗವಿಕಲ್ಪಾನಾಂ ನವಾನಾಂ ಸಂಚಯೇನ ಚ ।
ಶರೀರಾಣಾಮಜಸ್ಯಾಹುರ್ಹಂಸತ್ವಂ ಪಾರದರ್ಶಿನಃ ॥೩೩॥

ಆ ಪರಮಾತ್ಮನು ಜನ್ಮರಹಿತನಾಗಿದ್ದರೂ ಹೊಸ-ಹೊಸ ಶರೀರಗಳಿಗೆ ಸಂಬಂಧಪಟ್ಟಂತೆ ಹಾನಿ, ಭಂಗ ಮತ್ತು ವಿಕಲ್ಪಗಳನ್ನು ಸ್ವೇಚ್ಛೆಯಿಂದ ಸಂಗ್ರಹಿಸುವುದರಿಂದ ಅವನಿಗೆ ತತ್ತ್ವಜ್ಞಾನಿಗಳು ಹಂಸತ್ವವನ್ನು ಹೇಳಿದ್ದಾರೆ. (ಗತಿಯುಕ್ತನಾದುದರಿಂದ 'ಹಂಸ' ಎನಿಸುತ್ತಾನೆ. ಹಂಸಃ = ಗತಿಯುಳ್ಳವನು. ಹನಹಿಂಸಾಗತ್ಯೋಃ)

ಹಂಸೋಕ್ತಂ ಚಾಕ್ಷರಂ ಚೈವ ಕೂಟಸ್ಥಂ ಯತ್ತದಕ್ಷರಮ್ ।
ತದ್ವಿದ್ವಾನಕ್ಷರಂ ಪ್ರಾಪ್ಯ ಜಹಾತಿ ಪ್ರಾಣಜನ್ಮನೀ ॥೩೪॥

ಯಾವ ಅವಿನಾಶಿಯಾದ ಆತ್ಮನು ಹಂಸ ಎಂಬ ಹೆಸರಿನಿಂದ ಪ್ರತಿಪಾದಿತನಾಗಿರುವನೋ–ಅವನೇ ಅಕ್ಷರನಾಮಕನಾದ ಕೂಟಸ್ಥನೂ ಆಗಿದ್ದಾನೆ. ಹೀಗೆ ಅಕ್ಷರರೂಪನಾದ ಆ ಪರಮಾತ್ಮನನ್ನು ಯಥಾರ್ಥರೂಪದಿಂದ ಹೊಂದುವ ಜ್ಞಾನಿಯು ಪ್ರಾಣ, ಜನ್ಮ ಮತ್ತು ಮೃತ್ಯುಬಂಧನಗಳಿಂದ ಮುಕ್ತನಾಗುತ್ತಾನೆ."

೨೩೯ನೆಯ ಅಧ್ಯಾಯವು ಮುಗಿಯಿತು.

೨೪೦ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಯೋಗದಿಂದ ಪರಮಾತ್ಮಪ್ರಾಪ್ತಿಯ ವರ್ಣನೆ

ಯುಧಿಷ್ಠಿರ! ವ್ಯಾಸರು ಮುಂದುವರಿದು ಹೇಳುತ್ತಾರೆ :

"ಸುಪುತ್ರನಾದ ಶುಕನೇ! ನಿನ್ನ ಪ್ರಶ್ನೆಗೆ ಅನುಸಾರವಾಗಿ ನಾನು ಇದುವರೆಗೆ ಸಾಂಖ್ಯಜ್ಞಾನದಿಂದ ಯುಕ್ತವಾದ ತತ್ತ್ವವನ್ನು ಯಥಾವತ್ತಾಗಿ ಹೇಳಿದೆನು. ಮುಂದೆ ಯೋಗಕ್ರಿಯೆಗೆ ಸಂಬಂಧಿಸಿದಂತೆ ಸಂಪೂರ್ಣವಿಷಯಗಳನ್ನು ಹೇಳುತ್ತೇನೆ, ಕೇಳು.

ಏಕತ್ವಂ ಬುದ್ಧಿಮನಸೋರಿನ್ದ್ರಿಯಾಣಾಂ ಚ ಸರ್ವಶಃ ।
ಆತ್ಮನೋ ವ್ಯಾಪಿನಸ್ತಾತ ಜ್ಞಾನಮೇತದನುತ್ತಮಮ್ ॥೨॥

ಮಗು! ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿ – ಇವುಗಳ ಪ್ರವೃತ್ತಿಯನ್ನು ಎಲ್ಲ ಕಡೆಗಳಿಂದಲೂ ತಡೆದು ಸರ್ವವ್ಯಾಪಿಯಾದ ಆತ್ಮನೊಡನೆ ಅವುಗಳ ಏಕತ್ವವನ್ನು ಕಲ್ಪಿಸುವುದೇ ಸರ್ವೋತ್ತಮವಾದ ಜ್ಞಾನವೆಂದು ಯೋಗಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ.

ತದೇತದುಪಶಾನ್ತೇನ ದಾನ್ತೇನಾಧ್ಯಾತ್ಮಶೀಲಿನಾ ।
ಆತ್ಮಾರಾಮೇಣ ಬುದ್ಧೇನ ಬೋದ್ಧವ್ಯಂ ಶುಚಿಕರ್ಮಣಾ ॥೩॥

ತಾಳ್ಮೆಯಿರುವವನೂ, ಜಿತೇಂದ್ರಿಯನೂ, ಅಧ್ಯಾತ್ಮಶೀಲನೂ, ಆತ್ಮನಲ್ಲಿಯೇ ಯಾವಾಗಲೂ ರಮಿಸುವ ಸ್ವಭಾವವುಳ್ಳವನೂ ಪವಿತ್ರವಾದ ಕರ್ಮಗಳನ್ನು ಮಾಡುವವನೂ ಆದ ವಿದ್ವಾಂಸನು ಈ ಯೋಗಮಾರ್ಗವನ್ನು ತಿಳಿದುಕೊಳ್ಳಬೇಕು.

ಯೋಗದೋಷಾನ್ಸಮುಚ್ಛಿದ್ಯ ಪಞ್ಚ ಯಾನ್ಕವಯೋ ವಿದುಃ ।
ಕಾಮಂ ಕ್ರೋಧಂ ಚ ಲೋಭಂ ಚ ಭಯಂ ಸ್ವಪ್ನಂ ಚ ಪಞ್ಚಮಮ್ ॥೪॥
ಕ್ರೋಧಂ ಶಮೇನ ಜಯತಿ ಕಾಮಂ ಸಂಕಲ್ಪವರ್ಜನಾತ್ ।
ಸತ್ತ್ವಸಂಸೇವನಾದ್ಧೀರೋ ನಿದ್ರಾಮುಚ್ಛೇತ್ತುಮರ್ಹತಿ ॥೫॥

ವಿದ್ವಾಂಸರು ಹೇಳಿರುವ ಐದು ಬಗೆಯ ಯೋಗದೋಷಗಳನ್ನೂ ಸಂಪೂರ್ಣವಾಗಿ ತೊಡೆದುಹಾಕಬೇಕು. ಕಾಮ, ಕ್ರೋಧ, ಲೋಭ, ಭಯ ಮತ್ತು ಸ್ವಪ್ನ–ಇವೇ ಆ ಐದು ಯೋಗದೋಷಗಳು. ಮನೋನಿಗ್ರಹದಿಂದ ಕ್ರೋಧವನ್ನು ಜಯಿಸಬೇಕು. ಸಂಕಲ್ಪತ್ಯಾಗದಿಂದ ಕಾಮವನ್ನು ಜಯಿಸಬೇಕು. ಸತ್ತ್ವಗುಣವನ್ನು ಆಶ್ರಯಿಸಿ ನಿದ್ರೆಯನ್ನು ಜಯಿಸಬೇಕು.

ಧೃತ್ಯಾ ಶಿಶ್ನೋದರಂ ರಕ್ಷೇತ್ಪಾಣಿಪಾದಂ ಚ ಚಕ್ಷುಷಾ ।
ಚಕ್ಷುಃಶ್ರೋತ್ರೇ ಚ ಮನಸಾ ಮನೋವಾಚಂ ಚ ಕರ್ಮಣಾ ।
ಅಪ್ರಮಾದಾದ್ಭಯಂ ಜಹ್ಯಾದ್ದಮ್ಭಂ ಪ್ರಾಜ್ಞೋಪಸೇವನಾತ್ ॥೭॥

ಮನುಷ್ಯನು ಧೈರ್ಯದಿಂದ ಶಿಶ್ನೋದರಗಳನ್ನು ರಕ್ಷಿಸಿಕೊಳ್ಳಬೇಕು. (ಕಾಮೇಂದ್ರಿಯವನ್ನೂ, ರಸನೇಂದ್ರಿಯವನ್ನೂ ಯುಕ್ತಿಯಿಂದ ಧರ್ಮಕ್ಕೆ ಅವಿರುದ್ಧವಾಗಿ ಬಳಸಿಕೊಳ್ಳುತ್ತಾ ಕ್ರಮೇಣ ನಿಗ್ರಹಿಸಬೇಕು.) ಕಣ್ಣುಗಳ ಸಹಾಯದಿಂದ ಕೈ-ಕಾಲುಗಳನ್ನು ರಕ್ಷಿಸಿಕೊಳ್ಳಬೇಕು. ಮನಸ್ಸಿನ ಸಹಾಯದಿಂದ ಕಣ್ಣು-ಕಿವಿಗಳನ್ನು ರಕ್ಷಿಸಬೇಕು. (ಕೆಟ್ಟ ನೋಟಗಳನ್ನು ನೋಡಲು ಕೆಟ್ಟ ಮಾತುಗಳನ್ನು ಕೇಳಲು ಕಣ್ಣು-ಕಿವಿಗಳಿಗೆ ಅವಕಾಶವನ್ನೀಯಬಾರದು.) ಸತ್ಕರ್ಮದ ಮೂಲಕವಾಗಿ ಮನಸ್ಸನ್ನೂ ಮತ್ತು ಮಾತನ್ನೂ ರಕ್ಷಿಸಬೇಕು. ಜಾಗರೂಕನಾಗಿದ್ದು ಭಯವನ್ನು ತ್ಯಜಿಸಬೇಕು. ವಿದ್ವಾಂಸರ ಸೇವೆಮಾಡುವುದರಿಂದ ದಂಭವನ್ನು ಜಯಿಸಬೇಕು.

ಏವಮೇತಾನ್ಯೋಗದೋಷಾಞ್ಜಯೇನ್ನಿತ್ಯಮತನ್ದ್ರಿತಃ ।
ಅಗ್ನೀಂಶ್ಚ ಬ್ರಾಹ್ಮಣಾಂಶ್ಚಾರ್ಚೇದ್ದೇವತಾಃ ಪ್ರಣಮೇತ ಚ ॥೮॥

ಈ ರೀತಿಯಲ್ಲಿ ಅನುದಿನವೂ ಆಲಸ್ಯವಿಲ್ಲದವನಾಗಿ ಮೇಲೆ ಹೇಳಿದ ಯೋಗದೋಷಗಳನ್ನು ಜಯಿಸಬೇಕು. ಅಗ್ನಿಗಳನ್ನೂ, ಬ್ರಾಹ್ಮಣರನ್ನೂ ಪೂಜಿಸಬೇಕು. ದೇವತೆಗಳಿಗೆ ಪ್ರಣಾಮಮಾಡಬೇಕು.

ವರ್ಜಯೇದುಶತೀಂ ವಾಚಂ ಹಿಂಸಾಯುಕ್ತಾಂ ಮನೋನುದಾಮ್ ।

ಬ್ರಹ್ಮತೇಜೋಮಯಂ ಶುಕ್ರಂ ಯಸ್ಯ ಸರ್ವಮಿದಂ ರಸಃ ।
ಏತಸ್ಯ ಭೂತಂ ಭವ್ಯಸ್ಯ ದೃಷ್ಟಂ ಸ್ಥಾವರಜಙ್ಗಮಮ್ ॥೯॥

ಸಾಧಕನು ಮನಸ್ಸಿಗೆ ಪೀಡೆಯನ್ನುಂಟುಮಾಡುವ ಹಿಂಸಾಯುಕ್ತವಾದ ಮತ್ತು ಕಾಮಪ್ರಚೋದಕವಾದ ಮಾತುಗಳನ್ನಾಡಬಾರದು. ತೇಜೋಮಯವಾದ ಬ್ರಹ್ಮವಸ್ತುವು ಎಲ್ಲಕ್ಕೂ ಬೀಜರೂಪವಾಗಿದೆ. ಈ ವಿಶ್ವವೆಲ್ಲವೂ ಪರಬ್ರಹ್ಮವಸ್ತುವಿನ ಸಾರವೇ ಆಗಿದೆ. ಭವ್ಯವಾದ ಈ ಬ್ರಹ್ಮವಸ್ತುವಿನ ಸಂಕಲ್ಪದಿಂದಲೇ ಚರಾಚರಪ್ರಾಣಿಗಳೂ ಹುಟ್ಟಿರುವುವು.

ಧ್ಯಾನಮಧ್ಯಯನಂ ದಾನಂ ಸತ್ಯಂ ಹ್ರೀರಾರ್ಜವಂ ಕ್ಷಮಾ ॥೧೦॥

ಶೌಚಮಾಚಾರಸಂಶುದ್ಧಿರಿನ್ದ್ರಿಯಾಣಾಂ ಚ ನಿಗ್ರಹಃ ।
ಏತೈರ್ವಿವರ್ಧತೇ ತೇಜಃ ಪಾಪ್ಮಾನಂ ಚಾಪಕರ್ಷತಿ ॥೧೧॥

ಸಿಧ್ಯನ್ತಿ ಚಾಸ್ಯ ಸರ್ವಾರ್ಥಾ ವಿಜ್ಞಾನಂ ಚ ಪ್ರವರ್ತತೇ ।
ಸಮಃ ಸರ್ವೇಷು ಭೂತೇಷು ಲಬ್ಧಾಲಬ್ಧೇನ ವರ್ತಯನ್ ॥೧೨॥

ಧೂತಪಾಪ್ಮಾ ತು ತೇಜಸ್ವೀ ಲಘ್ವಾಹಾರೋ ಜಿತೇನ್ದ್ರಿಯಃ ।
ಕಾಮಕ್ರೋಧೌ ವಶೇ ಕೃತ್ವಾ ನಿನೀಷೇದ್ಬ್ರಹ್ಮಣಃ ಪದಮ್ ॥೧೩॥

ಧ್ಯಾನ, ವೇದಾಧ್ಯಯನ, ದಾನ, ಸತ್ಯನಿಷ್ಠೆ, ಲಜ್ಜೆ, ಸರಳತೆ, ಕ್ಷಮೆ, ಶೌಚ, ಆಚಾರಶುದ್ಧಿ, ಇಂದ್ರಿಯನಿಗ್ರಹ–ಇವೇ ಮೊದಲಾದ ಸತ್ಕರ್ಮಗಳಿಂದ ತೇಜಸ್ಸು ವರ್ಧಿಸುತ್ತದೆ ಮತ್ತು ಪಾಪಗಳೂ ನಾಶವಾಗುತ್ತವೆ. ಧ್ಯಾನಾಧ್ಯಯನಗಳಲ್ಲಿ ನಿರತನಾದವನಿಗೆ ಸರ್ವಮನೋರಥಗಳೂ ಸಿದ್ಧಿಸುತ್ತವೆ. ಬ್ರಹ್ಮಸಂಬಂಧವಾದ ವಿಶೇಷಜ್ಞಾನವೂ ಅವನಿಗೆ ಉಂಟಾಗುತ್ತದೆ. ಯೋಗಿಯಾದವನು ಎಲ್ಲ ಪ್ರಾಣಿಗಳಲ್ಲಿಯೂ ಸಮಭಾವವನ್ನಿಡಬೇಕು. ಏನಾದರೂ ಸಿಕ್ಕಲೀ ; ಸಿಕ್ಕದಿರಲಿ–ಪ್ರಯತ್ನವಿಲ್ಲದೇ ಎಷ್ಟು ದೊರಕುವುದೋ ಅಷ್ಟರಿಂದಲೇ ಸಂತುಷ್ಟನಾಗಿರಬೇಕು. ಪಾಪಗಳನ್ನು ಕಳೆದುಕೊಂಡು ತೇಜಸ್ವಿಯಾಗಿ, ಮಿತಾಹಾರಿಯಾಗಿ, ಕಾಮ-ಕ್ರೋಧಗಳನ್ನು ವಶಪಡಿಸಿಕೊಂಡು ಬ್ರಹ್ಮಪದವಿಯನ್ನು ಹೊಂದಲು ಇಚ್ಛಿಸಬೇಕು.

ಮನಸಶ್ಚೇನ್ದ್ರಿಯಾಣಾಂ ಚ ಕೃತ್ವೈಕಾಗ್ರ್ಯಂ ಸಮಾಹಿತಃ ।
ಪೂರ್ವರಾತ್ರಾಪರಾರ್ಧಂ ಚ ಧಾರಯೇನ್ಮನ ಆತ್ಮನಿ ॥೧೪॥

ಯೋಗಿಯಾದವನು ಮನಸ್ಸನ್ನೂ ಮತ್ತು ಇಂದ್ರಿಯಗಳನ್ನೂ ಏಕಾಗ್ರಗೊಳಿಸಿ ರಾತ್ರಿಯ ಮೊದಲನೆಯ ಮತ್ತು ಕಡೆಯ ಯಾಮಗಳಲ್ಲಿ ಧ್ಯಾನಸ್ಥನಾಗಿ ಇಂದ್ರಿಯಗಳಿಂದ ಸಹಿತವಾದ ಮನಸ್ಸನ್ನು ಆತ್ಮನಲ್ಲಿ ನೆಲೆಗೊಳಿಸಬೇಕು.

ಜನ್ತೋಃ ಪಞ್ಚೇನ್ದ್ರಿಯಸ್ಯಾಸ್ಯ ಯದೇಕಂ ಛಿದ್ರಮಿನ್ದ್ರಿಯಮ್ ।
ತತೋಽಸ್ಯ ಸ್ರವತೇ ಪ್ರಜ್ಞಾ ದೃತೇಃ ಪಾದಾದಿವೋದಕಮ್ ॥೧೫॥

ಒಂದೇ ಸಣ್ಣ ತೂತಿದ್ದರೂ ಚರ್ಮದ ಚೀಲದ ಕೆಳಭಾಗದಿಂದ ನೀರು ಸೋರಿಹೋಗುವಂತೆ–ಮನುಷ್ಯನ ಪಂಚೇಂದ್ರಿಯಗಳಲ್ಲಿ ಒಂದೇ ಒಂದು ಇಂದ್ರಿಯವು ಛಿದ್ರವಾಗಿ ಹೋದರೂ (ಒಂದು ಇಂದ್ರಿಯವು ವಿಷಯಗಳ ಕಡೆಗೆ ಹರಿದುಹೋದರೂ) ಮನುಷ್ಯನ ಪ್ರಜ್ಞೆಯು ಕ್ಷೀಣಿಸುತ್ತದೆ.

ಮನಸ್ತು ಪೂರ್ವಮಾದದ್ಯಾತ್ಕುಮೀನಮಿವ ಮತ್ಸ್ಯಹಾ ।
ತತಃ ಶ್ರೋತ್ರಂ ತತಶ್ಚಕ್ಷುರ್ಜಿಹ್ವಾಂ ಘ್ರಾಣಂ ಚ ಯೋಗವಿತ್ ॥೧೬॥

ಬೆಸ್ತನು ಯಾವ ರೀತಿಯಲ್ಲಿ ತಂಟೆಮಾಡುವ ಮೀನನ್ನು ಮೊದಲು ಹಿಡಿದು ಬುಟ್ಟಿಯಲ್ಲಿಟ್ಟುಕೊಳ್ಳುವನೋ–ಅದೇ ರೀತಿಯಲ್ಲಿ ಯೋಗಿಯು ಮೊದಲು ಮನಸ್ಸನ್ನು ನಿಗ್ರಹಿಸಿ ವಶಪಡಿಸಿಕೊಳ್ಳಬೇಕು. ಅನಂತರ ಕಿವಿ, ಕಣ್ಣು, ನಾಲಿಗೆ ಮತ್ತು ಘ್ರಾಣಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು.

ತತ ಏತಾನಿ ಸಂಯಮ್ಯ ಮನಸಿ ಸ್ಥಾಪಯೇದ್ಯತಿಃ ।
ತಥೈವಾಪೋಹ್ಯ ಸಂಕಲ್ಪಾನ್ಮನೋ ಹ್ಯಾತ್ಮನಿ ಧಾರಯೇತ್ ॥೧೭॥

ಪ್ರಯತ್ನಶೀಲನಾದ ಯತಿಯು ಈ ಐದು ಇಂದ್ರಿಯಗಳನ್ನೂ ವಶಪಡಿಸಿಕೊಂಡು ಮನಸ್ಸಿನಲ್ಲಿ ಇರಿಸಬೇಕು. ಹಾಗೆಯೇ ಸಂಕಲ್ಪಗಳೆಲ್ಲವನ್ನೂ ದೂರೀಕರಿಸಿ ಮನಸ್ಸನ್ನು ಬುದ್ಧಿಯಲ್ಲಿ ಲೀನಗೊಳಿಸಬೇಕು.

ಪಞ್ಚೇನ್ದ್ರಿಯಾಣಿ ಸಂಧಾಯ ಮನಸಿ ಸ್ಥಾಪಯೇದ್ಧೃತಿಃ ।
ಯದೈತಾನ್ಯವತಿಷ್ಠನ್ತಿ ಮನಃಷಷ್ಠಾನ್ಯಥಾತ್ಮನಿ ।
ಪ್ರಸೀದನ್ತಿ ಚ ಸಂಸ್ಥಾಯ ತದಾ ಬ್ರಹ್ಮ ಪ್ರಕಾಶತೇ ॥೧೮॥

ಯೋಗಿಯು ಪಂಚೇಂದ್ರಿಯಗಳನ್ನೂ ಜಯಿಸಿ ಅವುಗಳನ್ನು ಮನಸ್ಸಿನಲ್ಲಿ ಇರಿಸಬೇಕು. ಯಾವಾಗ ಆರನೆಯದಾದ ಮನಸ್ಸಿನಿಂದ ಕೂಡಿದ ಐದು ಇಂದ್ರಿಯಗಳೂ ಬುದ್ಧಿಯಲ್ಲಿ ಸೇರಿ ಪ್ರಸನ್ನವಾಗಿರುವುವೋ–ಆಗ ಬ್ರಹ್ಮವು ಪ್ರಕಾಶಿಸುತ್ತದೆ. (ಯೋಗಿಗೆ ಬ್ರಹ್ಮಸಾಕ್ಷಾತ್ಕಾರವಾಗುತ್ತದೆ.)

ವಿಧೂಮ ಇವ ದೀಪ್ತಾರ್ಚಿರಾದಿತ್ಯ ಇವ ದೀಪ್ತಿಮಾನ್ ।
ವೈದ್ಯುತೋಽಗ್ನಿರಿವಾಕಾಶೇ ದೃಶ್ಯತೇಽತ್ಮಾ ತಥಾತ್ಮನಿ ॥೧೯॥

ಆಗ ಯೋಗಿಯು ತನ್ನ ಅಂತಃಕರಣದಲ್ಲಿ – ಧೂಮರಹಿತನಾದ, ಪ್ರಜ್ವಲಿಸುವ ಅಗ್ನಿಯಂತೆಯೂ, ಪ್ರಕಾಶಮಾನನಾದ ಸೂರ್ಯನಂತೆಯೂ, ಆಕಾಶದಲ್ಲಿ ಕಾಣುವ ಮಿಂಚಿನ ಬೆಳಕಿನಂತೆಯೂ ಇರುವ ಆತ್ಮಜ್ಯೋತಿಯನ್ನು ಕಂಡುಕೊಳ್ಳುತ್ತಾನೆ.

ಸರ್ವಸ್ತತ್ರ ಸ ಸರ್ವತ್ರ ವ್ಯಾಪಕತ್ವಾಚ್ಚ ದೃಶ್ಯತೇ ॥೨೦॥

ತಂ ಪಶ್ಯನ್ತಿ ಮಹಾತ್ಮಾನೋ ಬ್ರಾಹ್ಮಣಾ ಯೇ ಮನೀಷಿಣಃ ।
ಧೃತಿಮನ್ತೋ ಮಹಾಪ್ರಾಜ್ಞಾಃ ಸರ್ವಭೂತಹಿತೇ ರತಾಃ ॥೨೧॥

ಆ ಸಮಯದಲ್ಲಿ ಎಲ್ಲವೂ ತೇಜೋರೂಪನಾದ ಆತ್ಮನಲ್ಲಿ ದೃಷ್ಟಿಗೋಚರವಾಗುತ್ತದೆ. ಆತ್ಮನು ವ್ಯಾಪಕನಾದುದರಿಂದ ಎಲ್ಲೆಲ್ಲಿಯೂ ಕಾಣುತ್ತಾನೆ. ಸರ್ವವೂ ಆತ್ಮಮಯವಾಗಿಯೇ ಕಾಣುತ್ತದೆ. ಮಹಾತ್ಮರಾದ, ಬುದ್ಧಿವಂತರಾದ, ಧೈರ್ಯವಂತರಾದ, ಮಹಾಪ್ರಾಜ್ಞರಾದ, ಸರ್ವಪ್ರಾಣಿಗಳ ಹಿತದಲ್ಲಿಯೇ ಆಸಕ್ತರಾದ ಬ್ರಾಹ್ಮಣರು ಅಂತಹ ಆತ್ಮಜ್ಯೋತಿಯ ದರ್ಶನವನ್ನು ಪಡೆಯುತ್ತಾರೆ.

ಏವಂ ಪರಿಮಿತಂ ಕಾಲಮಚರನ್ಸಂಶಿತವ್ರತಃ ।
ಆಸೀನೋ ಹಿ ರಹಸ್ಯೇಕೋ ಗಚ್ಛೇದಕ್ಷರಸಾತ್ಮತಾಮ್ ॥೨೨॥

ಹೀಗೆ ಪ್ರತಿದಿನವೂ ನಿಯತವಾದ ಕಾಲದವರೆಗೆ ಏಕಾಂತಸ್ಥಳದಲ್ಲಿ

ಒಬ್ಬನೇ ಕುಳಿತುಕೊಂಡು ಕಠೋರವ್ರತನಿಷ್ಠನಾಗಿ ಯೋಗಾಭ್ಯಾಸವನ್ನು ಮಾಡುವ ಯೋಗಿಯು ಅಕ್ಷರಬ್ರಹ್ಮನೊಡನೆ ತಾದಾತ್ಮ್ಯವನ್ನು ಹೊಂದುತ್ತಾನೆ.

ಪ್ರಮೋಹೋ ಭ್ರಮ ಆವರ್ತೋ ಘ್ರಾಣಂ ಶ್ರವಣದರ್ಶನೇ ।
ಅದ್ಭುತಾನಿ ರಸಸ್ಪರ್ಶೇ ಶೀತೋಷ್ಣೇ ಮಾರುತಾಕೃತಿಃ ॥೨೩॥

ಯೋಗಾಭ್ಯಾಸದಲ್ಲಿ ಮುಂದುವರಿಯುತ್ತಿರುವಾಗ–ಮೋಹ, ಭ್ರಮೆ, ಆವರ್ತಗಳೇ ಮೊದಲಾದ ವಿಘ್ನಗಳುಂಟಾಗುತ್ತವೆ. ದಿವ್ಯವಾದ ಸುಗಂಧವು ಸುತ್ತಲೂ ಪ್ರಸರಿಸುತ್ತದೆ. ದಿವ್ಯವಾದ ಶಬ್ದವು ಕೇಳಿಸುತ್ತದೆ. ದಿವ್ಯರೂಪಗಳ ದರ್ಶನವಾಗುತ್ತದೆ. ನಾನಾಪ್ರಕಾರವಾದ ಅದ್ಭುತವಾದ ರಸಗಳ ಮತ್ತು ಮನೋಹರವಾದ ಸ್ಪರ್ಶದ ಅನುಭವವಾಗುತ್ತದೆ. ಇಚ್ಛಾನುಕೂಲವಾದ ಶೀತೋಷ್ಣಗಳ ವಾತಾವರಣವು ಏರ್ಪಡುತ್ತದೆ. ವಾಯುರೂಪನಾಗಿ ಆಕಾಶದಲ್ಲಿ ಸಂಚರಿಸುವ ಸಾಮರ್ಥ್ಯವೂ ಉಂಟಾಗುತ್ತದೆ.

ಪ್ರತಿಭಾಮುಪಸರ್ಗಾಂಶ್ಚಾಪ್ಯುಪಸಂಗೃಹ್ಯ ಯೋಗತಃ ।
ತಾಂಸ್ತತ್ತ್ವವಿದನಾದೃತ್ಯ ಆತ್ಮನ್ಯೇವ ನಿವರ್ತಯೇತ್ ॥೨೪॥

ದಿವ್ಯಪ್ರತಿಭೆಯು ಉಂಟಾಗುತ್ತದೆ. ದಿವ್ಯಭೋಗಗಳು ತಾವೇ- ತಾವಾಗಿ ಸನ್ನಿಹಿತವಾಗುತ್ತವೆ. ಆ ಎಲ್ಲ ಸಿದ್ಧಿಗಳೂ ಯೋಗಬಲದಿಂದ ಪ್ರಾಪ್ತವಾದರೂ ತತ್ತ್ವವನ್ನು ತಿಳಿದಿರುವ ಯೋಗಿಯು ಆ ಸಿದ್ಧಿಗಳೆಲ್ಲವೂ ಆತ್ಮದರ್ಶನಕ್ಕೆ ವಿಘ್ನಕಾರಕಗಳಾದುದರಿಂದ ಅವೆಲ್ಲವನ್ನೂ ತಿರಸ್ಕರಿಸಿ ಮನಸ್ಸನ್ನು ಆತ್ಮನಲ್ಲಿಯೇ ಸ್ಥಿರಗೊಳಿಸಬೇಕು.

ಕುರ್ಯಾತ್ಪರಿಚಯಂ ಯೋಗೇ ತ್ರೈಕಾಲ್ಯೇ ನಿಯತೋ ಮುನಿಃ ।
ಗಿರಿಶೃಙ್ಗೇ ತಥಾ ಚೈತ್ಯೇ ವೃಕ್ಷಾಗ್ರೇಷು ಚ ಯೋಜಯೇತ್ ॥೨೫॥

ಮುನಿಯು ನಿತ್ಯವೂ ನಿಯಮದಲ್ಲಿದ್ದುಕೊಂಡು ಪರ್ವತದ ಶಿಖರದಲ್ಲಾಗಲೀ, ದೇವಾಲಯದ ತುದಿಯಲ್ಲಾಗಲೀ, ಮರಗಳ ತುದಿಯಲ್ಲಾಗಲೀ ದೃಷ್ಟಿಯನ್ನು ಕೇಂದ್ರೀಕರಿಸಿ ದಿನಕ್ಕೆ ಮೂರು ಬಾರಿ (ಪ್ರಾತಃಕಾಲ, ರಾತ್ರಿಯ ಮೊದಲನೆಯ ಯಾಮ ಮತ್ತು ಕಡೆಯ ಯಾಮಗಳಲ್ಲಿ) ಯೋಗಾಭ್ಯಾಸವನ್ನು ಮಾಡಬೇಕು.

ಸಂನಿಯಮ್ಯೇನ್ದ್ರಿಯಗ್ರಾಮಂ ಕೋಷ್ಠೇ ಭಾಣ್ಡಮನಾ ಇವ ।
ಏಕಾಗ್ರಂ ಚಿನ್ತಯೇನ್ನಿತ್ಯಂ ಯೋಗಾನ್ನೋದ್ವೇಜಯೇನ್ಮನಃ ॥೨೬॥

ಹಣದ ಭಂಡಾರವನ್ನು ತುಂಬಿಸಲು ಇಚ್ಛಿಸುವವನು ಭಾಂಡಾಗಾರದಲ್ಲಿ ದ್ರವ್ಯವನ್ನು ಸಂಗ್ರಹಿಸಿ ಇಡುವಂತೆ–ಯೋಗಸಾಧಕನೂ ಇಂದ್ರಿಯಗಳ ಸಮುದಾಯವನ್ನು ಮನಸ್ಸಿನೊಡನೆ ಹೃದಯಪುಂಡರೀಕದಲ್ಲಿರಿಸಿ ಆತ್ಮನನ್ನು ಏಕಾಗ್ರತೆಯಿಂದ ಧ್ಯಾನಮಾಡಬೇಕು. ಯೋಗದಿಂದ ಮನಸ್ಸು ಉದ್ವಿಗ್ನವಾಗುವಂತೆ ಮಾಡಬಾರದು.

ಯೇನೋಪಾಯೇನ ಶಕ್ಯೇತ ಸಂನಿಯನ್ತುಂ ಚಲಂ ಮನಃ ।
ತಂ ಚ ಯುಕ್ತೋ ನಿಷೇವೇತ ನ ಚೈವ ವಿಚಲೇತ್ತತಃ ॥೨೭॥

ಚಂಚಲವಾದ ಮನಸ್ಸನ್ನು ಯಾವ ಉಪಾಯದಿಂದ ನಿಯಂತ್ರಿಸಲು ಸಾಧ್ಯವಾಗುವುದೋ–ಅಂತಹ ಉಪಾಯವನ್ನು ಸಾಧಕನು ಆಶ್ರಯಿಸಬೇಕು. ಆ ಸಾಧನೆಯಿಂದ ಅವನು ಯಾವಾಗಲೂ ವಿಚಲಿತನಾಗಬಾರದು.

ಶೂನ್ಯಾ ಗಿರಿಗುಹಾಶ್ಚೈವ ದೇವತಾಯತನಾನಿ ಚ ।
ಶೂನ್ಯಾಗಾರಾಣಿ ಚೈಕಾಗ್ರೋ ನಿವಾಸಾರ್ಥಮುಪಕ್ರಮೇತ್ ॥೨೮॥

ಏಕಾಗ್ರಚಿತ್ತನಾದ ಯೋಗಿಯು ನಿರ್ಜನವಾದ ಪರ್ವತದ ಗುಹೆಗಳನ್ನೂ, ದೇವಾಲಯಗಳನ್ನೂ, ಏಕಾಂತವಾಗಿರುವ ಶೂನ್ಯಗೃಹಗಳನ್ನೂ ವಾಸಕ್ಕಾಗಿ ಆರಿಸಿಕೊಳ್ಳಬೇಕು.

ನಾಭಿಷ್ವಜೇತ್ಪರಂ ವಾಚಾ ಕರ್ಮಣಾ ಮನಸಾಪಿ ವಾ ।
ಉಪೇಕ್ಷಕೋ ಯತಾಹಾರೋ ಲಬ್ಧಾಲಬ್ಧೇ ಸಮೋ ಭವೇತ್ ॥೨೯॥

ಯೋಗಸಾಧಕನು ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಕರ್ಮದಿಂದಾಗಲೀ ಬೇರೆಯವನಲ್ಲಿ ಹೆಚ್ಚಾದ ಸಂಗವನ್ನು ಇಟ್ಟುಕೊಳ್ಳಬಾರದು. ಪ್ರಾಪಂಚಿಕವಾದ ಎಲ್ಲ ವಿಷಯಗಳಲ್ಲಿಯೂ ಉಪೇಕ್ಷೆಯುಳ್ಳವನಾಗಿರಬೇಕು. ನಿಯತವಾದ ಆಹಾರವುಳ್ಳವನಾಗಿರಬೇಕು. ಲಾಭ ಮತ್ತು ಅಲಾಭಗಳನ್ನು ಸಮಾನವಾಗಿ ಕಾಣಬೇಕು.

ಯಶ್ಚೈನಮಭಿನನ್ದೇತ ಯಶ್ಚೈನಮಪವಾದಯೇತ್ ।
ಸಮಸ್ತಯೋಶ್ಚಾಪ್ಯುಭಯೋರ್ನಾಭಿಧ್ಯಾಯೇಚ್ಛುಭಾಶುಭಮ್ ॥೩೦॥

ಯೋಗಿಯಾದವನು ಅಭಿನಂದಿಸುವವನ ವಿಷಯದಲ್ಲಿಯೂ ನಿಂದಿಸುವವನ ವಿಷಯದಲ್ಲಿಯೂ ಸಮವಾಗಿ ವರ್ತಿಸಬೇಕು. ಹೊಗಳಿದವನಿಗೆ ಶುಭವನ್ನಾಗಲೀ ನಿಂದಿಸಿದವನಿಗೆ ಅಶುಭವನ್ನಾಗಲೀ ಕೋರಬಾರದು.

ನ ಪ್ರಹೃಷ್ಯೇತ ಲಾಭೇಷು ನಾಲಾಭೇಷು ಚ ಚಿನ್ತಯೇತ್ ।
ಸಮಃ ಸರ್ವೇಷು ಭೂತೇಷು ಸಧರ್ಮಾ ಮಾತರಿಶ್ವನಃ ॥೩೧॥

ಲಾಭವಾದರೆ ಸಂತೋಷಪಡಬಾರದು. ನಷ್ಟವಾದರೆ ಚಿಂತಿಸಲೂ ಬಾರದು. ವಾಯುವು ಯಾವ ವಿಧವಾದ ಪಕ್ಷಪಾತವೂ ಇಲ್ಲದೇ ಎಲ್ಲ ಪ್ರಾಣಿಗಳಲ್ಲಿಯೂ ಸಮಭಾವವನ್ನಿಟ್ಟುಕೊಂಡು ಎಲ್ಲರನ್ನೂ ಸೇವಿಸುವಂತೆ–ಯೋಗಿಯು ಸರ್ವಪ್ರಾಣಿಗಳಲ್ಲಿಯೂ ಸಮಭಾವದಿಂದಿರಬೇಕು.

ಏವಂ ಸ್ವಸ್ಥಾತ್ಮನಃ ಸಾಧೋಃ ಸರ್ವತ್ರ ಸಮದರ್ಶಿನಃ ।
ಷಣ್ಮಾಸಾನ್ನಿತ್ಯಯುಕ್ತಸ್ಯ ಶಬ್ದಬ್ರಹ್ಮಾತಿವರ್ತತೇ ॥೩೨॥

ಹೀಗೆ ಸ್ವಸ್ಥಚಿತ್ತನಾಗಿರುವ, ಸರ್ವತ್ರ ಸಮದೃಷ್ಟಿಯನ್ನು ಹೊಂದಿರುವ, ಆರು ತಿಂಗಳವರೆಗೆ ಯೋಗಾಭ್ಯಾಸದಲ್ಲಿಯೇ ನಿರತನಾಗಿರುವ ಯೋಗಿಗೆ ಶಬ್ದಬ್ರಹ್ಮವು (ಪ್ರಣವವು) ಚೆನ್ನಾಗಿ ಪ್ರಕಾಶಗೊಳ್ಳುತ್ತದೆ. (ಶಬ್ದಬ್ರಹ್ಮಾ = ಪ್ರಣವಃ, ಅತಿವರ್ತತೇ = ಸ್ವಾರ್ಥಾಪರೋಕ್ಷೀಕರಣೇನ ಅತ್ಯನ್ತಂ ಪ್ರಕಾಶತೇ.)

ವೇದನಾರ್ತಾಃ ಪ್ರಜಾ ದೃಷ್ಟ್ವಾ ಸಮಲೋಷ್ಟಾಶ್ಮಕಾಞ್ಚನಃ ।
ಏತಸ್ಮಿನ್ನಿರತೋ ಮಾರ್ಗೇ ವಿರಮೇನ್ನ ಚ ಮೋಹಿತಃ ॥೩೩॥

ನಾನಾವಿಧವಾದ ವೇದನೆಗಳಿಂದ ಸಂಕಟಪಡುವ ಪ್ರಜೆಗಳನ್ನು ನೋಡಿ ಯೋಗಿಯಾದವನು ಪ್ರಾಪಂಚಿಕವ್ಯವಹಾರಗಳಿಂದ ವಿರಕ್ತನಾಗಬೇಕು. ಮಣ್ಣುಹೆಂಟೆ, ಕಲ್ಲು ಮತ್ತು ಚಿನ್ನವನ್ನು ಸಮವಾಗಿ ಕಾಣಬೇಕು. ಪ್ರಾಪಂಚಿಕವ್ಯವಹಾರಗಳಿಂದ ವಿರತನಾದ ಯೋಗಿಯು ಯೋಗಮಾರ್ಗದಿಂದ ವಿರತನಾಗಬಾರದು ಮತ್ತು ಮೋಹಗೊಳ್ಳಬಾರದು.

ಅಪಿ ವರ್ಣಾವಕೃಷ್ಟಸ್ತು ನಾರೀ ವಾ ಧರ್ಮಕಾಂಕ್ಷಿಣೀ ।
ತಾವಪ್ಯೇತೇನ ಮಾರ್ಗೇಣ ಗಚ್ಛೇತಾಂ ಪರಮಾಂ ಗತಿಮ್ ॥೩೪॥

ನೀಚವರ್ಣದ ಪುರುಷನಾಗಿದ್ದರೂ, ಧರ್ಮವನ್ನು ಬಯಸುವ ಸ್ತ್ರೀಯೇ ಆಗಿದ್ದರೂ–ಅಂತಹವರೂ ಕೂಡ ಇದೇ ಯೋಗಮಾರ್ಗವನ್ನೇ ಆಶ್ರಯಿಸಿ ಪರಮಗತಿಯನ್ನು ಹೊಂದಬಲ್ಲರು.

ಅಜಂ ಪುರಾಣಮಜರಂ ಸನಾತನಂ
ಯದಿನ್ದ್ರಿಯೈರುಪಲಭೇತ ನಿಶ್ಚಲೈಃ ।
ಅಣೋರಣೀಯೋ ಮಹತೋ ಮಹತ್ತರಂ
ತದಾತ್ಮನಾ ಪಶ್ಯತಿ ಮುಕ್ತಮಾತ್ಮವಾನ್ ॥೩೫॥

ಚಿತ್ತವನ್ನು ಜಯಿಸಿ, ಯೋಗಾಭ್ಯಾಸದಲ್ಲಿಯೇ ಯುಕ್ತನಾದ ಯೋಗಿಯು ನಿಶ್ಚಲವಾದ ತನ್ನ ಇಂದ್ರಿಯಗಳಿಂದ–ಹುಟ್ಟಿಲ್ಲದವನೂ, ಸನಾತನನೂ, ಮುಪ್ಪಿಲ್ಲದವನೂ, ಅಣುವಿಗಿಂತಲೂ ಅಣುವೂ, ಮಹತ್ತಿಗಿಂತಲೂ ಮಹತ್ತರನೂ ಆದ ಪರಮಾತ್ಮನನ್ನು ಬುದ್ಧಿಯ ಮೂಲಕವಾಗಿ ಕಂಡುಕೊಳ್ಳುತ್ತಾನೆ.”

ಭೀಷ್ಮನು ಹೇಳುತ್ತಾನೆ :

ಇದಂ ಮಹರ್ಷೇರ್ವಚನಂ ಮಹಾತ್ಮನೋ
ಯಥಾವದುಕ್ತಂ ಮನಸಾನುದೃಶ್ಯ ಚ ।
ಅವೇಕ್ಷ್ಯ ಚೇಮಾಂ ಪರಮೇಷ್ಠಿ ಸಾಮ್ಯತಾಂ
ಪ್ರಯಾನ್ತಿ ಚಾಭೂತಗತಿಂ ಮನೀಷಿಣಃ ॥೩೬॥

“ಯುಧಿಷ್ಠಿರ! ಮಹಾತ್ಮರಾದ ವ್ಯಾಸಮಹರ್ಷಿಗಳು ಯಥಾವತ್ತಾಗಿ ಹೇಳಿರುವ ಈ ಉಪದೇಶವಚನವನ್ನು ಮನಸ್ಸಿನಲ್ಲಿ ವಿಚಾರಮಾಡಿ, ಇದು ಯುಕ್ತವಾಗಿದೆಯೆಂದು ಭಾವಿಸಿ, ಅವರು ಹೇಳಿರುವಂತೆ ಯಾರು ಯೋಗಾಭ್ಯಾಸವನ್ನು ಮಾಡುವರೋ–ಅಂತಹ ಜ್ಞಾನಿಗಳು ಸಾಮಾನ್ಯಜೀವಿಗಳಿಂದ ಹೊಂದಲು ಅಸಾಧ್ಯವಾಗಿರುವ ಬ್ರಹ್ಮಸಾಮ್ಯವನ್ನು ಹೊಂದುತ್ತಾರೆ.”

೨೪೦ನೆಯ ಅಧ್ಯಾಯವು ಮುಗಿಯಿತು.

೨೪೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಕರ್ಮ ಮತ್ತು ಜ್ಞಾನಗಳ ಅಂತರ : ಮೋಕ್ಷಪ್ರಾಪ್ತಿಯ ಉಪಾಯ

ಯುಧಿಷ್ಠಿರ! ಶುಕನು ಪ್ರಶ್ನಿಸುತ್ತಾನೆ :

ಯದಿದಂ ವೇದವಚನಂ ಕುರು ಕರ್ಮ ತ್ಯಜೇತಿ ಚ ।
ಕಾಂ ದಿಶಂ ವಿದ್ಯಯಾ ಯಾನ್ತಿ ಕಾಂ ಚ ಗಚ್ಛನ್ತಿ ಕರ್ಮಣಾ ॥೧॥

“ತಂದೆಯೇ! ವೇದಗಳಲ್ಲಿ ‘ಕರ್ಮಗಳನ್ನು ಮಾಡು’ ‘ಕರ್ಮಗಳನ್ನು ಬಿಡು’–ಎಂದು ಎರಡು ವಿಧವಾದ ವಾಕ್ಯಗಳೂ ಇವೆ. ಇದರ ಸಂಬಂಧದಲ್ಲಿ ಎರಡು ಪ್ರಶ್ನೆಗಳನ್ನು ಕೇಳಬಯಸುತ್ತೇನೆ. ಜ್ಞಾನದ ಮೂಲಕ ಸಾಧಕರು ಯಾವ ಕಡೆಗೆ ಹೋಗುತ್ತಾರೆ? ಕರ್ಮಮಾಡಿದವರು ಯಾವ ಕಡೆಗೆ ಹೋಗುತ್ತಾರೆ?

ಏತದ್ವೈ ಶ್ರೋತುಮಿಚ್ಛಾಮಿ ತದ್ಭವಾನ್ಪ್ರಬ್ರವೀತು ಮೇ ।
ಏತಚ್ಚಾನ್ಯೋನ್ಯವೈರೂಪ್ಯೇ ವರ್ತೇತೇ ಪ್ರತಿಕೂಲತಃ ॥೨॥

ನಾನು ಈ ವಿಷಯವನ್ನು ಕೇಳಬೇಕೆಂದಿರುತ್ತೇನೆ. ತಾವು ದಯಮಾಡಿ ಹೇಳಿರಿ. ವೇದದಲ್ಲಿರುವ ಈ ಎರಡು ವಾಕ್ಯಗಳೂ ಒಂದಕ್ಕೊಂದು ಅನುರೂಪವಾಗಿಲ್ಲದೇ ಪ್ರತಿಕೂಲವೇ ಆಗಿವೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಶುಕನು ಹೀಗೆ ಪ್ರಶ್ನಿಸಲಾಗಿ ಪರಾಶರರ ಮಕ್ಕಳಾದ ವ್ಯಾಸರು ತಮ್ಮ ಪುತ್ರನಿಗೆ ಹೀಗೆ ಉತ್ತರಿಸಿದರು :

ಕರ್ಮವಿದ್ಯಾಮಯಾವೇತೌ ವ್ಯಾಖ್ಯಾಸ್ಯಾಮಿ ಕ್ಷರಾಕ್ಷರೌ ॥೩॥

“ಮಗು! ಈ ಕರ್ಮಮಯಮಾರ್ಗವು ವಿನಾಶಶೀಲವಾದುದು. ಜ್ಞಾನಮಯಮಾರ್ಗವು ಅವಿನಾಶಿಯಾದುದು. ಇವೆರಡನ್ನೂ ವಿವರಿಸುತ್ತೇನೆ.

ಯಾಂ ದಿಶಂ ವಿದ್ಯಯಾ ಯಾನ್ತಿ ಯಾಂ ಚ ಗಚ್ಛನ್ತಿ ಕರ್ಮಣಾ ।
ಶೃಣುಷ್ವೈಕಮನಾ ವತ್ಸ ಗಹ್ವರಂ ಹ್ಯೇತದನ್ತರಮ್ ॥೪॥

ಮಗು! ಜ್ಞಾನದಿಂದ ಮನುಷ್ಯನು ಯಾವ ಗತಿಯನ್ನು ಹೊಂದುತ್ತಾನೆ? ಕರ್ಮದಿಂದ ಯಾವ ಗತಿಯನ್ನು ಹೊಂದುತ್ತಾನೆ?–ಎಂಬುದನ್ನೂ ತಿಳಿಸುತ್ತೇನೆ. ಏಕಾಗ್ರಚಿತ್ತನಾಗಿ ಕೇಳು. ಈ ಎರಡರ ಅಂತರವು ಅತ್ಯಂತಗಹನವಾಗಿದೆ.

ಅಸ್ತಿ ಧರ್ಮ ಇತಿ ಪ್ರೋಕ್ತಂ ನಾಸ್ತೀತ್ಯತ್ರೈವ ಯೋ ವದೇತ್ ।
ತಸ್ಯ ಪಕ್ಷಸ್ಯ ಸದೃಶಮಿದಂ ಮಮ ಭವೇದ್ವ್ಯಥಾ ॥೫॥

'ಧರ್ಮವು ಇದೆ'–ಎಂದು ಶಾಸ್ತ್ರವು ಘೋಷಿಸುತ್ತದೆ. ಅದೇ ಶಾಸ್ತ್ರದಲ್ಲಿಯೇ 'ಧರ್ಮವಿಲ್ಲ'–ಎಂಬ ವಾಕ್ಯವೂ ಇದೆಯೆಂದು ಹೇಳುವುದಾದರೆ–ಪರಸ್ಪರವಿರುದ್ಧವಾದ ಆ ಮಾತನ್ನು ಕೇಳಿ ಆಸ್ತಿಕನಾದವನ ಮನಸ್ಸಿಗೆ ಎಷ್ಟು ಕಷ್ಟವಾಗುವುದೋ ಹಾಗೆಯೇ ಕರ್ಮ ಮತ್ತು ಜ್ಞಾನಗಳ ವಿಷಯದಲ್ಲಿ ವಿರೋಧವಿರುವುದೆಂದು ಹೇಳಿದ ಮಾತುಗಳು ನನ್ನ ಮನಸ್ಸಿಗೆ ಕ್ಲೇಶವನ್ನುಂಟುಮಾಡಿವೆ.

ದ್ವಾವಿಮಾವಥ ಪನ್ಥಾನೌ ಯತ್ರ ವೇದಾಃ ಪ್ರತಿಷ್ಠಿತಾಃ ।
ಪ್ರವೃತ್ತಿಲಕ್ಷಣೋ ಧರ್ಮೋ ನಿವೃತ್ತೌ ಚ ಸುಭಾಷಿತಃ ॥೬॥

ಪ್ರವೃತ್ತಿಬೋಧಕವಾದ ಧರ್ಮಮಾರ್ಗ ಮತ್ತು ಪ್ರವೃತ್ತಿಯ ನಿವೃತ್ತಿಗಾಗಿ ಪ್ರತಿಪಾದಿತವಾಗಿರುವ ಧರ್ಮಮಾರ್ಗ–ಈ ಎರಡು ಮಾರ್ಗಗಳೂ ವೇದಗಳಲ್ಲಿ ಪ್ರತಿಷ್ಠಿತವಾಗಿರುವ (ವೇದಪ್ರತಿಪಾದ್ಯವಾದ) ಎರಡು ಮಾರ್ಗಗಳೇ ಆಗಿವೆ.

ಕರ್ಮಣಾ ಬಧ್ಯತೇ ಜನ್ತುರ್ವಿದ್ಯಯಾ ತು ಪ್ರಮುಚ್ಯತೇ ।
ತಸ್ಮಾತ್ಕರ್ಮ ನ ಕುರ್ವನ್ತಿ ಯತಯಃ ಪಾರದರ್ಶಿನಃ ॥೭॥

ಮನುಷ್ಯನು ಸಕಾಮಕರ್ಮದಿಂದ ಬಂಧಿಸಲ್ಪಡುತ್ತಾನೆ. ಜ್ಞಾನದಿಂದಲಾದರೋ ಮುಕ್ತನಾಗುತ್ತಾನೆ. ಆದುದರಿಂದ ಸಂಸಾರದ ದಡವನ್ನು ಕಂಡುಕೊಂಡಿರುವ ಯತಿಗಳು ಕರ್ಮವನ್ನು ಮಾಡುವುದಿಲ್ಲ.

ಕರ್ಮಣಾ ಜಾಯತೇ ಪ್ರೇತ್ಯ ಮೂರ್ತಿಮಾನ್ಷೋಡಶಾತ್ಮಕಃ ।
ವಿದ್ಯಯಾ ಜಾಯತೇ ನಿತ್ಯಮವ್ಯಕ್ತಂ ಹ್ಯವ್ಯಯಾತ್ಮಕಮ್ ॥೮॥

ಕರ್ಮಗಳನ್ನು ಮಾಡುವ ಮನುಷ್ಯನು ಮರಣಾನಂತರದಲ್ಲಿ ಹದಿನಾರು ತತ್ತ್ವಗಳಿಂದ ಕೂಡಿರುವ ಮೂರ್ತಶರೀರವನ್ನು ಧರಿಸಿ ಪುನಃ ಹುಟ್ಟುತ್ತಾನೆ. ಆದರೆ ಜ್ಞಾನಪ್ರಭಾವದಿಂದ ಜೀವನು ನಿತ್ಯನೂ, ಅವ್ಯಕ್ತನೂ, ಅಕ್ಷರಾತ್ಮನೂ ಆಗುತ್ತಾನೆ.

ಕರ್ಮ ತ್ವೇಕೇ ಪ್ರಶಂಸನ್ತಿ ಸ್ವಲ್ಪಬುದ್ಧಿರತಾ ನರಾಃ ।
ತೇನ ತೇ ದೇಹಜಾಲಾನಿ ರಮಯನ್ತ ಉಪಾಸತೇ ॥೯॥

ಇಂದ್ರಿಯಗಳ ಜ್ಞಾನದಲ್ಲಿಯೇ ಆಸಕ್ತರಾದ ಅಲ್ಪಬುದ್ಧಿಯವರಾದ ಮನುಷ್ಯರು ಕರ್ಮವನ್ನು ಪ್ರಶಂಸೆಮಾಡುತ್ತಾರೆ. ಈ ಕಾರಣದಿಂದ ಅವರು ಭೋಗಾಸಕ್ತರಾಗಿ ಭಿನ್ನ-ಭಿನ್ನವಾದ ಶರೀರಗಳಲ್ಲಿರುವುದೇ ರುಚಿಕರವೆಂದು ಭಾವಿಸಿ ನಾನಾದೇಹಗಳನ್ನು ಹೊಂದುತ್ತಿರುತ್ತಾರೆ.

ಯೇ ಸ್ಮ ಬುದ್ಧಿಂ ಪರಾಂ ಪ್ರಾಪ್ತಾ ಧರ್ಮನೈಪುಣ್ಯದರ್ಶಿನಃ ।
ನ ತೇ ಕರ್ಮ ಪ್ರಶಂಸನ್ತಿ ಕೂಪಂ ನದ್ಯಾಂ ಪಿಬನ್ನಿವ ॥೧೦॥

ಆದರೆ ಧರ್ಮದ ತತ್ತ್ವವನ್ನು ಚೆನ್ನಾಗಿ ತಿಳಿದುಕೊಂಡಿರುವ, ಶ್ರೇಷ್ಠವಾದ ಬುದ್ಧಿಯನ್ನು ಹೊಂದಿರುವ ಜ್ಞಾನಿಗಳು, ನದಿಯ ನೀರನ್ನು ಕುಡಿಯುತ್ತಿರುವವರು ಬಾವಿಯ ನೀರನ್ನು ಪ್ರಶಂಸೆಮಾಡದಂತೆ–ಕರ್ಮವನ್ನು ಪ್ರಶಂಸೆಮಾಡುವುದಿಲ್ಲ.

ಕರ್ಮಣಃ ಫಲಮಾಪ್ನೋತಿ ಸುಖದುಃಖೇ ಭವಾಭವೌ ।
ವಿದ್ಯಯಾ ತದವಾಪ್ನೋತಿ ಯತ್ರ ಗತ್ವಾ ನ ಶೋಚತಿ ॥೧೧॥

ಸುಖ-ದುಃಖ, ಹುಟ್ಟು-ಸಾವು, (ಐಶ್ವರ್ಯ-ದಾರಿದ್ರ್ಯ) ಇತ್ಯಾದಿಗಳು ಕರ್ಮದ ಫಲಗಳಾಗಿವೆ. ಆದರೆ ಜ್ಞಾನದ ಮೂಲಕವಾಗಿ ಮನುಷ್ಯನು–ಎಲ್ಲಿಗೆ ಹೋದರೆ ಶೋಕಪಡಬೇಕಾಗುವುದಿಲ್ಲವೋ–ಅಂತಹ ಪರಮಪದವನ್ನು ಹೊಂದುತ್ತಾನೆ.

ಯತ್ರ ಗತ್ವಾ ನ ಮ್ರಿಯತೇ ಯತ್ರ ಗತ್ವಾ ನ ಜಾಯತೇ ।
ನ ಜೀರ್ಯತೇ ಯತ್ರ ಗತ್ವಾ ಯತ್ರ ಗತ್ವಾ ನ ವರ್ಧತೇ ॥೧೨॥

ಎಲ್ಲಿಗೆ ಹೋದನಂತರ ಜೀವನು ಸಾಯುವುದಿಲ್ಲವೋ ಮತ್ತು ಹುಟ್ಟು

ವುದೂ ಇಲ್ಲವೋ, ಜೀರ್ಣನಾಗುವುದಿಲ್ಲವೋ ಮತ್ತು ವೃದ್ಧಿಯನ್ನೂ ಹೊಂದುವುದಿಲ್ಲವೋ–ಅಂತಹ ಪರಮಪದಕ್ಕೆ ಜ್ಞಾನದ ಮೂಲಕವಾಗಿ ಜೀವಿಯು ಹೋಗುತ್ತಾನೆ.

ಯತ್ರ ತದ್ಬ್ರಹ್ಮ ಪರಮಮವ್ಯಕ್ತಮಚಲಂ ಧ್ರುವಮ್ ।
ಅವ್ಯಾಕೃತಮನಾಯಾಸಮವ್ಯಕ್ತಂ ಚಾವಿಯೋಗಿ ಚ ॥೧೩॥

ಎಲ್ಲಿ ಅವ್ಯಕ್ತವಾದ, ಅಚಲವಾದ, ಸ್ಥಿರವಾದ, ಅವಿಕಾರಿಯಾದ, ಆಯಾಸರಹಿತವಾದ, ವಿಯೋಗರಹಿತವಾದ ಪರಬ್ರಹ್ಮವಸ್ತುವಿರುವುದೋ ಅಂತಹ ಪರಮಪದವನ್ನು ಜ್ಞಾನದ ಮೂಲಕವಾಗಿ ಮನುಷ್ಯನು ಹೊಂದುತ್ತಾನೆ.

ದ್ವನ್ದ್ವೈರ್ನ ಯತ್ರ ಬಾಧ್ಯನ್ತೇ ಮಾನಸೇನ ಚ ಕರ್ಮಣಾ ।
ಸಮಾಃ ಸರ್ವತ್ರ ಮೈತ್ರಾಶ್ಚ ಸರ್ವಭೂತಹಿತೇ ರತಾಃ ॥೧೪॥

ಆ ಪರಮಪದದಲ್ಲಿ ಮನುಷ್ಯರು ಶೀತೋಷ್ಣ, ಸುಖ-ದುಃಖಾದಿ ದ್ವಂದ್ವಗಳಿಂದ ಪೀಡಿತರಾಗುವುದಿಲ್ಲ. ಸಂಕಲ್ಪದಿಂದ ಸಂಭವಿಸುವ ಬಾಧೆಗಳೂ ಅವರಿಗಿರುವುದಿಲ್ಲ. ಸರ್ವಪ್ರಾಣಿಗಳ ಹಿತದಲ್ಲಿಯೇ ನಿರತರಾಗಿರುತ್ತಾ ಎಲ್ಲ ಪ್ರಾಣಿಗಳಲ್ಲಿಯೂ ಮೈತ್ರೀಭಾವನೆಯನ್ನಿಟ್ಟುಕೊಂಡು ಸರ್ವ ಸಮಭಾವದಿಂದಿರುತ್ತಾರೆ.

ವಿದ್ಯಾಮಯೋಽನ್ಯಃಪುರುಷಸ್ತಾತ ಕರ್ಮಮಯೋಽಪರಃ ।
ವಿದ್ಧಿ ಚನ್ದ್ರಮಸಂ ದರ್ಶೇ ಸೂಕ್ಷ್ಮಯಾ ಕಲಯಾ ಸ್ಥಿತಮ್ ॥೧೫॥

ಮಗು! ಒಬ್ಬನು ಜ್ಞಾನೀ. ಮತ್ತೊಬ್ಬನು ಕರ್ಮಠ. ಈ ಇಬ್ಬರಲ್ಲಿ ಅಂತರವು ಹೀಗಿದೆ.: ಯಾವ ರೀತಿಯಲ್ಲಿ ಚಂದ್ರನು ಕೃಷ್ಣಪಕ್ಷದಲ್ಲಿ ಒಂದೊಂದೇ ಕಲೆಯನ್ನು ಕಳೆದುಕೊಳ್ಳುತ್ತಾ ಅಮಾವಾಸ್ಯೆಯಲ್ಲಿ ಸೂಕ್ಷ್ಮ ಕಲಾಯುಕ್ತನಾಗಿ ಪುನಃ ಶುಕ್ಲಪಕ್ಷದಲ್ಲಿ ಒಂದೊಂದೇ ಕಲೆಯನ್ನು ಅನುದಿನವೂ ಸಂಗ್ರಹಿಸಿಕೊಂಡು ಪೂರ್ಣಿಮೆಯಲ್ಲಿ ಪೂರ್ಣರೂಪದಿಂದ ಬೆಳಗುವನೋ–ಹಾಗೆಯೇ ಕರ್ಮಠನನ್ನು ತಿಳಿ. ಕರ್ಮಠನು ಯಾವಾಗಲೂ ಚಂದ್ರನಂತೆ ವೃದ್ಧಿ-ಕ್ಷಯಗಳ ಸುಳಿಯಲ್ಲಿ ಸಿಲುಕಿರುವವನಾಗಿರುತ್ತಾನೆ.

ತದೇತದೃಷಿಣಾ ಪ್ರೋಕ್ತಂ ವಿಸ್ತರೇಣಾನುಮೀಯತೇ ।
ನವಜಂ ಶಶಿನಂ ದೃಷ್ಟ್ವಾ ವಕ್ರತನ್ತುಮಿವಾಮ್ಬರೇ ॥೧೬॥

ಈ ವಿಷಯವನ್ನೇ ಮಹರ್ಷಿಗಳೊಬ್ಬರು ವಿಸ್ತರಿಸಿ ಹೇಳಿದ್ದಾರೆ. ಅಮಾವಾಸ್ಯೆಯನಂತರ ಪ್ರತಿಪತ್ತಿನ ರಾತ್ರಿಯಲ್ಲಿ ವಕ್ರವಾದ ದಾರದಂತೆಯೇ ಕಾಣುವ, ಆಗತಾನೇ ಹುಟ್ಟಿದ ಚಂದ್ರನನ್ನು ನೋಡಿ ಹೀಗೆ ಅನುಮಾನಿಸುತ್ತಾರೆ.

ಏಕಾದಶವಿಕಾರಾತ್ಮಾ ಕಲಾಸಮ್ಭಾರಸಮ್ಭೃತಃ ।
ಮೂರ್ತಿಮಾನಿತಿ ತಂ ವಿದ್ಧಿ ತಾತ ಕರ್ಮಗುಣಾತ್ಮಕಮ್ ॥೧೭॥

ಹದಿನಾರು ಕಲೆಗಳ ಭಾರವನ್ನು ಹೊತ್ತುಕೊಂಡ ಕರ್ಮಾಸಕ್ತನಾದ ಮನುಷ್ಯನು ಹನ್ನೊಂದು ವಿಕಾರಗಳಿಂದ (ದಶೇಂದ್ರಿಯ ಮತ್ತು ಮನಸ್ಸುಗಳಿಂದ) ಯುಕ್ತನಾಗಿ ಪಾಡ್ಯದ ಚಂದ್ರನ ರೂಪದಲ್ಲಿ ಜನ್ಮವನ್ನು ತಾಳಿರುವನೆಂದೇ ಭಾವಿಸು. ಅವನು ಕರ್ಮಫಲದಿಂದ ಹುಟ್ಟಿದ ತ್ರಿಗುಣಾತ್ಮಕವಾದ ಶರೀರವನ್ನು ಹೊಂದಿದ್ದಾನೆ. ಚಂದ್ರನಿಗೆ ಯಾವ ರೀತಿಯಲ್ಲಿ ವೃದ್ಧಿ-ಕ್ಷಯಗಳು ನಿರಂತರವಾಗಿರುವುವೋ–ಹಾಗೆಯೇ ಕರ್ಮಠನಾದ ಮನುಷ್ಯನಿಗೂ ವೃದ್ಧಿ-ಕ್ಷಯಗಳು ನಿರಂತರವಾಗಿರುತ್ತವೆ.

ದೇವೋ ಯಃ ಸಂಶ್ರಿತಸ್ತಸ್ಮಿನ್ನಬ್ಬಿನ್ದುರಿವ ಪುಷ್ಕರೇ ।
ಕ್ಷೇತ್ರಜ್ಞಂ ತಂ ವಿಜಾನೀಯಾನ್ನಿತ್ಯಂ ಯೋಗಜಿತಾತ್ಮಕಮ್ ॥೧೮॥

ಸರೋವರದಲ್ಲಿ ಕಮಲದೆಲೆಯ ಮೇಲಿನ ಜಲಬಿಂದುವಿನಂತೆ–ಅಂಟಿಯೂ ಅಂಟದಂತೆ ದೇವನೊಬ್ಬನು ಮನುಷ್ಯರ ಅಂತಃಕರಣವನ್ನು ಆಶ್ರಯಿಸಿರುತ್ತಾನೆ. ನಿತ್ಯನಾದ, ಯೋಗಾಭ್ಯಾಸದ ಮೂಲಕವಾಗಿ ಚಿತ್ತಕ್ಕೆ ವಶನಾಗುವ ಆ ದೇವನನ್ನು ಕ್ಷೇತ್ರಜ್ಞನೆಂದು ತಿಳಿಯಬೇಕು.

ತಮೋ ರಜಶ್ಚ ಸತ್ತ್ವಂ ಚ ವಿದ್ಧಿ ಜೀವಗುಣಾತ್ಮಕಮ್ ।
ಜೀವಮಾತ್ಮಗುಣಂ ವಿದ್ಯಾದಾತ್ಮಾನಂ ಪರಮಾತ್ಮನಃ ॥೧೯॥

ತಮೋಗುಣ-ರಜೋಗುಣ-ಸತ್ತ್ವಗುಣಗಳನ್ನು ಜೀವನ ಗುಣಗಳೆಂದು

ತಿಳಿಯಬೇಕು. ಜೀವವು ಆತ್ಮದ ಗುಣವೇ ಆಗಿದೆ. ಆ ಆತ್ಮನನ್ನು ಪರಮಾತ್ಮನ ಗುಣವೆಂದೇ ತಿಳಿಯಬೇಕು.

ಸಚೇತನಂ ಜೀವಗುಣಂ ವದನ್ತಿ
ಸ ಚೇಷ್ಟತೇ ಜೀವಯತೇ ಚ ಸರ್ವಮ್ ।
ತತಃ ಪರಂ ಕ್ಷೇತ್ರವಿದೋ ವದನ್ತಿ
ಪ್ರಾಕಲ್ಪಯದ್ಯೋ ಭುವನಾನಿ ಸಪ್ತ ॥೨೦॥

ಚೈತನ್ಯಯುಕ್ತನಾದ ಆತ್ಮನನ್ನು 'ಜೀವನನ್ನು ಗುಣವಾಗಿ ಉಳ್ಳವನು'– ಎಂದು ಹೇಳುತ್ತಾರೆ. ಆ ಆತ್ಮನೇ ಶರೀರದ ಮೂಲಕವಾಗಿ ಕೆಲಸ ಮಾಡುತ್ತದೆ. ಸಮಸ್ತಪ್ರಾಣಿಗಳಿಗೂ ಜೀವನಪ್ರದಾನಮಾಡುತ್ತದೆ. ಯಾರು ಈ ಸಪ್ತಲೋಕಗಳನ್ನೂ ಸೃಷ್ಟಿಸಿರುವನೋ–ಆ ಪರಮಾತ್ಮನನ್ನು ಈ ಜೀವಾತ್ಮನಿಗಿಂತಲೂ ಶ್ರೇಷ್ಠನೆಂದು ಕ್ಷೇತ್ರವನ್ನು ತಿಳಿದವರು ಹೇಳುತ್ತಾರೆ."

ಎ೪೧ನೆಯ ಅಧ್ಯಾಯವು ಮುಗಿಯಿತು.

೨೪೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಆಶ್ರಮಧರ್ಮಗಳ ಪ್ರಸಂಗದಲ್ಲಿ ಬ್ರಹ್ಮಚರ್ಯಾಶ್ರಮದ ವರ್ಣನೆ

ಧರ್ಮಜ! ಶುಕನು ಪ್ರಶ್ನಿಸುತ್ತಾನೆ :

ಕ್ಷರಾತ್ಪ್ರಭೃತಿ ಯಃ ಸರ್ಗಃ ಸಗುಣಾನೀನ್ದ್ರಿಯಾಣಿ ಚ ।
ಬುದ್ಧ್ಯೈಶ್ವರ್ಯಾತಿಸರ್ಗೋಽಯಂ ಪ್ರಧಾನಶ್ಚಾತ್ಮನಃ ಶ್ರುತಮ್ ॥೧॥

"ಭಗವನ್! ಕ್ಷರ (ಪ್ರಧಾನ) ಮೊದಲುಗೊಂಡು ಯಾವ ಸೃಷ್ಟಿ ಯುಂಟಾಗುತ್ತದೆಯೋ, ಬುದ್ಧಿಯ ಐಶ್ವರ್ಯವಾಗಿ ಗುಣಸಹಿತವಾದ ಇಂದ್ರಿಯಗಳೆಂಬ ಯಾವ ಅದ್ಭುತವಾದ ಸೃಷ್ಟಿಯುಂಟಾಗುತ್ತದೆಯೋ ಮತ್ತು ಯಾವ ಪ್ರಧಾನ (ಪ್ರಕೃತಿ) ವುಂಟೋ–ಅವೆಲ್ಲವೂ ಆತ್ಮನದೇ ಎಂದು ಕೇಳಿದ್ದೇನೆ.

(ಕ್ಷರ ಮೊದಲುಗೊಂಡು ಇಪ್ಪತ್ತನಾಲ್ಕು ತತ್ತ್ವಾತ್ಮಕವಾದ ಸೃಷ್ಟಿಯು ಪರಮಾತ್ಮನಿಂದ ಉಂಟಾಗುತ್ತದೆ. ಗುಣಸಹಿತವಾದ ಇಂದ್ರಿಯಗಳು ಬುದ್ಧಿಯ ಐಶ್ವರ್ಯವಾದ ಅದ್ಭುತಸೃಷ್ಟಿ. ಇವೆರಡೂ ಮತ್ತು ಪ್ರಧಾನವೂ (ಪ್ರಕೃತಿಯೂ) ಅಕ್ಷರನಾದ ಪರಮಾತ್ಮನಿಂದಲೇ ವಿಕಾಸಗೊಳ್ಳುತ್ತದೆ. ಬ್ರಹ್ಮವೇ ಎಲ್ಲಕ್ಕೂ ಮೂಲ.)

ಭೂಯ ಏವ ತು ಲೋಕೇಽಸ್ಮಿನ್ಸದ್ವೃತ್ತಿಂ ಕಾಲಹೈತುಕೀಮ್ ।
ಯಯಾ ಸನ್ತಃ ಪ್ರವರ್ತನ್ತೇ ತದಿಚ್ಛಾಮ್ಯನುವರ್ತಿತುಮ್ ॥೨॥

ಈ ಲೋಕದಲ್ಲಿ ಯುಗಾನುಗುಣವಾಗಿ ಸತ್ಪುರುಷರ ವೃತ್ತಿಯು ಹೇಗಿರುವುದೆಂಬುದನ್ನೂ ಮತ್ತು ಯಾವ ಸದ್ವೃತ್ತಿಯಿಂದ ಸತ್ಪುರುಷರು ವ್ಯವಹರಿಸುವರೆಂಬುದನ್ನೂ ತಿಳಿದು ಅಂತಹ ಸತ್ಪುರುಷರ ಮಾರ್ಗವನ್ನೇ ಅನುಸರಿಸಲು ನಾನೂ ಇಚ್ಛಿಸಿದ್ದೇನೆ.

ವೇದೇ ವಚನಮುಕ್ತಂ ತು ಕುರು ಕರ್ಮ ತ್ಯಜೇತಿ ಚ ।
ಕಥಮೇತದ್ವಿಜಾನೀಯಾಂ ತಚ್ಚ ವ್ಯಾಖ್ಯಾತುಮರ್ಹಸಿ ॥೩॥

'ಕರ್ಮವನ್ನು ಮಾಡು', 'ಕರ್ಮವನ್ನು ತ್ಯಜಿಸು'–ಈ ಎರಡು ವಾಕ್ಯಗಳೂ ವೇದದಲ್ಲಿ ಹೇಳಲ್ಪಟ್ಟಿವೆ. ಯಾವ ಕರ್ಮವನ್ನು ಮಾಡಬೇಕು? ಯಾವ ಕರ್ಮವನ್ನು ಬಿಡಬೇಕು?–ಎಂಬುದನ್ನು ನಾನು ಹೇಗೆ ತಿಳಿದುಕೊಳ್ಳಲಿ? ನೀವು ಈ ವಿಷಯದಲ್ಲಿ ವಿವರಣೆಯನ್ನು ನೀಡಿರಿ.

ಲೋಕವೃತ್ತಾನ್ತತತ್ತ್ವಜ್ಞಃ ಪೂತೋಽಹಂ ಗುರುಶಾಸನಾತ್ ।
ಕೃತ್ವಾ ಬುದ್ಧಿಂ ವಿಮುಕ್ತಾತ್ಮಾ ದ್ರಕ್ಷ್ಯಾಮ್ಯಾತ್ಮಾನಮವ್ಯಯಮ್ ॥೪॥

ತಂದೆಯೇ! ತಮ್ಮಂತಹ ಗುರುಗಳ ಉಪದೇಶದಿಂದಾಗಿ ನಾನು ಪವಿತ್ರನಾಗಿದ್ದೇನೆ. ಲೋಕವೃತ್ತಾಂತದ ತತ್ತ್ವವನ್ನೂ (ಲೌಕಿಕ ರೀತಿ-ನೀತಿಗಳನ್ನೂ) ತಿಳಿದವನಾಗಿದ್ದೇನೆ. ಧರ್ಮಾಚರಣೆಯಿಂದ ಬುದ್ಧಿಯನ್ನು ಸಂಸ್ಕಾರಗೊಳಿಸಿ ದೇಹಾಭಿಮಾನವನ್ನು ತೊರೆದು ಅವಿನಾಶಿಯಾದ ಪರಮಾತ್ಮನನ್ನು ನೋಡುತ್ತೇನೆ."

ವ್ಯಾಸರು ಹೇಳುತ್ತಾರೆ :

ಯಥಾ ವೈ ವಿಹಿತಾ ವೃತ್ತಿಃ ಪುರಸ್ತಾದ್ಬ್ರಹ್ಮಣಾ ಸ್ವಯಮ್ ।
ಏಷಾ ಪೂರ್ವತರೈಃ ಸದ್ಭಿರಾಚೀರ್ಣಾ ಪರಮರ್ಷಿಭಿಃ ॥೫॥

"ಶುಕದೇವ! ಹಿಂದೆ ಸ್ವತಃ ಬ್ರಹ್ಮನೇ ಆಚಾರ-ವ್ಯವಹಾರಗಳನ್ನು ಯಾವ ರೀತಿಯಲ್ಲಿ ವಿಧಾಯಕಮಾಡಿರುವನೋ–ಅವನ್ನೇ ಹಿಂದಿನ ಸತ್ಪುರುಷರೂ ಮತ್ತು ಶ್ರೇಷ್ಠರಾದ ಋಷಿಗಳೂ ಆಚರಿಸುತ್ತಿದ್ದರು.

ಬ್ರಹ್ಮಚರ್ಯೇಣ ವೈ ಲೋಕಾಞ್ಜಯನ್ತಿ ಪರಮರ್ಷಯಃ ।

ಮಹರ್ಷಿಗಳು ಬ್ರಹ್ಮಚರ್ಯವ್ರತದಿಂದಲೇ ಲೋಕಗಳನ್ನು ಜಯಿಸುತ್ತಾರೆ.

ಆತ್ಮನಶ್ಚ ತತಃ ಶ್ರೇಯಾಂಸ್ಯನ್ವಿಚ್ಛನ್ಮನಸಾತ್ಮನಿ ॥೬॥

ವನೇ ಮೂಲಫಲಾಶೀ ಚ ತಪ್ಯನ್ಸುವಿಪುಲಂ ತಪಃ ।
ಪುಣ್ಯಾಯತನಚಾರೀ ಚ ಭೂತಾನಾಮವಿಹಿಂಸಕಃ ॥೭॥

ಸಾಧಕನು ಮನಸ್ಸಿನಲ್ಲಿಯೇ ತನಗೆ ಶ್ರೇಯಸ್ಸಾಗಲೆಂಬ ಆಶಯವನ್ನು ಹೊಂದಿ ಅರಣ್ಯದಲ್ಲಿ ಫಲ-ಮೂಲಾದಿಗಳನ್ನು ಭಕ್ಷಿಸುತ್ತಾ, ಅನವರತವಾಗಿ ತಪಸ್ಸನ್ನು ಮಾಡುತ್ತಾ, ಪುಣ್ಯಕ್ಷೇತ್ರಗಳನ್ನೂ ತೀರ್ಥಗಳನ್ನೂ ಸಂದರ್ಶಿಸುತ್ತಾ ಯಾವ ಪ್ರಾಣಿಗೂ ಹಿಂಸೆಯನ್ನು ಮಾಡದೇ ಇರಬೇಕು.

ವಿಧೂಮೇ ಸನ್ನಮುಸಲೇ ವಾನಪ್ರಸ್ಥಪ್ರತಿಶ್ರಯೇ ।
ಕಾಲೇ ಪ್ರಾಪ್ತೇ ಚರನ್ಭೈಕ್ಷ್ಯಂ ಕಲ್ಪತೇ ಬ್ರಹ್ಮಭೂಯಸೇ ॥೮॥

ವಾನಪ್ರಸ್ಥಾಶ್ರಮಿಯ ಮನೆಯಲ್ಲಿ ಹೊಗೆಯು ಕಾಣದೇ ಇರುವ ಮತ್ತು ಒನಕೆಯ ಶಬ್ದವು ಕೇಳದೇ ಇರುವ ಸಮಯದಲ್ಲಿ ಭಿಕ್ಷೆಬೇಡುತ್ತಾ ಜೀವಿಸುವ ಸಾಧಕನು ಕಾಲವು ಪ್ರಾಪ್ತವಾದೊಡನೆಯೇ ಬ್ರಹ್ಮಭಾವವನ್ನು ಹೊಂದಲು ಸಮರ್ಥನಾಗುತ್ತಾನೆ.

ನಿಃಸ್ತುತಿರ್ನಿರ್ನಮಸ್ಕಾರಃ ಪರಿತ್ಯಜ್ಯ ಶುಭಾಶುಭೇ ।
ಅರಣ್ಯೇ ವಿಚರೈಕಾಕೀ ಯೇನ ಕೇನಚಿದಾಶಿತಃ ॥೯॥

ಶುಕದೇವ! ನೀನೂ ಕೂಡ ಇತರರು ಮಾಡುವ ಸ್ತೋತ್ರಗಳಿಂದಲೂ ನಮಸ್ಕಾರಗಳಿಂದಲೂ ದೂರವಿರುತ್ತಾ, ಶುಭಾಶುಭಗಳೆರಡನ್ನೂ ಪರಿ

ತ್ಯಜಿಸಿ ಏನು ಸಿಕ್ಕಿದರೆ ಅದನ್ನೇ ತಿನ್ನುತ್ತಾ ಏಕಾಕಿಯಾಗಿ ಅರಣ್ಯದಲ್ಲಿ ಸಂಚರಿಸುತ್ತಿರು."

ಶುಕನು ಪ್ರಶ್ನಿಸುತ್ತಾನೆ :

ಯದಿದಂ ವೇದವಚನಂ ಲೋಕವಾದೇ ವಿರುಧ್ಯತೇ ।
ಪ್ರಮಾಣೇ ವಾಪ್ರಮಾಣೇ ಚ ವಿರುದ್ಧೇ ಶಾಸ್ತ್ರತಾ ಕುತಃ ॥೧೦॥

ಇತ್ಯೇತಚ್ಛ್ರೋತುಮಿಚ್ಛಾಮಿ ಪ್ರಮಾಣಂ ತೂಭಯಂ ಕಥಮ್ ।
ಕರ್ಮಣಾಮವಿರೋಧೇನ ಕಥಂ ಮೋಕ್ಷಃ ಪ್ರವರ್ತತೇ ॥೧೧॥

"ತಂದೆಯೇ! 'ಕರ್ಮವನ್ನು ಮಾಡು', 'ಕರ್ಮವನ್ನು ಬಿಡು'–ಎಂಬ ಎರಡು ಪ್ರಕಾರವಾದ ಯಾವ ವೇದವಾಕ್ಯಗಳಿವೆಯೋ ಅವುಗಳು ಲೋಕ ದೃಷ್ಟಿಯಿಂದ ವಿಚಾರಮಾಡಿದರೆ ಒಂದಕ್ಕೊಂದಕ್ಕೆ ವಿರುದ್ಧವಾಗಿರುವಂತೆ ಕಾಣುತ್ತವೆ. ಈ ವಾಕ್ಯಗಳು ಪ್ರಮಾಣವೇ ಅಥವಾ ಅಪ್ರಮಾಣವೇ? ಪ್ರಮಾಣವೆನ್ನುವುದಾದರೆ : ಪರಸ್ಪರವಿರುದ್ಧವಾದ ವಾಕ್ಯಗಳನ್ನು ಹೊಂದಿರುವುದರಿಂದ ಶಾಸ್ತ್ರತ್ವವು ಹೇಗೆ ಸಿದ್ಧವಾಗುತ್ತದೆ? ಎರಡೂ ಪ್ರಮಾಣವಾಕ್ಯಗಳು ಹೇಗಾಗುತ್ತವೆ? ಕರ್ಮಗಳಿಗೆ ವಿರೋಧವಿಲ್ಲದಂತೆ ಶಾಸ್ತ್ರದ ಪ್ರಕಾರ ಕರ್ಮಗಳನ್ನು ಮಾಡಿದರೆ ಮೋಕ್ಷಪ್ರಾಪ್ತಿಯು ಹೇಗಾಗುತ್ತದೆ?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಶುಕನಿಂದ ಹೀಗೆ ಪ್ರಶ್ನಿಸಲ್ಪಟ್ಟ, ಯೋಜನಗಂಧಿಯ ಪುತ್ರರಾದ ವ್ಯಾಸಮಹರ್ಷಿಗಳು ಮಹಾತೇಜಸ್ವಿಯಾದ ಮಗನ ಪ್ರಶ್ನೆಯನ್ನು ಪ್ರಶಂಸಿಸುತ್ತಾ ಹೀಗೆ ಪ್ರತ್ಯುತ್ತರಿಸಿದರು :

ಬ್ರಹ್ಮಚಾರೀ ಗೃಹಸ್ಥಶ್ಚ ವಾನಪ್ರಸ್ಥೋಽಥ ಭಿಕ್ಷುಕಃ ।
ಯಥೋಕ್ತಚಾರಿಣಃ ಸರ್ವೇ ಗಚ್ಛನ್ತಿ ಪರಮಾಂ ಗತಿಮ್ ॥೧೩॥

"ಶುಕ! ಬ್ರಹ್ಮಚಾರೀ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸಿ–ಇವರೆಲ್ಲರೂ ತಮ್ಮ ತಮ್ಮ ಆಶ್ರಮಗಳಿಗೆ ವಿಹಿತವಾದ ಶಾಸ್ತ್ರೋಕ್ತವಾದ ಕರ್ಮಗಳನ್ನೇ ಮಾಡುತ್ತಾ ಪರಮಗತಿಯನ್ನು ಹೊಂದುತ್ತಾರೆ.

ಏಕೋ ವಾಪ್ಯಾಶ್ರಮಾನೇತಾನ್ಯೋಽನುತಿಷ್ಠೇದ್ಯಥಾವಿಧಿ ।
ಅಕಾಮದ್ವೇಷಸಂಯುಕ್ತಃ ಸ ಪರತ್ರ ವಿಧೀಯತೇ ॥೧೪॥

ಒಬ್ಬ ಪುರುಷನೇ ರಾಗ-ದ್ವೇಷಗಳಿಂದ ರಹಿತನಾಗಿ, ಶಾಸ್ತ್ರವಿಧಿಗೆ ಅನುಸಾರವಾಗಿ ಈ ಆಶ್ರಮಧರ್ಮಗಳನ್ನು ಅನುಷ್ಠಾನಮಾಡುತ್ತಾ ಪರಮ ಗತಿಯನ್ನು ಹೊಂದಬಹುದು.

ಚತುಷ್ಪದೀ ಹಿ ನಿಃಶ್ರೇಣೀ ಬ್ರಹ್ಮಣ್ಯೇಷಾ ಪ್ರತಿಷ್ಠಿತಾ ।
ಏತಾಮಾರುಹ್ಯ ನಿಃಶ್ರೇಣೀಂ ಬ್ರಹ್ಮಲೋಕೇ ಮಹೀಯತೇ ॥೧೫॥

ಈ ನಾಲ್ಕು ಆಶ್ರಮಗಳೂ ಬ್ರಹ್ಮನಲ್ಲಿಯೇ ಪ್ರತಿಷ್ಠಿತವಾಗಿವೆ. ಈ ನಾಲ್ಕು ಆಶ್ರಮಗಳೂ ಬ್ರಹ್ಮನ ಬಳಿಗೆ ಹೋಗಲು ನಾಲ್ಕು ಪಾದಗಳಿಂದ ಕೂಡಿರುವ ಏಣಿಯಂತೆಯೇ ಇವೆ. ಈ ಏಣಿಯನ್ನು ಹತ್ತಿಹೋದವನು ಬ್ರಹ್ಮಲೋಕದಲ್ಲಿ ಅಗ್ಗಳಿಕೆಯನ್ನು ಹೊಂದುತ್ತಾನೆ.

ಆಯುಷಸ್ತು ಚತುರ್ಭಾಗಂ ಬ್ರಹ್ಮಚಾರ್ಯನಸೂಯಕಃ ।
ಗುರೌ ವಾ ಗುರುಪುತ್ರೇ ವಾ ವಸೇದ್ಧರ್ಮಾರ್ಥಕೋವಿದಃ ॥೧೬॥

ಬ್ರಾಹ್ಮಣಬಾಲಕನು ಬ್ರಹ್ಮಚರ್ಯವ್ರತವನ್ನು ಪರಿಪಾಲಿಸುತ್ತಾ ಗುರುವಿನ ಬಳಿಯಲ್ಲಾಗಲೀ–ಗುರುಪುತ್ರನ ಬಳಿಯಲ್ಲಾಗಲೀ ಇದ್ದು, ಅವರ ಸೇವೆಯನ್ನು ಮಾಡುತ್ತಾ ತನ್ನ ಆಯುಷ್ಯದ ಕಾಲುಭಾಗವನ್ನು (ಇಪ್ಪತ್ತೈದು ವರ್ಷಗಳನ್ನು) ಅಲ್ಲಿಯೇ ಕಳೆಯಬೇಕು. ಆ ಸಮಯದಲ್ಲವನು ಯಾರಲ್ಲಿಯೂ ದೋಷವನ್ನೆಣಿಸಬಾರದು (ಅಸೂಯೆಪಡಬಾರದು). ಧರ್ಮ ಮತ್ತು ಅರ್ಥಗಳಲ್ಲಿಯೂ ಪಂಡಿತನಾಗಿ ಗುರುಶುಶ್ರೂಷೆಯಲ್ಲಿ ನಿರತನಾಗಿರಬೇಕು.

ಜಘನ್ಯಶಾಯೀ ಪೂರ್ವಂ ಸ್ಯಾದುತ್ಥಾಯ ಗುರುವೇಶ್ಮನಿ ।
ಯಚ್ಚ ಶಿಷ್ಯೇಣ ಕರ್ತವ್ಯಂ ಕಾರ್ಯಂ ದಾಸೇನ ವಾ ಪುನಃ ॥೧೭॥

ಗುರುಗಳು ಮಲಗಿದನಂತರ ಅವರು ಮಲಗಿರುವುದಕ್ಕಿಂತಲೂ ತಗ್ಗಾದ ಸ್ಥಳದಲ್ಲಿ ಮಲಗಬೇಕು. ಗುರುಗಳು ಏಳುವುದಕ್ಕಿಂತಲೂ ಮುಂಚಿತ

ವಾಗಿಯೇ ಎದ್ದು ಗುರುಗಳ ಮನೆಯಲ್ಲಿ ಶಿಷ್ಯನು ಮಾಡಬೇಕಾದ ಅಥವಾ ಸೇವಕನು ಮಾಡಬೇಕಾದ ಸಮಸ್ತಕಾರ್ಯಗಳನ್ನೂ ಮಾಡಬೇಕು.

ಕೃತಮಿತ್ಯೇವ ತತ್ಸರ್ವಂ ಕೃತ್ವಾ ತಿಷ್ಠೇತ ಪಾರ್ಶ್ವತಃ ।
ಕಿಂಕರಃ ಸರ್ವಕಾರೀ ಸ್ಯಾತ್ಸರ್ವಕರ್ಮಸು ಕೋವಿದಃ ॥೧೮॥

ಗುರುಗಳು ಯಾವುದನ್ನೇ ಆಜ್ಞೆಮಾಡಲಿ ಆ ಎಲ್ಲ ಕಾರ್ಯಗಳನ್ನೂ ಶೀಘ್ರವಾಗಿ ಮಾಡಿಮುಗಿಸಿ–'ಗುರುಗಳೇ! ಈ ಕಾರ್ಯವನ್ನು ಈಗ ತಾನೇ ಮಾಡಿ ಮುಗಿಸಿದ್ದೇನೆ'–ಎಂದು ಹೇಳಿ ಅವರ ಪಕ್ಕದಲ್ಲಿ ಅವರ ಮುಂದಿನ ಆಜ್ಞೆಯನ್ನು ನಿರೀಕ್ಷಿಸುತ್ತಾ ನಿಲ್ಲಬೇಕು. ಎಲ್ಲ ಕಾರ್ಯಗಳಲ್ಲಿಯೂ ಕುಶಲನಾಗಿ ಗುರುಗಳು ಹೇಳಿದ ಎಲ್ಲ ಕಾರ್ಯಗಳನ್ನೂ ಸೇವಕನಂತೆಯೇ ಮಾಡಿ ಮುಗಿಸಬೇಕು.

ಕರ್ಮಾತಿಶೇಷೇಣ ಗುರಾವಧ್ಯೇತವ್ಯಂ ಬುಭೂಷತಾ ।
ದಕ್ಷಿಣೋಽನಪವಾದೀ ಸ್ಯಾದಾಹೂತೋ ಗುರುಮಾಶ್ರಯೇತ್ ॥೧೯॥

ವಿದ್ಯಾಭಿಲಾಷಿಯಾದ ಬ್ರಹ್ಮಚಾರಿಯು ಗುರುಗಳ ಸೇವಾಕಾರ್ಯವು ಸಂಪೂರ್ಣವಾಗಿ ಮುಗಿದ ನಂತರ ಅವರ ಬಳಿ ಕುಳಿತು ಅಧ್ಯಯನವನ್ನು ಮಾಡಬೇಕು. ಅವನು ಯಾವಾಗಲೂ ಎಲ್ಲರ ವಿಷಯದಲ್ಲಿಯೂ ಉದಾರಿಯಾಗಿ ವರ್ತಿಸಬೇಕು. ಯಾರ ಮೇಲೂ ಕಳಂಕವನ್ನು ಹೊರೆಸಬಾರದು. ಗುರುಗಳು ಕರೆದೊಡನೆಯೇ ಅವರ ಸೇವೆಮಾಡಲು ಸಿದ್ಧನಾಗಿರಬೇಕು. ಗುರುಗಳು ಕರೆದಾಗ ಅಧ್ಯಯನಮಾಡಲು ಹೋಗಬೇಕು.

ಶುಚಿರ್ದಕ್ಷೋ ಗುಣೋಪೇತೋ ಬ್ರೂಯಾದಿಷ್ಟಮಿವಾನ್ತರಾ ।
ಚಕ್ಷುಷಾ ಗುರುಮವ್ಯಗ್ರೋ ನಿರೀಕ್ಷೇತ ಜಿತೇನ್ದ್ರಿಯಃ ॥೨೦॥

ಬ್ರಹ್ಮಚಾರಿಯು ಅಂತಃಶುದ್ಧಿ-ಬಹಿಃಶುದ್ಧಿಯುಳ್ಳವನಾಗಿರಬೇಕು. ಕಾರ್ಯಕುಶಲನಾಗಿರಬೇಕು. ಗುಣವಂತನಾಗಿರಬೇಕು. ಮನಸ್ಸಿನಲ್ಲಿ ಸದ್ಭಾವನೆಯನ್ನಿಟ್ಟುಕೊಂಡು ಬೇರೆಯವರೊಡನೆ ಪ್ರಿಯವಾದ ಮಾತುಗಳನ್ನೇ ಆಡಬೇಕು. ಜಿತೇಂದ್ರಿಯನಾಗಿ, ಏಕಾಗ್ರಚಿತ್ತನಾಗಿ ಭಕ್ತಿಪೂರ್ಣವಾದ ದೃಷ್ಟಿಯಿಂದ ಗುರುಗಳನ್ನು ನೋಡಬೇಕು.

ನಾಭುಕ್ತವತಿ ಚಾಶ್ನೀಯಾದಪೀತವತಿ ನೋ ಪಿಬೇತ್ ।
ನಾತಿಷ್ಠತಿ ತಥಾಸೀತ ನಾಸುಪ್ತೇ ಪ್ರಸ್ವಪೇತ ಚ ॥೨೧॥

ಗುರುಗಳು ಭೋಜನಮಾಡದಿರುವಾಗ ತಾನೂ ಭೋಜನಮಾಡಬಾರದು. ಅವರು ನೀರು ಕುಡಿಯದಿದ್ದರೆ ತಾನೂ ನೀರು ಕುಡಿಯಬಾರದು. ಅವರು ಕುಳಿತುಕೊಳ್ಳದಿದ್ದರೆ ತಾನೂ ಕುಳಿತುಕೊಳ್ಳಬಾರದು. ಅವರು ಮಲಗದಿದ್ದರೆ ತಾನೂ ಮಲಗಬಾರದು.

ಉತ್ತಾನಾಭ್ಯಾಂ ಚ ಪಾಣಿಭ್ಯಾಂ ಪಾದಾವಸ್ಯ ಮೃದು ಸ್ಪೃಶೇತ್ ।
ದಕ್ಷಿಣಂ ದಕ್ಷಿಣೇನೈವ ಸವ್ಯಂ ಸವ್ಯೇನ ಪೀಡಯೇತ್ ॥೨೨॥

ಎರಡು ಕೈಗಳನ್ನು ಮೇಲೆತ್ತಿ ಗುರುಗಳ ಎರಡು ಪಾದಗಳನ್ನು ಮೃದುವಾಗಿ ಮುಟ್ಟಬೇಕು. ಹಾಗೆ ಮುಟ್ಟುವಾಗ ಬಲಗೈಯಿಂದ ಗುರುಗಳ ಬಲಗಾಲನ್ನೂ ಎಡಗೈಯಿಂದ ಅವರ ಎಡಗಾಲನ್ನೂ ಒತ್ತಬೇಕು.

ಅಭಿವಾದ್ಯ ಗುರುಂ ಬ್ರೂಯಾದಧೀಷ್ವ ಭಗವನ್ನಿತಿ ।
ಇದಂ ಕರಿಷ್ಯೇ ಭಗವನ್ನಿದಂ ಚಾಪಿ ಕೃತಂ ಮಯಾ ।
ಬ್ರಹ್ಮಂಸ್ತದಪಿ ಕರ್ತಾಸ್ಮಿ ಯದ್ಭವಾನ್ವಕ್ಷ್ಯತೇ ಪುನಃ ॥೨೩॥

ಹೀಗೆ ಗುರುಗಳಿಗೆ ಅಭಿವಾದನಮಾಡಿ ಕೈಜೋಡಿಸಿಕೊಂಡು "ಭಗವನ್! ನನಗೆ ವಿದ್ಯೆಯನ್ನು ಹೇಳಿಕೊಡಿರಿ. ತಮ್ಮ ಈ ಕೆಲಸವನ್ನು ಮಾಡಿ ಮುಗಿಸಿದ್ದೇನೆ. ತಾವು ಹೇಳಿದ ಆ ಕೆಲಸವನ್ನು ಇಷ್ಟರಲ್ಲಿಯೇ ಮಾಡುತ್ತೇನೆ. ನೀವು ಮುಂದೆ ಹೇಳಲಿರುವ ಕಾರ್ಯವನ್ನೂ ಮಾಡುತ್ತೇನೆ"–ಎಂಬುದಾಗಿ ಪ್ರಾರ್ಥಿಸಿಕೊಳ್ಳಬೇಕು.

ಇತಿ ಸರ್ವಮನುಜ್ಞಾಪ್ಯ ನಿವೇದ್ಯ ಚ ಯಥಾವಿಧಿ ।
ಕುರ್ಯಾತ್ಕೃತ್ವಾ ಚ ತತ್ಸರ್ವಮಾಖ್ಯೇಯಂ ಗುರವೇ ಪುನಃ ॥೨೪॥

ಹೀಗೆ ಎಲ್ಲ ವಿಷಯಗಳನ್ನೂ ಯಥಾವಿಧಿಯಾಗಿ ಗುರುಗಳಿಗೆ ನಿವೇದಿಸಿ ಅವರ ಅಪ್ಪಣೆಯನ್ನು ಪಡೆದು ಅವರು ಹೇಳಿದ ಇತರ ಕಾರ್ಯಗಳನ್ನೂ ಮಾಡಿ ಮುಗಿಸಿ ಪುನಃ ಗುರುಗಳ ಬಳಿಗೆ ಹೋಗಿ ಆ ಎಲ್ಲ ವಿಷಯಗಳನ್ನೂ ಹೇಳಬೇಕು.

ಯಾಂಸ್ತು ಗಂಧಾನ್ರಸಾನ್ವಾಪಿ ಬ್ರಹ್ಮಚಾರೀ ನ ಸೇವತೇ ।
ಸೇವೇತ ತಾನ್ಸಮಾವೃತ್ಯ ಇತಿ ಧರ್ಮೇಷು ನಿಶ್ಚಯಃ ॥೨೫॥

ವಿಧ-ವಿಧವಾದ ಗಂಧಗಳನ್ನಾಗಲೀ, ಷಡ್ರಸೋಪೇತವಾದ ಅನ್ನವನ್ನಾಗಲೀ ಬ್ರಹ್ಮಚಾರಿಯು ಸೇವಿಸಬಾರದು. ಸಮಾವರ್ತನವಾದನಂತರ ಇವುಗಳನ್ನು ಸೇವಿಸಬಹುದೆಂಬುದು ಧರ್ಮಶಾಸ್ತ್ರಗಳ ನಿಶ್ಚಯವಾಗಿದೆ.

ಯೇ ಕೇಚಿದ್ವಿಸ್ತರೇಣೋಕ್ತಾ ನಿಯಮಾ ಬ್ರಹ್ಮಚಾರಿಣಃ ।
ತಾನ್ಸರ್ವಾನಾಚರೇನ್ನಿತ್ಯಂ ಭವೇಚ್ಚಾನಪಗೋ ಗುರೋಃ ॥೨೬॥

ಬ್ರಹ್ಮಚಾರಿಯು ಅನುಸರಿಸಬೇಕಾದ ಯಾವ ನಿಯಮಗಳು ಶಾಸ್ತ್ರಗಳಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿವೆಯೋ–ಆ ಎಲ್ಲ ನಿಯಮಗಳನ್ನೂ ಬ್ರಹ್ಮಚಾರಿಯು ಪರಿಪಾಲಿಸಬೇಕು. ಯಾವಾಗಲೂ ಗುರುಗಳ ಸಮೀಪದಲ್ಲಿಯೇ ಇರಬೇಕು.

ಸ ಏವಂ ಗುರವೇ ಪ್ರೀತಮುಪಹೃತ್ಯ ಯಥಾಬಲಮ್ ।
ಆಶ್ರಮಾದಾಶ್ರಮೇಷ್ವೇವ ಶಿಷ್ಯೋ ವರ್ತೇತ ಕರ್ಮಣಾ ॥೨೭॥

ಹೀಗೆ ಬ್ರಹ್ಮಚಾರಿಯು ಗುರುಗಳಿಗೆ ಯಥಾಶಕ್ತಿ ಸೇವೆಮಾಡಿ ಅವರ ಪ್ರೀತಿಯನ್ನು ಗಳಿಸಬೇಕು. ಗುರುಶುಶ್ರೂಷೆಯ ಮೂಲಕವಾಗಿ ವಿದ್ಯೆಯನ್ನು ಕಲಿತನಂತರ ಯಥೋಚಿತವಾದ ಗುರುದಕ್ಷಿಣೆಯನ್ನು ಸಮರ್ಪಿಸಿ, ಗುರುಗಳ ಅನುಜ್ಞೆಯನ್ನು ಪಡೆದು ಬ್ರಹ್ಮಚರ್ಯಾಶ್ರಮದಿಂದ ಬೇರೆಯ ಆಶ್ರಮಕ್ಕೆ ಪದಾರ್ಪಣಮಾಡಬೇಕು. ಆ ಆಶ್ರಮದಲ್ಲಿಯೂ ಆ ಆಶ್ರಮ ಧರ್ಮಾನುಸಾರವಾಗಿ ಕರ್ತವ್ಯಪರಿಪಾಲನೆಯನ್ನು ಮಾಡಬೇಕು.

ವೇದವ್ರತೋಪವಾಸೇನ ಚತುರ್ಥೇ ಚಾಯುಷೋ ಗತೇ ।
ಗುರವೇ ದಕ್ಷಿಣಾಂ ದತ್ತ್ವಾ ಸಮಾವರ್ತೇದ್ಯಥಾವಿಧಿ ॥೨೮॥

ಹೀಗೆ ವೇದವ್ರತಗಳನ್ನು ಮಾಡುತ್ತಾ ಗುರುವಿನ ಬಳಿಯಲ್ಲಿ ಆಯುಷ್ಯದ ನಾಲ್ಕನೆಯ ಒಂದು ಭಾಗವು (೨೫ ವರ್ಷಗಳು) ಕಳೆದ ಬಳಿಕ ಗುರುಗಳಿಗೆ ಯಥಾಶಕ್ತಿ ಗುರುದಕ್ಷಿಣೆಯನ್ನು ಸಮರ್ಪಿಸಿ ಯಥಾವಿಧಿಯಾಗಿ ಸಮಾವರ್ತನ ಸಂಸ್ಕಾರವನ್ನು ಮಾಡಿಕೊಳ್ಳಬೇಕು.

ಧರ್ಮಲಬ್ಧೈರ್ಯುತೋ ದಾರೈರಗ್ನೀನುತ್ಪಾದ್ಯ ಯತ್ನತಃ ।
ದ್ವಿತೀಯಮಾಯುಷೋ ಭಾಗಂ ಗೃಹಮೇಧೀ ಭವೇದ್ವ್ರತೀ ॥೩೦॥

ಧರ್ಮಾನುಕೂಲವಾಗಿ ದೊರೆತ ಕನ್ಯೆಯನ್ನು ಪಾಣಿಗ್ರಹಣಮಾಡಿ ಕೊಂಡು ಆ ಧರ್ಮಪತ್ನಿಯೊಡನೆ ಪ್ರಯತ್ನಪೂರ್ವಕವಾಗಿ ಅಗ್ನಿಗಳನ್ನು ಪ್ರತಿಷ್ಠಾಪಿಸಬೇಕು. (ಔಪಾಸನ-ವೈಶ್ವದೇವಾಗ್ನಿ ಹೋತ್ರಗಳನ್ನು ಮಾಡಬೇಕು.) ಹೀಗೆ ಬ್ರಾಹ್ಮಣನಾದವನು ತನ್ನ ಆಯುಷ್ಯದ ಎರಡನೆಯ ಭಾಗವನ್ನು ಉತ್ತಮವ್ರತಶೀಲನಾದ ಗೃಹಸ್ಥನಾಗಿ ಕಳೆಯಬೇಕು."

ಎ೪೨ನೆಯ ಅಧ್ಯಾಯವು ಮುಗಿಯಿತು.

ಎ೪೩ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಗಾರ್ಹಸ್ಥ್ಯಧರ್ಮದ ವರ್ಣನೆ

ಧರ್ಮಜ! ವ್ಯಾಸರು ಹೇಳುತ್ತಾರೆ :

ದ್ವಿತೀಯಮಾಯುಷೋ ಭಾಗಂ ಗೃಹಮೇಧೀ ಗೃಹೇ ವಸೇತ್ ।
ಧರ್ಮಲಬ್ಧೈರ್ಯುತೋ ದಾರೈರಗ್ನೀನಾಹೃತ್ಯ ಸುವ್ರತಃ ॥೧॥

"ಮಗು! ಗೃಹಸ್ಥನು ತನ್ನ ಎರಡನೆಯ ಭಾಗದ ಆಯುಷ್ಯವನ್ನು ಮನೆಯಲ್ಲಿಯೇ ವಾಸಮಾಡುತ್ತಾ ಕಳೆಯಬೇಕು. ಧರ್ಮಾನುಸಾರವಾಗಿ ದೊರೆತ ಕನ್ಯೆಯನ್ನು ಪಾಣಿಗ್ರಹಣಮಾಡಿಕೊಂಡು ಆಹಿತಾಗ್ನಿಯಾಗಿ ಅದಕ್ಕೆ ಸಂಬಂಧಿಸಿದಂತೆ ವ್ರತಾನುಷ್ಠಾನಗಳನ್ನು ಮಾಡುತ್ತಿರಬೇಕು.

ಗೃಹಸ್ಥವೃತ್ತಯಶ್ಚೈವ ಚತಸ್ರಃ ಕವಿಭಿಃ ಸ್ಮೃತಾಃ ।
ಕುಸೂಲಧಾನ್ಯಃ ಪ್ರಥಮಃ ಕುಮ್ಭಧಾನ್ಯಸ್ತ್ವನನ್ತರಮ್ ॥೨॥

ಅಶ್ವಸ್ತನೋಽಥ ಕಾಪೋತೀಮಾಶ್ರಿತೋ ವೃತ್ತಿಮಾಹರೇತ್ ।
ತೇಷಾಂ ಪರಃ ಪರೋ ಜ್ಯಾಯಾನ್ಧರ್ಮತೋ ಧರ್ಮಜಿತ್ತಮಃ ॥೩॥

ವಿದ್ವಾಂಸರು ಬ್ರಾಹ್ಮಣಗೃಹಸ್ಥನಿಗೆ ನಾಲ್ಕು ವಿಧವಾದ ಜೀವಿಕೆಯನ್ನು ಹೇಳಿದ್ದಾರೆ. ಕಣಜದ ಭರ್ತಿಯಾಗಿ (ಮೂರು ವರ್ಷಗಳಿಗೆ ಸಾಕಾಗುವಷ್ಟು) ಧಾನ್ಯವನ್ನು ಸಂಗ್ರಹಿಸಿಟ್ಟಿರುವುದು ಮೊದಲನೆಯದು.

ಕುಂಭದ ಭರ್ತಿಯಾಗಿ (ಒಂದು ವರ್ಷಕ್ಕೆ ಸಾಕಾಗುವಷ್ಟು) ಧಾನ್ಯವನ್ನು ಸಂಗ್ರಹಿಸಿಟ್ಟುಕೊಳ್ಳುವುದು ಎರಡನೆಯದು. ಅಂದಿಗೆ ಸಾಕಾಗುವಷ್ಟು ಧಾನ್ಯವನ್ನು ಸಂಗ್ರಹಿಸುವುದು ಮೂರನೆಯದು. ಕಪೋತವೃತ್ತಿಯಿಂದ ಜೀವನ ಮಾಡುವುದು ನಾಲ್ಕನೆಯದು.* ಈ ನಾಲ್ಕು ವಿಧವಾದ ವೃತ್ತಿಗಳಲ್ಲಿ ಧರ್ಮತಃ ಮುಂದು-ಮುಂದಿನವು ಶ್ರೇಷ್ಠವಾದುವುಗಳು. (ಕುಸೂಲಧಾನ್ಯವೃತ್ತಿಗಿಂತಲೂ ಕುಂಭಧಾನ್ಯವೃತ್ತಿಯೂ, ಕುಂಭಧಾನ್ಯವೃತ್ತಿಗಿಂತಲೂ ಅಶ್ವಸ್ತನವೃತ್ತಿಯೂ, ಅಶ್ವಸ್ತನವೃತ್ತಿಗಿಂತಲೂ ಕಾಪೋತೀವೃತ್ತಿಯೂ ಶ್ರೇಷ್ಠವೂ ಮತ್ತು ಧರ್ಮದ ವಿಜಯವನ್ನು ಹೊಂದಿಸುವುದೂ ಆಗಿದೆ.)

ಷಟ್ಕರ್ಮಾ ವರ್ತಯತ್ಯೇಕಸ್ತ್ರಿಭಿರನ್ಯಃ ಪ್ರವರ್ತತೇ ।
ದ್ವಾಭ್ಯಾಮೇಕಶ್ಚತುರ್ಥಸ್ತು ಬ್ರಹ್ಮಸತ್ರೇ ವ್ಯವಸ್ಥಿತಃ ॥೪॥

ಕುಸೂಲಧಾನ್ಯವೃತ್ತಿಯುಳ್ಳ ಬ್ರಾಹ್ಮಣನು ಯಜನ-ಯಾಜನಾದಿ ಷಟ್ಕರ್ಮನಿರತನಾಗಿರುತ್ತಾನೆ. ಕುಂಭಧಾನ್ಯವೃತ್ತಿಯವನು ಯಜನ, ಅಧ್ಯಯನ ಮತ್ತು ದಾನ ಈ ಮೂರು ಕರ್ಮಗಳಲ್ಲಿಯೇ ನಿರತನಾಗಿರುತ್ತಾನೆ. ಅಶ್ವಸ್ತನವೃತ್ತಿಯಲ್ಲಿರುವವನು ಯಜನ-ಅಧ್ಯಯನಗಳಲ್ಲಿ ನಿರತನಾಗಿರುತ್ತಾನೆ. ಕಾಪೋತೀವೃತ್ತಿಯಲ್ಲಿರುವವನು ಬ್ರಹ್ಮಯಜ್ಞದಲ್ಲಿ (ಅಧ್ಯಯನದಲ್ಲಿ) ಮಾತ್ರವೇ ನಿರತನಾಗಿರುತ್ತಾನೆ.

ಗೃಹಮೇಧಿವ್ರತಾನ್ಯತ್ರ ಮಹಾಂತೀಹ ಪ್ರಚಕ್ಷತೇ ।
ನಾತ್ಮಾರ್ಥೇ ಪಾಚಯೇದನ್ನಂ ನ ವೃಥಾ ಘಾತಯೇತ್ಪಶೂನ್ ॥೫॥

ಗೃಹಸ್ಥನಾದವನಿಗೆ ಶಾಸ್ತ್ರದಲ್ಲಿ ಅನೇಕವಿಧವಾದ ಶ್ರೇಷ್ಠವ್ರತಗಳು ಹೇಳಲ್ಪಟ್ಟಿವೆ. ಗೃಹಸ್ಥನಾದವನು ಕೇವಲ ತನಗಾಗಿ ಎಂದೂ ಅಡಿಗೆ ಮಾಡಿಸಬಾರದು. (ದೇವತಾತಿಥಿ-ಪಿತೃಗಳ ತೃಪ್ತಿಗಾಗಿ ಅಡಿಗೆಯನ್ನು

---

* ಕಾಪೋತೀ ವೃತ್ತಿಃ–ಕಪೋತಗಳು ಹೊಲ-ಗದ್ದೆಗಳಲ್ಲಿ ಬಿದ್ದಿರುವ ಕಾಳುಗಳನ್ನು ಹೆಕ್ಕಿತಿನ್ನುವವು. ಹಾಗೆಯೇ ಮನುಷ್ಯನೂ ಆಚರಿಸಿದರೆ ಅದು ಕಾಪೋತೀ ವೃತ್ತಿಯೆನಿಸುವುದು.

ಮಾಡಬೇಕು.) ಯಜ್ಞಸಮಯದಲ್ಲಲ್ಲದೇ ವೃಥಾ ಪಶುಗಳನ್ನು ಕೊಲ್ಲಬಾರದು.

ಪ್ರಾಣೀ ವಾ ಯದಿ ವಾಪ್ರಾಣೀ ಸಂಸ್ಕಾರಂ ಯಜುಷಾರ್ಹತಿ ।
ನ ದಿವಾ ಪ್ರಸ್ವಪೇಜ್ಜಾತು ನ ಪೂರ್ವಾಪರರಾತ್ರಿಷು ॥೬॥

ಯಜ್ಞಗಳಲ್ಲಿ ಪ್ರಾಣಿಯಾಗಲೀ ಅಪ್ರಾಣಿಯಾಗಲೀ (ಪದಾರ್ಥಗಳಾಗಲೀ) ಯಜುಸ್ಸಿನಿಂದಲೇ ಸಂಸ್ಕಾರವನ್ನು ಹೊಂದುತ್ತವೆ. ಗೃಹಸ್ಥನಾದವನು ಹಗಲಿನಲ್ಲಿ ಮಲಗಬಾರದು. ರಾತ್ರಿಯ ಮೊದಲನೆಯ ಮತ್ತು ಕಡೆಯ ಯಾಮಗಳಲ್ಲಿ ಮಲಗಬಾರದು.

ನ ಭುಞ್ಜೀತಾನ್ತರಾ ಕಾಲೇ ನಾನೃತಾವಾಹ್ವಯೇತ್ಸ್ತ್ರಿಯಮ್ ।
ನಾಸ್ಯಾನಶ್ನನ್ಗೃಹೇ ವಿಪ್ರೋ ವಸೇತ್ಕಶ್ಚಿದಪೂಜಿತಃ ॥೭॥

ಮಧ್ಯಾಹ್ನ ಮತ್ತು ರಾತ್ರಿಯ ವೇಳೆಗಳಲ್ಲಿ ಮಾತ್ರವೇ ಭೋಜನವನ್ನು ಮಾಡಬೇಕು. ಮಧ್ಯಕಾಲದಲ್ಲಿ ಏನನ್ನೂ ತಿನ್ನಬಾರದು. ಋತುಸಮಯದಲ್ಲಿ ಹೊರತಾಗಿ ಬೇರೆ ದಿವಸಗಳಲ್ಲಿ ಪತ್ನಿಯನ್ನು ಸಮಾಗಮಕ್ಕೆ ಆಹ್ವಾನಿಸಬಾರದು. ಮನೆಗೆ ಬಂದ ಯಾವ ಬ್ರಾಹ್ಮಣ ಅತಿಥಿಯೂ ಸತ್ಕಾರವಿಲ್ಲದೇ ಭೋಜನವಿಲ್ಲದೇ ಇರಬಾರದು.

ತಥಾಸ್ಯಾತಿಥಯಃ ಪೂಜ್ಯಾ ಹವ್ಯಕವ್ಯವಹಾಃ ಸದಾ ।
ವೇದವಿದ್ಯಾವ್ರತಸ್ನಾತಾಃ ಶ್ರೋತ್ರಿಯಾಃ ವೇದಪಾರಗಾಃ ॥೮॥

ಸ್ವಧರ್ಮಜೀವಿನೋ ದಾನ್ತಾಃ ಕ್ರಿಯಾವನ್ತಸ್ತಪಸ್ವಿನಃ ।
ತೇಷಾಂ ಹವ್ಯಂ ಚ ಕವ್ಯಂ ಚಾಪ್ಯರ್ಹಣಾರ್ಥಂ ವಿಧೀಯತೇ ॥೯॥

ಗೃಹಸ್ಥನ ಮನೆಯ ಬಾಗಿಲಿಗೆ ಅತಿಥಿಗಳ ರೂಪದಲ್ಲಿ ವೇದ-ವೇದಾಂಗಪಾರಂಗತರಾದ ವಿದ್ವಾಂಸರೂ, ಸ್ನಾತಕರೂ, ಶ್ರೋತ್ರಿಯರೂ, ಯಜ್ಞಾನ್ನ-ಶ್ರಾದ್ಧಾನ್ನಗಳನ್ನು ಭೋಜನಮಾಡುವವರೂ, ಜಿತೇಂದ್ರಿಯರೂ, ಕ್ರಿಯಾನಿಷ್ಠರೂ, ಸ್ವಧರ್ಮಾನುಸಾರವಾಗಿಯೇ ಜೀವನವನ್ನು ನಿರ್ವಹಣೆ ಮಾಡುತ್ತಿರುವವರೂ, ತಪಸ್ವಿಗಳೂ ಆಗಮಿಸಿದರೆ–ಅವರನ್ನು ವಿಧಿವತ್ತಾಗಿ ಸತ್ಕರಿಸಿ ಹವ್ಯ-ಕವ್ಯಾದಿಗಳನ್ನು ಅರ್ಪಿಸಬೇಕೆಂದು ಶಾಸ್ತ್ರವು ಹೇಳುತ್ತದೆ.

ನಖರೈಃ ಸಮ್ಪ್ರಯಾತಸ್ಯ ಸ್ವಧರ್ಮಜ್ಞಾಪಕಸ್ಯ ಚ ।
ಅಪವಿದ್ಧಾಗ್ನಿಹೋತ್ರಸ್ಯ ಗುರೋರ್ವಾಲೀಕಕಾರಿಣಃ ॥೧೦॥

ಸಂವಿಭಾಗೋಽತ್ರ ಭೂತಾನಾಂ ಸರ್ವೇಷಾಮೇವ ಶಿಷ್ಯತೇ ।
ಯಥೈವಾಪಚಮಾನೇಭ್ಯಃ ಪ್ರದೇಯಂ ಗೃಹಮೇಧಿನಾ ॥೧೧॥

ಅಡಿಗೆ ಮಾಡಿಕೊಳ್ಳದಿರುವ ಬ್ರಹ್ಮಚಾರಿಗಳಿಗೂ ಯತಿಗಳಿಗೂ ಗೃಹಸ್ಥನಾದವನು ಅನ್ನವನ್ನು ನೀಡಬೇಕು. ಹಾಗೆಯೇ ಯಾರು ತಾವು ಧಾರ್ಮಿಕರೆಂದು ತೋರಿಸಿಕೊಳ್ಳಲು ಉಗುರುಗಳನ್ನೂ ಗಡ್ಡವನ್ನೂ ದಟ್ಟವಾಗಿ ಬೆಳೆಸಿಕೊಂಡಿರುವರೋ–ಅಂತಹವರಿಗೂ ಗೃಹಸ್ಥನ ಮನೆಯಲ್ಲಿ ಭೋಜನ ಮಾಡಲು ಅಧಿಕಾರವಿದೆ. ಅಕಾರಣವಾಗಿ ಅಗ್ನಿಹೋತ್ರವನ್ನು ಬಿಟ್ಟಿರುವವನಿಗೂ, ಗುರುದ್ರೋಹಿಗೂ ಗೃಹಸ್ಥನ ಮನೆಯಲ್ಲಿ ಭೋಜನಮಾಡಲು ಅವಕಾಶವಿದೆ. ಗೃಹಸ್ಥನ ಮನೆಯಲ್ಲಿ ಎಲ್ಲ ಪ್ರಾಣಿಗಳಿಗೂ ಅನ್ನವನ್ನು ವಿಭಾಗಮಾಡಿಕೊಡಬೇಕೆಂಬ ನಿಯಮವಿದೆ.

ವಿಘಸಾಶೀ ಭವೇನ್ನಿತ್ಯಂ ನಿತ್ಯಂ ಚಾಮೃತಭೋಜನಃ ।
ಅಮೃತಂ ಯಜ್ಞಶೇಷಂ ಸ್ಯಾದ್ಭೋಜನಂ ಹವಿಷಾ ಸಮಮ್ ॥೧೨॥

ಗೃಹಸ್ಥನಾದವನು ಅನುದಿನವೂ ಭೋಜನಶೇಷವನ್ನೂ–ಯಜ್ಞಶೇಷವನ್ನೂ ಊಟಮಾಡಿ ವಿಘಸಾಶಿಯೂ ಅಮೃತಾಶಿಯೂ ಆಗಬೇಕು. ಯಜ್ಞಶೇಷವು ಅಮೃತವಾಗಿದ್ದು ಆ ಭೋಜನವು ಹವಿರ್ಭೋಜನಕ್ಕೆ ಸಮಾನವಾಗಿರುತ್ತದೆ.

ಭೃತ್ಯಶೇಷಂ ತು ಯೋಽಶ್ನಾತಿ ತಮಾಹುರ್ವಿಘಸಾಶಿನಮ್ ।
ವಿಘಸಂ ಭೃತ್ಯಶೇಷಂ ತು ಯಜ್ಞಶೇಷಮಥಾಮೃತಮ್ ॥೧೩॥

ಪೋಷ್ಯವರ್ಗದವರೆಲ್ಲರಿಗೂ ಊಟವಾದನಂತರ ಯಾವ ಗೃಹಸ್ಥನು ಊಟಮಾಡುವನೋ–ಅವನನ್ನು 'ವಿಘಸಾಶೀ' ಎನ್ನುತ್ತಾರೆ. ಕುಟುಂಬದ ಜನರು ಊಟಮಾಡಿದನಂತರ ಉಳಿದಿರುವ ಅನ್ನವನ್ನು ವಿಘಸವೆಂದೂ–ಯಜ್ಞಶೇಷವನ್ನು ಅಮೃತವೆಂದೂ ಹೇಳುತ್ತಾರೆ.

ಸ್ವದಾರನಿರತೋ ದಾನ್ತೋ ಹ್ಯನಸೂಯುರ್ಜಿತೇನ್ದ್ರಿಯಃ ।
ಋತ್ವಿಕ್ಪುರೋಹಿತಾಚಾರ್ಯೈರ್ಮಾತುಲಾತಿಥಿಸಂಶ್ರಿತೈಃ ॥೧೪॥

ವೃದ್ಧಬಾಲಾತುರೈರ್ವೈದ್ಯೈರ್ಜ್ಞಾತಿಸಮ್ಬನ್ಧಿಬಾನ್ಧವೈಃ ।
ಮಾತಾಪಿತೃಭ್ಯಾಂ ಜಾಮೀಭಿರ್ಭ್ರಾತ್ರಾ ಪುತ್ರೇಣ ಭಾರ್ಯಯಾ ॥೧೫॥

ದುಹಿತ್ರಾ ದಾಸವರ್ಗೇಣ ವಿವಾದಂ ನ ಸಮಾಚರೇತ್ ।
ಏತಾನ್ವಿಮುಚ್ಯ ಸಂವಾದಾನ್ಸರ್ವಪಾಪೈರ್ವಿಮುಚ್ಯತೇ ॥೧೬॥

ಗೃಹಸ್ಥನಾದವನು ತನ್ನ ಪತ್ನಿಯಲ್ಲಿ ಅನುರಾಗವುಳ್ಳವನಾಗಿರಬೇಕು. ಜಿತೇಂದ್ರಿಯನಾಗಿರಬೇಕು. ಅಸೂಯಾರಹಿತನಾಗಿರಬೇಕು. ಋತ್ವಿಜರು, ಪುರೋಹಿತರು, ಆಚಾರ್ಯರು, ಸೋದರಮಾವಂದಿರು, ಅತಿಥಿಗಳು, ಆಶ್ರಿತರು, ವೃದ್ಧರು, ಬಾಲಕರು, ರೋಗಿಗಳು, ವೈದ್ಯರು, ಜ್ಞಾತಿ-ಬಾಂಧವರು, ಸಂಬಂಧಿಗಳು, ಬಂಧುಗಳು, ತಾಯಿ-ತಂದೆಗಳು, ಸಹೋದರರು, ಗಂಡುಮಕ್ಕಳು, ಭಾರ್ಯೆ, ಹೆಣ್ಣುಮಗಳು ಮತ್ತು ಸೇವಕವರ್ಗದವರು– ಇವರೊಡನೆ ಯಾವಾಗಲೂ ವಿವಾದಮಾಡಬಾರದು. ಅವರಿಗೆ ಸೇರಬೇಕಾದ ಅಂಶವನ್ನು ಕೊಡಬೇಕು. ಇವರಲ್ಲಿ ಯಾರೊಡನೆಯೂ ವಿವಾದ ಮಾಡದಿರುವ ಗೃಹಸ್ಥನು ಸಕಲಪಾಪಗಳಿಂದಲೂ ಮುಕ್ತನಾಗುತ್ತಾನೆ.

ಏತೈರ್ಜಿತಸ್ತು ಜಯತಿ ಸರ್ವಾಲ್ಲೋಕಾನ್ನ ಸಂಶಯಃ ।
ಆಚಾರ್ಯೋ ಬ್ರಹ್ಮಲೋಕೇಶಃ ಪ್ರಾಜಾಪತ್ಯೇ ಪಿತಾ ಪ್ರಭುಃ ॥೧೭॥

ಅತಿಥಿಸ್ತ್ವಿನ್ದ್ರಲೋಕಸ್ಯ ದೇವಲೋಕಸ್ಯ ಚರ್ತ್ವಿಜಃ ।
ಜಾಮಯೋಽಪ್ಸರಸಾಂ ಲೋಕೇ ವೈಶ್ವದೇವೇ ತು ಜ್ಞಾತಯಃ ॥೧೮॥

ಋತ್ವಿಕ್ಪುರೋಹಿತರೇ ಮೊದಲಾದವರನ್ನು ವಿನಯ-ಸೌಶೀಲ್ಯಾದಿ ಗುಣಗಳಿಂದ ಜಯಿಸಿದ ಗೃಹಸ್ಥನು ಸರ್ವಲೋಕಗಳನ್ನೂ ಜಯಿಸುವನೆಂಬುದರಲ್ಲಿ ಸಂಶಯವೇ ಇಲ್ಲ. ಆಚಾರ್ಯನು ಬ್ರಹ್ಮಲೋಕದ ಸ್ವಾಮಿಯಾಗಿದ್ದಾನೆ. ತಂದೆಯು ಪ್ರಜಾಪತಿಲೋಕಕ್ಕೆ ಈಶ್ವರನಾಗಿದ್ದಾನೆ. ಅತಿಥಿಯು ಇಂದ್ರಲೋಕಕ್ಕೂ, ಋತ್ವಿಜರು ದೇವಲೋಕಕ್ಕೂ ಸ್ವಾಮಿಗಳಾಗಿರುತ್ತಾರೆ. ಕುಟುಂಬದ ಸ್ತ್ರೀಯರು ಅಪ್ಸರೆಯರ ಲೋಕಕ್ಕೆ ಸ್ವಾಮಿನಿಯ

ರಾಗಿರುತ್ತಾರೆ. ಜ್ಞಾತಿಗಳು ವಿಶ್ವೇದೇವತೆಗಳ ಲೋಕಕ್ಕೆ ಅಧಿಕಾರಿಗಳಾಗಿರುತ್ತಾರೆ.

ಸಮ್ಬನ್ಧಿಬಾನ್ಧವಾ ದಿಕ್ಷು ಪೃಥಿವ್ಯಾಂ ಮಾತೃಮಾತುಲೌ ।
ವೃದ್ಧಬಾಲಾತುರಕೃಶಾಸ್ತ್ವಾಕಾಶೇ ಪ್ರಭವಿಷ್ಣವಃ ॥೧೯॥

ಸಂಬಂಧಿಗಳೂ ಮತ್ತು ಬಂಧುಗಳೂ ದಿಕ್ಕುಗಳ ಮೇಲಿನ ಅಧಿಕಾರವುಳ್ಳವರಾಗಿರುತ್ತಾರೆ. ತಾಯಿ ಮತ್ತು ಸೋದರಮಾವಂದಿರು ಭೂಮಿಯ ಮೇಲೆ ಅಧಿಕಾರವುಳ್ಳವರಾಗಿರುತ್ತಾರೆ. ವೃದ್ಧರೂ, ಬಾಲಕರು, ರೋಗಿಗಳೂ ಮತ್ತು ದುರ್ಬಲರೂ ಆಕಾಶದ ಮೇಲೆ ಪ್ರಭುತ್ವವುಳ್ಳವರಾಗಿರುತ್ತಾರೆ. ಇವರೆಲ್ಲರನ್ನೂ ಸಂತುಷ್ಟಿಗೊಳಿಸುವುದರಿಂದ ಅವರವರ ಅಧಿಕಾರದಲ್ಲಿರುವ ಲೋಕಗಳನ್ನು ಗೃಹಸ್ಥನು ಪಡೆದುಕೊಳ್ಳುತ್ತಾನೆ.

ಭ್ರಾತಾ ಜ್ಯೇಷ್ಠಃ ಸಮಃ ಪಿತ್ರಾ ಭಾರ್ಯಾ ಪುತ್ರಃ ಸ್ವಕಾ ತನುಃ ।
ಛಾಯಾ ಸ್ವಾ ದಾಸವರ್ಗಶ್ಚ ದುಹಿತಾ ಕೃಪಣಂ ಪರಮ್ ॥೨೦॥

ಹಿರಿಯಣ್ಣನು ತಂದೆಗೆ ಸಮಾನನು. ಪತ್ನೀ-ಪುತ್ರರು ತನ್ನ ಶರೀರ ರೂಪರೇ ಆಗಿದ್ದಾರೆ. ಸೇವಕವರ್ಗದವರು ಗೃಹಸ್ಥನ ಛಾಯೆಯಂತಿದ್ದಾರೆ. ಮಗಳು ಎಲ್ಲರಿಗಿಂತಲೂ ಹೆಚ್ಚು ದಯನೀಯಳು.

ತಸ್ಮಾದೇತೈರಧಿಕ್ಷಿಪ್ತಃ ಸಹೇನ್ನಿತ್ಯಮಸಂಜ್ವರಃ ।
ಗೃಹಧರ್ಮಪರೋ ವಿದ್ವಾನ್ಧರ್ಮಶೀಲೋ ಜಿತಕ್ಲಮಃ ॥೨೧॥

ಆದುದರಿಂದ ಇವರುಗಳಿಂದ ಆಕ್ಷೇಪಿಸಲ್ಪಟ್ಟರೂ ಗೃಹಸ್ಥನಾದವನು ಕ್ರೋಧರಹಿತನಾಗಿ ಅವರ ತಿರಸ್ಕಾರವನ್ನು ಸಹಿಸಿಕೊಳ್ಳಬೇಕು. ಗೃಹಸ್ಥ ಧರ್ಮವನ್ನು ಪರಿಪಾಲಿಸುವ ವಿದ್ವಾಂಸನು ನಿಶ್ಚಿಂತನಾಗಿದ್ದು, ಶ್ರಮವನ್ನು ಜಯಿಸಿ ಧರ್ಮಶೀಲನಾಗಿರಬೇಕು.

ನ ಚಾರ್ಥಬದ್ಧಃ ಕರ್ಮಾಣಿ ಧರ್ಮವಾನ್ಕಶ್ಚಿದಾಚರೇತ್ ।
ಗೃಹಸ್ಥವೃತ್ತಯಸ್ತಿಸ್ರಸ್ತಾಸಾಂ ನಿಃಶ್ರೇಯಸಂ ಪರಮ್ ॥೨೨॥

ಧರ್ಮಾತ್ಮನಾದವನು ಹಣದಾಸೆಗೆ ಕಟ್ಟುಬಿದ್ದು ಧರ್ಮಕಾರ್ಯಗಳನ್ನು ಮಾಡಬಾರದು. ಗೃಹಸ್ಥನ ಜೀವಿಕೆಗೆ ಯಾವ ಮೂರು ವೃತ್ತಿಗಳು

ಹೇಳಿವೆಯೋ ಅವುಗಳಲ್ಲಿ ಉತ್ತರೋತ್ತರವೃತ್ತಿಗಳು ಶ್ರೇಯಸ್ಕರವಾದುವುಗಳು. (ಇಲ್ಲಿ ಮೂರು ವೃತ್ತಿಗಳೆಂದು ಹೇಳಿರುವುದರಿಂದ ಮುಂದೆ ೨೪ನೆಯ ಶ್ಲೋಕದಲ್ಲಿ ಹೇಳಿರುವ ಕುಂಭಧಾನ್ಯ, ಉಂಛಲ ಮತ್ತು ಕಾಪೋತೀ– ಇವುಗಳನ್ನು ಇಟ್ಟುಕೊಳ್ಳಬಹುದಾಗಿದೆ.)

ಪರಂ ಪರಂ ತಥೈವಾಹುಶ್ಚಾತುರಾಶ್ರಮ್ಯಮೇವ ತತ್ ।
ಯಥೋಕ್ತಾನಿಯಮಾಸ್ತೇಷಾಂ ಸರ್ವಂ ಕಾರ್ಯಂ ಬುಭೂಷತಾ ॥೨೩॥

ಇದೇ ರೀತಿಯಲ್ಲಿಯೇ ನಾಲ್ಕು ಆಶ್ರಮಗಳಲ್ಲಿಯೂ ಮುಂದು-ಮುಂದಿನ ಆಶ್ರಮಗಳನ್ನು ಶ್ರೇಷ್ಠವಾದುದೆಂದು ಹೇಳುತ್ತಾರೆ. (ಬ್ರಹ್ಮಚರ್ಯಕ್ಕಿಂತಲೂ ಗೃಹಸ್ಥಾಶ್ರಮವೂ, ಗೃಹಸ್ಥಾಶ್ರಮಕ್ಕಿಂತಲೂ ವಾನಪ್ರಸ್ಥಾಶ್ರಮವೂ, ವಾನಪ್ರಸ್ಥಾಶ್ರಮಕ್ಕಿಂತಲೂ ಸಂನ್ಯಾಸಾಶ್ರಮವೂ ಶ್ರೇಷ್ಠವಾದುದು.) ಆಯಾ ಆಶ್ರಮಗಳಿಗೆ ಯಾವ ಶಾಸ್ತ್ರೋಕ್ತವಾದ ವಿಧಿ-ನಿಯಮಗಳಿರುವುವೋ ಅವುಗಳೆಲ್ಲವನ್ನೂ ಶ್ರೇಯಃಕಾಂಕ್ಷಿಯಾದ ಪುರುಷನು ಪರಿಪಾಲಿಸಬೇಕು.

ಕುಮ್ಭಧಾನ್ಯೈರುಞ್ಛಶಿಲೈಃ ಕಾಪೋತಿಂ ಚಾಸ್ಥಿತಾಸ್ತಥಾ ।
ಯಸ್ಮಿಂಶ್ಚೈತೇ ವಸನ್ತ್ಯರ್ಹಾಸ್ತದ್ರಾಷ್ಟ್ರಮಭಿವರ್ಧತೇ ॥೨೪॥

ಕುಂಭದಲ್ಲಿ ಒಂದು ವರ್ಷಕ್ಕಾಗುವಷ್ಟು ಧಾನ್ಯವನ್ನು ಸಂಗ್ರಹಿಸಿಟ್ಟುಕೊಂಡು ಜೀವಿಸುವ, ಗದ್ದೆಯಿಂದ ಯಜಮಾನನು ಧಾನ್ಯವನ್ನು ತೆಗೆದುಕೊಂಡನಂತರ ಕೆಳಗೆ ಬಿದ್ದಿರುವ ಕಾಳುಗಳನ್ನು ಆರಿಸಿಕೊಂಡು ಜೀವಿಸುವ ಮತ್ತು ಕಾಪೋತೀವೃತ್ತಿಯಿಂದ ಜೀವಿಸುವ ಪೂಜ್ಯರಾದ ಬ್ರಾಹ್ಮಣರು ಯಾವ ದೇಶದಲ್ಲಿ ವಾಸಮಾಡುವರೋ–ಆ ರಾಷ್ಟ್ರವು ಬಹಳವಾಗಿ ವೃದ್ಧಿಹೊಂದುತ್ತದೆ.

ಪೂರ್ವಾನ್ದಶ ದಶ ಪರಾನ್ಪುನಾತಿ ಚ ಪಿತಾಮಹಾನ್ ।
ಗೃಹಸ್ಥವೃತ್ತೀಶ್ಚಾಪ್ಯೇತಾ ವರ್ತಯೇದ್ಯೋ ಗತವ್ಯಥಃ ॥೨೫॥

ಯಾವ ಗೃಹಸ್ಥನು ಮನಸ್ಸಿನಲ್ಲಿ ಸ್ವಲ್ಪವಾದರೂ ಕ್ಲೇಶವನ್ನಿಟ್ಟು

ಕೊಳ್ಳದೇ ಈ ಮೂರು ವೃತ್ತಿಗಳಲ್ಲಿ ಯಾವುದಾದರೊಂದನ್ನು ಆಶ್ರಯಿಸಿ ಜೀವಿಕೆಯನ್ನು ನಡೆಸುವನೋ–ಅಂತಹ ಗೃಹಸ್ಥನು ತನ್ನ ಹಿಂದಿನ ಪಿತೃ-ಪಿತಾಮಹ-ಪ್ರಪಿತಾಮಹರೇ ಮೊದಲಾದ ಹತ್ತು ತಲೆಮಾರಿನವರನ್ನೂ ಮುಂದಿನ ಪುತ್ರ-ಪೌತ್ರ-ಪ್ರಪೌತ್ರಾದಿ ಹತ್ತು ತಲೆಮಾರಿನವರನ್ನೂ ಪಾವನ ಗೊಳಿಸುತ್ತಾನೆ.

ಸ ಚಕ್ರಧರಲೋಕಾನಾಂ ಸದೃಶೀಮಾಪ್ನುಯಾದ್ಗತಿಮ್ ।
ಜಿತೇನ್ದ್ರಿಯಾಣಾಮಥವಾ ಗತಿರೇಷಾ ವಿಧೀಯತೇ ॥೨೬॥

ಅಂತಹ ಗೃಹಸ್ಥನು ಚಕ್ರವರ್ತಿಗಳು ಪಡೆಯುವ ಲೋಕಗಳಿಗೆ ಸದೃಶ ವಾದ ಉತ್ತಮಲೋಕಗಳನ್ನು ಹೊಂದುತ್ತಾನೆ. ಅಥವಾ ಜಿತೇಂದ್ರಿಯ ರಾದವರಿಗೆ ಲಭಿಸುವ ಸದ್ಗತಿಯು ಅವನಿಗೆ ಲಭ್ಯವಾಗುತ್ತದೆ.

ಸ್ವರ್ಗಲೋಕೋ ಗೃಹಸ್ಥಾನಾಮುದಾರಮನಸಾಂ ಹಿತಃ ।
ಸ್ವರ್ಗೋ ವಿಮಾನಸಂಯುಕ್ತೋ ವೇದದೃಷ್ಟಃ ಸುಪುಷ್ಪಿತಃ ॥೨೭॥

ಉದಾರಹೃದಯರಾದ ಗೃಹಸ್ಥರಿಗೆ ಹಿತಕರವಾದ, ವಿಮಾನಯುಕ್ತ ವಾದ, ಪುಷ್ಪಗಳಿಂದ ಸುಶೋಭಿತವಾಗಿ ಕಾಣುವ, ವೇದಗಳಲ್ಲಿ ವರ್ಣಿ ಸಲ್ಪಟ್ಟಿರುವ ಸ್ವರ್ಗಲೋಕವು ಸಿಕ್ಕುತ್ತದೆ.

ಸ್ವರ್ಗಲೋಕೋ ಗೃಹಸ್ಥಾನಾಂ ಪ್ರತಿಷ್ಠಾ ನಿಯಮಾತ್ಮನಾಮ್ ।
ಬ್ರಹ್ಮಣಾ ವಿಹಿತಾ ಯೋನಿರೇಷಾ ಯಸ್ಮಾದ್ವಿಧೀಯತೇ ।
ದ್ವಿತೀಯಂ ಕ್ರಮಶಃ ಪ್ರಾಪ್ಯ ಸ್ವರ್ಗಲೋಕೇ ಮಹೀಯತೇ ॥೨೮॥

ಮನಸ್ಸನ್ನೂ ಮತ್ತು ಇಂದ್ರಿಯಗಳನ್ನೂ ವಶಪಡಿಸಿಕೊಂಡಿರುವ ಗೃಹಸ್ಥರಿಗೆ ಸ್ವರ್ಗಲೋಕವೇ ಪ್ರತಿಷ್ಠೆಯ (ನೆಲೆಸುವ) ಸ್ಥಾನವೆಂದು ನಿಶ್ಚಿತ ವಾಗಿದೆ. ಬ್ರಹ್ಮನು ಗೃಹಸ್ಥಾಶ್ರಮವನ್ನು ಸ್ವರ್ಗಪ್ರಾಪ್ತಿಗೆ ಕಾರಣವನ್ನಾಗಿ ಮಾಡಿದ್ದಾನೆ. ಅದನ್ನು ಪರಿಪಾಲಿಸುವ ವಿಧಾನವನ್ನೂ ಶಾಸ್ತ್ರಗಳ ಮೂಲಕ ವಾಗಿ ವಿಧಿಸಿದ್ದಾನೆ. ಆದುದರಿಂದ ಬ್ರಾಹ್ಮಣನು ಎರಡನೆಯದಾದ ಗೃಹಸ್ಥಾ ಶ್ರಮವನ್ನು ಅನುಕ್ರಮವಾಗಿ ಹೊಂದಿ ಅವಸಾನಾನಂತರದಲ್ಲಿ ಸ್ವರ್ಗದಲ್ಲಿ ವಿರಾಜಮಾನನಾಗುತ್ತಾನೆ.

ಅತಃ ಪರಂ ಪರಮಮುದಾರಮಾಶ್ರಮಂ
ತೃತೀಯಮಾಹುಸ್ತ್ಯಜತಾಂ ಕಲೇವರಮ್ ।
ವನೌಕಸಾಂ ಗೃಹಪತಿನಾಮನುತ್ತಮಂ
ಶೃಣುಷ್ವ ಸಂಶ್ಲಿಷ್ಟಶರೀರಕಾರಿಣಾಮ್ ॥೨೯॥

ಗೃಹಸ್ಥಾಶ್ರಮವಾದನಂತರ ಶರೀರವನ್ನು ತ್ಯಾಗಮಾಡುವವರಿಗೆ ಉದಾರವಾದ ವಾನಪ್ರಸ್ಥಾಶ್ರಮವಿದೆ. ಅದನ್ನು ಮೂರನೆಯ ಆಶ್ರಮವೆಂದು ಹೇಳುತ್ತಾರೆ. ಗೃಹಸ್ಥಾಶ್ರಮಕ್ಕಿಂತಲೂ ಶ್ರೇಷ್ಠತಮವಾದ, ಶರೀರವನ್ನು ಅಸ್ಥಿ-ಚರ್ಮಾವಶಿಷ್ಟವನ್ನಾಗಿಮಾಡುವ, (ತಪಸ್ಸಿನಿಂದ ಶರೀರವನ್ನು ಕೃಶವನ್ನಾಗಿ ಮಾಡುವ) ವನವಾಸಿಗಳ ವಾನಪ್ರಸ್ಥಾಶ್ರಮಧರ್ಮವನ್ನು ಹೇಳುವೆನು ; ಕೇಳು.”

೨೪೩ನೆಯ ಅಧ್ಯಾಯವು ಮುಗಿಯಿತು.

೨೪೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ವಾನಪ್ರಸ್ಥ ಮತ್ತು ಸಂನ್ಯಾಸಾಶ್ರಮಗಳ ಧರ್ಮಗಳು ಮತ್ತು ಮಹಿಮೆ

ಪಾರಿಕ್ಷಿತ! ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ವಿದ್ವಾಂಸರಿಂದ ಹೇಳಲ್ಪಟ್ಟ ಮತ್ತು ಆಚರಿಸಲ್ಪಟ್ಟ ಗೃಹಸ್ಥಾಶ್ರಮದ ವೃತ್ತಿಯನ್ನು ವ್ಯಾಸರು ತಮ್ಮ ಮಗನಾದ ಶುಕನಿಗೆ ಹೇಳಿದ ರೀತಿಯಲ್ಲಿಯೇ ನಾನೂ ನಿನಗೆ ಹೇಳಿದ್ದೇನೆ. ಅನಂತರ ವ್ಯಾಸರು ಏನು ಹೇಳಿದರೆಂಬುದನ್ನು ಕೇಳು :

ವ್ಯಾಸರು ಹೇಳುತ್ತಾರೆ :

ಕ್ರಮಶಸ್ತ್ವವಧೂಯ್ಯೈನಾಂ ತೃತೀಯಾಂ ವೃತ್ತಿಮುತ್ತಮಾಮ್ ।
ಸಂಯೋಗವ್ರತಖಿನ್ನಾನಾಂ ವಾನಪ್ರಸ್ಥಾಶ್ರಮೌಕಸಾಮ್ ॥೨॥
ಶ್ರೂಯತಾಂ ಪುತ್ರ ಭದ್ರಂ ತೇ ಸರ್ವಲೋಕಾಶ್ರಯಾತ್ಮನಾಮ್ ।
ಪ್ರೇಕ್ಷಾಪೂರ್ವಂ ಪ್ರವೃತ್ತಾನಾಂ ಪುಣ್ಯದೇಶನಿವಾಸಿನಾಮ್ ॥೩॥

“ವತ್ಸ! ನಿನಗೆ ಮಂಗಳವಾಗಲಿ! ಕ್ರಮವಾಗಿ ಎರಡನೆಯ ಆಶ್ರಮವಾದ ಗಾರ್ಹಸ್ಥ್ಯವನ್ನು ತಿರಸ್ಕರಿಸಿ, ಪತ್ನಿಯೊಡನೆ ವ್ರತಾದಿಗಳ ಅನುಷ್ಠಾನ

ದಲ್ಲಿ ಕಷ್ಟಪಡುತ್ತಾ, ವಾನಪ್ರಸ್ಥಾಶ್ರಮವನ್ನೇ ತಮ್ಮ ನೆಲೆಯನ್ನಾಗಿ ಮಾಡಿಕೊಂಡಿರುವ, ಎಲ್ಲ ಲೋಕಗಳಿಗೂ ಆಶ್ರಯಭೂತವಾದ ಮನಸ್ಸನ್ನು ಹೊಂದಿರುವ, ವಿಚಾರಪೂರ್ವಕವಾಗಿ ವ್ರತ-ನಿಯಮಗಳಲ್ಲಿ ಪ್ರವೃತ್ತರಾಗಿರುವ, ಪವಿತ್ರಸ್ಥಾನಗಳಲ್ಲಿ ವಾಸವಾಗಿರುವ, ಮೂರನೆಯದಾದ ಮತ್ತು ಉತ್ತಮವಾದ ವಾನಪ್ರಸ್ಥಾಶ್ರಮವೃತ್ತಿಯನ್ನು ಆಶ್ರಯಿಸಿರುವವರ ಧರ್ಮವನ್ನು ಹೇಳುತ್ತೇನೆ ; ಕೇಳು.

ಗೃಹಸ್ಥಸ್ತು ಯದಾ ಪಶ್ಯೇದ್ವಲೀಪಲಿತಮಾತ್ಮನಃ ।
ಅಪತ್ಯಸ್ಯೈವ ಚಾಪತ್ಯಂ ವನಮೇವ ತದಾ ಶ್ರಯೇತ್ ॥೪॥

ತೃತೀಯಮಾಯುಷೋ ಭಾಗಂ ವಾನಪ್ರಸ್ಥಾಶ್ರಮೇ ವಸೇತ್ ।
ತಾನೇವಾಗ್ನೀನ್ಪರಿಚರೇದ್ಯಜಮಾನೋ ದಿವೌಕಸಃ ॥೫॥

ಗೃಹಸ್ಥನಾದವನು ಯಾವಾಗ ತನ್ನ ತಲೆಯ ಕೂದಲುಗಳು ನರೆತಿರುವುದನ್ನೂ, ಚರ್ಮವು ಸುಕ್ಕಿರುವುದನ್ನೂ ಗಮನಿಸುವನೋ ಮತ್ತು ಮಕ್ಕಳಿಗೂ ಮಕ್ಕಳಾಗಿರುವುದನ್ನು ಕಾಣುವನೋ–ಆಗ ಅವನು ತನ್ನ ಆಯುಷ್ಯದ ಮೂರನೆಯ ಭಾಗವನ್ನು ಕಳೆಯುವ ಸಲುವಾಗಿ ಅರಣ್ಯಕ್ಕೆ ಹೋಗಬೇಕು ಮತ್ತು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬೇಕು. ಗೃಹಸ್ಥಾಶ್ರಮದಲ್ಲಿ ಅಗ್ನಿಗಳನ್ನು ಉಪಾಸಿಸುತ್ತಿದ್ದಂತೆಯೇ ವಾನಪ್ರಸ್ಥಾಶ್ರಮದಲ್ಲಿಯೂ ತ್ರೇತಾಗ್ನಿಗಳ ಉಪಾಸನೆಯನ್ನು ಮಾಡಬೇಕು. ಜೊತೆಯಲ್ಲಿಯೇ ದೇವತೆಗಳ ಆರಾಧನೆಯನ್ನೂ ಮಾಡಬೇಕು. (ದೇವತೆಗಳನ್ನು ಉದ್ದೇಶಿಸಿ ಯಾಗ ಮಾಡಬೇಕು.)

ನಿಯತೋ ನಿಯತಾಹಾರಃ ಷಷ್ಠಭುಕ್ತೋಽಪ್ರಮತ್ತವಾನ್ ।
ತದಗ್ನಿಹೋತ್ರಂ ತಾ ಗಾವೋ ಯಜ್ಞಾಙ್ಗಾನಿ ಚ ಸರ್ವಶಃ ॥೬॥

ವಾನಪ್ರಸ್ಥಾಶ್ರಮಿಯು ನಿಯಮಸ್ಥನಾಗಿರಬೇಕು. ನಿಯಮಾನುಸಾರವಾಗಿ ಭೋಜನವನ್ನು ಮಾಡಬೇಕು. ದಿನದ ಆರನೆಯ ಭಾಗದಲ್ಲಿ (ಮೂರನೇ ಯಾಮದಲ್ಲಿ) ಒಂದು ಬಾರಿ ಊಟಮಾಡಬೇಕು. ಜಾಗರೂಕನಾಗಿರಬೇಕು. ಗೃಹಸ್ಥಾಶ್ರಮದಲ್ಲಿ ಮಾಡುವಂತೆಯೇ ಅಗ್ನಿಹೋತ್ರ, ಗೋಸೇವೆ, ಯಜ್ಞಾದಿಗಳೆಲ್ಲವನ್ನೂ ಮಾಡಬೇಕು.

ಅಕೃಷ್ಟಂ ವೈ ವ್ರೀಹಿ ಯವಂ ನೀವಾರಂ ವಿಘಸಾನಿ ಚ ।
ಹವೀಂಷಿ ಸಂಪ್ರಯಚ್ಛೇತ ಮಖೇಷ್ವತ್ರಾಪಿ ಪಞ್ಚಸು ॥೭॥

ಕೃಷಿಮಾಡದೇ ಭೂಮಿಯಲ್ಲಿ ಬೆಳೆಯುವ ಬತ್ತ, ಗೋಧಿ, ನವಣೆ ಮತ್ತು ವಿಘಸ (ಸೇವಕರ ಭೋಜನವಾದನಂತರ ಉಳಿದ ಅನ್ನ)– ಇವುಗಳಿಂದ ಜೀವನನಿರ್ವಹಣೆಯನ್ನು ಮಾಡಬೇಕು. ವಾನಪ್ರಸ್ಥಾಶ್ರಮ ದಲ್ಲಿಯೂ ಪಂಚಮಹಾಯಜ್ಞಗಳನ್ನು ಮಾಡಿ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸಬೇಕು.

ವಾನಪ್ರಸ್ಥಾಶ್ರಮೇಽಪ್ಯೇತಾಶ್ಚತಸ್ರೋ ವೃತ್ತಯಃ ಸ್ಮೃತಾಃ ।
ಸದ್ಯಃ ಪ್ರಕ್ಷಾಲಕಾಃ ಕೇಚಿತ್ಕೇಚಿನ್ಮಾಸಿಕಸಂಚಯಾಃ ॥೮॥

ವಾರ್ಷಿಕಂ ಸಂಚಯಂ ಕೇಚಿತ್ಕೇಜಿದ್ದ್ವಾದಶವಾರ್ಷಿಕಮ್ ।
ಕುರ್ವನ್ತ್ಯತಿಥಿಪೂಜಾರ್ಥಂ ಯಜ್ಞತನ್ತ್ರಾರ್ಥಮೇವ ವಾ ॥೯॥

ವಾನಪ್ರಸ್ಥಾಶ್ರಮದಲ್ಲಿಯೂ ನಾಲ್ಕು ವಿಧವಾದ ವೃತ್ತಿಗಳಿವೆ. ಅಂದು ಸಂಗ್ರಹವಾದುದನ್ನು ಅಂದೇ ತಿಂದು ತೊಳೆದು ಬಳಿದು ಹಾಕುವವರು ಕೆಲವರು. ಒಂದು ತಿಂಗಳಿಗೆ ಸಾಕಾಗುವಷ್ಟು ಧಾನ್ಯವನ್ನು ಸಂಗ್ರಹಿಸಿರುವವರು ಕೆಲವರು. ಒಂದು ವರ್ಷಕ್ಕೆ ಪೂರ್ತಿಯಾಗುವಷ್ಟು ಧಾನ್ಯವನ್ನು ಸಂಗ್ರಹಿಸಿಟ್ಟಿರುವವರು ಕೆಲವರು. ಕೆಲವರು ಹನ್ನೆರಡು ವರ್ಷಗಳಿಗೆ ಸಾಕಾಗುವಷ್ಟು ಧಾನ್ಯವನ್ನೂ ಸಂಗ್ರಹಿಸಿಟ್ಟುಕೊಂಡಿರುತ್ತಾರೆ. ಅತಿಥಿಗಳನ್ನು ಸತ್ಕರಿಸುವುದಕ್ಕೂ ಮತ್ತು ಯಜ್ಞಕರ್ಮಗಳಿಗೂ ಅವರು ಅಷ್ಟು ಧಾನ್ಯವನ್ನು ಸಂಗ್ರಹಿಸಿರುತ್ತಾರೆ.

ಅಭ್ರಾವಕಾಶಾ ವರ್ಷಾಸು ಹೇಮನ್ತೇ ಜಲಸಂಶ್ರಯಾಃ ।
ಗ್ರೀಷ್ಮೇ ಚ ಪಞ್ಚ ತಪಸಃ ಶಶ್ವಚ್ಚ ಮಿತಭೋಜನಾಃ ॥೧೦॥

ವಾನಪ್ರಸ್ಥಾಶ್ರಮಿಗಳು ಮಳೆಗಾಲದಲ್ಲಿ ಮೋಡಗಳಿಂದ ಕೂಡಿದ ಆಕಾಶವನ್ನೇ ಹೊದ್ದಿಕೆಯನ್ನು ಮಾಡಿಕೊಂಡಿರುತ್ತಾರೆ. ಹೇಮಂತಋತುವಿ ನಲ್ಲಿ ನೀರಿನಲ್ಲಿ ಆಶ್ರಯವನ್ನು ಹೊಂದಿರುತ್ತಾರೆ. ಗ್ರೀಷ್ಮಋತುವಿನಲ್ಲಿ (ಬೇಸಿಗೆಯಲ್ಲಿ) ಪಂಚಾಗ್ನಿಗಳ ಮಧ್ಯದಲ್ಲಿ ಕುಳಿತು (ಅಗ್ನಿರೂಪನಾದ ಸೂರ್ಯನು ನೆತ್ತಿಯಮೇಲಿರುವಾಗ ನಾಲ್ಕು ಕಡೆಗಳಲ್ಲಿಯೂ ಅಗ್ನಿಯನ್ನು

ಪ್ರತಿಷ್ಠಾಪಿಸಿ ಮಧ್ಯದಲ್ಲಿ ಕುಳಿತು) ತಪಸ್ಸುಮಾಡುತ್ತಾರೆ. ಅವರು ಯಾವಾಗಲೂ ಮಿತವಾದ ಆಹಾರವನ್ನು ತೆಗೆದುಕೊಳ್ಳುತ್ತಾರೆ.

ಭೂಮೌ ವಿಪರಿವರ್ತನ್ತೇ ತಿಷ್ಠನ್ತಿ ಪ್ರಪದೈರಪಿ ।
ಸ್ಥಾನಾಸನೈರ್ವರ್ತಯನ್ತಿ ಸವನೇಷ್ವಭಿಷಿಞ್ಚತೇ ॥೧೧॥

ವಾನಪ್ರಸ್ಥಾಶ್ರಮಿಗಳು ಭೂಮಿಯಲ್ಲಿ ಹೊರಳಾಡುತ್ತಿರುತ್ತಾರೆ. ಕೆಲವು ಸಮಯಗಳಲ್ಲಿ ತುದಿಗಾಲುಗಳಲ್ಲಿ ನಿಂತಿರುತ್ತಾರೆ. ಒಂದೇ ಸ್ಥಳದಲ್ಲಿ ಒಂದೇ ಆಸನದಲ್ಲಿ ಯಾವಾಗಲೂ ಕುಳಿತುಕೊಳ್ಳುತ್ತಾರೆ. ಮೂರು ಕಾಲಗಳಲ್ಲಿಯೂ ಸ್ನಾನವನ್ನು ಮಾಡುತ್ತಾರೆ.

ದನ್ತೋಲೂಖಲಿಕಾಃ ಕೇಚಿದಶ್ಮಕುಟ್ಟಾಸ್ತಥಾ ಪರೇ ।
ಶುಕ್ಲಪಕ್ಷೇ ಪಿಬನ್ತ್ಯೇಕೇ ಯವಾಗೂಂ ಕ್ವಥಿತಾಂ ಸಕೃತ್ ।
ಕೃಷ್ಣಪಕ್ಷೇ ಪಿಬನ್ತ್ಯನ್ಯೇ ಭುಞ್ಜತೇ ವಾ ಯಥಾಗತಮ್ ॥೧೨॥

ಕೆಲವು ವಾನಪ್ರಸ್ಥಾಶ್ರಮಿಗಳು ಧಾನ್ಯದ ಹೊಟ್ಟನ್ನು ಹಲ್ಲುಗಳಿಂದಲೇ ತೆಗೆದು ತಿನ್ನುತ್ತಾರೆ. ಮತ್ತೆ ಕೆಲವರು ಕಲ್ಲಿನಿಂದ ಕುಟ್ಟಿ ಹೊಟ್ಟುತೆಗೆದು ತಿನ್ನುತ್ತಾರೆ. ಕೆಲವರು ಶುಕ್ಲಪಕ್ಷದಲ್ಲಿ ಮಾತ್ರ ಚೆನ್ನಾಗಿ ಬೇಯಿಸಿದ ಅನ್ನದ ಗಂಜಿಯನ್ನು ಕುಡಿಯುತ್ತಾರೆ. ಕೆಲವರು ಕೃಷ್ಣಪಕ್ಷದಲ್ಲಿ ಕುಡಿಯುತ್ತಾರೆ. ಇನ್ನೂ ಕೆಲವರು ಸಿಕ್ಕಿದಾಗ ಭೋಜನಮಾಡುತ್ತಾರೆ.

ಮೂಲೈರೇಕೇ ಫಲೈರೇಕೇ ಪುಷ್ಪೈರೇಕೇ ದೃಢವ್ರತಾಃ ।
ವರ್ತಯನ್ತಿ ಯಥಾನ್ಯಾಯಂ ವೈಖಾನಸಗತಿಂ ಶ್ರಿತಾಃ ॥೧೩॥

ನ್ಯಾಯಾನುಸಾರವಾಗಿ ವಾನಪ್ರಸ್ಥಾಶ್ರಮವನ್ನು ಆಶ್ರಯಿಸಿರುವವರಲ್ಲಿ ಕೆಲವರು ಕಂದ-ಮೂಲಗಳಿಂದಲೂ, ಕೆಲವರು ಹಣ್ಣುಗಳಿಂದಲೂ, ದೃಢವ್ರತರಾದ ಇನ್ನೂ ಕೆಲವರು ಕೇವಲ ಪುಷ್ಪಗಳಿಂದಲೂ ಜೀವನನಿರ್ವಹಣೆಯನ್ನು ಮಾಡುತ್ತಾರೆ.

ಏತಾಶ್ಚಾನ್ಯಾಶ್ಚ ವಿವಿಧಾ ದೀಕ್ಷಾಸ್ತೇಷಾಂ ಮನೀಷಿಣಾಮ್ ।
ಚತುರ್ಥಶ್ಚೌಪನಿಷದೋ ಧರ್ಮಃ ಸಾಧಾರಣಃ ಸ್ಮೃತಃ ।
ವಾನಪ್ರಸ್ಥಾದ್ಗೃಹಸ್ಥಾಚ್ಚ ತತೋಽನ್ಯಃ ಸಮ್ಪ್ರವರ್ತತೇ ॥೧೪॥

ವಿದ್ವಾಂಸರಾದ ವಾನಪ್ರಸ್ಥಾಶ್ರಮಿಗಳಿಗೆ ಇವುಗಳೇ ಅಲ್ಲದೇ ಇನ್ನೂ ಅನೇಕವಿಧವಾದ ನಿಯಮಗಳು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿವೆ. ನಾಲ್ಕನೆಯ ಆಶ್ರಮವಾದ ಸಂನ್ಯಾಸಕ್ಕೆ ವಿಹಿತವಾಗಿರುವ ಉಪನಿಷತ್ಪ್ರತಿಪಾದಿತವಾದ ಶಮ, ದಮ, ಉಪರತಿ (ವೈರಾಗ್ಯ), ತಿತಿಕ್ಷೆ (ಸಹನೆ)–ಇವುಗಳು ಎಲ್ಲ ಆಶ್ರಮಗಳಿಗೂ ಸಮಾನವಾದ ಧರ್ಮಗಳೆಂದೇ ಹೇಳಲ್ಪಟ್ಟಿವೆ. ಆದರೆ ನಾಲ್ಕನೆಯ ಆಶ್ರಮವಾದ ಸಂನ್ಯಾಸಕ್ಕೆ ಯಾವ ವಿಶೇಷಧರ್ಮಗಳು ಹೇಳಲ್ಪಟ್ಟಿವೆಯೋ–ಅವು ವಾನಪ್ರಸ್ಥ ಮತ್ತು ಗೃಹಸ್ಥಾಶ್ರಮಧರ್ಮಗಳಿಗಿಂತಲೂ ಬೇರೆಯವೇ ಆಗಿವೆ.

ಅಸ್ಮಿನ್ನೇವ ಯುಗೇ ತಾತ ವಿಪ್ರೈಃ ಸರ್ವಾರ್ಥದರ್ಶಿಭಿಃ ।
ಅಗಸ್ತ್ಯಃ ಸಪ್ತ ಋಷಯೋ ಮಧುಚ್ಛನ್ದೋಽಘಮರ್ಷಣಃ ॥೧೬॥

ಸಾಂಕೃತಿಃ ಸುದಿವಾ ತಣ್ಡಿರ್ಯಥಾವಾಸೋಽಕೃತಶ್ರಮಃ ।
ಅಹೋವೀರ್ಯಸ್ತಥಾ ಕಾವ್ಯಸ್ತಾಂಡ್ಯೋ ಮೇಧಾತಿಥಿರ್ಬುಧಃ ॥೧೭॥

ಬಲವಾನ್ಕರ್ಣನಿರ್ವಾಕಃ ಶೂನ್ಯಪಾಲಃ ಕೃತಶ್ರಮಃ ।
ಏನಂ ಧರ್ಮಂ ಕೃತವನ್ತಸ್ತತಃ ಸ್ವರ್ಗಮುಪಾಗಮನ್ ॥೧೮॥

ಮಗು! ಈ ಯುಗದಲ್ಲಿಯೂ ಸರ್ವಾರ್ಥದರ್ಶಿಗಳಾದ ಬ್ರಾಹ್ಮಣರು ಈ ವಾನಪ್ರಸ್ಥಧರ್ಮದ ಪಾಲನೆಯನ್ನು ಮಾಡಿರುವರು. ಹಾಗೆ ಮಾಡಿರುವವರಲ್ಲಿ ಬಹುಮುಖ್ಯರಾದವರೆಂದರೆ : ಅಗಸ್ತ್ಯ, ಸಪ್ತರ್ಷಿಗಳು, ಮಧುಚ್ಛಂದ, ಅಘಮರ್ಷಣ, ಸಾಂಕೃತಿ, ಸುದಿವಾ, ತಂಡಿ, ಯಥಾವಾಸ, ಅಕೃತಶ್ರಮ, ಅಹೋವೀರ್ಯ, ಕಾವ್ಯ (ಶುಕ್ರಾಚಾರ್ಯ), ತಾಂಡ್ಯ, ಮೇಧಾತಿಥಿ, ಬುಧ, ಶಕ್ತಿಶಾಲಿಯಾದ ಕರ್ಣನಿರ್ವಾಕ, ಶೂನ್ಯಪಾಲ ಮತ್ತು ಕೃತಶ್ರಮ–ಇವರುಗಳು. ಇವರೆಲ್ಲರೂ ಈ ಧರ್ಮವನ್ನಾಚರಿಸಿ ಸ್ವರ್ಗವನ್ನು ಹೊಂದಿದರು.

ತಾತ ಪ್ರತ್ಯಕ್ಷಧರ್ಮಾಣಸ್ತಥಾ ಯಾಯಾವರಾ ಗಣಾಃ ।
ಋಷೀಣಾಮುಗ್ರತಪಸಾಂ ಧರ್ಮನೈಪುಣದರ್ಶಿನಾಮ್ ॥೧೯॥

ಅನ್ಯೇ ಚಾಪರಿಮೇಯಾಶ್ಚ ಬ್ರಾಹ್ಮಣಾ ವನಮಾಶ್ರಿತಾಃ ।
ವೈಖಾನಸಾ ವಾಲಖಿಲ್ಯಾಃ ಸೈಕತಾಶ್ಚ ತಥಾ ಪರೇ ॥೨೦॥

ಧರ್ಮದ ನೈಪುಣ್ಯವನ್ನು ನೋಡಿರುವ, ಉಗ್ರತಪಸ್ವಿಗಳಾದ ಋಷಿಗಳಲ್ಲಿ ಯಾಯಾವರರೆಂಬ ವಾನಪ್ರಸ್ಥಾಶ್ರಮಿಗಳ ಸಮೂಹವೇ ಇದೆ. ಅವರು ವಾನಪ್ರಸ್ಥಾಶ್ರಮಧರ್ಮದ ಫಲವನ್ನು ಪ್ರತ್ಯಕ್ಷವಾಗಿ ಅನುಭವಿಸಿರುತ್ತಾರೆ. ಅವರೂ ಮತ್ತು ಅಸಂಖ್ಯಾತರಾದ ವೈಖಾನಸ, ವಾಲಖಿಲ್ಯ ಮತ್ತು ಸೈಕತರೆಂಬ ಇನ್ನೂ ಅನೇಕ ಬ್ರಾಹ್ಮಣರೂ ವನವನ್ನು ಆಶ್ರಯಿಸಿ ವಾನಪ್ರಸ್ಥಾಶ್ರಮಧರ್ಮವನ್ನು ಪರಿಪಾಲಿಸುತ್ತಿದ್ದಾರೆ.

ಕರ್ಮಭಿಸ್ತೇ ನಿರಾನನ್ದಾ ಧರ್ಮನಿತ್ಯಾ ಜಿತೇನ್ದ್ರಿಯಾಃ ।
ಗತಾಃ ಪ್ರತ್ಯಕ್ಷಧರ್ಮಾಣಸ್ತೇ ಸರ್ವೇ ವನಮಾಶ್ರಿತಾಃ ।
ಅನಕ್ಷತ್ರಾಸ್ತ್ವನಾಧೃಷ್ಯಾ ದೃಶ್ಯನ್ತೇ ಜ್ಯೋತಿಷಾಂ ಗಣಾಃ ॥೨೧॥

ಕಾಮ್ಯಕರ್ಮಗಳಿಂದ ಅವರು ಆನಂದಪಡುತ್ತಿರಲಿಲ್ಲ. ವಾನಪ್ರಸ್ಥಾಶ್ರಮಿಗಳಾದ ಅವರೆಲ್ಲರೂ ಜಿತೇಂದ್ರಿಯರಾಗಿಯೂ ಸದಾ ಧರ್ಮತತ್ಪರರಾಗಿಯೂ ಇದ್ದರು. ಅವರೀಗ ನಕ್ಷತ್ರಗಳಿಂದ ಭಿನ್ನರಾಗಿ ಮತ್ತು ಎದುರಿಸಲಾಗದ ಜ್ಯೋತಿರ್ಮಯವಾದ ಆಕಾರಸಮೂಹಗಳಾಗಿ ಕಾಣಿಸಿಕೊಳ್ಳುತ್ತಾರೆ.

ಜರಯಾ ಚ ಪರಿದ್ಯೂನೋ ವ್ಯಾಧಿನಾ ಚ ಪ್ರಪೀಡಿತಃ ॥೨೨॥

ಚತುರ್ಥೇ ಚಾಯುಷಃ ಶೇಷೇ ವಾನಪ್ರಸ್ಥಾಶ್ರಮಂ ತ್ಯಜೇತ್ ।
ಸದ್ಯಸ್ಕಾರಾಂ ನಿರೂಪ್ಯೇಷ್ಟಿಂ ಸರ್ವವೇದಸದಕ್ಷಿಣಾಮ್ ॥೨೩॥

ಮುಪ್ಪಿನಿಂದ ದುರ್ಬಲನಾದ ಮತ್ತು ನಾನಾವಿಧವಾದ ವ್ಯಾಧಿಗಳಿಂದ ಪೀಡಿತನಾದ ವಾನಪ್ರಸ್ಥಾಶ್ರಮಿಯು ಆಯುಸ್ಸಿನ ಮೂರನೆಯ ಭಾಗವು ಮುಗಿದು ನಾಲ್ಕನೆಯ ಭಾಗವು ಪ್ರಾರಂಭವಾದೊಡನೆಯೇ (೭೫ ವರ್ಷಗಳು ಕಳೆದೊಡನೆಯೇ) ವಾನಪ್ರಸ್ಥಾಶ್ರಮವನ್ನು ತ್ಯಜಿಸಬೇಕು ಮತ್ತು ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕು. ಹಾಗೆ ಸಂನ್ಯಾಸದ ದೀಕ್ಷೆಯನ್ನು ಸ್ವೀಕರಿಸುವಾಗ ಒಂದೇ ದಿನದಲ್ಲಿ ಮುಗಿಯುವ ಯಜ್ಞವನ್ನು ಮಾಡಿ ತನ್ನಲ್ಲಿರುವ ಸರ್ವಸ್ವವನ್ನೂ ದಕ್ಷಿಣಾರೂಪದಲ್ಲಿ ದಾನಮಾಡಬೇಕು.

ಆತ್ಮಯಾಜೀ ಸೋಽತ್ಮರತಿರಾತ್ಮಕ್ರೀಡಾತ್ಮಸಂಶ್ರಯಃ ।
ಆತ್ಮನ್ಯಗ್ನೀನ್ಸಮಾರೋಪ್ಯ ತ್ಯಕ್ತ್ವಾ ಸರ್ವಪರಿಗ್ರಹಾನ್ ॥೨೪॥

ಸಾದ್ಯಸ್ಕಾಂಶ್ಚ ಯಜೇದ್ಯಜ್ಞಾನಿಷ್ಟೀಶ್ಚೈವೇಹ ಸರ್ವದಾ ।
ಯದೈವ ಯಾಜಿನಾಂ ಯಜ್ಞಾದಾತ್ಮನೀಜ್ಯಾ ಪ್ರವರ್ತತೇ ॥೨೫॥

ಅನಂತರ ಅವನು ಆತ್ಮಯಾಗಮಾಡಬೇಕು. ಆತ್ಮನಲ್ಲಿಯೇ ರತನಾಗಿರಬೇಕು. ಆತ್ಮದೊಡನೆಯೇ ಕ್ರೀಡೆಯಾಡಬೇಕು. ಎಲ್ಲ ಪ್ರಕಾರಗಳಿಂದಲೂ ಆತ್ಮನಲ್ಲಿಯೇ ಆಶ್ರಯವನ್ನು ಪಡೆದಿರಬೇಕು. ಅಗ್ನಿಗಳನ್ನು ಆತ್ಮನಲ್ಲಿಯೇ ಸಮಾರೋಪಗೊಳಿಸಬೇಕು. ಎಲ್ಲ ವಿಧವಾದ ಪರಿಗ್ರಹಗಳನ್ನೂ ತ್ಯಜಿಸಬೇಕು. ಆಗಿಂದಾಗಲೇ ಮಾಡಿ ಮುಗಿಸಬಹುದಾದ ಬ್ರಹ್ಮಯಜ್ಞಾದಿಗಳನ್ನೂ ಇಷ್ಟಿಗಳನ್ನೂ ಮಾಡಬೇಕು. ಯಾಜ್ಞಿಕರು ಮಾಡುವ ಕರ್ಮಯಜ್ಞವನ್ನು ಬಿಟ್ಟು ಆತ್ಮಯಜ್ಞದಲ್ಲಿ ತೊಡಗಬೇಕು.

ತ್ರೀಂಶ್ಚೈವಾಗ್ನೀನ್ಯಜೇತ್ಸಮ್ಯಗಾತ್ಮನ್ಯೇವಾತ್ಮಮೋಕ್ಷಣಾತ್ ।
ಪ್ರಾಣೇಭ್ಯೋ ಯಜುಷಃ ಪಞ್ಚ ಷಟ್ಪ್ರಾಶ್ನೀಯಾದಕುತ್ಸಯನ್ ॥೨೬॥

ಆತ್ಮಯಜ್ಞದ ಸ್ವರೂಪವು ಹೀಗಿದೆ : ತನ್ನ ಆತ್ಮನಲ್ಲಿಯೇ ಮೂರು ಅಗ್ನಿಗಳನ್ನೂ ವಿಧಿಪೂರ್ವಕವಾಗಿ ಸಮಾರೋಪಮಾಡಿಕೊಂಡು ದೇಹಾವಸಾನಪರ್ಯಂತವಾಗಿ ಪ್ರಾಣಾಗ್ನಿಹೋತ್ರದ ವಿಧಿಯಿಂದ ಶ್ರದ್ಧೆಯಿಂದ ಯಜ್ಞವನ್ನು ಮಾಡುತ್ತಿರಬೇಕು. ಯಜುರ್ವೇದದ 'ಪ್ರಾಣಾಯ ಸ್ವಾಹಾ' ಮುಂತಾದ ಮಂತ್ರಗಳನ್ನು ಉಚ್ಚರಿಸುತ್ತಾ ಐದು ಅಥವಾ ಆರು ಬಾರಿ ಅನ್ನವನ್ನು ತಿನ್ನಬೇಕು. ಅನಂತರ ಉಳಿದ ಅನ್ನವನ್ನು ರುಚಿಯಾಗಿರಲೀ– ರುಚಿಯಿಲ್ಲದಿರಲಿ ನಿಂದಿಸದೇ ತಿನ್ನಬೇಕು.*

ಕೇಶಲೋಮನಖಾನ್ವಾಪ್ಯ ವಾನಪ್ರಸ್ಥೋ ಮುನಿಸ್ತತಃ ।
ಆಶ್ರಮಾದಾಶ್ರಮಂ ಪುಣ್ಯಂ ಪೂತೋ ಗಚ್ಛತಿ ಕರ್ಮಭಿಃ ॥೨೭॥

---

* ಪ್ರಾಣಾಗ್ನಿಹೋತ್ರವನ್ನು ಮಾಡದವರೇ ಇಲ್ಲ. ಆದರೆ ಇದರ ರಹಸ್ಯವು ಮಾತ್ರ ಹೆಚ್ಚು ಜನರಿಗೆ ತಿಳಿದಿಲ್ಲ. ಊಟಮಾಡುವ ಮೊದಲು ಎಲೆಯ ಸುತ್ತಲೂ ಪರಿಷಿಂಚನ ಮಾಡಿ (ನೀರು ಸುತ್ತಿ) ಆರು ಬಾರಿ ಅನ್ನವನ್ನು ತಿನ್ನುವ ಅಭ್ಯಾಸವೇನೋ ಕೆಲವರಲ್ಲಿ

ವಾನಪ್ರಸ್ಥಾಶ್ರಮಿಯಾದ ಮುನಿಯು ಕೇಶ, ಲೋಮ ಮತ್ತು ಉಗುರುಗಳನ್ನು ತೆಗೆಯಿಸಿ, ಸಂನ್ಯಾಸದೀಕ್ಷೆಗೆ ಸಂಬಂಧಿಸಿದ ವಿರಜಾ ಹೋಮಾದಿಗಳಿಂದ ಪವಿತ್ರನಾಗಿ, ವಾನಪ್ರಸ್ಥಾಶ್ರಮದಿಂದ ಪುಣ್ಯಮಯ ವಾದ ಸಂನ್ಯಾಸಾಶ್ರಮಕ್ಕೆ ಪದಾರ್ಪಣಮಾಡಬೇಕು.

ಅಭಯಂ ಸರ್ವಭೂತೇಭ್ಯೋ ದತ್ತ್ವಾ ಯಃ ಪ್ರವ್ರಜೇದ್ದ್ವಿಜಃ ।
ಲೋಕಾಸ್ತೇಜೋಮಯಾಸ್ತಸ್ಯ ಪ್ರೇತ್ಯ ಚಾನನ್ತ್ಯಮಶ್ನುತೇ ॥೨೮॥

ಯಾವ ಬ್ರಾಹ್ಮಣನು ಎಲ್ಲ ಪ್ರಾಣಿಗಳಿಗೂ ಅಭಯವನ್ನಿತ್ತು ಸಂನ್ಯಾಸಿಯಾಗಿ ಗೃಹಾದಿಗಳನ್ನು ತ್ಯಜಿಸಿ ಹೊರಟುಹೋಗುವನೋ– ಅವನು ಮರಣಾನಂತರದಲ್ಲಿ ತೇಜೋಮಯವಾದ ಲೋಕಗಳಿಗೆ ಹೋಗುತ್ತಾನೆ. ಕಡೆಗೆ ಮೋಕ್ಷವನ್ನು ಹೊಂದುತ್ತಾನೆ.

ಸುಶೀಲವೃತ್ತೋ ವ್ಯಪನೀತಕಲ್ಮಷೋ
ನ ಚೇಹ ನಾಮುತ್ರ ಚ ಕರ್ತುಮೀಹತೇ ।
ಅರೋಷಮೋಹೋ ಗತಸಂಧಿವಿಗ್ರಹೋ
ಭವೇದುದಾಸೀನವದಾತ್ಮವಿನ್ನರಃ ॥೨೯॥

ಆತ್ಮಜ್ಞಾನಿಯಾದ ಪುರುಷನು–ಸದಾಚಾರಸಂಪನ್ನನೂ ನಿಷ್ಪಾಪನೂ ಆಗಿರುತ್ತಾನೆ. ಈ ಲೋಕದಲ್ಲಾಗಲೀ ಪರಲೋಕದಲ್ಲಾಗಲೀ ಯಾವ ಕರ್ಮಗಳನ್ನೂ (ಕಾಮ್ಯಕರ್ಮಗಳನ್ನೂ) ಮಾಡಲು ಅವನು ಅಪೇಕ್ಷಿಸುವು ದಿಲ್ಲ. ಕ್ರೋಧ-ಮೋಹಗಳು ಅವನಲ್ಲಿರುವುದಿಲ್ಲ. ಇತರರೊಡನೆ ಸ್ನೇಹ ಸಂಬಂಧವನ್ನೂ ಇಟ್ಟುಕೊಳ್ಳುವುದಿಲ್ಲ. ಕಲಹವನ್ನೂ ಮಾಡುವುದಿಲ್ಲ. ಎಲ್ಲ ವಿಷಯಗಳಲ್ಲಿಯೂ ಉದಾಸೀನನಂತೆಯೇ ಇದ್ದುಬಿಡುತ್ತಾನೆ.

ಮಾತ್ರ ಅಲ್ಲಲ್ಲಿ ಉಳಿದಿದೆ. ನಮ್ಮ ಸನಾತನಸಂಪ್ರದಾಯದಲ್ಲಿ ಊಟವೂ ಒಂದು ಯಜ್ಞ; ತುಪ್ಪದಿಂದ ಕೂಡಿದ ಅನ್ನವೇ ಹವಿಸ್ಸು. ಮೊದಲು ಗಾಯತ್ರೀಮಹಾ ಮಂತ್ರದಿಂದ ಸಂಪ್ರೋಕ್ಷಣೆ. ಅನಂತರ ಅನ್ನವನ್ನು ಋತ ಮತ್ತು ಸತ್ಯಗಳಿಂದ ಸುತ್ತುಗಟ್ಟುವುದು ಅಥವಾ ಬಂಧಿಸುವುದು. ಅನಂತರ ಮೂರು ಅಥವಾ ಐದು ಪ್ರಕಾರವಾದ ಬಲಿಹರಣ. ಪ್ರಾಣಾಗ್ನಿಹೋತ್ರಕ್ಕೆ ಮೊದಲು ಅಮೃತದ ಪ್ರಾಶನ. ಅನಂತರ ಪ್ರಾಣಾಗ್ನಿಹೋತ್ರಪ್ರಾರಂಭ. ಓಂ ಪ್ರಾಣಾಯ ಸ್ವಾಹಾ–ಓಂ ಅಪಾನಾಯ ಸ್ವಾಹಾ–

ಯಮೇಷು ಚೈವಾನುಗತೇಷು ನ ವ್ಯಥೇ
ಸ್ವಶಾಸ್ತ್ರಸೂತ್ರಾಹುತಿಮನ್ತ್ರವಿಕ್ರಮಃ ।
ಭವೇದ್ಯಥೇಷ್ಟಾಗತಿರಾತ್ಮವೇದಿನಿ
ನ ಸಂಶಯೋ ಧರ್ಮಪರೇ ಜಿತೇನ್ದ್ರಿಯೇ ॥೩೦॥

ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹಗಳೆಂಬ ಯಮಗಳ ಪರಿಪಾಲನೆಯಲ್ಲಿಯೂ – ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರಭಕ್ತಿಗಳೆಂಬ ನಿಯಮಗಳ ಅನುಷ್ಠಾನದಲ್ಲಿಯೂ ಆತ್ಮಜ್ಞಾನಿಯಾದವನು ವ್ಯಥೆಪಡುವುದಿಲ್ಲ. ಸಂನ್ಯಾಸವಿಧಿಯ ಬಗ್ಗೆ ಶಾಸ್ತ್ರದಲ್ಲಿರುವ ಸೂತ್ರಗಳಿಗೆ ಅನುಸಾರವಾಗಿ ತ್ಯಾಗಮಯವಾದ ಅಗ್ನಿಯಲ್ಲಿ ತನ್ನ ಸರ್ವಸ್ವವನ್ನೂ ಆಹುತಿಯನ್ನಾಗಿ ಹಾಕುವುದರಲ್ಲಿ ಉತ್ಸಾಹಿಯಾಗಿರುತ್ತಾನೆ. ಧರ್ಮಪರನಾದ, ಜಿತೇಂದ್ರಿಯನಾದ ಅಂತಹ ಆತ್ಮಜ್ಞಾನಿಗೆ ಅವನು ಆಶಿಸಿದ ಸದ್ಗತಿಯು ಸಿಕ್ಕುತ್ತದೆ.

ತತಃ ಪರಂ ಶ್ರೇಷ್ಠಮತೀವ ಸದ್ಗುಣೈ-
ರಧಿಷ್ಠಿತಂ ತ್ರೀನಧಿವೃತ್ತಿಮುತ್ತಮಮ್ ।
ಚತುರ್ಥಮುಕ್ತಂ ಪರಮಾಶ್ರಮಂ ಶೃಣು
ಪ್ರಕೀರ್ತ್ಯಮಾನಂ ಪರಮಂ ಪರಾಯಣಮ್ ॥೩೧॥

ತನ್ನಲ್ಲಿರುವ ವಿಶೇಷವಾದ ಸದ್ಗುಣಗಳಿಂದ ಯಾವುದು ಅತಿಶ್ರೇಷ್ಠವೆಂದು ಪರಿಗಣಿಸಲ್ಪಟ್ಟಿರುವುದೋ, ಹಿಂದೆ ಹೇಳಿದ ಮೂರು ಆಶ್ರಮಗಳಿಗಿಂತಲೂ ಅಧಿಕಗುಣವುಳ್ಳದ್ದಾಗಿರುವುದೋ, ಯಾವ ಆಶ್ರಮದಲ್ಲಿ ಶಮ-

---

ಓಂ ವ್ಯಾನಾಯ ಸ್ವಾಹಾ–ಓಂ ಉದಾನಾಯ ಸ್ವಾಹಾ–ಓಂ ಸಮಾನಾಯ ಸ್ವಾಹಾ. ಅಗ್ನಿಸ್ವರೂಪವಾದ ಐದು ವಾಯುಗಳೂ ನಮ್ಮ ಶರೀರದಲ್ಲಿವೆ. ಅವುಗಳನ್ನು ಗುರುತಿಸಿಕೊಂಡು ಹೋಮಮಾಡುವಷ್ಟು ಅನ್ನವನ್ನೇ ಬಾಯಲ್ಲಿ ಹಾಕಿಕೊಂಡು ನುಂಗಬೇಕು. ಏಕಾಗ್ರತೆಯಿಂದ ಮಾಡಿದರೆ ಹವಿಸ್ಸು ಪ್ರಾಣಾಗ್ನಿಗಳಿಗೆ ತಲುಪುತ್ತದೆ. ಆರನೆಯದು–ಬ್ರಹ್ಮಣೇ ಸ್ವಾಹಾ. ಅಂತರ್ಯಾಮಿಯಾಗಿರುವ ಪರಬ್ರಹ್ಮಪರಮಾತ್ಮನಿಗೆ ಅರ್ಪಿಸತಕ್ಕುದು. ಈ ಅಗ್ನಿಹೋತ್ರವು ಮುಗಿದನಂತರ ಅನ್ನವನ್ನು ಊಟಮಾಡಬೇಕು. ಕಡೆಯಲ್ಲಿ ಅಮೃತದಿಂದಲೇ ಊಟಮಾಡಿದುದನ್ನು ಮುಚ್ಚಬೇಕು. ಆಗ ಊಟಮಾಡಿದ ಅನ್ನವೆಲ್ಲವೂ ಅಮೃತಮಯವೇ ಆಗುತ್ತದೆ.

ದಮಾದಿ ಗುಣಗಳಿಗೆ ಹೆಚ್ಚಿನ ವಿಕಾಸವುಂಟಾಗುವುದೋ, ಯಾವುದು ಎಲ್ಲರಿಗೂ ಶ್ರೇಷ್ಠವಾದ ಆಶ್ರಯಸ್ಥಾನವಾಗಿರುವುದೋ–ಅಂತಹ ಚತುರ್ಥಾಶ್ರಮದ ವರ್ಣನೆಯನ್ನು ಮಾಡಿರುವೆನು. ಪುನಃ ಆ ಆಶ್ರಮದ ಮಹತ್ತ್ವವನ್ನೇ ವಿಶೇಷರೂಪದಲ್ಲಿ ಪ್ರತಿಪಾದನೆಮಾಡುತ್ತೇನೆ. ಏಕಾಗ್ರಚಿತ್ತನಾಗಿ ಕೇಳು."

೨೪೪ನೆಯ ಅಧ್ಯಾಯವು ಮುಗಿಯಿತು.

೨೪೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಸಂನ್ಯಾಸಿಯ ಆಚರಣೆಗಳು ಮತ್ತು ಜ್ಞಾನವಂತನಾದ ಸಂನ್ಯಾಸಿಯ ಪ್ರಶಂಸೆ

ಧರ್ಮಜ! ಶುಕನು ಪ್ರಶ್ನಿಸುತ್ತಾನೆ :

ವರ್ತಮಾನಸ್ತಥೈವಾತ್ರ ವಾನಪ್ರಸ್ಥಾಶ್ರಮೇ ಯಥಾ ।
ಯೋಕ್ತವ್ಯೋಽತ್ಮಾ ಕಥಂ ಶಕ್ತ್ಯಾ ವೇದ್ಯಂ ವೈ ಕಾಂಕ್ಷತಾ ಪರಮ್ ॥೧॥

"ತಂದೆಯೇ! ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ್ದರೂ ವಾನಪ್ರಸ್ಥಾಶ್ರಮಿಯಂತೆಯೇ ಬ್ರಹ್ಮಯಜ್ಞಾದಿಗಳಲ್ಲಿ ನಿರತನಾಗಿರುವ, ವೇದ್ಯವಾದ ಸ್ಥಾನವನ್ನು (ಪರಬ್ರಹ್ಮವಸ್ತುವನ್ನು) ಕಂಡುಕೊಳ್ಳಬೇಕೆಂಬ ಆಕಾಂಕ್ಷೆಯಿಂದಿರುವ ಸಂನ್ಯಾಸಿಯು ತನ್ನ ಶಕ್ತಿಗೆ ಅನುಸಾರವಾಗಿ ಮನಸ್ಸನ್ನು ಪರಮಾತ್ಮ ಚಿಂತನೆಯಲ್ಲಿ ಹೇಗೆ ತೊಡಗಿಸಬೇಕು?"

ವ್ಯಾಸರು ಹೇಳುತ್ತಾರೆ :

ಪ್ರಾಪ್ಯ ಸಂಸ್ಕಾರಮೇತಾಭ್ಯಾಮಾಶ್ರಮಾಭ್ಯಾಂ ತತಃ ಪರಮ್ ।
ಯತ್ಕಾರ್ಯಂ ಪರಮಾರ್ಥಂ ತು ತದಿಹೈಕಮನಾಃ ಶೃಣು ॥೨॥

"ಶುಕ! ಬ್ರಹ್ಮಚರ್ಯ ಮತ್ತು ಗೃಹಸ್ಥಾಶ್ರಮಧರ್ಮಗಳ ಮೂಲಕವಾಗಿ ಸಂಸ್ಕಾರವನ್ನು ಪಡೆದನಂತರ ಪರಮಾರ್ಥಪ್ರಾಪ್ತಿಗಾಗಿ ಯಾವ ಕರ್ತವ್ಯಗಳನ್ನು ಮಾಡಬೇಕಾಗಿದೆಯೆಂಬುದನ್ನು ಹೇಳುವೆನು ; ಏಕಾಗ್ರಚಿತ್ತನಾಗಿ ಕೇಳು.

ಕಷಾಯಂ ಪಾಚಯಿತ್ವಾಶು ಶ್ರೇಣಿಸ್ಥಾನೇಷು ಚ ತ್ರಿಷು ।
ಪ್ರವ್ರಜೇಚ್ಚ ಪರಂ ಸ್ಥಾನಂ ಪಾರಿವ್ರಾಜ್ಯಮನುತ್ತಮಮ್ ॥೩॥

ಒಂದು-ಎರಡು-ಮೂರು ಎಂಬ ಮೂರು ಶ್ರೇಣಿಗಳ (ಮೆಟ್ಟಲು) ಸ್ಥಾನದಲ್ಲಿರುವ ಬ್ರಹ್ಮಚರ್ಯ-ಗೃಹಸ್ಥ-ವಾನಪ್ರಸ್ಥಾಶ್ರಮಗಳಲ್ಲಿರುವಾಗ ರಾಗ-ದ್ವೇಷಾದಿ ದೋಷಗಳನ್ನು ಬೇಯಿಸಿ ಅವುಗಳೆಲ್ಲವನ್ನೂ ನಷ್ಟಗೊಳಿಸಿದ ಬಳಿಕ ಉತ್ತಮೋತ್ತಮವಾದ ನಾಲ್ಕನೆಯ ಆಶ್ರಮವಾದ ಸಂನ್ಯಾಸವನ್ನು ಸ್ವೀಕರಿಸಬೇಕು.

ತದ್ಭವಾನೇವಮಭ್ಯಸ್ಯ ವರ್ತತಾಂ ಶ್ರೂಯತಾಂ ತಥಾ ।
ಏಕ ಏವ ಚರೇದ್ಧರ್ಮಂ ಸಿದ್ಧ್ಯರ್ಥಮಸಹಾಯವಾನ್ ॥೪॥

ಶುಕ! ನೀನು ಈ ಸಂನ್ಯಾಸಧರ್ಮದ ನಿಯಮಗಳನ್ನು ಕೇಳು ; ಅದನ್ನು ಅಭ್ಯಾಸಮಾಡು ಮತ್ತು ಅದರಂತೆಯೇ ವ್ಯವಹರಿಸು. ಸಂನ್ಯಾಸಿಯಾದವನು ಸಿದ್ಧಿಯನ್ನು ಪಡೆಯುವ ಸಲುವಾಗಿ ಯಾರೊಬ್ಬರ ಸಹಾಯವನ್ನೂ ತೆಗೆದುಕೊಳ್ಳದೇ ಏಕಾಕಿಯಾಗಿ ಸಂನ್ಯಾಸಧರ್ಮವನ್ನು ಪರಿಪಾಲಿಸಬೇಕು.

ಏಕಶ್ಚರತಿ ಯಃ ಪಶ್ಯನ್ನ ಜಹಾತಿ ನ ಹೀಯತೇ ।
ಅನಗ್ನಿರನಿಕೇತಶ್ಚ ಗ್ರಾಮಮನ್ನಾರ್ಥಮಾಶ್ರಯೇತ್ ॥೫॥

ಯಾವನು ವಿಶ್ವವೆಲ್ಲವನ್ನೂ ಸಮಭಾವದಿಂದ ನೋಡುತ್ತಾ ಏಕಾಕಿಯಾಗಿ ತಿರುಗುತ್ತಿರುವನೋ–ಅಂತಹ ಸಂನ್ಯಾಸಿಯು ಯಾರನ್ನೂ ತ್ಯಾಗ ಮಾಡುವುದಿಲ್ಲ ; ಅವನನ್ನೂ ಇತರರು ತ್ಯಾಗಮಾಡುವುದಿಲ್ಲ. ಅವನು ಅಗ್ನಿಯಿಲ್ಲದವನೂ ಮನೆ-ಮಠಾದಿಗಳಿಂದ ರಹಿತನೂ ಆಗಿರಬೇಕು. ಅನ್ನಕ್ಕಾಗಿ ಮಾತ್ರವೇ ಗ್ರಾಮವನ್ನು ಆಶ್ರಯಿಸಬೇಕು.

ಅಶ್ವಸ್ತನವಿಧಾತಾ ಸ್ಯಾನ್ಮುನಿರ್ಭಾವಸಮಾಹಿತಃ ।
ಲಘ್ವಾಶೀ ನಿಯತಾಹಾರಃ ಸಕೃದನ್ನನಿಷೇವಿತಾ ॥೬॥

ಸಂನ್ಯಾಸಿಯಾದವನು ಮರುದಿನಕ್ಕಾಗಿ ಆಹಾರವನ್ನು ಸಂಗ್ರಹಿಸಬಾರದು. ಚಿತ್ತೈಕಾಗ್ರಭಾವದಲ್ಲಿದ್ದು ಮೌನಿಯಾಗಿರಬೇಕು. ಸ್ವಲ್ಪವೇ

ಆಹಾರವನ್ನು ನಿಯತವಾದ ಕಾಲದಲ್ಲಿ ಮಾತ್ರವೇ ತಿನ್ನಬೇಕು. ದಿನದಲ್ಲಿ ಒಂದೇ ಬಾರಿ ಊಟಮಾಡಬೇಕು.

ಕಪಾಲಂ ವೃಕ್ಷಮೂಲಾನಿ ಕುಚೈಲಮಸಹಾಯತಾ ।
ಉಪೇಕ್ಷಾ ಸರ್ವಭೂತಾನಾಮೇತಾವದ್ಭಿಕ್ಷುಲಕ್ಷಣಮ್ ॥೭॥

ಭಿಕ್ಷಾಪಾತ್ರೆಯನ್ನೂ ಮತ್ತು ಕಮಂಡಲುವನ್ನೂ ಹಿಡಿದಿರಬೇಕು. ವೃಕ್ಷಗಳ ಬುಡದಲ್ಲಿ ವಾಸಮಾಡಬೇಕು. ಉತ್ತಮವಲ್ಲದ ಸಾಧಾರಣವಾದ ಕಾವಿಯ ಬಟ್ಟೆಯನ್ನೇ ಧರಿಸಿರಬೇಕು. ಸಹಾಯಕ್ಕಾಗಿ ಯಾರನ್ನೂ ಇಟ್ಟುಕೊಳ್ಳಬಾರದು. (ಏಕಾಕಿಯಾಗಿರಬೇಕು.) ಸರ್ವಪ್ರಾಣಿಗಳ ವಿಷಯ ದಲ್ಲಿಯೂ ಉದಾಸೀನಭಾವದಿಂದಿರಬೇಕು. ಇವು ಸಂನ್ಯಾಸಿಯ ಲಕ್ಷಣ ಗಳಾಗಿವೆ.

ಯಸ್ಮಿನ್ವಾಚಃ ಪ್ರಾವಿಶನ್ತಿ ಕೂಪೇ ತ್ರಸ್ತಾ ದ್ವಿಪಾ ಇವ ।
ನ ವಕ್ತಾರಂ ಪುನರ್ಯಾನ್ತಿ ಸ ಕೈವಲ್ಯಾಶ್ರಮೇ ವಸೇತ್ ॥೮॥

ಭಯಗೊಂಡ ಆನೆಗಳು ಆಳವಾದ ಹೊಂಡದಲ್ಲಿ ಬಿದ್ದನಂತರ ಮೇಲಕ್ಕೆ ಬರಲು ಸಾಧ್ಯವಾಗದೆ ಅಲ್ಲಿಯೇ ಉಳಿದುಕೊಳ್ಳುತ್ತವೆಯಷ್ಟೆ! ಹಾಗೆಯೇ ಇತರರು ಆಡುವ ನಿಂದಾ-ಸ್ತುತಿರೂಪವಾದ ಮಾತುಗಳು ಯಾವನನ್ನು ಪ್ರವೇಶಿಸಿದ ಬಳಿಕ ಮೇಲಕ್ಕೆ ಹಿಂದಿರುಗುವುದಿಲ್ಲವೋ– ಅಂತಹವನು ಸಂನ್ಯಾಸಾಶ್ರಮ (ಮೋಕ್ಷಾಶ್ರಮ) ವನ್ನು ಸ್ವೀಕರಿಸಬೇಕು. (ತೆಗಳಿಕೆಯ ಮಾತುಗಳಿಗೆ ಕುಗ್ಗದವನೂ, ಹೊಗಳಿಕೆಯ ಮಾತುಗಳಿಗೆ ಹಿಗ್ಗದವನು ಸಂನ್ಯಾಸಿಯಾಗಲು ಯೋಗ್ಯನು.)

ನೈವ ಪಶ್ಯೇನ್ನ ಶೃಣುಯಾದವಾಚ್ಯಂ ಜಾತು ಕಸ್ಯಚಿತ್ ।
ಬ್ರಾಹ್ಮಣಾನಾಂ ವಿಶೇಷೇಣ ನೈವ ಬ್ರೂಯಾತ್ಕಥಂಚನ ॥೯॥

ಸಂನ್ಯಾಸಿಯಾದವನು ನಿಂದಕನನ್ನು ನೋಡಲೇಬಾರದು. ಅವ ನಾಡುವ ಮಾತುಗಳನ್ನೂ ಕೇಳಲೂ ಬಾರದು. ಯಾರ ವಿಷಯದಲ್ಲೇ ಆದರೂ ಅವಾಚ್ಯವಾದ ಮಾತುಗಳನ್ನು ಆಡಬಾರದು. ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣರ ವಿಷಯದಲ್ಲಿ ಯಾವುದೇ ಸಂದರ್ಭದಲ್ಲಿಯೂ ಕೆಟ್ಟ ಮಾತುಗಳನ್ನಾಡಬಾರದು.

ಯದ್ಬ್ರಾಹ್ಮಣಸ್ಯ ಕುಶಲಂ ತದೇವ ಸತತಂ ವದೇತ್ ।
ತೂಷ್ಣೀಮಾಸೀತ ನಿನ್ದಾಯಾಂ ಕುರ್ವನ್ಭೈಷಜ್ಯಮಾತ್ಮನಃ ॥೧೦॥

ವೇದಾಧ್ಯಯನಶೀಲನಾದ ಬ್ರಾಹ್ಮಣನಿಗೆ ಯಾವುದು ಹಿತವಾಗುವುದೋ ಅದನ್ನೇ ಯಾವಾಗಲೂ ಹೇಳುತ್ತಿರಬೇಕು. ನಿಂದೆಯ ಮಾತುಗಳನ್ನು ಕೇಳುತ್ತಿದ್ದರೂ ಅದನ್ನು ಭವರೋಗನಿವಾರಣೆಗೆ ಔಷಧಪ್ರಾಯವನ್ನಾಗಿ ಭಾವಿಸಿ ಸುಮ್ಮನಿದ್ದುಬಿಡಬೇಕು. (ಅಂತಹ ಸಮಯದಲ್ಲಿ ಉದ್ವೇಗಗೊಳ್ಳದೇ ಸಹನೆಯನ್ನು ತಾಳುವುದೇ ಮನಸ್ಸಿಗೆ ಚಿಕಿತ್ಸೆಯಾಗಿರುತ್ತದೆ.)

ಯೇನ ಪೂರ್ಣಮಿವಾಕಾಶಂ ಭವತ್ಯೇಕೇನ ಸರ್ವದಾ ।
ಶೂನ್ಯಂ ಯೇನ ಜನಾಕೀರ್ಣಂ ತಂ ದೇವಾ ಬ್ರಾಹ್ಮಣಂ ವಿದುಃ ॥೧೧॥

ಯಾವನು ಏಕಾಕಿಯಾಗಿದ್ದರೂ ಬ್ರಹ್ಮಭಾವದಿಂದ ಕೂಡಿರುವುದರಿಂದ ಪೂರ್ಣವಾದ ಆಕಾಶದಂತೆ ಸರ್ವವ್ಯಾಪಿಯಾಗಿರುವನೋ ಮತ್ತು ಯಾವನು ಅಸಂಗನಾಗಿರುವುದರಿಂದ ಜನರಿಂದ ವ್ಯಾಪ್ತವಾಗಿರುವ ಜಗತ್ತನ್ನೂ ಶೂನ್ಯವೆಂದೇ ಭಾವಿಸುವನೋ–ಅಂತಹವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ಯೇನ ಕೇನಚಿದಾಚ್ಛನ್ನೋ ಯೇನ ಕೇನಚಿದಾಶಿತಃ ।
ಯತ್ರ ಕ್ವಚನ ಶಾಯೀ ಚ ತಂ ದೇವಾ ಬ್ರಾಹ್ಮಣಂ ವಿದುಃ ॥೧೨॥

ಯಾವನು ಯಾವುದು ಸಿಕ್ಕಿದರೆ ಅದರಿಂದಲೇ ತನ್ನ ಶರೀರವನ್ನು ಮುಚ್ಚಿಕೊಳ್ಳುವನೋ, ಹಸಿವಾದ ಸಮಯದಲ್ಲಿ ಯಾವುದು ಸಿಕ್ಕಿದರೆ ಅದನ್ನೇ ತಿನ್ನುವನೋ, ಎಲ್ಲೆಂದರಲ್ಲಿ ಮಲಗುವನೋ–ಅಂತಹವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ಅಹೇರಿವ ಗಣಾದ್ಭೀತಃ ಸೌಹಿತ್ಯಾನ್ನರಕಾದಿವ ।
ಕುಣಪಾದಿವ ಚ ಸ್ತ್ರೀಭ್ಯಸ್ತಂ ದೇವಾ ಬ್ರಾಹ್ಮಣಂ ವಿದುಃ ॥೧೩॥

ಹಾವನ್ನು ಕಂಡರೆ ಭಯಪಡುವಂತೆ ಯಾವನು ಜನಸಮುದಾಯವನ್ನು ಕಂಡರೆ ಭಯಪಡುವನೋ, ನರಕಕ್ಕೆ ಭಯಪಡುವಂತೆ ಮೃಷ್ಟಾನ್ನ ಭೋಜನಮಾಡಲು ಭಯಪಡುವನೋ, ಹೆಣವನ್ನು ಕಂಡು ದೂರವಾಗಿ

ನಿಲ್ಲುವಂತೆ ಸ್ತ್ರೀಸಹವಾಸಕ್ಕೆ ಹೆದರಿ ದೂರನಿಲ್ಲುವನೋ–ಅಂತಹವನನ್ನು ದೇವತೆಗಳು ಬ್ರಾಹ್ಮಣನೆಂದು ಭಾವಿಸುತ್ತಾರೆ.

ನ ಕ್ರುದ್ಧ್ಯೇನ್ನ ಪ್ರಹೃಷ್ಯೇಚ್ಚ ಮಾನಿತೋಽಮಾನಿತಶ್ಚ ಯಃ ।
ಸರ್ವಭೂತೇಷ್ವಭಯದಸ್ತಂ ದೇವಾ ಬ್ರಾಹ್ಮಣಂ ವಿದುಃ ॥೧೪॥

ಯಾವನು ಇತರರಿಂದ ಸಮ್ಮಾನಿತನಾದರೆ ಸಂತೋಷಪಡುವುದಿಲ್ಲವೋ, ಅಪಮಾನಿತನಾದರೆ ಕೋಪಗೊಳ್ಳುವುದಿಲ್ಲವೋ, ಸರ್ವ ಪ್ರಾಣಿಗಳಿಗೂ ಅಭಯವನ್ನು ಕೊಡುವನೋ–ಅಂತಹವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ನಾಭಿನನ್ದೇತ ಮರಣಂ ನಾಭಿನನ್ದೇತ ಜೀವಿತಮ್ ।
ಕಾಲಮೇವ ಪ್ರತೀಕ್ಷೇತ ನಿದೇಶಂ ಭೃತಕೋ ಯಥಾ ॥೧೫॥

ಸಂನ್ಯಾಸಿಯಾದವನು ಮರಣವನ್ನೂ ಶ್ಲಾಘಿಸಬಾರದು ; ಬದುಕನ್ನೂ ಶ್ಲಾಘಿಸಬಾರದು. ಸೇವಕನು ಸ್ವಾಮಿಯ ಆದೇಶವನ್ನು ಎದುರು ನೋಡುತ್ತಾ ನಿಲ್ಲುವಂತೆ–ಸಂನ್ಯಾಸಿಯು ಕಾಲವನ್ನೇ ಎದುರುನೋಡುತ್ತಿರಬೇಕು.

ಅನಭ್ಯಾಹತಚಿತ್ತಃ ಸ್ಯಾದನಭ್ಯಾಹತವಾಗ್ಭವೇತ್ ।
ನಿರ್ಮುಕ್ತಃ ಸರ್ವಪಾಪೇಭ್ಯೋ ನಿರಮಿತ್ರಸ್ಯ ಕಿಂ ಭಯಮ್ ॥೧೬॥

ಸಂನ್ಯಾಸಿಯಾದವನು ರಾಗ-ದ್ವೇಷಾದಿದೋಷಗಳಿಂದ ಅದೂಷಿತವಾದ ಮನಸ್ಸುಳ್ಳವನಾಗಿರಬೇಕು. ನಿಂದೆಯೇ ಮೊದಲಾದ ದೋಷಗಳಿಂದ ಅದೂಷಿತವಾದ ಮಾತುಳ್ಳವನಾಗಿರಬೇಕು. ಹೀಗೆ ಸರ್ವಪಾಪಗಳಿಂದಲೂ ವಿಮುಕ್ತನಾಗಿರಬೇಕು. ಶತ್ರುಗಳಿಂದ ರಹಿತನಾದ ಇಂತಹವನಿಗೆ ಭಯವೆಲ್ಲಿಯದು?

ಅಭಯಂ ಸರ್ವಭೂತೇಭ್ಯೋ ಭೂತಾನಾಮಭಯಂ ತತಃ ।
ತಸ್ಯ ಮೋಹಾದ್ವಿಮುಕ್ತಸ್ಯ ಭಯಂ ನಾಸ್ತಿ ಕುತಶ್ಚನ ॥೧೭॥

ಯಾವನು ಎಲ್ಲ ಪ್ರಾಣಿಗಳಿಗೂ ಅಭಯವನ್ನು ಕೊಟ್ಟು, ಎಲ್ಲ ಪ್ರಾಣಿಗಳಿಂದಲೂ ಅಭಯವನ್ನು ಪಡೆದುಕೊಂಡಿರುವನೋ–ಮೋಹದಿಂದ ವಿಮುಕ್ತನಾದ ಅಂತಹ ಸಂನ್ಯಾಸಿಗೆ ಯಾವುದರಿಂದಲೂ ಯಾವುದೇ ವಿಧವಾದ ಭಯವೂ ಇರುವುದಿಲ್ಲ.

ಯಥಾ ನಾಗಪದೇಽನ್ಯಾನಿ ಪದಾನಿ ಪದಗಾಮಿನಾಮ್ ।
ಸರ್ವಾಣ್ಯೇವಾಪಿಧೀಯನ್ತೇ ಪದಜಾತಾನಿ ಕೌಞ್ಜರೇ ॥೧೮॥

ಏವಂ ಸರ್ವಮಹಿಂಸಾಯಾಂ ಧರ್ಮಾರ್ಥಮಪಿಧೀಯತೇ ।
ಅಮೃತಃ ಸ ನಿತ್ಯಂ ವಸತಿ ಯೋ ಹಿಂಸಾಂ ನ ಪ್ರಪದ್ಯತೇ ॥೧೯॥

ಕಾಲುಗಳ ಮೂಲಕ ಸಂಚರಿಸುವ ಸರ್ವಪ್ರಾಣಿಗಳ ಹೆಜ್ಜೆಯ ಗುರುತುಗಳೆಲ್ಲವೂ ಯಾವ ರೀತಿಯಲ್ಲಿ ಆನೆಯ ಹೆಜ್ಜೆಗಳ ಗುರುತುಗಳಲ್ಲಿ ಮುಚ್ಚಿಹೋಗುವುವೋ–ಅದೇ ರೀತಿಯಲ್ಲಿ ಸರ್ವಧರ್ಮಾರ್ಥಗಳೂ ಅಹಿಂಸಾಧರ್ಮದಲ್ಲಿ ಅಡಕವಾಗಿಹೋಗುತ್ತವೆ. ಯಾವನು ಯಾವುದೇ ಕಾರಣದಿಂದಲೂ ಹಿಂಸೆಯನ್ನು ಆಶ್ರಯಿಸುವುದಿಲ್ಲವೋ-ಅವನು ಅಮೃತ ಮಯನಾಗಿ ಸಂನ್ಯಾಸಾಶ್ರಮದಲ್ಲಿ ಸ್ಥಿರವಾಗಿರುತ್ತಾನೆ.

ಅಹಿಂಸಕಃ ಸಮಃ ಸತ್ಯೋ ಧೃತಿಮಾನ್ನಿಯತೇನ್ದ್ರಿಯಃ ।
ಶರಣ್ಯಃ ಸರ್ವಭೂತಾನಾಂ ಗತಿಮಾಪ್ನೋತ್ಯನುತ್ತಮಾಮ್ ॥೨೦॥

ಅಹಿಂಸಕನೂ, ಸರ್ವತ್ರ ಸಮಭಾವವುಳ್ಳವನೂ, ಸತ್ಯನಿಷ್ಠನೂ, ಧೈರ್ಯವಂತನೂ, ಜಿತೇಂದ್ರಿಯನೂ, ಎಲ್ಲ ಪ್ರಾಣಿಗಳಿಗೂ ಆಶ್ರಯವನ್ನು ಕೊಡುವವನೂ ಆದ ಸಂನ್ಯಾಸಿಯು ಉತ್ತಮೋತ್ತಮವಾದ ಗತಿಯನ್ನು ಹೊಂದುತ್ತಾನೆ.

ಏವಂ ಪ್ರಜ್ಞಾನತೃಪ್ತಸ್ಯ ನಿರ್ಭಯಸ್ಯ ನಿರಾಶಿಷಃ ।
ನ ಮೃತ್ಯುರತಿಗೋ ಭಾವಃ ಸ ಮೃತ್ಯುಮಧಿಗಚ್ಛತಿ ॥೨೧॥

ಹೀಗೆ ಯಾವ ಸಂನ್ಯಾಸಿಯು ಪ್ರಕೃಷ್ಟವಾದ ಬ್ರಹ್ಮಜ್ಞಾನದಿಂದ ತೃಪ್ತನಾಗಿರುವನೋ, ಭಯರಹಿತನಾಗಿರುವನೋ ಮತ್ತು ಆಶಾರಹಿತನಾಗಿರುವನೋ–ಅಂತಹ ಸಂನ್ಯಾಸಿಯನ್ನು ಮೃತ್ಯುವೂ ಅತಿಕ್ರಮಿಸಿಹೋಗಲು ಸಾಧ್ಯವಾಗುವುದಿಲ್ಲ. ಇದಕ್ಕೆ ಪ್ರತಿಯಾಗಿ ಮೃತ್ಯುವನ್ನೇ ಅವನು ಅತಿಕ್ರಮಿಸುತ್ತಾನೆ. (ಅಮರನೇ ಆಗುತ್ತಾನೆ.)

ವಿಮುಕ್ತಂ ಸರ್ವಸಙ್ಗೇಭ್ಯೋ ಮುನಿಮಾಕಾಶವತ್ಸ್ಥಿತಮ್ ।
ಅಸ್ವಮೇಕಚರಂ ಶಾನ್ತಂ ತಂ ದೇವಾ ಬ್ರಾಹ್ಮಣಂ ವಿದುಃ ॥೨೨॥

ಯಾವನು ಸರ್ವಸಂಗದಿಂದಲೂ ವಿಮುಕ್ತನಾಗಿರುವನೋ, ಮೌನಿಯಾಗಿರುವನೋ, ಸ್ವಚ್ಛವಾದ ಆಕಾಶದಂತೆ ನಿರ್ಲಿಪ್ತನಾಗಿರುವನೋ, ಯಾವ ವಸ್ತುವನ್ನೂ ತನ್ನದೆಂದು ಭಾವಿಸುವುದಿಲ್ಲವೋ, ಏಕಾಕಿಯಾಗಿ ಸಂಚರಿಸುವನೋ–ಶಾಂತನಾಗಿರುವನೋ ಅಂತಹವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ಜೀವಿತಂ ಯಸ್ಯ ಧರ್ಮಾರ್ಥಂ ಧರ್ಮೋ ಹರ್ಯರ್ಥಮೇವ ಚ ।
ಅಹೋರಾತ್ರಾಶ್ಚ ಪುಣ್ಯಾರ್ಥಂ ತಂ ದೇವಾ ಬ್ರಾಹ್ಮಣಂ ವಿದುಃ ॥೨೩॥

ಯಾವನ ಜೀವನವು ಧರ್ಮದ ಸಲುವಾಗಿಯೇ ಇರುವುದೋ ಹಾಗೂ ಆ ಧರ್ಮವೂ ಶ್ರೀಹರಿಯ ಪ್ರೀತಿಗೋಸ್ಕರವೇ ಆಚರಿಸಲ್ಪಡುವುದೋ, ಯಾವನ ಹಗಲು-ರಾತ್ರಿಗಳು ಪುಣ್ಯಕಾರ್ಯಗಳಲ್ಲಿಯೇ ಕಳೆಯುವುವೋ–ಅಂತಹವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ನಿರಾಶಿಷಮನಾರಮ್ಭಂ ನಿರ್ನಮಸ್ಕಾರಮಸ್ತುತಿಮ್ ।
ನಿರ್ಮುಕ್ತಂ ಬನ್ಧನೈಃ ಸರ್ವೈಸ್ತಂ ದೇವಾ ಬ್ರಾಹ್ಮಣಂ ವಿದುಃ ॥೨೪॥

ಯಾವನು ಕಾಮನೆಗಳಿಂದ ರಹಿತನಾಗಿರುವನೋ, ಸರ್ವಪ್ರಕಾರವಾದ ಕಾರ್ಯಾರಂಭವನ್ನೂ ತ್ಯಜಿಸಿರುವನೋ, ನಮಸ್ಕಾರಗಳಿಂದಲೂ ಹೊಗಳಿಕೆಗಳಿಂದಲೂ ದೂರವಾಗಿರುವನೋ, ಸಕಲವಿಧವಾದ ಬಂಧನಗಳಿಂದಲೂ ಮುಕ್ತನಾಗಿರುವನೋ–ಅಂತಹವನನ್ನು ಬ್ರಾಹ್ಮಣನೆಂದು ದೇವತೆಗಳು ತಿಳಿಯುತ್ತಾರೆ.

ಸರ್ವಾಣಿ ಭೂತಾನಿ ಸುಖೇ ರಮನ್ತೇ
ಸರ್ವಾಣಿ ದುಃಖಸ್ಯ ಭೃಶಂ ತ್ರಸನ್ತೇ ।
ತೇಷಾಂ ಭಯೋತ್ಪಾದನಜಾತಖೇದಃ-
ಕುರ್ಯಾನ್ನ ಕರ್ಮಾಣಿ ಹಿ ಶ್ರದ್ದಧಾನಃ ॥೨೫॥

ಪ್ರಪಂಚದಲ್ಲಿ ಎಲ್ಲ ಪ್ರಾಣಿಗಳೂ ಸುಖದಲ್ಲಿ ಪ್ರಸನ್ನವಾಗಿರುತ್ತವೆ. ದುಃಖಕ್ಕೆ ಬಹಳವಾಗಿ ಭಯಪಡುತ್ತವೆ. ಪ್ರಾಣಿಗಳಿಗೆ ಭಯವನ್ನುಂಟು ಮಾಡುವುದರಿಂದ ಯಾವನಿಗೆ ಸಂಕಟವುಂಟಾಗುವುದೋ–ಶ್ರದ್ಧಾಳುವಾದ

ಅಂತಹ ಮನುಷ್ಯನು ಭಯವನ್ನುಂಟುಮಾಡುವ ಕಾರ್ಯಗಳನ್ನು ಮಾಡಬಾರದು.

ದಾನಂ ಹಿ ಭೂತಾಭಯದಕ್ಷಿಣಾಯಾಃ
ಸರ್ವಾಣಿ ದಾನಾನ್ಯಧಿತಿಷ್ಠತೀಹ ।
ತೀಕ್ಷ್ಣಾಂ ತನುಂ ಯಃ ಪ್ರಥಮಂ ಜಹಾತಿ
ಸೋಽನನ್ತ್ಯಮಾಪ್ನೋತ್ಯಭಯಂ ಪ್ರಜಾಭ್ಯಃ ॥೨೬॥

ಪ್ರಪಂಚದಲ್ಲಿ ಪ್ರಾಣಿಗಳಿಗೆ ಅಭಯರೂಪವಾದ ದಕ್ಷಿಣೆಯ ದಾನವನ್ನು ಕೊಡುವುದು ಮಿಕ್ಕೆಲ್ಲ ವಿಧವಾದ ದಾನಗಳಿಗಿಂತಲೂ ಮಿಗಿಲಾಗಿರುತ್ತದೆ. ಯಾವನು ಮೊದಲು ಹಿಂಸೆಯನ್ನು ತ್ಯಾಗಮಾಡುವನೋ–ಅವನು ಸರ್ವಪ್ರಜೆಗಳಿಂದಲೂ ಅಭಯವನ್ನು ಪಡೆದು ಮೋಕ್ಷವನ್ನೂ ಹೊಂದುತ್ತಾನೆ.

ಉತ್ತಾನ ಆಸ್ತೇ ಸ ಹವಿರ್ಜುಹೋತಿ
ಲೋಕಸ್ಯ ನಾಭಿರ್ಜಗತಃ ಪ್ರತಿಷ್ಠಾ ।
ತಸ್ಯಾಙ್ಗಮಙ್ಗಾನಿ ಕೃತಾಕೃತಂ ಚ
ವೈಶ್ವಾನರಃ ಸರ್ವಮಿದಂ ಪ್ರಪೇದೇ ॥೨೭॥

ಅವನು ಊರ್ಧ್ವಮುಖನಾಗಿ ಬಾಯಿಂದಲೇ ಹವಿಸ್ಸನ್ನು ಸ್ವೀಕರಿಸಿ ವೈಶ್ವಾನರಾಗ್ನಿಯಲ್ಲಿ ಹೋಮಮಾಡಿಕೊಳ್ಳುತ್ತಾನೆ. (ಗೃಹಸ್ಥ-ವಾನಪ್ರಸ್ಥರು ಅಧೋಮುಖರಾಗಿ ಹೊರಗಿನ ಅಗ್ನಿಯಲ್ಲಿ ಹೋಮಮಾಡುತ್ತಾರೆ.) ಲೋಕಗಳಿಗೆಲ್ಲಾ ಕೇಂದ್ರವೂ, ಜಗತ್ತಿಗೆ ನೆಲೆಯ ಸ್ಥಾನವೂ, ಜಗತ್ತಿನ ಅಂಗ-ಪ್ರತ್ಯಂಗಗಳೂ, ಕಾರ್ಯ-ಕಾರಣಗಳೂ ಆಗಿರುವ ವೈಶ್ವಾನರಾಗ್ನಿಯೇ ಆಗಿ ಈ ಜಗತ್ತೆಲ್ಲವನ್ನೂ ಹೊಂದುತ್ತಾನೆ. (ಸರ್ವವ್ಯಾಪಕವಾದ ವೈಶ್ವಾನರಾಗ್ನಿಮಯನಾಗಿಬಿಡುತ್ತಾನೆ. ಅವನು ಸ್ವೀಕರಿಸುವ ಹವಿಸ್ಸು ಪ್ರಾಣಾಗ್ನಿಹೋತ್ರದ ಆತ್ಮಯಜ್ಞವೇ ಆಗುತ್ತದೆ.)

ಪ್ರಾದೇಶಮಾತ್ರೇ ಹೃದಿ ನಿಃಸೃತಂ ಯ-
ತ್ತಸ್ಮಿನ್ಪ್ರಾಣಾನಾತ್ಮಯಾಜೀ ಜುಹೋತಿ ।
ತಸ್ಯಾಗ್ನಿಹೋತ್ರಂ ಹುತಮಾತ್ಮಸಂಸ್ಥಂ
ಸರ್ವೇಷು ಲೋಕೇಷು ಸದೇವಕೇಷು ॥೨೮॥

ಆತ್ಮಯಜ್ಞವನ್ನು ಮಾಡುವ ಜ್ಞಾನಿಯು ನಾಭಿಯಿಂದ ಹೃದಯದ ವರೆಗಿನ ಪ್ರಾದೇಶಮಾತ್ರದಲ್ಲಿ ಪ್ರಕಟವಾಗುವ ವೈಶ್ವಾನರನೆಂಬ ಚೈತನ್ಯ ಜ್ಯೋತಿಯಲ್ಲಿ ಸಮಸ್ತಪ್ರಾಣಗಳನ್ನೂ ಹೋಮಮಾಡುತ್ತಾನೆ. (ಲೀನಗೊಳಿಸುತ್ತಾನೆ.) ಜ್ಞಾನಿಯ ಪ್ರಾಣಾಗ್ನಿಹೋತ್ರವು ಅವನ ಶರೀರದಲ್ಲಿಯೇ ಆದರೂ–ಅವನು ವಿಶ್ವಾತ್ಮಕವಾದ ವೈಶ್ವಾನರಾಗ್ನಿಮಯನೇ ಆಗುವುದರಿಂದ ಆ ಚೈತನ್ಯಜ್ಯೋತಿಯ ಮೂಲಕವಾಗಿ ದೇವತೆಗಳಿಂದ ಸಹಿತವಾದ ಸಕಲ ಲೋಕಗಳಲ್ಲಿಯೂ ಪ್ರಾಣಾಗ್ನಿಹೋತ್ರವು ನಡೆದಂತಾಗುತ್ತದೆ.

ದೇವಂ ತ್ರಿಧಾತುಂ ತ್ರಿವೃತಂ ಸುಪರ್ಣಂ
ಯೇ ವಿದ್ಯುರಗ್ರ್ಯಾಂ ಪರಮಾತ್ಮತಾಂ ಚ ।
ತೇ ಸರ್ವಲೋಕೇಷು ಮಹೀಯಮಾನಾ
ದೇವಾಃ ಸಮರ್ತ್ಯಾಃ ಸುಕೃತಂ ವದನ್ತಿ ॥೨೯॥

ವಾತ-ಪಿತ್ತ-ಕಫಗಳೆಂಬ ಮೂರು ದೋಷಗಳಿಂದ ಕೂಡಿದ, ಸತ್ತ್ವ-ರಜಸ್ತಮೋಗುಣಗಳಿಂದ ಆವೃತನಾದ, ಪಕ್ಷಿಸ್ವರೂಪನಾಗಿರುವ ಪ್ರಭುವನ್ನು ಶ್ರೇಷ್ಠವಾದ ಪರಮಾತ್ಮತತ್ತ್ವವುಳ್ಳವನೆಂದೂ ಯಾರು ತಿಳಿಯುತ್ತಾರೆಯೋ–ಅವರು ಸರ್ವಲೋಕಗಳಲ್ಲಿಯೂ ಸಮ್ಮಾನಿತರಾಗುತ್ತಾರೆ ಮತ್ತು ಮನುಷ್ಯರಿಂದ ಕೂಡಿದ ದೇವತೆಗಳೂ ಅಂತಹವರ ವಿಷಯದಲ್ಲಿ ಪುಣ್ಯವಾದ ಮಾತುಗಳನ್ನು ಹೇಳುತ್ತಾರೆ.

ವೇದಾಂಶ್ಚ ವೇದ್ಯಂ ತು ವಿಧಿಂ ಚ ಕೃತ್ಸ್ನ-
ಮಥೋ ನಿರುಕ್ತಂ ಪರಮಾರ್ಥತಾಂ ಚ ।
ಸರ್ವಂ ಶರೀರಾತ್ಮನಿ ಯಃ ಪ್ರವೇದ
ತಸ್ಯೈವ ದೇವಾಃ ಸ್ಪೃಹಯನ್ತಿ ನಿತ್ಯಮ್ ॥೩೦॥

ವೇದಗಳನ್ನೂ (ಜ್ಞಾನವನ್ನೂ), ವೇದ್ಯನನ್ನೂ (ಜ್ಞೇಯನನ್ನೂ), ಸಮಗ್ರವಾದ ವಿಧಿಗಳನ್ನೂ, ವೈದಿಕಶಬ್ದಗಳ ಅವಯವಾರ್ಥಗಳನ್ನೂ, ಪರಬ್ರಹ್ಮತತ್ತ್ವವನ್ನೂ – ಶರೀರದಲ್ಲಿ ಆತ್ಮನು ಇರುವಾಗಲೇ – ಯಾವನು

ಚೆನ್ನಾಗಿ ತಿಳಿದುಕೊಳ್ಳುತ್ತಾನೆಯೋ–ಅಂತಹ ಜ್ಞಾನಿಯಾದ ಪುರುಷನ ದರ್ಶನವನ್ನು ದೇವತೆಗಳೂ ಅಪೇಕ್ಷಿಸುತ್ತಾರೆ.

ಭೂಮಾವಸಕ್ತಂ ದಿವಿ ಚಾಪ್ರಮೇಯಂ
ಹಿರಣ್ಮಯಂ ಯೋಽಣ್ಡಜಮಣ್ಡಮಧ್ಯೇ ।
ಪತತ್ರಿಣಂ ಪಕ್ಷಿಣಮನ್ತರಿಕ್ಷೇ
ಯೋ ವೇದ ಭೋಗ್ಯಾತ್ಮನಿ ರಶ್ಮಿದೀಪ್ತಃ ॥೩೧॥

ಭೂಮಿಯಲ್ಲಿದ್ದರೂ ಅದರಲ್ಲಿ ಆಸಕ್ತನಲ್ಲದ, ದಿವಿಯಲ್ಲಿ ಅಪ್ರಮೇಯ ಭಾವದಿಂದಿರುವ, ಬ್ರಹ್ಮಾಂಡದ ಮಧ್ಯದಲ್ಲಿ ಅಂಡ-ಪಿಂಡಾತ್ಮಕವಾದ ಶರೀರದ ಮಧ್ಯಭಾಗದಲ್ಲಿ ಪಕ್ಷಿಯ ರೂಪದಲ್ಲಿರುವ ಹಿರಣ್ಮಯ ಪರಮಾತ್ಮನನ್ನು, ಭೋಗಾತ್ಮಕವಾದ ಶರೀರದ ಹೃದಾಕಾಶದಲ್ಲಿರುವ ಪಕ್ಷಿ ರೂಪನಾದ ಜೀವಾತ್ಮನಲ್ಲಿ ಯಾವನು ತಿಳಿಯುವನೋ–ಅವನು ತೇಜೋ ಮಯವಾದ ರಶ್ಮಿಗಳಿಂದ ಪ್ರಕಾಶಿಸುತ್ತಾನೆ.

ಆವರ್ತಮಾನಮಜರಂ ವಿವರ್ತನಂ
ಷಾಣ್ಣಾಭಿಕಂ ದ್ವಾದಶಾರಂ ಸುಪರ್ವ ।
ಯಸ್ಯೇದಮಾಸ್ಯೇ ಪರಿಯಾತಿ ವಿಶ್ವಂ
ತತ್ಕಾಲಚಕ್ರಂ ನಿಹಿತಂ ಗುಹಾಯಾಮ್ ॥೩೨॥

ನಿರಂತರವಾಗಿ ಸುತ್ತುತ್ತಲೇ ಇರುವ, ಎಂದಿಗೂ ಜೀರ್ಣವಾಗದ, ಜನರ ಆಯುಷ್ಯವನ್ನು ಕ್ಷೀಣಗೊಳಿಸುತ್ತಲೇ ಇರುವ, ಆರು ಋತುಗಳ ರೂಪವಾದ ಗುಂಭವನ್ನು ಹೊಂದಿರುವ, ಹನ್ನೆರಡು ಮಾಸಗಳ ರೂಪವಾದ ಅರೆಕಾಲುಗಳನ್ನು ಹೊಂದಿರುವ, ದರ್ಶ-ಪೂರ್ಣಮಾಸಾದಿ ಪರ್ವಗಳಿಂದ ಕೂಡಿರುವ ಕಾಲಚಕ್ರವು ಬುದ್ಧಿರೂಪವಾದ ಗುಹೆಯಲ್ಲಿ ಅಡಗಿಕೊಂಡಿದೆ. ಆ ಕಾಲಚಕ್ರದ ಮುಖದಲ್ಲಿ ಈ ವಿಶ್ವವೇ ಭಕ್ಷ್ಯದೋಪಾದಿಯಲ್ಲಿ ಹೋಗಿ ಬೀಳುತ್ತಿದೆ. ಅಂತಹ ಕಾಲಸ್ವರೂಪನಾದ ಪರಮಾತ್ಮನನ್ನು ಕಂಡು ಕೊಂಡಿರುವವನನ್ನು ದೇವತೆಗಳೂ ಗೌರವಿಸುತ್ತಾರೆ.

ಯಃ ಸಮ್ಪ್ರಸಾದೋ ಜಗತಃ ಶರೀರಂ
ಸರ್ವಾನ್ಸ ಲೋಕಾನಧಿಗಚ್ಛತೀಹ ।

ತಸ್ಮಿನ್ಹುತಂ ತರ್ಪಯತೀಹ ದೇವಾಂ-
ಸ್ತೇ ವೈ ತೃಪ್ತಾಸ್ತರ್ಪಯನ್ತ್ಯಾಸ್ಯಮಸ್ಯ ॥೩೩॥

ಯಾವನು ಪ್ರಸನ್ನತೆಯನ್ನು ಉಂಟುಮಾಡುವನೋ, ಜಗತ್ತಿಗೆ ಶರೀರ ರೂಪನಾಗಿರುವನೋ (ಯಾವನ ವಿರಾಟ್‌ಶರೀರದಲ್ಲಿ ಜಗತ್ತು ವಿರಾಜಿಸುತ್ತಿರುವುದೋ–ಜಗತ್ತೇ ಯಾರಿಗೆ ಶರೀರವಾಗಿರುವುದೋ) ಅಂತಹ ಪರಬ್ರಹ್ಮಪರಮಾತ್ಮನು ಸರ್ವಲೋಕಗಳನ್ನೂ ಅತಿಕ್ರಮಿಸಿ ನಿಂತಿದ್ದಾನೆ (ವ್ಯಾಪಿಸಿದ್ದಾನೆ). ಆ ಪರಬ್ರಹ್ಮಪರಮಾತ್ಮನಲ್ಲಿ ಮಾಡುವ ಇಂದ್ರಿಯಾದಿಗಳ ಹೋಮವು ದೇವತೆಗಳನ್ನು ತೃಪ್ತಿಗೊಳಿಸುತ್ತದೆ. ಹಾಗೆ ತೃಪ್ತರಾದ ದೇವತೆಗಳು ಜ್ಞಾನಿಯ ಮುಖವನ್ನು ಜ್ಞಾನಾಮೃತದ ಸೇಚನೆಯಿಂದ ತೃಪ್ತಿಗೊಳಿಸುತ್ತಾರೆ.

ತೇಜೋಮಯೋ ನಿತ್ಯಮಯಃ ಪುರಾಣೋ
ಲೋಕಾನನನ್ತಾನಭಯಾನುಪೈತಿ ।
ಭೂತಾನಿ ಯಸ್ಮಾನ್ನ ತ್ರಸನ್ತೇ ಕದಾಚಿ-
ತ್ಸ ಭೂತಾನಾಂ ನ ತ್ರಸತೇ ಕದಾಚಿತ್ ॥೩೪॥

ತೇಜೋಮಯನೂ, ನಿತ್ಯಬ್ರಹ್ಮಮಯನೂ, ವೇದರೂಪನೂ ಆಗಿರುವ ಬ್ರಹ್ಮಜ್ಞಾನಿಯು (ಸಂನ್ಯಾಸಿಯು) ಭಯರಹಿತವಾದ, ಅಸಂಖ್ಯಾತವಾದ ಲೋಕಗಳನ್ನು ಹೊಂದುತ್ತಾನೆ. ಯಾವನಿಂದ ಪ್ರಾಣಿಗಳು ಯಾವಾಗಲೂ ಭಯಪಡುವುದಿಲ್ಲವೋ–ಅಂತಹವನು ಯಾವಾಗಲೂ ಪ್ರಾಣಿಗಳಿಗೂ ಭಯಪಡುವುದಿಲ್ಲ. (ಸಂನ್ಯಾಸಿಯು ಯಾವಾಗಲೂ ಪ್ರಾಣಿಗಳಿಗೆ ಅಭಯಪ್ರದನಾಗಿರುತ್ತಾನೆ.)

ಅಗರ್ಹಣೀಯೋ ನ ಚ ಗರ್ಹತೇಽನ್ಯಾ-
ನ್ಸ ವೈ ವಿಪ್ರಃ ಪರಮಾತ್ಮಾನಮೀಕ್ಷೇತ್ ।
ವಿನೀತಮೋಹೋ ವ್ಯಪನೀತಕಲ್ಮಷೋ
ನ ಚೇಹ ನಾಮುತ್ರ ಚ ಸೋಽನ್ನಮೃಚ್ಛತಿ ॥೩೫॥

ತಾನೂ ನಿಂದ್ಯನಾಗದೇ ಇತರರನ್ನೂ ನಿಂದಿಸದವನೇ ವಿಪ್ರನು.

ಆತನೇ ಪರಮಾತ್ಮನನ್ನು ಹೃದಯಗುಹೆಯಲ್ಲಿ ಕಂಡುಕೊಳ್ಳುತ್ತಾನೆ. ಯಾವನು ಮೋಹವನ್ನು ಕಳೆದುಕೊಂಡು ಪಾಪದಿಂದ ರಹಿತನಾಗಿರುವನೋ– ಅಂತಹ ಜ್ಞಾನಿಯು ಇಹಲೋಕದ ಮತ್ತು ಪರಲೋಕದ ಭೋಗಗಳಲ್ಲಿ ಆಸಕ್ತನಾಗುವುದಿಲ್ಲ.

ಅರೋಷಮೋಹಃ ಸಮಲೋಷ್ಟಕಾಞ್ಚನಃ
ಪ್ರಹೀಣಕೋಶೋ ಗತಸಂಧಿವಿಗ್ರಹಃ ।
ಅಪೇತನಿನ್ದಾಸ್ತುತಿರಪ್ರಿಯಾಪ್ರಿಯ–
ಶ್ಚರನ್ನುದಾಸೀನವದೇಷ ಭಿಕ್ಷುಕಃ ॥೩೬॥

ಅಂತಹ ಸಂನ್ಯಾಸಿಯು ರೋಷ-ಮೋಹಗಳಿಲ್ಲದವನು ; ಮಣ್ಣಿನ ಹೆಂಟೆಯನ್ನೂ ಚಿನ್ನದ ಗಟ್ಟಿಯನ್ನೂ ಸಮಾನವಾಗಿ ಭಾವಿಸುವವನು ; ಧನದಿಂದ ವಿಹೀನನಾದವನು ; ಸ್ನೇಹವಾಗಲೀ ಹಗೆತನವಾಗಲೀ ಇಲ್ಲದವನು ; ನಿಂದಾ-ಸ್ತುತಿಗಳೆರಡನ್ನೂ ಲೆಕ್ಕಿಸದವನು ; ಪ್ರಿಯವಾಗಲೀ ಅಪ್ರಿಯವಾಗಲೀ ಇಲ್ಲದವನು ; ಯಾವಾಗಲೂ ಉದಾಸೀನನಂತೆ ಸಂಚಾರಮಾಡುತ್ತಿರುವವನು. ಇಂತಹವನೇ ಸಂನ್ಯಾಸಿಯು."

ಎಳ೫ನೆಯ ಅಧ್ಯಾಯವು ಮುಗಿಯಿತು.

ಎಳ೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪರಮಾತ್ಮನ ಶ್ರೇಷ್ಠತೆ : ದರ್ಶನೋಪಾಯ : ಜ್ಞಾನೋಪದೇಶಕ್ಕೆ ಪಾತ್ರನಾದವನ ನಿರ್ಣಯ

ಯುಧಿಷ್ಠಿರ! ವ್ಯಾಸರು ಹೇಳುತ್ತಾರೆ :

ಪ್ರಕೃತ್ಯಾಸ್ತು ವಿಕಾರಾ ಯೇ ಕ್ಷೇತ್ರಜ್ಞಸ್ತೈರಧಿಷ್ಠಿತಃ ।
ನ ಚೈನಂ ತೇ ಪ್ರಜಾನನ್ತಿ ಸ ತು ಜಾನಾತಿ ತಾನಪಿ ॥೧॥

"ಮಗು! ಶುಕದೇವ! ಪ್ರಕೃತಿಯ ವಿಕಾರಗಳಾದ ದೇಹೇಂದ್ರಿಯ–ಮನೋಬುದ್ಧಿಗಳು ಕ್ಷೇತ್ರಜ್ಞನಿಗೆ ಕರ್ತೃತ್ವ-ಭೋಕ್ತೃತ್ವಭಾವಗಳನ್ನು

ಉಂಟುಮಾಡುತ್ತವೆ. ಜಡಗಳಾದ ದೇಹೇಂದ್ರಿಯಾದಿಗಳಿಗೆ ಅವನಾರೆಂಬುದು ತಿಳಿಯದು. ಆದರೆ ಕ್ಷೇತ್ರಜ್ಞನು ಅವುಗಳೆಲ್ಲವನ್ನೂ ತಿಳಿದಿರುತ್ತಾನೆ.

ತೈಶ್ಚೈವಂ ಕುರುತೇ ಕಾರ್ಯಂ ಮನಃಷಷ್ಠೈರಿಹೇನ್ದ್ರಿಯೈಃ ।
ಸುದಾನ್ತೈರಿವ ಸಂಯನ್ತಾ ದೃಢೈಃ ಪರಮವಾಜಿಭಿಃ ॥೨॥

ಚತುರನಾದ ಸಾರಥಿಯು ಚೆನ್ನಾಗಿ ಪಳಗಿರುವ ಬಲಿಷ್ಠವಾದ ಕುದುರೆಗಳಿಂದ ತನ್ನ ಕಾರ್ಯವನ್ನು (ರಥವನ್ನು ನಡೆಸುವ ಕಾರ್ಯವನ್ನು) ಯಾವ ರೀತಿಯಲ್ಲಿ ಚೆನ್ನಾಗಿ ನಿರ್ವಹಿಸುವನೋ–ಅದೇ ರೀತಿಯಲ್ಲಿ ಕ್ಷೇತ್ರಜ್ಞನು ಮನಸ್ಸಿನಿಂದ ಕೂಡಿದ ಐದು ಇಂದ್ರಿಯಗಳ ಮೂಲಕವಾಗಿ ತನ್ನ ಕಾರ್ಯವನ್ನು ಮಾಡುತ್ತಾನೆ.

ಇನ್ದ್ರಿಯೇಭ್ಯಃ ಪರೇ ಹ್ಯರ್ಥಾ ಅರ್ಥೇಭ್ಯಃ ಪರಮಂ ಮನಃ ।
ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಮಹಾನ್ಪರಃ ॥೩॥

ಇಂದ್ರಿಯಗಳಿಗಿಂತಲೂ ಇಂದ್ರಿಯವಿಷಯಗಳು ಬಲಿಷ್ಠವಾದುವು. ಇಂದ್ರಿಯಾರ್ಥಗಳಿಗಿಂತಲೂ ಮನಸ್ಸು ಬಲಿಷ್ಠವಾದುದು. ಮನಸ್ಸಿಗಿಂತಲೂ ಬುದ್ಧಿಯು ಬಲಿಷ್ಠವಾದುದು. ಬುದ್ಧಿಗಿಂತಲೂ ಜೀವಾತ್ಮನು ಬಲಿಷ್ಠನು. ಜೀವಾತ್ಮನಿಗಿಂತಲೂ ಮಹತ್ತತ್ತ್ವವು ಶ್ರೇಷ್ಠವಾದುದು.

ಮಹತಃ ಪರಮವ್ಯಕ್ತಮವ್ಯಕ್ತಾತ್ಪರತೋಽಮೃತಮ್ ।
ಅಮೃತಾನ್ನ ಪರಂ ಕಿಂಚಿತ್ಸಾ ಕಾಷ್ಠಾ ಸಾ ಪರಾ ಗತಿಃ ॥೪॥

ಮಹತ್ತತ್ತ್ವಕ್ಕಿಂತಲೂ ಅವ್ಯಕ್ತವೆಂಬ ಮೂಲಪ್ರಕೃತಿಯು ಶ್ರೇಷ್ಠವಾದುದು. ಆ ಅವ್ಯಕ್ತಕ್ಕಿಂತಲೂ ಅಮೃತಸ್ವರೂಪನಾದ ಪರಮಾತ್ಮನು ಶ್ರೇಷ್ಠನು. ಅಮೃತಸ್ವರೂಪನಾದ ಪರಮಾತ್ಮನಿಗಿಂತಲೂ ಶ್ರೇಷ್ಠವಾದುದು ಬೇರೆ ಯಾವುದೂ ಇರುವುದಿಲ್ಲ. ಅಮೃತಮಯನಾದ ಆ ಪರಬ್ರಹ್ಮತತ್ತ್ವವೇ ಶ್ರೇಷ್ಠತೆಗೆ ಕಡೆಯ ಎಲ್ಲೆಯಾಗಿದೆ. ಅದೇ ಶ್ರೇಷ್ಠವಾದ ಗತಿಯೂ ಆಗಿದೆ.

ಏವಂ ಸರ್ವೇಷು ಭೂತೇಷು ಗೂಢೋಽತ್ಮಾ ನ ಪ್ರಕಾಶತೇ ।
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ ॥೫॥

ಹೀಗೆ ಎಲ್ಲ ಪ್ರಾಣಿಗಳಲ್ಲಿಯೂ ನಿಗೂಢವಾಗಿರುವ ಪರಮಾತ್ಮನು ಇಂದ್ರಿಯಗಳ ಮೂಲಕವಾಗಿ ಕಾಣಿಸುವುದಿಲ್ಲ. ಸೂಕ್ಷ್ಮದರ್ಶಿಗಳಾದ ಜ್ಞಾನಿಗಳು ತಮ್ಮ ಸೂಕ್ಷ್ಮವಾದ ಮತ್ತು ಶ್ರೇಷ್ಠವಾದ ಬುದ್ಧಿಯಿಂದ ಅವನನ್ನು ಕಂಡುಕೊಳ್ಳುತ್ತಾರೆ.

ಅನ್ತರಾತ್ಮನಿ ಸಂಲೀಯ ಮನಃಷಷ್ಠಾನಿ ಮೇಧಯಾ ।
ಇನ್ದ್ರಿಯಾಣೀನ್ದ್ರಿಯಾರ್ಥಾಂಶ್ಚ ಬಹುಚಿನ್ತ್ಯಮಚಿನ್ತಯನ್ ॥೬॥

ಧ್ಯಾನೇನೋಪರಮಂ ಕೃತ್ವಾ ವಿದ್ಯಾಸಮ್ಪಾದಿತಂ ಮನಃ ।
ಅನೀಶ್ವರಃ ಪ್ರಶಾನ್ತಾತ್ಮಾ ತತೋಽರ್ಚ್ಛತ್ಯಮೃತಂ ಪದಮ್ ॥೭॥

ಯೋಗಿಯು ಬುದ್ಧಿಯ ಮೂಲಕವಾಗಿ ಮನಸ್ಸಿನಿಂದ ಕೂಡಿದ ಇಂದ್ರಿಯಗಳನ್ನೂ–ಇಂದ್ರಿಯಾರ್ಥಗಳನ್ನೂ ಅಂತರಾತ್ಮನಲ್ಲಿ ಲೀನಗೊಳಿಸಿ, ನಾನಾಪ್ರಕಾರವಾದ ಚಿಂತನೀಯವಿಷಯಗಳನ್ನು ಚಿಂತಿಸಹೋಗದೆ, ವಿದ್ಯೆಯಿಂದ ಸಂಸ್ಕೃತವಾದ ಮನಸ್ಸನ್ನು ಧ್ಯಾನಯೋಗದಿಂದ ಉಪತರಗೊಳಿಸಿ, 'ನಾನು' ಎಂಬ ಭಾವನೆಯನ್ನು ತೊರೆದು ಪ್ರಶಾಂತಾತ್ಮನಾಗಿ ಅಮೃತ ಸ್ವರೂಪನಾದ ಪರಮಾತ್ಮನನ್ನು ಹೊಂದುತ್ತಾನೆ.

ಇನ್ದ್ರಿಯಾಣಾಂ ತು ಸರ್ವೇಷಾಂ ವಶ್ಯಾತ್ಮಾ ಚಲಿತಸ್ಮೃತಿಃ ।
ಆತ್ಮನಃ ಸಮ್ಪ್ರದಾನೇನ ಮರ್ತ್ಯೋ ಮೃತ್ಯುಮುಪಾಶ್ನುತೇ ॥೮॥

ಎಲ್ಲ ಇಂದ್ರಿಯಗಳಿಗೂ ಅಡಿಯಾಳಾಗಿರುವ, ಚಂಚಲವಾದ ಸ್ಮರಣೆಯುಳ್ಳ, ಕಾಮ-ಕ್ರೋಧಾದಿಗಳಿಗೆ ತನ್ನನ್ನು ಅರ್ಪಿಸಿಕೊಂಡಿರುವ ಮನುಷ್ಯನು ಮೃತ್ಯುವನ್ನೇ ಉಪಭೋಗಿಸುತ್ತಾನೆ. (ವಿನಾಶಹೊಂದುತ್ತಾನೆ.)

ಆಹತ್ಯ ಸರ್ವಸಂಕಲ್ಪಾನ್ಸತ್ತ್ವೇ ಚಿತ್ತಂ ನಿವೇಶಯೇತ್ ।
ಸತ್ತ್ವೇ ಚಿತ್ತಂ ಸಮಾವೇಶ್ಯ ತತಃ ಕಾಲಂಜರೋ ಭವೇತ್ ॥೯॥

ಆದುದರಿಂದ ಸರ್ವಪ್ರಕಾರವಾದ ಸಂಕಲ್ಪಗಳನ್ನೂ ಧ್ವಂಸಮಾಡಿ ಚಿತ್ತವನ್ನು ಸೂಕ್ಷ್ಮಬುದ್ಧಿಯಲ್ಲಿ ಲೀನಗೊಳಿಸಬೇಕು. ಹೀಗೆ ಬುದ್ಧಿಯಲ್ಲಿ ಚಿತ್ತವನ್ನು ಲಯಗೊಳಿಸಿದವನು ಕಾಲವನ್ನೇ ವಿನಾಶಗೊಳಿಸುತ್ತಾನೆ. (ಕಾಲಾತೀತನಾಗುತ್ತಾನೆ.)

ಚಿತ್ತಪ್ರಸಾದೇನ ಯತಿರ್ಜಹಾತೀಹ ಶುಭಾಶುಭಮ್ ।
ಪ್ರಸನ್ನಾತ್ಮಾತ್ಮನಿ ಸ್ಥಿತ್ವಾ ಸುಖಮತ್ಯಂತಮಶ್ನುತೇ ॥೧೦॥

ಚಿತ್ತದ ಪ್ರಸನ್ನತೆಯಿಂದ ಯತಿಯು ಈ ಲೋಕದಲ್ಲಿನ ಶುಭಾಶುಭಗಳೆರಡನ್ನೂ ಬಿಟ್ಟುಬಿಡುತ್ತಾನೆ. ಸ್ವಚ್ಛವಾದ ಮನಸ್ಸಿನಿಂದ ಕೂಡಿರುವ ಯೋಗಿಯು ಯಾವಾಗಲೂ ಆತ್ಮನಲ್ಲಿಯೇ ಬುದ್ಧಿಯನ್ನು ಲೀನಗೊಳಿಸಿ ಅಕ್ಷಯವಾದ ಸುಖವನ್ನು ಹೊಂದುತ್ತಾನೆ.

ಲಕ್ಷಣಂ ತು ಪ್ರಸಾದಸ್ಯ ಯಥಾ ಸ್ವಪ್ನೇ ಸುಖಂ ಸ್ವಪೇತ್ ।
ನಿವಾತೇ ವಾ ಯಥಾ ದೀಪೋ ದೀಪ್ಯಮಾನೋ ನ ಕಮ್ಪತೇ ॥೧೧॥

ಮನುಷ್ಯನು ನಿದ್ರೆಯ ಸಮಯದಲ್ಲಿ ಯಾವ ವಿಧವಾದ ಕನಸುಗಳೂ ಇಲ್ಲದೇ ಸುಖವಾಗಿ ನಿದ್ರಿಸುವುದು ಚಿತ್ತಸ್ವಾಸ್ಥ್ಯದ ಲಕ್ಷಣವಾಗಿದೆ. ಗಾಳಿಯಿಲ್ಲದಾಗ ದೀಪವು ದೇದೀಪ್ಯಮಾನವಾಗಿ ಪ್ರಕಾಶಿಸುತ್ತಾ ಹೇಗೆ ಅಲುಗಾಡದೇ ಇರುತ್ತದೆಯೋ–ಹಾಗೆಯೇ ಮನಸ್ಸು ಚಂಚಲಿಸದೇ ಆತ್ಮದಲ್ಲಿ ಸ್ಥಿರವಾಗಿರುವುದು ಚಿತ್ತಪ್ರಸಾದದ ಕುರುಹಾಗಿದೆ.

ಏವಂ ಪೂರ್ವಾಪರೇ ಕಾಲೇ ಯುಞ್ಜನ್ನಾತ್ಮಾನಮಾತ್ಮನಿ ।
ಲಘ್ವಾಹಾರೋ ವಿಶುದ್ಧಾತ್ಮಾ ಪಶ್ಯತ್ಯಾತ್ಮಾನಮಾತ್ಮನಿ ॥೧೨॥

ಹೀಗೆ ಯೋಗಿಯು ಮಿತಾಹಾರಿಯಾಗಿ, ವಿಶುದ್ಧವಾದ ಮನಸ್ಸಿನಿಂದ ಕೂಡಿದವನಾಗಿ, ರಾತ್ರಿಯ ಮೊದಲ ಮತ್ತು ಕಡೆಯ ಯಾಮಗಳಲ್ಲಿ ಮನಸ್ಸನ್ನು ಪರಬ್ರಹ್ಮಪರಮಾತ್ಮನಲ್ಲಿ ಏಕಾಗ್ರಗೊಳಿಸುತ್ತಿದ್ದರೆ ತನ್ನೊಳಗೇ ಅವನು ಪರಬ್ರಹ್ಮವಸ್ತುವನ್ನು ಕಂಡುಕೊಳ್ಳುತ್ತಾನೆ.

ರಹಸ್ಯಂ ಸರ್ವವೇದಾನಾಮನೈತಿಹ್ಯಮನಾಗಮಮ್ ।
ಆತ್ಮಪ್ರತ್ಯಯಿಕಂ ಶಾಸ್ತ್ರಮಿದಂ ಪುತ್ರಾನುಶಾಸನಮ್ ॥೧೩॥

ಮಗು! ಈಗ ನಾನು ಯಾವುದನ್ನು ಉಪದೇಶಿಸುತ್ತಿರುವೆನೋ– ಇದು ಪರಮಾತ್ಮನ ಜ್ಞಾನವನ್ನುಂಟುಮಾಡಿಕೊಡುವ ಶಾಸ್ತ್ರವಾಗಿದೆ. ಇದು ಸಂಪೂರ್ಣವೇದಗಳ ರಹಸ್ಯವಾಗಿದೆ. ಆದರೆ ಇದು ಕೇವಲ ಅನುಮಾನದಿಂದಾಗಲೀ ಶಾಸ್ತ್ರಗಳಿಂದಾಗಲೀ ತಿಳಿಯಲ್ಪಡತಕ್ಕುದಲ್ಲ. (ಅನುಭವೈಕವೇದ್ಯವಾಗಿದೆ.)

ಧರ್ಮಾಖ್ಯಾನೇಷು ಸರ್ವೇಷು ಸತ್ಯಾಖ್ಯಾನೇ ಚ ಯದ್ವಸು ।
ದಶೇದಮೃಕ್ಸಹಸ್ರಾಣಿ ನಿರ್ಮಥ್ಯಾಮೃತಮುದ್ಧೃತಮ್ ॥೧೪॥

ಸಕಲವಿಧವಾದ ಧರ್ಮಾಖ್ಯಾನಗಳಲ್ಲಿಯೂ, ಸತ್ಯಾಖ್ಯಾನಗಳಲ್ಲಿಯೂ ಇದು ಸಾರಭೂತವಾದ ಐಶ್ವರ್ಯವಾಗಿದೆ. ಹತ್ತುಸಾವಿರಕ್ಕೂ ಅಧಿಕವಾದ ವೇದಗಳು ಋಕ್ಕುಗಳನ್ನು ಕಡೆದು ಸಾರಭೂತವಾದ ಅಮೃತಮಯವಾದ ಈ ಸಾರತತ್ತ್ವವನ್ನು ಹೊರತೆಗೆಯಲಾಗಿದೆ.

ನವನೀತಂ ಯಥಾ ದಧ್ನಃ ಕಾಷ್ಠಾದಗ್ನಿರ್ಯಥೈವ ಚ ।
ತಥೈವ ವಿದುಷಾಂ ಜ್ಞಾನಂ ಪುತ್ರಹೇತೋಃ ಸಮುದ್ಧೃತಮ್ ।
ಸ್ನಾತಕಾನಾಮಿದಂ ಶಾಸ್ತ್ರಂ ವಾಚ್ಯಂ ಪುತ್ರಾನುಶಾಸನಮ್ ॥೧೫॥

ಮನುಷ್ಯರು ಯಾವ ರೀತಿಯಲ್ಲಿ ಮೊಸರನ್ನು ಕಡೆದು ಬೆಣ್ಣೆಯನ್ನು ತೆಗೆಯುವರೋ–ಅರಣಿಯನ್ನು ಕಡೆದು ಅಗ್ನಿಯನ್ನು ಉತ್ಪಾದಿಸುವರೋ–ಹಾಗೆಯೇ ನಾನೂ ಕೂಡ ಪುತ್ರನ ಸಲುವಾಗಿ (ನಿನ್ನ ಸಲುವಾಗಿ) ಅನೇಕ ವಿದ್ವಾಂಸರ ಜ್ಞಾನವನ್ನು ಒಟ್ಟಾಗಿ ಸೇರಿಸಿ ಕಡೆದು ಈ ಬ್ರಹ್ಮತತ್ತ್ವವೆಂಬ ಬೆಣ್ಣೆಯನ್ನು ಹೊರತೆಗೆದಿದ್ದೇನೆ. ಮಗು! ನೀನು ಈ ಮೋಕ್ಷಶಾಸ್ತ್ರವನ್ನು ಸ್ನಾತಕರಿಗೆ ಉಪದೇಶಿಸಬೇಕು.

ತದಿದಂ ನಾಪ್ರಶಾನ್ತಾಯ ನಾದಾನ್ತಾಯಾತಪಸ್ವಿನೇ ।
ನಾವೇದವಿದುಷೇ ವಾಚ್ಯಂ ತಥಾ ನಾನುಗತಾಯ ಚ ॥೧೬॥

ನಾಸೂಯಕಾಯಾನೃಜವೇ ನ ಚಾನಿರ್ದಿಷ್ಟಕಾರಿಣೇ ।
ನ ತರ್ಕಶಾಸ್ತ್ರದಗ್ಧಾಯ ತಥೈವ ಪಿಶುನಾಯ ಚ ॥೧೭॥

ಯಾವನ ಮನಸ್ಸು ಪ್ರಶಾಂತವಾಗಿಲ್ಲವೋ, ಯಾವನು ಜಿತೇಂದ್ರಿಯನಲ್ಲವೋ ಮತ್ತು ತಪಸ್ವಿಯಲ್ಲವೋ–ಅಂತಹವನಿಗೆ ಈ ಶಾಸ್ತ್ರವನ್ನು ಉಪದೇಶಿಸಬಾರದು. ವೇದಾಧ್ಯಯನವನ್ನು ಮಾಡದವನಿಗೆ ಈ ಶಾಸ್ತ್ರವನ್ನು ಉಪದೇಶಿಸಬಾರದು. ವಿಧೇಯನಲ್ಲದವನಿಗೆ, ಅಸೂಯೆಯಿಂದ ಕೂಡಿರುವವನಿಗೆ, ಸರಳತೆಯಿಲ್ಲದವನಿಗೆ, ಹೇಳಿದುದನ್ನು ಮಾಡದವನಿಗೆ, ತರ್ಕಶಾಸ್ತ್ರದಲ್ಲಿಯೇ ಬೆಂದುಹೋಗಿರುವವನಿಗೆ (ತರ್ಕದಲ್ಲಿಯೇ ಮುಳುಗಿಹೋಗಿರು

ವವನಿಗೆ) ಮತ್ತು ಚಾಡಿಕೋರನಿಗೆ–ಈ ಮೋಕ್ಷಶಾಸ್ತ್ರವನ್ನು ಉಪದೇಶಿಸಬಾರದು.

ಶ್ಲಾಘಿನೇ ಶ್ಲಾಘನೀಯಾಯ ಪ್ರಶಾನ್ತಾಯ ತಪಸ್ವಿನೇ ॥೧೮॥

ಇದಂ ಪ್ರಿಯಾಯ ಪುತ್ರಾಯ ಶಿಷ್ಯಾಯಾನುಗತಾಯ ಚ ।
ರಹಸ್ಯಧರ್ಮಂ ವಕ್ತವ್ಯಂ ನಾನ್ಯಸ್ಮೈ ತು ಕಥಂಚನ ॥೧೯॥

ಈ ರಹಸ್ಯವಾದ ಬ್ರಹ್ಮಧರ್ಮವನ್ನು-ತತ್ತ್ವಜ್ಞಾನವನ್ನು ಶ್ಲಾಘಿಸುವ, ಸದ್ಗುಣಗಳನ್ನು ಹೊಂದಿ ಎಲ್ಲರ ಹೊಗಳಿಕೆಗೂ ಪಾತ್ರನಾಗಿರುವ, ಪ್ರಶಾಂತನಾಗಿರುವ, ತಪಸ್ವಿಯಾಗಿರುವ ಪ್ರಿಯಪುತ್ರನಿಗಾಗಲೀ, ವಿಧೇಯನಾದ ಶಿಷ್ಯನಿಗಾಗಲೀ–ಉಪದೇಶಿಸಬೇಕು. ಬೇರೆಯವನಿಗೆ ಯಾವುದೇ ಕಾರಣದಿಂದಲೂ ಉಪದೇಶಿಸಬಾರದು.

ಯದ್ಯಪ್ಯಸ್ಯ ಮಹೀಂ ದದ್ಯಾದ್ರತ್ನಪೂರ್ಣಾಮಿಮಾಂ ನರಃ ।
ಇದಮೇವ ತತಃ ಶ್ರೇಯ ಇತಿ ಮನ್ಯೇತ ತತ್ತ್ವವಿತ್ ॥೨೦॥

ಒಬ್ಬ ಮನುಷ್ಯನು ರತ್ನಪೂರ್ಣವಾದ ಈ ಭೂಮಿಯನ್ನೇ ಕೊಟ್ಟುಬಿಡಬಹುದು. ಆದರೆ ವಸುಂಧರೆಗಿಂತಲೂ ಈ ತತ್ತ್ವಜ್ಞಾನವನ್ನು ಪಡೆಯುವುದೇ ಶ್ರೇಯಸ್ಕರವೆಂದು ತತ್ತ್ವವನ್ನು ತಿಳಿದವರು ಭಾವಿಸಬೇಕು.

ಅತೋ ಗುಹ್ಯತರಾರ್ಥಂ ತದಧ್ಯಾತ್ಮಮತಿಮಾನುಷಮ್ ।
ಯತ್ತನ್ಮಹರ್ಷಿಭಿರ್ದೃಷ್ಟಂ ವೇದಾನ್ತೇಷು ಚ ಗೀಯತೇ ॥೨೧॥

ತತ್ತೇಽಹಂ ಸಮ್ಪ್ರವಕ್ಷ್ಯಾಮಿ ಯನ್ಮಾಂ ತ್ವಂ ಪರಿಪೃಚ್ಛಸಿ ॥೨೨॥

ಮಗು! ಶುಕದೇವ! ನೀನು ನನ್ನನ್ನು ಕುರಿತು ಯಾವ ಪ್ರಶ್ನೆಯನ್ನು ಕೇಳಿದೆಯೋ ಅದಕ್ಕೆ ಅನುಸಾರವಾಗಿ–ಇದಕ್ಕಿಂತಲೂ ನಿಗೂಢವಾದ ಪ್ರಯೋಜನವುಳ್ಳ, ಅಲೌಕಿಕವಾದ, ಮಹರ್ಷಿಗಳಿಂದ ನೋಡಲ್ಪಟ್ಟಿರುವ, ವೇದಗಳ ಕಡೆಯ ಭಾಗಗಳಾದ ಉಪನಿಷತ್ತುಗಳಲ್ಲಿಯೂ ಗಾನಮಾಡಲ್ಪಟ್ಟಿರುವ ಅಧ್ಯಾತ್ಮಜ್ಞಾನವನ್ನು ಉಪದೇಶಿಸುತ್ತೇನೆ.

ಯಚ್ಚ ತೇ ಮನಸಿ ವರ್ತತೇ ಪರಂ
ಯತ್ರ ಚಾಸ್ತಿ ತವ ಸಂಶಯಃ ಕ್ವಚಿತ್ ।

ಶ್ರೂಯತಾಮಯಮಹಂ ತವಾಗ್ರತಃ
ಪುತ್ರ ಕಿಂ ಹಿ ಕಥಯಾಮಿ ತೇ ಪುನಃ ॥೨೩॥

ಶುಕ! ನಿನ್ನ ಮನಸ್ಸಿನಲ್ಲಿ ಕೇಳಬೇಕಾದುದು ಬೇರೆ ಯಾವುದಿದೆಯೋ ಮತ್ತು ಯಾವ ವಿಷಯದಲ್ಲಿ ನಿನಗೆ ಸಂಶಯವುಂಟಾಗಿದೆಯೋ ಅದನ್ನು ಕೇಳು. ಈಗಲೇ ಅವುಗಳಿಗೆ ಉತ್ತರವನ್ನು ಹೇಳುತ್ತೇನೆ ಅಥವಾ ಬೇರೆ ಯಾವುದನ್ನು ಪುನಃ ನಿನಗೆ ಹೇಳಲಿ?"

೨೪೬ನೆಯ ಅಧ್ಯಾಯವು ಮುಗಿಯಿತು.

೨೪೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಮಹಾಭೂತಾದಿತತ್ತ್ವಗಳ ವಿವೇಚನೆ

ಧರ್ಮಜ! ಶುಕನು ಹೇಳುತ್ತಾನೆ :

ಅಧ್ಯಾತ್ಮಂ ವಿಸ್ತರೇಣೇಹ ಪುನರೇವ ವದಸ್ವ ಮೇ ।
ಯದಧ್ಯಾತ್ಮಂ ಯಥಾ ವೇದ ಭಗವನ್ನೃಷಿಸತ್ತಮ ॥೧॥

"ಭಗವನ್! ಮುನಿಶ್ರೇಷ್ಠರೇ! ಪುನಃ ನೀವು ನನಗೆ ಅಧ್ಯಾತ್ಮಶಾಸ್ತ್ರವನ್ನೇ ವಿಸ್ತಾರವಾಗಿ ಹೇಳಿರಿ. ಅಧ್ಯಾತ್ಮವೆಂಬುದು ಯಾವುದು? ಅದನ್ನು ತಿಳಿಯುವುದು ಹೇಗೆ?"

ವ್ಯಾಸರು ಹೇಳುತ್ತಾರೆ :

ಅಧ್ಯಾತ್ಮಂ ಯದಿದಂ ತಾತ ಪುರುಷಸ್ಯೇಹ ಪಠ್ಯತೇ ।
ತತ್ತೇಽಹಂ ವರ್ತಯಿಷ್ಯಾಮಿ ತಸ್ಯ ವ್ಯಾಖ್ಯಾಮಿಮಾಂ ಶೃಣು ॥೨॥

"ಮಗು! ಮನುಷ್ಯನ ಸಲುವಾಗಿ ಯಾವ ಅಧ್ಯಾತ್ಮವಿಷಯವು ಹೇಳಲ್ಪಟ್ಟಿದೆಯೋ–ಅದನ್ನೇ ನಾನು ನಿನಗೆ ಪರಿಚಯಮಾಡಿಸಿಕೊಡುತ್ತೇನೆ. ಅಧ್ಯಾತ್ಮಕ್ಕೆ ಸಂಬಂಧಿಸಿದ ಈ ವಿವರಣೆಯನ್ನು ಕೇಳು.

ಭೂಮಿರಾಪಸ್ತಥಾ ಜ್ಯೋತಿರ್ವಾಯುರಾಕಾಶ ಏವ ಚ ।
ಮಹಾಭೂತಾನಿ ಭೂತಾನಾಂ ಸಾಗರಸ್ಯೋರ್ಮಯೋ ಯಥಾ ॥೩॥

ಪೃಥ್ವೀ, ಜಲ, ತೇಜಸ್ಸು, ವಾಯು ಮತ್ತು ಆಕಾಶ–ಎಂಬ ಪಂಚ

ಮಹಾಭೂತಗಳು ಸಕಲಪ್ರಾಣಿಗಳ ಶರೀರಗಳಲ್ಲಿಯೂ ಇವೆ. ಸಮುದ್ರದಲ್ಲಿರುವ ಅಲೆಗಳು ಮೇಲೇಳುತ್ತಾ ಪುನಃ ನೀರಿನೊಳಗೆ ಲೀನವಾಗುತ್ತಾ ಇರುವಂತೆ ಈ ಪಂಚಮಹಾಭೂತಗಳು ಪ್ರಾಣಿಗಳ ಶರೀರರೂಪದಲ್ಲಿ ಹುಟ್ಟುತ್ತಿರುತ್ತವೆ ಮತ್ತು ವಿಲೀನವಾಗುತ್ತಿರುತ್ತವೆ.

ಪ್ರಸಾರ್ಯೇಹ ಯಥಾಙ್ಗಾನಿ ಕೂರ್ಮಃ ಸಂಹರತೇ ಪುನಃ ।
ತದ್ವನ್ಮಹಾನ್ತಿ ಭೂತಾನಿ ಯವೀಯಃಸು ವಿಕುರ್ವತೇ ॥೪॥

ಯಾವ ರೀತಿಯಲ್ಲಿ ಆಮೆಯು ಮೊದಲು ತನ್ನ ಅವಯವಗಳನ್ನು ಪ್ರಸರಿಸಿಕೊಂಡು ಪುನಃ ಒಳಕ್ಕೆ ಸರಿಸಿಕೊಳ್ಳುವುದೋ–ಹಾಗೆಯೇ ಮಹಾಭೂತಗಳು ಸಣ್ಣ-ಸಣ್ಣದಾದ ಪ್ರಾಣಿಗಳಲ್ಲಿಯೂ ಸೇರಿಕೊಂಡು ಪ್ರಕಟವಾಗಿ ಪುನಃ ವಿಲೀನವಾಗುತ್ತವೆ.

ಇತಿ ತನ್ಮಯಮೇವೇದಂ ಸರ್ವಂ ಸ್ಥಾವರಜಙ್ಗಮಮ್ ।
ಸರ್ಗೇ ಚ ಪ್ರಲಯೇ ಚೈವ ತಸ್ಮಿನ್ನಿರ್ದಿಶ್ಯತೇ ತಥಾ ॥೫॥

ಹೀಗೆ ಚರಾಚರಪ್ರಾಣಿಗಳೆಲ್ಲವೂ ಪಂಚಭೂತಾತ್ಮಕಗಳೇ ಆಗಿವೆ. ಸೃಷ್ಟಿಕಾಲದಲ್ಲಿ ಪಂಚಭೂತಗಳಿಂದಲೇ ಸ್ಥಾವರ-ಜಂಗಮಗಳ ಉತ್ಪತ್ತಿಯಾಗುತ್ತದೆ ಮತ್ತು ಲಯಕಾಲದಲ್ಲಿ ಸ್ಥಾವರ-ಜಂಗಮಗಳೆಲ್ಲವೂ ಪಂಚಭೂತಗಳಲ್ಲಿಯೇ ಲಯಹೊಂದುತ್ತವೆ.

ಮಹಾಭೂತಾನಿ ಪಞ್ಚೈವ ಸರ್ವಭೂತೇಷು ಭೂತಕೃತ್ ।
ಅಕರೋತ್ತಾತ ವೈಷಮ್ಯಂ ಯಸ್ಮಿನ್ಯದನುಪಶ್ಯತಿ ॥೬॥

ಎಲ್ಲ ಪ್ರಾಣಿಗಳಲ್ಲಿಯೂ ಐದೇ ಮಹಾಭೂತಗಳ ಸಮಾವೇಶವಾಗಿರುವುದರಿಂದ ಒಂದು ಪ್ರಾಣಿಗೂ ಮತ್ತೊಂದು ಪ್ರಾಣಿಗೂ ಯಾವ ವ್ಯತ್ಯಾಸವೂ ಇರಬಾರದಾಗಿತ್ತು. ಆದರೆ ಈ ಪಂಚಮಹಾಭೂತಗಳ ಸ್ರಷ್ಟೃವಾದ ಬ್ರಹ್ಮನು ಪ್ರಾಣಿಗಳ ಕರ್ಮಾನುಸಾರವಾಗಿ ನ್ಯೂನಾಧಿಕರೂಪಗಳಲ್ಲಿ ಪಂಚಮಹಾಭೂತಗಳನ್ನು ಪ್ರಾಣಿಗಳಲ್ಲಿ ಸಮಾವೇಶಗೊಳಿಸಿದ್ದಾನೆ. ಪಂಚಮಹಾಭೂತಗಳ ಪ್ರಮಾಣದಲ್ಲಿ ಒಂದು ಪ್ರಾಣಿಗೂ ಮತ್ತೊಂದು ಪ್ರಾಣಿಗೂ

ವ್ಯತ್ಯಾಸವಿರುತ್ತದೆ. ಆದುದರಿಂದಲೇ ಪ್ರಾಣಿಗಳಲ್ಲಿ ಒಂದಕ್ಕೊಂದಕ್ಕೆ ಈ ವ್ಯತ್ಯಾಸವನ್ನು ಬ್ರಹ್ಮನೇ ಕಲ್ಪಿಸಿದ್ದಾನೆ."

ಶುಕನು ಪ್ರಶ್ನಿಸುತ್ತಾನೆ :

ಅಕರೋದ್ಯಚ್ಛರೀರೇಷು ಕಥಂ ತದುಪಲಕ್ಷಯೇತ್ ।
ಇನ್ದ್ರಿಯಾಣಿ ಗುಣಾಃ ಕೇಚಿತ್ಕಥಂ ತಾನುಪಲಕ್ಷಯೇತ್ ॥೭॥

"ತಂದೆಯೇ! ಬ್ರಹ್ಮನು ಮನುಷ್ಯ-ಪಶು-ಪಕ್ಷಿಗಳ ಶರೀರಗಳಲ್ಲಿ ವ್ಯತ್ಯಾಸಪ್ರಮಾಣದಿಂದ ಪಂಚಮಹಾಭೂತಗಳನ್ನಿಟ್ಟಿರುವನೆಂಬುದನ್ನು ತಿಳಿಯುವುದಾದರೂ ಹೇಗೆ? ಶರೀರದಲ್ಲಿ ಇಂದ್ರಿಯಗಳೂ ಇವೆ ; ಕೆಲವು ಗುಣಗಳೂ ಇವೆ. ಇವುಗಳಲ್ಲಿ ಮಹಾಭೂತಗಳನ್ನು ಹೇಗೆ ಗುರುತಿಸಬೇಕು?"

ವ್ಯಾಸರು ಹೇಳುತ್ತಾರೆ :

ಏತತ್ತೇ ವರ್ತಯಿಷ್ಯಾಮಿ ಯಥಾವದನುಪೂರ್ವಶಃ ।
ಶೃಣು ತತ್ತ್ವಮಿಹೈಕಾಗ್ರೋ ಯಥಾತತ್ತ್ವಂ ಯಥಾ ಚ ತತ್ ॥೮॥

"ವತ್ಸ! ನಾನು ಈ ವಿಷಯವನ್ನು ಅನುಕ್ರಮವಾಗಿ ಯಥಾವತ್ತಾಗಿ ಪ್ರತಿಪಾದಿಸುತ್ತೇನೆ. ಈ ಸಮಸ್ತವಿಷಯಗಳೂ ತತ್ತ್ವತಃ ಹೇಗಿವೆಯೆಂಬುದನ್ನು ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ಶಬ್ದಃ ಶ್ರೋತ್ರಂ ತಥಾ ಖಾನಿ ತ್ರಯಮಾಕಾಶಸಮ್ಭವಮ್ ।
ಪ್ರಾಣಶ್ಚೇಷ್ಟಾ ತಥಾ ಸ್ಪರ್ಶ ಏತೇ ವಾಯುಗುಣಾಸ್ತ್ರಯಃ ॥೯॥

ಶಬ್ದ, ಶ್ರೋತ್ರ ಮತ್ತು ಶರೀರದ ದ್ವಾರಗಳು–ಇವು ಮೂರೂ ಆಕಾಶದಿಂದ ಹುಟ್ಟಿವೆ. ಪ್ರಾಣ, ಚಲನೆ ಮತ್ತು ಸ್ಪರ್ಶ–ಇವು ಮೂರೂ ವಾಯುಭೂತದಿಂದ ಹುಟ್ಟಿದ ಗುಣಗಳಾಗಿವೆ.

ರೂಪಂ ಚಕ್ಷುರ್ವಿಪಾಕಶ್ಚ ತ್ರಿಧಾ ಜ್ಯೋತಿರ್ವಿಧೀಯತೇ ।
ರಸೋಽಥ ರಸನಂ ಸ್ನೇಹೋ ಗುಣಾಸ್ತ್ವೇತೇ ತ್ರಯೋಽಮ್ಭಸಃ ॥೧೦॥

ರೂಪ, ಕಣ್ಣು ಮತ್ತು ಜಠರಾನಲ–ಈ ಮೂರು ಪ್ರಕಾರವಾಗಿ ಅಗ್ನಿ

ಭೂತವು ಪ್ರಕಟವಾಗಿದೆ. ರಸ, ನಾಲಿಗೆ ಮತ್ತು ಜಿಡ್ಡುಗಳು ಅಬ್ಭೂತದ (ಜಲತತ್ತ್ವದ) ಗುಣಗಳಾಗಿವೆ.

ಘ್ರೇಯಂ ಘ್ರಾಣಂ ಶರೀರಂ ಚ ಭೂಮೇರೇತೇ ಗುಣಾಸ್ತ್ರಯಃ ।
ಏತಾವಾನಿನ್ದ್ರಿಯಗ್ರಾಮೋ ವ್ಯಾಖ್ಯಾತಃ ಪಾಞ್ಚಭೌತಿಕಃ ॥೧೧॥

ಗಂಧ, ಮೂಗು ಮತ್ತು ಶರೀರ–ಈ ಮೂರು ಭೂಮಿತತ್ತ್ವದ ಗುಣಗಳಾಗಿವೆ. ಹೀಗೆ ಇಂದ್ರಿಯಸಮುದಾಯಗಳಿಂದ ಸಹಿತವಾದ ಈ ಶರೀರವನ್ನು ಪಾಂಚಭೌತಿಕವೆಂದು ಹೇಳುತ್ತಾರೆ.

ವಾಯೋಃ ಸ್ಪರ್ಶೋ ರಸೋಽದ್ಭ್ಯಶ್ಚ ಜ್ಯೋತಿಷೋ ರೂಪಮುಚ್ಯತೇ ।
ಆಕಾಶಪ್ರಭವಃ ಶಬ್ದೋ ಗನ್ಧೋ ಭೂಮಿಗುಣಃ ಸ್ಮೃತಃ ॥೧೨॥

ಸ್ಪರ್ಶವು ವಾಯುವಿನ ಗುಣವಾಗಿದೆ. ರಸವು ನೀರಿನಿಂದ ಹುಟ್ಟಿದೆ. ರೂಪವು ತೇಜಸ್ಸಿನ ಗುಣವಾಗಿದೆ. ಶಬ್ದವು ಆಕಾಶದ ಗುಣವೆಂದೂ ಗಂಧವು ಭೂಮಿಯ ಗುಣವೆಂದೂ ಹೇಳುತ್ತಾರೆ.

ಮನೋ ಬುದ್ಧಿಃ ಸ್ವಭಾವಶ್ಚ ತ್ರಯ ಏತೇ ಸ್ವಯೋನಿಜಾಃ ।
ನ ಗುಣಾನತಿವರ್ತನ್ತೇ ಗುಣೇಭ್ಯಃ ಪರಮಾಗತಾಃ ॥೧೩॥

ಮನಸ್ಸು, ಬುದ್ಧಿ ಮತ್ತು ಸ್ವಭಾವಗಳು ತಮ್ಮ ಹುಟ್ಟಿಗೆ ಕಾರಣವಾದ ಹಿಂದಿನ ಸಂಸ್ಕಾರಗಳಿಂದಲೇ ಹುಟ್ಟಿರುತ್ತವೆ. ಮನಸ್ಸು, ಬುದ್ಧಿ ಮತ್ತು ಸ್ವಭಾವಗಳನ್ನು ಜೀವನು ಹುಟ್ಟಿನೊಡನೆಯೇ ತಂದಿರುತ್ತಾನೆ. ಇವುಗಳು ಪಂಚಭೂತಗಳಲ್ಲಿಯೇ ಸೇರಿದ್ದರೂ ಪಂಚಭೂತಗಳ ಗುಣಗಳಾದ ರೂಪ-ರಸ-ಗಂಧಾದಿಗಳಿಗಿಂತಲೂ ಇವು ಶ್ರೇಷ್ಠವೆನಿಸಿವೆ. ಆದರೆ ಮನೋಬುದ್ಧಿ-ಸ್ವಭಾವಗಳು ರೂಪ-ರಸಾದಿ ಪಂಚಭೂತಗಳ ಗುಣಗಳನ್ನು ಅತಿಕ್ರಮಿಸಿ ಹೋಗುವುದಿಲ್ಲ.

ಯಥಾ ಕೂರ್ಮ ಇಹಾಙ್ಗಾನಿ ಪ್ರಸಾರ್ಯ ವಿನಿಯಚ್ಛತಿ ।
ಏವಮೇವೇನ್ದ್ರಿಯಗ್ರಾಮಂ ಬುದ್ಧಿಃ ಸೃಷ್ಟ್ವಾ ನಿಯಚ್ಛತಿ ॥೧೪॥

ಯಾವ ರೀತಿಯಲ್ಲಿ ಆಮೆಯು ತನ್ನ ಅವಯವಗಳನ್ನು ಪ್ರಸರಿಸಿ

ಪುನಃ ಒಳಸರಿಸಿಕೊಳ್ಳುವುದೋ–ಅದೇ ರೀತಿಯಲ್ಲಿ ಬುದ್ಧಿಯು ತನ್ನ ಅಧೀನದಲ್ಲಿರುವ ಇಂದ್ರಿಯಗಳ ಸಮೂಹವನ್ನು ವಿಷಯಗಳ ಕಡೆಗೆ ಕಳುಹಿಸುತ್ತದೆ ಮತ್ತು ವಿಷಯಗಳಿಂದ ಹಿಂದಕ್ಕೆ ಎಳೆದುಕೊಳ್ಳುತ್ತದೆ.

ಯದೂರ್ಧ್ವಂ ಪಾದತಲಯೋರವಾಙ್ಮೂರ್ಧ್ನಶ್ಚ ಪಶ್ಯತಿ ।
ಏತಸ್ಮಿನ್ನೇವ ಕೃತ್ಯೇ ತು ವರ್ತತೇ ಬುದ್ಧಿರುತ್ತಮಾ ॥೧೫॥

ಪಾದತಲಗಳಿಂದ ಮೇಲಕ್ಕೂ–ತಲೆಯಿಂದ ಕೆಳಕ್ಕೂ ಮನುಷ್ಯನು ಯಾವುದನ್ನು ನೋಡುವನೋ, ನಖ-ಶಿಖಾಪರ್ಯಂತವಾದ ಯಾವ ಅವಯವಗಳನ್ನು 'ನಾನು-ನನ್ನದು' ಎಂದು ಹೇಳಿಕೊಳ್ಳುವನೋ ಮತ್ತು ನಖ-ಶಿಖಾಂತವಾಗಿರುವ ಅವಯವಗಳಿಂದ ಯಾವ ಕಾರ್ಯವನ್ನು ಮಾಡುವನೋ–ಅವೆಲ್ಲಕ್ಕೂ ಕಾರಣ ಅವನಲ್ಲಿರುವ ಉತ್ತಮವಾದ ಬುದ್ಧಿಯೇ ಆಗಿದೆ. (ಶರೀರದಲ್ಲಿ 'ನಾನು'–ಎಂಬುದು ಯಾವುದಿರುವುದೋ ಅದು ಬುದ್ಧಿಯ ರೂಪಾಂತರವೇ ಆಗಿದೆ.)

ಗುಣಾನ್ನೇನೀಯತೇ ಬುದ್ಧಿರ್ಬುದ್ಧಿರೇವೇನ್ದ್ರಿಯಾಣ್ಯಪಿ ।
ಮನಃಷಷ್ಠಾನಿ ಸರ್ವಾಣಿ ಬುದ್ಧ್ಯಭಾವೇ ಕುತೋ ಗುಣಾಃ ॥೧೬॥

ಬುದ್ಧಿಯೇ ಶಬ್ದಾದಿಗಳನ್ನು ಶ್ರೋತ್ರಾದಿ ಇಂದ್ರಿಯಗಳ ಕಡೆಗೆ ಪುನಃ ಪುನಃ ಒಯ್ಯುತ್ತಲೇ ಇರುತ್ತದೆ. ಬುದ್ಧಿಯೇ ಮನಸ್ಸಿನಿಂದ ಕೂಡಿದ ಎಲ್ಲ ಇಂದ್ರಿಯಗಳನ್ನೂ ವಿಷಯಗಳ ಕಡೆಗೆ ಒಯ್ಯುತ್ತಿರುತ್ತದೆ. ಮನಸ್ಸು ಮತ್ತು ಇಂದ್ರಿಯಗಳೊಡನೆ ಬುದ್ಧಿಯ ಸಮಾವೇಶವಿಲ್ಲದಿದ್ದರೆ ವಿಷಯಗಳ ಅನುಭವವು ಹೇಗೆ ತಾನೇ ಸಾಧ್ಯವಾಗುತ್ತದೆ?

ಇನ್ದ್ರಿಯಾಣಿ ನರೇ ಪಞ್ಚ ಷಷ್ಠಂ ತು ಮನ ಉಚ್ಯತೇ ।
ಸಪ್ತಮೀಂ ಬುದ್ಧಿಮೇವಾಹುಃ ಕ್ಷೇತ್ರಜ್ಞಂ ಪುನರಷ್ಟಮಮ್ ॥೧೭॥

ಮನುಷ್ಯನಲ್ಲಿ ಐದು ಇಂದ್ರಿಯಗಳಿವೆ. ಆರನೆಯದಾಗಿ ಮನಸ್ಸಿದೆ. ಏಳನೆಯದು ಬುದ್ಧಿ. ಕ್ಷೇತ್ರಜ್ಞನನ್ನು (ಜೀವನನ್ನು) ಎಂಟನೆಯವನೆಂದು ಹೇಳುತ್ತಾರೆ.

ಚಕ್ಷುರಾಲೋಚನಾಯೈವ ಸಂಶಯಂ ಕುರುತೇ ಮನಃ ।
ಬುದ್ಧಿರಧ್ಯವಸಾನಾಯ ಸಾಕ್ಷೀ ಕ್ಷೇತ್ರಜ್ಞ ಉಚ್ಯತೇ ॥೧೮॥

ಕಣ್ಣು ರೂಪವನ್ನು ನೋಡುವುದಕ್ಕೋಸ್ಕರವೇ ಇದೆ. ಮನಸ್ಸು ಸಂಕಲ್ಪ-ವಿಕಲ್ಪರೂಪದಲ್ಲಿ ಸಂಶಯಪಡುತ್ತದೆ. ಬುದ್ಧಿಯು ನಿಶ್ಚಯ ಮಾಡುವುದಕ್ಕಾಗಿ ಇದೆ. ಇವೆಲ್ಲಕ್ಕೂ ಸಾಕ್ಷಿಯಾಗಿರುವವನು ಕ್ಷೇತ್ರಜ್ಞ ನೆನಿಸುತ್ತಾನೆ.

ರಜಸ್ತಮಶ್ಚ ಸತ್ತ್ವಂ ಚ ಯತ್ರ ಏತೇ ಸ್ವಯೋನಿಜಾಃ ।
ಸಮಾಃ ಸರ್ವೇಷು ಭೂತೇಷು ತಾನ್ಗುಣಾನುಪಲಕ್ಷಯೇತ್ ॥೧೯॥

ಸತ್ತ್ವ-ರಜಸ್ತಮೋಗುಣಗಳು ಅವುಗಳಿಗೆ ಕಾರಣಭೂತವಾದ ಮೂಲ ಪ್ರಕೃತಿಯಿಂದಲೇ ಹುಟ್ಟಿವೆ. ಈ ಮೂರು ಗುಣಗಳೂ ಸಕಲಪ್ರಾಣಿ ಗಳಲ್ಲಿಯೂ ಸಾಧಾರಣರೂಪದಿಂದ ಇರುತ್ತವೆ. ಮನುಷ್ಯನು ಮಾಡುವ ಕಾರ್ಯಗಳ ಮೂಲಕವಾಗಿ ಆ ಗುಣಗಳನ್ನು ಗುರುತಿಸಬೇಕು.

ತತ್ರ ಯತ್ಪ್ರೀತಿಸಂಯುಕ್ತಂ ಕಿಂಚಿದಾತ್ಮನಿ ಲಕ್ಷಯೇತ್ ।
ಪ್ರಶಾನ್ತಮಿವ ಸಂಶುದ್ಧಂ ಸತ್ತ್ವಂ ತದುಪಧಾರಯೇತ್ ॥೨೦॥

ತನ್ನಲ್ಲಿ (ಮನಸ್ಸಿನಲ್ಲಿ ಮತ್ತು ದೇಹದಲ್ಲಿ) ಪ್ರೀತಿಯುಕ್ತವಾದ, ವಿಶುದ್ಧವಾದ ಮತ್ತು ಪ್ರಶಾಂತವಾದ ಭಾವವಿರುವುದು ಕಂಡುಬಂದರೆ ಸತ್ತ್ವಗುಣದ ಆವಿರ್ಭಾವವಾಗಿರುವುದೆಂದು ತಿಳಿದುಕೊಳ್ಳಬೇಕು.

ಯತ್ತು ಸಂತಾಪಸಂಯುಕ್ತಂ ಕಾಯೇ ಮನಸಿ ವಾ ಭವೇತ್ ।
ಪ್ರವೃತ್ತಂ ರಜ ಇತ್ಯೇವಂ ತತ್ರ ಚಾಪ್ಯುಪಲಕ್ಷಯೇತ್ ॥೨೧॥

ದೇಹದಲ್ಲಾಗಲೀ ಮನಸ್ಸಿನಲ್ಲಾಗಲೀ ಸಂತಾಪಯುಕ್ತವಾದ ಭಾವವು ಕಂಡುಬಂದರೆ–ರಜೋಗುಣದ ಆವಿರ್ಭಾವವಾಗಿದೆಯೆಂದು ತಿಳಿಯಬೇಕು.

ಯತ್ತು ಸಂಮೋಹಸಂಯುಕ್ತಮವ್ಯಕ್ತವಿಷಯಂ ಭವೇತ್ ।
ಅಪ್ರತರ್ಕ್ಯಮವಿಜ್ಞೇಯಂ ತಮಸ್ತದುಪಧಾರ್ಯತಾಮ್ ॥೨೨॥

ಮನಸ್ಸು ಯಾವಾಗ ಭ್ರಾಂತಿಯುಕ್ತವಾಗಿರುವುದೋ–ಮನಸ್ಸಿನ ವಿಷಯವು ಅಸ್ಪಷ್ಟವಾಗಿರುವುದೋ–ಊಹೆಮಾಡಲೂ ಸಾಧ್ಯವಾಗದೇ

ಇರುವುದೋ–ಯಾವುದೊಂದೂ ತಿಳಿಯುವುದೇ ಇಲ್ಲವೋ–ಆಗ ತಮೋ ಗುಣದ ಆವಿರ್ಭಾವವಾಗಿರುವುದೆಂದು ತಿಳಿಯಬೇಕು.

ಪ್ರಹರ್ಷಃ ಪ್ರೀತಿರಾನನ್ದಃ ಸಾಮ್ಯಂ ಸ್ವಸ್ಥಾತ್ಮಚಿತ್ತತಾ ।
ಅಕಸ್ಮಾದ್ಯದಿ ವಾ ಕಸ್ಮಾದ್ವರ್ತನ್ತೇ ಸಾತ್ತ್ವಿಕಾ ಗುಣಾಃ ॥೨೩॥

ಅತಿಶಯವಾದ ಹರ್ಷ, ಪ್ರೀತಿ, ಆನಂದ, ಸಮತೆ, ಚಿತ್ತಸ್ವಾಸ್ಥ್ಯ–ಈ ಸದ್ಗುಣಗಳು ಕಾರಣವಿಲ್ಲದೇ ಅಥವಾ ಯಾವುದಾದರೂ ಕಾರಣಗಳಿಂದ ಉಂಟಾಗಿದ್ದರೆ–ಅಂತಹವನಲ್ಲಿ ಸಾತ್ತ್ವಿಕಗುಣಗಳಿವೆಯೆಂದು ತಿಳಿಯಬೇಕು.

ಅಭಿಮಾನೋ ಮೃಷಾವಾದೋ ಲೋಭೋ ಮೋಹಸ್ತಥಾಕ್ಷಮಾ ।
ಲಿಙ್ಗಾನಿ ರಜಸಸ್ತಾನಿ ವರ್ತನ್ತೇ ಹೇತ್ವಹೇತುತಃ ॥೨೪॥

ಅಭಿಮಾನ, ಸುಳ್ಳುಮಾತು, ಲೋಭ, ಮೋಹ, ಅಸಹನೆ–ಇವುಗಳು ಕಾರಣವಿರಲಿ, ಕಾರಣವಿಲ್ಲದಿರಲಿ, ಮನುಷ್ಯನಲ್ಲಿ ಪ್ರಕಟವಾದರೆ–ಅವನ್ನು ರಜೋಗುಣದ ಚಿಹ್ನೆಗಳೆಂದು ತಿಳಿಯಬೇಕು.

ತಥಾ ಮೋಹಃ ಪ್ರಮಾದಶ್ಚ ನಿದ್ರಾ ತನ್ದ್ರಾಪ್ರಬೋಧಿತಾ ।
ಕಥಂಚಿದಭಿವರ್ತನ್ತೇ ವಿಜ್ಞೇಯಾಸ್ತಾಮಸಾ ಗುಣಾಃ ॥೨೫॥

ಹೀಗೆಯೇ ಮೋಹ, ಪ್ರಮಾದ, ನಿದ್ರೆ, ಆಲಸ್ಯ, ಅಜ್ಞಾನ–ಇವುಗಳು ಯಾವುದಾದರೂ ಕಾರಣದಿಂದ ಅಥವಾ ಕಾರಣವಿಲ್ಲದೆಯೇ ಒಬ್ಬನಲ್ಲಿ ಆವಿರ್ಭವಿಸಿದ್ದರೆ–ಅವುಗಳನ್ನು ತಾಮಸಗುಣಗಳೆಂದು ತಿಳಿಯಬೇಕು."

೨೪೭ನೆಯ ಅಧ್ಯಾಯವು ಮುಗಿಯಿತು.

೨೪೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬುದ್ಧಿಯ ಶ್ರೇಷ್ಠತೆ ಮತ್ತು ಪ್ರಕೃತಿ–ಪುರುಷವಿವೇಕ

ಯುಧಿಷ್ಠಿರ! ವ್ಯಾಸರು ಹೇಳುತ್ತಾರೆ :

ಮನೋ ವಿಸೃಜತೇ ಭಾವಂ ಬುದ್ಧಿರಧ್ಯವಸಾಯಿನೀ ।
ಹೃದಯಂ ಪ್ರಿಯಾಪ್ರಿಯೇ ವೇದ ತ್ರಿವಿಧಾ ಕರ್ಮಚೋದನಾ ॥೧॥

"ಮಗು! ಕರ್ಮಗಳನ್ನು ಮಾಡಲು ಮೂರು ವಿಧವಾದ ಪ್ರೇರಣೆ

ಗಳಾಗುತ್ತವೆ. ಮೊದಲು ಮನಸ್ಸು ಸಂಕಲ್ಪಮಾತ್ರದಿಂದ ನಾನಾವಿಧವಾದ ಭಾವನೆಗಳನ್ನು ಹುಟ್ಟಿಸುತ್ತದೆ. ಬುದ್ಧಿಯು ಮನಸ್ಸಿನಿಂದ ಸಂಕಲ್ಪಿತವಾದ ಕರ್ಮವನ್ನು ಮಾಡಲು ಅಥವಾ ಮಾಡದಿರಲು ನಿಶ್ಚಯಿಸುತ್ತದೆ. ಅಂತಃ ಕರಣವು ಕರ್ಮದಿಂದಾಗುವ ಅನುಕೂಲ-ಪ್ರತಿಕೂಲಗಳನ್ನು ಅನುಭವಿಸುತ್ತದೆ.

ಇನ್ದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಃ ಪರಮಂ ಮನಃ ।
ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಪರೋ ಮತಃ ॥೨॥

ಇಂದ್ರಿಯಗಳಿಗಿಂತಲೂ ಇಂದ್ರಿಯಗಳ ವಿಷಯಗಳು ಶ್ರೇಷ್ಠವಾದುವು ಗಳು. ಇಂದ್ರಿಯಾರ್ಥಗಳಿಗಿಂತಲೂ ಮನಸ್ಸು ಶ್ರೇಷ್ಠವಾದುದು. ಮನಸ್ಸಿ ಗಿಂತಲೂ ಬುದ್ಧಿಯು ಶ್ರೇಷ್ಠವಾದುದು. ಬುದ್ಧಿಗಿಂತಲೂ ಆತ್ಮನು ಶ್ರೇಷ್ಠ ನಾದವನು.

ಬುದ್ಧಿರಾತ್ಮಾ ಮನುಷ್ಯಸ್ಯ ಬುದ್ಧಿರೇವಾತ್ಮನಾತ್ಮನಿ ।
ಯದಾ ವಿಕುರುತೇ ಭಾವಂ ತದಾ ಭವತಿ ಸಾ ಮನಃ ॥೩॥

ಬುದ್ಧಿಯೇ ಮನುಷ್ಯನ ಆತ್ಮರೂಪವಾಗಿಯೂ ಇದೆ. ವಿಶುದ್ಧವಾದ ಬುದ್ಧಿಯು ಆತ್ಮನಲ್ಲಿ ಲೀನವಾದಾಗ ಅದು ಆತ್ಮರೂಪವಾಗುತ್ತದೆ. ಅದೇ ಬುದ್ಧಿಯು ಆತ್ಮನ ಸಂಬಂಧವನ್ನು ಬಿಟ್ಟು ತನ್ನಲ್ಲಿಯೇ ಇಂದ್ರಿಯಗಳ ವಿಷಯಗಳನ್ನು ಗ್ರಹಿಸಲು ಆಸಕ್ತವಾಗಿ ವಿಕೃತವಾದ ಭಾವವನ್ನು ಹೊಂದಿ ದಾಗ ಮನಸ್ಸೆಂದು ಕರೆಯಲ್ಪಡುತ್ತದೆ.

ಇನ್ದ್ರಿಯಾಣಾಂ ಪೃಥಗ್ಭಾವಾದ್ಬುದ್ಧಿರ್ವಿಕ್ರಿಯತೇ ಹ್ಯತಃ ।
ಶೃಣ್ವತೀ ಭವತಿ ಶ್ರೋತ್ರಂ ಸ್ಪೃಶತೀ ಸ್ಪರ್ಶ ಉಚ್ಯತೇ ॥೪॥

ಐದು ಇಂದ್ರಿಯಗಳೂ ಪ್ರತ್ಯೇಕ-ಪ್ರತ್ಯೇಕವಾಗಿರುವುದರಿಂದ ಅವುಗಳ ಕ್ರಿಯೆಗಳೂ ಪ್ರತ್ಯೇಕವಾಗಿಯೇ ಇರುತ್ತವೆ. ಆದುದರಿಂದ ಬುದ್ಧಿಯು ಈ ಇಂದ್ರಿಯಗಳ ಸಲುವಾಗಿ ನಾನಾವಿಕಾರಗಳನ್ನು ಹೊಂದುತ್ತದೆ. ಶಬ್ದವನ್ನು ಕೇಳುವಾಗ ಬುದ್ಧಿಯು ಶ್ರೋತ್ರರೂಪವಾಗಿರುತ್ತದೆ. ಮುಟ್ಟಿದಾಗ ಸ್ಪರ್ಶರೂಪವಾಗಿರುತ್ತದೆ.

ಪಶ್ಯತೀ ಭವತೇ ದೃಷ್ಟಿ ರಸತೀ ರಸನಂ ಭವೇತ್ ।
ಜಿಘ್ರತೀ ಭವತಿ ಘ್ರಾಣಂ ಬುದ್ಧಿರ್ವಿಕ್ರಿಯತೇ ಪೃಥಕ್ ॥೫॥

ನೋಡುವಾಗ ಬುದ್ಧಿಯು ದೃಷ್ಟಿಗಳ ರೂಪವನ್ನು ಹೊಂದುತ್ತದೆ. ರುಚಿನೋಡುವಾಗ ರಸನೆಯ ರೂಪವನ್ನು ಹೊಂದುತ್ತದೆ. ವಾಸನೆ ನೋಡುವಾಗ ಘ್ರಾಣದ ರೂಪವನ್ನು ಹೊಂದುತ್ತದೆ. ಹೀಗೆ ಬುದ್ಧಿಯು ವಿಷಯಗಳನ್ನು ಸೇವಿಸುವಾಗ ಶ್ರೋತ್ರವೇ ಮೊದಲಾದ ಇಂದ್ರಿಯಗಳಾಗಿ ವಿಕಾರಗೊಳ್ಳುತ್ತದೆ.

ಇನ್ದ್ರಿಯಾಣಿ ತು ತಾನ್ಯಾಹುಸ್ತೇಷ್ವದೃಶ್ಯೋಽಧಿತಿಷ್ಠತಿ ।
ತಿಷ್ಠತೀ ಪುರುಷೇ ಬುದ್ಧಿಸ್ತ್ರಿಷು ಭಾವೇಷು ವರ್ತತೇ ॥೬॥

ಬುದ್ಧಿಯ ಈ ವಿಕಾರಗಳನ್ನೇ ಇಂದ್ರಿಯಗಳೆಂದು ಕರೆಯುತ್ತಾರೆ. ಅದೃಶ್ಯನಾದ ಜೀವಾತ್ಮನು ಆ ಎಲ್ಲ ಇಂದ್ರಿಯಗಳಲ್ಲಿಯೂ ಅಧಿಷ್ಠಿತನಾಗಿದ್ದಾನೆ. ಬುದ್ಧಿಯು ಜೀವಾತ್ಮನಲ್ಲಿಯೂ ಅಧಿಷ್ಠಿತವಾಗಿದ್ದು ಸಾತ್ತ್ವಿಕ-ರಾಜಸ-ತಾಮಸಗಳೆಂಬ ಮೂರು ಭಾವಗಳಿಂದ ಕೂಡಿರುತ್ತದೆ.

ಕದಾಚಿಲ್ಲಭತೇ ಪ್ರೀತಿಂ ಕದಾಚಿದಪಿ ಶೋಚತಿ ।
ನ ಸುಖೇನ ನ ದುಃಖೇನ ಕದಾಚಿದಿಹ ಯುಜ್ಯತೇ ॥೭॥

ಈ ಕಾರಣದಿಂದಲೇ ಕೆಲವು ವೇಳೆ ಬುದ್ಧಿಯು ಪ್ರೀತಿಯುಕ್ತವಾಗಿರುತ್ತದೆ (ಸಾತ್ತ್ವಿಕವಾಗಿರುತ್ತದೆ). ಕೆಲವು ವೇಳೆ ದುಃಖದಿಂದ ಕೂಡಿರುತ್ತದೆ (ರಜೋಗುಣಯುಕ್ತವಾಗಿರುತ್ತದೆ). ಕೆಲವು ವೇಲೆ ಸುಖ-ದುಃಖಗಳೆರಡೂ ಇಲ್ಲದೇ ಮೋಹವಶವಾಗಿರುತ್ತದೆ (ತಾಮಸಭಾವದಿಂದಿರುತ್ತದೆ).

ಸೇಯಂ ಭಾವಾತ್ಮಿಕಾ ಭಾವಾಂಸ್ತ್ರೀನೇತಾನತಿವರ್ತತೇ ।
ಸರಿತಾಂ ಸಾಗರೋ ಭರ್ತಾ ಮಹಾವೇಲಾಮಿವೋರ್ಮಿಮಾನ್ ॥೮॥

ನದಿಗಳಿಗೆ ಒಡೆಯನಾದ, ಉತ್ತುಂಗತರಂಗಗಳಿಂದ ಕೂಡಿರುವ ಸಮುದ್ರವು ಯಾವ ರೀತಿಯಲ್ಲಿ ವಿಶಾಲವಾದ ತೀರಪ್ರದೇಶವನ್ನೂ ಉಲ್ಲಂಘಿಸುವುದೋ–ಅದೇ ರೀತಿಯಲ್ಲಿ ಸತ್ತ್ವ-ರಜಸ್ತಮೋಭಾವಗಳನ್ನು

ಹೊಂದಿರುವ ಬುದ್ಧಿಯು ಈ ಮೂರನ್ನೂ ಅತಿಕ್ರಮಿಸಿ ಬಿಡುತ್ತದೆ (ನಿರ್ಗುಣವಾಗುತ್ತದೆ).

ಯದಾ ಪ್ರಾರ್ಥಯತೇ ಕಿಂಚಿತ್ತದಾ ಭವತಿ ಸಾ ಮನಃ ।
ಅಧಿಷ್ಠಾನಾನಿ ವೈ ಬುದ್ಧ್ಯಾ ಪೃಥಗೇತಾನಿ ಸಂಸ್ಮರೇತ್ ।
ಇನ್ದ್ರಿಯಾಣ್ಯೇವ ಮೇಧ್ಯಾನಿ ವಿಜೇತವ್ಯಾನಿ ಕೃತ್ಸ್ನಶಃ ॥೯॥

ಹಿಂದೆ ಹೇಳಿದಂತೆ ಮನುಷ್ಯನ ಬುದ್ಧಿಯು ಯಾವಾಗ ಯಾವ ವಿಷಯವನ್ನಾದರೂ ಆಶಿಸುವುದೋ–ಆಗ ಅದು ಮನಸ್ಸಾಗಿ ಪರಿವರ್ತನೆ ಹೊಂದುತ್ತದೆ. ಐದು ಇಂದ್ರಿಯಗಳಿಗೂ ಯಾವ ಪ್ರತ್ಯೇಕವಾದ ಭಾವ ಗಳಿರುವುವೋ (ಗುಣಗಳಿರುವುವೋ) ಅವುಗಳೆಲ್ಲವೂ ಬುದ್ಧಿಯಲ್ಲಿಯೇ ಅಡಗಿವೆಯೆಂದು ತಿಳಿಯಬೇಕು. ಇಂದ್ರಿಯಗಳೇ ಅದರಲ್ಲಿ ಹೋಮ ಮಾಡಲ್ಪಡುವ ಶುದ್ಧವಾದ ಹವಿಸ್ಸುಗಳು. ಅಂತಹ ಇಂದ್ರಿಯಗಳನ್ನು ಸಂಪೂರ್ಣವಾಗಿ ಜಯಿಸಬೇಕು.

ಸರ್ವಾಣ್ಯೇವಾನುಪೂರ್ವ್ಯೇಣ ಯದ್ಯದಾನುವಿಧೀಯತೇ ।
ಅವಿಭಾಗಗತಾ ಬುದ್ಧಿರ್ಭಾವೇ ಮನಸಿ ವರ್ತತೇ ॥೧೦॥

ಅವಿಭಾಜ್ಯವಾದ ಬುದ್ಧಿಯು ಐದು ಇಂದ್ರಿಯಗಳನ್ನೂ ಅನುಕ್ರಮವಾಗಿ ಅನುಸರಿಸಿ ಹೋಗುತ್ತಿರುತ್ತದೆ. ಅದು ಯಾವಾಗ ಯಾವ ಒಂದು ಇಂದ್ರಿಯವನ್ನು ಅನುಸರಿಸಿ ಹೋಗುವುದೋ ಆಗ ಬುದ್ಧಿಯು ಸಂಕಲ್ಪಾ ತ್ಮಕವಾದ ಮನಸ್ಸಿನಲ್ಲಿರುತ್ತದೆ. (ಹಾಗಿರುವಾಗಲೇ ಆ ವಿಷಯದ ಗ್ರಹಣ ವಾಗುತ್ತದೆ.)

ಯೇ ಚೈವ ಭಾವಾ ವರ್ತನ್ತೇ ಸರ್ವ ಏಷ್ವೇವ ತೇ ತ್ರಿಷು ।
ಅನ್ವರ್ಥಾಃ ಸಮ್ಪ್ರವರ್ತನ್ತೇ ರಥನೇಮಿಮರಾ ಇವ ॥೧೧॥

ಜಗತ್ತಿನಲ್ಲಿ ಯಾವ ಸಾತ್ತ್ವಿಕಾದಿ ಭಾವಗಳಿವೆಯೋ ಅವೆಲ್ಲವೂ ಮನೋ-ಬುದ್ಧ್ಯಹಂಕಾರಗಳಲ್ಲಿ ರಥಚಕ್ರದಲ್ಲಿರುವ ಅರೆಕಾಲುಗಳಂತೆ ಅನ್ವರ್ಥನಾಮಗಳಿಂದ ಇರುತ್ತವೆ. (ಮನಸ್ಸು ಸತ್ತ್ವಗುಣದೊಡನೆ ಸೇರಿದ್ದರೆ ಸಾತ್ತ್ವಿಕವಾದ ಮನಸ್ಸು, ಇತ್ಯಾದಿ) ಹೀಗೆ ಮನೋ-ಬುದ್ಧ್ಯಹಂಕಾರಗಳು ಸತ್ತ್ವಾದಿಭಾವಗಳ ಹೆಸರುಗಳನ್ನೇ ಹೊಂದಿರುತ್ತವೆ.

ಪ್ರದೀಪಾರ್ಥಂ ಮನಃ ಕುರ್ಯಾದಿನ್ದ್ರಿಯೈರ್ಬುದ್ಧಿಸತ್ತಮೈಃ ।
ನಿಶ್ಚರದ್ಭಿರ್ಯಥಾಯೋಗಮುದಾಸೀನೈರ್ಯದೃಚ್ಛಯಾ ॥೧೨॥

ಬುದ್ಧಿಯ ಅಧೀನದಲ್ಲಿರುವ, ಉದಾಸೀನವಾದ, ವಿಷಯಗಳ ಕಡೆಗೆ ಸ್ವೇಚ್ಛೆಯಿಂದ ಸಂಚರಿಸುವ ಇಂದ್ರಿಯಗಳೊಡನೆ ಮನಸ್ಸು ದೀಪದ ಕಾರ್ಯವನ್ನು ಮಾಡುತ್ತದೆ. ದೀಪವು ಯಾವ ರೀತಿಯಲ್ಲಿ ಕತ್ತಲೆಯಲ್ಲಿರುವ ವಸ್ತುಗಳನ್ನು ತೋರಿಸಿಕೊಡುತ್ತದೆಯೋ–ಅದೇ ರೀತಿಯಲ್ಲಿ ಮನಸ್ಸು ದೀಪಪ್ರಾಯವಾಗಿದ್ದು ಜ್ಞಾನೇಂದ್ರಿಯಗಳಿಗೆ ವಿಷಯಗಳ ಅರಿವನ್ನು ಮಾಡಿಕೊಡುತ್ತದೆ. ಮನಸ್ಸೇ ಇಲ್ಲದಿದ್ದರೆ ಜ್ಞಾನೇಂದ್ರಿಯಗಳಿಂದ ಯಾವ ಪ್ರಯೋಜನವೂ ಇಲ್ಲ.

ಏವಂ ಸ್ವಭಾವಮೇವೇದಮಿತಿ ವಿದ್ವಾನ್ನ ಮುಹ್ಯತಿ ।
ಅಶೋಚನ್ನಪ್ರಹೃಷ್ಯನ್ಹಿ ನಿತ್ಯಂ ವಿಗತಮತ್ಸರಃ ॥೧೩॥

ಜಗತ್ತಿನ ಸ್ವಭಾವವೇ ಹೀಗಿದೆ–'ಇದು ಹೀಗೆಯೇ ಸರಿ'–ಎಂಬುದನ್ನು ತಿಳಿದ ವಿದ್ವಾಂಸನು ಮೋಹಗೊಳ್ಳುವುದಿಲ್ಲ. ಸುಖದಲ್ಲಿ ಹರ್ಷಗೊಳ್ಳು ವುದಿಲ್ಲ. ಸಂಕಟದ ಸಮಯದಲ್ಲಿ ಶೋಕಪಡುವುದಿಲ್ಲ. ಈರ್ಷ್ಯಾ- ದ್ವೇಷಾದಿ ದೋಷಗಳಿಂದ ರಹಿತನಾಗಿರುತ್ತಾನೆ.

ನ ಚಾತ್ಮಾ ಶಕ್ಯತೇ ದ್ರಷ್ಟುಮಿನ್ದ್ರಿಯೈಃ ಕಾಮಗೋಚರೈಃ ।
ಪ್ರವರ್ತಮಾನೈರನಯೇ ದುಷ್ಕರೈರಕೃತಾತ್ಮಭಿಃ ॥೧೪॥

ದುಷ್ಕರ್ಮಗಳನ್ನು ಮಾಡುವ, ಅಪರಿಶುದ್ಧವಾದ ಅಂತಃಕರಣವನ್ನು ಹೊಂದಿರುವ, ಅನ್ಯಾಯದಿಂದ ವ್ಯವಹರಿಸುವ ಅಜ್ಞಾನಿಗಳು ಕಾಮಾದಿ ಗಳಲ್ಲಿಯೇ ಆಸಕ್ತವಾದ ಇಂದ್ರಿಯಗಳ ಮೂಲಕವಾಗಿ ಆತ್ಮದರ್ಶನವನ್ನು ಮಾಡಲಾರರು.

ತೇಷಾಂ ತು ಮನಸಾ ರಶ್ಮೀನ್ಯದಾ ಸಮ್ಯಙ್ನಿಯಚ್ಛತಿ ।
ತದಾ ಪ್ರಕಾಶತೇಽಸ್ಯಾತ್ಮಾ ದೀಪದೀಪ್ತಾ ಯಥಾಕೃತಿಃ ॥೧೫॥

ಯಾವಾಗ ಮನುಷ್ಯನು–ಸಾರಥಿಯು ಹಗ್ಗಗಳನ್ನು ಹಿಡಿದು ಕುದುರೆ ಗಳನ್ನು ನಿಯಂತ್ರಿಸುವಂತೆ–ಮನಸ್ಸಿನಿಂದ ಇಂದ್ರಿಯಗಳನ್ನು ಹತೋಟಿ

ಯಲ್ಲಿಟ್ಟುಕೊಳ್ಳುವನೋ–ಆಗ ಅಂತಹವನಿಗೆ ದೀಪದಿಂದ ಪ್ರಕಾಶಿತವಾದ ಆಕೃತಿಯಂತೆ ಆತ್ಮವು ಕಾಣಿಸಿಕೊಳ್ಳುತ್ತದೆ.

ಸರ್ವೇಷಾಮೇವ ಭೂತಾನಾಂ ತಮಸ್ಯಪಗತೇ ಯಥಾ ।
ಪ್ರಕಾಶಂ ಭವತೇ ಸರ್ವಂ ತಥೇದಮುಪಧಾರ್ಯತಾಮ್ ॥೧೬॥

ಕತ್ತಲು ಕಳೆದನಂತರವೇ ಎಲ್ಲ ಪ್ರಾಣಿಗಳಿಗೂ ಯಾವ ರೀತಿಯಲ್ಲಿ ಎಲ್ಲವೂ ಕಾಣಿಸುವುದೋ–ಅದೇ ರೀತಿಯಲ್ಲಿ ಅಜ್ಞಾನವು ಕಳೆದನಂತರವೇ ಜ್ಞಾನರೂಪನಾದ ಆತ್ಮನ ಸಾಕ್ಷಾತ್ಕಾರವಾಗುತ್ತದೆ.

ಯಥಾ ವಾರಿಚರಃ ಪಕ್ಷೀ ನ ಲಿಪ್ಯತಿ ಜಲೇ ಚರನ್ ।
ವಿಮುಕ್ತಾತ್ಮಾ ತಥಾ ಯೋಗೀ ಗುಣದೋಷೈರ್ನ ಲಿಪ್ಯತೇ ॥೧೭॥

ನೀರುಹಕ್ಕಿಯು ನೀರಿನಲ್ಲಿಯೇ ಸಂಚರಿಸುತ್ತಿದ್ದರೂ ನೀರಿನಿಂದ ಅಂಟಲ್ಪಡುವುದಿಲ್ಲ (ಒದ್ದೆಯಾಗುವುದಿಲ್ಲ). ಅದೇ ರೀತಿಯಲ್ಲಿ ಮುಕ್ತಾತ್ಮನಾದ ಯೋಗಿಯು ಗುಣ-ದೋಷಗಳಿಂದ ಲಿಪ್ತನಾಗುವುದಿಲ್ಲ.

ಏವಮೇವ ಕೃತಪ್ರಜ್ಞೋ ನ ದೋಷೈರ್ವಿಷಯಾಂಶ್ಚರನ್ ।
ಅಸಜ್ಜಮಾನಃ ಸರ್ವೇಷು ಕಥಂಚನ ನ ಲಿಪ್ಯತೇ ॥೧೮॥

ಹೀಗೆಯೇ ಶುದ್ಧವಾದ ಬುದ್ಧಿಯುಳ್ಳವನು ಪುತ್ರ-ಮಿತ್ರ-ಕಳತ್ರರೇ ಮೊದಲಾದ ಎಲ್ಲರಲ್ಲಿಯೂ ಅನಾಸಕ್ತನಾಗಿರುವುದರಿಂದ ವಿಷಯಸುಖಗಳನ್ನು ಅನುಭವಿಸುತ್ತಿದ್ದರೂ ಆ ದೋಷಗಳಿಂದ ಅವನು ಲಿಪ್ತನಾಗುವುದಿಲ್ಲ.

ತ್ಯಕ್ತ್ವಾ ಪೂರ್ವಕೃತಂ ಕರ್ಮ ರತಿರ್ಯಸ್ಯ ಸದಾತ್ಮನಿ ।
ಸರ್ವಭೂತಾತ್ಮಭೂತಸ್ಯ ಗುಣವರ್ಗೇಷ್ವಸಜ್ಜತಃ ॥೧೯॥

ಯಾವನು ಹಿಂದಿನ ಕರ್ಮಸಂಸ್ಕಾರಗಳೆಲ್ಲವನ್ನೂ ತ್ಯಜಿಸಿ, ಪರಮಾತ್ಮನಲ್ಲಿಯೇ ಸದಾ ಅನುರಕ್ತನಾಗಿ, ಸಮಸ್ತಪ್ರಾಣಿಗಳಲ್ಲಿಯೂ ಆತ್ಮಭೂತನಾಗಿ ವಿಷಯಗಳಲ್ಲಿ ಆಸಕ್ತನಾಗುವುದಿಲ್ಲವೋ–ಅವನ ಬುದ್ಧೀಂದ್ರಿಯಗಳು ಆತ್ಮಾಕಾರವಾಗಿಯೇ ಇರುತ್ತವೆ. (ಬುದ್ಧೀನ್ದ್ರಿಯಾಣ್ಯಾತ್ಮಾಕಾರಣ್ಯೇವ ಭವನ್ತಿ– ಎಂದು ವ್ಯಾಖ್ಯಾನಕಾರರು ಶ್ಲೋಕಾರ್ಥವನ್ನು ಪೂರ್ಣಗೊಳಿಸಿರುತ್ತಾರೆ.)

ಸತ್ತ್ವಮಾತ್ಮಾ ಪ್ರಸರತಿ ಗುಣಾನ್ವಾಪಿ ಕದಾಚನ ।
ನ ಗುಣಾ ವಿದುರಾತ್ಮಾನಂ ಗುಣಾನ್ವೇದ ಸ ಸರ್ವದಾ ॥೨೦॥

ಪರಿದ್ರಷ್ಟಾ ಗುಣಾನಾಂ ಚ ಪರಿಸ್ರಷ್ಟಾ ಯಥಾತಥಮ್ ।
ಸತ್ತ್ವಕ್ಷೇತ್ರಜ್ಞಯೋರೇತದನ್ತರಂ ವಿದ್ಧಿ ಸೂಕ್ಷ್ಮಯೋಃ ॥೨೧॥

ಜೀವಾತ್ಮನು ಬುದ್ಧಿಯ ಕಡೆಗೆ ಪ್ರಸರಿಸುತ್ತಾನೆ. ಕೆಲವು ವೇಳೆ ಗುಣಗಳ ಕಡೆಗೂ ಹೋಗುತ್ತಾನೆ. ಆದರೆ ಗುಣಗಳು ಆತ್ಮನನ್ನು ತಿಳಿಯುವುದಿಲ್ಲ. ಆ ಆತ್ಮನೇ ಗುಣಗಳನ್ನು ಸರ್ವಕಾಲದಲ್ಲಿಯೂ ತಿಳಿಯುತ್ತಾನೆ. ಅವನು ಗುಣಗಳ ದ್ರಷ್ಟೃವೂ ಯಥಾವತ್ತಾಗಿ (ಬುದ್ಧಿಯ ರೂಪದಲ್ಲಿ ಅವುಗಳ) ಸೃಷ್ಟಿಕರ್ತನೂ ಆಗಿದ್ದಾನೆ. ಸೂಕ್ಷ್ಮವಾದ ಬುದ್ಧಿ ಮತ್ತು ಆತ್ಮಗಳಲ್ಲಿ ಈ ಒಂದು ವ್ಯತ್ಯಾಸವಿದೆಯೆಂಬುದನ್ನು ನೀನು ತಿಳಿಯಬೇಕು. ಆತ್ಮನು ದ್ರಷ್ಟಾ ; ನೋಡತಕ್ಕವನು. ಬುದ್ಧಿಯು ದೃಶ್ಯ ; ನೋಡಲ್ಪಡತಕ್ಕುದು.

ಸೃಜತೇಽತ್ರ ಗುಣಾನೇಕ ಏಕೋ ನ ಸೃಜತೇ ಗುಣಾನ್ ।
ಪೃಥಗ್ಭೂತೌ ಪ್ರಕೃತ್ಯಾ ತೌ ಸಮ್ಪ್ರಯುಕ್ತೌ ಚ ಸರ್ವದಾ ॥೨೨॥

ಸೂಕ್ಷ್ಮವಾದ ಆತ್ಮ ಮತ್ತು ಬುದ್ಧಿಗಳಲ್ಲಿ ಬುದ್ಧಿಯು ಗುಣಗಳನ್ನು ಸೃಷ್ಟಿಸುತ್ತದೆ. ಆತ್ಮನು ಗುಣಗಳನ್ನು ಸೃಷ್ಟಿಸುವುದಿಲ್ಲ. ಸ್ವಭಾವದಿಂದ ಇವೆರಡೂ ಪ್ರತ್ಯೇಕವಾಗಿಯೇ ಇವೆ. ಆದರೆ ಯಾವಾಗಲೂ ಇವೆರಡೂ ಒಟ್ಟಾಗಿಯೇ ಇರುತ್ತವೆ.

ಯಥಾ ಮತ್ಸ್ಯೋಽದ್ಭಿರನ್ಯಃ ಸ್ಯಾತ್ಸಮ್ಪ್ರಯುಕ್ತೌ ತಥೈವ ತೌ ।
ಮಶಕೋದುಮ್ಬರೌ ವಾಪಿ ಸಮ್ಪ್ರಯುಕ್ತೌ ಯಥಾ ಸಹ ॥೨೩॥

ನೀರಿನಲ್ಲಿರುವ ಮೀನು ನೀರಿನಿಂದ ಭಿನ್ನವೇ ಆಗಿದ್ದರೂ ನೀರು ಮತ್ತು ಮೀನು ಯಾವಾಗಲೂ ಒಟ್ಟಾಗಿಯೇ ಇರುತ್ತವೆ. ಅತ್ತಿಹಣ್ಣು ಮತ್ತು ಅದರಲ್ಲಿರುವ ಹುಳುಗಳು ಬೇರೆ-ಬೇರೆಯೇ ಆದರೂ ಅವು ಯಾವಾಗಲೂ ಒಟ್ಟಾಗಿಯೇ ಇರುತ್ತವೆ. ಹಾಗೆಯೇ ಬುದ್ಧಿ ಮತ್ತು ಆತ್ಮಗಳು ಭಿನ್ನವಾದರೂ ಯಾವಾಗಲೂ ಒಟ್ಟಾಗಿಯೇ ಇರುತ್ತವೆ.

ಇಷೀಕಾ ವಾ ಯಥಾ ಮುಞ್ಜೇ ಪೃಥಕ್ಚ ಸಹ ಚೈವ ಚ ।
ತಥೈವ ಸಹಿತಾವೇತಾವನ್ಯೋನ್ಯಸ್ಮಿನ್ಪ್ರತಿಷ್ಠಿತೌ ॥೨೪॥

ಮೌಂಜಿಹುಲ್ಲಿನಲ್ಲಿ ಕಾಶಹುಲ್ಲು ಪ್ರತ್ಯೇಕವಾಗಿ ಕಾಣುತ್ತದೆ. ಅದು ಬೆಳೆಯುವಾಗ ಒಟ್ಟಿಗೆ ಬೆಳೆಯುತ್ತದೆ. ಅದೇ ರೀತಿಯಲ್ಲಿ ಬುದ್ಧಿ ಮತ್ತು ಆತ್ಮಗಳು ಜೊತೆಯಲ್ಲಿಯೇ ಇರತಕ್ಕುವುಗಳು. ಪರಸ್ಪರವಾಗಿ ಆಶ್ರಯವನ್ನು ಹೊಂದಿರತಕ್ಕುವುಗಳು. ಆದರೆ ಸ್ವಭಾವತಃ ಭಿನ್ನವಾದುವುಗಳು."

೨೪೮ನೆಯ ಅಧ್ಯಾಯವು ಮುಗಿಯಿತು.

೨೪೯ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜ್ಞಾನದ ಸಾಧನೆ, ಲಕ್ಷಣ ಮತ್ತು ಮಹಿಮೆ

ಧರ್ಮಜ! ವ್ಯಾಸರು ಹೇಳುತ್ತಾರೆ :

ಸೃಜತೇ ತು ಗುಣಾನ್ಸತ್ತ್ವಂ ಕ್ಷೇತ್ರಜ್ಞಸ್ತ್ವಧಿತಿಷ್ಠತಿ ।
ಗುಣಾನ್ವಿಕ್ರಿಯತಃ ಸರ್ವಾನುದಾಸೀನವದೀಶ್ವರಃ ॥೧॥

"ಮಗು! ಪ್ರಕೃತಿಯೇ ಗುಣಗಳನ್ನು ಸೃಷ್ಟಿಸುತ್ತದೆ. ಕ್ಷೇತ್ರಜ್ಞನಾದ ಆತ್ಮನು ಉದಾಸೀನನಂತೆ ವಿಕಾರಶೀಲವಾದ ಆ ಗುಣಗಳನ್ನು ನೋಡುತ್ತಿರುತ್ತಾನೆ ಮತ್ತು ಅವನು ಆ ಗುಣಗಳಿಗೆ ನಾಯಕನಾಗಿರುತ್ತಾನೆ.

ಸ್ವಭಾವಯುಕ್ತಂ ತತ್ಸರ್ವಂ ಯದಿಮಾನ್ಸೃಜತೇ ಗುಣಾನ್ ।
ಊರ್ಣನಾಭಿರ್ಯಥಾ ಸೂತ್ರಂ ಸೃಜತೇ ತದ್ಗುಣಾಂಸ್ತಥಾ ॥೨॥

ಯಾವ ರೀತಿಯಲ್ಲಿ ಜೇಡರ ಹುಳುವು ತನ್ನ ಶರೀರದಿಂದ ದಾರಗಳನ್ನು ಸ್ವಾಭಾವಿಕವಾಗಿಯೇ ಸೃಷ್ಟಿಸುವುದೋ–ಅದೇ ರೀತಿಯಲ್ಲಿ ಪ್ರಕೃತಿಯೂ ತ್ರಿಗುಣಾತ್ಮಕವಾದ ಸಮಸ್ತಪದಾರ್ಥಗಳನ್ನೂ ಸೃಷ್ಟಿಸುತ್ತದೆ.

ಪ್ರಧ್ವಸ್ತಾ ನ ನಿವರ್ತನ್ತೇ ಪ್ರವೃತ್ತಿರ್ನೋಪಲಭ್ಯತೇ ।
ಏವಮೇಕೇ ವ್ಯವಸ್ಯನ್ತಿ ನಿವೃತ್ತಿರಿತಿ ಚಾಪರೇ ॥೩॥

'ತತ್ತ್ವಜ್ಞಾನದಿಂದ ಈ ಗುಣಗಳು ನಾಶಹೊಂದಿದರೂ ಅವುಗಳು ಜ್ಞಾನಿಯನ್ನು ಬಿಟ್ಟುಹೋಗುವುದಿಲ್ಲ. ಆದರೆ ಅವುಗಳ ಸಂಬಂಧವಾದ ಪ್ರವೃತ್ತಿಯು ಜ್ಞಾನಿಯಲ್ಲಿರುವುದಿಲ್ಲ'–ಎಂಬುದು ಕೆಲವರ ಅಭಿಪ್ರಾಯ ವಾಗಿದೆ. ಮತ್ತೆ ಕೆಲವರು ತತ್ತ್ವಜ್ಞಾನವಾದೊಡನೆಯೇ ತ್ರಿಗುಣಗಳು ಸಂಪೂರ್ಣವಾಗಿ ಹೊರಟುಹೋಗುವುವೆಂದು ಹೇಳುತ್ತಾರೆ.

ಉಭಯಂ ಸಮ್ಪ್ರಧಾರ್ಯೈತದಧ್ಯವಸ್ಯೇದ್ಯಥಾಮತಿ ।
ಅನೇನೈವ ವಿಧಾನೇನ ಭವೇದ್ಗರ್ಭಶಯೋ ಮಹಾನ್ ॥೪॥

ಈ ಎರಡು ಅಭಿಪ್ರಾಯಗಳನ್ನೂ ಚೆನ್ನಾಗಿ ಗ್ರಹಿಸಿ ಯಥಾಮತಿಯಾಗಿ ಪರ್ಯಾಲೋಚಿಸಬೇಕು. ಹೀಗೆ ವಿವೇಚನೆಮಾಡುವುದರಿಂದಲೇ ಹೃದಯ ಗರ್ಭದಲ್ಲಿ ಮಲಗಿರುವ ಜೀವನು ಮಹಾತ್ಮನಾಗುತ್ತಾನೆ.

ಅನಾದಿನಿಧನೋ ಹ್ಯಾತ್ಮಾ ತಂ ಬುದ್ಧ್ವಾ ವಿಚರೇನ್ನರಃ ।
ಅಕ್ರುಧ್ಯನ್ನಪ್ರಹೃಷ್ಯಂಶ್ಚ ನಿತ್ಯಂ ವಿಗತಮತ್ಸರಃ ॥೫॥

ಆತ್ಮನು ಆದಿ ಮತ್ತು ಅಂತ್ಯಗಳಿಂದ ರಹಿತನಾಗಿದ್ದಾನೆ. ಅವನನ್ನು ತಿಳಿದ ಜ್ಞಾನಿಯು ಹರ್ಷ-ಕ್ರೋಧ-ಈರ್ಷ್ಯ-ದ್ವೇಷಗಳಿಂದ ರಹಿತನಾಗಿ ಸಂಚರಿಸುತ್ತಿರುತ್ತಾನೆ.

ಇತ್ಯೇವಂ ಹೃದಯಗ್ರನ್ಥಿಂ ಬುದ್ಧಿಚಿನ್ತಾಮಯಂ ದೃಢಮ್ ।
ಅನಿತ್ಯಂ ಸುಖಮಾಸೀತ ಅಶೋಚಂಶ್ಛಿನ್ನಸಂಶಯಃ ॥೬॥

ಸಾಧಕನು–ಬುದ್ಧಿಯ ಚಿಂತೆಯೇ ಮೊದಲಾದ ಧರ್ಮಗಳಿಂದ ಸುದೃಢವಾಗಿ ಬಂಧಿಸಲ್ಪಟ್ಟಿರುವ, ಅನಿತ್ಯವಾದ, ಅಜ್ಞಾನರೂಪವಾದ ಹೃದ ಯದ ಗಂಟನ್ನು ಮೇಲೆ ಹೇಳಿರುವ ಪ್ರಕಾರಗಳಿಂದ ಕತ್ತರಿಸಿಹಾಕಿ ಶೋಕ-ಸಂದೇಹಗಳಿಂದ ರಹಿತನಾಗಿ ಸುಖವಾಗಿರಬೇಕು.

ತಾಮ್ಯೇಯುಃ ಪ್ರಚ್ಯುತಾಃ ಪೃಥ್ವ್ಯಾ ಯಥಾ ಪೂರ್ಣಾಂ ನದೀಂ ನರಾಃ ।
ಅವಗಾಢಾ ಹ್ಯವಿದ್ವಾಂಸೋ ವಿದ್ಧಿ ಲೋಕಮಿಮಂ ತಥಾ ॥೭॥

ಈಜುವ ಕಲೆಯನ್ನು ತಿಳಿಯದೇ ಇರತಕ್ಕವರು ದಡದಿಂದ ಜಾರಿ

ಪ್ರವಾಹಪೂರ್ಣವಾದ ನದಿಯಲ್ಲಿ ಬಿದ್ದು ಮುಳುಗಿ ಯಾವ ರೀತಿಯಲ್ಲಿ ಪರಿತಾಪಪಡುವರೋ–ಅದೇ ರೀತಿಯಲ್ಲಿ ಅಜ್ಞಾನಿಗಳಾದವರು ಈ ಸಂಸಾರಸಾಗರದಲ್ಲಿ ಮುಳುಗಿ ಪರಿತಪಿಸುತ್ತಿದ್ದಾರೆಂಬುದನ್ನು ತಿಳಿ.

ನ ತು ತಾಮ್ಯತಿ ವೈ ವಿದ್ವಾನ್ಸ್ಥಲೇ ಚರತಿ ತತ್ತ್ವವಿತ್ ।
ಏವಂ ಯೋ ವಿನ್ದತೇಽತ್ಮಾನಂ ಕೇವಲಂ ಜ್ಞಾನಮಾತ್ಮನಃ ॥೮॥

ಆದರೆ ಯಾವನಿಗೆ ಈಜಲು ಬರುವುದೋ ಅವನು ಪರಿತಾಪಪಡುವುದಿಲ್ಲ. ಈಜುವ ಕಲೆಯನ್ನು ತಿಳಿದವನು ನೆಲದ ಮೇಲೆ ಸಂಚರಿಸುವಂತೆಯೇ ನೀರಿನಲ್ಲಿಯೂ ಈಜಿಕೊಂಡು ಹೋಗುತ್ತಾನೆ. ಹೀಗೆಯೇ ಜ್ಞಾನಸ್ವರೂಪನಾದ ವಿಶುದ್ಧಾತ್ಮನನ್ನು ಸಾಕ್ಷಾತ್ಕರಿಸಿಕೊಂಡ ತತ್ತ್ವವಿದನಾದ ಜ್ಞಾನಿಯು ಸಂಸಾರಸಾಗರವನ್ನು ಬಹಳ ಸುಲಭವಾಗಿ ದಾಟುತ್ತಾನೆ.

ಏವಂ ಬುದ್ಧ್ವಾ ನರಃ ಸರ್ವ ಭೂತಾನಾಮಾಗತಿಂ ಗತಿಮ್ ।
ಸಮವೇಕ್ಷ್ಯ ಚ ವೈಷಮ್ಯಂ ಲಭತೇ ಶುಭಮುತ್ತಮಮ್ ॥೯॥

ಯಾವ ಮನುಷ್ಯನು ಈ ರೀತಿಯಲ್ಲಿ ಸಂಪೂರ್ಣಪ್ರಾಣಿಗಳ ಆವಿರ್ಭಾವ ಮತ್ತು ಲಯಗಳ ರಹಸ್ಯವನ್ನು ತಿಳಿಯುವನೋ ಮತ್ತು ಅವುಗಳಲ್ಲಿನ ಏರು-ಪೇರುಗಳ ವಿಷಯವಾಗಿ ವಿಚಾರಮಾಡುವನೋ–ಅವನು ಪರಮಶಾಂತಿಯನ್ನು ಹೊಂದುತ್ತಾನೆ.

ಏತದ್ವೈ ಜನ್ಮಸಾಮರ್ಥ್ಯಂ ಬ್ರಾಹ್ಮಣಸ್ಯ ವಿಶೇಷತಃ ।
ಆತ್ಮಜ್ಞಾನಂ ಶಮಶ್ಚೈವ ಪರ್ಯಾಪ್ತಂ ತತ್ಪರಾಯಣಮ್ ॥೧೦॥

ಮನಸ್ಸು ಮತ್ತು ಇಂದ್ರಿಯಗಳ ಸಂಯಮ ಮತ್ತು ಆತ್ಮಜ್ಞಾನ ಇವುಗಳು ಮೋಕ್ಷಪ್ರಾಪ್ತಿಗೆ ಸಾಕಾಗುತ್ತವೆ. ಈ ಭೂಮಿಯಲ್ಲಿ ಜನ್ಮತಾಳಿದವನಿಗೆ ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣನಿಗೆ ಬ್ರಹ್ಮಜ್ಞಾನವನ್ನು ಪಡೆಯುವುದೇ ಜನ್ಮಸಿದ್ಧವಾದ ಸಾಮರ್ಥ್ಯವಾಗಿದೆ. ಮನುಷ್ಯನಿಗೆ ಇದೇ ಪರಮಾಶ್ರಯವಾಗಿದೆ.

ಏತದ್ಬುದ್ಧ್ವಾ ಭವೇದ್ಬುದ್ಧಃ ಕಿಮನ್ಯದ್ಬುದ್ಧಲಕ್ಷಣಮ್ ।
ವಿಜ್ಞಾಯೈತದ್ವಿಮುಚ್ಯನ್ತೇ ಕೃತಕೃತ್ಯಾ ಮನೀಷಿಣಃ ॥೧೧॥

ಬ್ರಹ್ಮತತ್ತ್ವವನ್ನು ತಿಳಿದನಂತರ ಮನುಷ್ಯನು ಬುದ್ಧ (ಜ್ಞಾನಿ) ನಾಗುತ್ತಾನೆ. ಆತ್ಮಜ್ಞಾನ ಮತ್ತು ಶಮ ಇವುಗಳಲ್ಲದೇ ಜ್ಞಾನಿಯ ಲಕ್ಷಣವು ಬೇರೆ ಯಾವುದಿದೆ? ಈ ರಹಸ್ಯವನ್ನು ತಿಳಿದ ವಿದ್ವಾಂಸರು ಆತ್ಮತತ್ತ್ವವನ್ನು ತಿಳಿದು ಕೃತಕೃತ್ಯರಾಗಿ ಭವಬಂಧನದಿಂದ ಮುಕ್ತರಾಗುತ್ತಾರೆ.

ನ ಭವತಿ ವಿದುಷಾಂ ಮಹದ್ಭಯಂ
ಯದವಿದುಷಾಂ ಸುಮಹದ್ಭಯಂ ಪರತ್ರ ।
ನ ಹಿ ಗತಿರಧಿಕಾಸ್ತಿ ಕಸ್ಯಚಿ-
ದ್ಭವತಿ ಹಿ ಯಾ ವಿದುಷಃ ಸನಾತನೀ ॥೧೨॥

ಪರಲೋಕದಲ್ಲಿ ಅಜ್ಞಾನಿಗಳಾದವರಿಗೆ ಯಾವ ಮಹಾಭಯವಿರುವುದೋ ಅಂತಹ ಮಹಾಭಯವು ಜ್ಞಾನಿಗಳಾದವರಿಗೆ ಇರುವುದಿಲ್ಲ. ಜ್ಞಾನಿಯಾದವನಿಗೆ ಯಾವ ಸನಾತನಗತಿಯು ಪ್ರಾಪ್ತವಾಗುವುದೋ ಅದಕ್ಕಿಂತಲೂ ಉತ್ತಮವಾದ ಗತಿಯೂ ಇಲ್ಲ ಮತ್ತು ಅದು ಬೇರಾರಿಗೂ ಲಭಿಸುವುದೂ ಇಲ್ಲ.

ಲೋಕಮಾತುರಮಸೂಯತೇ ಜನ-
ಸ್ತತ್ತದೇವ ಚ ನಿರೀಕ್ಷ್ಯ ಶೋಚತೇ ।
ತತ್ರ ಪಶ್ಯ ಕುಶಲಾನಶೋಚತೋ
ಯೇ ವಿದುಸ್ತದುಭಯಂ ಕೃತಾಕೃತಮ್ ॥೧೩॥

ಕೆಲವರು ದುಃಖಿಗಳನ್ನೂ, ರೋಗಿಗಳನ್ನೂ ನೋಡಿ ಅವರಲ್ಲಿ ದೋಷಗಳನ್ನು ಭಾವಿಸುತ್ತಾರೆ. ಮತ್ತೆ ಕೆಲವರು ಅವರ ಆ ಅವಸ್ಥೆಯನ್ನು ನೋಡಿ ಶೋಕಪಡುತ್ತಾರೆ. ಆದರೆ ಯಾರು ಕಾರ್ಯ ಮತ್ತು ಕಾರಣ ಇವೆರಡರ ತತ್ತ್ವವನ್ನು ತಿಳಿದಿರುವರೋ–ಅವರು ಶೋಕಪಡುವುದೂ ಇಲ್ಲ. ಅವರಲ್ಲಿ ದೋಷವನ್ನೆಣಿಸುವುದೂ ಇಲ್ಲ. ಮಗು! ನೀನು ಅಂತಹವರನ್ನೇ ಕುಶಲರೆಂದು ತಿಳಿಯಬೇಕು.

ಯತ್ಕರೋನಭಿಸಂಧಿಪೂರ್ವಕಂ
ತಚ್ಚ ನಿರ್ಣುದತಿ ತತ್ಪುರಾಕೃತಮ್ ।

ನ ಪ್ರಿಯಂ ತದುಭಯಂ ನ ಚಾಪ್ರಿಯಂ
ತಸ್ಯ ತಜ್ಜನಯತೀಹ ಕುರ್ವತಃ ॥೧೪॥

ವಿವೇಕಿಯು ನಿಷ್ಕಾಮಭಾವದಿಂದ ಯಾವ ಕರ್ಮವನ್ನು ಮಾಡುವನೋ–ಆ ಕರ್ಮವು ಅವನು ಹಿಂದೆ ಮಾಡಿದ ಅಶುಭಕರ್ಮದ ದುಷ್ಫಲಗಳೆಲ್ಲವನ್ನೂ ತೊಡೆದುಹಾಕುತ್ತದೆ. ಹೀಗೆ ನಿಷ್ಕಾಮಕರ್ಮವನ್ನು ಮಾಡುವ ಸಾಧಕನಿಗೆ ಅವನು ಮಾಡಿದ ಕರ್ಮವು ಈ ಲೋಕದಲ್ಲಾಗಲೀ ಪರಲೋಕದಲ್ಲಾಗಲೀ ಪ್ರಿಯವನ್ನೂ ಮಾಡುವುದಿಲ್ಲ ; ಅಪ್ರಿಯವನ್ನೂ ಮಾಡುವುದಿಲ್ಲ. (ಕರ್ಮಗಳು ಅವನನ್ನು ಬಂಧಿಸುವುದಿಲ್ಲ.)"

೨೪೯ನೆಯ ಅಧ್ಯಾಯವು ಮುಗಿಯಿತು.

೨೫೦ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪರಮಾತ್ಮನ ಪ್ರಾಪ್ತಿಗೆ ಸಾಧನಗಳು : ಸಂಸಾರನದಿಯ ವರ್ಣನೆ : ಜ್ಞಾನದಿಂದ ಬ್ರಹ್ಮದ ಪ್ರಾಪ್ತಿ

ಧರ್ಮಜ! ಶುಕನು ಪ್ರಶ್ನಿಸುತ್ತಾನೆ :

ಯಸ್ಮಾದ್ಧರ್ಮಾತ್ಪರೋ ಧರ್ಮೋ ವಿದ್ಯತೇ ನೇಹ ಕಶ್ಚನ ।
ಯೋ ವಿಶಿಷ್ಟಶ್ಚ ಧರ್ಮೇಭ್ಯಸ್ತಂ ಭವಾನ್ಪ್ರಬ್ರವೀತು ಮೇ ॥೧॥

"ತಂದೆಯೇ! ಈ ಜಗತ್ತಿನಲ್ಲಿ ಯಾವ ಧರ್ಮಕ್ಕಿಂತಲೂ ಹಿರಿದಾದ ಬೇರೆ ಯಾವ ಧರ್ಮವೂ ಇಲ್ಲವೋ ಮತ್ತು ಯಾವುದು ಎಲ್ಲ ಧರ್ಮಗಳಿಗಿಂತಲೂ ಶ್ರೇಷ್ಠವಾಗಿರುವುದೋ–ಅದನ್ನು ನನಗೆ ಹೇಳಿರಿ."

ವ್ಯಾಸರು ಹೇಳುತ್ತಾರೆ :

ಧರ್ಮಂ ತೇ ಸಮ್ಪ್ರವಕ್ಷ್ಯಾಮಿ ಪುರಾಣಮೃಷಿಭಿಃ ಕೃತಮ್ ।
ವಿಶಿಷ್ಟಂ ಸರ್ವಧರ್ಮೇಭ್ಯಸ್ತಮಿಹೈಕಮನಾಃ ಶೃಣು ॥೨॥

"ಮಗು! ಋಷಿಗಳು ಹೇಳಿರುವ, ಎಲ್ಲ ಧರ್ಮಗಳಿಗಿಂತಲೂ ಶ್ರೇಷ್ಠವಾಗಿರುವ ಪ್ರಾಚೀನಧರ್ಮವನ್ನು ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ಇನ್ದ್ರಿಯಾಣಿ ಪ್ರಮಾಥೀನಿ ಬುದ್ಧ್ಯಾ ಸಂಯಮ್ಯ ಯತ್ನತಃ ।
ಸರ್ವತೋ ನಿಷ್ಪತಿಷ್ಣೂನಿ ಪಿತಾ ಬಾಲಾನಿವಾತ್ಮಜಾನ್ ॥೩॥

ತಂದೆಯಾದವನು ತನ್ನ ಸಣ್ಣ ಮಕ್ಕಳನ್ನು ಯಾವ ರೀತಿಯಲ್ಲಿ ಅಂಕೆಯಲ್ಲಿಟ್ಟುಕೊಳ್ಳುವನೋ–ಅದೇ ರೀತಿಯಲ್ಲಿ ಎಲ್ಲ ಕಡೆಗಳಲ್ಲಿಯೂ (ಎಲ್ಲ ವಿಷಯಗಳ ಮೇಲೂ) ಬೀಳುವ ಸ್ವಭಾವವುಳ್ಳ, ಮನಸ್ಸನ್ನು ಕದಡುವ ಇಂದ್ರಿಯಗಳನ್ನು ಪ್ರಯತ್ನಪೂರ್ವಕವಾಗಿ ಬುದ್ಧಿಯ ಮೂಲಕವಾಗಿ ನಿಯಂತ್ರಿಸಬೇಕು.

ಮನಸಶ್ಚೇನ್ದ್ರಿಯಾಣಾಂ ಚಾಪ್ಯೈಕಾಗ್ರ್ಯಂ ಪರಮಂ ತಪಃ ।
ತಜ್ಜ್ಯಾಯಃ ಸರ್ವಧರ್ಮೇಭ್ಯಃ ಸ ಧರ್ಮಃ ಪರ ಉಚ್ಯತೇ ॥೪॥

ಮನಸ್ಸನ್ನೂ ಮತ್ತು ಇಂದ್ರಿಯಗಳನ್ನೂ ಏಕಾಗ್ರಗೊಳಿಸುವುದೇ ಶ್ರೇಷ್ಠವಾದ ತಪಸ್ಸು. ಈ ಚಿತ್ತೈಕಾಗ್ರತಾಧರ್ಮವು ಎಲ್ಲ ಧರ್ಮಗಳಿಗಿಂತಲೂ ಶ್ರೇಷ್ಠತಮವಾದ ಧರ್ಮವೆಂದು ಹೇಳುತ್ತಾರೆ.

ತಾನಿ ಸರ್ವಾಣಿ ಸಂಧಾಯ ಮನಃಷಷ್ಠಾನಿ ಮೇಧಯಾ ।
ಆತ್ಮತೃಪ್ತ ಇವಾಸೀತ ಬಹುಚಿನ್ತ್ಯಮಚಿನ್ತಯನ್ ॥೫॥

ಮನಸ್ಸೇ ಆರನೆಯದಾಗಿರುವ ಆ ಐದು ಇಂದ್ರಿಯಗಳನ್ನೂ ಬುದ್ಧಿಯ ಮೂಲಕವಾಗಿ ಸ್ಥಿರಗೊಳಿಸಿ, ಅನೇಕಪ್ರಕಾರವಾದ ಚಿಂತನೀಯವಿಷಯ ಗಳನ್ನು ಚಿಂತಿಸಹೋಗದೇ, ಆತ್ಮಚಿಂತೆಯಿಂದಲೇ ತೃಪ್ತನಾಗಿರುವಂತೆ ನಿಶ್ಚಿಂತನಾಗಿಯೂ ನಿಶ್ಚಲನಾಗಿಯೂ ಇರಬೇಕು.

ಗೋಚರೇಭ್ಯೋ ನಿವೃತ್ತಾನಿ ಯದಾ ಸ್ಥಾಸ್ಯನ್ತಿ ವೇಶ್ಮನಿ ।
ತದಾ ತ್ವಮಾತ್ಮನಾತ್ಮಾನಂ ಪರಂ ದ್ರಕ್ಷ್ಯಸಿ ಶಾಶ್ವತಮ್ ॥೬॥

ಯಾವಾಗ ವಿಷಯಗಳಿಂದ ನಿವೃತ್ತವಾದ ಇಂದ್ರಿಯಗಳು ಶರೀರವೆಂಬ ನಿವಾಸಸ್ಥಾನದಲ್ಲಿ ಸ್ಥಿರವಾಗಿರುತ್ತವೆಯೋ–ಆಗ ನೀನು ಶಾಶ್ವತನಾದ ಶ್ರೇಷ್ಠನಾದ ಪರಬ್ರಹ್ಮಪರಮಾತ್ಮನನ್ನು ಕಾಣುವೆ.

ಸರ್ವಾತ್ಮಾನಂ ಮಹಾತ್ಮಾನಂ ವಿಧೂಮಮಿವ ಪಾವಕಮ್ ।
ತಂ ಪಶ್ಯನ್ತಿ ಮಹಾತ್ಮಾನೋ ಬ್ರಾಹ್ಮಣಾ ಯೇ ಮನೀಷಿಣಃ ॥೭॥

ಹೊಗೆಯಿಲ್ಲದ ಬೆಂಕಿಯಂತೆ ಬೆಳಗುತ್ತಿರುವ, ಸರ್ವಾತ್ಮನಾದ, ಮಹಾತ್ಮನಾದ ಪರಮಾತ್ಮನನ್ನು ವಿದ್ವಾಂಸರೂ ಮಹಾತ್ಮರೂ ಆದ ಬ್ರಾಹ್ಮಣರು ಜ್ಞಾನದೃಷ್ಟಿಯಿಂದ ನೋಡುತ್ತಾರೆ.

ಯಥಾ ಪುಷ್ಪಫಲೋಪೇತೋ ಬಹುಶಾಖೋ ಮಹಾದ್ರುಮಃ ।
ಆತ್ಮನೋ ನಾಭಿಜಾನೀತೇ ಕ್ವ ಮೇ ಪುಷ್ಪಂ ಕ್ವ ಮೇ ಫಲಮ್ ॥೮॥

ಏವಮಾತ್ಮಾ ನ ಜಾನೀತೇ ಕ್ವ ಗಮಿಷ್ಯೇ ಕುತಸ್ತ್ವಹಮ್ ।
ಅನ್ಯೋ ಹ್ಯತ್ರಾನ್ತರಾತ್ಮಾಸ್ತಿ ಯಃ ಸರ್ವಮನುಪಶ್ಯತಿ ॥೯॥

ಪುಷ್ಪ-ಫಲಗಳಿಂದ ಯುಕ್ತವಾದ, ಹಲವಾರು ರೆಂಬೆಗಳಿಂದ ಕೂಡಿರುವ ಮಹಾವೃಕ್ಷವು ಯಾವ ರೀತಿಯಲ್ಲಿ ತನ್ನಲ್ಲಿಯೇ ಇರುವ ಪುಷ್ಪಗಳನ್ನಾಗಲೀ ಫಲಗಳನ್ನಾಗಲೀ ಎಲ್ಲಿವೆಯೆಂಬುದನ್ನು ತಿಳಿಯುವುದಿಲ್ಲವೋ–ಅದೇ ರೀತಿಯಲ್ಲಿ ಜೀವಾತ್ಮನು ತಾನು ಎಲ್ಲಿಗೆ ಹೋಗುತ್ತಾನೆ? ಎಲ್ಲಿಂದ ಬಂದನು?–ಎಂಬುದನ್ನು ತಿಳಿದವನಾಗಿರುವುದಿಲ್ಲ. ಶರೀರದಲ್ಲಿ ಜೀವಾತ್ಮನಲ್ಲದೇ ಬೇರೊಬ್ಬ ಅಂತರಾತ್ಮನೂ ಇದ್ದಾನೆ. ಅವನು ಎಲ್ಲವನ್ನೂ ನೋಡುತ್ತಿರುತ್ತಾನೆ.

ಜ್ಞಾನದೀಪೇನ ದೀಪ್ತೇನ ಪಶ್ಯತ್ಯಾತ್ಮಾನಮಾತ್ಮನಿ ।
ದೃಷ್ಟ್ವಾ ತ್ವಮಾತ್ಮನಾತ್ಮಾನಂ ನಿರಾತ್ಮಾ ಭವ ಸರ್ವವಿತ್ ॥೧೦॥

ಜ್ಞಾನಿಯು ಪ್ರಜ್ವಲಿತವಾದ ಜ್ಞಾನಮಯದೀಪದ ಮೂಲಕವಾಗಿ ತನ್ನಲ್ಲಿಯೇ ಪರಬ್ರಹ್ಮಪರಮಾತ್ಮನನ್ನು ಸಂದರ್ಶಿಸುತ್ತಾನೆ. ಶುಕ! ಹಾಗೆಯೇ ನೀನೂ ಕೂಡ ಜೀವಾತ್ಮನ ಮೂಲಕವಾಗಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು ಸರ್ವಜ್ಞನಾಗು. ನಿರಭಿಮಾನಿಯಾಗು.

ವಿಮುಕ್ತಃ ಸರ್ವಪಾಪೇಭ್ಯೋ ಮುಕ್ತತ್ವಚ ಇವೋರಗಃ ।
ಪರಾಂ ಬುದ್ಧಿಮವಾಪ್ಯೇಹ ವಿಪಾಪ್ಮಾ ವಿಗತಜ್ವರಃ ॥೧೧॥

ಪೊರೆಯನ್ನು ಕಳಚಿಕೊಂಡು ಹಾವಿನಂತೆ–ಸಮಸ್ತವಾದ ಪಾಪಗಳಿಂದಲೂ ಮುಕ್ತನಾಗಿ ಉತ್ತಮೋತ್ತಮವಾದ ಬುದ್ಧಿಯನ್ನು ಆಶ್ರಯಿಸಿ ಪಾಪರಹಿತನೂ ಚಿಂತಾರಹಿತನೂ ಆಗು.

ಸರ್ವತಃ ಸ್ರೋತಸಂ ಘೋರಾಂ ನದೀಂ ಲೋಕಪ್ರವಾಹಿನೀಮ್ ।
ಪಞ್ಚೇನ್ದ್ರಿಯಗ್ರಾಹವತೀಂ ಮನಃಸಂಕಲ್ಪರೋಧಸಮ್ ॥೧೨॥

ಲೋಭಮೋಹತೃಣಚ್ಛನ್ನಾಂ ಕಾಮಕ್ರೋಧಸರೀಸೃಪಾಮ್ ।
ಸತ್ಯತೀರ್ಥಾನೃತಕ್ಷೋಭಾಂ ಕ್ರೋಧಪಙ್ಕಾಂ ಸರಿದ್ವರಾಮ್ ॥೧೩॥

ಅವ್ಯಕ್ತಪ್ರಭವಾಂ ಶೀಘ್ರಾಂ ದುಸ್ತರಾಮಕೃತಾತ್ಮಭಿಃ ।
ಪ್ರತರಸ್ವ ನದೀಂ ಬುದ್ಧ್ಯಾ ಕಾಮಗ್ರಾಹಸಮಾಕುಲಾಮ್ ॥೧೪॥

ಸಂಸಾರಸಾಗರಗಮಾಂ ಯೋನಿಪಾತಾಲದುಸ್ತರಾಮ್ ।
ಆತ್ಮಕರ್ಮೋದ್ಭವಾಂ ತಾತ ಜಿಹ್ವಾವರ್ತಾಂ ದುರಾಸದಾಮ್ ॥೧೫॥

ಮಗು! ಶುಕ! ಈ ಸಂಸಾರವೆಂಬುದು ಒಂದು ಭಯಂಕರವಾದ ನದಿಯಾಗಿದೆ. ಅದು ಲೋಕದ ಎಲ್ಲ ಕಡೆಗಳಲ್ಲಿಯೂ ಪ್ರವಹಿಸುತ್ತದೆ. ಪಂಚಜ್ಞಾನೇಂದ್ರಿಯಗಳು ಆ ಸಂಸಾರವೆಂಬ ನದಿಯಲ್ಲಿ ಮೊಸಳೆಗಳ ರೂಪದಲ್ಲಿವೆ. ಮನಸ್ಸಿನ ಸಂಕಲ್ಪವೆಂಬುದೇ ಅದರ ತೀರಪ್ರದೇಶಗಳಾಗಿವೆ. ಲೋಭ ಮತ್ತು ಮೋಹಗಳೆಂಬ ಹುಲ್ಲಿನಿಂದ ಆ ನದಿಯು ಆಚ್ಛಾದಿತ ವಾಗಿದೆ. ಕಾಮ-ಕ್ರೋಧಗಳು ಅಲ್ಲಿ ಸರ್ಪಗಳ ರೂಪದಲ್ಲಿವೆ. ಸತ್ಯವೆಂಬುದೇ ಆ ನದಿಯಲ್ಲಿನ ಪುಣ್ಯತೀರ್ಥಕ್ಷೇತ್ರವಾಗಿದೆ. ಅನೃತವು ಕುಲುಕಾಟವಾಗಿದೆ. ಕ್ರೋಧವೆಂಬುದು ಕೆಸರಾಗಿದೆ. ಆ ನದಿಯು ಇತರ ಎಲ್ಲ ನದಿಗಳಿಗಿಂತಲೂ ಶ್ರೇಷ್ಠವಾಗಿದೆ. ಅವ್ಯಕ್ತಪ್ರಕೃತಿಯೆಂಬ ಪರ್ವತದಿಂದ ಅದು ಹುಟ್ಟುತ್ತದೆ. ಇದು ಅತ್ಯಂತವೇಗಯುಕ್ತವಾಗಿದೆ. ಜಿತೇಂದ್ರಿಯರಲ್ಲದವರಿಗೆ ಆ ನದಿಯನ್ನು ದಾಟಲು ಬಹಳ ಕಷ್ಟವಾಗುತ್ತದೆ. ಕಾಮವೆಂಬ ಮೊಸಳೆಗಳಿಂದ ಆ ನದಿಯು ತುಂಬಿದೆ. ಆ ನದಿಯು ಸಂಸಾರವೆಂಬ ಮಹಾಸಾಗರವನ್ನೇ ಸೇರುತ್ತದೆ. ವಾಸನೆಯೆಂಬ ಆಳವಾದ ಸ್ಥಳದಿಂದ ಕೂಡಿರುವುದರಿಂದ ಅದನ್ನು ದಾಟಲು ಬಹಳ ಕಷ್ಟವಾಗುತ್ತದೆ. ಅದು ಅವರವರ ಕರ್ಮಗಳಿಂದಲೇ ಹುಟ್ಟಿಕೊಳ್ಳುತ್ತದೆ. ನಾಲಿಗೆಯೆಂಬುದೇ ಆ ನದಿಯ ಸುಳಿಯಾಗಿದ್ದು ದಾಟಲು ದುಸ್ತರವಾಗಿದೆ. ಮಗು! ಅಂತಹ ಅಜ್ಞಾನರೂಪವಾದ ಸಂಸಾರನದಿಯನ್ನು ಜ್ಞಾನವೆಂಬ ನೌಕೆಯ ಮೂಲಕವಾಗಿ ದಾಟಿಹೋಗು.

ಯಾಂ ತರನ್ತಿ ಕೃತಪ್ರಜ್ಞಾ ಧೃತಿಮನ್ತೋ ಮನೀಷಿಣಃ ।
ತಾಂ ತೀರ್ಣಃ ಸರ್ವತೋ ಮುಕ್ತೋ ವಿಧೃತಾತ್ಮಾತ್ಮವಿಚ್ಛುಚಿಃ ॥೧೬॥

ಉತ್ತಮಾಂ ಬುದ್ಧಿಮಾಸ್ಥಾಯ ಬ್ರಹ್ಮಭೂಯಾನ್ಭವಿಷ್ಯಸಿ ।
ಸಂತೀರ್ಣಃ ಸರ್ವಸಂಸಾರಾತ್ಪ್ರಸನ್ನಾತ್ಮಾ ವಿಕಲ್ಮಷಃ ॥೧೭॥

ಧೈರ್ಯಶಾಲಿಗಳಾದ, ವಿದ್ವಾಂಸರಾದ ತತ್ತ್ವಜ್ಞಾನಿಗಳು ಯಾವ ಸಂಸಾರನದಿಯನ್ನು ದಾಟುವರೋ–ಆ ನದಿಯನ್ನು ನೀನೂ ಕೂಡ ಶ್ರೇಷ್ಠವಾದ ಬುದ್ಧಿಯನ್ನು ಆಶ್ರಯಿಸಿ ದಾಟುವವನಾಗು. ಅದರಿಂದ ನೀನು ಸರ್ವಪ್ರಕಾರದಿಂದಲೂ ಮುಕ್ತನಾಗುವೆ. ಜಿತೇಂದ್ರಿಯನಾಗುವೆ. ಆತ್ಮವಿದನಾಗುವೆ. ಶುಚಿಯಾಗುವೆ. ಬ್ರಹ್ಮಮಯನೂ ಆಗುವೆ. ಸಕಲವಿಧವಾದ ಸಂಸಾರಬಂಧನಗಳಿಂದಲೂ ಮುಕ್ತನಾಗಿ ಪಾಪರಹಿತನಾಗಿ ಪ್ರಸನ್ನಾತ್ಮನಾಗುವೆ.

ಭೂಮಿಷ್ಠಾನೀವ ಭೂತಾನಿ ಪರ್ವತಸ್ಥೋ ನಿಶಾಮಯ ।
ಅಕ್ರುಧ್ಯನ್ನಪ್ರಹೃಷ್ಯಂಶ್ಚ ನ ನೃಶಂಸಮತಿಸ್ತಥಾ ॥೧೮॥

ಪರ್ವತದ ಶಿಖರದಲ್ಲಿ ನಿಂತಿರುವವನು ಭೂಮಿಯ ಮೇಲಿರುವ ಸಮಸ್ತಪ್ರಾಣಿಗಳನ್ನೂ ಯಾವ ರೀತಿಯಲ್ಲಿ ಸುಸ್ಪಷ್ಟವಾಗಿ ನೋಡುವನೋ–ಅದೇ ರೀತಿಯಲ್ಲಿ ನೀನೂ ಕೂಡ ಜ್ಞಾನರೂಪವಾದ ಶಿಖರದ ಮೇಲೆ ನಿಂತು ಸಮಸ್ತಪ್ರಾಣಿಗಳೂ ಸಂಸಾರದಲ್ಲಿ ಸಿಲುಕಿ ಪಡುತ್ತಿರುವ ಅವಸ್ಥೆಯನ್ನು ಗಮನಿಸು. ಕ್ರೋಧ-ಹರ್ಷಗಳಿಂದ ರಹಿತನಾಗು. ಕ್ರೂರವಾದ ಬುದ್ಧಿಯುಳ್ಳವನಾಗಬೇಡ.

ತತೋ ದ್ರಕ್ಷ್ಯಸಿ ಸರ್ವೇಷಾಂ ಭೂತಾನಾಂ ಪ್ರಭವಾಪ್ಯಯೌ ।
ಏನಂ ವೈ ಸರ್ವಭೂತೇಭ್ಯೋ ವಿಶಿಷ್ಟಂ ಮೇನಿರೇ ಬುಧಾಃ ।
ಧರ್ಮಂ ಧರ್ಮಭೃತಾಂ ಶ್ರೇಷ್ಠಾ ಮುನಯಸ್ತತ್ತ್ವದರ್ಶಿನಃ ॥೧೯॥

ಬ್ರಹ್ಮಜ್ಞಾನವನ್ನು ಪಡೆದನಂತರ ನೀನು ಎಲ್ಲ ಪ್ರಾಣಿಗಳ ಉತ್ಪತ್ತಿ-ಲಯಗಳ ರಹಸ್ಯವನ್ನು ತಿಳಿಯುವೆ. ಧರ್ಮಾತ್ಮರಲ್ಲಿ ಶ್ರೇಷ್ಠರಾದ, ತತ್ತ್ವ

ದರ್ಶಿಗಳಾದ, ವಿದ್ವಾಂಸರಾದ ಮುನಿಗಳು ಈ ಆಧ್ಯಾತ್ಮಿಕಧರ್ಮವನ್ನೇ ಎಲ್ಲ ಪ್ರಾಣಿಗಳಿಗೂ ಶ್ರೇಷ್ಠವಾದ ಧರ್ಮವೆಂದು ತಿಳಿದಿರುತ್ತಾರೆ.

ಆತ್ಮನೋ ವ್ಯಾಪಿನೋ ಜ್ಞಾನಮಿದಂ ಪುತ್ರಾನುಶಾಸನಮ್ ।
ಪ್ರಯತಾಯ ಪ್ರವಕ್ತವ್ಯಂ ಹಿತಾಯಾನುಗತಾಯ ಚ ॥೨೦॥

ಮಗು! ಈ ಉಪದೇಶವು ವ್ಯಾಪಕನಾದ ಆತ್ಮನ ಜ್ಞಾನವನ್ನು ಕುರಿತದ್ದು. ಹಿತೈಷಿಯಾದವನಿಗೆ, ವಿಧೇಯನಾದವನಿಗೆ ಜಿತೇಂದ್ರಿಯನಾದವನಿಗೆ ಮಾತ್ರವೇ ಇದನ್ನು ಹೇಳಬೇಕು.

ಆತ್ಮಜ್ಞಾನಮಿದಂ ಗುಹ್ಯಂ ಸರ್ವಗುಹ್ಯತಮಂ ಮಹತ್ ।
ಅಬ್ರುವಂ ಯದಹಂ ತಾತ ಆತ್ಮಸಾಕ್ಷಿಕಮಞ್ಜಸಾ ॥೨೧॥

ಗೋಪನೀಯವಾದ ಈ ಆತ್ಮಜ್ಞಾನವು ಅತ್ಯಂತಗಹನವಾಗಿಯೂ ಮಹತ್ವದ್ದಾಗಿಯೂ ಇದೆ. ಶುಕ! ನಾನು ಯಾವ ಆತ್ಮಜ್ಞಾನವನ್ನು ನಿನಗೆ ಹೇಳಿರುವೆನೋ–ಅದು ನಿಜವಾಗಿಯೂ ನನ್ನ ಪ್ರತ್ಯಕ್ಷಾನುಭವದಿಂದ ಪಡೆದ ಜ್ಞಾನವಾಗಿದೆ.

ನೈವ ಸ್ತ್ರೀ ನ ಪುಮಾನೇತನ್ನೈವ ಚೇದಂ ನಪುಂಸಕಮ್ ।
ಅದುಃಖಮಸುಖಂ ಬ್ರಹ್ಮ ಭೂತಭವ್ಯಭವಾತ್ಮಕಮ್ ॥೨೨॥

ಸುಖ-ದುಃಖಗಳಿಂದ ರಹಿತವಾಗಿ ಭೂತ-ಭವಿಷ್ಯದ್ವರ್ತಮಾನ ಸ್ವರೂಪವಾದ ಈ ಬ್ರಹ್ಮವು ಗಂಡಸೂ ಅಲ್ಲ ; ಹೆಂಗಸೂ ಅಲ್ಲ ; ನಪುಂಸಕವೂ ಅಲ್ಲ.

ನೈತಜ್ಜ್ಞಾತ್ವಾ ಪುಮಾನ್ಸ್ತ್ರೀ ವಾ ಪುನರ್ಭವಮವಾಪ್ನುತೇ ।
ಅಭವಪ್ರತಿಪತ್ತ್ಯರ್ಥಮೇತದ್ಧರ್ಮಂ ವಿಧೀಯತೇ ॥೨೩॥

ಪುರುಷನಾಗಲೀ, ಸ್ತ್ರೀಯಾಗಲೀ–ಈ ಬ್ರಹ್ಮವಸ್ತುವನ್ನು ತಿಳಿದು ಕೊಂಡರೆ ಪುನರ್ಜನ್ಮವನ್ನು ಪಡೆಯುವುದಿಲ್ಲ. ಪುನರ್ಜನ್ಮವನ್ನು ಪಡೆಯ ದಿರುವ ಸಲುವಾಗಿಯೇ ಈ ಧರ್ಮವು ವಿಧಿಸಲ್ಪಟ್ಟಿದೆ.

ಯಥಾ ಮತಾನಿ ಸರ್ವಾಣಿ ತಥೈತಾನಿ ಯಥಾ ತಥಾ ।
ಕಥಿತಾನಿ ಮಯಾ ಪುತ್ರ ಭವನ್ತಿ ನ ಭವನ್ತಿ ಚ ॥೨೪॥

ಮಗು! ಬ್ರಹ್ಮಜ್ಞಾನವನ್ನು ಪಡೆದುಕೊಳ್ಳಲು ಮತಗಳು ಯಾವು

ವಿವೆಯೋ–ಅವೆಲ್ಲವನ್ನೂ ನಾನು ಯಥಾವತ್ತಾಗಿ ನಿನಗೆ ಹೇಳಿರುತ್ತೇನೆ. ಈ ಮತಗಳ ಅರಿವು ಮತ್ತು ಅನುಷ್ಠಾನಗಳು ಇರುವುದೂ ಉಂಟು ; ಇಲ್ಲದಿರುವುದೂ ಉಂಟು.

ತತ್ಪ್ರೀತಿಯುಕ್ತೇನ ಗುಣಾನ್ವಿತೇನ
ಪುತ್ರೇಣ ಸತ್ಪುತ್ರ ದಮಾನ್ವಿತೇನ
ಪೃಷ್ಟೋ ಹಿ ಸಮ್ಪ್ರೀತಮನಾ ಯಥಾರ್ಥಂ
ಬ್ರೂಯಾತ್ಸುತಸ್ಯೇಹ ಯದುಕ್ತಮೇತತ್ ॥೨೫॥

ಸುಪುತ್ರನಾದ ಶುಕದೇವನೇ! ಪ್ರೀತಿಯುಕ್ತನಾದ, ಗುಣವಂತನಾದ, ಜಿತೇಂದ್ರಿಯನಾದ ಪುತ್ರನು ತಂದೆಯನ್ನು ಕುರಿತು ಈ ಪ್ರಶ್ನೆಗಳನ್ನು ಕೇಳಿದರೆ–ತಂದೆಯು ಸಂತುಷ್ಟಚಿತ್ತನಾಗಿ ಜಿಜ್ಞಾಸುವಾದ ಆ ಮಗನಿಗೆ ನಾನು ಹೇಳಿದ ರೀತಿಯಲ್ಲಿ ಯಥಾರ್ಥವಾದ ಈ ಬ್ರಹ್ಮಜ್ಞಾನದ ಉಪದೇಶವನ್ನು ಮಾಡಬೇಕು.”

ಎ೫೦ನೆಯ ಅಧ್ಯಾಯವು ಮುಗಿಯಿತು.

೨೫೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬ್ರಹ್ಮವಿದನಾದ ಬ್ರಾಹ್ಮಣನ ಲಕ್ಷಣಗಳು : ಪರಬ್ರಹ್ಮಪ್ರಾಪ್ತಿಯ ಉಪಾಯ

ಯುಧಿಷ್ಠಿರ! ವ್ಯಾಸರು ಹೇಳುತ್ತಾರೆ :

ಗನ್ಧಾನ್ರಸಾನ್ನಾನುರುನ್ಧ್ಯಾತ್ಸುಖಂ ವಾ
ನಾಲಂಕಾರಾಂಶ್ಚಾಪ್ನುಯಾತ್ತಸ್ಯ ತಸ್ಯ ।
ಮಾನಂ ಚ ಕೀರ್ತಿಂ ಚ ಯಶಶ್ಚ ನೇಚ್ಛೇ-
ತ್ಸ ವೈ ಪ್ರಚಾರಃ ಪಶ್ಯತೋ ಬ್ರಾಹ್ಮಣಸ್ಯ ॥೧॥

“ಮಗು! ಬ್ರಹ್ಮಜ್ಞಾನದ ಸಾಧಕನು ಗಂಧ-ರಸ ಇವುಗಳೇ ಮೊದಲಾದ ವಿಷಯಗಳನ್ನು ಉಪಭೋಗಿಸಬಾರದು. ವಿಷಯಗಳ ಉಪಭೋಗದಿಂದ ಪ್ರಾಪ್ತವಾಗುವ ಸುಖಕ್ಕೆ ಆಸೆಪಡಬಾರದು. ಅಲಂಕಾರವನ್ನು

ಮಾಡಿಕೊಳ್ಳಬಾರದು. ಮಾನ, ಕೀರ್ತಿ ಮತ್ತು ಯಶಸ್ಸುಗಳನ್ನು ಆಶಿಸಬಾರದು. ಇವುಗಳು ಬ್ರಹ್ಮಜ್ಞಾನಿಯಾದ ಬ್ರಾಹ್ಮಣನ ವ್ಯವಹಾರದಲ್ಲಿರುವ ಲಕ್ಷಣಗಳಾಗಿವೆ.

ಸರ್ವಾನ್ವೇದಾನಧೀಯೀತ ಶುಶ್ರೂಷುರ್ಬ್ರಹ್ಮಚರ್ಯವಾನ್ ।
ಋಚೋ ಯಜೂಂಷಿ ಸಾಮಾನಿ ನ ತೇನ ನ ಸ ವೈ ದ್ವಿಜಃ ॥೨॥

ಋಕ್ಸಾಮ-ಯಜುಸ್ಸುಗಳೆಂಬ ಸಕಲವೇದಗಳನ್ನೂ ಅಧ್ಯಯನಮಾಡಬೇಕು. ಗುರುಶುಶ್ರೂಷೆಯಲ್ಲಿ ನಿರತನಾಗಿರಬೇಕು. ಬ್ರಹ್ಮಚರ್ಯವ್ರತನಿಷ್ಠನಾಗಿರಬೇಕು. ಹೀಗೆ ಮಾಡುವುದರಿಂದ ಅವನು ಬ್ರಾಹ್ಮಣನಾಗುವುದಿಲ್ಲವೆಂಬುದಿಲ್ಲ (ಅಂತಹವನೇ ಬ್ರಾಹ್ಮಣಶ್ರೇಷ್ಠನು).

ಜ್ಞಾತಿವತ್ಸರ್ವಭೂತಾನಾಂ ಸರ್ವವಿತ್ಸರ್ವವೇದವಿತ್ ।
ನಾಕಾಮೋ ಮ್ರಿಯತೇ ಜಾತು ನ ತೇನ ನ ಚ ವೈ ದ್ವಿಜಃ ॥೩॥

ಅವನು–ಬಂಧುವು ಹೇಗೋ ಹಾಗೆ–ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಆತ್ಮೀಯತೆಯಿಂದ ನಡೆದುಕೊಳ್ಳುತ್ತಾನೆ. ಎಲ್ಲವನ್ನೂ ಅರಿತವನೂ, ಎಲ್ಲ ವೇದಗಳನ್ನೂ ಅರಿತವನೂ ಆಗುತ್ತಾನೆ. ಕಾಮರಹಿತನಾಗುತ್ತಾನೆ. ಅವನಿಗೆ ಮೃತ್ಯುವಿಲ್ಲ. ಅವನು ಬ್ರಾಹ್ಮಣನಾಗದಿರುವುದಿಲ್ಲ (ಅಂತಹವನೇ ಬ್ರಾಹ್ಮಣನು).

ಇಷ್ಟೀಶ್ಚ ವಿವಿಧಾಃ ಪ್ರಾಪ್ಯ ಕ್ರತೂಂಶ್ಚೈವಾಪ್ತದಕ್ಷಿಣಾನ್ ।
ಪ್ರಾಪ್ನೋತಿ ನೈವ ಬ್ರಾಹ್ಮಣ್ಯಮವಿಧಾನಾತ್ಕಥಂಚನ ॥೪॥

ನಾನಾವಿಧವಾದ ಇಷ್ಟಿಗಳನ್ನೂ, ಬಹುದಕ್ಷಿಣಾಕವಾದ ಕ್ರತುಗಳನ್ನೂ ಮಾಡಿ ಬ್ರಹ್ಮಜ್ಞಾನವನ್ನು ಪಡೆದುಕೊಳ್ಳದಿದ್ದರೆ ಅಂತಹವನು ಯಾವುದೇ ಕಾರಣದಿಂದಲೂ ಬ್ರಾಹ್ಮಣತ್ವವನ್ನು ಹೊಂದುವುದಿಲ್ಲ.

ಯದಾ ಚಾಯಂ ನ ಬಿಭೇತಿ ಯದಾ ಚಾಸ್ಮಾನ್ನ ಬಿಭ್ಯತಿ ।
ಯದಾ ನೇಚ್ಛತಿ ನ ದ್ವೇಷ್ಟಿ ಬ್ರಹ್ಮ ಸಮ್ಪದ್ಯತೇ ತದಾ ॥೫॥

ಯಾವಾಗ ಸಾಧಕನು ಇತರ ಪ್ರಾಣಿಗಳ ವಿಷಯವಾಗಿ ಭಯಪಡುವುದಿಲ್ಲವೋ, ಇತರ ಪ್ರಾಣಿಗಳೂ ಅವನ ದೆಸೆಯಿಂದ ಭಯಪಡುವುದಿಲ್ಲವೋ,

ಯಾವಾಗ ಕಾಮ-ದ್ವೇಷಗಳನ್ನು ತೊರೆಯುವನೋ–ಆಗ ಅವನು ಬ್ರಹ್ಮ ಭಾವವನ್ನು ಹೊಂದುತ್ತಾನೆ.

ಯದಾ ನ ಕುರುತೇ ಭಾವಂ ಸರ್ವಭೂತೇಷು ಪಾಪಕಮ್ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಮ್ಪದ್ಯತೇ ತದಾ ॥೬॥

ಯಾವಾಗ ಸಾಧಕನು ಮನಸ್ಸು, ಮಾತು ಮತ್ತು ಕಾರ್ಯಗಳ ಮೂಲಕವಾಗಿ ಯಾವುದೇ ಪ್ರಾಣಿಗಾದರೂ ಕೆಡುಕನ್ನು ಮಾಡುವ ಭಾವನೆಯನ್ನು ಹೊಂದುವುದಿಲ್ಲವೋ–ಆಗ ಅವನು ಬ್ರಹ್ಮಭಾವವನ್ನು ಹೊಂದುತ್ತಾನೆ.

ಕಾಮಬನ್ಧನಮೇವೈಕಂ ನಾನ್ಯದಸ್ತೀಹ ಬನ್ಧನಮ್ ।
ಕಾಮಬನ್ಧನಮುಕ್ತೋ ಹಿ ಬ್ರಹ್ಮಭೂಯಾಯ ಕಲ್ಪತೇ ॥೭॥

ಜಗತ್ತಿನಲ್ಲಿ ಕಾಮಬಂಧನವೇ ನಿಜವಾದ ಏಕೈಕಬಂಧನ ; ಬೇರಾವುದೂ ಬಂಧನವಲ್ಲ. ಆದುದರಿಂದ ಕಾಮಬಂಧನದಿಂದ ಮುಕ್ತನಾದವನು ಬ್ರಹ್ಮಭಾವವನ್ನು ಹೊಂದುತ್ತಾನೆ.

ಕಾಮತೋ ಮುಚ್ಯಮಾನಸ್ತು ಧೂಮ್ರಾಭ್ರಾದಿವ ಚನ್ದ್ರಮಾಃ ।
ವಿರಜಾಃ ಕಾಲಮಾಕಾಂಕ್ಷನ್ಧೀರೋ ಧೈರ್ಯೇಣ ವರ್ತತೇ ॥೮॥

ಕಾಮನೆಗಳಿಂದ ಮುಕ್ತನಾದ ಧೀರನು–ಧೂಮ್ರವರ್ಣದ ಮೋಡದಿಂದ ಮುಕ್ತನಾದ ಚಂದ್ರನಂತೆ–ರಜೋರಹಿತನಾಗಿ, ನಿರ್ಮಲನಾಗಿ ಧೈರ್ಯದಿಂದ ಕಾಲಪ್ರತೀಕ್ಷೆಯನ್ನು ಮಾಡುತ್ತಿರುತ್ತಾನೆ.

ಆಪೂರ್ಯಮಾಣಮಚಲಪ್ರತಿಷ್ಠಂ
ಸಮುದ್ರಮಾಪಃ ಪ್ರವಿಶನ್ತಿ ಯದ್ವತ್ ।
ತದ್ವತ್ಕಾಮಾ ಯಂ ಪ್ರವಿಶನ್ತಿ ಸರ್ವೇ
ಸ ಶಾನ್ತಿಮಾಪ್ನೋತಿ ನ ಕಾಮಕಾಮಃ ॥೯॥

ಸದಾ ತುಂಬಿಕೊಳ್ಳುತ್ತಲೇ ಇರುವ, ಸುಸ್ಥಿರವಾದ ಸ್ಥಿತಿಯನ್ನು ಹೊಂದಿರುವ ಸಮುದ್ರವನ್ನು ಯಾವ ರೀತಿಯಲ್ಲಿ ಎಲ್ಲ ನದ-ನದಿಗಳೂ (ಸಮುದ್ರದಲ್ಲಿ ಯಾವುದೇ ವಿಧವಾದ ಕ್ಷೋಭೆಯನ್ನೂ ಉಂಟುಮಾಡದೇ)

ಪ್ರವೇಶಿಸುತ್ತವೆಯೋ–ಅದೇ ರೀತಿಯಲ್ಲಿ ಎಲ್ಲ ವಿಧವಾದ ಕಾಮನೆಗಳೂ ಅವುಗಳ ಅಸ್ತಿತ್ವವನ್ನು ಉಳಿಸಿಕೊಳ್ಳದೆ, ಯಾವ ವಿಧವಾದ ವಿಕಾರಗಳನ್ನೂ ಉಂಟುಮಾಡದೆ ಸ್ಥಿತಪ್ರಜ್ಞನಲ್ಲಿ ಸೇರಿಹೋಗುತ್ತವೆ. ಈ ಕಾರಣದಿಂದ ಅವನು ಪರಮಶಾಂತಿಯನ್ನು ಹೊಂದುತ್ತಾನೆ. ಆದರೆ ಕಾಮಾಪೇಕ್ಷಿಯು ಪರಮಶಾಂತಿಯನ್ನು ಎಂದಿಗೂ ಹೊಂದುವುದಿಲ್ಲ. (ಶ್ರೀಗೀತೆ ಅ. ೨ ಶ್ಲೋ. ೭೦)

ಸ ಕಾಮಕಾನ್ತೋ ನ ತು ಕಾಮಕಾಮಃ
ಸ ವೈ ಕಾಮಾತ್ಸ್ವರ್ಗಮುಪೈತಿ ದೇಹೀ ॥೧೦॥

ಆ ಸ್ಥಿತಪ್ರಜ್ಞನು ಕಾಮನೆಗಳಿಗೆ ಪ್ರಿಯನಾಗಿರುತ್ತಾನೆ. ಕಾಮನೆಗಳು ಅವನನ್ನು ಹಿಂಬಾಲಿಸಿ ಹೋಗುತ್ತವೆ. ಆದರೆ ಅವನು ಮಾತ್ರ ಕಾಮಾಪೇಕ್ಷಿಯಾಗಿರುವುದಿಲ್ಲ. ಅವನೇನಾದರೂ ಕಾಮನೆಗಳನ್ನು ಅಪೇಕ್ಷಿಸಿದ್ದೇ ಆದರೆ ಸ್ವರ್ಗವನ್ನೇ ಪಡೆಯುತ್ತಾನೆ.

ವೇದಸ್ಯೋಪನಿಷತ್ಸತ್ಯಂ ಸತ್ಯಸ್ಯೋಪನಿಷದ್ದಮಃ ।
ದಮಸ್ಯೋಪನಿಷದ್ದಾನಂ ದಾನಸ್ಯೋಪನಿಷತ್ತಪಃ ॥೧೧॥

ವೇದದ ರಹಸ್ಯವು ಸತ್ಯವೇ ಆಗಿದೆ. ಸತ್ಯದ ರಹಸ್ಯವು ದಮ (ಜಿತೇಂದ್ರಿಯತೆ). ದಮದ ರಹಸ್ಯವು ದಾನ. ದಾನದ ರಹಸ್ಯವು ತಪಸ್ಸು.

ತಪಸೋಪನಿಷತ್ತ್ಯಾಗಸ್ತ್ಯಾಗಸ್ಯೋಪನಿಷತ್ಸುಖಮ್ ।
ಸುಖಸ್ಯೋಪನಿಷತ್ಸ್ವರ್ಗಃ ಸ್ವರ್ಗಸ್ಯೋಪನಿಷಚ್ಛಮಃ ॥೧೨॥

ತಪಸ್ಸಿನ ರಹಸ್ಯವು ತ್ಯಾಗ. ತ್ಯಾಗದ ರಹಸ್ಯವು ಸುಖ. ಸುಖದ ರಹಸ್ಯವು ಸ್ವರ್ಗ. ಸ್ವರ್ಗದ ರಹಸ್ಯವು ಶಮ (ಸರ್ವೋಪಶಮನರೂಪವಾದ ಮುಕ್ತಿ).

ಕ್ಲೇದನಂ ಶೋಕಮನಸೋಃ ಸಂತಾಪಂ ತೃಷ್ಣಯಾ ಸಹ ।
ಸತ್ತ್ವಮಿಚ್ಛಸಿ ಸಂತೋಷಾಚ್ಛಾನ್ತಿಲಕ್ಷಣಮುತ್ತಮಮ್ ॥೧೩॥

ಸಂತೋಷಕ್ಕೋಸ್ಕರ ಸತ್ತ್ವಗುಣವನ್ನು ಆಶ್ರಯಿಸಬೇಕು. ಸತ್ತ್ವ

ಗುಣವು ಉತ್ತಮೋತ್ತಮವಾದ ಶಾಂತಿಯ ಲಕ್ಷಣವೇ ಆಗಿದೆ. ಸತ್ತ್ವಗುಣವು ತೃಷ್ಣೆಯನ್ನೂ ಮತ್ತು ಸಂಕಲ-ವಿಕಲ್ಪ, ಚಿಂತಾ-ದುಃಖಗಳಿಂದುಂಟಾದ ಸಂತಾಪವನ್ನೂ ತೋಯಿಸಿಬಿಡುತ್ತದೆ (ಹೋಗಲಾಡಿಸುತ್ತದೆ).

ವಿಶೋಕೋ ನಿರ್ಮಮಃ ಶಾನ್ತಃ ಪ್ರಸನ್ನಾತ್ಮಾ ವಿಮತ್ಸರಃ ।
ಷಡ್ಭಿರ್ಲಕ್ಷಣವಾನೇತೈಃ ಸಮಗ್ರಃ ಪುನರೇಷ್ಯತಿ ॥೧೪॥

ಶೋಕವಿಲ್ಲದಿರುವಿಕೆ, ಮಮಕಾರವಿಲ್ಲದಿರುವಿಕೆ, ಪ್ರಶಾಂತತೆ, ಚಿತ್ತ ಪ್ರಸನ್ನತೆ, ಮಾತ್ಸರ್ಯವಿಲ್ಲದಿರುವಿಕೆ ಮತ್ತು ಸಂತೋಷ–ಈ ಆರು ಲಕ್ಷಣ ಗಳಿಂದ ಕೂಡಿದವನು ಪೂರ್ಣತೆಯನ್ನು ಪಡೆದು (ಸಂತೃಪ್ತನಾಗಿ) ಮೋಕ್ಷ ವನ್ನು ಹೊಂದುತ್ತಾನೆ.

ಷಡ್ಭಿಃ ಸತ್ತ್ವಗುಣೋಪೇತೈಃ ಪ್ರಾಜ್ಞೈರಧಿಗತಂ ತ್ರಿಭಿಃ ।
ಯೇ ವಿದುಃ ಪ್ರೇತ್ಯ ಚಾತ್ಮಾನಮಿಹಸ್ಥಂ ತಂ ಗುಣಂ ವಿದುಃ ॥೧೫॥

ಸತ್ತ್ವಗುಣಸಂಪನ್ನರಾದ ಯಾವ ಪ್ರಾಜ್ಞರು (ಮೇಲೆ ಹೇಳಿದ ಶೋಕವಿಲ್ಲದಿರುವಿಕೆಯೇ ಮುಂತಾದ) ಆರು ಗುಣಗಳಿಂದ ಯಜ್ಞ, ದಾನ, ತಪಸ್ಸುಗಳೆಂಬ ಅಥವಾ ಶ್ರವಣ-ಮನನ-ನಿದಿಧ್ಯಾಸನಗಳೆಂಬ ಮೂರರ ಮೂಲಕ ಇಲ್ಲಿಯೇ ದೇಹದಲ್ಲಿರುವ ಆತ್ಮನನ್ನು ತಿಳಿಯವರೋ–ಅವರು ದೇಹಾವಸಾನವಾದ ಮೇಲೂ ಅದೇ ಆತ್ಮಭಾವವನ್ನು ಪಡೆಯುವರು.

ಅಕೃತ್ರಿಮಮಸಂಹಾರ್ಯಂ ಪ್ರಾಕೃತಂ ನಿರುಪಸ್ಕೃತಮ್ ।
ಅಧ್ಯಾತ್ಮಂ ಸುಕೃತಂ ಪ್ರಾಪ್ತಃ ಸುಖಮವ್ಯಯಮಶ್ನುತೇ ॥೧೬॥

ಉತ್ಪತ್ತಿರಹಿತನಾದ, ಅವಿನಾಶಿಯಾದ, ಸ್ವಭಾವಸಿದ್ಧನಾದ, ಅವಿಕಾರಿ ಯಾದ, ಶರೀರದಲ್ಲಿಯೇ ಇರುವ 'ಸುಕೃತ' ಎಂಬ ಹೆಸರಿನಿಂದ ಪ್ರಸಿದ್ಧ ವಾಗಿರುವ ಬ್ರಹ್ಮವನ್ನು ಹೊಂದಿದವನು ಅಕ್ಷಯವಾದ ಸುಖಕ್ಕೆ ಭಾಗಿ ಯಾಗುತ್ತಾನೆ.

ನಿಷ್ಪ್ರಚಾರಂ ಮನಃ ಕೃತ್ವಾ ಪ್ರತಿಷ್ಠಾಪ್ಯ ಚ ಸರ್ವಶಃ ।
ಯಾಮಯಂ ಲಭತೇ ತುಷ್ಟಿಂ ಸಾ ನ ಶಕ್ಯಾತ್ಮನೋಽನ್ಯಥಾ ॥೧೭॥

ಎಲ್ಲೆಂದರಲ್ಲಿಗೆ ಹೋಗುವ ಮನಸ್ಸನ್ನು ತಡೆದು ಸಂಪೂರ್ಣವಾಗಿ

ಆತ್ಮದಲ್ಲಿಯೇ ಪ್ರತಿಷ್ಠಾಪಿಸಿದ ಪುರುಷನು ಯಾವ ವಿಧವಾದ ತುಷ್ಟಿಯನ್ನು ಹೊಂದುವನೋ–ಆ ವಿಧವಾದ ತುಷ್ಟಿಯನ್ನು ಬೇರೆ ಯಾವ ವಿಧಾನ ದಿಂದಲೂ ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ.

ಯೇನ ತೃಪ್ಯತ್ಯಭುಞ್ಜಾನೋ ಯೇನ ತೃಪ್ಯತ್ಯವಿತ್ತವಾನ್ ।
ಯೇನಾಸ್ನೇಹೋ ಬಲಂ ಧತ್ತೇ ಯಸ್ತಂ ವೇದ ಸ ವೇದವಿತ್ ॥೧೮॥

ಭೋಜನವಿಲ್ಲದಿದ್ದರೂ ಯಾವುದರಿಂದ ತೃಪ್ತಿಯನ್ನು ಹೊಂದುವನೋ, ಧನವಿಲ್ಲದಿದ್ದರೂ ಯಾವುದರಿಂದ ತೃಪ್ತಿಯನ್ನು ಹೊಂದುವನೋ, ಸ್ನೇಹವಿಲ್ಲದಿದ್ದರೂ (ಬಲವರ್ಧಕಗಳಾದ ಪದಾರ್ಥಗಳನ್ನು ಸೇವಿಸದಿದ್ದರೂ) ಯಾವುದರಿಂದ ಬಲವನ್ನು ಪಡೆದುಕೊಳ್ಳುವನೋ–ಅಂತಹ ಬ್ರಹ್ಮವಸ್ತುವನ್ನು ತಿಳಿದಿರುವವನೇ ವೇದಗಳ ತತ್ತ್ವವನ್ನು ತಿಳಿದವನು.

ಸಂಗುಪ್ತಾನ್ಯಾತ್ಮನೋ ದ್ವಾರಾಣ್ಯಪಿಧಾಯ ವಿಚಿನ್ತಯನ್ ।
ಯೋ ಹ್ಯಾಸ್ತೇ ಬ್ರಾಹ್ಮಣಃ ಶಿಷ್ಟಃ ಸ ಆತ್ಮರತಿರುಚ್ಯತೇ ॥೧೯॥

ಪ್ರಮಾದಕ್ಕೆ ವಶವಾಗದಂತೆ ಸಂರಕ್ಷಿಸಲ್ಪಡುತ್ತಿರುವ ತನ್ನ ಶರೀರದ ಎಲ್ಲ ಬಾಗಿಲುಗಳನ್ನೂ (ರಂಧ್ರಗಳನ್ನೂ) ಮುಚ್ಚಿ ಯಾವ ಬ್ರಾಹ್ಮಣನು ಅನವರತವಾಗಿ ಬ್ರಹ್ಮವಸ್ತುವನ್ನು ಧ್ಯಾನಮಾಡುತ್ತಿರುವನೋ–ಅವನೇ ಶಿಷ್ಟನೆಂದೂ ಆತ್ಮಾರಾಮನೆಂದೂ ಹೇಳಲ್ಪಡುತ್ತಾನೆ.

ಸಮಾಹಿತಂ ಪರೇ ತತ್ತ್ವೇ ಕ್ಷೀಣಕಾಮಮವಸ್ಥಿತಮ್ ।
ಸರ್ವತಃ ಸುಖಮನ್ವೇತಿ ವಪುಶ್ಚಾನ್ದ್ರಮಸಂ ಯಥಾ ॥೨೦॥

ಕಾಮನೆಗಳೆಲ್ಲವನ್ನೂ ತೊರೆದು ಶ್ರೇಷ್ಠವಾದ ಪರತತ್ತ್ವದಲ್ಲಿ ಏಕಾಗ್ರ ಚಿತ್ತನಾಗಿರುವವನು (ಸಂಪೂರ್ಣವಾಗಿ ಅಮೃತದಿಂದ ವ್ಯಾಪ್ತವಾಗಿರುವ) ಚಂದ್ರನ ದೇಹದಂತೆ ಎಲ್ಲ ಕಡೆಗಳಿಂದಲೂ ಆನಂದದಿಂದ ವ್ಯಾಪ್ತನಾಗುತ್ತಾನೆ.

ಅವಿಶೇಷಾಣಿ ಭೂತಾನಿ ಗುಣಾಂಶ್ಚ ಜಹತೋ ಮುನೇಃ ।
ಸುಖೇನಾಪೋಹ್ಯತೇ ದುಃಖಂ ಭಾಸ್ಕರೇಣ ತಮೋ ಯಥಾ ॥೨೧॥

ಯಾವನು ಎಲ್ಲ ಪ್ರಾಣಿಗಳನ್ನೂ ಸರ್ವಸಮಭಾವದಿಂದ ಕಾಣು

ವನೋ, ಗುಣಾತೀತನಾಗಿರುವನೋ ಅಂತಹವನ ದುಃಖವು-ಅಂಧಕಾರವು ಸೂರ್ಯನಿಂದ ಹೊರಟುಹೋಗುವಂತೆ – ಅನಾಯಾಸವಾಗಿ ಹೊರಟು ಹೋಗುತ್ತದೆ.

ತಮತಿಕ್ರಾನ್ತಕರ್ಮಾಣಮತಿಕ್ರಾನ್ತಗುಣಕ್ಷಯಮ್ ।
ಬ್ರಾಹ್ಮಣಂ ವಿಷಯಾಶ್ಲಿಷ್ಟಂ ಜರಾಮೃತ್ಯೂ ನ ವಿನ್ದತಃ ॥೨೨॥

ಕರ್ಮಗಳನ್ನು ಪರಿತ್ಯಾಗಮಾಡಿರುವ, ಗುಣಗಳ ಆಶ್ರಯವನ್ನೂ (ಇಂದ್ರಿಯಗಳನ್ನೂ) ಅತಿಕ್ರಮಿಸಿರುವ, ವಿಷಯವಾಸನೆಗಳಿಂದ ರಹಿತನಾದ ಅಂತಹ ಬ್ರಾಹ್ಮಣನನ್ನು ಹುಟ್ಟು-ಸಾವುಗಳು ಬಾಧಿಸುವುದಿಲ್ಲ.

ಸ ಯದಾ ಸರ್ವತೋ ಮುಕ್ತಃ ಸಮಃ ಪರ್ಯವತಿಷ್ಠತೇ ।
ಇನ್ದ್ರಿಯಾಣೀನ್ದ್ರಿಯಾರ್ಥಾಂಶ್ಚ ಶರೀರಸ್ಥೋಽತಿವರ್ತತೇ ॥೨೩॥

ಯಾವಾಗ ಸಾಧಕನು ಸಮಸ್ತವಾದ ಸರ್ವಪ್ರಕಾರವಾದ ಬಂಧನ ಗಳಿಂದಲೂ ವಿಮುಕ್ತನಾಗಿ ಸಮಸ್ಥಿತಿಯಲ್ಲಿರುವನೋ–ಆಗ ಶರೀರಸ್ಥನಾಗಿ ದ್ದರೂ ಇಂದ್ರಿಯಗಳನ್ನೂ ಮತ್ತು ವಿಷಯಗಳನ್ನೂ ಅತಿಕ್ರಮಿಸುತ್ತಾನೆ. (ಇಂದ್ರಿಯಗಳೂ ಮತ್ತು ಇಂದ್ರಿಯಾರ್ಥಗಳೂ ಸಮತ್ವದಲ್ಲಿರುವವನನ್ನು ಬಾಧೆಪಡಿಸುವುದಿಲ್ಲ.)

ಕಾರಣಂ ಪರಮಂ ಪ್ರಾಪ್ಯ ಅತಿಕ್ರಾನ್ತಸ್ಯ ಕಾರ್ಯತಾಮ್ ।
ಪುನರಾವರ್ತನಂ ನಾಸ್ತಿ ಸಮ್ಪ್ರಾಪ್ತಸ್ಯ ಪರಂ ಪದಮ್ ॥೨೪॥

ಹೀಗೆ ಯಾವನು ಪರಮಕಾರಣಸ್ವರೂಪವಾದ ಬ್ರಹ್ಮವನ್ನು ಹೊಂದಿ ಕಾರ್ಯರೂಪವಾದ ಪ್ರಕೃತಿಯನ್ನು ಅತಿಕ್ರಮಿಸುವನೋ–ಪರಮಪದವನ್ನು ಹೊಂದಿದ ಅಂತಹ ಜ್ಞಾನಿಗೆ ಪುನರ್ಜನ್ಮದ ಭಯವಿಲ್ಲ."

೨೫೧ನೆಯ ಅಧ್ಯಾಯವು ಮುಗಿಯಿತು.

೨೫೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶರೀರದಲ್ಲಿ ಪಂಚಭೂತಗಳ ಕಾರ್ಯ ಮತ್ತು ಗುಣಗಳ ವಿವರಣೆ

ಯುಧಿಷ್ಠಿರ! ವ್ಯಾಸರು ಹೇಳುತ್ತಾರೆ :

ದ್ವನ್ದ್ವಾನಿ ಮೋಕ್ಷಜಿಜ್ಞಾಸುರರ್ಥಧರ್ಮಾವನುಷ್ಠಿತಃ ।
ವಕ್ತ್ರಾ ಗುಣವತಾ ಶಿಷ್ಯಃ ಶ್ರಾವ್ಯಃ ಪೂರ್ವಮಿದಂ ಮಹತ್ ॥೧॥

"ಶುಕ! ಮಾನಾಪಮಾನಗಳೇ ಮೊದಲಾದ ದ್ವಂದ್ವಗಳನ್ನು ಸಹಿಸಿಕೊಂಡು (ಅಥವಾ ಮಾನಾಪಮಾನಗಳೇ ಮುಂತಾದ ದ್ವಂದ್ವಗಳಿಂದ ಕೂಡಿರುವ) ಅರ್ಥ-ಧರ್ಮಗಳನ್ನು ಅನುಷ್ಠಾನಮಾಡುತ್ತಿದ್ದರೂ ಮೋಕ್ಷವನ್ನು ಬಯಸುವ ಶ್ರದ್ಧಾಳುವಾದ ಶಿಷ್ಯನಿಗೆ ಪ್ರವಚನಕಾರರು (ಆಚಾರ್ಯರು) ಮೊದಲು ಈ ಮಹತ್ವಪೂರ್ಣವಾದ ಶಾಸ್ತ್ರವಿಷಯವನ್ನು ಹೇಳಬೇಕು.

ಆಕಾಶಂ ಮಾರುತೋ ಜ್ಯೋತಿರಾಪಃ ಪೃಥ್ವೀ ಚ ಪಞ್ಚಮೀ ।
ಭಾವಾಭಾವೌ ಚ ಕಾಲಶ್ಚ ಸರ್ವಭೂತೇಷು ಪಞ್ಚಸು ॥೨॥

ಆಕಾಶ, ವಾಯು, ಜಲ, ತೇಜಸ್ಸು, ಐದನೆಯದಾದ ಪೃಥಿವೀ, ವ್ಯಕ್ತ, ಅವ್ಯಕ್ತ ಮತ್ತು ಕಾಲ–ಇವುಗಳು ಪಂಚಭೂತಾತ್ಮಕವಾದ ಎಲ್ಲ ಪ್ರಾಣಿಗಳ ಶರೀರಗಳಲ್ಲಿಯೂ ಇರುತ್ತವೆ.

ಅನ್ತರಾತ್ಮಕಮಾಕಾಶಂ ತನ್ಮಯಂ ಶ್ರೋತ್ರಮಿನ್ದ್ರಿಯಮ್ ।
ತಸ್ಯ ಶಬ್ದಂ ಗುಣಂ ವಿದ್ಯಾನ್ಮೂರ್ತಿಶಾಸ್ತ್ರವಿಧಾನವಿತ್ ॥೩॥

ಆಕಾಶವು ಅವಕಾಶಸ್ವರೂಪವಾಗಿದೆ. ಶ್ರವಣೇಂದ್ರಿಯವು ಆಕಾಶಮಯವಾಗಿದೆ. ಶರೀರಶಾಸ್ತ್ರದ ವಿಧಾನವನ್ನು ಬಲ್ಲವರು ಶಬ್ದವನ್ನು ಆಕಾಶದ ಗುಣವೆಂದು ತಿಳಿಯಬೇಕು.

ಚರಣಂ ಮಾರುತಾತ್ಮೇತಿ ಪ್ರಾಣಾಪಾನೌ ಚ ತನ್ಮಯೌ ।
ಸ್ಪರ್ಶನಂ ಚೇನ್ದ್ರಿಯಂ ವಿದ್ಯಾತ್ತಥಾ ಸ್ಪರ್ಶಂ ಚ ತನ್ಮಯಮ್ ॥೪॥

ತಿರುಗಾಡುವುದು ವಾಯುವಿನ ಧರ್ಮವಾಗಿದೆ. ಪ್ರಾಣಾಪಾನಗಳು ವಾಯುಸ್ವರೂಪವಾಗಿವೆ. ಸ್ಪರ್ಶೇಂದ್ರಿಯವನ್ನೂ (ಚರ್ಮವನ್ನೂ) ಸ್ಪರ್ಶವೆಂಬ ಗುಣವನ್ನೂ ವಾಯುಮಯವೆಂದು ತಿಳಿಯಬೇಕು.

ತಾಪಃ ಪಾಕಃ ಪ್ರಕಾಶಶ್ಚ ಜ್ಯೋತಿಶ್ಚಕ್ಷುಶ್ಚ ಪಞ್ಚಮಮ್ ।
ತಸ್ಯ ರೂಪಂ ಗುಣಂ ವಿದ್ಯಾತ್ತಾಮ್ರಗೌರಾಸಿತಾತ್ಮಕಮ್ ॥೫॥

ತಾಪ, ಪಚನ, ಪ್ರಕಾಶ, ಜ್ಯೋತಿ, ಚಕ್ಷುಸ್ಸು–ಈ ಐದು ಅಗ್ನಿತತ್ತ್ವದ ಕಾರ್ಯಗಳಾಗಿವೆ. ಕೆಂಪು, ಬಿಳುಪು, ಕಪ್ಪು–ಮೊದಲಾದ ವರ್ಣಗಳಿಂದ ಕೂಡಿದ ರೂಪವು ಅಗ್ನಿಯ ಗುಣವಾಗಿದೆ.

ಪ್ರಕ್ಲೇದಃ ಕ್ಷುದ್ರತಾ ಸ್ನೇಹ ಇತ್ಯಪಾಮುಪದಿಶ್ಯತೇ ।
ಅಸೃಙ್ಮಜ್ಜಾ ಚ ಯಚ್ಚಾನ್ಯತ್ಸ್ನಿಗ್ಧಂ ವಿದ್ಯಾತ್ತದಾತ್ಮಕಮ್ ॥೬॥

ತೇವ, ಸೂಕ್ಷ್ಮತ್ವ, ಸ್ನಿಗ್ಧತೆ–ಇವುಗಳು ಜಲತತ್ತ್ವದ ಧರ್ಮಗಳಾಗಿವೆ. ರಕ್ತ, ಮಜ್ಜೆ ಮತ್ತು ಇತರ ಸ್ನಿಗ್ಧಪದಾರ್ಥಗಳು ಜಲಮಯಗಳೆಂದು ತಿಳಿಯಬೇಕು.

ರಸನಂ ಚೇನ್ದ್ರಿಯಂ ಜಿಹ್ವಾ ರಸಶ್ಚಾಪಾಂ ಗುಣೋ ಮತಃ ।
ಸಂಘಾತಃ ಪಾರ್ಥಿವೋ ಧಾತುರಸ್ಥಿದನ್ತನಖಾನಿ ಚ ।
ಶ್ಮಶ್ರು ರೋಮ ಚ ಕೇಶಾಶ್ಚ ಶಿರಾ ಸ್ನಾಯು ಚ ಚರ್ಮ ಚ ॥೭॥

ರಸನೇಂದ್ರಿಯ, ನಾಲಿಗೆ ಮತ್ತು ರಸ–ಈ ಎಲ್ಲವೂ ಜಲದ ಗುಣ ಗಳೆಂದು ಹೇಳಲ್ಪಟ್ಟಿವೆ. ಶರೀರದಲ್ಲಿ ಒಂದಕ್ಕೊಂದು ಕೂಡಿಕೊಂಡಿರುವ ಭಾಗಗಳು (ಸಂಧಿಬಂಧಗಳು) ಪೃಥ್ವೀತತ್ತ್ವದ್ದಾಗಿವೆ. ಮೂಳೆ, ಹಲ್ಲು, ಮತ್ತು ಉಗುರುಗಳು, ಗಡ್ಡ-ಮೀಸೆಗಳು, ಶರೀರದಲ್ಲಿರುವ ರೋಮಗಳು, ತಲೆ ಗೂದಲು, ನರಗಳು, ಕರುಳುಗಳು, ಚರ್ಮ–ಇವೆಲ್ಲವೂ ಪೃಥ್ವೀಭೂತಕ್ಕೆ ಸಂಬಂಧಿಸಿದುವುಗಳಾಗಿವೆ.

ಇನ್ದ್ರಿಯಂ ಘ್ರಾಣಸಂಜ್ಞಾತಂ ನಾಸಿಕೇತ್ಯಭಿಸಂಜ್ಞಿತಾ ।
ಗನ್ಧಶ್ಚೇವೇನ್ದ್ರಿಯಾರ್ಥೋಽಯಂ ವಿಜ್ಞೇಯಃ ಪೃಥಿವೀಮಯಃ ॥೮॥

ನಾಸಿಕೆಯೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಘ್ರಾಣೇಂದ್ರಿಯವೂ ಪೃಥ್ವಿಯ ಅಂಶವೇ ಆಗಿದೆ. ಗಂಧವೆಂಬ ಘ್ರಾಣೇಂದ್ರಿಯದ ವಿಷಯವೂ ಪೃಥಿವೀಮಯವೆಂದೇ ತಿಳಿಯಬೇಕು.

ಉತ್ತರೇಷು ಗುಣಾಃ ಸನ್ತಿ ಸರ್ವಸತ್ತ್ವೇಷು ಚೋತ್ತರಾಃ ॥೯॥

ಮುಂದು-ಮುಂದಿನ ಭೂತಗಳಲ್ಲಿ ಹಿಂದು-ಹಿಂದಿನ ಭೂತಗಳ ಗುಣಗಳೆಲ್ಲವೂ ಅಡಗಿರುತ್ತವೆ. (ಆಕಾಶಭೂತದಲ್ಲಿ ಶಬ್ದಗುಣಮಾತ್ರವಿದೆ. ಎರಡನೆಯದಾದ ವಾಯುಭೂತದಲ್ಲಿ ವಾಯುವಿನ ವಿಶಿಷ್ಟಗುಣವಾದ ಸ್ಪರ್ಶವೂ ಜೊತೆಗೆ ಆಕಾಶದ ಶಬ್ದಗುಣವೂ ಇರುತ್ತದೆ. ಮೂರನೆಯದಾದ ತೇಜಸ್ತತ್ತ್ವದಲ್ಲಿ ಅದರ ವಿಶಿಷ್ಟಗುಣವಾದ ರೂಪವೂ ಜೊತೆಗೆ ಶಬ್ದ ಸ್ಪರ್ಶಗುಣಗಳೂ ಇರುತ್ತವೆ. ನಾಲ್ಕನೆಯದಾದ ಜಲತತ್ತ್ವದಲ್ಲಿ ಅದರ ವಿಶಿಷ್ಟಗುಣವಾದ ರಸವೂ ಜೊತೆಗೆ ಶಬ್ದ-ಸ್ಪರ್ಶ-ರೂಪಗಳೂ ಇರುತ್ತವೆ. ಐದನೆಯದಾದ ಪೃಥಿವೀತತ್ತ್ವದಲ್ಲಿ ಅದರ ವಿಶಿಷ್ಟಗುಣವಾದ ಗಂಧವೂ ಜೊತೆಗೆ ಶಬ್ದ-ಸ್ಪರ್ಶ-ರೂಪ-ರಸಗಳೂ ಇರುತ್ತವೆ.)

ಪಞ್ಚಾನಾಂ ಭೂತಸಂಘಾನಾಂ ಸಂತತಿಂ ಮುನಯೋ ವಿದುಃ ।
ಮನೋ ನವಮಮೇಷಾಂ ತು ಬುದ್ಧಿಸ್ತು ದಶಮೀ ಸ್ಮೃತಾ ॥೧೦॥

ಮುನಿಗಳು ಪಂಚಮಹಾಭೂತಸಮುದಾಯದ ಸಂತತಿಯನ್ನು ಅರಿತಿದ್ದಾರೆ. ಪಂಚಭೂತಗಳು, ವ್ಯಕ್ತ-ಅವ್ಯಕ್ತ ಮತ್ತು ಕಾಲ–ಇವುಗಳಾದನಂತರ ಮನಸ್ಸು ಒಂಬತ್ತನೆಯದೆಂದೂ–ಬುದ್ಧಿಯು ಹತ್ತನೆಯದೆಂದೂ ಋಷಿಗಳಿಂದ ಹೇಳಲ್ಪಟ್ಟಿದೆ.

ಏಕಾದಶಸ್ತ್ವನನ್ತಾತ್ಮಾ ಸ ಸರ್ವಃ ಪರ ಉಚ್ಯತೇ ।
ವ್ಯವಸಾಯಾತ್ಮಿಕಾ ಬುದ್ಧಿರ್ಮನೋ ವ್ಯಾಕರಣಾತ್ಮಕಮ್ ।
ಕರ್ಮಾನುಮಾನಾದ್ವಿಜ್ಞೇಯಃ ಸ ಜೀವಃ ಕ್ಷೇತ್ರಸಂಜ್ಞಕಃ ॥೧೧॥

ಹನ್ನೊಂದನೆಯವನಾದರೋ ಅವಿನಾಶಿಯಾದ ಆತ್ಮನು. ಅವನು ಸತ್ಯಸ್ವರೂಪನೆಂದೂ ಶ್ರೇಷ್ಠತತ್ತ್ವವೆಂದೂ ಹೇಳಲ್ಪಡುತ್ತಾನೆ. ಬುದ್ಧಿಯು ನಿಶ್ಚಯಾತ್ಮಕವಾದುದು. ಸಂಕಲ್ಪ-ವಿಕಲ್ಪರೂಪಗಳಲ್ಲಿ ವಿಶ್ಲೇಷಣಮಾಡುವುದು ಮನಸ್ಸು. ಕರ್ಮಗಳನ್ನು ಮಾಡುವುದೂ ಮತ್ತು ತಿಳಿಯುವುದೂ ಜಡತತ್ತ್ವಕ್ಕೆ ಸಾಧ್ಯವಿಲ್ಲ. ಆದುದರಿಂದ ಆ ಜಡವಾಗಿರುವ ಮನಸ್ಸು-ಬುದ್ಧಿಗಳ ಹಿನ್ನೆಲೆಯಲ್ಲಿ ಯಾವುದೋ ಚೈತನ್ಯವಿರಲೇಬೇಕು–ಎಂಬ ಅನುಮಾನದಿಂದ ಕ್ಷೇತ್ರಜ್ಞನೆಂಬ ಹೆಸರುಳ್ಳ ಜೀವನು ಇದ್ದಾನೆಂದು ತಿಳಿಯಬೇಕು.

ಏಭಿಃ ಕಾಲಾತ್ಮಕೈರ್ಭಾವೈರ್ಯಃ ಸರ್ವೈಃ ಸರ್ವಮನ್ವಿತಮ್ ।
ಪಶ್ಯತ್ಯಕಲುಷಂ ಕರ್ಮ ಸ ಮೋಹಂ ನಾನುವರ್ತತೇ ॥೧೨॥

ಯಾವ ಮನುಷ್ಯನು–ಎಲ್ಲ ಜಗತ್ತೂ ಈ ಸಮಸ್ತಕಾಲಾತ್ಮಕಭಾವಗಳಿಂದ (ಯುಗಾನುರೂಪವಾದ ಸ್ವಭಾವಗಳಿಂದ) ಕೂಡಿರುವುದೆಂಬುದನ್ನು ತಿಳಿದಿರುವವನೋ ಮತ್ತು ಕಾಲುಷ್ಯವಿಲ್ಲದ (ಕಾಮನೆಗಳಿಂದ ರಹಿತವಾದ) ಕರ್ಮಗಳನ್ನು ಮಾಡುವವನೋ–ಅವನು ಮೋಹವಶನಾಗುವುದಿಲ್ಲ.”

೨೫೨ನೆಯ ಅಧ್ಯಾಯವು ಮುಗಿಯಿತು.

೨೫೩ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಸ್ಥೂಲ, ಸೂಕ್ಷ್ಮ ಮತ್ತು ಕಾರಣಶರೀರಗಳಿಂದ ಭಿನ್ನರಾದ ಜೀವಾತ್ಮ-ಪರಮಾತ್ಮರನ್ನು ಯೋಗದ ಮೂಲಕವಾಗಿ ಸಾಕ್ಷಾತ್ಕರಿಸುವ ವಿಧಾನ

ಧರ್ಮಜ! ವ್ಯಾಸರು ಹೇಳುತ್ತಾರೆ :

ಶರೀರಾದ್ವಿಪ್ರಮುಕ್ತಂ ಹಿ ಸೂಕ್ಷ್ಮಭೂತಂ ಶರೀರಿಣಮ್ ।
ಕರ್ಮಭಿಃ ಪರಿಪಶ್ಯನ್ತಿ ಶಾಸ್ತ್ರೋಕ್ತೈಃ ಶಾಸ್ತ್ರವೇದಿನಃ ॥೧॥

“ಶುಕ! ಶಾಸ್ತ್ರಗಳನ್ನು ತಿಳಿದವರು ಸ್ಥೂಲಶರೀರದಿಂದ ಹೊರ ಹೊರಟ ಸೂಕ್ಷ್ಮಸ್ವರೂಪನಾದ ಜೀವಾತ್ಮನನ್ನು ಶಾಸ್ತ್ರೋಕ್ತವಾದ ಕರ್ಮಗಳ ಮೂಲಕವಾಗಿ ನೋಡುತ್ತಾರೆ.

ಯಥಾ ಮರೀಚ್ಯಃ ಸಹಿತಾಶ್ಚರನ್ತಿ
ಸರ್ವತ್ರ ತಿಷ್ಠನ್ತಿ ಚ ದೃಶ್ಯಮಾನಾಃ ।
ದೇಹೈರ್ವಿಮುಕ್ತಾನಿ ಚರನ್ತಿ ಲೋಕಾಂ-
ಸ್ತಥೈವ ಸತ್ತ್ವಾನ್ಯತಿಮಾನುಷಾಣಿ ॥೨॥

ಯಾವ ರೀತಿಯಲ್ಲಿ ಸೂರ್ಯಕಿರಣಗಳು ಒಂದಕ್ಕೊಂದಕ್ಕೆ ಹೊಂದಿಕೊಂಡು ಎಲ್ಲ ಕಡೆಗಳಲ್ಲಿಯೂ ಚಲಿಸುತ್ತವೆಯೋ, ಎಲ್ಲರಿಗೂ ಕಾಣುವಂತೆ

ಅಲ್ಲಲ್ಲಿ ಬಿಸಿಲುಗೋಲಿನ ರೂಪದಲ್ಲಿ ನಿಂತಿರುತ್ತವೆಯೋ–ಅದೇ ರೀತಿಯಲ್ಲಿ ಮಾನುಷಾತೀತವಾದ ಜೀವಗಳು ಸ್ಥೂಲಶರೀರಗಳಿಂದ ಹೊರಬಂದು ಲೋಕದಲ್ಲಿ ಸರ್ವತ್ರ ಸಂಚರಿಸುತ್ತಿರುತ್ತವೆ.

ಪ್ರತಿರೂಪಂ ಯಥೈವಾಪ್ಸು ತಾಪಃ ಸೂರ್ಯಸ್ಯ ಲಕ್ಷ್ಯತೇ ।
ಸತ್ತ್ವವತ್ಸು ತಥಾ ಸತ್ತ್ವಂ ಪ್ರತಿರೂಪಂ ಸ ಪಶ್ಯತಿ ॥೩॥

ಯಾವ ರೀತಿಯಲ್ಲಿ ಜಲಾಶಯಗಳಲ್ಲಿ ಸೂರ್ಯನ ಪ್ರತಿಬಿಂಬವೂ ಮತ್ತು ತಾಪವೂ ಕಾಣುವುದೋ–ಅದೇ ರೀತಿಯಲ್ಲಿ ಯೋಗಿಯು ಎಲ್ಲ ಸಜೀವಶರೀರಗಳಲ್ಲಿಯೂ ಸೂಕ್ಷ್ಮರೂಪದಲ್ಲಿರುವ ಜೀವಾತ್ಮನ ಪ್ರತಿರೂಪ ಗಳನ್ನು ಕಾಣುತ್ತಾನೆ.

ತಾನಿ ಸೂಕ್ಷ್ಮಾಣಿ ಸತ್ತ್ವಾನಿ ವಿಮುಕ್ತಾನಿ ಶರೀರತಃ ।
ಸ್ವೇನ ಸತ್ತ್ವೇನ ಸತ್ತ್ವಜ್ಞಾಃ ಪಶ್ಯನ್ತಿ ನಿಯತೇನ್ದ್ರಿಯಾಃ ॥೪॥

ಶರೀರತತ್ತ್ವವನ್ನು ತಿಳಿದಿರುವ, ಜಿತೇಂದ್ರಿಯರಾದ ಯೋಗಿಗಳು ಸ್ಥೂಲಶರೀರದಿಂದ ಹೊರಟು ಸೂಕ್ಷ್ಮವಾದ ಲಿಂಗಶರೀರವನ್ನು ಧರಿಸಿರುವ ಜೀವಗಳನ್ನು ತಮ್ಮ ಆತ್ಮನ ಮೂಲಕವಾಗಿಯೇ ನೋಡುತ್ತಾರೆ.

ಸ್ವಪತಾಂ ಜಾಗ್ರತಾಂ ಚೈವ ಸರ್ವೇಷಾಮಾತ್ಮಚಿನ್ತಿತಮ್ ।
ಪ್ರಧಾನದ್ವೈಧಮುಕ್ತಾನಾಂ ಜಹತಾಂ ಕರ್ಮಜಂ ರಜಃ ॥೫॥

ಯಥಾಹನಿ ತಥಾ ರಾತ್ರೌ ಯಥಾ ರಾತ್ರೌ ತಥಾಹನಿ ।
ವಶೇ ತಿಷ್ಠತಿ ಸತ್ತ್ವಾತ್ಮಾ ಸತತಂ ಯೋಗಯೋಗಿನಾಮ್ ॥೬॥

ಯಾರು ತಮ್ಮ ಮನಸ್ಸಿನಲ್ಲಿ ಹುಟ್ಟಿದ ರಜೋಗುಣವನ್ನೂ–ರಜೋ ಗುಣಜನಿತವಾದ ಕಾಮಾದಿಗಳನ್ನೂ ಯೋಗಬಲದಿಂದ ಪರಿತ್ಯಾಗ ಮಾಡಿರುವರೋ ಮತ್ತು ಪ್ರಕೃತಿಸಂಬಂಧವಾದ ದ್ವೈಧದಿಂದ ಮುಕ್ತ ರಾಗಿರುವರೋ ಅಂತಹ ಯೋಗಪರಾಯಣರಾದ ಯೋಗಿಗಳಿಗೆ ಅವರು ಮಲಗಿರುವಾಗಲಾಗಲೀ ಎಚ್ಚರಗೊಂಡಿರುವಾಗಲಾಗಲೀ ಆತ್ಮನು ವಶನಾಗು ತ್ತಾನೆ. ಅಂತಹ ಯೋಗಿಗಳಿಗೆ ಹಗಲಿನಂತೆಯೇ ರಾತ್ರಿಯಲ್ಲಿಯೂ–ರಾತ್ರಿ ಯಂತೆಯೇ ಹಗಲಿನಲ್ಲಿಯೂ ನಿರಂತರವಾಗಿ ಆತ್ಮದರ್ಶನವಾಗುತ್ತಿರುತ್ತದೆ.

ತೇಷಾಂ ನಿತ್ಯಂ ಸದಾ ನಿತ್ಯೋ ಭೂತಾತ್ಮಾ ಸತತಂ ಗುಣೈಃ ।
ಸಪ್ತಭಿಸ್ತ್ವನ್ವಿತಃ ಸೂಕ್ಷ್ಮೈಶ್ಚರಿಷ್ಣುರಜರಾಮರಃ ॥೭॥

ಅಂತಹ ಯೋಗಿಗಳಿಗೆ ನಿತ್ಯಸ್ವರೂಪನೂ, ಏಳು ಸೂಕ್ಷ್ಮಗುಣಗಳಿಂದ (ಮಹತ್ತತ್ತ್ವ, ಅಹಂಕಾರ ಮತ್ತು ಪಂಚಮಹಾಭೂತಗಳಿಂದ) ಕೂಡಿ ಸಂಚರಿಸುವ ಸ್ವಭಾವವುಳ್ಳವನೂ, ಮುಪ್ಪು-ಸಾವುಗಳಿಲ್ಲದವನೂ, ಸರ್ವ ವ್ಯಾಪಕನೂ ಆದ ಭೂತಾತ್ಮನು ಕಾಣಿಸಿಕೊಳ್ಳುತ್ತಾನೆ.

ಮನೋಬುದ್ಧಿಪರಾಭೂತಃ ಸ್ವದೇಹಪರದೇಹವಿತ್ ।
ಸ್ವಪ್ನೇಷ್ವಪಿ ಭವತ್ಯೇಷ ವಿಜ್ಞಾತಾ ಸುಖದುಃಖಯೋಃ ॥೮॥

ಮನೋಬುದ್ಧಿಗಳಿಂದ ಪರಾಭವಗೊಳಿಸಲ್ಪಟ್ಟಿರುವ (ರಾಜಸಿಕವಾದ ಮನೋಬುದ್ಧಿಗಳಿಗೆ ಅಧೀನನಾಗಿರುವ), ಸ್ವದೇಹ-ಪರದೇಹಗಳನ್ನು ಸ್ಥೂಲ ದಿಂದ ಬೇರೆಯಾದುವುಗಳೆಂದು ತಿಳಿದುಕೊಂಡಿರುವ ಮನುಷ್ಯನು ಕನಸು ಗಳಲ್ಲಿಯೂ ಸೂಕ್ಷ್ಮಶರೀರದಿಂದ ಸುಖ-ದುಃಖಗಳನ್ನು ಅರಿಯುವವನಾಗು ತ್ತಾನೆ.

ತತ್ರಾಪಿ ಲಭತೇ ದುಃಖಂ ತತ್ರಾಪಿ ಲಭತೇ ಸುಖಮ್ ।
ಕ್ರೋಧಲೋಭೌ ತು ತತ್ರಾಪಿ ಕೃತ್ವಾ ವ್ಯಸನಮೃಚ್ಛತಿ ॥೯॥

ಮನೋಬುದ್ಧೀಂದ್ರಿಯಗಳಿಗೆ ವಶನಾಗಿರುವ ಜೀವನು ಕನಸು ಗಳಲ್ಲಿಯೂ ದುಃಖವನ್ನು ಅನುಭವಿಸುತ್ತಾನೆ; ಸುಖವನ್ನು ಅನುಭವಿಸುತ್ತಾನೆ. ಅಂತಹವನು ನಿದ್ರೆಯಲ್ಲಿಯೂ ಕ್ರೋಧ-ಲೋಭಗಳಿಗೆ ಅಧೀನನಾಗಿ ಮಹಾವ್ಯಸನವನ್ನು ಹೊಂದುತ್ತಾನೆ.

ಪ್ರೀಣಿತಶ್ಚಾಪಿ ಭವತಿ ಮಹತೋಽರ್ಥಾನವಾಪ್ಯ ಹಿ ।
ಕರೋತಿ ಪುಣ್ಯಂ ತತ್ರಾಪಿ ಜೀವನ್ನಿವ ಚ ಪಶ್ಯತಿ ॥೧೦॥

ಆ ಸ್ವಪ್ನಾವಸ್ಥೆಯಲ್ಲಿಯೇ ಅಪಾರವಾದ ಐಶ್ವರ್ಯವನ್ನು ಪಡೆದು ಕೊಂಡು ಸಂತೋಷಪಡುತ್ತಾನೆ. ಕನಸಿನಲ್ಲಿಯೇ ಪುಣ್ಯಕಾರ್ಯಗಳನ್ನೂ ಮಾಡುತ್ತಾನೆ. ಜಾಗ್ರದವಸ್ಥೆಯಲ್ಲಿ ಎಲ್ಲವನ್ನೂ ನೋಡುವಂತೆಯೇ ಸ್ವಪ್ನಾ ವಸ್ಥೆಯಲ್ಲಿಯೂ ಎಲ್ಲವನ್ನೂ ನೋಡುತ್ತಾನೆ ಮತ್ತು ಅನುಭವಿಸುತ್ತಾನೆ.

ಮಹೋಷ್ಮಾನ್ತರ್ಗತಶ್ಚಾಪಿ ಗರ್ಭತ್ವಂ ಸಮುಪೇಯಿವಾನ್ ।
ದಶ ಮಾಸಾನ್ವಸನ್ಕುಕ್ಷೌ ನೈಷೋಽನ್ನಮಿವ ಜೀರ್ಯತೇ ॥೧೧॥

ತಾಯಿಯ ಗರ್ಭವನ್ನು ಸೇರಿರುವ ಜೀವನು ಜಠರಾಗ್ನಿಯ ಉಡಿಯಲ್ಲಿಯೇ ಇದ್ದರೂ–ಹತ್ತು ತಿಂಗಳವರೆಗೆ ಅಲ್ಲಿಯೇ ವಾಸವಾಗಿದ್ದರೂ ಅನ್ನವು ಪಚನವಾಗುವಂತೆ ಜೀರ್ಣನಾಗಿ ಹೋಗುವುದಿಲ್ಲ.

ತಮೇತಮತಿತೇಜೋಽಂಶಂ ಭೂತಾತ್ಮಾನಂ ಹೃದಿ ಸ್ಥಿತಮ್ ।
ತಮೋರಜೋಭ್ಯಾಮಾವಿಷ್ಟಾ ನಾನುಪಶ್ಯನ್ತಿ ಮೂರ್ತಿಷು ॥೧೨॥

ಪರಬ್ರಹ್ಮವಸ್ತುವೆಂಬ ಮಹಾತೇಜಸ್ಸಿನ ಅಂಶಭೂತನಾದ, ಸಕಲ ಪ್ರಾಣಿಗಳ ಹೃದಯದಲ್ಲಿಯೂ ಇರುವ ಜೀವಾತ್ಮನನ್ನು ತಮಸ್ಸಿನಿಂದಲೂ ರಜಸ್ಸಿನಿಂದಲೂ ಕೂಡಿರುವ ಮನುಷ್ಯರು ತಮ್ಮ ದೇಹಗಳಲ್ಲಿ ಕಂಡುಕೊಳ್ಳಲಾರರು.

ಯೋಗಶಾಸ್ತ್ರಪರಾ ಭೂತ್ವಾ ತಮಾತ್ಮಾನಂ ಪರೀಪ್ಸವಃ ।
ಅನುಚ್ಛ್ವಾಸಾನ್ಯಮೂರ್ತಾನಿ ಯಾನಿ ವಜ್ರೋಪಮಾನ್ಯಪಿ ॥೧೩॥

ಯೋಗಶಾಸ್ತ್ರಪರಾಯಣರಾಗಿ ಆತ್ಮದರ್ಶನಮಾಡಲು ಇಚ್ಛಿಸುವವರು–ಜಡವಾದ ಸ್ಥೂಲಶರೀರವನ್ನೂ, ಅಮೂರ್ತವಾದ ಸೂಕ್ಷ್ಮಶರೀರವನ್ನೂ, ವಜ್ರದಂತೆ ಸುದೃಢವಾದ ಕಾರಣಶರೀರವನ್ನೂ ದಾಟಬಲ್ಲರು.

ಪೃಥಗ್ಭೂತೇಷು ಸೃಷ್ಟೇಷು ಚತುರ್ಥಾಶ್ರಮಕರ್ಮಸು ।
ಸಮಾಧೌ ಯೋಗಮೇವೈತಚ್ಛಾಣ್ಡಿಲ್ಯಃ ಶಮಮಬ್ರವೀತ್ ॥೧೪॥

ಸಂನ್ಯಾಸಾಶ್ರಮದ ಕರ್ಮಗಳು ಭಿನ್ನ-ಭಿನ್ನವಾದ ರೀತಿಯಲ್ಲಿ ಹೇಳಲ್ಪಟ್ಟಿವೆ. ಸಮಾಧಿಯ ವಿಷಯದಲ್ಲಿ ನಾನು ಯಾವ ಯೋಗವನ್ನು ಹೇಳಿರುವೆನೋ ಅದನ್ನೇ ಶಾಂಡಿಲ್ಯಮುನಿಗಳು 'ಶಮ' ಎಂಬ ಹೆಸರಿನಿಂದ (ಛಾಂದೋಗ್ಯೋಪನಿಷತ್ತಿನ ಶಾಂಡಿಲ್ಯಬ್ರಾಹ್ಮಣದಲ್ಲಿ) ಹೇಳಿದ್ದಾರೆ.

ವಿದಿತ್ವಾ ಸಪ್ತ ಸೂಕ್ಷ್ಮಾಣಿ ಷಡಙ್ಗಂ ಚ ಮಹೇಶ್ವರಮ್ ।
ಪ್ರಧಾನವಿನಿಯೋಗಜ್ಞಃ ಪರಂ ಬ್ರಹ್ಮಾನುಪಶ್ಯತಿ ॥೧೫॥

ಪಂಚತನ್ಮಾತ್ರೆಗಳು, ಮನಸ್ಸು ಮತ್ತು ಬುದ್ಧಿಗಳೆಂಬ ಏಳು ಸೂಕ್ಷ್ಮ

ತತ್ತ್ವಗಳನ್ನು ತಿಳಿದುಕೊಂಡು, ಷಡ್ಗುಣೈಶ್ವರ್ಯಪೂರ್ಣನಾದ ಮಹೇಶ್ವರನ ಜ್ಞಾನವನ್ನು ಪಡೆದು, ತ್ರಿಗುಣಾತ್ಮಿಕವಾದ ಪ್ರಕೃತಿಯ ಪರಿಣಾಮವೇ ಈ ಜಗತ್ತೆಂಬುದನ್ನು ತಿಳಿದುಕೊಂಡವನು ಅಥವಾ ಪ್ರಕೃತಿಯನ್ನು ಹೇಗೆ ವಿನಿಯೋಗಿಸಿಕೊಳ್ಳಬೇಕು–ಎಂಬುದನ್ನು ಅರಿತವನು ಪರಬ್ರಹ್ಮವಸ್ತುವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ."*

೨೫೩ನೆಯ ಅಧ್ಯಾಯವು ಮುಗಿಯಿತು.

೨೫೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಕಾಮರೂಪಿಯಾದ ಅದ್ಭುತವೃಕ್ಷದ ವರ್ಣನೆ : ಅದನ್ನು ಕತ್ತರಿಸಿ ಮುಕ್ತಿಯನ್ನು ಪಡೆಯುವ ಉಪಾಯ : ಶರೀರರೂಪವಾದ ನಗರದ ವರ್ಣನೆ

ಯುಧಿಷ್ಠಿರ! ವ್ಯಾಸರು ಹೇಳುತ್ತಾರೆ :

ಹೃದಿ ಕಾಮದ್ರುಮಶ್ಚಿತ್ರೋ ಮೋಹಸಂಚಯಸಮ್ಭವಃ ।
ಕ್ರೋಧಮಾನಮಹಾಸ್ಕನ್ಧೋ ವಿಧಿತ್ಸಾಪರಿಷೇಚನಃ ॥೧॥

ತಸ್ಯ ಚಾಜ್ಞಾನಮಾಧಾರಃ ಪ್ರಮಾದಃ ಪರಿಷೇಚನಮ್ ।
ಸೋಽಭ್ಯಸೂಯಾಪಲಾಶೋ ಹಿ ಪುರಾ ದುಷ್ಕೃತಸಾರವಾನ್ ॥೨॥

"ಮಗು! ಶುಕ! ಮನುಷ್ಯನ ಹೃದಯಭೂಮಿಯಲ್ಲಿ ಮೋಹರೂಪವಾದ ಬೀಜದಿಂದ ಹುಟ್ಟಿದ ಕಾಮವೆಂಬ ಹೆಸರಿನ ಒಂದು ವಿಚಿತ್ರವಾದ ವೃಕ್ಷವಿದೆ. ಕ್ರೋಧ ಮತ್ತು ಅಭಿಮಾನಗಳೇ ಆ ವೃಕ್ಷದ ದೊಡ್ಡ ಕಾಂಡ,

---

* ಪರಮಾತ್ಮನ ಷಡಂಗಗಳು :

ಸರ್ವಜ್ಞತಾ ತೃಪ್ತಿರನಾದಿಬೋಧಃ ಸ್ವತನ್ತ್ರತಾ ನಿತ್ಯಮಲುಪ್ತದೃಷ್ಟಿಃ ।
ಅನನ್ತಶಕ್ತಿಶ್ಚ ವಿಭೋರ್ವಿಭುಜ್ಞಾಃ ಷಡಾಹುರಜ್ಞಾನಿ ಮಹೇಶ್ವರಸ್ಯ
[ವಾಯುಪುರಾಣ]

ಸರ್ವಜ್ಞತೆ, ತೃಪ್ತಿ, ಮೂಲಜ್ಞಾನ, ಸ್ವತಂತ್ರತೆ, ಅಲುಪ್ತದೃಷ್ಟಿ ಮತ್ತು ಅನಂತ ಶಕ್ತಿ–ಇವು ಆರು ವಿಭುವಿನ ಆರು ಅಂಗಗಳೆಂದು ವಿಭುವನ್ನು ಸಾಕ್ಷಾತ್ಕರಿಸಿಕೊಂಡವರು ಹೇಳುತ್ತಾರೆ.

(ಕವಲೊಡೆಯುವ ಸ್ಥಳ). ಕಾರ್ಯವನ್ನು ಮಾಡಬೇಕೆಂಬ ಸಂಕಲ್ಪವೇ ಆ ವೃಕ್ಷಕ್ಕೆ ನೀರೆರೆಯುವ ಪಾತ್ರೆಯಾಗಿದೆ. ಅಜ್ಞಾನವೆಂಬುದೇ ಆ ಕಾಮವೃಕ್ಷಕ್ಕೆ ಬುಡವಾಗಿದೆ. ಪ್ರಮಾದವೇ ಆ ವೃಕ್ಷಕ್ಕೆ ಹಾಕುವ ನೀರಾಗಿದೆ. ಅಸೂಯೆ ಯೆಂಬುದೇ ಅದರ ಹಸಿರೆಲೆಗಳಾಗಿವೆ. ಹಿಂದಿನ ಜನ್ಮಗಳಲ್ಲಿ ಮಾಡಿರುವ ಪಾಪಗಳೇ ಆ ವೃಕ್ಷದ ಮುಖ್ಯಸಾರ (ಸ್ಥಿರಾಂಶ) ವಾಗಿದೆ.

ಸಮ್ಮೋಹಚಿನ್ತಾವಿಟಪಃ ಶೋಕಶಾಖೋ ಭಯಾಙ್ಕುರಃ ।
ಮೋಹನೀಭಿಃ ಪಿಪಾಸಾಭಿರ್ಲತಾಭಿರನುವೇಷ್ಟಿತಃ ॥೩॥

ಸಮ್ಮೋಹ ಮತ್ತು ಚಿಂತೆಗಳೇ ಕಾಮವೃಕ್ಷದ ದೊಡ್ಡ ರೆಂಬೆಗಳಾಗಿವೆ. ಶೋಕವೆಂಬುದು ಚಿಕ್ಕರೆಂಬೆಯಾಗಿದೆ. ಭಯವೆಂಬುದೇ ಅದರ ಮೊಳಕೆ ಯಾಗಿದೆ. ಸಂಮೋಹಜನಕವಾದ ತೃಷ್ಣಾರೂಪವಾದ ಲತೆಗಳಿಂದ ಆ ಕಾಮ ವೃಕ್ಷವು ಸುತ್ತುವರಿಯಲ್ಪಟ್ಟಿದೆ.

ಉಪಾಸತೇ ಮಹಾವೃಕ್ಷಂ ಸುಲುಬ್ಧಾಸ್ತತ್ಫಲೇಪ್ಸವಃ ।
ಆಯಸೈಃ ಸಂಯತಾಃ ಪಾಶೈಃ ಫಲದಂ ಪರಿವೇಷ್ಟ್ಯ ತಮ್ ॥೪॥

ಆ ಕಾಮವೃಕ್ಷದ ಫಲವನ್ನು ಪಡೆದುಕೊಳ್ಳಲು ಇಚ್ಛಿಸುವ ಕಡು ಲೋಭಿಗಳು ವಾಸನಾರೂಪವಾದ ಕಬ್ಬಿಣದ ಸರಪಣಿಗಳಿಂದ ಬಂಧಿಸಲ್ಪಟ್ಟವ ರಾಗಿ ಫಲದಾಯಕವಾದ ಆ ಕಾಮಮಹಾವೃಕ್ಷವನ್ನು ಸುತ್ತುವರಿದು ಉಪಾಸಿ ಸುತ್ತಾರೆ.

ಯಸ್ತಾನ್ಪಾಶಾನ್ವಶೇ ಕೃತ್ವಾ ತಂ ವೃಕ್ಷಮಪಕರ್ಷತಿ ।
ಗತಃ ಸ ದುಃಖಯೋರನ್ತಂ ಜರಾಮರಣಯೋರ್ದ್ವಯೋಃ ॥೫॥

ಯಾವನು ವಾಸನಾರೂಪವಾದ ಕಬ್ಬಿಣದ ಸರಪಣಿಗಳನ್ನು ಸ್ವಾಧೀನ ಪಡಿಸಿಕೊಂಡು ವೈರಾಗ್ಯವೆಂಬ ಶಸ್ತ್ರದಿಂದ ಆ ಕಾಮವೃಕ್ಷವನ್ನು ಕೆಳಕ್ಕೆ ಕೆಡವುತ್ತಾನೆಯೋ–ಅಂತಹ ಮನುಷ್ಯನು ಜರಾ-ಮರಣಗಳಿಂದ ಪ್ರಾಪ್ತ ವಾಗುವ ಎರಡು ಪ್ರಕಾರವಾದ ದುಃಖಗಳ ಕೊನೆಯನ್ನು ಮುಟ್ಟಿರುವವ ನಾಗುತ್ತಾನೆ.

ಸಂರೋಹತ್ಯಕೃತಪ್ರಜ್ಞಃ ಸದಾ ಯೇನ ಹಿ ಪಾದಪಮ್ ।
ಸ ತಮೇವ ತತೋ ಹನ್ತಿ ವಿಷಗ್ರನ್ಥಿರಿವಾತುರಮ್ ॥೬॥

ಮೂರ್ಖನು ಯಾವ ಫಲದ ಲೋಭದಿಂದ ಯಾವಾಗಲೂ ಕಾಮ ವೃಕ್ಷವನ್ನೇ ಹತ್ತಿಕುಳಿತಿರುವನೋ–ಅಂತಹವನನ್ನು ತನ್ನಲ್ಲಿಯೇ ಎದ್ದಿರುವ ವಿಷದ ಗೆಡ್ಡೆಯು (ಬೆನ್ನುಫಣಿ ಮುಂತಾದುವು) ರೋಗಿಯನ್ನೇ ವಿನಾಶ ಗೊಳಿಸುವಂತೆ–ಆ ಲೋಭವೇ ವಿನಾಶಗೊಳಿಸುತ್ತದೆ.

ತಸ್ಯಾನುಗತಮೂಲಸ್ಯ ಮೂಲಮುದ್ಧ್ರಿಯತೇ ಬಲಾತ್ ।
ಯೋಗಪ್ರಸಾದಾತ್ಕೃತಿನಾ ಸಾಮ್ಯೇನ ಪರಮಾಸಿನಾ ॥೭॥

ವಿದ್ವಾಂಸನಾದವನು ಬಹಳ ಆಳದವರೆಗೂ ಬೇರುಬಿಟ್ಟುಕೊಂಡಿರುವ ಆ ವೃಕ್ಷದ ಮೂಲವನ್ನು ಜ್ಞಾನಯೋಗದ ಪ್ರಸಾದದಿಂದುಂಟಾದ ಸಮತ್ವ ರೂಪವಾದ ಶ್ರೇಷ್ಠವಾದ ಕತ್ತಿಯಿಂದ ಬಲಪೂರ್ವಕವಾಗಿ ಕತ್ತರಿಸಿಹಾಕುತ್ತಾನೆ.

ಏವಂ ಯೋ ವೇದ ಕಾಮಸ್ಯ ಕೇವಲಸ್ಯ ನಿವರ್ತನಮ್ ।
ಬನ್ಧಂ ವೈ ಕಾಮಶಾಸ್ತ್ರಸ್ಯ ಸ ದುಃಖಾನ್ಯತಿವರ್ತತೇ ॥೮॥

ಹೀಗೆ ಯಾರು ಸಮಗ್ರವಾಗಿ ಕಾಮದ ನಿವರ್ತನೋಪಾಯವನ್ನು ತಿಳಿದಿರುವನೋ, ಭೋಗವಿಧಾಯಕವಾದ ಕಾಮಶಾಸ್ತ್ರವು ಸಂಸಾರ ಬಂಧನಕ್ಕೆ ಕಾರಣವೆಂಬುದನ್ನು ತಿಳಿದಿರುವನೋ–ಅವನು ಸಕಲವಿಧವಾದ ದುಃಖಗಳನ್ನೂ ದಾಟುತ್ತಾನೆ.

ಶರೀರಂ ಪುರಮಿತ್ಯಾಹುಃ ಸ್ವಾಮಿನೀ ಬುದ್ಧಿರಿಷ್ಯತೇ ।
ತತ್ರಬುದ್ಧೇಃ ಶರೀರಸ್ಥಂ ಮನೋ ನಾಮಾರ್ಥಚಿನ್ತಕಮ್ ॥೯॥

ವಿದ್ವಾಂಸರು ಈ ಶರೀರವನ್ನೇ ಒಂದು ಪುರವೆನ್ನುತ್ತಾರೆ. ಆ ಪುರಕ್ಕೆ ಬುದ್ಧಿಯೇ ರಾಣಿಯು. ಶರೀರದೊಳಗಿರುವ ಮನಸ್ಸು ನಿಶ್ಚಯಾತ್ಮಕಬುದ್ಧಿ ರೂಪಳಾದ ರಾಣಿಯ ಅರ್ಥಸಿದ್ಧಿಗಾಗಿ ಸಮಾಲೋಚಿಸುವ ಮಂತ್ರಿಯಾಗಿದೆ.

ಇನ್ದ್ರಿಯಾಣಿ ಮನಃಪೌರಾಸ್ತದರ್ಥಂ ತು ಪರಾಕೃತಿಃ ।
ತತ್ರ ದ್ವೌ ದಾರುಣೌ ದೋಷೌ ತಮೋ ನಾಮ ರಜಸ್ತಥಾ ।
ತದರ್ಥಮುಪಜೀವನ್ತಿ ಪೌರಾಃ ಸಹ ಪುರೇಶ್ವರೈಃ ॥೧೦॥

ಇಂದ್ರಿಯಗಳು ಮನಸ್ಸೆಂಬ ಮಂತ್ರಿಯ ಅಧೀನದಲ್ಲಿರುವ ಪ್ರಜೆ

ಗಳಾಗಿವೆ. ಇಂದ್ರಿಯರೂಪಿಗಳಾದ ಪ್ರಜೆಗಳನ್ನು ರಕ್ಷಿಸಲು ಮನಸ್ಸು ದೊಡ್ಡ-ದೊಡ್ಡ ಕಾರ್ಯಗಳನ್ನೇ ಮಾಡಬೇಕಾಗುತ್ತದೆ. ಅಲ್ಲಿ ತಮಸ್ಸು ಮತ್ತು ರಜಸ್ಸುಗಳೆಂಬ ಎರಡು ಮಹಾದೋಷಗಳಿವೆ. ಮನಸ್ಸು ಒದಗಿಸಿಕೊಟ್ಟ ದೋಷಯುಕ್ತವಾದ ವಿಷಯಸುಖಗಳನ್ನು ಇಂದ್ರಿಯಗಳ ರೂಪದ ಪೌರರು ಪುರಿಯ ಈಶ್ವರರಾದ ಬುದ್ಧಿ, ಅಹಂಕಾರ ಮತ್ತು ಜೀವಗಳೊಡನೆ ಉಪಭೋಗಿಸುತ್ತಾರೆ.

ಅದ್ವಾರೇಣ ತಮೇವಾರ್ಥಂ ದ್ವೌ ದೋಷಾವುಪಜೀವತಃ ।
ತತ್ರ ಬುದ್ಧಿರ್ಹಿ ದುರ್ಧರ್ಷಾ ಮನಃ ಸಾಮಾನ್ಯಮಶ್ನುತೇ ॥೧೧॥

ರಜಸ್ಸು ಮತ್ತು ತಮಸ್ಸು–ಎಂಬ ಈ ಎರಡು ದೋಷಗಳು ನಿಷಿದ್ಧವಾದ ಮಾರ್ಗದಲ್ಲಿ ಅದೇ ವಿಷಯಸುಖಗಳನ್ನೇ ಮನಸ್ಸಿಗೆ ಒದಗಿಸಿಕೊಡುತ್ತವೆ. ಬುದ್ಧಿಯಾದರೋ ದುರ್ಧರ್ಷವಾಗಿದ್ದರೂ (ನಿಷಿದ್ಧವಲ್ಲದ ಮಾರ್ಗವನ್ನು ಕುರಿತು ಯೋಚಿಸುವ ಸ್ವಭಾವದ್ದಾಗಿದ್ದರೂ) ಮನಸ್ಸಿನ ಜೊತೆಯಲ್ಲಿಯೇ ಇರುವುದರಿಂದ ಅದಕ್ಕೆ ಸಮಾನವೇ ಆಗಿಬಿಡುತ್ತದೆ.

ಪೌರಾಶ್ಚಾಪಿ ಮನಸ್ತ್ರಸ್ತಾಸ್ತೇಷಾಮಪಿ ಚಲಾ ಸ್ಥಿತಿಃ ।
ತದರ್ಥಂ ಬುದ್ಧಿರಧ್ಯಾಸ್ತೇ ಸೋಽನರ್ಥಃ ಪರಿಷೀದತಿ ॥೧೨॥

ಆ ಸಮಯದಲ್ಲಿ ಇಂದ್ರಿಯರೂಪರಾದ ಪ್ರಜೆಗಳು ಮನಸ್ಸೆಂಬ ಮಂತ್ರಿಗೆ ಭಯಪಡುತ್ತವೆ. (ಮನಸ್ಸೇನಾದರೂ ತಮ್ಮನ್ನು ದೂರೀಕರಿಸಿಬಿಟ್ಟರೆ ಏನು ಮಾಡುವುದೆಂಬ ಭಯವು ಅವುಗಳಿಗಿರುತ್ತದೆ.) ಅದರಿಂದ ಅವುಗಳ ಸ್ಥಿತಿಯೂ ಚಂಚಲವಾಗಿಯೇ ಇರುತ್ತದೆ. ಬುದ್ಧಿಯು ಆ ಸಮಯದಲ್ಲಿ ಅನರ್ಥವನ್ನೇ ನಿಶ್ಚಯಿಸುತ್ತದೆ. ಈ ಕಾರಣದಿಂದಲೇ ಮನುಷ್ಯನಿಗೆ ಅನರ್ಥವುಂಟಾಗುತ್ತದೆ.

ಯದರ್ಥಂ ಪೃಥುಗಧ್ಯಾಸ್ತೇ ಮನಸ್ತತ್ಪರಿಷೀದತಿ ।
ಪೃಥಗ್ಭೂತಂ ಮನೋ ಬುದ್ಧ್ಯಾ ಮನೋ ಭವತಿ ಕೇವಲಮ್ ॥೧೩॥

ಬುದ್ಧಿಯು ಯಾವ ವಿಷಯವನ್ನು ಕುರಿತು ಚಿಂತಿಸುತ್ತಿರುತ್ತದೆಯೋ ಮನಸ್ಸೂ ಕೂಡ ಆ ವಿಷಯವನ್ನೇ ಆಶ್ರಯಿಸುತ್ತದೆ. ಯಾವಾಗ

ಮನಸ್ಸು, ಬುದ್ಧಿಯಿಂದ (ಸಂಕಲ್ಪರೂಪದಿಂದ) ಪ್ರತ್ಯೇಕವಾಗುವುದೋ ಆಗ ಮನಸ್ಸು ಮಾತ್ರವೇ ಇರುತ್ತದೆ.

ತತ್ರೈನಂ ವಿಧೃತಂ ಶೂನ್ಯಂ ರಜಃ ಪರ್ಯವತಿಷ್ಠತೇ ।
ತನ್ಮನಃ ಕುರುತೇ ಸಖ್ಯಂ ರಜಸಾ ಸಹ ಸಙ್ಗತಮ್ ।
ತಂ ಚಾದಾಯ ಜನಂ ಪೌರಂ ರಜಸೇ ಸಮ್ಪ್ರಯಚ್ಛತಿ ॥೧೪॥

ಬುದ್ಧಿಯಲ್ಲಿ ಪ್ರತಿಬಿಂಬವಾಗಿ ಧರಿಸಲ್ಪಟ್ಟು ಗುಣಶೂನ್ಯನಾಗಿರುವ ಆತ್ಮನನ್ನು ಬುದ್ಧಿಗತವಾದ ರಜಸ್ಸು ವ್ಯಾಪಿಸುತ್ತದೆ. ಆಗ ಮನಸ್ಸು ರಜಸ್ಸಿನೊಡನೆ ಸ್ನೇಹವನ್ನು ಬೆಳೆಸಿ ಅದರೊಡನೆ ಸೇರಿಕೊಳ್ಳುತ್ತದೆ. ಮನಸ್ಸು ಇಂದ್ರಿಯರೂಪರಾದ ಪೌರರನ್ನು ಹಿಡಿದು ರಜಸ್ಸಿಗೆ ಒಪ್ಪಿಸಿಬಿಡುತ್ತದೆ."

ಅ೫೪ನೆಯ ಅಧ್ಯಾಯವು ಮುಗಿಯಿತು.

೨೫೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪಂಚಭೂತಗಳ, ಮನಸ್ಸಿನ ಮತ್ತು ಬುದ್ಧಿಯ ಗುಣಗಳ ವರ್ಣನೆ

ಜನಮೇಜಯಮಹಾರಾಜ! ಭೀಷ್ಮನು ಹೇಳುತ್ತಾನೆ :

"ಅನಘನೇ! ಯುಧಿಷ್ಠಿರ! ಕೃಷ್ಣದ್ವೈಪಾಯನರ ಮುಖಾರವಿಂದದಿಂದ ವರ್ಣಿತವಾದ ಪಂಚಮಹಾಭೂತಗಳ ನಿರೂಪಣೆಯನ್ನು ಪುನಃ ಹೇಳುತ್ತೇನೆ. ವಿಶೇಷವಾದ ಆಸಕ್ತಿಯಿಂದ ಈ ಆಖ್ಯಾನವನ್ನು ಕೇಳು. ಪ್ರಜ್ವಲಿಸುವ ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಭಗವಾನ್ ವ್ಯಾಸರು ಧೂಮಾಚ್ಛಾದಿತವಾದ ಅಗ್ನಿಗೆ ಸಮಾನನಾಗಿದ್ದ ತಮ್ಮ ಮಗನಾದ ಶುಕನಿಗೆ ಪಂಚಭೂತಗಳ ವಿಷಯವನ್ನೇ ಹೇಳಿದರು. ನಾನೂ ಕೂಡ ಅದನ್ನೇ ನಿನಗೆ ಪುನಃ ಹೇಳುತ್ತೇನೆ. ಮಗು! ಸುನಿಶ್ಚಿತವಾದ ದರ್ಶನಶಾಸ್ತ್ರವನ್ನು ಕೇಳು.

ಭೂಮೇಃ ಸ್ಥೈರ್ಯಂ ಗುರುತ್ವಂ ಚ ಕಾಠಿನ್ಯಂ ಪ್ರಸವಾರ್ಥತಾ ।
ಗನ್ಧೋ ಗುರುತ್ವಂ ಶಕ್ತಿಶ್ಚ ಸಂಘಾತಃ ಸ್ಥಾಪನಾ ಧೃತಿಃ ॥೩॥

ಪೃಥಿವೀತತ್ತ್ವಕ್ಕೆ –ಸ್ಥೈರ್ಯ, ಗುರುತ್ವ (ಭಾರ), ಕಾಠಿನ್ಯ, ಪ್ರಸವ

ಶಕ್ತಿ (ಬೀಜಗಳಲ್ಲಿ ಅಂಕುರವು ಮೊಳೆಯುವಂತೆ ಮಾಡುವ ಶಕ್ತಿ), ಗಂಧ, ವೈಶಾಲ್ಯ, ಶಕ್ತಿ, ಸಂಘಟನೆ, ಸ್ಥಾಪನೆ ಮತ್ತು ಧಾರಣೆಗಳೆಂಬ ಹತ್ತು ಗುಣಗಳಿವೆ.

ಅಪಾಂ ಶೈತ್ಯಂ ರಸಃ ಕ್ಲೇದೋ ದ್ರವತ್ವಂ ಸ್ನೇಹಸೌಮ್ಯತಾ ।
ಜಿಹ್ವಾ ವಿಸ್ಯನ್ದನಂ ಚಾಪಿ ಭೌಮಾನಾಂ ಶ್ರಪಣಂ ತಥಾ ॥೪॥

ಜಲತತ್ತ್ವಕ್ಕೆ –ಶೈತ್ಯ, ರಸ, ಕ್ಲೇದ, ದ್ರವತ್ವ, ಸ್ನಿಗ್ಧತೆ, ಸೌಮ್ಯಭಾವ, ಜಿಹ್ವೆ, ವಿಸ್ಯಂದನ (ಸ್ರವಿಸುವುದು), ಸಂಘಾತ (ಹಿಮರೂಪದಲ್ಲಿ ಗಡ್ಡೆ ಯಾಗುವುದು), ಶ್ರಪಣ (ಭೂಮಿಯಲ್ಲಿ ಹುಟ್ಟಿದ ಪದಾರ್ಥಗಳನ್ನು ಬೇಯಿಸುವುದು) –ಎಂಬ ಹತ್ತು ಗುಣಗಳಿವೆ.*

ಅಗ್ನೇರ್ದುರ್ಧರ್ಷತಾ ಜ್ಯೋತಿಸ್ತಾಪಃ ಪಾಕಃ ಪ್ರಕಾಶನಮ್ ।
ಶೋಕೋ ರಾಗೋ ಲಘುಸ್ತೈಕ್ಷ್ಣ್ಯಂ ಸತತಂ ಚೋರ್ಧ್ವಭಾಸಿತಾ ॥೫॥

ಅಗ್ನಿತತ್ತ್ವಕ್ಕೆ –ದುರ್ಧರ್ಷತೆ (ಯಾರಿಂದಲೂ ಎದುರಿಸಲು ಆಗದೇ ಇರುವುದು), ಉರಿಯುವುದು, ತಾಪವನ್ನುಂಟುಮಾಡುವುದು, ಬೇಯಿಸು ವುದು, ಪ್ರಕಾಶಗೊಳಿಸುವುದು, ಶೋಕ, ರಾಗ, ಲಘುತ್ವ, ತೀಕ್ಷ್ಣತೆ, ಮೇಲ್ಮುಖವಾಗಿ ಜ್ವಾಲೆಯನ್ನು ಪ್ರಸರಿಸುವುದು –ಎಂಬ ಹತ್ತು ಗುಣಗಳಿವೆ.

ವಾಯೋರನಿಯಮಸ್ಪರ್ಶೋ ವಾದಸ್ಥಾನಂ ಸ್ವತನ್ತ್ರತಾ ।
ಬಲಂ ಶೈಘ್ರ್ಯಂ ಚ ಮೋಕ್ಷಂ ಚ ಕರ್ಮ ಚೇಷ್ಟಾತ್ಮತಾಭವಃ ॥೬॥

ವಾಯುತತ್ತ್ವಕ್ಕೆ – ಉಷ್ಣ-ಶೀತಗಳ ನಿಯಮವಿಲ್ಲದ ಸ್ಪರ್ಶ, ವಾಗಿಂದ್ರಿಯಸ್ಥಾನ, ಸ್ವತಂತ್ರತೆ (ಅಡೆ-ತಡೆಯಿಲ್ಲದೆ ಸಂಚರಿಸುವುದು), ಬಲ, ಶೀಘ್ರಗಾಮಿತ್ವ, ಮೋಕ್ಷ (ಮಲ-ಮೂತ್ರಾದಿಗಳನ್ನು ಶರೀರದಿಂದ ಹೊರಕ್ಕೆ ಹಾಕುವುದು), ಕರ್ಮ (ಮೇಲಕ್ಕೆ ಹಾರಿಸುವುದು ಇತ್ಯಾದಿ),

---

* ಈ ಶ್ಲೋಕದಲ್ಲಿ ಜಲತತ್ತ್ವಕ್ಕೆ ಒಂಬತ್ತು ಗುಣಗಳನ್ನು ಮಾತ್ರವೇ ಹೇಳಿದ್ದಾರೆ. ಆದರೆ ಕಡೆಯಲ್ಲಿ ಐದು ತತ್ತ್ವಗಳಿಗೂ ಒಟ್ಟು ಐವತ್ತು ಗುಣಗಳೆಂದು ಸ್ಪಷ್ಟವಾಗಿ ಹೇಳಿರುವುದರಿಂದ ವ್ಯಾಖ್ಯಾನಕಾರರು 'ಚ' ಎಂಬ ಪದವನ್ನು ಸಂಘಾತ ಎಂದು ಅರ್ಥಮಾಡಿ ಹಿಮಕರಕಾರಿ ರೂಪೇಣ ಎಂದು ವಿಶ್ಲೇಷಿಸಿದ್ದಾರೆ.

ಚೇಷ್ಟೆ (ಕ್ರಿಯಾಶಕ್ತಿ), ಪ್ರಾಣ, ಹುಟ್ಟು-ಸಾವುಗಳಿಗೆ ಕಾರಣ –ಎಂಬ ಹತ್ತು ಗುಣಗಳಿವೆ.

ಆಕಾಶಸ್ಯ ಗುಣಃ ಶಬ್ದೋ ವ್ಯಾಪಿತ್ವಂ ಛಿದ್ರತಾಪಿ ಚ ।
ಅನಾಶ್ರಯಮನಾಲಮ್ಬಮವ್ಯಕ್ತಮವಿಕಾರಿತಾ ॥೭॥

ಅಪ್ರತಿಘಾತತಾ ಚೈವ ಭೂತತ್ವಂ ವಿಕೃತಾನಿ ಚ ।
ಗುಣಾಃ ಪಞ್ಚಾಶತಂ ಪ್ರೋಕ್ತಾಃ ಪಞ್ಚಭೂತಾತ್ಮಭಾವಿತಾಃ ॥೮॥

ಆಕಾಶತತ್ತ್ವಕ್ಕೆ–ಶಬ್ದ, ವ್ಯಾಪಕತೆ, ಛಿದ್ರತೆ, ಅನಾಶ್ರಯ (ಬೇರೆ ಯಾವುದನ್ನೂ ಆಶ್ರಯಿಸದೇ ಇರುವುದು), ಅನಾಲಂಬ (ಯಾವುದಕ್ಕೂ ಆಶ್ರಯವಾಗದೇ ಇರುವುದು), ಅವ್ಯಕ್ತತೆ, ಅವಿಕಾರಿತ್ವ, ಅಪ್ರತಿಘಾತಿತ್ವ (ಪ್ರತಿಘಾತವಿಲ್ಲದೇ ಇರುವುದು), ಭೂತತ್ವ (ಶ್ರವಣೇಂದ್ರಿಯಕ್ಕೆ ಕಾರಣ ವಾಗಿರುವುದು), ವಿಕೃತತ್ವ–ಎಂಬ ಹತ್ತು ಗುಣಗಳಿವೆ.

ಹೀಗೆ ಪಂಚಭೂತಗಳಿಗೆ ಒಟ್ಟು ಐವತ್ತು ಗುಣಗಳು ಹೇಳಲ್ಪಟ್ಟಿವೆ.

ಧೈರ್ಯೋಽಪಪತ್ತಿರ್ವ್ಯಕ್ತಿಶ್ಚ ವಿಸರ್ಗಃ ಕಲ್ಪನಾ ಕ್ಷಮಾ ।
ಸದಸಚ್ಚಾಶುತಾ ಚೈವ ಮನಸೋ ನವ ವೈ ಗುಣಾಃ ॥೯॥

ಧೈರ್ಯ, ತರ್ಕ-ವಿತರ್ಕಗಳಲ್ಲಿ ಕೌಶಲ್ಯ, ಸ್ಮರಣೆ, ಭ್ರಾಂತಿ, ಕಲ್ಪನೆ, ಕ್ಷಮೆ, ಶುಭಸಂಕಲ್ಪ, ಅಶುಭಸಂಕಲ್ಪ ಮತ್ತು ಚಾಂಚಲ್ಯ–ಇವು ಒಂಬತ್ತು ಮನಸ್ಸಿನ ಗುಣಗಳಾಗಿವೆ.

ಇಷ್ಟಾನಿಷ್ಟವಿಪತ್ತಿಶ್ಚ ವ್ಯವಸಾಯಃ ಸಮಾಧಿತಾ ।
ಸಂಶಯಃ ಪ್ರತಿಪತ್ತಿಶ್ಚ ಬುದ್ಧೇಃ ಪಞ್ಚಗುಣಾನ್ವಿದುಃ ॥೧೦॥

ಇಷ್ಟವೃತ್ತಿ ಮತ್ತು ಅನಿಷ್ಟವೃತ್ತಿಗಳ ನಾಶ, ವಿಚಾರ, ಏಕಾಗ್ರಚಿಂತನೆ, ಸಂದೇಹ ಮತ್ತು ನಿಶ್ಚಯ –ಈ ಐದು ಬುದ್ಧಿಯ ಗುಣಗಳಾಗಿವೆ.

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಥಂ ಪಞ್ಚಗುಣಾ ಬುದ್ಧಿಃ ಕಥಂ ಪಞ್ಚೇನ್ದ್ರಿಯಾ ಗುಣಾಃ ।
ಏತನ್ಮೇ ಸರ್ವಮಾಚಕ್ಷ್ವ ಸೂಕ್ಷ್ಮಜ್ಞಾನಂ ಪಿತಾಮಹ ॥೧೧॥

"ಪಿತಾಮಹ! ಬುದ್ಧಿಯು ಹೇಗೆ ಪಂಚಗುಣಾತ್ಮಕವಾಗಿದೆ?

ಪಂಚೇಂದ್ರಿಯಗಳೂ ಪಂಚಭೂತಗಳಿಗೆ ಹೇಗೆ ಗುಣಗಳಾಗುತ್ತವೆ? ಈ ಸೂಕ್ಷ್ಮಜ್ಞಾನದ ವಿಷಯವಾಗಿ ಎಲ್ಲವನ್ನೂ ನನಗೆ ತಿಳಿಯಪಡಿಸು.''

ಭೀಷ್ಮನು ಹೇಳುತ್ತಾನೆ :

ಆಹುಃ ಷಷ್ಟಿಂ ಬುದ್ಧಿಗುಣಾನ್ವೈ
ಭೂತವಿಶಿಷ್ಟಾ ನಿತ್ಯವಿಷಕ್ತಾಃ ।
ಭೂತವಿಭೂತೀಶ್ಚಾಕ್ಷರಸೃಷ್ಟಾಃ
ಪುತ್ರ ನ ನಿತ್ಯಂ ತದಿಹ ವದನ್ತಿ ॥೧೨॥

“ಮಗು! ಯುಧಿಷ್ಠಿರ! ಬುದ್ಧಿಗೆ ಅರುವತ್ತು ಗುಣಗಳಿವೆಯೆಂದು ವಿದ್ವಾಂಸರು ಹೇಳುತ್ತಾರೆ. ಹೇಗೆಂದರೆ : ಪಂಚಭೂತಗಳೂ ಬುದ್ಧಿಯ ಗುಣಗಳೇ ಆಗಿವೆ. ಬುದ್ಧಿಯ ಐದು ಗುಣಗಳೂ ಪಂಚಭೂತಗಳ ಐವತ್ತು ಗುಣಗಳೊಡನೆ ಸೇರಿಕೊಂಡು ಗುಣಗಳು ಐವತ್ತೈದಾಗುತ್ತವೆ. ಅವುಗಳ ಜೊತೆಗೆ ಪಂಚಭೂತಗಳೂ ಬುದ್ಧಿಯ ಐದು ಗುಣಗಳೇ ಆಗಿರುವುದರಿಂದ ಆ ಐದು ಗುಣಗಳನ್ನೂ ಸೇರಿಸಿದರೆ ಬುದ್ಧಿಗೆ ಅರುವತ್ತು ಗುಣಗಳಾಗುತ್ತವೆ. ಈ ಅರುವತ್ತು ಗುಣಗಳೂ ನಿತ್ಯವಾದ ಚೈತನ್ಯದೊಡನೆ ಸೇರಿಕೊಂಡಿವೆ. ಪಂಚಮಹಾಭೂತಗಳೂ ಮತ್ತು ಅವುಗಳ ವಿಭೂತಿಗಳೂ (ಮನಸ್ಸು, ಬುದ್ಧಿ ಮೊದಲಾದುವುಗಳು) ಅವಿನಾಶಿಯಾದ ಪರಮಾತ್ಮನಿಂದಲೇ ಹುಟ್ಟಿವೆ. ಆದರೆ ಪರಿವರ್ತನಶೀಲವಾಗಿರುವುದರಿಂದ ವಿದ್ವಾಂಸರು ಭೂತವಿಭೂತಿಗಳನ್ನು ಅನಿತ್ಯಗಳೆಂದು ಹೇಳುತ್ತಾರೆ.

ತತ್ಪುತ್ರ ಚಿನ್ತಾಕಲಿಲಂ ತದುಕ್ತ-
ಮನಾಗತಂ ವೈ ತವ ಸಮ್ಪ್ರತೀಹ ।
ಭೂತಾರ್ಥತತ್ತ್ವಂ ತದವಾಪ್ಯ ಸರ್ವಂ
ಭೂತಪ್ರಭಾವಾದ್ಭವ ಶಾನ್ತಬುದ್ಧಿಃ ॥೧೩॥

ವತ್ಸ! ಯುಧಿಷ್ಠಿರ! ಧ್ಯಾನಕ್ಕೆ ಸಂಬಂಧಿಸಿದಂತೆ ಯಾವ ಅನೇಕ ವಿಷಯಗಳನ್ನು ಹೇಳಿರುವೆನೋ–ಅವುಗಳನ್ನು ನೀನು ಮುಂದೆ ಸಾಧಿಸಬೇಕಾಗಿದೆ. ಆದುದರಿಂದ ನೀನು ಈ ಸಮಯದಲ್ಲಿ ನಿತ್ಯಸಿದ್ಧನಾದ ಪರಮಾತ್ಮನ

ಯಥಾರ್ಥತತ್ತ್ವವನ್ನು ತಿಳಿದು ಪರಮೇಶ್ವರನ ಪ್ರಭಾವ ಮತ್ತು ಅನುಗ್ರಹಗಳಿಂದ ಶಾಂತವಾದ ಬುದ್ಧಿಯುಳ್ಳವನಾಗು."

೨೫೫ನೆಯ ಅಧ್ಯಾಯವು ಮುಗಿಯಿತು.

೨೫೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಮೃತ್ಯುವಿನ ವಿಷಯದಲ್ಲಿ ಯುಧಿಷ್ಠಿರನ ಪ್ರಶ್ನೆ : ಬ್ರಹ್ಮನ ರೋಷಾಗ್ನಿಯಿಂದ ಸಮಸ್ತಪ್ರಾಣಿಗಳ ಸಂಹಾರ

ಮಹಾರಾಜ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

"ಪಿತಾಮಹ! ಮಹಾಬಲರಾದ ಲೆಕ್ಕವಿಲ್ಲದಷ್ಟು ಮಂದಿ ಭೂಮಿಪಾಲರು ಪ್ರಜ್ಞಾಶೂನ್ಯರಾಗಿ ಈ ಸೇನೆಯ ಮಧ್ಯದಲ್ಲಿ ಬಿದ್ದಿದ್ದಾರೆ. ಇವರಲ್ಲಿ ಒಬ್ಬೊಬ್ಬರೂ ಭಯಂಕರಪರಾಕ್ರಮವುಳ್ಳವರಾಗಿದ್ದರು. ಹತ್ತುಸಾವಿರ ಆನೆಗಳ ಬಲವುಳ್ಳವರಾಗಿದ್ದರು. ಇವರೆಲ್ಲರೂ ತಮಗೆ ಸಮಾನಬಲರಾದ ತೇಜಸ್ವಿಗಳಾದ ರಾಜಪುತ್ರರಿಂದಲೇ ಯುದ್ಧದಲ್ಲಿ ಸಂಹರಿಸಲ್ಪಟ್ಟಿದ್ದಾರೆ. ಯುದ್ಧದಲ್ಲಿ ಇವರನ್ನು ಕೊಲ್ಲುವವರನ್ನು ಪ್ರಾಣಿಗಳ ಸಮೂಹದಲ್ಲಿಯೇ ನಾನು ಕಂಡಿರಲಿಲ್ಲ. ಏಕೆಂದರೆ : ಇವರೆಲ್ಲರೂ ಮಹಾಪರಾಕ್ರಮದಿಂದ ಸಂಪನ್ನರಾಗಿದ್ದರು. ತೇಜಸ್ಸಿನಿಂದಲೂ ಬಲದಿಂದಲೂ ಕೂಡಿದ್ದರು. ಆದರೆ ಇಂತಹ ಪರಾಕ್ರಮಿಗಳೂ ಮತ್ತು ಮಹಾಪ್ರಾಜ್ಞರೂ ಪ್ರಾಣರಹಿತರಾಗಿ ಯುದ್ಧಭೂಮಿಯಲ್ಲಿ ಮಲಗಿದ್ದಾರೆ. ಪ್ರಾಣರಹಿತರಾದ ಇವರನ್ನು 'ಮೃತರಾದರು'–ಎಂದು ಹೇಳುವ ರೂಢಿಯಿದೆ. ಪ್ರಾಯಶಃ–'ಭಯಂಕರ ಪರಾಕ್ರಮರಾದ ಈ ರಾಜರೆಲ್ಲರೂ ಮೃತರಾದರು'–ಎಂದು ನಾವೂ ಹೇಳುತ್ತೇವೆ. ಆದರೆ ನನಗೆ ಈ ವಿಷಯದಲ್ಲಿ ಒಂದು ಸಂದೇಹವಿದೆ. ಪ್ರಾಣರಹಿತರಾದ ಇವರಿಗೆ 'ಮೃತರಾದರು'–ಎಂಬ ಸಂಜ್ಞೆಯು ಹೇಗೆ ಬಂದಿತು?

ಕಸ್ಯ ಮೃತ್ಯುಃ ಕುತೋ ಮೃತ್ಯುಃ ಕೇನ ಮೃತ್ಯುರಿಹ ಪ್ರಜಾಃ ।
ಹರತ್ಯಮರಸಂಕಾಶ ತನ್ಮೇ ಬ್ರೂಹಿ ಪಿತಾಮಹ ॥೬॥

ದೇವಸದೃಶನಾದ ಪಿತಾಮಹನೇ! ಈ ಮೃತ್ಯುವೆಂಬುದು ಯಾರದು? ಎಲ್ಲಿಯದು? ಯಾವ ಕಾರಣದಿಂದ ಈ ಮೃತ್ಯುವು ಪ್ರಜೆಗಳನ್ನು (ಸಮಸ್ತ

ಪ್ರಾಣಿಗಳನ್ನೂ) ಆಪಹರಿಸುತ್ತದೆ?–ಈ ವಿಷಯವನ್ನು ನನಗೆ ತಿಳಿಯ ಪಡಿಸು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಪ್ರಾಚೀನಕೃತಯುಗದಲ್ಲಿ ಅಕಂಪನನೆಂಬ ರಾಜನಿದ್ದನು. ಯುದ್ಧಸಮಯದಲ್ಲಿ ಅವನ ರಥವು ನಷ್ಟವಾಗಿಹೋಯಿತು. ಆದುದರಿಂದ ಅವನು ಶತ್ರುವಶನಾದನು. ಅವನಿಗೆ ನಾರಾಯಣನ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವನ್ನು ಹೊಂದಿದ್ದ 'ಹರಿ' ಎಂಬ ಹೆಸರಿನ ಮಗನಿದ್ದನು. ಆ ಹರಿಯು ತನ್ನ ಸೈನಿಕರೊಡನೆ ಮತ್ತು ಅನುಯಾಯಿಗಳೊಡನೆ ಶತ್ರುಗಳಿಂದ ಕೊಲ್ಲಲ್ಪಟ್ಟನು. ಶತ್ರುವಶನಾಗಿದ್ದ ಅಕಂಪನನು ಪುತ್ರಶೋಕದಿಂದ ಕೂಡಿದವನಾಗಿ ಮನಸ್ಸಿಗೆ ಶಾಂತಿಯನ್ನು ತಂದುಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವಾಗ ಭೂಲೋಕದಲ್ಲಿ ಸಂಚರಿಸು ತ್ತಿದ್ದ ದೇವರ್ಷಿಗಳಾದ ನಾರದರು ದೈವೇಚ್ಛೆಯಿಂದ ಅವನ ದೃಷ್ಟಿಗೆ ಬಿದ್ದರು. ಅಕಂಪನರಾಜನು ಯುದ್ಧದಲ್ಲಿ ತಾನು ಶತ್ರುವಶನಾದುದನ್ನೂ, ತನ್ನ ಮಗನು ಹತನಾದುದನ್ನೂ ದೇವರ್ಷಿಗಳಾದ ನಾರದರಿಗೆ ಯಥಾವತ್ತಾಗಿ ಹೇಳಿದನು. ಅಕಂಪನರಾಜನ ಆ ಮಾತನ್ನು ಕೇಳಿ ತಪೋಧನರಾದ ನಾರದರು ಪುತ್ರಶೋಕವನ್ನು ಹೋಗಲಾಡಿಸಲು ಸಮರ್ಥವಾದ ಈ ಆಖ್ಯಾನವನ್ನು ಹೇಳತೊಡಗಿದರು :

"ಮಹಾರಾಜ! ಬಹುವಿಸ್ತರವಾದ ಈ ಆಖ್ಯಾನವನ್ನು ಕೇಳು. ಅದು ಹೇಗೆ ನಡೆಯಿತೋ ಮತ್ತು ನಾನು ಹೇಗೆ ಕೇಳಿದೆನೋ ಹಾಗೆಯೇ ಹೇಳು ತ್ತೇನೆ. ಸೃಷ್ಟಿಕಾಲದಲ್ಲಿ ಮಹಾತೇಜಸ್ವಿಯಾದ ಪಿತಾಮಹನು ಬಹುಸಂಖ್ಯಾತ ವಾದ ಪ್ರಾಣಿಗಳನ್ನು ಸೃಷ್ಟಿಮಾಡಿದನು. ಪ್ರಾಣಿಗಳ ಸಂಖ್ಯೆಯು ದಿನ-ದಿನಕ್ಕೂ (ಬಹಳವಾಗಿ) ಹೆಚ್ಚುತ್ತಲೇ ಇದ್ದಿತು. ಹುಟ್ಟಿದ ಪ್ರಜೆಗಳು ಸಾಯು ತ್ತಲೇ ಇರಲಿಲ್ಲ. ಬ್ರಹ್ಮನ ಸಹನೆಯೂ ಮೀರಿತು. ಒಂದು ಪ್ರಾಣಿಗೂ ಮತ್ತೊಂದು ಪ್ರಾಣಿಗೂ ಅಂತರವೇ ಇಲ್ಲದಷ್ಟು ಪ್ರಾಣಿಗಳ ಸಂಖ್ಯೆಯು ಬೆಳೆದುಹೋಯಿತು. ವಿಶ್ವವೆಲ್ಲವೂ ನಿಬಿಡವಾದ ಪ್ರಾಣಿಸಮೂಹ ದಿಂದ ತುಂಬಿಹೋಗಿದ್ದಿತು. ಮೂರು ಲೋಕಗಳೂ ಉಸಿರಾಡುವು

ದಕ್ಕೂ ಸಾಧ್ಯವಾಗದಷ್ಟು ಜನಸಂದಣಿಯಿಂದ ಉಬ್ಬಿಹೋಗಿದ್ದುವು. ಅಂತಹ ಪರಿಸ್ಥಿತಿಯನ್ನು ಕಂಡು ಬ್ರಹ್ಮನಿಗೆ ಜನರ ಸಂಹಾರವು ಹೇಗೆಂಬುದರ ಬಗೆಗೆ ಯೋಚನೆಯುಂಟಾಯಿತು. ಎಷ್ಟೇ ಯೋಚಿಸಿದರೂ ಸಂಹಾರಕ್ಕೆ ಯುಕ್ತಿಯುಕ್ತವಾದ ಕಾರಣವು ಅವನಿಗೆ ಹೊಳೆಯಲೇ ಇಲ್ಲ. ಇದರಿಂದ ಬ್ರಹ್ಮನು ಕೋಪಾವಿಷ್ಟನಾದನು. ಆ ರೋಷದ ಕಾರಣದಿಂದಾಗಿ ಬ್ರಹ್ಮನ ಇಂದ್ರಿಯಗೋಳಕಗಳಿಂದ ಅಗ್ನಿಯು ಪ್ರಾದುರ್ಭವಿಸಿತು. ಹಾಗೆ ಹುಟ್ಟಿದ ಅಗ್ನಿಯಿಂದಲೇ ಬ್ರಹ್ಮನು ಎಲ್ಲ ದಿಕ್ಕುಗಳನ್ನೂ ಸುಡತೊಡಗಿದನು. ಹಾಗೆ ಭಗವಂತನ ಕೋಪದಿಂದ ಹುಟ್ಟಿದ ಅಗ್ನಿಯು ಸ್ವರ್ಗವನ್ನೂ, ಭೂಮಿಯನ್ನೂ, ಆಕಾಶವನ್ನೂ, ಇಡೀ ಪರಾಪರಜಗತ್ತನ್ನೂ ಸುಟ್ಟುಹಾಕಿತು. ಹಾಗೆ ಪ್ರಪಿತಾಮಹನು ಕೋಪಗೊಂಡಾಗ ಅವನ ಮಹಾಕ್ರೋಧದ ವೇಗದಿಂದ ಸ್ಥಾವರ-ಜಂಗಮಪ್ರಾಣಿಗಳೆಲ್ಲವೂ ಸುಟ್ಟುಹೋದುವು.

ಬಳಿಕ ಅಧ್ವರಜಟನೂ (ಯಜ್ಞವನ್ನೇ ಜಡೆಯ ರೂಪದಲ್ಲಿ ಧರಿಸಿರುವವನೂ), ವೇದಗಳ ಮತ್ತು ಯಜ್ಞಗಳ ಪರಿಪಾಲಕನೂ ಶತ್ರುವೀರ ಹಂತಕನೂ, ಮಂಗಳಸ್ವರೂಪನೂ, ಸ್ಥಾಣುವೂ, ದೇವದೇವನೂ ಆದ ಪರಶಿವನು ಬ್ರಹ್ಮನನ್ನು ಶರಣುಹೊಂದಿದನು. ಹೀಗೆ ಪ್ರಜೆಗಳಿಗೆ ಹಿತವನ್ನುಂಟು ಮಾಡುವ ಇಚ್ಛೆಯಿಂದ ಮಹಾದೇವನು ತನ್ನ ಬಳಿಗೆ ಬರಲಾಗಿ ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವನೋ ಎಂಬಂತಿದ್ದ ಪರಮದೇವನಾದ ಬ್ರಹ್ಮನು ಶಿವನನ್ನು ಕುರಿತು ಹೇಳಿದನು :

ಕರವಾಣ್ಯದ್ಯ ಕಂ ಕಾಮಂ ವರಾರ್ಹೋಽಸಿ ಮತೋ ಮಮ ।
ಕರ್ತಾ ಹ್ಯಸ್ಮಿ ಪ್ರಿಯಂ ಶಮ್ಭೋ ತವ ಯದ್ಧೃದಿ ವರ್ತತೇ ॥೨೧॥

"ಶಂಭುವೇ! ನೀನು ನನ್ನಿಂದ ವರವನ್ನು ಪಡೆದುಕೊಳ್ಳಲು ಅರ್ಹನಾಗಿರುವೆಯೆಂದು ಭಾವಿಸಿದ್ದೇನೆ. ನಿನ್ನ ಯಾವ ಇಚ್ಛೆಯನ್ನು ನಾನು ಪೂರ್ಣಮಾಡಲಿ? ನಿನ್ನ ಹೃದಯದಲ್ಲಿರುವ ಪ್ರಿಯವಾದ ಮನೋರಥವನ್ನು ನೆರವೇರಿಸಿಕೊಡುತ್ತೇನೆ."

೨೫೬ನೆಯ ಅಧ್ಯಾಯವು ಮುಗಿಯಿತು.

ಮಹಾದೇವನ ಪ್ರಾರ್ಥನೆಯಂತೆ ಬ್ರಹ್ಮನ ರೋಷಾಗ್ನಿಯ ಉಪಸಂಹಾರ : ಮೃತ್ಯುವಿನ ಉತ್ಪತ್ತಿ

ಧರ್ಮಜ! ಮಹಾದೇವನು ಹೇಳುತ್ತಾನೆ :

"ಪ್ರಭುವೇ! ಪಿತಾಮಹನೇ! ನನ್ನ ಈ ಪ್ರಾರ್ಥನೆಯು ಪ್ರಜಾಸೃಷ್ಟಿಯ ನಿಮಿತ್ತವಾಗಿಯೇ ಇದೆ. ಪ್ರಜಾಸೃಷ್ಟಿಯ ರಕ್ಷಣೆಗಾಗಿಯೇ ನಾನು ಪ್ರಾರ್ಥನೆಮಾಡುತ್ತಿದ್ದೇನೆ. ಈ ಪ್ರಜೆಗಳೆಲ್ಲರೂ ನಿನ್ನಿಂದಲೇ ಸೃಷ್ಟಿ ಸಲ್ಪಟ್ಟಿದ್ದಾರೆಂಬುದನ್ನು ಮನಗಾಣು. ಇವರ ಮೇಲೆ ನೀನು ವೃಥಾ ಕೋಪಗೊಳ್ಳಬೇಡ. ನಿನ್ನ ಕೋಪವೆಂಬ ಮಹಾತೇಜಸ್ಸಿನಿಂದ ಹುಟ್ಟಿರುವ ಅಗ್ನಿಯಿಂದ ಪ್ರಜೆಗಳು ಎಲ್ಲ ಕಡೆಯಲ್ಲಿಯೂ ಸುಟ್ಟುಹೋಗುತ್ತಿದ್ದಾರೆ. ಹೀಗೆ ದಹಿಸಲ್ಪಡುತ್ತಿರುವ ಪ್ರಜೆಗಳನ್ನು ನೋಡಿ ನನಗೆ ಕರುಣೆಯುಂಟಾಗಿದೆ. ನೀನು ಇವರ ಮೇಲೆ ಕೋಪಗೊಳ್ಳಬೇಡ."

"ಪರಮೇಶ್ವರ! ನಾನು ಪ್ರಜೆಗಳ ಮೇಲೆ ಕೋಪಗೊಂಡಿಲ್ಲ. ಪ್ರಜೆಗಳು ಇರಲೇಬಾರದೆಂಬುದೂ ನನ್ನ ಇಚ್ಛೆಯಲ್ಲ. ಪೃಥ್ವಿಯ ಭಾರವನ್ನು ಕಡಿಮೆಮಾಡುವ ಸಲುವಾಗಿ ಸಂಹಾರದ ಆವಶ್ಯಕತೆಯುಂಟಾಯಿತು. ಅಸಂಖ್ಯಾತರಾದ ಪ್ರಜೆಗಳ ಭಾರದಿಂದ ಪೀಡಿತಳಾಗಿರುವ ಈ ಭೂದೇವಿಯೇ ಪ್ರಜೆಗಳ ಸಂಹಾರವನ್ನು ಮಾಡುವಂತೆ ನನ್ನನ್ನು ಪ್ರಚೋದಿಸಿದಳು. ಏಕೆಂದರೆ : ಅವಳು ಆ ಮಹಾಭಾರದಿಂದ ನೀರಿನಲ್ಲಿ ಮುಳುಗಿಹೋಗು ವುದರಲ್ಲಿದ್ದಳು. ನಾನು ಎಷ್ಟೇ ಯೋಚಿಸಿದರೂ ನನಗೆ ಕ್ಷಣ-ಕ್ಷಣಕ್ಕೂ ವೃದ್ಧಿ ಹೊಂದುತ್ತಿರುವ ಈ ಪ್ರಾಣಿಗಳನ್ನು ಸಂಹರಿಸಲು ಯಾವ ಉಪಾಯವೂ ಹೊಳೆಯಲೇ ಇಲ್ಲ. ಆ ಸಮಯದಲ್ಲಿ ನನ್ನನ್ನು ಕೋಪವು ಆವರಿಸಿತು."

ರುದ್ರನು ಹೇಳುತ್ತಾನೆ :

"ಪಿತಾಮಹನೇ! ಪ್ರಸನ್ನನಾಗು. ಪ್ರಜೆಗಳ ಸಂಹಾರಾರ್ಥವಾಗಿ ನೀನು ಕೋಪಿಸಿಕೊಳ್ಳಬೇಡ. ಸಮಸ್ತಚರಾಚರಪ್ರಾಣಿಗಳನ್ನೂ ಹೀಗೆ ವಿನಾಶಗೊಳಿಸಬೇಡ. ಈ ಎಲ್ಲ ಜಲಾಶಯಗಳೂ, ಹುಲ್ಲಿನ ಮೆದೆಗಳೂ,

ಲತಾವೃಕ್ಷಗಳೂ (ಸ್ಥಾವರಗಳೂ), ಜರಾಯುಜಾದಿ ನಾಲ್ಕು ವಿಧವಾದ ಪ್ರಾಣಿಗಳ ಸಮುದಾಯಗಳೂ ಎಲ್ಲವೂ ಭಸ್ಮೀಭೂತವಾಗುತ್ತಿವೆ. ಜಗತ್ಪ್ರಳಯವೇ ಸನ್ನಿಹಿತವಾದಂತೆ ಕಾಣುತ್ತಿದೆ. ಭಗವನ್! ಪ್ರಸನ್ನನಾಗು. ಇದೇ ನಾನು ನಿನ್ನಿಂದ ಕೇಳುತ್ತಿರುವ ವರವಾಗಿದೆ. ನಷ್ಟವಾಗಿ ಹೋದ ಈ ಪ್ರಜೆಗಳು (ಯಾವುದೇ ಕಾರಣದಿಂದಲೂ) ಪುನಃ ಹುಟ್ಟುವುದಿಲ್ಲ. ಆದುದರಿಂದ ನೀನೇ ನಿನ್ನ ಪ್ರಭಾವದಿಂದಲೇ ಈ ಕ್ರೋಧಾಗ್ನಿಯನ್ನು ಉಪಶಮನಗೊಳಿಸು. ಪ್ರಾಣಿಗಳ ಹಿತದ ಸಲುವಾಗಿ ಈ ಪ್ರಾಣಿಗಳು ಪುನಃ ನಿನ್ನ ಕ್ರೋಧಾಗ್ನಿಗೆ ಸಿಕ್ಕಿ ದಹನವಾಗದಂತೆ ಮತ್ತು ಇವರ ಸಂಹಾರ ಕಾರ್ಯವೂ ವ್ಯವಸ್ಥಿತರೀತಿಯಲ್ಲಿ ನಡೆಯುವಂತೆ ಯಾವುದಾದರೂ ಉಪಾಯವನ್ನು ನೀನೇ ಯೋಚಿಸು. ಲೋಕೇಶ್ವರೇಶ್ವರನೇ! ದೇವತೆಗಳ ಆಧಿಪತ್ಯಸ್ಥಾನದಲ್ಲಿ ನಿನ್ನಿಂದ ನಿಯಮಿಸಲ್ಪಟ್ಟಿದ್ದೇನೆ. ಆದುದರಿಂದ ನಾನು ಪ್ರಜೆಗಳ ರಕ್ಷಣಾರ್ಥವಾಗಿ ಪ್ರಾರ್ಥಿಸುತ್ತಿದ್ದೇನೆ. ಪ್ರಜೆಗಳ ಸಂತತಿಯೇ ಉಚ್ಛೇದವಾಗಿಬಿಟ್ಟರೆ ಪ್ರಜೆಗಳೇ ಇರುವುದಿಲ್ಲ. ಆದುದರಿಂದ ನೀನು ಈ ಸಂಹಾರಕಾರ್ಯವನ್ನು ನಿಲ್ಲಿಸು.

ಜಗನ್ನಾಥ! ಮಹಾದೇವ! ಈ ಸಮಸ್ತವಾದ ಚರಾಚರಪ್ರಾಣಿಗಳೂ ನಿನ್ನಿಂದಲೇ ಹುಟ್ಟಿವೆ. ಆದುದರಿಂದ ನಿನ್ನನ್ನು ಪ್ರಸನ್ನಗೊಳಿಸುತ್ತಾ ನಾನು ನಿನ್ನನ್ನು ಪ್ರಾರ್ಥಿಸುತ್ತೇನೆ. ಪ್ರಾಣಿಗಳು ಪುನರಾವರ್ತನಸ್ವಭಾವವುಳ್ಳವುಗಳಾಗಲಿ. (ಸತ್ತು ಪುನಃ ಹುಟ್ಟಲಿ.)”

ನಾರದರು ಅಕಂಪನನಿಗೆ ಹೇಳುತ್ತಾರೆ :

“ಮಹಾರಾಜ! ನಿಯತವಾದ ವಾಕ್ಕು ಮತ್ತು ಮನಸ್ಸುಳ್ಳ ಬ್ರಹ್ಮದೇವನು, ಸ್ಥಾಣುವು ಹೇಳಿದ ಮಾತುಗಳನ್ನು ಕೇಳಿ ಕೋಪದಿಂದ ಉಂಟಾಗಿದ್ದ ತೇಜಸ್ಸನ್ನು ಅಪಕರ್ಷಣಮಾಡಿ ಪುನಃ ಅದನ್ನು ತನ್ನ ಅಂತರಾತ್ಮನಲ್ಲಿಯೇ ಲೀನಗೊಳಿಸಿದನು. ಆಗ ಲೋಕಪೂಜಿತನಾದ ಭಗವಾನ್ ಬ್ರಹ್ಮನು ಕೋಪಾಗ್ನಿಯನ್ನು ಉಪಸಂಹರಿಸಿ ಪ್ರಜೆಗಳ ಸಲುವಾಗಿ ಪ್ರವೃತ್ತಿ ಮತ್ತು ನಿವೃತ್ತಿಗಳೆಂಬ ಎರಡು ಮಾರ್ಗಗಳನ್ನು ಕಲ್ಪಿಸಿದನು. (ಹುಟ್ಟು ಮತ್ತು ಸಾವುಗಳ ವ್ಯವಸ್ಥೆಮಾಡಿದನು.) ಬ್ರಹ್ಮನು ಕ್ರೋಧಾಗ್ನಿ

ಯನ್ನು ಉಪಸಂಹಾರಮಾಡಿಕೊಂಡ ಸಮಯದಲ್ಲಿ ಮಹಾತ್ಮನಾದ ಆತನ ಎಲ್ಲ ಅವಯವಗಳಿಂದಲೂ ಒಂದು ಶಕ್ತಿಯು ಹೊರಟು ಅದು ಮೂರ್ತಿಮತ್ತಾದ ಸ್ತ್ರೀಯಾಗಿ ಪ್ರಾದುರ್ಭವಿಸಿತು.

ಕೃಷ್ಣರಕ್ತಾಮ್ಬರಧರಾ ಕೃಷ್ಣನೇತ್ರತಲಾನ್ತರಾ ।
ದಿವ್ಯಕುಣ್ಡಲಸಮ್ಪನ್ನಾ ದಿವ್ಯಾಭರಣಭೂಷಿತಾ ॥೧೬॥

ಆ ಸ್ತ್ರೀಯು ಕೆಂಪು ಮತ್ತು ಕಪ್ಪುಬಣ್ಣಗಳಿಂದ ಮಿಶ್ರವಾದ ಸೀರೆಯನ್ನುಟ್ಟಿದ್ದಳು. ಗುಳಿಬಿದ್ದ ಮತ್ತು ಕಪ್ಪಾದ ಕಣ್ಣುಗಳುಳ್ಳವಳಾಗಿದ್ದಳು. ದಿವ್ಯವಾದ ಕುಂಡಲಗಳಿಂದ ಸಂಪನ್ನಳಾಗಿದ್ದಳು. ದಿವ್ಯವಾದ ಆಭರಣಗಳಿಂದ ಸಮಲಂಕೃತಳಾಗಿದ್ದಳು. ಆ ಸ್ತ್ರೀಯು ಬ್ರಹ್ಮನ ಅವಯವಗಳಿಂದ ಹೊರಟು ದಕ್ಷಿಣದಿಕ್ಕಿನ ಕಡೆಗೆ ಹೊರಟಳು. ಆ ಕನ್ಯೆಯನ್ನು ಇಬ್ಬರು ವಿಶ್ವೇಶ್ವರರೂ (ಬ್ರಹ್ಮ-ಮಹೇಶ್ವರರು) ನೋಡಿದರು. ಆಗ ಲೋಕಗಳಿಗೆ ಆದಿಕಾರಣನಾದ ಬ್ರಹ್ಮದೇವನು ಆ ಕನ್ಯೆಯನ್ನು ಸಂಬೋಧಿಸಿ 'ಮೃತ್ಯೋ! ಜಹಿ ಚೇಮಾಃ ಪ್ರಜಾಃ'-'ಮತ್ಯುವೇ! ಈ ಪ್ರಜೆಗಳನ್ನು ಸಂಹರಿಸು'– ಎಂದು ಹೇಳಿದನು. ಬ್ರಹ್ಮನು ಮುಂದುವರಿದು–"ಮೃತ್ಯುವೇ! ನಾನು ಪ್ರಜೆಗಳನ್ನು ಸಂಹರಿಸಬೇಕೆಂಬ ಭಾವನೆಯನ್ನು ಹೊಂದಿ ಕೋಪಗೊಂಡಿದ್ದ ಸಮಯದಲ್ಲಿ ನಿನ್ನನ್ನು ಚಿಂತಿಸಿದೆನು. ಆದುದರಿಂದ ವಿದ್ವಾಂಸರಾದ ಮತ್ತು ಮೂಢರಾದ ಸರ್ವಪ್ರಜೆಗಳನ್ನೂ ನೀನು ಯಾವ ವಿಧವಾದ ತಾರತಮ್ಯವೂ ಇಲ್ಲದೇ ಸಂಹರಿಸು. ಕಾಮಿನಿಯೇ! ನನ್ನ ನಿರ್ದೇಶಾನುಸಾರವಾಗಿ ನೀನು ಯಾವ ವ್ಯತ್ಯಾಸವೂ ಇಲ್ಲದೆ ಎಲ್ಲ ಪ್ರಜೆಗಳನ್ನೂ (ಎಲ್ಲ ಪ್ರಾಣಿಗಳನ್ನೂ) ಸಂಹರಿಸು. ಇದರಿಂದ ನೀನು ಒಳ್ಳೆಯ ಶ್ರೇಯಸ್ಸನ್ನು ಪಡೆಯುವೆ."

ಮಹಾರಾಜ! ಬ್ರಹ್ಮನು ಹೇಳಿದ ಮಾತನ್ನು ಕೇಳಿ ಕಮಲಪುಷ್ಪಗಳ ಮಾಲೆಯಿಂದ ಸಮಲಂಕೃತಳಾಗಿದ್ದ, ಬಾಲೆಯಾದ ಮೃತ್ಯುದೇವತೆಯು ಕಣ್ಣೀರು ಸುರಿಸುತ್ತಾ ದುಃಖಿತಳಾಗಿ ಚಿಂತಾಮಗ್ನಳಾದಳು. ಬ್ರಹ್ಮನು ಮಾನವರ ಹಿತದ ಸಲುವಾಗಿ ಅವಳ ಕಣ್ಣುಗಳಿಂದ ಉದುರುತ್ತಿದ್ದ ಅಶ್ರು

ಬಿಂದುಗಳನ್ನು ಕೆಳಗೆ ಬೀಳಲು ಬಿಡದೇ ತನ್ನ ಅಂಜಲಿಯಲ್ಲಿಯೇ ಹಿಡಿದುಕೊಂಡನು. ಬಳಿಕ ಬ್ರಹ್ಮನನ್ನು ಮೃತ್ಯುವು ಪ್ರಾರ್ಥಿಸಿದಳು.”

೨೫೭ನೆಯ ಅಧ್ಯಾಯವು ಮುಗಿಯಿತು.

೨೫೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಮೃತ್ಯುವಿನ ಘೋರವಾದ ತಪಸ್ಸು: ಬ್ರಹ್ಮನ ಆಜ್ಞೆಯಂತೆ ಪ್ರಾಣಿಗಳ ಸಂಹಾರಕಾರ್ಯಕ್ಕೆ ಸಮ್ಮತಿ

ಯುಧಿಷ್ಠಿರ! ನಾರದರು ಹೇಳುತ್ತಾರೆ :

“ಮಹಾರಾಜ! ಅನಂತರದಲ್ಲಿ ವಿಶಾಲನೇತ್ರೆಯಾದ, ಸ್ತ್ರೀರೂಪಿಣಿ ಯಾದ ಮೃತ್ಯುದೇವತೆಯು ತನಗುಂಟಾಗಿದ್ದ ದುಃಖವನ್ನು ಪ್ರಯತ್ನ ಪೂರ್ವಕವಾಗಿ ತಡೆದುಕೊಂಡು ಬಗ್ಗಿದ ಲತೆಯೋಪಾದಿಯಲ್ಲಿ ವಿನಮ್ರಳಾಗಿ ಬದ್ಧಾಂಜಲಿಯಾಗಿ ಬ್ರಹ್ಮನೊಡನೆ ಹೇಳಿದಳು :

“ವಾಗ್ಮಿಗಳಲ್ಲಿ ಶ್ರೇಷ್ಠನಾದವನೇ! ಒಂದು ವೇಳೆ ನನ್ನಿಂದ ಕ್ರೂರವಾದ ಕರ್ಮಗಳನ್ನು ಮಾಡಿಸುವ ಇಚ್ಛೆಯೇ ನಿನಗಿದ್ದರೆ ಕೋಮಲಹೃದಯಳಾದ ನಾರಿಯ ರೂಪದಲ್ಲಿ ನನ್ನನ್ನೇಕೆ ಸೃಷ್ಟಿಸಿದೆ? ನನ್ನಂತಹವಳಿಗೆ ಸರ್ವಪ್ರಾಣಿ ಗಳಿಗೂ ಭಯವನ್ನುಂಟುಮಾಡುವ ಕ್ರೂರಕರ್ಮವನ್ನು ಮಾಡಲು ಹೇಗೆ ಸಾಧ್ಯವಾಗುತ್ತದೆ? ಅಧರ್ಮಕಾರ್ಯಕ್ಕೆ ನಾನು ಬಹಳ ಭಯಪಡುತ್ತೇನೆ. ಧರ್ಮಾನುಕೂಲವಾದ ಕಾರ್ಯಮಾಡಲು ನನಗೆ ಆಜ್ಞೆಯನ್ನು ನೀಡು. ಭಯಗೊಂಡಿರುವ ನನ್ನನ್ನು ನೋಡು. ಕೃಪಾದೃಷ್ಟಿಯುಳ್ಳವನಾಗು. ಸಮಸ್ತ ಪ್ರಾಣಿಗಳಿಗೂ ಈಶ್ವರನಾಗಿರುವವನೇ! ನಿನಗೆ ನಮಸ್ಕಾರಮಾಡುತ್ತೇನೆ. ಪ್ರಸನ್ನನಾಗು. ನಿರಪರಾಧಿಗಳಾದ ಬಾಲ-ವೃದ್ಧ-ಯುವಕಪ್ರಾಣಿಗಳ ಪ್ರಾಣ ಗಳನ್ನು ನಾನು ಖಂಡಿತವಾಗಿಯೂ ಅಪಹರಿಸಲಾರೆನು. ಪ್ರಿಯರಾದ ಪುತ್ರರನ್ನೂ, ಮಿತ್ರರನ್ನೂ, ಸಹೋದರರನ್ನೂ, ತಾಯಂದಿರನ್ನೂ, ಅಪ್ಪಂದಿ ರನ್ನೂ ಸಂಹರಿಸಿದಾಗ ಅವರ ಬಂಧುಗಳೆಲ್ಲರೂ ಅವರ ಮರಣಕ್ಕೆ ನನ್ನನ್ನೇ ಕಾರಣಳೆಂದು ಭಾವಿಸಿ ನನ್ನನ್ನು ಶಪಿಸುತ್ತಾರೆ. ಆದುದ ರಿಂದ ನಾನು ಅಂತಹವರಿಗಾಗಿ ಭಯಪಡುತ್ತೇನೆ. ದುಃಖಿಗಳ ಅಶ್ರು

ಪಾತದಿಂದ ಅವರ ಮುಖಗಳಲ್ಲಿ ಮತ್ತು ಹೃದಯಗಳಲ್ಲಿ ಉಂಟಾಗುವ ತೇವವು ಅನಂತಕಾಲದವರೆಗೂ ನನ್ನನ್ನು ದಹಿಸುತ್ತಿರುತ್ತದೆ. ಅಂತಹವರಿಗಾಗಿ ನಾನು ಬಹಳ ಭಯಪಡುತ್ತೇನೆ. ಈ ಕಾರಣದಿಂದಲೇ ನಾನು ನಿನಗೆ ಶರಣಾಗತಳಾಗಿದ್ದೇನೆ. ಪ್ರಭುವೇ! ಪಾಪಿಷ್ಠರಾದ ಜನರನ್ನು ಯಮನ ಲೋಕಕ್ಕೆ ಕರೆದೊಯ್ದು ನರಕದಲ್ಲಿ ಬೀಳಿಸುವರೆಂದು ಕೇಳಿದ್ದೇನೆ. ಆದುದರಿಂದ ನಾನು ಈ ಕಾರ್ಯವನ್ನು ಮಾಡಲಾರೆನು. ನಿನ್ನನ್ನು ಅಂಗಲಾಚಿ ಬೇಡಿಕೊಳ್ಳುತ್ತೇನೆ. ವರದನೇ! ನನ್ನ ವಿಷಯದಲ್ಲಿ ಅನುಗ್ರಹ ಬುದ್ಧಿಯುಳ್ಳವನಾಗು. ಲೋಕಪಿತಾಮಹನೇ! ಪರಮೇಶ್ವರನೇ! ನಿನ್ನಿಂದ ನಾನು ಈ ಒಂದು ಇಷ್ಟಾರ್ಥವನ್ನು ನೆರವೇರಿಸಿಕೊಳ್ಳಬೇಕೆಂಬ ಇಚ್ಛೆಯುಳ್ಳ ವಳಾಗಿದ್ದೇನೆ. ನಿನ್ನ ಅನುಗ್ರಹವನ್ನು ಪಡೆಯುವ ಸಲುವಾಗಿಯೇ ತಪಸ್ಸನ್ನು ಮಾಡಲು ಇಚ್ಛಿಸಿದ್ದೇನೆ.”

ಪಿತಾಮಹನು ಹೇಳುತ್ತಾನೆ :

“ಮೃತ್ಯುವೇ! ಪ್ರಜೆಗಳನ್ನು ಸಂಹಾರಮಾಡುವ ಸಲುವಾಗಿಯೇ ಸಂಕಲ್ಪಿಸಿ ನಾನು ನಿನ್ನನ್ನು ಸೃಷ್ಟಿಸಿದ್ದೇನೆ. ಈಗಲೇ ಹೊರಡು. ಎಲ್ಲ ಪ್ರಜೆಗಳನ್ನೂ ಸಂಹರಿಸು. ಯುಕ್ತಾಯುಕ್ತತೆಯ ಬಗೆಗೆ ವಿಚಾರಮಾಡಲು ಹೋಗಬೇಡ. ಇದು ಹೀಗೆಯೇ ಅತ್ಯವಶ್ಯವಾಗಿ ಆಗಬೇಕಾದ ಕಾರ್ಯ ವಾಗಿದೆ. ಇದಕ್ಕೆ ಬೇರೆ ಮಾರ್ಗವೇ ಇಲ್ಲ. ನಿಷ್ಪಾಪಳೇ! ನಿಷ್ಕಳಂಕಳೇ! ನಾನು ಹೇಳಿದಂತೆ ನೀನು ನನ್ನ ಮಾತನ್ನು ಪಾಲಿಸು.”

ನಾರದರು ರಾಜನಿಗೆ ಹೇಳುತ್ತಾರೆ :

“ಮಹಾಬಾಹುವೇ! ಪರಪುರಂಜಯನೇ! ಬ್ರಹ್ಮನು ಮೃತ್ಯು ದೇವತೆಯನ್ನು ಕುರಿತು ಹೀಗೆ ಹೇಳಿದನಂತರ ಅವಳು ಬ್ರಹ್ಮನ ಕಡೆಗೇ ಮುಖವನ್ನು ತಿರುಗಿಸಿಕೊಂಡು ವಿನೀತಳಾಗಿ ನಿಂತಿದ್ದಳು. ಪುನಃ ಯಾವ ಮಾತನ್ನೂ ಆಡಲಿಲ್ಲ. ಬ್ರಹ್ಮನು ಪುನಃ ಪುನಃ ತಾನು ಹೇಳಿದಂತೆ ಮಾಡಲು ಮೃತ್ಯು ದೇವತೆಗೆ ಹೇಳುತ್ತಿದ್ದರೂ ಮಾನಿನಿಯಾದ ಆ ಕನ್ಯೆಯ ಪ್ರಾಣರಹಿತಳಂತೆ ಮೌನವಾಗಿಯೇ ಇದ್ದುಬಿಟ್ಟಳು. ಆಗುತ್ತದೆ ಅಥವಾ ಇಲ್ಲ–ಎಂಬ ಯಾವ ಉತ್ತರವನ್ನೂ ಅವಳು ಹೇಳಲಿಲ್ಲ. ಬಳಿಕ ದೇವತೆಗಳ

ಅಧಿಪತಿಗಳಿಗೂ ಅಧಿಪತಿಯಾದ, ಲೋಕೇಶನಾದ ಬ್ರಹ್ಮನು ತನ್ನ ಮನಸ್ಸಿನಲ್ಲಿಯೇ ಪ್ರಸನ್ನತೆಯನ್ನು ಹೊಂದಿದನು. ಮುಗುಳ್ನಗೆಯನ್ನು ಬೀರುತ್ತಾ ಎಲ್ಲ ಲೋಕಗಳನ್ನೂ ಒಮ್ಮೆ ನೋಡಿದನು. ಅಪರಾಜಿತನಾದ ಭಗವಾನ್ ಬ್ರಹ್ಮನು ರೋಷದಿಂದ ಮುಕ್ತನಾದನಂತರ ಆ ಕನ್ಯೆಯು ಅವನ ಬಳಿಯಿಂದ ಹೊರಟುಹೋದಳೆಂಬುದನ್ನು ನಾವು ಕೇಳಿದೆವು. ಆ ಸಮಯದಲ್ಲಿ ಮೃತ್ಯುದೇವತೆಯು ಬ್ರಹ್ಮನಿಗೆ ಪ್ರಜೆಗಳನ್ನು ಸಂಹಾರ ಮಾಡುವೆನೆಂಬ ಒಪ್ಪಿಗೆಯನ್ನೇನೂ ಕೊಡಲಿಲ್ಲ. ಬ್ರಹ್ಮನ ಸಮೀಪದಿಂದ ಹೊರಟ ಅವಳು ಬಹಳ ಅವಸರದಿಂದ ಧೇನುಕಾಶ್ರಮಕ್ಕೆ ಹೋದಳು. ಆ ಧೇನುಕಾಶ್ರಮದಲ್ಲಿ ಅವಳು ಒಂದು ಕಾಲಿನಲ್ಲಿ ನಿಂತುಕೊಂಡು ಹದಿನೈದು ಪದ್ಮಸಂಖ್ಯಾತ* ವರ್ಷಗಳ ಪರ್ಯಂತವಾಗಿ ಅತ್ಯಂತದುಷ್ಕರವಾದ ಮತ್ತು ಶ್ರೇಷ್ಠವಾದ ತಪಸ್ಸನ್ನು ಆಚರಿಸಿದಳು. ಹಾಗೆ ಪರಮದುಷ್ಕರವಾದ ತಪಸ್ಸನ್ನು ಮಾಡುತ್ತಿದ್ದ ಮೃತ್ಯದೇವತೆಯ ಬಳಿಗೆ ಮಹಾತೇಜಸ್ವಿಯಾದ ಬ್ರಹ್ಮನು ಪುನಃ ಆಗಮಿಸಿ ತನ್ನ ಆಜ್ಞೆಯನ್ನು ಪಾಲಿಸುವಂತೆ (ಪ್ರಾಣಿಗಳ ಪ್ರಾಣಗಳನ್ನು ಅಪಹರಿಸುವಂತೆ) ಹೇಳಿದನು. ಮೃತ್ಯುವು ಬ್ರಹ್ಮನ ಆ ಮಾತನ್ನು ಲೆಕ್ಕಿಸದೇ ಪುನಃ ಇಪ್ಪತ್ತು ಪದ್ಮವರ್ಷಗಳ ಕಾಲ ಒಂದೇ ಕಾಲಿನಲ್ಲಿ ನಿಂತು ತಪಸ್ಸುಮಾಡಿದಳು. ಪುನಃ ಅವಳು ಹತ್ತುಸಾವಿರ ಪದ್ಮವರ್ಷ ಗಳವರೆಗೆ ಮೃಗಗಳೊಡನೆಯೇ ಇದ್ದುಬಿಟ್ಟಳು. ಅನಂತರ ಇಪ್ಪತ್ತು ಸಾವಿರ ವರ್ಷಗಳವರೆಗೆ ವಾಯುಸೇವನೆಯಿಂದಲೇ ಇದ್ದಬಿಟ್ಟಳು. ಆ ಬಳಿಕ ಮೃತ್ಯು ದೇವತೆಯು ಉತ್ತಮವಾದ ಮೌನವ್ರತವನ್ನು ಧಾರಣೆಮಾಡಿದಳು. ಅನಂತರ ಎಂಟುಸಾವಿರ ವರ್ಷಗಳ ಕಾಲ ನೀರಿನಲ್ಲಿ ನಿಂತು ತಪಸ್ಸು ಮಾಡಿದಳು. ಬಳಿಕ ಆ ಕನ್ಯೆಯು ಕೌಶಿಕೀನದಿಯ ತೀರಕ್ಕೆ ಹೋದಳು. ಅಲ್ಲಿ ಪುನಃ ಗಾಳಿ ಮತ್ತು ನೀರನ್ನೇ ಆಹಾರವನ್ನಾಗಿ ಸೇವಿಸುತ್ತಾ ಕಠೋರ ವಾದ ನಿಯಮಗಳನ್ನು ಪಾಲಿಸತೊಡಗಿದಳು. ಅನಂತರ ಮಹಾ ಭಾಗ್ಯಶಾಲಿನಿಯಾದ ಮೃತ್ಯುದೇವತೆಯು ಗಂಗಾನದಿಯ ತೀರಕ್ಕೂ, ಅಲ್ಲಿಂದ ಅದ್ವಿತೀಯವಾದ ಮೇರುಪರ್ವತಕ್ಕೂ ಪ್ರಯಾಣಮಾಡಿದಳು.

---

* ಒಂದು ಪದ್ಮವರ್ಷಗಳು = 1000000000000000000 ವರ್ಷಗಳು.

ಮೇರುಪರ್ವತದಲ್ಲಿ ಮೃತ್ಯುದೇವತೆಯು ಪ್ರಜೆಗಳಿಗೆ ಹಿತವನ್ನುಂಟು ಮಾಡುವ ಇಚ್ಛೆಯಿಂದ ಮರದ ಕೊರಡಿನಂತೆ ನಿಶ್ಚೇಷ್ಟಳಾಗಿ ನಿಂತುಬಿಟ್ಟಳು. ಅನಂತರ ಮೃತ್ಯುದೇವತೆಯು ಮೇರುಪರ್ವತದಿಂದ ಹಿಂದೆ ದೇವತೆಗಳು ಯಜ್ಞಮಾಡಿದ್ದ ಹಿಮವತ್ಪರ್ವತದ ಶಿಖರಕ್ಕೆ ಹೋಗಿ ಅಲ್ಲಿ ಕಾಲಿನ ಹೆಬ್ಬೆರಳೊಂದನ್ನೇ ಆಸರೆಯನ್ನಾಗಿಟ್ಟುಕೊಂಡು ನಿಖರ್ವ* ವರ್ಷಗಳ ಪರ್ಯಂತವಾಗಿ ತಪಸ್ಸುಮಾಡಿ ಸತತಪ್ರಯತ್ನದ ಫಲವಾಗಿ ಪಿತಾಮಹ ನನ್ನು ಸಂತೋಷಗೊಳಿಸಿದಳು.

ಲೋಕಗಳ ಉತ್ಪತ್ತಿ ಮತ್ತು ಲಯಗಳಿಗೆ ಕಾರಣಭೂತನಾದ ಬ್ರಹ್ಮನು ಪುನಃ ಅಲ್ಲಿಗೆ ಬಂದು ಮೃತ್ಯುದೇವತೆಯನ್ನು ಕುರಿತು "ಮಗಳೇ! ನೀನೇನು ಮಾಡುತ್ತಿರುವೆ? ನಾನು ಹೇಳಿದಂತೆ ಮಾಡು." ಎಂದು ಹೇಳಿದನು. ಬ್ರಹ್ಮನ ಆ ಮಾತನ್ನು ಹೇಳಿ ಮೃತ್ಯುವು ಭಗವಂತನಾದ ಪಿತಾಮಹನನ್ನು ಕುರಿತು–"ದೇವನೇ! ನಾನು ಪ್ರಜೆಗಳ ಪ್ರಾಣಹರಣಮಾಡುವುದಿಲ್ಲ. ನಾನು ಪುನಃ ನನ್ನ ತಪಸ್ಸಿನ ಮೂಲಕವಾಗಿ ನಿನ್ನನ್ನು ಪ್ರಸನ್ನಗೊಳಿಸುತ್ತೇನೆ"–ಎಂದು ಹೇಳಿ ತಪಸ್ಸಿಗೆ ಹೊರಡಲನುವಾದಳು. ದೇವದೇವನಾದ ಬ್ರಹ್ಮನು, ಕಾರಣವಿಲ್ಲದೇ ಪ್ರಜೆಗಳ ಪ್ರಾಣಾಪಹಾರಮಾಡಿದರೆ ಅಧರ್ಮ ವಾಗಿಬಿಡಬಹುದೆಂಬ ಭಯದಿಂದ ಭೀತಳಾಗಿದ್ದ, ತನ್ನನ್ನು ಅಂತಹ ದಾರುಣವಾದ ಕಾರ್ಯಕ್ಕೆ ನಿಯಮಿಸಕೂಡದೆಂದು ಬಾರಿಬಾರಿಗೂ ಪ್ರಾರ್ಥಿಸುತ್ತಿದ್ದ ಮೃತ್ಯುದೇವತೆಯನ್ನು ಮುಂದೆ ಹೋಗದಂತೆ ತಡೆದು ನಿಲ್ಲಿಸಿ ಹೇಳಿದನು :

ಅಧರ್ಮೋ ನಾಸ್ತಿ ತೇ ಮೃತ್ಯೋ ಸಂಯಚ್ಛೇಮಾಃ ಪ್ರಜಾಃ ಶುಭೇ ।
ಮಯಾ ಹ್ಯುಕ್ತಂ ಮೃಷಾ ಭದ್ರೇ ಭವಿತಾ ನೇಹ ಕಿಂಚನ ॥೨೮॥

"ಮೃತ್ಯುದೇವತೆಯೇ! ಶುಭಸ್ವರೂಪಳೇ! ಈ ಪ್ರಜೆಗಳನ್ನು ನೀನು ಸಂಹರಿಸು. ಇದು ಅಧರ್ಮದ ಕಾರ್ಯವೂ ಅಲ್ಲ ; ಇದರಿಂದ

---

* ನಿಖರ್ವವರ್ಷಗಳು = ಹತ್ತುಸಾವಿರಕೋಟಿ ವರ್ಷಗಳು.

ನಿನಗೆ ಪಾಪವೂ ಉಂಟಾಗುವುದಿಲ್ಲ. ಮಂಗಳಸ್ವರೂಪಳೇ! ನಾನು ಹೇಳಿದ ಯಾವ ಮಾತೂ ಸುಳ್ಳಾಗಲು ಸಾಧ್ಯವೇ ಇಲ್ಲ.

ಸನಾತನಧರ್ಮವು ಈಗಲೇ ನಿನ್ನ ಶರೀರವನ್ನು ಪ್ರವೇಶಿಸುತ್ತದೆ. ನಾನೂ ಮತ್ತು ಎಲ್ಲ ದೇವತೆಗಳೂ ಯಾವಾಗಲೂ ನಿನ್ನ ಹಿತದಲ್ಲಿಯೇ ನಿರತರಾಗಿರುತ್ತೇವೆ. ನಾನು ನಿನ್ನ ಮನೋವಾಂಛಿತವಾಗಿರುವ ಮತ್ತೊಂದು ವರವನ್ನೂ ಕೊಡುತ್ತೇನೆ. ಪ್ರಿಯರಾದವರ ಪ್ರಾಣಗಳನ್ನು ಅಪಹರಿಸಿದ ನಂತರ ಅವರ ಬಂಧುಗಳು ನಿನ್ನನ್ನು ನಿಂದಿಸುವರೆಂಬ ಭಯವು ನಿನಗಿರುವುದಲ್ಲವೇ? **ನ ತ್ವಾಂ ದೋಷೇಣ ಯಾಸ್ಯನ್ತಿ ವ್ಯಾಧಿಸಮ್ಪೀಡಿತಾಃ ಪ್ರಜಾಃ ।** ನಾನಾವಿಧವಾದ ರೋಗಗಳಿಂದ ಪೀಡಿಸಲ್ಪಡುವ ಪ್ರಜೆಗಳ ಪ್ರಾಣವು ಹೋದುದಕ್ಕಾಗಿ ನಿನ್ನ ಮೇಲೆ ದೋಷಾರೋಪಣೆಯನ್ನು ಮಾಡುವುದಿಲ್ಲ. (ವ್ಯಾಧಿಯ ಕಾರಣದಿಂದ ಮೃತರಾದರೆನ್ನುತ್ತಾರೆ.) ಮೇಲಾಗಿ ನೀನು ಯಾವಾಗಲೂ ಕೋಮಲಹೃದಯಳಾದ ಕನ್ಯೆಯಾಗಿಯೇ ಇರುವುದಿಲ್ಲ. ಪುರುಷರಲ್ಲಿ ನೀನು ಪುರುಷರೂಪಳಾಗಿಯೇ ಇರುವೆ. ಸ್ತ್ರೀಯರಲ್ಲಿ ಸ್ತ್ರೀರೂಪಳಾಗಿರುವೆ. ನಪುಂಸಕರಲ್ಲಿ ನಪುಂಸಕರೂಪಳಾಗಿರುವೆ."

ನಾರದರು ಹೇಳುತ್ತಾರೆ :

"ಮಹಾರಾಜ! ಬ್ರಹ್ಮನಿಂದ ಹೀಗೆ ಹೇಳಲ್ಪಟ್ಟ ಮೃತ್ಯುದೇವತೆಯು ಬದ್ಧಾಂಜಲಿಯಾಗಿ ಮಹಾತ್ಮನಾದ, ದೇವೇಶನಾದ ಮತ್ತು ಅವ್ಯಯನಾದ ಬ್ರಹ್ಮದೇವನನ್ನು ಕುರಿತು 'ನಾನು ಪ್ರಾಣಿಗಳ ಸಂಹಾರವನ್ನು ಮಾಡುವುದಿಲ್ಲ'–ಎಂದೇ ಹೇಳಿಬಿಟ್ಟಳು.

ಬ್ರಹ್ಮನು ಸಮಾಧಾನದಿಂದಲೇ ಪುನಃ ಮೃತ್ಯುದೇವತೆಗೆ ಹೇಳಿದನು : "ಶುಭಸ್ವರೂಪಳೇ! ಮಾನವರನ್ನು (ಪ್ರಾಣಿಗಳನ್ನು) ಸಂಹರಿಸು. ನಾನು ನಿನ್ನ ವಿಷಯದಲ್ಲಿ ಯಾವಾಗಲೂ ಶುಭವನ್ನೇ ಚಿಂತಿಸುವುದರಿಂದ ನಿನಗೆ ಪಾಪವುಂಟಾಗುವುದಿಲ್ಲ.

ಯಾವಶ್ರುಬಿನ್ದೂನ್ಪತಿತಾನಪಶ್ಯಂ
ಯೇ ಪ್ರಾಣಿಭ್ಯಾಂ ಧಾರಿತಾಸ್ತೇ ಪುರಸ್ತಾತ್ ।

ತೇ ವ್ಯಾಧಯೋ ಮಾನವಾನ್ಘೋರರೂಪಾಃ
ಪ್ರಾಪ್ತೇ ಕಾಲೇ ಕಾಲಯಿಷ್ಯನ್ತಿ ಮೃತ್ಯೋ ||೩೪||

ಮೃತ್ಯುವೇ! ನಿನ್ನ ಯಾವ ಅಶ್ರುಬಿಂದುಗಳು ನಿನ್ನ ಕಣ್ಣುಗಳಿಂದ ಉದುರುತ್ತಿದ್ದುದನ್ನು ನಾನು ನೋಡಿದೆನೋ ಮತ್ತು ಯಾವ ಅಶ್ರುಬಿಂದುಗಳನ್ನು ನನ್ನ ಕೈಗಳಿಂದ ಧಾರಣೆಮಾಡಿಕೊಂಡೆನೋ–ಆ ಅಶ್ರುಬಿಂದುಗಳೇ ವ್ಯಾಧಿಗಳು. ಕಾಲವು ಸನ್ನಿಹಿತವಾದಾಗ ಘೋರರೂಪವಾದ ವ್ಯಾಧಿಗಳಾಗಿ ಪರಿಣಮಿಸಿ ಮನುಷ್ಯರನ್ನು ಕಾಲವಶರನ್ನಾಗಿ ಮಾಡಿಬಿಡುತ್ತವೆ.

ಸರ್ವೇಷಾಂ ತ್ವಂ ಪ್ರಾಣಿನಾಮನ್ತಕಾಲೇ
ಕಾಮಕ್ರೋಧೌ ಸಹಿತೌ ಯೋಜಯೇಥಾಃ ।
ಏವಂ ಧರ್ಮಸ್ತ್ವಾಮುಪೈಷ್ಯತ್ಯಮೇಯೋ
ನ ಚಾಧರ್ಮಂ ಲಪ್ಸ್ಯಸೇ ತುಲ್ಯವೃತ್ತಿಃ ||೩೫||

ಎಲ್ಲ ಪ್ರಾಣಿಗಳ ಅಂತ್ಯಕಾಲದಲ್ಲಿಯೂ ನೀನು ಆ ಪ್ರಾಣಿಗಳನ್ನು ಕಾಮ-ಕ್ರೋಧಗಳೊಡನೆ ಸಂಯೋಜಿಸಬೇಕು. ಹೀಗೆ ಮಾಡುವುದರಿಂದ ಅಪ್ರಮೇಯವಾದ ಧರ್ಮವೂ ನಿನ್ನ ನೆರವಿಗೆ ಬರುತ್ತದೆ. (ಕಾಮ-ಕ್ರೋಧಾದಿಗಳಿಂದ ಅಭಿಭೂತನಾಗಿ ಅವನು ಹಾಳಾದನೆಂದು ಜನರು ಹೇಳುವರೇ ಹೊರತು ನಿನ್ನ ಹೆಸರನ್ನು ಕೂಡ ಯಾರೂ ಎತ್ತುವುದಿಲ್ಲ.) ನೀನು ಸರ್ವತ್ರ ಸಮಭಾವದಿಂದಿರುವುದರಿಂದ ನೀನು ಯಾವ ವಿಧವಾದ ಪಾಪವನ್ನೂ ಹೊಂದುವುದಿಲ್ಲ.

ಏವಂ ಧರ್ಮಂ ಪಾಲಯಿಷ್ಯಸ್ಯಥೋ ತ್ವಂ
ನ ಚಾತ್ಮಾನಂ ಮಜ್ಜಯಿಷ್ಯಸ್ಯಧರ್ಮೇ ।
ತಸ್ಮಾತ್ಕಾಮಂ ರೋಚಯಾಭ್ಯಾಗತಂ ತ್ವಂ
ಸಂಯೋಜ್ಯಾಥೋ ಸಂಹರಸ್ವೇಹ ಜನ್ತೂನ್ ||೩೬||

ನೀನು ಧರ್ಮವನ್ನು ಪರಿಪಾಲಿಸಿದ್ದೇ ಆದರೆ ನೀನು ನಿನ್ನನ್ನು ಪಾಪದಲ್ಲಿ ಮುಳುಗಿಸಿಕೊಳ್ಳುವುದಿಲ್ಲ. ಆದುದರಿಂದ ನಿನ್ನ ಬಳಿಗೆ ಬಂದಿರುವ ಈ ಅಧಿಕಾರವನ್ನು ಸಂತೋಷದಿಂದ ಅಂಗೀಕರಿಸು. ಕಾಮವನ್ನು ಮನುಷ್ಯನೊಡನೆ ಸಂಯೋಜಿಸಿ ಈ ಪ್ರಪಂಚದಲ್ಲಿರುವ ಎಲ್ಲ ಪ್ರಾಣಿಗಳನ್ನೂ ಸಂಹರಿಸು."

ನಾರದರು ಹೇಳುತ್ತಾರೆ :

“ಮಹಾರಾಜ! ಬ್ರಹ್ಮದೇವನು ಹೇಳಿದ ಮಾತುಗಳನ್ನು ಕೇಳಿ ಮೃತ್ಯುವೆಂಬ ಹೆಸರಿನ ಸ್ತ್ರೀಯು ಬ್ರಹ್ಮನು ಶಾಪಕೊಟ್ಟುಬಿಡುವನೆಂಬ ಭಯದಿಂದ–“ಹಾಗೆಯೇ ಆಗಲಿ, ಬ್ರಹ್ಮದೇವ! ನಾನು ನಿನ್ನ ಆಜ್ಞೆಯನ್ನು ಪರಿಪಾಲಿಸುತ್ತೇನೆ”–ಎಂದು ಬ್ರಹ್ಮನೊಡನೆ ಹೇಳಿದಳು. ಬ್ರಹ್ಮನ ಸಲಹೆಯಂತೆ ಮೃತ್ಯುದೇವತೆಯು ಅಂತ್ಯಕಾಲದಲ್ಲಿ ಪ್ರಾಣಿಗಳನ್ನು ಕಾಮ-ಕ್ರೋಧಗಳೊಡನೆ ಸೇರಿಸಿ ಮೋಹವಶಗಳನ್ನಾಗಿ ಮಾಡಿ ಸಂಹರಿಸುತ್ತದೆ. ಹಿಂದೆ ಮೃತ್ಯುದೇವತೆಯ ಕಣ್ಣುಗಳಿಂದ ಯಾವ ಅಶ್ರುಬಿಂದುಗಳು ಉದುರಿದ್ದುವೋ–ಅವುಗಳೇ ಮುಂದೆ ಜ್ವರವೇ ಮೊದಲಾದ ರೋಗಗಳಾಗಿ ಪರಿಣಮಿಸಿದುವು. ಈ ರೋಗಗಳಿಂದಲೇ ಮನುಷ್ಯರ ಶರೀರವು ಗ್ರಸ್ತವಾಗುತ್ತದೆ. ಪ್ರಾಣಿಗಳ ಆಯುಷ್ಯಗಳು ಮುಗಿದ ನಂತರ ಪ್ರಾಣಾಂತ್ಯಕಾಲದಲ್ಲಿ ಮೃತ್ಯುವು ಆ ಪ್ರಾಣಿಗಳ ಬಳಿಗೆ ಹೋಗುತ್ತದೆ. ಅಕಂಪನನೇ! ಆದುದರಿಂದ ನಿನ್ನ ಪುತ್ರನು ಮರಣಹೊಂದಿರುವುದಕ್ಕಾಗಿ ಶೋಕಪಡಬೇಡ. ಆಯುಷ್ಯವು ಮುಗಿದೊಡನೆಯೇ ಮೃತ್ಯುವು ಸಂಭವಿಸುವುದೆಂಬುದನ್ನು ನಿನ್ನ ಬುದ್ಧಿಯಿಂದ ಚೆನ್ನಾಗಿ ಸಮಾಲೋಚಿಸು.

ಸರ್ವೇ ದೇವಾಃ ಪ್ರಾಣಿನಾಂ ಪ್ರಾಣನಾಶೇ
ಗತ್ವಾ ವೃತ್ತಾಃ ಸಂನಿವೃತ್ತಾಸ್ತಥೈವ ।
ಏವಂ ಸರ್ವೇ ಮಾನವಾಃ ಪ್ರಾಣನಾಶೇ
ಗತ್ವಾ ವೃತ್ತಾ ದೇವವದ್ರಾಜಸಿಂಹ ॥೩೯॥

ರಾಜಸಿಂಹನೇ! ಯಾವ ರೀತಿಯಲ್ಲಿ ಪ್ರಾಣಿಗಳ ಎಲ್ಲ ಇಂದ್ರಿಯಗಳೂ ಜಾಗ್ರದವಸ್ಥೆಯ ಅಂತ್ಯದಲ್ಲಿ ಅರ್ಥಾತ್ ಸುಷುಪ್ತ್ಯವಸ್ಥೆಯಲ್ಲಿ ನಿಷ್ಕ್ರಿಯಗಳಾಗಿ ಮನಸ್ಸಿನಲ್ಲಿ ಸೇರಿಹೋಗುವುವೋ ಮತ್ತು ಜಾಗ್ರದವಸ್ಥೆಯು ಬಂದೊಡನೆ ಪುನಃ ಹಿಂದಿರುಗುವುವೋ–ಅದೇ ರೀತಿಯಲ್ಲಿ ಎಲ್ಲ ಮನುಷ್ಯರೂ ಜೀವನಾಂತ್ಯದಲ್ಲಿ ಪರಲೋಕಕ್ಕೆ ಹೋಗಿ ಕರ್ಮಗಳಿಗೆ ಅನುಸಾರವಾಗಿ ದೇವಲೋಕದಲ್ಲಿ ದೇವತೆಗಳಂತೆಯೋ ಅಥವಾ ನರಕದಲ್ಲಿ ಪಾಪಿಷ್ಠರಂತೆಯೋ ಕರ್ಮಫಲವು ಕಳೆಯುವವರೆಗೆ ವಾಸಮಾಡುತ್ತಿದ್ದು ಶುಭಾಶುಭಕರ್ಮಗಳ

ಫಲವು ಮುಗಿದನಂತರ ಜಗತ್ತಿಗೆ ಹಿಂದಿರುಗಿ ಬಂದು ಮನುಷ್ಯನೇ ಮೊದಲಾದ ಯೋನಿಗಳಲ್ಲಿ ಜನ್ಮವನ್ನು ತಾಳುತ್ತಾರೆ.

ವಾಯುರ್ಭೀಮೋ ಭೀಮನಾದೋ ಮಹೌಜಾಃ
ಸ ಸರ್ವೇಷಾಂ ಪ್ರಾಣಿನಾಂ ಪ್ರಾಣಭೂತಃ ।
ನಾನಾವೃತ್ತಿರ್ದೇಹಿನಾಂ ದೇಹಭೇದೇ
ತಸ್ಮಾದ್ವಾಯುರ್ದೇವದೇವೋ ವಿಶಿಷ್ಟಃ ॥೪೦॥

ಭಯಂಕರವಾಗಿ ಶಬ್ದಮಾಡುವ, ಮಹಾಬಲಿಷ್ಠನಾದ, ಭಯಂಕರನಾದ ವಾಯುವು ಸಮಸ್ತಪ್ರಾಣಿಗಳಿಗೂ ಪ್ರಾಣಸ್ವರೂಪನಾಗಿರುವನು. ದೇಹಧಾರಿಗಳ ದೇಹವು ವಿನಾಶವಾದನಂತರ ನಾನಾಪ್ರಕಾರವಾದ ರೂಪಗಳನ್ನು ಅಥವಾ ಶರೀರಗಳನ್ನು ಹೊಂದುತ್ತದೆ. ಆದುದರಿಂದ ಶರೀರದಲ್ಲಿರುವ ದೇವಾಧಿದೇವನಾದ, ಪ್ರಾಣಸ್ವರೂಪನಾದ ವಾಯುವೇ ಎಲ್ಲರಿಗಿಂತಲೂ ಶ್ರೇಷ್ಠನು.

ಸರ್ವೇ ದೇವಾ ಮರ್ತ್ಯಸಂಜ್ಞಾವಿಶಿಷ್ಟಾಃ
ಸರ್ವೇ ಮರ್ತ್ಯಾ ದೇವಸಂಜ್ಞಾವಿಶಿಷ್ಟಾಃ ।
ತಸ್ಮಾತ್ಪುತ್ರಂ ಮಾ ಶುಚೋ ರಾಜಸಿಂಹ
ಪುತ್ರಃ ಸ್ವರ್ಗಂ ಪ್ರಾಪ್ಯ ತೇ ಮೋದತೇ ಹ ॥೪೧॥

ಎಲ್ಲ ದೇವತೆಗಳೂ ಪುಣ್ಯವು ಕ್ಷಯಿಸಿದೊಡನೆಯೇ ಈ ಲೋಕಕ್ಕೆ ಬಂದು ಮರ್ತ್ಯರೆಂಬ ಸಂಜ್ಞೆಯಿಂದ ಕೂಡಿದವರಾಗುತ್ತಾರೆ. ಹಾಗೆಯೇ ಈ ಲೋಕದಲ್ಲಿರುವ ಎಲ್ಲ ಮರ್ತ್ಯರೂ ಮರಣಾನಂತರದಲ್ಲಿ ತಾವು ಮಾಡಿದ ಸತ್ಕಾರ್ಯಗಳ ಫಲವಾಗಿ ಸ್ವರ್ಗಲೋಕಕ್ಕೆ ಹೋಗಿ ಅಲ್ಲಿ ದೇವತೆಗಳೆಂಬ ಸಂಜ್ಞೆಯಿಂದ ಕೂಡಿದವರಾಗುತ್ತಾರೆ. ರಾಜಸಿಂಹನೇ! ಆದುದರಿಂದ ನೀನು ನಿನ್ನ ಪುತ್ರನ ಸಲುವಾಗಿ ದುಃಖಪಡಬೇಡ. ನಿನ್ನ ಮಗನು (ಯುದ್ಧದಲ್ಲಿ ಮಡಿದಿರುವುದರಿಂದ) ಸ್ವರ್ಗವನ್ನು ಹೊಂದಿ ಆನಂದಪಡುತ್ತಿದ್ದಾನೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಹೀಗೆ ಬ್ರಹ್ಮನೇ ಪ್ರಾಣಿಗಳ ಸಂಹಾರಕ್ಕಾಗಿ

ಮೃತ್ಯುವನ್ನು ಸೃಷ್ಟಿಸಿದ್ದಾನೆ. ಮೃತ್ಯುವು ಕಾಲವು ಸನ್ನಿಹಿತವಾದೊಡನೆಯೇ ಯಥಾವತ್ತಾಗಿ (ನಿಯಮಾನುಸಾರವಾಗಿ) ಪ್ರಾಣಿಗಳನ್ನು ಸಂಹರಿಸುತ್ತದೆ. ಮೃತ್ಯುದೇವತೆಯ ಕಣ್ಣುಗಳಿಂದ ಉದುರಿದ ಅಶ್ರುಬಿಂದುಗಳೇ ವ್ಯಾಧಿಗಳು. ಆ ವ್ಯಾಧಿಗಳು ಕಾಲವು ಸನ್ನಿಹಿತವಾದಾಗ ಮನುಷ್ಯರನ್ನು ಆಶ್ರಯಿಸಿ ಸಂಹಾರಮಾಡುತ್ತವೆ."

೨೫೪ನೆಯ ಅಧ್ಯಾಯವು ಮುಗಿಯಿತು.

೨೫೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಧರ್ಮಾಧರ್ಮಗಳ ಸ್ವರೂಪನಿರ್ಣಯ

ಮಹಾರಾಜ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಇಮೇ ವೈ ಮಾನವಾಃ ಸರ್ವೇ ಧರ್ಮಂ ಪ್ರತಿ ವಿಶಙ್ಕಿತಾಃ ।
ಕೋಽಯಂ ಧರ್ಮಃ ಕುತೋ ಧರ್ಮಸ್ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹನೇ! ಈ ಎಲ್ಲ ಮಾನವರೂ ಸಾಮಾನ್ಯವಾಗಿ ಧರ್ಮದ ವಿಷಯದಲ್ಲಿ ಸಂದೇಹವುಳ್ಳವರೇ ಆಗಿದ್ದಾರೆ. ('ಧರ್ಮ'–ಎಂದರೆ ಯಾವುದು–ಎಂಬ ಬಗೆಗೆ ಯಾರಿಗೂ ಖಚಿತವಾದ ಅಭಿಪ್ರಾಯವಿರುವುದಿಲ್ಲ.) ಆ ಧರ್ಮವೆಂಬುದು ಯಾವುದು? ಅದು ಎಲ್ಲಿಂದ ಬಂದಿತು?–ಈ ವಿಷಯವನ್ನು ನನಗೆ ಹೇಳು.

ಧರ್ಮಸ್ತ್ವಯಮಿಹಾರ್ಥಃ ಕಿಮಮುತ್ರಾರ್ಥೋಽಪಿ ವಾ ಭವೇತ್ ।
ಉಭಯಾರ್ಥೋ ಹಿ ವಾ ಧರ್ಮಸ್ತನ್ಮೇ ಬ್ರೂಹಿ ಪಿತಾಮಹ ॥೨॥

ಐಹಿಕಪ್ರಯೋಜನವನ್ನು ಒದಗಿಸಿಕೊಡುವ ಕರ್ಮಗಳು 'ಧರ್ಮ' ಎಂಬ ಹೆಸರಿನಿಂದ ಕರೆಯಲ್ಪಡುವುದೇ? ಪಾರಲೌಕಿಕವಾದ ಪ್ರಯೋಜನ ವನ್ನು ಒದಗಿಸಿಕೊಡುವ ಕರ್ಮಗಳು 'ಧರ್ಮ'–ಎಂಬ ಸಂಜ್ಞೆಯನ್ನು ಪಡೆಯುತ್ತವೆಯೇ? ಅಥವಾ ಐಹಿಕ ಮತ್ತು ಆಮುಷ್ಮಿಕವಾದ ಎರಡು ಪ್ರಯೋಜನಗಳನ್ನೂ ಮಾಡಿಕೊಡುವ ಕರ್ಮಗಳಿಗೆ 'ಧರ್ಮ'–ಎಂಬ ಸಂಜ್ಞೆಯೇ? ಈ ವಿಷಯವನ್ನು ನನಗೆ ವಿವರಿಸಿ ಹೇಳು."

ಭೀಷ್ಮನು ಹೇಳುತ್ತಾನೆ :

ಸದಾಚಾರಃ ಸ್ಮೃತಿರ್ವೇದಾಸ್ತ್ರಿವಿಧಂ ಧರ್ಮಲಕ್ಷಣಮ್ ।
ಚತುರ್ಥಮರ್ಥಮಿತ್ಯಾಹುಃ ಕವಯೋ ಧರ್ಮಲಕ್ಷಣಮ್ ॥೩॥

"ಯುಧಿಷ್ಠಿರ! ಸದಾಚಾರ, ಸ್ಮೃತಿ ಮತ್ತು ವೇದಗಳು–ಇವುಗಳು ಧರ್ಮದ ಮೂರು ಲಕ್ಷಣಗಳು. ಕೆಲವು ವಿದ್ವಾಂಸರು ಅರ್ಥವನ್ನೂ ಧರ್ಮದ ನಾಲ್ಕನೆಯ ಲಕ್ಷಣವೆಂದು ಹೇಳುತ್ತಾರೆ.

ಅಪಿ ಹ್ಯುಕ್ತಾನಿ ಧರ್ಮಾಣಿ ವ್ಯವಸ್ಯನ್ತ್ಯುತ್ತರಾವರೇ ।
ಲೋಕಯಾತ್ರಾರ್ಥಮೇವೇಹ ಧರ್ಮಸ್ಯ ನಿಯಮಃ ಕೃತಃ ॥೪॥

ಶಾಸ್ತ್ರಗಳಲ್ಲಿ ಹೇಳಿರುವ ಧರ್ಮಕಾರ್ಯಗಳಲ್ಲಿಯೂ–ಕೆಲವು ಪ್ರಧಾನವಾದ ಕಾರ್ಯಗಳೆಂದೂ, ಕೆಲವು ಅಷ್ಟು ಪ್ರಧಾನವಲ್ಲದ ಕಾರ್ಯಗಳೆಂದೂ–ನಿಶ್ಚಯಿಸಿರುತ್ತಾರೆ. ಲೋಕಯಾತ್ರೆಯ ನಿರ್ವಹಣಾರ್ಥವಾಗಿಯೇ (ಲೌಕಿಕಸುಖಕ್ಕಾಗಿಯೇ) ಮಹರ್ಷಿಗಳು ಈ ಲೋಕದಲ್ಲಿ ಧರ್ಮದ ಮರ್ಯಾದೆಯನ್ನು ಸ್ಥಾಪಿಸಿದ್ದಾರೆ.

ಉಭಯತ್ರ ಸುಖೋದರ್ಕ ಇಹ ಚೈವ ಪರತ್ರ ಚ ।
ಅಲಬ್ಧ್ವಾ ನಿಪುಣಂ ಧರ್ಮಂ ಪಾಪಃ ಪಾಪೇನ ಯುಜ್ಯತೇ ॥೫॥

ಧರ್ಮವನ್ನು ಪರಿಪಾಲಿಸುವವನಿಗೆ ಇಹಲೋಕ-ಪರಲೋಕಗಳೆರಡರಲ್ಲಿಯೂ ಸುಖೋದಯವುಂಟಾಗುತ್ತದೆ. ಪಾಪಿಷ್ಠನಾದ ಮನುಷ್ಯನು ವಿಚಾರಪೂರ್ವಕವಾಗಿ ಧರ್ಮವನ್ನು ಆಶ್ರಯಿಸದೆ ಪುನಃ-ಪುನಃ ಪಾಪಕರ್ಮವನ್ನೇ ಮಾಡುತ್ತಾ ದುಃಖವನ್ನು ಅನುಭವಿಸುತ್ತಾನೆ.

ನ ಚ ಪಾಪಕೃತಃ ಪಾಪಾನ್ಮುಚ್ಯನ್ತೇ ಕೇಚಿದಾಪದಿ ।
ಅಪಾಪವಾದೀ ಭವತಿ ಯಥಾ ಭವತಿ ಧರ್ಮಕೃತ್ ।
ಧರ್ಮಸ್ಯ ನಿಷ್ಠಾ ತ್ವಾಚಾರಸ್ತಮೇವಾಶ್ರಿತ್ಯ ಭೋತ್ಸ್ಯಸೇ ॥೬॥

ಪಾಪಚಾರಿಯಾದ ಮನುಷ್ಯನು ಆಪತ್ಕಾಲದಲ್ಲಿಯೂ (ಕಷ್ಟವನ್ನು ಅನುಭವಿಸುತ್ತಿರುವಾಗಲೂ) ಪಾಪಕರ್ಮಗಳನ್ನು ಬಿಡುವುದಿಲ್ಲ. ಅದೇ ರೀತಿಯಲ್ಲಿ ಧರ್ಮಕಾರ್ಯಾಸಕ್ತನು ಆಪತ್ಕಾಲದಲ್ಲಿಯೂ ಪಾಪಕಾರ್ಯ

ಗಳನ್ನು ಮಾಡುವುದಿಲ್ಲ. ಶೌಚಾಚಾರ-ಸದಾಚಾರಗಳೇ ಧರ್ಮಕ್ಕೆ ಆಧಾರ ಸ್ತಂಭಗಳಾಗಿವೆ. ಆದುದರಿಂದ, ಯುಧಿಷ್ಠಿರ! ನೀನೂ ಸದಾಚಾರ-ಶೌಚಾಚಾರಗಳನ್ನು ಆಶ್ರಯಿಸಿದರೆ ಧರ್ಮದ ನಿಜಸ್ವರೂಪವನ್ನು ತಿಳಿಯುವೆ.

ಯಥಾ ಧರ್ಮಸಮಾವಿಷ್ಟೋ ಧನಂ ಗೃಹ್ಣಾತಿ ತಸ್ಕರಃ ।
ರಮತೇ ನಿರ್ಹರಂಸ್ತೇನಃ ಪರವಿತ್ತಮರಾಜಕೇ ॥೭॥

ಕಳ್ಳನು ಧರ್ಮಕಾರ್ಯದಲ್ಲಿ ಪ್ರವೃತ್ತನಾಗಿದ್ದರೂ ಇತರರ ಧನವನ್ನು ಅಪಹರಿಸುತ್ತಿರುತ್ತಾನೆ ಮತ್ತು ಹೇಳುವವರು–ಕೇಳುವವರೇ ಇಲ್ಲದ ಅರಾಜಕತೆಯಿಂದ ಕೂಡಿರುವ ದೇಶದಲ್ಲಿ ಪರರ ಸ್ವತ್ತನ್ನು ಅಪಹರಿಸಿಯೂ ಕಳ್ಳನು ಸುಖವಾಗಿಯೇ ಇರುತ್ತಾನೆ.

ಯದಾಸ್ಯ ತದ್ಧರನ್ತ್ಯನ್ಯೇ ತದಾ ರಾಜಾನಮಿಚ್ಛತಿ ।
ತದಾ ತೇಷಾಂ ಸ್ಪೃಹಯತೇ ಯೇ ವೈ ತುಷ್ಟಾಃ ಸ್ವಕೈರ್ಧನೈಃ ॥೮॥

ಆದರೆ ಕಳ್ಳನ ಧನವನ್ನೇ ಬೇರೆ ಯಾರಾದರೂ ಅಪಹರಿಸಿದಾಗ ಆ ಕಳ್ಳನೇ ರಕ್ಷಣೆಗಾಗಿ ರಾಜನನ್ನು ಅಪೇಕ್ಷಿಸುತ್ತಾನೆ. (ಅರಾಜಕತೆಯಿದ್ದರೆ ತನಗೆ ಕಳ್ಳತನಮಾಡಲು ಸಾಧ್ಯವಾಗುವುದೆಂಬ ಭಾವನೆಯು ಆಗ ಬದಲಾಗುತ್ತದೆ.) ಆಗ ಅವನು ತಮ್ಮಲ್ಲಿರುವ ಧನದಿಂದಲೇ ತೃಪ್ತರಾಗುವವರ ಸ್ಥಿತಿಯನ್ನು ಅಪೇಕ್ಷಿಸುತ್ತಾನೆ. (ರಾಜ್ಯದಲ್ಲಿ ಒಬ್ಬರ ಧನ-ಕನಕ-ವಸ್ತು-ವಾಹನಗಳು ಸುರಕ್ಷಿತವಾಗಿರಬೇಕಾದರೆ ಬಿಗಿಯಾದ ರಾಜ್ಯಾಡಳಿತವಿರಬೇಕೆಂಬುದು ಆಗ ಕಳ್ಳನಿಗೂ ಅರಿವಾಗುತ್ತದೆ.)

ಅಭೀತಃ ಶುಚಿರಭ್ಯೇತಿ ರಾಜದ್ವಾರಮಶಙ್ಕಿತಃ ।
ನ ಹಿ ದುಶ್ಚರಿತಂ ಕಿಂಚಿದನ್ತರಾತ್ಮನಿ ಪಶ್ಯತಿ ॥೯॥

ಕಳ್ಳತನ, ಲಂಚಗುಳಿತನ, ಮೋಸ–ಇತ್ಯಾದಿಗಳಿಂದ ರಹಿತನಾದವನು ಯಾವ ವಿಧವಾದ ಶಂಕೆಯೂ ಇಲ್ಲದೆ ನಿರ್ಭಯವಾಗಿ ರಾಜನ ಅರಮನೆಯ ಬಾಗಿಲಿಗೆ ಹೋಗುತ್ತಾನೆ. ಏಕೆಂದರೆ : ಅವನು ತನ್ನ ಅಂತರಾತ್ಮನಲ್ಲಿ ಕಿಂಚಿತ್ತಾದರೂ ದೋಷವನ್ನು ಕಾಣುವುದಿಲ್ಲ.

ಸತ್ಯಸ್ಯ ವಚನಂ ಸಾಧು ನ ಸತ್ಯಾದ್ವಿದ್ಯತೇ ಪರಮ್ ।
ಸತ್ಯೇನ ವಿಧೃತಂ ಸರ್ವಂ ಸರ್ವಂ ಸತ್ಯೇ ಪ್ರತಿಷ್ಠಿತಮ್ ॥೧೦॥

ಸತ್ಯವನ್ನು ಹೇಳುವುದೇ ಸತ್ಕರ್ಮ. ಸತ್ಯವನ್ನು ಹೇಳುವುದಕ್ಕಿಂತಲೂ ಶ್ರೇಷ್ಠವಾದ ಧರ್ಮವೇ ಬೇರೊಂದಿಲ್ಲ. ಸತ್ಯವೇ ಸರ್ವವನ್ನೂ ಧರಿಸಿದೆ. ಸತ್ಯದಲ್ಲಿಯೇ ಎಲ್ಲವೂ ಪ್ರತಿಷ್ಠಿತವಾಗಿದೆ.

ಅಪಿ ಪಾಪಕೃತೋ ರೌದ್ರಾಃ ಸತ್ಯಂ ಕೃತ್ವಾ ಪೃಥಕ್ಪೃಥಕ್ ।
ಅದ್ರೋಹಮವಿಸಂವಾದಂ ಪ್ರವರ್ತನ್ತೇ ತದಾಶ್ರಯಾಃ ॥೧೧॥

ಕ್ರೂರಸ್ವಭಾವದವರಾದ ಪಾಪಿಷ್ಠರೂ ಕೂಡ ಅನೇಕಸಮಯಗಳಲ್ಲಿ ಪ್ರತ್ಯೇಕವಾಗಿ ಸತ್ಯಶಪಥವನ್ನು ಮಾಡಿ ದ್ರೋಹವಿಲ್ಲದೇ (ಅನ್ಯೋನ್ಯ ವಿವಾದವಿಲ್ಲದೆ) ಸತ್ಯವನ್ನೇ ಆಶ್ರಯಿಸಿ ನಡೆದುಕೊಳ್ಳುತ್ತಾರೆ. (ಕೆಲವು ಸಮಯಗಳಲ್ಲಿ ಸತ್ಯದ ಆಶ್ರಯವನ್ನೇ ಪಡೆದು ಅನಂತರ ಸತ್ಯಕ್ಕೆ ದ್ರೋಹವೆಸಗಿ ತಮ್ಮ ತಮ್ಮ ದುಷ್ಟಕಾರ್ಯಗಳಲ್ಲಿ ಪ್ರವೃತ್ತರಾಗುತ್ತಾರೆ. ಕಳ್ಳರೂ, ಕ್ರೂರಿಗಳೂ, ವಂಚಕರೂ ಸತ್ಯವನ್ನು ಬಿಡುವುದಿಲ್ಲ. ಅವರಿಗೂ ಸತ್ಯವು ಬೇಕೇಬೇಕಾಗುತ್ತದೆ. ಅಧಿಕಾರಿಗಳ ಕೈಗೆ ಸಿಕ್ಕಿದಾಗ ಕಳ್ಳತನ ಮಾಡುವುದಿಲ್ಲವೆಂದು ಘೋರವಾದ ಸತ್ಯಶಪಥವನ್ನೇ ಮಾಡುತ್ತಾರೆ. ಎಲ್ಲರನ್ನೂ ಧರಿಸಿ ಪೋಷಿಸುತ್ತಿರುವ ಆ ಸತ್ಯವು ತನ್ನನ್ನು ಆಶ್ರಯಿಸಿದವನನ್ನು ಕಾಪಾಡುತ್ತದೆ. ಆದರೆ ಅವರು ಆ ಸತ್ಯದ ಆಶ್ರಯದಲ್ಲಿಯೇ ಹೆಚ್ಚುಕಾಲ ಇರುವುದಿಲ್ಲ. ಸತ್ಯಕ್ಕೆ ದ್ರೋಹವೆಸಗಿ ಪುನಃ ತಮ್ಮ ಕಾರ್ಯದಲ್ಲಿ ಪ್ರವೃತ್ತರಾಗುತ್ತಾರೆ. ಸತ್ಯದೂಷಿಗಳಾದ ಅಂತಹವರಿಗೆ ಪುನಃ ದಂಡವು ತಪ್ಪಿದ್ದಲ್ಲ.)

ತೇ ಚೇನ್ಮಿಥೋಽಧೃತಿಂ ಕುರ್ಯುರ್ವಿನಶ್ಯೇಯುರಸಂಶಯಮ್ ।
ನ ಹರ್ತವ್ಯಂ ಪರಧನಮಿತಿ ಧರ್ಮಃ ಸನಾತನಃ ॥೧೨॥

ಹಾಗೆ ಕ್ರೂರಿಗಳಾದವರು ತಾವು ಪರಸ್ಪರವಾಗಿ ರಹಸ್ಯದಲ್ಲಿ ಮಾಡಿಕೊಂಡ ಸತ್ಯಪ್ರತಿಜ್ಞೆಯನ್ನು ಮುರಿದರೆ ಮುಂದೆ ಅವರು ಸತ್ಯಕ್ಕೆಸಗಿದ ದ್ರೋಹದ ಕಾರಣದಿಂದಾಗಿ ಪರಸ್ಪರವಾಗಿ ಕಾದಾಡಿ ವಿನಾಶಹೊಂದುತ್ತಾರೆ. ಯಾವುದೇ ಕಾರಣದಿಂದಲೂ ಇತರರ ಸ್ವತ್ತನ್ನು ಅಪಹರಿಸಬಾರದೆಂಬುದು ಸನಾತನಧರ್ಮವಾಗಿದೆ.

ಮನ್ಯನ್ತೇ ಬಲವನ್ತಸ್ತಂ ದುರ್ಬಲೈಃ ಸಮ್ಪ್ರವರ್ತಿತಮ್ ।
ಯದಾ ನಿಯತಿದೌರ್ಬಲ್ಯಮಥೈಷಾಮೇವ ರೋಚತೇ ॥೧೩॥

ಬಲಿಷ್ಠರಾದ ಕೆಲವರು (ಧನಬಲ-ಜನಬಲವಿದೆಯೆಂಬ ಅಹಂಕಾರದಿಂದ ನಾಸ್ತಿಕಪಂಥವನ್ನು ಆಶ್ರಯಿಸಿರುವವರು) ಧರ್ಮವೆಂಬುದು ಕೇವಲ ದುರ್ಬಲರಾದವರಿಂದ ಅನುಸರಿಸಲ್ಪಡುತಕ್ಕುದೆಂದು ಭಾವಿಸುತ್ತಾರೆ. ಆದರೆ ದೈವದ ವಿಪರಿಣಾಮದಿಂದಾಗಿ ಅಂತಹ ಆಢ್ಯರಾಗಿದ್ದವರು ದುರ್ಬಲರಾದರೆ ಆಗ ಅವರಿಗೆ ಧರ್ಮಮಾರ್ಗವೇ ರುಚಿಸುತ್ತದೆ.

ನ ಹ್ಯತ್ಯಂತಂ ಬಲವನ್ತೋ ಭವನ್ತಿ ಸುಖಿನೋಽಪಿ ವಾ ।
ತಸ್ಮಾದನಾರ್ಜವೇ ಬುದ್ಧಿರ್ನ ಕಾರ್ಯಾ ತೇ ಕದಾಚನ ॥೧೪॥

ಯುಧಿಷ್ಠಿರ! ಪ್ರಪಂಚದಲ್ಲಿ ಅತ್ಯಂತಬಲಿಷ್ಠರಾದವರು ಸುಖಿಗಳೂ ಆಗಿರುವರೆಂದು ಹೇಳಲು ಸಾಧ್ಯವಿಲ್ಲ. ಆದುದರಿಂದ ನಿನ್ನ ಬುದ್ಧಿಯು ಯಾವಾಗಲೂ ಯಾವುದೇ ಕಾರಣದಿಂದಲೂ ಕುಟಿಲತೆಯ ಕಡೆಗೆ ಹೋಗದಿರಲಿ.

ಅಸಾಧುಭ್ಯೋಽಸ್ಯ ನ ಭಯಂ ನ ಚೌರೇಭ್ಯೋ ನ ರಾಜತಃ ।
ಅಕಿಂಚಿತ್ಕಸ್ಯಚಿತ್ಕುರ್ವನ್ನಿರ್ಭಯಃ ಶುಚಿರಾವಸೇತ್ ॥೧೫॥

ಯಾರು ಯಾವನಿಗೂ ಕೆಟ್ಟುದನ್ನು ಮಾಡುವುದಿಲ್ಲವೋ ಮತ್ತು ಬಯಸುವುದೂ ಇಲ್ಲವೋ–ಅಂತಹವನಿಗೆ ದುಷ್ಟರಿಂದಾಗಲೀ, ಕಳ್ಳರಿಂದಾಗಲೀ, ರಾಜನಿಂದಾಗಲೀ ಭಯವಿರುವುದಿಲ್ಲ. ಶುದ್ಧವಾದ ಆಚಾರ-ವಿಚಾರವುಳ್ಳ ಮನುಷ್ಯನು ಯಾವಾಗಲೂ ನಿರ್ಭಯನಾಗಿರುತ್ತಾನೆ.

ಸರ್ವತಃ ಶಙ್ಕತೇ ಸ್ತೇನೋ ಮೃಗೋ ಗ್ರಾಮಮಿವೇಯಿವಾನ್ ।
ಬಹುಧಾಚರಿತಂ ಪಾಪಮನ್ಯತ್ರೈವಾನುಪಶ್ಯತಿ ॥೧೬॥

ಗ್ರಾಮಕ್ಕೆ ಬಂದ ಜಿಂಕೆಯಂತೆ ಕಳ್ಳನು ಯಾವಾಗಲೂ ಎಲ್ಲರ ವಿಷಯದಲ್ಲಿಯೂ ಸಂಶಯಪಡುತ್ತಾನೆ. ಅವನು ಇತರರ ವಿಷಯದಲ್ಲಿ ಹೇಗೆ ಪಾಪಬುದ್ಧಿಯಿಂದ ನಡೆದುಕೊಳ್ಳುವನೋ ಹಾಗೆಯೇ ತನ್ನ ವಿಷಯದಲ್ಲಿಯೂ ಇತರರು ಪಾಪಬುದ್ಧಿಯುಳ್ಳವರಾಗಿರುವರೆಂದು ಅವನು ಭಾವಿಸುತ್ತಾನೆ.

ಮುದಿತಃ ಶುಚಿರಭ್ಯೇತಿ ಸರ್ವತೋ ನಿರ್ಭಯಃ ಸದಾ ।
ನ ಹಿ ದುಶ್ಚರಿತಂ ಕಿಂಚಿದಾತ್ಮನೋಽನ್ಯೇಷು ಪಶ್ಯತಿ ॥೧೭॥

ಆಚಾರ-ವಿಚಾರಗಳಲ್ಲಿ ಶುದ್ಧನಾಗಿರುವವನು ಎಲ್ಲರಿಂದಲೂ ಗೌರವವನ್ನು ಪಡೆಯುತ್ತಾನೆ. ಸದಾ ಪ್ರಸನ್ನಚಿತ್ತನಾಗಿಯೂ ಭಯರಹಿತನಾಗಿಯೂ ಇರುತ್ತಾನೆ. ತನ್ನಲ್ಲಿರಬಹುದಾದ ಅತ್ಯಲ್ಪವಾದ ಕೆಟ್ಟ ನಡತೆಯು ಬೇರೆಯವರಲ್ಲಿಯೂ ಇರುವುದೆಂದು ಅವನು ಭಾವಿಸುವುದಿಲ್ಲ.

ದಾತವ್ಯಮಿತ್ಯಯಂ ಧರ್ಮ ಉಕ್ತೋ ಭೂತಹಿತೇ ರತೈಃ ।
ತಂ ಮನ್ಯನ್ತೇ ಧನಯುತಾಃ ಕೃಪಣೈಃ ಸಮ್ಪ್ರವರ್ತಿತಮ್ ॥೧೮॥

ಎಲ್ಲ ಪ್ರಾಣಿಗಳ ಹಿತದಲ್ಲಿಯೂ ನಿರತರಾದ ಮಹಾತ್ಮರು 'ದಾನವನ್ನು ಮಾಡಬೇಕು'–ಎಂದು ಹೇಳಿ ಅದನ್ನೇ ಧರ್ಮವೆಂದೂ ಪ್ರತಿಪಾದಿಸಿದ್ದಾರೆ. ಆದರೆ ಧನವಂತರು ಈ ದಾನಧರ್ಮವು ದರಿದ್ರರಿಂದ (ತಮ್ಮ ಸ್ವಾರ್ಥ ಸಾಧನೆಗಾಗಿ) ಆರಂಭಿಸಲ್ಪಟ್ಟುದೆಂದು ಹೇಳುತ್ತಾರೆ.

ಯದಾ ನಿಯತಿಕಾರ್ಪಣ್ಯಮಥೈಷಾಮೇವ ರೋಚತೇ ।
ನ ಹ್ಯತ್ಯನ್ತಂ ಧನವನ್ತೋ ಭವನ್ತಿ ಸುಖಿನೋಽಪಿ ವಾ ॥೧೯॥

ಆದರೆ ದೌರ್ಭಾಗ್ಯವಶದಿಂದ ಆ ಧನವಂತರೇ ದರಿದ್ರರಾಗಿಬಿಟ್ಟರೆ–ಆಗ ಅವರಿಗೆ ದಾನಧರ್ಮವೇ ಚೆನ್ನಾಗಿ ಕಾಣುತ್ತದೆ. ಮೇಲಾಗಿ ಹೆಚ್ಚು ಧನವಂತರಾಗಿರುವವರು (ಅದರ ರಕ್ಷಣೆಯ ಕಾರಣದಿಂದ) ಸುಖಿಗಳೂ ಆಗಿರುವುದಿಲ್ಲ. (ಅತ್ಯಂತಧನವಂತರು ಸುಖಿಗಳಾಗಿಯೇ ಇರುವರೆಂದು ಹೇಳಲು ಸಾಧ್ಯವಿಲ್ಲ.)

ಯದನ್ಯೈರ್ವಿಹಿತಂ ನೇಚ್ಛೇದಾತ್ಮನಃ ಕರ್ಮ ಪೂರುಷಃ ।
ನ ತತ್ಪರೇಷು ಕುರ್ವೀತ ಜಾನನ್ನಪ್ರಿಯಮಾತ್ಮನಃ ॥೨೦॥

ತನಗೆ ಅಪ್ರಿಯವೆಂದು ಭಾವಿಸಿ–ಯಾವ ಕಾರ್ಯವನ್ನು ಬೇರೆಯವರು ತನ್ನ ವಿಷಯದಲ್ಲಿ ಮಾಡಬಾರದೆಂದು ಭಾವಿಸುತ್ತಾನೆಯೋ–ಅಂತಹ ಕಾರ್ಯವನ್ನು ತಾನೂ ಮತ್ತೊಬ್ಬರ ವಿಷಯದಲ್ಲಿ ಮಾಡಬಾರದು.

ಯೋಽನ್ಯಸ್ಯ ಸ್ಯಾದುಪಪತಿಃ ಸ ಕಂ ಕಿಂ ವಕ್ತುಮರ್ಹತಿ ।
ಯದನ್ಯಸ್ಯ ತತಃ ಕುರ್ಯಾನ್ನ ಮೃಷ್ಯೇದಿತಿ ಮೇ ಮತಿಃ ॥೨೧॥

ಯಾವನು ಒಬ್ಬ ವಿವಾಹಿತಳಾದ ಸ್ತ್ರೀಗೆ ಉಪಪತಿಯಾಗಿ ವ್ಯಭಿಚಾರದಲ್ಲಿ ತೊಡಗಿರುವನೋ–ಅವನು ಹಾಗೆಯೇ ವ್ಯಭಿಚಾರದಲ್ಲಿ ಪ್ರವೃತ್ತನಾದ

ಮತ್ತೊಬ್ಬನ ವಿಷಯದಲ್ಲಿ ಏನು ಹೇಳಿಯಾನು? ತಾನೇ ವ್ಯಭಿಚಾರಿಯಾಗಿದ್ದು ಮತ್ತೊಬ್ಬನನ್ನು 'ವ್ಯಭಿಚಾರೀ'–ಎಂದು ನಿಂದಿಸಿದರೆ ಅವನು ಆ ನಿಂದೆಯನ್ನು ಖಂಡಿತವಾಗಿಯೂ ಸಹಿಸಿಕೊಳ್ಳುವುದಿಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. (ವ್ಯಭಿಚಾರಿಯಲ್ಲದ ಸದಾಚಾರಿಯೊಬ್ಬನು ವ್ಯಭಿಚಾರಿಯನ್ನು ನಿಂದಿಸಲು ಅಥವಾ ಅವನಿಗೆ ಬುದ್ಧಿಹೇಳಲು ಸಮರ್ಥನೇ ಹೊರತು ಸ್ವತಃ ವ್ಯಭಿಚಾರಿಯಾದವನೇ ಮತ್ತೊಬ್ಬ ವ್ಯಭಿಚಾರಿಗೆ ಬುದ್ಧಿ ಹೇಳಲೂ ಶಕ್ಯವಿಲ್ಲ. ಅವನನ್ನು ನಿಂದಿಸಲೂ ಶಕ್ಯವಿಲ್ಲ. ಹಾಗೆ ನಿಂದಿಸಿದರೂ ಅಥವಾ ಬುದ್ಧಿಹೇಳಿದರೂ ಅದಕ್ಕೆ ಬೆಲೆಯಿಲ್ಲ.)

ಜೀವಿತುಂ ಯಃ ಸ್ವಯಂ ಚೇಚ್ಛೇತ್ಕಥಂ ಸೋಽನ್ಯಂ ಪ್ರಘಾತಯೇತ್ ।
ಯದ್ಯದಾತ್ಮನಿ ಚೇಚ್ಛೇತ ತತ್ಪರಸ್ಯಾಪಿ ಚಿನ್ತಯೇತ್ ॥೨೨॥

ಯಾವನು ತಾನು ಸ್ವತಃ ಜೀವಿಸಲು ಇಚ್ಛಿಸುವನೋ–ಅವನು ಬೇರೆಯವನನ್ನು ಹೇಗೆ ತಾನೇ ಕೊಲ್ಲುತ್ತಾನೆ? ಮನುಷ್ಯನು ತನಗೆ ಯಾವ ಸುಖ-ಸಂತೋಷಗಳನ್ನು ಇಚ್ಛಿಸುವನೋ ಅದೇ ರೀತಿಯಲ್ಲಿ ಬೇರೆಯವನಿಗೂ ಅದೇ ವಿಧವಾದ ಸುಖ-ಸಂತೋಷಗಳುಂಟಾಗಬೇಕೆಂದು ಯೋಚಿಸಬೇಕು.

ಅತಿರಿಕ್ತೈಃ ಸಂವಿಭಜೇದ್ಭೋಗೈರನ್ಯಾನಕಿಂಚನಾನ್ ।
ಏತಸ್ಮಾತ್ಕಾರಣಾದ್ಧಾತ್ರಾ ಕುಸೀದಂ ಸಮ್ಪ್ರವರ್ತಿತಮ್ ॥೨೩॥

ಮಾನವನು ತನ್ನ ಆವಶ್ಯಕತೆಗಿಂತಲೂ ಹೆಚ್ಚಾಗಿರುವ ಧನ-ಭೋಗಾದಿ ಪದಾರ್ಥಗಳನ್ನು ದರಿದ್ರರಿಗೆ ಹಂಚಿಕೊಡಬೇಕು. ದರಿದ್ರರಿಗೆ ಧನವನ್ನು ಹಂಚಿಕೊಡಬೇಕೆಂಬ ಕಾರಣದಿಂದಲೇ ಬ್ರಹ್ಮನು ಬಡ್ಡಿಗಾಗಿ ಹಣಕೊಡುವ ವೃತ್ತಿಯವರನ್ನು ಸೃಷ್ಟಿಸಿರುವನು.

ಯಸ್ಮಿಂಸ್ತು ದೇವಾಃ ಸಮಯೇ ಸಂತಿಷ್ಠೇರಂಸ್ತಥಾ ಭವೇತ್ ।
ಅಥವಾ ಲಾಭಸಮಯೇ ಸ್ಥಿತಿರ್ಧರ್ಮೇಽಪಿ ಶೋಭನಾ ॥೨೪॥

ಬಡ್ಡಿಗಾಗಿ ಹಣವನ್ನು ಕೊಟ್ಟು ತೆಗೆದುಕೊಳ್ಳುವ ಸಮಯದಲ್ಲಿ ದೇವತೆಗಳೇ ಸಾಕ್ಷೀಭೂತರಾಗಿರುತ್ತಾರೆ. ಆ ವ್ಯವಹಾರವು ಹಾಗೆಯೇ

ನಿಬಂಧನೆಗೆ ಅನುಗುಣವಾಗಿ ನಡೆಯಬೇಕು. ಬಡ್ಡಿಯಿಂದ ಲಾಭಬಂದ ಸಮಯದಲ್ಲಿ ಯಜ್ಞ-ಯಾಗಾದಿ ಧರ್ಮಕಾರ್ಯಗಳಲ್ಲಿ ಆಸಕ್ತನಾಗಿರುವುದು ಶುಭದಾಯಕವು.

ಸರ್ವಂ ಪ್ರಿಯಾಭ್ಯುಪಗತಂ ಧರ್ಮಮಾಹುರ್ಮನೀಷಿಣಃ ।
ಪಶ್ಯೈತಂ ಲಕ್ಷಣೋದ್ದೇಶಂ ಧರ್ಮಾಧರ್ಮೇ ಯುಧಿಷ್ಠಿರ ॥೨೫॥

ಯುಧಿಷ್ಠಿರ! ಎಲ್ಲರೊಡನೆಯೂ ಪ್ರೇಮಪೂರ್ವಕವಾಗಿ ವ್ಯವಹರಿಸುವುದೇ ಶ್ರೇಷ್ಠವಾದ ಧರ್ಮವೆಂದು ವಿದ್ವಾಂಸರು ಹೇಳುತ್ತಾರೆ. ಇದಕ್ಕೆ ವಿಪರೀತವಾದುದು ಅಧರ್ಮ. ಧರ್ಮಾಧರ್ಮಗಳಿಗೆ ಸಂಕ್ಷೇಪರೂಪದಲ್ಲಿರುವ ಈ ಲಕ್ಷಣವನ್ನು ನೀನು ಗಮನಿಸು.

ಲೋಕಸಂಗ್ರಹಸಂಯುಕ್ತಂ ವಿಧಾತ್ರಾ ವಿಹಿತಂ ಪುರಾ ।
ಸೂಕ್ಷ್ಮಧರ್ಮಾರ್ಥನಿಯತಂ ಸತಾಂ ಚರಿತಮುತ್ತಮಮ್ ॥೨೬॥

ವಿಧಾತೃವು ಹಿಂದೆ ಸತ್ಪುರುಷರಿಗಾಗಿ ಯಾವ ಸೂಕ್ಷ್ಮವಾದ ಧರ್ಮಾರ್ಥಗಳಿಂದ ಕೂಡಿದ ಸದಾಚಾರ-ಸದ್ವ್ಯವಹಾರಗಳನ್ನು ಗೊತ್ತುಮಾಡಿರುವನೋ–ಅದು ಲೋಕಕಲ್ಯಾಣದ ಉದ್ದೇಶದಿಂದ ಕೂಡಿದೆ. ಅದರಿಂದ ಲೋಕಕಲ್ಯಾಣವು ಸಾಧಿಸಲ್ಪಡುತ್ತದೆ.

ಧರ್ಮಲಕ್ಷಣಮಾಖ್ಯಾತಮೇತತ್ತೇ ಕುರುಸತ್ತಮ ।
ತಸ್ಮಾದನಾರ್ಜವೇ ಬುದ್ಧಿರ್ನ ತೇ ಕಾರ್ಯಾ ಕಥಂಚನ ॥೨೭॥

ಕುರುಶ್ರೇಷ್ಠನೇ! ನಾನು ನಿನಗೆ ಧರ್ಮದ ಲಕ್ಷಣಗಳನ್ನೊಳಗೊಂಡಿರುವ ಈ ಆಖ್ಯಾನವನ್ನು ಹೇಳಿದ್ದೇನೆ. ನಿನ್ನ ಬುದ್ಧಿಯು ಯಾವುದೇ ಕಾರಣದಿಂದಲೂ ಕುಟಿಲತೆಯ ಕಡೆಗೆ ಹೋಗದಿರಲಿ.”

೨೫೯ನೆಯ ಅಧ್ಯಾಯವು ಮುಗಿಯಿತು.

೨೪ನೆಯ ಸಂಪುಟವು ಮುಗಿಯಿತು.

ಹರಿಃ ಓಂ ಶ್ರೀಕೃಷ್ಣಾರ್ಪಣಮಸ್ತು
ಶ್ರೀ ಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಪ್ರಕ್ಷಿಪ್ತಗಳು

ಈ ಸಂಪುಟದಲ್ಲಿ ಅನುವಾದಿಸಿರುವ ಪಾಠವಲ್ಲದೇ ಪ್ರಕ್ಷಿಪ್ತಭಾಗಗಳೂ ಕೆಲವು ಸಂಸ್ಕರಣಗಳಲ್ಲಿ ಕಂಡುಬರುತ್ತವೆ. ಆ ಪ್ರಕ್ಷಿಪ್ತಭಾಗಗಳನ್ನು ಕೆಲವು ಆಚಾರ್ಯರು ಕೆಲವು ಕಡೆ ಉದಾಹರಿಸಿದ್ದಾರೆ. ಆದುದರಿಂದ ಆ ಭಾಗಗಳ ಸಾರಾಂಶವನ್ನು ಇಲ್ಲಿ ಕೊಡುತ್ತಿದ್ದೇವೆ.

೨೦೭ನೆಯ ಅಧ್ಯಾಯ :– ಈ ಅಧ್ಯಾಯದಲ್ಲಿ ಶ್ರೀಗೋವಿಂದನ ಮಹತ್ತ್ವವನ್ನು ಕುರಿತು ಯುಧಿಷ್ಠಿರನು ಪ್ರಶ್ನಿಸುತ್ತಾನೆ. ಶ್ರೀಕೃಷ್ಣನು ಪರಬ್ರಹ್ಮ ನೆಂಬ ಅಭಿಪ್ರಾಯದಲ್ಲಿ ಭೀಷ್ಮನು ಸೃಷ್ಟಿಯ ಕ್ರಮವನ್ನು ಹೇಳಿದ್ದಾನೆ. ಅಧ್ಯಾಯದ ಕೊನೆಯಲ್ಲಿ ಇದೇ ಅಧ್ಯಾಯಕ್ಕೆ ಸೇರಿದಂತೆ ಶ್ರೀಕೃಷ್ಣನ ಮಾಹಾತ್ಮ್ಯೆಗೆ ಸಂಬಂಧಿಸಿದಂತೆ ೨೩ ಶ್ಲೋಕಗಳು ಸೇರಿವೆ. ಇವು ಎಲ್ಲ ಪುಸ್ತಕಗಳಲ್ಲಿಯೂ ಇರುವುದಿಲ್ಲ. ಅವುಗಳ ಭಾವವನ್ನು ಇಲ್ಲಿ ಸಂಕ್ಷೇಪಿಸಿ ಕೊಡಲಾಗಿದೆ.

"ಯುಧಿಷ್ಠಿರ! ಮಹಾದೇವನಾದ, ದೇವಕೀಪುತ್ರನಾದ ಶ್ರೀಕೃಷ್ಣನು ತಪಃಸ್ವರೂಪನು. ಅವನ ಅನುಗ್ರಹದಿಂದ ದುಃಖದ ನಾಶವನ್ನು ಹೊಂದುವೆ. (ದುಃಖವು ಪರಿಹಾರವಾಗುತ್ತದೆ.) ಏಕಮಾತ್ರ ಜಗತ್ರ್ಸಷ್ಟೃವಾದ ಶ್ರೀಕೃಷ್ಣನು ಜ್ಞಾನಿಗಳಿಗೆ ಪರಮಗತಿಯಾಗಿದ್ದಾನೆ. ತಪೋರೂಪನಾದ ಶ್ರೀಕೃಷ್ಣನನ್ನೇ ಆಶ್ರಯಿಸಿ ದೇವರಾಜನಾದ ಇಂದ್ರನೂ, ಇತರದೇವತೆಗಳೂ, ಏಕಾದಶ ರುದ್ರರೂ, ಅಶ್ವಿನೀದೇವತೆಗಳೂ, ಭೋಗ ಮತ್ತು ಮುಕ್ತಿ ಇವುಗಳೆರಡರ ರಹಸ್ಯಗಳನ್ನೂ ತಿಳಿದಿರುವ ಮಹರ್ಷಿಗಳೂ ತಮ್ಮ ತಮ್ಮ ಸ್ಥಾನಗಳಲ್ಲಿ ಪ್ರತಿಷ್ಠಿತರಾಗಿರುತ್ತಾರೆ. ಈ ಶ್ರೀಕೃಷ್ಣನು ಎಲ್ಲ ಪ್ರಾಣಿಗಳ ಅಂತರಾತ್ಮನೂ ಆಗಿದ್ದಾನೆ. ನಿತ್ಯವೆಂಬ ಪದದಿಂದ ಭೂಷಿತನಾಗಿದ್ದಾನೆ. ಅವನ ಸದ್ಭಾವ ವನ್ನೂ ಮತ್ತು ಮಹತ್ತ್ವವನ್ನೂ ಕೇಳು. ಅದರಿಂದ ನಿನಗೆ ಶ್ರೀಕೃಷ್ಣತತ್ತ್ವದ ಸಮ್ಯಜ್ಜ್ಞಾನವುಂಟಾಗುತ್ತದೆ.

ಹಿಂದೆ ದೇವರ್ಷಿಗಳಾದ ನಾರದರು ಪ್ರಪಂಚದಲ್ಲಿರುವ ಸಮಸ್ತ ತೀರ್ಥಗಳನ್ನೂ ಸಂದರ್ಶಿಸುತ್ತಾ ಸಂಚರಿಸುತ್ತಿದ್ದರು. ಹಾಗೆಯೇ ಸಂಚರಿ

ಸುತ್ತಿದ್ದಾಗ ಒಮ್ಮೆ ಹಿಮವತ್ಪರ್ವತದ ಬಳಿಗೆ ಹೋಗಿ ಅಲ್ಲಿ ಸಂಚರಿಸು ತ್ತಿದ್ದಾಗ ಪದ್ಮಗಳಿಂದಲೂ–ಕನ್ನೈದಿಲೆಗಳಿಂದಲೂ ಸಮಾಕುಲವಾಗಿದ್ದ ಸರೋವರವನ್ನು ನೋಡಿದರು. ಮಹಾತೇಜಸ್ವಿಗಳಾದ ಪುರುಷಶ್ರೇಷ್ಠರಾದ ನಾರದರು ಆ ಸರೋವರದಲ್ಲಿ ಸ್ನಾನಮಾಡಿ ಭಗವಂತನ ಅದ್ಭುತ ಸ್ವರೂಪ ವನ್ನು ತಿಳಿಯುವ ಇಚ್ಛೆಯಿಂದ ಜಿತೇಂದ್ರಿಯರಾಗಿ ಮೌನವನ್ನು ಧರಿಸಿ ತಪಸ್ಸುಮಾಡುತ್ತಾ ಪರಮಾತ್ಮನನ್ನು ಸ್ತೋತ್ರಮಾಡಿದರು. ಒಂದು ನೂರು ವರ್ಷಗಳು ಕಳೆದನಂತರ ಲೋಕಗಳನ್ನು ಸೃಷ್ಟಿಸಿರುವ ವಿಶ್ವಾತ್ಮನಾದ ಭಗವಂತನು ನಾರದರ ಮೇಲಿನ ವಿಶ್ವಾಸದಿಂದಾಗಿ ಅವರ ಮುಂದೆ ಆವಿರ್ಭವಿಸಿದನು. ಹಾಗೆ ಅಲ್ಲಿಗೆ ಆಗಮಿಸಿದ, ಸಮಸ್ತಕಾರಣಗಳಿಗೂ ಕಾರಣಭೂತನಾದ, ಜಗನ್ನಾಥನಾದ ಶ್ರೀಹರಿಯ ಪಾದಗಳಿಗೆ ನಾರದರು ಜಯಕಾರವನ್ನು ಹೇಳುತ್ತಾ ತಲೆಬಾಗಿ ನಮಸ್ಕರಿಸಿದರು. ಎಲ್ಲ ದೇವತೆ ಗಳೂ ತಲೆಬಾಗಿ ನಮಸ್ಕರಿಸುತ್ತಿದ್ದುದರಿಂದ ಅವರ ತಲೆಗಳಲ್ಲಿದ್ದ ಅಂಗ ದುವು ಶ್ರೀಹರಿಯ ಪಾದಗಳ ಮೇಲೆ ಬಿದ್ದು ಅವುಗಳು ಕೆಂಪಾಗಿದ್ದುವು. ಗರುಡನ ಮೇಲೆ ಕುಳಿತಾಗ ಸತತವಾದ ಘರ್ಷಣೆಯಿಂದ ಶ್ರೀಹರಿಯ ಮೊಣ ಕಾಲುಗಳು ಜಡ್ಡುಗಟ್ಟಿ ಶೋಭಾಯಮಾನವಾಗಿ ಕಾಣುತ್ತಿದ್ದುವು. ಶ್ಯಾಮ ಸುಂದರನ ಮೇಲಿದ್ದ ಪೀತಾಂಬರವು ಬಹಳ ಶೋಭಾಯಮಾನವಾಗಿ ಕಾಣುತ್ತಿದ್ದಿತು. ಒಡ್ಯಾಣದಿಂದ ಅವನ ಕಟಿಪ್ರದೇಶವು ನಿಬದ್ಧವಾಗಿದ್ದಿತು. ಶ್ರೀಹರಿಯು ಶ್ರೀವತ್ಸಾಂಕಿತವಕ್ಷಸ್ಥಳವುಳ್ಳವನಾಗಿದ್ದನು. ಸುಮನೋಹರವಾದ ಕೌಸ್ತುಭಮಣಿಯಿಂದ ಕೂಡಿದ ಕಂಠಕವುಳ್ಳವನಾಗಿದ್ದನು. ಚಂಚಲಿಸುವ ವಿಶಾಲವಾದ ನೇತ್ರಗಳಿಂದಲೂ ಬಗ್ಗಿದ ಧನುಸ್ಸಿನಂತೆ ಡೊಂಕಾಗಿದ್ದ ಹುಬ್ಬು ಗಳಿಂದಲೂ ಕೂಡಿದ್ದು ಮಂದಸ್ಮಿತವಾದ ಮುಖಕಮಲವುಳ್ಳವನಾಗಿದ್ದನು. ನಾನಾವಿಧವಾದ ಮಣಿಗಳಿಂದಲೂ, ಫಳ-ಫಳನೆ ಹೊಳೆಯುತ್ತಿದ್ದ ವಜ್ರ ಗಳಿಂದಲೂ ಯುಕ್ತವಾಗಿದ್ದ ಕರ್ಣಕುಂಡಲಗಳನ್ನು ಧರಿಸಿದ್ದನು. ಅವನ ಶರೀರಕಾಂತಿಯು ಇಂದ್ರನೀಲಮಣಿಯ ಕಾಂತಿಗೆ ಸಮಾನವಾಗಿದ್ದಿತು. ಭುಜ ಕೀರ್ತಿಗಳಿಂದಲೂ ಕಿರೀಟದಿಂದಲೂ ಶೋಭಾಯಮಾನವಾಗಿ ಕಾಣುತ್ತಿದ್ದನು. ಇಂದ್ರಪ್ರಮುಖರಾದ ದೇವತೆಗಳಿಂದಲೂ–ಋಷಿಗಳ ಸಮೂಹಗಳಿಂದಲೂ

ಸ್ತುತಿಸಲ್ಪಡುತ್ತಿದ್ದನು. ಅಂತಹ ಶ್ರೀಮನ್ನಾರಾಯಣನಿಗೆ ನಾರದರು ಜಯ ಶಬ್ದದೊಡನೆ ಸಾಷ್ಟಾಂಗಪ್ರಣಾಮವನ್ನು ಮಾಡಿದರು.

ಶ್ರೀಯುಕ್ತನಾದ, ಸರ್ವಪ್ರಾಣಿಗಳಿಗೂ ಈಶನಾದ ಭಗವಾನ್ ಮಹಾ ವಿಷ್ಣುವು ನೆಲದ ಮೇಲೆ ದಂಡಾಕಾರವಾಗಿಯೇ ಬಿದ್ದಿದ್ದ ನಾರದರನ್ನು ಕುರಿತು ಗಂಭೀರವಾದ ಧ್ವನಿಯಿಂದ ಹೇಳಿದನು :

"ಸುವ್ರತನೇ! ನಿನಗೆ ಮಂಗಳವಾಗಲಿ. ನೀನು ಯಾವ ವರವನ್ನಾದರೂ ಕೇಳು. ನಿನ್ನ ಮನಸ್ಸಿನಲ್ಲಿ ಯಾವ ಅಭಿಲಾಷೆಯಿರುವುದೋ ಅದನ್ನು ಸ್ಪಷ್ಟವಾಗಿ ಹೇಳು. ಅದನ್ನು ನಿನಗೆ ದಯಪಾಲಿಸುತ್ತೇನೆ."

"ಪ್ರಭುವೇ! ಪ್ರಸನ್ನನಾಗು. ಜಗನ್ನಾಥನೇ! ಅಚ್ಯುತನೇ! ಹೃಷೀಕೇಶನೇ! ಶ್ರೀಹರಿಯೇ! ನಾನು ಏನನ್ನು ಹೇಳಬೇಕೆಂದಿರುವೆನೋ ಅದು ನಿನಗೆ ಈಗಾಗಲೇ ತಿಳಿದೇ ಇದೆ. ನನ್ನ ಮನಸ್ಸಿನಲ್ಲಿರುವ ಆ ವರಗಳನ್ನೇ ನಿನ್ನಿಂದ ಕೇಳಬೇಕೆಂದಿರುತ್ತೇನೆ."

ಮಹಾವಿಷ್ಣುವು ಮಂದಸ್ಮಿತನಾಗಿ ಹೇಳಿದನು :

"ನಾರದ! ಯಾರು ಶೀತೋಷ್ಣ, ಸುಖ-ದುಃಖಾದಿ ದ್ವಂದ್ವಗಳಿಂದ ರಹಿತರಾಗಿರುವರೋ, ಅಹಂಕಾರಶೂನ್ಯರಾಗಿರುವರೋ, ಪವಿತ್ರರಾಗಿರು ವರೋ, ಶುದ್ಧದೃಷ್ಟಿಯುಳ್ಳವರಾಗಿರುವರೋ–ಅವರು ನನ್ನ ಸ್ವರೂಪವನ್ನು ಯಾವಾಗಲೂ ನೋಡುತ್ತಲೇ ಇರುತ್ತಾರೆ. ನೀನು ಯಾವುದನ್ನು ನನ್ನೊಡನೆ ಹೇಳಬೇಕೆಂದಿರುವೆಯೋ ಅದನ್ನು ಅವರಿಂದಲೇ ಕೇಳಿ ತಿಳಿದುಕೋ. ನನ್ನ ಅಂಶಸಂಭೂತರಾದ, ಮಹಾಪ್ರಾಜ್ಞರಾದ ಯಾವ ಯೋಗಿಗಳಿರುವರೋ ಅಂತಹವರು ಮಾಡುವ ಅನುಗ್ರಹವನ್ನು ನನ್ನ ಅನುಗ್ರಹವೆಂದೇ ಭಾವಿಸು"–ಎಂದು ಹೇಳಿ ಜಗನ್ನಾಥನು ಅಂತರ್ಧಾನಹೊಂದಿದನು.

ಯುಧಿಷ್ಠಿರ! ಆದುದರಿಂದ ಯೋಗಿಯಾಗಿರುವ ಮಹಾವಿಷ್ಣುವಿನ ಅಂಶಭೂತನಾಗಿರುವ ದೇವಕಿಯ ಮಗನಾದ ಶ್ರೀಕೃಷ್ಣನ ಬಳಿಗೆ ನೀನೂ ಹೋಗಿ ಅವನ ಅನುಗ್ರಹವನ್ನು ಪಡೆದುಕೊ. ಆ ಗೋವಿಂದನನ್ನೇ ಆರಾಧಿಸಿ ಅನೇಕ ಮಹರ್ಷಿಗಳು ಮುಕ್ತಿಯನ್ನು ಪಡೆದುಕೊಂಡಿರುವರು. ಗೋವಿಂದನೇ

ಜಗತ್ತಿನ ಸೃಷ್ಟಿಗೆ ಕಾರಣನು. ಸಂಹಾರಕರ್ತನೂ ಅವನೇ ಆಗಿದ್ದಾನೆ. ಸಮಸ್ತವಾದ ಕಾರಣಗಳಿಗೂ ಅವನೇ ಕಾರಣನಾಗಿದ್ದಾನೆ. ನಾನು ಈ ವಿಷಯವನ್ನು ನಾರದರಿಂದಲೇ ಕೇಳಿ ತಿಳಿದೆನು. ನೀನೂ ಅವರನ್ನೇ ಕೇಳಿ ತಿಳಿದುಕೋ. ಭಗವಾನ್ ನಾರದಮುನಿಗಳು ತಾವಾಗಿಯೇ ಈ ವಿಷಯವನ್ನು ನನ್ನೊಡನೆ ಹೇಳಿದರು. ಸಮಸ್ತಸಂಸಾರಬಂಧನದ ನಿವೃತ್ತಿಗೂ ಕಾರಣನಾದ ಮಹಾವಿಷ್ಣುವನ್ನು ಯಾರು ಅನನ್ಯಮನಸ್ಕರಾಗಿ ಭಜಿಸುವರೋ–ಅವರೇ ಅತ್ಯಂತ ದುರ್ಲಭವಾದ (ಸಾಯುಜ್ಯರೂಪವಾದ) ಪದವನ್ನು ಪಡೆಯುತ್ತಾರೆ. ಹೀಗೆ ನನ್ನ ಮನಸ್ಸು ಸದಾ ಹೇಳುತ್ತಲೇ ಇರುತ್ತದೆ. ಋಷಿಗಳೂ ಹೀಗೆಯೇ ವರ್ಣಿಸುತ್ತಾರೆ.

ಅನುಸ್ಮೃತಿ

೨೦೯ನೆಯ ಅಧ್ಯಾಯದಲ್ಲಿ ನಾರದರಿಗೆ ಅನುಸ್ಮೃತಿಯ ಸ್ತೋತ್ರದ ಉಪದೇಶವೆಂಬ ಪ್ರತ್ಯೇಕವಾದ ಪ್ರಕರಣವೇ ಇದೆ. ಮಹಾಭಾರತದ ಪಂಚರತ್ನಗಳಲ್ಲಿ ಅನುಸ್ಮೃತಿಯೂ ಒಂದಾಗಿದೆ. ಆದರೆ ಇದು ನೀಲಕಂಠರು ವ್ಯಾಖ್ಯಾನಿಸಿರುವ ಪುಸ್ತಕದಲ್ಲಾಗಲೀ, ಭಂ. ರಿ. ಇನ್‌ಸ್ಟಿಟ್ಯೂಟಿನವರ ಪುಸ್ತಕದಲ್ಲಾಗಲೀ ಇರುವುದಿಲ್ಲ. ಅವರು ಇದನ್ನು ಪ್ರಕ್ಷಿಪ್ತವೆಂದು ಭಾವಿಸಿದ್ದಾರೆ. ಇಲ್ಲಿ ಮಹಾವಿಷ್ಣುವಿನ ಸ್ತೋತ್ರಸಮುಚ್ಚಯವೇ ಇರುವುದರಿಂದ ಯಥಾವತ್ತಾಗಿ ಕೊಡಲಾಗಿದೆ.

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

“ಪಿತಾಮಹ! ಮೋಕ್ಷದ ಅಭಿಲಾಷೆಯುಳ್ಳ ತತ್ತ್ವದರ್ಶಿಗಳು ಮರಣಸಮಯದಲ್ಲಿ ಯಾವ ಮಂತ್ರವನ್ನು ಜಪಿಸಬೇಕು? ಮರಣವು ಸನ್ನಿಹಿತವಾದಾಗ ಯಾವುದನ್ನು ಸ್ಮರಣೆಮಾಡಿದರೆ ಮನುಷ್ಯನು ಪರಮಸಿದ್ಧಿಯನ್ನು ಹೊಂದುತ್ತಾನೆ?”

“ಯುಧಿಷ್ಠಿರ! ನೀನು ಯುಕ್ತಿಯುಕ್ತವಾದ ಮತ್ತು ಸೂಕ್ಷ್ಮವಾದ ಪ್ರಶ್ನೆಯನ್ನೇ ಕೇಳಿರುವೆ. ಹಿಂದೆ ನಾರದರಿಂದ ಕೇಳಿದ್ದ ವಿಷಯವನ್ನೇ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು. ಹಿಂದೆ ಶ್ರೀವತ್ಸಾಂಕನಾದ, ಜಗತ್ತಿಗೆ ಬೀಜಪ್ರಾಯನಾದ, ಅನಂತನಾದ, ಲೋಕಸಾಕ್ಷಿಯಾದ ನಾರಾಯಣನನ್ನು ನಾರದರು ಪ್ರಶ್ನಿಸಿದರು :

“ಭಗವನ್! ಭೂತಕ್ಕೂ ಭವಿಷ್ಯಕ್ಕೂ ಈಶನಾದವನೇ! ನೀನು ಅವಿನಾಶಿಯೆಂದೂ, ಪರಬ್ರಹ್ಮನೆಂದೂ, ನಿರ್ಗುಣನೆಂದೂ, ಅಜ್ಞಾನಾಂಧ ಕಾರಕ್ಕೆ ಅತೀತನಾದವನೆಂದೂ, ವಿದ್ಯಾಸ್ವರೂಪನೆಂದೂ, ಪರಂಧಾಮ ನೆಂದೂ, ಬ್ರಹ್ಮನೇ ಮೊದಲಾದವರ ಉತ್ಪತ್ತಿಸ್ಥಾನವಾದ ಕಮಲಕ್ಕೆ ಜನಕ ನೆಂದೂ–ಶ್ರದ್ಧಾವಂತರಾದ ಜಿತೇಂದ್ರಿಯರಾದ ಮಹರ್ಷಿಗಳು ಹೇಳುತ್ತಾರೆ. ಮೋಕ್ಷಾಭಿಲಾಷಿಗಳಾದ ಭಕ್ತರಾದ ಯೋಗಿಗಳು (ಅಂತ್ಯಕಾಲದಲ್ಲಿ) ನಿನ್ನನ್ನು ಹೇಗೆ ಧ್ಯಾನಿಸಬೇಕು? ಮನುಷ್ಯರು ಪ್ರತಿನಿತ್ಯವೂ ಬೆಳಗಿನಲ್ಲೆದ್ದು ಯಾವ ಮಂತ್ರವನ್ನು ಅನುದಿನವೂ ಜಪಿಸಬೇಕು? ಯೋಗಿಯು ಯಾವ ರೀತಿಯಲ್ಲಿ ನಿರಂತರವಾಗಿ ಧ್ಯಾನಮಾಡಬೇಕು?”

“ನಾರದ! ನಾನು ಹರ್ಷದಿಂದ ಈ ದಿವ್ಯವಾದ ಅನುಸ್ಮೃತಿಯನ್ನು ನಿನಗೆ ಹೇಳುತ್ತೇನೆ. ಮರಣಕಾಲದಲ್ಲಿ ಇದನ್ನು ಸ್ಮರಣೆಮಾಡುವುದರಿಂದ ಮನುಷ್ಯನು ನನ್ನ ಭಾವವನ್ನೇ ಹೊಂದುತ್ತಾನೆ.

ಓಙ್ಕಾರಮಗ್ರತಃ ಕೃತ್ವಾ ಮಾಂ ನಮಸ್ಕೃತ್ಯ ನಾರದ ।
ಏಕಾಗ್ರಃ ಪ್ರಯತೋ ಭೂತ್ವಾ ಇದಂ ಮನ್ತ್ರಮುದೀರಯೇತ್ ।
ಓಂ ನಮೋ ಭಗವತೇ ವಾಸುದೇವಾಯೇತಿ ॥

ಮೊದಲು ಓಂಕಾರವನ್ನು ಉಚ್ಚರಿಸಿ ನನಗೆ ನಮಸ್ಕಾರವನ್ನು ಮಾಡ ಬೇಕು. ಪ್ರಯತ್ನಪೂರ್ವಕವಾಗಿ ಬುದ್ಧಿಯನ್ನು ಏಕಾಗ್ರಗೊಳಿಸಿ “ಓಂ ನಮೋ ಭಗವತೇ ವಾಸುದೇವಾಯ”–ಎಂಬ ಈ ಮಂತ್ರವನ್ನು ಹೇಳಬೇಕು.

ಶ್ರೀಮನ್ನಾರಾಯಣನು ಹೀಗೆ ಹೇಳಿದೊಡನೆಯೇ ನಾರದರು ಬದ್ಧಾಂಜಲಿಯಾಗಿ ಪ್ರಣಾಮವನ್ನು ಮಾಡುತ್ತಾ ಸರ್ವದೇವೇಶ್ವರನಾದ, ಸರ್ವಾತ್ಮನಾದ, ಪ್ರಭುವಾದ, ಸರ್ವವ್ಯಾಪಿಯಾದ ಹರಿಯನ್ನು ಕುರಿತು ಹೇಳಿದರು :

ಅವ್ಯಕ್ತಂ ಶಾಶ್ವತಂ ದೇವಂ ಪ್ರಭವಂ ಪುರುಷೋತ್ತಮಮ್ ।
ಪ್ರಪದ್ಯೇ ಪ್ರಾಞ್ಜಲಿರ್ವಿಷ್ಣುಮಕ್ಷರಂ ಪರಮಂ ಪದಮ್ ॥

ಅವ್ಯಕ್ತನಾದ, ಸನಾತನನಾದ, ಎಲ್ಲರ ಉತ್ಪತ್ತಿಗೂ ಕಾರಣನಾದ,

ಪುರುಷಶ್ರೇಷ್ಠನಾದ, ಅವಿನಾಶಿಯಾದ, ಪರಮಪದಸ್ವರೂಪನಾದ ಮಹಾವಿಷ್ಣುವನ್ನು ಬದ್ಧಾಂಜಲಿಯಾಗಿ ಶರಣುಹೊಂದುತ್ತೇನೆ.

ಪುರಾಣಂ ಪ್ರಭವಂ ನಿತ್ಯಮಕ್ಷಯಂ ಲೋಕಸಾಕ್ಷಿಣಮ್ ।
ಪ್ರಪದ್ಯೇ ಪುಣ್ಡರೀಕಾಕ್ಷಮೀಶಂ ಭಕ್ತಾನುಕಮ್ಪಿನಮ್ ॥

ಪುರಾಣಪುರುಷನಾದ, ಎಲ್ಲರ ಉತ್ಪತ್ತಿಗೂ ಕಾರಣನಾದ, ನಿತ್ಯನಾದ, ಅಕ್ಷಯನಾದ, ಲೋಕಸಾಕ್ಷಿಯಾದ, ಕಮಲನೇತ್ರನಾದ, ಭಕ್ತವತ್ಸಲನಾದ ಮಹಾವಿಷ್ಣುವನ್ನು ಶರಣುಹೊಂದುತ್ತೇನೆ.

ಲೋಕನಾಥಂ ಸಹಸ್ರಾಕ್ಷಮದ್ಭುತಂ ಪರಮಂ ಪದಮ್ ।
ಭಗವನ್ತಂ ಪ್ರಪನ್ನೋಽಸ್ಮಿ ಭೂತಭವ್ಯಭವತ್ಪ್ರಭುಮ್ ॥

ಲೋಕನಾಥನಾದ, ಸಹಸ್ರಾಕ್ಷನಾದ, ಭೂತ-ಭವ್ಯ-ವರ್ತಮಾನಗಳಿಗೂ ಸ್ವಾಮಿಯಾದ, ಪರಮಪದರೂಪನಾದ ಮಹಾವಿಷ್ಣುವನ್ನು ಶರಣುಹೊಂದುತ್ತೇನೆ.

ಸ್ರಷ್ಟಾರಂ ಸರ್ವಲೋಕಾನಾಮನನ್ತಂ ವಿಶ್ವತೋಮುಖಮ್ ।
ಪದ್ಮನಾಭಂ ಹೃಷೀಕೇಶಂ ಪ್ರಪದ್ಯೇ ಸತ್ಯಮಚ್ಯುತಮ್ ॥

ಸಮಸ್ತಲೋಕಗಳ ಸ್ರಷ್ಟಾರನಾದ, ಅನಂತನಾದ, ಎಲ್ಲ ಕಡೆಗಳಲ್ಲಿಯೂ ಮುಖವನ್ನು ಹೊಂದಿರುವ, ಪದ್ಮನಾಭನಾದ, ಎಲ್ಲ ಇಂದ್ರಿಯಗಳಿಗೂ ಸ್ವಾಮಿಯಾದ, ಸತ್ಯಸ್ವರೂಪನಾದ ಅಚ್ಯುತನನ್ನು ಶರಣುಹೊಂದುತ್ತೇನೆ.

ಹಿರಣ್ಯಗರ್ಭಮಮೃತಂ ಭೂಗರ್ಭಂ ಪರತಃ ಪರಮ್ ।
ಪ್ರಭೋಃ ಪ್ರಭುಮನಾದ್ಯನ್ತಂ ಪ್ರಪದ್ಯೇ ತಂ ರವಿಪ್ರಭಮ್ ॥

ಹಿರಣ್ಯಗರ್ಭನಾದ, ಅಮೃತಸ್ವರೂಪನಾದ, ಭೂಮಿಯನ್ನು ಗರ್ಭದಲ್ಲಿ ಧರಿಸಿರುವ, ಪರಾತ್ಪರನಾದ, ಪ್ರಭುವಿಗೂ ಪ್ರಭುವಾದ, ಆದಿ-ಅಂತಗಳಿಲ್ಲದ, ಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯನ್ನು ಹೊಂದಿರುವ ಶ್ರೀಹರಿಯನ್ನು ಶರಣುಹೊಂದುತ್ತೇನೆ.

ಸಹಸ್ರಶೀರ್ಷಂ ಪುರುಷಂ ಮಹರ್ಷಿಂ ತತ್ತ್ವಭಾವನಮ್ ।
ಪ್ರಪದ್ಯೇ ಸೂಕ್ಷ್ಮಮಚಲಂ ವರೇಣ್ಯಮಭಯಪ್ರದಮ್ ॥

ಸಾವಿರ ತಲೆಗಳನ್ನು ಹೊಂದಿರುವ, ಪರಮಪುರುಷನಾದ, ತತ್ತ್ವ ಚಿಂತಕನಾದ, ಮಹರ್ಷಿಯ ಸ್ವರೂಪದಲ್ಲಿರುವ, ಸೂಕ್ಷ್ಮಾತಿಸೂಕ್ಷ್ಮನಾದ, ಸ್ಥಿರನಾದ, ಶ್ರೇಷ್ಠನಾದ, ಅಭಯಪ್ರದನಾದ ಮಹಾವಿಷ್ಣುವನ್ನು ಶರಣು ಹೊಂದುತ್ತೇನೆ.

ನಾರಾಯಣಂ ಪುರಾಣರ್ಷಿಂ ಯೋಗಾತ್ಮಾನಂ ಸನಾತನಮ್ ।
ಸಂಸ್ಥಾನಂ ಸರ್ವತತ್ತ್ವಾನಾಂ ಪ್ರಪದ್ಯೇ ಧ್ರುವಮೀಶ್ವರಮ್ ॥

ಯೋಗಾತ್ಮನಾದ, ಶಾಶ್ವತನಾದ, ಸರ್ವತತ್ತ್ವಗಳಿಗೂ ಅಧಿಷ್ಠಾನನಾದ, ಅವಿನಾಶಿಯಾದ, ಈಶ್ವರಸ್ವರೂಪನಾದ, ಪುರಾತನನಾದ ನಾರಾಯಣ ಮಹರ್ಷಿಯನ್ನು ಶರಣುಹೊಂದುತ್ತೇನೆ.

ಯಃ ಪ್ರಭುಃ ಸರ್ವಭೂತಾನಾಂ ಯೇನ ಸರ್ವಮಿದಂ ತತಮ್ ।
ಚರಾಚರಗುರುರ್ವಿಷ್ಣುಃ ಸ ಮೇ ದೇವಃ ಪ್ರಸೀದತು ॥

ಯಾವನು ಎಲ್ಲ ಪ್ರಾಣಿಗಳಿಗೂ ಪ್ರಭುವಾಗಿರುವನೋ–ಯಾವನಿಂದ ಈ ಸಂಪೂರ್ಣಜಗತ್ತೂ ವ್ಯಾಪ್ತವಾಗಿರುವುದೋ–ಚರಾಚರಪ್ರಾಣಿಗಳಿಗೂ ಯಾವನು ಗುರುವಾಗಿರುವನೋ–ಅಂತಹ ಮಹಾವಿಷ್ಣುವು ನನಗೆ ಪ್ರಸನ್ನ ನಾಗಲಿ.

ಯಸ್ಮಾದುತ್ಪದ್ಯತೇ ಬ್ರಹ್ಮಾ ಪದ್ಮಯೋನಿಃ ಪಿತಾಮಹಃ ।
ಬ್ರಹ್ಮಯೋನಿರ್ಹಿ ವಿಶ್ವಾತ್ಮಾ ಸ ಮೇ ವಿಷ್ಣುಃ ಪ್ರಸೀದತು ॥

ಯಾವನಿಂದ ಪದ್ಮಯೋನಿಯಾದ ಪಿತಾಮಹಬ್ರಹ್ಮನು ಹುಟ್ಟಿದನೋ, ಯಾವನು ಬ್ರಹ್ಮಕ್ಕೂ ಮತ್ತು ವೇದಗಳಿಗೂ ಯೋನಿಯೋ ಮತ್ತು ವಿಶ್ವಾತ್ಮನೋ–ಅಂತಹ ಮಹಾವಿಷ್ಣುವು ನನಗೆ ಪ್ರಸನ್ನನಾಗಲಿ.

ಯಃ ಪುರಾ ಪ್ರಲಯೇ ಪ್ರಾಪ್ತೇ ನಷ್ಟೇ ಸ್ಥಾವರಜಙ್ಗಮೇ ।
ಬ್ರಹ್ಮಾದಿಷು ಪ್ರಲೀನೇಷು ನಷ್ಟೇ ಲೋಕೇ ಪರಾವರೇ ॥
ಆಭೂತಸಮ್ಪ್ಲವೇ ಚೈವ ಪ್ರಲೀನೇ ಪ್ರಕೃತೌ ಮಹಾನ್ ।
ಏಕಸ್ತಿಷ್ಠತಿ ವಿಶ್ವಾತ್ಮಾ ಸ ಮೇ ವಿಷ್ಣುಃ ಪ್ರಸೀದತು ॥

ಹಿಂದೆ ಪ್ರಳಯವು ಪ್ರಾಪ್ತವಾದಾಗ ಚರಾಚರಗಳೆಲ್ಲವೂ ನಷ್ಟವಾಗಿ ಹೋದುವು. ಬ್ರಹ್ಮಾದಿ ದೇವತೆಗಳೆಲ್ಲರೂ ಲಯವಾಗಿ ಹೋದರು. ಲೋಕ

ದಲ್ಲಿರುವ ಅತಿ ದೊಡ್ಡದಾದ ಮತ್ತು ಅತಿ ಸಣ್ಣದಾದ ವಸ್ತುಗಳೂ ನಷ್ಟವಾಗಿ ಹೋದುವು. ಸಂಪೂರ್ಣಭೂತಸಮುದಾಯಗಳೂ ಕ್ರಮವಾಗಿ ಲಯವನ್ನು ಹೊಂದಿ ಪ್ರಕೃತಿಯೂ ಕೂಡ ಮಹತ್ತತ್ತ್ವದಲ್ಲಿ ಲೀನವಾಗಿ ಹೋಯಿತು. ಆ ಸಮಯದಲ್ಲಿ ವಿಶ್ವಾತ್ಮನೊಬ್ಬನೇ ಏಕಾಕಿಯಾಗಿ ಉಳಿದಿದ್ದನು. ಅಂತಹ ಮಹಾವಿಷ್ಣುವು ನನಗೆ ಪ್ರಸನ್ನನಾಗಲಿ.

ಚತುರ್ಭಿಶ್ಚ ಚತುರ್ಭಿಶ್ಚ ದ್ವಾಭ್ಯಾಂ ಪಞ್ಚಭಿರೇವ ಚ ।
ಹೂಯತೇ ಚ ಪುನರ್ದ್ವಾಭ್ಯಾಂ ಸ ಮೇ ವಿಷ್ಣುಃ ಪ್ರಸೀದತು ॥

ಆಶ್ರಾವಯ ಎಂಬ ನಾಲ್ಕು ಅಕ್ಷರಗಳಿಂದಲೂ, ಅಸ್ತು ಶ್ರೌಷಟ್ ಎಂಬ ನಾಲ್ಕು ಅಕ್ಷರಗಳಿಂದಲೂ 'ಯಜ' ಎಂಬ ಎರಡು ಅಕ್ಷರಗಳಿಂದಲೂ, 'ಯೇ ಯಜಾಮಹೇ' ಎಂಬ ಐದು ಅಕ್ಷರಗಳಿಂದಲೂ, 'ವಷಟ್'–ಎಂಬ ಎರಡು ಅಕ್ಷರಗಳಿಂದಲೂ ಕೂಡಿದ ಮಂತ್ರದಿಂದ ಯಾವನಿಗೆ ಆಹುತಿಯನ್ನು ಕೊಡುತ್ತಾರೆಯೋ–ಅಂತಹ ಮಹಾವಿಷ್ಣುವು ನನಗೆ ಪ್ರಸನ್ನನಾಗಲಿ.

ಪರ್ಜನ್ಯಃ ಪೃಥಿವೀ ಸಸ್ಯಂ ಕಾಲೋ ಧರ್ಮಃ ಕ್ರಿಯಾಕ್ರಿಯೇ ।
ಗುಣಾಕರಃ ಸ ಮೇ ಬಭ್ರುರ್ವಾಸುದೇವಃ ಪ್ರಸೀದತು ॥

ಮೇಘ, ಪೃಥಿವೀ, ಸಸ್ಯ, ಕಾಲ, ಧರ್ಮ, ಕರ್ಮ ಮತ್ತು ಕರ್ಮಾಭಾವ –ಈ ಎಲ್ಲವೂ ಯಾವನಿಗೆ ಗುಣಗಳಾಗಿರುವುವೋ ಅಂತಹ ಶ್ಯಾಮಲವರ್ಣನಾದ ವಾಸುದೇವನು ನನಗೆ ಪ್ರಸನ್ನನಾಗಲಿ.

ಅಗ್ನೀಷೋಮಾರ್ಕತಾರಾಣಾಂ ಬ್ರಹ್ಮರುದ್ರೇನ್ದ್ರಯೋಗಿನಾಮ್ ।
ಯಸ್ತೇಜಯತಿ ತೇಜಾಂಸಿ ಸ ಮೇ ವಿಷ್ಣುಃ ಪ್ರಸೀದತು ॥

ಯಾರು ಅಗ್ನಿ, ಚಂದ್ರ, ತಾರಾಗಣಗಳು, ಬ್ರಹ್ಮ ರುದ್ರ, ಇಂದ್ರ ಮತ್ತು ಯೋಗಿಗಳ ತೇಜಸ್ಸನ್ನು ಉದ್ದೀಪನಗೊಳಿಸುವನೋ–ಅಂತಹ ಮಹಾ ವಿಷ್ಣುವು ನನಗೆ ಪ್ರಸನ್ನನಾಗಲಿ.

ಯೋಗಾವಾಸ ನಮಸ್ತುಭ್ಯಂ ಸರ್ವಾವಾಸ ವರಪ್ರದ ।
ಯಜ್ಞಗರ್ಭ ಹಿರಣ್ಯಾಙ್ಗ ಪಞ್ಚಯಜ್ಞ ನಮೋಽಸ್ತು ತೇ ॥

ಯೋಗವಿದ್ಯೆಗೆ ಆವಾಸಸ್ಥಾನನೇ! ನಿನಗೆ ನಮಸ್ಕಾರವಿರಲಿ. ಎಲ್ಲ

ರಿಗೂ ನಿವಾಸಸ್ಥಾನನೇ! ವರದಾಯಕನೇ! ಹಿರಣ್ಯಾಂಗನೇ! ಪಂಚಯಜ್ಞ ಸ್ವರೂಪನೇ! ನಿನಗೆ ನಮಸ್ಕಾರವಿರಲಿ.

ಚತುರ್ಮೂರ್ತೇ ಪರಂ ಧಾಮ ಲಕ್ಷ್ಮ್ಯಾವಾಸ ಪರಾರ್ಚಿತ ।
ಸರ್ವಾವಾಸ ನಮಸ್ತೇಽಸ್ತು ವಾಸುದೇವ ಪ್ರಧಾನಕೃತ್ ॥

ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧರೆಂಬ ನಾಲ್ಕು ಮೂರ್ತಿಗಳ ಸ್ವರೂಪನೇ! ಪರಂಧಾಮನೇ! ಲಕ್ಷ್ಮೀನಿವಾಸನೇ! ಪರಮ ಪೂಜಿತನೇ! ಸರ್ವರಿಗೂ ಆವಾಸಸ್ಥಾನನಾಗಿರುವವನೇ! ಮೂಲಪ್ರಕೃತಿಯ ಪ್ರವರ್ತಕನೇ! ವಾಸುದೇವನೇ! ನಿನಗೆ ನಮಸ್ಕಾರವಿರಲಿ.

ಅಜಸ್ತ್ವಮಗಮಃ ಪನ್ಥಾ ಹ್ಯಮೂರ್ತಿರ್ವಿಶ್ವಮೂರ್ತಿಧೃಕ್ ।
ವಿಕರ್ತಃ ಪಞ್ಚಕಾಲಜ್ಞ ನಮಸ್ತೇ ಜ್ಞಾನಸಾಗರ ॥

ನೀನು ಜನ್ಮರಹಿತನು ; ಅಗಮ್ಯಮಾರ್ಗನು ; ನಿರಾಕಾರನು ; ಜಗತ್ತನ್ನೇ ಆಕಾರವನ್ನಾಗಿ ಹೊಂದಿರುವವನು ; ಸಂಹಾರಕನು ; ಪ್ರಾತಃಕಾಲ, ಸಂಗವ, ಮಧ್ಯಾಹ್ನ, ಅಪರಾಹ್ಣ ಮತ್ತು ಸಾಯಾಹ್ನ–ಈ ಐದು ಕಾಲ ಗಳನ್ನೂ ತಿಳಿದಿರತಕ್ಕವನು ; ಜ್ಞಾನಸಾಗರನು. ಅಂತಹ ನಿನಗೆ ನಮಸ್ಕಾರ ವಿರಲಿ.

ಅವ್ಯಕ್ತಾದ್ವ್ಯಕ್ತಮುತ್ಪನ್ನಂ ವ್ಯಕ್ತಾದ್ಯಸ್ತು ಪರೋಽಕ್ಷರಃ ।
ಯಸ್ಮಾತ್ಪರತರಂ ನಾಸ್ತಿ ತಮಸ್ಮಿ ಶರಣಂ ಗತಃ ॥

ಅವ್ಯಕ್ತನಾದ ಪರಮಾತ್ಮನಿಂದ ವ್ಯಕ್ತವಾದ ಈ ಜಗತ್ತು ಹುಟ್ಟಿದೆ. ಆದುದರಿಂದಲೇ ವ್ಯಕ್ತವಾದ ಪ್ರಕೃತಿಗಿಂತಲೂ ಪರಮಾತ್ಮನು ಶ್ರೇಷ್ಠನಾದವನು ಮತ್ತು ಅವಿನಾಶಿಯು. ಪರಮಾತ್ಮನಿಗಿಂತಲೂ ಶ್ರೇಷ್ಠರಾದವರು ಬೇರೆ ಯಾರೂ ಇರುವುದಿಲ್ಲ. ಅಂತಹ ಪರಮಾತ್ಮನಲ್ಲಿ ಶರಣಾಗತನಾಗಿದ್ದೇನೆ.

ನ ಪ್ರಧಾನೋ ನ ಚ ಮಹಾನ್ಪುರುಷಶ್ಚೇತನೋ ಹ್ಯಜಃ ।
ಅನಯೋರ್ಯಃ ಪರತರಃ ತಮಸ್ಮಿ ಶರಣಂ ಗತಃ ॥

ಪ್ರಕೃತಿ ಮತ್ತು ಮಹಾತತ್ತ್ವ–ಈ ಎರಡೂ ಜಡವಸ್ತುಗಳಾಗಿವೆ. ಪುರುಷನು ಚೇತನನೂ ಜನ್ಮರಹಿತನೂ ಆಗಿದ್ದಾನೆ. ಈ ಕ್ಷರ ಮತ್ತು

ಅಕ್ಷರಪುರುಷರಿಗಿಂತಲೂ ಯಾವನು ಉತ್ಕೃಷ್ಟನೋ ಮತ್ತು ವಿಲಕ್ಷಣನೋ ಅಂತಹ ಭಗವಂತನಾದ ಪುರುಷೋತ್ತಮನಲ್ಲಿ ಶರಣಾಗಿದ್ದೇನೆ.

ಚಿನ್ತಯನ್ತೋ ಹಿ ಯಂ ನಿತ್ಯಂ ಬ್ರಹ್ಮೇಶಾನಾದಯಃ ಪ್ರಭುಮ್ ।
ನಿಶ್ಚಯಂ ನಾಧಿಗಚ್ಛನ್ತಿ ತಮಸ್ಮಿ ಶರಣಂ ಗತಃ ॥

ಬ್ರಹ್ಮ ಮತ್ತು ಈಶಾನರೇ ಮೊದಲಾದ ದೇವತೆಗಳು ಯಾವ ಮಹಾ ಪ್ರಭುವನ್ನು ಅನುದಿನವೂ ಧ್ಯಾನಮಾಡುತ್ತಿದ್ದರೂ ಅವನ ನಿಜಸ್ವರೂಪವನ್ನು ತಿಳಿದುಕೊಳ್ಳಲಾರರೋ–ಅಂತಹ ಪರಮೇಶ್ವರನಲ್ಲಿ ಶರಣಾಗತನಾಗಿದ್ದೇನೆ.

ಜಿತೇನ್ದ್ರಿಯಾ ಮಹಾತ್ಮಾನೋ ಜ್ಞಾನಧ್ಯಾನಪರಾಯಣಾಃ ।
ಯಂ ಪ್ರಾಪ್ಯ ನ ನಿವರ್ತನ್ತೇ ತಮಸ್ಮಿ ಶರಣಂ ಗತಃ ॥

ಜ್ಞಾನಿಗಳಾದ ಮತ್ತು ಧ್ಯಾನಪರಾಯಣರಾದ, ಜಿತೇಂದ್ರಿಯರಾದ ಮಹಾತ್ಮರು ಯಾವನನ್ನು ಹೊಂದಿದನಂತರ ಪುನಃ ಸಂಸಾರಕ್ಕೆ ಹಿಂದಿರುಗುವುದಿಲ್ಲವೋ–ಅಂತಹ ಮಹಾವಿಷ್ಣುವಿನಲ್ಲಿ ಶರಣಾಗತನಾಗಿದ್ದೇನೆ.

ಏಕಾಂಶೇನ ಜಗತ್ಸರ್ವಮವಷ್ಟಭ್ಯ ವಿಭುಃ ಸ್ಥಿತಃ ।
ಅಗ್ರಾಹ್ಯೋ ನಿರ್ಗುಣೋ ನಿತ್ಯಸ್ತಮಸ್ಮಿ ಶರಣಂ ಗತಃ ॥

ಸರ್ವವ್ಯಾಪಿಯಾದ ಪರಮೇಶ್ವರನು ಈ ಸಂಪೂರ್ಣಜಗತ್ತನ್ನೂ ತನ್ನ ಒಂದೇ ಅಂಶದಿಂದ ಧಾರಣೆಮಾಡಿಕೊಂಡು ನಿಂತಿದ್ದಾನೆ. ಅವನು ಇಂದ್ರಿಯಗಳಿಗೆ ಸಿಕ್ಕತಕ್ಕವನಲ್ಲ. ನಿರ್ಗುಣನು ಮತ್ತು ನಿತ್ಯನು. ಅಂತಹ ಪರಬ್ರಹ್ಮಪರಮಾತ್ಮನಲ್ಲಿ ಶರಣಾಗತನಾಗಿದ್ದೇನೆ.

ಸೋಮಾರ್ಕಾಗ್ನಿಮಯಂ ತೇಜೋ ಯಾ ಚ ತಾರಾಮಯೀ ದ್ಯುತಿಃ ।
ದಿವಿ ಸಂಜಾಯತೇ ಯೋಽಯಂ ಸ ಮಹಾತ್ಮಾ ಪ್ರಸೀದತು ॥

ಆಕಾಶದಲ್ಲಿ ಯಾವ ಸೂರ್ಯ-ಚಂದ್ರರ ತೇಜಸ್ಸು ಪ್ರಕಟವಾಗುವುದೋ, ನಕ್ಷತ್ರಗಳ ಪ್ರಕಾಶವು ಪ್ರಕಟವಾಗುವುದೋ–ಆ ಎಲ್ಲ ತೇಜಃ ಪ್ರಕಾಶಗಳೂ ವಾಸುದೇವನದೇ ಆಗಿದೆ. ಅಂತಹ ಪರಮಾತ್ಮನು ನನಗೆ ಪ್ರಸನ್ನನಾಗಲಿ.

ಗುಣಾದಿರ್ನಿರ್ಗುಣಶ್ಚಾದ್ಯೋ ಲಕ್ಷ್ಮೀವಾಂಶ್ಚೇತನೋ ಹ್ಯಜಃ ।
ಸೂಕ್ಷ್ಮಃ ಸರ್ವಗತೋ ಯೋಗೀ ಸ ಮಹಾತ್ಮಾ ಪ್ರಸೀದತು ॥

ಯಾವನು ಸಮಸ್ತಗುಣಗಳಿಗೂ ಆದಿಕಾರಣನೋ, ಆದರೂ ತಾನು ನಿರ್ಗುಣನೋ, ಆದಿಪುರುಷನೋ, ಲಕ್ಷ್ಮೀವಂತನೋ, ಚೇತನನೋ, ಜನ್ಮವಿಲ್ಲದವನೋ, ಸೂಕ್ಷ್ಮನೋ, ಸರ್ವವ್ಯಾಪಿಯೋ ಮತ್ತು ಯೋಗಿಯೋ–ಅಂತಹ ಮಹಾತ್ಮನಾದ ಪರಮಾತ್ಮನು ನನಗೆ ಪ್ರಸನ್ನನಾಗಲಿ.

ಸಾಂಖ್ಯಯೋಗಾಶ್ಚ ಯೇ ಚಾನ್ಯೇ ಸಿದ್ಧಾಶ್ಚ ಪರಮರ್ಷಯಃ ।
ಯಂ ವಿದಿತ್ವಾ ವಿಮುಚ್ಯನ್ತೇ ಸ ಮಹಾತ್ಮಾ ಪ್ರಸೀದತು ॥

ಜ್ಞಾನಯೋಗಿಗಳೂ, ಕರ್ಮಯೋಗಿಗಳೂ ಮತ್ತು ಇತರ ಸಿದ್ಧರೂ, ಪರಮರ್ಷಿಗಳೂ ಯಾವನ ನಿಜಸ್ವರೂಪವನ್ನು ತಿಳಿದು ಸಂಸಾರಬಂಧನದಿಂದ ವಿಮುಕ್ತರಾಗುವರೋ–ಅಂತಹ ಮಹಾತ್ಮನು ನನಗೆ ಪ್ರಸನ್ನನಾಗಲಿ.

ಅವ್ಯಕ್ತಃ ಸಮಧಿಷ್ಠಾತಾ ಹ್ಯಚಿನ್ತ್ಯಃ ಸದಸತ್ಪರಃ ।
ಆಸ್ಥಿತಃ ಪ್ರಕೃತಿಶ್ರೇಷ್ಠಃ ಸ ಮಹಾತ್ಮಾ ಪ್ರಸೀದತು ॥

ಯಾವನು ಅವ್ಯಕ್ತನೋ, ಎಲ್ಲರಿಗೂ ಆಶ್ರಯನೋ, ಅಚಿಂತ್ಯನೋ, ಸತ್ತು ಮತ್ತು ಅಸತ್ತುಗಳಿಗಿಂತಲೂ ವಿಲಕ್ಷಣನಾದವನೋ, ಆಧಾರರಹಿತನೋ ಪ್ರಕೃತಿಗಿಂತಲೂ ಶ್ರೇಷ್ಠನಾದವನೋ–ಅಂತಹ ಮಹಾತ್ಮನಾದ ಶ್ರೀಹರಿಯು ನನಗೆ ಪ್ರಸನ್ನನಾಗಲಿ.

ಕ್ಷೇತ್ರಜ್ಞಃ ಪಞ್ಚಧಾ ಭುಙ್ಕ್ತೇ ಪ್ರಕೃತಿಂ ಪಞ್ಚಭಿರ್ಮುಖೈಃ ।
ಮಹಾನ್ಗುಣಾಂಶ್ಚ ಯೋ ಭುಙ್ಕ್ತೇ ಸ ಮಹಾತ್ಮಾ ಪ್ರಸೀದತು ॥

ಯಾವನು ಕ್ಷೇತ್ರಜ್ಞನಾಗಿ ಜ್ಞಾನೇಂದ್ರಿಯಗಳೆಂಬ ಐದು ಮುಖಗಳ ಮೂಲಕವಾಗಿ ಪ್ರಕೃತಿಯ ಸಂಬಂಧವಾದ ಶಬ್ದಾದಿ ವಿಷಯಗಳನ್ನು ಐದು ಪ್ರಕಾರವಾಗಿ ಉಪಭೋಗಿಸುವನೋ, ತಾನು ಸತ್ತ್ವ-ರಜಸ್ತಮಗಳೆಂಬ ಮೂರು ಮಹಾಗುಣಗಳನ್ನೂ ಹೊಂದಿರುವನೋ–ಅಂತಹ ಮಹಾತ್ಮನಾದ ಪರಮಾತ್ಮನು ನನಗೆ ಪ್ರಸನ್ನನಾಗಲಿ.

ಸೂರ್ಯಮಧ್ಯೇ ಸ್ಥಿತಃ ಸೋಮಸ್ತಸ್ಯ ಮಧ್ಯೇ ಚ ಯಾ ಸ್ಥಿತಾ ।
ಭೂತಬಾಹ್ಯಾ ಚ ಯಾ ದೀಪ್ತಿಃ ಸ ಮಹಾತ್ಮಾ ಪ್ರಸೀದತು ॥

ಸೂರ್ಯಮಂಡಲದಲ್ಲಿರುವ ಸೋಮನ ಮಧ್ಯದಲ್ಲಿ ಅಲೌಕಿಕವಾದ

ಯಾವ ದೀಪ್ತಿಯಿರುವುದೋ ಮತ್ತು ಆ ದೀಪ್ತಿಯು ಯಾವನ ಸ್ವರೂಪವಾಗಿರುವುದೋ–ಅಂತಹ ಪರಮಾತ್ಮನು ನನಗೆ ಪ್ರಸನ್ನನಾಗಲಿ.

ನಮಸ್ತೇ ಸರ್ವತಃ ಸರ್ವ ಸರ್ವತೋಽಕ್ಷಿಶಿರೋಮುಖ ।
ನಿರ್ವಿಕಾರ ನಮಸ್ತೇಽಸ್ತು ಸಾಕ್ಷೀ ಕ್ಷೇತ್ರೇ ವ್ಯವಸ್ಥಿತಃ ॥

ಸರ್ವರೂಪನಾದ ಪರಮೇಶ್ವರನೇ! ನಿನಗೆ ಎಲ್ಲ ಕಡೆಗಳಿಂದಲೂ ನಮಸ್ಕಾರವಿರಲಿ. ಎಲ್ಲ ಕಡೆಗಳಲ್ಲಿಯೂ ಕಣ್ಣು-ತಲೆ-ಮುಖಗಳನ್ನು ಹೊಂದಿರತಕ್ಕವನೇ! ನಿರ್ವಿಕಾರನೇ! ನೀನು ಕ್ಷೇತ್ರದಲ್ಲಿ (ದೇಹದಲ್ಲಿ) ಸಾಕ್ಷಿಯ ರೂಪದಲ್ಲಿರುವೆ. ನಿನಗೆ ನಮಸ್ಕಾರವಿರಲಿ.

ಅತೀನ್ದ್ರಿಯ ನಮಸ್ತುಭ್ಯಂ ಲಿಙ್ಗೈರ್ವ್ಯಕ್ತೈರ್ನ ಮೀಯಸೇ ।
ಯೇ ಚ ತ್ವಾಂ ನಾಭಿಜಾನನ್ತಿ ಸಂಸಾರೇ ಸಂಸರನ್ತಿ ತೇ ॥

ಇಂದ್ರಿಯಾತೀತನೇ! ಪರಮೇಶ್ವರನೇ! ನಿನಗೆ ನಮಸ್ಕಾರವಿರಲಿ. ವ್ಯಕ್ತವಾದ ಚಿಹ್ನೆಗಳ ಮೂಲಕವಾಗಿ ನಿನ್ನನ್ನು ತಿಳಿಯಲಾಗುವುದಿಲ್ಲ. ಪ್ರಪಂಚದಲ್ಲಿ ನಿನ್ನನ್ನು ಯಾರು ತಿಳಿಯುವುದಿಲ್ಲವೋ–ಅವರು ಜನ್ಮ-ಮೃತ್ಯುರೂಪವಾದ ಚಕ್ರಕ್ಕೆ ಸಿಕ್ಕಿ ತಿರುಗುತ್ತಿರುತ್ತಾರೆ.

ಕಾಮಕ್ರೋಧವಿನಿರ್ಮುಕ್ತಾ ರಾಗದ್ವೇಷವಿವರ್ಜಿತಾಃ ।
ನಾನ್ಯಭಕ್ತಾ ವಿಜಾನನ್ತೀ ನ ಪುನರ್ನಾರಕಾ ದ್ವಿಜಾಃ ॥

ಕಾಮ-ಕ್ರೋಧಗಳಿಂದಲೂ, ರಾಗ-ದ್ವೇಷಗಳಿಂದಲೂ ರಹಿತರಾದ, ಅನನ್ಯಭಕ್ತರಾದವರು ಮಾತ್ರವೇ ನಿನ್ನನ್ನು ತಿಳಿಯುತ್ತಾರೆ. ಯಾವ ದ್ವಿಜರು ವಿಷಯಗಳೆಂಬ ನರಕದಲ್ಲಿ ಬಿದ್ದಿರುವರೋ–ಅವರು ನಿನ್ನನ್ನು ತಿಳಿಯ ಲಾರರು.

ಏಕಾನ್ತಿನೋ ಹಿ ನಿರ್ದ್ವನ್ದ್ವಾ ನಿರಾಶೀಃಕರ್ಮಕಾರಿಣಃ ।
ಜ್ಞಾನಾಗ್ನಿದಗ್ಧಕರ್ಮಾಣಸ್ತ್ವಾಂ ವಿಶನ್ತಿ ವಿನಿಶ್ಚಿತಾಃ ॥

ನಿನಗೆ ಯಾರು ಅನನ್ಯಭಕ್ತರಾಗಿರುವರೋ, ದ್ವಂದ್ವಗಳಿಂದ ರಹಿತ ರಾಗಿರುವರೋ, ನಿಷ್ಕಾಮನೆಯಿಂದ ಕರ್ಮಗಳನ್ನು ಮಾಡುವರೋ, ಜ್ಞಾನ ವೆಂಬ ಅಗ್ನಿಯಿಂದ ಕರ್ಮಫಲಗಳನ್ನು ಭಸ್ಮಮಾಡಿರುವರೋ, ನಿನ್ನ ವಿಷಯ

ದಲ್ಲಿ ದೃಢವಾದ ನಿಷ್ಠೆಯುಳ್ಳವರಾಗಿರುವರೋ–ಅವರು ನಿನ್ನನ್ನೇ ಪ್ರವೇಶಿಸುತ್ತಾರೆ.

ಅಶರೀರಂ ಶರೀರಸ್ಥಂ ಸಮಂ ಸರ್ವೇಷು ದೇಹಿಷು ।
ಪುಣ್ಯಪಾಪವಿನಿರ್ಮುಕ್ತಾ ಭಕ್ತಾಸ್ತ್ವಾಂ ಪ್ರವಿಶನ್ತ್ಯುತ ॥

ಅಶರೀರನಾಗಿದ್ದರೂ ಎಲ್ಲ ಪ್ರಾಣಿಗಳ ಶರೀರಗಳಲ್ಲಿಯೂ ಸಮಭಾವದಿಂದ ಇರುವ, ಎಲ್ಲ ದೇಹಿಗಳಲ್ಲಿಯೂ ಸಮಭಾವದಿಂದಿರುವ ನಿನ್ನನ್ನು ಪುಣ್ಯ-ಪಾಪಗಳಿಂದ ರಹಿತರಾದ ಭಕ್ತರು ಪ್ರವೇಶಿಸುತ್ತಾರೆ.

ಅವ್ಯಕ್ತಂ ಬುದ್ಧ್ಯಹಙ್ಕಾರಮನೋಭೂತೇನ್ದ್ರಿಯಾಣಿ ಚ ।
ತ್ವಯಿ ತಾನಿ ಚ ತೇಷು ತ್ವಂ ನ ತೇಷು ತ್ವಂ ನ ತೇ ತ್ವಯಿ ॥

ಅವ್ಯಕ್ತಪ್ರಕೃತಿ, ಬುದ್ಧಿ (ಮಹತ್ತತ್ತ್ವ), ಅಹಂಕಾರ, ಮನಸ್ಸು, ಪಂಚಮಹಾಭೂತಗಳು ಮತ್ತು ಎಲ್ಲ ಇಂದ್ರಿಯಗಳೂ ನಿನ್ನಲ್ಲಿಯೇ ಇವೆ. ಆ ಎಲ್ಲವುಗಳಲ್ಲಿಯೂ ನೀನಿರುವೆ. ಆದರೆ ವಾಸ್ತವವಾಗಿ ಅವುಗಳಲ್ಲಿ ನೀನಿಲ್ಲ ; ನಿನ್ನಲ್ಲಿ ಅವುಗಳೂ ಇಲ್ಲ.

ಏಕತ್ವಾನ್ಯತ್ವನಾನಾತ್ವಂ ಯೇ ವಿದುರ್ಯಾನ್ತಿ ತೇ ಪರಮ್ ।
ಸಮೋಽಸಿ ಸರ್ವಭೂತೇಷು ನ ತೇ ದ್ವೇಷ್ಯೋಽಸ್ತಿ ನ ಪ್ರಿಯಃ ।
ಸಮತ್ವಮಭಿಕಾಂಕ್ಷೇಽಹಂ ಭಕ್ತ್ಯಾ ವೈ ನಾನ್ಯಚೇತಸಾ ॥

ನಿನ್ನಲ್ಲಿರುವ ಏಕತ್ವ, ಅನ್ಯತ್ವ ಮತ್ತು ನಾನಾತ್ವಗಳ ರಹಸ್ಯವನ್ನು ಯಾರು ತಿಳಿದಿರುತ್ತಾರೆಯೋ–ಅವರು ಪರಮಾತ್ಮನಾದ ನಿನ್ನನ್ನು ಹೊಂದುತ್ತಾರೆ. ನೀನು ಎಲ್ಲ ಪ್ರಾಣಿಗಳಲ್ಲಿಯೂ ಸಮಭಾವದಿಂದಿರುವೆ. ನಿನಗೆ ದ್ವೇಷಿಯಾಗಲೀ-ಪ್ರಿಯನಾಗಲೀ ಯಾರೂ ಇರುವುದಿಲ್ಲ. ನಾನೂ ಕೂಡ ಅನನ್ಯ ಮನಸ್ಸಿನಿಂದ ಕೂಡಿದ ಭಕ್ತಿಯ ಮೂಲಕವಾಗಿ ಸಮತ್ವವನ್ನು ಆಶಿಸುತ್ತೇನೆ.

ಚರಾಚರಮಿದಂ ಸರ್ವಂ ಭೂತಗ್ರಾಮಂ ಚತುರ್ವಿಧಮ್ ।
ತ್ವಯಾ ತ್ವಯ್ಯೇವ ತತ್ಪ್ರೋತಂ ಸೂತ್ರೇ ಮಣಿಗಣಾ ಇವ ॥

ನಾಲ್ಕು ವಿಧವಾದ ಯಾವ ಪ್ರಾಣಿಗಳ ಸಮುದಾಯಗಳಿವೆಯೋ ಅವೆಲ್ಲವೂ ನಿನ್ನಿಂದಲೇ ವ್ಯಕ್ತವಾಗಿವೆ. ಯಾವ ರೀತಿಯಲ್ಲಿ ದಾರದಲ್ಲಿ

ಮಣಿಗಳು ಪೋಣಿಸಲ್ಪಟ್ಟಿವೆಯೋ–ಅದೇ ರೀತಿಯಲ್ಲಿ ಈ ಚರಾಚರ ಜಗತ್ತೂ ನಿನ್ನಲ್ಲಿ ಓತ-ಪ್ರೋತವಾಗಿದೆ.

ಸ್ರಷ್ಟಾ ಭೋಕ್ತಾಸಿ ಕೂಟಸ್ಥೋ ಹ್ಯತತ್ತ್ವಸ್ತತ್ತ್ವಸಂಜ್ಞಿತಃ ।
ಅಕರ್ಮಹೇತುರಚಲಃ ಪೃಥುಗಾತ್ಮನ್ಯವಸ್ಥಿತಃ ॥

ನೀನು ಜಗತ್ತಿನ ಸ್ರಷ್ಟೃವೂ, ಭೋಕ್ತೃವೂ, ಕೂಟಸ್ಥನೂ ಆಗಿರುವೆ. ತತ್ತ್ವರೂಪನಾಗಿದ್ದರೂ ಅದರಿಂದ ಸರ್ವಥಾ ವಿಲಕ್ಷಣನಾಗಿರುವೆ. ಕರ್ಮಗಳಿಗೆ ಕಾರಣನು ನೀನಲ್ಲ. ನೀನು ಅಚಲನು. ಬೇರೆ-ಬೇರೆಯ ಶರೀರಗಳಲ್ಲಿ ಬೇರೆ-ಬೇರೆಯ ಜೀವರುಗಳಲ್ಲಿ ನೀನೇ ಪ್ರತ್ಯೇಕವಾಗಿ ಉಪಸ್ಥಿತನಾಗಿರುವೆ.

ನ ತೇ ಭೂತೇಷು ಸಂಯೋಗೋ ಭೂತತತ್ತ್ವಗುಣಾತಿಗಃ ।
ಅಹಙ್ಕಾರೇಣ ಬುದ್ಧ್ಯಾ ವಾ ನ ತೇ ಯೋಗಸ್ತ್ರಿಭಿರ್ಗುಣೈಃ ॥

ವಾಸ್ತವವಾಗಿ ಪ್ರಾಣಿಗಳೊಡನೆ ನಿನಗೆ ಸಂಬಂಧವೇ ಇಲ್ಲ. ನೀನು ಭೂತ, ತತ್ತ್ವ ಮತ್ತು ಗುಣಗಳಿಗಿಂತಲೂ ಬೇರೆಯವನೇ ಆಗಿರುವೆ. ಅಹಂಕಾರ, ಬುದ್ಧಿ ಮತ್ತು ತ್ರಿಗುಣಗಳೊಡನೆ ನಿನಗೆ ಯಾವ ಸಂಬಂಧವೂ ಇಲ್ಲ.

ನ ತೇ ಧರ್ಮೋಽಸ್ತ್ಯಧರ್ಮೋ ವಾ ನಾರಮ್ಭೋ ಜನ್ಮ ವಾ ಪುನಃ ।
ಜರಾಮರಣಮೋಕ್ಷಾರ್ಥಂ ತ್ವಾಂ ಪ್ರಪನ್ನೋಽಸ್ಮಿ ಸರ್ವಶಃ ॥

ನಿನ್ನಲ್ಲಿ ಧರ್ಮವಾಗಲೀ–ಅಧರ್ಮವಾಗಲೀ ಇರುವುದಿಲ್ಲ. ಆರಂಭ (ಕರ್ಮ) ವಾಗಲೀ–ಜನ್ಮವಾಗಲೀ ನಿನಗಿರುವುದಿಲ್ಲ. ಮುಪ್ಪು-ಸಾವುಗಳ ಬಿಡುಗಡೆಗಾಗಿ ಸರ್ವಪ್ರಕಾರದಿಂದಲೂ ನಿನಗೆ ಶರಣನಾಗಿದ್ದೇನೆ.

ಈಶ್ವರೋಽಸಿ ಜಗನ್ನಾಥ ತತಃ ಪರಮ ಉಚ್ಯಸೇ ।
ಭಕ್ತಾನಾಂ ಯದ್ಧಿತಂ ದೇವ ತದ್ಧ್ಯಾಹಿ ತ್ರಿದಶೇಶ್ವರ ॥

ಜಗನ್ನಾಥನೇ! ನೀನು ಎಲ್ಲರಿಗೂ ಈಶ್ವರನಾಗಿರುವೆ. ಆದುದರಿಂದಲೇ ನಿನ್ನನ್ನು ಎಲ್ಲರೂ ಪರಮಾತ್ಮನೆನ್ನುತ್ತಾರೆ. ತ್ರಿದಶೇಶ್ವರನೇ! ಭಕ್ತರಿಗೆ ಯಾವುದು ಹಿತಕರವೋ ಅದನ್ನು ಚಿಂತಿಸಿ ಹೇಳು.

ವಿಷಯೈರಿನ್ದ್ರಿಯೈರ್ವಾಪಿ ನ ಮೇ ಭೂಯಃ ಸಮಾಗಮಃ ।
ಪೃಥಿವೀಂ ಯಾತು ಮೇ ಘ್ರಾಣಂ ಯಾತು ಮೇ ರಸನಾ ಜಲಮ್ ॥
ರೂಪಂ ಹುತಾಶನಂ ಯಾತು ಸ್ಪರ್ಶೋ ಯಾತು ಚ ಮಾರುತಮ್ ।
ಶ್ರೋತ್ರಮಾಕಾಶಮಪ್ಯೇತು ಮನೋ ವೈಕಾರಿಕಂ ಪುನಃ ॥

ವಿಷಯಗಳೊಡನೆ ಮತ್ತು ಇಂದ್ರಿಯಗಳೊಡನೆ ನನಗೆ ಪುನಃ ಸಂಬಂಧವಿಲ್ಲದಿರಲಿ. ನನ್ನ ಘ್ರಾಣೇಂದ್ರಿಯವು ಪೃಥ್ವಿಯೊಡನೆ ಸೇರಿಹೋಗಲಿ. ರಸನೇಂದ್ರಿಯವು ಜಲತತ್ತ್ವದೊಡನೆ ಸೇರಿಹೋಗಲಿ. ರೂಪವು (ನೇತ್ರವು) ಅಗ್ನಿತತ್ತ್ವದೊಡನೆ ಸೇರಿಹೋಗಲಿ. ಸ್ಪರ್ಶವು ವಾಯುತತ್ತ್ವದೊಡನೆ ಸೇರಿಹೋಗಲಿ. ಶ್ರೋತ್ರೇಂದ್ರಿಯವು ಆಕಾಶತತ್ತ್ವದೊಡನೆ ಸೇರಿಹೋಗಲಿ. ಮನಸ್ಸು ವೈಕಾರಿಕಾಹಂಕಾರದಲ್ಲಿ ಸೇರಿಹೋಗಲಿ.

ಇನ್ದ್ರಿಯಾಣ್ಯಪಿ ಸಂಯಾನ್ತು ಸ್ವಾಸು ಸ್ವಾಸು ಚ ಯೋನಿಷು ।
ಪೃಥಿವೀ ಯಾತು ಸಲಿಲಮಾಪೋಽಗ್ನಿಮನಲೋಽನಿಲಮ್ ॥
ವಾಯುರಾಕಾಶಮಪ್ಯೇತು ಮನಶ್ಚಾಕಾಶ ಏವ ಚ ।
ಅಹಙ್ಕಾರಂ ಮನೋ ಯಾತು ಮೋಹನಂ ಸರ್ವದೇಹಿನಾಮ್ ।
ಅಹಙ್ಕಾರಸ್ತತೋ ಬುದ್ಧಿಂ ಬುದ್ಧಿರವ್ಯಕ್ತಮಚ್ಯುತ ॥

ಇಂದ್ರಿಯಗಳೆಲ್ಲವೂ ಅವುಗಳ ಹುಟ್ಟಿನ ಸ್ಥಾನಗಳಲ್ಲಿಯೇ ಲೀನವಾಗಿ ಹೋಗಲಿ. ಪೃಥ್ವಿಯು ಜಲದಲ್ಲಿಯೂ, ಜಲವು ಅಗ್ನಿಯಲ್ಲಿಯೂ, ಅಗ್ನಿಯು ವಾಯುವಿನಲ್ಲಿಯೂ, ವಾಯುವು ಆಕಾಶದಲ್ಲಿಯೂ, ಆಕಾಶವು ಮನಸ್ಸಿನಲ್ಲಿಯೂ, ಮನಸ್ಸು ಸಮಸ್ತಪ್ರಾಣಿಗಳನ್ನು ವಿಮೋಹಗೊಳಿಸುವ ಅಹಂಕಾರದಲ್ಲಿಯೂ, ಅಹಂಕಾರವು ಬುದ್ಧಿಯಲ್ಲಿಯೂ, ಬುದ್ಧಿಯು ಅವ್ಯಕ್ತಪ್ರಕೃತಿಯಲ್ಲಿಯೂ ಲೀನವಾಗಲಿ.

ಪ್ರಧಾನೇ ಪ್ರಕೃತಿಂ ಯಾತೇ ಗುಣಸಾಮ್ಯೇ ವ್ಯವಸ್ಥಿತೇ ।
ವಿಯೋಗಃ ಸರ್ವಕರಣೈರ್ಗುಣಭೂತೈಶ್ಚ ಮೇ ಭವೇತ್ ॥

ತ್ರಿಗುಣಾತ್ಮಕವಾದ ಪ್ರಕೃತಿಯು ಮೂಲಪ್ರಕೃತಿಯನ್ನು ಹೊಂದಲಾಗಿ ಗುಣಸಾಮ್ಯವುಂಟಾಗುತ್ತದೆ. ಆಗ ನನಗೆ ಇಂದ್ರಿಯಗಳ ಮತ್ತು ಇಂದ್ರಿಯಾರ್ಥಗಳ ವಿಯೋಗವುಂಟಾಗುತ್ತದೆ.

ನಿಷ್ಕೈವಲ್ಯಪದಂ ತಾತ ಕಾಂಕ್ಷೇಽಹಂ ಪರಮಂ ತವ ।
ಏಕೀಭವಸ್ತ್ವಯಾ ಮೇಽಸ್ತು ನ ಮೇ ಜನ್ಮ ಭವೇತ್ಪುನಃ ॥

ನಾನು ನಿನ್ನ ಪರಮಮೋಕ್ಷವನ್ನು ಹೊಂದಬೇಕೆಂದಿರುತ್ತೇನೆ. ನಿನ್ನೊಡನೆ ನನ್ನ ಏಕತೆಯುಂಟಾಗಲಿ. ಈ ಪ್ರಪಂಚದಲ್ಲಿ ನಾನು ಪುನಃ ಹುಟ್ಟದಂತಾಗಲಿ.

ತ್ವದ್ಬುದ್ಧಿಸ್ತ್ವದ್ಗತಪ್ರಾಣಸ್ತ್ವದ್ಭಕ್ತಸ್ತ್ವತ್ಪರಾಯಣಃ ।
ತ್ವಾಮೇವಾಹಂ ಸ್ಮರಿಷ್ಯಾಮಿ ಮರಣೇ ಪರ್ಯುಪಸ್ಥಿತೇ ॥

ಮೃತ್ಯುಕಾಲವು ಸನ್ನಿಹಿತವಾದಾಗ ನಾನು ನಿನ್ನಲ್ಲಿಯೇ ಬುದ್ಧಿಯುಳ್ಳವನಾಗುತ್ತೇನೆ. ನನ್ನ ಪ್ರಾಣಗಳನ್ನು ನಿನ್ನಲ್ಲಿಯೇ ಲೀನಗೊಳಿಸುತ್ತೇನೆ. ನಿನ್ನನ್ನೇ ಸ್ಮರಿಸುತ್ತೇನೆ. ಮಹಾನುಭಾವ! ನಾನು ನಿನ್ನ ಭಕ್ತನಾಗಿದ್ದೇನೆ. ನಿನ್ನನ್ನೇ ಆಶ್ರಯವನ್ನಾಗಿ ಭಾವಿಸಿದ್ದೇನೆ.

ಪೂರ್ವದೇಹಕೃತಾ ಯೇ ಮೇ ವ್ಯಾಧಯಃ ಪ್ರವಿಶನ್ತು ಮಾಮ್ ।
ಅರ್ದಯನ್ತು ಚ ದುಃಖಾನಿ ಋಣಂ ಮೇ ಪ್ರತಿಮುಞ್ಚತು ॥

ಪೂರ್ವಜನ್ಮದಲ್ಲಿ ಮಾಡಿರಬಹುದಾದ ದುಷ್ಕರ್ಮಗಳು ಯಾವವುಂಟೋ–ಅವುಗಳ ಫಲರೂಪವಾದ ವ್ಯಾಧಿಗಳು ನನ್ನನ್ನು ಈಗಲೇ ಪ್ರವೇಶಿಸಲಿ. ಆ ವ್ಯಾಧಿಗಳು ನಾನಾಪ್ರಕಾರವಾದ ದುಃಖಗಳನ್ನುಂಟುಮಾಡಿ ನನ್ನನ್ನು ಸಂಕಟಪಡಿಸಲಿ. ನನ್ನನ್ನು ಪೂರ್ವಕರ್ಮಫಲಾನುರೂಪವಾದ ಋಣದಿಂದ ವಿಮುಕ್ತನನ್ನಾಗಿ ಮಾಡಲಿ.

ಅನುಧ್ಯಾತೋಽಪಿ ದೇವೇಶ ನ ಮೇ ಜನ್ಮ ಭವೇತ್ಪುನಃ ।
ತಸ್ಮಾದ್ಬ್ರವೀಮಿ ಕರ್ಮಾಣಿ ಋಣಂ ಮೇ ನ ಭವೇದಿತಿ ॥

ದೇವೇಶ್ವರನೇ! ನನಗೆ ಪುನರ್ಜನ್ಮವು ಪ್ರಾಪ್ತವಾಗಕೂಡದೆಂಬ ಆಶಯದಿಂದ ನಿನ್ನನ್ನು ಸ್ಮರಿಸುತ್ತಿದ್ದೇನೆ. ಆದುದರಿಂದ ಪುನಃ ಹೇಳುತ್ತಿದ್ದೇನೆ. ನನ್ನ ಕರ್ಮಗಳು ಅನುಭವದಿಂದ ನಷ್ಟವಾಗಿ ಹೋಗಲಿ. ಯಾವ ವಿಧವಾದ ಋಣವೂ ನನ್ನಲ್ಲಿ ಉಳಿದಿರುವುದು ಬೇಡ.

ಉಪತಿಷ್ಠನ್ತು ಮಾಂ ಸರ್ವೇ ವ್ಯಾಧಯಃ ಪೂರ್ವಸಂಚಿತಾಃ ।
ಆನೃಣೋ ಗನ್ತುಮಿಚ್ಛಾಮಿ ತದ್ವಿಷ್ಣೋಃ ಪರಮಂ ಪದಮ್ ॥

ಹಿಂದಿನ ಜನ್ಮದಲ್ಲಿ ಮಾಡಿದ ದುಷ್ಕರ್ಮಗಳ ಫಲದ ರೂಪದಲ್ಲಿ ವ್ಯಾಧಿಗಳು ಬಂದು ನನ್ನನ್ನು ಸ್ವೀಕರಿಸಲಿ. ಎಲ್ಲ ವಿಧವಾದ ಕರ್ಮಗಳ ಋಣಗಳಿಂದಲೂ ವಿಮುಕ್ತನಾಗಿ ಪರಮಪದವನ್ನು ಸೇರುವ ಇಚ್ಛೆಯಿಂದಿರುತ್ತೇನೆ."

ಭಗವಂತನು ಹೇಳುತ್ತಾನೆ :

ಅಹಂ ಭಗವತಸ್ತಸ್ಯ ಮಮ ಚಾಸೌ ಸನಾತನಃ ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ॥

"ನಾರದನೇ! ನಾನು ಪೂಜ್ಯನಾದ ಆ ಭಕ್ತನವನಾಗಿದ್ದೇನೆ. ನಿತ್ಯನಾದ ಆ ಭಕ್ತನೂ ಕೂಡ ನನ್ನವನು. ಅವನ ದೃಷ್ಟಿಯಿಂದ ನಾನೂ ಅದೃಶ್ಯನಾಗುವುದಿಲ್ಲ. ನನ್ನ ದೃಷ್ಟಿಯಿಂದ ಅವನೂ ಅದೃಶ್ಯನಾಗುವುದಿಲ್ಲ.

ಕರ್ಮೇನ್ದ್ರಿಯಾಣಿ ಸಂಯಮ್ಯ ಪಞ್ಚ ಬುದ್ಧೀನ್ದ್ರಿಯಾಣಿ ಚ ।
ದಶೇನ್ದ್ರಿಯಾಣಿ ಮನಸಿ ಅಹಙ್ಕಾರೇ ತಥಾ ಮನಃ ।
ಅಹಙ್ಕಾರಂ ತಥಾ ಬುದ್ಧೌ ಬುದ್ಧಿಮಾತ್ಮನಿ ಯೋಜಯೇತ್ ॥

ಐದು ಕರ್ಮೇಂದ್ರಿಯಗಳನ್ನೂ–ಐದು ಜ್ಞಾನೇಂದ್ರಿಯಗಳನ್ನೂ ನಿಯಮನಗೊಳಿಸಿ, ಆ ಹತ್ತು ಇಂದ್ರಿಯಗಳನ್ನೂ ಮನಸ್ಸಿನಲ್ಲಿ ಲೀನಗೊಳಿಸಬೇಕು. ಮನಸ್ಸನ್ನು ಅಹಂಕಾರದಲ್ಲಿ ಲೀನಗೊಳಿಸಬೇಕು. ಅಹಂಕಾರವನ್ನು ಬುದ್ಧಿಯಲ್ಲಿಯೂ, ಬುದ್ಧಿಯನ್ನು ಆತ್ಮನಲ್ಲಿಯೂ ಲೀನಗೊಳಿಸಬೇಕು.

ಯತಬುದ್ಧೀನ್ದ್ರಿಯಃ ಪಶ್ಯನ್ಬುದ್ಧ್ಯಾ ಬುದ್ಧ್ಯೇತ್ಪರಾತ್ಪರಮ್ ।
ಮಮಾಯಮಿತಿ ತಸ್ಯಾಹಂ ಯೇನ ಸರ್ವಮಿದಂ ತತಮ್ ॥

ಐದು ಇಂದ್ರಿಯಗಳನ್ನೂ ಸಂಯಮದಲ್ಲಿಟ್ಟುಕೊಂಡು ಬುದ್ಧಿಯ ಮೂಲಕವಾಗಿ ಪರಬ್ರಹ್ಮಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಪರಮೇಶ್ವರನು ನನ್ನವನೆಂದೂ, ನಾನೇ ಪರಮೇಶ್ವರನವನೆಂದೂ, ಆ ಪರಮೇಶ್ವರನಿಂದಲೇ ಎಲ್ಲವೂ ವ್ಯಾಪ್ತವಾಗಿರುವುದೆಂದೂ–ಭಾವಿಸಿಕೊಳ್ಳಬೇಕು.

ಆತ್ಮನಾತ್ಮನಿ ಸಂಯೋಜ್ಯ ಪರಮಾತ್ಮನ್ಯನುಸ್ಮರೇತ್ ।
ತತೋ ಬುದ್ಧೇಃ ಪರಂ ಬುದ್ಧ್ವಾ ಲಭತೇ ನ ಪುನರ್ಭವಮ್ ॥

ಮರಣೇ ಸಮನುಪ್ರಾಪ್ತೇ ಯಶ್ಚೈವಂ ಮಾಮನುಸ್ಮರೇತ್ ।
ಅಪಿ ಪಾಪಸಮಾಚಾರಃ ಸ ಯಾತಿ ಪರಮಾಂ ಗತಿಮ್ ॥

ತಾನೇ ತನ್ನ ಮನಸ್ಸನ್ನು ಆತ್ಮನಲ್ಲಿ ಯೋಜಿಸಿ ನಿರಂತರವಾಗಿ ಪರಮಾತ್ಮನ ಸ್ಮರಣೆಯನ್ನು ಮಾಡುತ್ತಲೇ ಇರಬೇಕು. ಅನಂತರ ಬುದ್ಧಿಗೆ ಪರನಾಗಿರುವ ಪರಮಾತ್ಮನನ್ನು ತಿಳಿದು ಸಾಧಕನು ಪುನರ್ಜನ್ಮವನ್ನು ಹೊಂದುವುದಿಲ್ಲ. ಮರಣವು ಸನ್ನಿಹಿತವಾದಾಗ ಯಾವನು ನನ್ನನ್ನು ಈ ರೀತಿಯಲ್ಲಿ ಸ್ಮರಿಸುತ್ತಿರುವನೋ–ಅವನು ಪಾಪಿಷ್ಠನೇ ಆಗಿದ್ದರೂ ಪರಮ ಗತಿಯನ್ನು ಹೊಂದುತ್ತಾನೆ.

ಓಂ ನಮೋ ಭಗವತೇ ತಸ್ಮೈ ದೇಹಿನಾಂ ಪರಮಾತ್ಮನೇ ।
ನಾರಾಯಣಾಯ ಭಕ್ತಾನಾಮೇಕನಿಷ್ಠಾಯ ಶಾಶ್ವತೇ ॥

ಸಮಸ್ತದೇಹಧಾರಿಗಳಿಗೂ ಪರಮಾತ್ಮನಾದ, ಭಕ್ತರನ್ನು ಉದ್ಧರಿಸುವುದರಲ್ಲಿ ಮಾತ್ರವೇ ನಿಷ್ಠೆಯುಳ್ಳ, ಸನಾತನನಾದ, ಓಂಕಾರಸ್ವರೂಪನಾದ, ಭಗವಂತನಾದ ನಾರಾಯಣನಿಗೆ ನಮಸ್ಕಾರಮಾಡುತ್ತೇನೆ.

ಇಮಾಮನುಸ್ಮೃತಿಂ ದಿವ್ಯಾಂ ವೈಷ್ಣವೀಂ ಸುಸಮಾಹಿತಃ ।
ಸ್ವಪನ್ವಿಬುಧ್ಯಂಶ್ಚ ಪಠನ್ಯತ್ರ ತತ್ರ ಸಮಭ್ಯಸೇತ್ ॥

ವಿಷ್ಣುವಿನ ಸಂಬಂಧವಾದ ದಿವ್ಯವಾದ ಆ ಅನುಸ್ಮೃತಿವಿದ್ಯೆಯನ್ನು ಮನುಷ್ಯನು ಏಕಾಗ್ರಚಿತ್ತನಾಗಿ ಮಲಗಿರುವಾಗಲೀ, ಎಚ್ಚರಗೊಂಡಿರುವಾಗಲೀ, ಅಧ್ಯಯನಮಾಡುತ್ತಿರುವಾಗಲೀ–ಎಲ್ಲೆಂದರಲ್ಲಿ ಜಪಿಸುತ್ತಲೇ ಇರಬೇಕು.

ಪೌರ್ಣಮಾಸ್ಯಾಮಮಾಯಾಂ ಚ ದ್ವಾದಶ್ಯಾಂ ಚ ವಿಶೇಷತಃ ।
ಶ್ರಾವಯೇಚ್ಛ್ರದ್ದಧಾನಾಂಶ್ಚ ಮದ್ಭಕ್ತಾಂಶ್ಚ ವಿಶೇಷತಃ ॥

ಹುಣ್ಣಿಮೆಯಲ್ಲಿ, ಅಮಾವಾಸ್ಯೆಯಲ್ಲಿ, ಅದರಲ್ಲಿಯೂ ವಿಶೇಷವಾಗಿ ದ್ವಾದಶಿಯಲ್ಲಿ–ಶ್ರದ್ಧಾಳುಗಳಿಗೆ ಅದರಲ್ಲಿಯೂ ವಿಶೇಷವಾಗಿ ನನ್ನ ಭಕ್ತರಿಗೆ ಇದನ್ನು ಹೇಳಬೇಕು.

ಯದ್ಯಹಙ್ಕಾರಮಾಶ್ರಿತ್ಯ ಯಜ್ಞದಾನತಪಃಕ್ರಿಯಾಃ ।
ಕುರ್ವಂಸ್ತತ್ಫಲಮಾಪ್ನೋತಿ ಪುನರಾವರ್ತನಂ ತು ತತ್ ॥

ಯಾವನಾದರೂ ಅಹಂಕಾರವನ್ನು ಆಶ್ರಯಿಸಿ (ನಾನು ಈ ಕರ್ಮವನ್ನು ಈ ಫಲದ ಲಾಭಕ್ಕಾಗಿ ಮಾಡುತ್ತೇನೆ–ಎಂಬ ಅಭಿಮಾನದಿಂದ) ಯಜ್ಞ, ದಾನ ಮತ್ತು ತಪಸ್ಸು ಇವೇ ಮುಂತಾದ ಕರ್ಮಗಳನ್ನು ಮಾಡಿದ್ದೇ ಆದರೆ–ಅದರ ಫಲವನ್ನು ಅವನು ಪಡೆದುಕೊಳ್ಳುತ್ತಾನೆ. ಆದರೆ ಕಾಮ್ಯಕರ್ಮಗಳು ಪುನರ್ಜನ್ಮಕ್ಕೆ ಕಾರಣಗಳಾಗುತ್ತವೆ.

ಅಭ್ಯರ್ಚಯನ್ಪಿತೄನ್ದೇವಾನ್ಪಠಞ್ಜುಹ್ವನ್ಬಲಿಂ ದದನ್ ।
ಜ್ವಲನ್ನಗ್ನಿಂ ಸ್ಮರೇದ್ಯೋ ಮಾಂ ಸ ಯಾತಿ ಪರಮಾಂ ಗತಿಮ್ ॥

ಯಾವನು ದೇವತೆಗಳಿಗೆ ಪೂಜೆಮಾಡುವಾಗ, ಪಿತೃಗಳಿಗೆ ತರ್ಪಣಾದಿಗಳನ್ನು ಮಾಡುವಾಗ, ಅಧ್ಯಯನಮಾಡುವಾಗ, ಹೋಮಮಾಡುವಾಗ, ವೈಶ್ವದೇವ-ಬಲಿಗಳನ್ನಿಡುವಾಗ, ಅಗ್ನಿಹೋತ್ರಮಾಡುವಾಗ ನನ್ನನ್ನು ಸ್ಮರಿಸುವನೋ (ಎಲ್ಲವನ್ನೂ ನನಗೆ ಸಮರ್ಪಣಮಾಡುವನೋ)–ಅವನು ಪರಮ ಗತಿಯನ್ನು ಹೊಂದುತ್ತಾನೆ.

ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ।
ಯಜ್ಞಂ ದಾನಂ ತಪಸ್ತಸ್ಮಾತ್ಕುರ್ಯಾದಾಶೀರ್ವಿವರ್ಜಿತಃ ॥

ಯಜ್ಞ-ದಾನ-ತಪಸ್ಸುಗಳು ಮನೀಷಿಗಳಿಗೆ ಪಾವಿತ್ರ್ಯವನ್ನುಂಟು ಮಾಡುವ ಕರ್ಮಗಳೇ ಆಗಿವೆ. ಆದುದರಿಂದ ಯಜ್ಞ-ದಾನ-ತಪಸ್ಸುಗಳನ್ನು ನಿಷ್ಕಾಮಭಾವದಿಂದ ಮಾಡಬೇಕು.

ನಮ ಇತ್ಯೇವ ಯೋ ಬ್ರೂಯಾನ್ಮದ್ಭಕ್ತಃ ಶ್ರದ್ಧಯಾನ್ವಿತಃ ।
ತಸ್ಯಾಕ್ಷಯೋ ಭವೇಲ್ಲೋಕಃ ಶ್ವಪಾಕಸ್ಯಾಪಿ ನಾರದ ॥

ನಾರದನೇ! ನನ್ನ ಭಕ್ತನಾದವನು ಶ್ರದ್ಧಾವಂತನಾಗಿ ಕೇವಲ 'ನಮಃ–ನಮಸ್ಕಾರ' ಎಂದು ಹೇಳಿದರೂ–ಹಾಗೆ ಹೇಳಿದವನು ಚಂಡಾಲನೇ ಆಗಿದ್ದರೂ–ಅವನಿಗೆ ಅಕ್ಷಯವಾದ ಪುಣ್ಯಲೋಕಗಳು ಲಭಿಸುತ್ತವೆ.

ಕಿಂ ಪುನರ್ಯೇ ಯಜನ್ತೇ ಮಾಂ ಸಾಧಕಾ ವಿಧಿಪೂರ್ವಕಮ್ ।
ಶ್ರದ್ಧಾವನ್ತೋ ಯತಾತ್ಮಾನಸ್ತೇ ಮಾಂ ಯಾನ್ತಿ ಮದಾಶ್ರಿತಾಃ ॥

ಹೀಗಿರುವಾಗ ಯಾವ ಸಾಧಕರು ಶ್ರದ್ಧೆಯಿಂದ ಕೂಡಿದವರಾಗಿ ಜಿತಮನಸ್ಕರಾಗಿ ನನ್ನನ್ನು ವಿಧಿಪೂರ್ವಕವಾಗಿ ಆರಾಧಿಸುತ್ತಾರೆಯೋ–ಅಂತಹವರ ವಿಷಯದಲ್ಲಿ ಹೇಳತಕ್ಕದ್ದೇನಿದೆ? ನನ್ನ ಆಶ್ರಿತರಾದ ಅವರು ನನ್ನನ್ನೇ ಸೇರುತ್ತಾರೆ.

ಕರ್ಮಾಣ್ಯಾದ್ಯನ್ತವನ್ತೀಹ ಮದ್ಭಕ್ತೋ ನಾನ್ತಮಶ್ನುತೇ ।
ಮಾಮೇವ ತಸ್ಮಾದ್ದೇವರ್ಷೇ ಧ್ಯಾಹಿ ನಿತ್ಯಮತನ್ದ್ರಿತಃ ।
ಅವಾಪ್ಸ್ಯಸಿ ತತಃ ಸಿದ್ಧಿಂ ದ್ರಕ್ಷ್ಯಸ್ಯೇವ ಪದಂ ಮಮ ॥

ದೇವರ್ಷಿಯೇ! ಕರ್ಮಗಳೂ ಮತ್ತು ಅದರ ಫಲಗಳೂ ಆದಿ ಮತ್ತು ಅಂತ್ಯವುಳ್ಳವುಗಳಾಗಿವೆ. ಆದರೆ ನನ್ನ ಭಕ್ತನು ವಿನಾಶಹೊಂದುವುದಿಲ್ಲ. ಆದುದರಿಂದ ಅಲಸಿಕೆಯಿಲ್ಲದೇ ನನ್ನನ್ನೇ ಯಾವಾಗಲೂ ಧ್ಯಾನಮಾಡುತ್ತಿರು. ಅದರಿಂದಲೇ ಸಿದ್ಧಿಯನ್ನು ಪಡೆದುಕೊಳ್ಳುವೆ. ನನ್ನ ಶ್ರೇಷ್ಠವಾದ ಧಾಮವನ್ನೂ ಸಂದರ್ಶಿಸುವೆ.

ಅಜ್ಞಾನಾಯ ಚ ಯೋ ಜ್ಞಾನಂ ದದ್ಯಾದ್ಧರ್ಮೋಪದೇಶತಃ ।
ಕೃತ್ಸ್ನಾಂ ವಾ ಪೃಥಿವೀಂ ದದ್ಯಾತ್ತೇನ ತುಲ್ಯಂ ಚ ತತ್ಫಲಮ್ ॥

ಯಾವನು ಧರ್ಮೋಪದೇಶದ ಮೂಲಕವಾಗಿ ಅಜ್ಞಾನಿಯಾದವನಿಗೆ ಜ್ಞಾನೋಪದೇಶಮಾಡುವನೋ–ಅವನಿಗೆ ಲಭಿಸುವ ಫಲವು ಅಖಂಡ ಭೂಮಂಡಲವನ್ನೂ ದಾನಮಾಡಿದವನು ಪಡೆಯುವ ಫಲಕ್ಕೆ ಸಮಾನ ವಾಗಿರುತ್ತದೆ.

ತಸ್ಮಾತ್ಪ್ರದೇಯಂ ಸಾಧುಭ್ಯೋ ಜನ್ಮಬನ್ಧಭಯಾಪಹಮ್ ।
ಏವಂ ದತ್ತ್ವಾ ನರಶ್ರೇಷ್ಠ ಶ್ರೇಯೋ ವೀರ್ಯಂ ಚ ವಿನ್ದತಿ ॥

ಆದುದರಿಂದ ಜನ್ಮಬಂಧನದ ಭಯವನ್ನು ಹೋಗಲಾಡಿಸುವ ಈ ಅನುಸ್ಮೃತಿವಿದ್ಯೆಯನ್ನು ಸತ್ಪುರುಷರಾದವರಿಗೆ ಉಪದೇಶಿಸಬೇಕು. ನರಶ್ರೇಷ್ಠನೇ! ಹೀಗೆ ಮಾಡುವುದರಿಂದ ಜ್ಞಾನದಾತೃವು ಶ್ರೇಯಸ್ಸನ್ನೂ ಬಲವನ್ನೂ ಹೊಂದುತ್ತಾನೆ.

ಅಶ್ವಮೇಧಸಹಸ್ರಾಣಾಂ ಸಹಸ್ರಂ ಯಃ ಸಮಾಚರೇತ್ ।
ನಾಸೌ ಪದಮವಾಪ್ನೋತಿ ಮದ್ಭಕ್ತೈರ್ಯದವಾಪ್ಯತೇ ॥

ನನ್ನ ಭಕ್ತರು ಯಾವ ಪರಮಪದವನ್ನು ಪಡೆಯುವರೋ–ಅಂತಹ ದಿವ್ಯವಾದ ಪರಮಪದವನ್ನು ಹತ್ತು ಲಕ್ಷ ಅಶ್ವಮೇಧಯಾಗಗಳನ್ನು ಮಾಡಿದವನೂ ಪಡೆದುಕೊಳ್ಳಲಾರನು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ನಾರದರು ಕೇಳಿದುದಕ್ಕೆ ಶಂಭುವು (ಕಲ್ಯಾಣಮಯನಾದ ವಿಷ್ಣುವು) ಯಾವ ಉತ್ತರವನ್ನು ಹೇಳಿದನೋ–ಅದನ್ನೇ ನಾನು ನಿನಗೂ ಹೇಳಿದ್ದೇನೆ. ನೀನೂ ಹೀಗೆಯೇ ಏಕಾಗ್ರಚಿತ್ತನಾಗಿ ಅವ್ಯಯನಾದ ಗುಣಾತೀತನಾದ ಪರಮಾತ್ಮನನ್ನು ಧ್ಯಾನಿಸು. ಸಂಪೂರ್ಣಭಕ್ತಿಭಾವದಿಂದ ಅವನನ್ನು ಭಜಿಸು. ನಾರಾಯಣನು ಹೇಳಿದ ಮಾತುಗಳನ್ನು ಕೇಳಿ ಭಕ್ತನಾದ ನಾರದನು ನಾರಾಯಣನಲ್ಲಿ ಏಕಾಗ್ರತೆಯನ್ನು ಹೊಂದಿದನು. ಯಾವ ಪುರುಷನು ಅನನ್ಯಭಾವದಿಂದ ಹತ್ತು ವರ್ಷಗಳ ಪರ್ಯಂತವಾಗಿ ಋಷಿಯಾದ ದೇವದೇವನಾದ ನಾರಾಯಣನನ್ನು ಧ್ಯಾನಮಾಡುವನೋ ಮತ್ತು ಈ ನಾರಾಯಣಮಂತ್ರವನ್ನು ಜಪಿಸುವನೋ–ಅವನು ವಿಷ್ಣುವಿನ ಪರಮಪದವನ್ನು ಹೊಂದುತ್ತಾನೆ.

ಕಿಂ ತಸ್ಯ ಬಹುಭಿರ್ಮನ್ತ್ರೈರ್ಭಕ್ತಿರ್ಯಸ್ಯ ಜನಾರ್ದನೇ ।
ನಮೋ ನಾರಾಯಣಾಯೇತಿ ಮನ್ತ್ರಃ ಸರ್ವಾರ್ಥಸಾಧಕಃ ॥

ಯಾವನಿಗೆ ನಾರಾಯಣನಲ್ಲಿ ಅನನ್ಯವಾದ ಭಕ್ತಿಯಿರುವುದೋ–ಅವನಿಗೆ ಅನೇಕವಿಧವಾದ ಮಂತ್ರಗಳಿಂದ ಯಾವ ಪ್ರಯೋಜನವಿದೆ? "ನಮೋ ನಾರಾಯಣಾಯ"–ಎಂಬ ಈ ಮಂತ್ರವೊಂದೇ ಸರ್ವಾರ್ಥಸಾಧಕವೂ ಆಗಿದೆ.

ಇಮಾಂ ರಹಸ್ಯಾಂ ಪರಮಾಮನುಸ್ಮೃತಿ-
ಮಧೀತ್ಯ ಬುದ್ಧಿಂ ಲಭತೇ ಚ ನೈಷ್ಠಿಕೀಮ್ ।
ವಿಹಾಯ ದುಃಖಾನ್ಯವಮುಚ್ಯ ಸಙ್ಕಟಾ-
ತ್ಸ ವೀತರಾಗೋ ವಿಚರೇನ್ಮಹೀಮಿಮಾಮ್ ॥

ಈ ಪರಮರಹಸ್ಯವಾದ ಅನುಸ್ಮೃತಿವಿದ್ಯೆಯನ್ನು ಅಧ್ಯಯನಮಾಡಿ

ಮನುಷ್ಯನು ಭಗವಂತನ ವಿಷಯದಲ್ಲಿ ದೃಢವಾದ ನಿಷ್ಠೆಯುಳ್ಳ ಬುದ್ಧಿಯನ್ನು ಹೊಂದುತ್ತಾನೆ. ಎಲ್ಲ ದುಃಖಗಳನ್ನೂ ದೂರೀಕರಿಸಿ ಸಂಕಟಗಳಿಂದ ಮುಕ್ತನಾಗಿ ವಿನಾಶಿಯಾದ ವಸ್ತುಗಳ ಮೇಲಿನ ಅನುರಾಗವನ್ನು ತೊರೆದು ಈ ಭೂಮಿಯಲ್ಲಿ ಸಂಚರಿಸುತ್ತಿರುತ್ತಾನೆ.

ಮುಂದುವರಿದ ಜನಕಜನದೇವ-ಪಂಚಶಿಖರ ಕಥೆ

ಅಧ್ಯಾಯ ೨೧೯ : ಪಂಚಶಿಖನು ಜನಕಜನದೇವನಿಗೆ ಉಪದೇಶಿಸಿರುವ ಪ್ರಕರಣ : ಪಂಚಶಿಖನಿಂದ ಉಪದೇಶವನ್ನು ಪಡೆದವನು ಸಾಕ್ಷಾತ್ ಜನಕನಲ್ಲ. ಜನಕನ ವಂಶೀಯನಾದ ಜನಕಜನದೇವ. ನಾಲ್ಕಾರು ಕಡೆಗಳಲ್ಲಿ ಈ ಹೆಸರೇ ಬಂದಿರುತ್ತದೆ.

ಅನನ್ತಂ ಬತ ಮೇ ವಿತ್ತಂ ಭಾವ್ಯಂ ಮೇ ನಾಸ್ತಿ ಕಿಂಚನ ।
ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ಕಿಂಚನ ದಹ್ಯತೇ ॥

ಇದು ಜನಕನು ಶುಕನೊಡನೆ ಹೇಳಿರುವ ಶ್ಲೋಕ. ಅಧ್ಯಾಯದ ಕಡೆಯಲ್ಲಿ ಮಿಥಿಲಾಪಟ್ಟಣಕ್ಕೆ ಬೆಂಕಿ ಬಿದ್ದುದು ಯಾವಾಗ? ಏಕೆ ಬಿದ್ದಿತು? ಎಂಬ ಕಥಾಭಾಗವಿದೆ. ಈ ಪ್ರಕರಣದಲ್ಲಿ ಮಿಥಿಲೆಗೆ ಬೆಂಕಿಯು ಏಕೆ ಬಿದ್ದಿತೆಂದು ಯುಧಿಷ್ಠಿರನು ಕೇಳುವುದಿಲ್ಲ. ಆದರೂ **ಶ್ರೂಯತಾಂ ನೃಪಶಾರ್ದೂಲ ಯದರ್ಥಂ ದೀಪಿತಾ ಪುರಾ । ವಹ್ನಿನಾ ದೀಪಿತಾ ಸಾ ತು ತನ್ಮೇ ಶೃಣು ಮಹಾಮತೇ ॥** ಎಂದು ಭೀಷ್ಮನೇ ಪ್ರಾರಂಭಿಸಿ ಹೇಳುತ್ತಾನೆ.

ಜನಕಜನದೇವನು ಎಲ್ಲ ಕರ್ಮಗಳನ್ನೂ ಆತ್ಮದಲ್ಲಿಯೇ ಸಮಾರೋಪಿಸಿಕೊಂಡು ಸರ್ವಾತ್ಮಭಾವವನ್ನು ಹೊಂದಿ ಅದೇ ಭಾವದಿಂದಲೇ ಸರ್ವತ್ರ ಸಂಚರಿಸುತ್ತಿದ್ದನು. ಅಧ್ಯಾತ್ಮತತ್ತ್ವವನ್ನು ತಿಳಿದವನಾಗಿದ್ದುದರಿಂದ ಯಜ್ಞ-ದಾನ-ಹೋಮಾದಿಗಳನ್ನು ನಿಷ್ಕಾಮದಿಂದಲೇ ಮಾಡುತ್ತಾ ಧರ್ಮದಿಂದ ರಾಜ್ಯವನ್ನಾಳುತ್ತಾ ಅಧ್ಯಾತ್ಮಜ್ಞಾನದಲ್ಲಿ ತನ್ಮಯನಾಗಿಬಿಟ್ಟಿದ್ದನು. ಆ ಸಮಯದಲ್ಲಿ ಭಗವಂತನು ಜನಕಜನದೇವನನ್ನು ಪರೀಕ್ಷಿಸುವ ಸಲುವಾಗಿ ಬ್ರಾಹ್ಮಣನ ವೇಷವನ್ನು ಧರಿಸಿ ಮಿಥಿಲಾಪಟ್ಟಣಕ್ಕೆ ಬಂದು ಶಿಕ್ಷಾರ್ಹವಾದ ಅಪರಾಧವೊಂದನ್ನು ಮಾಡಿದನು. ಬ್ರಾಹ್ಮಣರು ಅವನನ್ನು

ರಾಜನ ಬಳಿಗೆ ಕರೆದುಕೊಂಡುಹೋದರು. ಅವನು ಮಾಡಿದ್ದ ಅಪರಾಧ ವನ್ನು ರಾಜನಿಗೆ ಹೇಳಿದರು. ಜನಕಜನದೇವನು ಅಪರಾಧಿಯಾದ ಬ್ರಾಹ್ಮಣ ನಿಗೆ ಬೇರೆ ಯಾವ ಶಿಕ್ಷೆಯನ್ನೂ ಕೊಡದೇ ಗಡೀಪಾರು ಮಾಡಿಬಿಟ್ಟನು. ದೇಶವನ್ನು ಬಿಟ್ಟು ಹೊರಡುವ ಸಮಯದಲ್ಲಿ ಆ ಬ್ರಾಹ್ಮಣನು ಜನಕಜನ ದೇವನಿಗೆ "ನೀನು ಪದ್ಮನಾಭನ ಚರಣಗಳಲ್ಲಿ ಅನುರಾಗವಿಟ್ಟು ಅವನಿಗೆ ಶರಣಾಗತನಾಗಿರುವೆ. ಇದರಿಂದ ನೀನು ಸಿದ್ಧಾರ್ಥನಾಗಿರುವೆ. ನಿನಗೆ ಕಲ್ಯಾಣವಾಗಲಿ" – ಎಂದು ಹೇಳಿ ಹೊರಟುಹೋಗುತ್ತಾನೆ. ಆದರೆ ಬ್ರಾಹ್ಮಣನು ಹೊರಟುಹೋಗುವಾಗ ರಾಜನನ್ನು ಪರೀಕ್ಷಿಸುವ ಸಲುವಾಗಿ ಮಿಥಿಲಾಪಟ್ಟಣಕ್ಕೆ ಬೆಂಕಿಯನ್ನಿಟ್ಟನು. ಬೆಂಕಿಯಿಟ್ಟವನು ಸಾಕ್ಷಾತ್ ಭಗ ವಂತನೇ ಆಗಿದ್ದನು. ಮಿಥಿಲೆಯು ಬೆಂಕಿಯಿಂದ ಉರಿಯುತ್ತಿದ್ದರೂ ಜನಕಜನದೇವನು ವಿಚಲಿತನಾಗಲೇ ಇಲ್ಲ. ಇದರ ಕಾರಣವನ್ನು ಪ್ರಜೆಗಳು ಕೇಳಲಾಗಿ ಅವನು ಈ ವಾಕ್ಯವನ್ನು ಹೇಳುತ್ತಾನೆ.

ಅನನ್ತಂ ಬತ ಮೇ ವಿತ್ತಂ ಭಾವ್ಯಂ ಮೇ ನಾಸ್ತಿ ಕಿಂಚನ ।
ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ಕಿಂಚನ ದಹ್ಯತೇ ॥

"ನನಗೆ ಆತ್ಮೈಶ್ವರ್ಯವು ಅಪಾರವಾಗಿದೆ. ಆದುದರಿಂದ ನನ್ನದೆಂದು ಹೇಳಿಕೊಳ್ಳುವುದು ಯಾವುದೂ ಇರುವುದಿಲ್ಲ. ಮಿಥಿಲೆಯು ಸುಟ್ಟು ಹೋಗುತ್ತಿದ್ದರೂ ನನ್ನದೆಂಬುದು ಯಾವುದೂ ಸುಟ್ಟುಹೋಗುವುದಿಲ್ಲ."

ರಾಜನ ಮಾತನ್ನು ಕೇಳಿ ಬ್ರಾಹ್ಮಣನು ಮಿಥಿಲಾಪಟ್ಟಣವನ್ನು ಸಜೀವ ವನ್ನಾಗಿ ಮಾಡಿದನು. ಭಗವಂತನು ಜನಕಜನದೇವನಿಗೆ ತನ್ನ ಸ್ವರೂಪವನ್ನು ತೋರಿಸಿ "ಜನಕಜನದೇವ! ನಿನ್ನ ಮನಸ್ಸು ಸದ್ಭಾವಪೂರ್ವಕವಾಗಿ ಧರ್ಮ ದಲ್ಲಿಯೇ ಸ್ಥಿರವಾಗಿರಲಿ. ನಿನ್ನ ಬುದ್ಧಿಯು ತತ್ತ್ವಜ್ಞಾನದಲ್ಲಿಯೇ ನಿಷ್ಠೆಯನ್ನು ಹೊಂದಿರಲಿ. ನೀನು ಸದಾ ವಿರಕ್ತನಾಗಿದ್ದುಕೊಂಡು ಸತ್ಯದಲ್ಲಿಯೇ ಸ್ಥಿರವಾಗಿ ನಿಲ್ಲು. ನಿನಗೆ ಮಂಗಳವಾಗಲಿ. ನಾನು ಹೋಗಿಬರುತ್ತೇನೆ" – ಹೀಗೆ ಹೇಳಿ ಭಗವಂತನು ಅಲ್ಲಿಯೇ ಅಂತರ್ಧಾನ ಹೊಂದಿದನು.

ಸುವರ್ಚಲಾ-ಶ್ವೇತಕೇತು ಇವರ ಪ್ರಸಂಗ

೨೨೦ನೆಯ ಅಧ್ಯಾಯದಲ್ಲಿ : ಶ್ವೇತಕೇತು ಮತ್ತು ಸುವರ್ಚಲೆಯರ ವಿವಾಹಪ್ರಸಂಗವು ಬರುತ್ತದೆ. ತತ್ತ್ವದ ದೃಷ್ಟಿಯಿಂದ ಇದನ್ನು ಸಂಕ್ಷೇಪಿಸಿ ಕೊಡಲಾಗಿದೆ. 'ವಿವಾಹಿತನಾಗಿ ಗೃಹಸ್ಥಾಶ್ರಮದಲ್ಲಿದ್ದುಕೊಂಡು ಸಂಸಾರಾತೀತನಾಗಿ ಎಲ್ಲ ವಿಧವಾದ ದ್ವಂದ್ವಗಳಿಂದಲೂ ವಿವರ್ಜಿತನಾಗಿ ಇರುವವನು ಯಾವನಾದರೂ ಇರುವನೇ?'–ಎಂಬ ಯುಧಿಷ್ಠಿರನ ಪ್ರಶ್ನೆಗೆ ಭೀಷ್ಮರು ಈ ಕಥೆಯನ್ನು ಹೇಳುತ್ತಾರೆ.

ಸರ್ವಶಾಸ್ತ್ರಾರ್ಥಕೋವಿದನಾದ, ಧಾರ್ಮಿಕನಾದ, ಕ್ರಿಯಾನಿಷ್ಠನಾದ, ದೇವ-ಬ್ರಾಹ್ಮಣಪೂಜಕನಾದ ದೇವಲನೆಂಬ ಋಷಿಯಿರುತ್ತಾನೆ. ಅವನಿಗೆ ಕಡುಚೆಲುವೆಯಾದ, ಶುಭಲಕ್ಷಣಗಳಿಂದ ಕೂಡಿರುವ ಸುವರ್ಚಲಾ ಎಂಬ ಹೆಸರಿನ ಮಗಳಿರುತ್ತಾಳೆ. ಅವಳಿಗೆ ವಿವಾಹಕಾಲವು ಪ್ರಾಪ್ತವಾಗುತ್ತದೆ. ವರನು ವಿದ್ಯಾವಂತನಾಗಿರಬೇಕು. ಅವಿವಾಹಿತನಾಗಿರಬೇಕು. ಪ್ರಿಯವಾದಿಯಾಗಿರಬೇಕು. ಮಹಾತಪಸ್ವಿಯಾಗಿರಬೇಕು. ಶ್ರೋತ್ರಿಯನಾದ ಬ್ರಾಹ್ಮಣನಾಗಿರಬೇಕು. ಇಂತಹ ವರನು ಎಲ್ಲಿ ಸಿಕ್ಕುವನೆಂದು ದೇವಲನು ಯೋಚಿಸುತ್ತಿರುತ್ತಾನೆ. ಆಗ ಸುವರ್ಚಲೆಯು ತನ್ನ ಪತಿಯಾಗುವವನಿಗೆ ಮತ್ತೊಂದು ಯೋಗ್ಯತೆಯೂ (qualification) ಇರಬೇಕೆಂದು ತಂದೆಯೊಡನೆ ಹೇಳುತ್ತಾಳೆ :

ಅನ್ಧಾಯ ಮಾಂ ಮಹಾಪ್ರಾಜ್ಞ ದೇಹ್ಯನನ್ಧಾಯ ವೈ ಪಿತಃ ।

"ಅಪ್ಪಾಜಿ! ಯಾವನು ಕುರುಡನೂ ಮತ್ತು ಕಣ್ಣಿರುವವನೂ ಆಗಿದ್ದಾನೆಯೋ–ಅಂತಹವನಿಗೆ ನನ್ನನ್ನು ಮದುವೆಮಾಡಿಕೊಡು"–ಎನ್ನುತ್ತಾಳೆ. ಮಗಳ ಮಾತನ್ನು ಕೇಳಿದೊಡನೆಯೇ ತಂದೆಗೆ ಬೇಸರವಾಗುತ್ತದೆ. ಮಗಳೊಡನೆ ಹೇಳುತ್ತಾನೆ : "ಮಗಳೇ! ನಿನ್ನ ಈ ಪ್ರಾರ್ಥನೆಯು ಕೈಗೂಡುವುದೆಂದು ನಾನು ಭಾವಿಸುವುದಿಲ್ಲ. ಏಕೆಂದರೆ : ಒಬ್ಬನೇ ವ್ಯಕ್ತಿಯು ಕಣ್ಣಿಲ್ಲದವನೂ–ಕಣ್ಣಿರುವವನೂ ಹೇಗಾಗುತ್ತಾನೆ? ನಿನ್ನ ಈ ಮಾತನ್ನು ಕೇಳಿ ನನ್ನ ಮನಸ್ಸಿನಲ್ಲಿ ಖೇದವುಂಟಾಗಿದೆ. ನೀನು ಹುಚ್ಚಿಯಂತೆ ಇಂತಹ ಅಶುಭವಾದ ಮಾತನ್ನಾಡುತ್ತಿರುವೆ."

ಸುವರ್ಚಲೆಯು ಹೇಳುತ್ತಾಳೆ:

“ಅಪ್ಪಾಜಿ! ನಾನು ಹುಚ್ಚಿಯಲ್ಲ. ಬುದ್ಧಿಪೂರ್ವಕವಾಗಿಯೇ ಈ ಮಾತನ್ನು ಹೇಳುತ್ತಿದ್ದೇನೆ. ಅಂತಹ ವರನು ಸಿಕ್ಕಿದರೆ ಅಂತಹವನಿಗೇ ನನ್ನನ್ನು ಕೊಟ್ಟು ಮದುವೆಮಾಡು. ಅಂತಹ ಯೋಗ್ಯತೆಯಿಲ್ಲದವನಿಗೆ ನನ್ನ ಭರಣ-ಪೋಷಣೆಗಳನ್ನು ಮಾಡಲು ಸಾಧ್ಯವಿಲ್ಲ. ನನ್ನನ್ನು ವರಿಸಲು ಯಾರು ಯೋಗ್ಯರೆಂದು ನೀನು ಭಾವಿಸುವೆಯೋ ಅವರನ್ನು ಇಲ್ಲಿಗೆ ಕರೆದುಕೊಂಡು ಬಾ. ಅವರಲ್ಲಿ ನಾನು ಅಂಧನೂ–ಅನಂಧನೂ ಆಗಿರುವವನನ್ನೇ ಪತಿಯನ್ನಾಗಿ ಆರಿಸಿಕೊಳ್ಳುತ್ತೇನೆ.” ಮಗಳು ಹೀಗೆ ಹೇಳಿದನಂತರ ತಂದೆಗೆ ಮುಂದೆ ಮಾತನಾಡಲು ಸಾಧ್ಯವೇ ಆಗಲಿಲ್ಲ. ಹಾಗೆಯೇ ಆಗಲೆಂದು ಹೇಳಿ ತನ್ನ ಶಿಷ್ಯರನ್ನು ಕರೆದು ಹೇಳಿದನು.: “ಶಿಷ್ಯರೇ! ವೇದಸಂಪನ್ನರಾದ, ಸತ್ಕುಲಪ್ರಸೂತರಾದ, ತಂದೆಯ ಕಡೆಯಿಂದಲೂ ತಾಯಿಯ ಕಡೆಯಿಂದಲೂ ಪರಿಶುದ್ಧರಾದ, ಆಚಾರದಲ್ಲಿಯೂ ಶುದ್ಧರಾದ, ರೋಗರಹಿತರಾದ, ಬುದ್ಧಿಸಂಪನ್ನರಾದ, ಶೀಲಸಂಪನ್ನರಾದ, ಸತ್ತ್ವಗುಣಸಂಪನ್ನರಾದ, ವರ್ಣಸಂಕರವಿಲ್ಲದ ಗೋತ್ರದಲ್ಲಿ ಹುಟ್ಟಿ–ವೇದ ವ್ರತಗಳಿಂದ ಕೂಡಿರುವ, ತಂದೆ-ತಾಯಿಗಳಿಂದ ಯುಕ್ತರಾದ ಮತ್ತು ನನ್ನ ಮಗಳನ್ನು ಮದುವೆಯಾಗಲು ಇಷ್ಟಪಡುವ ಸ್ನಾತಕರನ್ನು ಇಲ್ಲಿಗೆ ಶೀಘ್ರವಾಗಿ ಕರೆತನ್ನಿರಿ.”

ಗುರುವಿನ ಆಜ್ಞೆಯಾದೊಡನೆಯೇ ಶಿಷ್ಯರು ಹತ್ತಿರದಲ್ಲಿದ್ದ ಆಶ್ರಮಗಳಿಗೂ–ಗ್ರಾಮಗಳಿಗೂ ಹೋಗಿ ಅಲ್ಲಿದ್ದ ಬ್ರಾಹ್ಮಣರಿಗೆ ವಿಷಯವನ್ನು ತಿಳಿಯಪಡಿಸಿದರು. ಒಡನೆಯೇ ವಿವಾಹಯೋಗ್ಯರಾದ ಅನೇಕಸ್ನಾತಕ ಬ್ರಾಹ್ಮಣರು ದೇವಲನ ಆಶ್ರಮಕ್ಕೆ ಆಗಮಿಸಿದರು. ಒಡನೆಯೇ ದೇವಲನು ಅವರೆಲ್ಲರನ್ನೂ ಯಥಾಯೋಗ್ಯವಾಗಿ ಸತ್ಕರಿಸಿ, ಆಗಮಿಸಿರುವ ವೇದ-ವೇದಾಂಗಸಂಪನ್ನರಾದ, ಸತ್ಕುಲಪ್ರಸೂತರಾದ, ಶೀಲವಂತರಾದ ಸ್ನಾತಕರಲ್ಲಿ ಯಾರನ್ನಾದರೂ ವರಿಸುವಂತೆ ಮಗಳಿಗೆ ಹೇಳಿದನು. ಹಾಗೆಯೇ ಆಗಲೆಂದು ಹೇಳಿದ ಸುವರ್ಚಲೆಯು ಬ್ರಾಹ್ಮಣರ ಸಮೂಹವನ್ನು ನೋಡಿ ತಪೋಧನರಿಗೆ ನಮಸ್ಕರಿಸಿ ಈ ಮಾತನ್ನು ಹೇಳಿದಳು:

ಯದ್ಯಸ್ತಿ ಸಮಿತೌ ವಿಪ್ರೋ ಹ್ಯನ್ಧೋಽನನ್ಧಃ ಸ ಮೇ ವರಃ ||

“ಈ ಬ್ರಾಹ್ಮಣರ ಸಮೂಹದಲ್ಲಿ ಅಂಧನೂ–ಅನಂಧನೂ ಆಗಿರು

ವವನು ಯಾವನಾದರೂ ಇದ್ದರೆ–ಅವನೇ ವರನು. ಅವನೇ ನನ್ನ ಪತಿಯಾಗುತ್ತಾನೆ."

ಕನ್ಯೆಯು ಬುದ್ಧಿಯಿಲ್ಲದವಳೆಂದು ಭಾವಿಸಿ, ಯಾರೂ ಏನನ್ನೂ ಹೇಳದೆ ತಮ್ಮೆಲ್ಲರನ್ನೂ ಅವಮಾನಿಸಿದುದಕ್ಕಾಗಿ ಕೋಪಗೊಂಡ ಆ ಬ್ರಾಹ್ಮಣರು ಮನಸ್ಸಿನಲ್ಲಿಯೇ ದೇವಲನನ್ನು ನಿಂದಿಸುತ್ತಾ ತಮ್ಮ-ತಮ್ಮ ಆಶ್ರಮಗಳಿಗೆ ಹೊರಟುಹೋದರು.

ಹಲವಾರು ದಿವಸಗಳು ಕಳೆದನಂತರ ವಿದ್ಯಾವಂತನಾದ, ಬ್ರಾಹ್ಮಣಪ್ರಿಯನಾದ, ನ್ಯಾಯವಿಶಾರದನಾದ, ಊಹಾಪೋಹಕುಶಲನಾದ, ಬ್ರಹ್ಮಚರ್ಯವ್ರತಸ್ಥನಾದ, ವೇದವಿದನಾದ, ವೇದಗಳ ತತ್ತ್ವಗಳನ್ನೂ ತಿಳಿದಿದ್ದ, ಕರ್ಮಕಾಂಡವಿಶಾರದನಾದ, ಆತ್ಮತತ್ತ್ವವನ್ನು ವಿವೇಕಪೂರ್ವಕವಾಗಿ ತಿಳಿದು ಕೊಂಡಿದ್ದ, ತಂದೆ-ತಾಯಿಗಳಿಂದ ಸಂಪನ್ನನಾಗಿದ್ದ, ಗುಣಗಳಿಗೆ ಸಮುದ್ರಪ್ರಾಯನಾಗಿದ್ದ ಶ್ವೇತಕೇತುವೆಂದು ಪ್ರಸಿದ್ಧನಾಗಿದ್ದ ಋಷಿಕುಮಾರನು ಸುವರ್ಚಲೆಯ ವಿಷಯವಾಗಿ ಎಲ್ಲವನ್ನೂ ತಿಳಿದುಕೊಂಡು ಕನ್ಯಾರ್ಥವಾಗಿಯೇ ದೇವಲನ ಆಶ್ರಮಕ್ಕೆ ಬಂದನು.

ಉದ್ದಾಲಕನ ಮಗನಾದ ಶ್ವೇತಕೇತುವು ತನ್ನ ಆಶ್ರಮಕ್ಕೆ ಆಗಮಿಸಿ ದುದನ್ನು ಕಂಡು ದೇವಲನು ಅವನನ್ನು ಸ್ವಾಗತಿಸಿ ಯಥಾಯೋಗ್ಯವಾಗಿ ಸತ್ಕರಿಸಿದನಂತರ ವೇದ-ವೇದಾಂಗಪಾರಂಗತನಾದ, ಮಹಾಪ್ರಾಜ್ಞನಾದ ಶ್ವೇತಕೇತುವನ್ನು ವರಿಸುವಂತೆ ಮಗಳಿಗೆ ಹೇಳಿದನು. ಆ ಮಾತನ್ನು ಕೇಳಿ ದೊಡನೆಯೇ ಸುವರ್ಚಲೆಗೆ ಕೋಪವೇ ಬಂದಿತು. ಶ್ವೇತಕೇತುವಿನ ಕಡೆಗೆ ನೋಡಿದಳು. ಒಡನೆಯೇ ಋಷಿಕುಮಾರನು ಅವನ ಮನಸ್ಸಿನ ಅಭಿಪ್ರಾಯ ವನ್ನು ಗ್ರಹಿಸಿ ಹೇಳಿದನು: "ಶುಭಾಂಗಿಯೇ! ನೀನು ಯಾವನನ್ನು ಬಯಸಿರುವೆಯೋ ಅವನೇ ನಾನು.

ಅನ್ಧೋಽಹಮತ್ರ ತತ್ತ್ವಂ ಹಿ ತಥಾ ಮನ್ಯೇ ಚ ಸರ್ವದಾ ।
ವಿಶಾಲನಯನಂ ವಿದ್ಧಿ ತಥಾ ಮಾಂ ಹೀನಸಂಶಯಮ್ ॥

ಬಾಹ್ಯಚಕ್ಷುಸ್ಸು ಇದ್ದರೂ ನಾನು ಅಂಧನೆಂಬುದು ಯಥಾರ್ಥ ವಾಗಿಯೇ ಇದೆ. ಹಾಗೆಯೇ ನನಗೆ ಸಂಶಯವೆಂಬುದೇ ಇಲ್ಲವಾದುದರಿಂದ ನಾನು ಯಾವಾಗಲೂ ವಿಶಾಲನೇತ್ರನೂ ಆಗಿದ್ದೇನೆ. ಆದುದರಿಂದ ನನ್ನನ್ನು ನೀನು ಮದುವೆಯಾಗು.

ಕಣ್ಣಿದ್ದರೂ ನಾನು ಹೇಗೆ ಕುರುಡ ಎಂದರೆ : ಈ ಜಗತ್ತಿನ ದರ್ಶನ ಮುಂತಾದುವುಗಳನ್ನು ಮಾಡುವ ಇಂದ್ರಿಯರೂಪವಾದ ಹೊರಗಣ್ಣು ವಾಸ್ತವವಾಗಿ ಕಣ್ಣೇ ಅಲ್ಲ. ಆ ಭೌತಿಕವಾದ ಕಣ್ಣನ್ನು ಮಾತ್ರವೇ ಉಳ್ಳವನನ್ನು ಜ್ಞಾನಿಗಳು ಭೂತಾಂಧನೆಂದು ಕರೆಯುತ್ತಾರೆ. ಅತೀಂದ್ರಿಯವಾದ ಜ್ಞಾನದೃಷ್ಟಿಯಲ್ಲಿ ನನಗೆ ಜಗತ್ತಿನ ಯಾವ ವ್ಯವಹಾರವೂ ಕಾಣುವುದಿಲ್ಲ ವಾದುದರಿಂದ ನಾನು ಕುರುಡನು. ಆದರೆ ಜ್ಞಾನದೃಷ್ಟಿಯಿಂದ ಇಂದ್ರಿಯಗಳ ವ್ಯಾಪಾರಗಳೆಲ್ಲಕ್ಕೂ ನಿಯಾಮಕನಾಗಿರುವ ಪರಮಾತ್ಮನನ್ನು ನೋಡು ತ್ತಿರುವುದರಿಂದ ನಾನು ಅನಂಧನೂ (ಕಣ್ಣುಳ್ಳವನೂ) ಆಗಿದ್ದೇನೆ.

ನಿತ್ಯ-ನೈಮಿತ್ತಿಕಾದಿ ಕರ್ಮಗಳನ್ನು ನಾನು ಲೋಕದೃಷ್ಟಿಯಿಂದ ಮಾಡು ತ್ತೇನೆ. ಆತ್ಮದೃಷ್ಟಿಯಿಂದ ನಾನು ಆ ಕರ್ಮಗಳಿಂದ ಲಿಪ್ತನಾಗಿರುವುದಿಲ್ಲ.

ಕಾರ್ಯ-ಕಾರಣರೂಪನಾದ ಪರಮಾತ್ಮನನ್ನು ಚಿಂತಿಸುತ್ತಾ ನಾನು ಶಾಂತನಾಗಿಯೂ–ನಿರ್ಭಯನಾಗಿಯೂ ಇದ್ದುಬಿಡುತ್ತೇನೆ. ಕರ್ಮಗಳ ಅನುಷ್ಠಾನದಿಂದ ಮೃತ್ಯುವನ್ನು ದಾಟಿ ಜ್ಞಾನದ ಮೂಲಕವಾಗಿ ಅಮೃತ ಮಯನಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುತ್ತೇನೆ. ಪ್ರಾರಬ್ಧವಶದಿಂದ ಸನ್ನಿಹಿತವಾಗುವ ಪ್ರಿಯಾಪ್ರಿಯಗಳನ್ನು ಸಮಾನವಾಗಿ ಕಾಣುತ್ತಾ ಈರ್ಷ್ಯಾ-ದ್ವೇಷಗಳಿಂದ ರಹಿತನಾಗಿ ಇಲ್ಲಿ ವಾಸಮಾಡುತ್ತೇನೆ. ಮಂಗಳಸ್ವರೂಪಳೇ! ಹೀಗೆ ಉಚಿತವಾದ ಶುಲ್ಕವನ್ನು ಕೊಟ್ಟು ನಿನ್ನನ್ನು ಕೊಂಡುಕೊಂಡು ಬಿಟ್ಟಿದ್ದೇನೆ. ನನ್ನನ್ನು ಪತಿಯನ್ನಾಗಿ ವರಿಸು."

"ವಿದ್ವಾಂಸನೇ! ನಾನು ನಿನ್ನನ್ನು ಮನಸ್ಸಿನಿಂದ ವರಿಸಿದ್ದಾಗಿದೆ. ಶಾಸ್ತ್ರವಿಧಿಗೆ ಅನುಸಾರವಾಗಿ ವಿವಾಹಮಾಡಿಕೊಡಲು ನನ್ನ ತಂದೆಯಿದ್ದಾನೆ. ನೀನು ನನ್ನ ತಂದೆಯನ್ನು ಪ್ರಾರ್ಥಿಸು. ಇದು ವೇದವಿಹಿತವಾದ ಮರ್ಯಾದೆಯಾಗಿದೆ."

ಸಕಲಮುನಿವರ್ಯರ ಸಮ್ಮುಖದಲ್ಲಿ ದೇವಲನು ಉದ್ದಾಲಕನಿಂದ ಸಹಿತನಾದ ಶ್ವೇತಕೇತುವನ್ನು ಯಥಾಯೋಗ್ಯವಾಗಿ ಪೂಜಿಸಿ ಸುವರ್ಚಲೆ ಯನ್ನು ಧಾರೆಯೆರೆದುಕೊಟ್ಟನು. ಅಲ್ಲಿ ನೆರೆದಿದ್ದ ಋಷಿಗಳೆಲ್ಲರೂ ಶ್ವೇತ ಕೇತುವನ್ನು ನೋಡಿ ಹೃತ್ಕಮಲದಲ್ಲಿ ವಾಸಮಾಡುವ ಸರ್ವಭೂತಾತ್ಮನಾದ

ಮಧುಸೂದನನಾದ ಶ್ರೀಹರಿಯೇ ಶ್ವೇತಕೇತುವಿನ ರೂಪದಲ್ಲಿ ಬಂದಿರುವನೆಂದು ಹೇಳುತ್ತಿದ್ದರು.

ಪ್ರೀಯತಾಂ ಮಾಧವೋ ದೇವಃ ಪತ್ನೀ ಚೇಯಂ ಸುತಾ ಮಮ ।
ಪ್ರತಿಪಾದಯಾಮಿ ತೇ ಕನ್ಯಾಂ ಸಹಧರ್ಮಚರೀಂ ಶುಭಾಮ್ ॥

'ಮಾಧವನು ಸುಪ್ರೀತನಾಗಲಿ. ಈ ನನ್ನ ಪುತ್ರಿಯು ನಿನಗೆ ಪತ್ನಿಯ ರೂಪದಲ್ಲಿ ಸಮರ್ಪಿತಳಾಗಿದ್ದಾಳೆ. ನಿನಗೆ ಕಲ್ಯಾಣಮಯಿಯಾದ ಸಹಧರ್ಮಿಣಿಯ ರೂಪದಲ್ಲಿ ಈ ಕನ್ಯೆಯನ್ನು ಪ್ರದಾನಮಾಡುತ್ತಿದ್ದೇನೆ'– ಎಂಬುದಾಗಿ ಹೇಳಿ ದೇವಲನು ಕನ್ಯಾಪ್ರದಾನಮಾಡಿದನು. ಶ್ವೇತಕೇತುವು ಸುವರ್ಚಲೆಯನ್ನು ಪರಿಗ್ರಹಿಸಿ ಯಥಾವಿಧಿಯಾಗಿ ವಿವಾಹಮಾಡಿಕೊಂಡನು. ವೈವಾಹಿಕಸಂಬಂಧವಾದ ಮಂತ್ರ-ತಂತ್ರಗಳೆಲ್ಲವನ್ನೂ ಮುಗಿಸಿ ಗೃಹಸ್ಥನಾದ ಶ್ವೇತಕೇತುವು ತನ್ನ ಪತ್ನಿಯೊಡನೆ ಹೇಳಿದನು :

"ಶುಭಸ್ವರೂಪಳೇ! ವೇದಗಳಲ್ಲಿ ಯಾವ ಕರ್ಮಗಳು ಹೇಳಿವೆಯೋ ಆ ಎಲ್ಲ ಕರ್ಮಗಳನ್ನೂ ನೀನು ನನ್ನ ಸಹಧರ್ಮಿಣಿಯಾಗಿದ್ದುಕೊಂಡು ಯಥಾಯೋಗ್ಯವಾಗಿ ಮಾಡು. ನಾನು ಇದೇ ಭಾವನೆಯಿಂದಲೇ ಇರುತ್ತೇನೆ. ನೀನೂ ಇದೇ ಭಾವನೆಯಿಂದಲೇ ಇರು. ನನ್ನ ಅಭಿಪ್ರಾಯದಂತೆ ನೀನು ವೇದೋಕ್ತವಾದ ಕರ್ಮಗಳನ್ನು ಮಾಡು. ನಾನೂ ಕೂಡ ನಿನಗೆ ಪ್ರಿಯವಾದ ಕಾರ್ಯವನ್ನೇ ಮಾಡುತ್ತೇನೆ. ಎಲ್ಲ ಕರ್ಮಗಳನ್ನೂ ಮಾಡಿದನಂತರ–"ಈ ಯಾವ ಕರ್ಮಗಳೂ ನನಗೆ ಸಂಬಂಧಿಸಿದುವುಗಳಲ್ಲ. ಈ ಕರ್ಮಗಳನ್ನು ಮಾಡಿದವಳೂ ನಾನಲ್ಲ" ಎಂಬ ಭಾವನೆಯನ್ನಿಟ್ಟುಕೊಂಡು ಜ್ಞಾನಾಗ್ನಿಯ ಮೂಲಕವಾಗಿ ಎಲ್ಲ ಕರ್ಮಗಳನ್ನೂ ಭಸ್ಮಮಾಡಿಬಿಡು. ನೀನು ಪರಮಸೌಭಾಗ್ಯವತಿಯಾಗಿರುವೆ. ನೀನು ಯಾವಾಗಲೂ ಅಹಂಕಾರ-ಮಮಕಾರಗಳಿಂದ ರಹಿತಳಾಗಿ ಕರ್ಮಗಳನ್ನು ಮಾಡಬೇಕು. ನಾನೂ ಹಾಗೆಯೇ ಮಾಡುತ್ತೇನೆ. ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ– ಶ್ರೇಷ್ಠಪುರುಷರು ಯಾವುದನ್ನು ಆಚರಿಸುವರೋ–ಇತರ ಜನರೂ ಅದನ್ನೇ ಆಚರಿಸುತ್ತಾರೆ. ಆದುದರಿಂದ ಲೋಕವ್ಯವಹಾರದ ಸಿದ್ಧಿಗಾಗಿ ಮತ್ತು ಆತ್ಮಕಲ್ಯಾಣಕ್ಕಾಗಿ ನಾವು ಹೀಗೆ ಮಾಡುವುದು ನಮ್ಮ ಕರ್ತವ್ಯವಾಗಿದೆ."

ಸುವರ್ಚಲೆಯೂ ಪತಿಯ ಮಾತಿನಂತೆಯೇ ವೇದೋಕ್ತಕರ್ಮಗಳೆಲ್ಲ ವನ್ನೂ ಪತಿಯೊಡನೆ ಯಥಾವಿಧಿಯಾಗಿ ಶ್ರದ್ಧೆಯಿಂದ ಮಾಡುತ್ತಿದ್ದಳು. ಮಹಾಪ್ರಾಜ್ಞನಾದ ಶ್ವೇತಕೇತುವು ಸುವರ್ಚಲೆಯಲ್ಲಿ ಸಂತಾನವನ್ನು ಪಡೆದು ಕೊಂಡನು. ದೇವತೆಗಳನ್ನು ಯಜ್ಞಗಳಿಂದ ತೃಪ್ತಿಪಡಿಸಿದನು. ಶೀತೋಷ್ಣ, ಸುಖ-ದುಃಖಾದಿ ದ್ವಂದ್ವಗಳಿಂದ ರಹಿತನಾಗಿ ಯಾವುದನ್ನೂ ಯಾರಿಂದಲೂ ಪರಿಗ್ರಹಿಸದೇ ಸರ್ವದಾ ಆತ್ಮಯೋಗಪರನಾಗಿ ಇರುತ್ತಿದ್ದನು. ಒಳ್ಳೆಯ ಬುದ್ಧಿಯಿಂದ ಕೂಡಿದ ಕ್ಷೇತ್ರಜ್ಞನಂತೆ ಶ್ವೇತಕೇತುವು ತನಗೆ ಅನುರೂಪಳಾದ ಭಾರ್ಯೆಯನ್ನು ಪಡೆದುಕೊಂಡನು. ಈ ಜಗತ್ತಿಗೆ ಸಾಕ್ಷಿಭೂತರಾಗಿ ಅವರಿಬ್ಬರೂ ಸಂತೋಷದಿಂದ ಎಲ್ಲ ಕಡೆಗಳಲ್ಲಿಯೂ ಸಂಚರಿಸುತ್ತಿದ್ದರು.

ಹೀಗೆಯೇ ಇರುತ್ತಿರಲಾಗಿ ಒಮ್ಮೆ ಸುವರ್ಚಲೆಯು ಶ್ವೇತಕೇತುವನ್ನು ಕುರಿತು 'ದ್ವಿಜೋತ್ತಮನೇ! ನೀನು ಯಾರು?' – ಎಂದು ಪ್ರಶ್ನಿಸಿದಳು.

"ಸುವರ್ಚಲೇ! ನಾನಾರೆಂಬುದು ನಿನಗೆ ಗೊತ್ತೇ ಇದೆ. ಇದರಲ್ಲಿ ಸಂಶಯವೇ ಇಲ್ಲ. 'ದ್ವಿಜೋತ್ತಮನೇ' ಎಂದೇ ನೀನು ಸಂಬೋಧಿಸಿರು ವುದರಿಂದ ನಾನಾರೆಂಬ ಪ್ರಶ್ನೆಗೆ ಉತ್ತರವು ನಿನ್ನ ಪ್ರಶ್ನೆಯಲ್ಲಿಯೇ ಅಡಗಿದೆ. ದ್ವಿಜೋತ್ತಮ–ಎಂದು ನನ್ನನ್ನು ಸಂಬೋಧಿಸಿ ಮತ್ತಾರ ವಿಷಯವಾಗಿ ನೀನು ಪ್ರಶ್ನಿಸುತ್ತಿರುವೆ?"–ಎಂದು ವಾಗ್ಮಿಯಾದ ಶ್ವೇತಕೇತುವು ಒಡನೆಯೇ ಉತ್ತರಿಸಿದನು.

"ನಾಥ! ನಾನು ಹೃದಯಗುಹೆಯಲ್ಲಿ ಮಲಗಿರುವ ಪರಮಾತ್ಮನನ್ನು ಕೇಳುತ್ತಿದ್ದೇನೆ."

"ಭಾಮಿನಿ! ಈ ಆತ್ಮವಸ್ತುವು ಏನನ್ನೂ ಹೇಳುವುದಿಲ್ಲ. ನೀನು ಆತ್ಮವನ್ನು ನಾಮ-ಗೋತ್ರಗಳಿಂದ ಯುಕ್ತವಾದುದೆಂದು ಭಾವಿಸಿರುವೆ ಯಾದರೆ ಅದು ಮಿಥ್ಯೆಯೇ ಸರಿ. ನಾಮ-ಗೋತ್ರಗಳಿಂದ ಕೂಡಿದರೆ ಆತ್ಮವು ದೇಹದಿಂದ ಬಂಧಿಸಲ್ಪಡುತ್ತದೆ. 'ಅಹಂ' ನಾನು–ಎಂಬ ಈ ಭಾವನೆಯು ನಿನ್ನಲ್ಲಿಯೂ ಸಮಾಹಿತವಾಗಿದೆ. ನೀನೂ 'ಅಹಂ'– ಎನ್ನುವೆ. ನಾನೂ 'ಅಹಂ'–ಎನ್ನುತ್ತೇನೆ. ವಿಶ್ವದಲ್ಲಿ ಎಲ್ಲರೂ 'ಅಹಂ–

ಅಹಂ' ಎಂದೇ ಹೇಳಿಕೊಳ್ಳುತ್ತಾರೆ. ಇದರಲ್ಲಿ ಪರಮಾರ್ಥವೇನೂ ಇಲ್ಲ. ಆದುದರಿಂದ ಯಾವ ವಿಷಯವನ್ನು ನೀನು ಪ್ರಶ್ನಿಸುತ್ತಿರುವೆ?"

ಪತಿಯ ಮಾತನ್ನು ಕೇಳಿ ಸುವರ್ಚಲೆಯು ನಸುನಕ್ಕು ಹೇಳಿದಳು : "ಋಷಿಪುಂಗವನೇ! ಈ ವಿಧವಾದ ವಿರೋಧಾಭಾಸದ ಮಾತುಗಳಿಂದ ಪ್ರಯೋಜನವೇನು? ನಾನಾವಿಧವಾದ ಕ್ರಿಯಾಕಲಾಪಗಳಲ್ಲಿಯೇ ತೊಡಗಿರುವ ಕಾರಣ ನಿನ್ನ ಜ್ಞಾನವು ನಷ್ಟವಾಗಿ ಹೋಗಿದೆ. ಆದುದರಿಂದ ನೀನು ಯಾರೆಂಬುದನ್ನು ಹೇಳು. ಏಕೆಂದರೆ : ನಾನು ಯಾವಾಗಲೂ ನಿನ್ನನ್ನೇ ಅನುಸರಿಸಿಕೊಂಡಿರುತ್ತೇನೆ."

"ಪ್ರಿಯಳೇ! ಶ್ರೇಷ್ಠರು ಯಾವುದನ್ನು ಆಚರಿಸುವರೋ–ಇತರ ಜನರೂ ಅದನ್ನೇ ಆಚರಿಸುವರು. ಆದುದರಿಂದ ನಾವೇನಾದರೂ ಈ ಕರ್ಮಗಳನ್ನು ತ್ಯಾಗಮಾಡಿದರೆ ಜನಸಮುದಾಯವೂ ವಿಧ್ಯುಕ್ತವಾದ ಕರ್ಮಗಳನ್ನು ಬಿಟ್ಟು ಸಂಕೀರ್ಣದೋಷದಿಂದ ದೂಷಿತವಾಗುತ್ತದೆ. ಧರ್ಮವು ಸಂಕೀರ್ಣವಾದರೆ ವರ್ಣಸಂಕರವಾಗುತ್ತದೆ. ವರ್ಣಸಂಕರವಾದರೆ ಎಲ್ಲೆಡೆಗಳಲ್ಲಿಯೂ * ಮಾತ್ಸ್ಯನ್ಯಾಯವು ಹಬ್ಬಿಕೊಳ್ಳುತ್ತದೆ. ಸಂಪೂರ್ಣ ಜಗತ್ತಿನ ಭರಣ-ಪೋಷಣೆಗಳನ್ನು ಮಾಡುವ ಶ್ರೀಹರಿಗೆ ಹೀಗಾಗುವುದು ಇಷ್ಟವಿಲ್ಲ. ಜಗತ್ತಿನ ಈ ಸೃಷ್ಟಿಯು ಪರಮೇಶ್ವರನ ಆಟವೇ ಆಗಿದೆ. ಧೂಳಿನಲ್ಲಿ ಎಷ್ಟು ಕಣಗಳಿವೆಯೋ–ಅಷ್ಟು ಪರಮೇಶ್ವರನ ಐಶ್ವರ್ಯಗಳಿವೆ. ಅಷ್ಟೇ ಮಾಯೆಗಳಿವೆ. ಅಷ್ಟೇ ಅವನ ಶಕ್ತಿಗಳೂ ಇವೆ.

'ಉದ್ಯೋಗಶೀಲನಾದ ಯಾವ ಪುರುಷನು ಮುಕ್ತಿಯ ಲಾಭಕ್ಕಾಗಿ ಅತ್ಯಂತಗಹನವಾದ ಗುಹೆಯಲ್ಲಿದ್ದುಕೊಂಡು ಜ್ಞಾನರೂಪವಾದ ಖಡ್ಗದ ಮೂಲಕವಾಗಿ ಹುಟ್ಟು-ಸಾವುಗಳೆಂಬ ಬಂಧನಗಳನ್ನು ಕಡಿದುಹಾಕಿ ನನ್ನ ಸ್ಥಾನವನ್ನು ಸೇರುವನೋ–ಅವನೇ ವಿದ್ವಾಂಸನು ; ಅವನೇ ನನಗೆ ಅತ್ಯಂತ ಪ್ರಿಯನಾದವನು. ಅಂತಹ ಯೋಗಿಪುರುಷನೇ ನಾನೂ ಆಗಿದ್ದೇನೆ. ಇದರಲ್ಲಿ ಸಂದೇಹವೇ ಇಲ್ಲ' – ಹೀಗೆ ಭಗವಂತನೇ ಪ್ರತಿಜ್ಞೆಮಾಡಿದ್ದಾನೆ.

'ಮೂಢರೂ, ದುರಾತ್ಮರೂ, ಧರ್ಮಸಂಕರವನ್ನು ಉಂಟುಮಾಡು

---

* ಮಾತ್ಸ್ಯನ್ಯಾಯ : ದೊಡ್ಡ ಮೀನು ಚಿಕ್ಕಮೀನುಗಳನ್ನು ನುಂಗಿಹಾಕುವಂತೆ ಬಲಿಷ್ಠರಾದವರು ದುರ್ಬಲರನ್ನು ವಿನಾಶಗೊಳಿಸುತ್ತಾರೆ.

ವವರೂ, ಲೋಕಮರ್ಯಾದೆಯನ್ನು ಮೀರಿ ನಡೆಯುವವರೂ, ನೀಚರೂ ಆಗಿರುವವರು ನರಕದಲ್ಲಿ ಬೀಳುತ್ತಾರೆ ಮತ್ತು ಆಸುರೀಯೋನಿಗಳಲ್ಲಿ ಜನ್ಮ ತಾಳುತ್ತಾರೆ'–ಇದು ಪರಮಾತ್ಮನ ಆಜ್ಞೆಯಾಗಿದೆ.

ದೇವಿ! ಲೋಕಮರ್ಯಾದೆಯನ್ನು ನೀನೂ ಕೂಡ ರಕ್ಷಿಸಲೇಬೇಕಾಗಿದೆ. ಇದರಲ್ಲಿ ಸಂಶಯವೇ ಇಲ್ಲ. ನಾನೂ ಕೂಡ ಲೋಕಮರ್ಯಾದೆಯನ್ನು ರಕ್ಷಿಸುವುದರಲ್ಲಿಯೇ ಸುಸ್ಥಿರನಾಗಿದ್ದೇನೆ."

"ಮಹಾಮುನಿಯೇ! ಶಬ್ದ ಎಂದು ಯಾವುದನ್ನು ಹೇಳುತ್ತಾರೆ? ಅರ್ಥ ಎಂದರೇನು? ನೀನು ಇವೆರಡರ ಆಕೃತಿ-ಲಕ್ಷಣಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಹೇಳು."

ವ್ಯತ್ಯಯೇನ ಚ ವರ್ಣಾನಾಂ ಪರಿವಾದಕೃತೋ ಹಿ ಯಃ ।
ಸ ಶಬ್ದ ಇತಿ ವಿಜ್ಞೇಯಸ್ತನ್ನಿಪಾತೋऽರ್ಥ ಉಚ್ಯತೇ ॥

"ಅಕಾರಾದಿಯಾದ ವರ್ಣಸಮುದಾಯದಲ್ಲಿ ಕ್ರಮವಾಗಿ ಅಥವಾ ವ್ಯತಿಕ್ರಮವಾಗಿ ಜೋಡಿಸಿ ಉಚ್ಚಾರಣೆಮಾಡಿದ ನಂತರ ಯಾವ ವಸ್ತುವು ಪ್ರಕಾಶಕ್ಕೆ ಬರುವುದೋ–ಅದನ್ನು ಶಬ್ದವೆಂದು ತಿಳಿಯಬೇಕು ಮತ್ತು ಆ ಶಬ್ದದಿಂದ ಯಾವ ಅಭಿಪ್ರಾಯವು ವ್ಯಕ್ತವಾಗುವುದೋ–ಅದಕ್ಕೆ ಅರ್ಥವೆಂದು ಹೇಳುತ್ತಾರೆ."

"ಪ್ರಿಯನೇ! ವರ್ಣಗಳ ಜೋಡಣೆಯಿಂದ ಶಬ್ದವಾದನಂತರ ಆ ಶಬ್ದದಿಂದ ಒಂದು ಅಭಿಪ್ರಾಯವು ವ್ಯಕ್ತವಾಗುವುದೆನ್ನುವುದಾದರೆ–ಶಬ್ದ ಮತ್ತು ಅರ್ಥಗಳಿಗೆ ಯಾವುದಾದರೂ ಸಂಬಂಧವಿರುವುದೇ ಅಥವಾ ಇಲ್ಲವೇ?"

"ದೇವಿ! ಶಬ್ದ ಮತ್ತು ಅರ್ಥಗಳಲ್ಲಿ ಒಂದೇ ಪ್ರಕಾರವಾದ, ನಿಯತವಾದ ಸಂಬಂಧವೇನೂ ಇರುವುದಿಲ್ಲ. ಪುಷ್ಕರದಲ್ಲಿ ನೀರಿರುವಂತೆ ಶಬ್ದಾರ್ಥಗಳ ಸಂಬಂಧವಿವೆ. (ಪುಷ್ಕರವೆಂದರೆ ನೀರಿನಿಂದ ಕೂಡಿದುದು–ಎಂದರ್ಥ. ಪುಷ್ಕರದಲ್ಲಿ ನೀರಿದೆ ಎಂದು ಹೇಳಬೇಕಾಗಿಯೇ ಇಲ್ಲ. ಅದೇ ರೀತಿಯಲ್ಲಿ ಅರ್ಥವು ಶಬ್ದವನ್ನು ಅನುಸರಿಸಿಯೇ ಹೋಗುತ್ತದೆ.)"

"ಮಹಾಪ್ರಾಜ್ಞನೇ! ನನ್ನ ಅಭಿಪ್ರಾಯದಲ್ಲಿ ಅರ್ಥದಲ್ಲಿಯೇ ಶಬ್ದದ ಅಸ್ತಿತ್ವವಿರುತ್ತದೆ. ಅರ್ಥವಿಲ್ಲದಿದ್ದರೆ ಶಬ್ದದ ಅಸ್ತಿತ್ವವೇ ಇರುವುದಿಲ್ಲ.

ಹಾಗೇನಾದರೂ ಅರ್ಥಸಂಬಂಧವಿಲ್ಲದೆಯೇ ಯಾವುದಾದರೂ ಶಬ್ದವಿರುವುದಾದರೆ ಆ ಶಬ್ದವನ್ನಾದರೂ ನನಗೆ ಹೇಳು."

"ಭಾಮಿನಿ! ಅರ್ಥದೊಡನೆ ಶಬ್ದದ ಏಕಸ್ವರೂಪವಾದ ನಿತ್ಯಸಂಬಂಧವಿದೆ. ಶಬ್ದವಿದ್ದರೆ ಅದರೊಡನೆ ಅರ್ಥವೂ ಇದ್ದೇ ಇರುತ್ತದೆ. ಶಬ್ದಗಳನ್ನು ವ್ಯತಿಕ್ರಮವಾಗಿ ಉಚ್ಚರಿಸಿದರೂ ಅದೂ ಒಂದು ಶಬ್ದವಾಗಿಯೇ ಪರಿಣಮಿಸಿ ಆ ಶಬ್ದವನ್ನು ಅರ್ಥವು ಅನುಸರಿಸಿಯೇ ಹೋಗುತ್ತದೆ."

"ನಾಥ! ಶಬ್ದಕ್ಕೆ ಅರ್ಥಾತ್ ವೇದಕ್ಕೆ ಆಧಾರಭೂತನು ಅರ್ಥರೂಪನಾದ ಪರಮಾತ್ಮನೇ ಆಗಿದ್ದಾನೆ. ಇದು ವಿದ್ವಾಂಸರ ಅಭಿಪ್ರಾಯವಾಗಿದೆ. ನನ್ನ ಅಭಿಮತವೂ ಇದೇ ಆಗಿರುತ್ತದೆ. ಅರ್ಥದ ಆಧಾರವಿಲ್ಲದ ಶಬ್ದವಿರಲು ಸಾಧ್ಯವೇ ಇಲ್ಲ. ಆದರೆ ನೀನು ಶಬ್ದಕ್ಕೂ ಮತ್ತು ಅರ್ಥಕ್ಕೂ ನಿಯತವಾದ ಸಂಬಂಧವಿಲ್ಲವೆಂದು ಹೇಳುವೆ. ಆದುದರಿಂದ ನಿನ್ನ ಮಾತು ಪ್ರಚಲಿತವಾಗಿರುವ ವಿದ್ವಾಂಸರ ಅಭಿಪ್ರಾಯಕ್ಕೆ ವಿರುದ್ಧವಾಗಿದೆ."

"ದೇವಿ! ನಾನು ಪ್ರಚಲಿತವಾಗಿರುವ ವಿದ್ವಾಂಸರ ಅಭಿಪ್ರಾಯಕ್ಕೆ ವಿರುದ್ಧವಾದುದೇನನ್ನೂ ಹೇಳಿಲ್ಲ. ಆಕಾಶವಿಲ್ಲದೇ ಪೃಥ್ವಿಯು ಇರಲು ಸಾಧ್ಯವೇ ಇಲ್ಲ. ಆದರೆ ಆಕಾಶ ಮತ್ತು ಭೂಮಿಗಳಿಗೆ ನಿತ್ಯವಾದ ಸಂಬಂಧವೇನೂ ಇರುವುದಿಲ್ಲ. ಹಾಗೆಯೇ ಶಬ್ದಾರ್ಥಗಳ ಸಂಬಂಧವೆಂದೂ ತಿಳಿದುಕೊಳ್ಳಬೇಕು."

"ಪ್ರಾಣನಾಥ! 'ಅಹಂ' ಎಂಬ ಶಬ್ದವು ಸರ್ವಕಾಲದಲ್ಲಿಯೂ ಆತ್ಮನಲ್ಲಿಯೇ ಆಶ್ರಯವನ್ನು ಹೊಂದಿದೆಯೆಂಬುದು ಸ್ಪಷ್ಟವಾಗಿಯೇ ಇದೆ. ಆದರೆ 'ಯತೋ ವಾಚೋ ನಿವರ್ತನ್ತೇ' ಎಂಬ ಶ್ರುತ್ಯನುಸಾರವಾಗಿ ಶಬ್ದವು ಆ ಆತ್ಮನ ಬಳಿಗೆ ಪ್ರವೇಶಿಸುವಂತೆಯೇ ಇಲ್ಲ. ಆದುದರಿಂದ ಆತ್ಮನು ಅಸ್ಪೃಷ್ಟಬ್ದಾತ್ಮನು ಎಂಬುದೂ ಸುಳ್ಳಾಗುತ್ತದೆ."

"ಶುಭವ್ರತೇ! ಅಹಂ ಶಬ್ದವು ಅಹಂಭಾವವೇ ಹೊರತು ಆತ್ಮಭಾವವಲ್ಲ. ಆದರೆ ಅಹಂಭಾವಕ್ಕೆ ಆತ್ಮಭಾವದಲ್ಲಿ ಪ್ರಯೋಗವಿದೆ. ಸಗುಣ ಲಕ್ಷಣಗಳಿಂದ ಕೂಡಿದ ಮಾತುಗಳು ನಿರ್ಗುಣನೂ ಅಚಿಂತ್ಯನೂ ಆದ ಪರಮಾತ್ಮನ ಸ್ವರೂಪವನ್ನು ತಿಳಿಸುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಮಣ್ಣಿನ ಗಡಿಗೆಯಲ್ಲಿ ಮಣ್ಣಿನ ಭಾವವಿದೆ. ಅದರಂತೆಯೇ ಪರಮಾತ್ಮನಿಂದ

ಹುಟ್ಟಿರುವ ಪದಾರ್ಥಗಳಲ್ಲಿಯೂ ಪರಮಾತ್ಮಭಾವವಿರುತ್ತದೆ. ಆದುದರಿಂದ ಅಚಿಂತ್ಯನಾದ ಪರಬ್ರಹ್ಮಪರಮಾತ್ಮನಲ್ಲಿ ಅಹಂಭಾವವೂ ಆತ್ಮಭಾವವೇ ಆಗಿದೆ. 'ನಾನು' 'ನೀನು' 'ಅವನು'–ಇವುಗಳೆಲ್ಲವೂ ಪರಬ್ರಹ್ಮಪರಮಾತ್ಮನಲ್ಲಿ ನಾವು ಮಾಡಿರುವ ಕಲ್ಪನೆಗಳೇ ಆಗಿವೆ. ಆದುದರಿಂದ 'ಯತೋ ವಾಚೋ ನಿವರ್ತನ್ತೇ' ಎಂಬ ಶ್ರುತಿವಾಕ್ಯಕ್ಕೆ ನಾನು ಹೇಳಿದ ಮಾತು ವಿರೋಧವಾಗಿಲ್ಲ. ಮನುಷ್ಯರು ಭ್ರಾಂತಚಿತ್ತರಾಗಿ 'ಅಹಂ' 'ತ್ವಂ' ಇವೇ ಮೊದಲಾದ ಪದಗಳ ಪ್ರಯೋಗವನ್ನು ಮಾಡುತ್ತಾರೆ. ಆಕಾಶದಲ್ಲಿ ರುವ ಸಂಪೂರ್ಣವಿಶ್ವವೂ ಅದರೊಡನೆ ಸಂಸಕ್ತವಾಗಿರುವಂತೆ ಕಾಣುವಂತೆ– ಪರಮಾತ್ಮನಲ್ಲಿರುವ ಎಲ್ಲ ದೃಶ್ಯಪ್ರಪಂಚವೂ ಅವನಲ್ಲಿಯೇ ಸಂಸಕ್ತವಾಗಿರುವಂತೆ ಕಾಣುತ್ತದೆ.

ಬ್ರಹ್ಮನೊಡನೆ ಜಗತ್ತಿಗೆ ಯಾವ ಸಂಬಂಧವಿರುವುದೋ–ಆ ಸಂಬಂಧದಿಂದಲೇ ಇದು ಅವನ ಕಾರ್ಯವೆಂಬುದು ತಿಳಿದುಬರುತ್ತದೆ. ಯಾವ ರೀತಿಯಲ್ಲಿ ಜಗತ್ತು ಆಕಾಶದಿಂದ ಪ್ರತ್ಯೇಕವಾಗಿದ್ದರೂ ಅದರ ವಿಕಾರಗಳೊಡನೆ ಸಂಬಂಧವಿರುವುದರಿಂದ ಸರ್ವಕಾಲದಲ್ಲಿಯೂ ಜಗತ್ತು ಆಕಾಶದೊಡನೆ ಸೇರಿಯೇ ಇರುತ್ತದೆ. ಅದೇ ರೀತಿಯಲ್ಲಿ ಜಗತ್ತಿನೊಡನೆ ಬ್ರಹ್ಮವಸ್ತುವಿಗೆ ಯಾವುದೇ ಸಂಬಂಧವಿಲ್ಲದಿದ್ದರೂ ಜಗತ್ತು ಬ್ರಹ್ಮವಸ್ತುವಿನಿಂದ ಹುಟ್ಟಿರುವ ಕಾರಣ ಜಗತ್ತನ್ನು ಬ್ರಹ್ಮರೂಪವೆಂದೇ ಹೇಳುತ್ತಾರೆ. ಬ್ರಹ್ಮವು ಪರಮಶುದ್ಧವಾದುದು ಮತ್ತು ಉಪಮಾನರಹಿತವಾದುದು. ಮಾತಿನ ಮೂಲಕವಾಗಿ ಅದನ್ನು ವರ್ಣಿಸಲು ಸಾಧ್ಯವೇ ಇಲ್ಲ. ಚರ್ಮದ ಕಣ್ಣುಗಳಿಂದ ಅದನ್ನು ನೋಡಲೂ ಸಾಧ್ಯವಾಗುವುದಿಲ್ಲ. ಜ್ಞಾನದೃಷ್ಟಿಯಿಂದ ಮಾತ್ರವೇ ಅದನ್ನು ನೋಡಲು ಸಾಧ್ಯವಾಗುತ್ತದೆ. ಇದು ನನ್ನ ಅಭಿಪ್ರಾಯವಾಗಿದೆ."

"ಪತಿದೇವ! ಹಾಗಾದರೆ ನಿರ್ವಿಕಾರವಾದ, ನಿರಾಕಾರವಾದ, ಮರ್ಯಾದಾತೀತವಾದ ಮತ್ತು ಸರ್ವವ್ಯಾಪಿಯಾದ ಆಕಾಶದ ದರ್ಶನವು ಸರ್ವದಾ ಆಗುತ್ತಲೇ ಇರುತ್ತದೆ. ಅದೇ ರೀತಿಯಲ್ಲಿ ನಿರ್ವಿಕಾರ-ನಿರಾಕಾರನಾದ ಆತ್ಮನ ದರ್ಶನವೂ ಆಗುತ್ತದೆ."

"ಸುವರ್ಚಲೇ! ಮನುಷ್ಯನು ಚರ್ಮದ ಮೂಲಕ ಆಕಾಶದಲ್ಲಿರುವ

ವಾಯುವಿನ ಸ್ಪರ್ಶವನ್ನು ಪದೇ-ಪದೇ ಮಾಡುತ್ತಲೇ ಇರುತ್ತಾನೆ. ಘ್ರಾಣೇಂದ್ರಿಯದ ಮೂಲಕ ಆಕಾಶದಲ್ಲಿರುವ ಗಂಧವನ್ನು ಆಘ್ರಾಣಿಸುತ್ತಲೇ ಇರುತ್ತಾನೆ. ಕಣ್ಣುಗಳ ಮೂಲಕವಾಗಿ ಆಕಾಶದಲ್ಲಿರುವ ಜ್ಯೋತಿಯನ್ನು ನೋಡುತ್ತಲೇ ಇರುತ್ತಾನೆ. ಇದೂ ಅಲ್ಲದೇ ಅಂಧಕಾರ, ಕಿರಣಗಳ ಸಮೂಹ, ಮೇಘಗಳ ಸಮೂಹ, ಮಳೆ, ನಕ್ಷತ್ರಗಳ ಸಮೂಹ–ಎಲ್ಲವನ್ನೂ ನೋಡುತ್ತಾನೆ. ಆದರೆ ಆಕಾಶವು ಮಾತ್ರ ದೃಷ್ಟಿಗೆ ಗೋಚರಿಸುವುದಿಲ್ಲ. ಸತ್ಸ್ವರೂಪನಾದ ಪರಮಾತ್ಮನು ಈ ಆಕಾಶಕ್ಕೂ ಆಕಾಶವಾಗಿದ್ದಾನೆ. ಈ ಆಕಾಶಕ್ಕೂ ಅವಕಾಶವನ್ನು ಕಲ್ಪಿಸಿರುವ ಮಹಾಕಾಶನಾಗಿದ್ದಾನೆ. ಅವನಿಗಾಗಿಯೇ ಅವನ ದೆಸೆಯಿಂದಲೇ ಈ ಜಗತ್ತು ಸೃಷ್ಟಿಯಾಗಿದೆ. ಅವನೇ ಸತ್ಯನೂ-ಸರ್ವವ್ಯಾಪಿಯಾದ ವಿಷ್ಣುವೂ ಆಗಿದ್ದಾನೆ. ಪರಮಾತ್ಮನ ಸಂಬಂಧ ವಾದ ಯಾವ ನಾಮಗಳಿವೆಯೋ–ಅವೆಲ್ಲವೂ ಔಪಚಾರಿಕವಾದ ನಾಮ ಧೇಯಗಳಾಗಿವೆ. ಕಣ್ಣುಗಳು, ಮನಸ್ಸು ಮತ್ತು ಯಾವುದೇ ಇಂದ್ರಿಯಗಳ ಮೂಲಕವಾಗಲೀ – ಸರ್ವವ್ಯಾಪಿಯಾದ ಪರಮಾತ್ಮನನ್ನು ಗ್ರಹಿಸುವುದ ಕ್ಕಾಗುವುದಿಲ್ಲ. ಮಾತಿನ ಮೂಲಕವಾಗಿಯೂ ಅವನನ್ನು ವರ್ಣಿಸಲು ಸಾಧ್ಯ ವಿಲ್ಲ. ಕೇವಲ ಸೂಕ್ಷ್ಮಬುದ್ಧಿಯ ಮೂಲಕವಾಗಿ ಅವನನ್ನು ಧ್ಯಾನಿಸಿ ಸಾಕ್ಷಾತ್ಕರಿಸಿಕೊಳ್ಳಬಹುದಾಗಿದೆ.

ದೊಡ್ಡ ಗಡಿಗೆ ಮತ್ತು ಚಿಕ್ಕಗಡಿಗೆಗಳು ಭೂಮಿಯಲ್ಲಿ ಪ್ರತಿಷ್ಠಿತ ವಾಗಿರುವಂತೆ–ಆ ಪರಬ್ರಹ್ಮವಸ್ತುವಿನಲ್ಲಿ ಈ ಅಖಿಲಪ್ರಪಂಚವೂ ಪ್ರತಿಷ್ಠಿತ ವಾಗಿದೆ. ಮಣ್ಣಿನ ವ್ಯತ್ಯಾಸದಿಂದಲೂ ದ್ರವ್ಯವಿಶೇಷದ ಸಂಯೋಗ ದಿಂದಲೂ ಒಂದು ಕಡೆಯಲ್ಲಿರುವ ನೀರಿನ ರುಚಿಯು ಮತ್ತೊಂದು ಕಡೆ ಯಲ್ಲಿ ವ್ಯತ್ಯಾಸ (ಉಪ್ಪು ಅಥವಾ ಸಿಹಿ) ವಾಗುವಂತೆ ಪ್ರಕೃತಿ ಮತ್ತು ಆತ್ಮಗಳ ಸಂಯೋಗದಿಂದ ಗುಣ-ಕರ್ಮಗಳ ಅನುಸಾರವಾಗಿ ಅನೇಕ ಪ್ರಕಾರವಾದ ಸೃಷ್ಟಿಯಾಗುತ್ತದೆ. ಯಾವ ರೀತಿಯಲ್ಲಿ ಬಾಯಾರಿದ ಮನುಷ್ಯನು ನೀರನ್ನು ಕುಡಿಯುವುದರಿಂದ ತೃಪ್ತಿಯನ್ನು ಹೊಂದುತ್ತಾ ನೆಯೋ–ಅದೇ ರೀತಿಯಲ್ಲಿ ಸಾಧಕನು ಬ್ರಹ್ಮಬೋಧಕವಾದ ವಾಕ್ಯಗಳನ್ನು

ಸ್ಮರಣೆಮಾಡಿಕೊಳ್ಳುವುದರಿಂದಲೇ ಬ್ರಹ್ಮಸಂಬಂಧವಾದ ಸಂಪೂರ್ಣಜ್ಞಾನ ವನ್ನು ಪಡೆಯುತ್ತಾನೆ ಮತ್ತು ಅದರಿಂದಲೇ ಆತ್ಮಾನಂದವನ್ನೂ ಹೊಂದು ತ್ತಾನೆ."

"ಅನಘನೇ! ಪತಿದೇವ! ಈ ಶಬ್ದದಿಂದ (ವೇದದಿಂದ) ಯಾವುದು ತಾನೇ ಸಾಧ್ಯವಾಗುತ್ತದೆ? ಶಬ್ದದಿಂದ ಯಾವ ಪ್ರಯೋಜನವೂ ಇಲ್ಲವೆಂಬುದೇ ನನ್ನ ಅಭಿಮತವಾಗಿದೆ. ಆದರೆ ಪೌರಾಣಿಕರು ಪರಮಾತ್ಮನು ಅಚಿಂತ್ಯನೆಂದೂ–ವೇದಗಮ್ಯನೆಂದೂ ಹೇಳುತ್ತಾರೆ. ಯಾವ ರೀತಿಯಲ್ಲಿ ಲೋಕದಲ್ಲಿ ಅನೇಕಶಬ್ದಗಳು ನಿರರ್ಥಕವಾಗಿ ಹೋಗುವುವೋ–ಅದೇ ರೀತಿಯಲ್ಲಿ ವೈದಿಕಶಬ್ದಗಳೂ (ವೇದವೂ) ನಿರರ್ಥಕವಾಗುವುದೆಂದೇ ನನ್ನ ಬುದ್ಧಿಗೆ ತೋಚುತ್ತದೆ. ನೀನು ಈ ವಿಷಯದಲ್ಲಿ ಯಥಾಯೋಗ್ಯವಾಗಿ ವಿಚಾರಮಾಡಿ ಯಥಾರ್ಥವಾದ ವಿಷಯವನ್ನು ನನ್ನೊಡನೆ ಹೇಳು."

"ಸುವರ್ಚಲೇ! 'ಶುದ್ಧಸ್ವರೂಪನಾದ ಪರಬ್ರಹ್ಮಪರಮಾತ್ಮನು ವೇದ ಗಮ್ಯನು'–ಎಂದು ಹೇಳುವ ಶ್ರುತಿವಾಕ್ಯವು ಪರಮಸತ್ಯವಾಗಿದೆ. ಬ್ರಹ್ಮ ವಸ್ತುವು ಪ್ರತ್ಯಕ್ಷವಾಗಿ ಕಾಣದೇ ಇರುವುದರಿಂದ ಆ ಶ್ರುತಿಯು ವ್ಯಾಘಾತ ದೋಷದಿಂದ ದೂಷಿತವಾಗುವುದರಿಂದ ಸತ್ಯವಲ್ಲವೆಂದು ನಾಸ್ತಿಕರ ಮತ ವಾಗಿದೆ. ಸೂಕ್ಷ್ಮಶರೀರವಿಶಿಷ್ಟವಾದ ಸ್ಥೂಲದೇಹದಲ್ಲಿ ಜೀವಾತ್ಮರೂಪದಲ್ಲಿ ಪರಮಾತ್ಮನ ಅಸ್ತಿತ್ವವು ಸಿದ್ಧವಾಗುತ್ತದೆ. ಆದುದರಿಂದ ಶ್ರುತಿವಾಕ್ಯವು ಪರ ಮಸತ್ಯವಾಗಿದೆ. ಉತ್ತಮಳೇ! ಯಾವುದೇ ಲೌಕಿಕ ಶಬ್ದವೂ ಕೂಡ ನಿರರ್ಥಕ ವಾಗುವುದಿಲ್ಲ. ಯಾವ ಶಬ್ದಗಳು ಪರಸ್ಪರ ಅನ್ವಯವಾಗುವುದಿಲ್ಲವೋ– ಒಂದು ಶಬ್ದಕ್ಕೂ ಮತ್ತೊಂದು ಶಬ್ದಕ್ಕೂ ಅಸಂಬದ್ಧತೆಯಿರುವುದೋ– ಅಂತಹ ಶಬ್ದಗಳನ್ನು ಲೌಕಿಕರು ನಿರರ್ಥಕವೆಂದು ಹೇಳುತ್ತಾರೆ. ಲೌಕಿಕಶಬ್ದ ಗಳಂತೆಯೇ ವೈದಿಕಶಬ್ದಗಳೂ ನಿರರ್ಥಕಗಳಲ್ಲ. ಆದರೆ ಅವುಗಳು ಪರ ಮಾತ್ಮನ ಸ್ವರೂಪವನ್ನು ತಿಳಿಸಲು ಅಸಮರ್ಥವಾಗಿವೆ. ಪರಮಾತ್ಮನು ವಾಣಿಗೆ ಅಗೋಚರನೆಂದೂ ಹೇಳಲ್ಪಟ್ಟಿದ್ದಾನೆ. ಇದು ಯುಕ್ತಿಯುಕ್ತವಾಗಿಯೂ ಇದೆ. ವೇದಗಳಲ್ಲಿ ಬ್ರಹ್ಮಸಾಕ್ಷಾತ್ಕಾರಕ್ಕೆ ಸಾಧಕವಾದ ಉಪದೇಶಗಳಿವೆ. ವೇದಗಳು

ಸಾಧನೆಯ ಉಪಾಯವನ್ನು ಸೂಚಿಸಿವೆ. (ಗ್ರಹಣಕಾಲದಲ್ಲಿ ಸೂರ್ಯ-ಚಂದ್ರರೊಡನೆ ರಾಹುವಿನ ದರ್ಶನವಾಗುವಂತೆ) ಉಪಲಕ್ಷಣಯೋಗದಿಂದ ಜೀವಾತ್ಮನ ರೂಪದಲ್ಲಿ ಪರಮಾತ್ಮನ ಇರುವಿಕೆಯನ್ನು ವೇದಗಳು ಪ್ರತಿಪಾದಿಸುತ್ತವೆ. 'ನೇತಿ–ನೇತಿ' ಇವೇ ಮೊದಲಾದ ನಿಷೇಧಾತ್ಮಕ ವಾಕ್ಯಗಳಿಂದ ವೇದವು ಅನಾತ್ಮವಸ್ತುಗಳ ಜ್ಞಾನವನ್ನು ಬೋಧಿಸುತ್ತಾ ಬ್ರಹ್ಮರೂಪದ ವೈಶಿಷ್ಟ್ಯವನ್ನು ಹೇಳುತ್ತದೆ. ಈ ಕಾರಣಗಳಿಂದ ಶುದ್ಧಸ್ವರೂಪನಾದ ಪರಮಾತ್ಮನು ವೇದಗಳಿಗೆ ಮಾತ್ರವೇ ಗಮ್ಯನು–ಎಂಬುದು ನನ್ನ ಅಭಿಮತವಾಗಿದೆ. ಶುಭಾಚಾರಳೇ! ಅಧ್ಯಾತ್ಮತತ್ತ್ವದ ನಿತ್ಯಚಿಂತನೆಯಿಂದ ಹುಟ್ಟಿದ ದಿವ್ಯಜ್ಞಾನವು ದೀಪದಂತೆ ಸ್ಪಷ್ಟವಾಗಿ ಪ್ರಕಾಶಿತವಾಗುತ್ತದೆ. ಆ ಜ್ಞಾನದಿಂದಲೇ ಮನುಷ್ಯರು ಪರಮಗತಿಯನ್ನು ಹೊಂದುತ್ತಾರೆ. ಜ್ಞಾನದೃಷ್ಟಿಯಿಂದ ಸಂಪನ್ನಳಾಗಿರುವವಳೇ! ಶುದ್ಧಳೇ! ಶುಭಲಕ್ಷಣಳೇ! ನಾನು ನಿನಗೆ ಈ ನಿಗೂಢವಾದ ಯಥಾರ್ಥವಾದ ಬ್ರಹ್ಮಜ್ಞಾನದ ವಿಷಯವನ್ನು ಹೇಳಿದ್ದೇನೆ. ಅದನ್ನು ಕೇಳಿಸಿಕೊಂಡೆಯೋ ಇಲ್ಲವೋ? ಶುಭಾವಹಳೇ! ಪರಬ್ರಹ್ಮಪರಮಾತ್ಮನ ಐಶ್ವರ್ಯವು ನಾನಾರೂಪಗಳಲ್ಲಿ ಕಾಣುತ್ತದೆ. ವಾಯುವೂ ಬ್ರಹ್ಮನ ಬಳಿಗೆ ಹೋಗಲಾರನು. ಸೂರ್ಯನಾಗಲೀ–ಅಗ್ನಿಯಾಗಲೀ ಪರಬ್ರಹ್ಮಪರಮೇಶ್ವರನನ್ನು ಬೆಳಗಲಾರರು. ಪರಮಾತ್ಮನಿಂದಲೇ ಈ ಸಂಪೂರ್ಣಜಗತ್ತೂ ಪರಿಪೂರ್ಣವಾಗಿದೆ. ಅವನೇ ಪ್ರತಿಯೊಂದು ಪ್ರಾಣಿಗಳ ಹೃದಯದಲ್ಲಿಯೂ ಆತ್ಮರೂಪದಿಂದ ನಿವಾಸಮಾಡುತ್ತಿದ್ದಾನೆ. ಸುವರ್ಚಲೇ! ಇದೇ ಪರಮಾತ್ಮನ ವಿಜ್ಞಾನವಾಗಿದೆ. 'ಅಹಂ' ಪದದ ಅರ್ಥವೂ ಇದೇ ಆಗಿದೆ. ನಮ್ಮಿಬ್ಬರ ಸತ್ತೆಯೂ ನಿತ್ಯವೇನಲ್ಲ. ಅಜ್ಞಾನದ ಕಾರಣದಿಂದಾಗಿ ನಮಗೆ ಈ ಬಂಧನವು ಪ್ರಾಪ್ತವಾಗಿದೆ."

ತನ್ನ ಪತಿಯು ಯಥಾವತ್ತಾಗಿ ತತ್ತ್ವೋಪದೇಶವನ್ನು ಮಾಡಿದ ನಂತರ ಸುವರ್ಚಲೆಯು ಆನಂದಭರಿತಳಾದಳು. ಅವಳು ಯಾವಾಗಲೂ ತತ್ತ್ವಜ್ಞಾನನಿಷ್ಠಳಾಗಿರುತ್ತಾ ಅದಕ್ಕೆ ಅನುರೂಪವಾದ ಆಚರಣೆಯುಳ್ಳವಳಾಗಿದ್ದಳು. ಶ್ವೇತಕೇತುವೂ ಪತ್ನಿಯೊಡನೆ ನಿತ್ಯ-ನೈಮಿತ್ತಿಕಕರ್ಮಗಳಲ್ಲಿ ನಿರತನಾಗಿರುತ್ತಿದ್ದನು. ತನ್ನ ಎಲ್ಲ ಕರ್ಮಗಳನ್ನೂ ಮಹಾತ್ಮನಾದ

ಗೋವಿಂದವಾಸುದೇವನಲ್ಲಿ ಸಮರ್ಪಿಸುತ್ತಾ ಅವನ ಧ್ಯಾನದಲ್ಲಿಯೇ ಮಗ್ನನಾಗಿರುತ್ತಿದ್ದನು. ಹಲವಾರು ವರ್ಷಗಳು ಕಳೆದನಂತರ ಪರಮಗತಿಯನ್ನು ಸೇರಿದನು.

ಸನತ್ಕುಮಾರೋಪದೇಶಪ್ರಕರಣ

೨೨೨ನೆಯ ಅಧ್ಯಾಯದಲ್ಲಿ : ಮೊದಲು ಸನತ್ಕುಮಾರರು ಋಷಿಗಳಿಗೆ ಭಗವತ್ಸ್ವರೂಪವನ್ನು ಉಪದೇಶಿಸಿದ ಪ್ರಕರಣವು ಬರುತ್ತದೆ. ಈ ಪ್ರಕರಣವನ್ನು ಪ್ರಕ್ಷಿಪ್ತವೆಂದು ಎಲ್ಲರೂ ಬಗೆದಿದ್ದಾರೆ. ಅದನ್ನೂ ಇಲ್ಲಿ ಸಂಕ್ಷೇಪಿಸಿ ಕೊಡಲಾಗಿದೆ.

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

“ಜಗತ್ತಿನಲ್ಲಿ ವಿದ್ವಾಂಸರು ಜಡ ಮತ್ತು ಚೇತನ ಅಥವಾ ಪ್ರಕೃತಿ ಮತ್ತು ಪುರುಷ–ಈ ಎರಡು ತತ್ತ್ವಗಳನ್ನು ಪ್ರತಿಪಾದಿಸುತ್ತಾರೆ. ಕೆಲವು ವಿದ್ವಾಂಸರು ಜೀವ, ಈಶ್ವರ ಮತ್ತು ಪ್ರಕೃತಿ–ಈ ಮೂರು ತತ್ತ್ವಗಳನ್ನು ಪ್ರತಿಪಾದಿಸುತ್ತಾರೆ. ಮತ್ತೆ ಕೆಲವರು ಅನೇಕತತ್ತ್ವಗಳಿವೆಯೆನ್ನುತ್ತಾರೆ. ಇವರ ಮಾತುಗಳಲ್ಲಿ ವಿಶ್ವಾಸವನ್ನು ಇಡುವುದಕ್ಕಾಗುವುದಿಲ್ಲ. ಅವಿಶ್ವಾಸವನ್ನೂ ಇಡುವುದಕ್ಕಾಗುವುದಿಲ್ಲ. ಮೇಲಾಗಿ ಪರಬ್ರಹ್ಮವಸ್ತುವನ್ನು ನೋಡುವುದಕ್ಕೂ ಆಗುವುದಿಲ್ಲ. ನಾನಾಪ್ರಕಾರವಾದ ಶಾಸ್ತ್ರಗಳಿವೆ. ಅವುಗಳ ಉಕ್ತಿಗಳೂ ಭಿನ್ನ- ಭಿನ್ನವಾಗಿಯೇ ಇವೆ. ಪಿತಾಮಹ! ನಾನು ಯಾವ ಸಿದ್ಧಾಂತವನ್ನು ಆಶ್ರಯಿಸಲಿ? ಇದನ್ನು ನನಗೆ ಹೇಳು.”

“ಯುಧಿಷ್ಠಿರ! ಶಾಸ್ತ್ರವಿಷಯದಲ್ಲಿ ಪ್ರಭಾವಶಾಲಿಗಳಾದ ಎಲ್ಲ ವಿದ್ವಾಂಸರೂ ತಮ್ಮ ತಮ್ಮ ಸಿದ್ಧಾಂತಗಳನ್ನು ಪ್ರತಿಪಾದನೆಮಾಡುವುದರಲ್ಲಿಯೇ ಆಸಕ್ತರಾಗಿರುತ್ತಾರೆ. ಅಂತಹ ಪಂಡಿತರು ಈ ಜಗತ್ತಿನಲ್ಲಿ ಅನೇಕರಿದ್ದಾರೆ. ಅವರಲ್ಲಿ ನಿಶ್ಚಯವಾದ ತತ್ತ್ವವನ್ನು ತಿಳಿದಿರುವವರು ಯಾರು ಮತ್ತು ಕೇವಲ ಚರ್ಚೆಗಳಲ್ಲಿಯೇ ಆಸಕ್ತರಾಗಿರತಕ್ಕವರು ಯಾರು?–ಎಂಬುದನ್ನು ತಿಳಿಯಲು ಕಷ್ಟವೇ ಆಗುತ್ತದೆ. ಎಲ್ಲರೂ ಹೇಳುವ ತತ್ತ್ವಗಳನ್ನು ಚೆನ್ನಾಗಿ ತಿಳಿದುಕೊಂಡು ಯಾವ ತತ್ತ್ವದಲ್ಲಿ ನಿನಗೆ ಅಭಿರುಚಿಯಿರುವುದೋ ಅದಕ್ಕೆ ಅನುಸಾರವಾಗಿ ಆಚರಿಸು. ಈ ವಿಷಯದಲ್ಲಿ

ಒಂದು ಪ್ರಾಚೀನೇತಿಹಾಸವು ಪ್ರಸಿದ್ಧವಾಗಿದೆ. ಒಮ್ಮೆ ಭಾವಿತಾತ್ಮರಾದ ಹಲ ವಾರು ಮುನಿಗಳಲ್ಲಿಯೇ ದೊಡ್ಡ ವಿವಾದವುಂಟಾಯಿತು. ಹಿಮವತ್ಪರ್ವತದ ಪಕ್ಕದಲ್ಲಿ ಕಠೋರವ್ರತರಾದ ಆರು ಸಾವಿರ ಮುನಿಗಳು ಸೇರಿದ್ದರು. ಅವರಲ್ಲಿ ಕೆಲವರು 'ಜಗತ್ತು ಶಾಶ್ವತವಾದುದು' ಎಂದೂ,–ಕೆಲವರು 'ಜಗತ್ತು ಶಾಶ್ವತವಲ್ಲವೆಂದೂ', ಕೆಲವರು ಈಶ್ವರಸಹಿತವಾಗಿರುವುದೆಂದೂ, ಕೆಲವರು ಈಶ್ವರನಿಲ್ಲದೆಯೇ ಜಗತ್ತಿನ ಉತ್ಪತ್ತಿಯು ಸ್ವಾಭಾವಿಕವಾಗಿಯೇ ಆಗಿರುವುದೆಂದೂ ಹೇಳುತ್ತಿದ್ದರು. ಅದಕ್ಕೆ ಪ್ರತಿಯಾಗಿ ಕೆಲವರು 'ಜಗತ್ತಿನ ಸೃಷ್ಟಿಗೆ ಸ್ವಭಾವವು ಕಾರಣವಲ್ಲ' ಎನ್ನುತ್ತಿದ್ದರು. ಮತ್ತೆ ಕೆಲವರು 'ಜಗತ್ತೇ ಮಿಥ್ಯೆ'–ಎಂದೂ ಹೇಳುತ್ತಿದ್ದರು. ಹೀಗೆಯೇ ಇತರ ವಿದ್ವಾಂಸರು ಸ್ವಭಾವ ವಾದಿಗಳಾಗಿದ್ದರು. ಕೆಲವರು ಕರ್ಮವಾದಿಗಳಾಗಿದ್ದರು. ಪೌರುಷ, ಕರ್ಮ ಮತ್ತು ದೈವಗಳಿಗೆ ಸ್ವಭಾವವೇ ಆದಿಯೆಂದೂ ಹೇಳುತ್ತಿದ್ದರು.

ಅವರೆಲ್ಲರೂ ನಾನಾಶಾಸ್ತ್ರಗಳ ಪ್ರವರ್ತಕರಾಗಿದ್ದರು. ಅನೇಕ ಪ್ರಕಾರ ವಾದ ನೂರಾರು ಯುಕ್ತಿಗಳ ಮೂಲಕವಾಗಿ ತಮ್ಮ ಮತವನ್ನು ಪುಷ್ಟಿ ಗೊಳಿಸುತ್ತಿದ್ದರು. ಆ ಎಲ್ಲ ಬ್ರಾಹ್ಮಣರೂ ಸ್ವಭಾವದಿಂದಲೇ ಯುಕ್ತಿಗಳ ಮೂಲಕವಾಗಿ ಮತ್ತೊಬ್ಬರನ್ನು ಪರಾಜಯಗೊಳಿಸುವುದರಲ್ಲಿ ಆಸಕ್ತ ರಾಗಿರುತ್ತಿದ್ದರು. ಬಳಿಕ ವಾದಿ-ಪ್ರತಿವಾದಿಗಳಲ್ಲಿ ಒಂದು ಮೂಲಭೂತ ವಾದ ಪ್ರಶ್ನೆಯ ವಿಷಯದಲ್ಲಿ ದೊಡ್ಡದಾದ ವಿವಾದವು ನಡೆಯುತ್ತಿದ್ದಿತು. ಆದರೆ ಆ ಮೂಲವಾದ ಪ್ರಶ್ನೆಯು ಕೇವಲ ವಾದ-ವಿವಾದಗಳಲ್ಲಿಯೇ ಪರ್ಯವಸಾನವಾಗಲಿಲ್ಲ. ಕೈ-ಕೈಮಿಲಾಯಿಸತೊಡಗಿತು. ಒಬ್ಬರು ಮತ್ತೊಬ್ಬರ ಮೇಲೆ ಕೋಪಗೊಂಡು ಪಾತ್ರ, ದಂಡ, ವಲ್ಕಲ, ಮೃಗಚರ್ಮ, ವಸ್ತ್ರಗಳು – ಇವೆಲ್ಲವನ್ನೂ ಎಸೆಯತೊಡಗಿದರು. ಸ್ವಲ್ಪ ಹೊತ್ತಿನಲ್ಲಿಯೇ ಅವರ ಕೋಪವಿಳಿದು ಎಲ್ಲರೂ ಶಾಂತರಾದರು. ಬಳಿಕ ಎಲ್ಲರೂ ಸೇರಿ ಸನಾತನತತ್ತ್ವವನ್ನು ಉಪದೇಶಿಸುವಂತೆ ವಸಿಷ್ಠರನ್ನು ಕೇಳಿಕೊಂಡರು. ವಸಿಷ್ಠರು ಅದರ ವಿಷಯ ತಮಗೆ ತಿಳಿದಿಲ್ಲವೆಂದು ಹೇಳಿಬಿಟ್ಟರು. ಆಗ ಅವರೆಲ್ಲರೂ ನಾರದರ ಬಳಿಗೆ ಹೋಗಿ ಸನಾತನತತ್ತ್ವವನ್ನು ಉಪದೇಶಿಸು ವಂತೆ ಪ್ರಾರ್ಥಿಸಿದರು. ಅವರೂ ಕೂಡ ತಮಗೆ ಸನಾತನತತ್ತ್ವವು ತಿಳಿಯದೆಂದು ಹೇಳಿ–'ಸನಾತನತತ್ತ್ವವನ್ನು ತಿಳಿಯಲು ಮುಂದೆ ನಾವೆಲ್ಲರೂ

ಸೇರಿ ಎಲ್ಲಿಗೆ ಹೋಗೋಣ?'–ಎಂದು ಆ ಮುನಿಗಳನ್ನೇ ಪ್ರಶ್ನಿಸಿದರು. 'ಈ ಲೋಕದಲ್ಲಿ ಮೋಹವಶನಾಗದೇ ಅದ್ಭುತವಾದ ಅಮೃತತತ್ತ್ವವನ್ನು ತಿಳಿದವರು ಯಾರಿದ್ದಾರೆ?' – ಎಂಬ ನಾರದರ ಪ್ರಶ್ನೆಗೆ ಉತ್ತರವಾಗಿ ಅಶರೀರವಾಣಿಯು 'ಸನತ್ಕುಮಾರರ ಆಶ್ರಮಕ್ಕೆ ಹೋಗಿ ಪ್ರಶ್ನಿಸಿರಿ. ಅವರು ನಿಮ್ಮ ಪ್ರಶ್ನೆಗೆ ಉತ್ತರಿಸುವರು'–ಎಂದು ಹೇಳಿತು. ಅಶರೀರವಾಣಿಯ ಆ ಮಾತನ್ನು ಕೇಳಿದ ಬ್ರಾಹ್ಮಣರ ಮಧ್ಯದಲ್ಲಿದ್ದ ವಿಭಾಂಡಕನೆಂಬುವನು ಆ ವಾಣಿಯು ಬಂದ ಕಡೆಗೆ ತಿರುಗಿ ಹೇಳಿದನು : "ನಮ್ಮಲ್ಲಿ ತತ್ತ್ವದ ವಿಷಯ ವಾಗಿ ಅಭಿಪ್ರಾಯಭೇದವುಂಟಾಗಿದೆ. ನೀನು ಯಾರು? ಮಾತನಾಡು ತ್ತಿರುವೆ ; ಆದರೆ ಕಣ್ಣಿಗೆ ಕಾಣಿಸುತ್ತಿಲ್ಲ." ಅದಕ್ಕೆ ಆ ವಾಣಿಯು,

"ಮಹಾಮುನಿಯೇ! ನೀನು ಪಂಡಿತನಾಗಿರುವೆ. ಸರ್ವಕಾಲ ದಲ್ಲಿಯೂ ಏಕರೂಪದಿಂದ ಸಂಚರಿಸುವ ಪುರಾತನಮಹರ್ಷಿಯಾದ ಸನತ್ಕುಮಾರನೇ ನಾನೆಂದು ತಿಳಿ. ವೇದವಿದರು ಅಕ್ಷಯನೆಂದು ಯಾವನನ್ನು ಹೇಳುವರೋ–ಅವನೂ ನಾನೇ ಆಗಿದ್ದೇನೆ" ಎಂದು ಉತ್ತರಿಸಿತು.

"ಆದಿಮುನಿಪ್ರವರನೇ! ನೀನು ನಿನ್ನ ಸ್ವರೂಪದ ಪರಿಚಯವನ್ನು ಮಾಡಿಕೊಡು. ನೀನು ನಮಗೆ ವಿಲಕ್ಷಣನಾಗಿ ಕಾಣುತ್ತಿರುವೆ. ನಿನ್ನ ಸ್ವರೂಪವು ನಮ್ಮೆದುರಿನಲ್ಲಿ ಪ್ರತ್ಯಕ್ಷವಾಗಿರುವುದಿಲ್ಲ. ನಿನಗೆ ಸ್ವರೂಪವೇ ಇಲ್ಲವೇ? ಅಥವಾ ಒಂದು ವೇಳೆ ಸ್ವರೂಪವಿರುವುದಾದರೆ ಅದು ಎಂತಹ ಸ್ವರೂಪ?"

"ಮುನಿಯೇ! ನಿನಗೆ ಕಿವಿಯಾಗಲೀ, ಮುಖವಾಗಲೀ, ಬಾಯಾ ಗಲೀ, ಹಸ್ತ-ಪಾದಗಳಾಗಲೀ, ಕಾಲಿನ ಬೆರಳುಗಳಾಗಲೀ ಇರುವುದಿಲ್ಲ."

"ಋಷಿಯೇ! ನೀನು ಇಂತಹ ಮಾತನ್ನು ಏಕೆ ಹೇಳುವೆ? ಒಂದು ವೇಳೆ ನೀನು ಹೇಳಿದಂತೆ ನನಗೆ ಕಣ್ಣು, ಕಿವಿ, ಮುಖವೇ ಮುಂತಾದುವುಗಳು ಇಲ್ಲದಿದ್ದರೆ ನೀನು ಹೇಳಿದುದನ್ನು ನಾನು ತಿಳಿದುಕೊಳ್ಳುತ್ತಲೇ ಇರಲಿಲ್ಲ."

ಋಷಿಗಳೆಲ್ಲರೂ ನಗು-ನಗುತ್ತಲೇ ಆಕಾಶದ ಕಡೆಗೆ ಪದೇ-ಪದೇ ನೋಡುತ್ತಿದ್ದರೂ ಮುಂದೆ ಆಕಾಶದ ಕಡೆಯಿಂದ ಯಾವ ಪ್ರತಿವಾಕ್ಯವೂ

ಬರಲಿಲ್ಲ. ಇದು ಆಶ್ಚರ್ಯದ ಸಂಗತಿಯೆಂದು ಭಾವಿಸಿ ಅವರೆಲ್ಲರೂ ಮೇರುಪರ್ವತದಲ್ಲಿದ್ದ ಸನತ್ಕುಮಾರಾಶ್ರಮಕ್ಕೆ ಹೋದರು. ಅಲ್ಲವರು ಬ್ರಹ್ಮಭಾವದಲ್ಲಿಯೇ ಇದ್ದ ದೇವಸ್ವರೂಪರಾದ ಸನತ್ಕುಮಾರರನ್ನು ನೋಡಿದರು. ಒಂದು ವರ್ಷ ಕಳೆದನಂತರ ಸನತ್ಕುಮಾರರು ಬಹಿರ್ಮುಖರಾದರು. ಋಷಿಗಳೆಲ್ಲರೂ ಅವರಿಗೆ ನಮಸ್ಕರಿಸಿದರು. ಜ್ಞಾನದಿಂದ ಹೋಗಲಾಡಿಸಲ್ಪಟ್ಟ ಕಲ್ಮಷವುಳ್ಳವರಾಗಿದ್ದ ಸನತ್ಕುಮಾರರು ಋಷಿಗಳನ್ನು ಕುರಿತು ಹೇಳಿದರು : "ಮುನಿಗಳೇ! ಅದೃಶ್ಯವ್ಯಕ್ತಿಯು ನಿಮಗೆ ಏನು ಹೇಳಿತೆಂಬುದು ನನಗೆ ತಿಳಿದಿದೆ. ಈಗ ನೀವು ಕೇಳಲಿರುವ ಎಲ್ಲ ಪ್ರಶ್ನೆಗಳಿಗೂ ನಾನು ಉತ್ತರಿಸುತ್ತೇನೆ. ನಿಮಗೆ ಇಚ್ಛೆಬಂದಂತೆ ಪ್ರಶ್ನೆಗಳನ್ನು ಕೇಳಿರಿ."

ಬ್ರಾಹ್ಮಣರೆಲ್ಲರೂ ಕೈಜೋಡಿಸಿಕೊಂಡು ಜ್ಞಾನನಿಧಿಯಾದ ಸನತ್ಕುಮಾರರನ್ನು ಪ್ರಶ್ನಿಸಿದರು : "ಕುಮಾರ! ನಾವು ಜ್ಞಾನನಿಧಿಯಾದ, ಸರ್ವಶ್ರೇಷ್ಠನಾದ ವಿಶ್ವರೂಪನನ್ನು ಹೇಗೆ ಪೂಜಿಸಬಲ್ಲೆವು? ವಿಶ್ವರೂಪವೆಂಬ ಆ ಪದವು ಯಾವುದು? ಅದು ಎಲ್ಲಿದೆ?–ಎಂಬುದನ್ನು ಹೇಳು."

"ದ್ವಿಜೋತ್ತಮರೇ! ಈ ಹಿಂದೆ ನಿಮ್ಮ ಮಧ್ಯದಲ್ಲಿ ಅಶರೀರಿಯಾದ ದೇವತೆಯು ಏನು ಹೇಳಿತೋ ಆ ರೂಪದಲ್ಲಿ ಅದು ಹೇಳಿದ ಮಾತು ಸತ್ಯವೇ ಆಗಿದೆ. ನೀವು ಆ ವಿಷಯವನ್ನು ತಿಳಿಯದೇ ಅದರೊಡನೆ ಸಂಭಾಷಿಸುತ್ತಿದ್ದಿರಿ. ಕೇಳಿರಿ! ವಿಶ್ವರೂಪಪರಮಾತ್ಮನು ಎಲ್ಲಕ್ಕೂ ಪರಮ ಕಾರಣನಾಗಿದ್ದಾನೆ. ಅವನೇ ಸರ್ವವೂ ಆಗಿದ್ದಾನೆ. ಎಲ್ಲವನ್ನೂ ತಿಳಿದವನೂ ಆಗಿದ್ದಾನೆ. ಅವನು ಯಾರಿಗೂ ಭಯಪಡತಕ್ಕವನಲ್ಲ. ಎಲ್ಲಿಗೂ ಹೋಗತಕ್ಕವನಲ್ಲ. 'ನಾನು ಯಾರಾಗಿದ್ದೇನೆ? ಯಾರವನಾಗಿದ್ದೇನೆ? ಯಾರವನಾಗಿಲ್ಲ? ಯಾವ ಯಾವ ಸಾಧನೆಗಳಿಂದ ಕಾರ್ಯಮಾಡುತ್ತಿದ್ದೇನೆ?'– ಇತ್ಯಾದಿ ವಿಷಯಗಳು ಕಣ್ಣಿಗೆ ಕಾಣಿಸದೇ ಇದ್ದರೂ ಅವನು ಅವುಗಳನ್ನು ತಿಳಿದುಕೊಳ್ಳುತ್ತಾನೆ. ಆ ಪರಮಾತ್ಮನು ಎಲ್ಲ ವಿಷಯಗಳಲ್ಲಿಯೂ ವ್ಯಾಪಕನಾಗಿರುತ್ತಾನೆ. ಅವನು ಜಡಾತ್ಮಕವಾದ ಪ್ರಪಂಚದಿಂದ ಪ್ರತ್ಯೇಕನಾಗಿದ್ದಾನೆ. ಆದರೆ ಪರಮಾತ್ಮನಿಂದ ಭಿನ್ನವಾದ ಜಡವಸ್ತುವಿಲ್ಲ. ಜಡವಸ್ತುವಿಗೆ ಪಾರಮಾರ್ಥಿಕಸತ್ತೆಯಿಲ್ಲ. ಯಾವ ರೀತಿಯಲ್ಲಿ ವಾಯುವು ಒಂದೇ

ಆಗಿದ್ದರೂ ಅನೇಕರೂಪಗಳಿಂದ ಸಂಚರಿಸುತ್ತಿರುತ್ತದೆಯೋ–ಯಾವ ರೀತಿಯಲ್ಲಿ ಪಕ್ಷಿಯಲ್ಲಿಯೂ, ಮೃಗದಲ್ಲಿಯೂ, ವ್ಯಾಘ್ರದಲ್ಲಿಯೂ, ಮನುಷ್ಯನಲ್ಲಿಯೂ, ಬಿದಿರಿನಲ್ಲಿಯೂ, ಏಕರೂಪದಲ್ಲಿದ್ದರೂ ಭಿನ್ನ-ಭಿನ್ನ ರೂಪದಲ್ಲಿರುವಂತೆ ಕಾಣುತ್ತದೆಯೋ–ಅದೇ ರೀತಿಯಲ್ಲಿ ಪರಮಾತ್ಮನೂ ಒಬ್ಬನೇ ಆಗಿದ್ದರೂ ಭಿನ್ನನಾಗಿರುವಂತೆ ಕಾಣುತ್ತಾನೆ. ಆತ್ಮನೇ ಪರಮಾತ್ಮನು. ಆದರೆ ಅವನು ಜೀವರಲ್ಲಿ ಆತ್ಮನಾಗಿರುವಾಗ ಭಿನ್ನನಾಗಿರುವಂತೆ ಕಾಣುತ್ತಾನೆ. ಹೀಗೆ ಆತ್ಮನೇ ಪರಮಾತ್ಮನಾಗಿದ್ದಾನೆ. ಅವನೇ ಹೋಗುತ್ತಾನೆ. ಎಲ್ಲರನ್ನೂ ನೋಡುತ್ತಾನೆ. ಎಲ್ಲರ ಮಾತನ್ನೂ ಕೇಳುತ್ತಾನೆ. ಗಂಧವನ್ನು ಆಘ್ರಾಣಿಸುತ್ತಾನೆ. ಎಲ್ಲರೊಡನೆಯೂ ಮಾತನಾಡುತ್ತಾನೆ.

ಸೂರ್ಯದೇವನ ಚಕ್ರದ ಎಲ್ಲ ಕಡೆಗಳಲ್ಲಿಯೂ ಹತ್ತು ಕಿರಣಗಳಿವೆ. ಅವುಗಳು ಅಲ್ಲಿಂದ ಹೊರಟು ಮಹಾತ್ಮನಾದ ಸೂರ್ಯನನ್ನೇ ಅನುಸರಿಸಿ ಹೋಗುತ್ತವೆ. ಸೂರ್ಯದೇವನು ಪ್ರತಿದಿನವೂ ಅಸ್ತಮಿಸುತ್ತಾನೆ. ಪುನಃ ಪೂರ್ವದಿಕ್ಕಿನಲ್ಲಿ ಉದಯಿಸುತ್ತಾನೆ. ಆದರೆ ಈ ಉದಯಾಸ್ತಗಳು ಸೂರ್ಯನಿಗೆ ಆಗುವುದಿಲ್ಲ. ಅದೇ ರೀತಿಯಲ್ಲಿ ಶರೀರದಲ್ಲಿ ಅಂತರ್ಗತನಾಗಿ ವಿರಾಜಮಾನನಾಗಿರುವ ಪರಮಾತ್ಮನಿಗೆ ಶರೀರಭಾವವಾಗಲೀ–ಅಶರೀರಭಾವವಾಗಲೀ ಇರುವುದಿಲ್ಲ. (ಪ್ರಪಂಚದ ಜನರಿಗೆ ಸೂರ್ಯನು ಹುಟ್ಟಿದಂತೆ ಮತ್ತು ಮುಳುಗಿದಂತೆ ಕಾಣುವನೇ ಹೊರತು ವಸ್ತುತಃ ಸೂರ್ಯನು ಹುಟ್ಟುವುದೂ ಇಲ್ಲ ; ಮುಳುಗುವುದೂ ಇಲ್ಲ. ಅದೇ ರೀತಿಯಲ್ಲಿ ಪರಮಾತ್ಮನು ಶರೀರಿಯಾಗಿ ಹುಟ್ಟಿದಂತೆ ಮತ್ತು ಅವಸಾನಹೊಂದಿದಂತೆ ಕಂಡುಬಂದರೂ ಅವನಿಗೆ ಹುಟ್ಟು ಅಥವಾ ಸಾವುಗಳು ಇರುವುದಿಲ್ಲ.) ವಿಪ್ರೇಂದ್ರರೇ! ನೀವು ಬೀಳುವಾಗ, ಊಟಮಾಡುವಾಗ, ತಿರುಗಾಡುವಾಗ, ಮೇಲಕ್ಕೆ ಹೋದಾಗ, ಕೆಳಕ್ಕೆ ಇಳಿದಾಗ ಏಕಮಾತ್ರ ನಾರಾಯಣನು ಸರ್ವತ್ರ ವಿರಾಜಮಾನನಾಗಿರುವನೆಂಬುದನ್ನು ನೀವೆಲ್ಲರೂ ತಿಳಿದುಕೊಳ್ಳಿರಿ. ಅವನ ದಿವ್ಯವಾದ ಸುವರ್ಣಧಾಮವನ್ನೇ ಪರಮಪದವೆಂದು ತಿಳಿದುಕೊಳ್ಳಬೇಕು. ಆ ಪರಮಪದವನ್ನು ಹೊಂದಿದರೇ ಜೀವನವು ಸಾರ್ಥಕವಾಗುತ್ತದೆ. ಅವನು ತನ್ನನ್ನೇ ಬೆಳಗಿಸಿಕೊಳ್ಳುವ ಆತ್ಮದೀಪನೂ ಆಗಿದ್ದಾನೆ. ತನ್ನಲ್ಲಿಯೇ ಇರುವ ಅಂತರ್ಯಾಮಿಯಾದ ಪುರುಷನೂ ಆಗಿದ್ದಾನೆ.

ದುಂಬಿಯು ಮೊದಲು ಹೂವಿನ ರಸವನ್ನು ಸಂಗ್ರಹಿಸುತ್ತದೆ. ಅನಂತರ ಹೂವಿನ ಸುತ್ತಲೂ ಹಾರಾಡುತ್ತಿರುತ್ತದೆ. ಹಾಗೆಯೇ ಜ್ಞಾನಿಯಾದ ಪುರುಷನು ದೇಹಾಭಿಮಾನಿಯಂತೆ ತೋರಿಸಿಕೊಳ್ಳುತ್ತಾ ಎಲ್ಲ ವಿಷಯಗಳನ್ನೂ ತಿಳಿಯುತ್ತಾನೆ. ಅಂತಹವನು ವಿಷಯಗಳ ಸಂಪರ್ಕದಿಂದ ಮೋಹಗೊಳ್ಳುವುದೂ ಇಲ್ಲ ; ವಿನಾಶಹೊಂದುವುದೂ ಇಲ್ಲ. ಯಾರೂ ಕೂಡ ಪರಮಾತ್ಮನನ್ನು ಚರ್ಮದ ಚಕ್ಷುಸ್ಸಿನಿಂದಲೇ ನೋಡಲಾರರು. ಅಂತಃಕರಣದಲ್ಲಿರುವ ನಿರ್ಮಲವಾದ ಬುದ್ಧಿಯ ಮೂಲಕವಾಗಿ ಜ್ಞಾನಿಗಳಾದವರು ಅವನ ರೂಪವನ್ನು ಕಂಡುಕೊಳ್ಳುತ್ತಾರೆ. ಪರಮಾತ್ಮನನ್ನು ಮಂತ್ರಗಳ ಮೂಲಕವೂ ಆರಾಧಿಸಬಹುದು. ಮಂತ್ರಗಳ ಮೂಲಕವಾಗಿಯೇ ದ್ವಿಜಶ್ರೇಷ್ಠರು ಪರಮಾತ್ಮನನ್ನು ಆರಾಧಿಸುತ್ತಾರೆ. ಅಮೃತಸ್ವರೂಪನಾದ ಪರಮಾತ್ಮನು ಧರ್ಮಿಯೂ ಅಲ್ಲ ; ವಿಧರ್ಮಿಯೂ ಅಲ್ಲ. ದ್ವಂದ್ವಾತೀತನು. ಈರ್ಷ್ಯಾ-ದ್ವೇಷಗಳಿಂದ ರಹಿತನಾದವನು. ಜ್ಞಾನತೃಪ್ತನಾಗಿ ಅವನು ಸುಖವಾಗಿ ಮಲಗುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ. ಪರಮಾತ್ಮನು ತನ್ನ ಮಾಯೆಯಿಂದ ಈ ಜಗತ್ತನ್ನು ಸೃಷ್ಟಿಸಿದ್ದಾನೆ.

ಮೋಹಗೊಂಡ ಹೃದಯವುಳ್ಳವನು ತನ್ನ ಹುಟ್ಟಿಗೆ ಕಾರಣಭೂತನಾದ ಪರಮಾತ್ಮನನ್ನು ತಿಳಿದುಕೊಂಡಿರುವುದಿಲ್ಲ. ಧ್ಯಾತೃವೂ ಅವನೇ ಆಗಿದ್ದಾನೆ. ದೃಷ್ಟಾರನೂ ಅವನೇ ಆಗಿದ್ದಾನೆ. ಪ್ರೇರಕನೂ ಅವನೇ ಆಗಿದ್ದಾನೆ. ಅದೃಷ್ಟವಾದುವುಗಳನ್ನು ಬೋಧಿಸುವವನೂ ಅವನೇ ಆಗಿದ್ದಾನೆ. ಸಂಪೂರ್ಣಜಗತ್ತನ್ನೂ ಸೃಷ್ಟಿಸಿರುವ ಅನಂತನಾದ ಪರಮಾತ್ಮನನ್ನು ಯಾರು ತಾನೇ ತಿಳಿಯುತ್ತಾರೆ? ಮುನಿಶ್ರೇಷ್ಠರೇ! ಪರಮಾತ್ಮನ ವಿಷಯವಾಗಿ ನನಗೆ ಹೇಳಲು ಎಷ್ಟು ಶಕ್ಯವಾಯಿತೋ ಅಷ್ಟು ಮಾತ್ರ ಹೇಳಿದ್ದೇನೆ. ನೀವಿನ್ನು ಹೋಗಿಬನ್ನಿರಿ.” ಬಳಿಕ ಋಷಿಗಳೆಲ್ಲರೂ ಜ್ಞಾನಸಮುದ್ರದ ಉತ್ಪತ್ತಿಗೆ ಕಾರಣಭೂತರಾದ ಸನತ್ಕುಮಾರರಿಗೆ ನಮಸ್ಕರಿಸಿ ತಮ್ಮ ತಮ್ಮ ಆಶ್ರಮಗಳಿಗೆ ಹೊರಟುಹೋದರು,

ಪರಿಶಿಷ್ಟ

ಅಲ್ಲಿಂದ ಮುಂದೆ ೬೪ನೆಯ ಅಧ್ಯಾಯದಲ್ಲಿ ಪುನಃ ಸಂಜಯನು ಧೃತರಾಷ್ಟ್ರನೊಡನೆ ಸಂಭಾಷಣೆಯನ್ನು ಪ್ರಾರಂಭಿಸುತ್ತಾನೆ. ತಾನು ದುರ್ಯೋಧನನನ್ನು ಸಂದರ್ಶಿಸಿದುದು, ದುರ್ಯೋಧನನು ತನ್ನೆದುರಿನಲ್ಲಿ ವಿಲಪಿಸಿದುದು ಮತ್ತು ವಾರ್ತಾವಾಹಕರ ಮೂಲಕವಾಗಿ ದುರ್ಯೋಧನನು ತನ್ನ ಸ್ನೇಹಿತರಿಗೆ ಸಂದೇಶವನ್ನು ಕಳುಹಿಸಿದುದು–ಈ ಎಲ್ಲ ವಿಷಯಗಳನ್ನೂ ಸಂಜಯನು ಈ ಅಧ್ಯಾಯದಲ್ಲಿ ಧೃತರಾಷ್ಟ್ರನಿಗೆ ಹೇಳುತ್ತಾನೆ.

೬೫ನೆಯ ಅಧ್ಯಾಯ :– ವಾರ್ತಾವಾಹಿಗಳು ದುರ್ಯೋಧನನ ಸಂದೇಶವನ್ನು ಅಶ್ವತ್ಥಾಮ-ಕೃಪ-ಕೃತವರ್ಮರಿಗೆ ತಿಳಿಸುತ್ತಾರೆ. ಒಡನೆಯೇ ಆ ಮೂವರೂ ದುರ್ಯೋಧನನ ಬಳಿಗೆ ಹೋಗುತ್ತಾರೆ. ಅಶ್ವತ್ಥಾಮನು ದುರ್ಯೋಧನನ ದುಃಸ್ಥಿತಿಯನ್ನು ಕಂಡು ಬಹಳವಾಗಿ ಸಂಕಟಪಡುತ್ತಾನೆ. ದುರ್ಯೋಧನನೇ ಅವನನ್ನು ಸಮಾಧಾನಗೊಳಿಸುತ್ತಾನೆ. ತಾನು ಧರ್ಮಯುದ್ಧವನ್ನೇ ಮಾಡಿದೆ ನೆಂದೂ, ಶತ್ರುಗಳು ಮೋಸದಿಂದ ತನ್ನನ್ನು ಕೊಂದರೆಂದೂ–ಹೇಳಿಕೊಳ್ಳುತ್ತಾನೆ. ‘ನೀವುಗಳು ನನಗಾಗಿ ಬಹಳ ಶ್ರಮಿಸಿದಿರಿ. ನನ್ನ ವಿಜಯಕ್ಕಾಗಿ ಸಕಲಪ್ರಯತ್ನ ಗಳನ್ನೂ ಮಾಡಿದಿರಿ. ಆದರೆ ದೈವವನ್ನು ಅತಿಕ್ರಮಿಸಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ನಾವು ಪರಾಜಿತರಾದೆವು’–ಎನ್ನುತ್ತಾನೆ ದುರ್ಯೋಧನ. ಆ ಸಮಯದಲ್ಲವನು ಬಹಳ ಸಂಕಟಪಡುತ್ತಿರುತ್ತಾನೆ. ಅವನ ಸಂಕಟವನ್ನು ಕಂಡ ಅಶ್ವತ್ಥಾಮನಿಗೆ ದುಃಖವನ್ನು ತಡೆದುಕೊಳ್ಳಲು ಸಾಧ್ಯವಾಗುವುದೇ ಇಲ್ಲ. ‘ಕ್ಷುದ್ರರು ನನ್ನ ತಂದೆಯನ್ನು ಸಂಹರಿಸಿದರು. ಆದರೆ ಆಗಲೂ ನನಗೆ ಇಷ್ಟೊಂದು ಸಂಕಟವಾಗಿರಲಿಲ್ಲ’–ಎಂದು ಹೇಳುತ್ತಾ ಅಶ್ವತ್ಥಾಮನು ವಾಸು ದೇವನ ಕಣ್ಣೆದುರಿನಲ್ಲಿಯೇ ಸರ್ವಪಾಂಚಾಲರನ್ನೂ ಸಂಹರಿಸುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಅದ್ಯಾಹಂ ಸರ್ವಪಞ್ಚಾಲಾನ್ವಾಸುದೇವಸ್ಯ ಪಶ್ಯತಃ। ಸರ್ವೋಪಾಯೈರ್ಹಿ ನೇಷ್ಯಾಮಿ ಪ್ರೇತರಾಜನಿವೇಶನಮ್ (೩೭) ಇದಕ್ಕೆ ನೀನು ಅನುಮತಿಯನ್ನು ದಯಪಾಲಿಸು’–ಎಂದು ದುರ್ಯೋಧನನನ್ನು ಪ್ರಾರ್ಥಿಸುತ್ತಾನೆ. ಅಧ್ಯಾಯದ ಆರಂಭದಲ್ಲಿ ಕೊಡುವ ಈ ಕಥಾವಸ್ತುವಿನ ನಿರೂಪಣೆಯ ಶಿರೋನಾಮೆಯಲ್ಲಿ ನಾವು ‘ಪಾಂಡವರನ್ನು ಸಂಹರಿಸುವುದಾಗಿ ಪ್ರತಿಜ್ಞೆಮಾಡಿದುದು’ ಎಂದು ತಪ್ಪಾಗಿ ಉಲ್ಲೇಖಿಸಿದ್ದೇವೆ. ‘ಪಾಂಡವ

ರನ್ನ' ಎಂಬುದನ್ನು 'ಪಾಂಚಾಲರನ್ನು' ಎಂದು ತಿದ್ದಿಕೊಳ್ಳಬೇಕು. ಸಾಮಾನ್ಯವಾಗಿ ಅಶ್ವತ್ಥಾಮನು ಪಾಂಡವರನ್ನು ಸಂಹರಿಸುವೆನೆಂದು ಎಲ್ಲಿಯೂ ಪ್ರತಿಜ್ಞೆಮಾಡುವುದಿಲ್ಲ. ಹಿಂದೆಯೂ ಒಮ್ಮೆ ಧೃಷ್ಟದ್ಯುಮ್ನನನ್ನು ಸಂಹರಿಸುವುದಾಗಿ ಪ್ರತಿಜ್ಞೆಮಾಡುತ್ತಾನೆ. ಧೃಷ್ಟದ್ಯುಮ್ನಮಹತ್ವಾಹಂ ನ ವಿಮೋಕ್ಷ್ಯಾಮಿ ದಂಶನಮ್ । ಅನೃತಾಯಾಂ ಪ್ರತಿಜ್ಞಾಯಾಂ ನಾಹಂ ಸ್ವರ್ಗಮವಾಪ್ನುಯಾಮ್ ॥ (ಕರ್ಣ–ಅ.೫೭–ಶ್ಲೋ.–೯) ಅಶ್ವತ್ಥಾಮನು ಎಲ್ಲ ಪಾಂಚಾಲರನ್ನೂ ಸಂಹರಿಸುವುದಾಗಿ ಪ್ರತಿಜ್ಞೆಮಾಡಿದೊಡನೆಯೇ ದುರ್ಯೋಧನನು ಅವನಿಗೆ ಸೇನಾಪತಿಯ ಪಟ್ಟಗಟ್ಟುತ್ತಾನೆ. ಅಶ್ವತ್ಥಾಮನು ಸೇನಾಪತಿ. ಕೃಪ-ಕೃತವರ್ಮರೇ ಅವನ ಆಜ್ಞಾಧಾರಕರಾದ ಇಬ್ಬರು ಯೋಧರು. ಅಶ್ವತ್ಥಾಮನು ತನ್ನಿಬ್ಬರು ಅನುಯಾಯಿಗಳೊಡನೆ ದುರ್ಯೋಧನನ ಅನುಮತಿಯನ್ನು ಪಡೆದು ಹೊರಟುಹೋಗುತ್ತಾನೆ. ಮುಂದೇನು ಮಾಡಬೇಕೆಂಬುದರ ವಿಷಯವಾಗಿ ಮೂವರೂ ಚಿಂತಾಮಗ್ನರಾಗುತ್ತಾರೆ. ಇಲ್ಲಿಗೆ ೬೫ನೆಯ ಅಧ್ಯಾಯವೂ ಮತ್ತು ಶಲ್ಯಪರ್ವವೂ ಮುಗಿಯುತ್ತದೆ.

ಶಲ್ಯಪರ್ವ ಸಂಕ್ಷೇಪವಾಗಿ

ಹತಪ್ರವೀರೇ ಸೈನ್ಯೇ ತು ನೇತಾ ಮದ್ರೇಶ್ವರೋಽಭವತ್ ।
ಯತ್ರ ಕೌಮಾರಮಾಖ್ಯಾನಮಭಿಷೇಕಸ್ಯ ಕರ್ಮ ಚ ॥೨೮೦॥

ವೃತ್ತಾನಿ ರಥಯುದ್ಧಾನಿ ಕೀರ್ತ್ಯನ್ತೇ ಯತ್ರ ಭಾಗಶಃ ।
ವಿನಾಶಃ ಕುರುಮುಖ್ಯಾನಾಂ ಶಲ್ಯಪರ್ವಣಿ ಕೀರ್ತ್ಯತೇ ॥೨೮೧॥

ಶಲ್ಯಸ್ಯ ನಿಧನಂ ಚಾತ್ರ ಧರ್ಮರಾಜಾನ್ಮಹಾತ್ಮನಃ ।
ಶಕುನೇಶ್ಚ ವಧೋಽತ್ರೈವ ಸಹದೇವೇನ ಸಂಯುಗೇ ॥೨೮೨॥

ಸೈನ್ಯೇ ಚ ಹತಭೂಯಿಷ್ಠೇ ಕಿಂಚಿಚ್ಛಿಷ್ಟೇ ಸುಯೋಧನಃ ।
ಹ್ರದಂ ಪ್ರವಿಶ್ಯ ಯತ್ರಾಸೌ ಸಂಸ್ತಭ್ಯಾಪೋ ವ್ಯವಸ್ಥಿತಃ ॥೨೮೩॥

ಪ್ರವೃತ್ತಿಸ್ತತ್ರ ಚಾಖ್ಯಾತಾ ಯತ್ರ ಭೀಮಸ್ಯ ಲುಬ್ಧಕೈಃ ।
ಕ್ಷೇಪಯುಕ್ತೈರ್ವಚೋಭಿಶ್ಚ ಧರ್ಮರಾಜಸ್ಯ ಧೀಮತಃ ॥೨೮೪॥

ಹ್ರದಾತ್ಸಮುತ್ಥಿತೋ ಯತ್ರ ಧಾರ್ತರಾಷ್ಟ್ರೋಽತ್ಯಮರ್ಷಣಃ ।
ಭೀಮೇನ ಗದಯಾ ಯುದ್ಧಂ ಯತ್ರಾಸೌ ಕೃತವಾನ್ಸಹ ॥೨೮೫॥

ಸಮವಾಯೇ ಚ ಯುದ್ಧಸ್ಯ ರಾಮಸ್ಯಾಗಮನಂ ಸ್ಮೃತಮ್ ।
ಸರಸ್ವತ್ಯಾಶ್ಚ ತೀರ್ಥಾನಾಂ ಪುಣ್ಯತಾ ಪರಿಕೀರ್ತಿತಾ ॥೨೮೬॥

ಗದಾಯುದ್ಧಂ ಚ ತುಮುಲಮತ್ರೈವ ಪರಿಕೀರ್ತಿತಮ್ ।
ದುರ್ಯೋಧನಸ್ಯ ರಾಜ್ಞೋಽಥ ಯತ್ರ ಭೀಮೇನ ಸಂಯುಗೇ ॥

ಊರೂ ಭಗ್ನೌ ಪ್ರಸಹ್ಯಾಜೌ ಗದಯಾ ಭೀಮವೇಗಯಾ ।
ನವಮಂ ಪರ್ವ ನಿರ್ದಿಷ್ಟಮೇತದದ್ಭುತಮರ್ಥವತ್ ॥೨೮೮॥

ಏಕೋನಷಷ್ಟಿರಧ್ಯಾಯಾಃ ಪರ್ವಣ್ಯತ್ರ ಪ್ರಕೀರ್ತಿತಾಃ ।
ಸಂಖ್ಯಾತಾ ಬಹುವೃತ್ತಾನ್ತಾಃ ಶ್ಲೋಕಸಂಖ್ಯಾತ್ರ ಕಥ್ಯತೇ ॥೨೮೯॥

ತ್ರೀಣಿ ಶ್ಲೋಕಸಹಸ್ರಾಣಿ ದ್ವೇ ಶತೇ ವಿಂಶತಿಸ್ತಥಾ ।
ಮುನಿನಾ ಸಮ್ಪ್ರಣೀತಾನಿ ಕೌರವಾಣಾಂ ಯಶೋಭೃತಾ ॥೨೯೦॥

(ಆದಿಪರ್ವ-ಪರ್ವಸಂಗ್ರಹಪರ್ವ.)

ಇಲ್ಲಿ ಹೇಳಿರುವಂತೆ ಶಲ್ಯಪರ್ವದಲ್ಲಿ ೫೯ ಅಧ್ಯಾಯಗಳೂ ೩,೨೨೦ ಶ್ಲೋಕಗಳೂ ಇರಬೇಕು. ಆದರೆ ಪ್ರಸಕ್ತಪಾಠದಲ್ಲಿ ೬೮ ಅಧ್ಯಾಯಗಳೂ ೩,೬೮೯ ಶ್ಲೋಕಗಳೂ ಇವೆ.

ಭಂ. ರಿ. ಇನ್‌ಸ್ಟಿಟ್ಯೂಟಿನವರು ಪ್ರಕಟಿಸಿರುವ ಪುಸ್ತಕದಲ್ಲಿ ೬೪ ಅಧ್ಯಾಯಗಳೂ ೩,೩೧೬ ಶ್ಲೋಕಗಳೂ ಇವೆ.

ಸೌಪ್ತಿಕಪರ್ವ :

೧ನೆಯ ಅಧ್ಯಾಯ : ಅಶ್ವತ್ಥಾಮನು ಪಾಂಚಾಲರನ್ನು ಸಂಹರಿಸುವುದಾಗಿ ಪ್ರತಿಜ್ಞೆಮಾಡುತ್ತಾನೆಯೇ ಹೊರತು ಯಾವಾಗ–ಹೇಗೆ? ಎಂಬುದರ ಬಗೆಗೆ ಯಾವ ಯೋಚನೆಯನ್ನೂ ಅವನು ಮಾಡಿರುವುದಿಲ್ಲ. ರಾತ್ರಿಯಾಗಿದೆ. ಶಿಬಿರಗಳ ಬಳಿಗೆ ಬಂದಾಗ ಪಾಂಡವರ ಭಯದಿಂದಾಗಿ ಕೃಪ-ಕೃತವರ್ಮಾಶ್ವತ್ಥಾಮರು ಅಲ್ಲಿ ನಿಲ್ಲದೇ ವಿಶ್ರಾಂತಿಯನ್ನು ಪಡೆದುಕೊಳ್ಳಲು ಕಾಡಿನ ಮರದ ಬುಡದಲ್ಲಿ ಮಲಗುತ್ತಾರೆ. ಅಶ್ವತ್ಥಾಮನಿಗೆ ನಿದ್ರೆಯೇ ಬರುವುದಿಲ್ಲ. ಆ ಸಮಯದಲ್ಲಿ ಮರದ ಮೇಲೆ ನಡೆಯುತ್ತಿದ್ದ ದೃಶ್ಯವೊಂದನ್ನು ಅಶ್ವ

ತ್ಥಾಮನು ಗಮನಿಸುತ್ತಾನೆ. ಗೂಬೆಯೊಂದು ಎಲ್ಲಿಂದಲೋ ಬಂದು ಮರದ ಮೇಲೆ ನಿರಾತಂಕವಾಗಿ ಮಲಗಿದ್ದ ಕಾಗೆಗಳನ್ನು ಕೊಲ್ಲುತ್ತಿರುತ್ತದೆ. ಗೂಬೆಯ ಕೃತ್ಯವನ್ನೇ ಅನುಕರಿಸಿ ಶತ್ರುಗಳನ್ನು ಕೊಲ್ಲುವುದು ಉಚಿತವೆಂದು ಅಶ್ವತ್ಥಾಮನು ನಿರ್ಧರಿಸುತ್ತಾನೆ. ರಾಜನ ಮುಂದೆ ಮಾಡಿದ್ದ ಪ್ರತಿಜ್ಞೆಯನ್ನು ಪೂರ್ಣಗೊಳಿಸಲು ಅದೊಂದೇ ಮಾರ್ಗವೆಂದೂ ಪಾಂಡವರೊಡನೆ ನೇರವಾಗಿ ನ್ಯಾಯರೀತಿಯಿಂದ ಯುದ್ಧಮಾಡಲು ಹೋದಲ್ಲಿ ತಾನೇ ಸಾಯುವೆನೆಂದೂ ಅಶ್ವತ್ಥಾಮನು ನಿರ್ಧರಿಸುತ್ತಾನೆ. **ನ್ಯಾಯತೋ ಯುಧ್ಯಮಾನಸ್ಯ ಪ್ರಾಣತ್ಯಾಗೋ ನ ಸಂಶಯಃ** (೪೮). ಪಾಂಡವರಾದರೂ ಮೋಸದಲ್ಲಿಯೇ ತಮ್ಮ ಕಡೆಯವರನ್ನು ಕೊಂದರೆಂದೂ, ತಾನೂ ಮಲಗಿದ್ದವರನ್ನು ಕೊಂದರೆ ದೋಷವೇನೂ ಇಲ್ಲವೆಂದೂ, ಕ್ಷತ್ರ ಧರ್ಮದಲ್ಲಿರುವವನಿಗೆ ಶತ್ರುಗಳನ್ನು ಯಾವುದಾದರೂ ರೀತಿಯಲ್ಲಿ ಸಂಹ ರಿಸುವುದು ಕರ್ತವ್ಯವೇ ಆಗಿದೆಯೆಂದೂ–ಅಶ್ವತ್ಥಾಮನು ಮಲಗಿದ್ದ ಪಾಂಡವರನ್ನೂ ಪಾಂಚಾಲರನ್ನೂ ಕೊಲ್ಲಲು ನಿಶ್ಚಯಿಸುತ್ತಾನೆ. ಮಲಗಿ ನಿದ್ರಿಸುತ್ತಿದ್ದ ಕೃಪ-ಕೃತವರ್ಮರನ್ನೂ ಎಚ್ಚರಗೊಳಿಸಿ ತನ್ನ ನಿರ್ಧಾರವನ್ನು ಅವರೊಡನೆ ಹೇಳುತ್ತಾನೆ. ನಮ್ಮ ಕಡೆಯಲ್ಲಿ ಎಲ್ಲವೂ ವಿನಾಶವಾಗಿ ಹೋಗಿ ರುವ ಈ ಸಮಯದಲ್ಲಿ ಶತ್ರುಗಳ ವಧೆಗೆ ಇದಕ್ಕಿಂತಲೂ ಉತ್ತಮವಾದ ಮಾರ್ಗವು ಯಾವುದಾದರೂ ಇರುವುದಾದರೆ ಅದನ್ನು ತಿಳಿಸಬೇಕೆಂದು ಕೃಪ-ಕೃತವರ್ಮರನ್ನು ಕೇಳುತ್ತಾನೆ.

೨ನೆಯ ಅಧ್ಯಾಯ : ಕೃಪರು ಮನುಷ್ಯಪ್ರಯತ್ನಕ್ಕಿಂತಲೂ ದೈವದ ಪ್ರಾಬಲ್ಯವೇ ಹೆಚ್ಚೆಂಬುದನ್ನು ಅನೇಕನಿದರ್ಶನಗಳೊಡನೆ ಹೇಳಿ, ಪ್ರಕೃತ ಸಮಯದಲ್ಲಿ ಹಿರಿಯರ ಸಲಹೆಯನ್ನು ಪಡೆದುಕೊಂಡು ಕಾರ್ಯ ಮಾಡುವುದೇ ಶ್ರೇಯಸ್ಕರವೆಂದು ಹೇಳುತ್ತಾರೆ. ೩ನೆಯ ಅಧ್ಯಾಯದಲ್ಲಿ : ತನ್ನ ನಿರ್ಧಾರವೇ ಈ ಸಮಯದಲ್ಲಿ ಸಮೀಚೀನವಾಗಿದೆಯೆಂಬುದನ್ನು ಅಶ್ವತ್ಥಾಮನು ಬಹಳ ಚೆನ್ನಾಗಿ ಯುಕ್ತಿಯ ಮಾತುಗಳಿಂದ ಪ್ರತಿಪಾದಿ ಸುತ್ತಾನೆ. ಈ ರಾತ್ರಿಯಲ್ಲಿ ತಾನು ಧೃಷ್ಟದ್ಯುಮ್ನನನ್ನೂ–ಪಾಂಡು-ಪಾಂಚಾ ಲರ ಮಕ್ಕಳನ್ನೂ ಸಂಹರಿಸುವುದಾಗಿ ಹೇಳುತ್ತಾನೆ. ಮೊದಲನೆಯ ಅಧ್ಯಾಯದ ಪ್ರಾರಂಭದಲ್ಲಿ ಅಶ್ವತ್ಥಾಮಾದಿಗಳು ಪಾಂಡವರ ಶಿಬಿರಗಳ

ಸಮೀಪಕ್ಕೆ ಹೋದರು–ಎಂದಿದೆ. ಶತ್ರುಪಕ್ಷದಲ್ಲಿ ಯಾರು ಎಲ್ಲಿ ಮಲಗಿದ್ದ ರೆಂಬುದನ್ನು ಅವರು ತಿಳಿದುಕೊಂಡಂತೆ ಕಾಣುತ್ತದೆ. ಹಾಗಿಲ್ಲದಿದ್ದರೆ ಅಶ್ವ ತ್ಥಾಮನು ಇಷ್ಟು ಸ್ಪಷ್ಟವಾಗಿ ಧೃಷ್ಟದ್ಯುಮ್ನನನ್ನೂ ಪಾಂಡವ-ಪಾಂಚಾಲರ ಮಕ್ಕಳನ್ನೂ ಸಂಹರಿಸುತ್ತೇನೆಂದು ಹೇಳುವ ಸಾಧ್ಯತೆಯಿರಲಿಲ್ಲ. ಪಾಂಡ ವರೂ ಕೃಷ್ಣಸಮೇತರಾಗಿ ಶಿಬಿರದಲ್ಲಿಯೇ ಮಲಗಿರುವರೆಂದು ತಿಳಿದಿದ್ದರೆ ಅಶ್ವತ್ಥಾಮನು ಈ ಕಾರ್ಯಕ್ಕೆ ಪ್ರವರ್ತಿಸುತ್ತಿದ್ದನೇ ಎಂಬುದೂ ಸಂಶಯವೇ ಸರಿ.

೪ನೆಯ ಅಧ್ಯಾಯದಲ್ಲಿ : ಕೃಪರು ರಾತ್ರಿಯಲ್ಲಿ ವಿಶ್ರಮಿಸಿಕೊಂಡು ಬೆಳಗಾಗುತ್ತಲೇ ಮೂವರೂ ಸೇರಿ ಪಾಂಡವರೊಡನೆ ಯುದ್ಧ ಮಾಡೋಣ ವೆಂದು ಸಲಹೆ ನೀಡುತ್ತಾರೆ. ಕೃಪರ ಆ ಸಲಹೆಯನ್ನು ತಿರಸ್ಕರಿಸುತ್ತಾ ಅಶ್ವ ತ್ಥಾಮನು– **'ವಾಸುದೇವಾರ್ಜುನಾಭ್ಯಾಂ ಚ ತಾನಹಂ ಪರಿರಕ್ಷಿತಾನ್ । ಅವಿಷಹ್ಯತಮಾನ್ಮನ್ಯೇ ಮಹೇನ್ದ್ರೇಣಾಪಿ ಸತ್ತಮ** (೩೧) ವಾಸುದೇವಾ ರ್ಜುನರಿಂದ ರಕ್ಷಿಸಲ್ಪಡುವ ಪಾಂಡವ. ಪಾಂಚಾಲರು ಮಹೇಂದ್ರನಿಂದಲೂ ಅಜೇಯರೆಂಬುದು ನನ್ನ ಅಭಿಮತವಾಗಿದೆ. ಆದುದರಿಂದ ಮಲಗಿರುವ ವರೆಲ್ಲರನ್ನೂ ಸಂಹರಿಸಿ ನನ್ನ ಕೋಪವನ್ನು ಉಪಶಮನಗೊಳಿಸುತ್ತೇನೆ'– ಎನ್ನುತ್ತಾನೆ. ೫ನೆಯ ಅಧ್ಯಾಯದಲ್ಲಿ : ಪುನಃ ಕೃಪರು ನಿಷ್ಠುರವಾದ ಮಾತು ಗಳಿಂದ ಅಶ್ವತ್ಥಾಮನನ್ನು ತಡೆಯಲು ಪ್ರಯತ್ನಿಸುತ್ತಾರೆ. ಮಲಗಿರುವವರನ್ನು ಸಂಹರಿಸುವುದು ಅಧರ್ಮವೆಂದು ಪ್ರತಿಪಾದಿಸುತ್ತಾರೆ. ಹಾಗೆ ಮಾಡಿದರೆ ನರಕವೇ ಪ್ರಾಪ್ತವಾಗುವುದೆಂದು ಬೆದರಿಕೆ ಹಾಕುತ್ತಾರೆ. **ವ್ಯಕ್ತಂ ಸ ನರಕೇ ಮಜ್ಜೇದಗಾಧೇ ವಿಪುಲೇऽಪ್ಲವೇ** (೧೪) ಅಶ್ವತ್ಥಾಮನು ತನ್ನ ಮನಸ್ಸನ್ನು ಸ್ವಲ್ಪವಾದರೂ ಬದಲಾಯಿಸುವುದಿಲ್ಲ. ತನ್ನ ನಿರ್ಧಾರವನ್ನು ಬದಲಾಯಿಸು ವವರು ಈ ಪ್ರಪಂಚದಲ್ಲಿಯೇ ಇನ್ನೂ ಹುಟ್ಟಿಲ್ಲವೆನ್ನುತ್ತಾನೆ. ಕೃಪರೊಡನೆ ಹೀಗೆ ಹೇಳಿದ ನಂತರ ಅವರಿಗೆ ಹೇಳದೆಯೇ ತನ್ನ ರಥವನ್ನು ಸಜ್ಜುಗೊಳಿಸಿ ಶಿಬಿರದ ಕಡೆಗೆ ಹೊರಡಲನುವಾಗುತ್ತಾನೆ. ಅವನ ಇಂಗಿತವನ್ನು ತಿಳಿದ ಕೃಪ-ಕೃತವರ್ಮರು ತಾವೂ ಜೊತೆಯಲ್ಲಿಯೇ ಬರುವುದಾಗಿ ಹೇಳಿ ಸೇನಾ ಪತಿಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸುತ್ತಾ ಅವನ ಹಿಂದೆಯೇ ಹೋಗುತ್ತಾರೆ.

ಇಲ್ಲಿ ಒಂದು ಸೂಕ್ಷ್ಮ ವಿಷಯವನ್ನು ನಾವು ಗಮನಿಸಬಹುದಾಗಿದೆ. ಕೃಪರು ಅಶ್ವತ್ಥಾಮನಿಗೆ ಮಲಗಿದ್ದವರನ್ನು ಕೊಲ್ಲಕೂಡದೆಂದು ಬಗೆ-ಬಗೆಯಾಗಿ ಹೇಳುತ್ತಾರೆ. ಆದರೆ ಅಶ್ವತ್ಥಾಮನು ಶಿಬಿರದ ಕಡೆಗೆ ಹೊರಟೊಡನೆಯೇ ತಾವೂ ಅವನ ಆಜ್ಞೆಯಂತೆ ಸಂಹಾರಕಾರ್ಯಮಾಡುವುದಾಗಿ ಒಪ್ಪಿ ಅವನ ಹಿಂದೆಯೇ ಹೊರಡುತ್ತಾರೆ. ಸಮಯೋಚಿತವಾದ ಸಲಹೆಯನ್ನು ನೀಡಿದರೇ ಹೊರತು ಸೇನಾಪತಿಯ ನಿರ್ಧಾರಕ್ಕೆ ವಿರುದ್ಧವಾದ ಕಾರ್ಯವನ್ನವರು ಮಾಡಲು ಹೋಗುವುದಿಲ್ಲ. ಅವನನ್ನು ಹಿಂಬಾಲಿಸಿ ಹೋಗುವುದೇ ತಮ್ಮ ಕರ್ತವ್ಯವೆಂದವರು ಭಾವಿಸುತ್ತಾರೆ. ಭೀಷ್ಮ-ದ್ರೋಣಾದಿಗಳ ವರ್ತನೆಯೂ ಹೀಗೆಯೇ ಇದ್ದಿತು. ದುರ್ಯೋಧನನಿಗೆ ಸಮಯೋಚಿತವಾಗಿ ಬುದ್ಧಿಹೇಳು ತ್ತಿದ್ದರು. ಅವರ ಮಾತನ್ನು ಅವನು ಕೇಳದೇ ಇದ್ದರೂ ದುರ್ಯೋಧನನಿಗೆ ವಿರೋಧವಾಗುವ ರೀತಿಯಲ್ಲಿ ವರ್ತಿಸಲಿಲ್ಲ. ಅವನ ಪಕ್ಷದಲ್ಲೇ ನಿಂತು ಯುದ್ಧಮಾಡಿದರು. ಕೃಪ-ಕೃತವರ್ಮರೂ ಪ್ರಕೃತದಲ್ಲಿ ಭೀಷ್ಮ-ದ್ರೋಣರ ಮಾರ್ಗವನ್ನೇ ಅನುಸರಿಸಿ ಅಶ್ವತ್ಥಾಮನ ಸಹಾಯಕ್ಕೆ ಹೋಗುತ್ತಾರೆ. ಅಧ್ಯಾಯದ ಕಡೆಯಲ್ಲಿ ಪಾಂಡವ-ಪಾಂಚಾಲಯೋಧರೆಲ್ಲರೂ ಸುಖವಾಗಿ ಮಲಗಿ ನಿದ್ರಿಸುತ್ತಿದ್ದ ಶಿಬಿರದ ಬಳಿಗೆ ಮೂವರೂ ತೆರಳಿದರು–ಎಂದಿದೆ. ಅದೇ ಶ್ಲೋಕದ ಉತ್ತರಾರ್ಧದಲ್ಲಿ ಮಹಾರಥನಾದ ಅಶ್ವತ್ಥಾಮನು ಶಿಬಿರದ ಮಹಾದ್ವಾರದ ಬಳಿಗೆ ಹೋದನು–ಎಂದಿದೆ. ಶಿಬಿರದ ಸಮೀಪ–ಶಿಬಿರ ದ್ವಾರ ಎರಡಕ್ಕೂ ಹೆಚ್ಚು ವ್ಯತ್ಯಾಸವೇನೂ ಕಾಣುವುದಿಲ್ಲ. ಕೃತವರ್ಮ- ಕೃಪರು ಹಿಂದೆ ನಿಂತಿದ್ದರು. ಅಶ್ವತ್ಥಾಮನು ಶಿಬಿರದ ಮಹಾದ್ವಾರದಲ್ಲಿ ನಿಂತುಕೊಂಡನು. ಇಷ್ಟು ಮಾತ್ರ ಇದಕ್ಕೆ ಅರ್ಥಮಾಡಬಹುದಾಗಿದೆ. ಅಶ್ವತ್ಥಾಮನಿಂದ ಬಹಳ ದೂರದಲ್ಲಿ ಕೃಪ-ಕೃತವರ್ಮರು ನಿಂತಿದ್ದರೆಂಬ ಅರ್ಥವೇನೂ ಇದರಲ್ಲಿ ಕಂಡುಬರುವುದಿಲ್ಲ.

೬ನೆಯ ಅಧ್ಯಾಯದ ಪ್ರಾರಂಭದಲ್ಲಿ : ಧೃತರಾಷ್ಟ್ರನು–'ಶಿಬಿರದ ದ್ವಾರದಲ್ಲಿ ನಿಂತಿದ್ದ ಅಶ್ವತ್ಥಾಮನನ್ನು ನೋಡಿ ಕೃಪ-ಕೃತವರ್ಮರೇನು ಮಾಡಿದರು? **ಅಕುರ್ವಾತಾಂ ಭೋಜಕೃಪೌ ಕಿಂ ಸಂಜಯ ವದಸ್ವ ಮೇ** (೧)' ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಸಂಜಯನು ಕೃಪ-ಕೃತ

ವರ್ಮರು ಏನು ಮಾಡಿದರೆಂಬುದನ್ನು ಹೇಳುವುದಿಲ್ಲ. 'ಅಶ್ವತ್ಥಾಮನು ಕೃಪ-ಕೃತವರ್ಮರಿಗೆ ಹೋಗಿ ಬರುತ್ತೇನೆಂದು ಹೇಳಿ ಶಿಬಿರದ ದ್ವಾರದ ಬಳಿಗೆ ಹೋದನು' ಎನ್ನುತ್ತಾನೆ. ಸಂಜಯನ ಈ ಉತ್ತರವು ವಿಚಿತ್ರವಾಗಿ ಕಾಣಿಸುತ್ತದೆ. ಧೃತರಾಷ್ಟ್ರನ ಪ್ರಶ್ನೆ : **ದ್ವಾರದೇಶೇ ದ್ರೌಣಿಂ ಅವಸ್ಥಿತಂ ಅವೇಕ್ಷ್ಯ**–ಎಂಬುದರಿಂದಲೇ ಪ್ರಾರಂಭವಾಗಿದೆ. ಸಂಜಯನು **ಶಿಬಿರದ್ವಾರ ಮಾಗಮತ್** ಎಂದು ಉತ್ತರಿಸುತ್ತಾನೆ. 'ದ್ವಾರದೇಶದಲ್ಲಿ ನಿಂತಿರುವ ದ್ರೌಣಿಯನ್ನು ನೋಡಿ...ಏನು ಮಾಡಿದರು?' ಇದಕ್ಕೆ ಉತ್ತರ 'ದ್ರೌಣಿಯು ದ್ವಾರದೇಶಕ್ಕೆ ಹೋದನು.' ಇದು ಸಮಂಜಸವಾಗಿ ಕಾಣುವುದಿಲ್ಲ. ಇಲ್ಲಿ ಸ್ವಲ್ಪ ಕವಲೊಡೆದಂತಿದೆ.

ಅಶ್ವತ್ಥಾಮನು ಮಹಾಭೂತವೊಂದನ್ನು ಆ ದ್ವಾರದೇಶದಲ್ಲಿ ಕಾಣುತ್ತಾನೆ. ಭೂತದ ಅದ್ಭುತವರ್ಣನೆಯಿದೆ. ಆ ಮಹಾಭೂತದ ಮೇಲೆ ಅಶ್ವತ್ಥಾಮನು ದಿವ್ಯಾಸ್ತ್ರಗಳನ್ನು ಸುರಿಸುತ್ತಾನೆ. ಎಲ್ಲವೂ ವ್ಯರ್ಥವಾಗುತ್ತವೆ. ಎಲ್ಲ ಮಹಾಸ್ತ್ರಗಳನ್ನೂ ಆ ಮಹಾಭೂತವು ನುಂಗಿಬಿಡುತ್ತದೆ. ಬಳಿಕ ಅಶ್ವತ್ಥಾಮನು ಪ್ರಯೋಗಿಸಿದ ರಥಶಕ್ತಿ, ಕತ್ತಿ, ಗದೆ ಎಲ್ಲವನ್ನೂ ಮಹಾಭೂತವು ನುಂಗುತ್ತದೆ. ಶಸ್ತ್ರಾಸ್ತ್ರಗಳೆಲ್ಲವನ್ನೂ ಸಂಪೂರ್ಣವಾಗಿ ಕಳೆದುಕೊಂಡನಂತರ ಅಶ್ವತ್ಥಾಮನಿಗೆ ತಾನು ಬಂದುದು ತಪ್ಪೆಂಬ ಭಾವನೆಯುಂಟಾಗುತ್ತದೆ. ಆದರೂ ಹಿಂದಿರುಗಿ ಹೋಗಲು ಇಷ್ಟಪಡುವುದಿಲ್ಲ. ಮಹಾದೇವನನ್ನಾದರೂ ಒಲಿಸಿಕೊಂಡು ಆ ಭೂತದಿಂದ ತಪ್ಪಿಸಿಕೊಳ್ಳಲು ಅಶ್ವತ್ಥಾಮನು ಯೋಚಿಸಿ ಈಶ್ವರನನ್ನು ಪ್ರಾರ್ಥಿಸುತ್ತಾನೆ.

೭ನೆಯ ಅಧ್ಯಾಯ :– ಅಶ್ವತ್ಥಾಮನು ರಥದಿಂದಿಳಿದು ಮಹೇಶನನ್ನು ಸ್ತೋತ್ರಮಾಡುತ್ತಾನೆ. 'ಈ ಅಪಾಯದಿಂದ ಪಾರಾದೆನಾದರೆ ಸರ್ವಭೂತೋಪಹಾರದಿಂದ ಶಿವನನ್ನು ಅರ್ಚಿಸುತ್ತೇನೆ'– ಎನ್ನುತ್ತಾನೆ. 'ಸರ್ವಭೂತೋಪಹಾರ' ಎಂಬುದಕ್ಕೆ ಸರಿಯಾದ ಅರ್ಥವೇನೆಂಬುದನ್ನು ಊಹಿಸುವುದು ಕಷ್ಟ. ಸರ್ವಪ್ರಾಣಿಗಳ ಉಪಹಾರದಿಂದ (ಬಲಿಯಿಂದ) ಎಂದು ನೈಜವಾದ ಅರ್ಥಮಾಡಬಹುದಾಗಿದೆ. ಹಿಂದೀ ಭಾಷಾಂತರಕಾರರು ಸರ್ವಭೂತಮಯ ಪವಿತ್ರ ಉಪಹಾರ–ಎಂದು ಹೇಳಿದ್ದಾರೆಯೇ ಹೊರತು ಪದದ ವಿಶೇಷಾರ್ಥವನ್ನು ವಿವರಿಸಲು ಪ್ರಯತ್ನಿಸಿಲ್ಲ. ನಾವೂ ಇದೇ ಅರ್ಥವನ್ನೇ

ಅನುಸರಿಸಿದ್ದೇವೆ. ಮುಂದಿನ ಶ್ಲೋಕಗಳನ್ನು ಗಮನಿಸಿ ಅರ್ಥಮಾಡುವುದಾದರೆ ಪಂಚಭೂತಾತ್ಮಕವಾದ ಈ ನನ್ನ ಶುದ್ಧವಾದ ಶರೀರವನ್ನೇ ಬಲಿಗೊಡುತ್ತೇನೆ – ಎಂದು ಅರ್ಥಮಾಡಬಹುದಾಗಿದೆ. ಆಂಗ್ಲಭಾಷಾಂತರಕಾರರು ಹೀಗೆ ಅರ್ಥಮಾಡಿರುತ್ತಾರೆ. I sacrifice unto thee the purest of the pure offering for thy acceptance the five elements of which my body is composed' – ಅಶ್ವತ್ಥಾಮನು ಹೀಗೆ ಹೇಳುತ್ತಲೇ ಸುವರ್ಣಮಯವಾದ ವೇದಿಯು ಅವನ ಮುಂದಕ್ಕೆ ಬರುತ್ತದೆ. ಆ ವೇದಿಯಲ್ಲಿ ಜಾಜ್ವಲ್ಯಮಾನನಾದ ಯಜ್ಞೇಶ್ವರನಿರುತ್ತಾನೆ. ಬಳಿಕ ರುದ್ರನ ಗಣಗಳೆಲ್ಲವೂ ಅಲ್ಲಿಗೆ ಬರುತ್ತವೆ. ಆ ಗಣಗಳ ವರ್ಣನೆಯು ಸಾಮಾನ್ಯವಾಗಿ ಶಲ್ಯಪರ್ವದ ೪೫–೪೬ನೆಯ ಅಧ್ಯಾಯಗಳಲ್ಲಿ ಬಂದಿರುವ ಕುಮಾರನ ಗಣಗಳ ವರ್ಣನೆಯಂತೆಯೇ ಇದೆ. ಭಯಂಕರಾಕಾರರಾದ ಶಿವನ ಗಣಗಳನ್ನು ನೋಡಿಯೂ ಅಶ್ವತ್ಥಾಮನು ಭಯಪಡುವುದಿಲ್ಲ. ತನ್ನ ಮುಂದೆ ಧಗಧಗನೆ ಉರಿಯುತ್ತಿದ್ದ ಅಗ್ನಿಯಲ್ಲಿ ಆತ್ಮಸಮರ್ಪಣೆಯನ್ನು ಮಾಡುತ್ತಾನೆ.

ಸ್ವಯಮೇವಾತ್ಮನಾತ್ಮಾನಮುಪಹಾರಮುಪಾಹರತ್ ॥೫೨॥

ಮುಂದಿನ ಕೆಲವು ಶ್ಲೋಕಗಳಲ್ಲಿ ಅಶ್ವತ್ಥಾಮನು ಹವಿಸ್ಸಿನ ರೂಪದಲ್ಲಿರುವ ತನ್ನನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಿ ಅನಂತರ ವೇದಿಯೊಳಗೆ ಪ್ರವೇಶಿಸಿದನೆಂದಿದೆ. ಪ್ರವೇಶಿಸಿದನಂತರ ಅಗ್ನಿಯೇ ಶಾಂತನಾದನೇ? ಈಶ್ವರನೇ ಅಗ್ನಿಯನ್ನು ಹೋಗಲಾಡಿಸಿದನೇ?–ಎಂಬ ವಿಷಯವು ಬರುವುದಿಲ್ಲ. ಈಶ್ವರನು ಮೊದಲು ಶ್ರೀಕೃಷ್ಣನು ತನಗೆ ಬಹಳ ಇಷ್ಟನಾದವನೆಂದು ಹೇಳುತ್ತಾನೆ. ಆ ಕಾರಣದಿಂದಲೇ ಇದುವರೆಗೂ ಪಾಂಚಾಲರನ್ನು ರಕ್ಷಿಸುತ್ತಿದ್ದುದಾಗಿ ಈಶ್ವರನು ಹೇಳುತ್ತಾನೆ. ಈಗ ಅವರ ಆಯುಷ್ಯವು ಕಳೆದುಹೋಗಿದೆಯೆಂದು ಹೇಳಿ, ಅಶ್ವತ್ಥಾಮನೊಳಗೆ ತಾನೂ ಪ್ರವೇಶಿಸಿ ಶುದ್ಧವಾದ ಕತ್ತಿಯನ್ನೂ ಅವನಿಗೆ ಕೊಡುತ್ತಾನೆ. ಈಶ್ವರದತ್ತವಾದ ಖಡ್ಗವನ್ನು ಹಿಡಿದುಕೊಂಡು ಶಿಬಿರದ ಕಡೆಗೆ ಹೋಗುತ್ತಿದ್ದ ಅಶ್ವತ್ಥಾಮನನ್ನು ಅದೃಶ್ಯರಾದ ಅನೇಕರಾಕ್ಷಸರೂ ಹಿಂಬಾಲಿಸುತ್ತಾರೆ. ಈ ಅಧ್ಯಾಯವು ಕಾಲ್ಪನಿಕವಾಗಿರುವಂತೆ ಕಾಣುತ್ತದೆ. ಹಿಂದೆ ವಿವರಿಸಿರುವಂತೆ

ಅಧ್ಯಾಯದ ಮೊದಲಿನಲ್ಲಿಯೇ ಧೃತರಾಷ್ಟ್ರನು ಕೇಳುವ ಪ್ರಶ್ನೆಗೂ ಸಂಜಯನು ಹೇಳುವ ಉತ್ತರಕ್ಕೂ ಸಾಂಗತ್ಯವಿಲ್ಲ. ಕಥಾಪ್ರಸಂಗವನ್ನು ನೋಡಿ ದರೆ ಅಶ್ವತ್ಥಾಮನಿಗೂ ಕೃಪ-ಕೃತವರ್ಮರಿಗೂ ಹೆಚ್ಚಿನ ಅಂತರವೇನೂ ಇರುವುದಿಲ್ಲ. ಶಿಬಿರದ್ವಾರದಲ್ಲಿದ್ದ ಮಹಾಭೂತವು ಅಶ್ವತ್ಥಾಮನಿಗೊಬ್ಬನಿಗೆ ಕಾಣಿಸಿತೆ? ಕೃಪ-ಕೃತವರ್ಮರಿಗೆ ಕಾಣಿಸಲಿಲ್ಲವೆ? ಕೆಲವು ಸಮಯಗಳಲ್ಲಿ ಒಬ್ಬರಿಗೆ ಕಾಣಿಸದೇ ಇದ್ದುದು ಮತ್ತೊಬ್ಬರಿಗೆ ಕಾಣಿಸಬಹುದು. ಆದರೆ ಅಶ್ವತ್ಥಾಮನು ಶಸ್ತ್ರಾಸ್ತ್ರಗಳನ್ನು ಪ್ರಯೋಗಮಾಡುತ್ತಿದ್ದುದು ರಥಶಕ್ತಿ, ಕತ್ತಿ, ಗದೆಗಳನ್ನು ಪ್ರಯೋಗಿಸಿದುದು ಕೃಪ-ಕೃತವರ್ಮರಿಗೆ ಗೋಚರಿಸದೇ ಇರಲು ಸಾಧ್ಯವೇ? ಶಿಬಿರದೊಳಗೆ ಇದೆಲ್ಲವೂ ನಡೆದಿದ್ದರೆ ಗೋಚರಿಸದೇ ಇರಬಹುದಾಗಿದ್ದಿತು. ಶಿಬಿರದ್ವಾರದಲ್ಲಿಯೇ ಇದೆಲ್ಲವೂ ನಡೆಯಿತೆಂದು ಹೇಳಿದೆ. ಅಶ್ವತ್ಥಾಮನಿಗೆ ರಾತ್ರಿಯವೇಳೆಯಲ್ಲಿ ಮಲಗಿದ್ದವರನ್ನು ಸಂಹರಿಸಲು ಬಂದುದಕ್ಕಾಗಿ ಪಶ್ಚಾತ್ತಾಪವುಂಟಾಗುತ್ತದೆ. ಮಲಗಿದ್ದವರ ಮೇಲೆ ಶಸ್ತ್ರಪಾತಮಾಡಕೂಡದೆಂಬ ಶಾಸ್ತ್ರವಚನವನ್ನು ಅಶ್ವತ್ಥಾಮನೇ ಉದ್ಧರಿಸುತ್ತಾನೆ. **ಸುಪ್ತಭೀತೋತ್ಥಿತೇಷು ನ ಶಸ್ತ್ರಾಣಿ ಪಾತಯೇತ್** (೨೨) 'ತಾನು ಹಿರಿಯರು ತೋರಿಸಿಕೊಟ್ಟ ಸನ್ಮಾರ್ಗದಲ್ಲಿ ಹೋಗದೆ ಅಪಮಾರ್ಗದಲ್ಲಿ ಪ್ರವೇಶಮಾಡಿದುದರಿಂದ ನನಗೆ ಈ ವಿಧವಾದ ಆಪತ್ತುಂಟಾಯಿತು'–ಎನ್ನುತ್ತಾನೆ. **ಸೋಽಹಮುತ್ಕ್ರಮ್ಯ ಪನ್ಥಾನಂ ಶಾಸ್ತ್ರ ದಿಷ್ಟಂ ಸನಾತನಮ್ । ಅಮಾರ್ಗೇಣೈವಮಾರಭ್ಯ ಘೋರಾಮಾಪದ ಮಾಗತಃ** (೨೩) ಇಂತಹ ವಿವೇಕವು ಅವನ ಮನಸ್ಸಿನಲ್ಲಿ ಮೂಡಿದರೂ ಕಾರ್ಯದಲ್ಲಿ ಪ್ರವೃತ್ತನಾದನಂತರ ಪುನಃ ಹಿಂದಿರುಗುವುದು ಹೇಡಿಯ ಲಕ್ಷಣವೆಂದು ನಿರ್ಧಾರಕ್ಕೆ ಬಂದು ತನ್ನ ಕಾರ್ಯವನ್ನು ಸಾಧಿಸಿಕೊಳ್ಳಲು ಪರಮೇಶ್ವರನನ್ನು ಶರಣುಹೋಗುತ್ತಾನೆ ; ೭ನೆಯ ಅಧ್ಯಾಯದಲ್ಲಿಯೂ ಈ ಪ್ರಕರಣವೇ ಮುಂದುವರಿಯುತ್ತದೆ : ಶಿವಸ್ತೋತ್ರವು ಬಹಳ ಸುಂದರ ವಾಗಿದೆ. ಬಳಿಕ ೧೨ನೆಯ ಶ್ಲೋಕಾರ್ಥವು ಹೀಗಿದೆ. 'ಅತ್ಯಂತ ದುಷ್ಕರ ವಾದ ಮತ್ತು ಭಯಂಕರವಾದ ವಿಪತ್ತಿನಿಂದ ಪಾರಾಗುವಂತಾದರೆ ಶುಚಿ ಯಾದ ಸರ್ವಭೂತೋಪಹಾರದಿಂದ ಪರಮಪಾವನವಾದ ಪರಮೇಶ್ವರನ

ಪೂಜೆಯನ್ನು ಮಾಡುತ್ತೇನೆ. ಇಮಾಂ ಚೇದಾಪದಂ ಘೋರಾಂ ತರಾಮ್ಯದ್ಯ ಸುದುಷ್ಕರಾಮ್ । ಸರ್ವಭೂತೋಪಹಾರೇಣ ಯಕ್ಷ್ಯೇಽಹಂ ಶುಚಿನಾ ಶುಚಿಮ್ (೧೨)' ಹರಕೆಯನ್ನು ಹೊತ್ತಂತೆ ಈ ಶ್ಲೋಕವಿದೆ. ಆದರೆ ಕಾರ್ಯವು ಪೂರ್ಣವಾಗುವ ಮೊದಲೇ ಹರಕೆಯನ್ನು ಒಪ್ಪಿಸಬೇಕಾದ ಪ್ರಸಂಗವು ಬರುತ್ತದೆ. ಆತ್ಮೋಪಹಾರಕ್ಕಾಗಿ ಯಜ್ಞೇಶ್ವರನಿಂದ ಯುಕ್ತವಾದ ಸುವರ್ಣವೇದಿಯೇ ಸಿದ್ಧವಾಗುತ್ತದೆ. ಆ ವೇದಿಯ ಜೊತೆಯಲ್ಲಿಯೇ ಅದ್ಭುತಾಕಾರರಾದ ಶಿವನ ಪಾರಿಷದರು ಬರುತ್ತಾರೆ. ಆದರೆ ಈಶ್ವರನು ಬಂದ ವಿಷಯವಿಲ್ಲಿ ಬರುವುದಿಲ್ಲ. ಆದರೂ ಅಶ್ವತ್ಥಾಮನು ತಾನಾಗಿಯೇ ಸಿದ್ಧವಾಗಿದ್ದ ಅಗ್ನಿಯುಕ್ತವಾಗಿದ್ದ ವೇದಿಯಲ್ಲಿ ಆತ್ಮಾರ್ಪಣೆಮಾಡಿಕೊಂಡನೆಂದು ೫೨ನೆಯ ಶ್ಲೋಕದಲ್ಲಿದೆ. ಪುನಃ ೫೪ನೆಯ ಶ್ಲೋಕದಲ್ಲಿ–ಪ್ರತಾಪವಂತನಾದ ದ್ರೌಣಿಯು ಸೌಮ್ಯಮಂತ್ರದಿಂದ ಅಗ್ನಿಯಲ್ಲಿ ತನ್ನನ್ನು ಸಮರ್ಪಿಸಿಕೊಂಡನೆಂದು ಹೇಳಿದೆ. ಉಪಹಾರಂ ಮಹಾಮನ್ಯುರಥಾತ್ಮಾನಮುಪಾಹರತ್ । ಹೀಗೆ ಹೇಳಿದನಂತರವೂ ರುದ್ರನನ್ನು ಕುರಿತು ಬದ್ಧಾಂಜಲಿಯಾಗಿ ಅಶ್ವತ್ಥಾಮನು ಹೇಳಿದ ಮಾತುಗಳು ಬಂದಿವೆ. ಪುನಃ ೬೦ನೆಯ ಶ್ಲೋಕದಲ್ಲಿ ಅಗ್ನಿಯುಕ್ತವಾದ ವೇದಿಯನ್ನು ಅಶ್ವತ್ಥಾಮನು ಪ್ರವೇಶಿಸಿದನು–ಎಂದಿದೆ. ಮಹಾದೇವನು ಬಂದನೆಂಬ ಅಥವಾ ಮಹಾಭೂತವೇ ಮಹಾದೇವನಾಗಿ ಪರಿವರ್ತನೆಹೊಂದಿತೆಂಬ ವಿಷಯವು ಬರದಿದ್ದರೂ ಮಹಾದೇವನು ಅಶ್ವತ್ಥಾಮನೊಡನೆ ಮಾತನಾಡಿದ ವಿಷಯವು ಬಂದಿದೆ. ಆ ಶ್ಲೋಕದಲ್ಲಿಯೂ ಈಶ್ವರನು ಶ್ರೀಕೃಷ್ಣನು ತನ್ನ ಪರಮಭಕ್ತನೆಂದು ಹೇಳಿಕೊಳ್ಳುತ್ತಾನೆ. ಶ್ರೀಕೃಷ್ಣನನ್ನು ಗೌರವಿಸುವ ಸಲುವಾಗಿಯೇ ಇದುವರೆಗೂ ಪಾಂಚಾಲರನ್ನು ರಕ್ಷಿಸಿಕೊಂಡಿದ್ದೆನೆಂದೂ, ಈಗ ಅವರ ಆಯುಷ್ಯವು ಕಳೆದುಹೋಗಿದೆಯೆಂದೂ ಹೇಳಿ ಶಿವನು ಅಶ್ವತ್ಥಾಮನಲ್ಲಿ ಪ್ರವೇಶಿಸುವುದು ಮಾತ್ರವಲ್ಲದೇ ಕತ್ತಿಯನ್ನೂ ಕೊಡುತ್ತಾನೆ. ಆದರೆ ಅಶ್ವತ್ಥಾಮನು ವೇದಿಯಿಂದ ಹೊರಬಂದನೆಂಬ ವಿಷಯವೇ ಬರುವುದಿಲ್ಲ. ಖಡ್ಗವನ್ನು ದಯಪಾಲಿಸಿದ ಈಶ್ವರನು ಮುಂದೇನಾದನೆಂಬ ವಿಷಯವೂ ಇಲ್ಲ. ಕತ್ತಿಯನ್ನು ಕೊಟ್ಟ ವಿಷಯವಿರುವುದೇ ಹೊರತು ಶಿಬಿರದ ಬಾಗಿಲನ್ನು ತೆರವು ಮಾಡಿದ ವಿಷಯವಿಲ್ಲ. ಮಹಾಭೂತದ ವಿಷಯವೂ ಇಲ್ಲ ;

ಭೂತಗಣಗಳ ವಿಷಯವೂ ಇಲ್ಲ. ಮಹಾಭಾರತದಲ್ಲಿ ಪ್ರಕರಣಗಳು ಸಾಮಾನ್ಯವಾಗಿ ಹೀಗೆ ಪರಿಸಮಾಪ್ತಿ ಹೊಂದುವುದಿಲ್ಲ. ಹೀಗೆ ಈ ಅಧ್ಯಾಯವು ಅನೇಕಾಸಂಗತಗಳಿಂದ ಕೂಡಿರುತ್ತದೆ. ೮ನೆಯ ಅಧ್ಯಾಯದ ಮೊದಲಿನಲ್ಲಿ : ಪುನಃ ಧೃತರಾಷ್ಟ್ರನು ಹೇಳುವ ಮಾತುಗಳಿವೆ. ಈ ಮಾತು ಗಳು ಹಿಂದಿನ ಅಧ್ಯಾಯಕ್ಕೆ ಸಂಬಂಧಿಸಿದಂತೆಯೇ ಇವೆ. 'ತಥಾ ಪ್ರಯಾತೇ ಶಿಬಿರಂ' ಎಂದೇ ಪ್ರಾರಂಭವಾಗುತ್ತದೆ. ಈ ರೀತಿಯಲ್ಲಿ ಅಶ್ವತ್ಥಾಮನು ಶಿಬಿರವನ್ನು ಪ್ರವೇಶಿಸಿದನಂತರ ಕೃಪ-ಕೃತವರ್ಮರು ಏನು ಮಾಡಿದರು? ಭಯದಿಂದ ಓಡಿಹೋದರೆ? ದ್ವಾರಪಾಲಕರು ಅವರಿಬ್ಬರನ್ನೂ ತಡೆಯ ಲಿಲ್ಲವೇ?–ಎಂದೂ ಪ್ರಶ್ನಿಸುತ್ತಾನೆ. ದ್ವಾರದಲ್ಲಿ ಮಹಾಭೂತವಿದ್ದಿತೆಂದು ಹಿಂದಿನ ಅಧ್ಯಾಯದಲ್ಲಿ ಹೇಳಿ ಅಶ್ವತ್ಥಾಮನ ಪ್ರಯತ್ನದಿಂದಾಗಿ ಅದರ ನಿವಾರಣೆಯಾಯಿತೆಂಬ ವಿಷಯವು ಧೃತರಾಷ್ಟ್ರನಿಗೆ ತಿಳಿದಿರುವಾಗ ದ್ವಾರ ಪಾಲಕರ ವಿಷಯವನ್ನೇಕೆ ಧೃತರಾಷ್ಟ್ರನು ಪ್ರಸ್ತಾಪಿಸಿದನು? ಅಶ್ವತ್ಥಾಮನಿಗೆ ಸಿಕ್ಕಿದ ಸೌಲಭ್ಯವೇ ಕೃಪ-ಕೃತವರ್ಮರಿಗೂ ಲಭ್ಯವಾಗಬೇಕಲ್ಲವೇ? ಮುಂದೆ ಧೃತರಾಷ್ಟ್ರನು ಕೃಪ-ಕೃತವರ್ಮರು ಪಾಂಚಾಲರಿಂದ ಹತರಾಗ ಲಿಲ್ಲವೇ?–ಎಂದೂ ಪ್ರಶ್ನಿಸುತ್ತಾನೆ. ಮಲಗಿರುವವರನ್ನು ಸಂಹರಿಸಲು ಹೋಗಿರುವಾಗ ಅವರಿಂದ ಹತರಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಈ ಎಲ್ಲ ಕಾರಣಗಳಿಂದ ಆರನೆಯ ಅಧ್ಯಾಯದ ಮೊದಲನೆಯ ಶ್ಲೋಕ ವಾದನಂತರ ಕಥೆಯು ದಾರಿತಪ್ಪಿರಬಹುದೆಂದೂ ೮ನೆಯ ಅಧ್ಯಾಯದ ೫ನೆಯ ಶ್ಲೋಕದಿಂದ ಕಥಾನುವರ್ತನೆಯು ಸರಿಯಾಗಿ ಹೊಂದಿಕೊಳ್ಳು ವುದೆಂದೂ ಹೇಳಲು ಸಾಧ್ಯವಿದೆ. ಧೃತರಾಷ್ಟ್ರನು ಪ್ರಶ್ನಿಸುವ ದ್ವಾರದೇಶೇ **ತತೋ ದ್ರೌಣಿಮವಸ್ಥಿತಮವೇಕ್ಷ್ಯ ತೌ । ಅಕುರ್ವಾತಾಂ ಭೋಜಕೃಪೌ ಕಿಂ ಸಂಜಯ ವದಸ್ವ ಮೇ** (೧) ಅದಕ್ಕುತ್ತರವಾಗಿ ೮ನೆಯ ಅಧ್ಯಾಯದ ೫ನೆಯ ಶ್ಲೋಕದಲ್ಲಿ ಎಷ್ಟು ಸಮಂಜಸವಾದ ಉತ್ತರವಿದೆಯೆಂಬುದನ್ನು ಕಾಣಬಹುದಾಗಿದೆ.

ತಸ್ಮಿನ್ಪ್ರಯಾತೇ ಶಿಬಿರಂ ದ್ರೋಣಪುತ್ರೇ ಮಹಾತ್ಮನಿ ।
ಕೃಪಶ್ಚ ಕೃತವರ್ಮಾ ಚ ಶಿಬಿರದ್ವಾರ್ಯತಿಷ್ಠತಾಮ್ ॥೫॥

ಇಲ್ಲಿ ಸಂಜಯನು ಉತ್ತರಹೇಳುವಾಗ **ತಸ್ಮಿನ್ಪ್ರಯಾತೇ** ಎಂದು

ಪ್ರಾರಂಭಿಸುವನೇ ಹೊರತು **ತಥಾ ಪ್ರಯಾತೇ** ಎಂದು ಹೇಳುವುದಿಲ್ಲ. ಇದನ್ನೂ ಇಲ್ಲಿ ಗಮನಿಸಬೇಕಾಗಿದೆ. ಎರಡನೆಯದಾಗಿ ಅಶ್ವತ್ಥಾಮನು ಮಹಾದ್ವಾರದ ಮೂಲಕವಾಗಿ ಶಿಬಿರವನ್ನು ಪ್ರವೇಶಿಸುವುದಿಲ್ಲ. **ಅದ್ವಾರೇ-ಣಾಭ್ಯವಸ್ಕನ್ದ್ಯ** (೯) ಎಂದು ಸ್ಪಷ್ಟವಾಗಿಯೇ ಇದೆ. ದ್ವಾರದಲ್ಲಿದ್ದ ಮಹಾ ಭೂತನಿಂದ ಪರಾಜಿತನಾಗಿ ಶಿವನನ್ನು ಸ್ತುತಿಸಿ ಅವನ ವರಪ್ರಸಾದವನ್ನು ಪಡೆದುಕೊಂಡನಂತರ ಮಹಾದ್ವಾರವನ್ನು ಬಿಟ್ಟು ಬೇರೆಯ ಮಾರ್ಗದಿಂದ ಹೋಗುವ ಕಾರಣವೇ ಇರಲಿಲ್ಲ. ಈಶ್ವರನು ಕೊಟ್ಟ ಕತ್ತಿಯನ್ನು ಹಿಡಿದು ಕೊಂಡು ಹೋಗುತ್ತಿದ್ದನೆಂಬುದು ಮುಂದೆ ಯಾವ ಪ್ರಕರಣದಲ್ಲಿಯೂ ಬರುವುದಿಲ್ಲ. ಹಿಂದಿನ ಅಧ್ಯಾಯದಲ್ಲಿ ಈಶ್ವರನು ದಯಪಾಲಿಸಿದ ಕತ್ತಿಯೇ ಅತಿಮುಖ್ಯವಾದ ಕಥಾಸಾರಾಂಶವಾಗಿರುತ್ತದೆ. ಮುಂದೆಲ್ಲಿಯೂ ಈಶ್ವರ ದತ್ತವಾದ ಖಡ್ಗದ ಪ್ರಸ್ತಾಪವೇ ಇಲ್ಲದಿರುವುದೂ ೬ ಮತ್ತು ೭ನೆಯ ಅಧ್ಯಾಯಗಳು ಹೆಚ್ಚು ಪಾಠವಿರಬಹುದೆಂಬ ಊಹೆಗೆ ಪುಷ್ಟಿಯನ್ನು ಕೊಡುತ್ತವೆ.

ಅಶ್ವತ್ಥಾಮನು ಕೃಪ-ಕೃತವರ್ಮರಿಗೆ ಮಹಾದ್ವಾರದ ಸಮೀಪದಲ್ಲಿಯೇ ಇರುವಂತೆ ಹೇಳಿ ತಾನು ಮಹಾದ್ವಾರದ ಮೂಲಕವಾಗಿ ಹೋಗದೇ ಬೇರೊಂದು ಕಡೆಯಿಂದ ಶಿಬಿರದ ಗೋಡೆಯನ್ನು ಹಾರಿ ಶಿಬಿರವನ್ನು ಪ್ರವೇಶಿಸುತ್ತಾನೆ. ಮೊದಲು ಅಶ್ವತ್ಥಾಮನು ಮೆಲ್ಲನೆ ಧೃಷ್ಟದ್ಯುಮ್ನನ ಶಯನಗೃಹಕ್ಕೆ ಹೋಗಿ ಕಾಲಿಂದ ಒದೆದು ಅವನನ್ನೆಬ್ಬಿಸಿ ಶಿಖೆಯನ್ನು ಹಿಡಿದು ಮೇಲೆತ್ತಿ ನೆಲಕ್ಕೆ ಕುಕ್ಕುತ್ತಾನೆ. ಆ ಸಮಯದಲ್ಲಿ ಧೃಷ್ಟದ್ಯುಮ್ನನಿಗೆ ತನ್ನನ್ನು ಪ್ರಹರಿಸುತ್ತಿರುವವನು ಅಶ್ವತ್ಥಾಮನೆಂಬುದು ತಿಳಿಯುತ್ತದೆ. ಆಯುಧದ ಮೂಲಕವಾಗಿ ಸಂಹರಿಸುವಂತೆ ಕೇಳಿಕೊಳ್ಳುತ್ತಾನೆ– **ಶಸ್ತ್ರೇಣ ಜಹಿ ಮಾಂ ತ್ವತ್ಕೃತೇ ಸುಕೃತಾಲ್ಲೋಕಾನ್ಗಚ್ಛೇಯಂ** (೨೦) 'ಆಚಾರ್ಯ ಹಂತಕನು ಶಸ್ತ್ರಗಳ ಮೂಲಕವಾಗಿ ನಿಧನ ಹೊಂದಲು ಯೋಗ್ಯನಲ್ಲ'– ಎಂದು ಹೇಳುತ್ತಾ ಅಶ್ವತ್ಥಾಮನು ಪಾರ್ಷತನನ್ನು ಗುದ್ದಿಯೇ ಸಂಹಾರ ಮಾಡುತ್ತಾನೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ನಾವು ಜ್ಞಾಪಿಸಿಕೊಳ್ಳಬೇಕಾಗಿದೆ. ಧೃಷ್ಟದ್ಯುಮ್ನನಿಗೆ ಶಸ್ತ್ರಾಘಾತದಿಂದ ಮರಣವೇ ಇಲ್ಲ.–.**ಸ ಜ್ಞಾತ್ವಾ ಸುವರೇಽತ್ಮಾನಂ ಶಸ್ತ್ರೇಣಾವಧ್ಯಮೇವ ತು ।**

ಕರ್ಣ-೫೯-೨೫. ಆದುದರಿಂದ ಶಸ್ತ್ರಪ್ರಯೋಗದಿಂದ ಅವನನ್ನು ಕೊಲ್ಲಲು ಸಾಧ್ಯವಿಲ್ಲ. ಎರಡನೆಯದಾಗಿ ಕುರುಕ್ಷೇತ್ರದಲ್ಲಿ ಯಾವುದೇ ರೀತಿಯಲ್ಲಿ ನಿಧನಹೊಂದಿದರೂ ಪುಣ್ಯಲೋಕಗಳು ಲಭ್ಯವಾಗುತ್ತವೆ. ಈ ಎರಡು ಕಾರಣಗಳಿಂದ ಧೃಷ್ಟದ್ಯುಮ್ನನ ಅಂತ್ಯವು ಹೀಗೆ ಆಗಬೇಕಾದುದು ಅನಿವಾರ್ಯವಾಗಿದ್ದಿತು. ಅಶ್ವತ್ಥಾಮನು ಧೃಷ್ಟದ್ಯುಮ್ನನನ್ನು ಸಂಹರಿಸುತ್ತಿದ್ದಾಗ ಸ್ತ್ರೀಯರೂ ಮತ್ತು ರಕ್ಷಕರೂ ಎಚ್ಚರಗೊಂಡರೂ ಯಾವುದೋ ಭೂತವಿರಬಹುದೆಂದು ಬಗೆದು ಭಯದಿಂದ ಕೂಗಿಕೊಳ್ಳಲೂ ಇಲ್ಲ. ಅಶ್ವತ್ಥಾಮನು ಹೊರಟುಹೋದನಂತರ ಅವರೆಲ್ಲರೂ ಕೂಗಿಕೊಳ್ಳುತ್ತಾರೆ. ಧೃಷ್ಟದ್ಯುಮ್ನನ ಅನೇಕಯೋಧರು ಎಚ್ಚರಗೊಂಡು ಅಶ್ವತ್ಥಾಮನ ಕಡೆಗೆ ಓಡಿಹೋಗುತ್ತಾರೆ. ಅಶ್ವತ್ಥಾಮನು ಅವರೆಲ್ಲರನ್ನೂ ರುದ್ರಾಸ್ತ್ರದಿಂದ ಸಂಹರಿಸುತ್ತಾನೆ. **ರುದ್ರಾಸ್ತ್ರೇಣ ವ್ಯಪೋಥಯತ್** (೩೩) ಇಲ್ಲಿಯೂ ರುದ್ರದತ್ತವಾದ ಕತ್ತಿಯನ್ನು ಉಪಯೋಗಿಸಿದನೆಂಬ ವಿಷಯವು ಬರುವುದಿಲ್ಲ.

ಧೃಷ್ಟದ್ಯುಮ್ನನನ್ನೂ ಮತ್ತು ಅವನ ಅನುಯಾಯಿಗಳನ್ನೂ ಸಂಹರಿಸಿದನಂತರ ಅಶ್ವತ್ಥಾಮನು ಧೃಷ್ಟದ್ಯುಮ್ನನನ್ನು ಸಂಹರಿಸಿದಂತೆಯೇ ಉತ್ತಮೌಜಸನನ್ನೂ ಸಹ ಸಂಹರಿಸುತ್ತಾನೆ. ಉತ್ತಮೌಜಸನು ಹತನಾದುದನ್ನು ಕಂಡು ಯುಧಾಮನ್ಯುವು ಇದು ರಾಕ್ಷಸನ ಕೃತ್ಯವೆಂದು ತಿಳಿದು ಗದೆಯಿಂದ ಅಶ್ವತ್ಥಾಮನನ್ನು ಪ್ರಹರಿಸುತ್ತಾನೆ. **ಗದಾಮುದ್ಯಮ್ಯ ವೇಗೇನ ಹೃದಿ ದ್ರೌಣಿಮತಾಡಯತ್** (೩೬) ಆದರೆ ಗದಾಪ್ರಹಾರದ ಪ್ರತಿಕ್ರಿಯೆಯೇನೆಂಬುದನ್ನು ಇಲ್ಲಿ ಹೇಳಿಲ್ಲ. ಮುಂದೆಯೂ ಹೀಗೆಯೇ ಕೆಲವು ಪ್ರಕರಣಗಳು ಬರುತ್ತವೆ. ಗದಾಪ್ರಹಾರದ ವಾಕ್ಯವಿಲ್ಲದಿದ್ದರೂ ಕಥೆಯು ಸಮಂಜಸವಾಗಿಯೇ ಮುಂದುವರಿಯುತ್ತದೆ. ಅದೇ ಸಮೀಚೀನವಾಗಿಯೂ ಕಾಣುತ್ತದೆ. **ಯುಧಾಮನ್ಯುಶ್ಚ ಸಮ್ಪ್ರಾಪ್ತೋ ಮತ್ವಾ ತಂ ರಕ್ಷಸಾಹತಮ್ ।** ಉತ್ತಮೌಜಸನು ರಾಕ್ಷಸನಿಂದ ಹತನಾದನೆಂದು ತಿಳಿದು ಯುಧಾಮನ್ಯುವು ಅಲ್ಲಿಗೆ ಬಂದನು. **ತಮಭಿದ್ರುತ್ಯ ಜಗ್ರಾಹ ಕ್ಷಿತೌ ಚೈನಮಪಾತಯತ್** (೩೭) ಯುಧಾಮನ್ಯುವನ್ನು ನೋಡಿದೊಡನೆಯೇ ಅಶ್ವತ್ಥಾಮನು ಧಾವಿಸಿ ಹೋಗಿ ಅವನನ್ನು ಹಿಡಿದು ಕೆಳಕ್ಕೆ ಬೀಳಿ

ಸಿದನು. ಆದರೆ ಯುಧಾಮನ್ಯುವು ಗದೆಯಿಂದ ಅಶ್ವತ್ಥಾಮನನ್ನು ಪ್ರಹರಿಸಿದ ನೆಂಬುದು ಎಲ್ಲ ಪುಸ್ತಕಗಳಲ್ಲಿಯೂ ಇದೆ. ಮುಂದೆ ಅಶ್ವತ್ಥಾಮನು ಕತ್ತಿಯನ್ನು ಹಿಡಿದು ಅನೇಕರನ್ನು ಸಂಹರಿಸಿದನೆಂದು ಹೇಳಿದೆ. ಈ ಕತ್ತಿಯು ರುದ್ರ ದತ್ತವೆಂದು ಹೇಳಿಲ್ಲ. **ತತೋ ನಿಸ್ತ್ರಿಂಶಮಾದಾಯ ಜಘಾನಾನ್ಯಾನ್ಪೃಥಕ್ಪೃಥಕ್** (೪೦) ಮುಂದೆ ಇವನು ಕತ್ತಿಯಿಂದ ಯೋಧರನ್ನೂ, ಆನೆಗಳನ್ನೂ, ಕುದುರೆಗಳನ್ನೂ ಕೊಚ್ಚಿಹಾಕಿದ ಭಯಂಕರವರ್ಣನೆಯಿದೆ. ಮುಂದೆ ೪೭ನೆಯ ಶ್ಲೋಕದಲ್ಲಿ **ಅಪಶ್ಯದ್ದ್ರೌಪದೀಪುತ್ರಾನವಶಿಷ್ಟಾಂಶ್ಚ ಸೋಮಕಾನ್**- ದ್ರೌಪದಿಯ ಮಕ್ಕಳನ್ನೂ ಮತ್ತು ಅಳಿದುಳಿದಿದ್ದ ಸೋಮಕರನ್ನೂ ಅಶ್ವತ್ಥಾಮನು ನೋಡಿದನು–ಎಂದಿದೆ. ಇಲ್ಲಿ ಕಥೆಯು ಸ್ವಲ್ಪ ಕವಲೊಡೆದಂತೆ ಕಾಣುತ್ತದೆ. ಮುಂದಿನ ಶ್ಲೋಕದಲ್ಲಿ ಧೃಷ್ಟದ್ಯುಮ್ನನು ಹತನಾದುದನ್ನು ಕೇಳಿ ಮಹಾರಥರಾದ ಧನುಷ್ಪಾಣಿಗಳಾದ ದ್ರೌಪದಿಯ ಮಕ್ಕಳು ಅಶ್ವತ್ಥಾಮನ ಮೇಲೆ ಬಾಣಗಳ ಮಳೆಗರೆದರು. ಶಿಖಂಡಿಯೂ ಅಶ್ವತ್ಥಾಮನನ್ನು ಪೀಡಿಸಿದನು–ಮುಂತಾಗಿ ಹೇಳಿದೆ. ಆ ಘೋರರಾತ್ರಿಯಲ್ಲಿ ಯುದ್ಧದ ಸಿದ್ಧತೆಯು ಹೇಗಾಯಿತು? ಎಲ್ಲರೂ ರಥಗಳಲ್ಲಿ ಕುಳಿತಿದ್ದರೆ? ನೆಲದ ಮೇಲೆಯೇ ನಿಂತು ಯುದ್ಧ ಮಾಡುತ್ತಿದ್ದರೆ? ಆ ಬಗೆಗೆ ಇಲ್ಲಿ ಯಾವ ವಿವರಣೆಯೂ ಇಲ್ಲ. ನ ಚ ಸ್ಮ ಪ್ರತ್ಯಪದ್ಯನ್ತ ಶಸ್ತ್ರಾಣಿ ವಸನಾನಿ ಚ (೭೯) – ಅವರಿಗೆ ಯುದ್ಧಮಾಡಲು ಕವಚಗಳಾಗಲೀ ಶಸ್ತ್ರಗಳಾಗಲೀ ಸಿಕ್ಕುತ್ತಲೇ ಇರಲಿಲ್ಲ. ಎಂಬ ಸ್ವಾಭಾವಿಕೋಕ್ತಿಯೂ ಇದೆ. ಅವರು ಬಾಣಗಳನ್ನು ಸುರಿಸಿದುದರ ಪರಿಣಾಮವೇನು? – ಎಂಬುದೂ ಇಲ್ಲಿರುವುದಿಲ್ಲ. ಕತ್ತಿಯನ್ನು ಹಿಡಿದು, ಮಲಗಿದ್ದ ಸೈನಿಕರನ್ನೂ ಕುದುರೆಗಳನ್ನೂ ಕೊಚ್ಚಿಹಾಕುತ್ತಾ ರಣಾಂಗಣದಲ್ಲಿ ಅಶ್ವತ್ಥಾಮನು ಸಂಚರಿಸುತ್ತಿದ್ದನೆಂಬುದು ಈ ಹಿಂದೆ ಬಂದಿದ್ದರೂ ಇಲ್ಲಿ ಪುನಃ ರಥದಿಂದಿಳಿದು ಗುರಾಣಿಯನ್ನೂ ಖಡ್ಗವನ್ನೂ ಹಿಡಿದುಕೊಂಡು ಅಶ್ವತ್ಥಾಮನು ಹೊರಟನು– ಎಂಬುದಾಗಿದೆ. ಅವರುಹ್ಯ **ರಥೋಪಸ್ಥಾತ್ ತ್ವರಮಾಣೋಽಭಿದುದ್ರುವೇ । ಸಹಸ್ರಚನ್ದ್ರವಿಮಲಂ ಗೃಹೀತ್ವಾ ಚರ್ಮ ಸಂಯುಗೇ । ಖಡ್ಗಂ ಚ ವಿಮಲಂ ದಿವ್ಯಂ ಜಾತರೂಪಪರಿಷ್ಕೃತಮ್** (೫೨) ಈ ಪ್ರಕರಣದಲ್ಲಿ ನಮ್ಮ ಅಭಿಪ್ರಾಯವು

ಹೀಗಿದೆ. ಅಶ್ವತ್ಥಾಮನನ್ನು ಎದುರಿಸಿ ನಿಂತು ಯಾರೂ ಯುದ್ಧಮಾಡುವ ಸಾಧ್ಯತೆಯೇ ಇಲ್ಲ. ಮಲಗಿದ್ದಂತೆಯೇ ಅವನ ಖಡ್ಗಕ್ಕೆ ತುತ್ತಾಗಿ ಅನೇಕರು ಅಸುನೀಗಿದರು. ಮತ್ತೆ ಕೆಲವರು ಗಾಬರಿಗೊಂಡು ಎದ್ದು ಭ್ರಾಂತರಾಗಿ ಓಡಿಹೋಗುತ್ತಿದ್ದಾಗ ಅಶ್ವತ್ಥಾಮ-ಕೃತವರ್ಮ-ಕೃಪರ ಆಯುಧಗಳಿಗೆ ಲಕ್ಷ್ಯರಾಗಿ ಪ್ರಾಣಬಿಟ್ಟರು.

ಅಪಶ್ಯದ್ದ್ರೌಪದೀಪುತ್ರಾನವಶಿಷ್ಟಾಂಶ್ಚ ಸೋಮಕಾನ್ (೪೭) ದ್ರೌಪದಿಯ ಮಕ್ಕಳನ್ನೂ ಮತ್ತು ಅಳಿದುಳಿದಿದ್ದ ಸೋಮಕರನ್ನೂ ಅಶ್ವತ್ಥಾಮನು ನೋಡಿದನು–ಎಂದು ಹೇಳಿದನಂತರ ತೇನ ಶಬ್ದೇನ ವಿತ್ರಸ್ತಾಃ- ಆ ಶಬ್ದದಿಂದ ಭಯಗೊಂಡು (೪೮)–ಎಂಬುದಾಗಿ ಬಂದಿರುತ್ತದೆ. ಮಹಾ ಶಬ್ದವಾದ ವಿಷಯವು ಈ ಹಿಂದಿನ ಶ್ಲೋಕಗಳಲ್ಲಿ ಬಂದಿರುವುದಿಲ್ಲ. ಹೆಚ್ಚು ಶ್ಲೋಕಗಳಂತೆ ಕಾಣುವ ಈ ಮಧ್ಯದ ಐದು ಶ್ಲೋಕಗಳನ್ನು ಬಿಟ್ಟಲ್ಲಿ ಕಥೆಯು ಸ್ವಾರಸ್ಯವಾಗಿ ಮುಂದುವರಿಯುತ್ತದೆ.

ಅಪಶ್ಯದ್ದ್ರೌಪದೀಪುತ್ರಾನವಶಿಷ್ಟಾಂಶ್ಚ ಸೋಮಕಾನ್ (೪೭)

ದ್ರೌಪದೇಯಾನಭಿದ್ರುತ್ಯ ಖಡ್ಗೇನ ವ್ಯಧಮದ್ಬಲೀ (೫೩)

ದ್ರೌಪದಿಯ ಮಕ್ಕಳ ಮೇಲೆ ಬಿದ್ದು ಅವರೆಲ್ಲರನ್ನೂ ಧ್ವಂಸಮಾಡಿದನು. ಹೀಗೆ ಕಥೆಯು ಸಂಗತವಾಗಿ ಹೊಂದಿಕೊಳ್ಳುತ್ತದೆ. ಆದರೆ ಸಂಹಾರ ಮಾಡಿದನೆಂದು ಈ ಶ್ಲೋಕಾರ್ಧದಲ್ಲಿ ಬಂದ ಮೇಲೂ ಒಬ್ಬೊಬ್ಬರನ್ನೂ ಹೇಗೆ ಸಂಹರಿಸಿದನೆಂಬ ಬಗೆಗೆ ಮುಂದಿನ ಶ್ಲೋಕಗಳಲ್ಲಿ ವರ್ಣನೆಯಿದೆ. ಈ ಹತ್ತು ಶ್ಲೋಕಗಳೂ ಹೆಚ್ಚು ಪಾಠವೆಂದು ಸಂದೇಹಿಸಲು ಅವಕಾಶವಿದೆ. ದ್ರೌಪದಿಯ ಮಕ್ಕಳೂ ಮತ್ತು ಶಿಖಂಡಿಯೂ ಅಶ್ವತ್ಥಾಮನ ಮೇಲೆ ಪ್ರಹರಿಸಿದ ರಥಚಕ್ರ, ಪರಿಘಾಯುಧ, ಬಾಣಗಳ ಪರಿಣಾಮವೇನೆಂಬುದೇ ಉಕ್ತವಾಗಿಲ್ಲ. ಅವರು ರಥಗಳಲ್ಲಿ ಕುಳಿತಿದ್ದರೇ? ಎಂಬ ವಿಷಯವೂ ಇಲ್ಲ. ಆದುದರಿಂದ ಆನುಪೂರ್ವಿಯು ಹೀಗಿದ್ದಿರಬಹುದೆಂದು ಭಾವಿಸಬಹುದಾಗಿದೆ.

ದ್ರೌಪದೇಯಾನಭಿದ್ರುತ್ಯ ಖಡ್ಗೇನ ವ್ಯಧಮದ್ಬಲೀ (೫೩)

ಶಿಖಣ್ಡಿನಂ ತತೋ ಹತ್ವಾ ಕ್ರೋಧಾವಿಷ್ಟಃ ಪರಂತಪಃ (೬೫)
ಪ್ರಭದ್ರಕಗಣಾನ್ಸರ್ವಾನದುದ್ರಾವ ವೇಗವಾನ್ ।

ಮುಂದೆಲ್ಲಿಯೂ ಹೀಗೆ ಪ್ರತಿಭಟಿಸಿದ ಪ್ರಕರಣಗಳು ಬರುವುದಿಲ್ಲ.

ಇಲ್ಲಿ ಕಾಳರಾತ್ರಿಯ (ದೇವತೆಯ) ವರ್ಣನೆಯಿದೆ. ಕೃಪ-ಕೃತವರ್ಮರು ಶಿಬಿರಗಳಿಗೆ ಬೆಂಕಿಯನ್ನು ಇಟ್ಟುಬಿಡುತ್ತಾರೆ. (೧೦೯) ಇಂತಹ ಘೋರ ಕರ್ಮವನ್ನು ಮಾಡಿದವರು ರಾಕ್ಷಸರೇ ಇರಬಹುದೆಂದು ಅಳಿದುಳಿದವರ ಭಾವನೆಯಾಗಿರುತ್ತದೆ. ಇಂತಹ ಪಾಪಕರ್ಮವನ್ನು ಅರ್ಜುನನೆಂದಿಗೂ ಮಾಡಲಾರನೆಂದು ಆ ಯೋಧರು ಪಾರ್ಥನನ್ನು ಹೊಗಳುತ್ತಾರೆ. ಪಾಂಡವರು ಅಲ್ಲಿ ನಿಲ್ಲದೇ ಇದ್ದುದರಿಂದಲೇ ಈ ಸಂಹಾರಕ್ರಿಯೆಯು ಅವ್ಯಾಹತವಾಗಿ ನಡೆದಿದೆಯೆಂಬುದು ಎಲ್ಲರಿಗೂ ತಿಳಿಯುತ್ತದೆ. ಆದರೆ ಯಾರೊಬ್ಬರ ಪ್ರಾಣವೂ ಉಳಿಯುವುದಿಲ್ಲ. ಧೃಷ್ಟದ್ಯುಮ್ನನ ಸಾರಥಿಯೊಬ್ಬನನ್ನು ಬಿಟ್ಟು ಉಳಿದೆಲ್ಲ ಯೋಧರೂ ಬೆಳಗಾಗುವುದರೊಳಗಾಗಿಯೇ ಯಮನ ಪಟ್ಟಣವನ್ನು ಸೇರುತ್ತಾರೆ. ಅಶ್ವತ್ಥಾಮನು ಹೇಗೆ ನಿಶ್ಶಬ್ದವಾಗಿ ಶಿಬಿರವನ್ನು ಪ್ರವೇಶಿಸಿದ್ದನೋ–ಹಾಗೆಯೇ ಎಲ್ಲರೂ ಹತರಾಗಿ ಶಬ್ದಶೂನ್ಯವಾಗಿದ್ದ ಆ ಸಮಯದಲ್ಲಿ ಶಿಬಿರದಿಂದ ಹೊರಬರುತ್ತಾನೆ. ಹೊರಕ್ಕೆ ಬಂದೊಡನೆಯೇ ಕೃಪ-ಕೃತವರ್ಮರನ್ನು ಸಂಧಿಸಿ ತಾನು ಸಾಧಿಸಿದ ಮಹಾಕಾರ್ಯದ ವಿಷಯವಾಗಿ ಹೇಳುತ್ತಾನೆ. ಆ ಮೂವರೂ ಆನಂದತುಂದಿಲರಾಗಿ ಗರ್ಜನೆಮಾಡಿ ಚಪ್ಪಾಳೆಗಳನ್ನು ತಟ್ಟುತ್ತಾರೆ. **ಪ್ರೀತ್ಯಾ ಚೋಚ್ಚೈರುದಕ್ರೋಶಂಸ್ತಥೈವಾಸ್ಫೋಟಯಂಸ್ತಲಾನ್** (೧೪೯). ಧೃತರಾಷ್ಟ್ರನೂ ಸಹ ಅಶ್ವತ್ಥಾಮನು ಮಾಡಿದುದನ್ನು ಕ್ಷುದ್ರಕರ್ಮವೆನ್ನುತ್ತಾನೆ. ಆದರೆ ಈ ಕರ್ಮವನ್ನೇ ದುರ್ಯೋಧನನು ಸಾಯುವ ಮೊದಲು ಏಕೆ ಮಾಡಲಿಲ್ಲ?– ಎಂದು ಅವನು ಸಂಜಯನನ್ನು ಪ್ರಶ್ನಿಸುತ್ತಾನೆ. ಪಾಂಡವರೂ, ಶ್ರೀಕೃಷ್ಣನೂ ಮತ್ತು ಸಾತ್ಯಕಿಯೂ ಅಲ್ಲಿ ಇಲ್ಲದೇ ಇದ್ದುದರಿಂದ ಅಶ್ವತ್ಥಾಮನು ಇಂತಹ ಕರ್ಮವನ್ನು ಮಾಡಿದನು–ಎನ್ನುತ್ತಾನೆ ಸಂಜಯ.

(ಮುಂದುವರಿಯುವುದು.)

License No. WPP-13 Licensed to Post without pre-payment of postage
Posted at Thayagaraja Nagar Post Office
Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.